ISSN 2249 - 5754 VIJNANA KANNADA (PRINT)



# ವಿಜ್ಞಾನ ಕನ್ನಡ-11

## 11ನೇ ಕನ್ನಡ ವಿಜ್ಞಾನ ಸಮ್ಮೇಳನ

**13-15ನೇ ಸೆಪ್ಟೆಂಬರ್. 2015**

# ನಡಾವಳಿ

ಆಯೋಜಕರು

**ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕ**

"ಸ್ವದೇಶಿ ಸದನ", ಗುರುನಾರಾಯಣ ವಿದ್ಯಾ ವಿಹಾರ,

ಹೆಬ್ಬಾಳ, ಬೆಂಗಳೂರು-560 024; ದೂರವಾಣಿ:- 080 23258777; ಟೆಲಿಫ್ಯಾಕ್ಸ್:- 080 23258719

E-mail: svak@svakarnataka.com; vasu@svakarnataka.com; ramesh@svakarnataka.com

ಸಹಭಾಗಿತ್ವ

**ತಾರನಾಥ ಶಿಕ್ಷಣ ಸಂಸ್ಥೆಯ ಲಕ್ಷ್ಮೀ ವೆಂಕಟೇಶ ದೇಸಾಯಿ ಕಾಲೇಜು,** ರಾಯಚೂರು-584 103

**Sponsored by**

DST, New Delhi, KSTePS-KSTA, ADA, NAL, HAL, ARDB, University of Mysore, BLDE Univ., Kuvempu Univ., Universities in Karnataka & Govt. of Karnataka

# ಪರಿವಿಡಿ


| ಕ್ರ. ಸಂ | ವಿಷಯ | ಪುಟಸಂಖ್ಯೆ |
|---|---|---|
| 1. | ಸ್ವಾಗತ ಭಾಷಣ : ಪ್ರೊ॥ ಕೆ. ಐ. ವಾಸು, ಪೋಷಕರು, ಸ್ವ. ವಿ. ಆಂ–ಕ | 3 |
| 2. | ಆಹ್ವಾನಿತ ಹಾಗೂ ಸಂಶೋಧನ ಉಪನ್ಯಾಸಗಳು (ಪೂರ್ಣ ಲೇಖನಗಳು) | |
| | * ಸಮ್ಮೇಳನದ ಕೇಂದ್ರ ವಿಷಯ: ಆಹಾರ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ | 4 – 9 |
| | * ಪಾಣೀನೀಯಮ್: ಮಾನವಶಾಸ್ತ್ರ ಮತ್ತು ಭಾಷಾ ವಿಜ್ಞಾನಗಳು | 10 – 35 |
| | * ಪತಂಜಲೀಯಮ್: ಮನೋಅಧ್ಯಾತ್ಮಿಕ ಮತ್ತು ತತ್ವಶಾಸ್ತ್ರ ವಿಜ್ಞಾನಗಳು | 36 – 101 |
| | * ಭಾರತೀಯಮ್: ಸಾಮಾಜಿಕ ಸಾಂಸ್ಕೃತಿಕವನ್ನೊಳಗೊಂಡ ಕಲೆ, ಸಂಗೀತ ನಾಟ್ಯಶಾಸ್ತ್ರ ವಿಜ್ಞಾನಗಳು | 102 – 114 |
| | * ಕೌಟಿಲ್ಯೀಯಮ್: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ | 115 – 134 |
| | * ಧನ್ವಂತರೀಯಮ್: ಆಯುರ್ವೇದ ಮತ್ತು ಆರೋಗ್ಯ ವಿಜ್ಞಾನಗಳು | 135 – 155 |
| | * ಪರಾಶರೀಯಮ್: (ಅ) ಕೃಷಿ, (ಆ)ತೋಟಗಾರಿಕೆ. ಅರಣ್ಯ, (ಕ)ಪಶುಸಂಗೋಪನೆ ಮತ್ತು ಮೀನುಗಾರಿಕೆ | 156 – 241 |
| | * ವಸುಂಧರೀಯಮ್: ಭೂಶಾಸ್ತ್ರ, ಪರಿಸರವಿಜ್ಞಾನ, ಜೀವಜಾಲಶಾಸ್ತ್ರ ಮತ್ತು ವಿಶ್ವಶಾಸ್ತ್ರ | 242 – 247 |
| | * ನಾಗಾರ್ಜುನಿಯಮ್: ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಪಧಾರ್ಥವಿಜ್ಞಾನಗಳು | 248 – 257 |
| | * ಭಾಸ್ಕರೀಯಮ್: ಭೌತಿಕಶಾಸ್ತ್ರ, ಗಣಿತಶಾಸ್ತ್ರ ಮತ್ತು ಖಭೌತಶಾಸ್ತ್ರ ವಿಜ್ಞಾನಗಳು | 258 – 262 |
| | * ಜೆ. ಸಿ. ಭೋಸೀಯಮ್: ವಿಧ್ಯುತ್ಕಣಶಾಸ್ತ್ರ, ವಿಧ್ಯುತ್‌ಚಕ್ತಿಶಾಸ್ತ್ರ, ಶಕ್ತಿ ಮತ್ತು ವಿ–ಸಂವಹನ ವಿಜ್ಞಾನ | 263 – 267 |
| 3. | ಲೇಖಕರ ಪಟ್ಟಿ | 268 – 270 |
| 4. | ವಂದನಾರ್ಪಣೆ ಮತ್ತು ಸಮ್ಮೇಳನದ ವರದಿ | 271 – 272 |
| 5. | 2015ನೇ ಸಾಲಿನ ವಿಶ್ವೇಶ್ವರಯ್ಯ ವಿಜ್ಞಾನಪುರಸ್ಕೃತರ ಬಾವಚಿತ್ರ ಮತ್ತು ಪೂರ್ಣ ವಿವರ<br>2015ನೇ ಸಾಲಿನ ಭೀಮ್‌ಸೇನ್ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕೃತರ ಬಾವಚಿತ್ರ ಮತ್ತು ಪೂರ್ಣ ವಿವರ | 273 – 282 |
| 6. | ಸಮ್ಮೆಳನದ ಪ್ರಾಯೋಜಕರ ಪಟ್ಟಿ | 283 – 284 |


**ಓದುಗರ ಗಮನಕ್ಕೆ ,**

**ಈ ನಡಾವಳಿಯಲ್ಲಿ ಮುದ್ರಿತವಾಗಿರುವ ಎಲ್ಲಾ ಲೇಖನಗಳು ಆಯಾ ಲೇಖಕರುಗಳಿಂದ ಬಂದಂತಹದು. ಈ ಲೇಖನಗಳನ್ನು ಸಂಸ್ಥೆಯು ಯಾವುದೇ ಸಂಕಲಗಳನ್ನು ಮಾಡದೇ ಮುದ್ರಿಸಲಾಗಿದೆ. ಈ ಲೇಖನಗಳಲ್ಲಿ ಯಾವುದೇ ತಪ್ಪು ಕಂಡುಬಂದಲ್ಲಿ ಇದರ ಜವಾಬ್ದಾರಿಯು ಆಯಾ ಲೇಖಕರುಗಳಿಗೆ ಮಾತ್ರ ಸಂಬಂಧಿಸಿದ್ದು, ಇದರಲ್ಲಿ ಸಂಸ್ಥೆಯ ಪಾತ್ರ ಯಾವುದೇ ಇರುವುದಿಲ್ಲ ಮತ್ತು ಜವಾಬ್ದಾರಿಯು ಇರುವುದಿಲ್ಲ. ಪ್ರಬಂಧಗಳ ಬಗ್ಗೆ ಹೆಚ್ಚಿನ ಚರ್ಚೆ, ಮಾಹಿತಿ ಬೇಕಾದಲ್ಲಿ ಲೇಖಕರನ್ನು ನೇರವಾಗಿ ಸಂಪರ್ಕಿಸಬಹುದು. ಈ ನಡಾವಳಿಯಲ್ಲಿ ಸಮ್ಮೇಳನದಲ್ಲಿ ಪ್ರಬಂಧಗಳನ್ನು ಮಂಡನೆ ಮಾಡಿದಂತಹ ಹಾಗೂ ನಿಗದಿತ ಸಮಯಕ್ಕೆ ಕಳುಹಿಸಿಕೊಟ್ಟಂತಹ ಲೇಖನಗಳನ್ನು ಮಾತ್ರ ಮುದ್ರಿಸಲಾಗಿದೆ. ಯಾವುದೇ ಲೇಖಕರು ಪ್ರಬಂಧ ಮಂಡನೆ ಮಾಡಿ ಅವರ ಲೇಖನಗಳು ನಡಾವಳಿಯಲ್ಲಿ ಮುದ್ರಣವಾಗದಿದ್ದಲ್ಲಿ ಇದಕ್ಕೆ ಲೇಖಕರು ತಮ್ಮ ಪ್ರಬಂದಗಳನ್ನು ನಿಗದಿತ ಸಮಯಕ್ಕೆ ಹಾಗೂ ಆಯೋಜಕರು ಕೇಳಿರುವ ಲಿಪಿಗಳಲ್ಲಿ ಕಳುಹಿಸದ ಕಾರಣ ಅಂತವರ ಲೇಖನಗಳನ್ನು ನಡಾವಳಿಯಲ್ಲಿ ಮುದ್ರಿಸಲಾಗಿಲ್ಲ.**

## ಸಮ್ಮೇಳನದ ಸ್ವಾಗತ ಭಾಷಣ ಪ್ರೊ|| ಕೆ. ಐ. ವಾಸು ರವರಿಂದ

ಮಾನ್ಯ ಶ್ರೀ ಎಸ್. ಆರ್. ಪಾಟೀಲ್ ರವರೆ
ಮಾನ್ಯ ಶ್ರೀ ಕೃಷ್ಣ ಬೈರೆಗೌಡ ರವರೆ

ಕಳೆದ 10 ವರ್ಷಗಳಿಂದ ನಮ್ಮ ಸಂಸ್ಥೆಯಿಂದ ನಾವು ಕನ್ನಡ ಭಾಷೆಯ ಹಿರಿಮೆ ಮತ್ತು ಕನ್ನಡ ಭಾಷೆಯಲ್ಲಿ ವಿಜ್ಞಾನದ ಜನಪ್ರಿಯತೆ ಕಾರ್ಯದಲ್ಲಿ ಮುನ್ನುಗುತ್ತಿದ್ದೇವೆ. ನಮ್ಮ ಈ ಕಾರ್ಯದ ಮುಖ್ಯ ಉದ್ದೇಶ ಕನ್ನಡ ಭಾಷೆಯನ್ನು ಉತ್ಕೃಷ್ಟಗೊಳಿಸುವುದು ಹಾಗೂ ಪಾರಂಪರಿಕ ಮತ್ತು ಆಧುನಿಕ ವಿಜ್ಞಾನ–ತಂತ್ರಜ್ಞಾನದ ಎಲ್ಲಾ ಆಯಾಮಗಳ ಮೂಲಕ ಜನ ಸಾಮಾನ್ಯರನ್ನು ಸಶಕ್ತಿಗೊಳಿಸುವುದು. ನಮ್ಮ ಎಲ್ಲಾ ಕಾರ್ಯಕ್ರಮಗಳಲ್ಲೂ ಸ್ವದೇಶಿ ಪರಿಕಲ್ಪನೆ ಮುಖಾಂತರ ಕಾರ್ಯನಿರ್ವಹಿಸುತ್ತಿದ್ದೇವೆ. ಈ ನಮ್ಮ ಕಾರ್ಯಗಳಿಗೆ ತುಂಬು ಹೃದಯದ ಸಹಕಾರ ನೀಡುತ್ತಿರುವಂತಹ ನಿಮ್ಮಂತಹ ಮಹನೀಯರುಗಳಿಗೆ ನಾವು ಈ ಸಂಧರ್ಭದಲ್ಲಿ ದನ್ಯವಾದ ಸಲ್ಲಿಸುತ್ತೇವೆ.

ನಮ್ಮ ಎಲ್ಲಾ ಕಾರ್ಯಕ್ರಮದ ಮೂಲಕ ಕರ್ನಾಟಕ ರಾಜ್ಯದ ಹಿರಿಮೆಯನ್ನು ಪ್ರಸ್ತುತಪಡಿಸುತ್ತಿದ್ದೇವೆ. ಅದರ ಕೆಲವು ಮಾಹಿತಿ ಈ ರೀತಿಯಾಗಿದೆ. ನಮ್ಮ ರಾಜ್ಯವು ಭಾಸ್ಕರಾಚಾರ್ಯ, ವಿಜ್ಞಾನೇಶ್ವರ ಮತ್ತು ಮಹಾವೀರಾಚಾರ್ಯರಂತಹ ಮಹಾನ್ ಪ್ರಖ್ಯಾತ ವಿಜ್ಞಾನಿಗಳನ್ನು ವಿಶ್ವಕ್ಕೆ ಕೊಡುಗೆಯಾಗಿ ನೀಡಿದೆ. ಅಲ್ಲದೇ ನಮ್ಮ ರಾಜ್ಯವು ಚಿನ್ನ, ತಾಮ್ರ, ಲೋಹತಂತ್ರಜ್ಞಾನ, ಜವಳಿ, ಅಯುರ್ವೇದ, ಕಲೆ ಮತ್ತು ವಾಸ್ತುಶಿಲ್ಪ ಮುಂತಾದ ಹಲವಾರು ತಂತ್ರಜ್ಞಾನದಲ್ಲಿ ಹೆಸರುವಾಸಿಯಾಗಿದೆ.

ಈ ಆಧುನಿಕ ಯುಗದ ಕರ್ನಾಟಕ ರಾಜ್ಯದಲ್ಲಿ 4 ಭಾರತ ರತ್ನ ಪುರಸ್ಕೃತರಾದ: ಡಾ|| ಎಂ. ವಿಶ್ವೇಶ್ವರಯ್ಯ, ಡಾ|| ಭೀಮಸೇನ್ ಜೋಶಿ, ಡಾ|| ಸಿ. ಎನ್. ಆರ್. ರಾವ್ ಮತ್ತು ಡಾ|| ಸಿ. ವಿ. ರಾಮನ್. ಈ ಮಹಾನ್ ವ್ಯಕ್ತಿಗಳು ನಮ್ಮ ಯುವ ಜನಾಂಗಕ್ಕೆ ಪ್ರೇರಣೆಯಾಗಿದ್ದಾರೆ. ನಮ್ಮ ಸಂಸ್ಥೆಯ ವತಿಯಿಂದ ಈ ಮಹಾನ್ ವ್ಯಕ್ತಿಗಳ ಹೆಸರಲ್ಲಿ ಪುರಸ್ಕಾರಗಳನ್ನು ಪ್ರತಿ ವರ್ಷವೂ ನೀಡಲಾಗುತ್ತಿದೆ. ಆಧುನಿಕ ಮತ್ತು ಪಾರಂಪರಿಕ ವಿಜ್ಞಾನದಲ್ಲಿ ಸಾಧನೆಗೈದಂತಹ ಪ್ರಖ್ಯಾತ ಪುರುಷ ಮತ್ತು ಮಹಿಳಾ ಕನ್ನಡಿಗ ಮಹನೀಯರುಗಳಿಗೆ ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ, ಸಂಗೀತ, ಸಂಗೀತವಾದ್ಯಗಳು, ಕಲೆ, ಲಲಿತಕಲೆ, ಪ್ರದರ್ಶನಕಲೆ, ಸಾಹಿತ್ಯ ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಸಾಧನೆ ಮಾಡಿದಂತಹ ಕನ್ನಡಿಗರಿಗೆ ಪಂಡಿತ್ ಭೀಮ ಸೇನ್ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರ, ಮೂಲಭೂತ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದಂತಹ ಕನ್ನಡಿಗರಿಗೆ ಸಿ. ಎನ್. ಆರ್. ರಾವ್ ವಿಜ್ಞಾನ ಪುರಸ್ಕಾರ ಮತ್ತು ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರದಲ್ಲಿ ಮಹತ್ತರ ಸಾಧನೆ ಮಾಡಿದಂತಹ ಭಾರತ ದೇಶದ ಮಹಿಳಾ ವಿಜ್ಞಾನಿ ಗೆ ಸಿ. ವಿ. ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರ ಗೌರವವನ್ನು ನೀಡಿ ಗೌರವಿಸಲಾಗುತ್ತಿದೆ. ಈ ಸಂಧರ್ಭದಲ್ಲಿ ಇನ್ನೂ ಹೆಚ್ಚಿನ ಕನ್ನಡಿಗರಿಗೆ ಭಾರತ ರತ್ನ ಪುರಸ್ಕಾರ ಲಭಿಸಲೆಂದು ಹಾರೈಸುತ್ತೇವೆ. ಅಂತಹ ಮಹನೀಯರ ಹೆಸರಿನಲ್ಲಿ ನಮ್ಮ ಸಂಸ್ಥೆಯು ಸೂಕ್ತ ಸಮಯದಲ್ಲಿ ಪುರಸ್ಕಾರ ನೀಡಿ ಗೌರವಿಸುತ್ತದೆ. ಆದರೂ ಸಹ ನಮ್ಮ ಕನ್ನಡಿಗರಿಗೆ ಕಾಡುತ್ತಿರುವ ಒಂದು ಕೊರತೆ ನೋಬಲ್ ಪಾರಿತೋಷಕ. ಅದು ಅದಷ್ಟು ಶೀಘ್ರದಲ್ಲಿ ಕನ್ನಡಿಗರಿಗೆ ದೊರಕಲೆಂದು ನಾವೆಲ್ಲವೂ ಆಶಿಸೋಣ.

ಜೈ ಕನ್ನಡ, ಜೈ ವಿಜ್ಞಾನ, ಜೈ ಕರ್ನಾಟಕ, ಜೈ ಹಿಂದ್.

**ಪ್ರೊ|| ಕೆ. ಐ. ವಾಸು**
**ಸ್ಥಾಪಕ, ಪೋಷಕ, ಮಾರ್ಗದರ್ಶಕ**
**ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ**

# ಸಮ್ಮೇಳನದ ಕೇಂದ್ರ ವಿಷಯ

# ಆಹಾರ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ

## FOCAL THEME
## FOOD SECURITY & SUSTAINABLE DEVELOPMENT

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಈಶಾನ್ಯ ಕರ್ನಾಟಕದ ಆಹಾರ ಉತ್ಪಾದನೆಯಲ್ಲಿ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಗುಣಮಟ್ಟದ ಬೀಜದ ಪಾತ್ರ | ಬಸವೇ ಗೌಡ, ಲೊಕೇಶ್.ಜಿ.ವೈ ರಾಕೇಶ ಸಿ ಮಠದ, ರಘು.ಬಿ.ಎನ್ | 6 - 9 |

# ಈಶಾನ್ಯ ಕರ್ನಾಟಕದ ಆಹಾರ ಉತ್ಪಾದನೆಯಲ್ಲಿ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಗುಣಮಟ್ಟದ ಬೀಜದ ಪಾತ್ರ

ಬಸವೇ ಗೌಡ[1], ಲೊಕೇಶ್.ಜಿ.ವೈ[2], ರಾಕೇಶ ಸಿ ಮಠದ[3] ಮತ್ತು ರಘು.ಬಿ.ಎನ್[4]

1.ಪ್ರಾಧ್ಯಾಪಕರು (ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ) ಮತ್ತು ವಿಶೇಷಾಧಿಕಾರಿಗಳು (ಬೀಜ), 2.ಕಿರಿಯ ತಳಿ ತಜ್ಞ, ಬೀಜ ಘಟಕ, 3.ಸಹಾಯಕ ಪ್ರಾಧ್ಯಾಪಕರು (ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ), ಬೀಜ ಘಟಕ, 3.ಪಿಹೆಚ್.ಡಿ ವಿದ್ಯಾರ್ಥಿ, ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ರಾಯಚೂರು–584104. ಮಿಂಚಂಚೆ:bgowdseeds@rediffmail.com

**ಸಾರಂಶ :**ಬೀಜವು ಕೃಷಿಯಲ್ಲಿ ಒಂದು ಬಹುಮುಖ್ಯವಾದ ಪರಿಕರವಾಗಿದೆ. ಕೃಷಿಯಲ್ಲಿ ಗುಣಮಟ್ಟದ ಬೀಜವನ್ನು ಉಪಯೋಗಿಸುವುದರಿಂದ ಬೆಳೆಯ ಇಳುವರಿಯನ್ನು ಶೇ.15 ರಿಂದ 20 ರಷ್ಟು ಹೆಚ್ಚಿಸಬಹುದೆಂದು ಸಂಶೋಧನೆ ಮುಖಾಂತರ ತಿಳಿದುಬಂದಿದೆ.

ಬೀಜದ ಪ್ರಾಮುಖ್ಯತೆಯನ್ನು ಅರಿತು ಕೃಷಿ ವಿಶ್ವವಿದ್ಯಾಲಯ, ರಾಯಚೂರು ತನ್ನ ಆರು ಜಿಲ್ಲೆಗಳ ರೈತರಿಗೆ ಗುಣಮಟ್ಟದ ಹೊಸ ತಳಿಗಳ ಬೀಜವನ್ನು ಹೊದಗಿಸುವ ಉದ್ದೇಶದಿಂದ ಮುಖ್ಯ ಆವರಣದಲ್ಲಿ ವಿಶೇಷಾಧಿಕಾರಿಗಳು (ಬೀಜ) ಇವರು ಉಸ್ತುವಾರಿಯಲ್ಲಿ ಸ್ವತಂತ್ರ ಬೀಜ ಘಟಕವನ್ನು ಸ್ಥಾಪಿಸಲಾಗಿದೆ. ಇದರ ಜೊತೆಗೆ ಆರು ಜಿಲ್ಲೆಗಳ ಒಂಬತ್ತು ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಬೀಜ ಉಗ್ರಾಣ ಮತ್ತು ಬೀಜ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಲಾಗಿದೆ.

ವಿಶ್ವವಿದ್ಯಾಲಯವು ಪ್ರಾರಂಭವಾಗುವ ಮೊದಲು ಕೇವಲ 2500 ಕ್ವಿಂಟಾಲ್‌ನಷ್ಟು ಬೀಜೋತ್ಪಾದನೆ ಮಾಡುತಿದ್ದು ನಂತರ ಸ್ವತಂತ್ರ ಬೀಜ ಘಟಕ ಪ್ರಾರಂಭವಾದ ಮೇಲೆ ವಿಶ್ವವಿದ್ಯಾಲಯ ಬೀಜೋತ್ಪಾದನೆಯು ಸುಮಾರು ಹತ್ತು ಪಟ್ಟು ಹೆಚ್ಚಾಗಿರುತ್ತದೆ. ಇದರ ಜೊತೆಗೆ ರೈತರನ್ನು ಬೀಜ ಸ್ವಾವಲಂಭಿಗಳನ್ನಾಗಿ ಮಾಡಲು ಪ್ರತಿ ವರ್ಷ ಸುಮಾರು 100 ಗ್ರಾಮಗಳು ಆಯ್ಕೆ ಮಾಡಿಕೊಂಡು ಆಯ್ಕೆಯಾದ ರೈತರುಗಳಿಗೆ ಹೊಸ ತಳಿಗಳ ಬೀಜೋತ್ಪಾದನೆ ಮಾಡಲು ಬೇಕಾದ ಮೂಲ ಮತ್ತು ಅಗತ್ಯ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ.

ವಿಶ್ವವಿದ್ಯಾಲಯದಲ್ಲಿ ಉತ್ಪಾದಿಸಿದ ಬೀಜದ ಗುಣಮಟ್ಟವನ್ನು ಖಾತರಿ ಪಡಿಸಿಕೊಳ್ಳಲು ಮುಖ್ಯ ಆವರಣ ಬೀಜ ಘಟಕದಲ್ಲಿ ಅಧುನಿಕ ಬೀಜ ಸಂಶೊಧನಾ ಮತ್ತು ಪರೀಕ್ಷಾ ಪ್ರಯೋಗಾಲಯದಲ್ಲಿ ಸ್ಥಾಪಿಸಲಾಗಿದೆ. ಇದರ ಜೊತೆಗೆ ತಳಿ ವರ್ಧಕ ಮತ್ತು ಮೂಲ ಬೀಜಗಳನ್ನು ಶೇಖರಣೆ ಮಾಡಲು 1000 ಕ್ವಿಂಟಾಲ್ ಸಾಮಾರ್ಥ್ಯವುಳ್ಳ ಶೀತಲ ಗೃಹವನ್ನು ಸ್ಥಾಪಿಸಲಾಗಿದೆ.

ದೇಶದಲ್ಲಿ ವಿನೂತನವಾದ ಬೀಜ ದಿನೋತ್ಸವನ್ನು ಪ್ರತಿ ವರ್ಷ ಮೇ 25 ಮತ್ತು ಸೆಪ್ಟೆಂಬರ್ 25 ರಂದು ಎಲ್ಲಾ ಜಿಲ್ಲಾ ಸಂಶೋಧನಾ ಕೇಂದ್ರಗಳಲ್ಲಿ ಆಚರಿಸಲಾಗುತ್ತಿದ್ದು. ಸದರಿ ಕಾರ್ಯಕ್ರಮದಲ್ಲಿ ರೈತರಿಗೆ ಬಿತ್ತುವ ಮುನ್ನ ಅಗತ್ಯವಾದ ಬೀಜ ಮತ್ತು ಪೂರಕ ಕೃಷಿ ತಂತ್ರಜ್ಞಾನಗಳನ್ನು ಹೊದಗಿಸಲಾಗುತ್ತಿದೆ. ಈ ಕಾರ್ಯಕ್ರಮವು ಈ ಭಾಗದ ರೈತರಲ್ಲಿ ಹೆಚ್ಚು ಪ್ರಶಂಸೆಗೆ ಒಳಪಟ್ಟಿದೆ.

ಕೃಷಿ ವಿಶ್ವವಿದ್ಯಾಲಯದ ಬೀಜೋತ್ಪಾದನೆ ಪ್ರಗತಿಯನ್ನು ಪರೀಗಣಿಸಿ ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯು 12ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ವಿಶ್ವವಿದ್ಯಾಲಯಕ್ಕೆ ತಳಿ ವರ್ಧಕ ಬೀಜ ಯೋಜನೆ ಮತ್ತು ಕೃಷಿ ಬೆಳೆಗಳ ಬೀಜೋತ್ಪಾದನೆ ಯೋಜನೆಯನ್ನು ಅನುಮೋದನೆಗೊಳಿಸಿದೆ.

**ಪರಿಚಯ:** ಬೀಜೋತ್ಪಾದನೆ ಕಾರ್ಯಕ್ರಮದಲ್ಲಿ ತಳಿ ವರ್ಧಕ ಬೀಜೋತ್ಪಾದನೆ ಒಂದು ಮುಖ್ಯ ಅಂಗವಾಗಿದೆ. ಮುಖ್ಯವಾಗಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅದೀನದಲ್ಲಿರುವ ವಿವಿಧ ಬೆಳಗಳ ಸಮನ್ವಯ ಬೆಳೆ ಅಭಿವೃದ್ಧಿ ಯೋಜನೆ ಹಾಗೂ ವಿವಿಧ ರಾಜ್ಯಗಳ ಕೃಷಿ ವಿಶ್ವವಿದ್ಯಾಲಯಗಳ ಮೂಲಕ ತಳಿ ವರ್ಧಕ ಬೀಜೋತ್ಪಾದನೆ ಕಾರ್ಯಕ್ರಮವನ್ನು ಪ್ರತಿ ವರ್ಷ ಬೇಡಿಕೆ ಗನುಗುಣವಾಗಿ ಹಮ್ಮಿಕೊಳ್ಳಲಾಗುತ್ತಿದೆ. ದಿನದಿಂದ ದಿನಕ್ಕೆ ತಳಿ ವರ್ಧಕ ಬೀಜದ ಬೇಡಿಕೆ ಹೆಚ್ಚಾದುದ್ದರಿಂದ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ತಳಿ ವರ್ಧಕ ಬೀಜೋತ್ಪಾದನೆ ಕೈಗೊಳ್ಳಲು ರಾಷ್ಟ್ರೀಯ ಬೀಜ ಯೋಜನೆಯಡಿಯಲ್ಲಿ ಬೀಜೋತ್ಪಾದನೆಯನ್ನು ಕೃ.ವಿ.ವಿ., ರಾಯಚೂರಿನಲ್ಲಿ ಪ್ರಾರಂಭ ಮಾಡಿದೆ.

**ಅನುಸರಿಸಿದ ವಿಧಾನಗಳು:** ರೈತರನ್ನು ಗುಣಮಟ್ಟದ ಬೀಜೋತ್ಪಾದನೆಯಲ್ಲಿ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಫಲಾನುಭವಿಗಳಿಗೆ ತೊಗರಿ, ಕಡಲೆ, ಸೋಯಅವರೆ, ಭತ್ತ ಮತ್ತು ಶೇಂಗಾ ಬೆಳೆಗಳಲ್ಲಿ ಗ್ರಾಮ ಮಟ್ಟದಲ್ಲಿ ಬೀಜೋತ್ಪಾದನೆ ಮಾಡಿ ವಿತರಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೀಜ ಉತ್ಪಾದನೆ ಯೋಜನೆಯ ಅನುಷ್ಠಾನದ ಪ್ರಗತಿಯನ್ನು ಪ್ರತಿ ವರ್ಷ ನಡೆಯುವ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಸಭೆಗಳಲ್ಲಿ ಸಂಶೋಧನಾ ನಿರ್ದೇಶಕರು, ವಿಶೇಷಾದಿಕಾರಿಗಳು (ಬೀಜ) ಹಾಗೂ ಸಂಬಂದಪಟ್ಟ ವಿಶ್ವವಿದ್ಯಾಲಯದ ವಿಜ್ಞಾನಿಗಳಿಂದ ಪರಿಶೀಲಿಸಲಾಗುವುದು. ಬೀಜೋತ್ಪಾದನೆಯ ಪ್ರಗತಿಯನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಕುಲಪತಿಗಳು, ಕೃ.ವಿ.ವಿ., ರಾಯಚೂರು ಇವರು ಪರಿಶೀಲಿಸುವುದು. ಬೀಜೋತ್ಪಾದನೆಯ ಚಟುವಟಿಕೆಗಳನ್ನು ಪ್ರತಿ ವರ್ಷ ನಡೆಯುವ ಸಂಶೋಧನೆ ಮತ್ತು ಕ್ಷೇತ್ರ ಅಭಿವೃದ್ಧಿ ಸಮಿತಿಯ ಸಭೆಯಲ್ಲಿ ಕೂಡ ಪರಿಶೀಲಿಸಲಾ ಗುವುದು.

**ಫಲಿತಾಂಶಗಳು ಮತ್ತು ಚರ್ಚೆ:** ಸುಧಾರಿತ ಹೊಸ ತಳಿಗಳ ಗುಣಮಟ್ಟದ ಬೀಜಗಳನ್ನು ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಭ್ಯಗೊಳಿಸಲು ಬೀಜ ಗ್ರಾಮ ಒಂದು ಮುಖ್ಯವಾದ ಕಾರ್ಯಕ್ರಮವಾಗಿದೆ. ಬೀಜ ಗ್ರಾಮ ಯೋಜನೆ ಸಿದ್ಧಾಂತವೆನೆಂದರೆ ರೈತರು ಬೀಜೋತ್ಪಾದನೆಯನ್ನು ಗ್ರಾಮ ಮಟ್ಟದಲ್ಲಿ ಹಮ್ಮಿಕೊಂಡು ರೈತರೆ ಉತ್ತಮ ಗುಣಮಟ್ಟದ ಬೀಜೋತ್ಪಾದನೆಯನ್ನು ಮಾಡಿ, ತಮಗೂ ಮತ್ತು ಇತರೆ ರೈತರಿಗೆ ಬೀಜಗಳನ್ನು ಕೊಟ್ಟು, ಬೀಜಗಳ ಕೊರತೆ

ಯನ್ನು ಹೊಗಲಾಡಿಸುವುದು.

ರೈತರನ್ನು ಗುಣಮಟ್ಟದ ಬೀಜೋತ್ಪಾದನೆಯಲ್ಲಿ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಕೃಷಿ ಸಚಿವಾಲಯ, ಭಾರತ ಸರ್ಕಾರದ ನೆರವಿನಿಂದ ಪ್ರತಿ ವರ್ಷ 100 ಗ್ರಾಮಗಳಲ್ಲಿ ಸುಮಾರು 5000 ಕ್ಕು ಹೆಚ್ಚು ಫಲಾನುಭವಿಗಳಿಗೆ ತೊಗರಿ, ಕಡಲೆ, ಸೋಯಅವರೆ, ಭತ್ತ ಮತ್ತು ಶೇಂಗಾ ಬೆಳೆಗಳಲ್ಲಿ ಗ್ರಾಮ ಮಟ್ಟದಲ್ಲಿ ಬೀಜೋತ್ಪಾದನೆ ಮಾಡಿ ವಿತರಣೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



**ಕೊಷ್ಟಕ:1. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಬೀಜೋತ್ಪಾದನಾ ಪ್ರಗತಿ.**

| ವರ್ಷ | ನೇರ ಕಾರ್ಯಕ್ರಮ | ಬೀಜ ಗ್ರಾಮ ಯೋಜನೆ | ಒಟ್ಟು |
|---|---|---|---|
| 2008–09 | 2500 | – | 2500* |
| 2009–10 | 8014 | 14000 | 22014 |
| 2010–11 | 12715 | 20000 | 32715 |
| 2011–12 | 13424 | 30500 | 43924 |
| 2012–13 | 26524 | 25600 | 52124 |
| 2013–14 | 19700 | 48269 | 67969 |
| 2014–15 | 7572 | 5413 | 12985** |

* ವಿಶ್ವವಿದ್ಯಾಲಯ ಪ್ರಾರಂಭವಾಗುವ ಮೊದಲು

* * ಬೀಜ ಮಾರಾಟದ ಸಮಸ್ಯೆಯಿಂದ ಕಡಿಮೆ ಮಾಡಲಾಗಿದೆ.

**ಕೊಷ್ಟಕ:2.ಬೀಜ ಗ್ರಾಮ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಬೀಜೋತ್ಪಾದಮಾ ಪ್ರಗತಿ**

| ಕ್ರ.ಸಂ | ವರ್ಷ | ಬೆಳೆ | ರೈತರ ಸಂಖ್ಯೆ | ಗ್ರಾಮಗಳ ಸಂಖ್ಯೆ | ಉತ್ಪಾದನೆ ಮಾಡಿದ ಪ್ರಮಾಣ (ಕ್ವಿ) |
|---|---|---|---|---|---|
| 1. | 2009-10 | ಶೇಂಗಾ | 1110 | 14 | 4440 |
| | | ಕಡಲೆ | 3262 | 33 | 16310 |
| 2. | 2010-11 | ಶೇಂಗಾ | 126 | 10 | 2072 |
| | | ಕಡಲೆ | 10098 | 145 | 21314 |
| 3. | 2011-12 | ಶೇಂಗಾ | 345 | 8 | 3750 |
| | | ತೊಗರಿ | 108 | 5 | 850 |
| | | ಕಡಲೆ | 805 | 37 | 15000 |
| | | ಭತ್ತ | 1907 | 25 | 3000 |
| | | ಮೇಕ್ಕೆಜೋಳ | 87 | 6 | 300 |
| 4. | 2012-13 | ತೊಗರಿ | 712 | 11 | 2848 |
| | | ಭತ್ತ | 673 | 47 | 6730 |
| | | ಶೇಂಗಾ | 467 | 50 | 3828 |
| | | ಸೋಯವರೆ | 234 | 10 | 1100 |
| 5. | 2013-14 | ತೊಗರಿ | 4288 | 124 | 8664 |
| | | ಭತ್ತ | 1829 | 63 | 11864 |
| | | ಉದ್ದು | 10 | 2 | 20 |
| | | ಹೆಸರು | 100 | 4 | 350 |
| | | ಸೋಯವರೆ | 698 | 33 | 2234 |
| 6. | 2014-15 | ತೊಗರಿ | 90 | 5 | 315 |
| | | ಕಡಲೆ | 583 | 12 | 3498 |
| | | ಶೇಂಗಾ | 14 | 4 | 70 |
| | | ಭತ್ತ | 51 | 10 | 1530 |
| | | **ಒಟ್ಟು** | **27597** | **658** | **110087** |

ಕೊಷ್ಟಕ:3. ಬೀಜ ಗ್ರಾಮ ಯೋಜನೆಯಿಂದ ರೈತರ ಮೇಲೆ ಆದ ಪರಿಣಾಮ

| ಕ್ರ.ಸಂ | ವರ್ಷ | ಬೆಳೆ | ಉತ್ಪಾದನೆ ಮಾಡಿದ ಪ್ರಮಾಣ (ಕ್ವಿ) | ಹೆಚ್ಚಾದ ವಿಸ್ತೀರ್ಣ (ಹೆ) | ಹೆಚ್ಚಾದ ಬೆಳೆ ಉತ್ಪಾದನೆ (ಟನ್‌ಗಳು) |
|---|---|---|---|---|---|
| 1 | 2009-10 | ಶೇಂಗಾ | 4440 | 1973.3 | 177.6 |
| | | ಕಡಲೆ | 16310 | 32620 | 1304.8 |
| | | **ಒಟ್ಟು** | **20750** | **34593.3** | **1482.4** |
| 2 | 2010-11 | ಶೇಂಗಾ | 2072 | 920.9 | 82.8 |
| | | ಕಡಲೆ | 21314 | 42628 | 1705.1 |
| | | **ಒಟ್ಟು** | **23386** | **43548.9** | **1788.0** |
| 3 | 2011-12 | ಶೇಂಗಾ | 3750 | 1666.7 | 150.0 |
| | | ತೊಗರಿ | 850 | 6800 | 340.0 |
| | | ಕಡಲೆ | 15000 | 30000 | 1200.0 |
| | | ಭತ್ತ | 3000 | 4800 | 2160.0 |
| | | ಮೇಕ್ಕೆಜೋಳ | 300 | 1714.3 | 171.4 |
| | | **ಒಟ್ಟು** | **22900** | **44981.0** | **4021.4** |
| 4 | 2012-13 | ತೊಗರಿ | 2848 | 22784 | 1139.2 |
| | | ಭತ್ತ | 6730 | 10768 | 4845.6 |
| | | ಶೇಂಗಾ | 3828 | 1701.3 | 153.1 |
| | | ಸೋಯವರೆ | 1100 | 1466.7 | 234.6 |
| | | **ಒಟ್ಟು** | **14506** | **36720.0** | **6372.5** |
| 5 | 2013-14 | ತೊಗರಿ | 8664 | 69312 | 3465.6 |
| | | ಭತ್ತ | 11864 | 39546.7 | 17796.0 |
| | | ಉದ್ದು | 20 | 160 | 16.0 |
| | | ಹೆಸರು | 350 | 2800 | 280.0 |
| | | ಸೋಯವರೆ | 2234 | 2978.7 | 238.2 |
| | | **ಒಟ್ಟು** | **23132** | **114797.3** | **21795.8** |
| 6 | 2014-15 | ತೊಗರಿ | 315 | 2520 | 126.0 |
| | | ಕಡಲೆ | 3498 | 5597 | 223.8 |
| | | ಶೇಂಗಾ | 70 | 78 | 7.0 |
| | | ಭತ್ತ | 1530 | 2448 | 1101.6 |
| | | **ಒಟ್ಟು** | **5413** | **10643** | **1458.4** |
| | | **ಒಟ್ಟು ಮೊತ್ತ** | **110087** | **285284** | **36918.7** |

**ಮುಂಗಾರು ಮತ್ತು ಹಿಂಗಾರು ಬೀಜ ದಿನೋತ್ಸವ :** ರೈತರಿಗೆ ಬಿತ್ತುವ ಮುನ್ನ ಗುಣಮಟ್ಟದ ಬೀಜ ಮತ್ತು ಸುಧಾರಿತ ಕೃಷಿ ಬೇಸಾಯ ಕ್ರಮಗಳ ಬಗ್ಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ **ಮೇ 25** ಮತ್ತು **ಸೆಪ್ಟಂಬರ್ 25** ದಿನಗಳಂದು ವಿಶ್ವವಿದ್ಯಾಲಯದ ಎಲ್ಲಾ ಕೇಂದ್ರಗಳಲ್ಲಿ ಅನುಕ್ರಮವಾಗಿ **ಮುಂಗಾರು ಮತ್ತು ಹಿಂಗಾರು ಬೀಜ ದಿನೋತ್ಸವಗಳನ್ನು** ಆಯೋಜಿಸಲಾಗುತ್ತಿದೆ.

**ಬೀಜೋತ್ಪಾನೆಯಲ್ಲಿ ಸರ್ಟಿಫಿಕೇಟ್ ಕೋರ್ಸ :** ಗ್ರಾಮೀಣ ಪ್ರದೇಶದ ಎಸ್.ಎಸ್.ಎಲ್.ಸಿ ಪಾಸಾದ ವಿಧ್ಯಾರ್ಥಿ/ವಿಧ್ಯಾರ್ಥಿನಿಯರಿಗೆ ಗುಣಮಟ್ಟದ ಬೀಜೋತ್ಪಾದನಾ ಬಗ್ಗೆ ತರಬೇತಿ ನೀಡಿ, ಕೇಳಮಟ್ಟದ ನೂರಿತ ಬೀಜೋತ್ಪಾದನಾ ತಂತ್ರಜ್ಞರನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಆರು ತಿಂಗಳ ಸರ್ಟಿಫಿಕೇಟ ಕೋರ್ಸನ್ನು 2010–11 ರಿಂದ ಪ್ರಾರಂಭಿಸಲಾಗಿದೆ.

**ಬೀಜ ಸಂಸ್ಕರಣ ಘಟಕಗಳು ಮತ್ತು ಉಗ್ರಾಣಗಳು :** ವಿಶ್ವವಿದ್ಯಾಲಯದ ಅಡಿಯಲ್ಲಿ ಆರು ಜಿಲ್ಲೆಗಳ ರೈತರುಗಳಿಗೆ ಗುಣಮಟ್ಟದ ಬೀಜ ಸರಬರಾಜು ಮಾಡುವ ಉದ್ದೇಶದಿಂದ ಕೃಷಿ ಸಚಿವಾಲಯ, ಭಾರತ ಸರ್ಕಾರದ ನೆರವಿನಿಂದ, ವಿಶ್ವವಿದ್ಯಾಲಯ ಮತ್ತು ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ಸುಮಾರು 9 ಬೀಜ ಸಂಸ್ಕರಣ ಘಟಕಗಳು ಮತ್ತು 41500 ಕ್ವಿಂಟಾಲ್‌ಗಳಷ್ಟು ಬೀಜ ಸಂಗ್ರಾಹಣಾ ಸಾಮಾರ್ಥ್ಯವುಳ್ಳ ಉಗ್ರಾಣಗಳನ್ನು ಸ್ಥಾಪಿಸಲಾಗಿದೆ.

ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಗುಣಮಟ್ಟದ ಬೀಜೋತ್ಪಾದನೆ ಮತ್ತು ಹೊಸ ತಳಿಗಳಿಂದ ಈಶಾನ್ಯ ಕರ್ನಾಟಕದಲ್ಲಿ ತೊಗರಿ, ಹೆಸರು, ಭತ್ತ ಮತ್ತು ಕಡಲೆ ಬೆಳೆಗಳಲ್ಲಿ ಹೊಸ ತಳಿಗಳನ್ನು ಸುಮಾರು 40–50% ರಷ್ಟು ವಿಸ್ತೀರ್ಣದಲ್ಲಿ ಬೆಳೆಯುತ್ತಿದ್ದು ಬೆಳೆಯ ಇಳುವರಿಯು ಸುಮಾರು 15–20% ಹೆಚ್ಚಾಗಿರುತ್ತದೆ ಮತ್ತು ವಿಶ್ವವಿದ್ಯಾಲಯದ ಗುಣಮಟ್ಟದ ಬೀಜಗಳು ರೈತರಲ್ಲಿ ಹೆಚ್ಚು ಪ್ರಶಂಶೆಗೊಳಪಟ್ಟಿದೆ.

# ವಿಷಯ:-01

# ಪಾಣಿನೀಯಮ್

# ಮಾನವಶಾಸ್ತ್ರ ಮತ್ತು ಭಾಷಾ ವಿಜ್ಞಾನಗಳು

## THEME:-01

# PANINEEYAM

## HUMANITIES AND LINGUISTIC SCIENCES

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಕರ್ನಾಟಕ ರಾಜ್ಯದ ಅಂಧ ಮಕ್ಕಳಲ್ಲಿ ನವಮಾಧ್ಯಮದ ಬಳಕೆಯಲ್ಲಿ ಅನುಕೂಲ ಮತ್ತು ಅನಾನುಕೂಲ | ನೀಲಕಂಠ ಸ್ವಾಮಿ, ಡಾ. ಸಿ.ಕೆ ಪುಟ್ಟಸ್ವಾಮಿ, ಪ್ರೊ. ಪಿ.ಕೆ ಖಂಡೋಬಾ | 12 – 15 |
| 2 | ರಾಮಾಶ್ವಮೇಧ ಕೃತಿಯಲ್ಲಿ ಸೀತಯ ಪಾತ್ರ | ಡಾ.ಶೀಲಾದಾಸ | 16 – 18 |
| ೩ | ಜನಪದ ವೈದ್ಯ | ಕೆಂಪರಾಜಿ ಅರಸ್. ಪಿ. ಎಸ್ | 18 – 21 |
| 4 | ಆಹಾರ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ : ಈ ಕ್ಷೇತ್ರದಲ್ಲಿ ಇರುವೆಗಳಾದ ನಮ್ಮ ಅನುಭವದ ಕಥನವನ್ನು ಆಲಿಸಿ | ಡಾ. ಆರ್. ಪೂರ್ಣಿಮ | 21 – 25 |
| 5 | ಸಂಪರ್ಕ ಮಾಧ್ಯಮ ಮತ್ತು ಸಂಸ್ಕೃತ ಭಾಷೆ | Dr.M.A.Shruthikirti | 26 - 29 |
| 6 | ಪಂಡಿತ ತಾರಾನಾಥರ ಜೀವನ ಮತ್ತು ಸಾದನೆ. | ಡಾ.ಶೀಲಾದಾಸ | 29 – 31 |
| 7 | ಪ್ರಗತಿಶೀಲ ಕಥಾ ಸಾಹಿತ್ಯದಲ್ಲಿ ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಬದಲಾವಣೆಯ ಆಶಯ | ಮಂಜುನಾಥ ಸುಣಗಾರ | 31 – 35 |

# ಕರ್ನಾಟಕ ರಾಜ್ಯದ ಅಂಧ ಮಕ್ಕಳಲ್ಲಿ ನವಮಾಧ್ಯಮದ ಬಳಕೆಯಲ್ಲಿ ಅನುಕೂಲ ಮತ್ತು ಅನಾನುಕೂಲ

*ನೀಲಕಂಠ ಸ್ವಾಮಿ, ** ಡಾ. ಸಿ.ಕೆ ಪುಟ್ಟಸ್ವಾಮಿ, ***ಪ್ರೋ. ಪಿ.ಕೆ ಖಂಡೋಬಾ
*ಸಂಶೋಧನಾ ವಿದ್ಯಾರ್ಥಿ, *** ಸಂಯೋಜಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. **ಸಹ ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

**ಪ್ರಬಂಧ ಸಾರ:–** ಸಂವಹನವು ಮಾನವ ಜೀವನದ ಅವಿಭಾಜ್ಯ ಅಂಗ, ಮಾನವ ಸಂಘಜೀವಿ ಆತ ಸಮಾಜವನ್ನು ಬಿಟ್ಟು ಹೇಗೆ ಬದುಕಲಾರನೋ ಹಾಗೆಯೇ ಸಂವಹನವಿಲ್ಲದೇ ಆತ ಬದುಕಲಾರ ಸಂವಹನವೂ ಅತ್ಯಂತ ಮೂಲಭೂತವಾದ ಸಾಮಾಜಿಕ ಅಂತಃಕ್ರಿಯೆಯ ಮಾಧ್ಯಮವಾಗಿದೆ. ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ತೀರಾ ಅವಶ್ಯಕ ಮತ್ತು ಅನಿವಾರ್ಯ ಮಾಧ್ಯಮವಾಗಿದೆ. ಸಮಾಜದಲ್ಲಿ ಸಮೂಹ ಮಾಧ್ಯಮಗಳು ಇಲ್ಲದಂತಹ ಜೀವನವನ್ನು ಊಹಿಸಿಕೊಳ್ಳಲು ಅಸಾಧ್ಯ, ಸಂವಹನ ಎಂದರೆ ಒಂದುಕಡೆಯಿಂದ ಮತ್ತೊಂದುಕಡೆ ಅಥವಾ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಮಾಧ್ಯಮವೊಂದರಲ್ಲಿ ಸಂದೇಶಗಳನ್ನು ರವಾನಿಸುವುದು ಎಂದು ಅರ್ಥೈಸಬಹುದು. ಮಾತಾನಾಡುವ ಪದಗಳು, ಬರವಣಿಗೆ, ಸಂಜ್ಞೆಗಳು ಅಥವಾ ಅಕ್ಷರಗಳ ಮೂಲಕ ನಾವು ಬೇರೆಯವರೊಂದಿಗೆ ಸಂವಹನ ನಡೆಸುತ್ತಲೇ ಇರುತ್ತೇವೆ.

20ನೇ ಶತಮಾನದ ಕೊನೆಯ ಭಾಗದಲ್ಲಿ ಸಮೂಹ ಸಂಪರ್ಕ ಕ್ಷೇತ್ರದಲ್ಲಿ ಅದ್ಭುತ ಕ್ರಾಂತಿ ಜರುಗಿತು. ಉಪಗ್ರಹ ಸಂಪರ್ಕ, ದೂರ ಸಂಪರ್ಕ ಮತ್ತು ಗಣಕಯಂತ್ರ ಸಂವಹನಗಳು ಮೂಲಭೂತವಾಗಿ ನೂತನ ಸಂವಹನ ತಂತ್ರಜ್ಞಾನಗಳೆಂದು ಬಣ್ಣಿಸಲ್ಪಟ್ಟಿವೆ. ಸಮೂಹ ಮಾಧ್ಯಮಗಳಾದ ಪತ್ರಿಕೆ, ಚಲನಚಿತ್ರ, ರೇಡಿಯೋ, ದೂರದರ್ಶನ ಹಾಗೂ ಜಾನಪದ ಮಾಧ್ಯಮಗಳು ನಮ್ಮ ಜೀವನದ ಅವಿಭಾಜ್ಯ ಅಂಗಗಳಾಗಿದ್ದರೂ ಇವುಗಳನ್ನು ಮೀರಿ ನವಮಾಧ್ಯಮಗಳು ಜನಮನದಲ್ಲಿ ಅಚ್ಚೊತ್ತಿವೆ. ಅಧುನಿಕ ಜಗತ್ತಿನಲ್ಲಿ ವಿಜ್ಞಾನ ತಂತ್ರಜ್ಞಾನ ಬೆಳೆದಂತೆಲ್ಲಾ ಸಮೂಹ ಮತ್ತು ಮಾಹಿತಿ ಸಂಪರ್ಕ ಸಾಧನಗಳಲ್ಲಿ ಬದಲಾವಣೆಗಳು ದಿನದಿಂದ ದಿನಕ್ಕೆ ಆಗುತ್ತಾ ಬರುತ್ತಿವೆ. ಅಂತಹವುಗಳ ಸಾಲಿನಲ್ಲಿ ಕ್ಷಿಪ್ರವಾಗಿ ಬೆಳೆದು ಪ್ರಪಂಚವನ್ನು ಜಾಗತಿಕ ಹಳ್ಳಿಯನ್ನಾಗಿ ಪರಿವರ್ತಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ ಅಂತರ್‌ಜಾಲವೂ ಒಂದು.

ಬದಲಾಗುತ್ತಿರುವ ಜಗತ್ತಿನೊಡನೆ ಜನರೂ ಸಹ ಬದಲಾಗುವ ಅವಶ್ಯಕತೆಯಿದೆ. ಇಂದಿನ ಸ್ಥಿಗತಿಗೆ ಅನುಗುಣವಾಗಿ ಜನ ಹೊಂದಿಕೊಳ್ಳಬೇಕಾಗಿದೆ. ಪ್ರಸ್ತುತ ನವಮಾಧ್ಯಮ ಯುಗದಲ್ಲಿ ಗಣಕಯಂತ್ರ ಮತ್ತು ನವಮಾಧ್ಯಮದ ಬಗ್ಗೆ ಜ್ಞಾನ ಹೊಂದಬೇಕಾಗಿದೆ.

ಹೀಗೆ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಅಂಧಮಕ್ಕಳು ಸಾಮಾನ್ಯ ಮಕ್ಕಳಂತೆ ತಂತ್ರಜ್ಞಾನವನ್ನು ಮುಕ್ತವಾಗಿ ಬಳಸಲು ಸಾಧ್ಯವಿಲ್ಲ. ಗಣಕಯಂತ್ರ ಮತ್ತು ಅಂತರ್‌ಜಾಲ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಒಂದು ಭಾಗವಾಗಿದ್ದು, ನವಮಾಧ್ಯಮದಡಿಯಲ್ಲಿ ಬರುವ ಅಂತರ್‌ಜಾಲವು ಜ್ಞಾನ ಸಾಗರವಿದ್ದಂತೆ.

**ಪೀಠಿಕೆ :** ಸಂವಹನವು ಮಾನವ ಜೀವನದ ಅವಿಭಾಜ್ಯ ಅಂಗ, ಮಾನವ ಸಂಘಜೀವಿ ಆತ ಸಮಾಜವನ್ನು ಬಿಟ್ಟು ಹೇಗೆ ಬದುಕಲಾರನೋ ಹಾಗೆಯೇ ಸಂವಹನವಿಲ್ಲದೇ ಆತ ಬದುಕಲಾರ ಸಂವಹನವೂ ಅತ್ಯಂತ ಮೂಲಭೂತವಾದ ಸಾಮಾಜಿಕ ಅಂತಃಕ್ರಿಯೆಯ ಮಾಧ್ಯಮವಾಗಿದೆ. ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ತೀರಾ ಅವಶ್ಯಕ ಮತ್ತು ಅನಿವಾರ್ಯ ಮಾಧ್ಯಮವಾಗಿದೆ. ಸಮಾಜದಲ್ಲಿ ಸಮೂಹ ಮಾಧ್ಯಮಗಳು ಇಲ್ಲದಂತಹ ಜೀವನವನ್ನು ಊಹಿಸಿಕೊಳ್ಳಲು ಅಸಾಧ್ಯ, ಸಂವಹನ ಎಂದರೆ ಒಂದುಕಡೆಯಿಂದ ಮತ್ತೊಂದುಕಡೆ ಅಥವಾ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಮಾಧ್ಯಮವೊಂದರಲ್ಲಿ ಸಂದೇಶಗಳನ್ನು ರವಾನಿಸುವುದು ಎಂದು ಅರ್ಥೈಸಬಹುದು. ಮಾತಾನಾಡುವ ಪದಗಳು, ಬರವಣಿಗೆ, ಸಂಜ್ಞೆಗಳು ಅಥವಾ ಅಕ್ಷರಗಳ ಮೂಲಕ ನಾವು ಬೇರೆಯವರೊಂದಿಗೆ ಸಂವಹನ ನಡೆಸುತ್ತಲೇ ಇರುತ್ತೇವೆ.

ಜಗತ್ತು ಸಂವಹನ ಯುಗದ ಮೂಲಕ ಹಾದು ಹೋಗುತ್ತಿದೆ. ಉದ್ದೇಶವಿಲ್ಲದೆ ಯಾವುದೇ ಸಂವಹನವು ಆಗುವುದಿಲ್ಲ. ನಿಯತಕಾಲಿಕೆಗಳು, ಗಣಕಯಂತ್ರ, ಪತ್ರಿಕೆಗಳು, ದೂರದರ್ಶನ, ಪುಸ್ತಕಗಳು ದೂರವಾಣಿ ಇವೆಲ್ಲವೂ ಸಹ ನಮ್ಮ ಸುತ್ತ ಮುತ್ತಲಿನ ಸಂಪರ್ಕ ಸಾಧನಗಳು. ಪ್ರತಿಯೊಂದು ಸಹ ಭಾವನೆಗಳ ಮೇಲೆ, ಮನೋವೃತ್ತಿಗಳ ಮೇಲೆ, ವರ್ತನೆಯ ಮೇಲೆ ಮತ್ತು ಅರಿವಿನ ಮೇಲೆ ಪ್ರಭಾವ ಬೀರುತ್ತವೆ.

ಆಧುನಿಕ ಸಮಾಜವು ಸಂಪರ್ಕ ವ್ಯವಸ್ಥೆಗಳ ಮೂಲಕ ಹೆಚ್ಚಾಗಿ ಅವಲಂಬಿತವಾಗಿದೆ. ದೈನಂದಿನ ಜೀವನದಲ್ಲಿ ಹಲವಾರು ಸಂಪರ್ಕ ಸಾದನಗಳ ಮೇಲೆ ಅವಲಂಬಿತವಾಗಿರುವುದು ಅಚ್ಚರಿಯ ವಿಷಯವೇನು ಅಲ್ಲ. ಸಂವಹನವೂ ಮಾನವ ಜೀವನದ ಸಾರ್ವತ್ರಿಕ ಅವಶ್ಯಕತೆ.

ಅಂತರ್‌ಜಾಲವೂ ಕೂಡ ತಂತ್ರಜ್ಞಾದ ಒಂದು ಭಾಗ ನವಮಾಧ್ಯಮ ದಡಿಯಲ್ಲಿ ಬರುವ ಅಂತರ್‌ಜಾಲವೂ ಜ್ಞಾನ ಸಾಗರದಂತೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಅಂಧ ಮಕ್ಕಳು ಸಾಮಾನ್ಯರಂತೆ ತಂತ್ರಜ್ಞಾನವನ್ನು ಮುಕ್ತವಾಗಿ ಬಳಸಲು ಸಾಧ್ಯವಿಲ್ಲ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಾಹಿತಿ ಅಗತ್ಯವಷ್ಟೆ ಅಲ್ಲ, ಅನಿವಾರ್ಯವೂ ಹೌದು. ಅಂಧತ್ವದ ತೊಂದರೆಯನ್ನು ಹೊಂದಿರುವ ಮಕ್ಕಳು ಅಂತರ್‌ಜಾಲದ ಬಳಕೆ ಸುಲಭವಲ್ಲ. ಅಂತರ್‌ಜಾಲದಲ್ಲಿ ತಮಗೆ ಅಗತ್ಯವಿರುವ ಮಾಹಿತಿಯೂ ಲಭ್ಯವಿದೆಯೆಂದು ತಿಳಿದಿದ್ದರೂ ಕೂಡ ಈ ಸೌಲಭ್ಯದ ಪ್ರಯೋಜನೆ ಪಡೆದುಕೊಳ್ಳಲು ನೂರಾರು ತೊಂದರೆಗಳಿವೆ. ಇಂತಹ ತೊಂದರೆ ಗಳೆಲ್ಲವನ್ನು ಮೀರಿ ಮಾಹಿತಿ ಹುಡುಕಿ ಅದನ್ನು ಸದುಪಯೋಗ ಮಾಡುವುದು ಕಷ್ಟಸಾಧ್ಯ. ಸಮಾಜದಲ್ಲಷ್ಟೇ ಅಲ್ಲದೇ ಶೈಕ್ಷಣಿಕ ಕ್ಷೇತ್ರದಲ್ಲೂ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಅಂಧ ವಿದ್ಯಾರ್ಥಿಗಳು ಶೀಕ್ಷಣ ಕ್ಷೇತ್ರದಲ್ಲಿ ಮುಂದುವರೆಯುವುದು ಅಪರೂಪ ಅಂತಹುದರಲ್ಲಿ ತಂತ್ರಜ್ಞಾನದ ಬಳಕೆಯ ಜ್ಞಾನವು ಇಲ್ಲದಿದ್ದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಏಳಿಗೆಯು ಕಷ್ಟ.

ಹೀಗೆ ಅಂಧಮಕ್ಕಳ ಅಭಿವೃದ್ದಿ ನೋಡುವುದಾದರೆ ಮಾನವ ಜೀವಿ ಭೂಮಿ ಮೇಲೆ ಜನಿಸಿದಾಗಿನಿಂದ ಈ ಅಂಧತದವ ಜನಿಸಿದೆ. ಇದರ

ಅರಿವು ಮತ್ತು ಅಂಧತ್ವದ ಆಲೋಚನೆಗ:ಳು ಆದಿವಾಸಿ ಜನಾಂಗ 'ದಲ್ಲಿಹುಟ್ಟಿಕೊಂಡವು ಎನ್ನಲಾಗುತ್ತದೆ. ಇನ್ನೂ ಅಂಧ ಮಕ್ಕಳಿಗಾಗಿ 17ನೀ ಶತಮಾನದ ಅಂತ್ಯದಲ್ಲಿ ಅಂಧತ್ವದ ಬಗ್ಗ ಶಂಶೋಧನೆಗಳು ಪ್ರಾರಂಭವಾದವು 1784 ಮೋದಲ ಅಂಧ ಮಕ್ಕಳ ಶಾಲೆಯೂ ಫ್ರಾನ್ಸನಲ್ಲಿ ಸ್ಥಾಪಿಸಲಾಯಿತು. ನಂತರ ಕ್ರಮೇಣ ಬೇರೆ ಬೇರೆ ದೇಶಗಳಲ್ಲ ಸ್ಥಪಿಸಲ್ಪಟ್ಟವು ಇಂಗ್ಲ್ಯಾಂಡ್ ಮತ್ತು ಯೂರೋಪಿನಾದ್ಯಂತ ಅಂಧರ ಶಾಲೆಗಳನ್ನು ಸ್ಥಾಪಿಸಲಾಯಿತು. ನಂತರ 1809 ಲೂಯೀಸ್ ಬ್ರೈಲ್ ಎಂಬ ಸಂಶೋಧಕ ಅಂಧ ಮಕ್ಕಳಿಗಾಗಿ ಸಂಶೋಧನೆಯನ್ನ ಕೈಗೊಂಡನು. ಲೂಯಿಸ್ ಬ್ರೈಲ್‌ನನ್ನು ಕುರುಡು ಮತ್ತುಸ್ಪರ್ಶ ಓದುವ ಮತ್ತು ಬರೆಯುವ ವ್ಯವಸ್ಥೆಯ ಜನಕ ಮತ್ತು ಬ್ರೈಲ್ ಲಿಪಿಯ ಪಿತಾಮಹಾ ಎಂತಲೂ ಕತರೆಯಲಾಗಯುತ್ತದೆ.

ಲೂಯೀಸ್ ಬ್ರೈಲ್ ಒಬ್ಬ ಹುಟ್ಟು ಕುರುಡ ಈ ವ್ಯಕ್ತಿ ಶೀಕ್ಷಣ ಪಡೆಯಲು ಪಟ್ಟ ಕಷ್ಟ ಬೇರೆ ಅಂಧಮಕ್ಕಳು ಆ ಕಷ್ಟ ಪಡಬಾರದೆಂದು ಅವರು ಅಂಧ ಮಕ್ಕ:ಳಿಗಾಗಿ ಸಂಶೋಧನೆ ಮಾಡುವ ಮೂಲಕ ಒಂದು ಹೋಸಾ ಲಿಪಿಯನ್ನೆ ಹುಟ್ಟುಹಾಕಿದರು. ಆ ಲಿಪಿಗೆ ಬ್ರೈಲ್ ಲಿಪಿ ಎಂದು ತಮ್ಮ ಹೆಸರೇ ಇಟ್ಟರು. ಅಂದು ಹುಟ್ಟಿಕೊಂಡ ಈ ಲಿಪಿ ಇಂದಿಗೂ ಜಗತ್ ಪ್ರಸಿದ್ದ. ಅದೇಷ್ಟೋ ಅಂಧ ಮಕ್ಕಳು ಇಂದು ಲೂಯಿ ಬ್ರೈಲ್ ಅವರ ಹೆಸರಲ್ಲಿ ಅಕ್ಷರಾಬ್ಯಾಸ ಮಾಡುತ್ತಿದ್ದಾರೆ. ನಂತರ ಅವರು 1820 ರಲ್ಲಿ ಸ್ಪರ್ಶ ಓದುವ ಮತ್ತು ಬರೆಯುವ ವ್ಯವಸ್ಥೆಯನ್ನು ಅಭಿವೃದ್ದಿಪಡಿಸಿದರು. ಅಂದಿನಿಂದ ದಿನೆ ದಿನೆ ಲಿಪಿ ಮತ್ತು ಅಂಧ ಮಕ್ಕಳ ಏಳಿಗೆ ಮತ್ತು ಅಶೀಕ್ಷಣ ಅಭಿವೃದ್ದಿಗೆ ಅನೇಕ ಅನೇಕ ಸಂಶೋಧನೆಗಳು ನಡೆದಿವೆ. ಅಲ್ಲದೆ ಬ್ರೈಲ್ ಅವರ ಜಾಡು ಹಿಡಿದು ಅದೇಷ್ಟೋ ಸಂಶೋಧಕರು ಅನೇಕ ಸಂಶೋದನೆಗಳನ್ನು ಮಾಡಿ ಅಂಧ ಮಕ್ಕಳಿಗೆ ಸಹಾಯಕವಾಗುವ ತಂತ್ರಾಂಶಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅವುಗಳಲ್ಲಿ ಕೆಲವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**1) ಬ್ರೈಲ್ ಟ್ಯುಟ್ಟರ್ –**



ಇದು ಅಂಧ ಮಕ್ಕಲಿಗೆ ಬಹುಪಯೋಗಿ ತಂತ್ರಾಂಶವಾಗಿದ್ದು ಇದರಿಂದ ಅಂಧ ಮಕ್ಕಳು ಅಂತರ್ ಜಾಲದಿಂದ ಬೇಕಾದ ಮಾಹಿತಿಯನ್ನು ಸಂವಹನದ ಮುಖಾಂತರ ಪಡೆಯಬಹುದಾಗಿದೆ. ಅಂದರೆ ಈ ತಂತ್ರಾಂಶವನ್ನು ಅಂಧ ಮಕ್ಕಳು ತಮಗೆ ಬೇಕಾದ ಮಾಹಿತಿಯನ್ನು ಪ್ರಶ್ನೆ ರೂಪದಲ್ಲಿ ಕೇಳಿ ಉತ್ತರವನ್ನು ದ್ವನಿಯ ಮೂಲಕ ಪಡೆಯಬಹುದಾಗಿದೆ. ಪ್ರಶ್ನೆ ಕೇಳಿದ ಮರುಕ್ಷಣವೆ ಉತ್ತರ ನೀಡುತ್ತದೆ. ಹಾಗಾಗಿ ಇದು ಒಂದು ಉತ್ತಮ ಮತ್ತು ಬಹುಪಯೋಗಿ ತಂತ್ರಾಂಶ ಎಂದು ಹೇಳಬಹುದು.

**2) ಡ್ರ್ಯಾಗನ್ ಡಿಕ್ಟೇಷನ್**




ಇದು ಕೂಡಾ ಒಂದು ಅಂಧ ಮಕ್ಕಳಿ ಅಂತರ್ ಜಾಲ ಬಹುಪಯೋಗಿ ತಂತ್ರಾಂಶವಾಗಿದ್ದು ಇದರಿಂದ ಅಂಧ ಮಕ್ಕಳು ಅಂತರ್ ಜಾಲದಿಂದ ಬೇಕಾದ ಮಾಹಿತಿಯನ್ನು ತತ್‌ಕ್ಷಣದಲ್ಲಿ ಸಂವಹನದ ಮುಖಾಂತರ ಪಡೆಯಬಹುದಾಗಿದೆ. ಅಂದರೆ ಈ ತಂತ್ರಾಂಶವನ್ನು ಅಂಧ ಮಕ್ಕಳು ತಮಗೆ ಬೇಕಾದ ಮಾಹಿತಿಯನ್ನು ಪ್ರಶ್ನೆ ರೂಪದಲ್ಲಿ ಕೇಳಿ ಉತ್ತರವನ್ನು ದ್ವನಿಯ ಮೂಲಕ ಪಡೆಯಬಹುದಾಗಿದೆ. ಅಲ್ಲದೇ ಮತ್ತೊಂದು ಈ ತಂತ್ರಾಶದ ಉಪಯೋಗ ಎಂದರೆ ಸಂದೇಶ ಮತ್ತು ಈಮೇಲ್ ಗಳನ್ನ ನೇರವಾಗಿ ದ್ವನಿಯ ಮೂಲಕ ಆಲಿಸಬಹುದಾಗಿದೆ.

**3) ಐನೋಟ್ :**



ಈ ಒಂದು ತಂತ್ರಾಶ ಅಂಧ ಮಕ್ಕಳಿಗೆ ಕೊಂಚ ಉಪಯೋಗ ಕಮ್ಮಿಯಾದರೂ ಒಂದು ಉತ್ತಮ ಯಂತ್ರಾಂಶ. ಅಂದರೆ ಇದು ಕಾಗದದ ಹಣ ಎಷ್ಟೂ ಮೌಲ್ಯದ ಹಣ ಎಂದು ತಿಳಿಸಿಕೊಡುತ್ತದೆ. ಯಾವೂದಾದರೂ ಒಂದು ನೋಟನ್ನು ಇದರ ಮುಂದಿಟ್ಟರೆ ಇದು ಎಷ್ಟು ರೂಪಾಯಿಯ ಮೌಲ್ಯದ್ದು ಎಂದು ತಿಳಿಸಿ ಕೊಡುತದೆ.

**4) ಕಿಂಡಲ್ :**




ಈ ಒಂದು ತಂತ್ರಾಂಶವು ಮೋಬೈಲ್ ಗೆ ಸಂಭಂಧಿಸಿದ ತಂತ್ರಾಂಶವಾಗಿದೆ. ಇದನ್ನು ಮೋಬೈಲ್ ನಲ್ಲಿ ಅಳವಡಿಸಿ ಕೋಂಡರೆ ಇದರಲ್ಲಿ ಪುಸ್ತಕ, ಮ್ಯಾಗ್ಜಿನ್ ಮತ್ತು ಪತ್ರಿಕೆಗಳನ್ನು ದ್ವನಿಯ ಮೂಲಕ ಆಲಿಸಬಹುದಾದಂತಹ ವ್ಯವಸ್ಥೆಯನ್ನ ಈ ತಂತ್ರಾಂಶದಲ್ಲಿ ಅಳವಡಿಸಲಾಗಿದೆ. ಹಾಗಾಗಿ ಇದು ಒಂದು ಬಹುಪಯೋಗಿ ತಂತ್ರಾಂಶ ಎಂದತೆ ತಪ್ಪಾಗಲಾರದು.

**ಸೇ ಟೆಕ್ಸಟ್**



ಈ ಒಂದು ತಂತ್ರಾಂಶದಿಂದ ಅಂಧ ಮಕ್ಕಳು ಬಹು ಸಂತೋಷವಾಗಬಹುದು. ಕಾರಣ ಈ ಒಂದು ತಂತ್ರಾಂಶದಿಂದ ಅಂಧ ಮಕ್ಕಳು ಫೋಟೋವನ್ನು ಕ್ಲಕ್ಕಿಸಬಹುದು. ಈ ತಂತ್ರಾಶವನ್ನು ಮೋಬೈಲ್ ನಲ್ಲಿ ಅಳವಡಿಸಿ ಕೊಂಡು ಕ್ಯಾಮೇರಾವನ್ನು ತೆರೆದರೆ ಸಾಕು ಕ್ಯಾಮೇರಾದಲ್ಲಿ ಕಂಡು ಬರುವ ಚಿತ್ರದ ಬಗ್ಗೆ ವಿವರಿಸುತ್ತಾ ಹೋಗುತ್ತದೆ. ಹಾಗಾಗಿ ಮಕ್ಕಳು ಆರಾಮವಾಗಿ ಫೋಟೊವನ್ನು ಕ್ಲಿಕ್ಕಿಸಬಹುದು.

**ವಾಯ್ಸ್ ಬ್ರೀಫ್**




ಈ ಒಂದು ತಂತ್ರಾಶ ಅಂಧ ಮಕ್ಕಳಿ ತುಂಬಾ ಉಪಯೋಗಕಾರಿ ಸಂಶೋಧನೆ ಎನ್ನಬಹುದು. ಇದು ಯಾವುದೇ ಎಂಬ ಬರಹವುಳ್ಳ ಕಾಗದವನ್ನು ಸ್ಕ್ಯಾನ್ ಮಾಡಿದರೆ ಅದರಲ್ಲಿರುವ ಅಕ್ಷರಗಳನ್ನ ಕೂಡಿಸಿಕೊಂಡು ಓದುತ್ತದೆ. ಹಾಗಾಗಿ ಈ ತಂತ್ರಾಂಶದ ಮೂಲಕ ಅಂಧಮಕ್ಕಳು ಯಾವುದೇ ಪತ್ರ ಸಲಿಸಾಗಿ ಓದಬಹುದು.

**ದತ್ತಾಂಶ ವಿಶ್ಲೇಶಣೆ :** ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಒಟ್ಟು 50 ಸಂವಾದಿಗಳಿಂದ ಆಯ್ದ ವಿಷಯಗಳ ಕುರಿತು ಸಂದರ್ಶನ ಮಾಡಿ, ಪ್ರಶ್ನಾವಳಿ ಮೂಲಕ ಕರ್ನಾಟಕ ರಾಜ್ಯದ ಅಂಧ ಮಕ್ಕಳ ನವಮಾಧ್ಯಮದ ಬಳಕೆಯಲ್ಲಿ : ಅನುಕೂಲ ಮತ್ತು ಅನಾನುಕೂಲ ವಿಷಯಕ್ಕನುಗುಣವಾಗಿ ಸಂಬಂದಿಸಿದ ದತ್ತಾಂಶವನ್ನು ಕಲೆ ಹಾಕಿ ವಿಶ್ಲೇಷಣೆ ಮಾಡಲಾಗಿದೆ.

**1) ಸಂವಾದಿಗಳ ಲಿಂಗ ವಿವರ.**

| ಸಂವಾದಿಗಳ | ಸಂಖ್ಯೆ | ಶೇಕಡವಾರು |
|---|---|---|
| ಪುರುಷಾ | 30 | 60% |
| ಮಹಿಳೆ | 20 | 40% |
| ಒಟ್ಟು | 50 | 100% |

ಸಂವಾದಿಗಳ ಆಯ್ಕೆಯ ನಂತರ ಲಿಂಗ ವಿವರ ನೋಡಿದಾಗ 30 ಪುರುಷ ಸಂವಾದಿಗಳು ಮತ್ತು 20 ಮಹಿಳಾ ಸಂವಾದಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದು, ಅದರಲ್ಲಿ ಶೇಕಡಾವಾರಿನಲ್ಲಿ ಪ್ರತಿಶತವನ್ನು 100ರಕ್ಕೆ ಹೋಲಿಸಲಾಗಿದೆ.

**2) ಸಂವಾದಿಗಳ ವಯಸ್ಸಿನ ವಿವರ.**

| ಸಂವಾದಿಗಳ ವಯಸ್ಸು | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| 18 ರಿಂದ 20 | 11 | 22% | 06 | 12% |
| 21 ರಿಂದ 23 | 14 | 28% | 08 | 16% |
| 23 ಮೆಲ್ಪಟ್ಟು | 05 | 10% | 06 | 12% |
| ಒಟ್ಟು | 30 | 60% | 20 | 40% |
| ಒಟ್ಟು ಸಂವಾದಿಗಳು | | 50 | ಶೇಕಡವಾರು | 100% |

ಸಂವಾದಿಗಳ ವಯಸ್ಸಿನ ವಿವರವನ್ನು ಪಡೆದಾಗ ಸಂವಾದಿಗಳಲ್ಲಿ ಹೆಚ್ಚಿನ ಮಂದಿ 21 ರಿಂದ 23 ವಯೋಮಿತಿಯವರಾಗಿದ್ದಾರೆ. ಒಟ್ಟು ಶೇಕಡಾ 44 ರಷ್ಟು ಸಂವಾದಿಗಳು 21 ರಿಂದ 23 ವಯಸ್ಸು ಹೊಂದಿದ್ದಾರೆ. ಇನ್ನೂಳಿದಂತೆ ಶೇಕಡಾ 34 ರಷ್ಟು ಸಂವಾದಿಗಳು 18 ರಿಂದ 20 ವಯಸ್ಸಿನವರು ಹಾಗೂ 23 ಮೆಲ್ಪಟ್ಟು ಶೇಕಡಾ 22 ರಷ್ಟು ಸಂವಾದಿಗಳು ನಮ್ಮ ಅಧ್ಯಯನದಲ್ಲಿ ಇದ್ದಾರೆ.

**3) ನವಮಾಧ್ಯಮದ ಬಳಕೆದಾರರ ಸಂಖ್ಯೆ.**

| ಬಳಕೆದಾರರ ಸಂಖ್ಯೆ. | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| ಹೌದು | 25 | 50% | 15 | 30% |
| ಇಲ್ಲ | 05 | 10% | 05 | 10% |
| ಒಟ್ಟು | 30 | 60% | 20 | 40% |
| ಒಟ್ಟು ಸಂವಾದಿಗಳು | 50 | ಶೇಕಡವಾರು | | 100% |

ಸಂವಾದಿಗಳಿಗೆ ನವಮಾಧ್ಯಮದ ಬಳಕೆಯ ವಿವರ ನೋಡಿದಾಗ ನಮ್ಮ ಒಟ್ಟು ಸಂವಾದಿಗಳಲ್ಲಿ ಶೇಕಡಾ 80 ರಷ್ಟು ವಿದ್ಯಾರ್ಥಿಗಳು ನವಮಾಧ್ಯಮದ ಬಳಸುವವರಾಗಿದ್ದು, ಶೇಕಡಾ 20 ರಷ್ಟು ಬಳಸುತ್ತಿಲ್ಲ ಎಂಬುದಾಗಿ ತಿಳಿಸಿದ್ದಾರೆ.

**4) ದಿನಕ್ಕೆ ಎಷ್ಟು ಸಮಯ ಬಳಸುತ್ತೀರಿ.**

| ಸಮಯ | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| 1 ರಿಂದ 3 ಗಂಟೆ | 18 | 36% | 13 | 26% |
| 3 ರಿಂದ 6 ಗಂಟೆ | 10 | 20% | 05 | 10% |
| ಯಾವಾಗಲು | 02 | 04% | 02 | 04% |
| ಒಟ್ಟು | 30 | 70% | 20 | 40% |
| ಒಟ್ಟು ಸಂವಾದಿಗಳು 50 | | ಶೇಕಡವಾರು | 100% | |

ಸಾಮಾಜಿಕ ಜಾಲತಾಣಗಳನ್ನು ದಿನಕ್ಕೆ ಎಷ್ಟು ಸಮಯ ಬಳಸುತ್ತಿರಿ ಎಂಬ ಪ್ರಶ್ನೆಗೆ 1 ರಿಂದ 3 ಗಂಟೆಯಷ್ಟು ಶೇಕಡಾ 62 ಸಂವಾದಿಗಳು ಬಳಸುತ್ತಿದ್ದು, 3 ರಿಂದ 6 ಗಂಟೆಯಷ್ಟು ಶೇಕಡಾ 30 ಸಂವಾದಿಗಳು ಬಳಸುತ್ತಿದ್ದು, ಯಾವಾಗಲು ಅಂದರೆ ಸತತವಾಗಿ ಶೇಕಡಾ 08 ಸಂವಾದಿಗಳು ಬಳಸುತ್ತಿದ್ದಾರೆ ತಿಳಿಸಿದ್ದಾರೆ.

**5) ನವಮಾಧ್ಯಮದ ಬಳಕೆಗೆ ಪ್ರೇರೆಪಿತರಾರು.**

| ಪ್ರೇರೆಪಿತರು | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| ಸ್ನೇಹಿತರು/ಸಂಬಂದಧಿಕರು | 15 | 30% | 10 | 20% |
| ಪೋಷಕರು | 02 | 04% | 03 | 06% |
| ಸಹೊದ್ಯೋಗಿಗಳು | 08 | 16% | 05 | 10% |
| ಇತರೆ | 05 | 10% | 02 | 04% |
| ಒಟ್ಟು | 30 | 60% | 20 | 40% |
| ಒಟ್ಟು ಸಂವಾದಿಗಳ | 50 | ಶೇಕಡವಾರು | | 100% |

ಅಂತರ್‌ಜಾಲ ಬಳಸಲು ಪ್ರೇರೆಪಿತರಾರು ಎನ್ನುವ ಪ್ರಶ್ನೆಗೆ ಶೇಕಡಾ 50 ರಷ್ಟು ಸಂವಾದಿಗಳು ಸ್ನೇಹಿತರು/ಸಂಬಂದಧಿಕರು ಪ್ರೇರೆಪಿತರಾಗಿದ್ದು, ಶೇಕಡಾ 10 ರಷ್ಟು ಸಂವಾದಿಗಳು ತಾವು ಪೋಷಕರಿಂದ ಪ್ರೇರೆಪಿತರಾಗಿದ್ದು, ಶೇಕಡಾ 36ರಷ್ಟು ಸಂವಾದಿಗಳು ತಾವು ಸಹೊದ್ಯೋಗಿಗಳಿಂದ ಪ್ರೇರೆಪಿತರಾಗಿದ್ದು ಮತ್ತು ಶೇಕಡಾ 14 ರಷ್ಟು ಸಂವಾದಿಗಳು ತಾವು ಇತರೆ ಮೂಲಗಳಿಂದ ಪ್ರೇರೆಪಿತರಾಗಿದ್ದು ಎಂಬ ಮಾಹಿತಿಯು ಈ ಪ್ರಶ್ನಾವಳಿಯಿಂದ ಲಭ್ಯವಾಗಿದೆ.

**6) ಸಂವಹನಕ್ಕೆ ಉಪಯೋಗಿಸುವ ನವಮಾಧ್ಯಮದ ಅಪ್ಲಿಕೇಷನ್ ಯಾವುದು.**

| ಅಪ್ಲಿಕೇಷನ್‌ಗಳು | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| **ಬ್ರೈಲ್ ಟ್ವುಟ್ಟರ್** | 10 | 20% | 08 | 16% |
| **ಡ್ರ್ಯಾಗನ್ ಡಿಕ್ಟೆಷನ್** | 08 | 16% | 04 | 08% |
| **ಐನೋಟ್** | 06 | 12% | 04 | 08% |
| **ಕಿಂಡೆಲ್** | 06 | 12% | 04 | 08% |
| ಒಟ್ಟು | 30 | 60% | 20 | 40% |
| ಒಟ್ಟು ಸಂವಾದಿಗಳ 50 | | ಶೇಕಡವಾರು | | 100% |

ನವಮಾಧ್ಯಮದಲ್ಲಿ ಸಂವಹನಕ್ಕೆ ಹೆಚ್ಚು ಉಪಯೋಗಿಸುವ ಅಪ್ಲಿಕೇಷನ್ ಯಾವುದು ಎನ್ನುವ ಪ್ರಶ್ನೆಗೆ ಶೇಕಡಾ 36 ರಷ್ಟು ಸಂವಾದಿಗಳು **ಬ್ರೈಲ್ ಟ್ಯುಟ್ಟರ್** ಬಳಸುವುದಾಗಿ, ಶೇಕಡಾ 24 ರಷ್ಟು ಸಂವಾದಿಗಳು **ಡ್ರ್ಯಾಗನ್ ಡಿಕ್ಟೆಷನ್** ಬಳಸುವುದಾಗಿ, ಶೇಕಡಾ 20 ರಷ್ಟು ಸಂವಾದಿಗಳು ತಾವು **ಐನೋಟ್** ಬಳಸುವುದಾಗಿ, ಮತ್ತು ಶೇಕಡಾ 20 ರಷ್ಟು

**ಕಿಂಡೆಲ್** ಬಳಸುತ್ತಿರುವುದಾಗಿ ಮಾಹಿತಿ ಈ ಪ್ರಶ್ನಾವಳಿಯಿಂದ ಲಭ್ಯವಾಗಿದೆ.

**7) ಸಂವಹನಕ್ಕೆ ಬಳಸುವ ಮೊಬೈಲ್ ಅಪ್ಲಿಕೇಶನ್ ಯಾವುದು.**

| ಮೊಬೈಲ್ ಅಪ್ಲಿಕೇಷನ್‌ಗಳು | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| **ಐನೋಟ್** | 10 | 20% | 07 | 14% |
| **ಸೇ ಟೆಕ್ಸಟ್** | 08 | 16% | 04 | 08% |
| **ವಾಯ್ಸ ಬ್ರೀಫ್** | 05 | 10% | 05 | 10% |
| **ಬ್ರೈಲ್ ಟ್ವಿಟ್ಟರ್** | 07 | 14% | 04 | 08% |
| ಒಟ್ಟು | 30 | 60% | 20 | 40% |
| ಒಟ್ಟು ಸಂವಾದಿಗಳ | 50 | ಶೇಕಡವಾರು | | 100% |

ಸಂವಹನಕ್ಕೆ ಉಪಯೋಗಿಸುವ ಮೊಬೈಲ್ ಅಪ್ಲಿಕೇಷನ್ ಯಾವುದು ಎನ್ನುವ ಪ್ರಶ್ನೆಗೆ ಶೇಕಡಾ 34 ರಷ್ಟು ಸಂವಾದಿಗಳು **ಐನೋಟ್** ಬಳಸುವುದಾಗಿ, ಶೇಕಡಾ 24 ರಷ್ಟು ಸಂವಾದಿಗಳು **ಸೇ ಟೆಕ್ಸಟ್** ಬಳಸುವುದಾಗಿ ಆದರೆ ಶೇಕಡಾ 20 ಸಂವಾದಿಗಳು **ವಾಯ್ಸ ಬ್ರೀಫ್** ಬಳಸುವುದಾಗಿ ಮತ್ತು ಶೇಕಡಾ 22 ರಷ್ಟು **ಬ್ರೈಲ್ ಟ್ವಿಟ್ಟರ್** ಬಳಸುತ್ತಿರುವುದಾಗಿ ಮಾಹಿತಿ ಈ ಪ್ರಶ್ನಾವಳಿಯಿಂದ ಲಭ್ಯವಾಗಿದೆ.

**8) ಶೈಕ್ಷಣಿಕವಾಗಿ ಉಪಯುಕ್ತವಾಗುತ್ತಿವೆಯೇ ನವಮಾಧ್ಯಮಗಳು.**

| ಶೈಕ್ಷಣಿಕ ಉಪಯೋಗ | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| ಹೌದು | 25 | 50% | 14 | 28% |
| ಇಲ್ಲ | 05 | 10% | 06 | 12% |
| ಒಟ್ಟು | 30 | 40% | 20 | 40% |
| ಒಟ್ಟು ಸಂವಾದಿಗಳ | 50 | ಶೇಕಡವಾರು | | 100% |

ನವಮಾಧ್ಯಮಗಳು ಶೈಕ್ಷಣಿಕವಾಗಿ ಉಪಯುಕ್ತವಾಗುತ್ತಿವೆಯೇ ಎನ್ನುವ ಪ್ರಶ್ನೆಗೆ ಶೇಕಡಾ 78 ರಷ್ಟು ಸಂವಾದಿಗಳು ಹೌದು ಮತ್ತು ಶೇಕಡ 22 ರಷ್ಟು ಇಲ್ಲ ಅಂದರೆ ಉಪಯೋಗವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

**9) ನವಮಾಧ್ಯಮದ ಮತ್ತು ನಿಮ್ಮ ತಂತ್ರಾಂಶದ ಗುಣಮಟ್ಟ ಹೆಚ್ಚಿಸುವ ಅಗತ್ಯವಿದೆಯೇ.**

| ಗುಣಮಟ್ಟ | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| ಹೌದು | 30 | 60% | 20 | 40% |
| ಇಲ್ಲ | 00 | 00% | 00 | 00% |
| ಒಟ್ಟು | 30 | 60% | 20 | 40% |
| ಒಟ್ಟು ಸಂವಾದಿಗಳ | 50 | ಶೇಕಡವಾರು | | 100% |

ನವಮಾಧ್ಯಮಗಳ ತಂತ್ರಾಂಶಗಳ ಗುಣಮಟ್ಟ ಹೆಚ್ಚಿಸುವ ಅಗತ್ಯವಿದೆಯೇ ಎನ್ನುವ ಪ್ರಶ್ನೆಗೆ ಶೇಕಡಾ 100 ರಷ್ಟು ಸಂವಾದಿಗಳು ಹೌದು ಮತ್ತು ಶೇಕಡ 00 ರಷ್ಟು ಇಲ್ಲ ಎಂದು ತಿಳಿಸಿದ್ದಾರೆ. ಅಂದರೆ ಇಲ್ಲಿ ನವಮಾಧ್ಯಮಗಳ ಗುಣಮಟ್ಟ ಹೆಚ್ಚಿಸಬೇಕಾಗಿದೆ ಎಂದಿದ್ದಾರೆ.

**10) ನಿಮಗಾಗಿ ರೂಪಿಸಿರುವ ಸಾಫ್ಟ ವೇರ್‌ಗಳು ಉಪಯೋಗವಾಗುತ್ತಿವೆಯೆ.**

| ಉಪಯೋಗ | ಪುರುಷ | ಶೇಕಡ | ಮಹಿಳಾ | ಶೇಕಡ |
|---|---|---|---|---|
| ಹೌದು | 24 | 48% | 14 | 28% |
| ಇಲ್ಲ | 06 | 12% | 06 | 12% |
| ಒಟ್ಟು | 30 | 60% | 20 | 40% |
| ಒಟ್ಟು ಸಂವಾದಿಗಳ | 50 | ಶೇಕಡವಾರು | | 100% |

ನಿಮಗಾಗಿ ರೂಪಿಸಿರುವ ಸಾಫ್ಟ ವೇರ‍್ಗಳುಗಳು ಉಪಯೋಗವಾಗುತ್ತಿವೆಯೆ ಎನ್ನುವ ಪ್ರಶ್ನೆಗೆ ಶೇಕಡಾ 76 ರಷ್ಟು ಸಂವಾದಿಗಳು ಹೌದು ಮತ್ತು ಶೇಕಡ 24 ರಷ್ಟು ಇಲ್ಲ ಎಂದು ತಿಳಿಸಿದ್ದಾರೆ. ಅಂದರೆ ಇಲ್ಲಿ ನವಮಾಧ್ಯಮಗಳ ಗುಣಮಟ್ಟ ಹೆಚ್ಚಿಸಬೇಕಾಗಿದೆ ಎಂದಿದ್ದಾರೆ.

**ಉಪಸಂಹಾರ** : ಒಟ್ಟರೆಯಾಗಿ ನಾವು ಇಲ್ಲಿ ಗಮನಿಸುವುದಾದರೆ ನಮಗೆ ದೊರೆತ ದತ್ತಾಂಶಗಳ ಮಾಹಿತಿಯನ್ನು ವಿಶ್ಲೇಷಿಸಿ ಗಮನಿಸಿದಾಗ ಅಂಧಮಕ್ಕಳು ಈ ನವಮಾಧ್ಯಮಗಳನ್ನು ಹೆಚ್ಚಿನ ರೀತಿಯಲ್ಲಿ ಬಳಸುತ್ತಿದ್ದು ಇದರಿಂದ ಅದರ ಉಪಯೋಗವು ಹೆಚ್ಚಿದೆ ಎಂದು ತಿಳಿಯುತ್ತದೆ ಮತ್ತು ನವಮಾಧ್ಯಮಗಳು ಗುಣಮಟ್ಟ ಹೆಚ್ಚಿಸಬೇಕಾಗಿದೆ.

ಇಲ್ಲ ಸಾಮನ್ಯರಂತೆ ಅಂಧ ಮಕ್ಕಳೂ ಕೂಡ ನವಮಾಧ್ಯಮಗಳನ್ನು ಬಳಸುತ್ತಿದ್ದು, ಇದರಿಂದ ಹೆಚ್ಚಿನ ರೀತಿಯಲ್ಲಿ ಜ್ಞಾನ ಪಡೆಯುತ್ತಿದ್ದಾರೆ ಎನ್ನಬಹುದಾಗಿದೆ. ಈ ನವಮಾಧ್ಯಮಗಳನ್ನು ಇವರು ಸ್ನೇಹಿತರು ಮತ್ತು ಸಂಬಂಧಿಕರಿಂದ ಹೆಚ್ಚಿನ ರೀತಿಯಲ್ಲಿ ಪ್ರಭಾವಿತರಾಗಿ ಬಳಕೆ ಪ್ರಾರಂಬಿಸಿರುವುದಾಗಿ ತಿಳಿದುಬರುತ್ತದೆ. ಕೆಲ ಅಂಧಮಕ್ಕಳು ನವಮಾದ್ಯಮದ ಒಂದು ಭಾಗವದ ಮೊಬೈಲನ್ನು ಬಳಸುತ್ತಿದ್ದು ಅದರಲ್ಲಿ ವಿವಿದ ರಿತಿಯ ಅಪ್ಲಿಕೇಶನ್‌ಗಳನ್ನು ಬಳಸುತ್ತರುವುದು ಕಂಡುಬರುತ್ತದೆ. ಶೈಕ್ಷಣಿಕವಾಗಿ ಈ ನವಮಾಧ್ಯಮ ಉಪಯೋಗಿಸಲ್ಪಡು ತ್ತಿದ್ದರೂ ಇವರ ಪಾಲಿಗೆ ಇವುಗಳ ಗುಣಮಟ್ಟ ಇನ್ನೂ ಹೆಚ್ಚಿಸಬೇಕಾಗಿದೆ ಎಂಬುದು ಅವರ ಅಭಿಪ್ರಾಯವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ನವಮಾಧ್ಯಮಗಳು ಅಂಧಮಕ್ಕಳಿಗೆ ಉಪಯುಕ್ತವಾಗುತ್ತಿದ್ದರೂ ಅವರೂ ಅದರಿಂದ ಮಾಹಿತಿ ಪಡೆಯಲು ಅವರು ಸಂಪೂರ್ಣ ಸ್ವತಂತ್ರರಾಗಿಲ್ಲ. ಅಂದರೆ ಅವರಿಗಾಗಿ ಕೆಲ ತಂತ್ರಾಂಶಗಳು ಇದ್ದರು ಅದರಿಂದ ಪರಿಣಾಮಕಾರಿಯಾಗಿ ಮಾಹಿತಿ ಪಡೆಯಲು ಆಗುತ್ತಿಲ್ಲ ಮತ್ತು ಅದರ ಉಪಯೋಗ ಸುಲಭವಾಗಿಲ್ಲ. ಆದ್ದರಿಂದ ಇದರ ಬಳಕೆ ಸುಲಬಗೊಳಿಸಿ ಅವರಿಗಾಗಿ ಕೆಲ ತಂತ್ರಾಂಶಗಳ ಗುಣಮಟ್ಟ ಹೆಚ್ಚಿಸುವುದು ಅಗತ್ಯವಾಗಿದೆ. ಇವುಗಳ ಗುಣಮಟ್ಟ ಹೇಚ್ಚಿಸುವುದರಿಂದ ಅಂಧಮಕ್ಕಳ ಅಂತರ್‌ಜಾಲ ಬಳಕೆಯಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಅನುಕೂಲವಾಗುತ್ತದೆ.

**ಗ್ರಂಥಋಣ**

http://en.wikipedia.org/wiki/Braille_technology.
http://chronicle.com/article/Blind-students-Demand-Access/125695.
http://webaim.org/artical/visul/blind
http://en.wikipedia.org/wiki/Blindness.
www.google.com

## ರಾಮಾಶ್ವಮೇಧ ಕೃತಿಯಲ್ಲಿ ಸೀತಯ ಪಾತ್ರ

ಡಾ.ಶೀಲಾದಾಸ
ಸಹಪ್ರಾಧ್ಯಾಪಕರು, ಎಲ್. ವಿ.ಡಿ. ಮಹಾವಿದ್ಯಾಲಯ, ರಾಯಚೂರು.೫೮೪೧೦೩.

**ಪ್ರಬಂಧ ಸಾರ:**– ಹತ್ತೊಂಬತ್ತನೆಯ ಶತಮಾನದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾದ ಕವಿಯಮದರೆ ಮುದ್ದಣ್ಣ.ಈತನು ತಿಮ್ಮಪ್ಪಯ್ಯಹಾಗೂ ಮಹಾಲಕ್ಷ್ಮಮ್ಮನವರ ಸುಪುತ್ರನು.೧೮೭೦ ಜನೆವರಿ ೨೪ರಂದು ಜನಿಸಿದನು.ಹೆಸರು ನಾರಾಯಣಪ್ಪಾ ಎಂದಿದ್ದರೂ ತಾಯಿ ಪ್ರೀತಿಯಿಂದ ಮುದ್ದಣ್ಣ ಎಂದು ಕರೆದಕಾರಣಮುದ್ದಣ್ಣ ಎಂದೇ ಪ್ರಸಿದ್ದನಾದ. ತಂದೆ ದೇವಾಲಯದ ಅರ್ಚಕರು. ಪ್ರತಿಭಾವಂತನಾದ ಇತನಿಗೆ ಹಳ್ಳಿ ಸಾಕಗದೆ ಉಡುಪಿಗೆ ಬರುತ್ತಾನೆ.ಶಿಕ್ಷಕವೃತ್ತಿಯಜೊತೆಗೆ ಅಧ್ಯಯನವನ್ನೂ ಮುಂದಯವರೆಸುತ್ತಾರೆ.ಆ ಸಂದರ್ಭದಲ್ಲಿಸಾಹಿತ್ಯಕೃಷಿಯನ್ನೂ ಆರಂಭಿಸುತ್ತಾರೆ. ರಾಮಾಶ್ವಮೇಧ, ಅದ್ಭುತರಾಮಾಯಣ,ಶ್ರೀರಾಮಪಟ್ಟಾಭಿಶೇಕ,ರತ್ನಾವತಿ ಕಲ್ಯಾಣ,ಕುಮಾರವಿಜೆಯ ಎಂಬಕೃತಿಗಳನ್ನು ರಚಿಸಿದ್ದಾನೆ.

ಪ್ರಸ್ತುತ ರಾಮಾಶ್ವಮೇಧ ಉತ್ತರರಾಮಾಯಣದ ಕಥೆಯನ್ನು ಹೊಂದಿದೆ.ಈ ಕೃತಿಗೆಪದ್ಮಪುರಾಣ, ಜೈಮಿನಿಭಾರತ ಆಕರ ಗ್ರಂಥವಾಗಿದೆ.ಸಾಧಾರಣವಾಗಿ ಸೀತೆಯದು ಸೌಮ್ಯಸ್ವಭಾವ. ಆದರೆ ಇಲ್ಲಿ ಮುದ್ದಣ್ಣ ಸೀತೆಯನ್ನು ವಿಭಿನ್ನವಾಗಿ ಚಿತ್ರಿಸಿದ್ದಾನೆ.ಸೀತೆಯನ್ನು ಹೊಸಬಗೆಯಾಗಿ ಕಂಡಿದ್ದಾನೆ.

ಕನ್ನಡ ಸಾಹಿತ್ಯಚರಿತ್ರೆಯನ್ನು ಅವಲೋಕಿಸಿದಾಗ ಅನೇಕ ಕವಿಗಳು ಮೈಲುಗಲ್ಲಾಗಿ ನಿಲ್ಲುತ್ತಾರೆ, ಅಂಥವರಲ್ಲಿ ಮುದ್ದಣ್ಣ ಕವಿಯೂ ಒಬ್ಬನು.ನಡುಗನ್ನಡ ಹಳೆಗನ್ನಡದ ಕೊಂಡಿಯಾಗಿ,ಹೊಸತನದ ರುವಾರಿಯಾಗಿ ನಿಲ್ಲುತ್ತಾನೆ.ಹೊಸಗನ್ನಡದಲ್ಲಿ ಹೆಚ್ಚು ಚರ್ಚೆಗೆ ಒಳಗಾಗುವ ಕವಿಯಂದರೆ ಮುದ್ದಣ್ಣ.ಹತ್ತೋಂಭತ್ತನೆ ಶತಮಾನ ಹಲವಾರು ಹೊಸತನವನ್ನು ಕಂಡಿದೆ.ಹಳೆತನ ಹೊಸತನವನ್ನು ಮೈಗೂಡಿಸಿಕೊಂಡವನು ಮುದ್ದಣ್ಣ.ಅವನುಬದುಕಿದ ಕಾಲ ಕಡಿಮೆಯಾ 'ದರೂ ಮಾಡಿದ ಸಾದನೆ ಅನುಪಮವಾದದ್ದು. ಆದ್ದರಿಂದ ಮುದ್ದಣ್ಣ ಇಂದಿಗೂ ಪ್ರಸ್ತುತವಾಗಿದ್ದಾನೆ.

ಮುದ್ದಣ್ಣನ ನಿಜನಾಮಧೇಯ 'ನಂದಳಿಕೆ ನಾರಾಯಣಪ್ಪ' ಎಂದು. ಆದರೆ ಪ್ರಸಿದ್ಧಿಯಾದದ್ದು ಮುದ್ದಣ್ಣನೆಂದು.ತಂದೆ ತಿಮ್ಮಪ್ಪಯ್ಯ ತಾಯಿ ಮಹಲಕ್ಷಮಮ್ಮ.೨೪–೦೧–೧೮೭೦ರಂದು ಜನಿಸಿದನು.ನಂದಳಿಕೆ ಎಂಬುವುದು ಹುಟ್ಟು ಗ್ರಾಮ. ತಾಯಿ ಮುದ್ದಿನಿಂದ ಮುದ್ದಣ್ಣನೆಂದು ಕರೆದುದರಿಂದ ಮುದ್ದಣ್ಣನೆಂದೆ ಖ್ಯಾತನಾದನು.ಬಾಲ್ಯ ಕಷ್ಟದಿಂದ ಕೂಡಿದ್ದು.ತಂದೆ ಪೂಜ ಕೈಂಕರ್ಯ ನಡೆಸುತ್ತಿದ್ದರು.ಅಗಾಧ ಪ್ರತಿಭಾವಂತ ನಾದ ಮುದ್ದಣ್ಣನಿಗೆ ಆ ಹಳ್ಳಿ ಸಾಕಗಲಿಲ್ಲ.ಹೆಚ್ಚಿನ ವಿದ್ಯಾಭ್ಯಾಸಕ್ಕೆ ಉಡುಪಿಗೆ ಹೊಗುತ್ತನೆ, ಅಧ್ಯಯನದ ಜೊತೆಗೆ ಶಿಕ್ಷಕ ವೃತ್ತಿಯನ್ನು ಆರಿಸಿಕೊಳ್ಳುತ್ತಾನೆ.ಜೊತೆಗೆ ಸಾಹಿತ್ಯಕೃಷಿಗೂ ಕೈಹಾಕುತ್ತಾನೆ.

ಶ್ರೀರಾಮಾಪಟ್ಟಾಭಿಶೇಕ, ಅದ್ಭುತರಾಮಾಯಣ,ರಾಮಾಶ್ವಮೇದ,ರತ್ನಾವತಿ ಕಲ್ಯಾಣ, ಕುಮಾರ ವಿಜಯ ಎಂಬಕೃತಿಗಳನ್ನು ರಚಿಸಿದ್ದಾನೆ.ಪ್ರಸ್ತುತ ರಾಮಾಶ್ವಮೆಧದಲ್ಲಿ ಸೀತೆಯ ಪಾತ್ರದ ಕುರಿತು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ, ಮುದ್ದಣ್ಣನಿಗಿಂತ ಮೊದಲು ಇದ್ದ ರಾಮಯಣಗಳ ಪರಿಚಯ ,ಪ್ರಭಾವ ಅವನಮೇಲಾಗಿರ ಬಹುದು.

ರಾಮಾಯಣ,ಮಹಾಭಾರತ ಮಹಾಕಾವ್ಯಗಳು ಭಾರತೀಯರಲ್ಲಿ ಆಳವಾಗಿ ಬೇರೂರಿವೆ,ಸಾವಿರಾರು ವರ್ಷಗಳಿಂದ ಪಾರಯಣ ಗ್ರಂಥಗಳಾಗಿವೆ. ಭಾರತೀಯರ ಸಂಸ್ಕೃತಿಯ ,ಆದರ್ಶದ ತವನಿಧಿಯಗಿವೆ.ಭಾರತದ ಎಲ್ಲಾ ಬಾಷೆಗಳಲ್ಲೂ ಈ ಕಾವ್ಯಗಳು ಕಂಡು ಬರುತ್ತವೆ.ಅಷ್ಟೇ ಅಲ್ಲಾ ವಿದೇಶಗಳಲ್ಲೂ ಹರಡಿದೆ.

ಪ್ರಸ್ತುತ ರಾಮಾಯಣದ ಕಥೆಯವಿಷಯದ ಮೂಲವನ್ನು ವೈದಿಕ, ಬೌದ್ಧ,ಜೈನ,ಪರಂಪರೆಯಲ್ಲಿಯಲ್ಲಿ ಕಾಣುತ್ತೆವೆ,ವೈದಿಕ ಪರಂಪರೆಯಲ್ಲಿ ವಾಲ್ಮೀಕಿರಾಮಯಣ,ಭೌದ್ಧ ಪರಂಪರೆ,ಜೈನ ಪರಂಪರೆಯಲ್ಲಿ ಗುಣಭದ್ರರ,ವಿಮಲಸೂರಿಯರ ರಾಮಾಯಣಗಳು ಬೆಳೆದುಬಂದಿವೆ. ಕನ್ನಡದಲ್ಲಿಭುವನೈಕರಾಮಾಭ್ಯುದಯ, ನಾಗಚಂದ್ರನರಾಮಚಂದ್ರ ಚರಿತಪುರಾಣ, ಕುಮುದೇಂದುರಾವಾಾಯಣ, ತೊರೆವೆಯ ರಾಮಾಯಣ, ಲಕ್ಷ್ಮೀಶನಜೈಮಿನಿಭಾರತ, ವೆಂಕಮಾತ್ಯರಾಮಯಣ, ಬತ್ತಲೇಶ್ವರ ಕವಿಯಕೌಶಿಕ ರಾಮಾಯಣ,ಮುದ್ದಣ್ಣನ ರಾಮಾಯಣ ಕಾವ್ಯಗಳು,ಕುವೆಂಪು ಅವರ ರಾಮಾಯಣ ದರ್ಶನಂ,ಜನಪದ ಸಾಹಿತ್ಯದಲ್ಲಿ ರಾಮಾಯಣದ ಕಥೆಗಳುಬೆಳೆದು ಬಂದಿವೆ.

ಪ್ರಸ್ತುತ ಈ ರಾಮಾಯಣಗಳಲ್ಲಿ ಸೀತೆಯ ಪಾತ್ರ ವಿಶೇಷವಾಗಿ ಬೆಳೆದು ಬಂದಿದೆ. ವಾಲ್ಮೀಕಿ ರಾಮಾಯಣದಲ್ಲಿ ಸೀತೆಯ ಬಾಹ್ಯ ಸೌಂದರ್ಯಕಿಂತ, ಆಂತರಿಕ ಸೌಂದರ್ಯಕ್ಕೆ ಹೆಚ್ಚು ಮಹತ್ವ ಕೊಡಲಾಗಿದೆ. ಸೀತೆಯ ಪಾತ್ರದ ಮುಖಾಂತರಹೆಣ್ಣಿನ ಜೀವನದ ಅತಿ ಶೇಷ್ಟವಾದ ಆದರ್ಶವನ್ನು ಮುಂದಿಟ್ಟಿದ್ದಾನೆ.ಆಕೆಯಲ್ಲಿ ಪತಿವ್ರತೆಯಲ್ಲಿರಬೇಕಾದ ತ್ಯಾಗ, ಕೊಮಲ,ಧೈರ್ಯ ಸಹನೆಗಳೂ ಮನೆಮಾಡಿದ್ದವು. ಎಲ್ಲರ ಹೃದಯದಲ್ಲಿ ನೆಲೆಯಾಗಿ ನಿಲ್ಲುವ ಪಾತ್ರ ಸೀತೆಯದು..ಜಾತಕ ಕಥೆಗಳಲ್ಲಿ ಸೀತೆಯಪಾತ್ರಕ್ಕೆ ಮಹತ್ವವಿಲ್ಲಾ.ರಾಮನ ಪಾತ್ರಕ್ಕಿಂತಾ ರಾಮನ ಆದರ್ಶವೇಇಲ್ಲಿ ಮಹತ್ವ ಪಡೆದುಕೊಳ್ಳುತ್ತದೆ. ವಿಮಲ ಸೂರಿಯ ಪಉಮಚರಿಯ,ಗುಣಭದ್ರನು ಉತ್ತರಪುರಾಣ ದಲ್ಲಿ 'ಸಂಪತ್ತಿಗಿಂತ ಸ್ತ್ರೀಯರಿಗೆ ಶೀಲವೇ ಮುಖ್ಯವೆಂಬ ವಿಚಾರ ವ್ಯಕ್ತವಾಗಿದೆ. ಪಂಪರಾಮಾಯಣದಲ್ಲಿ ಸೀತೆಸೌಂದರ್ಯವತಿಯಾಗಿ ಚಿತ್ರಿತವಾಗಿದ್ದಾಳೆ. ಏಕೆಂದರೆ ರಾವಣನ ಅವನತಿ ತೋರಿಸಬೇಕಾಗಿದೆ. ಕುಮದೇಂದು ನಾಗಚಂದ್ರನನ್ನು ಅನುಸರಿಸಿದ್ದಾನೆ.ಕುಮಾರವಾಲ್ಮೀಕಿ ,ಆದಿಕವಿವಾಲ್ಮೀಕಿಯುನ್ನು ಅನುಸರಿಸಿದ್ದಾನೆ.ಸೀತೆಯುನ್ನು ಆದಿಶಕ್ತಿ,ವಿಷ್ಣುವನಿತೆ ಎಂದು ವರ್ಣಿಸಿದ್ದಾನೆ.ವೆಂಕಮಾತ್ಯವರ್ಣನೆಗೆ ಬೆಲೆಕೊಟ್ಟರೆ, ಕೌಶಿಕರಾಮಾಯಣ ಮಮತೆಗೆ ಬೆಲೆ ಕೊಟ್ಟಿದ್ದಾನೆ. ಜೈಮಿನಿಭಾರತದಲ್ಲಿ ಸೀತೆ ಕೋಮಲಸ್ವಭಾವ ಬಿಟ್ಟುಸಹಜ ಹೆಣ್ಣಿನಂತೆ ಚಿತ್ರಿತವಾಗಿದ್ದಾಳೆ.

ಈ ಎಲ್ಲಾ ಕಾವ್ಯಗಳ ಅದರಲ್ಲೂ ಮುದ್ದಣ್ಣನ ಮೇಲೆವಿಶೇಷವಾಗಿ ಲಕ್ಷ್ಮೀಶನ ಪ್ರಭಾವ ಬೀರಿದೆ.ಸೀತೆಯನ್ನು ದೈವತ್ವಕ್ಕಿಂತ ಮಾನವಸಹಜ ಗುಣಗಳನ್ನುಚಿತ್ರಿಸಲು ಪ್ರಯತ್ನಿಸಿದ್ದಾನೆ. ಒಮ್ಮೆ ಸೀತೆ ಪಕ್ಷಿಯೊಂದು ತನ್ನ ಮರಿಗೆ ಗುಟುಕುಕೊಡುವುದನ್ನು ನೊಡಿ ಪರಿತಪಿಸುತ್ತಾಳೆ. ತನಗೆ

ಮಗುವಿಲ್ಲ ಎಂಬುದನ್ನುಅದು ಅಣುಕಿಸಿ ತೋರುವಂತೆ ಬಾವಿಸುತಾರೆ. ರಾಮಾಶ್ವಮೇಧ ಉತ್ತರರಾಮಾಯಣದ ಕಥೆ.ಮೇಲ್ನೋಟಕ್ಕೆ ಈ ಕೃತಿಗೆ ವಾಲ್ಮೀಕಿರಾಮಾಯಣ ಆಕರ ಗ್ರಂಥ ಎನ್ನಿಸಿದರೂ, ಇದಕ್ಕೆ ಮೂಲ ಆಕರ ಪದ್ಮಪುರಾಣವಾಗಿದೆ.೪೩೦೦ ಶ್ಲೋಕದಲ್ಲಿರುವ ಕಥೆಯನ್ನು ೧೬ ನಾರು ಆಶ್ವಾಸಗಳಲ್ಲಿ ರಚಿಸಿದ್ದಾನೆ.ಅಲ್ಲದೆ ಲಕ್ಷ್ಮೀಶನ ಜೈಮಿನಿಭಾರತವೂ ಪ್ರಭಾವಬೀರಿದೆ.ಈ ಎರಡೂ ಕೃತಿಗಳಲ್ಲಿ ಬೇಕಾದ ವಿಚಾರಗಳನ್ನು ಆಯ್ಕೆಮಾಡಿಕೊಂಡಿದ್ದಾನೆ.ಲವಕುಶರ ಬಾಲಲೀಲೆ,ರಾಮ ಲಕ್ಷ್ಮಣ, ಭರತನೊಂದಿಗೆ ನಡಿಸಿದ ಕಾಳಗ ವಿಶೇಷವಾಗಿ ಮೂಡಿ ಬಂದಿದೆ, ಇತರ 'ರಾಮಾಯಣಗಳಲ್ಲಿ ಸೀತೆ ಸೌಮ್ಯಸ್ವಭಾವದ ವಳಾಗಿ ಚಿತ್ರಿತವಾದರೆ ಮುದ್ದಣ್ಣ ಅವಳನ್ನು ಧೀರೋಧಾತ್ತವಾಗಿ ಚಿತ್ರಿಸಿದ್ದಾನೆ. ಸೀತೆಯು ಇಲ್ಲಿ ನವೀನವಾಗಿ ಚಿತ್ರಿತವಾಗಿದ್ದಾಳೆ.ಪ್ರಸ್ತುತ ದಿನಗಳಲ್ಲಿ ಈ ಪಾತ್ರ ಮಾದರಿಯಾಗಿದೆ.

ಅಯೊಧ್ಯಯಲ್ಲಿ ಸೀತೆ ತನ್ನ ಸೇವಕಿಯರೊಂದಿಗೆ ಕಾಲ ಕಳಿಯುತ್ತಿರುವಾಗ ಹಕ್ಕಿ ತನ್ನಮರಿಗೆ ಗುಟುಕು ಕೊಡುತ್ತಿರುತ್ತದೆ.ಅದನ್ನು ನೋಡಿದ ಸೀತೆ ಅದು ತನ್ನನ್ನುಬಂಜೆಯಂದು ಅಣುಕಿಸುತ್ತಿದೆ ಯಂದು ಭಾಸವಾಗುತ್ತದೆ.ಬಂಜೆತನದ ನೊವು, ಮಗುವಿಗಾಗಿ ಕಾತರಪಡುವ ಆಕೆಯಸಹಜ ಮಾತೃಹೃದಯವಿವರವಾಗಿ ಹೃದ್ಯವಾಗಿ, ಚಿತ್ರಿತವಾಗಿದೆ. ಇದರೋಂದಿಗೆ ಆಕೆಯ ಅಂತರಂಗದ ತುಡಿತಗಳೆಲ್ಲವೂ ಹೊರಬಂದಿವೆ. 'ತನ್ನನ್ನು ಬಂಜೆಯಂದು ಜರಿದು ಮಗುವನ್ನು ಯಾರು ನನ್ನ ಕೈಗೆ ಕೊಡರು, ಮಾತನಾಡಲುಬಿಡರು.ಕುಲವನ್ನು ವರ್ಧಿಸುವ ಕಂದನನ್ನು ಪಡೆದು ಮೊಲೆಯುಣಿಸಿ ಪಾಡಿತೂಗಿಮಲಗಿಸುವ, ಮಗುವಿನ ಬಾಲಲೀಲೆಗಳನ್ನು ಕಂಡು ಆನಂದಿಸುವ ಫಳಿಗೆನಾನು ಪಡೆದು ಕೊಂಡಿಲ್ಲಾ' ಎಂದು ಮಕ್ಕಳಿದ್ದ ಹೆಣ್ಣುಮಕ್ಕಳ ಸುಖವನ್ನು ಕಲ್ಪಿಸಿಕೊಳ್ಳುತ್ತಾಳೆ. ಆ ಅವಕಾಶತನಗಿಲ್ಲವೆಂದು ನಿರಾಶೆಯಿಂದಿರುವ ಮನಸ್ಥಿತಿಯನ್ನು ಕವಿ ಹೃದಯಂಗಮಯವಾಗಿ ಚಿತ್ರಿಸಿದ್ದಾನೆ.ಮುದ್ದಣ್ಣನ ಈ ಹೊಸಸೃಷ್ಠಿಯಿಂದ ಹೆಣ್ಣಿನ ಹೃದಯದ ಭಾವಗಳ ತಿಳುವಳಿಕೆ ಸುಂದರ ಕಾವ್ಯವಾಗಿದೆ. ರಾಮನು ತನ್ನನ್ನು ಕಾಡಿಗೆಕಳುಹಿಸುತ್ತಾನೆಂದು ಅರಿಯದೆ ಅವಳು ಪಡುವ ಸಂತಸ ಅಷ್ಟಿಷ್ಟಲ್ಲಾ.'ತನ್ನಪತಿ ನನ್ನಾಸೆಯನ್ನು ಇಷ್ಟು ಬೇಗ ಈಡೇರಿಸಿದನೇ?. ಎಂಥಾಕರುಣಾಕರ. ನಾನು ಇನ್ನು ಅತ್ತೆಯ ಒಪ್ಪಿಗೆ ಪಡೆದುಕೊಂಡಿಲ್ಲ. ಸಹೋದರಿಯರಿಗೆ ಹೇಳಿಲ್ಲ. ಇರಲಿ ರಾಮನೇ ಹೇಳಿಕೊಳ್ಳುತ್ತಾನೆ. ಅಥವಾ ತಾವೇ ತಿಳಿದುಕೊಳ್ಳುತ್ತಾರೆ. ವನದಿಂದಬಂದನಂತರ ಅಲ್ಲಿ ಕೇಳಿದ ಕಥೆಗಳನ್ನು ಹೇಳುತ್ತೇನೆ. ಇನ್ನೇನು ಕೆಲದಿನಗಳಲ್ಲಿ ಬರುತ್ತೇನೆ. ಎಂದು ವನಸುಮಂಗಲೆಯರನ್ನು ಕಾಣಲು ತವಕಿಸುತ್ತಾಳೆ.ಈ ಸಂದರ್ಭದಲ್ಲಿ ಸೀತೆಯಯ್ನು ಬಿಟ್ಟು ಹೊಗುವುದಹೇಗೆ ಎಂದು ಚಿಂತೆ 'ಮಾಡುತ್ತಿರಲಾಗಿ ಲಕ್ಷ್ಮಣ ಏಕೆ ನಿಧಾನವಾಗಿ ಬರುತ್ತಿರುವೆ. ದಾರಿಯಲ್ಲಿಮುಲ್ಲು ಮುಳ್ಳು ಇಲ್ಲಾ ಆಶ್ರಮಕ್ಕೆ ಬರಲು ನಿನಗೆಮನಸ್ಸಿಲ್ಲವೆ ಎಂದುಮುಗ್ದವಾಗಿ ಕೇಳುತ್ತಾಳೆ.ಮುಂದಹೋಗೆಲಕ್ಷ್ಮಣ ನೀನು ದಾರಿ ತಪ್ಪಿದ್ದಿಯ. ಇದು ಆಶ್ರಮದ ದಾರಿಯಲ್ಲಇಲ್ಲಿ ಜನರ ಸಂಪರ್ಕವೆ ಇಲ್ಲ. ಇಲ್ಲಿಪ್ರಾಣಿಗಳಭಯಂಕರ ದ್ವನಿ ಕೇಳುತ್ತಿದೆ. ಇಂಥಕಡೆ ಋಷಿಮುನಿಗಳು ವಾಸಿಸಲು ಸಾಧ್ಯವಿಲ್ಲಾ. ನೀನು ಬಹುಶ: ದಾರಿತಪ್ಪಿರುವೆ 'ಎಂದುಅರಿಯದೆ ವ್ಯಾಕುಲತೆಯನ್ನು ವ್ಯಕ್ತಪಡಿಸುತ್ತಾಳತೆ. ಆ ಮಾತ್ತು ಕೇಳಿ ಲಕ್ಷ್ಮಣನ ಮನದಲ್ಲಿ ವೇದನೆಯಾಗುತ್ತದೆ. ಕೊನೆಗೆಕಣ್ಣೀರಿಡುತ್ತ , ತಾಯೆನನ್ನನ್ನು ಕ್ಷಮಿಸಿ,ಇಲ್ಲಿಯವರೆಗೆಅಣ್ಣನ ಅಪ್ಪಣೆಯಂತೆ ಸುಮ್ಮನಿದ್ದೆ.ಯಾರದೊ ಮಾತಿಗೆ ಅಣ್ಣ ನಿಮ್ಮನ್ನು ಅಡವಿಗೆ ಬಿಟ್ಟು ಬರಲು ಹೇಳಿದ್ದಾನೆ, ಅಣ್ಣನ ಆಜ್ಞೆಯನ್ನು ಪಾಲಿಸುತ್ತ ರಾಮನು ತನ್ನನ್ನು ತೆಜಿಸಿ ಕಾಡಿಗೆ ಬಿಡಲುತಿಳಿಸಿದ್ದಾನೆಂದು ತಿಳಿದಾಗ ದಿಗ್ಭ್ರಾಂತಳಾಗಿತ್ತಾಳೆ.ಇಲ್ಲಿ ಕವಿ ಆಕೆಯಮನದಲ್ಲಿಯ ಅಚ್ಚರಿ, ರೋಷ, ಆತ್ಮನಿಂದೆ, ವ್ಯಂಗ್ಯವನ್ನೆಲ್ಲಾಬಿಡಿಸಿಬಿಡಿಸಿ ಹೇಳಿದ್ದಾನೆ.

ಈ ಸುದ್ದಿ ಕೇಳಿ ಸೀತೆಗೆ ಬರಸಿಡಲು ಬಡೆದಂತಾಯಿತು. ಗಾಳಿಗೆ ಕರ್ಪೂರದಬಾಳೆ ಗಿಡದಂತೆಮುರಿದು ಬಿದ್ದಳು. ಮೈದುನನಮಾತು ಕಿವಿಗೆ ಚೂಪಾದ ಬಾಣ ನೆಟ್ಟಂತೆ ಆಯಿತು. ಮೂರ್ಛೆಹೊದಳು. ಲಕ್ಷ್ಮಣನು ಅಲ್ಲಿಯೇ ಇದ್ದ ಬೆಟ್ಟದ ಝರಿ ನೀರನ್ನು ತಾವರೆಯ ಎಲೆಯಲ್ಲಿ ತಂದು ದೇವಿಗೆ ಮಾಡುವ ಸೇವೆಯಂದು ಕಾಲಿಗೆ ನೀರುಹಾಕಿ ತಲೆಯ ಮೇಲೆ ನೀರು ಸುರಿಯಲು ಸೀತೆ ಕಣ್ಣು ಬಿಟ್ಟಳು.'ಹಾ ಲಕ್ಷ್ಮಣ ಪ್ರಿಯನಾದ ರಾಮ ಹೀಗೆ ಹೇಳಿದನೆ, ?ಮಾವು ಬೇವಾಯಿತೆ?, ಸಾಗರ ಬತ್ತಿ ಹೊಯಿತೆ?ಧರ್ಮ ಮಡುವಿನಲ್ಲಿ ಮುಳಿಗಿಹೋಯಿತೆ?ಹುಣ್ಣಿಮೆಯ ಚಂದ್ರನನ್ನುರಾಹು ನುಂಗಿತೆ?ಸತ್ಯ ಪಲಾಯನಮಾಡಿತೆ?ನೀತಿ ಹೆಸರು ಕಳೆದುಕೊಂಡಿತೆ? ಅಯ್ಯೋನಾ ಬಲಿಯಾದೆನಲ್ಲ' ಎಂದು ಪ್ರಲಾಪಿಸುತ್ತಾಳೆ.ಮುಂದುವರೆದು ನನ್ನಲ್ಲಿ ಯಾವ ಕೊರತೆಕಂಡೆ,ಮಾರಿ ಹಬ್ಬವೆಂದುಮನೆಯ ಹೋರಿಯನ್ನು ಬಲಿಕೊಡುವರೆ,ಒಬ್ಬ ಸಾಮಾನ್ಯವ್ಯಕ್ತಿ ಆರೊಪಿಸಿದನೆಂದು ಅಬಲೆಯನ್ನು ಕಗ್ಗಾಡಿನಲ್ಲಿ ಬಿಟ್ಟು ಬರಬಹುದೆ? ನಾನು ನಿನ್ನರ್ಧಾಂಗಿಯಲ್ಲವೇ,ನಾನು ಇಲ್ಲದೆ ನೀನು ಅರ್ಧದೇಹಿಯಲ್ಲವೆ? ನಾನಿಲ್ಲದೆ ನೀನು ಸಿಂಹಾಸನವನ್ನು ಹೇಗೆ ಏರುವೆ? ನೀನು ಕಾಡಿಗೆ ಹೋಗುವಾಗ ನಿನ್ನನ್ನು ಅರ್ಧಗಂಟೆಬಿಟ್ಟಿರಲಾರೆನೆಂದು ನಾನೂ ನಿನ್ನಜೊತೆಗೆ ಬರಲಿಲ್ಲವೇ? ಕಾಡಿನಲ್ಲಿ ಬಳಲಿ ಬಸವಳಿದಾಗ ನೀನುನನ್ನನ್ನು ಆರೈಕೆ ಮಾಡಲಿಲ್ಲವೆ, ಈಗ ನಾನು ಈ ಭಯಂಕರಕಾಡಿನಲ್ಲಿ ಒಬ್ಬಳೇಹೇಗೆ ಇರಬಲ್ಲೆ?ಎಂದು ಹೇಳುವ ಸೀತೆಯನ್ನು ಮುದ್ದಣ್ಣ ಕವಿ ಸೃಷ್ಟಿಸಿದ್ದಾನೆ. ಆಕೆ ಕೇಳುವ ಒಂದೊಂದು ಮಾತಗಳು ಮರ್ಮಭೇದಮಾತುಗಳಾಗಿವೆ,

ಮುಂದುವರೆದು ನೀನು ಹನುಮಂತ, ಜಾಂಬವಂತ, ಸುಮಂತ್ರ , ಅತ್ತೆಯರು ಇದಕ್ಕೆ ಒಪ್ಪಿಕೊಂಡರೆ?ನನ್ನದೊಂದು ಬದುಕೇ? ಎಂದು ತನ್ನನ್ನು ತಾನು ಶಪಿಸಿಕೊಳ್ಳುತ್ತ,ತನ್ನನ್ನು ತಾನು ಸಮಾಧಾನ ಮಾಡಿಕೊಳ್ಳುತ್ತ 'ನಿಮ್ಮನ್ನು ಶಪಿಸಿ ಏನು ಪ್ರಯೋಜನ? ಹಿಂದಿನಜನ್ಮದಲ್ಲಿ ಯಾವದಂಪತಿಗಳನ್ನು ಅಗಲಿಸಿದ್ದೆನೋ ಈ ಜನ್ಮದಲ್ಲಿ ಅದರ ಫಲವನ್ನು ಅನುಭವಿಸುತ್ತಿದ್ದೆನೆ.ಎಂದು ಪತಿಯನ್ನು ಆತನ ಆದೇಶವನ್ನು ಗೌರವಿಸುತ್ತಾಳೆ.ತಲೆತಗ್ಗಿಸಿನಿಂತ ಮೈದುನನ್ನು 'ಕಂದ ಏಕೆ ನಿಂತಿರುವೆ, ಅಣ್ಣನ ಆಜ್ಞೆ ಪಾಲಿಸಿರುವೆ. ತಡವಾಗುತ್ತದೆ ಹೋಗು,ತಡವಾದರೆ ನಿನ್ನ ಅಣ್ಣಕೋಪಿಸಿಕೊಳ್ಳುವುದಿಲ್ಲವೇ?ಎಂಬಮಾತು ಮೇಲ್ನೋಟಕ್ಕೆ ಸರಳವಾದರೂಅದರಲ್ಲಿ ವ್ಯಂಗ್ಯ ಇಣುಕಿ ನೋಡುತ್ತದೆ.ಆಕೆಯಮಾತು ಈಟಿಯಿಂದ ಇರಿದಂತೆ ಭಾಸವಾಗುತ್ತದೆ.ನಿನ್ನಣ್ಣ ಕೇಳಿದರೆ'ಅವಳು ದು:ಖಿಸಲಿಲ್ಲ,ಅಳುಕಲಿಲ್ಲ, ಶಪಿಸಲಿಲ್ಲ, ಪ್ರತಿಮಾತನಾಡಲಿಲ್ಲ.ನೀನೇ ಗತಿಯಂದು ಸಾವು ನಿರೀಕ್ಷಿಸುತ್ತಿದ್ದಾಳೆ ಎಂದು ನಿರೂಪಿಸು ಅವಳ ಸ್ಥಿತಿಚಿಂತಾಜನಕವಾದದ್ದು ಹಾಗೂ ಧೀರೋಧ್ಧಾತ್ತವಾದದ್ದು. ಜನಕಮಹಾರಾಜನ ಕುವರಿಯಾದ ಜಾನಕಿ ಯುವರಾಣಿ. ಮನೆತನದ ಸಹಜವಾದ ವೀರಗುಣಗಳು ಅವಳಲ್ಲಿಯೂ ಇದೆ,ತಾತ್ಕಾಲಿಕವಾದರೂ ಅವಳಲ್ಲಿಯ ಸಹಜಸ್ವಭಾವ ಜಾಗ್ರತವಾಗುತ್ತದೆ.ಮನುಷ್ಯಸೋತು ಹೋದಾಗ, ಬೇರೆ ಮಾರ್ಗವೇ ಇಲ್ಲವಾದಾಗ ಎಲ್ಲಿಲ್ಲದ

ಧೈರ್ಯಬರುತ್ತದೆ. ತುಂಬಾಮುಳಿಗಿದವನಿಗೆ ಛಳಿಏನುಮಳೆ ಏನು ಎಂಬಂತೆ ವಿನೂತನವಾಗಿ ಚಿತ್ರಿತವಾಗಿದ್ದಾಳೆ. ಮುಂದುವರೆದು, ನನಗೆನನ್ನ ತಂದೆಯು ಬಳುವಳಿಯಾಗಿ ಕೊಟ್ಟ ಆಭರಣಗಳಲ್ಲಿ ಏಕಾವಳಿಹಾರ ಶ್ರುತಕೀರ್ತಿಗೂ,ತಿರುಪಿನ ಬಳೆಯನ್ನು ಮಾಳವಿಗೂ, ಯಕ್ಷರು ಧರಿಸುವ ತುಂಬು ಬೆಲೆ ಬಾಳುವ ಹಾರವನ್ನು ನಿನ್ನ ಪತ್ನಿಗೂ ಕೊಡು,ಉಳಿದ ನನ್ನುಡುಪುಗಳನ್ನುನನ್ನಪ್ರಿಯಗೆಳತಿ ಚಂದ್ರಮತಿಗೂ ಕೊಡು. ದು:ಖಿಸಬೇಡವೆಂದು ಹೇಳು.ನಾನು ಸಿದ್ಧಪಡಿಸಿದ ಬಾಗೀಣ ವನ್ನುರಥದಲ್ಲಿ ಇಟ್ಟಿದ್ದೇನೆ ಅದನ್ನು ಬ್ರಾಹ್ಮಣಗೆ ಮುತ್ತೈದೆಕೊಡು ನನ್ನ ಮುದ್ದಿನ ಹಸು ಕರುವನ್ನು ನಿನ್ನ ತಾಯಿ ಸುಮಿತ್ರೆಗೆಕೊಡು, ಸಾಧ್ಯವಾದರೆನಿನಗೆ ನನ್ನಲ್ಲಿ ದಯೆ ಇರುವುದಾದರೆ ನೀರಿನಅರವಟ್ಟಿಗೆ ಯನ್ನು ಏರ್ಪಡಿಸು'ಹೊಗು ನಿನ್ನ ಪಯನ ಸುಖಕರವಾಗಲಿ .ಅಪ್ಪಣೆ ಕೊಡುತ್ತಾಳೆ. ಲಕ್ಷ್ಮಣ ದಿಕ್ಪಾಲಕರಿಗೆ ಕೈಮುಗಿದು ಅತ್ತಿಗೆಯನ್ನು ಕಾಪಾಡಲು ಕೇಳಿಕೊಳ್ಳುತ್ತಾನೆ,ಸೂರ್ಯದೇವ, ನವನದೇವಿಯರಿಗೆ ಒಪ್ಪಿಸಿ ವಂದಿಸಿ ಹೋರಟುಹೋಗುತ್ತಾನೆ, ಜನಕರಾಜನ ಮಗಳು,ರಾಮನ ಹೆಂಡತಿಗೆ ಈಪರಸ್ಥಿತಿಯೇ,ವಿಧಿವಿಲಾಸ,ತನ್ನ ಅರಮನೆ ಗಿಳಿಗಳು, ಹೂಬಳ್ಳಿಗಳನ್ನು ನೆನೆದು ದ:ಖಿಸಿ ನಾನಿಲ್ಲದಿದ್ದರೆ ಇನ್ನೊಬ್ಬರು ಎಂದು ಉದಾಸೀನವಾಗಿ ಇರುವಾಗ ವಾಲ್ಮೀಕಿಋಷಿಗಳು ಬರುತ್ತಾರೆ.ಅವುರು ಯಾರು ತಾಯೆ ವನದೇವಿಯಂತಿರುವೆ.ಎಂದಾಗ ಹೆದರಿ ರಾಕ್ಷಸರು ಇರಬಹುದೆಂದು ನಡಗುತ್ತಿರಲಾಗಿ,ವಾಲ್ಮೀಕಿ ಋಷಿಗಳು ತಾವು ತಪಸ್ವಿಗಳೆಂದು ಹೆದರಬಾರದೆಂದುರಮಿಸಿ ಆಕೆಯನ್ನು ಆಶ್ರಮಕ್ಕೆ ಕರೆತರುತ್ತಾನೆ.:

ಇತ್ತರಾಮ ಸೀತೆಯ ನೆನೆದು ದು:ಖಿತನಾಗಿ,ಅಗಸ್ತ್ಯರ ಆದೇಶದಂತೆ a£ÀÀ ÀÀ¹ ÃvÉAiÀ£ÀÀ EI ÀÀÉEAqÀ C±ÀÀÀz À PÁAiÀð DgÀ©üÀvÁÛÉ PÀz ÀgÉAiÀ ¨ÉUÁ° UÉ±ÀÀÀvÀÀÀÀÉÀvÉÉ ¨ÀÀÀÀÀ ÃUÀÀÀÀ £É¹ PÀ¸ ÃvÁÛÉ ÉgÉ ÉgÉ¥ÀÀÉÀÀÀÀÀ zÁn ªÁ°ÀQ D±ÀÀÀPÉ §gÀÀ ªÀPÀÀÃ PÀz ÀgÉAiÀ£ÀÀ PÀÃÁPÃvÁÛÉ »A¨Á®PÀÀ¸gÁdgÀ ®ªÀÀÉA¢UÉ AiÀÀz À ªÀÀr zÁUÀ®ª Àª ÀÀb ÀÁ °ÉÉAz ÃvÁÛÉCª ÀÀÀÀPÉÉAqÉ AiÀÀÀÀ ÃvÉÀvÉ Áª ÀÀÀÀvÉgÉÉz ÀÀÀÀqÀvÁÛÉ«µÀiÀv½zÀ PÀ±À gÁª À®PÀÀ gÀÀÀ ¸É° ¸¯ÁV ÀÁ° ÀÀ À¶UÀÀ C£ÃUÀÀÀAz ÀUÀqÀ ÉqÀª ÃPÀÀ MAz ÁUÃvÁÛÉ

Mn ÉÀÀ è ª ÀÀz À Ú awÀz À¹ ÃvÉ ¸Áª ÀÁ£À¼ÀvÉ ¨Àª ÀÀ ÁV,«ÃgÀÀvÉ¢ÀgÉÉz ÀÀÀÁV,ª ÀÁvÀ ÁvÀÀz À Rt ÂiÀÀV, PÀÀ²Ã®½ÁV ,¨ÀiÃAPÀÀÀ¹ ÀAiÀ ÀiÀÉ ¸ÀÃavÀÁV, DzÀÀ ¸À ª ÀÁvÉ ÃvÉiÀÁV awÀÀÁVzÁÝÉ ª ÀÀzÀ ÉÀF PÀAiÀ èÉ ÀÁÀª ÀÁ£À¥ÀÉÃPÉÉAr zÁÝÉ

UÀÀx ÀI Ä

1)ª ÀÀzÀ Ú ÀqÁgÀ

2) PÀÀÀª Ã ÁPÁª ÀÀÀè¹ ÃvÉiÀ ¥ÁvÀÀvÀÀ ¯É qÁ ª ÀÀz ÁQ¤

## ಜನಪದ ವೈದ್ಯ

ಕೆಂಪರಾಜಿ ಅರಸ್. ಪಿ. ಎಸ್
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯ0ುನ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲ0ು, ಮಾನಸಗಂಗೋತ್ರಿ, ಮೈಸೂರು–570 006

**ಪ್ರಬಂಧ ಸಾರ:–** ಜನಪದ ವೈದ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ. ಜನಪದ ವೈದ್ಯವನ್ನು ಮಾನವ ವೈದ್ಯೆ, ಪಶುವೈದ್ಯೆ ಮತ್ತು ಸಸ್ಯವೈದ್ಯೆ ಎಂದು ವಿಭಾಗಿಸಬಹುದು. ಮಾನವನ ವೈದ್ಯೆದಲ್ಲಿ ಹೆಂಗಸರ, ಗಂಡಸರ, ಮಕ್ಕಳ, ವೈದ್ಯೆ ಪದ್ಧತಿಗಳು ಪ್ರಮುಖವಾದವು. ಮಾನವ ವೈದ್ಯೆ ಎಲ್ಲರಲ್ಲಿಯೂ ಒಂದೇ ರೀತಿಯಾಗಿ ಕಾಣಿಸಿಕೊಂಡರೂ, ವೈದ್ಯೆ ವಿಧಾನ, ಬಳಕೆ, ಪ್ರಮಾಣಗಳಲ್ಲಿ ವ್ಯತ್ಯಾಸವಿರುತ್ತದೆ. ಭಾರತ ದೇಶ ಪ್ರಾಣಿಪಕ್ಷಿಗಳ ಆಗರ. ಆದ್ದರಿಂದ ಪ್ರಾಣಿಪಕ್ಷಿಗಳ ಯೋಗಕ್ಷೇಮ ವಿಚಾರವೇ ಪಶುವೈದ್ಯೆವಾಗಿದೆ. ಹಸು, ಎತ್ತು, ಎಮ್ಮೆ, ಕೋಣ, ಆಡು, ಕುರಿ, ಮರಿಗಳಿಗೆ ವಿವಿಧ ಸಂದರ್ಭಗಳಲ್ಲಿ ತಗಲುವ ಕಾಯಿಲೆಗಳಿಗೆ ತಮ್ಮ ಪರಿಸರದಲ್ಲಿ ದೊರಕುವ ವಸ್ತುಗಳಿಂದ ಮಾಡಿದ ಔಷಧಿಗಳನ್ನು ರೋಗ ನಿವಾರಣೆಯಾಗುವ ಭರವಸೆಯಾದ ಮೇಲೆ ಕೊಡುವುದು ಹೆಚ್ಚು ಬಳಕೆಯಲ್ಲಿದೆ. ಜನಪದರು ತಮಗೆ ಮತ್ತು ತಮ್ಮ ಪ್ರಾಣಿಪಕ್ಷಿಗಳಿಗೆ ತಗುಲಿದ ರೋಗ ನಿವಾರಣೆ ಮಾಡಿಕೊಳ್ಳುವುದಲ್ಲದೆ ತಮ್ಮ ಸುತ್ತಲೂ ಬೆಳೆದಿದ್ದ ಮರ, ಗಿಡ, ಹೂವು, ಕಾಯಿ, ಪೈರು, ಪಚ್ಚೆಗಳಿಗೆ ತಗಲಿದ ರೋಗಗಳಿಗೂ ತಮ್ಮ ಜ್ಞಾನದಿಂದ ತಯಾರಿಸುವ ಔಷಧಿಗಳನ್ನು ಬಳಸಿ ಗುಣಪಡಿಸುತ್ತಾರೆ.

ಜನಪದ ವೈದ್ಯ ಪದ್ಧತಿಯು ಪ್ರಾಚೀನ ಕಾಲದಿಂದಲೂ ಜನಪದರನ್ನು ರಕ್ಷಿಸಿಕೊಂಡು ಬಂದಿದೆ. ಜನಪದರು ತಮ್ಮ ಆಹಾರದ ಕಡೆಗೆ ಗಮನ ಹರಿಸಿಕೊಳ್ಳುವುದರ ಜೊತೆಗೆ ಹೆಚ್ಚಾಗಿ ತಮ್ಮ ಆರೋಗ್ಯದ ಕಡೆ ಗಮನ ಹರಿಸಿಕೊಳ್ಳುವುದು ಹೆಚ್ಚು. ಆರೋಗ್ಯ ಚೆನ್ನಾಗಿದ್ದರೆ ಏನನ್ನಾದರೂ ಸಾಧಿಸುವ ಛಲ ನಮ್ಮ ಜನಪದರಿಗೆ ಸೇರಿದೆ. ಜನಪದ ವೈದ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ. ಇಂದು ಭರತಖಂಡದಲ್ಲಿ ಪ್ರಮುಖವಾಗಿ ಆಯುರ್ವೇದ, ಯುನಾನಿ, ಹೋಮಿಯೋಪತಿ, ಅಲೋಪತಿ ಎಂದು ನಾಲ್ಕು ವಿಧದ ಚಿಕಿತ್ಸೆಗಳು ಹೆಚ್ಚು ಪ್ರಚಲಿತವಾಗಿವೆ. ಇವುಗಳಲ್ಲಿ ಆಯುರ್ವೇದ ತುಂಬ ಪ್ರಾಚೀನವಾದುದು. ಆನಪದ ವೈದ್ಯವನ್ನು ಮಾನವ ವೈದ್ಯ, ಪಶುವೈದ್ಯ ಮತ್ತು ಸಸ್ಯವೈದ್ಯ ಎಂದು ವಿಭಾಗಿಸಬಹುದು.

ಜನಪದ ವೈದ್ಯವನ್ನು ನಾಡೌಷಧಿ, ನಾಟಿಔಷಧಿ, ಕೈಯೌಷದಿ, ಹಸಿರು ಔಷಧಿ, ಹಿತ್ತಲಮದ್ದು, ಮನೆಮದ್ದು ಎಂಬ ಹೆಸರುಗಳಿಂದ ಜನಪದ ವೈದ್ಯದ ಅರ್ಥವನ್ನು ಗಮನಿಸಬಹುದಾಗಿದೆ. ಈ ಮೇಲಿನ ಎಲ್ಲಾ ಹೆಸರುಗಳು ನಮ್ಮ ಜನಪದರು ವಾಸಿಸುವ ಸುತ್ತಮುತ್ತಲ ಹಳ್ಳಿಗಳಿಂದ ಕಂಡುಬರುವ ಪ್ರಕೃತಿಯ ಗಿಡಮೂಲಿಕೆಗಳಿಗೆ ಸಂಬಂಧಿಸಿದ್ದವಾಗಿದೆ.

**"**ನಾಡ ಮದ್ದಂ ತಿಂದು ಕುತ್ತ ಕೆಡದಿರಬಹುದೆ?**"** ಎಂದು ಮಹಾಕವಿ ರಾಘವಾಂಕನು ಹರಿಶ್ಚಂದ್ರ ಕಾವ್ಯದಲ್ಲಿ ಕೇಳಿದ್ದನ್ನು. ಜೀವವುಳ್ಳ ಪ್ರಾಣಿ–

ವೃಕ್ಷಾದಿಗಳಿಗೂ ರೋಗಗಳು ತಪ್ಪಿದಲ್ಲ. ತಮ್ಮಿಂದ ಸಾಧ್ಯವಿರುವ ಉಪಚಾರಗಳನ್ನು ಅವೂ ಮಾಡಿಕೊಳ್ಳುತ್ತವೆ. ತೀರ ಪ್ರಾಚೀನ ಮಾನವನು, ಸ್ವಮೂತ್ರ ಮಲ, ಚರ್ಮ ಮುಂತಾದವನ್ನು ಚಿಕಿತ್ಸೆಯಲ್ಲಿ ಬಳಸಿಕೊಳ್ಳುತ್ತಿದ್ದರು. ಆಯುರ್ವೇದಲ್ಲಿ ಗಿಡಮೂಲಿಕೆಗಳ ಜೊತೆಗೆ ವಿವಿಧ ಪ್ರಾಣಿಗಳ ಮಲ–ಮೂತ್ರಗಳಿಂದಲೂಸಹ ಔಷಧಿಗಳನ್ನು ಕಂಡುಕೊಂಡು ಕಾಯಿಲೆ ನಿವಾರಣೆ ಮಾಡಿಕೊಡುವ ಕೆಲಸವನ್ನು ನಮ್ಮ ಜನಪದ ವೈದ್ಯರು ನಡೆಸುತ್ತಿದ್ದರು.

ಹೀಗೆ ಮೇಲಿನ ಜನಪದ ವೈದ್ಯಕ್ಕೆ ಸಂಬಂಧಿಸಿದಂತೆ ಜನಪದರು ತಮ್ಮ ಕಾಯಿಲೆಗಳಿಗೆ ಸಸ್ಯ ವೈದ್ಯ, ಮತ್ತು ಪ್ರಾಣಿ ವೈದ್ಯಗಳು ತುಂಬ ನಿಕಟವಾದ ಸಂಬಂಧವನ್ನು ಕಲ್ಪಿಸಿಕೊಟ್ಟಿದೆ. ಹಾಗೂ ಜನಪದ ವೈದ್ಯ ಪದ್ಧತಿಗೆ ಸಂಬಂಧಿಸಿದಂತೆ ಯಾವ ಯಾವ ಕಾಯಿಲೆಗೆ ಯಾವ ಗಿಡಮೂಲಿಕೆಗಳಿಂದ ಔಷಧಿ ಮತ್ತು ಜನಪದ ವೈದ್ಯ ವಿಧಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿಕೊಡಲಾಗುತ್ತದೆ.

ಜನಪದ ವೈದ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ. ಜನಪದ ವೈದ್ಯವನ್ನು ಮಾನವ ವೈದ್ಯೆ, ಪಶುವೈದ್ಯೆ ಮತ್ತು ಸಸ್ಯವೈದ್ಯೆ ಎಂದು ವಿಭಾಗಿಸಬಹುದು. ಮಾನವನ ವೈದ್ಯೆದಲ್ಲಿ ಹೆಂಗಸರ, ಗಂಡಸರ, ಮಕ್ಕಳ, ವೈದ್ಯೆ ಪದ್ಧತಿಗಳು ಪ್ರಮುಖವಾದವು. ಮಾನವ ವೈದ್ಯೆ ಎಲ್ಲರಲ್ಲಿಯೂ ಒಂದೇ ರೀತಿಯಾಗಿ ಕಾಣಿಸಿಕೊಂಡರೂ, ವೈದ್ಯೆ ವಿಧಾನ, ಬಳಕೆ, ಪ್ರಮಾಣಗಳಲ್ಲಿ ವ್ಯತ್ಯಾಸವಿರುತ್ತದೆ. ಭಾರತ ದೇಶ ಪ್ರಾಣಿಪಕ್ಷಿಗಳ ಆಗರ. ಆದ್ದರಿಂದ ಪ್ರಾಣಿಪಕ್ಷಿಗಳ ಯೋಗಕ್ಷೇಮ ವಿಚಾರವೇ ಪಶುವೈದ್ಯೆವಾಗಿದೆ. ಹಸು, ಎತ್ತು, ಎಮ್ಮೆ, ಕೋಣ, ಆಡು, ಕುರಿ, ಮರಿಗಳಿಗೆ ವಿವಿಧ ಸಂದರ್ಭಗಳಲ್ಲಿ ತಗಲುವ ಕಾಯಿಲೆಗಳಿಗೆ ತಮ್ಮ ಪರಿಸರದಲ್ಲಿ ದೊರಕುವ ವಸ್ತುಗಳಿಂದ ಮಾಡಿದ ಔಷಧಿಗಳನ್ನು ರೋಗ ನಿವಾರಣೆಯಾಗುವ ಭರವಸೆಯಾದ ಮೇಲೆ ಕೊಡುವುದು ಹೆಚ್ಚು ಬಳಕೆಯಲ್ಲಿದೆ. ಜನಪದರು ತಮಗೆ ಮತ್ತು ತಮ್ಮ ಪ್ರಾಣಿಪಕ್ಷಿಗಳಿಗೆ ತಗುಲಿದ ರೋಗ ನಿವಾರಣೆ ಮಾಡಿಕೊಳ್ಳುವುದಲ್ಲದೆ ತಮ್ಮ ಸುತ್ತಲೂ ಬೆಳೆದಿದ್ದ ಮರ, ಗಿಡ, ಹೂವು, ಕಾಯಿ, ಪೈರು, ಪಚ್ಚೆಗಳಿಗೆ ತಗಲಿದ ರೋಗಗಳಿಗೂ ತಮ್ಮ ಜ್ಞಾನದಿಂದ ತಯಾರಿಸುವ ಔಷಧಿಗಳನ್ನು ಬಳಸಿ ಗುಣಪಡಿಸುತ್ತಾರೆ.

ಜಾನಪದ ಉಳಿದು ಬಂದಂತೆ 'ಜನಪದ ವೈದ್ಯ' ಪದ್ಧತಿಯು ಉಳಿದು ಬೆಳೆದು ಬಂದಿತು. ಜನಪದರಿಗೆ 'ಆಹಾರದಷ್ಟೇ ಆರೋಗ್ಯ'ವೂ ಮುಖ್ಯ. ತಿಳಿದವನೊಬ್ಬ ತನಗೆ ತಾನೇ ಗಿಡ ಮೂಲಿಕೆಗಳಿಂದ ಔಷಧಿ ತಯಾರಿಸುವುದನ್ನು ಕಂಡುಕೊಳ್ಳುತ್ತಾ ವೈದ್ಯೋಪಚಾರವನ್ನು ಮಾಡಿಕೊಳ್ಳುತ್ತಾ ಬಂದಿರುವುದನ್ನು ಗಮನಿಸಬಹುದು. ಇದರಿಂದ ಜನಪದ ವೈದ್ಯ ಪದ್ಧತಿ ಬೆಳೆಯಿತು. ಇಂದು ಇಂಗ್ಲೀಷ್ ವೈದ್ಯ ಪದ್ಧತಿ ಗ್ರಾಮಗಳಲ್ಲಿ ತಲೆದೋರಿದ್ದರೂ, ಜನಪದ ವೈದ್ಯೋಪಚಾರಗಳು ನಿಂತಿಲ್ಲ. ಇದರಿಂದ ಜನಪದ ವೈದ್ಯವನ್ನು ಜಗತ್ತಿನ ಎಲ್ಲಾ ವೈದ್ಯಗಳಿಗಿಂತಲೂ ಹಿಂದಿನದೆಂದು ಗುರುತಿಸಬಹುದು. ಆದ್ದರಿಂದ ಜನ, 'ಜನಪದ ವೈದ್ಯನಿನ್ನತ್ತಲೂ ಒಲವು ಇರಿಸಿಕೊಂಡಿರುವುದನ್ನು ಕಾಣಬಹುದು. ಇದಕ್ಕೆಲ್ಲ ಕಾರಣ ನಮ್ಮ ಜನಪದರ ಮನೆಗಳಲ್ಲಿರುವ ಹಿರಿಯಾ ಅಜ್ಜಿ, ಅಜ್ಜಿಯರು ಜನಪದ ವೈದ್ಯಕ್ಕೆ ಮೂಲವಾಗಿದ್ದಾರೆ. ಇವರು ಇಲ್ಲದಿದ್ದರೆ ಜನಪದ ವೈದ್ಯವು ಹುಟ್ಟಲು ಸಾಧ್ಯವಾಗುತ್ತಿರಲಿಲ್ಲ.

ಜನಪದ ವೈದ್ಯವನ್ನು ನಾಟಿಔಷಧಿ, ನಾಡಔಷಧಿ, ಕೈಔಷಧಿ, ಹಸಿರು ಔಷಧಿ, ಹಿತ್ತಲ ಮದ್ದು, ಮನೆ ಮದ್ದು ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಜನಪದರು ತಾವು ತಮ್ಮ ಪ್ರದೇಶಕ್ಕೆ ತಕ್ಕಂತೆ ತಮ್ಮ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ಚಳಿಜ್ವರ, ತಲೆನೋವು, ಒಳಜ್ವರ, ಗಂಟಲುನೋವು, ಸಿಡಿಬು, ಅಮ್ಮ, ಗಂಟಲುಹುಣ್ಣು, ಗಾಯ, ತೇಗು, ಬೇವರಸಲೆ, ಕೆಮ್ಮು, ದಮ್ಮು, ಕಲ್ಲೊತ್ತು, ಕಿರುನಾಲಿಗೆ, ಹುಳುಕಡ್ಡಿ, ಹೊಟ್ಟೆನೋವು, ಹಲ್ಲುನೋವು, ಹಿಮ್ಮಡಿ ಒಡೆದರೆ, ಅಜೀರ್ಣ, ಉಳುಕು, ಸುಟ್ಟುಗಾಯ ಕಾಲುಕೆಸರು, ಕಜ್ಜಿತುರಿ, ರಕ್ತಬೇಧಿ, ನೆಗಡಿ, ಮೈನವೆ ಮುಂತಾದ ಕಾಯಿಲೆಗಳು ಬಂದಾಗ ಜನಪದ ವೈದ್ಯಯು ತುಂಬಾ ಪರಿಣಾಮಕಾರಿ ಪ್ರಭಾವ ಬೀರಿ ಗುಣವಾಗಿರುವುದನ್ನು ಗಮನಿಸಬಹುದು. ಜನರಲ್ಲಿ ಪದೇ ಪದೇ ಬಂದು ಕಾಡುವ ಕಾಯಿಲೆಗಳಿಗೆ ಕೈಔಷಧಿ ಕೊಡಿಸುವುದು ಒಳ್ಳೆಯದೆಂಬ ಭಾವನೆ ಬೆಳೆಯಿತು.

ಜನಪದ ವೈದ್ಯೆದಲ್ಲಿ ದೊರೆಯುವ ಬಳಕೆಯಾಗುವ ವಸ್ತುಗಳ ಬಹಳ ಸುಲಭವಾಗಿ ನಾವು ವಾಸಿಸುವ ಪರಿಸರದ ಸುತ್ತಮುತ್ತಲೂ ದೊರೆಯುವಂತದ್ದು. ಅವುಗಳಲ್ಲಿ ಕೆಲವು ದಿನಬಳಕೆಯ ವಸ್ತುಗಳೆಂದರೆ ಮತ್ತೆ ಕೆಲವು ದಿನಬಳಕೆಯ ವಸ್ತುಗಳಲ್ಲಿ. ಆದರೂ ಅವು ನಮ್ಮ ಕಣ್ಮುಂದೆ, ಕೈಕಾಲ್‌ಗೆ ಸಿಗುವ ಹಾಗೆ ತೀರ ಸಮೀಪದಲ್ಲಿರುತ್ತವೆ. ಜೇನುತುಪ್ಪ, ನಿಂಬೆಹಣ್ಣು, ನೆಲ್ಲಿಕಾಯಿ, ಬಗೆಬಗೆಯ ಸೊಪ್ಪುಗಳು, ಬಗೆಬಗೆಯಾದ ಗಿಡದ ಎಲೆ, ಹೂವು, ಕಾಯಿ, ನಾರು, ಬೇರುಗಳು, ಕೋಳಿಮೊಟ್ಟೆ, ತಾಮ್ರದ ತಗಡು, ಉಪ್ಪು, ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಮೆಣಸು, ಜೀರಿಗೆ, ಬಾಳೆಹಣ್ಣು, ನೇರಳೆ, ಲೋಳೆಸರ, ಅರಿಶಿನದ ಕೊನೆ, ಏಲಕ್ಕಿ, ಶುಂಠಿ, ವೀಳ್ಯೆದೆಲೆ, ಹೊಗೆಸೊಪ್ಪು, ಹಾಲು, ಮಜ್ಜಿಗೆ, ಮೊಸರು, ಎಕ್ಕದಹಾಲು, ಕಳ್ಳಿಹಾಲು, ಪಾಪಸ್‌ಕಳ್ಳಿ, ಗಂಜಲ, ಸೆಗಣಿ ವಿವಿಧ ಬಗೆಯ ಧಾನ್ಯ, ತರಕಾರಿಗಳು, ಪ್ರಾಣಿಪಕ್ಷಿಗಳ ವಸ್ತುಗಳು, ಮಾವು, ಬೇವು ಅರಳಿ, ಹೊಂಗೆತೆಂಗು, ಈಚಲು, ಆಲ, ಬೇಲ, ಬನ್ನಿ, ಶ್ರೀಗಂಧ, ಹುಣಸೆ ಮುಂತಾದವು. ಜೊತೆಗೆ ಕೆಲವು ಸಸ್ಯಗಿಡಗಳ ಸೊಪ್ಪುಗಳು ಎಂದರೆ ಬಗರೆಯೊಂಟೆಸೊಪ್ಪು, ಕತಗಿಮ್ಮಿ ಸೊಪ್ಪು, ಅವರೆಕೆಸೊಪ್ಪು, ಬೆಲ್ಲದ ಗಣಕೆಸೊಪ್ಪು, ಅತ್ತಿಸೊಪ್ಪು, ನುಗ್ಗೆ ಸೊಪ್ಪು, ಗೊನೆಗೊನೆ ಸೊಪ್ಪು ಮುಂತಾದ ಗಿಡಸಸ್ಯಗಳ ಸೊಪ್ಪುಗಳು ಜನಪದ ವೈದ್ಯದಲ್ಲಿ ಬಳಕೆಯಾಗುತ್ತದೆ. ಜನಪದ ವೈದ್ಯೆವು ಸದಾ ಹರಿಯುವ ನೀರಿನ ಹಾಗೆ ಅದು ಜನಪದರ ಜೀವಂತದ ನೆಲೆಯಾಗಿದೆ. ಹೀಗೆ ಒಂದಲ್ಲ ಒಂದು ವಿಧಾನದಲ್ಲಿ ಸಸ್ಯ, ಪ್ರಾಣಿ ಮತ್ತು ವಸ್ತುಗಳು ಮಾನವನ ಬದುಕಿನ ಉದ್ದಕ್ಕೆ ಇವು ಉಪಯೋಗಕ್ಕೆ ಬರುವಂತವಾಗಿವೆ. ಜನಪದರು ತಾವು ಬದುಕುವ ಪರಿಸರದ ಸುತ್ತಮುತ್ತಲೂ ಇರುವಂತ ಸಸ್ಯಗಳೂ ಹೆಚ್ಚಿನ ಮಹತ್ವವನ್ನು ಜನಪದ ವೈದ್ಯದಲ್ಲಿ ಪಡೆದುಕೊಂಡಿವೆ. ಕೆಲವೊಂದು ಜನಪದ ವೈದ್ಯೆ ವಿಧಗಳನ್ನು ಗಮನಿಸಬಹುದು.

1. ಮನೋವೈದ್ಯೆದ ಗುಂಪಿನಲ್ಲಿ – ಉದಾಹರಣೆಗೆ, ಕಣ್ಣು ತಾಕುವುದು, ಮಕ್ಕಳು ಚೆಂಡಿ ಹಿಡಿಯುವುದು, ಊಟ ತಿಂಡಿಯನ್ನು ಇದ್ದಕ್ಕಿದ್ದಂತೆಯೇ ಕಡಿಮೆ ಮಾಡುವುದು, ಹೆದರಿ ಮೂತ್ರ ಮಾಡಿಕೊಳ್ಳುವುದು, ಮುಂತಾದವು ಬರುತ್ತವೆ. ಕಣ್ಣು ತಾಕಿದವರಿಗೆ ಅವರ ಮುಖದಿಂದ ಪೈಸೆಯನ್ನು 'ಇಳಿ' ತೆಗೆದು ಭಿಕ್ಷದವರಿಗೆ ಕೊಟ್ಟರೆ ಮೊದಲಿನಂತ ಗುತ್ತರೆಂಬ ನಂಬಿಕೆ ಇದೆ. ಚೆಂಡಿ ಹಿಡಿದಿರುವುದೆಂದರೆ ಮಕ್ಕಳು ವಿಪರೀತವಾಗಿ ಅಳುವುದು. ಆಗ ಉರಿಯುತ್ತಿರುವ ಹಂಚಿಕಡ್ಡಿಯಿಂದ

ಇಳಿ ತೆಗೆದರೆ ತಟ್ಟನೆ ಆಳಿದ ನಿಲ್ಲಿ ಸುವುದುಂಟು. ಇಲ್ಲಿ ಗಾಬರಿ ಅಥವಾ ಬೆಂಕಿಯ ಬೆಳಕು ಮಕ್ಕಳ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಿ ಅಳುವನ್ನು ನಿಲ್ಲಿಸಬಹುದು. ಆದರೆ ಪರಿಣಾಮ ಒಳ್ಳೆಯದಾಗಿರುತ್ತದೆ.

ವ್ಯಕ್ತಿಯ ಮುಖದಿಂದ ಇಳಿ ತೊಡೆದು ನಾಯಿಗೆ ಹಾಕಿದರೆ ಅಂದಿನಿಂದ ಆ ವ್ಯಕ್ತಿಗೆ ಆಹಾರದ ಮೇಲೆ ಉಂಟಾಗಿದ್ದು ಬೇಸರ ನೀಗುತ್ತದೆ. ಮತ್ತೆ ಮೊದಲಿನಂತೆ ಆಹಾರದ ಮೇಲೆ ಆಸಕ್ತಿ ಉಂಟಾಗುತ್ತದೆ. ಒಳಕಲ್ಲಿನ ಅನ್ನವನ್ನು ಸೇವಿಸಿದರೆ ಮಕ್ಕಳು ಮೂತ್ರ ಮಾಡಿಕೊಳ್ಳುವುದು ನಿಲ್ಲುತ್ತದೆ. ಇಲ್ಲಿ ನಂಬಿಕೆ ಮನಸ್ಸಿನ ಮೇಲೆ ಪರಿಣಾಮವನ್ನು ಬೀರಿ ಆ ಮೂಲಕ ತೊಂದರೆಗೆ ಒಳಗಾಗಿರುವ ವ್ಯಕ್ತಿಗೆ ಆತ್ಮವಿಶ್ವಾಸ ಮಾಡಿ ಮೊದಲಿನಂತಾಗುವಂತೆ ಮಾಡುತ್ತದೆ.

ಮಕ್ಕಳ ವೈದ್ಯೆ ಬಹಳ ಸೂಕ್ಷ್ಮವಾದುದು: ಇಲ್ಲಿ ರೋಗವನ್ನು ಗಮನಿಸಿ ಸೂಕ್ತವಾದ ಔಷಧಿಯನ್ನು ಸೂಕ್ತವಾದ ಪ್ರಮಾಣದಲ್ಲಿ ಕೊಡಬೇಕಾಗುತ್ತದೆ. ಮಕ್ಕಳಲ್ಲಿ ಸಾಮಾನ್ಯವಾಗಿ ನೆಗಡಿ, ಕೆಮ್ಮು, ಶೀತ, ಜ್ವರ, ಭೇದಿ ಮುಂತಾದವು ಕಂಡುಬರುವುದು ಹೆಚ್ಚು ಶೀತದಿಂದ ನೆಗಡಿಯಾದರೆ ವೀಳ್ಯೆಯಾದೆಲೆ ರಸ, ಕೊಂಟೆಗೆ ಸೊಪ್ಪಿನರಸ, ತುಳುಸಿ ಸೊಪ್ಪಿನ ರಸ, ನಾಗದಾಳಿ ಸೊಪ್ಪನ ರಸಗಳನ್ನು ಸಮ ಪ್ರಮಾಣದಲ್ಲಿ ಬೆರಸಿ ಒಂದೊಂದು ಒಳಲೆಯನ್ನು ಮಕ್ಕಳಿಗೆ ಎರಡು ವೇಳೆ ಕೊಡಿಸಿದರೆ ಶೀತ, ನೆಗಡಿ, ತಟ್ಟಸಿ ಗುಣವಾಗುತ್ತದೆ. ಉಷ್ಣದಿಂದ ಕೆಮ್ಮು ಬಂದರೆ ಕಾಯಿಸಿದ ಹಾಲಿಗೆ ಸ್ವಲ್ಪ ಅಡಿಗೆ ಅರಿಶಿನದ ಪುಡಿ ಮತ್ತು ತುಪ್ಪವನ್ನು ಸೇರಿಸಿ ಒಂದೆರಡು ದಿವಸ ಕುಡಿಸಿದರೆ ಕೆಮ್ಮು ನಿಂತುಹೋಗುತ್ತದೆ. ಶೀತದಿಂದ ಕೆಮ್ಮು ಬಂದರೆ ತುಳಸಿ ಸೊಪ್ಪನ್ನು ದಿವಸಕ್ಕೆ ಎರಡು ಬಾರಿಯಂತೆ ಎರಡು ದಿವಸ ತಿಂದರೆ ಎದೆಯಲ್ಲಿ ಕಟ್ಟಿರುವ ಕಫೆ ಕರಗಿ ಕೆಮ್ಮು ಗುಣವಾಗುತ್ತದೆ.

ಮಗುವಿಗೆ ರಕ್ತಭೇದಿಯಾಗುತ್ತಿದ್ದಾರೆ ಒಣ ಖರ್ಜೂರದ ಹಣ್ಣನ್ನು ಕೆಂಡದ ಮೇಲಟ್ಟು ಸ್ವಲ್ಪ ಸುಟ್ಟು ಅದಕ್ಕೆ ಕಲ್ಲು ಸಕ್ಕರೆ ಸೇರಿಸಿ ತಿನ್ನಿಸಿ, ರಸಬಾಳೆ ಮತ್ತು ಮೊಸರನ್ನವನ್ನು ಕೊಡಲಾಗುತ್ತದೆ. ಬೇಸಿಗೆ ಕಾಲದಲ್ಲಿ ಸಾಮಾನ್ಯವಾಗಿ ಮಕ್ಕಳಿಗೆ ದಡಾರ, ಸೀತಾಳ ಸಿಡುಬು ಬರುವುದುಂಟು. ಆದರೆ ಮುನ್ನೆಚ್ಚರಿಕೆ ಕ್ರಮವಾಗಿ ಒಳ್ಳೆಯ ರುದ್ರಾಕ್ಷಿಯನ್ನು ಶುದ್ಧವಾದ ಹಾಲಿನಲ್ಲಿ ತೇಯ್ದು ಒಂದು ಚಮಚೆಯನ್ನು ಬೆಳಿಗ್ಗೆ ಎದ್ದ ತಕ್ಷಣ ಕುಡಿಸಿದರೆ ದಡಾರ, ಸೀತಾಳ ಸಿಡುಬು ಬರುವುದಿಲ್ಲ. ಆಕಸ್ಮಿಕ ಬಂದರೂ ಅದರ ತೀವ್ರತೆ ಬಹಳ ಮಟ್ಟಿಗೆ ಕಡಿಮೆ ಪ್ರಮಾಣದಲ್ಲಿರುತ್ತದೆ.

ಬಸುರಿಬಾಣಂತಿಯರ ಕಾಯಿಲೆಗಳು – ಬಸುರಿಯಲ್ಲಿ ಕೆಲವರಿಗೆ ವಾಂತಿಯಾಗುತ್ತದೆ. ಆಹಾರ ಸೇರುವುದಿಲ್ಲ. ಸಹಜವಾಗಿ ಸುಸ್ತು ಸಂಕಟ ಪ್ರಾರಂಭವಾಗುತ್ತದೆ. ಆಹಾರ ಪದಾರ್ಥಗಳನ್ನು ಕೊಡಬೇಕು. ಎಳೆನೀರು, ಮಜ್ಜಿಗೆ ಮುಂತಾದವು ಗರ್ಭಿಣಿಯಾರಿಗೆ ಪರಂಗಿಹಣ್ಣು, ಬಿದಿರು ಕಡ್ಲೆಯಿಂದ ಮಾಡಿದ ಪಲ್ಯ ಅಥವಾ ಸಾರು ಕೊಡಬಾರದು. ಆಕಸ್ಮಿಕವಾಗಿ ತಿಂದರೆ ಗರ್ಭಪಾತವಾಗುತ್ತದೆ. ಕೆಲವು ಗರ್ಭಿಣಿಯರಿಗೆ **'ಕಂಬಾರ'** ಆಗುವುದುಂಟು. ಇದು ಹೆಣ್ಣು ಮನೆತನದಿಂದ ಅಥವಾ ಗಂಡನ ಮನೆತನದಿಂದ ಬರುವಂತ ವಂಶ ಪರಂಪರೆಯ ಕಾಯಿಲೆಯಾಗಿದೆ. (ಕಂಬಾರ ಎಂದರೆ ಹುಟ್ಟಿದ ಮಗುವಿನ ಮೈಬಣ್ಣ ಕಡುಕೆಂಪು ಇಲ್ಲವೇ ನೀಲಿ ಮಿಶ್ರಿತಬಣ್ಣವಾಗಿದ್ದು ಹುಟ್ಟಿದ ಒಂದೆರಡು ದಿನದಲ್ಲಿ ಸಾಯುತ್ತದೆ). ಇದು ತಾಯಿ ಗರ್ಭದಿಂದ ಬರುವಂತದ್ದು.

**ಔಷಧಿ:** ಬೂರಗದ ಮರದ ತೊಗಟೆರಸ, ನಾಯಿ ಬೇಲದ ತೊಗಟೆರಸ ಮತ್ತು ಆಲದ ಮರದ ತೊಗಟೆ ರಸವನ್ನು ಮಿಶ್ರಮಾಡಿ ಒಂದು ಲೋಟವನ್ನು ಕುಡಿಯುವ ಗರ್ಭಿಣಿಗೆ ಕೊಡಲಾಗುತ್ತದೆ. ಅದರ ಹಿಂದಿನ ದಿವಸ ತಲೆಗೆ ಸ್ನಾನ ಮಾಡಿಸಬೇಕು. ಔಷದಿಯನ್ನು ಖಾಲಿ ಹೊಟ್ಟೆಗೆ ತೆಗೆದುಕೊಂಡು ಅದಿವಸ ಮಧ್ಯಾಹ್ನ ಮತ್ತು ರಾತ್ರಿ ಹಾಲು ಅನ್ನು ಮಾತ್ರ ಊಟ ಮಾಡಬೇಕು. ಪುನಃ ಬೆಳಿಗ್ಗೆ ಅವರೆಕಾಳು, ಬದನೆಕಾಯಿ, ಕುಂಬಳಕಾಯಿ ಮುಂತಾದ ಕಾಯಿಪಲ್ಯೆಗಳಿಂದ ಮಾಡಿದ ಅಡುಗೆಯನ್ನು ಊಟ ಮಾಡಬೇಕು. ಕೆಲವು ಗರ್ಭಿಣಿಯರಿಗೆ ಒಣ ಕೆಮ್ಮು ಬಂದು ಬಹಳ ತೊಂದರೆ ಕೊಡುತ್ತದೆ. ಅಂಥವರಿಗೆ ಮೇಲ್ಕಂಡ ಔಷಧಿ ಮತ್ತು ಆಗಾಗ ಬೆಲ್ಲುಣಿ ಸೊಪ್ಪಿನ ಪಲ್ಯವನ್ನು ಕೊಟ್ಟರೆ ಗುಣವಾಗುತ್ತದೆ ಎನ್ನಲಾಗುತ್ತದೆ. ಗರ್ಭಿಣಿ ಪ್ರತಿದಿನ ಕೇಸರಿಯನ್ನು ಹಾಲಿನ ಜೊತೆಗೆ ಮಲಗುವ ಮುಂಚೆ ಕೂಡಿದರೆ ಕಂಬಾರ ಬರುವುದಿಲ್ಲ ಮತ್ತು ಮಕ್ಕಳು ಸುಂದರವಾಗಿ ಜನಿಸುತ್ತವೆ.

**ಸಾಮಾನ್ಯ ವೈದ್ಯದಲ್ಲಿ** – ಉಷ್ಣದಿಂದ ಬಾಯಲ್ಲಿ ಹುಣ್ಣಾಗಿ ಊಟ, ತಿಂಡಿ, ತಿನ್ನಲು ಬಹಳ ಕಷ್ಟ ಮತ್ತು ಉರಿಯುತ್ತಿರುತ್ತದೆ. ಆಗ ಕಡ್ಲೆ ಬೇಳೆ ಇಲ್ಲವೇ ಕೊಬ್ಬರಿಯನ್ನು ಸದಾ ಬಾಂಗಲ್ಲಿಟ್ಟುಕೊಂಡು ಅದರ ರಸವನ್ನು ಕುಡಿಯುವುದು. ಎಣ್ಣೆ ನೀರು ಹಾಕಿಕೊಳ್ಳುವುದು, ರಸಬಾಳೆ ಮತ್ತು ಮೊಸರನ್ನ ಊಟ ಮಾಡಿದರೆ ಎರಡು ದಿವಸದಲ್ಲಿ ವಾಸಿಯಾಗುತ್ತದೆ. ತಲೆನೋವು ವಿಪರೀತವಾಗಿ ಕಣ್ಣು ಬಿಡಲು ಕಷ್ಟವಾದರೆ ತುಳಸಿ ಸೊಪ್ಪಿನೊಂದಿಗೆ ಏಲಕ್ಕಿಯನ್ನು ಸೇರಿಸಿ ಚೆನ್ನಾಗಿ ಅರೆದು ಹಣೆಗೆ ಲೇಪನ ಮಾಡಿದರೆ ಕೂಡಲೆ ಶಮನವಾಗುತ್ತದೆ. ಅರದಲೆ ನೋವು ಬಂದರೆ ಸಪ್ಪೆತುಪ್ಪವನ್ನು ಚೆನ್ನಾಗಿ ಸಿತ್ತಿ ಮತ್ತು ಹಣೆಯ ಭಾಗದಲ್ಲಿ ಹಚ್ಚಿದರೆ ಕಡಿಮೆಯಾಗುತ್ತದೆ. ಮಕ್ಕಳು ಮತ್ತು ಪ್ರಾಯದವರಲ್ಲಿ ಇದ್ದಕ್ಕಿದ್ದಂತೆಯೇ ರಕ್ತ ಮೂಗಿನಿಂದ ಬರುತ್ತದೆ ಇದಕ್ಕೆ ಮೂಗಿನ ಸೆಲೆ ಒಡೆಯುವುದೆಂದು ಕರೆಯುತ್ತಾರೆ. ಅವಾಗ ಅವರನ್ನು ಅಂಗಾತ ಮಲಗಿಸಿ ನಂತರ ನೆತ್ತಿಗೆ ತಣ್ಣಿರು ತಟ್ಟಿ ಅನಂತರ ಶ್ರೀಗಂಧವನ್ನು ಲೇಪಿಸಿದರೆ ಗುಣವಾಗುತ್ತದೆ. ಮೈಮೇಲೆ ಪಿತ್ತದನಂದೆ ಬಂದರೆ ದೊಡ್ಡ ಸೊಪ್ಪು (ದೊಡ್ಡಾಪತ್ರ) ಎಲೆ ತಂದು ಅದರಿಂದ ರಸವನ್ನು ತೆಗೆದು ಮೈಮೇಲೆ ಲೇಪಿಸಿ ನೆಲಹುಲ್ಲಿನ ಬೆಂಕಿ ಕಾಯಿಸಿದರೆ ಕೂಡಲೇ ಗಂಧ ಮಯಾವಾಗುತ್ತದೆ. ಗಂಟಲು ನೋವು ಬಂದರೆ ಕಡಿಮೆಯಾಗುತ್ತದೆ. ಇಲ್ಲಿವೇ ತುಂಬೆ ಸೊಪ್ಪು, ಬೆಲ್ಲ ಮತ್ತು ಸ್ವಲ್ಪ ಸುಣ್ಣವನ್ನು ಅರೆದು ಅದನ್ನು ಎರಡು ಕಡೆಗೆ ಹಚ್ಚಿದರೆ ತಕ್ಷಣ ನೋವು ಕಡಿಮೆಯಾಗುತ್ತದೆ.

ಬಿದ್ದು ಎಡವಿ ಅಥವಾ ಆಯುಧಗಳಿಂದ ಸಣ್ಣಪುಟ್ಟ ಗಾಯವಾಗಿ ರಕ್ತ ಸುರಿಯುತ್ತಿದ್ದಾರೆ. ನಡು ಮುರಕನಗಿಡ ಸೊಪ್ಪನ್ನು ಹಿಂಡಿ ಅದರ ರಸವನ್ನು ಗಾಯದ ಮೇಲೆ ಹಾಕಿ ಉಳಿದ ಸೊಪ್ಪನ್ನು ಗಾಯದ ಮೇಲಿಟ್ಟು ಬಟ್ಟೆಯನ್ನು ಕಟ್ಟಿದರೆ ಕೊಡಲೆ ರಕ್ತ ಸುರಿಯುವುದು ನಿಲ್ಲುತ್ತದೆ. ಬೇಗ ವಾಸಿಯಾಗುತ್ತದೆ.

ನಮ್ಮ ಜನಪದರಲ್ಲಿ ಬಳಕೆಯಲ್ಲಿರುವ ಕೆಲವು ಔಷಧಿಗಳನ್ನು ನೋಡಬಹುದು.

**ಕಣ್ಣುನೋವು:** ಮೂರುದಿವಸ ಯಾರಿಗೂ ಕಾಣದಂತೆ ಒಂದಿಡಿ ಹುಣಸೆ ಸೊಪ್ಪು ತಂದು, ತೊಗರಿ ಕಾಳು ಗಾತ್ರದ ಪಟಿಕವನ್ನು ಬೆಂಕಿಯರ ಮೇಲಿಟ್ಟು ಹವಲು ಮಾಡಿ, ಆ ಸೊಪ್ಪಿನಲ್ಲಿ ಹಾಕಿ, ಕುಟ್ಟಿ ಅದನ್ನು ಒಂದು ಬಟ್ಟೆಯಲ್ಲಿ ಹಾಕಿ ಎರಡು ಕಣ್ಣುಗಳಿಗೂ ನಾಲ್ಕು ತೊಟದ ರಸ ಹಿಂಡಿದರೆ ಒಂದೇ ದಿನದಲ್ಲಿ ಗುಣವಾಗುತ್ತದೆ.

**ಕಣ್ಣಿಗೆ ಕಸಬಿದ್ದರೆ**

1. ಕಣ್ಣಿಗೆ ಕಸ ಬಿದ್ದರೆ ಹರಳೆಣ್ಣೆಯನ್ನು ಹೆಚ್ಚಿಕೊಂಡು ಅಂಗಲಾಚಿ ಮಲಗಿದರೆ ಕಣ್ಣಿನಲ್ಲಿ ಸೇರಿರುವ ರಸ ಹೊರಬರುತ್ತದೆ.
2. ತೆಳ್ಳನೆಯೂ ಬಿಳಿ ಬಟ್ಟೆಯನ್ನು ತೆಗೆದುಕೊಂಡು ಬಾಯಿಯಿಂದ ಬಿಸಿಗಾಳಿಯಲ್ಲಿ ಊದಿ ಕಣ್ಣಿಗೆ ಒತ್ತಿದರೆ ಕಸ ಹೊರಬರುತ್ತದೆ.
3. ಕಣ್ಣಿಗೆ ಕಳ್ಳಿ ಹಾಲು ಬಿದ್ದರೆ – ನಾಮವನ್ನು ಎರಡು ಮೂರು ತೊಟ್ಟು ಹಾಕಿ ಒಗರೆಯಲ್ಲಿ (ಸಣ್ಣ ಹಂಚಿನಲ್ಲಿ) ತೈದು ಹಚ್ಚಿದರೆ ಉರಿ ನಿಂತು ತಣ್ಣಗಾಗಿ.

**ಉಗುರು ಸುತ್ತು :** ಇದು ಆದಾಗ ಬೆರಳಿಗೆ ನಿಂಬೆಹಣ್ಣನ್ನು ತುತುಮಾಡಿ ದಿನಕ್ಕೆ ಒಂದರಂತೆ ಎರಡು ಮೂರು ದಿನ ಹಾಕಿದರೆ ಅದು ಕಿವಿ ಒಡೆದು ಮಮೂಲಿ ಅಂತಾಗುತ್ತದೆ.

**ಹುಳುಕಡ್ಡಿ :** ಬಂದಿರುವ ಜಾಗಕ್ಕೆ ಬೆಳ್ಳುಳ್ಳಿಯನ್ನು ಅರೆದು ಹಚ್ಚಿದರೆ ಅದು ಬೇಗ ವಾಸಿಯಾಗುತ್ತದೆ. ಇನ್ನು ಮುಂತಾದ ಕಾಯಿಲೆಗಳಿಗೆ ಔಷಧಿಗಳನ್ನು ನಮ್ಮ ಜನಪದ ವೈದ್ಯ ಮಾಡಿಕೊಂಡು ಜನರ ಜೀವಕ್ಕೆ ಬದುಕಿಗೆ ನೆರಳಾಗಿದೆ.

**ಪಶುವೈದ್ಯೆ :** ನಮ್ಮ ಜನಪದದಲ್ಲಿ ಪಶುಗಳಿಗೆ ಮಹತ್ವದ ಸ್ಥಾನವಿದೆ. ಅದರೆ ಪ್ರತಿಯೊಂದು ಅಂಗದಲ್ಲಿಯೂ ಪ್ರತಿರೂಪದಲ್ಲಿಯೂ ದೇವತೆಗಳು ಅಡಗಿವೆ ಎಂದು ಭಾರತೀಯರ ಸಂಚಿಕೆಯೇ ಇದಕ್ಕೆ ಕಾರಣ. ಇಂಥ ಪಶುಗಳಿಗೂ ಸಲೆ, ಕುಮದು, ಹರಪರೆ, ದೊಡ್ಡರೋಗ, ಚಪ್ಪೆರೋಗ, ಅಳ್ಳೆರೋಗ ಬರುತ್ತವೆ. ಅಲ್ಲದೆ ಕೆಲವು ವೇಳೆ ಅಡುಕುರಿಗನ ಮೇಯುವ ಕಥೆ ಪಕ್ಕದ ಹೊಲಗಳಲ್ಲಿ ಎಳೆಯ ಜೋಳ ತಿಂದು ಸೊಕ್ಕುವುದುಂಟು. ಇಂಥ ಅನೇಕ ರೋಗಗಳಿಗೆ ನಮ್ಮ ಜನಪದರು ಪರಿಣಿತರಿದ್ದು ಆಸ್ಪತ್ರೆಯ ವೈದ್ಯರಿಗಿಂತ ಸೊಗಸಾಗಿ ಚಿಕಿತ್ಸೆ ನಡೆಸಿ ತಮ್ಮ ಸಾಕು ಪ್ರಾಣಿಗಳನ್ನು ರಕ್ಷಿಸಿಕೊಳ್ಳುವುದರಲ್ಲಿ ಬುದ್ದಿವಂತರಾಗಿದ್ದಾರೆ.

**ಉದಾಹರಣೆಗೆ :** ದನಕರುಗಳಿಗೆ ಸಲೆಯಾದರೆ ಈ ರೀತಿ ಮಾಡುವರು.

**ಕಾಯಿಲೆಯ ಲಕ್ಷಣ :** ದನಕರುಗಳಿಗೆ ಸೆಲೆಯಾದರೆ ಮೂಗುಬಾಯಿ ಒಣಗುತ್ತದೆ. ಕಿವಿ ತಣ್ಣಗಾಗುವುದು. ಮೆಲುಕು ಸಹ ಹಾಕುವುದಿಲ್ಲ. ಸಗಣಿ, ಗಂಜಲ ಹಾಕುವುದಿಲ್ಲ. ಈ ಕಾಯಿಲೆ ಮೀರಿದರೆ ನೆಂಜು ಎಂದಾಗುತ್ತದೆ. ಕೊನೆಗೆ ಹೊಟ್ಟೆ ಊತ ಬಂದು ಉಸಿರುಕಟ್ಟಿ ಸಾಯುತ್ತವೆ.

**ಇದಕ್ಕೆ ಪರಿಹಾರ:** ಸಲೆಯಾಗಿದೆ ಎಂದೂ ತಿಳಿದಾಗ ಎರಡು ಕೋಳಿ ಮೊಟ್ಟೆಯನ್ನು ಉಂಡೆ ಸಮೇತ ತಿನ್ನಿಸಿದರೆ ವಾಸಿಯಾಗುತ್ತದೆ. ವಿಳ್ಳೆದೆಲೆಯನ್ನು ಮುದುರಿ ಬಾಯಿಗೆ ಹಾಕಿ ತಿನ್ನಿಸಿದರೆ ವಾಸಿಯಾಗುತ್ತದೆ.

**ಸಸ್ಯವೈದ್ಯೆ:** ಇದು ಜನಪದ ವೈದ್ಯೆದಲ್ಲಿ ಪ್ರಮುಖವಾದ ಒಂದು ಗಿಡಮೂಲಿಕೆಗಳ ಔಷಧವಾಗಿ ಬಳಕೆಯಾಗುತ್ತಿದೆ. ಇದೇ ಪದರ ಜೀವನಾಡಿಯಾಗಿ ಗುರ್ತಿಸಿಕೊಂಡಿದೆ. ಪ್ರಪಂಚದಲ್ಲಿ ಪ್ರತಿಯೊಂದು ರೋಗಕ್ಕೆ ಒಂದಲ್ಲ ಒಂದು ಗಿಡಮೂಲಿಕೆ ಇದ್ದೇ ಇರುತ್ತದೆ. ನಾವು ಅದನ್ನು ಗುರುತಿಟ್ಟುಕೊಳ್ಳುವ ಕೆಲಸವನ್ನು ಮಾಡಬೇಕು. ಲೇಖನದ ಮೊದಲ ಭಾಗದಲ್ಲಿ ಕೆಲವೊಂದು ಪ್ರಮುಖವಾದ ಸೊಪ್ಪಿನ ಗಿಡಗಳನ್ನು ಔಷಧಿಯಾಗಿ ಉಪಯೋಗಿಸುತ್ತಾರೆ ಎಂಬುದನ್ನು ಟಿಪ್ಪಣಿ ಮಾಡಲಾಗಿದೆ. ಕೆಲವೊಂದು ಸೊಪ್ಪಿನ ಜಾತಿಯ ಸಸ್ಯಗಳನ್ನು ತಿನ್ನುವುದರಿಂದ ಅದು ಮಾನವನ ಕೆಲವು ಕಾಯಿಲೆಗಳನ್ನು ವಾಸಿಮಾಡುವ ಕೆಲಸವನ್ನು ಮಾಡುತ್ತದೆ. ಹಾಗೂ ಇನ್ನೂ ಕೆಲವು ಸಸ್ಯ ಗಿಡಗಳ ಸೊಪ್ಪುಗಳು ಹುಳುಕು ಮತ್ತು ಕೈ ಕಾಲು, ನೋವು ಬಂದರೆ ಮೈಯಲ್ಲಿ ಕಡಿತ ಬಂದರೆ ಅದನ್ನು ಹಚ್ಚಿಕೊಳ್ಳುವುದರಿಂದ ಅದು ವಾಸಿಯಾಗುತ್ತವೆ.

ಹೀಗೆ ಜನಪದ ವೈದ್ಯೆದಲ್ಲಿ ಮಾನವ ವೈದ್ಯೆ, ಪಶುವೈದ್ಯೆ, ಸಸ್ಯವೈದ್ಯೆ ಅವುಗಳ ಮಹತ್ವವನ್ನು ಸಂಕ್ಷಿಪ್ತವಾಗಿ ಈ ಲೇಖನದಲ್ಲಿ ಹೇಳಲಾಗಿದೆ. ಮಾನವನು ಏನನ್ನು ಸಾಧಿಸಿಕೊಳ್ಳುವ ಛಲ ಹೊಂದಿರುವ ಬುದ್ಧಿವಂತ ಪ್ರಾಣಿ. ವೇದ ಅಧ್ಯಯನಗಳ ಕಾಲದಿಂದಲೂ ಮಾನವನು ತನ್ನ ಪರಿಸರದೊಂದಿಗೆ ಕಾಡುಮೇಡುಗಳನ್ನು ಅಲೆದು ಔಷಧಿಗಳನ್ನು ತಾನೆ ತಯಾರಿಸಿಕೊಂಡು ರೋಗವಾಸಿ ಮಾಡಿಕೊಳ್ಳುತ್ತಾ, ಅದನ್ನು ಮುಂದಿನ ಪೀಳಿಗೆಯವರೆಗೆ ಮುಂದುವರಿದು ಕೊಂಡು ಹೋಗಲು ಬಿಟ್ಟುಹೋಗಿದ್ದಾನೆ. ಇದರ ಪ್ರಯೋಜನವನ್ನು ತಿಳಿದುಕೊಂಡ ಜನಪದರು ಅದನ್ನು ಪಾಲಿಸಿಕೊಂಡು ಜನಪದ ವೈದ್ಯವಾಗಿ ಜನಪದರಿಗೆ ಬರುವಂತ ಸಣ್ಣಪುಟ್ಟ ರೋಗಗಳನ್ನು ವಾಸಿ ಮಾಡಿಕೊಂಡು ಬರುತ್ತಿದ್ದಾರೆ. ಅಂದು ಅನಾಗರೀಕನಾದ ಮಾನವನು ಇಂದು ನಾಗರೀಕ ಪ್ರಪಂಚದಲ್ಲಿ ಇದ್ದರು ಜನಪದರಲ್ಲಿ ಉಳಿದು ಬಂದಿರುವ ಜನಪದ ವೈದ್ಯೆ, ನಾಡಿವೈದ್ಯೆ, ಕೈ ಔಷಧಿಗಳ ಮೇಲೆ ತಿರಸ್ಕರದ ಮನೋಭಾವ ತೋರದೆ ಅದನ್ನೆ ಅವಲಂಬಿಸಿ ನಂಬಿಕೆಯಿಂದ ಪರಿಸರದಲ್ಲಿ ಹೊಂದಿಕೊಂಡು ರೋಗಗಳನ್ನು ವಾಸಿಮಾಡಿಕೊಳ್ಳುವ ಕೆಲಸವನ್ನು ಮಾಡುತ್ತಿದ್ದಾರೆ.

**ಗ್ರಂಥಋಣ**

1. ಜಾನಪದ ಜೀವಾಳ – ನಗುವನಹಳ್ಳಿ ಪಿ.ರತ್ನ
2. ಜಾನಪದ ಸಿರಿ – ಡಾ.ಹೊಂಗನೂರು ನಂಜಯ್ಯ
ಜನಪದ ವೈದ್ಯ – ಡಾ.ಜಿ.ಗೋವಿಂದರಾಜು

## ಆಹಾರ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ : ಈ ಕ್ಷೇತ್ರದಲ್ಲಿ ಇರುವೆಗಳಾದ ನಮ್ಮ ಅನುಭವದ ಕಥನವನ್ನು ಆಲಿಸಿ

ಡಾ. ಆರ್. ಪೂರ್ಣಿಮ
ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ ಮೈಸೂರು–570006

**ಪ್ರಬಂಧ ಸಾರ:–** ಇಪ್ಪತ್ತೆರಡು ಅಧ್ಯಾಯಗಳಿರುವ, "ನಮ್ಮ ನಾಡಿನ ಎಳೆಯರಿಗೆ ಇದು" ಎಂದು ಸಮರ್ಪಿತವಾಗಿರುವ, ಪಿ. ವಿ. ಚಂದ್ರಶೇಖರಾವ್‌ರವರ **ಇರುವೆಯ ಕಥೆ** ಹೆಚ್ಚು ಓದುಗರ ಗಮನಕ್ಕೆ ಬರದೇ ಇದ್ದರೂ, ಒಮ್ಮೆ ಓದಿದರೆ ಮತ್ತೆ ಮತ್ತೆ ಓದಲು ಆಸಕ್ತಿಯನ್ನು ಕೆರಳಿಸುವುದರೊಂದಿಗೆ, ಓದಿದ್ದನ್ನು ಗಂಭೀರವಾಗಿ ತೆಗೆದುಕೊಳ್ಳಲೇಬೇಕೆಂದು ಅನ್ನಿಸುವ ಕಿರುಕಾದಂಬರಿ. ಈ ಸಮ್ಮೇಳನದ ಆಶಯ ಮತ್ತು ಸ್ವರೂಪಕ್ಕೆ ಅನ್ವಯಿಸುವಂತೆ ಇರುವೆಗಳ ಆಹಾರ, ಆಹಾರ ಬೇಟೆ, ಅದನ್ನು ಕ್ರೋಡೀಕರಿಸುವ ರೀತಿ ನೀತಿ, ಅದನ್ನು ಕಾಪಾಡುವ ವಿಧಾನಗಳು, ಅದರ ಸರಬರಾಜು ಹಾಗೂ ಇದಕ್ಕೆ ಸಂಬಂಧಿಸಿದ ಇನ್ನಿತರ ವಿಷಯಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಮಂದಾಕ್ಷಿ, ಸಂಯುಕ್ತಾಕ್ಷಿ,

ಮಾಲಾಕ್ಷಿಯೆಂಬ ಮೂರು ಇರುವೆಗಳು ಈ ಕಥೆಯ ಪ್ರಮುಖ ನಿರೂಪಕರು. ಅವರು ಮಾಡುವ ಸಂಭಾಷಣೆ, ವಿಷಯ ವಿನಿಮಯ, ಅವುಗಳ ಪ್ರಯಾಣ – ಇವುಗಳ ಮೂಲಕ ನಮಗೆ ಭಾರತದ ಇರುವೆಗಳಷ್ಟೆ ಅಲ್ಲ, ದೂರದ ಕೊಲೆರಾಡೂ ಪ್ರದೇಶದ ಸಿಹಿ ಉಗ್ರಾಣದ ಇರುವೆಗಳ, ದಕ್ಷಿಣ ಅಮೆರಿಕಾದ ಬೇಸಾಯ ಇರುವೆಗಳ ರೀತಿ ನೀತಿ, ಆಹಾರ ಸಂಪಾದನೆಗಾಗಿ ಅವುಗಳು ಮಾಡುವ ಹೆಣಗಾಟ, ಅದನ್ನು ಸಂರಕ್ಷಿಸಿಡಲು ಪಡುವ ಶ್ರಮ–ಕ್ರಮ, ಈ ಕಿರುಕಾದಂಬರಿಯಲ್ಲಿ ಗೋಚರವಾಗುವುದು. ಇರುವೆಗಳ ವಿಭಿನ್ನ ಹಾಗೂ ಬಹು ಸಾರ್ಮರ್ಥ್ಯದಿಂದ ಮನುಷ್ಯಲೋಕ ಎಷ್ಟು ಪ್ರಯೋಜನ ಪಡೆಯುತ್ತಿದೆ ಎನ್ನುವುದನ್ನು ಈ ಕಥನ ವ್ಯಾಖ್ಯಾನಿಸುತ್ತದೆ. ಸಮ್ಮೇಳನದಲ್ಲಿ ಲೇಖನವನ್ನು ಮಂಡಿಸುವ ಸಂದರ್ಭದಲ್ಲಿ ಸುದೀರ್ಘವಾಗಿ ಇವುಗಳ ಕಥನವನ್ನು ಆಲಿಸೋಣ.

ಇಪ್ಪತ್ತೆರಡು ಅಧ್ಯಾಯಗಳಿರುವ, “ನಮ್ಮ ನಾಡಿನ ಎಳೆಯರಿಗೆ ಇದು” ಎಂದು ಸಮರ್ಪಿತವಾಗಿರುವ, ಪ. ವಿ. ಚಂದ್ರಶೇಖರ್‌ರಾವ್‌ರವರ **ಇರುವೆಯ ಕಥೆ** ಹೆಚ್ಚು ಓದುಗರ ಗಮನಕ್ಕೆ ಬರದೇ ಇದ್ದರೂ, ಒಮ್ಮೆ ಓದಿದರೆ ಮತ್ತೆ ಮತ್ತೆ ಓದಲು ಆಸಕ್ತಿಯನ್ನು ಕೆರಳಿಸುವುದರೊಂದಿಗೆ, ಓದಿದ್ದನ್ನು ಗಂಭೀರವಾಗಿ ತೆಗೆದುಕೊಳ್ಳಲೇಬೇಕೆಂದು ಅನ್ನಿಸುವ ಕಿರುಕಾದಂಬರಿ. ಲೇಖಕರು ಇಲ್ಲಿ ಬಳಸಿರುವ ಕಥನತಂತ್ರಗಳು ಹಲವಾರು, ಹಾಗೆಯೇ ಅವರ ವಸ್ತು ವಿಷಯಗಳು. ಎಂದಿನಿಂದಲೂ ನಡೆದುಬಂದಿರುವ, ಇಂದಿಗೂ ನಡೆಯುತ್ತಿರುವ ಸತ್ಯಾಂಶಗಳಿಗೆ ತುಸು ಕಲ್ಪನೆಯನ್ನೂ ಸೇರಿಸಿ ಕಟ್ಟಿ ಓದುಗರ ಮುಂದಿಡುವ ಕೃತಿ ಇದು. ಈ ಸಮ್ಮೇಳನದ ಆಶಯ ಮತ್ತು ಸ್ವರೂಪಕ್ಕೆ ಅನ್ವಯಿಸುವಂತೆ ಇರುವೆಗಳ ಆಹಾರ, ಆಹಾರ ಬೇಟೆ, ಅದನ್ನು ಕ್ರೋಡಿಕರಿಸುವ ರೀತಿ ನೀತಿ, ಅದನ್ನು ಕಾಪಾಡುವ ವಿಧಾನಗಳು, ಅದರ ಸರಬರಾಜು ಹಾಗೂ ಇದಕ್ಕೆ ಸಂಬಂಧಿಸಿದ ಇನ್ನಿತರ ವಿಷಯಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಮಂದಾಕ್ಷಿ, ಸಂಯುಕ್ತಾಕ್ಷಿ, ಮಾಲಾಕ್ಷಿಯೆಂಬ ಮೂರು ಇರುವೆಗಳು ಈ ಕಥೆಯ ಪ್ರಮುಖ ನಿರೂಪಕರು. ಅವರು ಮಾಡುವ ಸಂಭಾಷಣೆ, ವಿಷಯ ವಿನಿಮಯ, ಅವುಗಳ ಪ್ರಯಾಣ – ಇವುಗಳ ಮೂಲಕ ನಮಗೆ ಭಾರತದ ಇರುವೆಗಳಷ್ಟೆ ಅಲ್ಲ, ದೂರದ ಕೊಲೆರಾಡೂ ಪ್ರದೇಶದ ಸಿಹಿ ಉಗ್ರಾಣದ ಇರುವೆಗಳ, ದಕ್ಷಿಣ ಅಮೆರಿಕಾದ ಬೇಸಾಯ ಇರುವೆಗಳ ರೀತಿ ನೀತಿ, ಆಹಾರ ಸಂಪಾದನೆಗಾಗಿ ಅವುಗಳು ಮಾಡುವ ಹೆಣಗಾಟ, ಅದನ್ನು ಸಂರಕ್ಷಿಸಿಡಲು ಪಡುವ ಶ್ರಮ–ಕ್ರಮ, ಈ ಕಿರುಕಾದಂಬರಿಯಲ್ಲಿ ಗೋಚರವಾಗುವುದು. ಮಾನವ ಜಗತ್ತಿನಲ್ಲಿರುವಂತೆಯೇ ಇರುವೆಗಳ ಪ್ರಪಂಚದಲ್ಲಿ ತಮ್ಮ ಸಂಖ್ಯೆಯನ್ನು ವೃದ್ಧಿಮಾಡಿಕೊಳ್ಳುವುದು ಒಂದೆಡೆಯಾದರೆ, ಮತ್ತೊಂದೆಡೆ ಹೇಗೆ ತಮ್ಮ ಉತ್ಪನ್ನವನ್ನು ಹೆಚ್ಚು ಮಾಡಿಕೊಳ್ಳಬೇಕೆಂದು ಅವು ಆಲೋಚಿಸುತ್ತವೆ. ಇರುವೆಗಳ ವಿಭಿನ್ನ ಹಾಗೂ ಬಹು ಸಾರ್ಮರ್ಥ್ಯದಿಂದ ಮನುಷ್ಯಲೋಕ ಎಷ್ಟು ಪ್ರಯೋಜನ ಪಡೆಯುತ್ತಿದೆ ಎನ್ನುವುದನ್ನು ಈ ಕಥನ ವ್ಯಾಖ್ಯಾನಿಸುತ್ತದೆ.

ಮನುಷ್ಯನ ಹಾಗೆ, ಬೇರೆ ಬೇರೆ ವರ್ಗದ ಇರುವೆಗಳಲ್ಲಿ ಕೂಡ ವೈವಿಧ್ಯಮಯವಾದ ಆಹಾರ ಕ್ರಮ ಹಾಗೂ ಆಹಾರ ಸಂಗ್ರಹಣಾ ವಿಧಾನಗಳಿವೆ. ಕೆಲವು ಇರುವೆಗಳು ಸಸ್ಯಹಾರಿಗಳು. ಗಿಡಗಳನ್ನು ಕೊಯ್ಲು ಮಾಡುವಾಗ ಸಿಗುವ ಸಕ್ಕರೆ ಅಂಶ ಅವಕ್ಕೆ ಆಹಾರ. ಕೆಲವು ಇರುವೆಗಳು ಮಾಂಸಹಾರಿಗಳು. ಬೇರೆ ಕ್ರಿಮಿಕೀಟಗಳನ್ನು ಬೇಟೆಯಾಡಿದಾಗ ಅವುಗಳಿಂದ ಉತ್ಪತ್ತಿಯಾಗುವ ಸಸಾರಜನಕದ ಮೇಲೆ ಬದುಕುತ್ತವೆ. ಕೆಲವು ಜಾತಿ ಇರುವೆಗಳು ತಮ್ಮದೇ ಆದ ಅಣಬೆ/ನಾಯಿಕೊಡೆಯನ್ನು ಬೆಳೆಸುತ್ತವೆ. ಆದರೆ ಸಾಕಷ್ಟು ಇರುವೆಗಳು ಸಿಕ್ಕಿದ್ದೆಲ್ಲ ತಿನ್ನುವ ಸರ್ವಭಕ್ಷಕ ಜಾತಿಯವು.

**ಇರುವೆಗಳ ಆಹಾರ :–** ಹೊಸದಾಗಿ ಅರಳಿದ ಹೂ, ಅದರಲ್ಲಿರುವ ಮಕರಂದ, ಧಾನ್ಯದ ಗುಪ್ಪೆ, ಕೊನೆಯುಸಿರು ಎಳೆಯುತ್ತಿರುವ ಚಿಟ್ಟೆ, ಗೆದ್ದಲಿನ ಗೂಡು, ಅರ್ಧ ತಿಂದು ಎಸೆದ ಹಣ್ಣನ್ನು ಉಂಡು ಹೋಗುತ್ತವೆ, ಗೂಡಿಗೆ ಕೊಂಡು ಹೋಗುತ್ತವೆ. ಈ ಆಹಾರ ವಸ್ತುಗಳನ್ನು ಕಂಡಾಗ, ಇರುವೆಗಳಿಗೆ ‘ಮಜವೊ ಮಜ’. ಬಾಯಲ್ಲಿ ನೀರೂರಿಸುತ್ತವೆ. ಗೆದ್ದಲು ಅವುಗಳಿಗೆ ರಸಕವಳ. ಮಾಲಾಕ್ಷಿ ಹೇಳುತ್ತಾಳೆ “ಎಂತಹ ವಿಚಿತ್ರ. ಇವುಗಳನ್ನು ದೇವರು ನಮಗಾಗಿಯೆ ಸ್ರಷ್ಟಿ ಮಾಡಿದ ಹಾಗೆ ಕಾಣುತ್ತದಲ್ಲ. ಅವುಗಳು ಮರದ ತೊಗಟೆಯನ್ನು ಮೇಯ್ದು ಕೊಬ್ಬಿಕೊಂಡು ಕೊನೆಗೆ ನಮ್ಮ ಒಡಲನ್ನು ತುಂಬಿಸುತ್ತವಷ್ಟೆ.” (ಪುಟ.44). ಇರುವೆಗಳಿಗೆ ಒಂದು ಪ್ರಿಯವಾದ ಚಟವಿದೆ. ಹಳದಿಯ ಬಣ್ಣದ ಕುರುಡು ಜೀರುಂಡೆಗಳಲ್ಲಿರುವ ಸಣ್ಣ ಹಳದಿಯ ಕೂದಲುಗಳಿಂದ, ಬೇಗ ಇಮರಿ ಹೋಗುವಂತಹ ರಸ ಜಿನುಗುತ್ತದೆ. ಆ ಜೀರುಂಡೆಗಳ ಹಿಂದೆ ಮುಂದೆ ತಿರುಗುತ್ತ ಆ ರಸವನ್ನು ನೆಕ್ಕುವ ಆಸೆ ಕೆಲವು ಇರುವೆಗಳಿಗೆ. ಇರುವೆಗಳು ಇತರ ಜೀವಿಗಳಂತಲ್ಲ. ಅವಕ್ಕೆ ಜೇನು ನೊಣಗಳಂತೆ ಬರಿಯ ಮಕರಂದವೆ ಸಿಗಬೇಕೆಂದಿಲ್ಲ. ಎಂತಹ ಆಹಾರವನ್ನಾಗಲಿ ತಿಂದು ಬದುಕುತ್ತವೆ. ಇರುವೆ ಹಕ್ಕಿಗಳು, ತಿರುಗಾಲಿನ ಇರುವೆಗಳು ತಿಂದುಳಿದುದ್ದಕ್ಕಾಗಿ ಕಾಯುತ್ತಾ ತಮ್ಮ ಆಹಾರದ ಬಹು ಭಾಗವನ್ನು ಸಂಪಾದಿಸಿಕೊಳ್ಳುತ್ತವೆ. ಅದಕ್ಕಾಗಿ ಅವಕ್ಕೆ ಆ ಹೆಸರು.

**ಆಹಾರ ಬೇಟೆ :–** ಯಜಮಾನಿಯ ಜೊತೆಯಲ್ಲಿ ಕೆಲವು ಇರುವೆಗಳು ಆಹಾರ ಸಂಪಾದನೆಗೆ ಹೋದರೆ, ಮಿಕ್ಕವು ತಮ್ಮ ಗೂಡನ್ನು ವಿಸ್ತರಿಸಿಕೊಳ್ಳುವ ಕೆಲಸದಲ್ಲಿ ತೊಡಗಿರುತ್ತವೆ. ಆಹಾರ ಸಂಪಾದನೆಗೆ ಹೊರಟ ಗುಂಪು ಉತ್ಸಾಹದಿಂದ ಗೂಡಿಗೆ ಮರಳಿದ ಬಗ್ಗೆ ಉಲ್ಲೇಖವಿದೆ. ತಾವು ತಂದದ್ದನ್ನೆಲ್ಲ ಉಗ್ರಾಣದಲ್ಲಿ ತುಂಬುತ್ತವೆ. “ಬೇಟೆಯಾಡಿ ಆಹಾರ ಸಂಗ್ರಹಣೆ ಮಾಡಿಕೊಂಡೆವು” ಎಂದು ಒಬ್ಬ ನಿರೂಪಕ ಇರುವೆ ನುಡಿಯುತ್ತದೆ, ಈ ಕಿರುಕಾದಂಬರಿಯಲ್ಲಿ.

ಹೊಸರಾಣಿಯರು ಪ್ರತೀದಿನ ಮೊಟ್ಟೆಯಿಡುತ್ತವೆ. ಆಹಾರವನ್ನು ತಂದೇ ಅರಿಯದ ಅವರು ತಮ್ಮ ಮೈಯಲ್ಲಿದ್ದ ಕೊಬ್ಬಿನಿಂದಲೇ ಆದಷ್ಟು ದಿನಗಳನ್ನು ಕಳೆಯುತ್ತವೆ. ಏನೂ ಸಿಗದೇ ಇದ್ದಾಗ, ಕೆಲವು ಬಾರಿ ನಾಲ್ಕಾರು ಮೊಟ್ಟೆಗಳನ್ನೆ ತಿನ್ನುತ್ತವೆ. ಒಂದೆರಡು ಸಾಲುಗಳೇ ಮಾಯವಾದರೆ ಆಶ್ಚರ್ಯ ಪಡಬೇಕಾಗಿಲ್ಲ. (ನಾವು ಮಕ್ಕಳಾಗಿದ್ದಾಗ ಅಮ್ಮನಿಗೆ ತಿಳಿಯದ ಹಾಗೆ ಒಣಗಲು ಇಟ್ಟಿದ್ದ ಸಂಡಿಗೆಯನ್ನು ಮಾಯಮಾಡಿದ ಹಾಗೆ!)

ಇರುವೆಯ ಒಂದು ಗುಂಪಿನವರು ನಿಗದಿಪಡಿಸಿಕೊಂಡಿದ್ದ ಸ್ಥಳದಲ್ಲಿ ವೈರಿಗಳು ಆಹಾರ ಹೆಕ್ಕುತ್ತಿದ್ದುದರ ಬಗ್ಗೆ ತಿಳಿಸಲಾಗಿದೆ. ಆಗ ಅವರು ಅನುಭವಿಸಿದ ಸಿಟ್ಟು, ಉದ್ವೇಗ, ಬಿರುಸು ಚಾಲನೆ, ಯಜಮಾನಿಯರ ವೇಗದ ನಡಿಗೆಯಿಂದ ಉತ್ತೇಜಿತರಾದ ದಾಸಿಯರ ನಡಿಗೆ ಬಗ್ಗೆ ಪ.ವಿ. ಅವರು ಬರೆದಿದ್ದಾರೆ. ತಮ್ಮ ತಮ್ಮ ಗುಂಪಿನವರಿಗೆ ಆಸರೆ ನೀಡಲು ನುಗ್ಗುವ ರೀತಿ, ಅವರ ಎಗರಾಟ, ಒಬ್ಬರನೊಬ್ಬರು ಕಚ್ಚುವ

ರೀತಿ, ಹಿಂಭಾಗದ ಕೊಂಡಿಗಳಿಂದ ಚುಚ್ಚಿ ವಿಷ ತುಂಬುವ ವಿಧಾನಗಳ ವಿವರಣೆಗಳಿವೆ. ಇದೊಂದು ಮಾರಾಮಾರಿ ಎಂದರೆ ಅತಿಶೋಕ್ತಿಯಲ್ಲ. ಇಂತಹ ಕಾಳಗದಲ್ಲಿ ಶತ್ರುಗಳು ಉಳಿಯುವುದಿಲ್ಲ. ಇವರು ನಾಮಾವಶೇಷವಾಗುತ್ತಾರೆ. ಇಂಥಹ ದುರಾವಸ್ಥೆಯ ಬಗ್ಗೆ ಮನಕಲುಕುವ ವಿವರಣೆಗಳಿವೆ.

**ಆಹಾರವನ್ನು ಕ್ರೋಡಿಕರಿಸುವ ರೀತಿ:–** ಇರುವೆಗಳ ಮಣ್ಣಿನ ಕೊಟ್ಟಿಗೆಗಳಲ್ಲಿ ಹಸಿರು, ಕಪ್ಪು ಮತ್ತು ಬಿಳಿಯ ಬಣ್ಣಗಳ ಸಣ್ಣ ಪುಟ್ಟ ಹಾರುವ ಕೀಟಗಳಿರುತ್ತವೆ. ಗಿಡಮರಗಳ ರಸವನ್ನು ಕುಡಿಯುತ್ತ ಆರಾಮವಾಗಿದ್ದ ಈ ಗಿಡಹೇನುಗಳನ್ನೆಲ್ಲ ಇರುವೆಗಳು ಎಳೆದುಕೊಂಡು ಬಂದು ತಮ್ಮ ಅರಮನೆಯಲ್ಲಿ ಕೂಡಿಟ್ಟು ಕೊಂಡಿರುತ್ತವೆ. "ಅವು ಈ ಗೂಡಿನಿಂದ ತಪ್ಪಿಸಿಕೊಂಡು ಹಾರದಂತೆ ಕಾವಲು ಕಾಯುತ್ತಿದ್ದವು. ರಸವೊಸರುವ ಎಳೆಯ ಸಸ್ಯಗಳನ್ನು ತಂದಿತ್ತು, ಆ ಹೇನುಗಳನ್ನು ಚೆನ್ನಾಗಿ ಪೋಷಿಸುತ್ತಿದ್ದವು. ಇಚ್ಚೆ ಬಂದಾಗ ಬಲವಾದ ಕಾವಲಿನಲ್ಲಿ ಅವುಗಳನ್ನು ಮೇಯಿಸಿಕೊಂಡು ಬರುತ್ತಿದ್ದವು", ಎನ್ನುತ್ತಾರೆ ಬರಹಗಾರರು (ಪುಟ. 15).

**ಆಹಾರವನ್ನು ಕಾಪಾಡುವುದು:–** ರಾಣಿಯವರ ಉಪಚಾರ, ಮೊಟ್ಟೆಗಳನ್ನು ಕಾಪಾಡುವುದರ ಜೊತೆಗೆ, ಆಹಾರವನ್ನು ಜೋಪಾನ ಮಾಡುವುದು, ಇರುವೆಗಳು ಮಾಡುವ ಪ್ರಮುಖವಾದ ಕೆಲಸಗಳಲ್ಲಿ ಒಂದು. ಇರುವೆ ಪ್ರಪಂಚದಲ್ಲಿ ಕಳ್ಳರು ಇರುತ್ತವೆ. ದಾಂಡಿಗರು, ಆಹಾರ ತಂದು ತುಂಬಿಸಿದರೆ, ಕಳ್ಳರು, "ಆ ಶ್ರಿಮಂತ ದಾಂಡಿಗರ ಗೂಡಿನ ಬಳಿಯಲ್ಲೆ ಮನೆ ಮಾಡಿಕೊಂಡು ನೆಟ್ಟಗೆ ಉಗ್ರಾಣಗಳಿಗೆ ಕನ್ನಹಾಕಿ, ಒಳದಾರಿಗಳ ಮೂಲಕ ಆಹಾರವನ್ನು ಪತ್ತೆ ಇಲ್ಲದೆ ಸಾಗಿಸಿಬಿಡುತ್ತಾರೆ. ದಾಂಡಿಗರು ಅಹಾರ ತಂದು ತುಂಬಿಸುವುದು, ಕೊರಮರು ಅದರಲ್ಲಿ ಅರ್ಧ ಮುಕ್ಕಾಲನೆಲ್ಲ ಸಾಗಿಸಿಬಿಡುವುದು." (ಪುಟ. 42) ಇವಕ್ಕೆ ಅವಲಂಬನೆ ಇಲ್ಲದೆ ಜೀವನವೇ ಸಾಗದು. ಅವಕ್ಕೆ ತಂದು ತುಂಬಿಸಿದ ಬಿಟ್ಟಿ ಆಹಾರವೇ ಬೇಕು, ಎನ್ನುವ ಟೀಕೆ ಗಮನಾರ್ಹ.

**ಆಹಾರದ ಸರಬರಾಜು:–** ಹೇಗೆ ರಾಣಿ ಇರುವೆ, ಸಣ್ಣ ಯಜಮಾನತಿಯರು, ಹೆಣ್ಣಾಳುಗಳು ಎಲ್ಲರೂ ಒಬ್ಬೊಬ್ಬರಾಗಿ ಹಸುಗಳ ಕೊಟ್ಟಿಗೆಯನ್ನು ಹೊಕ್ಕು, ಹಸುಗಳನ್ನು ತಮ್ಮ ಸ್ಪರ್ಶಾಂಗದಿಂದ ಮೃದುವಾಗಿ ಸವರಿ, ಆಗ ಅವು ಹೊರಹೊಮ್ಮಿಸಿದ ಸಿಹಿಯಾದ ಇಬ್ಬನಿಯಂತಹ ರಸವನ್ನು, ನೆಕ್ಕುತ್ತವೆ, ಹಾಗೂ ಗಿಡಹೇನುಗಳ ಮೊಟ್ಟೆಗಳನ್ನು ಜೋಪಾನ ಮಾಡಿ, ಮರಿಗಳನ್ನು ಪೋಷಿಸಿ ಉಪಚರಿಸುತ್ತವೆ – ಎನ್ನುವ ಅವಲೋಕನ ಓದುಗರ ಕುತೂಹಲವನ್ನು ಇಮ್ಮಡಿ ಮಾಡುತ್ತದೆ.

**ಉಗ್ರಾಣ/ಬೇಸಾಯದ ಇರುವೆಗಳು/ನಾಯಿ ಕೊಡೆಯ ವ್ಯವಸಾಯ:–** ದಕ್ಷಿಣ ಅಮೇರಿಕಾದಲ್ಲಿ ಬೇರೆ ಸಂಸಾರವನ್ನಾಗಲಿ, ವಸಾಹತುವನ್ನಾಗಲಿ ಸ್ಥಾಪಿಸಲು ಹೊರಟ ರಾಣಿಯು ತನ್ನ ಚೀಲದಲ್ಲಿ ಇಂತಹ ಅಣಬೆಗಳ ಬೀಜ ಕಣಗಳನ್ನು ತೆಗೆದುಕೊಂಡು ಹೋಗುವುದು ಅಲ್ಲಿಯ ಪದ್ಧತಿ. (ಅದಕ್ಕೆ ಸ್ರೀಧನವೆಂದು ಕರೆಯುತ್ತಾರಂತೆ). ಅವಳ ಹೊಸಮನೆಯಲ್ಲಿ ಅವಳೇ ಎಲೆಗಳನ್ನು ತಂದು, ನುರಿಸಿ, ಅದಕ್ಕೆ ತನ್ನ ಮೈಯಿನ ಗೊಬ್ಬರವನ್ನು ಹಾಕಿ, ನೀರು ಹಾಯಿಸಿ ಈ ಅಣಬೆಗಳ ಬೀಜ ಕಣಗಳನ್ನು ನೆಡುತ್ತಾಳೆ. ಅಲ್ಲಿ ಹುಟ್ಟಿದ ಅಣೆಬೆಗಳೇ ಅವಳ ಮತ್ತು ಅವಳ ಮಕ್ಕಳ ಆಹಾರ. ಕೆಲಸಗಾತಿಯರು ದೊಡ್ಡವಾಗಿ ಬೆಳೆಯುವ ಮೊದಲು, ರಾಜಕುಮಾರಿ/ರಾಣಿಯೇ ವ್ಯವಸಾಯ ಮಾಡುತ್ತಾಳೆ. ಅಣೆಬೆಗಳು, ತಮ್ಮ ಸಂಸಾರಕ್ಕೆ ಸಾಲದೆ ಹೋದರೆ, ಅವಳು, ಅವಳ ಮಕ್ಕಳು ಇನ್ನೂ ದೊಡ್ಡ ತೋಟವನ್ನು ಮಾಡಿ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅಣಬೆಯನ್ನು ಬೆಳೆಸುತ್ತಾರೆ. ತೋಟದ ಉಸ್ತುವಾರಿ ಮಾಡುವುದೇ ಹಲವಾರು ಬಾರಿ ಅವಕ್ಕೆ ಕಷ್ಟವಾಗಿ ಬಿಡುತ್ತದೆ. ಈ ವಿವರಗಳು **ಇರುವೆಯ ಕಥೆ** ಕಾದಂಬರಿಯಲ್ಲಿ ಕೂಲಂಕಷವಾಗಿ ಉಲ್ಲೇಖವಾಗಿವೆ.

ಕೊಲೆರಾಡೂದಲ್ಲಿ ನೂರಾರು ಸಿಹಿಯ ಗುಡಾಣಗಳು ಕೂಂಬೆ ಕೂಂಬೆಗಳಿಗೆ ಜೋತು ಬಿದ್ದಿರುತ್ತವೆ. ಹೂವಿನ ಮಕರಂದಕ್ಕಾಗಿ, ಇರುವೆಗಳು, ಹೊಟ್ಟೆ ಬಾತುಕೊಳ್ಳುವರೆಗೆ, ಹೂವಿನ ಮಕರಂದವನ್ನು ಹೀರುತ್ತವೆ. ತಿನ್ನುತ್ತಾ ತಿನ್ನುತ್ತಾ ಅವುಗಳ ಹೊಟ್ಟೆ ಬಾತುಕೊಂಡು, ಅವುಗಳ ದೊಡ್ಡ ಕಪ್ಪು ಒಡಲಲ್ಲಿ ಹಳದಿ ಪಟ್ಟಿ ಕಾಣುತ್ತದೆ. "ಹೊಟ್ಟೆ ಬಾತುಕೊಳ್ಳುವವರೆಗೂ ತಿಂದು, ಅಲುಗದೆ ಕಂಡ ಕಡೆಯಲ್ಲಿ ಜೋತುಕೊಳ್ಳುವ" ಈ ಇರುವೆಗಳು, ಕೊಲೆರಾಡೂದಲ್ಲಿ ಬೇರೆ ಇರುವೆಗಳಿಗೆ ಇವು ಉಗ್ರಾಣಗಳು. ನೀರನ್ನೇ ಕಾಣದ ಈ ದೇಶದಲ್ಲಿ, "ನಾವು ವರ್ಷದಲ್ಲಿ ಎಂಟು ಹತ್ತು ತಿಂಗಳು ನೀರಾಗಲೀ ಆಹಾರವಾಗಲಿ ಇಲ್ಲದೆ ಸಾಯುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಅಂತಹ ಉಗ್ರಾಣ ಮಾಡಿಕೊಂಡಿರುತ್ತೇವೆ", (ಪುಟ. 72) ಎನ್ನುತ್ತದೆ ಒಂದು ಇರುವೆ. ಈ ರೀತಿಯಾಗಿ ಆಹಾರ ಶೇಖರಿಸಿಕೊಂಡ ಇವು ನಿರ್ಭಾಗ್ಯ ಉಗ್ರಾಣಗಳು. ಒಂದು ಸಲ ಆಹಾರ ಶೇಖರಿಸಿಕೊಂಡ ಮೇಲೆ ಅದರ ಹಣೆಯ ಬರಹ ಮುಗಿದಂತೆಯೇ! ತನ್ನ ಸಾವಿನ ನಿರೀಕ್ಷೆಯಲ್ಲಿ ಇರಬೇಕು, "ಆ ಬದುಕಿರುವ ಗುಡಾಣಗಳು". (ಪುಟ. 73) ಬೇರೆ ಇರುವೆಗಳಿಂದ ಆಹಾರದ ಸರಬರಾಜು ನಿಂತಮೇಲೆ ಅವುಗಳು, ಈ ಆಹಾರ ಶೇಖರಿಸಿಕೊಂಡಿರುವ ಇರುವೆಗಳನ್ನು ಒಬ್ಬೊಬ್ಬರಾಗಿ ಬಲಿಕೊಟ್ಟು, ಅಲ್ಲಿರುವ ಆಹಾರದಿಂದ ತಮ್ಮ ಜೀವ ಉಳಿಸಿಕೊಳ್ಳುತ್ತವೆ. ಅ ಗುಡಾಣಗಳದ್ದು ಮಾತ್ರ "ಹೊಡ ಬಾಳು". (ಪುಟ. 73)

ಕೆಲಸಗಾತಿಯರು ಆಹಾರ ತಂದು ಗೂಡಿನೊಳಗೆ ಒಂದು ಕಡೆ ಗುಡ್ಡೆ ಹಾಕಿದ ಮೇಲೆ, ಇತರರು ಒಬ್ಬೊಬ್ಬರಾಗಿ ಬಂದು ಆ ಆಹಾರವನ್ನು ತಮ್ಮ ಒಡಲಲ್ಲಿ ಜಮಾಯಿಸಿಕೊಂಡು ಅದು ಪೂರ್ಣವಾಗಿ ತುಂಬಿದ ಮೇಲೆ ಕಷ್ಟಪಟ್ಟುಕೊಂಡು ಹೋಗಿ ಗೂಡಿನ ಮೇಲ್ಛಾವಣಿಯಲ್ಲಿ ತೂಗುತ್ತಿರುತ್ತವೆ. ಕಳಚಿಬಿದ್ದ ಇರುವೆ, ಪುನಃ ನೆಟ್ಟಗೆ ನಿಲ್ಲಲಾರದೆ ಗಾಳಿಯಲ್ಲಿ ಕೈ ಕಾಲುಗಳನ್ನು ಒದರಲಾರಂಬಿಸುತ್ತದೆ. ಅದರ ಒಡಲು ಬಿರುಕು ಬಿಟ್ಟದ್ದೆ ತಡ ಬೇರೊಂದು ಇರುವೆ ಅಲ್ಲಿನ ಆಹಾರವನ್ನು ತಾನು ತುಂಬಿಕೊಂಡು ಛಾವಣಿ ಸೇರುತ್ತದೆ. ಈ ವಿವರಗಳನ್ನೆಲ್ಲ ಮನ ಕಲಕುವಂತೆ ಪ.ವಿ.ಯವರು ದಾಖಲಿಸುತ್ತಾರೆ. ಗೂಡಿನ ಒಳಭಾಗದಲ್ಲಿ ಸುಮಾರು 30,000 ಇರುವೆಗಳಿರುತ್ತವಂತೆ. ಹಾಗೂ ಮೂವರು ಅಥವಾ ನಾಲ್ಕಾರು ರಾಣಿಯರು. ಕೆಲಸಗಾರರೆಲ್ಲ ಸೇರಿ ತಾವು ಛತ್ರಿಗಳಂತೆ ಹಿಡಿದು ತಂದ ಎಲೆಗಳನ್ನು ಚೂರು ಚೂರು ಮಾಡಿ. ನಂತರ, ತಮ್ಮ ಗೂಡನ್ನು, ಶೌಚಗ್ರಹಗಳನ್ನು ಗುಡಿಸಿ, ಆ ಕಸವನ್ನೆಲ್ಲ ತಂದು ಈ ಎಲೆ ಚೂರುಗಳ ರಾಶಿಯ ಮೇಲೆ ಹಾಕಿ ಕೊಳೆಯಲು ಏರ್ಪಾಡು ಮಾಡುತ್ತವೆ. ನಂತರ ತಮ್ಮ ಗಲ್ಲದ ಚೀಲಗಳಲ್ಲಿದ್ದ ಯಾವುದೋ ಬೀಜಕಣಗಳನ್ನು ತೆಗೆದು ಅಲ್ಲಲ್ಲಿ ನೆಡುತ್ತವೆ. ಅವುಗಳನ್ನು ನೋಡಿದರೆ ವ್ಯವಸಾಯ ಮಾಡುವಂತೆ ಕಾಣುತ್ತವೆ. ನಂತರ ಒಳಗಿನ ಉಗ್ರಾಣದಿಂದ ನಾಯಿ ಕೊಡೆಗಳನ್ನು ತಂದು

ಚೂರು ಚೂರು ಮಾಡಿಕೊಂಡು ಎಲ್ಲವನ್ನು ಮೆಲ್ಲಲು ಪ್ರಾರಂಭಿಸುತ್ತವೆ. ಮಧ್ಯೆ ಮಧ್ಯೆ ಕೆಲವು ಕಣಗಳನ್ನು ತಮ್ಮ ಗಂಟಲಿನ ಗೋಣಿಯಲ್ಲಿ ತುಂಬಿಕೊಳ್ಳುತ್ತವೆ – ಇಲ್ಲಿ ಉಲ್ಲೇಖಿಸಿರುವ ವಿವರಗಳನ್ನೆಲ್ಲ ಈ ಕಿರು ಕಾದಂಬರಿಯಲ್ಲಿ ಓದುತ್ತೇವೆ.

**ಅಮೆರಿಕಾದ ಬೇಸಾಯ ಇರುವೆಗಳು:–** ದಕ್ಷಿಣ ಅಮೆರಿಕಾದಲ್ಲಿ ಮಣ್ಣುಹುಳುಗಳೇ ಇಲ್ಲವಂತೆ. ಅವುಗಳು ಮಾಡುವ ಕೆಲಸವನ್ನು ಇರುವೆಗಳೇ ಮಾಡುವುದಲ್ಲದೇ, ಮತ್ತಷ್ಟು ಚೆನ್ನಾಗಿಯೆ ಮಾಡುತ್ತವೆ ಎನ್ನುತಾರೆ ಬರಹಗಾರರು. ಆ ಮೂಲಕ ಅಲ್ಲಿಯ ರೈತರಿಗೆ ಸಹಾಯ ಮಾಡುತ್ತವೆ. ಚಾರ್ಲಸ್ ಡಾರ್ವಿನ್ ಹೇಳುತ್ತಾರೆ "ಈ ಪುಟ್ಟ ಇರುವೆಗಳು ನೂರು ವರ್ಷಗಳಲ್ಲಿ, ಎರಡು ಎಕರೆ ಭೂಮಿಯಲ್ಲಿ, ಮೂರು ಸಾವಿರದ ಅರವತ್ತು ಟನ್‌ಗಳಷ್ಟು ಮಣ್ಣನ್ನು ಮೊಗಚುತ್ತವೆ. ಆದರೆ ಮಣ್ಣುಹುಳುಗಳು ಅದೇ ಕಾಲದಲ್ಲಿ, ಅಷ್ಟೇ ಭೂಮಿಯಲ್ಲಿ ಎರಡು ಸಾವಿರದ ಆರು ನೂರು ಟನ್ನುಗಳಷ್ಟು ಮಣ್ಣನ್ನು ಮಾತ್ರ ಮೊಗಚುತ್ತವೆ."

**ಸೈನಿಕ ಇರುವೆಗಳು/ಅಲೆಮಾರಿ ಇರುವೆಗಳು:–** ಸೈನಿಕ ಇರುವೆಗಳನ್ನು ನೋಡಿದರೆ ಕಡಜಗಳು, ದುಂಬಿಗಳು, ಚಿಟ್ಟೆಗಳು ಎಲ್ಲಾ ಹುಚ್ಚೆದ್ದು ಹಾರಾಡುತ್ತವೆ. ಅವಕ್ಕೂ ಭಯ. ಎಂತೆಂತಹ ದೊಡ್ಡ ಪ್ರಾಣಿಗಳನ್ನು ಬಿಡುವುದಿಲ್ಲ ಇವು. ಲೂಟಿ ಅಂದರೆ ಲೂಟಿ ಮಾಡುತ್ತವೆ. ಇವುಗಳು ನಡೆದ ದಾರಿಯಲ್ಲಿ ಬದುಕಿರುವ ಒಂದು ಜೀವಿಯೂ ಇರುವುದಿಲ್ಲ. ಒಂದು ಹನಿ ನೀರು, ಒಂದು ಚೂರು ಆಹಾರಪದಾರ್ಥ ಇರುವುದಿಲ್ಲ. ಪ್ರಾಣಿಗಳ ಲೋಕದಲ್ಲಿ ಇದೊಂದು ಹೂಣರ ಸೈನ್ಯ. ಇವುಗಳನ್ನು ನೋಡಿ ಮನುಷ್ಯರು ದರೋಡೆಯನ್ನು, ಲೂಟಿ ಮಾಡುವುದನ್ನು ಕಲಿಯಬೇಕು. ಮಂಗಗಳು, ಕುದುರೆಗಳು, ಕಾಡು ಕೋಣಗಳು, ಮೊಲಗಳು ಈ ಸೈನಿಕ ಇರುವೆಗಳನ್ನು ಕಂಡಾಗ ಓಡಿಹೋಗುತ್ತವೆ, ಎಂದು ತಿಳಿಸುತ್ತಾರೆ ಲೇಖಕರು. ಸೈನಿಕ ಇರುವೆಗಳು, ಓಡಲಾಗದ ಕುಂಟು ಕುದುರೆ ಒಂದನ್ನು ತಿನ್ನುವ ಘಟನೆಯೊಂದನ್ನು ರಾವ್ ಅವರು ಉಲ್ಲೇಖಿಸಿದ್ದಾರೆ. "ಹೌದು ಕುದುರೆಗಳ ಚರ್ಮ ಒರಟಾಗಿದ್ದರೂ, ಸೈನಿಕ ಇರುವೆಗಳ ದವಡೆಗಳು ಒಳ್ಳೆಯ ಕುಡುಗೋಲು ಇದ್ದ ಹಾಗಿರುತ್ತವೆ. ಸೈನಿಕ ಇರುವೆಗಳು ಕುದುರೆಯನ್ನು ಬಿಡುವುದಿಲ್ಲ, ಚೇಳನ್ನೂ ಬಿಡುವುದಿಲ್ಲ. ತಿರುಗಾಲಿನ ಈ ಮಾರಿ ಇರುವೆಗಳು ಸಂಚಾರದ ಹಾದಿಯಲ್ಲಿ ಏನೇನು ಸಿಕ್ಕಿದರೆ ಅದನ್ನೆಲ್ಲ ತಿನ್ನುತ್ತವೆ. ಕಾಡಿನ ಪ್ರಾಣಿಗಳು ಇವುಗಳ ಸುಳಿವನ್ನರಿತು ಕೂಗಾಡಿ ಓಡಲು ಪ್ರಾರಂಭಿಸುತ್ತವೆ. ಸುತ್ತ ಮುತ್ತಣ ಹಳ್ಳಿಯ ಮನುಷ್ಯರು ಇವುಗಳ ಹಾದಿಯನ್ನು ತಿಳಿದು, ಆ ದಿಕ್ಕಿನಿಂದಲೇ ದೂರಹೋಗಿ ಬಿಡುತ್ತಾರೆ. ಕೆಲವು ದಿನಗಳ ನಂತರ ಇರುವೆಗಳು ಅಲ್ಲಿಂದ ಸರಿಯತ್ತವೆ. ಆ ಜನರು (ಊರುಬಿಟ್ಟು ಹೋದ ಜನರು) ಹಿಂದಕ್ಕೆ ಬಂದು ಹಿಗ್ಗಿನಿಂದ ಇರುತ್ತಾರೆ. ಈ ಇರುವೆಗಳು ಊರನ್ನೆಲ್ಲ, ಕ್ರಿಮಿ ಕೀಟಗಳು, ಕೆಟ್ಟು ಮುಗ್ಗಿದ್ದ ಆಹಾರ ಪದಾರ್ಥಗಳು ಎಲ್ಲವನ್ನು ಒಂದು ಚೂರು ಇಲ್ಲದಂತೆ ತಿಂದು, ಅವರ ಹಳ್ಳಿಗೆ ಹಳ್ಳಿಯನ್ನೆ ಚೊಕ್ಕಟವಾಗಿ ಇಟ್ಟು ಹೋಗಿರುತ್ತದಂತೆ." ಅದಕ್ಕೆ ಬರಹಗಾರರು ಹೇಳುತ್ತಾರೆ, "ಸೋಮಾರಿ ಮಾನವರು ಹಿಗ್ಗಬೇಕಾದ್ದೆ, ಸಂಶಯವಿಲ್ಲ". (ಪುಟ: 65) ರಾಣಿ ಇರುವೆಯು ಒಂದು ಕಾರ್ಖನೆಯೆ ಸರಿ. ವರ್ಷದಲ್ಲಿ ಎಂಟು ಹತ್ತು ಸಾರಿ 60,000ದಷ್ಟು ಮೊಟ್ಟೆಗಳನ್ನು ರಾಣಿ ಇಡುತ್ತಾಳೆ. ಮೊಟ್ಟೆಗಳೆಲ್ಲ ಒಡೆದು ಮರಿಗಳಾಗುವ ಕಾಲದಲ್ಲಿ ಒಂದು ಕಡೆ ನೆಲೆಸಿರುತ್ತವೆ. ಮೊಟ್ಟೆಯಿಂದ ಮರಿಗಳು ಹೊರಬಂದ ಮೇಲೆ ಅವಕ್ಕೆ ತಿನ್ನುವುದೇ ಕೆಲಸ. ಕೊನೆಯಿಲ್ಲ, ಮೊದಲಿಲ್ಲ. ಅವುಗಳಿಗೆ ಆಹಾರ ಬೇಟೆಯಾಡಿ ಒದಗಿಸುತ್ತ ಈ ಸೈನಿಕ ಇರುವೆಗಳು ಮುಂದುವರಿಯುತ್ತದೆ.

**ಇತರ ಕೀಟಗಳ ಹಾಗೂ ಮಾನವನ ಜೊತೆ ಇರುವೆಯ ಸಂಬಂಧ:–** ಕೆಲವು ಮನುಷ್ಯರು ಕೈ ಹಾಕಿ ಅಲ್ಲಿದ್ದ ಸಿಹಿಯ ಉಗ್ರಾಣಗಳನೆಲ್ಲ ತಮ್ಮ ಬುಟ್ಟಿಗೆ ತುಂಬಿಕೊಂಡು, "ಇವಿಷ್ಟನ್ನು ಹಿಂಡಿ, ಬಂದ ರಸದಿಂದ ಒಂದು ವಾರ ಪಾನಕ ಮಾಡಿ ಕುಡಿಯಬಹುದು" ಎನ್ನುವ ವಿವರ ಮಾನವ ಸ್ವಭಾವದ ಮೇಲೆ ಬೆಳಕು ಚೆಲ್ಲುತ್ತದೆ. ಇರುವೆಯ ಗೂಡಿನಲ್ಲಿ ಬೇರೆಯ ಕೀಟಗಳು ಆತಿಥ್ಯವನ್ನು ಪಡೆಯುತ್ತವೆ. ಇದುವರೆಗೂ ಐದು ಸಾವಿರ ವಿಧದ ಕೀಟಗಳು ಇರುವೆಯ ಆಶ್ರಯವನ್ನು ಪಡೆದಿರುವುದು ತಿಳಿದು ಬಂದಿದೆ. ಈ ಕೀಟಗಳು, ಹಕ್ಕಿ, ಹಾವು, ಕಪ್ಪೆ ಮುಂತಾದ ಶತ್ರುಗಳ ಕೈಯಿಂದ ತಪ್ಪಿಸಿಕೊಳ್ಳಲು, ಇರುವೆಯ ಜೊತೆಯಲ್ಲೆ ಇದ್ದು, ಅವುಗಳು ಗಂಧವನ್ನು ಪಡೆದು, ಇರುವೆಯ ಹಾಗೇ ನಡೆಯಲು ಕಲಿತು, ಶತ್ರುಗಳ ಕಣ್ಣಿಗೆ ಮಣ್ಣೆರಚಿ ಬದುಕುತ್ತವೆ. ಜೇಡಗಳು ಇರುವೆಯಂತೆಯೇ ನಡೆಯುವುದರಲ್ಲಿ ಬಲು ಚುರುಕು. ಆರು ಕಾಲುಗಳಿಂದ ನಡೆಯುತ್ತವೆ, ಮುಂದಿನ ಎರಡನ್ನು ಸ್ಪರ್ಶಾಂಗಗಳಂತೆ ಇತರ ಜೀವಿಗಳ ಮೈ ಸವರಿ ಅವುಗಳ ಆಹಾರದಲ್ಲಿ ಪಾಲುಗೊಳ್ಳುವುದನ್ನು ಕಲಿತಿವೆ. ಇಂತಹ ಸ್ವಭಾವದ ಮನುಷ್ಯರನ್ನು ನಾವೂ ನಮ್ಮ ಜೀವನದಲ್ಲಿ ಕಂಡಿದ್ದಿವಿ ಅಲ್ಲವೇ? ಈ ಅತಿಥಿಗಳು ಇರುವೆಗಳಿಂದ ಇಷ್ಟು ಉಪಕಾರ ಪಡೆದರೂ, ಕೃತಜ್ಞತೆಯಿಂದ ಅವಕ್ಕೆ ನಷ್ಟವನ್ನೆ ಉಂಟುಮಾಡುತ್ತವೆ. ಅವು ತಂದು ತುಂಬಿಕೊಂಡ ಆಹಾರವನ್ನು ಅವು ಕಂಡಂತೆಯೋ, ಕಾಣದಂತೆಯೋ ಮುಗಿಸಿಬಿಡುತ್ತವೆ. ಅವುಗಳ ಮರಿಗಳನ್ನು ತಿಂದು ತೇಗುತ್ತವೆ.

ಮತ್ತೊಂದು ಸ್ವಾರಸ್ಯಕರವಾದ ವಿಷಯವನ್ನು ಪ್ರಸ್ತಾಪಿಸುತ್ತಾರೆ ರಾವ್ ಅವರು. ಜೀರುಂಡೆ ಮರಿಗಳಿಗೆ ಇರುವೆಗಳು ತಮ್ಮ ಮರಿಗಳಗೆ ಆಸಕ್ತಿವಹಿಸುವಂತೆಯೇ ವಹಿಸುತ್ತವೆ. ತಮ್ಮ ಮರಿಗಳನ್ನೆಲ್ಲ ಕೋಶಾವಸ್ಥೆಗೆ ಮುಂಚೆ ಹುಡಿ ಮಣ್ಣಿನಲ್ಲಿ ಮುಚ್ಚಿಡುತ್ತವೆ. ಜೀರುಂಡೆ ಮರಿಗಳಿಗೂ ಹಾಗೆಯೇ ಮಾಡುತ್ತವೆ. ಇರುವೆಗಳಗೆ ಈ ಉಪಚಾರ ಎಷ್ಟು ಅತ್ಯಾವಶ್ಯಕವೊ, ಜೀರುಂಡೆ ಮರಿಗಳಿಗೆ ಇದು ಸರ್ವನಾಶ. ಹೀಗೆ ಮಾಡುವುದರಿಂದ ಜೀರುಂಡೆ ಮರಿಗಳು ಸಾಯುತ್ತವೆ. ಹೀಗೆ ತಾವೆ ಅರಿಯದಂತೆ ಅವನ್ನು ಕೊಂದು ತಮ್ಮ ಮರಿಗಳನ್ನು ಉಳಿಸಿಕೊಳ್ಳುತ್ತವೆ. ಜೀರುಂಡೆಗಳು ಇರುವೆಯ ಪೊರೆಹುಳುಗಳನ್ನು ಅಂದರೆ, ಕೋಶಾವಸ್ಥೆಯನ್ನು ಪಡೆಯಲಿರುವ ಮರಿಗಳನ್ನು ಕಬಳಸಿ ಬಿಡುತ್ತವೆ. ಆದುದರಿಂದ ಶತ್ರು ಇನ್ನೂ ಮರಿಯಾಗಿರುವಾಗಲೇ ಅವನ್ನು ಚಿವುಟಿಹಾಕುತ್ತವೆ.

**ಮಾನವನ ಅಭಿವೃದ್ಧಿಗೆ ಇರುವೆಯ ಕೊಡುಗೆ:–** ಮನುಷ್ಯನಿಗೆ ಇಲ್ಲದಿರುವ ಶಕ್ತಿಗಳು ಇವಕ್ಕೆ ಇರುವುದರಿಂದಲೇ, ಎಷ್ಟೋ ಹಿಂದಿನ ಕಾಲದಿಂದಲೂ, ಮನುಷ್ಯ ಇವುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆ ಅನ್ನುವುದನ್ನು ರಾವ್ ಅವರು ಉದಾಹರಣೆಗಳೊಂದಿಗೆ ತಿಳಿಸುತ್ತಾರೆ. ಗೆದ್ದಲು, ಮನುಷ್ಯನ ಮನೆ ಮಠ ಸಾಮಗ್ರಿಗಳನ್ನು ತಿಂದು ಹಾಕುತ್ತವೆ. ಇದಕ್ಕೆ ಎದುರಾಗಿ ಉಪಯೋಗಿಸುವ ಸಮರ್ಥವಾದ ಆಯುಧವೆಂದರೆ ಇರುವೆಗಳು. ಅದಕ್ಕಾಗಿ ಮನೆಯ ಸುತ್ತ ಮುತ್ತ ಸಕ್ಕರೆ ಹಾಕುತ್ತಲೋ, ಅಳಿದುಳಿದ ಆಹಾರ ಪದಾರ್ಥ ಹಾಕುತ್ತಲೋ, ಅವನ್ನು ತಮ್ಮಷ್ಟಕ್ಕೆ ತಾವು ಇರುವುದಕ್ಕೆ ಮನುಷ್ಯ ಬಿಡುತ್ತಾನೆ. ಆದ್ದರಿಂದ ಗೆದ್ದಲಿನ ಸಮಸ್ಯೆ

ತಾನೇ ಪರಿಹಾರವಾಗುತ್ತದೆ.

ಏಳೆಂಟು ಶತಮಾನಗಳ ಹಿಂದೆ ಚೀನ ದೇಶದವರು ತಮ್ಮ ಬೆಳೆಗಳನ್ನು ನಾಶಮಾಡಲು ಮೃದುವಾದ ಮೈಯಿನ ಕೀಟಗಳಿಗೆ ವಿರುದ್ಧವಾಗಿ ಈ ಇರುವೆಗಳು ಒಳ್ಳೆಯ ಆಯುಧ ಎನ್ನುವುದನ್ನು ಕಂಡುಕೊಂಡಿದ್ದರು. ತಮ್ಮ ಹಣ್ಣಿನ ತೋಟಗಳ ಸುತ್ತ ಇರುವೆಗಳನ್ನು ಸಾಕುತ್ತಿದ್ದರು. ಕೆಲವರಿಗೆ ಇದರಿಂದ ಇರುವೆಗಳನ್ನು ಹಿಡಿದು ಮಾರುವುದೇ ಒಂದು ಕಸುಬಾಗಿತ್ತು. ಬೆಟ್ಟಗುಡ್ಡಗಳಲ್ಲಿ ಗುಂಪುಗುಂಪಾಗಿ ವಸಾಹತುಗಳನ್ನು ನಿರ್ಮಿಸಿಕೊಂಡು ಬಾಳುವ, ಪ್ರಬಲವಾದ ಫಾರ್ಮಿಕ್ ಆಮ್ಲವನ್ನು ಸುರಿಸುವ ಇರುವೆಗಳನ್ನು ಹಿಡಿದುತಂದು ತೋಟಗಳ ಒಡೆಯರಿಗೆ ಮಾರುತ್ತಿದ್ದರು. ಇರುವೆಗಳನ್ನು ಹಿಡಿಯುವ ರೀತಿಯನ್ನು ಹೀಗೆ ಬಣ್ಣಿಸುತ್ತಾರೆ – "ಹಂದಿಯ ಅಥವಾ ಆಡಿನ ಕೊಬ್ಬು ಸವರಿರುವ ಪಿತ್ತಕೋಶವನ್ನು ಇರುವೆಯ ಗೂಡಿನ ಸಮೀಪದಲ್ಲಿ ನೇತು ಹಾಕುತ್ತಿದ್ದರು. ಜಿಡ್ಡಿನಿಂದ ಕೂಡಿದ ಆಹಾರದ ಆಸೆಗೆ ಇರುವೆಗಳು ಹಿಂಡುಹಿಂಡಾಗಿ ಬಂದು ಅದರ ಒಳಗೆ ಸೇರುತ್ತಿದ್ದವು. ಸುಮಾರು ಇರುವೆಗಳು ಅಲ್ಲಿ ಸೇರಿಕೊಂಡಮೇಲೆ, ಆ ಪಿತ್ತಕೋಶದ ಬಾಯನ್ನು ಕಟ್ಟಿತಂದು ಮಾರಿಬಿಡುತ್ತಿದ್ದರು. ತೋಟದ ಮಾಲಿಕರು ಅವುಗಳನ್ನು ತಮ್ಮ ಹಣ್ಣಿನ ಮರಗಳ ಮೇಲಿಟ್ಟು ಅದರ ಬಾಯನ್ನು ಬಿಚ್ಚಿಡುತ್ತಿದ್ದರು; ಅಲ್ಲದೆ ಇತರ ಮರಗಳಿಗೂ ಅವು ಅಲ್ಲಿಂದ ಹೋಗಿ ಓಡಾಡಲಿ ಎಂಬ ಉದ್ದೇಶದಿಂದ ಆ ಮರದಿಂದ ಇತರ ಹಣ್ಣಿನ ವೃಕ್ಷಗಳಿಗೆ ದಬ್ಬೆಗಳನ್ನು ಕಟ್ಟಿ ಬಿಡುತ್ತಿದ್ದರು." (ಪುಟ. 83)

ಜಪಾನಿನಲ್ಲಿ ಮಾವಿನ ಮರಗಳನ್ನು ನಾಶ ಮಾಡುತ್ತಿದ್ದ ಜೀರುಂಡೆಗಳನ್ನು ಹದ್ದುಬಸ್ತಿನಲ್ಲಿಡಲು ಇರುವೆಗಳನ್ನು ಉಪಯೋಗಿಸುತ್ತಿದ್ದರು. ಆರಬ್ಬರೂ ಅಷ್ಟೆ. ತಮ್ಮ ಖರ್ಜೂರದ ಮರಗಳನ್ನು ಹಾಳು ಮಾಡುತ್ತಿದ್ದ ಒಂದು ಜಾತಿಯ ಬೆಟ್ಟದ ಇರುವೆಗಳನ್ನು ಓಡಿಸಲು ಬೇರೊಂದು ಬಗೆಯ ಇರುವೆಗಳನ್ನು ಬಳಸುತ್ತಿದ್ದರು. ಮಂದಾಕ್ಷಿಯೆಂಬ ಇರುವೆಯ ಬಾಯಿಂದ ಬರಹಗಾರರು ಹೇಳಿಸುತ್ತಾರೆ, "ಆ, ನೋಡಿದೆಯಾ, ನಮ್ಮವರ ಮೇಲೆ ನಮ್ಮನ್ನೆ ಎತ್ತಿ ಕಟ್ಟಿ ಈ ಮಧ್ಯೆ ತಾವು ಬೆಳೆ ಉಳಿಸಿಕೊಂಡರಲ್ಲ.... ಎಂತಹ ಚಾಣಾಕ್ಷರು!" (ಪುಟ. 85).

ಇರುವೆಗಳಿಲ್ಲದೆ ಇದ್ದಿದ್ದರೆ, ಈಗ ಬರುತ್ತಿರುವ ಹತ್ತಿ ಬೆಳೆಯಲ್ಲಿ ಅರ್ಧವೂ ಸಿಗುತ್ತಿರಲ್ಲಿಲ್ಲ. ಹತ್ತಿಯ ಬೆಳೆಗೆ ವಾಡೆಯ ಹುಳು ಹಿಡಿತೆಂದರೆ ಮಾರಿ ಹಿಡಿದಂತೆ, ಅನ್ನುತ್ತಾರೆ ಪ.ವಿ. ನಷ್ಟ ಅಷ್ಟಿಷ್ಟಲ್ಲ. ಪ್ರತಿವರ್ಷವೂ ನೂರಿಪ್ಪತ್ತು ಲಕ್ಷ ರೂಪಾಯಿನ ನಷ್ಟವನ್ನು ಬರಿಯ ಈ ಹತ್ತಿಯ ಹುಳುಗಳೇ ಮಾಡುತ್ತವೆ. ಇರುವೆಗಳು ಈ ಹತ್ತಿಯ ಹುಳುವನ್ನು, ಅದಿನ್ನೂ ಮರಿಯಾಗಿರುವಾಗಲೇ ಅಗಿದು ಮುಗಿಸಿಬಿಡುವುದರಿಂದ ತೊಂದರೆ ಅರ್ಧಕರ್ಧ ಸುಲಭವಾಗಿ ನಿವಾರಣೆಯಾಗುತ್ತದೆ. ಕಾಡನ್ನು ನಾಶಮಾಡುವ ಜೀರುಂಡೆ ಮರಿಗಳು ಹಾಗೂ ಇತರ ಕೀಟಗಳನ್ನು ಕಾಡಿರುವೆಗಳು ಧ್ವಂಸ ಮಾಡುತ್ತವೆ. ಪ್ರತಿವರ್ಷವೂ ಸುಮಾರು ಐವತ್ತು ಸಾವಿರದಿಂದ ಒಂದು ಲಕ್ಷದವರೆಗೆ ಕೀಟಗಳನ್ನು ನಾಶಮಾಡುತ್ತವೆ. ಪ್ರಕ್ರತಿಯ ನಿಯಮ ಅತ್ಯಂತ ವಿಶಿಷ್ಟವಾದದ್ದು. ಅಲ್ಲಿ ಒಬ್ಬರನ್ನೊಬ್ಬರು ನಾಶಮಾಡುವುದಷ್ಟೆ ಅಲ್ಲ. ಪರಸ್ಪರಾವಲಂಬನವೆಂಬುದು ಎಷ್ಟು ಅನಿವಾರ್ಯ ಹಾಗೂ ಗಾಢವಾಗಿದೆ ಎನ್ನುವುದನ್ನು ಈ **ಇರುವೆಯ ಕಥೆ** ಯೆಂಬ ಕಿರುಕಾದಂಬರಿ ವಿಶ್ಲೇಶಿಸುತ್ತದೆ. "ಕಾಡಿರುವೆಗಳು ಇರುವುದು ಎಷ್ಟು ಮುಖ್ಯ ಎಂಬುದೂ, ಅವುಗಳಿಲ್ಲದಿದ್ದರೆ ಕಾಡಿಗೆ ಎಷ್ಟು ನಷ್ಟ." (ಪುಟ. 86) ಎಂಬುದನ್ನು ಪ.ವಿ. ತಿಳಿಸುತ್ತಾರೆ. ಶ್ರೀಲಂಕಾದಲ್ಲಿ ಸರ್ಕಾರ ಅಲ್ಲಿಯ ಕಾಫಿಗಿಡಗಳಿಗೆ ಮುಕುರುತ್ತಿದ್ದ ಕಾಫಿತಿಗಣೆಗಳನ್ನು ಹಿಡಿತದಲ್ಲಿಟ್ಟಿದ್ದರು. ಇರುವೆಗಳ ಔದಾರ್ಯ, ಸಹನೆ, ಸೇವೆಯು ಮನುಷ್ಯ ಲೋಕಕ್ಕೆ ಎಣಿಸಲಾರದಷ್ಟು.

ಇರುವೆಗಳಿಗೆ ಔದಾರ್ಯ, ಸಹನೆ ಇರುವಂತೆ ಹಠವೂ ಬಹಳ ಅನ್ನುತ್ತಾರೆ ಬರಹಗಾರರು. ಅವರು ನೀಡುವ ವಿವರಗಳು ಹೀಗಿವೆ – ಕದನದಲ್ಲೊ, ಶತ್ರು ಪಕ್ಷದವರು ಸಾಯಬೇಕು, ಇಲ್ಲ ಇವುಗಳೇ ಪ್ರಾಣಬಿಡಬೇಕು. ಪ್ರಾಣ ಹೋದರೂ ತಮ್ಮ ಹಿಡಿತವನ್ನು ಸಡಿಲವಾಗಲು ಬಿಡುವುದಿಲ್ಲ. ಈ ಕಾರಣದಿಂದಲೇ ಹಿಂದಿನ ಕಾಲದಲ್ಲಿ, ಗಾಯಗಳನ್ನು ಹೊಲಿಯುವುದಕ್ಕೆ ಮೊದಲು, ಈ ಇರುವೆಗಳನ್ನು ಬಳಸುತ್ತಿದ್ದರು. ಗಾಯದ ಎರಡು ಪಕ್ಕಗಳ ಚರ್ಮವನ್ನು ಜೋಡಿಸಿ ಹಿಡಿದು, ಇರುವೆಗಳು ಆ ಭಾಗವನ್ನು ಉದ್ದಕ್ಕೂ ಕಚ್ಚುವಂತೆ ಮಾಡಿ, ಅವು ಕಚ್ಚಿದಾಗ ಅವುಗಳ ಕೊರಳಿನಿಂದ ದೇಹವನ್ನು ಚಿವುಟಿ ಎಸೆದುಬಿಡುತ್ತಿದ್ದರು. ಗಾಯ ಮಾಗಿದರೂ ಇರುವೆಗಳ ತಲೆಯ ಆ ಹಿಡಿತ ಬಿಡುತ್ತಿರಲ್ಲಿಲ್ಲ. ಸ್ಯೂಡೊರ್ಮ್ಯರ್ಮೆಕ್ಸ ಎನ್ನುವ ಜಾತಿಯ ಇರುವೆಯ ಕಡಿತ ಜ್ವರದ ತಾಪದಿಂದ ನರಳುವ ರೋಗವನ್ನು ಶಮನ ಮಾಡುತ್ತದೆ/ಹಗುರ ಮಾಡುತ್ತದೆಯೆಂಬ ನಂಬಿಕೆ ಇದೆ.

ರೂಯಿಬಾಸ್ ದಕ್ಷಿಣ ಆಫ್ರಿಕಾದಲ್ಲಿ ಸಸ್ಯಗಳಿಂದ ಮಾಡಿದ ಟೀಯನ್ನು ತಯಾರಿಸಲು ಬಳಸುತ್ತಾರೆ. ಇರುವೆಗಳು ಇದರ ಕುಯ್ಲು ಮಾಡಲು ಸಹಾಯ ಮಾಡುತ್ತವೆ. ಗಿಡಗಳು ತಮ್ಮ ಬೀಜಗಳನ್ನು ವ್ಯಾಪಕವಾಗಿ ಚೆದುರಿಸುತ್ತವೆ. ಮನುಷ್ಯರು ಅದನ್ನು ಒಟ್ಟು ಗೂಡಿಸುವುದು ಕಠಿಣವಾದ ಕೆಲಸವೇ ಸರಿ. ಇರುವೆಗಳು ಇದರ ಬೀಜಗಳನ್ನು ತಮ್ಮ ಗೂಡಿನಲ್ಲಿ ಶೇಖರಿಸಿಡುತ್ತವೆ. ಮನುಷ್ಯರು ಆ ಗೂಡುಗಳಿಂದ ಎಲ್ಲಾ ಒಟ್ಟಿಗೆ ಸಂಗ್ರಹಿಸುತ್ತಾರೆ. ಒಂದು ರಾಶಿ/ಕುಪ್ಪೆಯಿಂದ ಅರ್ಧ ಪೌಂಡಿನಷ್ಟು ಬೀಜಗಳಾದರು ಸಿಗುತ್ತವಂತೆ.

**ಉಪಸಂಹಾರ:–** ಪ.ವಿ ಚಂದ್ರಶೇಖರ್‌ರಾವ್ ಅವರು ಬಹಳ ಪ್ರೀತಿಯಿಂದ ಬರೆಯುತ್ತಾರೆ, "ಇರುವೆಗಳು ಲಕ್ಷಾಂತರ ವಿಧವಾದ ಜೀವಿಗಳೊಡನೆ ಹೋರಾಡುತ್ತ ಜೀವನದ ಆಟದಲ್ಲಿ ಸ್ಪರ್ಧಿಸುತ್ತವೆ. ಆಶ್ಚರ್ಯಕರವಾದ ಕೌಶಲ್ಯವನ್ನು, ತಾಳ್ಮೆಯನ್ನು ವ್ಯಕ್ತಪಡಿಸುತ್ತವೆ. ತನಗಿರುವ ಬುದ್ಧಿ ಮತ್ತು ಸ್ಮರಣ ಶಕ್ತಿಗಳಿಂದ, ಆಂತರಿಕವಾದ ಯಾವುದೋ ಪ್ರವೃತ್ತಿಯಿಂದ, ಎಂತಹ ಸನ್ನಿವೇಶದಲ್ಲಿ ಬೇಕಾದರೂ ಬಾಳು ನಡೆಸುತ್ತವೆ. ವಿವಿಧ ಚಟುವಟಿಕೆಗಳಿಂದ, ವಿವಿಧ ರೀತಿಯಲ್ಲಿ ಚಂದವಾಗಿ ಬಾಳುತ್ತದೆ. ಸಾಮರ್ಥ್ಯ, ಸಂಖ್ಯೆ ಹಾಗೂ ಅಕ್ಕರೆಯಿಂದ ತಮ್ಮ ಜಗತ್ತನ್ನು ವಶಪಡಿಸಿಕೊಂಡಿದೆ," (ಪುಟ. 96) ಹಾಗೂ ಉಳಸಿಕೊಂಡಿವೆ ಅನ್ನುವುದು ನಿಸ್ಸಂಶಯ. ಇರುವೆಗಳ ಪ್ರಪಂಚ ದಲ್ಲಿರುವ ಆಹಾರ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ ಬಗ್ಗೆ ಮೇಲೆ ಉಲ್ಲೇಖಿಸಿರುವ ಎಲ್ಲಾ ಮಾಹಿತಿಯನ್ನು ನೀಡಿರುವ ಪ. ವಿ. ಚಂದ್ರಶೇಖರ್‌ರಾವ್ ಅವರು ಹೇಳುತ್ತಾರೆ – "ಈ ಕೃತಿ ಆಸಕ್ತಿಯನ್ನು ಕೆರಳಿಸಿದರೆ ನನ್ನ ಶ್ರಮ ಸಾರ್ಥಕ". ಒಂದು ದಿಕ್ಕಿನಲ್ಲಿ ತಿಳಿಯದೆ ಇದ್ದ ವಿಷಯಗಳನ್ನು ತಿಳಿಸುವ/ಅಥವಾ ತಿಳಿದ್ದದ್ದನ್ನು ಮರೆತಿದ್ದ ಹಿರಿಯ ಓದುಗರಿಗೆ ಮತ್ತೊಮ್ಮೆ ಡೌನ್ ದಿ ಮೆಮೊರಿ ಲೇನ್ ಹೋಗುವಂತೆ ಮಾಡುವ, ಮತ್ತೊಂದೆಡೆ ಕಿರಿಯ ಓದುಗರಿಗೆ ವಿವಿಧ ತಂತ್ರಗಳನ್ನು ಬಳಸಿ, ಆಕರ್ಶಕವಾದ ರೀತಿಯಲ್ಲಿ ಇರುವೆಗಳ ಬಗ್ಗೆ ತಿಳಿಯಲೇ ಬೇಕಾದ ವಿಷಯಗಳನ್ನು ತಿಳಿಸುವ **ಇರುವೆಯ ಕಥೆ** ಹೆಚ್ಚು ಹೆಚ್ಚು ಓದುಗರನ್ನು ತಲಪುವಂತಾಗಲಿ ಎಂದು ಆಶಿಸುತ್ತೇನೆ.

ISSN 2249 - 5754 VIJNANA KANNADA (PRINT)

**ವಿಜ್ಞಾನ ಕನ್ನಡ – 11** **ಸ್ವದೇಶಿ ವಿಜ್ಞಾನ ಆಂದೋಳನ-ಕರ್ನಾಟಕ, ಬೆಂಗಳೂರು**

# ಸಂಪರ್ಕ ಮಾಧ್ಯಮ ಮತ್ತು ಸಂಸ್ಕೃತ ಭಾಷೆ

Dr.M.A.Shruthikirti

Chairperson, P.G.Dept. of Sanskrit, Kuvempu University, Sahydricollege Campus, Shimoga -577204,

ಸಂಸ್ಕೃತ ಯಾವುದೇ ಒಂದು ವರ್ಗದ ಭಾಷೆಯಾಗಿಲ್ಲ. ಉಚ್ಚಾರಣೆಯ ತೊಡಕು ಇದಕ್ಕಿಲ್ಲ. ಜಗತ್ತಿನ ಎಲ್ಲ ವಿದ್ವಾಂಸರೂ ಒಪ್ಪುವ ಅತ್ಯಂತ ವೈಜ್ಞಾನಿಕ ರಚನೆಯಿಂದ ಕೂಡಿದ ಭಾಷೆ ಇದು. ಅತ್ಯಂತ ಸುಭದ್ರ ವ್ಯಾಕರಣದ ಚೌಕಟ್ಟು ಸಂಸ್ಕೃತಕ್ಕಿದೆ. ಇದರಿಂದಾಗಿ ಅತ್ಯಂತ ಶಾಸ್ತ್ರರೀತಿಯಲ್ಲಿಯೇ ಇದರ ಅಧ್ಯಯನ ನಡೆಸಬೇಕಾಗುತ್ತದೆ. ಆದ್ದರಿಂದ ಸಂಸ್ಕೃತ ಭಾಷಾಪಂಡಿತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸ್ವಲ್ಪಮಟ್ಟಿಗೆ ಸರಳೀಕರಣಗೊಳಿಸಲು ಮನವೊಲಿಸಬೇಕಾಗುತ್ತದೆ. ಹೀಗಾದಲ್ಲಿ ಸಂಸ್ಕೃತ ವಿಶ್ವವ್ಯಾಪಕವಾಗುತ್ತದೆ, ಹಾಗೂ ವಿಶ್ವಕ್ಕೇ ಅತ್ಯಂತ ಸಂಪದ್ಭರಿತ, ಸುಸಂಸ್ಕೃತವಾದ, ಅತ್ಯಂತ ಸೂಕ್ತ ಭಾಷೆ ಸಿಗುತ್ತದೆ, ಪರಸ್ಪರರಿಂದ ಉಪಕಾರವಾಗಿ ಜಾಗತೀಕರಣದ ಕಾಲದಲ್ಲಿ ಭಾಷೆಯ ಸಮಸ್ಯೆ ನಿವಾರಣೆಯಾಗುತ್ತದೆ. ಸಂಸ್ಕೃತವು ನಿಜವಾಗಿಯೂ ಅನೇಕ ಶತಮಾನಗಳಷ್ಟು ದೀರ್ಘಕಾಲ ಜನಸಾಮಾನ್ಯರ ಆಡುನುಡಿಯಾಗಿದ್ದಕ್ಕೆ ಪುಷ್ಟಿಯನ್ನೀಯುವ ಪ್ರಮಾಣಗಳನ್ನು ಡಾ. ಕೆ. ಕೃಷ್ಣಮೂರ್ತಿ, ವಿ॥ ಎನ್. ರಂಗನಾಥಶರ್ಮ ಮತ್ತು ವಿ॥ ಎಚ್. ಕೆ. ಸಿದ್ದಗಂಗಯ್ಯ ಇವರು ತಮ್ಮ 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' (ಪುಟ – 30) ಗ್ರಂಥದಲ್ಲಿ ಸಂಗ್ರಹಿಸಿದ್ದಾರೆ. ನಮ್ಮ ಇಚ್ಛಾಶಕ್ತಿಯ ಸಂಕಲ್ಪವಿದ್ದಲ್ಲಿ ಮತ್ತೆ ಸಂಸ್ಕೃತವು ನಮ್ಮ ಭಾರತದಲ್ಲಷ್ಟೇ ಅಲ್ಲದೆ ಇಡೀ ಪ್ರಪಂಚದ ಭಾಷೆಯಾಗಬಹುದು. ಆ ಭಾಷೆಗೆ ಆ ಸಾಮರ್ಥ್ಯವೂ ಇದೆ ಕೂಡ.

ಭಾಷೆಯ ವ್ಯುತ್ಪತ್ತಿ – भाष (व्यक्तायां वाचि) 'अ' (3.3.103) (ಸಂ. – 5). ಬ್ಲಾಕ್ ಹಾಗೂ ಟ್ರೇಗರ್ ಮತ್ತು ಸರ್ಟೆವಾಂಟ್ ಅವರು ಹೇಳುವಂತೆ – 'ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ'. ಭಾಷೆ ಮಾನವನ ಅಪೂರ್ವವಾದ, ಅಸದೃಶವಾದ ಸಂಪತ್ತಾಗಿದೆ. ಎಲ್ಲ ವ್ಯವಹಾರಗಳಿಗೆ ಮಾಧ್ಯಮವಾಗಿ ಅವನ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣವಾಗಿದೆ ಎಂಬುದು, ಇದೀಗ ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ ಭಾರತದಲ್ಲಿ ಇದು ಬಹಳ ಪ್ರಾಚೀನ ಕಾಲದಲ್ಲಿಯೇ ತಿಳಿದಿದ್ದ ಸಂಗತಿಯಾಗಿತ್ತು. ನೇರವಾಗಿ ಹೇಳದಿದ್ದರೂ ಪರೋಕ್ಷವಾಗಿ ಭಾಷೆಯ ಪ್ರಾಮುಖ್ಯತೆಯನ್ನು ವೇದಗಳ ಕಾಲದಲ್ಲಿ ಹೇಳಲಾಗಿದೆ. ಕ್ರಿ. ಶ. 7ನೇ ಶತಮಾನದ ದಂಡಿಯೇ ಹೇಳುವಂತೆ –

इह ि ानु ि ानां ि ानामपि सर्वथा ।<br>
वाचामेव प्रसादेन लोकयात्रा प्रवर्तते ॥<br>
इदं अन्धंतमः कृत्स्नम् जायेत भुवनत्रयं ।<br>
यदि ाब्दाह्वयं ज्योतिरासंसारं न दीप्यते ॥<br>
(काव्याद ि– 1-3, 4)

ದೇಶ – ಪ್ರದೇಶಗಳಿಗೆ ತಕ್ಕಂತೆ ಭಿನ್ನ ಭಿನ್ನವಾದ ಭಾಷೆಗಳಿವೆ. ಭಾಷೆ ಭಿನ್ನವಾದರೂ ಅಭಿವ್ಯಕ್ತಿ ಒಂದೇ ಆಗಿರುತ್ತದೆ. ಆದರೆ ಜಾಗತೀಕರಣ ದಿಂದಾಗಿ ಇಂದು ಪ್ರಪಂಚವೇ ಒಂದು ಮುಷ್ಟಿಯಲ್ಲಿದೆ. ಇಂತಹ ಸ್ಥಿತಿಯಲ್ಲಿ ಜಗತ್ತಿಗೇ ಅನ್ವಯವಾಗುವಂತೆ ಒಂದೇ ಭಾಷೆಯಾದರೆ ಸೂಕ್ತವಾಗಿರುತ್ತ ದೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಸಮ್ಮತವಾಗುತ್ತದೆ. ಅಂತೆಯೇ ಸುಮಾರು ದೇಶಗಳಲ್ಲಿ ಇಂಗ್ಲೀಷ್ ಭಾಷೆ ಈ ಸ್ಥಾನವನ್ನು ಆಕ್ರಮಿಸಿದೆ. ಈ ಕಾರಣದಿಂದಾಗಿ ಹಲವು ಪ್ರಾದೇಶಿಕ ಭಾಷೆಗಳು ಮೂಲೆಗುಂಪಾಗುತ್ತಿವೆ. 'भाषणात् भाषा' ಎನ್ನುವಂತೆ, ಮಾತನಾಡುವವ ರಿಲ್ಲದೇ ಅವನತಿಯ ಅಂಚಿಗೆ ಸಾಗುತ್ತಿದೆ. ಇದನ್ನು ನಾವು ವಿರೋಧಿಸದಿ ದ್ದರೆ, ಅಥವಾ ಪರಿಹಾರ ಸೂಚಿಸದಿದ್ದರೆ ಹಲವು ಭಾಷೆಗಳು ನಾಮಾವಶೇಷವಾಗುತ್ತವೆ. ವಿರೋಧಿಸಿದರೆ ಜಾಗತೀಕರಣದ ಶಕೆಯಲ್ಲಿ ಸರ್ವಜನರನ್ನೂ ತಲುಪಬಲ್ಲ ಭಾಷೆಯನ್ನೇ ವಿರೋಧಿಸಿ, ಜಾಗತೀಕರಣ ವನ್ನೇ ವಿರೋಧಿಸಿದಂತಾಗುತ್ತದೆ. ಹಾಗಾದರೆ ಏನು ಮಾಡಬೇಕು ? ಎಂಬ ಸಮಸ್ಯೆ ಉಂಟಾಗುತ್ತದೆ.

ಇಂತಹ ಸಂದಿಗ್ಧವಾದ ಪರಿಸ್ಥಿತಿಯಲ್ಲಿ ಇದಕ್ಕೆ ಪರಿಹಾರವಾಗಿ ಜಗತ್ತಿಗೇ ಅನ್ವಯವಾಗುವಂತೆ ಯಾವುದೇ ಗೊಂದಲವಿರದ ಭಾಷೆಯೊಂದನ್ನು ಸೂಚಿಸಿದರೆ ಪ್ರಾಯಶಃ ಎಲ್ಲ ಸಮಸ್ಯೆಗಳೂ ಪರಿಹಾರವಾಗಬಹುದು. ಏಕೆಂದರೆ ಇಂಗ್ಲೀಷ್ ಭಾಷೆ ವ್ಯಾವಹಾರಿಕವಾಗಿ ಪ್ರಾಯಶಃ ಸರ್ವಜನಪ್ರಿಯವಾದರೂ ಕೆಲವಾರು ಗೊಂದಲಗಳು, ಸಮಸ್ಯೆಗಳು ಇದ್ದೇ ಇವೆ –

**1) ಉಚ್ಚಾರಣೆಯ ಅಸ್ಪಷ್ಟತೆ** : ಆಂಗ್ಲ ಭಾಷೆಯಲ್ಲಿ ಸ್ವರಗಳ(a, e, i, o, u) ಉಚ್ಚಾರಣೆಯಲ್ಲಿ ಅಸ್ಪಷ್ಟತೆ ಇದೆ. 'a' ಎನ್ನುವ ಸ್ವರವು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಉಚ್ಚಾರಣೆಗೊಳ್ಳಲ್ಪಡುತ್ತದೆ. ಉದಾ : Rama ಎಂಬುದು ರಮಾ, ರಾಮ, ರಾಮಾ, ರಮ ಅಥವಾ ರ್‍ಯಾಮ ಎಂದಾದರೂ ಆಗಬಹುದು. ಏಕೆಂದರೆ Bat ಎನ್ನುವಲ್ಲಿ a ಸ್ವರವು ಯಕಾರವನ್ನೊಳಗೊಳ್ಳುವಂತೆ.

**2) ಪ್ರಾದೇಶಿಕವಾಗಿ ಉಚ್ಚಾರಣೆಯ ಭಿನ್ನತೆ** : ಪ್ರದೇಶಗಳಿಗನುಸಾರ ವಾಗಿ ಒಂದೇ ವಿಧವಾದ ಧ್ವನಿಯು ಬೇರೆ ಬೇರೆ ಅಕ್ಷರಗಳನ್ನೊಳ ಗೊಳ್ಳುತ್ತದೆ. ಉದಾ – 'ಕ' ಉಚ್ಚಾರಣೆಯಾಗುವಾಗ ಭಾರತದಲ್ಲಿ ಕೆಲವೊಂದು ಪದಗಳಲ್ಲಿ 'k' ಬಳಸಿದರೆ ಮತ್ತೆ ಕೆಲವು ಕಡೆ 'c' ಬಳಸಲಾಗುತ್ತದೆ. ಅಮೆರಿಕಾದಲ್ಲಿ ಇದು ವ್ಯತ್ಯಾಸವಾಗುತ್ತದೆ.

ಹೀಗೆ ಇವು ಉದಾಹರಣೆಗಾಗಿ ಮಾತ್ರ. ಇನ್ನೂ ಹಲವು ಗೊಂದಲಗಳಿವೆ. ಮುಖ್ಯವಾಗಿ ಜಾಗತೀಕರಣದ ಇಂದಿನ ಕಾಲದಲ್ಲಿ ಕಂಪ್ಯೂಟರ್ ಅತೀ ಮುಖ್ಯವಾದ ಪಾತ್ರವನ್ನು ವಹಿಸಿದೆ. ಇದಕ್ಕೆ ವ್ಯವಹಾರದ ಭಾಷೆಯಾಗಿ ಇಂಗ್ಲೀಷ್ ಬಳಕೆಯಾಗುತ್ತಿದ್ದು, ಈ ಬಳಕೆಯಲ್ಲಿನ ಗೊಂದಲಗಳ ನಿವಾರಣೆ ಇನ್ನೂ ಆಗಿಲ್ಲ. ಅಲ್ಲದೇ, ಯಾವುದೇ ಒಂದು ಜನಾಂಗದ, ಭಾಷೆ ಇನ್ನೊಂದು ಜನಾಂಗಕ್ಕೆ, ಒಂದು ದೇಶದ ಭಾಷೆ ಇನ್ನೊಂದು ದೇಶಕ್ಕೆ ಪಥ್ಯವಾಗದಿರಬಹುದು. ದೇಶ, ಜನಾಂಗವೇ ಮೊದಲಾದ ಇಂತಹ ಗೊಂದಲಗಳಿರದ, ಸಮರ್ಪಕ, ಶ್ರೇಷ್ಠವಾದ ಭಾಷೆಯನ್ನು ಬಳಸಿದಲ್ಲಿ, ಮೇಲೆ ಹೇಳಿದ ಎಲ್ಲ ಸಮಸ್ಯೆಗಳೂ ದೂರಾಗಬಹುದು. ಹಾಗಾದರೆ ಅಂತಹ ಭಾಷೆ ಯಾವುದು ಎಂದು ಯೋಚಿಸಿದರೆ – ತಕ್ಷಣ ಎಲ್ಲರ ಮನಸ್ಸಿಗೂ ಹೊಳೆಯುವುದು 'ಸಂಸ್ಕೃತ' ಒಂದೇ.

ಸಂಸ್ಕೃತ ಯಾವುದೋ ಒಂದು ವರ್ಗಕ್ಕೆ ಮಾತ್ರ ಸೀಮಿತ ಎನ್ನುವ ಸಂಕುಚಿತ ಭಾವನೆ ಒಂದು ಕಾಲದಲ್ಲಿ ಇತ್ತು. ವೇದಗಳ ಕಾಲದಲ್ಲಿ ಇಂತಹ ಭಾವನೆ ಇರಲಿಲ್ಲ. ಬ್ರಾಹ್ಮಣರ ಭಾಷೆ – ಸಂಸ್ಕೃತವಾಗಿತ್ತು,

ನಿಜ. ಆದರೆ, ಬ್ರಾಹ್ಮಣರಾರು? ಎಂದರೆ 'न जन्मना जायते  ूद्रः कर्मणा द्विज उच्यते' ಹುಟ್ಟಿನಿಂದ ಶೂದ್ರನಾಗುವುದಿಲ್ಲ, ಕರ್ಮದಿಂದ ದ್ವಿಜನಾಗುತ್ತಾನೆ. ಯಾರು ವೇದಾಧ್ಯಯನ, ಅಧ್ಯಾಪನಾದಿಗಳಲ್ಲಿ ತೊಡಗುವರೋ ಅವರು ಬ್ರಾಹ್ಮಣರು. ಹೀಗೆ ಅವರವರ ಕರ್ಮಾನುಸಾರ ಜಾತಿ ನಿರ್ಧರಿತವಾಗುತ್ತಿತ್ತು. ಕ್ರಮೇಣ ಜಾತಿ ಇಂದಿನ ಸ್ವರೂಪ ಪಡೆದು ಕೇವಲ ಒಂದು ವರ್ಗ ಮಾತ್ರ ಸಂಸ್ಕೃತದ ಅಧಿಕಾರಿಗಳು ಎಂಬ ಭಾವನೆ ಬೆಳೆಯಿತು. ಆದರೆ ಇದೀಗ ಮತ್ತೆ ಇತಿಹಾಸ ಮರುಕಳಿಸಬೇಕು, ಮರುಕಳಿಸುತ್ತಿದೆ ಕೂಡ. ಅದಕ್ಕೆ ಉದಾಹರಣೆಯಾಗಿ ಪ್ರೊ॥ ಕಿಶ್ವರ್ ಜಬೀನ್ ನಸ್ರೀನ್‌ರವರನ್ನು[1] ಸುಲೇಖಾ ಮತ್ತು ಮುಬಾರಕ್ ಪಾಷಾ[2] ರವರನ್ನು ಹೆಸರಿಸಬಹುದು. ಕ್ರೈಸ್ತ ಸಮುದಾಯದವರೂ ಸಂಸ್ಕೃತವನ್ನು ಕಲಿಯುತ್ತಾರೆನ್ನುವುದಕ್ಕೆ ಹೇರಳವಾದ ಉದಾಹರಣೆಗಳಿವೆ. (ಮ್ಯಾಕ್ಸ್‌ಮುಲ್ಲರ್–ಮೋಕ್ಷಮೂಲರ, ನಮ್ಮಲ್ಲೇ ಉದಾಹರಣೆ–ಪ್ರೊ॥ ಮೈಕೆಲ್‌ರವರು. ಗುಲ್ಬರ್ಗಾ ವಿ. ವಿ. ನಿ. ದ ಸಂಸ್ಕೃತ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವವರು). ಅಷ್ಟೇ ಅಲ್ಲದೆ ಹಿಂದುಳಿದ ಮತ್ತು ದಲಿತ – ಬುಡಕಟ್ಟು ಸಮುದಾಯದ ಅನೇಕ ವಿದ್ಯಾರ್ಥಿಗಳು ಸಂಸ್ಕೃತ ಅಧ್ಯಯನದಲ್ಲಿ ತೊಡಗಿದ್ದಾರೆ. ಹೀಗಾಗಿ ಇದು ಯಾವುದೇ ಒಂದು ವರ್ಗದ ಭಾಷೆಯಾಗಿಲ್ಲ. ಹೀಗೆ ಬೇರಾವುದೇ ಭಾಷೆಗಿರುವ ಮೊದಲ ತೊಡಕು, ಸಂಸ್ಕೃತಕ್ಕಿಲ್ಲ.

ಇನ್ನು ಉಚ್ಛಾರಣೆಯ ತೊಡಕು ಮುಖ್ಯವಾಗಿ ಇಂಗ್ಲೀಷ್ ಭಾಷೆಗಿರುವಂತೆ ಸಂಸ್ಕೃತ ಭಾಷೆಗಿಲ್ಲ. ಯಾವ ಸ್ವರವಿರುವುದೋ ಅದೇ ಧ್ವನಿ, ಯಾವುದೇ ಸ್ಥಳದಲ್ಲಿ, ಸಮಯದಲ್ಲಿ ಪ್ರಯೋಗಿಸಿದಾಗಲೂ ಬರುವುದು. ಭಾಷೆಯ ಹೆಸರೇ ಅನ್ವರ್ಥಕ. सम्यक् कृतं – समीचीनतयाकृतं – ಜಗತ್ತಿನ ಎಲ್ಲ ವಿದ್ವಾಂಸರೂ ಒಪ್ಪುವಂತೆ ಅತ್ಯಂತ ವೈಜ್ಞಾನಿಕವಾದ ರಚನೆಯಿಂದ ಕೂಡಿದ ಭಾಷೆ – ಸಂಸ್ಕೃತ. ಕ್ರಿ. ಶ. 18ನೇ ಶತಮಾನದ ಅಂತ್ಯದಲ್ಲಿ ಭಾರತಕ್ಕೆ ಈಸ್ಟ್ ಇಂಡಿಯಾ ಕಂಪನಿಯಿಂದ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಲು ನೇಮಿಸಲಾದ ಸರ್ ವಿಲಿಯಂ ಜೋನ್ಸ್‌ರವರೇ ಹೇಳುವಂತೆ (ವೃತ್ತಿಯ ಕಾರಣದಿಂದ ಸಂಸ್ಕೃತ ಕಲಿಯಬೇಕಾದ ಇವರಿಗೆ ಮೊದಲೇ ಇಂಗ್ಲೀಷ್, ಗ್ರೀಕ್, ಲ್ಯಾಟಿನ್ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಅಗಾಧ ಪಾಂಡಿತ್ಯವಿತ್ತು. ಸಂಸ್ಕೃತ ಭಾಷೆಯ ರಚನೆ ಅವರಿಗೆ ಅಚ್ಚರಿಯುಂಟು ಮಾಡಿತು. ಗ್ರೀಕ್, ಲ್ಯಾಟಿನ್ ಮತ್ತು ಪರ್ಷಿಯನ್ ಭಾಷೆಗಳಿಗೂ ಮತ್ತು ಸಂಸ್ಕೃತಕ್ಕೂ ಇರುವ ನಿಕಟ ಸಂಬಂಧವನ್ನು ಇವರು ಗುರುತಿಸಿದರು. ಸಂಸ್ಕೃತದ ಹಸ್ತಪ್ರತಿ ಸಂಗ್ರಹ, ಪರಿಷ್ಕರಣೆ ಮತ್ತು ಅನುವಾದವೇ ಮೊದಲಾದ ಸಂಶೋಧನೆಗಳಿಗಾಗಿ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಸಂಸ್ಥೆಯನ್ನು 1786ರಲ್ಲಿ ಸ್ಥಾಪಿಸುವಾಗ ಆರಂಭದಲ್ಲಿ ಹೇಳಿದ ಮಾತುಗಳಿವು)–'ಸಂಸ್ಕೃತ ಭಾಷೆ ಅದರ ಪ್ರಾಚೀನತೆ ಏನೇ ಇರಲಿ, ಅದ್ಭುತ ರಚನೆಯುಳ್ಳದ್ದಾಗಿದೆ. ಗ್ರೀಕ್‌ಗಿಂತಲೂ ಹೆಚ್ಚು ಪರಿಷ್ಕೃತವಾದುದು. ಲ್ಯಾಟಿನ್‌ಗಿಂತಲೂ ಹೆಚ್ಚು ಸಮೃದ್ಧವಾದುದು. ಅವೆರಡಕ್ಕಿಂತ ಅತ್ಯುತ್ತಮವಾದ ಸಂಸ್ಕೃತವಾದುದು. ಆದರೂ ಕಾಕತಾಳೀಯ ಎಂಬುದಕ್ಕಿಂತಲೂ ಹೆಚ್ಚಿನದಾಗಿ ಅವೆರೆಡೂ ಭಾಷೆಗಳೊಡನೆ ಧಾತುಗಳಲ್ಲಿ ಅಷ್ಟೇ ಅಲ್ಲ, ಪದರೂಪದಲ್ಲಿಯೂ ಸಹ ಸಂಸ್ಕೃತ ಭಾಷೆ ಅತಿ ನಿಕಟಬಾಂಧವ್ಯ ಹೊಂದಿದೆ. ಅದೆಷ್ಟು ಗಾಢವಾಗಿದೆಯೆಂದರೆ ಈ ಮೂರು ಭಾಷೆಗಳನ್ನು ಅಭ್ಯಾಸ ಮಾಡುತ್ತಿರುವ ಯಾವುದೇ ಭಾಷಾ ವಿದ್ವಾಂಸ ಈ ಮೂರೂ ಸಹ ಯಾವುದೋ ಒಂದು ಸಮಾನ ಮೂಲದಿಂದ ಜನಿಸಿರಬೇಕೆಂದುಕೊಳ್ಳದೇ ಇರಲು ಸಾಧ್ಯವಿಲ್ಲ. ಅಂತಹ ಒಂದು ಮೂಲ ಬಹುಶಃ ಈಗ ಉಳಿದಿರಲಾರದು. ಗೋಥಿಕ್ ಮತ್ತು ಕೆಲ್ಟಿಕ್‌ಗಳು ಭಿನ್ನವಾದ ನುಡಿಗಟ್ಟಿನೊಡನೆ ಮಿಶ್ರಣ ಹೊಂದಿದ್ದರೂ, ಸಂಸ್ಕೃತದೊಡನೆಯೇ ಜನಿಸಿದವೆಂದು ಭಾವಿಸಲು ಅಷ್ಟು ಬಲಿಷ್ಠವಲ್ಲದಿದ್ದರೂ ಅಂಥದೇ ಕಾರಣವಿದೆ' ಎಂದು. ಅದುವರೆಗೂ ಗ್ರೀಕ್, ಲ್ಯಾಟಿನ್, ಪರ್ಷಿಯನ್ ಭಾಷೆಗಳೇ ಅತ್ಯಂತ ಪ್ರಾಚೀನ ಎಂದು ಭಾವಿಸಲಾಗಿತ್ತು. ಇವೆಲ್ಲವುಗಳಿಗಿಂತಲೂ ಪ್ರಾಯಶಃ ಪ್ರಾಚೀನವಾದ, ಅತ್ಯಂತ ವೈಜ್ಞಾನಿಕ ರಚನೆಯನ್ನುಳ್ಳ ಹಾಗೂ ಪ್ರಾಯಶಃ ಎಲ್ಲ ಶಾಸ್ತ್ರಗಳ ಮೂಲವೂ ಇದೇ ಭಾಷೆಯಲ್ಲಿ ರಚಿಸಲ್ಪಟ್ಟಿರುವುದರಿಂದಲೂ ಸಂಸ್ಕೃತ ಭಾಷೆ ಸರ್ವಜನ ಮಾನ್ಯವಾಗಬಲ್ಲ ಅರ್ಹತೆಯನ್ನು ಹೊಂದಿದೆ ಎನ್ನಬಹುದು.

'एको  ब्दः सुप्रयुक्तः सम्यक् ज्ञातः स्वर्गे लोके कामधुग्भवति' ಇದು ಸಂಸ್ಕೃತದಲ್ಲಿರುವ ಒಂದು ಉಕ್ತಿ. ಒಂದೇ ಒಂದು ಶಬ್ದವನ್ನು ಸರಿಯಾಗಿ ತಿಳಿದುಕೊಂಡು, ಸರಿಯಾದ ರೀತಿಯಲ್ಲಿ ಉಚ್ಛರಿಸಿದರೆ ಅದು ಸ್ವರ್ಗಲೋಕದಲ್ಲಿ ಬೇಡಿದ್ದನ್ನು ಕೊಡುತ್ತದೆಂಬ ಹೇಳಿಕೆಯಿಂದ ಉಚ್ಛಾರಣೆಗಿರುವ ಮಹತ್ತ್ವ ತಿಳಿಯುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿನ ಕುಟುಂಬ ವ್ಯವಸ್ಥೆಯಲ್ಲಿ ಶಿಶು ಬೆಳೆಯುವ ಹಂತದಲ್ಲಿ, ಮಾತು ಕಲಿಯುವ ಹಂತದಿಂದಲೇ ಶಿಕ್ಷಣ ಪ್ರಾರಂಭವಾಗುತ್ತದೆ. ಆಗಿನಿಂದಲೇ ಅಮರಕೋಶ, ಸುಭಾಷಿತ, ದೇವರ ಶ್ಲೋಕ, ಹಿಂದೂ ಪಂಚಾಗಗಳ ಕಲಿಸುವಿಕೆ ಪ್ರಾರಂಭವಾಗಿ, ಮುಂದೆ ಅಂತಹ ಮಗುವಿಗೆ ಉಚ್ಛಾರಣೆಯಲ್ಲಿ ಯಾವುದೇ ತೊಂದರೆಯಾಗುವುದಿಲ್ಲ. ಅಷ್ಟೇ ಅಲ್ಲದೇ ಸಂಸ್ಕೃತ ಭಾಷೆಯನ್ನು ಐಚ್ಛಿಕವಾಗಿ ಆಯ್ದುಕೊಂಡ ಮಕ್ಕಳೇ ಪ್ರಾಯಶಃ ಶೈಕ್ಷಣಿಕಪರೀಕ್ಷೆಗಳಲ್ಲಿ ಅಗ್ರಸ್ಥಾನ ಕಾಯ್ದುಕೊಂಡ ಹಾಗೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆಯಾದ ಉದಾಹರಣೆಗಳು ನಮ್ಮ ಮುಂದೆ ಹೇರಳ. ಹಾಗಾಗಿ ಸಂಸ್ಕೃತ ಜಗತ್ತಿನ ಭಾಷೆಯಾಗಲು ಸೂಕ್ತವಾದುದು.

ಭಾಷಾಶಾಸ್ತ್ರಜ್ಞರ ಪ್ರಕಾರ ಸಂಸ್ಕೃತವು ಇಂಡೋ–ಯೂರೋಪಿಯನ್ ಭಾಷಾ ಪರಿವಾರಕ್ಕೆ ಸೇರಿದ್ದಾದರೂ, ಇದೇ ಪರಿವಾರದ ಇಂಗ್ಲೀಷ್ ಭಾಷೆಯೂ ಸೇರಿದಂತೆ, ಬೇರೆ ಪರಿವಾರದ ಭಾಷೆಗಳಾದ ಕನ್ನಡವೇ ಮೊದಲಾದ ಭಾರತೀಯ ಭಾಷೆಗಳ ಮೇಲಷ್ಟೇ ಅಲ್ಲದೇ (ದ್ರಾವಿಡ ವಂಶ), ಸರ್ ವಿಲಿಯಂ ಜೋನ್ಸ್‌ರವರೇ ಹೇಳಿದಂತೆ ಗ್ರೀಕ್, ಲ್ಯಾಟಿನ್, ಪರ್ಷಿಯನ್ ಭಾಷೆಗಳ ಮೇಲೂ ಗಾಢ ಪ್ರಭಾವ ಬೀರಿದೆ. ಹಾಗಾಗಿ ಜಗತ್ತಿನ ಯಾವುದೇ ಜನಾಂಗಕ್ಕೂ ಸಂಸ್ಕೃತವನ್ನು ಕಲಿಯುವುದು ಹೊಸ ಸಂಗತಿಯಾಗುವುದಿಲ್ಲ. ಅದೂ ಅಲ್ಲದೇ ಇದರ ಲಿಪಿ – 'ದೇವನಾಗರೀ'. ಇದೇ ಲಿಪಿಯನ್ನು ಹಿಂದೀ ಭಾಷೆಯೂ ಹೊಂದಿದ್ದು, ಹಿಂದೀ ಭಾಷಿಕರಿಗೂ ಕೂಡ ಇದರ ಕಲಿಯುವಿಕೆ ಕ್ಲಿಷ್ಟವಾಗಲಾರದು.

ಸಂಸ್ಕೃತ ಅತ್ಯಂತ ಮಂಗಳಕರವಾದ ಭಾಷೆ. ನಮ್ಮ ಕನ್ನಡವೇ ಮೊದಲಾದ ಭಾಷೆಗಳಲ್ಲಿ ಬೈಗುಳ ಶಬ್ದಗಳನ್ನು ಸಂಸ್ಕೃತದಲ್ಲಿ ಪ್ರಯೋಗಿಸಿದರೆ ಆ ಬೈಗುಳ – ಬೈಗುಳವೆನ್ನಿಸಲಾರದು, ಅಂತಹ ಭಾಷೆ ಇದು. ಯಾವುದೇ ಸಭೆ ಸಮಾರಂಭಗಳಲ್ಲಿ ಸಂಸ್ಕೃತದ ಒಂದು ವಾಕ್ಯ, ಶ್ಲೋಕಗಳ ಪ್ರಯೋಗದಿಂದ ಆ ಮಾತುಗಳಿಗೇ ತೂಕ ಬರುತ್ತದೆ. ಅಷ್ಟೇ ಅಲ್ಲದೇ ಆ ಮಾತುಗಾರರ ಗೌರವವೂ ಹೆಚ್ಚುತ್ತದೆ. ಹಾಗಾಗಿ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಮಾತನ್ನು ಸುಳ್ಳು ಮಾಡಿ 'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆಯ ಮಾತನ್ನು ಸುಳ್ಳು ಮಾಡಲು, ನಮ್ಮದೇ ಭಾಷೆಯಾದ ಸಂಸ್ಕೃತವೇ ಈ ಎಲ್ಲ ಸಮಸ್ಯೆಗಳಿಗೂ ಮದ್ದು ಎಂದು ನಿರೂಪಿಸುವ ಸದವಕಾಶ, ಸುಸಮಯ ಈಗ ನಮ್ಮ ಮುಂದಿದೆ. ಆದರೆ ಈ ರೀತಿ ಮಾಡುವಾಗ ತೊಂದರೆಗಳಿಲ್ಲವೇ? ಎಂಬ ಪ್ರಶ್ನೆ ಬರುತ್ತದೆ.

ಏಕೆಂದರೆ ಅತ್ಯಂತ ಸುಭದ್ರವಾದ ವ್ಯಾಕರಣದ ಚೌಕಟ್ಟು ಸಂಸ್ಕೃತಕ್ಕಿದೆ. ಇದರಿಂದಾಗಿ ಸಂಸ್ಕೃತವನ್ನು ಸರಳೀಕರಣಗೊಳಿಸುವುದು ಕಷ್ಟ. ಅತ್ಯಂತ ಶಾಸ್ತ್ರರೀತಿಯಲ್ಲಿಯೇ ಇದರ ಅಧ್ಯಯನ ನಡೆಸಬೇಕಾಗುತ್ತದೆ. ಇಲ್ಲವಾದರೆ ಸಂಪ್ರದಾಯವಾದಿಗಳ ವಿರೋಧ ಎದುರಿಸಬೇಕಾಗುತ್ತದೆ. ಆದ್ದರಿಂದ ಈ ಸಮಸ್ಯೆಯನ್ನು ನಿವಾರಿಸಲು ಸಂಸ್ಕೃತ ಭಾಷಾಪಂಡಿತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಸಂಸ್ಕೃತವನ್ನು ಸ್ವಲ್ಪಮಟ್ಟಿಗೆ ಸರಳೀಕರಣ ಗೊಳಿಸಲು ಮನವೊಲಿಸಬೇಕಾಗುತ್ತದೆ. ಹೀಗೆ ಸರಳೀಕರಣಗೊಳಿಸಿದಲ್ಲಿ ಸಂಸ್ಕೃತ ವಿಶ್ವವ್ಯಾಪಕವಾಗುತ್ತದೆಂದೂ, ಹಾಗೂ ವಿಶ್ವಕ್ಕೇ ಅತ್ಯಂತ ಸಂಪದ್ಭರಿತವಾದ, ಸುಸಂಸ್ಕೃತವಾದ, ಅತ್ಯಂತ ಸೂಕ್ತವಾದ ಭಾಷೆ ಸಿಗುತ್ತದೆಂದೂ, ಪರಸ್ಪರರಿಂದ ಉಪಕಾರವಾಗುವುದೆಂದೂ ಅವರ ಮನವೊಲಿಸಿದಲ್ಲಿ ಇದು ಸಾಧ್ಯವಾಗಿ ಜಾಗತೀಕರಣದ ಕಾಲದಲ್ಲಿ ಭಾಷೆಯ ಸಮಸ್ಯೆ ನಿವಾರಣೆಯಾಗುತ್ತದೆ.

ಸಂಸ್ಕೃತವು ಜನಬಳಕೆಯ ಭಾಷೆಯಾಗಬಲ್ಲದೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ ? ಇದನ್ನು ಕುರಿತಾಗಿ ಹಲವು ಅಭಿಪ್ರಾಯಗಳನ್ನೂ ನೋಡಬಹುದು– ಪ್ರಾಕೃತಭಾಷೆ ಜನಸಾಮಾನ್ಯರ ಆಡುನುಡಿಯಾಗಿದ್ದು, ಸಂಸ್ಕೃತವು ಸಾಮಾನ್ಯ ಜನರ ಭಾಷೆಯಾಗಿರದೆ, ಅದರ ಪರಿಷ್ಕರಣ ವೆಂಬುದು ಕೆಲವರ ಮತ. ಈ ಮತದಂತೆ ಸಂಸ್ಕೃತ ಭಾಷೆಯು ವಿದ್ವಜ್ಜನರ ಭಾಷೆಯಾಗಬಹುದೇ ಹೊರತು ಜನಸಾಮಾನ್ಯರ ನುಡಿಯಾಗಿರುವುದು ಸಾಧ್ಯವಿಲ್ಲವೆಂದಿದ್ದಾರೆ. ಅಲ್ಲದೇ, ಪಾಶ್ಚಾತ್ಯ ವಿದ್ವಾಂಸರಲ್ಲಿ ವೆಬರ್, ಹೋರ್ನ್ಲೆ, ಗ್ರಿಯರ್ಸ್ನ್, ಮುಂತಾದವರು ಈ ವಾದದ ಅನುಯಾಯಿಗಳು ಆಗಿರುವರು. ಆದರೆ ಈ ವಿಚಾರವನ್ನು ಇಂದು ಸಂಪೂರ್ಣವಾಗಿ ನಿರಾಕರಿಸಲಾಗಿದೆ. ಭಾಷಾಶಾಸ್ತ್ರದ ಐತಿಹಾಸಿಕ ಮೂಲವಿಚಾರಣೆ ಈ ವಾದವನ್ನು ಅಲ್ಲಗಳೆಯಲು ಸಮರ್ಥವಾಗುತ್ತದೆ. ಯಾರೂ ಎಂದೂ ಒಂದು ನೂತನ ಭಾಷೆಯನ್ನು ಸೃಷ್ಟಿಸಲಾರರು. ಸಂಸ್ಕೃತವು ನಿಜವಾಗಿಯೂ ಅನೇಕ ಶತಮಾನಗಳಷ್ಟು ದೀರ್ಘಕಾಲ ಜನಸಾಮಾನ್ಯರ ಆಡುನುಡಿಯಾಗಿ ಇದಕ್ಕೆ ಪುಷ್ಟಿಯನ್ನೀಯುವ ಇತರ ಪ್ರಮಾಣಗಳನ್ನೂ ಡಾ. ಕೆ. ಕೃಷ್ಣಮೂರ್ತಿ, ವಿದ್ವಾನ್ ಎನ್. ರಂಗನಾಥಶರ್ಮ ಮತ್ತು ವಿದ್ವಾನ್ ಎಚ್. ಕೆ. ಸಿದ್ಧಗಂಗಯ್ಯ ಇವರು ತಮ್ಮ 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' (ಪುಟ – 30) ಗ್ರಂಥದಲ್ಲಿ ಈ ಕೆಳಗಿನಂತೆ ಸಂಗ್ರಹಿಸಿದ್ದಾರೆ :

1. ಪಾಣಿನಿಗೆ ಮುಂಚೆ ಸಂಸ್ಕೃತ ಭಾಷೆ ಜನರ ಆಡುನುಡಿಯಾಗಿತ್ತು. ಬೇರಾವ ಭಾಷೆಯೂ ವ್ಯವಹಾರಕ್ಕೆ ಭಾರತದಲ್ಲಿರಲಿಲ್ಲ.
2. ಚರಕಸಂಹಿತೆಯ ಕಾಲದಲ್ಲಿಯೂ ಸಂಸ್ಕೃತವೇ ಜನರ ನುಡಿಯಾಗಿತ್ತು.
3. ವಾತ್ಸಾಯನನ ಕಾಮಸೂತ್ರದಲ್ಲಿ ಸಭ್ಯರು ಸಂಸ್ಕೃತವನ್ನು ಬಲ್ಲವರಾಗಿರಬೇಕೆಂಬ ಮಾತು ಬರುತ್ತದೆ.
4. ಹ್ಯೂ–ಎನ್–ತ್ಸಾಂಗನ ಹೇಳಿಕೆಯಂತೆಯೂ ಜನರು ವಾದ–ವಿವಾದಕ್ಕೆಲ್ಲ ಸಂಸ್ಕೃತವನ್ನು ಬಳಸುತ್ತಿದ್ದರು.
5. ಜೈನಲೇಖನ ಸಿದ್ಧರ್ಷಿಯು (ಕ್ರಿ. ಶ. 906) ಸಂಸ್ಕೃತವೇ ಎಲ್ಲಕ್ಕಿಂತ ಸರಳವಾದ ಭಾಷೆಯೆನ್ನುತ್ತಾನೆ.
6. ಜನಸಾಮಾನ್ಯರ ಮಾಟ ಮಂತ್ರಗಳಿಗೂ ಸಂಸ್ಕೃತ ಭಾಷೆ ಬಳಕೆಯಾಗುತ್ತಿದ್ದಿತು.
7. ಧನುರ್ವಿದ್ಯೆ, ಗಾನವಿದ್ಯೆ, ಶಿಲ್ಪಕಲೆ, ನಾಟ್ಯವಿದ್ಯೆ, ರಾಜನೀತಿ ಮುಂತಾದ ಲೌಕಿಕ ವಿಷಯಗಳಲ್ಲಿ ಶಿಕ್ಷಣವನ್ನು ಸಂಸ್ಕೃತ ಭಾಷೆಯಲ್ಲಿಯೇ ಕೊಡುತ್ತಿದ್ದುದಕ್ಕೆ ಆಯಾ ಗ್ರಂಥಗಳೇ ಸಾಕ್ಷಿಯಾಗಿವೆ.
8. ಪಾಣಿನಿಯು ಸಂಸ್ಕೃತವನ್ನು 'ಭಾಷಾ' ಎಂದೇ ಹೆಸರಿಸಿದ್ದಾನೆ. ಆಡದಿದ್ದುದು 'ಭಾಷಾ' ಎನಿಸಲಾರದು. ಆದ್ದರಿಂದ ನಿಶ್ಚಿತವಾಗಿಯೂ ಸಂಸ್ಕೃತವು ವ್ಯಾವಹಾರಿಕ ಭಾಷೆಯೇ ಆಗಿದ್ದಿರಬೇಕು.
9. ಯಾಸ್ಕನ ನಿರುಕ್ತದಲ್ಲಿಯೇ 'ಪ್ರಾಚ್ಯೇಷು', 'ಉದೀಚ್ಯೇಷು' ಇತ್ಯಾದಿ ಪ್ರಾಂತೀಯ ಭಾಷಾ ಭೇದಗಳ ಉಲ್ಲೇಖವಿದೆ. ವ್ಯಾವಹಾರಿಕ ಭಾಷೆಯಲ್ಲಿ ಮಾತ್ರ ಪ್ರಾಂತೀಯ ಭೇದಗಳು ಬರುವುದು ಸಾಧ್ಯ.
10. ಪಾಣಿನಿಯು ಅಭಿವಾದನ ಕಾಲದಲ್ಲಿ ಸಂಬೋಧಿಸುವಾಗ ಹೇಗೆ ಹೇಳಬೇಕೆಂದು ವಿಧಿಸುವಾಗ ಕೆಳವರ್ಗದವರನ್ನೂ ಹೆಸರಿಸಿ ಹೇಳುತ್ತಾನೆ. ಅವರಿಗೂ ಸಂಸ್ಕೃತ ತಿಳಿಯುತ್ತಿದ್ದ ವಿಷಯ ಇದರಿಂದ ಸೂಚಿತವಾಗುತ್ತದೆ.
11. ವ್ಯಾಕರಣವು ಭಾಷೆಯನ್ನು ನಿರ್ಮಾಣ ಮಾಡುವುದಿಲ್ಲ, ವ್ಯವಹಾರದಲ್ಲಿರುವ ಶಬ್ದಗಳ ಸಾಧೂಚ್ಚಾರಣೆಯನ್ನು ಕಲಿಸುತ್ತದೆಂದು ಪತಂಜಲಿ ಸ್ಪಷ್ಟವಾಗಿ ಮಹಾಭಾಷ್ಯದಲ್ಲಿ ಹೇಳಿದ್ದಾನೆ.
12. ಬಿಲ್ಹಣನು (ಕ್ರಿ. ಶ. 1060) ಕಾಶ್ಮೀರದ ಗಂಡಸರೂ, ಹೆಂಗಸರೂ ಸಂಸ್ಕೃತ–ಪ್ರಾಕೃತಗಳೆರಡರಲ್ಲೂ ಪ್ರಾವೀಣ್ಯ ಪಡೆದಿದ್ದರೆಂದು ವರ್ಣಿಸುತ್ತಾನೆ.
13. ಬಾಲಕರ ಪಾಠಕ್ಕೆಂದು ರಚಿತವಾದ 'ಪಂಚತಂತ್ರ' ಸಂಸ್ಕೃತದಲ್ಲಿದೆ. ಹೀಗೆ ಎಲ್ಲ ಆಧಾರಗಳನ್ನು ಗಮನಿಸಿದರೆ ಸಂಸ್ಕೃತವು ಜನಭಾಷೆಯಾಗಿತ್ತೆಂಬ ಮಾತು ಸ್ಪಷ್ಟವಾಗುತ್ತದೆ.

**ಉಪಸಂಹಾರ :** ಜಗತ್ತಿನ ಅತ್ಯಂತ ಶ್ರೀಮಂತ ಭಾಷೆ ಸಂಸ್ಕೃತ. ಪ್ರಾಯಶಃ ಒಬ್ಬ ಕವಿ ತನ್ನ ಹೃದಯದ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಅತ್ಯಂತ ಸೂಕ್ತವಾದ ಭಾಷೆ ಇದಾಗಿದೆ. ಆದ್ದರಿಂದಲೇ ಏನೋ ಎಲ್ಲ ಬಗೆಯ ವಿಷಯಗಳೂ, ರಹಸ್ಯವಾದ ವಿಷಯಗಳೂ ಸೇರಿದಂತೆ ಸಂಸ್ಕೃತ ಭಾಷೆಯಲ್ಲಿ ರಚಿಸಲ್ಪಟ್ಟಿವೆ. 'यदिहास्ति तदन्यत्र, यन्नेहास्ति न तत् क्वचित्' ಎನ್ನುವುದು ಸಂಸ್ಕೃತಕ್ಕೇ ಸೂಕ್ತವಾಗುತ್ತದೆ. 'ಸೂಪರ್ ಕಂಪ್ಯೂಟರ್'ಗೂ ಅತ್ಯಂತ ಸೂಕ್ತವಾದ ಭಾಷೆ ಎನ್ನುವುದೂ ಕೂಡ ಸಂಸ್ಕೃತಕ್ಕೇ ಸಲ್ಲಲು ತಡವಿಲ್ಲವೆನಿಸುತ್ತಿದೆ. ಮೊದಲು ಸರ್ವ ವರ್ಗದವರ ಭಾಷೆಯಾಗಿದ್ದು, ಕಾರಣಾಂತರಗಳಿಂದ ಆ ನಂತರ ಒಂದು ವರ್ಗಕ್ಕೆ ಸೀಮಿತವಾಗಿ, ಇದೀಗ ಮತ್ತೆ ಸರ್ವಜನಾಂಗದ ಭಾಷೆಯಾಗುತ್ತಿರುವ ಈ ಭಾಷೆಯಲ್ಲಿ ವ್ಯಕ್ತಪಡಿಸಿದಷ್ಟು ಸುಂದರವಾಗಿ, ಮಧುರವಾಗಿರುವ ಸಾಹಿತ್ಯರಚನೆ ಮತ್ತ್ಯಾವುದೇ ಭಾಷೆಯಲ್ಲಿಲ್ಲ ವೆನ್ನಬಹುದು. ಈ ಭಾಷೆಯಲ್ಲಿರುವ ಒಂದೊಂದು ವಿಷಯವೂ ಒಂದೊಂದು ಪ್ರೌಢಪ್ರಬಂಧಕ್ಕೆ ವಿಷಯವಾಗಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಆದ ಕಾರಣ ಸಂಸ್ಕೃತ ಭಾಷೆಯನ್ನು ಜಗತ್ತಿನ ಭಾಷೆಯನ್ನಾಗಿಸುವಲ್ಲಿ ನಾವೆಲ್ಲ ಭಾಷಾಭಿಮಾನಿಗಳೂ ಶ್ರಮಿಸೋಣ ಎಂದು ನನ್ನ ಕೋರಿಕೆ. ಈ ಭಾಷೆ ಜಗತ್ತಿನ ಸಂಪರ್ಕ ಭಾಷೆಯಾಗಿ, ಅಲ್ಲಲ್ಲಿ ಪ್ರಾದೇಶಿಕ ಭಾಷೆಗಳಿಗೂ ಕೂಡ ಅಷ್ಟೇ ಮಾನ್ಯತೆಯನ್ನು ನೀಡಿ ಉಳಿಸಬೇಕು. ಅದರ ಮೂಲಕ, ಅವೂ ಕೂಡ ಉಳಿದು ಬೆಳೆಯುವಲ್ಲಿ ಸಂಸ್ಕೃತವು ತೊಡಕಾಗಲಾರದು ಎಂಬುದು ಅಭಿಮತ. ಸಂಸ್ಕೃತವು ನಮ್ಮ ಸನಾತನ ಭಾರತೀಯ ಸಂಸ್ಕೃತಿಯ ಜೀವನಾಡಿ. ಇದು ಈಗ ಸಾಮಾನ್ಯ ಜನರ ವ್ಯಾವಹಾರಿಕ ಭಾಷೆಯಾಗಿಲ್ಲದಿದ್ದರೂ, ಲಕ್ಷಾಂತರ ಮನುಷ್ಯರ ಪ್ರತಿದಿನದ ಸಹಜ ಬಳಕೆಯ ಭಾಷೆಯಾಗಿದೆ. ಇಸ್ರೇಲ್ ದೇಶದ ಸಾಂಪ್ರದಾಯಿಕ ಭಾಷೆ ಹೀಬ್ರೂ. ಅದು ಎಂದೋ ಜನರ ಬಳಕೆಯಿಂದ ದೂರವಾಗಿ ಅವನತಿಯತ್ತ ಸಾಗಿತ್ತು. ಆದರೆ ಯೆಹೂದಿಗಳ ಸತತ ಪರಿಶ್ರಮದ ಫಲವಾಗಿ ಇಂದು ಅದು ಮತ್ತೆ ಆ ದೇಶದ ಜನರ

ಆಡುಭಾಷೆಯಾಗಿದೆ. ಹಾಗೇ ನಮ್ಮ ಇಚ್ಛಾಶಕ್ತಿಯ ಸಂಕಲ್ಪವಿದ್ದಲ್ಲಿ ಮತ್ತೆ ಸಂಸ್ಕೃತವು ನಮ್ಮ ಭಾರತದಲ್ಲಷ್ಟೇ ಅಲ್ಲದೆ ಇಡೀ ಪ್ರಪಂಚದ ಭಾಷೆಯಾಗಬಹುದು. ಆ ಭಾಷೆಗೆ ಆ ಸಾಮರ್ಥ್ಯವೂ ಇದೆ ಕೂಡ. ಇದು ಸಂಕಲ್ಪಶಕ್ತಿಯಿಂದ ಮಾತ್ರ ಸಾಧ್ಯ, ಉಪಕರಣದಿಂದಲ್ಲ – 'क्रियासिद्धिः सत्त्वे भवति महतां नोपकरणे' .

[1] . ಅಲಹಾಬಾದ್ ವಿ.ವಿ.ನಿ.ದ ಸಂಸ್ಕೃತ ವಿಭಾಗದ ಅಧ್ಯಕ್ಷೆ. 6ನೇ ತರಗತಿಯಿಂದಲೇ ಸಂಸ್ಕೃತ ಭಾಷಾಧ್ಯಯನ, ಸಂಸ್ಕೃತ ಸ್ನಾತಕೋತ್ತರ ಪದವಿ ಪಡೆದ ಮೊದಲ ಮುಸ್ಲಿಂ ಮಹಿಳೆ – ಸಂಜಯ್ ಪಾಂಡೆ, ಅಲಹಾಬಾದ್, ಪ್ರಜಾವಾಣಿ–24.08.14. ಪುಟ–7.

[2] . ಈ ಇಬ್ಬರೂ ಕು.ವಿ.ವಿ.ಯ ಸಂ. ಸ್ನಾ. ವಿಭಾಗದಲ್ಲಿ ಅಧ್ಯಯನ ಮಾಡಿ ಇದೀಗ ಸಂಸ್ಕೃತ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರು.

**ಪರಾಮರ್ಶನಾ ಗ್ರಂಥ :**

1. ಸಂಸ್ಕೃತ ಸಾಹಿತ್ಯ ಪರಿಚಯ – Dr. M. N. ಜೋಷಿ, ರೂಪಾ ಪಬ್ಲಿಕೇಶನ್, ಧಾರವಾಡ – 2002.
2. ದಂಡಿಯ ಕಾವ್ಯಾದರ್ಶ

---

## ಪಂಡಿತ ತಾರಾನಾಥರ ಜೀವನ ಮತ್ತು ಸಾದನೆ.

ಡಾ.ಶೀಲಾದಾಸ
ಸಹಪ್ರಾಧ್ಯಾಪಕರು, ಎಲ್. ವಿ.ಡಿ. ಮಹಾವಿದ್ಯಾಲಯ, ರಾಯಚೂರು.೫೮೪೧೦೩.

**ಪ್ರಬಂಧ ಸಾರ**:– ಭಾರತದ ಇತಿಹಾಸವನ್ನು ಅವಲೋಕಿಸಿದರೆ ಅನೇಕಸಾಧು–ಸಂತರು,ಋಷಿಮುನಿಗಳು,ಮಹನೀಯರು, ಸಮಾಜಸುಧಾರಕರು ಆಗಿಹೋಗಿದ್ದಾರೆ.ಅಂಥವರಲ್ಲಿ ಪಂಡಿತ ತಾರಾನಾಥರು ಒಬ್ಬರು.ಇವರು ಕನ್ನಡನಾಡು ಕಂಡಂಥ ಅಪರೂಪದ ವ್ಯಕ್ತಿ.

ಅವರು ಮೂಲತ:ಕರಾವಳಿ ತೀರದವರು.ಆದರೆ ಅವರು ಸೇವೆಸಲ್ಲಿಸಿದ್ದು ಹೈದ್ರಾಬಾದ ಕರ್ನಾಟಕದಲ್ಲಿ.ವಿಶೇಷವಾಗಿ ರಾಯಚೂರು ಮತ್ತು ಬೀದರಜಿಲ್ಲೆಯಲ್ಲಿ.ಇವರು ಸ್ವತಂತ್ರಹೋರಟಗಾರರು,ಯೋಗಿಗಳು,ಶಿಕ್ಷಣಪ್ರೇಮಿಗಳು,ಸಂಗೀತಗಾರರು,ಅಭಿನಯಗಾರರು, ಪತ್ರಕರ್ತರು, ವೈದ್ಯರು, ಸಾಹಿತಿಗಳು–ಃಹೀಗೆ ಅನೇಕ ಮುಖಗಳನ್ನು ಹೊಂದಿದವರು.ಸಾಮಾನ್ಯ ಜನರಿಗಾಗಿ ತಮ್ಮನ್ನು ಸಮರ್ಪಿಸಿಕೊಂಡವರು.ಇಂಥಾ ಮಹನಿಯರ ಜೀವನಸಾಧನೆ ಯುವಕರಿಗೆ ಅನುಕರಣೀಯ, ಆದರ್ಶನೀಯವಾಗಿದೆ.

ಗಾಂಧೀಜಿಯವರ ತ್ಯಾಗ,ಅರವಿಂದರ ಯೋಗಾ,ಟ್ಯಾಗೋರರ ಕಲೆ,ಲೋಕಮಾನ್ಯರ ಜಾಣ್ಮೆಮತ್ತು ದೂರದೃಷ್ಟಿಗಳು ಎಕಾಲದಲ್ಲಿ ಮೈಗೂಡಿದವ್ಯಕ್ತಿಯಂದರೆ ಪಂಡಿತ ತಾರಾನಾಥರು.ಕರ್ನಾಟಕ ಕಂಡಂಥ ಅಪರೂಪದ ವ್ಯಕ್ತಿ.ಎಂದು ಕಡಪಾ ರಾಗವೇಂದ್ರರಾಯರು ಇವರ ವ್ಯಕ್ತಿತ್ವವನ್ನು ಚಿತ್ರಸಿದ್ದಾರೆ.

ತಂದೆ ರಂಗರಾವ ತಾಯಿ ರಾಜೀವಮ್ಮಾ,ಕೊಂಕಣಿ ಸಾರಸ್ವತ ಬ್ರಾಹ್ಮಣ ಕುಟುಂಬ.ರಂಗರಾವರು ಮೂಲತಃ ಶ್ರೀಮಂತ ಕುಟುಂಬ ದವರು.ಆದರೆ ಸ್ವಾಭಿಮನಿಗಳು. ಯಾವುದೋಸಂದರ್ಭದಲ್ಲಿ ಮನೆಯಿಂದ ಹೊರಬಂದ ರಂಗರಾವಅವರು ಆಸ್ತಿಯನ್ನು ಪಡೆದು ಕೊಳ್ಳಲಿಲ್ಲಾ.ಹೀಗಾಗಿ ಅವರಜೀವನ ಅಷ್ಟೇನು ಸುಲಭವಾಗಿ ರಲಿಲ್ಲಾ. ಇಂಥಾಕುಟುಂಬದಲ್ಲಿ ತಾರಾನಾಥರು ಜೂನ್ 5,1891 ರಲ್ಲಿಕರಾವಳಿತೀರದ ಪರಶುರಾಮ ಕ್ಷೇತ್ರವೆಂದು ಖ್ಯಾತಿ ಪಡೆದ ಮಂಗಳೂರಿನಲ್ಲಿ ಜನಿಸಿದರು. ಸಹೋದರ ಅಮೃತರಾವ, ವರದಾಬಾಯಿ, ಭಾಮಾಬಾಯಿ, ಹಾಗೂ ಲೀಲಾವತಿ ತಾರಾನಾಥರ ಸಹೋದರಿಯರು. ಲೀಲಾವತಿಯ ಅಳಿಯ ಹೈದ್ರಾಬಾದಿನಲ್ಲಿ ಶಿಕ್ಷಣಾಧಿಕಾರಿಯಾಗಿದ್ದರು. ಇವರ ಮನೆಯಲ್ಲಿ ತಾರಾನಾಥರು ಇರುತ್ತಿದ್ದರು.ಆದ್ದರಿಂದ ಇವರಿಗೆ ಹೈದ್ರಾಬಾದ ಕರ್ನಾಟಕದ ನಂಟು ಹತ್ತಿಕೊಂಡದ್ದು.ಇದು ಅವರ ಚಿಕ್ಕ ಕುಟುಂಬ. ಸಂಗೀತ ಇವರ ಉಸಿರು. ಪಂಡಿತ ತಾರಾನಾಥರಿಗೆ ತಂದೆಯೇ ಮೊದಲ ಗುರುಗಳು. ತಾಯಿ ರಾಜೀವಮ್ಮ ಸಾಧ್ವಿಸಿರೋಮಣಿ. ಬಂದ ಆದಾಯದಲ್ಲಿಯೇ ಕುಟುಂಬವನ್ನು ನಿರ್ವಹಿಸುವ ಸಾಮರ್ಥ್ಯ ಉಳ್ಳವಳು. ಒಮ್ಮೆ ತಾರಾನಾಥರಿಗೆ ತಿಂಡಿ ತಿನ್ನಲು ಹಣ ಕೊಡ್ಡಿರುತ್ತಾರೆ. ತಿನ್ನದೇ ಹಾಗೆಯೇ ಮರಳಿ ತಾಯಿಗೆ ನೀಡುತ್ತಾರೆ.ತಾಯಿ ಯಾಕೆ ಸಿಹಿತಿಂಡಿ ತಿನ್ನಲಿಲ್ಲವೇ? ಎಂದರೆ ಇಲ್ಲಾ. ಹಾಗದರೆ ಯಾರಿಗಾ'ದರು ಕೊಡಬೆಕಿತ್ತು. ಯಾರಿಗೆ ಕೊಡಬೆಕಿತ್ತು?ಹೊರಗಡೆ ಬೇಕಾದಷ್ಟು ಜನ ಹಸಿದವರಿದ್ದಾರೆ .ಬಾ ತೊರಿಸುತ್ತೇನೆ ಎಂದು ರಾಜೀವಮ್ಮ ಹಸಿದ ಜನರಲ್ಲಿಗೆ ಕರೆದು ಕೊಂಡು ಹೋಗುತ್ತಾಳೆ. ಒಬ್ಬ ವ್ಯಕ್ತಿಯನ್ನು ಉದ್ದೇಶಿಸಿ ನೀನು ಮುಂಜಾನೆಯಿಂದ ಏನುತಿಂದಿರುವೆ? ವ್ಯಕ್ತಿ ಉತ್ತರಿಸಿದ ಏನೂ ಇಲ್ಲ. ನೋಡುಮಗು ನೀನು ಈ ಹಣವನ್ನು ಮುಂಜಾನೆ ಕೊಟ್ಟಿದ್ದರೆ ಏನಾದರುತಿಂದಿರುತ್ತಿದ್ದ' ಎಂದುಕಳಕಳಿ ಯನ್ನು ವ್ಯಕ್ತಪಡಿಸುತ್ತಾಳೆ. ಮನೆಯೆ ಮೊದಲಪಾಠಶಾಲೆ ಎನ್ನುವಂತೆ ತಾರಾನಥರಿಗೆ ಅನೇಕ ಸಂಸ್ಕಾರಗಳು ಬೆಳೆದುಬಂದವು. ಹೀಗೆಸಂಸಾರ ನಡೆಯುತ್ತಿರ ಬೇಕಾದರೆ ರಂಗರಾವ ಅವರು ಅಕಾಲಿಕಮರಣವನ್ನು ಹೊಂದು ತ್ತಾರೆ. ಕುಟುಂಬದ ಭಾರ ರಾಜೀವಮ್ಮರ ಮೇಲೆ ಬೀಳುತ್ತದೆ. ಒಮ್ಮೆ ಮಂಗಳೂರಿನಲ್ಲಿ ಪ್ಲೇಗರೋಗ ಹರಡಿದಾಗ ರೋಗಿಗಳಿಗೆ ಸೇವೇ ಮಾಡುತ್ತಾ ಆ ರೋಗಕ್ಕೇ ಬಲಿಯಾಗುತ್ತಾರೆ.ತಮ್ಮ ಕೊನೆಯ ಸಮಯದಲ್ಲಿ ತಾರಾನಾಥರನ್ನು ಕರೆದು 'ನೀನು ಇಲ್ಲಿಂದ ಹೊರಡು, ಕಷ್ಟಗಳಿಗೆ ಎದೆಗುಂದಬೇಡ, ಮಕ್ಕಳನ್ನು ಹೊರಕರೆದು ಕೊಂಡುಹೋಗು. ನಾನು ಪ್ರಾರ್ಥನೆ ಮಾಡಬೇಕೆಂದು ಹೇಳಿ ತಮ್ಮ ಕೊನೆಯುಸಿರು ಎಳೆಯುತ್ತಾರೆ.ಈ ಸಂದರ್ಭದಲ್ಲಿ ತಾರಾ ನಾಥರು ಹೈದ್ರಾಬಾದಿಗೆ ಬಂದರು. ಇಲ್ಲಿಂದ ಅವರ ಸೇವೆ ಆರಂಭವಾಯಿತು.ಸಮುದ್ರದ ಉಪ್ಪು ಬೆಟ್ಟದ ನೆಲ್ಲಿಕಾಯಿಯಂತೆ ಈ ಭಾಗದ ಜನೆತೆಗೆ ಆಧಾರ ಸ್ತಂಭವಾಗಿ ನಿಂತರು.

ತಾರಾನಾಥರು ಹ್ತದ್ರಾಬಾದಿಗೆ ಬಂದು ತಮ್ಮ ಇಂಟರ್ ಮಿಡಿಯಟ್ ಮುಗಿಸಿ ವೈದ್ಯಕೀಯ ಅಧ್ಯಯನಕ್ಕೆ ತೊಡಗಿದರು,ಬುದ್ಧಿವಂತರಾದ ಇವರು ಬಹು ಬೇಗ ಗುರುಗಳ ಪ್ರೀತಿಪಾತ್ರರಾದರು.ನಿಜಾಮರ ಮನೆ ವೃದ್ಯರಾದ ಹರಿಗೋವಿಂದಜಿ ಯವರಲ್ಲಿ ಅಯುರ್ವೇದ, ಹಾಗೂ ಯುನಾನಿ ವೈದ್ಯಪದ್ಧತಿ ಕಲೆತರು.ಅದೇ ಸಮಯದಲ್ಲಿ ಸ್ವಾತಂತ್ರಕ್ಕಾಗಿ ಹೋರಾಟನಡೆದಿತ್ತು. ಹೋರಾಟಗಾರರ ಪ್ರಭಾವವೂ

ಇವರಮೇಲಾಗಿತ್ತು.ಒಮ್ಮೆ ಸರೋಜಿನಿ ನಾಯಡು ಅವರ ಎದುರಿಗೆ ಸಣ್ಣಭಾಷಣವನ್ನೂ ಮಾಡಿದರು. ಇವರಮಾತಿನಲ್ಲಿ ದೇಶದ ಕುರಿತಾದ ಕಳಕಳಿಯನ್ನು ಗಮನಿಸಿ ಇವರೊಬ್ಬ ಭಾರತದ ಆಶಾ ಕಿರಣ ಎಂದು ಅಭಿಮಾನದಿಂದ ಮಾತನಾಡಿದರಂತೆ.

ಅವರಲ್ಲಿ ಕ್ರಾಂತಿಯ ಮನೋಭಾವ ಹುಟ್ಟಿನಿಂದಲೇ ಬಂದಿತ್ತು. ಅವರ ಕಾಲೇಜಿನಲ್ಲಿ ಪ್ರತಿವರ್ಷ 'ಇಬ್ಬರು ವಿದ್ಯಾರ್ಥಿಗಳನ್ನು ಇಂಗ್ಲಂಡಿಗೆ ಕಳಿಸುವ ಪದ್ಧತಿ ಇತ್ತು.ಆವರ್ಷ ಇಬ್ಬರುವಿದ್ಯಾರ್ಥಿ ಗಳನ್ನು ಅಯ್ಕೆ ಮಾಡಿದ್ದರು. ಅದರೆ ಅವರು ಅರ್ಹರಾಗಿರಲಿಲ್ಲಾ. ತಾರನಾತರು ಇದನ್ನು ವಿರೋದಿಸಿದರು.ಅದಕ್ಕೆ ಉಳಿದ ವಿದ್ಯಾರ್ಥಿಗಳು ಬೆಂಬಲ ಸೂಚಿಸಿದರು, ಇದರಿಂದ ಸಂಸ್ಥೆ ಇವರನ್ನು ಕಾಲೇಜಿನಿಂದ ಹೊರಹಾಕಿದರು. ಒಂದು ವರ್ಷ ನಂತರ ಅದೆ ಸಂಸ್ಥೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಾರೆ. ನಿಜಾಮರ ಮಕ್ಕಳಿಗಾಗಿ ಪಾಠಮಾಡಲು ಇವರನ್ನು ನೇಮಿಸಲಾಯಿತು. ಆದರೆ ಸಮವಸ್ತ್ರದ ಹಿನ್ನಲೆಯಲ್ಲಿ ವಿರೊಧಬಂದು ಆಕೆಲಸವನ್ನು ಬಿಡುತ್ತಾರೆ.ಅವರೊಳಗಿನ ಸ್ವಾಭಿಮನ ಅವರನ್ನು ಸರ್ವಾಧಿಕಾ'ರದ ವಿರುಧ್ಧ ಬಡೆದೇಳಿಸುತ್ತಿತ್ತು. ಆರ್ಥಿಕ ಮುಗ್ಗಟ್ಟಿನಿಂದ ಬೀದರಿನ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಅಲ್ಲಿಯ ಮುಖ್ಯಗುರುಗಳು ಜೆ. ಮಂಗಯ್ಯಾ ಮಹಯೋಗಿಯಾಗಿದ್ದರು. ಅವರಿಂದ ಯೋಗಕಲಿಯಲು ಆರಂಭಿಸಿದರು. ಅಲ್ಲಿಂದ ಯೋಗಶಾಸ್ತ್ರದಲ್ಲಿ ಪರಿಣಿತರಾದ ನೇಪಾಳದ ಉತ್ತಮದಾಸ ಪರಮಹಂಸರನ್ನು ಸ್ವಾಮಿ ಯೋಗೇಶ್ವರಾನಂದಜೀ ,ಶ್ರೀರುದ್ರಮುನಿಯಪ್ಪಾಜಿ,ಯಂತವರ ಸ್ನೇಹವಾಯಿತು.ಅವರು ತಮ್ಮ ಸೇವಾಮನೋಭಾವವನ್ನು ಕಡಿಮೆಮಾಡಿಕೋಳ್ಳಲಿಲ್ಲಾ ರೋಗಿಗಳ ಸೇವೆಯನ್ನು ಹಗಲು ಇರುಳು ಮಾಡುತ್ತಿದ್ದರು. ಗೀತೆಯ ,ಕುರಾನಿನ ಪದ್ಯಗಳನ್ನು ಚನ್ನಾಗಿ ಹೇಳುವುದರಿಂದ ಇವರು ಹಿಂದು ಮತ್ತು ಮುಸ್ಲಿಂ ಜನರ ಸ್ನೇಹ ಗಳಿಸಿಕೊಂಡರು.ಒಮ್ಮೆ ನಿಜಮರ ಜಮ್ಮದಿನ ಬರುತ್ತದೆ.ಜನರಿಂದ ಹಣ ಸಂಗ್ರಹ ಮಡಲು ಹೇಳುತ್ತಾರೆ. ಅದರೆ ತಾರನಾಥರು ಅದನ್ನು ವಿರೋಧಿಸಿದರು.ಜನರು ತಾರಾನಾಥರನ್ನು ಬೆಂಬಲಿಸಿದರು. ಆಗ ಇವರಿಗೆ ಅಲ್ಲಿಂದ ರಾಯಚೂರಿಗೆ ವರ್ಗಾವಣೆಯಾಗುತ್ತದೆ. ಅದು ರಾಯಚೂರಿನ ಭಾಗ್ಯವೆಂದೇ ಹೇಳಬೇಕು.

ಆಗ ರಾಯಚೂರಿನ ಸ್ಥಿತಿಯೇನು ಬೇರೆಯಾಗಿರಲಿಲ್ಲ.ಎಲ್ಲಾ ರೈತರು ಒಣ ಕೃಷಿಯನ್ನು ಮಾಡುತ್ತಿದ್ದರು.ರಾಜಧಾನಿಯಿಂದ ದೂರ ಇರುವುದರಿಂದ ಯಾವುದೇ ಸವಲತ್ತುಗಳು ಸುಲಭವಾಗಿ ಸಿಗುತ್ತಿರಲಲ್ಲ. ಇಲ್ಲಿಯ ಆಡಳಿತಾಧಿಕರಿಗಳೆ ನವಾಬರಂತೆ ವರ್ತಿಸುತ್ತಿದ್ದರು. ಅಧಿಕಾರಿಗಳ ದೌರ್ಜನ್ಯಕ್ಕೆ ಬೇಸತ್ತಿದ್ದರು. ರೋಗರುಜಿನಗಳು, ಬಡತನ ಕಚ್ಚಿ ತಿನ್ನುತ್ತಿದ್ದವು,ಸಾಮನ್ಯಜನರ ಸ್ಥಿತಿ ಅಯೋಮಯವಾಗಿತ್ತು.ಇಂಥಾಸಮಯದಲ್ಲಿ ಉದಯರವಿಯಂತೆ ಬೆಳಕುಚಲ್ಲುತ್ತಾ ತಾರಾನಾಥರು ಆಗಮಿಸಿದರು.ಈ ಎಲ್ಲ ವಾತಾವರಣ ಅವರಿಗೆ ಸರಿಬರಲಿಲ್ಲಾ.ಉತ್ತಮ ಮೌಲ್ಯಗಳನ್ನು ರೂಪಿಸುವುದು ಶಿಕ್ಷಕರ ಕರ್ತವ್ಯೆಂದು ಬಲವಾಗಿ ನಂಬಿದ್ದರು.ಇದಕ್ಕೆ ನಿದರ್ಶನ ಎಂಬಂತೆ ಕಲೆಕ್ಟರ್ ಮಗನನ್ನು ಯಾವುದೋ ತಪ್ಪಿಗಾಗಿ ಶಿಕ್ಷಿಸಿದರು.ಆನಂತರ ಇನ್ನೊಮ್ಮೆ ಶಾಲೆಯ ಶಿಕ್ಷಣಾಧಿಕಾರಿಯ ಮಗನನ್ನು ಶಿಕ್ಷಿಸಿದರು,ಆಗ ಅವರು ತಾರಾನಾಥರನ್ನು ಬರಹೇಳಿದರು. ತಾರಾನಾಥರು ನಾನು ಸರಕಾರದ ಸೇವಕನೇ ಹೊರತುನಿಮ್ಮ ಸೇವಕನಲ್ಲಾ ಎಂದು ಖಡಾಖಂಡಿತವಾಗಿ ಹೇಳುತ್ತಾರೆ. ಆವಿದ್ಯಾರ್ಥಿಹಲವುತಿಂಗಳಿಂದಶಾಲೆಗೆ ಫೀಸ್ ಕೊಡದೇ ಇರುವುದರಿಂದ ಆತನ ಹೆಸರನ್ನುತೆಗೆದುಹಾಕಲಾಯಿತು.ಅಧಿಕಾರಿ ಏನೂ ಮಾಡದೆ ಸುಮ್ಮನಿರಬೇಕಾಯಿತು. ವಿದ್ಯರ್ಥಿಯ ತಾಯಿ ಮಗನಪರವಾಗಿ ಕ್ಷಮಾಪಣೆಕೇಳಲಾಗಿ ಮತ್ತು ಫೀಸ್ ಭರಿಸಲಾಗಿ ಮತ್ತೇ ಆ ವಿದ್ಯಾರ್ಥಿಯನ್ನುಮರಳಿ ಶಾಲೆಗೆ ಸೇರಿಸಿಕೊಳ್ಳಲಾಯಿತು. ಇದರಿಂದ ವಿದ್ಯಾರ್ಥಿಗಳಿಗೆ ತಾರಾನಾಥರ ಕುರಿತು ಗೌರವ ಹೆಚ್ಚಾಯಿತು.ಪಾಲಕರಿಗೆಅಭಿಮಾನ ಮೂಡಿತು.ಅಧಿಕಾರಿಗಳಿಗೆ ಭಯಹೆಚ್ಚಾಯಿತು.ತಾರನಾಥರು ಅಭಿನಂದನೀಯರಾದರು.

ತಾರನಾಥರ ಪಾಠದ ವೈಖರಿಯೇ ಬೇರೆ.ಭೂಗೋಳದ ಪಾಠ ಮಾಡುವಾಗಮೋಡ ಮಳೆಯ ಕುರಿತು ಪಾಠಮಾಡುವಾಗ ವಿದ್ಯಾರ್ಥಿಗಳನ್ನು ಕರೆದುಕೊಂಡು ಊರಹೊರಗಿನಬೆಟ್ಟಕ್ಕೆ ಕರೆದುಕೊಂಡು ಹೋಗಿ ಮೋಡಗಳನ್ನು ತೋರಿಸಿ ಪಾಠಮಾಡುತ್ತಿದ್ದರಂತೆ.ಕೋಲಾಟದ ಮುಖಾಂತರ ಮಗ್ಗಿ ಕಲಿಸುವ,ಬೆಳಗಿನ ನಾಲ್ಕು ಗಂಟೆಗೆ ವಿದ್ಯಾರ್ಥಿಗಳನ್ನು ಈಜಲುಕರೆದುಕೊಂಡು ಹೋಗುವುದು,ನಿಸರ್ಗದೊಂದಿಗೆ ಮಕ್ಕಳನ್ನು ಬೆಳೆಸಬೇಕುಎಂದು ಮಕ್ಕಳಿಗೆ ಮನಮುಟ್ಟುವಂತೆ ಪಾಠಮಾಡುತ್ತಿದ್ದರು. ಧರ್ಮಗ್ರಂಥಗಳ ನಮ್ಮ ಸಂತಾ'ನದ ವಿಕಾಸಕ್ಕಾಗಿ ವಿನಾಶಕ್ಕಗಿ ಅಲ್ಲಾ. ಧರ್ಮ ಧರ್ಮಗಳ ಮಧ್ಯ ಸಾನುಕಂಪವಿರಬೇಕು ಎಂದು ಅರ್ಥಪೂರ್ಣವಾಗಿ ಹೇಳುತ್ತಿದ್ದರು. ಹೀಗೆಮಕ್ಕಳೊಂದಿಗೆ ಮಾತನಾಡುತ್ತ ಬದುಕನ್ನು ಕಟ್ಟಲು ಭೂಮಿ ಹದಮಾಡುತ್ತಿದ್ದರು. ಅವರಲ್ಲಿ ಸಾಮಾಜಿಕ ಜವಬ್ದಾರಿಯನ್ನು ತುಂಬುತ್ತಿದ್ದರು.ಪ್ರಾಣಕ್ಕಿಂತ ಮಾನ ದೊಡ್ಡದು ಎಂದು ನಂಬಿದವರು. ಹಿಂದು ಮುಸ್ಲಿಂ ಭಾವೈಕ್ಯತೆ ತುಂಬುವುದು ಇವರ ಉದ್ದೆಶ ಎಂದು ತಿಳಿದ ಜನ ಇವರ ವಿಚಾರಕ್ಕೆ ಬೆಂಬಲ ಸೂಚಿಸುವುದಕ್ಕೆ ಅರಂಭಿಸಿದರು.ಜನರಲ್ಲಿ ಅರಿವು ಮೂಡಿಸಲು ತಾರನಾಥರು 'ಹಮದರ್ದ' ಎಂಬ ಶಾಲೆಯನ್ನು 1920 ಯುಗಾದಿಯಂದು ಆರಂಭಿಸಿದರು. ಪಿ .ಕಿಶನರಾವ ಈಶಾಲೆಯ ಜವಬ್ದಾರಿಯನ್ನು ಹೊತ್ತರು.ಈ ಶಾಲೆಗೆ ಜಾಗವನ್ನು ಆಬ್ಕಾರಿ ಗುತ್ತೇದಾರ ಅಬ್ದುಲ್ ಕರೀಮರು ನೀಡಿದರು"ಈ ಶಾಲೆಯನ್ನು ಸ್ಥಾಪಿಸುವ ಉದ್ದೇಶ ಹಿಂದು ಮುಸ್ಲಿಂ ಐಕ್ಯತೆ ಸಾಧಿಸುವುದು. ರಾಜಕಾರಣಿಗಳಂತಲ್ಲಾ" ಎಂದು ಹೇಳಿ ಅವರವರ ಧರ್ಮವನ್ನು ಸಮದರ್ಶಿತ್ವದಿಂದಸಾಧಿಸಬೇಕು.ಶಿಕ್ಷಣ ಸಂಸ್ಥೆಗಳು ಒಬ್ಬರ ಹಿಡಿತದಲ್ಲಿ ಇರಬಾರದು. ಸಾರ್ವಜನಿಕವಾಗಿರ ಬೇಕು ಅಂದಾಗ ಎಲ್ಲರಿಗೂ ಸಮವಾದಶಿಕ್ಷಣ ದೊರಕುತ್ತದೆ. ಅದಕ್ಕಾಗಿ' ಮುಷ್ಟಿ ಫಂಡ' ಮಾಡಿದ್ದರು. ಪ್ರತಿಯೊಬ್ಬರು ತಮ್ಮ ಯೋಗ್ಯತೆಗೆ ತಕ್ಕಂತೆ ಹಣವನ್ನು ನೀಡಬೇಕು. ಇದರಿಂದ ಎಲ್ಲರಿಗೂ ತಮ್ಮ ಶಾಲೆಯಂಬ ಅಭಿಮಾನ ಹುಟ್ಟುತ್ತದೆ.ಶಾಲೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಓದಿಸಬೇಕು ' ಇಂಥಾ ಅನೇಕ ಒಳ್ಳೆಯ ವಿಚಾರವನ್ನು ಇಟ್ಟುಕೊಂಡು ಶಾಲೆ ಆರಂಭವಾಯಿತು.ಇಂದಿಗೂ ತಾರನಾಥರ ವಿಚಾರದಂತೆ ಶಾಲೆ ನಡೆಯುತ್ತಿದೆ.

ರಾಯಚೂರಿನ ಅಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು ನಿಜಾಮನಕುರಿತು'ಡಾಯರ ಆಫ್ ನಿಜಾಮ ಸ್ಟೆಟ್'ಎಂದು ಹಿಂದು ಪೇಪರ್‌ದಲ್ಲಿ ನಿಷ್ಠೂರವಾಗಿ ಬರೆದರು.ಇದರಿಂದ ಸಿಟ್ಟಿಗೆದ್ದ ನಿಜಾಮ ಇವರನ್ನು 'ಗಡಿಪಾರು' ಮಾಡಿದನು.ಇದುಕೂಡಾ ವರವಾಯಿತು. ತುಂಗಭದ್ರ ಸ್ಟೇಷನ್ ಹತ್ತಿರ ಆಶ್ರಮ ಸ್ಥಾಪಿಸಿ ವೈದ್ಯಕೀಯ ಸುಶ್ರೂಷೆ

ಆರಂಭಿಸಿದರು.ಅದಕ್ಕೆ ' ಪ್ರೇಮಾಯತನ'ಎಂದು ಹೆಸರಿಟ್ಟರು. ಹೆಸರಿಗೆ ತಕ್ಕಂತೆ ಪ್ರೀತಿವಾತ್ಸಲ್ಯದ ನೆಲೆಯಾಗಿತ್ತು.ದಿನ ನಿತ್ಯ ಜನಜಾತ್ರೆ ಹರಿದು ಬರುತ್ತಿತ್ತು. ಅನೇಕ ಜನ ಇಲ್ಲಿ ತರಬೇತಿ ಪಡೆದರು. ಈ ಸಂಸ್ಥೆಗೆ ಫ್ರಾನ್ಸ, ಪೋಲೆಂಡ, ಅಮೇರಿಕಾ, ಇಂಗ್ಲಂಡ ವಿವಿಧ ಭಾಗದಿಂದ ವ್ಯದ್ಯರು, ಅಸಕ್ತರು, ರೋಗಿಗಳು ಬಂದು ಪರಿಹಾರ ಕಂಡುಕೊಳ್ಳುತ್ತಿದ್ದರು.ತಮ್ಮ ಸುಶ್ರೂಷೆಗೆ ಯೋಗ, ಸಂಗೀತ, ಆಯುರ್ವೇದವನ್ನು ಬಳಸಿಕೋಳ್ಳುತ್ತಿದ್ದರು. ಇವರಪ್ರಸಿದ್ಧಿನೊಡಿ ಇವರನ್ನು ಅಮೇರಿಕಾಕ್ಕೆ ಬರಲು ಆಹ್ವಾನ ಬಂದಿತು. ಆದರೆ ಇವರು ಒಪ್ಪಲಿಲ್ಲಾ.ನನ್ನದೇಶದಲ್ಲಿಯೇ ಅನೇಕ ರೋಗಿಗಳಿದ್ದಾರೆ. ಅವರನ್ನು ಬಿಟ್ಟು ಅಮೇರಿಕಾಗೆ ಹೊಗುವ ಅವಶ್ಯವಿಲ್ಲ ಎಂದುನಿರಾಕರಿಸಿದರು.

ಜಾತಿಪದ್ಧತಿಯನ್ನುಒಪ್ಪುತ್ತಿರಲಿಲ್ಲಾ.ಅಶ್ರಮದಲ್ಲಿಎಲ್ಲರನ್ನೂ ಸಮನವಾಗಿಕಾಣುತ್ತಿದ್ದರು. ಗಾಂಧೀಜಿಯವರು ಅನಾರೊಗ್ಯದ ನಿಮಿತ್ಯಾ ಬೆಂಗಳೂರಿನಲ್ಲಿವಾಸವದಾಗ ಅವರನ್ನು ಆರೈಕೆಮಾಡಿ ಮೆಚ್ಚುಗೆಗೆ ಪಾತ್ರರಾದವರು.

ತಾರನಾಥರು ಅಂತ:ಕರಣ ಸ್ವಭಾವದವರು.ಆಶ್ರಮದಲ್ಲಿ ಬಾಲಕ ಗಡಿಯಾರ ಕಳುವು ಮಾಡಿದಾಗ ಅವನನ್ನು ಅವಮಾನದಿಂದ ತಪ್ಪಿಸುತ್ತಾರೆ.ಅಂದಿನಿಂದ ಅವನ ನಡುವಳಿಕೆಯಲ್ಲಿ ಬದಲವಣೆಯಾಯಿತಂತೆ. ವಿಧವೆಯೊಬ್ಬಳು ತಾನು ಗರ್ಭಿಣಿ ನನಗೆ ಗರ್ಭಪಾತ ಮಾಡಬೇಕೆಂದು ಬೇಡಿಕೊಳ್ಳತ್ತಾಳೆ.ಆಗ ಅವರು ಬೇಡ ಆಶ್ರಮದಲ್ಲಿದ್ದು ಮಗುವನ್ನು ಕರೆದುಕೊಂಡು ಹೋಗು ಎಂದಾಗ, ಅವರು ಮಗುವಿನ ತಂದೆ ಯಾರು ಎಂದು ಕೇಳಿದರೆ ಏನು ಉತ್ತರಿಸಲಿ, ಎಂದಾಗ ನಾನೆ ಮಗುವಿನ ತಂದೆ ಎಂದು ಹೇಳು ಎನ್ನುತ್ತ ಬೇರೆಯವರಿಗೆ ಎದುರಾದ ಕಷ್ಟಗಳಿಗೆ ತಾವುಹೊಣೆಯಗಲು ಅಂಜುವುದಿಲ್ಲಾ.ಮೂಢನಂಬಿಕೆ ಹೊಡದೋಡಿಸಲು, ಜನರಲ್ಲಿ ತಿಳುವಳಿಕೆ ಮೂಡಿಸಲು ಪತ್ರಕೆಯನ್ನು ಆರಂಭಿಸಿದರು.

ತಾರಾನಾಥರು ಕಲಾವಿದರು ಜನರಲ್ಲಿ ಜಾಗ್ರತಿಮೂಡಿಸಲು ನಾಟಕಗಳನ್ನು ಮಾಡುತ್ತಿದ್ದರು. ಇತರರಿಗೆ ಕಲಿಸಿ ತಾವೂ ಪಾತ್ರಧಾರಿಗಳಾಗಿರುತ್ತಿದ್ದರು.ಅವರು ಸಂಗೀತಗಾರರಾಗಿದ್ದು, ಭಜನೆಗಳನ್ನು ಆಶ್ರಮದಲ್ಲಿ ಹಾಡುತ್ತಿದ್ದರು.ಮೊದಮೊದಲು ಅವರನ್ನು ವಿರೋಧಿಸುವವರೆಲ್ಲರೂ ಅವರಲ್ಲಿ ಔಷಧಿಪಡೆದು ಅವರಿಗೆ ಶರಣುಹೋದವರು. ಆದರೆ ಅವರು ಯಾರನ್ನು ದೂಷಿಸುವುದಿಲ್ಲಾ ಅಂಥಾ ಮಗುವಿನ ಮನಸು.

ಕೊನೆಗೆ ಅವರ ಆರೋಗ್ಯದಲ್ಲಿ ಏರುಪೇರಾಯಿತು. ಅವರನ್ನು ಕಾಣಲು ಬಂದವರಿಗೆ ಭೇಟಿಯಾಗಲು ಅವಕಾಶ ಇರಲಿಲ್ಲಾ.ಅವರ ಮಗ ರಾಜೀವ ಅವರು ವೀಣೆಬಾರಿಸಲು ಆರಂಭಿಸಿದರು ಇವರು ತಬಲ ಕೈಯಲ್ಲಿ ಹಿಡಿದು ಥಾಪು ಹಾಕಿದರು.ಅದರಲ್ಲಿ ತಲ್ಲೀನರಾದರು .ಹಾಗೆಯೇಲೀನವಾದರು 1942ರ ಅಕ್ಟೋಬರ್ 31 ರಂದು.ಕನ್ನಡದ ಕನ್ಮಣಿಯೊಂದು ನಕ್ಷತ್ರಗಳ ರಾಶಿಯಲ್ಲಿ ಸೇರಿಕೊಂಡಿತ್ತು.ಬೆಂಗಳೂರಿನಲ್ಲಿ ಅವರ ಅಂತ್ಯಸಂಸ್ಕಾರ ನಡೆಯಿತು.ಪ್ರಸ್ತುತ ಇವರ ಹೆಸರಿನಲ್ಲಿ ಈಗ ತಾರಾನಾಥ ಶಿಕ್ಷನ ಸಂಸ್ಥೆಯ ಅಡಿಯಲ್ಲಿ ಅನೇಕ ಶಾಲಾಕಾಲೇಜುಗಳು ಜ್ಞಾನದಾನ ಕಾರ್ಯದಲ್ಲಿ **ನಿರತವಾಗಿವೆ**.

**ಗ್ರಂಥ** ಋಣ

1) ಪಂಡಿತತಾರಾನಾಥ .ಲೇ. ವಿ. ಎಸ್.ಕಾಂತನವರು
2) ಹೈದ್ರಾಬಾದ ಸಂಸ್ಥಾನದ ಹೋರಾಟದಲ್ಲಿ ರಾಯಚೂರುಜಿಲ್ಲೆಯ ಹೋರಾಟ.ಲೇ.ರಾಮಣ್ಣ ಹವಳೆ
3) ಧರ್ಮ ಸಂಭವ ಲೇ. ಪಂಡಿತ ತಾರಾನಾಥ

## ಪ್ರಗತಿಶೀಲ ಕಥಾ ಸಾಹಿತ್ಯದಲ್ಲಿ ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಬದಲಾವಣೆಯ ಆಶಯ

ಮಂಜುನಾಥ ಸುಣಗಾರ
ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ , ಶಂಕರಘಟ್ಟ–೫೭೭ ೪೫೧

ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಸಮಾಜದ ಒಂದು ಅಂಗವಾಗಿಯೇ ಜಾತಿಪದ್ಧತಿ ಬೆಳೆದುಬಂದಿದೆ. ವಿವಿಧ ಸಂಶೋಧಕರ, ವಿಚಾರವಂತರ ಬರವಣಿಗೆಗಳಲ್ಲಿ ವಿಶಿಷ್ಟ ಆಯಾಮಗಳನ್ನು ಪಡೆದುಕೊಂಡಿರುವ ಈ ಜಾತಿಪದ್ಧತಿಯ ಉಗಮದ ಬಗ್ಗೆ ತಿಳಿದುಕೊಳ್ಳುವುದು ಇಲ್ಲಿ ಮುಖ್ಯವಾಗಿದೆ. ಸಾಮಾನ್ಯವಾಗಿ ವ್ಯಕ್ತವಾಗಿರುವ ಕೆಲವು ವಿಚಾರಗಳನ್ನು ಗಮನಿಸಿದಾಗ ಹಿಂದೂ ಧರ್ಮವೆಂದು ನಾವು ಯಾವುದನ್ನು ಗುರುತಿಸಿಕೊಳ್ಳುತ್ತೇವೋ ಅದರ ಸ್ವರೂಪವು ಜಾತಿ ವ್ಯವಸ್ಥೆಯ ರಚನಾ ಕ್ರಮದಲ್ಲಿದೆ. ಆದ್ದರಿಂದಲೇ ಹಿಂದೂಧರ್ಮದಲ್ಲಿ ಜನಿಸಿದ ಯಾರೇ ಆಗಲಿ ಅವನು ಒಂದಲ್ಲ ಒಂದು ಜಾತಿಗೆ ಸೇರಿರುತ್ತಾನೆ ಎಂದು ನಿರ್ದಾಕ್ಷಿಣ್ಯವಾಗಿ ಹೇಳುವ ಧೈರ್ಯವು ಪ್ರಕಟವಾಗುವುದನ್ನು ಕಾಣುತ್ತೇವೆ. ಏಕೆಂದರೆ ಹಿಂದೂ ಧರ್ಮದಲ್ಲಿ ಹುಟ್ಟುವುದೆಂದರೆ ಬ್ರಾಹ್ಮಣನಾಗಿಯೋ, ಕ್ಷತ್ರಿಯನಾಗಿಯೋ, ವೈಶ್ಯನಾಗಿಯೋ, ಶೂದ್ರನಾಗಿಯೋ ಸಂಪೂರ್ಣವಾಗಿ ಸಮಾಜದ ಎಲ್ಲೆಯವರೆಗೆ ನಿಲ್ಲುವವನಾಗಿಯೋ ಹುಟ್ಟುವುದೇ ಆಗಿದೆ. ಇಂತಹ ಜಾತಿವ್ಯವಸ್ಥೆಯ ನಿಲುವು ಪ್ರಗತಿಶೀಲ ಕಥನಗಳಲ್ಲಿ ಹೇಗೆ ವ್ಯಕ್ತವಾಗಿದೆ ಎನ್ನುವುದನ್ನು ಪ್ರಸ್ತುತ ಪ್ರಬಂಧದಲ್ಲಿ ಅವಲೋಕಿಸಲಾಗುತ್ತದೆ.

**ಜಾತಿ ಪದ್ಧತಿ ಪರಂಪರೆ :** ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಸಮಾಜದ ಒಂದು ಅಂಗವಾಗಿಯೆ ಬೆಳೆದು ಬಂದು ವಿವಿಧ ಸಂಶೋಧಕರ, ವಿಚಾರವಂತರ ಬರವಣಿಗೆಗಳಲ್ಲಿ ವಿಶಿಷ್ಟ ಆಯಾಮಗಳನ್ನು ಪಡೆದುಕೊಂಡಿರುವ ಈ ಜಾತಿ ಪದ್ಧತಿಯ ಉಗಮದ ಬಗ್ಗೆ ಸಾಮಾನ್ಯವಾಗಿ ವ್ಯಕ್ತವಾಗುವ ಕೆಲವು ವಿಚಾರಗಳನ್ನು ಗಮನಿಸಿದಾಗ ಹಿಂದೂ ಧರ್ಮವೆಂದು ನಾವು ಯಾವುದನ್ನು ಗುರುತಿಸುತ್ತೇವೋ ಅದರ ಸ್ವರೂಪವು ಜಾತಿ ವ್ಯವಸ್ಥೆಯ ರಚನಾ ಕ್ರಮದಲ್ಲಿದೆ ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ಹಿಂದೂ ಧರ್ಮದಲ್ಲಿ ಜನಿಸಿದ ಯಾರೇ ಆಗಲಿ ಅವನು ಒಂದಲ್ಲಾ ಒಂದು ಜಾತಿಗೆ ಸೇರಿರುತ್ತಾನೆ ಎಂದು ನಿರ್ದಾಕ್ಷಣ್ಯವಾಗಿ ಹೇಳುವ ದೈರ್ಯವು ಪ್ರಕಟವಾಗುವುದನ್ನು ಕಾಣುತ್ತೇವೆ. ಏಕೆಂದರೆ ಹಿಂದೂ ಧರ್ಮದಲ್ಲಿ ಹುಟ್ಟುವುದು ಎಂದರೆ ಬ್ರಾಹ್ಮಣನಾಗಿಯೋ, ಕ್ಷತ್ರಿಯನಾಗಿಯೋ, ವೈಶ್ಯನಾಗಿಯೋ, ಶೂದ್ರನಾಗಿಯೋ ಅಥವಾ ಸಂಪೂರ್ಣವಾಗಿ ಸಮಾಜದ ಎಲ್ಲೆಯ ಹೊರಗೆ ನಿಲ್ಲುವವನಾಗಿಯೋ ಹುಟ್ಟುವುದೇ

ಆಗಿದೆ.

ಭಾರತದಲ್ಲಿ ಮೊದಲು ವರ್ಣವ್ಯವಸ್ಥೆ ರೂಢಿಯಲ್ಲಿತ್ತು. ಇದು ಯಾವ ಕಾರಣಗಳಿಂದ ಆರಂಭಗೊಂಡಿತೆಂದು ಹೇಳುವುದು ಕಷ್ಟ. ಏಕೆಂದರೆ ಯಾವುದೇ ಸಾಮಾಜಿಕ ವ್ಯವಸ್ಥೆಯ ಉಗಮದ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ವೇದಗಳಿಂದಲೇ ಆರಂಭವಾದ ವೇದಗಳಲ್ಲೇ ಕಂಡುಬರುವ ವರ್ಣ ವ್ಯವಸ್ಥೆ ಮುಂದೆ ಜಾತಿಗಳಿಗೆಡೆಕೊಟ್ಟಿತು ಎಂಬುದು ಸಾಮಾನ್ಯವಾಗಿ ಎಲ್ಲಾ ವಿದ್ವಾಂಸರ ನಂಬಿಕೆ.

'ಮನು' ಮಾನವನ ಸೃಷ್ಟಿಯನ್ನು ವಿವರಿಸುತ್ತಾ ಮತ್ತು ಮೊದಲು ವರ್ಣಗಳಿಗೆ ವೃತ್ತಿಯನ್ನು ಗೊತ್ತು ಮಾಡುತ್ತಾ ಈ ರೀತಿ ಹೇಳುತ್ತಾನೆ. 'ವಿಶ್ವ'ದ ಶ್ರೇಯಸ್ಸಿಗಾಗಿ ಬ್ರಹ್ಮನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ಕ್ರಮವಾಗಿ ತನ್ನ ಬಾಯಿ, ಭುಜ, ತೊಡೆ ಮತ್ತು ಪಾದಗಳಿಂದ ಸೃಷ್ಟಿಸಿದನು. ಪಾದಗಳಿಂದ ಉದ್ಭಸಿದವರಿಗೆ ವಿಶಿಷ್ಟ ಕಾರ್ಯಗಳನ್ನು ಹಾಗೂ ವೃತ್ತಿಗಳನ್ನು ಗೊತ್ತು ಮಾಡಿದನು ಎನ್ನುತ್ತಾನೆ. ಹೀಗೆ ದೇಶದ ಜನಾಂಗವನ್ನು ಬೇರೆ ಬೇರೆ ಗುಂಪುಗಳನ್ನಾಗಿ ವರ್ಗೀಕರಿಸುವುದರಲ್ಲಿ ಅವರವರ 'ಸಾಮರ್ಥ್ಯ' ನಿರ್ಣಾಯಕವಾದ ಅಂಶವಾಗಿತ್ತು. ಅಂದರೆ ವೃತ್ತಿಗಳು ಹಾಗೂ ಕರ್ಮಗಳ ಆಧಾರದ ಮೇಲೆ ವರ್ಣಗಳು ತಲೆ ಎತ್ತಿದವು ಎಂಬುದು ಮೇಲಿನ ಮಾತುಗಳಿಂದ ತಿಳಿದು ಬರುವಂತೆ ಸಮಾಜದಲ್ಲಿ ಮೇಲು-ಕೀಳಿನ ಭಾವನೆಯನ್ನು ಉಂಟುಮಾಡಿತು. ವೃತ್ತಿಗಳು ವರ್ಣವನ್ನು ಪ್ರತಿನಿಧಿಸುತ್ತವಾದ್ದರಿಂದ ವೃತ್ತಿ, ವರ್ಣ, ಜಾತಿ ಈ ಮೂರು ಒಂದರೊಳಗೊಂದು ಬೆಸೆದುಕೊಂಡವು. ಸಾಮಾನ್ಯವಾಗಿ ಮೊದಲು ಮೇಲು-ಕೀಳಿನ ತಾರತಮ್ಯವಿಲ್ಲದ್ದು ನಂತರ ಮೇಲ್ಜಾತಿಯಲ್ಲಿ ಹುಟ್ಟಿದವ ಶ್ರೇಷ್ಠ ಹಾಗೂ ಕೆಳಜಾತಿಯಲ್ಲಿ ಹುಟ್ಟಿದವ ಕೀಳು ಎಂಬ ಧೋರಣೆಗಳು ಬೆಳೆಯುತ್ತಾ ಬಂದವು. 'ದೇವರೇ ಅವನನ್ನು ಇಂತಿಂತಹ ಜಾತಿಯಲ್ಲಿ ಹುಟ್ಟಿಸುತ್ತಾನೆ. ಅವನ ಸಾಮಾಜಿಕ ಹಾಗೂ ಆರ್ಥಿಕ ವ್ಯಕ್ತಿತ್ವ ಪೂರ್ವ ನಿಶ್ಚಿತವಾಗಿರುತ್ತದೆ' ಎಂಬ ಹಿಂದೂ ಧರ್ಮದ ಪೂರ್ವ ಜನ್ಮ ಸಿದ್ಧಾಂತ, ಕರ್ಮ ಸಿದ್ಧಾಂತ ಹಾಗೂ ದೈವ ಸಿದ್ಧಾಂತ 'ಗಳು ಮತ್ತು ಇವುಗಳಿಗೆ ತಾತ್ವಿಕ ನಿಲುವನ್ನು ಸಮರ್ಥಿಸಿಕೊಂಡದ್ದು. ಇವುಗಳು ವರ್ಣ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಾ ಬಂದವು ಎನ್ನುವ ಅಭಿಪ್ರಾಯವನ್ನು ಕಾಣುತ್ತೇವೆ.

ಈ ಜಾತೀಯತೆಯ ಉಗಮದ ಬಗ್ಗೆ ಇನ್ನೂ ಕೆಲವು ಅಭಿಪ್ರಾಯಗಳನ್ನು ಗಮನಿಸಬಹುದು. ಶ್ರೀ ಭಗವತ್ ಶರಣ ಉಪಾಧ್ಯಾಯ ಅವರು "ಇತರ ದೇಶಗಳಲ್ಲಿ ವರ್ಗಗಳು ತಲೆ ಎತ್ತಲು ಹಾಗೂ ಬೆಳೆದು ನಿಲ್ಲಲು ಕಾರಣರಾದ ವ್ಯಕ್ತಿಗಳೇ ಬಹುಶಃ ವರ್ಣ ವ್ಯವಸ್ಥೆಗೂ ಕಾರಣವಾಗಿರಬಹುದೇ ಎಂಬುದರಲ್ಲಿ ಅನುಮಾನವೇನೂ ಇಲ್ಲ" ಎನ್ನುತ್ತಾರೆ. ಅಂದರೆ ವರ್ಣ ಎಂಬುದು ವರ್ಗ ಎಂಬ ಸಾಮಾಜಿಕ ವ್ಯವಸ್ಥೆಗೆ ಕೊಟ್ಟ ಹೆಸರೇ ಆಗಿದೆ ಎಂಬ ಅಂಶವನ್ನು ಸೂಚಿಸುತ್ತಾರೆ. ಗೌತಮ ಮತ್ತು ಮನು ಹೇಳುವಂತೆ "ವಿವಿಧ ವರ್ಣಗಳ ಮಧ್ಯೆ ನಡೆಯುವ ಮದುವೆಗಳಿಂದ ಮಿಶ್ರ ಜಾತಿಗಳೂ ಈ ಮಿಶ್ರ ಜಾತಿಗಳ ಮಧ್ಯೆ ನಡೆಯುವ ಮದುವೆಗಳಿಂದ ಇನ್ನೂ ಹೆಚ್ಚಿನ ಜಾತಿ ಉಪ ಜಾತಿಗಳು ನಿರ್ಮಾಣಗೊಳ್ಳುತ್ತವೆ" ಇವರ ಪ್ರಕಾರ ವರ್ಣ ಸಂಕರವೇ ಜಾತಿಗಳ ಉಗಮಕ್ಕೆ ಮೂಲವಾಗಿದೆ.

ಒಟ್ಟಿನಲ್ಲಿ "ಪರಂಪರೆಯಿಂದ ಬಂದ ಬೇರೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಿದ್ದ ಗುಂಪುಗಳು ತಮ್ಮ ವೃತ್ತಿ ರಹಸ್ಯಗಳನ್ನು ತಮ್ಮ ಗುಂಪಿನವರಲ್ಲದ ಬೇರೆ ಬೇರೆಯವರಿಗೆ ಬಿಟ್ಟು ಕೊಡದೆ ತಮ್ಮ ತಮ್ಮಲ್ಲೇ ಮದುವೆಯಾಗುತ್ತಾ ಬಂದುದರ ಪರಿಣಾಮವೇ ಬೇರೆ ಬೇರೆ ಜಾತಿಗಳ ಹುಟ್ಟಿಗೆ ಕಾರಣವಾಗಿರಬೇಕು" ಎಂಬ ಚಿದಾನಂದ ಮೂರ್ತಿಯವರ ಹೇಳಿಕೆಗೆ ದನಿಗೂಡಿಸಬಹುದಾದರೂ ಅಂತಿಮವಾಗಿ ವರ್ಣ ವ್ಯವಸ್ಥೆ ಹುಟ್ಟಿದ್ದು ಸಮಾಜದಲ್ಲಿನ ಉತ್ಪಾದನಾ ವಸ್ತುಗಳ ವ್ಯವಸ್ಥಿತ ವಿತರಣೆಗಾಗಿ ಎಂಬ ಅಂಶವೂ ಗಮನಾರ್ಹವಾಗಿದೆ. ಯಾವುದೇ ಸಮಸ್ಯೆಯು ನಿರ್ಮಾಣಗೊಳ್ಳುವುದು ಎಷ್ಟು ಗಮನಾರ್ಹ ಅಂಶವೋ ಅದೇ ರೀತಿ ಅದನ್ನು ಮುಂದುವರೆಸಿಕೊಂಡು ಹೋಗುವುದು ಕೂಡ ಮುಖ್ಯವಾಗುತ್ತದೆ.

ಹಿಂದೆ ಈ ಮೇಲ್ಕಾಣಿಸಿದ ಜಾತಿ ವ್ಯವಸ್ಥೆಯ ಉಗಮವು ವೇದಗಳ ಕಾಲದಿಂದಲೂ ಹಿಡಿದು ವಚನ ಸಾಹಿತ್ಯದ ಕಾಲಕ್ಕೂ ಕಂಡು ಬಂದಿತು. ವರ್ಣ ವ್ಯವಸ್ಥೆ ಮತ್ತು ಜಾತಿ ವ್ಯವಸ್ಥೆಯಾಗಿ ಸಾಮಾಜಿಕ ವರ್ಗದ ಮೇಲೆ ಗಾಢ ಪ್ರಭಾವ ಬೀರಿತು. ಹೀಗೆ ಈ ಜಾತಿ ವ್ಯವಸ್ಥೆ ಹೊಡೆತಕ್ಕೆ ಒಳಗಾದ ಜನಸಾಮಾನ್ಯರ ಬದುಕಿನ ಚಿತ್ರಣವನ್ನು ಕನ್ನಡ ಸಾಹಿತ್ಯ ಜೀವಂತವಾಗಿ ಚಿತ್ರಿಸ ಹೊರಟಿತು. ಅದರ ಫಲವೇ ಪ್ರಗತಿಶೀಲ ಸಾಹಿತ್ಯ ಎನ್ನಬಹುದು. ಈ ಪ್ರಗತಿಶೀಲ ಸಾಹಿತ್ಯದ ಕತೆಗಳಲ್ಲಿ ಪ್ರಮುಖವಾಗಿ ವರ್ಗ, ವರ್ಣ, ಜಾತಿ ವ್ಯವಸ್ಥೆಯ ವಿರುದ್ಧವಾಗಿ ದನಿಯೆತ್ತಿದವರು ಪ್ರಗತಿಶೀಲ ಸಾಹಿತಿಗಳು. ಅವರಲ್ಲಿ ಅ.ನ.ಕೃ., ಬಸವರಾಜ ಕಟ್ಟೀಮನಿ, ತ.ರಾ.ಸು., ಚದುರಂಗ, ನಿರಂಜನ ಇತರೆ ಹಲವಾರು ಲೇಖಕರು ಪ್ರಮುಖರಾಗುತ್ತಾರೆ. ಅವರ ಕಥಾಸಾಹಿತ್ಯವು ಈ ಜಾತಿ ವ್ಯವಸ್ಥೆಯ ವಿರುದ್ಧ ಸಾಮಾಜಿಕ ಬದುಕನ್ನು ಅನುಸರಿಸಿ ಧ್ವನಿಗೂಡಿಸಿದೆ. ಹೀಗೆ ಧ್ವನಿಗೂಡಿಸಿದ ಸಾಹಿತಿಗಳು ಹಾಗೂ ಅವರ ಕತೆಗಳಲ್ಲಿ ವಸ್ತು ವಿಶೇಷತೆ ತಿಳಿಯುವುದು ಇಲ್ಲಿ ಮುಖ್ಯವೆನಿಸಿದೆ.

ಪ್ರಗತಿಶೀಲ ಕನ್ನಡ ಸಣ್ಣ ಕತೆಗಾರರಲ್ಲಿ ಅ.ನ.ಕೃ ಅವರ ಹೆಸರು ಪ್ರಮುಖವಾದುದು. ಸಾಹಿತ್ಯವನ್ನು ನಿರ್ದಿಷ್ಟ ಸಿದ್ಧಾಂತಗಳಿಗೆ ಬೆಸುಗೆ ಹಾಕಿ ತಮ್ಮ ಕತೆಗಳಲ್ಲಿ ಭಾರತೀಯ ಸಾಮಾಜಿಕ ಬದುಕಿನ ವೈವಿಧ್ಯತೆಗಳನ್ನು ಅನಾವರಣಗೊಳಿಸುವ ಆಶಯ ಹೊತ್ತವರು. ಈ ನಿಟ್ಟಿನಲ್ಲಿ ಸಾಹಿತ್ಯಕ್ಕೆ ಇರಲೇಬೇಕಾದ ಸಾಮಾಜಿಕ ಜವಾಬ್ದಾರಿಯನ್ನು ಹೀಗೆ ಸ್ಪಷ್ಟಪಡಿಸುತ್ತಾರೆ.

"ಸಾಹಿತ್ಯ ವಿಲಾಸದ ಸಾಧನವಲ್ಲ, ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ ಸಾಧನವಾಗುವ ಗಾಯಿತ್ರಿಯದು. ಸಾಹಿತಿ ತನ್ನ ಸೂಪ್ತ ಚೇತನದ ಅರಿವನ್ನುಂಟು ಮಾಡಿಕೊಂಡು ಅದರ ಸಂಪೂರ್ಣ ಪ್ರಯೋಜನವನ್ನು ತನ್ನ ನಾಡವರಿಗೆ ಮಾಡಿಕೊಡಬೇಕು. ಅವನ ಕ್ರಾಂತಿ ಖಡ್ಗಕ್ಕೆ ಲೋಕದ ತಾಮಸ ಕಳೆಗಳು ನಡುಗಬೇಕು. ಸಾರ್ಥಕ್ಯ ಸಾಹಿತಿಯ ಜನ್ಮ ಸಾಫಲ್ಯ" ಎಂದು ಸಾಹಿತ್ಯದಲ್ಲಿ ವರ್ಗ ಪ್ರಜ್ಞೆಯ ಹಿನ್ನೆಲೆಯಲ್ಲಿ ಸಮಾಜ ಸುಧಾರಣೆ ಬಯಸಿದ್ದರು. ಅ.ನ.ಕೃ ಅವರ ಈ ಪ್ರಗತಿಪರ ಆಲೋಚನೆ ಭಾರತೀಯ ಹಿಂದೂ ಧರ್ಮವನ್ನು ಆಧರಿಸಿದ ನಿಲುವುಗಳಿಂದ ಕೂಡಿದ್ದಾಗಿತ್ತು. ಅದಕ್ಕೆ ಅನುಗುಣವಾಗಿ ವಾಸ್ತವವಾದಿ ನೆಲೆಯಿಂದ, ಭಾರತದಲ್ಲಿ ತಾಂಡವವಾಡುತ್ತಿದ್ದ ಕಾರ್ಮಿಕರ, ರೈತರ, ಶೋಷಿತರ, ದಲಿತರ, ಮಹಿಳೆಯರ ಹಸಿವು, ಬಡತನ, ನಿರುದ್ಯೋಗ, ಕೋಮುಸಂಘರ್ಷ, ಹಿಂದೂ-ಮುಸ್ಲಿಂ ಬಾಂಧವ್ಯ, ಶೋಷಣೆ ಮುಂತಾದ ಸಮಸ್ಯೆಗಳನ್ನು ತಮ್ಮ ಕತೆಗಳಲ್ಲಿ ವಸ್ತುವನ್ನಾಗಿ ಮಾಡಿಕೊಂಡು ಪ್ರತಿಬಿಂಬಿಸಿದರು. ಹಾಗೂ ಅಂದಿನ ರಾಜಕೀಯ ಸಮಸ್ಯೆಗಳ ಕಥಾವಸ್ತುವಿನ ನಿರ್ವಹಣೆಯು ಇದಕ್ಕಿಂತ ಹೊರತಾಗಿರಲಿಲ್ಲ. ವಿಮರ್ಶಕ ಗಿರಡ್ಡಿ

ISSN 2249 - 5754 VIJNANA KANNADA (PRINT)


ಗೋವಿಂದರಾಜು ಅವರು ಅಭಿಪ್ರಾಯಪಡುವಂತೆ "ಅ.ನ.ಕೃ ಅವರ ವೈಚಾರಿಕ ಲೇಖನಗಳಲ್ಲಿ ಕಾಣುವ ಉಗ್ರ ಪ್ರಗತಿಶೀಲ ನಿಲುವು ಅವರ ಸಣ್ಣ ಕತೆಗಳಲ್ಲಿ ಕಾಣುವುದಿಲ್ಲ. ಅವರ ಬರವಣಿಗೆಗಳಲ್ಲಿ ಅನೇಕ ವಿರೋದಾಭಾಸಗಳು ತುಂಬಿವೆ. ಕೆಲವು ಸಲ ವೇಶ್ಯಾ ಸಮಸ್ಯೆ, ಕೋಮು ಸಂಘರ್ಷ, ಹಸಿವು ಶೋಷಣೆಗಳಂತಹ ಸ್ಫೋಟಕ ವಸ್ತುಗಳ ಬಗ್ಗೆ ದಿಟ್ಟವಾಗಿ ಬರೆಯುತ್ತಾರೆ ಮತ್ತೆ ಕೆಲವು ಸಲ ಕಣ್ಣೀರು ತರಿಸುವ ತಾಯಿಯ ಪ್ರೇಮ, ಹೆಣ್ಣಿನ ತ್ಯಾಗ–ಬಲಿದಾನಗಳಂತಹ ಸಾಂಪ್ರದಾಯಿಕ ವಸ್ತುಗಳ ಬಗ್ಗೆ ಬರೆಯುತ್ತಾರೆ. ಎಷ್ಟೋ ಸಲ ಒಂದು ನಿಶ್ಚಿತ ಕೇಂದ್ರವೇ ಇಲ್ಲದೇ ಕತೆ ಬೆಳೆದಂತೆ ಎಳೆದುಕೊಂಡು ಹೋಗುತ್ತಾರೆ" ಎಂಬ ಅಭಿಪ್ರಾಯವನ್ನು ಒಪ್ಪಬಹುದಾದರೂ ಅ.ನ.ಕೃ ಅವರ ನಿಲುವಿಗೆ ಅವರು ತಮ್ಮ ಪ್ರಗತಿಶೀಲ ಧೋರಣೆಗಳನ್ನು ಹಿಂದೂ ಧರ್ಮದ ಪರಿಮಿತಿಯಲ್ಲಿ ತಳಕು ಹಾಕುವುದರಿಂದ ಆ ದ್ವಂದ್ವ ಕಂಡುಬರುತ್ತದೆ. ಆದರೆ ಅವರ ಕಥಾವಸ್ತುವಿನ ವೈವಿದ್ಯತೆಯನ್ನು ನೋಡಿದರೆ ಅವರ ಅಪಾರವಾದ ಸಾಮಾಜಿಕ ಕಳಕಳಿ ಕಂಡುಬರುತ್ತದೆ. ಸಮಾಜವನ್ನು ತಿದ್ದಬೇಕೆಂಬ ಅವರ ಕತೆಗಳ ಆಶಯವನ್ನು ಅಲ್ಲಗಳೆಯಲಾಗದು.

ಅಭಿವ್ಯಕ್ತಿಸುವ ವಿಧಾನದಲ್ಲಿ ಕಲಾತ್ಮಕತೆಗೆ ಹೆಚ್ಚು ಒತ್ತು ಕೊಡಲಿಲ್ಲ. ಆದರೆ ಕಲಾತ್ಮಕತೆಗೆ ಕಾವು ಕೊಡಬೇಕಾದ ವಾಸ್ತವತೆಯ ನೆಲೆಗಟ್ಟನ್ನು ಪರಿಣಾಮಕಾರಿಯಾಗಿ ಬಳಸಿ ತೋರಿಸಿದರು. "ಅವರಿಗೆ ಕತೆ ಹೇಳುವ ಕಲೆ ಅದ್ಭುತವಾಗಿ ಸಾಧಿಸಿದೆ. ಕನ್ನಡ ಇಷ್ಟು ಸರಳವಾಗಿ, ಶಕ್ತಿಯುತವಾಗಿ, ನಿರರ್ಗಳವಾಗಿ ಹರಿಯಲು ಸಾಧ್ಯವೇ ಎಂದು ಆಶ್ಚರ್ಯಗೊಳಿಸುವ ಶೈಲಿ ಅವರಿಗೆ ಮೊದಲಿನಿಂದ ಸಿದ್ಧಿಸಿದೆ. ಅವರ ಕೃತಿಗಳಲ್ಲಿ ಕಲೆ ಒಮ್ಮೊಮ್ಮೆ ಹಿಂದುಳಿಯಬಹುದು. ಆದರೆ ಅವರ ಗಮನವೆಲ್ಲ ಕೃತಿ ಓದುಗನ ಮನಸ್ಸಿನ ಮೇಲೆ ಮಾಡುವ ಪರಿಣಾಮದ ಮೇಲೆ ಅಲ್ಲದೇ ಕತೆಯ ಓಟ ಬೇರೆಲ್ಲವನ್ನೂ ಮರೆಸಿ ಮನಸ್ಸನ್ನು ಸೆರೆಹಿಡಿಯುತ್ತದೆ".

ಹೀಗೆ ಇವರ ಕತೆಗಳು ಓದುಗರನ್ನು ಹೆಚ್ಚು ಆಕರ್ಷಿಸುವಂತೆ ಮಾಡಿದವು. ಪ್ರಗತಿಶೀಲ ಸಾಹಿತ್ಯದ ಆಶಯವನ್ನು ಹಿಂದೂ ಧರ್ಮ ಪರಂಪರೆಯ ಪರಿಮಿತಿಯಲ್ಲಿ ತಳುಕು ಹಾಕಿ ಅಭಿವ್ಯಕ್ತಿಸಿರುವ "ರೆವರೆಂಡ್ ಡಾ. ರಂಗಸ್" ಕತೆಯು ಅ.ನ.ಕೃ ಅವರ ಸಮಾಜ ಸುಧಾರಣಾ ಮನೋಭಾವದ ಪ್ರತೀಕವಾಗಿದೆ. ನವೋದಯ ಕತೆಗಳ ಸಾಂಪ್ರದಾಯಿಕ ಚೌಕಟ್ಟನ್ನು ಸ್ಫೋಟಿಸುವ ಗುಣವಂತೂ ಪರಿಣಾಮಕಾರಿಯಾಗಿಯೇ ಅ ನ ಕೃ ಈ ಕತೆಯಲ್ಲಿ ತರುತ್ತಾರೆ.

ಹುಲ್ಲು ಹಳ್ಳಿ ಪುಟ್ಟ ಗ್ರಾಮವಾಗಿದ್ದರೂ ನಾನಾ ಕಾರಣಗಳಿಂದಾಗಿ ಆ ಹಳ್ಳಿ ತನ್ನ ಗತಿಶೀಲತೆಯನ್ನು ಪಡೆದುಕೊಂಡು ತನ್ನ ವರ್ಚಸ್ಸಿನ ಮೇಲೆ ನಿಂತಿದೆ. ಕ್ರೈಸ್ತ ಮಿಷನರಿಯವರು ಆ ಹಳ್ಳಿಯಲ್ಲಿ ಕ್ರೈಸ್ತ ದೇವಾಲಯ ಸ್ಥಾಪಿಸಿ ಸಣ್ಣ ಆಸ್ಪತ್ರೆಯನ್ನು ಪ್ರಾರಂಭಿಸಿ ಸುತ್ತಮುತ್ತಲ ಹಳ್ಳಿಗಳಲ್ಲಿ ಜನರಿಗೆ ಆರೋಗ್ಯ ತಪಾಸಣೆ ಮಾಡಿಕೊಡುವ ಕೇಂದ್ರವನ್ನು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಹುಲ್ಲು ಹಳ್ಳಿಯಲ್ಲಿ ಹೊಲೆಯರೇ ಹೆಚ್ಚಾಗಿ ವಾಸವಾಗಿರುವ ಕುಟುಂಬಗಳಿದ್ದು, ಅವರಲ್ಲಿ ಸುಮಾರು ನಲವತ್ತು–ಐವತ್ತು ಜನರನ್ನು ಮತಾಂತರಗೊಳಿಸುವ ಕೆಲಸ ಮಾಡಿದ್ದಾರೆ. ಈ ಮತಾಂತರದ ವಿಚಾರ ಊರಿನವರಿಗೆ ಆತಂಕದ ವಿಚಾರವಾಗಿದ್ದರೂ, ಪಾದ್ರಿ ಮಾಡುವ ವೈದ್ಯ ಚಿಕಿತ್ಸೆಯ ಸೇವೆಯಿಂದಾಗಿ ಮೇಲ್ಜಾತಿಗಳಿಗಿದ್ದ ಆತಂಕ ಉಪಶಮನವಾದಂತಿದೆ. ಈ ಹಳ್ಳಿಯಲ್ಲಿ ಹಿಂದೂ ಮೇಲ್ಜಾತಿಯವರಿಗೆ ಹೊಲೆಯರ ಮತಾಂತರದ ಸಮಸ್ಯೆ ಆತಂಕದ ಬೆಳವಣಿಯಾಗಿದ್ದರೂ, ಹಿಂದೂ ಧರ್ಮದಲ್ಲಿ ಅವಹೇಳನಕ್ಕೆ ಒಳಗಾದ ಶೋಷಿತರಿಗೆ, ಕ್ರೈಸ್ತ ಧರ್ಮವು ಮಾನವೀಯತೆಯ ಸಮಾನತೆಯ ದೃಷ್ಟಿಯಿಂದ ಅಂತವರಿಗೆ ಅವಕಾಶ ನೀಡಿದೆ. ಜೊತೆಗೆ ಮನುಷ್ಯ ಸಂಬಂಧದ ಲೋಕವನ್ನು ಪರಿಚಯ ಮಾಡಿರುವ ಅದರ ಸ್ಪರ್ಶ ಗುಣವನ್ನು ಮುಂದಿನ ಕತೆಯ ಬೆಳವಣಿಯಲ್ಲಿ ಗುರುತಿಸಿ ಕೊಳ್ಳುತ್ತಾರೆ. ಹುಲ್ಲು ಹಳ್ಳಿಯ ಪ್ರಖ್ಯಾತಿಗೆ ಇನ್ನೊಂದು ಮುಖ್ಯ ಕಾರಣ ವಿದ್ವಾಂಸ ಶಾಮಾಶಾಸ್ತ್ರಿಗಳ ವಿದ್ವತ್ ಪ್ರೌಢಿಮೆ ಮೂಲ ಕಾರಣವಾಗಿದೆ. ಜಾತಿಯಿಂದ ಬ್ರಾಹ್ಮಣರಾದರೂ ಅವರ ಪ್ರೌಢಿಮೆ, ವೇದಶಾಸ್ತ್ರ, ಉಪನಿಷತ್ತುಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಪಡೆದುಕೊಂಡು ಈ ಹುಲ್ಲು ಹಳ್ಳಿಯು ಕಾಶಿಯವರೆಗೆ ತನ್ನ ಖ್ಯಾತಿಯನ್ನು ಹೊಂದುವಂತೆ ಮಾಡಿದ್ದಾರೆ. ಆದರೆ ಹಿಂದೂ ಧರ್ಮ ಶಾಸ್ತ್ರಗ್ರಂಥಗಳ ಅಭ್ಯಾಸ ಮಾಡುವ ವಿದ್ವತ್ ಜನಕ್ಕೆ ಆಕರ್ಷಣೀಯ ಬಿಂದುವಾಗಿದೆ. ಇದಕ್ಕೆ ಶಾಮಾಶಾಸ್ತ್ರಿಗಳ ಘನತೆಗೆ ಅವರ ವ್ಯಕ್ತಿಗತ ಸ್ವಭಾವ, ಕಪ್ಪು ಚುಕ್ಕೆಯಂತೆ ಹುಲ್ಲು ಹಳ್ಳಿಯಲ್ಲಿ ಅಪ್ರಖ್ಯಾತವಾಗಿದೆ. "ಶಾಮಾಶಾಸ್ತ್ರಿಗಳ ಪ್ರೌಢಿಮೆ ಕಾಶಿಯವರೆಗೆ ಹೋಗಿದ್ದರೂ ಹುಲ್ಲು ಹಳ್ಳಿಯನ್ನೇ ಬಳಸಿರಲಿಲ್ಲವೆಂಬುದು ಸೋಜಿಗದ ಸಂಗತಿ. ಹಿಂದೂ ಧರ್ಮದ ನಡವಳಿಕೆಯೇ ಶ್ರೇಣೀಕೃತ ಸಮಾಜವನ್ನು ಪುರಸ್ಕರಿಸುವು ದರಿಂದ ಅವರಲ್ಲಿಯೇ ಅಧರ್ಮ ಸ್ವಭಾವದ ಅಸಮಾನತೆಯ ತಾರತಮ್ಯ ಸಹಜವಾಗಿಯೇ ಕಾರಣವಾಗಿದೆ.

"ಶಾಮಾಶಾಸ್ತ್ರಿಗಳು ವೇದ ಶಾಸ್ತ್ರಗಳಲ್ಲಿ ಪಾಂಡಿತ್ಯ ಸಂಪಾದಿಸಿದ್ದರೂ, ಅವರ ನಡಳಿಕೆ ಅಮಾನವೀಯತೆಯ ಆಗರವಾಗಿತ್ತು. ಮುಟ್ಟು–ಚಿಟ್ಟು, ಮಡಿ–ಮೈಲಿಗೆ ಸಂಸ್ಕೃತಿಯಿಂದ ವಿಜೃಂಭಿಸುತ್ತಿದ್ದುದರಿಂದ ಊರಿನ ಜನರಿಗೆ ಶಾಸ್ತ್ರಿಗಳ ಬಗ್ಗೆ ಅನಾದರವಿತ್ತು. ಅದಕ್ಕೆ ಪೂರಕವೆಂಬಂತೆ ಒಂದು ಘಟನೆ ಜರುಗುತ್ತದೆ. ಎಂದಿನಂತೆ ಒಂದು ದಿನ ಪಾಠ ಮುಗಿಸಿ ಶಾಮಾಶಾಸ್ತ್ರಿ ಮತ್ತು ಡಾಕ್ಟರ್ ಗೋಲ್ಡವಿನ್‌ರು ಹೊರ ಬಂದ ಸಂದರ್ಭದಲ್ಲಿ ಅಸ್ಪೃಶ್ಯನಾದ ಹೊಲೆಯ ಮಾದನ ಮಗ ರಂಗ ಎದುರಿಗೆ ಕಂಡ ತಕ್ಷಣವೇ ಕೆಂಡಮಂಡಲವಾಗುತ್ತಾರೆ. "ಆಗಲೇ ಬಂದೆ ಬುದ್ದಿ ಏನೋ ಮಂತ್ರ ಹೇಳ್ತಿದ್ರಿ ಸಂದಾಗಿತ್ತು ಕೇಳ್ತಾ ಅಂಗೇ ನಿಂತಿದ್ದೆ" ಎಂದು ಹೇಳಿದ ತಪ್ಪಿಗೆ ಆತನನ್ನು ಶಪಿಸುತ್ತಾ "ಪಾಪಿ ಭಾಷ್ಯ ಕೇಳಿದ ನಿನ್ನ ಕಿವಿಗೆ ಸೀಸ ಕಾಯಿಸಿ ಹುಯ್ಯಬೇಕು, ಕೇಳಿದೆ ಎಂದು ಹೇಳಿದ ನಿನ್ನ ನಾಲಿಗೆ ಸೀಳಬೇಕು" ಎಂದು ದೊಣ್ಣೆಯಿಂದ ಚಿಕ್ಕ ಹುಡುಗನಾದ ರಂಗನ ಬುರುಡೆಯನ್ನು ಹೊಡೆದು ಹಾಕುತ್ತಾರೆ. ಹೊಲೆಯರ ಹುಡುಗನೊಬ್ಬ ಆಸೆಯಿಂದ ಸಂಸ್ಕೃತ ಭಾಷ್ಯದ ಪಾಠವನ್ನು ಕೇಳಿದ ತಪ್ಪಿಗೆ ಆತನಿಗೆ ಈ ಘೋರ ಶಿಕ್ಷೆಯೇ? ಇದೆಂತಹ ಅಮಾನುಷ ಕೃತ್ಯ ! ಹಿಂದೂ ಧರ್ಮೀಯನೇ ಆದ ಅಸ್ಪೃಶ್ಯ ಹೊಲೆಯರ ಹುಡುಗನನ್ನು ನಡೆಸಿಕೊಂಡ ರೀತಿ ಇದೆಯೇ? ಡಾ. ಅಂಬೇಡ್ಕರ್ ತಮ್ಮ ಬಾಲ್ಯ ಜೀವನದಲ್ಲಿ ಸಂಸ್ಕೃತ ಕಲಿಯಲು ಉಪಾಧ್ಯಾಯರನ್ನು ಕೇಳಿ ಅವಮಾನಿತವಾದದ್ದನ್ನು ನೆನಪಿಸಿಕೊಳ್ಳಬಹುದು. ರಂಗನಿಗೆ ಧಾರಾಕಾರವಾಗಿ ತಲೆಯಿಂದ ರಕ್ತ ಸೋರುತ್ತಿದ್ದರೂ ಮನುಷ್ಯತ್ವವನ್ನು ಮರೆತ ವಿದ್ವಾಂಸ ! ಶಾಸ್ತ್ರಿಗಳು ಹೊಲೆಯುನನ್ನು ನೋಡಿದ, ಮಾತನಾಡಿಸಿದ್ದರಿಂದ ಆದ ಮೈಲಿಗೆಯಿಂದಾಗಿ ಸ್ನಾನ ಮಾಡಲು ಹೊಳೆಯ ಕಡೆಗೆ ಹೊರಟು ಹೋಗುತ್ತಾರೆ. ಮನುಷ್ಯತ್ವ ಮೂರ್ತಿಯಂತಿದ್ದ ಗೋಲ್ಡ್‌ವಿನ್‌ರು ತನ್ನ ಧರ್ಮ ಸಂಸ್ಕೃತಿಯ ಸಂಸ್ಕಾರದಿಂದಾಗಿ ರಂಗ ಯಾವ ಜಾತಿಯ ಎಂಬುದನ್ನು ಅರಿಯದೆ ಆತನ ಸ್ಥಿತಿಯನ್ನು ಕಂಡು ಕರುಳಬಳ್ಳಿ ಮಮ್ಮಲ ಮರಗುತ್ತದೆ. ನಿಜವಾದ ವಿದ್ವತ್ತು ಇರುವಂತಹದ್ದು

ಪಾಂಡಿತ್ಯದಲ್ಲಿ ಅಲ್ಲ. ಮನುಷ್ಯನು ನಡೆದುಕೊಳ್ಳುವ ನಡವಳಿಕೆಯಲ್ಲಿ ಮಾತ್ರವೆಂಬಂತೆ ಡಾ. ಗೋಲ್ಡ್‌ವಿನ್‌ರು ರಂಗನಿಗೆ ನೆರವಾಗುತ್ತಾರೆ.

"ರಂಗನನ್ನು ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡು ತಮ್ಮ ಉತ್ತರೀಯದಿಂದ ರಕ್ತ ಕಾರುತ್ತಿದ್ದ ಅವನ ತಲೆಯನ್ನು ಒರೆಸಲಾರಂಭಿಸಿದರು. ಶಾಸ್ತ್ರಿಗಳು ಧಾರಾಳವಾಗಿ ಬೈದುಕೊಂಡು ಸ್ನಾನಕ್ಕೆ ಹೊಳೆಯ ಹಾದಿಯನ್ನು ಹಿಡಿದುಬಿಟ್ಟರು. ಸಾಹೇಬರ ಕಣ್ಣಲ್ಲಿ ಧಾರಾಕಾರವಾಗಿ ನೀರು ಬರುತ್ತಿತ್ತು. ರಂಗನ ತಲೆಯಿಂದ ಚಿಲುಮೆಯಂತೆ ರಕ್ತ ಚಿಮ್ಮುತ್ತಿತ್ತು. ಸಾಹೇಬರು ಅವನನ್ನು ಹೊತ್ತು ತಂದು ಪಾದ್ರಿಯ ಮನೆಯಲ್ಲಿ ಹಾಕಿ ಉಪಚರಿಸಿದರು". ಇದೇ ನೋಡಿ ಸ್ಪರ್ಶಮೂಲದ ಸಂಸ್ಕೃತಿಗೂ, ಸ್ಪರ್ಶ ಹೀನ ಸಂಸ್ಕೃತಿಗೂ ಕಂಡು ಬರುವ ವ್ಯತ್ಯಾಸ ! ಕ್ರೈಸ್ತ ಧರ್ಮೀಯನ ಮಾನವೀಯತೆಗೂ, ಹಿಂದೂ ಧರ್ಮೀಯನ ಅಮಾನವೀಯ ಸಂಸ್ಕೃತಿಯನ್ನು ಮರೆತ ಅ.ನ.ಕೃ ಪ್ರಗತಿಶೀಲ ಕತೆಗಾರರಾಗಿ ಕಂಡುಬರುತ್ತಾರೆ. ಕಟ್ಟೀಮನಿಯವರ ಕಥನಕಲೆ ಬಡವರ ಬದುಕಿನ ಚಕ್ರವ್ಯೂಹ ಭೇದಿಸುವಾಗ ಸಹಜವಾಗಿ ಅಸಮಾನತೆಯ ವಿರುದ್ಧ ವ್ಯಕ್ತಪಡಿಸಿರುವ ಸಿಟ್ಟು, ಕರುಣಾರಸವಾಗಿ ಹರಿಯುತ್ತದೆ. ಕಟ್ಟೀಮನಿಯವರು ಓದುಗರಿಗೆ ಹೆಚ್ಚು ಹತ್ತಿರವಾಗುತ್ತಾರೆ. ಆ ಕಲಾವಂತಿಕೆಗಳನ್ನೇ ಹೆಚ್ಚಿಗೆ ದುಡಿಸಿಕೊಂಡು ಈ ಕತೆಯಲ್ಲಿರುವ ತೀರ ತೆಳುವಾದ ವಿವರಗಳನ್ನು ಸಂಕ್ಷಿಪ್ತಗೊಳಿಸಿ ನಿರೂಪಿಸಿದ್ದರೆ ಬಹುಶಃ ಹೆಚ್.ಜೆ. ಲಕ್ಕಪ್ಪಗೌಡರು ಈ ಕತೆಯನ್ನು ಗ್ರಹಿಸಿದಂತೆ. "ಬಡತನದ ಧಾರುಣತೆಯನ್ನು ಹೆಚ್ಚಿಸಲು ಅನಾವಶ್ಯಕವಾಗಿ ಶ್ರೀಮಂತರ ವೈಭವವನ್ನು ಎಳೆದಾಡಿ ಹಿಂಸಿಸಿದಂತೆ ಕಾಣುತ್ತದೆ. ಹೊರಗೆ ಕಾಣುವ ವಸ್ತು ನೇರವಾಗಿ ಯಾವ ರಸ ಪರಿವರ್ತನೆಯೂ ಇಲ್ಲದೇ ಕಥಾಲೋಕಕ್ಕೆ ಪ್ರವೇಶಿಸಿದಂತಿದೆ. ಆದ್ದರಿಂದ ಸಫಲಕಲಾ ಪರಿಣಾಮ ಬೀರುವುದಿಲ್ಲ. ಕಲಾವಿದನ ನಿರ್ಲಿಪ್ತತೆಯೂ ಕಾಣದೆ ಪಕ್ಷ ಪಾತ ದೃಷ್ಟಿ ಎದ್ದು ತೋರುತ್ತದೆ" ಎನ್ನುವ ಮಾತುಗಳನ್ನು ಹಿಂದೆ ಸರಿಸಿ ಅವರು ಬಯಸಿದ ಸಫಲ ಕಲಾವಂತಿಕೆಯನ್ನು ಈ ಕತೆಯು ನಿಜವಾಗಿ ಪಡೆದು ಯಶಸ್ವಿಯಾಗುತ್ತದೆಂದು ತೋರುತ್ತದೆ. ದೇವರು ಧರ್ಮದ ಹೆಸರಿನಲ್ಲಿ ಸಾಮಾಜಿಕ ಅನಿಷ್ಟ ಪದ್ಧತಿಯನ್ನು ಪೋಷಿಸುವ ಪುರೋಹಿತಶಾಹಿ ಮತ್ತು ಉಳಿಗಮಾನ್ಯ ವ್ಯವಸ್ಥೆಯ ಶೋಷಣೆಗಳಲ್ಲಿ ಸಿಕ್ಕ ದಲಿತರ ದಾರಿದ್ರ್ಯ ಬದುಕಿನ ಬವಣೆಯನ್ನು ಕತೆಗಾರ ನಿರಂಜನರು "ದೇಗುಲದಲ್ಲಿ ಪಾದರಕ್ಷೆ(?)" ಕಥೆಯಲ್ಲಿ ಚಿತ್ರಿಸಿದ್ದಾರೆ. ಅದೇ ವ್ಯವಸ್ಥೆಯನ್ನು ವ್ಯಂಗ್ಯ ವಿಡಂಬನೆಗೆ ಒಳಗು ಮಾಡಿದ್ದಾರೆ.

ಹರಿಜನ ಹುಡುಗನೊಬ್ಬ ದೇವಸ್ಥಾನ ಪ್ರವೇಶ ಮಾಡಿದನೆಂಬ ಸುದ್ದಿ ಬಿರುಗಾಳಿಯಂತೆ ಹಬ್ಬುತ್ತದೆ. ಊರಿನ ಪ್ರಮುಖರಾದ ಮೊಕ್ತೇಸರರು ಸುದ್ದಿ ಕೇಳಿ ದೇವಸ್ಥಾನಕ್ಕೆ ಆಳಿನ ಜೊತೆಯಲ್ಲಿ ಓಡಿ ಬರುತ್ತಾರೆ. ಅವರ ಆಳು "ಲಿಂಗನ ಮಗ ಸ್ವಾಮಿ" ಎಂದೊಡನೆ ಮೊಕ್ತೇಸರರು ಕಿಡಿಕಿಡಿಯಾಗುತ್ತಾರೆ. ಮೊದಲೇ ಪುರೋಹಿತಶಾಹಿ ವ್ಯವಸ್ಥೆಗೆ ಬುದ್ಧಿಕೊಟ್ಟು ದೇಹ ಮಾತ್ರ ಬೆಳೆಸಿಕೊಂಡ ಮೊಕ್ತೇಸರರು ಲಿಂಗನ ಜಾತಿಯನ್ನು ಹೀನಾಮಾನವಾಗಿ ನಿಂದಿಸತೊಡಗುತ್ತಾರೆ. "ಕುಲಗೆಟ್ಟವನು ! ಲಿಂಗನಿಗೆ ಬಾರಿಸಬೇಕು ! ಚರ್ಮ ಸುಲೀಬೇಕು. ಈ ಹಾಳಾದವರಿಗೆಲ್ಲಾ ನಾಳೆ ಬನ್ನಿ ಎಂದು ಡಂಗೂರ ಹೊಡೆಸಿದರೂ ಇವತ್ತೇ ಕಳಿಸಿದ್ದಾನಲ್ಲ ..." ಎಂದು ದಲಿತರು ಮನುಷ್ಯರೇ ಅಲ್ಲವೇನೋ ಎನ್ನುವಂತೆ ಹೀಯಾಳಿಸುತ್ತಾರೆ.

ನಿರಂಜನರು ಕತೆಯ ಮುಂದಿನ ಭಾಗದಲ್ಲಿ ದಲಿತರ ಲಿಂಗ ಮತ್ತು ಸುಬ್ಬರನ್ನು ಶೋಷಣೆ ಮಾಡಿದ ಪುರೋಹಿತಶಾಹಿ ವ್ಯವಸ್ಥೆ ಮತ್ತು ಉಳಿಗಮಾನ್ಯ ವ್ಯವಸ್ಥೆಯ ಅನಿಷ್ಟ ಸಾಮಾಜಿಕ ಕಟ್ಟು ಕಟ್ಟಳೆಗಳನ್ನು ಭಂಜನಗೊಳಿಸುವ ಸನ್ನಿವೇಶ ತರುತ್ತಾರೆ.

ವ್ಯವಸ್ಥೆಯ ವ್ಯಂಗ್ಯ ವಿಡಂಬನೆ ಮಾಡಿ ಅಸಮಾನತೆಯನ್ನು ಪ್ರಶ್ನೆ ಮಾಡುವಂತೆ ಕತೆ ಕಟ್ಟಿಕೊಡುತ್ತಾರೆ. ದಲಿತರ ಸುಬ್ಬ ದೇವಸ್ಥಾನ ಪ್ರವೇಶ ಮಾಡಿದ ಘಟನೆ ನಡೆದ ಸ್ವಲ್ಪ ಸಮಯದ ನಂತರ ಜಿಲ್ಲೆಯ ಐ.ಸಿ.ಎಸ್. ಅಧಿಕಾರಿ ಗ್ರಾಮವನ್ನು ಸಂದರ್ಶನ ಮಾಡಲು ಬರುವ ಸುದ್ದಿಯನ್ನು ಪಟೇಲರು ಡಂಗೂರ ಸಾರಿಸುತ್ತಾರೆ. ದೇವಸ್ಥಾನಕ್ಕೆ ಆ ದೊರೆಗಳನ್ನು ಆಹ್ವಾನಿಸುವ ವ್ಯವಸ್ಥೆ ಮಾಡಲಾಗುತ್ತದೆ. ವಿಚಿತ್ರವೆಂದರೆ ಧಾರ್ಮಿಕ, ಸಾಮಾಜಿಕ ಕಟ್ಟಳೆಗಳನ್ನು ಉಲ್ಲಂಘಿಸಿದ ತಮ್ಮ ಇತರೆ ಅಧಿಕಾರಿಗಳೊಂದಿಗೆ ಬೂಟ್ ಮೆಟ್ಟಿಕೊಂಡೇ ಗರ್ಭ ಗುಡಿಗೆ ಪ್ರವೇಶ ಮಾಡಿಬಿಡುತ್ತಾರೆ. ಆ ಅಧಿಕಾರಿಗಳಲ್ಲಿ ಹೊಲೆಯರವನಿದ್ದ. ಆತ ಕೂಡಾ ತನ್ನ ಬೂಟುಗಳನ್ನು ಕಳಚಲಿಲ್ಲ. ಹಾಗೆಯೇ ಇನ್ನಿತರೆ ಪೇದೆಗಳು ಅವರಾರೂ ತಮ್ಮ ಪಾದರಕ್ಷೆಗಳನ್ನು ಕಳಚದೇ ನೇರವಾಗಿ ದೇವಸ್ಥಾನ ಪ್ರವೇಶ ಮಾಡುತ್ತಾರೆ. ಸ್ವಲ್ಪ ಹೊತ್ತಿನ ಹಿಂದೆ ಸುಬ್ಬ ಹಸಿವಿನಿಂದ ಅನ್ನಕ್ಕಾಗಿ ದೇವಸ್ಥಾನ ಪ್ರವೇಶ ಮಾಡಿದಾಗ ಎಲ್ಲರೂ ಮಡಿ–ಮೈಲಿಗೆ ಎಂದು ಅರ್ಭಟಿಸಿ, ಹಾರಾಡಿ ಸುಬ್ಬ ಪ್ರವೇಶ ಮಾಡಿದ ಅಪರಾಧಕ್ಕೆ ದಂಡ ಸಮೇತ ಉಗ್ರ ಶಿಕ್ಷೆ ವಿಧಿಸಿ ಅಮಾನವೀಯತೆ ಪ್ರದರ್ಶನ ಮಾಡಿತ್ತು. ಈಗ ಜಿಲ್ಲಾಧಿಕಾರಿ ಪರಂಗಿಯವ ಆತನ ಜೊತೆಯಲ್ಲಿ ಹೊಲೆಯ ಇತರೆ ಜಾತಿಯ ಪೇದೆಗಳಿದ್ದರು. ಅವರಾರನ್ನೂ ಈ ವ್ಯವಸ್ಥೆ ಏನೂ ಮಾಡಲಾಗಲಿಲ್ಲ. ಅಲ್ಲದೇ ಅನ್ಯ ದೇಶೀಯ ಅಧಿಕಾರಿ ಬಯಸದೇ ಇದ್ದರೂ ಆತನ ಹೆಸರಿನಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ದೇವರ ಪ್ರಸಾದ ಕೊಡಲು ಹೋದಾಗ ಅದನ್ನು ನೋಡಿ ತಿರಸ್ಕಾರ ಸೂಚಕ ನಗೆಯಿಂದ ನಕ್ಕು ಹೊರಟು ಹೋಗುತ್ತಾನೆ. ಅಂಥವರನ್ನು ಊರಿನ ಮೊಕ್ತೇಸರರು ಪುರಸ್ಕರಿಸಿ ಗೌರವಿಸುತ್ತಾರೆ.

ದಲಿತರ ಸುಬ್ಬ ಭಾರತೀಯ ಹಿಂದೂವೇ ಆಗಿದ್ದರೂ ಆತನಿಗೆ ದೇವಸ್ಥಾನಕ್ಕೆ ಪ್ರವೇಶವಿಲ್ಲ. ಈ ವರ್ಗದ ಕತೆಗಾರರು ಹಿಂದೂ ಧರ್ಮದ ಮಡಿವಂತಿಕೆಗಳನ್ನು ಮೀರುವ ಪ್ರಯತ್ನ ಮಾಡುತ್ತಾ ಅದರ ಪರಿಷ್ಕರಣ ಬಯಸುತ್ತಾರೆ. ಬಸವರಾಜ ಕಟ್ಟೀಮನಿಯವರು ಸಮಾಜವಾದ ನೇರ ಮತ್ತು ಕಠಿಣವಾದುದು.ಈ ವ್ಯವಸ್ಥೆಯ ಅಸಮಾನತೆಯನ್ನು ಕಂಡು ಅವರ ಮನಸ್ಸು ಆಕ್ರೋಶ ವ್ಯಕ್ತಪಡಿಸುತ್ತದೆ. ಬ್ರಿಟೀಷ್ ಸಾಮ್ರಾಜ್ಯಶಾಹಿ ಮತ್ತು ದೇಶೀಯ ಸಾಮ್ರಾಜ್ಯಶಾಹಿ ಧೋರಣೆ, ದಬ್ಬಾಳಿಕೆಯನ್ನು ಕಂಡು ಕೆರಳಿ ಅವುಗಳನ್ನು ಬಯಲು ಮಾಡುತ್ತದೆ. ಬಡವರ ಬದುಕನ್ನು ಸಾಮಾಜಿಕ ಸಮಾನತೆಯ ಆಧಾರದ ಮೇಲೆ ಕಟ್ಟಲ್ಪಡುತ್ತಾರೆ. ವರ್ಗ ಪ್ರಜ್ಞೆಯ ಹಿನ್ನೆಲೆಯಲ್ಲಿಯೇ ಶೋಷಿತರ ಹಸಿವು ಬಡತನ ಮುಂತಾದ ಸಮಸ್ಯೆಗಳನ್ನು ವೈಭವೀಕರಿಸತೊಡಗಿದರು. ಆ ಅನುಭವಗಳನ್ನು ಅತ್ಯಂತ ಸರಳೀಕರಣಗೊಳಿಸಿ ಅವುಗಳ ಮುಖಗಳನ್ನು ಸಮಗ್ರತೆ ಯಿಂದ ನೋಡಿದರು. ಈ ವರ್ಗಗಳನ್ನು ಶೋಷಿಸುವ ವ್ಯವಸ್ಥೆಯ ಪಟ್ಟಭದ್ರ ಹಿತಾಸಕ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ರೊಚ್ಚು, ಆವೇಶ, ಭಾವುಕತೆಯಿಂದ ವ್ಯವಸ್ಥೆಯ ಮುಖಗಳನ್ನು ಬಯಲು ಮಾಡಿದರು. ಆದರೆ ಆ ವರ್ಗಗಳ ಸಮಸ್ಯೆಗಳನ್ನು ಬಿಡಿಸುವ ನಿಟ್ಟಿನಲ್ಲಿ ಕಲಾತ್ಮಕತೆಗೆ ಹೆಚ್ಚು ಒತ್ತು ಕೊಡದೆ ಹೋದರು. ಪ್ರಮುಖವಾಗಿ ಪ್ರಗತಿಶೀಲ ಲೇಖಕರೆಲ್ಲಾ ಮಧ್ಯಮ ವರ್ಗದವರೇ ಆಗಿದ್ದರೂ ಅವರ ನಿಲುವುಗಳು ಅನುಭವದ ಸತ್ಯವಾಗದೆ ಆರೋಪಿತ ಧೋರಣೆಗಳಾಗಿ

ಉಳಿದುಕೊಂಡವು.

ಈ ಗುಂಪಿನವರು ನವೋದಯದವರಿಗಿಂತ ಭಿನ್ನವಾಗಿ ಹಿಂದೂ ಆಶಯಗಳನ್ನು ಮೀರಲು ಯತ್ನಿಸಿದರು. ಅದೇ ಆಶಯವನ್ನು ಪೋಷಿಸಿದರು. ಅವಕಾಶ ವಂಚಿತರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ಆಶೋತ್ತರವನ್ನು ಮುಂದಿಟ್ಟುಕೊಂಡು ಉಳಿದವರ ಬಗ್ಗೆ ನಿಷ್ಠುರ ನಿಲುವು ತಳೆದರು. ಹಾಗಾಗಿ ಪಾತ್ರಗಳಲ್ಲಿ ಅನುಕಂಪ, ಸಹಾನುಭೂತಿ ಧಾರೆಯೆರೆದರು. 'ಹೃದಯ ತಟ್ಟುವ' ಈ ಗುಂಪಿನ ಲೇಖಕರ ಸಣ್ಣ ಕತೆಗಳು ಆದರ್ಶ ಆವೇಶಯುತ ಭಾಷಾ ಸಮಸ್ಯೆ ಪ್ರಸ್ತುತತೆಯ ಹಿನ್ನೆಲೆಯಲ್ಲಿ ಓದುಗನನ್ನು ಆಕರ್ಷಿಸಿದರು.

**ಅಡಿ ಟಿಪ್ಪಣಿಗಳು**

೧. ಶಿವಾನಂದ್, ಎಸ್. ***ವರ್ಣ ವ್ಯವಸ್ಥೆಯ ಕರಾಳ ಮುಖಗಳು*** (ಸಂಕ್ರಮಣ), ಸಂಪುಟ– ೧೨. ಸಂಚಿಕೆ–೩, ಪುಟ ೧೭೬.

೨. ಲಿಂಗರಾಜ ಬೆಳಕೆರೆ. ***ಪ್ರಗತಿಶೀಲ ಸಾಹಿತ್ಯ : ಜಾತಿ ಮತ್ತು ಅಸ್ಪೃಶ್ಯತೆ.***

೩. ಶಂಕರನಾರಾಯಣರಾವ್, ಎನ್.ಪಿ. ***ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು,*** ಸಂಘರ್ಷ, ಪುಟ ೨೦೭, ೧೯೯೧.

೪. ರಾಘವೇಂದ್ರರಾವ್, ಹೆಚ್.ಎಸ್. ***ಪ್ರಗತಿಶೀಲತೆ,*** ಪುಟ ೪೨, ೪೮, ೧೯೯೦.

೫. ಕೀರ್ತಿನಾಥ ಕುರ್ತುಕೋಟಿ. ***ಯುಗ ಧರ್ಮ ಮತ್ತು ಸಾಹಿತ್ಯ*** zÀ±Àð£À ಪುಟ ೨೨೩, ೧೯೨೬.

೬. ಬೋಳುವಾರ್ ಮಹ್ಮದ್ ಕುಂಞ. (ಸಂ.). ***ಶತಮಾನದ ಸಣ್ಣ ಕತೆಗಳು,***

೭. ಎಲ್.ಎಸ್. ಶೇಷಗಿರಿರಾವ್. ***ಹೊಸಗನ್ನಡ ಸಾಹಿತ್ಯ,*** ಪುಟ ೭೯, ೧೯೮೮.

೮. ಗಿರಡ್ಡಿ ಗೋವಿಂದರಾಜು. ***ಕನ್ನಡ ಕಥಾಸಂಕಲನ,*** ಪ್ರಸ್ತಾವನೆ, ಪುಟ ೧೯, ೧೯೭೮.

೯. ಹೆಚ್.ಜೆ. ಲಕ್ಕಪ್ಪಗೌಡ. ***ಅಸಾಮಾನ್ಯ ಸಾಧನೆ,*** (ಉಲ್ಲೇಖ), ಕಟ್ಟೀಮನೀ, ಬದುಕು ಬರಹ ಅಭಿನಂದನಾ ಗ್ರಂಥ (ಸಂ.), ಪುಟ ೧೨೧, ೧೯೬೯.

೧೦. ಕೆ. ನರಸಿಂಹಮೂರ್ತಿ. ***ಚದುರಂಗರ ಸಮಗ್ರ ಕಥೆಗಳು.*** ಅನುಭಂದದಲ್ಲಿ ಕ್ವಾಟೆ, (ಮುನ್ನುಡಿ), ಪುಟ ೫೭೩, ೧೯೯೯.

೧೧. ಜಿ.ಹೆಚ್. ನಾಯಕ್. ***ಕನ್ನಡ ಸಣ್ಣ ಕಥೆಗಳು,*** ಪ್ರಸ್ತಾವನೆ, ಪುಟ ೧೫, ೧೯೭೮.

೧೨. ಗಿರಡ್ಡಿ ಗೋವಿಂದರಾಜು. ***ಕನ್ನಡ ಕಥಾಸಂಕಲನ,*** ಪ್ರಸ್ತಾವನೆ, ಪುಟ ೨೩, ೧೯೭೬.

## ವಿಷಯ:–02

# ಪತಂಜಲೀಯಮ್

# ಮನೋಅಧ್ಯಾತ್ಮಿಕ ಮತ್ತು ತತ್ವಶಾಸ್ತ್ರ ವಿಜ್ಞಾನಗಳು

## THEME:-02

# PATANJALEEYAM

## PSYCHOSPIRITUAL AND PHILOSOPHICAL SCIENCES

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಅದ್ವೈತ ಮತ್ತು ಶ್ರುತಿಪ್ರಮಾಣ | ದಿನೇಶರಾವ್.ಎಸ್ | 38 – 40 |
| 2 | ನ್ಯಾಯ ವೈಶೇಷಿಕ ದರ್ಶನ–ಒಂದು ಸ್ಥೂಲ ನೋಟ | ನಾಗರಾಜು ಬಿ.ಆರ್ | 41 – 45 |
| 3 | ಅಂಬೇಡ್ಕರ್‌ರವರ ಮೇಲೆ ಬೌದ್ಧ ಧರ್ಮದ ಪ್ರಭಾವ | ಸಿದ್ದರಾಜು.ಈ. | 46 – 48 |
| 4 | "ಚಿದಾಕಾಶ ಗೀತೆ"ಯ ತಾತ್ವಿಕತೆ. | ಶ್ರೀಮತಿ. ಶೋಭಾ ಹೂಲಿಕಟ್ಟಿ | 48 – 52 |
| 5 | ಧ್ಯಾನಶ್ಲೋಕಗಳಿಂದ ನಿತ್ಯಜೀವನದಲ್ಲಾಗುವ ಮನಃಪರಿವರ್ತನೆ | ಕಾಶೀನಾಥ ಶಾಸ್ತ್ರಿ ಹೆಚ್.ವಿ. | 52 – 55 |
| 6 | ಗಾಂಧಿ ಮತ್ತು ಪರಿಸರವಾದ | ಚಿನ್ನಸ್ವಾಮಿ.ಎನ್ | 55 – 57 |
| 7 | ಇಂದ್ರಿಯ ಮನಗಳಾಚಿನ ಪಯಣ ಭಗವದ್ಗೀತೆಯ ಮಾರ್ಗದಲ್ಲಿ | ಟಿ ಎನ್ ಶಿವಕುಮಾರ | 57 – 63 |
| 8 | ಗುರುದೇವ ರಾನಡೆಯವರ ಧರ್ಮ ಮತ್ತು ವಿಜ್ಞಾನದ ಪರಿಕಲ್ಪನೆ – ಒಂದು ವಿಶ್ಲೇಷಣೆ | ಕು. ದೀಪಾ ಕಿತ್ತೂರ | 63 – 65 |
| 9 | ಮಾನವನ ವಿಕಾಸನದ ಹಾದಿಯಲ್ಲಿ ನಂಬಿಕೆಗಳ ಹಾಗು ಉದ್ದೇಶಗಳ ಪ್ರಾಮುಖ್ಯತೆ | ಚಂದ್ರಮೌಳಿ ಎಂ.ಎಸ್ ಭಾನು ಕೆ.ಎನ್. | 66 – 72 |
| 10 | **ಪರಿಕಲ್ಪನಾ ಪರಮಾತ್ಮ: ಒಂದು ಚಿಂತನೆ** | ಚಂದ್ರಮೌಳಿ ಎಂ.ಎಸ್ ಭಾನು ಕೆ.ಎನ್. | 72 – 77 |
| 11 | ಶಿವಸಂಹಿತೆಯಲ್ಲಿ ಪ್ರಾಣಾಯಾಮ ಎಂಬ ಯಜ್ಞ | Dr.M.A.Shruthikirti | 77 - 81 |
| 12 | ಶ್ರೀ ಶಂಕರರ ಆತ್ಮಬೋಧ | SHIVANNA | 81 - 84 |
| 13 | ಸ್ವಾಮಿ ವಿವೇಕಾನಂದರು, ಸಾಮಾಜಿಕ ಸ್ವಾತಂತ್ರ್ಯ ಮತ್ತು ಕರ್ಮಯೋಗ | ದಿವಾಕರ ಟಿ.ಎಸ್. | 85 – 88 |
| 14 | ಧ್ಯಾನದಲ್ಲಿ ಮನಸ್ಸಿನ ಪಾತ್ರ | ಡಾ|| ಕೆ. ವ್ಹಿ. ಜುಕ್ತಿಮಠ | 88 - 91 |
| 15 | ಭಾರತೀಯ ತತ್ವಜ್ಞಾನದಲ್ಲಿ ಚಾರ್ವಾಕ ನೀತಿಶಾಸ್ತ್ರ | ಡಾ.ಬಿ.ಎಚ್.ಗುಜಲಾರ್ | 91 – 93 |
| 16 | ಸ್ವಾಮಿ ವಿವೇಕಾನಂದರ ಪ್ರಕಾರ ಭಕ್ತಿಯೋಗ | ಡಾ.ಎಂ.ಪಿ.ರಮೇಶ್ | 94 – 97 |
| 17 | ಪತಂಜಲಿ ಯೋಗಸೂತ್ರದಲ್ಲಿ ಯೋಗಪ್ರಜ್ಞೆ | ರಾಜಶ್ರೀ. ಕೆ. ನಾಯ್ಕ. | 97 – 101 |

# ಅದ್ವೈತ ಮತ್ತು ಶ್ರುತಿಪ್ರಮಾಣ

*ದಿನೇಶರಾವ್.ಎಸ್
*¸À±ÉÆÃzsÀPÀgÀÄ, vÀAvÉæÃ¯ÁÓ£À «¨sÁUÀ, ªÉÊ¸ÀÆgÀÄ «±Àézs¥ÁæAiÀÄ, ªÉÄ£À¸ÀUÀAUÉÆÃwæ, ªÉÊ¸ÀÆgÀÄ – 570 006.

ಅದ್ವೈತಿಗಳು ಅಂಗೀಕರಿಸುವ ಆರು ಪ್ರಮಾಣಗಳಲ್ಲಿ ಶಬ್ದ ಅಥವಾ ಶ್ರುತಿ ಪ್ರಮಾಣವು ಬಹಳ ಮುಖ್ಯ. ಏಕೆಂದರೆ ಅವರು ಈ ಪ್ರಮಾಣದ ಆಧಾರದ ಮೇಲೆಯೇ ತಮ್ಮ ಸಿದ್ಧಾಂತವನ್ನು ಮಂಡಿಸುವುದು. ಅಂತಿಮ ಸತ್ಯ ಅಥವಾ ಬ್ರಹ್ಮವು ಮಾತು ಮನಸ್ಸುಗಳಿಗೆ ನಿಲುಕದ ವಸ್ತು. ಆದರೆ ಈ ಕಾರಣಕ್ಕಾಗಿ ಬ್ರಹ್ಮದ ಅಸ್ತಿತ್ವವನ್ನು ನಿರಾಕರಿಸಲು ಸಾಧ್ಯವಿಲ್ಲ. ಆದ್ದರಿಂದ ಬ್ರಹ್ಮವನ್ನು ಕುರಿತ ಮಾಹಿತಿಯು ನಮಗೆ ಶ್ರುತಿಯಿಂದ ಮಾತ್ರವೇ ದೊರೆಯುವುದು. ಬುದ್ಧೀಂದ್ರಿಯಗಳಿಗೆ ಮೀರಿದ ವಿಷಯದ ಬಗ್ಗೆ ಶ್ರುತಿಯೇ ನಮಗೆ ಪ್ರಮಾಣವೆಂದು ಶಂಕರರು ಸಾರುತ್ತಾರೆ. ಶ್ರುತಿಯಲ್ಲಿ ಋಷಿಗಳ ಅನುಭವಗಳು ದಾಖಲೆಗೊಂಡಿವೆ. ಋಷಿಗಳ ಅಭೇದಾನುಭವದ ಭಾಷಾಭಿವ್ಯಕ್ತಿಯೇ ಶ್ರುತಿ. ಋಷಿಗಳು ಸತ್ಯವನ್ನು ತಮ್ಮ ಒಳಗಣ್ಣಿನಿಂದ ನೋಡಿ ತಮ್ಮೀ ಅನುಭವಕ್ಕೆ ಭಾಷೆಯ ಅಭಿವ್ಯಕ್ತಿಯನ್ನು ನೀಡಿದರು. ಆದ್ದರಿಂದಲೇ ಅವರನ್ನು 'ಮಂತ್ರದಷ್ಟಾರರು' ಎನ್ನುವುದು. ಅದ್ವೈತಿಗಳ ಪ್ರಕಾರ ವೇದವು ಅಪೌರುಷೆಯ. ಎಂದರೆ ಅದು ಯಾವ ಕಾಲದಲ್ಲೂ ಮತ್ತು ಯಾವ ನಿರ್ದಿಷ್ಟ ವ್ಯಕ್ತಿಯಿಂದಲೂ ರಚಿತವಾದುದಲ್ಲ. ಅಂತಿಮ ಸತ್ಯವೆಂಬುದು ವ್ಯಕ್ತಿ ನಿರ್ಮಿತವಲ್ಲ. ಋಷಿಗಳು ಈ ಸಾರ್ವಕಾಲಿಕ ಸತ್ಯವನ್ನು ಅನುಭವಿಸಿದರೇ ಹೊರತು ಅದನ್ನು ತರ್ಕದಿಂದ ಸೃಷ್ಟಿಸಿದವರಲ್ಲ.

ಅದ್ವೈತಿಯಂತೆ ಮೀಮಾಂಸಕನೂ ಕೂಡ ಶ್ರುತಿಗೆ ಪ್ರಾಧಾನ್ಯವನ್ನು ನೀಡುವನಾದರೂ ಶ್ರುತಿಯನ್ನು ಕುರಿತಂತೆ ಇಬ್ಬರಲ್ಲೂ ಒಂದು ಮುಖ್ಯ ವ್ಯತ್ಯಾಸವಿದೆ. ಮೀಮಾಂಸಕನ ಪ್ರಕಾರ ವೇದದಲ್ಲಿ ಕರ್ಮವನ್ನು ವಿಧಿಸುವ ವಾಕ್ಯಗಳು ಮಾತ್ರ ಪ್ರಮಾಣ. ಉದಾಹರಣೆಗೆ **"ಸ್ವರ್ಗದ ಬಯಕೆ ಇದ್ದವನು ರಾಜಸೂಯ ಯಾಗವನ್ನು ಮಾಡಬೇಕು"** ಎಂಬುದು ಒಂದು ವಾಕ್ಯ. ಇದು ಯಜ್ಞಾಚರಣೆಯನ್ನು ವಿಧಿಸುತ್ತದೆ. ಇಂತಹ ವಿಧ್ಯರ್ಥಕ ವಾಕ್ಯಗಳು ಮಾತ್ರ ಮೀಮಾಂಸಕನಿಗೆ ಪ್ರಮಾಣ. ಉಳಿದ ವಾಕ್ಯಗಳು ಅರ್ಥಹೀನ.

ಆದರೆ ಅದ್ವೈತಿಗೆ ಇದು ಸಮ್ಮತವಲ್ಲ. ಆತನ ಪ್ರಕಾರ ವಿಧ್ಯರ್ಥಕ ವಾಕ್ಯಗಳಿಗೆ (Injunctive statements) ಸ್ವಲ್ಪ ಮಟ್ಟಿಗೆ ಮೌಲ್ಯವೇನೋ ಇದೆ. ಆದರೆ ಅವುಗಳ ಮೌಲ್ಯವು ಗೌಣವಾದುದು. ಆತನ ಪ್ರಕಾರ ವಸ್ತುಸ್ಥಿತಿಯನ್ನು ಕುರಿತ ವಾಕ್ಯಗಳಿಗೆ, ಎಂದರೆ **"ವರ್ಣನಾತ್ಮಕ'** ವಾಕ್ಯಗಳಿಗೆ (Descriptive statements) ಮಾತ್ರ ನಿಜವಾದ ಮೌಲ್ಯವಿರುವುದು. **"ಅದು ನೀನಾಗಿರುವೆ"**, **"ನಾನು ಬ್ರಹ್ಮವಾಗಿರುವೆ"**, **"ಈ ಆತ್ಮವು ಬ್ರಹ್ಮವಾಗಿದೆ"** ಮತ್ತು **"ಪ್ರಜ್ಞೆಯು ಬ್ರಹ್ಮವಾಗಿದೆ"** ಎಂಬುವು ವರ್ಣನಾತ್ಮಕ ವ್ಯಾಕಗಳು. ಇವು ಆತ್ಮವೇ ಬ್ರಹ್ಮವೆಂಬ ವಾಸ್ತವತೆಯ ಬಗ್ಗೆ ವಿವರಿಸುತ್ತವೆ. ಇವು ಯಾವ ಕರ್ಮವನ್ನೂ ವಿಧಿಸುವುದಿಲ್ಲ. ಇಂತಹ ವಾಕ್ಯಗಳಿಗೆ ಮಾತ್ರ ವೇದದಲ್ಲಿ ಮೌಲ್ಯವಿದೆಯೇ ಹೊರತು ವಿಧ್ಯರ್ಥಕ ವಾಕ್ಯಗಳಿಗಲ್ಲ. ವೇದದ ನಿಜವಾದ ತಾತ್ಪರ್ಯವು ಇಂತಹ ಇಂತಹ ವಾಕ್ಯಗಳಲ್ಲಿ ಅಡಗಿರುವುದರಿಂದ ಇವುಗಳಿಗೆ 'ಮಹಾವಾಕ್ಯಗಳು' ಎಂದು ಹೆಸರು.

**ತತ್ತ್ವಮಸಿ ಮಹಾವಾಕ್ಯದ ವಿವರಣೆ:** ಯಾವುದೇ ವಾಕ್ಯವು ಪದಗಳಿಂದ ಕೂಡಿರುತ್ತದೆಂಬುದು ನಮಗೆ ತಿಳಿದ ವಿಷಯ. ಈ ಪದಗಳಿಗೆ **'ವಾಚ್ಯಾರ್ಥ'** ಮತ್ತು **'ಲಕ್ಷ್ಯಾರ್ಥ'** ಎಂದು ಸ್ಥೂಲವಾಗಿ ಎರಡು ರೀತಿಯ ಅರ್ಥಗಳಿರುತ್ತವೆ. ಪದದ ನೇರ ಅಥವಾ ಸಾಧಾರಣವಾದ ಅರ್ಥಕ್ಕೆ ವಾಚ್ಯಾರ್ಥವೆಂದು ಹೆಸರು. ಒಂದು ವಾಕ್ಯವು ವಾಚ್ಯಾರ್ಥದಲ್ಲಿ ಅಸಂಬದ್ಧವೆನಿಸಿದಾಗ ನಾವು ಅದರ ಲಕ್ಷ್ಯಾರ್ಥವನ್ನು ಸ್ವೀಕರಿಸಬೇಕು. ಉದಾಹರಣೆಗೆ **"ತತ್ತ್ವಮಸಿ"** ಎಂಬ ವಾಕ್ಯ. ಇಲ್ಲಿ ತತ್, ತ್ವಂ, ಮತ್ತು ಅಸಿ ಎಂಬ ಮೂರು ಪದಗಳಿವೆ. **'ತತ್'** ಎಂದರೆ **'ಅದು'** ಎಂದರ್ಥ. ಇದು ವಿಶ್ವದ ಮೂಲಕಾರಣವಾದ ಪರಮಾತ್ಮನನ್ನು ಸೂಚಿಸುತ್ತದೆ. **"ತ್ವಂ"** ಎಂದರೆ **"ನೀನು"** ಎಂದರ್ಥ. ಈ ಶಬ್ದವು ಜೀವಾತ್ಮವನ್ನು ಸೂಚಿಸುತ್ತದೆ. **'ಅಸಿ'** ಎಂದರೆ **'ಆಗಿದ್ದೀಯೆ'** ಎಂದರ್ಥ. ಒಟ್ಟಿನಲ್ಲಿ **"ತತ್ತ್ವಮಸಿ"** ಎಂದರೆ **'ಅದು ನೀನು ಆಗಿದ್ದೀಯೆ'** ಎಂದರ್ಥ. ಎಂದರೆ ಈ ವಾಕ್ಯವು ಪರಮಾತ್ಮ ಮತ್ತು ಜೀವಾತ್ಮರ ಏಕತೆಯನ್ನು ಸೂಚಿಸುತ್ತದೆ. ಆದರೆ ವಾಚ್ಯಾರ್ಥದಲ್ಲಿ ಈ ವಾಕ್ಯ ಅರ್ಥಪೂರ್ಣವಾಗುವುದೇ ಎಂಬುದು ಪ್ರಶ್ನೆ. ಏಕೆಂದರೆ ಜೀವಾತ್ಮ ಪರಮಾತ್ಮರು ಸ್ವಭಾವದಲ್ಲಿ ವಿರುದ್ಧವಾಗಿದ್ದಾರೆ. ಪರಮಾತ್ಮನು ಸರ್ವಜ್ಞ, ಸರ್ವಶಕ್ತ ಮತ್ತು ಸರ್ವವ್ಯಾಪಿಯಾದರೆ ಜೀವಾತ್ಮನು ಅಲ್ಪಜ್ಞ, ಅಲ್ಪಶಕ್ತ ಮತ್ತು ಪರಿಮಿತನಾಗಿದ್ದಾನೆ. ಹೀಗೆ ವಿರೋಧ ಲಕ್ಷಣಗಳಿರುವ ಎರಡು ತತ್ತ್ವಗಳು ಹೇಗೆ ಒಂದೇ ಆಗಲು ಸಾಧ್ಯ? ಆದರೂ ಶ್ರುತಿಯು ಇವೆರಡನ್ನೂ ಒಂದೇ ಎಂದು ಸಾರುತ್ತದೆ. ಆದ್ದರಿಂದ ಶ್ರುತಿಯ ಈ ವಾಕ್ಯಕ್ಕೆ ಆಳವಾದ ಅರ್ಥವಿರಬೇಕು. ಈ ಆಳವಾದ ಅರ್ಥವೇ ಲಕ್ಷ್ಯಾರ್ಥ. ಅದ್ವೈತದ ಪ್ರಕಾರ ಮಹಾವಾಕ್ಯಗಳು ವಾಚ್ಯಾರ್ಥದಲ್ಲಿ ಅಸಂಬದ್ಧವಾಗುವುದರಿಂದ ಅವುಗಳನ್ನು ನಾವು ಲಕ್ಷ್ಯಾರ್ಥದಲ್ಲೇ ಸ್ವೀಕರಿಸಬೇಕು.

ಒಂದು ವಾಕ್ಯದ ಲಕ್ಷ್ಯಾರ್ಥವನ್ನು 3 ರೀತಿಯಲ್ಲಿ ಮಾಡಬಹುದು.

1. ಮೊದಲ ರೀತಿಗೆ **"ಜಹಲ್ಲಕ್ಷಣ"** ಎಂದು ಹೆಸರು. ಇಲ್ಲಿ ಶಬ್ದಗಳ ವಾಚ್ಯಾರ್ಥವನ್ನು ಪೂರ್ಣವಾಗಿ ಕೈಬಿಡುತ್ತೇವೆ. ಉದಾಹರಣೆಗೆ **"ಗಂಗೆಯಲ್ಲಿ ಹಳ್ಳಿಯಿದೆ"** ಎಂಬ ವಾಕ್ಯ. ಇಲ್ಲಿ 'ಗಂಗೆಯಲ್ಲಿ' ಎಂಬ ಶಬ್ದದ ವಾಚ್ಯಾರ್ಥ 'ಗಂಗೆಯೊಳಗೆ' ಎಂದಾಗುತ್ತದೆ. ಶಬ್ದವನ್ನು ನಾವು ಈ ಅರ್ಥದಲ್ಲಿ ಗ್ರಹಿಸಿದರೆ ವಾಕ್ಯವು ಅಸಂಬದ್ಧವಾಗುತ್ತದೆ. ಏಕೆಂದರೆ ಗಂಗೆಯೊಳಗೆ ಹಳ್ಳಿಯಿರಲು ಸಾಧ್ಯವಿಲ್ಲ. ಆದ್ದರಿಂದ ಗಂಗೆಯಲ್ಲಿ ಎಂಬ ಶಬ್ದದ ವಾಚ್ಯಾರ್ಥವನ್ನು **ಸಂಪೂರ್ಣವಾಗಿ ತೊರೆದು** ಆ ಪದವನ್ನು **'ಗಂಗೆಯ ದಡದಲ್ಲಿ'** ಎಂದು ಅರ್ಥೈಸುತ್ತೇವೆ. ಆಗ ವಾಕ್ಯವು 'ಗಂಗೆಯ ದಡದಲ್ಲಿ ಹಳ್ಳಿಯಿದೆ' ಎಂದಾಗುತ್ತದೆ.

2. ಎರಡನೆಯ ವಿಧಾನಕ್ಕೆ **'ಅಜಹಲ್ಲಕ್ಷಣ'** ಎಂದು ಹೆಸರು. ಇಲ್ಲಿ ವಾಕ್ಯದ ವಾಚ್ಯಾರ್ಥವನ್ನು ಉಳಿಸಿಕೊಳ್ಳತ್ತೇವೆ. ಆದರೆ ಅದನ್ನು ಇನ್ನೂ ಅರ್ಥಪೂರ್ಣಗೊಳಿಸಲು ಹೊಸ ಅರ್ಥವನ್ನು ಸೇರಿಸುತ್ತೇವೆ. ಉದಾಹರಣೆಗೆ ಜನರು ಕೊಡೆಗಳನ್ನು ಹಿಡಿದು ಸಾಗುತ್ತಿದ್ದಾರೆ ಎಂಬ ವಾಕ್ಯ (ಛತ್ರಿಣಃ ಯಾಂತಿ). ಈ ವಾಕ್ಯವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ನಾವು ಅದರ ವಾಚ್ಯಾರ್ಥವನ್ನು

ಉಳಿಸಿಕೊಳ್ಳುವುದಷ್ಟೇ ಅಲ್ಲ, ಅದರಲ್ಲಿ ಹೇಳಿಲ್ಲದ ಅಂಶಗಳನ್ನೂ ಸೇರಿಸುತ್ತೇವೆ. ಎಂದರೆ "ಕೊಡೆಗಳನ್ನು ಹಿಡಿದವರಷ್ಟೇ ಅಲ್ಲ, ಕೊಡೆಗಳಿಲ್ಲದವರೂ ಕೂಡ ಕೊಡೆಗಳನ್ನು ಹಿಡಿದವರ ಆಶ್ರಯದಲ್ಲಿ ಹೋಗುತ್ತಿದ್ದಾರೆ" ಎಂದು ಹೇಳುತ್ತೇವೆ.

3. ಮೂರನೆಯ ವಿಧಾನಕ್ಕೆ **'ಜಹದಜಹಲ್ಲಕ್ಷಣ'** ಎಂದು ಹೆಸರು. ಇದನ್ನು **ಭಾಗತ್ಯಾಗ ಲಕ್ಷಣ**ವೆಂದೂ ಕರೆಯುತ್ತಾರೆ. ಇಲ್ಲಿ ಮೊದಲ ವಿಧಾನದಂತೆ ಪದಗಳ ವಾಚ್ಯಾರ್ಥವನ್ನು ನಾವು ಪೂರ್ಣವಾಗಿ ತೊರೆಯುವುದೂ ಇಲ್ಲ. ಹಾಗೆಯೇ ಅದನ್ನು ಎರಡನೆಯ ವಿಧಾನದಂತೆ ಪೂರ್ಣವಾಗಿ ಉಳಿಸಿಕೊಳುವುದೂ ಇಲ್ಲ. ಬದಲಾಗಿ ಅದರ ಒಂದು ಭಾಗವನ್ನು ಮಾತ್ರ ಉಳಿಸಿಕೊಂಡು ಉಳಿದ ಅರ್ಥವನ್ನು ತ್ಯಜಿಸುತ್ತೇವೆ. ಉದಾಹರಣೆಗೆ **"ಈತನೇ ಆ ದೇವದತ್ತ"** ಎಂಬ ವಾಕ್ಯ. ಈ ವಾಕ್ಯದಲ್ಲಿ ಈತನು ಮತ್ತು ದೇವದತ್ತ ಎಂಬ ಎರಡು ಪದಗಳಿವೆ. ಇವು ವಿಷಯಿ ಮತ್ತು ವಿಶೇಷಣಗಳಲ್ಲ. ಎಂದರೆ 'ದೇವದತ್ತ' ಎಂಬ ಪದವು 'ಈತನು' ಎಂಬ ಪದಕ್ಕೆ ವಿಶೇಷಣವಾಗಲು ಸಾಧ್ಯವಿಲ್ಲ. ವಿಷಯಿ ಮತ್ತು ವಿಶೇಷಣಗಳಲ್ಲಿ ಭೇದವಿರುತ್ತದೆ. ಈ ವಾಕ್ಯದಲ್ಲಾದರೋ ಎರಡು ಪದಗಳ ನಡುವೆ ಅಭೇದವಿದೆ. ದೇವದತ್ತನನ್ನು ಎರಡು ವಿಭಿನ್ನ ಸ್ಥಳಗಳಲ್ಲಿ, ಕಾಲಗಳಲ್ಲಿ ಮತ್ತು ಸಂದರ್ಭಗಳಲ್ಲಿ ನೋಡಿದರೂ ನಾವು ಅವನನ್ನು ಒಬ್ಬನೇ ಎಂದು ಗುರುತಿಸುತ್ತೇವೆ. ಇಲ್ಲಿ ಸ್ಥಳ, ಕಾಲ ಮತ್ತು ಸಂದರ್ಭಗಳಲ್ಲಿ ಭೇದವಿದೆ. ಆದರೆ ಮೂಲ ಸತ್ವದಲ್ಲಿ ಮಾತ್ರ ಅಭೇದವಿದೆ. ಆದ್ದರಿಂದ ಈ ವಿಧಾನದಲ್ಲಿ ನಾವು ಭೇದಕ್ಕೆ ಕಾರಣವಾದ ಅಂಶಗಳನ್ನು ಗೌಣವೆಂದು ತಿರಸ್ಕರಿಸಿ, ಏಕತೆಗೆ ಕಾರಣವಾದ ಅಂಶವನ್ನು ಸ್ವೀಕರಿಸುತ್ತೇವೆ.

ಅದ್ವೈತದ ಪ್ರಕಾರ 'ತತ್ತ್ವಮಸಿ' ಎಂಬ ಮಹಾವಾಕ್ಯವನ್ನು ನಾವು ಮೂರನೆಯ ವಿಧಾನದಲ್ಲಿ ಮಾತ್ರ ಅರ್ಥೈಸಬೇಕು. ತತ್ ಮತ್ತು ತ್ವಂ ಎಂಬ ಪದಗಳಿಗೆ ವಿರುದ್ಧ ಅರ್ಥಗಳಿವೆ. ಎಂದರೆ ಪರಮಾತ್ಮ ಮತ್ತು ಜೀವಾತ್ಮರು ಸ್ವಭಾವದಲ್ಲಿ ವಿರುದ್ಧ. ಮಹಾವಾಕ್ಯವು ಇವರನ್ನು ಒಂದಾಗಿಸುತ್ತದೆ. ಅದ್ವೈತದ ಪ್ರಕಾರ ಅದರಲ್ಲಿನ ಈ ವ್ಯತ್ಯಾಸವನ್ನು ನಾವು ಗೌಣವೆಂದು ತಿರಸ್ಕರಿಸಬೇಕು. ಅವರಲ್ಲಿ ಕಾಣಬರುವ ಸಮಾನ ಅಂಶವನ್ನು ಮಾತ್ರ ಸ್ವೀಕರಿಸಬೇಕು. ಎರಡೂ ತತ್ವಗಳು ಸತ್, ಚಿತ್, ಆನಂದ ಸ್ವರೂಪವಾಗಿವೆ. ಈ ವಿಷಯದಲ್ಲಿ ಜೀವಾತ್ಮ ಪರಮಾತ್ಮರಲ್ಲಿ ಭೇದವಿಲ್ಲ. ಈ ಅಭೇದ ಅಂಶವನ್ನು ನಾವು ಸ್ವೀಕರಿಸಿದಲ್ಲಿ, ಅವುಗಳಲ್ಲಿ ಕಾಣಬರುವ ವ್ಯತ್ಯಾಸಗಳು ನಮಗೆ ಗೌಣವಾಗುತ್ತದೆ. ಭೇದಕ್ಕೆ ಎಡೆಮಾಡಿಕೊಡುವ ಅಂಶಗಳು ತಿರಸ್ಕಾರಾರ್ಹವಾಗುತ್ತದೆ. ಅಭೇದಕ್ಕೆ ಕಾರಣವಾದ ಅಂಶವು ಸ್ವೀಕಾರಾರ್ಹವಾಗುತ್ತದೆ. ಈ ಅರ್ಥದಲ್ಲಿ ನಾವು ವಾಕ್ಯವನ್ನು ಗ್ರಹಿಸಿದರೆ ಜೀವಾತ್ಮನು ಜೀವಾತ್ಮನಾಗದೇ ಪರಮಾತ್ಮನು ಪರಮಾತ್ಮನಾಗದೇ ಎರಡೂ ಬ್ರಹ್ಮವಾಗುತ್ತವೆ. ಒಟ್ಟಾರೆ ಮೇಲ್ನೋಟಕ್ಕೆ ಜೀವಾತ್ಮ ಪರಮಾತ್ಮರಲ್ಲಿ ಭೇದವಿದೆಯೇ ಹೊರತು ಆಳವಾದ ಅರ್ಥದಲ್ಲಲ್ಲ. ಈ ಎಲ್ಲ ಅಂಶಗಳನ್ನೂ ಶಂಕರರು ತಮ್ಮ **'ವಾಕ್ಯವೃತ್ತಿ'** ಎಂಬ ಪ್ರಕರಣ ಗ್ರಂಥದಲ್ಲಿ ವಿವರಿಸುತ್ತಾರೆ.

ಶಬ್ದ ಪ್ರಮಾಣವು ನಿಜವೋ ಸುಳ್ಳೋ ಎಂಬ ಜಿಜ್ಞಾಸೆಯು ಇದೆ. ಈ ಪ್ರಶ್ನೆಯನ್ನು ನೈಯಾಯಿಕನು ಕೇಳುತ್ತಾನೆ. ಆತನ ಪ್ರಕಾರ ಶಬ್ದ ಅಥವಾ ವೇದವು ನಿಜವಾದರೆ ಆಗ ಬ್ರಹ್ಮವು ಅದ್ವೈತವಾಗಲಾರದು. ಎಂದರೆ ಅದ್ವೈತವು ನಿಜವಾಗಲಾರದು. ಏಕೆಂದರೆ ಬ್ರಹ್ಮದ ಜೊತೆಗೆ ಶಬ್ದವೆಂಬ ಮತ್ತೊಂದು ಸತ್ಯವನ್ನು ಅಂಗೀಕರಿಸಿದಂತಾಗುತ್ತದೆ. ಹಾಗಿಲ್ಲದೇ ಶಬ್ದವೂ ಸುಳ್ಳಾದರೆ ಸುಳ್ಳು ಪ್ರಮಾಣದಿಂದ ಉಂಟಾಗುವ ಜ್ಞಾನವು ನಿಜವಾಗಲು ಸಾಧ್ಯವಿಲ್ಲ. ಆದರೆ ಅದ್ವೈತಿಯ ಪ್ರಕಾರ ಪಾರಮಾರ್ಥಿಕವಾಗಿ ಎಲ್ಲ ಪ್ರಮಾಣಗಳೂ ಸುಳ್ಳೇನೋ ಸರಿ. ಆದರೆ ಇದರ ಅರ್ಥ ಅಪರಾವಿದ್ಯೆಯು (ಲೋವರ್ ನಾಲೆಡ್ಜ್) ಪರಾವಿದ್ಯೆಯನ್ನು (ಹೈಯರ್ ನಾಲೆಡ್ಜ್) ನೀಡುವುದಿಲ್ಲವೆಂದಲ್ಲ. ಸ್ವಪ್ನವು ಸುಳ್ಳೇನೋ ಸರಿ. ಆದರೆ ಕನಸಿನಲ್ಲಿ ನಾವು ಕಂಡ ಹುಲಿ ನಮ್ಮನ್ನು ಎಚ್ಚರದ ಸ್ಥಿತಿಗೆ ಒಯ್ಯುತ್ತದೆ. ಹೀಗೆ ಸತ್ಯದ ಜ್ಞಾನವು ಅಸತ್ಯದಿಂದಲೂ ಸಂಭವಿಸಲು ಸಾಧ್ಯವುಂಟು.

ಈ ಸಂದರ್ಭದಲ್ಲಿ ಮತ್ತೊಂದು ಪ್ರಶ್ನೆಯು ಏಳುತ್ತದೆ. ಬ್ರಹ್ಮವನ್ನು ಕುರಿತ ಮಾಹಿತಿಗೆ ಶ್ರುತಿಯೊಂದೇ ಪ್ರಮಾಣವಾದಲ್ಲಿ, ಅದ್ವೈತದಲ್ಲಿ ತರ್ಕ ಅಥವಾ ವಿಚಾರಕ್ಕೆ ಸ್ಥಾನವೇ ಇಲ್ಲವೇ? ಅದ್ವೈತದಲ್ಲಿ ತರ್ಕ ಅಥವಾ ವಿಚಾರದ ಸ್ಥಾನವೇನು? ಶ್ರುತಿಗೂ ಮತ್ತು ವಿಚಾರಕ್ಕೂ ಇರುವ ಸಂಬಂಧವೇನು?.

ಮೇಲಿನ ಪ್ರಶ್ನೆಗಳಿಗೆ ಅದ್ವೈತಿಯು ವಿವರವಾದ ಉತ್ತರವನ್ನು ನೀಡುತ್ತಾನೆ. ಆತನ ಪ್ರಕಾರ ಒಂದು ಪ್ರಮಾಣವನ್ನು ನಾವು ಎರಡು ಕಾರಣಗಳಿಗಾಗಿ ತಿರಸ್ಕರಿಸಬೇಕಾಗುತ್ತದೆ. ಮೊದಲನೆಯದಾಗಿ ಅದು ಇತರ ಪ್ರಮಾಣಗಳ ಸತ್ಯವನ್ನೇ ಸ್ಥಾಪಿಸಹೊರಟಾಗ ಅದನ್ನು ನಾವು ತಿರಸ್ಕರಿಸಬೇಕಾಗುತ್ತದೆ. ಎರಡನೆಯದಾಗಿ ಅದು ಇನ್ನೊಂದು ಪ್ರಮಾಣವು ಈಗಾಗಲೇ ಸ್ಥಾಪಿಸಿರುವ ಸತ್ಯವನ್ನು ವಿರೋಧಿಸ ಹೊರಟಲ್ಲೂ ಅದನ್ನು ನಾವು ತಿರಸ್ಕರಿಸಬೇಕಾಗುತ್ತದೆ.

ಅದರೆ ಶ್ರುತಿಯನ್ನು ನಾವು ಮೊದಲ ಕಾರಣಕ್ಕಾಗಿ ನಿರಾಕರಿಸಲು ಸಾಧ್ಯವಿಲ್ಲ. ಏಕೆಂದರೆ ಅದರ ಸತ್ಯವು ಇತರ ಪ್ರಮಾಣಗಳ ಪುನರುಕ್ತಿಯಲ್ಲ. ಅದು ನೀಡುವ ಮಾಹಿತಿಯು ಹೊಸದಾಗಿದ್ದು, ಅದು ಪ್ರತ್ಯಕ್ಷ ಅನುಮಾನಗಳಿಗೆ ದತ್ತವಲ್ಲ. ಪ್ರತ್ಯಕ್ಷದಿಂದ ನಾವು ಬ್ರಹ್ಮವನ್ನು ತಿಳಿಯುವಂತಿಲ್ಲ. ಏಕೆಂದರೆ ಅದಕ್ಕೆ ರೂಪವಾಗಲೀ ಬಣ್ಣವಾಗಲೀ ಇಲ್ಲ. ನಮ್ಮ ಇಂದ್ರಿಯಗಳು ಗ್ರಹಿಸುವುದು ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧವಿರುವ ವಸ್ತುಗಳನ್ನು ಮಾತ್ರ. ಆದರೆ ಬ್ರಹ್ಮಕ್ಕೆ ಈ ಯಾವ ಗುಣವೂ ಇಲ್ಲವಾದ್ದರಿಂದ ಅದು ಪ್ರತ್ಯಕ್ಷಗ್ರಾಹ್ಯವಲ್ಲ.

ಬ್ರಹ್ಮವನ್ನು ಅನುಮಾನದಿಂದಲೂ ತಿಳಿಯಲು ಸಾಧ್ಯವಿಲ್ಲ. ಏಕೆಂದರೆ ಅದಕ್ಕೆ ಲಿಂಗವೆಂಬ ಚಿಹ್ನೆಯಿಲ್ಲ. ಅನುಮಾನದಲ್ಲಿ ಲಿಂಗ ಸಾಧ್ಯಗಳಿಗೆ ಇರುವ ವ್ಯಾಪ್ತಿ ಸಂಬಂಧದ ಆಧಾರದ ಮೇಲೆ ನಾವು ಪಕ್ಷದಲ್ಲಿ ಸಾಧ್ಯದ ಅಸ್ತಿತ್ವವನ್ನು ತರ್ಕಿಸುತ್ತೇವೆ. ಉದಾಹರಣೆಗೆ ಹೊಗೆ ಬೆಂಕಿಗಳ ವ್ಯಾಪ್ತಿ ಸಂಬಂಧದ ಆಧಾರದ ಮೇಲೆ ಬೇರೊಂದು ಸಂದರ್ಭದಲ್ಲಿ ಹೊಗೆಯನ್ನು ಮಾತ್ರ ಕಂಡು ಬೆಟ್ಟದಲ್ಲಿ ಬೆಂಕಿಯ ಅಸ್ತಿತ್ವವನ್ನು ತರ್ಕಿಸುತ್ತೇವೆ. ಇಲ್ಲಿ ಹೊಗೆಯು ಲಿಂಗವಾದರೆ ಬೆಂಕಿಯು ಸಾಧ್ಯ. ಹಾಗೆಯೇ ಬೆಟ್ಟವು ಪಕ್ಷವಾಗುತ್ತದೆ. ಹೊಗೆ ಬೆಂಕಿಗಳಿಗಿರುವ ಅವಿನಾ ಸಂಬಂಧವನ್ನು ವ್ಯಾಪ್ತಿ ಎನ್ನುತ್ತಾರೆ. ಆದರೆ ಬ್ರಹ್ಮವನ್ನು ಈ ಪ್ರಕ್ರಿಯೆಯಿಂದ ತಿಳಿಯಲು ಸಾಧ್ಯವಿಲ್ಲ. ಏಕೆಂದರೆ ಅದಕ್ಕೆ ಲಿಂಗವೆಂಬ ಚಿಹ್ನೆಯಿಲ್ಲ. ಬ್ರಹ್ಮದಲ್ಲಿ ವ್ಯಾಪ್ತಿ ಸಂಬಂಧವಿಲ್ಲ. ಅದು ಎಲ್ಲ ಸಂಬಂಧವನ್ನೂ ಮೀರಿದ ತತ್ವ. ಬ್ರಹ್ಮದೊಡನೆ ವ್ಯಾಪ್ತಿ ಸಂಬಂಧವನ್ನು ಹೊಂದಿರುವ ಮತ್ತೊಂದು ಸಂಬಂಧಿಯೇ ಇಲ್ಲ. ಅದೊಂದು

ನಿರುಪಾಧಿಕವಾದ ತತ್ವ. ಈ ಜಗತ್ತನ್ನು ಲಿಂಗವೆಂದು ಮತ್ತು ಬ್ರಹ್ಮವನ್ನು ಸಾಧ್ಯವೆಂದು ನಾವು ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ ಈ ಜಗತ್ತು ಮತ್ತು ಬ್ರಹ್ಮಗಳು ಒಟ್ಟಿಗಿರುವ ಸಂದರ್ಭಗಳನ್ನು ನಾವು ಈ ಹಿಂದೆ ನೋಡಿಲ್ಲ. ಈ ಜಗತ್ತನ್ನೇನೋ ನಾವು ಇಂದ್ರಿಯಗಳ ಮೂಲಕ ಕಾಣಬಹುದು. ಆದರೆ ಅದರ ಜೊತೆಗೆ ನಾವು ಬ್ರಹ್ಮವನ್ನು ಈ ಹಿಂದೆಂದಿಗೂ ಕಂಡಿಲ್ಲ. ಆದ್ದರಿಂದ ಬ್ರಹ್ಮವನ್ನು ಅನುಮಾನದ ಮೂಲಕ ತರ್ಕಿಸಲು ಸಾಧ್ಯವಿಲ್ಲ.

ಅನುಮಾನದಲ್ಲಿ **ಸಾಮಾನ್ಯತೋದೃಷ್ಟ** ಎಂಬ ಪ್ರಭೇದವಿದೆ. ಇದರ ಪ್ರಕಾರ ಪ್ರಪಂಚದ ಪ್ರತಿಯೊಂದು ವಸ್ತುವಿಗೂ ಸೃಷ್ಟಿಕರ್ತನಿರುವಂತೆ ಈ ಪ್ರಪಂಚಕ್ಕೂ ಒಬ್ಬ ಸೃಷ್ಟಿಕರ್ತನಿದ್ದಾನೆ. ಈ ಸೃಷ್ಟಿಕರ್ತನೇ ಬ್ರಹ್ಮ ಅಥವಾ ದೇವರು. ಈ ವಾದಸರಣಿಯನ್ನು ಅದ್ವೈತವು ಎರಡು ರೀತಿ ಟೀಕಿಸುತ್ತದೆ.

1 ಈ ವಾದವು ದೃಶ್ಯ ಪ್ರಪಂಚದ ಪರಿಧಿಯೊಳಗೆ ಮಾತ್ರ ಅನ್ವಯವಾಗುವುದು. ಕಾರ್ಯಕಾರಣ ಸಂಬಂಧವು ಪ್ರಪಂಚಕ್ಕೆ ಮಾತ್ರ ಸೀಮಿತ. ಅದನ್ನು ಪ್ರಪಂಚದ ಆಚೆ ಅನ್ವಯಿಸಲು ಸಾಧ್ಯವಿಲ್ಲ.

2 ಒಂದು ಪಕ್ಷ ಪ್ರಪಂಚಕ್ಕೆ ಕಾರಣವಿದ್ದರೂ ಅದು ದೇವರೇ ಏಕೆ ಆಗಿರಬೇಕು? ಜಡ ಪ್ರಕೃತಿಯು ಏಕಾಗಿರಬಾರದು? ಹಾಗೆಯೇ ಒಂದು ಪಕ್ಷ ದೇವರೇ ಪ್ರಪಂಚದ ಕಾರಣವಾಗಿದ್ದಲ್ಲಿ ಆ ಕಾರಣವು ದೇವರು ಒಬ್ಬನೇ ಏಕಾಗಿರಬೇಕು? ಮನೆಯೊಂದುನ್ನು ಬುದ್ಧಿವಂತರಾದ ಅನೇಕ ಮಂದಿ ಸೇರಿ ನಿರ್ಮಿಸುವಂತೆ ಈ ಜಗತ್ತನ್ನು ಅನೇಕಮಂದಿ ಸೇರಿ ಏಕೆ ನಿರ್ಮಿಸಿರಬಾರದು?

ಅಲ್ಲದೇ ತರ್ಕದ ತೀರ್ಮಾನಗಳೆಂದಿಗೂ ಒಂದೇ ರೀತಿ ಇರುವುದಿಲ್ಲ. ಮನುಷ್ಯನ ಗ್ರಹಣಶಕ್ತಿ ಭಿನ್ನವಾಗಿರುತ್ತದೆ. ಉದಾಹರಣೆಗೆ ಸಾಂಖ್ಯರು ತರ್ಕದ ಮೂಲಕ ಪ್ರಕೃತಿಯೇ ಜಗತ್ತಿಗೆ ಮೂಲಕಾರಣವೆಂದು ಸಾರುತ್ತಾರೆ. ನೈಯಾಯಿಕರು ಅದೇ ತರ್ಕದ ಮೂಲಕ ಪರಮಾಣುಗಳು ಜಗತ್ತಿಗೆ ಮೂಲಕಾರಣವೆನ್ನುತ್ತಾರೆ. ಆದ್ದರಿಂದ ನಾವೆಷ್ಟು ಗಾಢವಾಗಿ ಆಲೋಚಿಸಿದರೂ ಮತ್ತು ನಮ್ಮ ಬುದ್ಧಿಯು ಎಷ್ಟೇ ಹರಿತವಾಗಿದ್ದರೂ ತರ್ಕದ ಮೂಲಕ ತಳೆದ ತೀರ್ಮಾನವು ವಿಭಿನ್ನವಾಗಿರುತ್ತದೆ. ಇದು ಬುದ್ಧಿ ಅಥವಾ ತರ್ಕದ ಪರಿಮಿತಿ. ಬರಿಯ ತರ್ಕದಿಂದ ಅಥವಾ ಶುಷ್ಕ ತರ್ಕದಿಂದ ಸತ್ಯದ ಸ್ಥಾಪನೆಯು ಸಾಧ್ಯವಿಲ್ಲ. ಅದರಿಂದ ಬಂದ ತೀರ್ಮಾನವು ಸಂಭಾವ್ಯವೇ ಹೊರತು ಖಚಿತವಲ್ಲ. ಇನ್ನು ವೇದವನ್ನು ಎರಡನೇ ಕಾರಣಕ್ಕಾಗಿಯೂ ತಿರಸ್ಕರಿಸುವಂತಿಲ್ಲ. ಏಂದರೆ ಅದು ಮತ್ತೊಂದು ಪ್ರಮಾಣದ ಸತ್ಯವನ್ನು ವಿರೋಧಿಸುತ್ತಿಲ್ಲ ಅಥವಾ ಅದರ ಸತ್ಯವು ಮತ್ತೊಂದು ಪ್ರಮಾಣದ ಸತ್ಯಕ್ಕೆ ವಿರುದ್ಧವಾಗಿಲ್ಲ. ಶ್ರುತಿಗೂ ಮತ್ತು ತರ್ಕಕ್ಕೂ ಯಾವ ವಿರೋಧವೂ ಇಲ್ಲ. ಎರಡೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಾಮಾಣ್ಯವನ್ನು ಹೊಂದಿವೆ. ತರ್ಕವು ಲೌಕಿಕ ಕ್ಷೇತ್ರದಲ್ಲೂ ಶ್ರುತಿಯು ಅಲೌಕಿಕ ಕ್ಷೇತ್ರದಲ್ಲೂ ಪ್ರಾಮಾಣ್ಯವನ್ನು ಹೊಂದಿದೆ. ಎರಡು ಪ್ರಮಾಣಗಳ ವಿಷಯವು ಒಂದೇ ಆದಾಗ ಮಾತ್ರ ಅವುಗಳ ನಡುವೆ ವಿರೋಧ ಬರುವ ಸಂಭವವುಂಟು. ಆದರೆ ಈ ಎರಡು ಪ್ರಮಾಣಗಳ ವಿಷಯಗಳು ಬೇರೆಯಾಗಿರುವಾಗ ಅವುಗಳ ನಡುವೆ ವಿರೋಧವೆಲ್ಲಿಯದು? ಪ್ರತಿಯೊಂದು ಪ್ರಮಾಣಕ್ಕೂ ತನ್ನದೇ ಆದ ವಿಷಯ ಪರಿಧಿಯಿದೆ. ಈ ಪರಿಧಿಯೊಳಗೆ ಮಾತ್ರ ಅದಕ್ಕೆ ಮೌಲ್ಯವಿದೆ. ಇದು ಪ್ರತ್ಯಕ್ಷ ಪ್ರಮಾಣದೊಳಗೇ ಅನ್ವಯವಾಗುತ್ತದೆ. ಉದಾಹರಣೆಗೆ ಕಣ್ಣು ಶಬ್ದವನ್ನು ಕೇಳಲಾರದು ಮತು ಕಿವಿಯು ರೂಪವನ್ನು ನೋಡಲಾರದು. ಕಣ್ಣು ಆಕಾರಗಳ ಕ್ಷೇತ್ರದಲ್ಲಿ ಮಾತ್ರ ಪ್ರಾಮಾಣ್ಯವನ್ನು ಹೊಂದಿದೆ. ಹಾಗೆಯೇ ಕಿವಿಯು ಶಬ್ದಗಳ ಕ್ಷೇತ್ರದಲ್ಲಿ ಮಾತ್ರ ಪ್ರಾಮಾಣ್ಯವನ್ನು ಹೊಂದಿದೆ. ಹಾಗೆಯೇ ಶ್ರುತಿಯೂ ಕೂಡ ಬುದ್ಧೀಂದ್ರಿಯಗಳನ್ನು ಮೀರಿದ ಕ್ಷೇತ್ರದಲ್ಲಿ ಮಾತ್ರ ಮೌಲ್ಯವನ್ನು ಪಡೆದಿರುವುದು. ಶ್ರುತಿಯ ಉದ್ದೇಶ ಲೌಕಿಕ ಸತ್ಯವನ್ನು ಸಮರ್ಥಿಸುವುದಾಗಲೀ ವಿರೋಧಿಸುವುದಾಗಲೀ ಅಲ್ಲ. ಒಂದು ಪಕ್ಷ ಶ್ರುತಿಯು ಇತರ ಪ್ರಮಾಣಗಳಿಗೆ ದತ್ತವಿರುವ ವಿಷಯಗಳನ್ನು ತಿರಸ್ಕರಿಸಿದಲ್ಲಿ ಅದು ತನ್ನ ಪ್ರಾಮಾಣ್ಯವನ್ನು ಕಳೆದುಕೊಳ್ಳುತ್ತದೆ. ಸಾವಿರ ವೇದ ವಾಕ್ಯಗಳು ಮಡಿಕೆಯನ್ನು ವಸ್ತ್ರವೆಂದು ಹೇಳಿದರೂ ಅವುಗಳನ್ನು ನಾವು ಒಪ್ಪುವಂತಿಲ್ಲ. ಏಕೆಂದರೆ ಇಲ್ಲಿ ವೇದವು ಪ್ರತ್ಯಕ್ಷ ಪ್ರಮಾಣಕ್ಕೆ ದತ್ತವಿರುವ ವಿಷಯವನ್ನು ವಿರೋಧಿಸುತ್ತದೆ. ಆದ್ದರಿಂದ ಬುದ್ಧೀಂದ್ರಿಯಗಳಿಗೆ ಮೀರಿದ ಕ್ಷೇತ್ರದಲ್ಲಿ ಮಾತ್ರ ಶ್ರುತಿಯು ಅರ್ಥಪೂರ್ಣವಾಗುವುದು. ಅಂದ ಮಾತ್ರಕ್ಕೆ ಶ್ರುತಿಯಲ್ಲಿ ವಿಚಾರದ ಅಂಶವೇ ಇಲ್ಲವೆಂದರ್ಥವಲ್ಲ. ಅದು ತನ್ನ ತತ್ವಗಳನ್ನು ಸಮರ್ಥಿಸಲು ಅನೇಕ ಕಡೆ ತರ್ಕದ ಮೊರೆಹೋಗುತ್ತದೆ. ಉದಾಹರಣೆಗೆ ಛಾಂದೋಗ್ಯ ಉಪನಿಷತ್ತು **'ತತ್ತ್ವಮಸಿ'** (ಅದು ನೀನಾಗಿರುವೆ) ಎಂಬ ವಾಕ್ಯವನ್ನು ಸಮರ್ಥಿಸಲು ವಿಚಾರದ ಮೊರೆ ಹೋಗುತ್ತದೆ. ಈ ವೈಚಾರಿಕ ಕಾರಣಗಳಿಗೆ **'ಉಪಪತ್ತಿ'** (ಕಾರಣ) ಎಂದು ಕರೆಯುತ್ತಾರೆ. ಒಟ್ಟಿನಲ್ಲಿ ಅದ್ವೈತದ ಪ್ರಕಾರ ತರ್ಕವು ಸ್ವತಂತ್ರವಾಗಿ ಸತ್ಯವನ್ನು ಸ್ಥಾಪಿಸಲಾರದು. ಶ್ರುತಿಯೊಂದೇ ಬ್ರಹ್ಮವನ್ನು ಕುರಿತು ಅಧಿಕಾರಯುಕ್ತವಾಗಿ ಮಾತನಾಡಬಲ್ಲದು. ಆದರೂ ಶ್ರುತಿಯು ತರ್ಕದ ಅಂಶವನ್ನು ಅಲಕ್ಷಿಸಿಲ್ಲ. ಅದ್ವೈತವು ಶ್ರುತಿಗೆ ಅಧೀನವಾದ ತರ್ಕಕ್ಕೆ ಪ್ರಾಧಾನ್ಯ ನೀಡುವುದೇ ಹೊರತು ಶುಷ್ಕ ತರ್ಕಕ್ಕೆ ಅಲ್ಲ.

***ಆಧಾರ ಗ್ರಂಥಗಳು***

1. ಶ್ರೀನಿವಾಸನ್.ಜಿ., ವೇದಾಂತ ಪರಿಚಯ, ಸಮಾಜ ಪುಸ್ತಕಾಲಯ, ಧಾರವಾಡ, 1991.

2. ಹನುಮಂತರಾವ್.ಜಿ., ಭಾರತೀಯ ತತ್ತ್ವಶಾಸ್ತ್ರದ ವಿವರಾಣಾತ್ಮಕ ಪರಿಚಯ–14 ಪುಸ್ತಕಗಳು, ಡಿ.ವಿ.ಕೆ.ಮೂರ್ತಿ, ಮೈಸೂರು,1971–72.

3. ಇಮ್ಮಡಿ ಶಿವಬಸವಸ್ವಾಮಿಗಳು (ಅನು) ಸರ್ವದರ್ಶನಸಂಗ್ರಹ, (ಮೂಲ:ಮಾಧವಾಚಾರ್ಯ). ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,1976.

4. ಪ್ರಭುಶಂಕರ. (ಅನು), ಭಾರತೀಯ ತತ್ತ್ವಶಾಸ್ತ್ರದ ರೂಪುರೇಷೆಗಳು, ಮೂಲ:ಹಿರಿಯಣ್ಣ, ಮೈಸೂರು ವಿ.ವಿ., 1973.

5. ರಾಘವೇಂದ್ರಾಚಾರ್ ಎನ್.ಎಸ್., ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ, ಮೈಸೂರು ವಿ.ವಿ.,1992

6. ರಾಮಚಂದ್ರಶಾಸ್ತ್ರಿ ಎಸ್., ಭಾರತೀಯ ದರ್ಶನ, ಮೂಲ ಬಲದೇವ ಉಪಾಧ್ಯಾಯ, ಮೈಸೂರು.ವಿ.ವಿ., 1970

7. chatterjee and datta, An introduction to Indian philosophy, university of cakcutta 1968.

8. Hiriyanna M., outlines of Indian philosophy,1973

9. Radhakridhnan S., Indian philosophy, 2 vols, George allen and unwin,1923-1927

# ನ್ಯಾಯ ವೈಶೇಷಿಕ ದರ್ಶನ-ಒಂದು ಸ್ಥೂಲ ನೋಟ

*ನಾಗರಾಜು ಬಿ.ಆರ್
*ಸಂಶೋಧಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-570006.

**ಪ್ರಬಂಧ ಸಾರ:-** ನ್ಯಾಯದ ಪ್ರಕಾರ ಎಲ್ಲ ಜ್ಞಾನವೂ ಒಂದು ವಸ್ತುವನ್ನು ಸೂಚಿಸುತ್ತದೆ. ಈ ವಸ್ತುವಿಗೆ ಜ್ಞೇಯ ಪ್ರಮೇಯವೆಂದು ಹೆಸರು. ತಿಳಿಯುವವನಿಗಿಂತಲೂ ಸ್ವತಂತ್ರವಾದ ಈ ವಸ್ತುವಿಲ್ಲದೆ ಜ್ಞಾನವು ಸಾಧ್ಯವಿಲ್ಲ. ಜ್ಞಾನ ಮೀಮಾಂಸೆಯಲ್ಲಿ ಈ ವಾದಕ್ಕೆ ವಾಸ್ತವಿಕವಾದವೆಂದು ಹೆಸರು. ಈ ವಸ್ತುಗಳು ಮನಸ್ಸಿಗಿಂತ ಅಷ್ಟೇ ಅಲ್ಲದೆ ಪರಸ್ಪರವೂ ಸ್ವತಂತ್ರವಾಗಿರುತ್ತವೆ. ಜಗತ್ತಿನಲ್ಲಿ ಅಂತಹ ಅನೇಕ ವಸ್ತುಗಳಿದ್ದು ಅವುಗಳಲ್ಲಿ ಪ್ರತಿಯೊಂದು ಸ್ವತಂತ್ರವಾಗಿ ಇರಬಲ್ಲದು. ಈ ವಾದಕ್ಕೆ ಬಹುತ್ವವಾದವೆಂದು ಹೆಸರು. ಒಟ್ಟಾರೆ ನ್ಯಾಯ ವೈಶೇಷಿಕವು ವಾಸ್ತವಿಕವಾದವಷ್ಟೇ ಅಲ್ಲದೆ ಬಹುತ್ವವಾದವನ್ನು ಪ್ರತಿನಿಧಿಸುತ್ತದೆ.

ಅನುಭವಕ್ಕೆ ದತ್ತವಾದ ಈ ಅನೇಕ ವಸ್ತುಗಳನ್ನು ಕೆಲವು ಗುಂಪುಗಳಾಗಿ ವರ್ಗೀಕರಿಸಬಹುದು. ಇವುಗಳನ್ನು ಪದಾರ್ಥಗಳೆಂದು ಕರೆಯುತ್ತಾರೆ. ಪದಾರ್ಥವೆಂದರೆ ಜಗತ್ತಿನ ವಸ್ತುಗಳನ್ನು ವಿಂಗಡಿಸಬಹುದಾದ ವಿವಿಧ ವರ್ಗಗಳೆಂದರ್ಥ. ನ್ಯಾಯವೈಶೇಷಿಕರ ಪ್ರಕಾರ ಜಗತ್ತಿನ ವಸ್ತುಗಳನ್ನು ಏಳು ವರ್ಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಮತ್ತು ಅಭಾವ. ಮೊದಲು ಕೇವಲ ಆರು ಪದಾರ್ಥಗಳನ್ನು ಮಾತ್ರ ಅಂಗೀಕರಿಸಲಾಗಿತ್ತು. ಅನಂತರ ಅಭಾವವೆಂಬ ಪದಾರ್ಥಕ್ಕೂ ವೈಶೇಷಿಕ ದರ್ಶನದಲ್ಲಿ ಸ್ಥಾನ ದೊರೆಯಿತು.

ಉದಯನನ ಪ್ರಕಾರ ದೇವರಿಲ್ಲವೆನ್ನಲು ಯಾವ ಆಧಾರವೂ ಇಲ್ಲ. ಈ ಅಂಶವನ್ನು ಚರ್ಚಿಸಲು ಆತ ತನ್ನ ಕುಸುಮಾಂಜಲಿಯ ಇಡೀ ಒಂದು ಅಧ್ಯಾಯವನ್ನು ಮೀಸಲಾಗಿರಿಸಿದ್ದಾನೆ ಮತ್ತು ದೇವರಿಲ್ಲವೆನ್ನಲು ಸರಿಯಾದ ಯಾವ ಪ್ರಮಾಣವೂ ಇಲ್ಲವೆಂಬುದನ್ನು ತೋರಿಸುತ್ತಾನೆ. ಉದಯನನ ವಾದವು ಕೇವಲ ಜಿಜ್ಞಾಸೆಯೆನಿಸಬಹುದು. ಆದರೂ ಅದಕ್ಕೆ ಒಂದು ತೂಕವಿದೆ. ದೇವರ ಅಸ್ತಿತ್ವವನ್ನು ಸಮರ್ಥಿಸಲು ಅಸಾಧ್ಯವೆನ್ನುವವರಿಗೆ ಅದು ಒಂದು ಸವಾಲನ್ನೇ ಎಸೆದಿದೆ.

ಕಣಾದರ ವೈಶೇಷಿಕ ದರ್ಶನವು ವೈಶೇಷಿಕಕ್ಕೆ ಆಧಾರಗ್ರಂಥ. ಇದು 10 ಅಧ್ಯಾಯಗಳಿಂದ ಕೂಡಿದ್ದು ಪ್ರತಿಯೊಂದು ಅಧ್ಯಾಯದಲ್ಲೂ 2 ಭಾಗಗಳಿವೆ. ಇದು ಪದಾರ್ಥಗಳನ್ನು ಕುರಿತು ಚರ್ಚಿಸುತ್ತದೆ. ಇದರ ಮೇಲೆ ಪ್ರಶಸ್ತಪಾದರ ವ್ಯಾಖ್ಯಾನವಿದೆ (ಸುಮಾರು ಕ್ರಿ.ಶ.5ನೇ ಶತಮಾನ). ಇದು ವ್ಯಾಖ್ಯಾನಕ್ಕಿಂತಲೂ ವೈಶೇಷಿಕ ದರ್ಶನದ ಪರಿಷ್ಕರಣವನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ ವೈಶೇಷಿಕದಲ್ಲಿ ಸೃಷ್ಟಿಯನ್ನು ಕುರಿತ ವಿವರಣೆಯು ಮೊಟ್ಟಮೊದಲ ಬಾರಿಗೆ **ಪದಾರ್ಥ ಧರ್ಮಸಂಗ್ರಹ**ದಲ್ಲೇ ಬರುವುದು. ಆದ್ದರಿಂದ ಇದನ್ನು ವ್ಯಾಖ್ಯಾನವೆನ್ನುವುದಕ್ಕಿಂತಲೂ ವೈಶೇಷಿಕವನ್ನು ಕುರಿತ ಒಂದು ಸ್ವತಂತ್ರ ಕೃತಿಯೆನ್ನಲು ಅಡ್ಡಿಯಿಲ್ಲ. ಇದನ್ನು ಕುರಿತು ಉದಯನನ ವ್ಯಾಖ್ಯಾನವಿದೆ (ಕ್ರಿ.ಶ.984). ಇದು ಭಾರತೀಯ ಈಶ್ವರವಾದವನ್ನು ಕುರಿತ ಒಂದು ಅತಿಶ್ರೇಷ್ಠ ಸಾಹಿತ್ಯವೆನ್ನಬಹುದು.

ಸಾಮಾನ್ಯವಾಗಿ ವೈಶೇಷಿಕ ದರ್ಶನವನ್ನು ನ್ಯಾಯದರ್ಶನದೊಡನೆ ಅಧ್ಯಯನ ಮಾಡುತ್ತಾರೆ. ನ್ಯಾಯದರ್ಶನಕ್ಕೆ ಗೌತಮರ **ನ್ಯಾಯಸೂತ್ರವು** ಆಧಾರ. ಇದರಲ್ಲಿ 5 ಅಧ್ಯಾಯಗಳನ್ನು ಪ್ರತಿ ಅಧ್ಯಾಯದಲ್ಲೂ 2 ಭಾಗಗಳಿವೆ. ಇದಕ್ಕೆ ವಾತ್ಸ್ಯಾಯನನ (ಕ್ರಿ.ಶ. 400) ವ್ಯಾಖ್ಯಾನವಿದೆ. ಮತ್ತೊಬ್ಬ ನೈಯಾಯಿಕನಾದ ಉದ್ಯೋತಕರನು (ಕ್ರಿ.ಶ. 608-648) ಬಹುಶಃ ಹರ್ಷವರ್ಧನನ ಕಾಲಕ್ಕೆ ಸೇರಿದವನು. ಜಯಂತಭಟ್ಟನ **ನ್ಯಾಯಮಂಜರಿ** ಭಾರತೀಯ ತಾತ್ತ್ವಿಕ ಚಿಂತನೆಯನ್ನು ಕುರಿತು ಅಗಾಧವಾದ ಮಾಹಿತಿಯನ್ನು ನೀಡುವ ದಾಖಲೆಯಾಗಿದೆ.

ನ್ಯಾಯದ ನವೀನ ಮುಖವನ್ನು ನಾವು ಪೂರ್ವ ಬಂಗಾಳದ ಗಂಗೇಶನ (ಕ್ರಿ.ಶ. 1200) **ತತ್ತ್ವಚಿಂತಾಮಣಿ**ಯಲ್ಲಿ ಕಾಣಬಹುದು. ನ್ಯಾಯವು ಇಲ್ಲಿ ಅಪ್ರತಿಮ ರೂಪವನ್ನು ತಳೆಯುತ್ತದೆ. ಅನಂತರ ಒಂದು ಸ್ವತಂತ್ರ ದರ್ಶನವಾದ ನ್ಯಾಯದ ಅಧ್ಯಯನವು ಕ್ಷೀಣಿಸುತ್ತದೆ. ಆದರೆ ಒಂದು ಕಡೆ ಆದ ನಷ್ಟವು ಮತ್ತೊಂದು ಕಡೆ ಲಾಭವಾಗಿ ಪರಿಣಮಿಸಿತು. ಈ ದರ್ಶನವು ಇತರ ದರ್ಶನಗಳನ್ನು ಪ್ರಭಾವಿಸಿತು. ಚಿಂತನೆ ಮತ್ತು ಅದರ ಅಭಿವ್ಯಕ್ತಿಯಲ್ಲಿ ಖಚಿತತೆಯನ್ನು ಬೆಳೆಸಿಕೊಳ್ಳಲು ಅದು ನೆರವಾಯಿತು.

ನ್ಯಾಯದ ಪ್ರಕಾರ ಎಲ್ಲ ಜ್ಞಾನವೂ ಒಂದು ವಸ್ತುವನ್ನು ಸೂಚಿಸುತ್ತದೆ. ಈ ವಸ್ತುವಿಗೆ ಜ್ಞೇಯ ಪ್ರಮೇಯವೆಂದು ಹೆಸರು. ತಿಳಿಯುವವನಿಗಿಂತಲೂ ಸ್ವತಂತ್ರವಾದ ಈ ವಸ್ತುವಿಲ್ಲದೆ ಜ್ಞಾನವು ಸಾಧ್ಯವಿಲ್ಲ. ಜ್ಞಾನ ಮೀಮಾಂಸೆಯಲ್ಲಿ ಈ ವಾದಕ್ಕೆ ವಾಸ್ತವಿಕವಾದವೆಂದು ಹೆಸರು. ಈ ವಸ್ತುಗಳು ಮನಸ್ಸಿಗಿಂತ ಅಷ್ಟೇ ಅಲ್ಲದೆ ಪರಸ್ಪರವೂ ಸ್ವತಂತ್ರವಾಗಿರುತ್ತವೆ. ಜಗತ್ತಿನಲ್ಲಿ ಅಂತಹ ಅನೇಕ ವಸ್ತುಗಳಿದ್ದು ಅವುಗಳಲ್ಲಿ ಪ್ರತಿಯೊಂದು ಸ್ವತಂತ್ರವಾಗಿ ಇರಬಲ್ಲದು. ಈ ವಾದಕ್ಕೆ ಬಹುತ್ವವಾದವೆಂದು ಹೆಸರು. ಒಟ್ಟಾರೆ ನ್ಯಾಯ ವೈಶೇಷಿಕವು ವಾಸ್ತವಿಕವಾದವಷ್ಟೇ ಅಲ್ಲದೆ ಬಹುತ್ವವಾದವನ್ನು ಪ್ರತಿನಿಧಿಸುತ್ತದೆ.

ಅನುಭವಕ್ಕೆ ದತ್ತವಾದ ಈ ಅನೇಕ ವಸ್ತುಗಳನ್ನು ಕೆಲವು ಗುಂಪುಗಳಾಗಿ ವರ್ಗೀಕರಿಸಬಹುದು. ಇವುಗಳನ್ನು ಪದಾರ್ಥಗಳೆಂದು ಕರೆಯುತ್ತಾರೆ. ಪದಾರ್ಥವೆಂದರೆ ಜಗತ್ತಿನ ವಸ್ತುಗಳನ್ನು ವಿಂಗಡಿಸಬಹುದಾದ ವಿವಿಧ ವರ್ಗಗಳೆಂದರ್ಥ. ನ್ಯಾಯವೈಶೇಷಿಕರ ಪ್ರಕಾರ ಜಗತ್ತಿನ ವಸ್ತುಗಳನ್ನು ಏಳು ವರ್ಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಮತ್ತು ಅಭಾವ. ಮೊದಲು ಕೇವಲ ಆರು ಪದಾರ್ಥಗಳನ್ನು ಮಾತ್ರ ಅಂಗೀಕರಿಸಲಾಗಿತ್ತು. ಅನಂತರ ಅಭಾವವೆಂಬ ಪದಾರ್ಥಕ್ಕೂ ವೈಶೇಷಿಕ ದರ್ಶನದಲ್ಲಿ ಸ್ಥಾನ ದೊರೆಯಿತು.

**1. ದ್ರವ್ಯ:** ದ್ರವ್ಯವೆಂಬುದು ಮುಖ್ಯವಾದ ಪದಾರ್ಥ. ಇದು

ಸಂಖ್ಯೆಯಲ್ಲಿ 9. ಚಾರ್ವಾಕರಂತೆ ನ್ಯಾಯ ವೈಶೇಷಿಕರು ಭೌತವಾದಿಗಳಲ್ಲ. ಏಕೆಂದರೆ ಅವರ ಪ್ರಕಾರ ದ್ರವ್ಯಗಳಲ್ಲಿ ಕೇವಲ ಭೌತವಷ್ಟೇ ಅಲ್ಲ, ಅಭೌತದ್ರವ್ಯಗಳೂ ಉಂಟು. ಉದಾಹರಣೆಗೆ ಆತ್ಮವು ಒಂದು ದ್ರವ್ಯ. ಎಲ್ಲ ದ್ರವ್ಯಗಳಿಗೂ ಸಮಾನ ಲಕ್ಷಣಗಳುಂಟು. ಅವು ಸಮಾನ ಸಂಬಂಧಗಳನ್ನು ಪ್ರದರ್ಶಿಸುತ್ತವೆ. ಎಲ್ಲ ದ್ರವ್ಯಗಳು ಜ್ಞೇಯವಾದುವು. ಇದಕ್ಕೆ ಆತ್ಮವೆಂಬ ದ್ರವ್ಯವೇ ಉದಾಹರಣೆ. ಒಂಬತ್ತು ದ್ರವ್ಯಗಳು ಕೆಳಕಂಡಂತಿವೆ.

**ಪೃಥ್ವಿ, ಅಪ್, ತೇಜ ಮತ್ತು ವಾಯು:** ಇವುಗಳು ಇಂದ್ರಿಯಗ್ರಾಹ್ಯವಾದ ಸ್ಥೂಲವಸ್ತುಗಳೆಂದು ತಿಳಿಯಬಾರದು. ಈ ನಾಲ್ಕು ದ್ರವ್ಯಗಳು ಇಂದ್ರಿಯಾತೀತ. ಇವು ಪರಮಾಣು ರೂಪದಲ್ಲಿರುತ್ತವೆ. ಅವು ಅವಯವರಹಿತವೂ ಶಾಶ್ವತವೂ ಆಗಿವೆ. ಜಗತ್ತಿನ ಸ್ಥೂಲವಸ್ತುಗಳೆಲ್ಲವೂ ಈ ಪರಮಾಣುಗಳಿಂದಲೇ ಆಗಿವೆ.

**ಆಕಾಶ:** ಮೊದಲ ನಾಲ್ಕು ಮತ್ತು ಆಕಾಶವೂ ಸೇರಿದಂತೆ ಪಂಚಮಹಾಭೂತಗಳಾಗುತ್ತವೆ. ಆದರೆ ಮೊದಲ ನಾಲ್ಕು ದ್ರವ್ಯಗಳಂತೆ ಆಕಾಶಕ್ಕೆ ಸೂಕ್ಷ್ಮಸ್ಥೂಲರೂಪಗಳಿಲ್ಲ. ಇದು ಅನಂತ ಮತ್ತು ಭಾಗರಹಿತ.

**ಕಾಲ ಮತ್ತು ದೇಶ:** ಕಾಲ ದೇಶಗಳು ಸಾಪೇಕ್ಷವಲ್ಲ. ಅವುಗಳಿಗೆ ನಿರಪೇಕ್ಷ ಅಸ್ತಿತ್ವವಿದೆ. ಆಕಾಶದಂತೆ ಇವು ಅನಂತ ಮತ್ತು ಅವಯವರಹಿತ. ಕಾಲವನ್ನು ನೇರವಾಗಿ ಅಳೆಯಲು ಸಾಧ್ಯವಿಲ್ಲ. ಅದನ್ನು ಸೂರ್ಯನ ಚಲನೆಯ ಮೂಲಕ ಪರೋಕ್ಷವಾಗಿ ಅಳೆಯಬಹುದು. ಹಾಗೆಯೇ ದೇಶವನ್ನು ಧ್ರುವನಕ್ಷತ್ರಕ್ಕೆ ಸಾಪೇಕ್ಷವಾಗಲ್ಲದೇ ಬೇರೆ ರೀತಿ ವಿವರಿಸಲು ಸಾಧ್ಯವಿಲ್ಲ. ಬೇರೆ ರೀತಿ ಹೇಳಬೇಕೆಂದರೆ ಕಾಲದೇಶಗಳಿಗೆ ಪರಮಾಣು ರೂಪವಿಲ್ಲ. ಅವುಗಳನ್ನು ವ್ಯಾವಹಾರಿಕವಾಗಿ ಕ್ಷಣ ಮತ್ತು ಬಿಂದುಗಳೆಂದು ವಿಂಗಡಿಸಬಹುದು. ಪರಮಾಣುಗಳು ದೇಶಕಾಲಗಳಲ್ಲಿ ಇಲ್ಲವಾದರೂ, ಅವುಗಳಿಂದ ನಿಷ್ಪನ್ನವಾದ ಸ್ಥೂಲವಸ್ತುಗಳೆಲ್ಲವೂ ದೇಶಕಾಲಗಳಿಗೆ ಅಧೀನವಾಗಿವೆ. ದೇಶವು ಆಕಾಶಕ್ಕಿಂತಲೂ ಭಿನ್ನವೆಂಬುದನ್ನು ನಾವು ಮರೆಯಬಾರದು. ಆಕಾಶವು ದೇಶವನ್ನು ತುಂಬುವ ಒಂದು ಸೂಕ್ಷ್ಮದ್ರವ್ಯ. ಶಬ್ದವು ಅದರ ವಿಶೇಷ ಗುಣ. ಶಬ್ದವೆಂಬ ಗುಣಕ್ಕೆ ಒಂದು ಆಶ್ರಯವಿರಬೇಕು ಮತ್ತು ಈ ಆಶ್ರಯವೇ ಆಕಾಶವೆಂಬುದು ದರ್ಶನದ ನಿಲುವು.

**ಆತ್ಮ:** ಆತ್ಮವು ಶಾಶ್ವತ ಮತ್ತು ಅನೇಕ. ಜ್ಞಾನವೆಂಬುದು ಅದರ ಸ್ವರೂಪವಲ್ಲ, ಗುಣ, ಅದರಲ್ಲೂ ಒಂದು ಆನುಷಂಗಿಕ ಗುಣ. ಜ್ಞಾನದ ಈ ಆನುಷಂಗಿಕ ಸ್ವಭಾವವು ಸುಷುಪ್ತಿಯಿಂದ ಸ್ಪಷ್ಟವಾಗುತ್ತದೆ. ಸುಷುಪ್ತಿಯಲ್ಲಿ ಆತ್ಮವಿರುವುದಾದರೂ ಜ್ಞಾನ ಅಥವಾ ಅರಿವಿರುವುದಿಲ್ಲ. ಆದ್ದರಿಂದ ಆತ್ಮ ಮತ್ತು ಜ್ಞಾನಗಳು ಒಂದೇ ಅಲ್ಲ. ಅವು ಬೇರೆ ಬೇರೆ. ಅಷ್ಟೇ ಅಲ್ಲ, ಜ್ಞಾನವು ಆತ್ಮದೊಂದಿಗೆ ಸದಾ ಇರಲಾರದು. ಆತ್ಮದೊಂದಿಗೆ ಅದರ ಅಸ್ತಿತ್ವ ಕೇವಲ ಎಚ್ಚರ ಮತ್ತು ಕನಸಿನ ಸ್ಥಿತಿಯಲ್ಲಿ ಮಾತ್ರ. ನ್ಯಾಯ ವೈಶೇಷಿಕದಲ್ಲಿ ಇದು ಆತ್ಮವನ್ನು ಕುರಿತ ಒಂದು ವಿಶಿಷ್ಟ ಸಿದ್ಧಾಂತ. ಆತ್ಮ ಮತ್ತು ಪ್ರಕೃತಿಗಳು ಭಿನ್ನ. ಈ ಭಿನ್ನತೆಯು ಪುನಃ ಚೈತನ್ಯದ ಆನುಷಂಗಿಕ ಸ್ವಭಾವದಿಂದ ನಿರ್ಧರಿತವಾಗಿದೆಯೇ ಹೊರತು ಚೈತನ್ಯವು ಆತ್ಮದ ಮೂಲಭೂತ ಸ್ವರೂಪವೆಂಬ ಅಂಶದಿಂದಲ್ಲ. ಜ್ಞಾನ ಅಥವಾ ಚೈತನ್ಯವು ಆತ್ಮಕ್ಕೆ ಅರ್ಥಪೂರ್ಣವಾಗುವುದು ವಸ್ತುವಿನ ಅಸ್ತಿತ್ವದಲ್ಲಿ ಮಾತ್ರ. ವಿಷಯ ಅಥವಾ ವಸ್ತುವಿಲ್ಲದೇ ಚೈತನ್ಯವು ವ್ಯಕ್ತವಾಗುವುದಿಲ್ಲ. ಇದು ಇಚ್ಛೆ ಮತ್ತು ಯತ್ನಗಳೆಂಬ ಆತ್ಮದ ಇತರ ಗುಣಗಳಿಗೂ ಅನ್ವಯಿಸುತ್ತದೆ. ಒಟ್ಟಾರೆ ಜ್ಞಾನ, ಇಚ್ಛೆ ಮತ್ತು ಯತ್ನಗಳೆಂಬ ಮೂರು ಗುಣಗಳು ಆತ್ಮದ ಶಾಶ್ವತ ಗುಣಗಳಲ್ಲ. ಬದಲಾಗಿ ಅವು ಅಶಾಶ್ವತ ಗುಣಗಳು. ನಾವು ನಮ್ಮ ಆತ್ಮವನ್ನು ನೇರವಾಗಿ ಅರಿಯಬಹುದಾದರೂ ಇತರರ ಆತ್ಮಗಳನ್ನು ಪರೋಕ್ಷವಾಗಿ, ಅವರ ಬಾಹ್ಯ ವರ್ತನೆಯ ಮೂಲಕ ತಿಳಿಯಬಹುದು. ನಾವು ಅದನ್ನು ಜ್ಞಾತೃವಾಗಿ ತಿಳಿಯುತ್ತೇವೆಯೇ ಹೊರತು ಒಂದು ಶುದ್ಧತತ್ತ್ವವಾಗಿಯಲ್ಲ. ಬೇರೆ ರೀತಿ ಹೇಳಬೇಕೆಂದರೆ ಆತ್ಮವನ್ನು ತಿಳಿಯುವಾಗ ನಾವು ಅದನ್ನು ನಿರ್ದಿಷ್ಟಗುಣದಿಂದ ಕೂಡಿರುವುದಾಗಿ ತಿಳಿಯುತ್ತೇವೆಯೇ ಹೊರತು ಗುಣರಹಿತ ವಸ್ತುವಾಗಿ ಅಲ್ಲ.

**ಮನಸ್ಸು:** ಇದು ಅಣುರೂಪಿ ಮತ್ತು ಶಾಶ್ವತ. ಆದರೆ ಮೊದಲ ನಾಲ್ಕು ದ್ರವ್ಯಗಳಿಗೆ ವಿರುದ್ಧವಾಗಿ ಅದಕ್ಕೆ ಸ್ಥೂಲರೂಪವಿಲ್ಲ. ಪ್ರತಿಯೊಂದು ಆತ್ಮಕ್ಕೂ ತನ್ನದೇ ಆದ ಮನಸ್ಸಿರುತ್ತದೆ. ಈ ಮನಸ್ಸು ಜಡವಾದ್ದರಿಂದ ಅದು ಜ್ಞಾನಸಾಧನವೇ ಹೊರತು ಅದೇ ಜ್ಞಾತೃವಾಗಲಾರದು. ಬಾಹ್ಯ ಮತ್ತು ಆಂತರಿಕ– ಈ ಎಲ್ಲ ಜ್ಞಾನಗಳಿಗೂ ಮನಸ್ಸಿನ ಸಹಕಾರವು ಅತಿಮುಖ್ಯ. ನಮ್ಮ ಇಂದ್ರಿಯಗಳು ಕ್ರಿಯಾಶೀಲವಾಗಿದ್ದರೂ, ಅವುಗಳಿಗೆ ಅವುಗಳ ವಿಷಯಗಳೊಂದಿಗೆ ಸಂಪರ್ಕವಿದ್ದರೂ ಅವುಗಳಿಗೆ ವಿಷಯಜ್ಞಾನವಿರಲಾರದು. ಕಾರಣ, ಇಂದ್ರಿಯಗಳಿಗೆ ಮನಸ್ಸಿನ ಸಂಪರ್ಕವಿರುವುದಿಲ್ಲ. ಈ ಮನಸ್ಸಿನ ಮೂಲಕವೇ ಆತ್ಮವು ಇಂದ್ರಿಯ ಮತ್ತು ದೇಹದೊಂದಿಗೆ ಸಂಬಂಧವನ್ನು ಹೊಂದುವುದು ಹಾಗೂ ಈ ಇಂದ್ರಿಯಗಳು ಮತ್ತು ದೇಹದ ಮೂಲಕವೇ ಆತ್ಮವು ಬಾಹ್ಯ ಪ್ರಪಂಚದ ಸಂಬಂಧವನ್ನು ಹೊಂದುವುದು. ಮನಸ್ಸಿನೊಡನೆ ಸಂಪರ್ಕವು ಬಂಧನಕ್ಕೆ ಮೂಲಭೂತ ಕಾರಣ (**ಬಂಧ ನಿಮಿತ್ತಂ ಮನಃ** – ನ್ಯಾಯ ಮಂಜರಿ).

**2. ಗುಣ:** ಗುಣವು ಎರಡನೆಯ ಪದಾರ್ಥ. ಇದು ಒಂದು ಅಥವಾ ಒಂದಕ್ಕಿಂತಲೂ ಹೆಚ್ಚು ದ್ರವ್ಯಗಳಿಗೆ ಸಂಬಂಧಿಸಿದುದು. ಬೌದ್ಧರು ಹೇಳುವಂತೆ ದ್ರವ್ಯವಿಲ್ಲದೆ ಗುಣವು ಒಂದು ಸ್ವತಂತ್ರ ತತ್ತ್ವವಾಗಿರಲು ಸಾಧ್ಯವಿಲ್ಲ. ಎಂದರೆ ದ್ರವ್ಯವೆಂಬ ಸ್ಥಿರ ಆಧಾರವಿಲ್ಲದೇ ಗುಣಗಳಿಗೆ ಅಸ್ತಿತ್ವವಿಲ್ಲ. ಹೀಗೆ ದ್ರವ್ಯವನ್ನು ಅವಲಂಬಿಸಿದ್ದರೂ ಗುಣವು ದ್ರವ್ಯಕ್ಕಿಂತಲೂ ಭಿನ್ನ. ಇಲ್ಲಿ ಅವಲಂಬನೆಯು ಏಕತೆಯನ್ನು ಸೂಚಿಸುವುದಿಲ್ಲ. ಒಂದು ವಸ್ತುವು ಮತ್ತೊಂದನ್ನು ಅವಲಂಬಿಸಿಯೂ ಅದಕ್ಕಿಂತಲೂ ಭಿನ್ನವಾಗಿರಬಹುದು. ಅಲ್ಲದೇ ಗುಣವನ್ನು ದ್ರವ್ಯದ ನೆರವಿಲ್ಲದೆ ಸ್ವತಂತ್ರವಾಗಿ ಅರಿಯಬಹುದು. ಆದ್ದರಿಂದ ಅದನ್ನು ಒಂದು ಸ್ವತಂತ್ರ ಪದಾರ್ಥವಾಗಿಯೇ ಪರಿಗಣಿಸಬೇಕು. ಅದು ವ್ಯಕ್ತಿನಿಷ್ಠವಲ್ಲವೆಂಬುದು ಮತ್ತೊಂದು ಮುಖ್ಯವಾದ ಅಂಶ. ನ್ಯಾಯವೈಶೇಷಿಕರ ಪ್ರಕಾರ ಕೆಲವು ವಸ್ತುಗಳು ವ್ಯಕ್ತಿನಿಷ್ಠ, ಮತ್ತೆ ಕೆಲವು ವಸ್ತುನಿಷ್ಠವೆಂಬುದು ವಿರೋಧಾಭಾಸ. ಗುಣಗಳು ಸಂಖ್ಯೆಯಲ್ಲಿ 24. ಇವುಗಳಲ್ಲಿ ಕೆಲವು ಭೌತಿಕ, ಇನ್ನು ಕೆಲವು ಅಭೌತಿಕ. ಅಭೌತಿಕ ಗುಣಗಳು ಆತ್ಮಕ್ಕೆ ಸಂಬಂಧಿಸಿದವು. ಕೆಲವು ಗುಣಗಳು ಒಂದಕ್ಕಿಂತಲೂ ಹೆಚ್ಚು ದ್ರವ್ಯಗಳಿಗೆ ಸೇರಿದವು. ಉದಾಹರಣೆಗೆ ಪರಿಣಾಮವೆಂಬ ಗುಣ. ಆದರೆ ಕೆಲವು ಗುಣಗಳು

ನಿರ್ದಿಷ್ಟ ದ್ರವ್ಯಗಳಿಗೆ ಮಾತ್ರ ಸೀಮಿತ. ಆದ್ದರಿಂದ ಅವುಗಳಿಗೆ ವಿಶೇಷ ಗುಣಗಳೆಂದು (Specific Qualities) ಹೆಸರು. ಗಂಧ, ರಸ, ರೂಪ, ಸ್ಪರ್ಶ, ಶಬ್ದಗಳು ವಿಶೇಷ ಗುಣಗಳು. ಇವು ಕ್ರಮವಾಗಿ ಪೃಥ್ವಿ, ಅಪ್, ತೇಜ, ವಾಯು ಮತ್ತು ಆಕಾಶವೆಂಬ ದ್ರವ್ಯಗಳಿಗೆ ಸೇರಿದವು.

**3. ಕರ್ಮ:** ಕರ್ಮವು ಚಲನೆಯನ್ನು ಪ್ರತಿನಿಧಿಸುತ್ತದೆ. ಗುಣದಂತೆ ಇದೂ ದ್ರವ್ಯಕ್ಕೆ ಸೇರಿದ್ದು. ಜ್ಞಾನಕ್ಕೆ ದತ್ತವಾದ್ದರಿಂದ ದ್ರವ್ಯಕ್ಕೆ ಅಧೀನವಾದರೂ ಕರ್ಮವೂ ಕೂಡ ಗುಣದಂತೆ ಒಂದು ಪದಾರ್ಥ. ವಸ್ತುವೊಂದು ಪದಾರ್ಥವಾಗಲು ಅದು ಮತ್ತೊಂದು ವಸ್ತುವಿಗೆ ಅಧೀನ ಮತ್ತು ಸ್ವತಂತ್ರ ಎಂಬ ಅಂಶವು ಧಕ್ಕೆ ತರುವುದಿಲ್ಲ. ಅದು ಜ್ಞಾನಕ್ಕೆ ದತ್ತವಾಗಿರಬೇಕಷ್ಟೆ.

**4. ಸಾಮಾನ್ಯ:** ಸಾಮಾನ್ಯವು ವಸ್ತುವೊಂದರ ವರ್ಗವಲ್ಲ. ಎಂದರೆ ಒಂದೇ ಲಕ್ಷಣವಿರುವ ಅನೇಕ ವಸ್ತುಗಳ ವರ್ಗವು ಸಾಮಾನ್ಯವಲ್ಲ. ಎರಡು ಅಥವಾ ಮೂರುವಸ್ತುಗಳಲ್ಲಿ ಕಾಣಬರುವ ಸಾಮಾನ್ಯ ಲಕ್ಷಣವೇ ಸಾಮಾನ್ಯ. ಸಾಮಾನ್ಯವನ್ನು ಮತ್ತೊಂದು ವಸ್ತುವಿನ ಸಂಬಂಧವಿಲ್ಲದೆ ಸ್ವತಂತ್ರವಾಗಿ ಗ್ರಹಿಸಲು ಸಾಧ್ಯವಿಲ್ಲ. ಉದಾಹರಣೆಗೆ ಗೋತ್ವವೆಂಬುದು ಒಂದು ಸಾಮಾನ್ಯ. ಅದು ಎಲ್ಲ ಹಸುಗಳಲ್ಲೂ ಇರುವಂತಹುದು. ಆದರೆ ಅದನ್ನು ನಿರ್ದಿಷ್ಟ ಹಸುವಿನ ಸಂಬಂಧವಿಲ್ಲದೆ ಸ್ವತಂತ್ರವಾಗಿ ಗ್ರಹಿಸಲು ಸಾಧ್ಯವಿಲ್ಲ. ಎಂದರೆ ಸಾಮಾನ್ಯವೊಂದನ್ನು ಬಿಡಿವಸ್ತುವಿನ ಮೂಲಕ ಮಾತ್ರ ಗ್ರಹಿಸಬಹುದು. ಆದರೆ ಸಾಮಾನ್ಯ ಮತ್ತು ಬಿಡಿವಸ್ತುಗಳು ಒಟ್ಟಾಗಿದ್ದರೂ ಅವು ಬೇರೆ ಬೇರೆ ವಸ್ತುಗಳೆಂಬುದನ್ನು ನಾವು ನೆನೆಪಿನಲ್ಲಿಡಬೇಕು. ಸಾಮಾನ್ಯಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದದ್ದು, ಸತ್ತಾ(ಅಸ್ತಿತ್ವ) ಎಂಬುದು. ಏಕೆಂದರೆ ಪ್ರಪಂಚದ ಬಹುತೇಕ ಎಲ್ಲ ವಸ್ತುಗಳಲ್ಲೂ ಈ ಲಕ್ಷಣವಿದ್ದೇ ಇರುತ್ತದೆ. ಅನಂತರ ದ್ರವ್ಯತ್ವ, ಪೃಥ್ವಿತ್ವ ಮತ್ತು ಘಟತ್ವ, ಗುಣತ್ವ ಮತ್ತು ಶುಕ್ಲತ್ವ ಮುಂತಾದವು ಅವರೋಹಣ ಕ್ರಮದಲ್ಲಿ ಬರುತ್ತವೆ. ಇವು ಕ್ರಮೇಣ ಕಡಿಮೆ ಸಂಖ್ಯೆ ವಸ್ತುಗಳ ಲಕ್ಷಣವಾಗಿರುತ್ತದೆ.

**5. ವಿಶೇಷ:** ಇದು ಎರಡು ಸದೃಶ ವಸ್ತುಗಳಲ್ಲಿ ಕಾಣಬರುವ ವ್ಯತ್ಯಾಸಕ್ಕೆ ಕಾರಣವಾಗಿರುವ ಪದಾರ್ಥ. ಉದಾಹರಣೆಗೆ ಎರಡು ಆತ್ಮಗಳಲ್ಲಿ ಸ್ವಭಾವತಃ ಸಾಮ್ಯವಿದ್ದರೂ ಅವು ಎರಡಾಗಿ ಕಾಣಲು ಅವುಗಳಲ್ಲಿ ಏನೋ ವೈಶಿಷ್ಟ್ಯವಿರಬೇಕು. ಈ ವೈಶಿಷ್ಟ್ಯವೇ ವಿಶೇಷ. ಜಗತ್ತಿನಲ್ಲಿ ಕಾಣಬರುವ ಅನೇಕತೆಗೆ ಮತ್ತು ಪ್ರತಿ ವಸ್ತುವಿನ ವೈಶಿಷ್ಟ್ಯಕ್ಕೆ ಈ ವಿಶೇಷವೇ ಕಾರಣ. ವಿಶೇಷಗಳು ಸಂಖ್ಯೆಯಲ್ಲಿ ಅನೇಕ. ನ್ಯಾಯ ವೈಶೇಷಿಕರ ಪ್ರಕಾರ ವಸ್ತು ವಸ್ತುಗಳಲ್ಲಷ್ಟೇ ಅಲ್ಲ, ವಿಶೇಷಗಳಲ್ಲೂ ಭಿನ್ನತೆಯುಂಟು. ಎರಡು ವಿಶೇಷಗಳನ್ನು ಪ್ರತ್ಯೇಕಿಸಲು ಮತ್ತೊಂದು ವಿಶೇಷವು ಬೇಕಾಗಿ, ಇದು ಅನವಸ್ಥೆಯ ದೋಷಕ್ಕೆ ಗುರಿ ಮಾಡಿಕೊಡುವುದಿಲ್ಲವೇ ಎಂಬುದು ಪ್ರಶ್ನೆ. ಬಹುಶಃ ಈ ಕಾರಣದಿಂದಲೋ ಏನೋ ಈ ದರ್ಶನದ ಅರ್ವಾಚಿನರೂ ವಿಶೇಷಗಳಲ್ಲೂ ಭಿನ್ನತೆಯುಂಟು ಎಂಬ ಈ ಅಂಶವನ್ನು ತಿರಸ್ಕರಿಸುತ್ತಾರೆಂಬುದು ಗಮನಾರ್ಹ ವಿಷಯ.

**6. ಸಮವಾಯ:** ನ್ಯಾಯ ವೈಶೇಷಿಕದಲ್ಲಿ ಸಂಬಂಧಕ್ಕೂ ಪದಾರ್ಥದ ಸ್ಥಾನವನ್ನು ನೀಡಲಾಗಿದೆ. ಎರಡು ಪದಾರ್ಥಗಳಿರುವ ನಿಕಟ ಸಂಬಂಧವೇ ಸಮವಾಯ. ಇಲ್ಲಿ ಒಂದು ಸಂಬಂಧವನ್ನು ನಾಶಗೊಳಿಸಿದರೆ ಮತ್ತೊಂದು ಅನಿವಾರ್ಯವಾಗಿ ನಾಶವಾಗುತ್ತದೆ. ಎಂದರೆ ಈ ಸಂಬಂಧದಲ್ಲಿ ಒಂದು ವಸ್ತುವು ಮತ್ತೊಂದನ್ನು ಬಿಟ್ಟು ಇರಲಾರದು. ಅಂತಹ ವಸ್ತುಗಳಿಗೆ **ಅಯುತಸಿದ್ಧ** ವಸ್ತುಗಳೆಂದು ಹೆಸರು. ಅಯುತ ಸಿದ್ಧವಸ್ತುಗಳಲ್ಲಿ ಒಂದು ಆವಶ್ಯಕವಾಗಿ ಮತ್ತೊಂದು ವಸ್ತುವಿನ ಸಂಬಂಧವನ್ನು ಹೊಂದಿರುತ್ತದೆ. ಸಮವಾಯವು ಕೆಳಕಂಡ ವಸ್ತುಗಳ ನಡುವೆ ಮಾತ್ರ ಇರುವುದು.

1. ದ್ರವ್ಯ ಮತ್ತು ಗುಣ
2. ದ್ರವ್ಯ ಮತ್ತು ಕರ್ಮ
3. ವಿಶೇಷ ಮತ್ತು ಸಾಮಾನ್ಯ
4. ಆತ್ಯಂತಿಕ ವಸ್ತುಗಳು ಮತ್ತು ವಿಶೇಷ
5. ಪೂರ್ಣ ಮತ್ತು ಭಾಗ ಅಥವಾ ಉಪಾದಾನ ಕಾರಣ ಮತ್ತು ಅದರ ಕಾರ್ಯ (ಮಣ್ಣು ಮತ್ತು ಮಡಿಕೆ)

ಸಮವಾಯವನ್ನು ಸಂಯೋಗದೊಂದಿಗೆ ಹೋಲಿಸಿದಾಗ ಅದು ನಮಗೆ ಇನ್ನೂ ಸುಲಭವಾಗಿ ಅರ್ಥವಾಗುತ್ತದೆ. ಸಂಯೋಗವು ಒಂದು ಗುಣ. ಸಮವಾಯದಂತೆ ಸಂಯೋಗದಲ್ಲೂ ಎರಡು ವಸ್ತುಗಳಿಗೆ ಸಂಬಂಧವುಂಟು. ಆದರೆ ಇಲ್ಲಿ ಇವು **ಯುತಸಿದ್ಧ** ವಸ್ತುಗಳು ಮಾತ್ರ. ಎಂದರೆ ಇಲ್ಲಿ ಸಂಬಂಧಿಗಳನ್ನು ಪ್ರತ್ಯೇಕಗೊಳಿಸಿದರೂ ಅವುಗಳಲ್ಲಿ ಯಾವುದೊಂದೂ ನಾಶವಾಗಲಾರದು. ಉದಾಹರಣೆಗೆ ಮೇಜಿನ ಮೇಲೆ ನಾವು ಪುಸ್ತಕವೊಂದನ್ನು ಇಟ್ಟಾಗ ಮೇಜು ಮತ್ತು ಪುಸ್ತಕಗಳಿಗೆ ಸಂಯೋಗವೇರ್ಪಡುತ್ತದೆ. ಆದರೆ ಇವುಗಳನ್ನು ಬೇರ್ಪಡಿಸಿದಾಗ ಅವುಗಳ ಅಸ್ತಿತ್ವಕ್ಕೆ ಯಾವ ಧಕ್ಕೆಯೂ ಉಂಟಾಗುವುದಿಲ್ಲ. ಅವು ಸ್ವತಂತ್ರವಾಗಿ ಇರಬಲ್ಲವು. ಆದ್ದರಿಂದ ಸಂಯೋಗವು ನಿಕಟ ಮತ್ತು ಆವಶ್ಯಕವಾಗಿರದೆ ಅನುಷಂಗಿಕವಾಗಿದೆ. ಅಲ್ಲದೆ ಸಂಯೋಗ ಸಂಬಂಧವು ಎರಡು ದ್ರವ್ಯಗಳಲ್ಲಿ ಮಾತ್ರ ಇರಬಲ್ಲದು. ಸಮವಾಯವಾದರೋ ದ್ರವ್ಯದ್ರವ್ಯಗಳಲ್ಲಿ ಇರಬಹುದು ಅಥವಾ ಇಲ್ಲದಿರಲೂಬಹುದು.

ಸಮವಾಯವು ಏಕಮುಖ ಸಂಬಂಧ, ಪರಸ್ಪರವಲ್ಲ. ಉದಾಹರಣೆಗೆ ಗುಲಾಬಿ ಮತ್ತು ಕೆಂಪುಬಣ್ಣಗಳಿಗಿರುವ ಸಂಬಂಧ. ಇಲ್ಲಿರುವ ಸಂಬಂಧ ಕೆಂಪು ಮತ್ತು ಗುಲಾಬಿಗೆ ಮಾತ್ರವೇ ಹೊರತು ಗುಲಾಬಿ ಮತ್ತು ಕೆಂಪಿಗಲ್ಲ. ಏಕೆಂದರೆ ಗುಲಾಬಿಯು ಒಂದು ಕ್ಷಣವಾದರೂ ಕೆಂಪು ಬಣ್ಣವಿಲ್ಲದೇ ಇರಬಹುದು. ಆದರೆ ಕೆಂಪು ಬಣ್ಣವು ಗುಲಾಬಿಯ ಆಸರೆಯಿಲ್ಲದೇ ಇರಲಾರದು. ಅರ್ಥಾತ್ ದ್ರವ್ಯವು ಒಂದು ಕ್ಷಣವಾದರೂ ಗುಣವಿಲ್ಲದೇ ಇರಬಹುದು. (**ಉತ್ಪನ್ನಂ ದ್ರವ್ಯಂ ಕ್ಷಣಂ ಅಗುಣಂ ಅಕ್ರಿಯಾಕಂ ಚ ತಿಷ್ಠತಿ – ತರ್ಕ ಸಂಗ್ರಹ ದೀಪಿಕಾ**) ಆದರೆ ಗುಣವು ಮಾತ್ರ ದ್ರವ್ಯವಿಲ್ಲದೇ ಇರಲಾರದು.

**7. ಅಭಾವ:** ಅಭಾವ ಎಂಬ ಪದಾರ್ಥವು ವೈಶೇಷಿಕರ ಪದಾರ್ಥಗಳ ಪಟ್ಟಿಗೆ ಅನಂತರ ಸೇರಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ವಸ್ತುವೊಂದರ ಅಭಾವವು ನಮ್ಮ ಅರಿವಿಗೆ ದತ್ತವಾದ್ದರಿಂದ ಅಭಾವವು ಒಂದು ಪದಾರ್ಥವೆಂದು ಪರಿಗಣಿಸಲಾಗಿದೆ. ವೈಶೇಷಿಕರ ಪ್ರಕಾರ ಅಭಾವದಲ್ಲಿ ಪ್ರಾಗಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ ಮತ್ತು ಅನ್ಯೋನ್ಯಾಭಾವ ಎಂದು ನಾಲ್ಕು ವಿಧ. "ವಸ್ತುವೊಂದು ಅಸ್ತಿತ್ವಕ್ಕೆ ಬರುವ ಮುನ್ನ ಇದ್ದ ಅದರ ಅಭಾವವನ್ನು **ಪ್ರಾಗಭಾವ**ವೆಂದು ಕರೆಯುತ್ತಾರೆ. ಉದಾಹರಣೆಗೆ ಮಡಿಕೆಯು ಅಸ್ತಿತ್ವಕ್ಕೆ ಬರುವ ಮುನ್ನ ಅದು ಇರಲಿಲ್ಲ. ಇದೇ ಮಡಿಕೆಯ

ಪ್ರಾಗಭಾವ. ಪ್ರಾಗಭಾವಕ್ಕೆ ಆದಿ ಇಲ್ಲವಾದರೂ ಅಂತ್ಯವಿದೆ. ಎಷ್ಟು ಕಾಲದಿಂದ ಮಡಿಕೆಯು ಅಸ್ತಿತ್ವದಲ್ಲಿ ಇರಲಿಲ್ಲವೆಂಬುದನ್ನು ಗುರುತಿಸುವುದು ಕಷ್ಟ. ಆದ್ದರಿಂದ ಪ್ರಾಗಭಾವವು ಅನಾದಿ. ಆದರೆ ಮಡಿಕೆಯು ಅಸ್ತಿತ್ವಕ್ಕೆ ಬಂದ ಕ್ಷಣವೇ ಪ್ರಾಗಭಾವವು ಅಂತ್ಯ ಗೊಳ್ಳುತ್ತದೆ. ಹೀಗೆ ಪ್ರಾಗಭಾವಕ್ಕೆ ಆದಿಯಿಲ್ಲವಾದರೂ ಅಂತ್ಯವಿದೆ. ಆದರೆ ಪ್ರಧ್ವಂಸಾಭಾವಕ್ಕೆ ಆದಿಯಿದೆಯಾದರೂ ಅಂತ್ಯವಿಲ್ಲ. ವಸ್ತುವೊಂದರ ನಾಶದಿಂದ ಉಂಟಾಗುವ ಅದರ ಅಭಾವವೇ **ಪ್ರಧ್ವಂಸಾಭಾವ**. ವಸ್ತುವೊಂದು ನಾಶಗೊಂಡ ಕ್ಷಣವೇ ಪ್ರಧ್ವಂಸಾಭಾವ ಪ್ರಾರಂಭವಾಗುತ್ತದೆ. ಆದರೆ ಈ ಪ್ರಧ್ವಂಸಾಭಾವವು ಎಲ್ಲಿಯವರೆಗೆ ಇರುತ್ತದೆ ಎಂಬುದನ್ನು ನಿರ್ಧರಿಸುವುದು ಕಷ್ಟ. ಆದ್ದರಿಂದ ಅದು ಅನಂತ. ಅತ್ಯಂತಾಭಾವವು ವಸ್ತುವಿನ ನಿರುಪಾಧಿಕ ಅಭಾವ. ಉದಾಹರಣೆಗೆ ನೆಲದ ಮೇಲೆ ಯಾವೊಂದು ವಸ್ತುವೂ ಇಲ್ಲದಾಗ ಅದನ್ನು **ಅತ್ಯಂತಾಭಾವ**ವೆಂದು ಕರೆಯುತ್ತಾರೆ. ಅತ್ಯಂತಾಭಾವಕ್ಕೆ ಆದಿ ಅಂತ್ಯಗಳೆರೆಡೂ ಇಲ್ಲ. ಅನ್ಯೋನ್ಯಾಭಾವವು ಎರಡು ವಸ್ತುಗಳ ಪರಸ್ಪರ ಅಭಾವವನ್ನು ಸೂಚಿಸುತ್ತದೆ. ಉದಾಹರಣೆಗೆ ಮಡಿಕೆಯು ವಸ್ತ್ರವಲ್ಲ ಎಂಬ ಹೇಳಿಕೆಯಲ್ಲಿ ಅನ್ಯೋನ್ಯಾಭಾವವು ಸೂಚಿತವಾಗು ತ್ತದೆ. ಇಲ್ಲಿ ಮಡಿಕೆಯಲ್ಲಿ ವಸ್ತ್ರದ ಅಸ್ತಿತ್ವವನ್ನು ಮತ್ತು ವಸ್ತ್ರದಲ್ಲಿ ಮಡಿಕೆಯ ಅಸ್ತಿತ್ವವನ್ನು ನಿರ್ಧರಿಸಲಾಗಿದೆ. ಅನ್ಯೋನ್ಯಾಭಾವಕ್ಕೂ ಆದ್ಯಂತಗಳಿಲ್ಲ.

**ಪರಮಾಣುವಾದ:** ಮೊದಲ ನಾಲ್ಕು ದ್ರವ್ಯಗಳಿಗೆ ಸೂಕ್ಷ್ಮ ಹಾಗೂ ಸ್ಥೂಲ ರೂಪಗಳಿವೆಯೆಂದು ಈಗಾಗಲೇ ತಿಳಿಸಲಾಗಿದೆ. ದ್ರವ್ಯಗಳ ಸೂಕ್ಷ್ಮರೂಪಕ್ಕೆ ಪರಮಾಣುಗಳೆಂದು ಹೆಸರು. ಈ ಪರಮಾಣುಗಳ ಸಮ್ಮಿಲನದಿಂದ ದ್ರವ್ಯಗಳು ಸ್ಥೂಲರೂಪವನ್ನು ಪಡೆಯುತ್ತವೆ. ಎಂದರೆ ಈ ಪರಮಾಣುಗಳು ವಿವಿಧ ರೀತಿಯಲ್ಲಿ ಒಂದುಗೂಡಿ ಜಗತ್ತಿನ ಸ್ಥೂಲವಸ್ತುಗಳು ಉಂಟಾಗುತ್ತವೆ. ಜಗತ್ತಿನ ಸ್ಥೂಲವಸ್ತುಗಳು ಹೇಗೆ ಉಂಟಾಗುತ್ತವೆ ಎಂಬುದಕ್ಕೆ ಉತ್ತರವು ನಮಗೆ ನ್ಯಾಯವೈ ಶೇಷಿಕರ ಪರಮಾಣುವಾದದಿಂದ ದೊರೆಯುತ್ತದೆ.

ಜೈನರ ಪರಮಾಣುವಾದಕ್ಕೂ ನ್ಯಾಯ ವೈಶೇಷಿಕರ ಪರಮಾಣು ವಾದಕ್ಕೂ ಒಂದು ಮುಖ್ಯ ವ್ಯತ್ಯಾಸವುಂಟು. ಜೈನರ ಪರಮಾಣು ಗಳಲ್ಲಿ ಗುಣಭೇದವಿಲ್ಲ. ಆದರೆ ನ್ಯಾಯವೈಶೇಷಿಕರ ಪ್ರಕಾರ ಪರಮಾಣುಗಳಲ್ಲಿ ಗುಣಭೇದವುಂಟು. ನಿರ್ದಿಷ್ಟ ಅಣುಗಳು ನಿರ್ದಿಷ್ಟ ವಸ್ತುವಿಗೆ ಮಾತ್ರ ಜನ್ಮ ನೀಡಬಲ್ಲದೇ ಹೊರತು ಬೇರೆ ವಸ್ತುವಿಗಲ್ಲ. ಉದಾಹರಣೆಗೆ ಪೃಥ್ವೀ ಅಣುಗಳು ಪೃಥ್ವಿ ವಸ್ತುವಿಗೆ ಮಾತ್ರ ಜನ್ಮ ನೀಡಬಲ್ಲವೇ ಹೊರತು ನೀರಿಗಲ್ಲ. ನ್ಯಾಯ ವೈಶೇಷಿಕರ ಪ್ರಕಾರ ಸ್ಥೂಲವಸ್ತುಗಳಲ್ಲಿ ಒಂದಕ್ಕಿಂತಲೂ ಹೆಚ್ಚು ಭೂತಗಳು ಇರಲು ಅಸಾಧ್ಯ. ಉದಾಹರಣೆಗೆ ಮಾನವ ಶರೀರವು ಖಚಿತವಾಗಿ ಹೇಳಬೇಕೆಂದರೆ ಕೇವಲ ಪೃಥ್ವೀ ಅಣುಗಳಿಂದ ಉಂಟಾದದ್ದು. ಅದರಲ್ಲಿ ನೀರಿನ ಅಂಶವೇನೋ ಇರಬಹುದು. ಆದರೆ ಇದರಿಂದ ಅದರಲ್ಲಿ ನೀರಿನ ಅಣುಗಳು ಇದೆಯೆಂದು ಅರ್ಥವಲ್ಲ.

ಹಾಗಾದರೆ ಮೂಲತಃ ಕಾರಣದಲ್ಲಿ ಇಲ್ಲದ ಮತ್ತು ಕಾರ್ಯದಲ್ಲಿ ಕಾಣುವ ಈ ಹೊಸತನಕ್ಕೆ ಕಾರಣವೇನು? ಇದನ್ನು ನ್ಯಾಯ ವೈಶೇಷಿಕರು ಪ್ರತೀತಿ ಅಥವಾ ಸಾಮಾನ್ಯ ದೃಷ್ಟಿಕೋನದಿಂದ (Common Sense View) ನಿರ್ಧರಿಸುತ್ತಾರೆ. ಅವರ ಪ್ರಕಾರ ಕಾರ್ಯಕಾರಣಗಳಿಗಿರುವ ಸಂಬಂಧವು ಸಮವಾಯ ಸಂಬಂಧ. ಉದಾಹರಣೆಗೆ ವಸ್ತ್ರಕ್ಕೆ ಕಾರಣ ನೂಲುಗಳು. ವಸ್ತ್ರದಲ್ಲಿ ನೂಲುಗಳು ಸಂಯೋಗ ಸಂಬಂಧವನ್ನು ಹೊಂದಿರುವುದಷ್ಟೇ ಅಲ್ಲ, ಅದರ ಜೊತೆಗೆ ವಸ್ತ್ರವೆಂಬ ನೂತನವಾದ ವಸ್ತುವೂ ಅಸ್ತಿತ್ವಕ್ಕೆ ಬಂದಿದೆ.

ವಸ್ತುಗಳು ಕೇವಲ ಭಾಗಗಳು ಮಾತ್ರವೆಂಬ ಬೌದ್ಧರವಾದವು ನ್ಯಾಯವೈಶೇಷಿಕಕ್ಕೆ ಸ್ವೀಕೃತವಲ್ಲ. ವಸ್ತುಗಳು ಕೇವಲ ಭಾಗಗಳು ಮಾತ್ರವಲ್ಲ. ಅವುಗಳಲ್ಲಿ ಭಾಗವಲ್ಲದೇ ಹೊಸದಾದ ಅಂಶವೂ ಇದೆ. ಇಡೀ ಮಡಿಕೆಯಲ್ಲಿ ಅದರ ಅವಯವಗಳಿಗಿಂತಲೂ ಹೆಚ್ಚಿನ ಅಂಶವಿದೆ. ಈ ಹೆಚ್ಚಿನ ಅಂಶವೇ ಅದನ್ನು ಅದರ ಭಾಗಗಳಿಗಿಂತ ಭಿನ್ನವಾಗಿರಿಸುವುದು. ಜಗತ್ತಿನ ಎಲ್ಲ ವಸ್ತುಗಳೂ ಹೀಗೆ **ಹೊಸ ದಾಗಿಯೇ** ಉತ್ಪನ್ನವಾಗುವುದು. ಈಗಾಗಲೇ ಇರುವ ವಸ್ತುಗಳ ಜೊತೆಗೆ ಹೊಸ ಅಂಶವೂ ಬರುತ್ತದೆಂಬ ಈ ಕಾರ್ಯಕಾರಣ ಸಿದ್ಧಾಂತಕ್ಕೆ **"ಆರಂಭವಾದ"**ವೆಂದು ಹೆಸರು. ಇದಕ್ಕೆ **ಅಸತ್‌ಕಾರ್ಯವಾದ**ವೆಂದೂ ಹೆಸರು. ಏಕೆಂದರೆ ಅದರ ಪ್ರಕಾರ ಕಾರ್ಯವು ತಾನು ಅಸ್ತಿತ್ವಕ್ಕೆ ಬರುವ ಮೊದಲು ಕಾರಣದಲ್ಲಿ ಇರಲಿಲ್ಲ. ಮತ್ತೊಂದು ಮುಖ್ಯ ಅಂಶವೇನೆಂದರೆ ಅಸತ್ ಆಗಿರುವ ಕಾರ್ಯವು ಸತ್ ಆಗುವುದಷ್ಟೇ ಅಲ್ಲ. ಅದು ಇಂದಲ್ಲ ನಾಳೆ ನಾಶವಾಗಲೇ ಬೇಕು. ಬೌದ್ಧಧರ್ಮಕ್ಕೆ ವಿರುದ್ಧವಾಗಿ ಅಂತಹ ವಸ್ತುವು ಕಡಿಮೆಯೆಂದರೆ ಎರಡು ಕ್ಷಣಗಳು ಮಾತ್ರ ಇರಬಲ್ಲವು. ಮೊದಲ ಕ್ಷಣದಲ್ಲಿ ಅಸ್ತಿತ್ವಕ್ಕೆ ಬಂದು, ಎರಡನೇ ಕ್ಷಣದಲ್ಲಿ ಸ್ಥಿತಿಯಲ್ಲಿದ್ದು ಮೂರನೇ ಕ್ಷಣದಲ್ಲಿ ಅದು ಅದೃಶ್ಯವಾಗುತ್ತದೆ. ಬೌದ್ಧಧರ್ಮದಲ್ಲಾದರೋ ವಸ್ತುವಿನ ಅಸ್ತಿತ್ವ ಕೇವಲ ಒಂದು ಕ್ಷಣಮಾತ್ರ. ವಸ್ತುವು ಒಂದೇ ಒಂದು ಕ್ಷಣದಲ್ಲಿ ಅಸ್ತಿತ್ವಕ್ಕೆ ಬಂದು ನಾಶವಾಗುತ್ತದೆ.

ಪರಮಾಣುಗಳು ಇಂದ್ರಿಯಾತೀತ. ಅವುಗಳ ಅಸ್ತಿತ್ವವನ್ನು ಅನುಮಾನದಿಂದ ತರ್ಕಿಸಬಹುದು. ದೃಶ್ಯ ಜಗತ್ತಿನ ವಸ್ತುಗಳನ್ನು ನಾವು ವಿಭಾಗಿಸುತ್ತಾ ಹೋದಲ್ಲಿ ಈ ವಿಭಜನೆಯು ಯಾವುದೋ ಒಂದು ಹಂತದಲ್ಲಿ ನಿಲ್ಲಬೇಕಾಗುತ್ತದೆ. ಈ ಆತ್ಯಂತಿಕ ಹಂತದಲ್ಲೇ ವಸ್ತುಗಳನ್ನು ಪರಮಾಣುಗಳೆಂದು ಕರೆಯುವುದು. ಇವುಗಳಿಗೆ ಕಾರಣವಿಲ್ಲ. ಆದರೆ ಇವು ಮಾತ್ರ ಭೌತಜಗತ್ತಿನ ಎಲ್ಲ ವಸ್ತುಗಳಿಗೂ ಕಾರಣ. ಅವು ಸರಳ ಮತ್ತು ನಿರವಯವ. ಅವುಗಳ ಸಂಖ್ಯೆಯು ಅನಂತ. ಅವು ಸ್ಥೂಲ ವಸ್ತುಗಳನ್ನು ಕೆಳಕಂಡಂತೆ ಉತ್ಪಾದಿಸುತ್ತವೆ.

ಮೊದಲು ಒಂದೇ ವರ್ಗದ ಎರಡು ಅಣುಗಳು (ಉದಾಹರಣೆಗೆ ಪೃಥ್ವೀ ಅಣು) ಸೇರಿ ದ್ವ್ಯಣುಕವಾಗುತ್ತವೆ. ಮೂಲಾಣುಗಳಂತೆ ದ್ವ್ಯಣುಕವೂ ಕೂಡ ಗಾತ್ರದಲ್ಲಿ ಬಲುಸೂಕ್ಷ್ಮ. ಆದ್ದರಿಂದ ಅದು ಇಂದ್ರಿಯಗ್ರಾಹ್ಯವಲ್ಲ. ಅಂತಹ ಮೂರು ದ್ವ್ಯಣುಕಗಳು ವ್ಯವಸ್ಥಿತವಾಗಿ ಸೇರಿ ಒಂದು ತ್ರ್ಯಣುಕವಾಗುತ್ತದೆ. ತ್ರ್ಯಣುಕವು ನಮ್ಮ ಬರಿಯ ಕಣ್ಣಿಗೆ ಕಾಣುವ ಅತ್ಯಂತ ಸೂಕ್ಷ್ಮಕಣ. ಜಗತ್ತಿನ ಉಳಿದೆಲ್ಲಾ ವಸ್ತುಗಳು ಈ ತ್ರ್ಯಣುಕಗಳ ಸಂಯೋಜನೆಯಿಂದಲೇ ಉಂಟಾದವು. ಅಣುಗಳಿಂದ ಹೀಗೆ ಜಗತ್ತಿನ ಸ್ಥೂಲವಸ್ತುಗಳುಂಟಾ ದಾಗ ಅಣುಗಳಲ್ಲಿ ಮೂಲಭೂತವಾಗಿದ್ದ ಅವುಗಳ ಗುಣಗಳು ಸ್ಥೂಲವಸ್ತುಗಳಲ್ಲಿ ಸೇರುತ್ತವೆ. ಕಾರಣದ ಗುಣವು ಕಾರ್ಯದಲ್ಲೂ ವ್ಯಕ್ತವಾಗುತ್ತದೆ. ಉದಾಹರಣೆಗೆ ನೂಲುಗಳ ಬಿಳಿಯ ಬಣ್ಣವು ಅವುಗಳಿಂದ ಉಂಟಾದ ವಸ್ತುವಿನಲ್ಲೂ ಸೇರುತ್ತದೆ. ಜಗತ್ತಿನ ಲಯವು ಆತ್ಯಂತಿಕ ನಾಶವಲ್ಲ. ಕಾರ್ಯದಲ್ಲಿರುವ ಅಣುಗಳ

ಬೇರ್ಪಡೆಯೇ ನಾಶ.

**ಈಶ್ವರ:** ಕಣಾದರ ಸೂತ್ರದಲ್ಲಿ ಈಶ್ವರನನ್ನು ಕುರಿತ ಉಲ್ಲೇಖವಿಲ್ಲ. ಗೌತಮರು ಈಶ್ವರನ ಬಗ್ಗೆ ಆನುಷಂಗಿಕವಾಗಿ ಪ್ರಸ್ತಾಪಿಸುತ್ತಾರೆ. ಕೆಲವರು ನ್ಯಾಯವು ಪ್ರಾರಂಭದಲ್ಲಿ ಆಸ್ತಿಕದರ್ಶನವಾಗಿತ್ತೇ ಎಂದು ಪ್ರಶ್ನಿಸುತ್ತಾರೆ. ಆದರೆ ಕಣಾದ ಮತ್ತು ಗೌತಮರ ವ್ಯಾಖ್ಯಾನಕಾರರಾದ ಪ್ರಶಸ್ತಪಾದ (ಕ್ರಿ.ಶ.984) ಮತ್ತು ವಾತ್ಸ್ಯಾಯನರು ಈಶ್ವರನನ್ನು ಅಂಗೀಕರಿಸುತ್ತಾರೆ. ಅನಂತರ ಉದಯನನು ಈಶ್ವರನ ಅಸ್ತಿತ್ವದ ಸಮಸ್ಯೆಯನ್ನು ಕುರಿತಂತೆ ಅದ್ಭುತವ್ಯಾಖ್ಯಾನವನ್ನೇ ನೀಡುತ್ತಾನೆ. ಉದಯನನು ಪ್ರಶಸ್ತಪಾದರ ವ್ಯಾಖ್ಯಾನವನ್ನು ತನ್ನ ಕುಸುಮಾಂಜಲಿಯಲ್ಲಿ ವ್ಯಾಖ್ಯಾನಿಸುತ್ತಾನೆ. ಕುಸುಮಾಂಜಲಿಯು ಭಾರತೀಯ ಈಶ್ವರವಾದದ ಒಂದು ಅಭಿಜಾತ ಸಾಹಿತ್ಯವೆನ್ನಬಹುದು.

ಈ ದರ್ಶನದ ಪ್ರಕಾರ ಜಗತ್ತಿನ ಉತ್ಪತ್ತಿಗೆ ಸರ್ವಶಕ್ತವಾದ ಒಂದು ತತ್ವದ ಅಗತ್ಯವಿದೆ. ಈ ತತ್ತ್ವವೇ ಈಶ್ವರ. ಈಶ್ವರನೂ ಒಂದು ಆತ್ಮನಾದರೂ ಆತನು ಸಾಧಾರಣ ಆತ್ಮನಲ್ಲ, ಅವನು ಪರಮಾತ್ಮ. ಜೀವಾತ್ಮ ಮತ್ತು ಪರಮಾತ್ಮಗಳು ಬೇರೆ. ಜೀವಾತ್ಮನಂತೆ ಪರಮಾತ್ಮನೂ ಸರ್ವವ್ಯಾಪಿ ಮತ್ತು ಶಾಶ್ವತ. ಆದರೆ ಚೈತನ್ಯವು ಜೀವಾತ್ಮನಲ್ಲಿ ಯಾವಾಗಲೂ ಇರಬಹುದು ಅಥವಾ ಇಲ್ಲದೆಯೂ ಇರಬಹುದು. ಆದರೆ ಈಶ್ವರನಲ್ಲಿ ಅದು ಆವಶ್ಯಕವಾಗಿ ಸದಾ ಇರುತ್ತದೆ. ಆತನ ಜ್ಞಾನವು ಶಾಶ್ವತವಷ್ಟೇ ಅಲ್ಲ, ಅದು ಸಾರ್ವತ್ರಿಕ ಮತ್ತು ಪರಿಪೂರ್ಣ. ಆತನಲ್ಲಿ ಸಂಕಲ್ಪ ಮತ್ತು ಇಚ್ಛೆಗಳಿದ್ದರೂ ಜೀವಾತ್ಮನಲ್ಲಿದ್ದಂತೆ ಆತನಲ್ಲಿ ಸುಖದುಃಖಗಳೆಂಬ ದ್ವಂದ್ವವಿಲ್ಲ. ಆತನಿಗೆ ಕೆಟ್ಟ ಬಯಕೆಯಾಗಲಿ ದ್ವೇಷವಾಗಲಿ ಇಲ್ಲ. ವಿಶ್ವದ ಸೃಷ್ಟಿಗೆ ಆತನೇ ಮೂಲಭೂತ ಕಾರಣ. ಈಶ್ವರನು ಜಗತ್ತಿಗೆ ಕೇವಲ ನಿಮಿತ್ತ ಕಾರಣ. ಆತನು ಉಪಾದಾನ ಕಾರಣನಲ್ಲ. ಯಾವ ಸಾಮಗ್ರಿಯಿಂದ ಕಾರ್ಯವು ಉಂಟಾಯಿತೋ ಆ ಸಾಮಗ್ರಿಗೆ **ಉಪಾದಾನ ಕಾರಣ**ವೆಂದು ಮತ್ತು ಈ ಸಾಮಗ್ರಿಯನ್ನು ವ್ಯವಸ್ಥಿತಗೊಳಿಸಿ ಕಾರ್ಯವನ್ನು ಸೃಷ್ಟಿಸುವ ಚೈತನ್ಯಕ್ಕೆ **ನಿಮಿತ್ತ ಕಾರಣ** ಎಂದು ಹೆಸರು. ಉದಾಹರಣೆಗೆ ಮಡಿಕೆಗೆ ಮಣ್ಣು ಉಪಾದಾನ ಕಾರಣವಾದರೆ ಕುಂಬಾರನು ನಿಮಿತ್ತ ಕಾರಣ. ಹಾಗೆಯೇ ಈ ಭೌತಜಗತ್ತಿಗೆ ಪರಮಾಣುಗಳು ಉಪಾದಾನ ಕಾರಣವಾದರೆ ಅವುಗಳನ್ನು ವ್ಯವಸ್ಥಿತಗೊಳಿಸಿ ಅವುಗಳಿಂದ ಜಗತ್ತನ್ನು ಸೃಷ್ಟಿಸುವ ಈಶ್ವರನು ನಿಮಿತ್ತ ಕಾರಣ. ಈಶ್ವರನು ಈ ಜಗತ್ತಿನ ಸೃಷ್ಟಿಗಷ್ಟೇ ಅಲ್ಲ, ಅದರ ಸ್ಥಿತಿಗೆ ಮತ್ತು ಲಯಕ್ಕೂ ಕಾರಣ. ಆತನು ಈ ಜಗತ್ತನ್ನು ಲಯಗೊಳಿಸಿ ಅದನ್ನು ಪುನಃ ಸೃಷ್ಟಿಸುತ್ತಾನೆ. ಆತನು ಜೀವಗಳ ಕರ್ಮಕ್ಕೆ ಅನುಸಾರವಾಗಿ ವೇದಿಕೆಯನ್ನು ನಿರ್ಮಿಸಲು ಈ ಜಗತ್ತನ್ನು ಸೃಷ್ಟಿಸುತ್ತಾನೆ.

ನ್ಯಾಯ ವೈಶೇಷಿಕರ ಪ್ರಕಾರ ಸೃಷ್ಟಿಯ ಹಿನ್ನೆಲೆಯಲ್ಲಿರುವುದು ಕರ್ಮ ಸಿದ್ಧಾಂತ. ಜೀವಗಳು ಕರ್ಮವನ್ನು ಸವೆಸಲು ಅವುಗಳಿಗೆ ಒಂದು ವೇದಿಕೆಯು ಅಗತ್ಯ. ಈ ವೇದಿಕೆಯೇ ಜಗತ್ತು. ಒಂದು ವಿಶೇಷವೆಂದರೆ ನ್ಯಾಯವೈಶೇಷಿಕವು ಈಶ್ವರನ ಅಸ್ತಿತ್ವವನ್ನು ಅನುಮಾನದ ಮೂಲಕ ಸ್ಥಾಪಿಸುವುದೇ ಹೊರತು ವೇದಾಂತ ದರ್ಶನದಂತೆ ಶ್ರುತಿಯ ಮೂಲಕವಲ್ಲ. ಈಶ್ವರನ ಅಸ್ತಿತ್ವದ ವಿಷಯದಲ್ಲಿ ದರ್ಶನವು ತರ್ಕದ ಮೂಲಸ್ಫೂರ್ತಿಯನ್ನು ಉಳಿಸಿಕೊಳ್ಳುತ್ತದೆ. ಈಶ್ವರನ ಅಸ್ತಿತ್ವವನ್ನು ಸಮರ್ಥಿಸಲು ಉದಯನನು ಕೆಲವು ವಾದಗಳನ್ನು ಕೆಳಕಂಡಂತೆ ಮಂಡಿಸುತ್ತಾನೆ.

1.ಈ ಪ್ರಪಂಚವು ಒಂದು ಕಾರ್ಯ. ಜಗತ್ತಿನ ಉಳಿದ ಕಾರ್ಯಗಳಿಗೆ ಅದು ಇತರ ಕಾರಣಗಳ ಜೊತೆಗೆ ಒಂದು ನಿಮಿತ್ತ ಕಾರಣದ ಅಸ್ತಿತ್ವವನ್ನು ಸೂಚಿಸುತ್ತದೆ. ಈ ನಿಮಿತ್ತ ಕಾರಣವೇ ಸರ್ವಶಕ್ತನಾದ ಈಶ್ವರ. ಈ ವಾದವು ಹೆಚ್ಚು ಕಡಿಮೆ ಪಾಶ್ಚಾತ್ಯ ತತ್ತ್ವಶಾಸ್ತ್ರದ ವಿಶ್ವಕಾರಣವಾದವನ್ನು ಹೋಲುತ್ತದೆ (Cosmological or Causal argument).

2.ಈ ಜಗತ್ತಿನಲ್ಲಿ ಒಂದು ಕ್ರಮ ಅಥವಾ ವ್ಯವಸ್ಥೆಯಿದೆ. ಈ ವ್ಯವಸ್ಥೆಯನ್ನು ಚೈತನ್ಯದ ಹಿನ್ನೆಲೆಯಲ್ಲಿ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ. ವ್ಯವಸ್ಥಾಪಕನಿಲ್ಲದೆ ವ್ಯವಸ್ಥೆಯಿರಲು ಸಾಧ್ಯವಿಲ್ಲ. ಆದರೆ ಈ ಜಗತ್ತಿನ ವ್ಯವಸ್ಥೆಯು ಸಾಧಾರಣವಾಗಿರದೇ ಅದ್ಭುತವಾಗಿದೆ. ಆದ್ದರಿಂದ ಇದರ ಹಿನ್ನೆಲೆಯಲ್ಲಿ ಕ್ರಿಯಾಶೀಲನಾಗಿರುವ ಮತ್ತು ಈ ವ್ಯವಸ್ಥೆಯನ್ನು ನಿಯಂತ್ರಿಸುವ ಚೈತನ್ಯನೂ ಅದ್ಭುತವಾಗಿರಬೇಕು. ಈ ಅದ್ಭುತ ಚೈತನ್ಯವೇ ಈಶ್ವರ. ಈ ವಾದವು ಪಾಶ್ಚಾತ್ಯ ತತ್ತ್ವಶಾಸ್ತ್ರದ ಉದ್ದೇಶವಾದವನ್ನು (Teleological argument) ಹೋಲುತ್ತದೆ.

3.ಜಗತ್ತಿನಲ್ಲಿ ಜೀವಗಳು ಸುಖದುಃಖಗಳನ್ನು ತಮ್ಮ ಕರ್ಮಾನುಸಾರ ಅನುಭವಿಸುವುದನ್ನು ನಾವು ಕಾಣುತ್ತೇವೆ. ಆದರೆ ಈ ಕರ್ಮವು ಜಡ. ಅದು ಚೈತನ್ಯದ ಸಹಾಯವಿಲ್ಲದೇ ಜೀವಗಳಲ್ಲಿ ತನಗೇ ತಾನೇ ವ್ಯಕ್ತವಾಗಲಾರದು. ಅಲ್ಲದೆ ಜಗತ್ತಿನ ಈ ಜೀವಗಳ ಸಂಖ್ಯೆ ಅಪರಿಮಿತ. ಆದ್ದರಿಂದ ಈ ಅಸಂಖ್ಯಾತ ಜೀವಿಗಳಿಗೆ ಸುಖದುಃಖಗಳನ್ನು ಅವುಗಳ ಕರ್ಮಕ್ಕೆ ಅನುಗುಣವಾಗಿ ವಿತರಿಸುವ ಒಬ್ಬ ಸರ್ವಜ್ಞನಿರಬೇಕು. ಆ ಸರ್ವಜ್ಞನೇ ಈಶ್ವರ.

ಉದಯನನ ಪ್ರಕಾರ ದೇವರಿಲ್ಲವೆನ್ನಲು ಯಾವ ಆಧಾರವೂ ಇಲ್ಲ. ಈ ಅಂಶವನ್ನು ಚರ್ಚಿಸಲು ಆತ ತನ್ನ ಕುಸುಮಾಂಜಲಿಯ ಇಡೀ ಒಂದು ಅಧ್ಯಾಯವನ್ನು ಮೀಸಲಾಗಿರಿಸಿದ್ದಾನೆ ಮತ್ತು ದೇವರಿಲ್ಲವೆನ್ನಲು ಸರಿಯಾದ ಯಾವ ಪ್ರಮಾಣವೂ ಇಲ್ಲವೆಂಬುದನ್ನು ತೋರಿಸುತ್ತಾನೆ. ಉದಯನನ ವಾದವು ಕೇವಲ ಜಿಜ್ಞಾಸೆಯೆನಿಸಬಹುದು. ಆದರೂ ಅದಕ್ಕೆ ಒಂದು ತೂಕವಿದೆ. ದೇವರ ಅಸ್ತಿತ್ವವನ್ನು ಸಮರ್ಥಿಸಲು ಅಸಾಧ್ಯವೆನ್ನುವವರಿಗೆ ಅದು ಒಂದು ಸವಾಲನ್ನೇ ಎಸೆದಿದೆ.

**ಆಧಾರ ಗ್ರಂಥಗಳು**

1. S.C. Chatarjee and D.M. Datta, An Introduction to Indian Philosophy, Rupa Publications, New Delhi, 2012

2. M.Hiriyanna, Outlines of Indian Philosophy, George Allen and Unwin (India) Pvt. Ltd., New Delhi, 1976.

3. M.Hiriyanna, The Essentials of Indian Philosophy, George Allen and Unwin (India) Pvt. Ltd., New Delhi, 1949.

# ಅಂಬೇಡ್ಕರ್‌ರವರ ಮೇಲೆ ಬೌದ್ಧ ಧರ್ಮದ ಪ್ರಭಾವ

ಸಿದ್ದರಾಜು.ಈ.
ಸಂಶೋಧಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–06.

**ಪ್ರಬಂಧ ಸಾರ:–** ಅಂಬೇಡ್ಕರ್‌ರವರು ಒಬ್ಬ ವಿಶ್ವಮಾನವತಾವಾದಿ, ರಾಜಕೀಯ ತಜ್ಞ ಅರ್ಥಶಾಸ್ತ್ರಜ್ಞರಾಗಿ ಈ ದೇಶಕ್ಕೆ ಕೊಟ್ಟ ಕೊಡುಗೆ ಅಪಾರವಾದುದು. ತೀರ ಕೆಳವರ್ಗದ ಮನೆತನದಲ್ಲಿ ಹುಟ್ಟಿ ಸ್ವಂತ ಅವಿಶ್ರಾಂತ ಪರಿಶ್ರಮದಿಂದ ಅಸಾಧಾರಣವಾದ ವಿದ್ವತ್ತನ್ನು, ವಿಚಾರವಂತಿಕೆಯನ್ನು ತಮ್ಮದಾಗಿಸಿಕೊಂಡು ರಾಷ್ಟ್ರದ ಸಂವಿಧಾನವನ್ನೇ ಬರೆಯಬಲ್ಲ ಮೇಧಾವಿ ಎಂಬ ಮನ್ನಣೆಗೆ ಪಾತ್ರರಾದದ್ದು ಯಾವ ತಲೆಮಾರಿನ ಯುವಕರಿಗೂ ಒಂದು ಪ್ರತ್ಯಕ್ಷ ಆದರ್ಶವಾಗಿ ನಿಲ್ಲಬೇಕಾದ ಸಂಗತಿಯಾಗಿದೆ. ಹಿಂದೂ ಧರ್ಮದಲ್ಲಿರುವ ವರ್ಣವ್ಯವಸ್ಥೆಯನ್ನು ವಿರೋಧಿಸಿ ಇದು ಸಮಾಜದ ಅಶಾಂತಿಗೆ ದೌರ್ಜನ್ಯಕ್ಕೆ ಮೂಲವಾಗಿದ್ದು ಈ ಪದ್ಧತಿಯನ್ನು ತೊಲಗಿಸಬೇಕು ಎಂಬ ನಿರ್ಣಯ ಕೈಗೊಳ್ಳುತ್ತಾರೆ. ಹಾಗಾಗಿ ಅಂಬೇಡ್ಕರ್‌ರವರು ಹಿಂದೂ ಧರ್ಮ ತಪ್ಪು ಆಚರಣೆಗಳನ್ನು ವಿರೋಧಿಸಿ ಬೌದ್ಧಧರ್ಮವನ್ನು ಸ್ವೀಕಾರ ಮಾಡುತ್ತಾರೆ. ಬೌದ್ಧ ಧರ್ಮದ ಮೂಲತತ್ವವೇ ಅಹಿಂಸಾವಾದ ಎಂಬುದು ಸಾಮಾನ್ಯ ಸಂಗತಿ ಆದರೆ ಬುದ್ಧನ ಬೋಧನೆಯಲ್ಲಿ ಅದೇ ಮೂಲ ಅದೇ ಅಂತ್ಯ. ಬುದ್ಧನ ಪಂಚಶೀಲತತ್ವಗಳು ಆರ್ಯ ಅಷ್ಟಾಂಗ ಮಾರ್ಗಗಳು ಇವು ಮಾನವನ ನೈತಿಕ ಬೆಳವಣಿಗೆಯ ಮೇಲೆ ಇರುವಂತಹದ್ದು. ಇವು ಪ್ರತಿಯೊಬ್ಬರೂ ಅಳವಡಿಸಿಕೊಂಡಾಗ ಸಮಾಜದಲ್ಲಿ ಯಾವುದೇ ರೀತಿಯ ಅಶಾಂತಿ ಉಂಟಾಗುವುದಿಲ್ಲ. ಬೌದ್ಧಧರ್ಮವು ನೈತಿಕತೆಯನ್ನು ಜೀವಾಳ ಮಾಡಿಕೊಂಡಿದ್ದು ಬುದ್ಧನು ಬೋಧಿಸುವಂತೆ, ಆತನ ತತ್ತ್ವಗಳನ್ನು ಸ್ವೀಕಾರಮಾಡಬೇಕಾದರೆ ತಾವು ಪ್ರತಿಒಂದನ್ನೂ ಯೋಚಿಸಿ ಸರಿಯೆನಿಸಿದರೆ ನನ್ನ ಧರ್ಮವನ್ನು ಸ್ವೀಕಾರಮಾಡಿ ಎಂದು ಹೇಳಿರುವುದು ಆತನ ಆತ್ಮೀಯತೆಯನ್ನು, ನೈಜತೆಯನ್ನು ನೋಡಬಹುದು. ಬುದ್ಧನ ಪ್ರಕಾರ ಸರ್ವರೂ ಸಮಾನರು. ಮಾನವನನ್ನು ಗುಣದಿಂದ ಗೌರವಿಸಬೇಕೇ ಹೊರತು ಅವನ ಹುಟ್ಟಿನಿಂದಲ್ಲ. ಇದು ಒಂದು ಸುವ್ಯವಸ್ಥಿತ ಸಮಾಜ ನಿರ್ಮಾಣ ಮಾಡಲು ದಾರಿದೀಪವಾಗುತ್ತದೆ. ಈ ಎಲ್ಲಾ ತತ್ವಗಳು ಅಂಬೇಡ್ಕರರ ಮೇಲೆ ಪ್ರಭಾವ ಬೀರಿ ಅವರು ಬೌದ್ಧಧರ್ಮವನ್ನು ಸ್ವೀಕಾರ ಮಾಡಿದರು. ಪ್ರಸ್ತುತ ಲೇಖನದಲ್ಲಿ ಅಂಬೇಡ್ಕರ್‌ರವರ ಮೇಲೆ ಭೌದ್ಧಧರ್ಮವು ಹೇಗೆ ಪರಿಣಾಮ ಬೀರಿತು, ಅವರು ಭೌದ್ಧಧರ್ಮ ಮತಾಂತರಕ್ಕೆ ಕಾರಣಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ವಿಶ್ವದಲ್ಲೇ ಭಾರತವು ಧಾರ್ಮಿಕ ವೈವಿಧ್ಯತೆಯನ್ನು ಹೊಂದಿರುವ ದೇಶವಾಗಿದೆ. ಇದು ಹಲವಾರು ಧರ್ಮಗಳ, ವಿವಿಧ ಸಂಸ್ಕೃತಿಗಳ, ಆಚಾರವಿಚಾರಗಳ, ಜನಾಂಗಗಳ ಹಾಗೂ ಜೀವ ವೈವಿಧ್ಯತೆಯನ್ನು ಹೊಂದಿರುವ ಪುಣ್ಯಭೂಮಿಯಾಗಿದ್ದು, ಇಲ್ಲಿ ವಿಶ್ವದ ಪ್ರಮುಖ ಧರ್ಮಗಳು ಉಗಮವಾಗಿವೆ. ಆದಿ ಮಾನವನ ಕಾಲದಿಂದಲೂ ಮತ,ಪಂಥಗಳು,ಧರ್ಮಗಳು ಮಾನವನ ಜೀವನವನ್ನು ಒಂದಲ್ಲ ಒಂದು ರೀತಿಯಿಂದ ರೂಪಿಸುತ್ತಿದೆ. ಇವು ಮನುಷ್ಯರನ್ನು ಒಟ್ಟುಗೂಡಿಸಿ ಸಾಮಾಜಿಕ ಭದ್ರತೆಯನ್ನು ಕಾಪಾಡಿರುವುದರ ಜೊತೆಗೆ ಆಧ್ಯಾತ್ಮಿಕ ಸಾಧನೆಗೆ ನೆರವಾಗಿರುವುದನ್ನು ಕಾಣಬಹುದು.ವಿಪರ್ಯಾಸವೆಂದರೆ ಅದೇ ಮತ,ಧರ್ಮಗಳು ಸಮಾಜದ ಒಡಕಿಗೂ ಮನುಕುಲದ ವಿಭಜನೆಗೂ ಕಾರಣವಾಗಿದೆ ಎಂಬುದನ್ನು ಇತಿಹಾಸವನ್ನು ನೋಡಿದಾಗ ನಮಗೆ ತಿಳಿಯುತ್ತದೆ.

ವೇದಗಳ ಕಾಲದ ನಂತರ ವರ್ಣವ್ಯವಸ್ಥೆಯು ಬೇರೆ ಬೇರೆ ಜಾತಿಗಳಾಗಿ ಪರಿವರ್ತನೆ ಹೊಂದಿದಾಗ ಮೇಲು ಕೀಳು ಎಂಬ ತಾರತಮ್ಯಗಳಿಗೆ ಅವಕಾಶವುಂಟಾಗಿ ಜಾತಿಯತೆಯ ವಿಷ ಸಾಮಾಜಿಕ ಜೀವನದಲ್ಲಿ ಸೇರಿಕೊಂಡು ಬೆಳೆಯಿತು. ಹೀಗೆ ತೀರ ಕೆಳಗಿನವರನ್ನು ಗುಲಾಮರನ್ನಾಗಿಸಿಕೊಂಡು ಅವರನ್ನು ಪಶುಗಳಿಗಿಂತ ಕಡೆಯಾಗಿ ನೋಡುತ್ತಿದ್ದರು. ಇದನ್ನು ವಿರೋಧಿಸುತ್ತಾ ಶತಮಾನಗಳಿಂದಲೂ ಬೆಳೆದ ಅಸ್ಪೃಶ್ಯತೆಯ ಅನ್ಯಾಯಕ್ಕೆ ವಿರೋಧವು ಕಾಲಕಾಲಕ್ಕೆ ಹೆಚ್ಚಾದುದನ್ನು ಕಾಣಬಹುದು. ಅಂಬೇಡ್ಕರ್‌ರವರು ಹಿಂದೂ ಧರ್ಮದಲ್ಲಿರುವ ವರ್ಣವ್ಯವಸ್ಥೆಯನ್ನು ವಿರೋಧಿಸಿ ಇದು ಸಮಾಜದ ಅಶಾಂತಿಗೆ, ದೌರ್ಜನ್ಯಕ್ಕೆ, ಅಸ್ಪೃಶ್ಯತೆಗೆ, ಅಸಮಾನತೆಗೆ ಮೂಲವಾಗಿದ್ದು ಈ ಪದ್ಧತಿಯನ್ನು ತೊಲಗಿಸಬೇಕು ಎಂಬ ನಿರ್ಣಯವನ್ನು ಕೈಗೊಳ್ಳುತ್ತಾರೆ.

ಆಗಿನ ಕಾಲಕ್ಕೆ ಮಹಾರ್ ಕುಲದಲ್ಲಿ ಉನ್ನತ ಶಿಕ್ಷಣ ಪಡೆದ ಏಕೈಕ ವ್ಯಕ್ತಿಯಾಗಿದ್ದರು. ಇವರು ಎಲ್ಲಾ ವಿಷಯಗಳಲ್ಲೂ ತಮ್ಮದೇ ಪ್ರತಿಭೆಯಿಂದ ಪಾಂಡಿತ್ಯವನ್ನು ಪಡೆದುಕೊಂಡಿದ್ದರು. ತನ್ನ ಜನರು ಈ ಸಮಾಜದಲ್ಲಿ ಅನುಭವಿಸುವ ಎಲ್ಲಾ ನೋವುಗಳನ್ನು ಅನುಭವಿಸಿದ್ದರು ಅದ್ದರಿಂದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಸಮಾನತೆ ತರಲು ಅನೇಕ ಆಂದೋಲನಗಳನ್ನು ಏಕಾಂಗಿಯಾಗಿ ಹೋರಾಟವನ್ನು ಪ್ರಾರಂಭಿಸಿದ ಧೀಮಂತ ನಾಯಕರು ಇವರು ತಮ್ಮ ಇಡೀ ಜೀವನವನ್ನು ಕೆಳವರ್ಗದ ಹಿತಾಶಕ್ತಿಗಾಗಿ ಮುಡಿಪಾಗಿಟ್ಟ ದೀನ ದಲಿತರ ಆರಾಧ್ಯ ದೈವವಾಗಿದಾರೆ. ಸಾಮಾಜಿಕವಾಗಿ ಸಮಾನತೆ, ಸಹೋದರತೆ, ಸಮಾನತೆಯನ್ನು ಪಡೆಯಬೇಕಾದರೆ ಹಿಂದೂ ಧರ್ಮ ತ್ಯಜಿಸುವುದು ಅನಿವಾರ್ಯ ಎಂದು ಅಭಿಪ್ರಾಯಪಡುತ್ತಾರೆ. ಅವರು 1937ರ ದಲಿತ ಸಮ್ಮೇಳನದಲ್ಲಿ "ನಾನು ಹಿಂದೂವಾಗಿ ಜನಿಸಿದೆ ಅದು ನನ್ನ ತಪ್ಪಲ್ಲ. ಆದರೆ ನಾನು ಹಿಂದೂವಾಗಿ ಸಾಯಲಾರೆ ಇದು ನನ್ನ ಆಯ್ಕೆ" ಎಂದು ಉಚ್ಚರಿಸಿದ್ದಾರೆ.

ಬುದ್ಧನ ಭೋಧನೆಗಳು ಅಂಬೇಡ್ಕರ್‌ರವರ ಮೇಲೆ ಅತ್ಯಂತ ಪ್ರಭಾವ ಬೀರುತ್ತವೆ. ಬೌದ್ಧ ಧರ್ಮ ಮೂಲತತ್ವವೇ ಅಹಿಂಸಾವಾದ ಎಂಬುದನ್ನು ಸಾಮಾನ್ಯ ಸಂಗತಿ ಆದರೆ ಬುದ್ಧನ ಬೋಧನೆಯಲ್ಲಿ ಅದೇ ಮೂಲ ಅದೇ ಅಂತ್ಯ ಎಂಬಂತೆಯೂ ಭಾವಿಸಲಾಗಿದೆ. ಬುದ್ಧನ ಪಂಚಶೀಲತತ್ವಗಳು ಆರ್ಯ ಅಷ್ಟಾಂಗ ಮಾರ್ಗಗಳು ಇವು ಮಾನವನ ನೈತಿಕ ಬೆಳವಣಿಗೆಯ ಮೇಲೆ ಇರುವಂತಹದ್ದು. ಇವು ಪ್ರತಿಯೊಬ್ಬರೂ ಅಳವಡಿಸಿಕೊಂಡಾಗ ಸಮಾಜದಲ್ಲಿ ಯಾವುದೇ ರೀತಿಯ ಅಶಾಂತಿ ಉಂಟಾಗುವುದಿಲ್ಲ. ಬೌದ್ಧಧರ್ಮವು ನೈತಿಕತೆಯನ್ನು ಜೀವಾಳ ಮಾಡಿಕೊಂಡಿದ್ದು ಬುದ್ಧನು ಬೋಧಿಸುವಂತೆ, ಆತನ ತತ್ತ್ವಗಳನ್ನು ಸ್ವೀಕಾರಮಾಡಬೇಕಾದರೆ ತಾವು ಪ್ರತಿಒಂದನ್ನೂ ಯೋಚಿಸಿ ಸರಿಯೆನಿಸಿದರೆ ನನ್ನ ಧರ್ಮವನ್ನು ಸ್ವೀಕಾರ ಮಡಿ ಎಂದು ಹೇಳಿರುವುದು ಆತನ ಆತ್ಮೀಯತೆಯನ್ನು, ನೈಜತೆಯನ್ನು ನೋಡಬಹುದು. ಬುದ್ಧನ ಪ್ರಕಾರ ಸರ್ವರೂ ಸಮಾನರು. ಮಾನವನನ್ನು ಗುಣದಿಂದ ಗೌರವಿಸಬೇಕೇ ಹೊರತು ಅವನ ಹುಟ್ಟಿನಿಂದಲ್ಲ. ಇದು ಒಂದು

ಸುವ್ಯವಸ್ಥಿತ ಸಮಾಜ ನಿರ್ಮಾಣ ಮಾಡಲು ದಾರಿದೀಪವಾಗುತ್ತದೆ. ಬುದ್ಧನು ದೇವರೂ ಅಲ್ಲ ದೇವದೂತನೂ ದೈವಾಂಶಸಂಭೂತನಲ್ಲ ಆದರೆ ತನ್ನ ಸ್ವಸಾಮಾರ್ಥ್ಯದಿಂದ ಅತ್ಯುನ್ನತ ಜ್ಞಾನ ಪಡೆದು ಮನುಷ್ಯರ ಪರಮ ಗುರುವಾಗಿದ್ದೇ ಅಲ್ಲದೇ ತಾನು ತೋರಿಸಿದ ದಾರಿಯಲ್ಲಿ ನೆಡೆಯುವವರಿಗೆ ಅತ್ಯಂತ ಶ್ರೇಷ್ಠಗುರುವಾಗಿದ್ದನು ಮೈತ್ರಿ, ಕರುಣೆ, ಸಮಾನತೆ, ಮತ್ತು ಜ್ಞಾನದೊಂದಿಗೆ ಕೂಡಿದ ಅಲೌಕಿಕ ಆದರ್ಶ ಪುರುಷನಾಗಿದ್ದನು ಬುದ್ಧನ ಪ್ರಕಾರ ಧರ್ಮವೆಂದರೆ ಸ್ವಾನುಭವದಿಂದ ಕಂಡುಹಿಡಿದ ಮುಕ್ತಿಮಾರ್ಗ ಈ ಮಾರ್ಗವು ಸಾರ್ವಜನಿಕ ಹಾಗೂ ಸಾರ್ವಕಾಲಿಕವಾಗಿದ್ದು ಮಾನವರೆಲ್ಲರೂ ಆಚರಿಸಿ ದುಃಖಗಳಿಂದ ಬಿಡುಗಡೆ ಹೊಂದಿ ಶಾಂತಿಯನ್ನು ಕೊಡುವುದಾಗಿದೆ.

ಭಾರತದೇಶದಲ್ಲಿನ ಸವರ್ಣಿಯರು ದಲಿತರಿಗೆ, ಬಹುಜನರಿಗೆ ಸೃಜನಶೀಲ ಬೌದ್ಧಿಕತೆಯಿಲ್ಲವೆಂದು, ತನ್ನನ್ನು ತಾನು ಅತೀ ಬುದ್ಧಿಜೀವಿ ವರ್ಗವೆಂದೂ ಉಳಿದವರು ಕೀಳೆಂದು ಚಿತ್ರಿಸಿಕೊಳ್ಳುತ್ತಾರೆ. ಬುದ್ಧ ಎಂದೂ ತನ್ನ ಚಿಂತನೆಯಲ್ಲಿ ಪೌರಾಣಿಕ ನೆಲೆಯಲ್ಲಿ ಮಾಡಲಿಲ್ಲ.

ಮತೀಯನೆಲೆಯಲ್ಲಿಯೂ ಭೋಧಿಸಲಿಲ್ಲ. ದೇವರು ಎಂಬ ಭಾವನೆಯೇ ಬುದ್ಧನ ಚಿಂತನೆಗಳಲ್ಲಿ ಎಲ್ಲಿಯೂ ಧ್ವನಿಸುವುದಿಲ್ಲ ಎಂಬುದು ಸ್ಪಷ್ಟವಾದುದು. ಬುದ್ಧರ ಸಂದೇಶ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಧಾರ್ಮಿಕ ನಡವಳಿಕೆಯಾಗಿದೆ.ಎಲ್ಲ ಕೆಟ್ಟ ಕೆಲಸಗಳಿಂದ ದೂರವಿರುವುದು. ಎಲ್ಲಾ ಒಳ್ಳೆ ಕೆಲಸಗಳನ್ನು ತಪ್ಪದೇ ಮಾಡುವುದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮತ್ತು ಮನಸ್ಸಿನ ಮಲೀನತೆಯನ್ನು ಶುದ್ದಿಗೊಳಿಸುವುದಾಗಿದೆ. ನಮಗೋಸ್ಕರ ಧರ್ಮದ ವ್ಯಾಖ್ಯಾನ ವಿಶಾಲ ಮನೋಭಾವದ್ದಾಗಿರಬೇಕಾಗುತ್ತದೆ. ಹಾಗೂ ನೈತಿಕ ನಡತೆಯ ಮತ್ತು ತತ್ವಜ್ಞಾನದ ಭೋಧನೆ ಆಧಾರದ ಮೇಲೆ ನಂಬಿಕೆ ಹುಟ್ಟಿಸುವ ಭೋಧನೆಯಾಗಬೇಕಾಗಿರುತ್ತದೆ. ಈ ಅರ್ಥದಲ್ಲಿ ಬುದ್ಧ ಧಮ್ಮ ಒಂದು ಧರ್ಮವಾಗಿದೆ. ಈ ಧರ್ಮವು ಯಾವುದೇ ಜಾತಿ ಮತ ಭೇಧಗಳಿಗೆ ಕಟ್ಟು ಬೀಳದ ಅಮೋಘವಾದ ನೈತಿಕ ಸತ್ಯಶೋಧನೆ ಯಾಗಿದೆ. ಎಲ್ಲಾ ಮಾನವರು ಈ ಮಾರ್ಗವನ್ನು ಅನುಸರಿಸಿ ಶಾಂತಿಯುತ ಬದುಕನ್ನು ನಡೆಸಬಹುದು ಬುದ್ಧ ಭೋಧಿಸಿದ ಧರ್ಮವು ನೀತಿ ನಡತೆ ಮತ್ತು ವಿಚಾರಗಳಾ ಅತಿರೇಕಕ್ಕೆ ಹೋಗದೆ ಬಾವುಕರೂ ಮೆಚ್ಚತಕ್ಕ ಸಂದೇಶವಾಗಿದೆ ಎಂದು ಹೇಳಬಹುದು. ಬುದ್ಧಧಮ್ಮ ಸಾಮಾನ್ಯ ವಿಚಾರಗಳ ಗುಂಪಿನ ಜೊತೆ ಹೊಂದಿಕೊಳ್ಳುವುದಿಲ್ಲ ಏಕೆಂದರೆ ಅದು ಬೇರೆ ಧರ್ಮಗಳಲ್ಲಿರುವ ಸಾಮಾನ್ಯ ರೂಪುರೇಖೆಗಳ ಜೊತೆ ಏನನ್ನು ಹಂಚಿಕೊಳ್ಳುವುದಿಲ್ಲ.

ಬುದ್ಧ ಧರ್ಮದ ಪ್ರಮುಖ ಅಂಶವೆಂದರೆ ಅದೊಂದು ವಿಶ್ವಧರ್ಮ ವಾಗಿದೆ. ಸಾಮಾನ್ಯವಾಗಿ ಜನರು ತಿಳಿದುಕೊಳ್ಳುವುದೆನೆಂದರೆ ಬುದ್ಧ ಧಮ್ಮ ಎಂದರೆ ಜೀವನವನ್ನು ಬಿಟ್ಟು ಓಡಿ ಹೋಗಿ ಗುಡಿ ಗುಹೆ ಮತ್ತು ಕಾಡು ಸೇರಿ ಎಲ್ಲರಿಂದ ದೂರ ಉಳಿಯುವುದೆಂದು ಕೊಂಡಿದ್ದಾರೆ. ಇದು ತಿಳಿದುಕೊಳ್ಳುವ ಕೊರತೆಯ ಅನುಭಾವ ಎನ್ನಬಹುದು. ಬುದ್ದನು ಅತೀ ಕಷ್ಟಪಟ್ಟು ಕೆಲಸಮಾಡಿದ ವ್ಯಕ್ತಿ ಅಂತಹ ಮಹಾಪುರುಷ ಪ್ರಪಂಚದಲ್ಲಿ ಇನ್ನು ಹುಟ್ಟಿಲ್ಲ.ಅವನು ದಿನಕ್ಕೆ 2 1/2 ಗಂಟೆ ಮಾತ್ರ ಮಲಗಿ ನಿದ್ರಿಸಿ ಉಳಿದ ವೇಳೆಯಲ್ಲಿ ಕೆಲಸ ಮಾಡುತ್ತಿದ್ದ ಅವನು ಭಾರತ ದೇಶದ ಉದ್ದಗಲಕ್ಕೂ ಕಾಲು ನಡಿಗೆಯಲ್ಲಿ ಪ್ರಯಾಣ ಮಾಡಿ ಸಮಾಜದ ಎಲ್ಲಾ ಜನರ ಜೊತೆ ಮಾತನಾಡಿಸಿ ಬೋಧನೆ ಮಾಡಿದ. ಧರ್ಮದ ಭೋಧನೆಯ ಜೊತೆಗೆ ಜನರ ಜೀವನಮಟ್ಟ ಮತ್ತು ತಿಳುವಳಿಕೆ ಮಟ್ಟಕ್ಕೆ ಇಳಿದು ಭೋಧಿಸಿದನು. ಬುದ್ಧನ ಧಮ್ಮದಲ್ಲಿ ಗ್ರಹಿಕೆ ನೀತಿ ನಿಯಮಗಳ ಮತ್ತು ಮನೋವೈಜ್ಞಾನಿಕ ಸಂಶೋಧನೆಯ ವಿಚಾರಗಳನ್ನು ಕಾಣಬಹುದು. ಇದು ಎಲ್ಲಾ ಬಗೆಯ ಜನರನ್ನು ತೃಪ್ತಿಗೊಳಿಸುತ್ತದೆ. ಒಬ್ಬ ಸಾಮಾನ್ಯ ಮನಸ್ಸುಳ್ಳವನಿಗೆ ಒಂದು ರೀತಿಯ ಕಾನೂನಾಗಿದೆ. ಒಬ್ಬ ನಿಷ್ಟ ಧರ್ಮದವನಿಗೆ ಒಂದು ತತ್ವಜ್ಞಾನ ಅಥವಾ ನೀತಿಯ ಭೋಧನೆಯು ಜ್ಞಾನಕ್ಕೆ ದಾರಿ ಮಾಡಿಕೊಟ್ಟು ದುಃಖದಿಂದ ಬಿಡುಗಡೆ ಹೊಂದಲು ಸಹಕಾರಿಯಾಗುತ್ತದೆ. ಯಾರು ಸ್ವಚ್ಚ ಮನಸ್ಸು ಮತ್ತು ಕರುಣಾಮಯಿ ಜೀವನವನ್ನು ನಡೆಸುವುದಿಲ್ಲವೋ ಅವರಿಗೆ ಆಧ್ಯಾತ್ಮಿಕ ಸಾಧನೆ ಸಾಧ್ಯವಿಲ್ಲ.

ಬುದ್ಧ ತನ್ನಲ್ಲಿ ವಿಶ್ವಾಸ ಇಡುವ ಅನುಯಾಯಿಗಳಿಗೆ ಸ್ವರ್ಗದ ಆರ್ಶೀವಾದ ಮತ್ತು ವಿಮೋಚನೆ ಕೊಡುತ್ತೇನೆಂಬ ಆಶ್ವಾಸನೆಕೊಡಲಿಲ್ಲ. ಅವನಿಗೆ ಧರ್ಮವೆಂಬುದು ಒಂದು ಚೌಕಾಸಿಯಲ್ಲ, ಆದರೆ ಅದು ಸರ್ವಶ್ರೇಷ್ಟ ಜ್ಞಾನ ಪಡೆವ ಮತ್ತು ಮುಕ್ತಿ ಪಡೆವ ದಾರಿಯಾಗಿತ್ತು. ಬುದ್ಧ ತನ್ನ ಅನುಯಾಯಿಗಳಿಂದ ಕುರುಡು ನಂಬಿಕೆಯನ್ನು ಅಪೇಕ್ಷಿಸಲಿಲ್ಲ. ಅವನು ಮನುಷ್ಯರು ಚಿಂತಿಸಿ ತಿಳಿದುಕೊಳ್ಳುವುದನ್ನು ಅಪೇಕ್ಷಿಸಿದ. ಬುದ್ಧ ಧಮ್ಮ ಬದುಕಿರುವವರಿಗೆ ಒಂದು ಶ್ರೇಷ್ಟ ದಾರಿಯಾಗಿ(ಮಾರ್ಗ) ಅಲ್ಲಿ ಸುಸಂಸ್ಕೃತ ಶಿಕ್ಷಣ, ಸಮಾನತೆ, ನ್ಯಾಯ, ಶಾಂತಿ ಅತ್ಯುನ್ನತ ಸ್ಥಾನ ಪಡೆಯುತ್ತದೆ. ಪ್ರತೀಕಾರ, ದ್ವೇಷ, ನಿಂದನೆ ಸಿಟ್ಟು ಬುದ್ಧನ ಬೋಧನೆಗೆ ಪರಕೀಯ. ಅಧಿಕಾರಕ್ಕಿಂತಲೂ ವಿಚಾರಕ್ಕೆ ಅಂಟಿಕೊಂಡು ಧಾರ್ಮಿಕ ಮೌಢ್ಯತೆಯ ವಿರುದ್ಧ ಸಿಡಿದೆದ್ದ ಬುದ್ಧನಿಗೆ ವಿಶ್ವ ಋಣಿಯಾಗಬೇಕಾಗಿದೆ. ಪುರೋಹಿತರಿಗೆ ಗುಲಾಮರಾಗಿದ್ದ ಮಾನವರನ್ನು ಬಿಡುಗಡೆ ಮಾಡಿದವನು ಬದುಕಲು ಬೂಟಾಟಿಕೆ ಮತ್ತು ಧಾರ್ಮಿಕ ಸರ್ವಾಧಿಕಾರದ ಬಂಧನದಿಂದ ಬಿಡುಗಡೆ ಮಾಡಿದವನು ಅವನೊಬ್ಬನೆ.

ಬುದ್ಧ ಧಮ್ಮದ ನಾಲ್ಕು ಶ್ರೇಷ್ಟ ತತ್ವಗಳೆಂದರೆ ಮೈತ್ರಿ, ಕರುಣೆ, ಮುದಿತ, ಉಪೇಕ್ಷಾ. ಮೈತ್ರಿ ಎಂದರೆ ಪಾಳಿ ಭಾಷೆಯಲ್ಲಿ ಮೆತ್ತ ಎಂದು ಹೆಸರು. ಪ್ರೀತಿ, ಪ್ರೇಮ, ಸ್ನೇಹ, ಸೌಜನ್ಯ, ಸಹೃದಯತೆ ಇವುಗಳ ವ್ಯಾಪಕವಾದ ಅರ್ಥವನ್ನು ಒಳಗೊಂಡಿವೆ. ಕರುಣೆ ಎಂದರೆ ಪರರ ದುಃಖವನ್ನು ನೋವು ಸಂಕಟಗಳನ್ನು ನೋಡಿ ಮನಸ್ಸು ಕರಗಿ ಅವರ ದುಃಖವನ್ನು ದೂರ ಮಾಡಲು ಪ್ರಯತ್ನಿಸುವ ಪರೋಪಕಾರ ಭಾವನೆಯೇ ಕರುಣೆ. ಮುದಿತ ಎಂದರೆ ಪರರ ಭಾಗ್ಯ, ಸಂಪತ್ತು, ಅದೃಷ್ಟ ಅಭಿವೃದ್ದಿಗಳನ್ನು ಕಂಡು ಅದು ತನಗೆ ದೊರೆತಿದೆ ಎನ್ನುವಂತೆ ಸಂತೋಷಪಡುವುದಕ್ಕೆ 'ಮುದಿತ' ಎನ್ನುವರು. ಉಪೇಕ್ಷಾ ಎಂದರೆ ನಿರ್ವಿಕಲ್ಪ ಭಾವದಿಂದ ಕೂಡಿದ ಸಮಚಿತ್ತ, ಸಮಭಾವ, ಮನಸ್ಥೈರ್ಯ ಎಂದು ಇದರ ಅರ್ಥ.

ಬುದ್ಧ ಧಮ್ಮವು ಸದಾಚಾರ, ಅರ್ಥ ಮಾಡಿಕೊಳ್ಳುವಿಕೆ ಮತ್ತು ಸ್ವತಂತ್ರ್ಯದ ಆಧಾರದ ಮೇಲೆ ನಿಂತಿದೆ. ಸದಾಚಾರ ಸಮಾಜದಲ್ಲಿ ಬೆಳೆದು ಸಮಾಜದ ಬಲಾವಣೆಗೆ ಸಹಕಾರಿಯಾಗಬೇಕು. ಅದು ಒಂದು ಸಂಬಂಧವಾಗಬೇಕು. ಬಲವಂತವಾಗಿ ಹೇರಿದಾಗ ಸದಾಚಾರ ಆಗುವುದಿಲ್ಲ ಕರುಣೆ, ಪ್ರೀತಿಯು ಬುದ್ಧ ಧಮ್ಮದ ಸದಾಚಾರ ಮತ್ತು ನೀತಿಗೆ ಅಡಿಪಾಯವಾಗಿದೆ ಈ ಕರುಣೆಯಿಂದಲೇ ಎಲ್ಲಾ ನೀತಿ ಮತ್ತು ಸದಾಚಾರದ ಶೀಲಗಳು ಸಮಾಜಸೇವೆ, ಸಾಮಾಜಿಕನ್ಯಾಯ, ಸಾಮಾಜಿಕಕಲ್ಯಾಣ, ಸಮಾನತೆ, ಸೋದರ ಭಾವನೆ, ತಾಳ್ಮೆ ಅರ್ಥಮಾಡಿಕೊಳ್ಳುವಿಕೆ, ಒಬ್ಬರನ್ನೊಬ್ಬರು ಗೌರವಿಸುವುದು, ಪ್ರೀತಿ

ಕರುಣೆಯ ಬೇರಿನಲ್ಲಿದೆ. ಈ ಶ್ರೇಷ್ಠವಾದ ಆದರ್ಶದ ಮೇಲೆ ನಿಂತಿರುವ ಬುದ್ಧ ಧಮ್ಮ ಯಾವಾಗಲೂ ಶಾಂತಿಯನ್ನು ಪ್ರತಿಪಾದಿಸುತ್ತದೆ. ಬುದ್ಧ ಧಮ್ಮ ಎಂದೆಂದೂ ಅನನ್ಯವಾದುದು. ಏಕೆಂದರೆ ಸ್ವರ್ಗ ನರಕಗಳ ಬಗ್ಗೆ ಏನನ್ನು ಹೇಳದೆ ಧರ್ಮದಲ್ಲಿರುವ ಉತ್ತಮ ಗುಣಗಳ ಬಗ್ಗೆ ನಿರ್ಭಯವಾಗಿ ಮಾತನಾಡುತ್ತದೆ. ಬುದ್ಧನ ಬೋಧನೆಯು ವಿಶ್ವದ ಎಲ್ಲ ಜೀವಿಗಳಿಗಾಗಿಯೇ ಇದ್ದು ಅವು ಜಾಗತಿಕ ಬೋಧನೆಯಾಗಿದೆ. ಅಂಬೇಡ್ಕರ್ ಒಂದು ಹೊಸ ಧರ್ಮದ ಹುಡುಕಾಟದಲ್ಲಿ ಇದ್ದಾಗ ಅವರಿಗೆ ಸೂಕ್ತವಾದ ಧರ್ಮವೆಂದು ಅನಿಸಿದ್ದು ಬೌದ್ಧಧರ್ಮ. ಅವರು ಎಲ್ಲಾ ಧರ್ಮಗಳನ್ನೂ ಅಧ್ಯಯನ ಮಾಡಿ ಕೊನೆಗೆ ಬೌದ್ಧಧರ್ಮವನ್ನು ಸ್ವೀಕಾರ ಮಾಡಿದರು. ಏಕೆಂದರೆ ಬೌದ್ಧಧರ್ಮವು ಸಹೋದರತೆ, ಸ್ವಾತಂತ್ರ್ಯ, ಸಮಾನತೆ ಈ ತತ್ವಗಳ ಆಧಾರದಲ್ಲಿ ನಿಂತಿರುವ ಧರ್ಮವಾಗಿದೆ. ಆದ್ದರಿಂದ ಅಂಬೇಡ್ಕರ್ ಹಿಂದೂ ಧರ್ಮದ ತಪ್ಪು ಆಚರಣೆಗಳನ್ನು ವಿರೋಧಿಸಿ ಬೌದ್ಧಧರ್ಮವನ್ನು ಸ್ವೀಕಾರ ಮಾಡುತ್ತಾರೆ.. ಬುದ್ಧ ಧಮ್ಮ ಒಂದು ಧರ್ಮವಾಗಿ ಸರಿಸಾಟಿ ಇಲ್ಲದ ಪೂರ್ಣ ನಿರ್ಬಂಧವಿಲ್ಲದ ಸತ್ಯವಾಗಿದ್ದು ಅದು ಇತರರ ಮೇಲೆ ಜೊತೆ ಹೇಗೆ ಶಾಂತಿ ಮತ್ತು ಸೌಹಾರ್ದತೆಯಿಂದ ಬದುಕಬೇಕೆಂಬುದನ್ನು ತೋರಿಸುತ್ತದೆ. ಮನುಕುಲದ ಇತಿಹಾಸದಲ್ಲೇ ಪ್ರಪಂಚಕ್ಕೆ ಬುದ್ಧನ ಶ್ರೇಷ್ಠವಾದ ಸಂದೇಶ ಮೊದಲಿಗಿಂತಲೂ ಈಗ ಹೆಚ್ಚು ಅಗತ್ಯವಾಗಿದೆ, ಪ್ರಸ್ತುತವಾಗಿದೆ.

**ಪರಾಮರ್ಶನ ಗ್ರಂಥಗಳು**


| ಕ್ರ.ಸಂ. | ಲೇಖಕರು | | ಗ್ರಂಥ |
|---|---|---|---|
| 1 | ಎ.ಡಿ. ಕೃಷ್ಣಯ್ಯ (ಅನು) ಮೂಲ : ಅಂಬೇಡ್ಕರ್ | : | ಬುದ್ಧ ಮತ್ತು ಆತನ ಧಮ್ಮ ಮೊದಲ ಮುದ್ರಣ – 1996 |
| 2 | ಭಗವಾನ್ ಬುದ್ಧ | : | ಕೇಂದ್ರ ಸರ್ಕಾರ ಪ್ರಸಾರ ಇಲಾಖೆ ಮೊದಲ ಮುದ್ರಣ – 1996 |
| 3 | ಡಾ. ತಾಳ್ತಜೆ ವಸಂತ ಕುಮಾರ | : | ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ ಮುದ್ರಣ 1988 |
| 4 | ವಿ.ಎಂ. ಇನಾಂದಾರ್ | : | ಡಾ. ಅಂಬೇಡ್ಕರ್ (ವ್ಯಕ್ತಿ ಮತ್ತು ವಿಚಾರ) ಮುದ್ರಣ – 1981, 2006 |
| 5 | ಎಂ.ಎಲ್. ರಾಯಮಾಣೆ | : | ಭಾರತರತ್ನ ಬಾಬಾಸಾಹೇಬ್ ಅಂಬೇಡ್ಕರ್ ಮುದ್ರಣ – 2010 |
| 6 | ನಾನಕ್ ಚಂದ್ ರತ್ತು (ಮೂಲ) ಡಾ. ವಿಜಯ ನರಸಿಂಹ (ಅನು) | : | ಬಾಬಾ ಸಾಹೇಬರ ಕೊನೆಯ ದಿನಗಳು |
| 7 | ಎಂ. ಮರಿಸ್ವಾಮಿ | : | ಬೆಳಕಿನ ಧಮ್ಮ |
| 8 | ಅಂಬೇಡ್ಕರ್ (ಮೂಲ) | | |
| | ಬೆ.ಕಾ. ಮೂರ್ತಿಶ್ವರಯ್ಯ (ಅನು) | : | ಬುದ್ಧ ಮತ್ತು ಬೌದ್ಧ ಧರ್ಮದ ಭವಿಷ್ಯ |
| 9 | ಡಿ.ಕೆ.ಕುಮಾರಯ್ಯ | : | ಬುದ್ಧ ಮತ್ತು ಧಮ್ಮ |


## "ಚಿದಾಕಾಶ ಗೀತೆ"ಯ ತಾತ್ವಿಕತೆ.

ಶ್ರೀಮತಿ. ಶೋಭಾ ಹೂಲಿಕಟ್ಟಿ
ಸಂಶೋಧನಾ ವಿದ್ಯಾರ್ಥಿನಿ, ತತ್ವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೦೩

ಭಾರತೀಯ ತತ್ವಚಿಂತನೆಯು ಜಗತ್ತಿನಲ್ಲೇ ವಿಶಿಷ್ಟವಾದದ್ದು. ಏಕೆಂದರೆ ಇದು ಕೇವಲ ವ್ಯಕ್ತಿಯೋರ್ವನ ಚಿಂತನೆ ಇಲ್ಲವೆ ಹಲವು ಜನರ ತಾರ್ಕಿಕ ಸಮಾಲೋಚನೆಗಳ ಫಲಶ್ರುತಿಯಲ್ಲ; ಸಾಧಕರು ಸಾವಿರಾರು ವರ್ಷಗಳ ತಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಅನುಭವಿಸಿ ಅಭಿವ್ಯಕ್ತಿಸಿದ ದಾರ್ಶನಿಕ ಹೊಳಹುಗಳು. ಆದ್ದರಿಂದಲೇ ಭಾರತೀಯ ದಾರ್ಶನಿಕ ಪರಂಪರೆಯು ಜಗತ್ತಿನ ತಾತ್ತ್ವಿಕ ಚಿಂತನೆಗಳ ಅಡಿಪಾಯ ಎನಿಸಿದೆ. ಋಷಿಮುನಿಗಳು, ಸಾಧು–ಸಂನ್ಯಾಸಿಗಳು, ಯೋಗಿ–ಅವಧೂತರು ಇಂಥ ಸಾಧನೆಯನ್ನು ಮಾಡಿ, ತಮ್ಮ ಸಾಧನಾ ಫಲವನ್ನು ಜಗತ್ತಿನ ಒಳಿತಿಗಾಗಿ ನೀಡಿದ್ದಾರೆ. ಅವರಲ್ಲಿ ಅವಧೂತ ಭಗವಾನ್ ನಿತ್ಯಾನಂದರೂ ಒಬ್ಬರು.

ಕೃತಯುಗದಲ್ಲಿ ಸಾಕ್ಷಾತ್ ಚತುರ್ಮುಖ ಬ್ರಹ್ಮನ ನಾಲ್ಕು ಮುಖಗಳಿಂದ ಹೊರಟ ಚತುರ್ವೇದಗಳಂತೆ, ದ್ವಾಪರ ಯುಗದಲ್ಲಿ ಮಹಾವಿಷ್ಣುವಿನ ಅವತಾರಿ ಭಗವಾನ್ ಶ್ರೀಕೃಷ್ಣನ ಮುಖಾರವಿಂದದಿಂದ ಹೊರಸೂಸಿದ ಭಗವದ್ಗೀತೆಯಂತೆ, ಕಲಿಯುಗದಲ್ಲಿ ಸಾಕ್ಷಾತ್ ಪರಬ್ರಹ್ಮನೇ ಆಗಿದ್ದ ಅವಧೂತ ಭಗವಾನ್ ನಿತ್ಯಾನಂದರ ಅಮೃತ ವಚನಗಳ ಸಂಗ್ರಹವೇ **'ಚಿದಾಕಾಶಗೀತೆ'**ಯಾಗಿದೆ. ಇದರಲ್ಲಿಯ ತಾತ್ವಿಕ ಅಂಶಗಳನ್ನು ವಿಶ್ಲೇಷಿಸುವ ಮೂಲಕ ಆಧ್ಯಾತ್ಮ ಸಾಧಕರಿಗೆ ಮತ್ತು ತತ್ವ ಜಿಜ್ಞಾಸುಗಳಿಗೆ ಈ ಕೃತಿ ಮತ್ತು ಕರ್ತೃವನ್ನು ಪರಿಚಯಿಸುವುದು ಹಾಗೂ ಅದರ ತಾತ್ವಿಕ ಮಹತ್ವವನ್ನು ತಿಳಿಸುವುದು ಪ್ರಸ್ತುತ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಅದಕ್ಕಾಗಿ ವಿಶ್ಲೇಷಣಾತ್ಮಕ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

'ಚಿದಾಕಾಶ ಗೀತೆ'ಯ ಅರ್ಥವಿಸ್ತಾರ ಮತ್ತು ಚಿಂತನೆಯ ಆಳ ವ್ಯಾಪಕವಾದದ್ದು. ಸಾಧಕರ, ತತ್ವಜ್ಞಾನಿಗಳ ಜ್ಞಾನ ತೃಷೆ ತೀರಿಸಲು ಹಾಗೂ ಸಾಧನೆಯ ಹಾದಿಗೆ ಬೆಳಕಿನ ದಿಗ್ದರ್ಶನ ಮಾಡಲು ಅಗತ್ಯವಿರುವ ಅಂಶಗಳೆಲ್ಲವೂ ಈ ಕೃತಿಯಲ್ಲಿವೆ. ಆದರೆ ಇಲ್ಲಿ ಕೇವಲ ತಾತ್ವಿಕ ಅಂಶಗಳನ್ನು ಮಾತ್ರ ಆಯ್ದುಕೊಂಡು ವಿಶ್ಲೇಷಣೆ ಮಾಡಲಾಗಿದೆ.

**ಕೃತಿ– ಕರ್ತೃ ವಿಚಾರ:**

*ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।*
*ಅಭ್ಯುತ್ಥಾನಂ ಅಧರ್ಮಸ್ಯ ತದಾऽऽತ್ಮಾನಂ ಸೃಜಾಮ್ಯಹಮ್॥*
*(ಭಗವದ್ಗೀತೆ–೪.೭)*

ಎಂದು ಭಗವಂತ ಗೀತೆಯಲ್ಲಿ ಹೇಳಿರುವಂತೆ, ಭಾರತಕ್ಕೆ ಸ್ವತಂತ್ರ ಸಿಗುವ ಆಸು–ಪಾಸಿನಲ್ಲಿ ಸಮಾಜವು ಆರ್ಥಿಕ, ಧಾರ್ಮಿಕ ಹಾಗೂ ನೈತಿಕವಾಗಿ ಅಧ:ಪತನದತ್ತ ನಡೆದಿತ್ತು. ಕಡುಬಡತನ, ಪುರೋಹಿತಶಾಹಿಯ ಅಟ್ಟಹಾಸ ಹಾಗು ವಿದೇಶಿಗರ ಪ್ರಭಾವ ದಿಂದಾಗಿ ಸಾಮಾಜಿಕ ಮೌಲ್ಯಗಳು ಕುಸಿಯ ತೊಡಗಿದ್ದವು. ಅನೇಕ ಸಮಾಜ ಸುಧಾರಕರು, ಚಿಂತಕರು ಸುಧಾರಣಾ ಚಳುವಳಿಗಳನ್ನು ಹಮ್ಮಿಕೊಂಡಿದ್ದರೂ ಸಮಾಜದ ಪಿಡುಗುಗಳು ಉಲ್ಬಣಗೊಂಡಿದ್ದವು. ಇಂತಹ ಸಂಧಿ ಕಾಲದಲ್ಲೆ ಸಂನ್ಯಾಸ, ಬ್ರಹ್ಮಜ್ಞಾನ ಎನ್ನುವುದು ಎಲ್ಲರಿಗೂ ಸಮನಾದದ್ದು, ಸಾಕಾರಾ, ನಿರಾಕಾರಗಳೆಲ್ಲ ಒಂದೆ ಎಂಬುದನ್ನು ತಿಳಿಸಲು ಅಯೋನಿಜರಂತೆ ಅವತರಿಸಿದವರೆ ಭಗವಾನ್ ನಿತ್ಯಾನಂದರು.

ಕೇರಳದ ಕಲ್ಲಿಕೋಟೆ ಜಿಲ್ಲೆಯ ತುನೇರಿ ಎಂಬ ಗ್ರಾಮದ ಚಾತುನಾ ಯರ್ ಮತ್ತು ಉನ್ನಿಯಮ್ಮರಿಗೆ ಒಂದು ಬೆಳಗು ಮುಂಜಾವಿನ ಸಮಯದಲ್ಲಿ, ಅಯ್ಯಪ್ಪ ಸ್ವಾಮಿಯ ದೇವಾಲಯದಲ್ಲಿ, ಕಮಲ ಪತ್ರದಲ್ಲಿ ಮಲಗಿದ ಸ್ಥಿತಿಯಲ್ಲಿ ದೊರೆತ ಶಿಶುವೇ ರಾಮನ್ ಕುಟ್ಟಿ. ಮುಂದೆ ದೈವಭಕ್ತರಾಗಿದ್ದ ಈಶ್ವರ ಅಯ್ಯರ್ ಅವರ ಮನೆಯಲ್ಲಿ ದನಗಾಹಿಯಾಗಿದ್ದರು. ಬಾಲ್ಯದಲ್ಲೆ ಧ್ಯಾನದ ಮೂಲಕ ಸಮಾಧಿ ಸ್ಥಿತಿಗೆ ಹೋಗುತ್ತಿದ್ದ ರಾಮನ್ ಕುಟ್ಟಿ ಸದಾ ಸಚ್ಚಿದಾನಂದ ಅವಧೂತ ಸ್ಥಿತಿಯಲ್ಲಿರುತ್ತಾ ನಿತ್ಯಾನಂದರಾದರು.

ನಿತ್ಯಾನಂದರೇ ಹೇಳಿದಂತೆ ಅವಧೂತನು ಇಚ್ಛಾಮರಣಿ, ಶರೀರ ಭಾವನೆ ಇಲ್ಲದವನು. ತುರ್ಯಾತೀತ. ಅವನು ಹಠಯೋಗಿಯಲ್ಲ, ರಾಜಯೋಗಿ. ಸರ್ವಾತ್ಮ ಭಾವವುಳ್ಳ ಅವನು ಯಾರನ್ನು ಕಂಡರೂ ತನ್ನನ್ನೇ ಕಂಡಹಾಗೆ ಸಂತೋಷ ಪಡುತ್ತಾನೆ. ವಿಶ್ವವೆನ್ನೆಲ್ಲಾ ಪರಮಾತ್ಮ ಭಾವನೆಯಿಂದ ನೋಡವುದರಿಂದ ಅವನಿಗೆ ವಿಶ್ವವೇ ಬಂಧು–ಬಳಗ. ಅವನು ಸಮಸ್ತ ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳನ್ನು ಚಿತ್‌ಸ್ವರೂಪವಾದ ತನ್ನಲ್ಲೆ ನೋಡುತ್ತಾನೆ. **"ಆಸೆಯಿಲ್ಲದವನೇ ಆಚಾರ್ಯ, ಅವನೇ ಸಂನ್ಯಾಸಿ ಅವನೇ ಅವಧೂತ"**. ಬಡಗರದ ಸಿದ್ಧಾಶ್ರಮದ ಸಾಧಕರಾದ ಪರಮಹಂಸ ಶಿವಾನಂದರು ಬಾಲಕ ನಿತ್ಯಾನಂದರರನ್ನು ನೋಡಿದ ಕೂಡಲೇ "ನಿತ್ಯತತ್ವ... ನಿತ್ಯತತ್ವ..." ಎನ್ನುತ್ತಿದ್ದರಂತೆ. ಅಂದರೆ ನಿತ್ಯಾನಂದ ಎಂಬುದು ಒಂದು ವ್ಯಕ್ತಿಯಲ್ಲ; ಅದೊಂದು ತತ್ವ. ಸರ್ವೋಚ್ಚವಾದ ಅವಧೂತ ಸ್ಥಿತಿ. *"ಲೋಕದಂತೆ ಬಾರರು, ಲೋಕದಂತೆ ಹೋಗರು ನೋಡಯ್ಯ ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು, ಮುಕ್ತಿಯಂತೆ ಹೋಹರು ನೋಡಯ್ಯ*
*ಉರಿಲಿಂಗದೇವ, ನಿಮ್ಮ ಶರಣರು ಉಪಮತೀತರಾಗಿ ಉಪಮಿಸಬಾರದು"– ಉರಿಲಿಂಗದೇವರು.*

ಎಂಬಂತೆ ನಿತ್ಯಾನಂದರು ಕ್ರಿ.ಶ.೧೯೬೧ರಲ್ಲಿ ಮಹಾಸಮಾಧಿ ತಗೆದುಕೊಂಡು ಸ್ಥೂಲ ಶರೀರದಿಂದ ಬಿಡುಗಡೆ ಹೊಂದಿ ಸೂಕ್ಷ್ಮಶರೀರದಲ್ಲಿ ಅನಂತರಾದರು. ನಿತ್ಯಾನಂದರ ಭಕ್ತ ಶಿಷ್ಯೆಯಾದ ಮಂಗಳೂರಿನ ತುಳಸಿ ಮಾತಾಜಿ ಅವರ ವಚನಗಳನ್ನು ಸಂಗ್ರಹಿಸಿ ಗ್ರಂಥ ರೂಪಕ್ಕೆ ತಂದರು. ಅದೇ 'ಚಿದಾಕಾಶ ಗೀತೆ'. ಇದು ಭಗವಾನ್ ನಿತ್ಯಾನಂದರ ನೇರ ಮಾತುಗಳಲ್ಲೆ ಇದೆ. ಕೆಲವೊಮ್ಮೆ ಸೂತ್ರಗಳ ರೂಪದಲ್ಲಿ, ಹಾಗೂ ವ್ಯಾಖ್ಯೆಗಳು ಮತ್ತು ಸರಳ ಗದ್ಯದ ಸ್ವರೂಪದಲ್ಲೂ ನಿತ್ಯಾನಂದರ ತತ್ವಬೋಧೆಗಳನ್ನು ಲೇಖಿಸಲಾಗಿದೆ. ಸರಳವಾಗಿ ಅರ್ಥವಾಗುವಂತೆ ಹೇರಳವಾಗಿ ರೂಪಕಗಳು ಮತ್ತು ಉಪಮೆಗಳನ್ನು ಬಳಸಲಾಗಿದೆ.

ತುಳಸೀಮಾತಾ ಅವರು ಮೊದಲ ಬಾರಿ ಕ್ರಿ.ಶ. ೧೯೨೭ರಲ್ಲಿ **ಚಿದಾಕಾಶ ಗೀತಾ ಆತ್ಮ ಪ್ರಭಾವ** ಎಂಬ ಹೆಸರಿನಲ್ಲಿ ಈ ಕೃತಿಯನ್ನು ಪ್ರಕಟಿಸಿದರು. ಅಲ್ಲಿಂದೀಚೆಗೆ ಅನೇಕ ಭಾರತೀಯ ಭಾಷೆಗಳು ಮತ್ತು ಇಂಗ್ಲೀಷ್‌ನಲ್ಲಿ ಕೂಡ ಈ ಕೃತಿಯನ್ನು ಭಾಷಾಂತರಿಸ ಲಾಗಿದ್ದು, ಅವುಗಳ ಸ್ವರೂಪದಲ್ಲಿ ಬದಲಾವಣೆಯಿದ್ದರೂ ಕೂಡ ಮೂಲಕೃತಿ ಮಾತ್ರ ತುಳಸೀ ಮಾತಾ ಬರೆದ **'ಚಿದಾಕಾಶ ಗೀತೆಯೇ'** ಆಗಿದೆ. ಕನ್ನಡದಲ್ಲಿ ನುಲೇನೂರು ಮೂರ್ತಿಗಳು ಇದಕ್ಕೆ ವ್ಯಾಖ್ಯಾನ ನೀಡಿದ್ದಾರೆ. ಸಂಸ್ಕೃತದಲ್ಲಿ ಸಾಂಬ ದೀಕ್ಷಿತರು **'ನಿತ್ಯಾನಂದ ಚರಿತಂ'** ಎಂಬುದಾಗಿ, ಇಂಗ್ಲೀಷ್‌ನಲ್ಲಿ ರಮಾನಾಥ **ಪೈ ಅವರು** 'voice of self' ಎಂದೂ ಭಾಷಾಂತರಿಸಿದ್ದಾರೆ. ಇತ್ತೀಚೆಗೆ ಸ್ವಾಮಿ ವಿಜಯಾನಂದರು ಇದರ ಸಾರರೂಪವನ್ನು ತಮ್ಮ **'ಅವಧೂತ ಭಗವಾನ್ ನಿತ್ಯಾನಂದ'** ಎಂಬ ಕೃತಿಯಲ್ಲಿ ನೀಡಿದ್ದಾರೆ.

**ಚಿದಾಕಾಶದ ಅರ್ಥ :** *'ಚಿದಾಕಾಶ'* ಎನ್ನುವುದು **ಯೋಗವಾಸಿಷ್ಠ**ದಲ್ಲಿ ವಸಿಷ್ಠರು ಹೇಳಿದ ೩ ರೀತಿಯ ಆಕಾಶಗಳಲ್ಲಿ ಒಂದಾಗಿದೆ.
ಮೊದಲನೆಯ **ಭೂತಾಕಾಶವು** ಭೌತಿಕವಾಗಿ ತೋರುವ ವಸ್ತುಗಳ ಒಳ–ಹೊರಗೆಲ್ಲ ಆವರಿಸಿಕೊಂಡಿದ್ದಾಗಿದೆ. ಎರಡನೆಯ **ಚಿತ್ತಾಕಾಶವು** ಮನಸ್ಸಿನಿಂದ ಕಲ್ಪಿತವಾದ ಭಾವಗಳಿಗೆಲ್ಲಾ ಆಧಾರವಾಗಿದ್ದು ಮಂಜನ್ನು ನೀರು ವ್ಯಾಪಿಸಿದಂತೆ ವ್ಯಾಪಿಸಿದೆ. ಮೂರನೆಯ **ಚಿದಾಕಾಶವು** ಈ ಭೂತಾಕಾಶ ಮತ್ತು ಚಿತ್ತಾಕಾಶವನ್ನು ವ್ಯಾಪಿಸಿ ಕೊಂಡಿದೆ. ಆದ್ದರಿಂದ ಇದೇ ನಿತ್ಯವಾದದ್ದು ಮತ್ತು ಸತ್ಯವಾದದ್ದು. ವಸಿಷ್ಠರು ಹೇಳುವುದು ಅದನ್ನೇ *'ಚಿದಕಾಶಮಿದಂ ಪುತ್ರ ಸ್ವಚ್ಛಂ ಚಕಚಕಾಯತೆ...'* "ಚಿದಾಕಾಶವೆಂಬುದು ಸ್ವಚ್ಛವಾಗಿ ಚಕಚಕನೇ ಹೊಳೆಯುತ್ತಾ ಸ್ವಪ್ರಕಾಶವಾಗಿದೆ. ಹೇ ರಾಮಚಂದ್ರ! ನಾನೂ, ನೀನು, ಈ ಜಗತ್ತು, ಎಲ್ಲವೂ ನಿರ್ಮಲವೂ, ಸ್ವಪ್ರಕಾಶವೂ ಆದ ಚಿದಾಕಾಶ ಮಾತ್ರವಾಗಿದೆ. ಅದೇ ಪರಬ್ರಹ್ಮ". ಈ ಪರಬ್ರಹ್ಮವೇ ಭಗವಾನ್ ನಿತ್ಯಾನಂದರು; ಅವರ ಮುಖದಿಂದ ಆನಂದಮಯ ವಾದ ಗಾನದಂತೆ ತಾನೇ ತಾನಾಗಿ ಹೊರಟ ವಾಣಿಯೇ **'ಚಿದಾಕಾಶ ಗೀತೆ'**. ಅವರೆಂದೂ ಉಪನ್ಯಾಸ ಮಾಡಿದವರಲ್ಲ, ಆದರೆ ಅವರು ನುಡಿದ ಒಂದೊಂದು ಶಬ್ದವೇ ಮಾತು– ಬುದ್ಧಿ– ಮನಸ್ಸನ್ನು ಮೀರಿದ ಅನುಭವದ ಆಳದಿಂದ ಚಿಮ್ಮಿ ಹೊರಸೂಸುವ ಅಮೃತದ ಹನಿಗಳಂತೆ ಸಾರಭೂತವೂ, ಸಂಕ್ಷಿಪ್ತವೂ, ಸೂತ್ರಪ್ರಾಯವೂ ಹಾಗೂ ಸೂಚಕವೂ ಆಗಿದ್ದು ವೇದಾಂತದ ಸಾರವೇ ಅದರಲ್ಲಿದೆ.

**"ಚಿದಾಕಾಶ ಗೀತೆ"ಯ ತಾತ್ವಿಕ ಅಂಶಗಳ ಸ್ವರೂಪ ಮತ್ತು ಮಹತ್ವ:**
'ಚಿದಾಕಾಶಗೀತೆ'ಯಲ್ಲಿರುವುದು ಒಂದು ತತ್ವವಲ್ಲ, ಒಂದು ಸಂಪ್ರದಾಯವಲ್ಲ, ಇದೊಂದು ಹಿಮಾಲಯ ಪರ್ವತ ಸ್ತೋಮದಂತೆ ಹಲವು ತತ್ವಗಳ ಶ್ರೇಣಿಯಾಗಿದೆ. ಇದು ಯವುದೇ ಒಂದು ಧರ್ಮ ಅಥವಾ ಜಾತಿಗೆ ಸಂಬಂಧಿಸಿದ್ದಲ್ಲ, ಇಡೀ ಮಾನವ ಕುಲದ ಮೂಲ ಸತ್ವಕ್ಕೆ ಪ್ರೇರಣೆ ನೀಡುವಂಥದ್ದು. ಆತ್ಮ, ಮನಸ್ಸು, ಜ್ಞಾನ, ಪರಬ್ರಹ್ಮ, ಮೋಕ್ಷ, ಜಗತ್ತು, ಕಾರ್ಯಕಾರಣ ಸಂಬಂಧ, ಬ್ರಹ್ಮಜ್ಞಾನಿಯ ಸ್ವರೂಪ, ಸಾಧನಾಪಥ ಇತ್ಯಾದಿ ತಾತ್ವಿಕ ಅಂಶಗಳನ್ನು ಸೂತ್ರ ರೂಪದಲ್ಲಿ, ವ್ಯಾಖ್ಯೆಗಳ ರೂಪದಲ್ಲಿ ಹಾಗೂ

ವ್ಯಾಖ್ಯಾನಗಳ ರೂಪದಲ್ಲಿ ನೀಡಲಾಗಿದೆ. ಈ ವಿಚಾರಗಳನ್ನು ಒಂದೊಂದಾಗಿ ವಿಶ್ಲೇಷಣೆ ಮಾಡೋಣ.

**ಆತ್ಮ ಪ್ರಭಾವ:** ತುಳಸೀ ಮಾತಾ ಅವರು ಚಿದಾಕಾಶ ಗೀತೆಯಲ್ಲಿ **'ಆತ್ಮ ಪ್ರಭಾವ'** ಎಂಬ ಶಬ್ದದ್ವಯವನ್ನು ಬಳಸಿದ್ದಾರೆ. ಏಕೆಂದರೆ ಚಿದಾಕಾಶಗೀತೆ ಆರಂಭವಾಗುವುದೇ ಆತ್ಮದ ವಿಚಾರದಿಂದ. ಈ ಕೃತಿಯ ಉತ್ತರಾರ್ಧ ಭಾಗವೇ 'ಆತ್ಮ ಪ್ರಭಾವ' ಎಂಬುದಾಗಿದೆ. ಅಂದರೆ ಆತ್ಮದ ಸ್ವರೂಪವನ್ನು ಮರೆಮಾಚಿದ ಮನಸ್ಸು ಲಯ ವಾದಾಗ ಶಾಶ್ವತವಾಗಿ ಉಳಿಯುವಂಥದ್ದೇ **ಆತ್ಮ ಪ್ರಭಾವ**. ಮನಸ್ಸಿಗೆ ಸಂಕಲ್ಪಿಸಲು, ಯೋಚಿಸಲು ಬಾಹ್ಯವಸ್ತುವೇ ಇಲ್ಲವಾದಾಗ ಅದು ಸ್ತಬ್ಧವಾಗುತ್ತದೆ, ಸುಮ್ಮನಾಗುತ್ತದೆ, ಶಾಂತವಾಗುತ್ತದೆ. ಎಣ್ಣೆ–ಬತ್ತಿಗಳು ತೀರಿದೊಡನೆ ದೀಪವು ತಾನಾಗೇ ಆರಿಹೋಗುವಂತೆ ಮನಸ್ಸೆಂಬ ಈ ಹುಸಿ ತೋರಿಕೆಯು ಅಡಗಿಹೋಗಿ ಆತ್ಮವೊಂದೆ ಉಳಿಯುತ್ತದೆ. **"ಅಗ್ನಿಯಲ್ಲಿ ಕರ್ಪೂರ ಲಯವಾದಂತೆ ಮನಸ್ಸು ಆತ್ಮನಲ್ಲಿ ಲಯವಾಗಬೇಕು"**. ಹೀಗೆ ಮನಸ್ಸಿನ ಅಸ್ತಿತ್ವ ಮಾಯವಾದಾಗಲೇ ಆತ್ಮದರ್ಶನವಾಗುತ್ತದೆ. ಆಗ ಜೀವಾತ್ಮ, ಶಿವಾತ್ಮ, ಪರಮಾತ್ಮ, ನಿರ್ಮಲಾತ್ಮವೆಂಬ ಭೇದ ತೋರಿಬಂದರೂ ನಿತ್ಯವಾಗಿರುವ ಅಂತಸ್ಥ ಆತ್ಮ ಮಾತ್ರ ಒಂದೇ ಆಗಿರುತ್ತದೆ. ಹಾಗೆಯೇ ಘಟಾಕಾಶ, ಮಠಾಕಾಶ, ಮಹದಾಕಾಶ, ಚಿದಾಕಾಶವೆಂದು ನಾಲ್ಕು ಬಗೆಯಾಗಿ ಕಂಡರೂ ಉಪಾದಿ ರಹಿತವಾದ ಚಿದಾಕಾಶವು ಒಂದೇ ಆಗಿದೆ. ಹೀಗೆ ಎಲ್ಲ ಭೇದಗಳಳಿದು, ಉಳಿಯುವುದೇ ಶಾಶ್ವತವಾದ ಆತ್ಮ ಪ್ರಭಾವ.

**'ಜ್ಞಾನ' – 'ಜ್ಞಾನಿ':** ಮನಸ್ಸನ್ನು ಲಯಗೊಳಿಸಿ, ಅದರ ಸಂಕಲ್ಪ–ವಿಕಲ್ಪಗಳಿಂದ ಹೊರಬಂದು, ಶಾಶ್ವತವಾದ ಆತ್ಮಪ್ರಭಾವವನ್ನು ಅರಿಯುವುದೆ 'ಜ್ಞಾನ'; ಪ್ರತಿಯೊಬ್ಬ ಮನುಷ್ಯ ತನ್ನ ಜೀವಿತದಲ್ಲಿ ಪಡೆದುಕೊಳ್ಳಲೇಬೇಕಾದ ಅರಿವು. ಹುಟ್ಟು–ಸಾವುಗಳಿಲ್ಲದ, ಅದ್ವಿತೀಯ ಚೈತನ್ಯ ಸ್ವರೂಪವಾದ ಆತ್ಮವನ್ನು ಅರಿತು, ಅದರಲ್ಲೆ ನೆಲೆ ನಿಂತವನೇ ಜ್ಞಾನಿಯು. ಆತನಿಗೆ ಮನಸ್ಸಿಲ್ಲ; ಅವನು ಮನಸ್ಸನ್ನು ಮೀರಿ ಹೋಗಿರುತ್ತಾನೆ. ಅದಕ್ಕೇ ನಿತ್ಯಾನಂದರು **'ಜ್ಞಾನಿಗೆ ಮನಸ್ಸಿಲ್ಲ'** ಎಂದು ಹೇಳಿದ್ದಾರೆ.

ನಿತ್ಯಾನಂದರು ಜ್ಞಾನಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಜ್ಞಾನವೇ ನಮ್ಮ ದು:ಖವನ್ನೆಲ್ಲ ನಿವಾರಣೆ ಮಾಡುವುದು. ತನ್ನ ಸ್ವಂತ ಮನಸ್ಸನ್ನು ವಿಶ್ಲೇಷಿಸುವಾಗ, ಮಾನವನು ಎಂದಿಗೂ ನಾಶವಾಗದ, ನಿರಂತರವೂ, ಪರಿಶುದ್ಧವೂ, ಪರಿಪೂರ್ಣವೂ ಆದ ವಸ್ತುವನ್ನು ನೋಡುವುದು ಸಾಧ್ಯವಾದರೆ, ಅವನೆಂದಿಗೂ ಕಷ್ಟದಿಂದ ನರಳಲಾರ, ದು:ಖಪಡಲಾರ. ನಮ್ಮ ದು:ಖಗಳಿಗೆಲ್ಲ ಮೂಲ ಕಾರಣ ಅಂಜಿಕೆ ಮತ್ತು ಬಯಕೆಗಳು. ತಾನೆಂದೂ ಸಾಯುವುದಿಲ್ಲವೆಂದು ಗೊತ್ತಾದರೆ ಮನುಷ್ಯನಿಗೆ ಸಾವಿನ ಭಯವೇ ಇರಲಾರದು. ತಾನೇ ಪರಿಪೂರ್ಣನೆಂದು ತಿಳಿದ ಮೇಲೆ ಯಾವ ಹೀನ ಆಸೆಯೂ ಅವನಲ್ಲಿ ಉಳಿಯಲಾರದು. ಭಯ–ಆಸೆಗಳಿಲ್ಲದಿರುವಾಗ ದು:ಖ ಹತ್ತಿರವೂ ಸುಳಿಯಲಾರದು. ಈ ಬದುಕಿನಲ್ಲೆ ಆತ ನಿತ್ಯಾನಂದ... ಪೂರ್ಣಾನಂದವನ್ನು ಅನುಭವಿಸುವನು.

**"ಬೆಂಕಿಯಲ್ಲಿ ಸುಟ್ಟ ಬೀಜಕ್ಕೆ ಮೊಳಕೆ ಬರುವುದಿಲ್ಲ."** ಜ್ಞಾನಾಗ್ನಿಯಿಂದ ತಪಸ್ಸಿನಿಂದ ಹುರಿದ ಕಾಮಾದಿ ರಿಪುಗಳಲ್ಲಿಯ ಅಜ್ಞಾನವೆಂಬ ರಸವು ಬತ್ತಿ ಹೋಗಿ ಆ ಕಾಮವು ಸಂಸಾರ ಬೆಳೆಯಲು ಕಾರಣವಾಗುವುದಿಲ್ಲ. ಆದ್ದರಿಂದ ಜ್ಞಾನಿಯಲ್ಲಿ ವ್ಯವಹಾರ ದೃಷ್ಟಿಯಿಂದ ತೋರಿಕೊಳ್ಳುವ ಕಾಮವು ಬಂಧನಕ್ಕಾಗಲಿ ಮೋಕ್ಷಕ್ಕಾಗಲಿ ಕಾರಣವಾಗುವುದಿಲ್ಲ. ಹುರಿದ ಬೀಜ ನಾಲಿಗೆಗೆ ರುಚಿಯನ್ನು ಕೊಟ್ಟು ಹಸಿವನ್ನು ಅಡಗಿಸಿ ಶರೀರಕ್ಕೆ ಪುಷ್ಠಿಯನ್ನೂ, ಮನಸ್ಸಿಗೆ ತುಷ್ಟಿಯನ್ನೂ ನೀಡುವಂತೆ, ಜ್ಞಾನಿಯಲ್ಲಿ ಕಾಣುವ ಕಾಮವು ಲೋಕಾನುಗ್ರಹ, ಧರ್ಮಕಾರ್ಯಗಳಿಗೆ ಮಾತ್ರ ಕಾರಣವಾಗುತ್ತದೆ. ಆಗ ಅಹಂಕಾರ, ಅಭಿಮಾನ, ಕಾಮಗಳಿಲ್ಲದ ಜೀವನೇ ದೇವನಾಗುತ್ತಾನೆ.

**'ಜ್ಞಾನ'– 'ಆತ್ಮ'** : ಆತ್ಮನ ಹೊರತು ಇನ್ನೊಂದು ವಸ್ತುವೇ ಇಲ್ಲ. ಸಂಕಲ್ಪ–ವಿಕಲ್ಪಾದಿ ದೃಶ್ಯಾವಳಿಗಳೆಲ್ಲ ಚಿತ್ತದ ವೃತ್ತಿಗಳು ಮಾತ್ರ. ಇವುಗಳು ಪೂರ್ಣವಾಗಿ ಇಲ್ಲದಾದಾಗಲೇ ಆತ್ಮದರ್ಶನವಾಗುತ್ತದೆ. ಆತ್ಮದರ್ಶನವಾದವನೇ 'ಜ್ಞಾನಿ'. ಹಾಗಾಗಿ ನಿತ್ಯಾನಂದರು **'ಜ್ಞಾನಿಗಳಿಗೆ ಸಮನಾದದ್ದೆ ಆತ್ಮ'** ಎಂದಿದ್ದಾರೆ. ಆತ್ಮದರ್ಶನವಾದವನಿಗೆ ಎಲ್ಲವೂ ಈ ನಿತ್ಯ–ಸತ್ಯ ಆತ್ಮ ಸ್ವರೂಪವಾಗಿಯೇ ಕಾಣುತ್ತದೆ. ಚೈತನ್ಯ ಸ್ವರೂಪ ಆತ್ಮನನ್ನು ಎಲ್ಲದರಲ್ಲಿಯೂ ಕಾಣುವುದರಿಂದ ಅವನಲ್ಲಿ ಯಾವುದಕ್ಕೂ ಭೇದವಿರುವುದಿಲ್ಲಾ. ಹಾಗಾಗಿ ಅವನೇ ಆತ್ಮ ಮತ್ತು ಅವನೇ ಜ್ಞಾನಿ. ಅಂದರೆ ಆತ್ಮವೇ ತಾನಾಗಿ, ಜಗತ್ತಾಗಿ ಕಾಣುವವನೇ ಜ್ಞಾನಿ.

ಜ್ಞಾನಿಯದು ಮನಸ್ಸನ್ನು ಮೀರಿದ ಸ್ಥಿತಿ. ಮನಸ್ಸಿನ ವಿವಿಧ ಅವಸ್ಥೆಗಳಾದ **"ಜಾಗೃತ ಸ್ವಪ್ನ, ಸುಷುಪ್ತಿಗಳೂ ಇರುವುದಿಲ್ಲ, ಅವರು ಸದಾ ನಿದ್ರೆಯಲ್ಲಿರುತ್ತಾರೆ"** ಅಂದರೆ ರಾತ್ರಿಯಂತಿರುವ ಜ್ಞಾನದಶೆಯಲ್ಲಿ ಆತ್ಮಜ್ಞಾನಿ ಎಚ್ಚೆತ್ತಿರುತ್ತಾನೆ, ಹಗಲಿನಂತಿರುವ ಭೋಗೇಚ್ಛೆಯ ವಿಷಯದಲ್ಲಿ ನಿದ್ರಿಸುತ್ತಾನೆ. ಜ್ಞಾನಿಯು ಚಿದ್ರೂಪವಾದ ಆಕಾಶದಲ್ಲಿ ಆತ್ಮಸೂರ್ಯನ ಮಹಿಮಪೂರ್ಣ ಉದಯವನ್ನು ಸದಾ ಕಾಣುತ್ತಾನೆ. ಏಕೆಂದರೆ ಬ್ರಹ್ಮಾಂಡದ ಒಳಹೊರಗೆ ತುಂಬಿ ತುಳುಕುವಂತೆ ಬೆಳಗುವ ಪೂರ್ಣ ಜ್ಯೋತಿಯು ತಾನಾಗಿರುವಾಗ, ತನ್ನ ಪ್ರಭೆಯಲ್ಲೆ ಬೆಳಗುತ್ತಿರುವ ಬಾಹ್ಯ ವಸ್ತುಗಳು ಅವನಿಗೆ ತನಗಿಂತ ಭಿನ್ನವಾಗಿ ತೋರುವುದಿಲ್ಲ. ಆತ್ಮ ಸೂರ್ಯನಿಗೆ ಅಸ್ತವೇ ಇಲ್ಲ. ನಿತ್ಯ ಪ್ರಭೆಯೇ ತಾನಾಗಿರುವಾಗ, ಅವನಿಗೆ **ಸೂರ್ಯ–ಚಂದ್ರ (ರಾತ್ರಿ–ಹಗಲು) ಎಂಬ ಪ್ರತ್ಯೇಕವೇ ಇಲ್ಲ. ಅವನಿಗೆ ಯಾವಾಗಲೂ ಸೂರ್ಯೋದಯವೇ**. ಜ್ಞಾನಿಯಾದವನು ಗಾಜಿಗೆ ಮಸಿ ಹಿಡಿದು ದೀಪ ಕಾಣಿಸದಂತಿರುವ ಸ್ಥಿತಿಯಿಂದ ಹೊರಬರುತ್ತಾನೆ. ಮಸಿಯಂತೆ ತನ್ನ ನಿಜ ಸ್ವರೂಪವನ್ನು ಆವರಿಸಿರುವ ಕೋಶಗಳನ್ನೆಲ್ಲ ಭೇದಿಸಿ ನಿತ್ಯಾನಂದಮಯ ಚಿದ್ವಸ್ತುವಿನ ದರ್ಶನ ಅವನಿಗಾಗುತ್ತದೆ.

**ಪ್ರಪಂಚ–ಜಗತ್ತು:** ಬಾಹ್ಯ ಜಗತ್ತು ಆಂತರಿಕ ಅಥವಾ ಸೂಕ್ಷ್ಮ ಜಗತ್ತಿನ ಸ್ಥೂಲ ರೂಪ. ಸೂಕ್ಷ್ಮ ಯಾವಗಲೂ ಕಾರಣ; ಸ್ಥೂಲವು ಅದರ ಪರಿಣಾಮ. ಆಂತರಿಕವು ಕಾರಣವಾದರೆ ಬಾಹ್ಯ ಜಗತ್ತು ಅದರ ಕಾರ್ಯವಾಗಿದೆ. ಸೂಕ್ಷ್ಮವಾಗಿರುವ ಆಂತರಿಕ ಶಕ್ತಿಯ ಸ್ಥೂಲ ಭಾವವೇ ಬಾಹ್ಯಶಕ್ತಿ. ಈ ಸ್ಥೂಲ ಜಗತ್ತಿನ ಹಿಂದಿರುವ ಕಾರಣ ಅತಿ ಸೂಕ್ಷ್ಮ. ಆ ಕಾರಣವೇ ಪರಬ್ರಹ್ಮ, ಅವನ ಕಾರ್ಯವೇ ಈ ಸ್ಥೂಲ ಪ್ರಪಂಚ. "ಪ್ರಪಂಚದ ನಾಶವೆಂದರೆ ಅದು ತನಗೆ ಕಾರಣನಾದ ವಾಯುವಿನಲ್ಲಿಯೂ (ಆಕಾಶ) ಲಯವಾಗುವುದು. ರಾಜಯೋಗದಿಂದ ಅಖಂಡವಾದ ಆತ್ಮನ ಅನುಭವವಾಗುತ್ತದೆ.

ಆಕಾಶಾದಿಗಳ ಉತ್ಪತ್ತಿಗೆ ಕಾರಣವಾದ ಆತ್ಮನಲ್ಲಿ ನಿಂತರೆ, ಕಾರಣ ಕಾರ್ಯಗಳಿಗೆ ಭೇದವಿಲ್ಲದ್ದರಿಂದ ಪ್ರಪಂಚವೆಲ್ಲಾ ಆತ್ಮನೇ ಆಗಿ ತೋರುತ್ತದೆ".

**ಪರಬ್ರಹ್ಮ:** ನಿತ್ಯಾನಂದರು ಆತ್ಯಂತಿಕವಾದ ಏಕ ತತ್ವ ಪರಬ್ರಹ್ಮವನ್ನು ಅತ್ಯಂತ ಸರಳ ಉಪಮೆಗಳ ಮೂಲಕ ತಿಳಿಸುತ್ತಾರೆ. **"ಜಗಜ್ಯೋತಿ, ಪರಂಜ್ಯೋತಿ ಎಲ್ಲವೂ ಒಬ್ಬನೇ. ಒಂದು ಹಲಗೆಯಿಂದ ಮೇಜು, ಕುರ್ಚಿ ಮೊದಲಾದ ಪೀಠೋಪಕರಣಗಳು ತಯಾರಾಗುವಂತೆ ಅನಂತಕೋಟಿ ಬ್ರಹ್ಮಾಂಡಗಳು ಸೃಷ್ಟಿಯಾಗುವ ಮೂಲ ತತ್ವವೇ ಪರಮಾತ್ಮ"**. ಸೃಷ್ಟಿ, ಸ್ಥಿತಿ, ಲಯದಲ್ಲಿ ನಿತ್ಯವಾಗಿರುವಂಥದ್ದು ಪರಬ್ರಹ್ಮವೇ. ಎಲ್ಲರೂ ಸಮನಾಗಿ ಅನುಭವಿಸುತ್ತಿರುವ ಪಂಚಭೂತಗಳ ಹಿಂದಿನ ಸೂಕ್ಷ್ಮ ಆ ಪರಬ್ರಹ್ಮವೇ.

**ಅವಿದ್ಯ–ವಿದ್ಯೆ:** ಆತ್ಮ–ಪರಮಾತ್ಮ–ಪ್ರಪಂಚವನ್ನು ಬೇರೆ ಬೇರೆ ಎಂದು ತಿಳಿಯುವುದೇ ಅವಿದ್ಯ. "ಆತ್ಮ ವಿದ್ಯೆ ಅಥವಾ ಬ್ರಹ್ಮ ವಿದ್ಯೆಯೇ ನಿಜವಾದ ವಿದ್ಯೆಯಾಗಿದ್ದು ಗಂಡಾಗಲಿ–ಹೆಣ್ಣಾಗಲಿ ತಾನೇ ಪರಮಾತ್ಮ ಎಂಬ ರಹಸ್ಯ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು." "ಚಿನ್ನದ ಪಾತ್ರೆಯಲ್ಲಿ ಅಡುಗೆ ಮಾಡಿದರೂ ನಾಯಿ ತಿನ್ನುತ್ತದೆ. ಮಣ್ಣಿನ ಪಾತ್ರೆಯಲ್ಲಿ ಅಡುಗೆ ಮಾಡಿದರೂ ನಾಯಿ ತಿನ್ನುತ್ತದೆ". ಅಂದರೆ ಸಾಕ್ಷಾತ್ಕಾರದ ಸಾಧನೆಗೆ ಜಾತಿ–ಕುಲ–ಗೋತ್ರಗಳ ಬಂಧನವಿಲ್ಲ. "ಸಮುದ್ರದ ಉಪ್ಪು ನೀರಿನಲ್ಲಿಯೂ ಗುಡ್ಡದ ಮೇಲಿರುವ ಸರೋವರದ ಸಿಹಿ ನೀರಿನಲ್ಲಿಯೂ ಸೂರ್ಯ ಪ್ರಕಾಶವು ಸಮನಾಗಿ ಮೂಡುತ್ತದೆ". ಶ್ರದ್ಧೆಯಿಂದ ಸಾಧನೆ ಮಾಡಿದರೆ ಎಲ್ಲರಿಗೂ ಪರಮಾನಂದ...ನಿತ್ಯಾನಂದ ಪ್ರಾಪ್ತವಾಗುವುದರಲ್ಲಿ ಸಂಶಯವೇ ಇಲ್ಲ.

**ಮೋಕ್ಷ:** ನಿತ್ಯಾನಂದರ ಪ್ರಕಾರ ಆತ್ಮದರ್ಶನವೇ ಮುಕ್ತಿ. "ಜೀವಾತ್ಮನಲ್ಲಿ ಪರಮಾತ್ಮನಿದ್ದಾನೆ, ಸ್ಥೂಲದೊಳಗೆ ಸೂಕ್ಷ್ಮವನ್ನು ಕಾಣುವುದೇ ನಿಜವಾದ ಮುಕ್ತಿ." ಎಲ್ಲ ಕಾರ್ಯಗಳ ಹಿಂದಿರುವ ಸೂಕ್ಷ್ಮವೇ ಈ ಚಿದ್ವಸ್ತುವಾದ ಪರಬ್ರಹ್ಮ. ಜೀವಾತ್ಮನು ತನ್ನೊಳಗೆ ಹಾಗೂ ಹೊರಗೆ ಈ ಸೂಕ್ಷ್ಮವನ್ನು ದರ್ಶಿಸುವುದೇ ಮೋಕ್ಷವಾಗಿದೆ. ಸ್ಥೂಲದಲ್ಲಿ ಸೂಕ್ಷ್ಮವನ್ನು ಖಂಡದಲ್ಲಿ ಅಖಂಡವನ್ನು, ಭೇದದಲ್ಲಿ ಅಭೇದವನ್ನು, ಅಸತ್ಯದಲ್ಲಿ ಸತ್ಯವನ್ನು, ಕತ್ತಲೆಯಲ್ಲಿ ಬೆಳಕನ್ನೂ, ಮರ್ತ್ಯದಲ್ಲಿ ಅಮರ್ತ್ಯವನ್ನು ದರ್ಶಿಸುವುದೇ ನಿಜವಾದ ಮುಕ್ತಿಯಾಗಿದೆ. "ಊರ್ಧ್ವ ಶ್ವಾಸ ಗಡಿಯಾರದ ಮುಳ್ಳಿನಂತೆ ತನ್ನ ಒಳಗೇ ನಡೆಯುವುದು" ಆಗ ಮಾತ್ರ ತನ್ನೊಳಗಿನ ವಿಶ್ವಶಕ್ತಿಯಾದ ಪರಬ್ರಹ್ಮನ ಸಾಕ್ಷಾತ್ಕಾರವಾಗುತ್ತದೆ. "ಮಣ್ಣಿನ ಪಾತ್ರೆಯಲ್ಲಿನ ನೀರನ್ನು ನೋಡಿದರೆ ಹೇಗೆ ಆಕಾಶ ಕಾಣುತ್ತದೆಯೋ ಹಾಗೆಯೇ ಒಳಗಣ್ಣಿಗೆ ಅರಿವಿನ ಆಕಾಶ ಕಾಣುತ್ತದೆ" ಇದೇ ಮುಕ್ತಿಯಾಗಿದೆ.

**ಸಾಧನಾ ಮಾರ್ಗ:** ಮುಕ್ತಿ ಅಥವಾ ಆತ್ಮದರ್ಶನವು ಕೇವಲ ಕೇಳುವುದರಿಂದ ಇಲ್ಲವೇ ಓದುವುದರಿಂದ ದೊರೆಯುವಂಥದ್ದಲ್ಲ; ಅದಕ್ಕೆ ಸೂಕ್ತವಾದ ಸಾಧನೆಯ ಅಗತ್ಯವಿದೆ. **"ಸಕ್ಕರೆಯನ್ನು ಕೈಯಲ್ಲಿಟ್ಟುಕೊಂಡರೆ ಅದರ ರುಚಿಯು ತಿಳಿಯುವುದಿಲ್ಲ, ಅದನ್ನು ತಿಂದರೆ ಮಾತ್ರ ಅದರ ಸವಿಯು ನಾಲಗೆಯ ಅನುಭವಕ್ಕೆ ಬರುತ್ತದೆ"**. ಎಂದು ಹೇಳುವ ನಿತ್ಯಾನಂದರು, ಅದಕ್ಕಾಗಿ **"ಸ್ಥೂಲ ನಿದ್ರೆಯನ್ನು ಬಿಟ್ಟು ಸೂಕ್ಷ್ಮ ನಿದ್ರೆ ಮಾಡಬೇಕು, ಶ್ವಾಸೋಚ್ಛಾಸದೊಳಗೆ ನಿದ್ರೆ ಮಾಡಬೇಕು"** ಎಂದಿದ್ದಾರೆ. ಅಂದರೆ ಯೋಗ ನಿದ್ರೆ. ಅದೇ ಸಮಾಧಿ. ಉಸಿರಿನ ಗತಿಯನ್ನು ಮೀರಿ ಹೋಗುವ ಸ್ಥಿತಿ. ಇಂಥ ಸ್ಥಿತಿಯಲ್ಲಿ ತಾನೇ ಬ್ರಹ್ಮನೆಂಬ ಅರಿವು ಪ್ರಾಪ್ತವಾಗುತ್ತದೆ. ಈ ರೀತಿಯ ನಿದ್ರೆ ಮಾಡಲು ಸಾಂಖ್ಯ, ತಾರಕ, ಅಮನಸ್ಕ ಎಂಬ ೩ ರೀತಿಯ ಸಾಧನೆಗಳಿವೆ. ನೀನೆ ಬ್ರಹ್ಮನೆಂದು ಬೋಧಿಸುವುದು **ಸಾಂಖ್ಯ**ವಾಗಿದೆ. ಶ್ರವಣ–ಮನನಗಳಿಂದ ಸಂಶಯ ನಿವಾರಿಸಿಕೊಂಡು ಬ್ರಹ್ಮವೇ ತಾನಾಗಿ ಪರಮ ಶಾಂತಿಯನ್ನು ಹೃದಯಾಕಾಶದಲ್ಲಿ ಕಾಣುವುದು **ತಾರಕ**ವು. ವಿವಿಧ ದೃಶ್ಯಗಳು ಹಾಗೂ ಅವುಗಳನ್ನು ಕಾಣುವ ಮನಸ್ಸು, ಸ್ವಯಂ ಪ್ರಕಾಶದಿಂದ ಬೆಳಗುವ ಮಹಾಬೆಳಕಿನಲ್ಲಿ ಅಳಿಯಲು ಅದಕ್ಕೆ **ಅಮನಸ್ಕ** ಎನ್ನುವರು. ಅದೇ ಮನೋನಾಶ ಅಥವಾ ಉನ್ಮನಿ ಎಂಬ ಸ್ಥಿತಿಯಾಗಿದೆ.

"ಬೆಂಕಿ ಪೆಟ್ಟಿಗೆಯಲ್ಲಿ ಕಡ್ಡಿಗಳಿದ್ದರೂ ಪೆಟ್ಟಿಗೆಯ ಪಕ್ಕದಲ್ಲಿರುವ ಮದ್ದಿಗೆ ಕಡ್ಡಿಯನ್ನು ಉಜ್ಜಿದಾಗ ಬೆಂಕಿಯು ಹತ್ತಿಕೊಳ್ಳುವುದು. ಹೀಗೆ ಮನಸ್ಸೆಂಬ ಕಡ್ಡಿಯನ್ನು ಬುದ್ಧಿಯೆಂಬ ಪೆಟ್ಟಿಗೆಯ ಮದ್ದಿಗೆ ತಿಕ್ಕಿದಾಗ ಜೀವನ್ಮುಕ್ತಿಯೆಂಬ ಬೆಳಕು ಉಂಟಾಗುವುದು." ಮನಸ್ಸಿನ ಸ್ವೇಚ್ಛೆಗೆ ಬುದ್ಧಿಯ ಕಡಿವಾಣ ಹಾಕಬೇಕು. "ಮನಸ್ಸು ಎಂಬ ಎಳ್ಳನ್ನು ಬುದ್ಧಿ ಎಂಬ ಗಾಣಕ್ಕೆ ಕೊಟ್ಟರೆ ಅಮೃತ ಎಂಬ ಎಣ್ಣೆ ಬರುತ್ತದೆ" ಆಗ ಮಾತ್ರ ಶುದ್ಧ ಬುದ್ಧಿಯ ವಿವೇಕ–ವೈರಾಗ್ಯದಿಂದ ಮನಸ್ಸಿನ ಚಾಂಚಲ್ಯವಡಗಿದ ಸ್ಥಿತಪ್ರಜ್ಞನಲ್ಲಿ ಪರಮಾನಂದವೆಂಬ ಅಮೃತ ಉಕ್ಕಿ ಹರಿಯುತ್ತದೆ. ಹಾಗಾಗಿ "ಬುದ್ಧಿ ಅರಸು; ಮನಸ್ಸೇ ಮಂತ್ರಿ–ಆದ್ದರಿಂದ ಬುದ್ಧಿ ಹೇಳಿದಂತೆ ಮನಸ್ಸು ಕೇಳಬೇಕು." ಎಂದು ಹೇಳಿರುವ ನಿತ್ಯಾನಂದರು ಮನೋಲಯವಾಗುವಲ್ಲಿ ಶುದ್ಧ ಬುದ್ಧಿಯ ಮಹತ್ವವನ್ನು ತಿಳಿಸಿದ್ದಾರೆ.

**ಸಹಜ ಸಿದ್ಧಯೋಗ:** ಎಲ್ಲ ಸಾಂಪ್ರದಾಯಿಕ ಭಾರತೀಯ ತತ್ವಶಾಸ್ತ್ರ ಹಾಗೂ ಸಿದ್ಧಾಂತಗಳಿಗೂ ಕೂಡ ಒಂದು ಪರಮ ಗುರಿಯಿದೆ. ಅದೇ ಪೂರ್ಣತೆಯ ಮೂಲಕ ಮುಕ್ತಿ ಪಡೆಯುವುದು. ಈ ಗುರಿ ತಲುಪಲು ಸಾಮಾನ್ಯವಾಗಿ ಎಲ್ಲ ಚಿಂತನಾ ಮಾರ್ಗಗಳೂ ಒಪ್ಪುವುದೆಂದರೆ ಯೋಗ ಸಾಧನೆ. ಅದರಲ್ಲೂ ವಿಶೇಷವಾಗಿ ಅದ್ವೈತಾನುಭವದ **ರಾಜಯೋಗದ** ಶ್ರೇಷ್ಠತೆಯನ್ನು ಇಲ್ಲಿ ಎತ್ತಿಹಿಡಿಯಲಾಗಿದೆ. "ಬಾಗಿಲು ಇಲ್ಲದ್ದು ಮನೆಯಲ್ಲ, ಅಗ್ನಿ ಇಲ್ಲದೆ ನೀರು ಬಿಸಿಯಾಗುವುದಿಲ್ಲ, ವಾಯುವಿಲ್ಲದೇ ಅಗ್ನಿ ಉರಿಯುವುದಿಲ್ಲ." ಮೂರು ನಾಡಿಗಳಲ್ಲಿ ಚಲಿಸುವ ಪ್ರಾಣಕ್ಕೆ ಊರ್ಧ್ವಗತಿ ಲಭಿಸುವಂತೆ ಮಾಡಬೇಕು, ಅದೇ ಸಹಜ ಸಿದ್ಧಯೋಗ. "ಅಗ್ನಿಯಲ್ಲಿ ಯಾವುದೂ ಸುಟ್ಟು ಹೋಗುತ್ತದೆ. ಒಳ್ಳೆಯದು, ಕೆಟ್ಟದಂತ ಇಲ್ಲ. ಅದೇ ಪ್ರಕಾರ ಕರ್ಮ ಮಾಡುವವರು. ಯಾವುದನ್ನಾದರೂ ತಿನ್ನಬಹುದು. ಕರ್ಮ ಇಲ್ಲದವರಿಗೆ ಏನು ಮಾಡಬೇಕೆಂದು ಗೊತ್ತಿಲ್ಲ, ಅವರಿಗೆ ಅಜೀರ್ಣವಾಗುತ್ತದೆ. ನಿದ್ರೆ ಬೇಕು, ಆದರೆ ಸ್ವಲ್ಪ. ಒಂದೇ ಲೆಕ್ಕ ತಿನ್ನಬೇಕು, ಹೊಟ್ಟೆ ತುಂಬ ತಿನ್ನಬಾರದು." ಎಂದು ಸಾಧನಾ ಮಾರ್ಗದಲ್ಲಿ ಆಹಾರ, ನಿದ್ರೆ, ಪ್ರಾಣಾಯಾಮ, ಧಾರಣ–ಧ್ಯಾನಗಳ ಅಭ್ಯಾಸವನ್ನು ಹೇಳಿದ್ದಾರೆ. ಈ ಸಾಧನೆಗೆ ಗುರುವಿನ ಕೃಪೆ ಬೇಕು. "ಅದಕ್ಕೆ ಪಾತ್ರರಾಗಲು ಗುರುವಿನಲ್ಲಿ ನಂಬಿಕೆ, ಶ್ರದ್ಧಾ– ಭಕ್ತಿಗಳು ಅಚಲವಾಗಿರಬೇಕು."

**ಭಕ್ತಿಯ ಮಹತ್ವ:** ರಾಮ, ಕೃಷ್ಣನೆಂದು ಸಾವಿರ ಬಾರಿ ನಾಲಿಗೆಯಿಂದ ನುಡಿದರೂ ಮುಕ್ತಿ ಸಿಗಲಾರದು. ಅನನ್ಯವಾದ ಭಕ್ತಿಭಾವದಿಂದ ಸ್ಮರಿಸಿದರೂ ಸಾಕು ಸಾಕ್ಷಾತ್ಕಾರವಾಗುತ್ತದೆ. "ಮಾನಾಭಿಮಾನ,

ಕಾರ್ಯಭಿಮಾನ ಬಿಟ್ಟವನಿಗೆ ಪರವಸ್ತುವು ಎಲ್ಲ ವಸ್ತುಗಳ ಒಳಗೂ ಹೊರಗೂ ಕಾಣುವುದು". "ಭಕ್ತಿಗೆ ಪ್ರಾರಂಭದಲ್ಲಿ ಒಂದು ಸ್ವಾರ್ಥವುಂಟು ಮತ್ತೆ ಇಲ್ಲ, ಪೂರ್ಣ ಸ್ಥಿತಿ ಬಂದಮೇಲೆ ತನ್ನ ಅನುಭವವೇ ಜಗತ್ತಿಗೆಲ್ಲಾ ಗುರುವಾಗುತ್ತದೆ"

ನಿತ್ಯಾನಂದರದು ಅವಧೂತ ಸ್ಥಿತಿ, ವ್ಯಕ್ತಿ–ಜನಾಂಗಕ್ಕೆ ಯಾವುದು ಶ್ರೇಯಸ್ಕರ ಎಂಬುದನ್ನು ಅವರು ಸಮರ್ಥವಾಗಿ ನಿರ್ಧರಿಸಬಲ್ಲರು. ಅವರ ದಿವ್ಯ ಚಕ್ಷು ಕಾಲದೇಶವನ್ನು ತೂರಿ ನೋಡಬಲ್ಲದು. "ಸಮಭಾವನೆ ಎಂಬುದೇ ಶ್ರೇಷ್ಠ ಎಲ್ಲರನ್ನೂ ಪ್ರೇಮದಿಂದ ನೋಡುವುದೇ ಸಮಭಾವ". ಎಂದ ನಿತ್ಯಾನಂದರು ಬಡಭಕ್ತ ಜನರನ್ನು, ಧನಿಕ ಭಕ್ತರನ್ನು ಸಮಾನವಾಗಿ ಕಂಡರು. ಪುರೋಹಿತ ಶಾಹಿಯನ್ನು ತಿರಸ್ಕರಿಸಿ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಎಲ್ಲರೂ ಸಮಾನಾರ್ಹರು ಎಂಬುದನ್ನು ತೋರಿಸಿಕೊಟ್ಟರು. ಅವರ ನಿರ್ವ್ಯಾಜ ಪ್ರೇಮ, ಅಂತಕರಣ ಹಾಗೂ ಆಶೀರ್ವಾದದಿಂದ ರೋಗ ರುಜಿನಾದಿ ತಾಪತ್ರಯಗಳಿಂದ ಬಳಲುತ್ತಿದ್ದ ಅನೇಕರು ಮುಕ್ತಿ ಮಾರ್ಗದ ಕಡೆ ನಡೆದರು.

**ಉಪಸಂಹಾರ:** ಅದ್ವೈತದ ಅಂತರ್ ಹರಿವಿನೊಂದಿಗೆ ಸಾಗುವ ಭಗವಾನ್ ನಿತ್ಯಾನಂದ ಅವಧೂತರ 'ಚಿದಾಕಾಶ ಗೀತೆ'ಯು 'ಅದ್ವೈತ ದರ್ಶನಂ ಜ್ಞಾನಂ' ಎಂಬುದನ್ನು ಸಿದ್ಧಪಡಿಸಿದೆ. ಇದರಲ್ಲಿ ವೇದ–ವೇದಾಂತದ ತಾತ್ವಿಕ ಚಿಂತನೆಗಳು ಅತ್ಯಂತ ಸರಳ ರೂಪದಲ್ಲಿ ಜಿಜ್ಞಾಸುಗಳ ಜ್ಞಾನ ತೃಷೆ ತೀರಿಸಲು ಹಾಗೂ ಸಾಧಕರಿಗೆ ಕೈಗನ್ನಡಿಯಾಗಿ ಉಪಯೋಗವಾಗುವಂತೆ ವ್ಯಕ್ತವಾಗಿವೆ. ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದು ಗುರಿ ಸೇರಬೇಕಾದರೆ ಹೆಜ್ಜೆ ಹೆಜ್ಜೆಗೆ ಹೀನ ಸಂಸ್ಕಾರಗಳೊಂದಿಗೆ ಹೋರಾಡಬೇಕಾಗುತ್ತದೆ. ಬಾಹ್ಯ ಜಗತ್ತಿನಲ್ಲಿ ಮಾನವನು ಮಾಡುವ ಸಾಹಸಗಳನ್ನೆಲ್ಲ ಮೀರಿದ್ದು ಆಂತರಿಕ ಜಗತ್ತಿನ ಸಾಧನೆ. ಕಡಲಾಳಕ್ಕೆ ಮುಳುಗಬಹುದು, ಮುಗಿಲೆತ್ತರಕ್ಕೆ ಹಾರಬಹುದು. ಅಣುವನ್ನು ಭೇದಿಸಿ ಅದರ ರಹಸ್ಯ ವನ್ನು ಹೊರಗೆಡವಬಹುದು. ಕಣ್ಣಿಗೆ ಕಾಣುವ ಅರಿಗಳ ಸಮೂಹ ವನ್ನು ಶಸ್ತ್ರಗಳಿಂದ ಸುಲಭವಾಗಿ ಗೆಲ್ಲಬಹುದು. ಆದರೆ ಕಣ್ಣಿಗೆ ಕಾಣಿಸದೆ, ನಮ್ಮ ಮನಸ್ಸಿ ಅಂತರಾಳದಲ್ಲಿದ್ದ ಆಸೆಯ ಬುದ್ಬುದಗಳ ನ್ನು ಹೊರಗೆಡವುತ್ತಿರುವ ಬಡಬಾನಲವನ್ನು ಶೋಧಿಸಿ ನಿರ್ನಾಮ ಮಾಡುವುದು ಅತೀ ಕಷ್ಟಕರ ಹಾಗೂ ಅತ್ಯದ್ಭುತ ಸಾಹಸ. ಈ ಸಾಹಸಕ್ಕೆ ಸರಳವಾದ ಒಂದು ಸಾಧನಾ ಮಾರ್ಗಸೂಚಿಯೇ ಚಿದಾಕಾಶಗೀತೆ. ಇದು ಕೇವಲ ಪಾರಾಯಣ ಗ್ರಂಥವಲ್ಲ; ಅನು ಷ್ಠಾನ ಪ್ರಧಾನವಾದದ್ದು. ಇದರ ಭಾವ ಅನುಭವದ ಆಳಕ್ಕೆ ಹೋಗಬೇಕು; ಪ್ರತಿಯೊಬ್ಬರ ಬದುಕಿನ ತಾಯಿಬೇರಿಗೆ ತಾಗಬೇಕು. ಆಗ ಮಾತ್ರ ನಮ್ಮ ಆಲೋಚನೆ ಮತ್ತು ಕ್ರಿಯೆಗಳು ಊರ್ಧ್ವಮುಖಿ ಯಾಗುವವು.

ಅಧ್ಯಾತ್ಮ ಸಾಧಕರು ಮತ್ತು ತತ್ವ ಜಿಜ್ಞಾಸುಗಳ ಅಂತರಂಗದಲ್ಲಿ ನಿತ್ಯಾನಂದದ ವಾಹಿನಿಯಾಗಿ ಗುಪ್ತಗಾಮಿನಿಯಂತೆ ಪ್ರವಹಿಸು ತ್ತಿರುವ ತತ್ವ ಬೋಧೆಗಳನ್ನೊಳಗೊಂಡ 'ಚಿದಾಕಾಶ ಗೀತೆ'ಯು ನಮ್ಮ ಆಧ್ಯಾತ್ಮ ಪರಂಪರೆ ಹಾಗೂ ತತ್ವಚಿಂತನೆಯ ಕ್ಷೇತ್ರಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿದೆ. ಈ ನಿಟ್ಟಿನಲ್ಲಿ ಸಾಧನೆ, ಸಂಶೋಧನೆ ಮಾಡಬೇಕೆನ್ನುವವರಿಗೆ ಭಗವಾನ್ ನಿತ್ಯಾನಂದ ಅವಧೂತರ 'ಚಿದಾಕಾಶ ಗೀತೆ'ಯಲ್ಲಿ ಅನಂತ ಸಾಧ್ಯತೆಗಳಿವೆ.

**ಆಧಾರ ಗ್ರಂಥಗಳು:**

೧. ಸ್ವಾಮಿ ವಿಜಯಾನಂದ: ***ಅವಧೂತ ಭಗವಾನ್ ನಿತ್ಯಾನಂದ,*** ಆನಂದಾಶ್ರಮ,ಬೇವಿನಕೊಪ್ಪ,೨೦೧೫.

**೨.** ಸ್ವಾಮಿ ವಿಜಯಾನಂದ: **ಶ್ರೀ ನಿತ್ಯಾನಂದ ಗುರುದೇವ,** ನಿತ್ಯಪ್ರಕಾಶನ, ಮುಂಬಯಿ, ೨೦೧೨.

**೩.** ವಿದ್ವಾನ್ ಸಾಂಬದೀಕ್ಷಿತ್: **ನಿತ್ಯಾನಂದ ಚರಿತಂ,** ನಿತ್ಯಪ್ರಕಾಶನ, ಮುಂಬಯಿ, ೨೦೧೧.

**೪.** ಮೆ॥ ತುಳಸಿ ಮಾತಾ:(ವ್ಯಾಖ್ಯಾನ)ನುಲೇನೂರು ಮೂರ್ತಿ: **ಚಿದಾಕಾಶ ಗೀತೆ,** ನಿತ್ಯಪ್ರಕಾಶನ, ಮುಂಬಯಿ, ೨೦೧೩.

## ಧ್ಯಾನಶ್ಲೋಕಗಳಿಂದ ನಿತ್ಯಜೀವನದಲ್ಲಾಗುವ ಮನಃಪರಿವರ್ತನೆ

ಕಾಶೀನಾಥ ಶಾಸ್ತ್ರಿ ಹೆಚ್.ವಿ.
ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ಸಂಸ್ಕೃತ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಸಹ್ಯಾದ್ರಿಕಾಲೇಜು ಆವರಣ, ಶಿವಮೊಗ್ಗ–577203
ಇ–ಮೇಲ್: panditaradya@gmail.com

**ಪ್ರಬಂಧ ಸಾರ:–** ಯಾವುದೇ ಕಾರ್ಯಸಾಧನೆಗೆ ಮನೋಸ್ವಾಸ್ಥ್ಯವು ಪ್ರಮುಖ ಪಾತ್ರ ವಹಿಸುತ್ತದೆಂದು ಅರಿತಿದ್ದ ಋಷಿಗಳು ಧ್ಯಾನ, ಪ್ರಾಣಾಯಾಮ, ಯೋಗಾದಿಗಳನ್ನು ಕಂಡುಕೊಂಡು ಶಿಷ್ಯಕೋಟಿಗೆ ಉಪದೇಶಿಸಿದರು. 'ಧ್ಯಾನಾದಿಗಳು ಮನಸ್ಸಿನ ಆರೋಗ್ಯವನ್ನು ಕಾಪಾಡುವ ದಿವ್ಯೌಷಧಿಗಳಾಗಿವೆ' ಎಂದು ಮನಃಶಾಸ್ತ್ರಜ್ಞರೇ ಒಪ್ಪಿಕೊಂಡಿದ್ದಾರೆ. ಹಾಗಾಗಿಯೇ ಬಹುಪಾಲು ಭಾರತೀಯ ಕುಟುಂಬಗಳಲ್ಲಿ ಬೆಳಿಗ್ಗೆ ಏಳುವುದರಿಂದ ಹಿಡಿದು ರಾತ್ರಿ ಮಲಗುವವರೆಗೂ ಒಂದೊಂದು ಕಾರ್ಯಕ್ಕೂ ಒಂದೊಂದು ಶ್ಲೋಕಗಳನ್ನು ಹೇಳುವ ವಾಡಿಕೆಯಿದೆ.

**"ನಾಮಸ್ಮರಣಾದನ್ಯೋಪಾಯಂ ನಹಿಪಶ್ಯಾಮೋ ಭವತರಣೇ"** ಅಂದರೆ ಈ ಭವಸಾಗರವನ್ನು ದಾಟಲು ಭಗವಂತನ ನಾಮಸ್ಮರಣೆ ಅಥವಾ ಪ್ರಾರ್ಥನೆಯಲ್ಲದೆ ಬೇರೆ ದಾರಿಯೇ ಇಲ್ಲ ಎಂದು ನಮ್ಮ ಹಿರಿಯರು ಬಲವಾಗಿ ನಂಬಿದ್ದರು. ಹಾಗಾಗಿಯೇ ಯಾವುದೇ ಒತ್ತಡಗಳನ್ನು ಪ್ರಾರ್ಥನೆಗಳ ಮೂಲಕವೇ ಬಗೆಹರಿಸಿಕೊಳ್ಳುತ್ತಿದ್ದರು. ಹಾಗಾಗಿಯೇ "Prayer should be the key of the day & the lock of the night" ಎಂಬ ಮಾತಿದೆ. ಆದ್ದರಿಂದ ಈ ಧ್ಯಾನಶ್ಲೋಕಗಳು ಪ್ರಭಾವ ಮನಸ್ಸಿಗೆ ಹೇಗೆಲ್ಲಾ ಪರಿಣಾಮ ಬೀರುತ್ತದೆ ಎಂಬುದನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿದೆ.

ಮನುಷ್ಯ ವೈಜ್ಞಾನಿಕ ಕ್ಷೇತ್ರದಲ್ಲಿ ಕ್ರಾಂತಿಕಾರಕವಾದ ಹಲವು ಆವಿಷ್ಕಾರಗಳನ್ನು ಮಾಡುತ್ತಿದ್ದರೂ, ಆತನ ಆತ್ಮಬಲ ತಲೆಮಾರಿನಿಂದ ತಲೆಮಾರಿಗೆ ಕುಗ್ಗುತ್ತಲೇ ಇದೆ. ಇಂದು ಮಾನವ ಸಮಚಿತ್ತತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗದೆ ಹೆಣಗುತ್ತಿದ್ದಾನೆ. ಹಾಗಾಗಿ ಮನುಷ್ಯನ

ದೇಹ ಹಲವು ರೋಗಗಳ ಆವಾಸಸ್ಥಾನವಾಗಿ ಬದಲಾಗುತ್ತಿದೆ. ಪರಿಣಾಮವಾಗಿ ಆತನ ಜೀವಿತಾವಧಿಯೂ ತಲೆಮಾರಿನಿಂದ ತಲೆಮಾರಿಗೆ ಕುಗ್ಗುತ್ತಿರುವುದನ್ನು ಸಮೀಕ್ಷೆಗಳಿಂದ ತಿಳಿಯಬಹುದಾಗಿದೆ.

ಎಲ್ಲವೂ ಇದ್ದು, ಏನೂ ಇಲ್ಲದಂತಹ ಈ ಪರಿಸ್ಥಿತಿಗೆ ಆತನ ಮನಸ್ಥಿತಿಯೇ ಕಾರಣ. **'ಮನ ಏವ ಮನುಷ್ಯಾಣಾಂ ಕಾರಣಂ ಸುಖ ದುಃಖಯೋಃ'** ಮನುಷ್ಯನ ಸುಖ–ದುಃಖಗಳಿಗೆ ಆತನ ಮನಸ್ಸೇ ಮೂಲ ಕಾರಣ ಎಂಬುದನ್ನು ಪ್ರಾಚೀನ ಭಾರತೀಯರು ಕಂಡುಕೊಂಡಿದ್ದರು.

ಯಾವುದೇ ಕಾರ್ಯಸಾಧನೆಗೆ ಮನೋಸ್ವಾಸ್ಥ್ಯವು ಪ್ರಮುಖ ಪಾತ್ರ ವಹಿಸುತ್ತದೆಂದು ಅರಿತಿದ್ದ ಋಷಿಗಳು ಧ್ಯಾನ, ಪ್ರಾಣಾಯಾಮ, ಯೋಗಾದಿಗಳನ್ನು ಕಂಡುಕೊಂಡು ಶಿಷ್ಯಕೋಟಿಗೆ ಉಪದೇಶಿಸಿದರು. 'ಧ್ಯಾನಾದಿಗಳು ಮನಸ್ಸಿನ ಆರೋಗ್ಯವನ್ನು ಕಾಪಾಡುವ ದಿವ್ಯೌಷಧಿಗಳಾಗಿವೆ' ಎಂದು ಮನಃಶಾಸ್ತ್ರಜ್ಞರೇ ಒಪ್ಪಿಕೊಂಡಿದ್ದಾರೆ. ಹಾಗಾಗಿಯೇ ಬಹುಪಾಲು ಭಾರತೀಯ ಕುಟುಂಬಗಳಲ್ಲಿ ಬೆಳಿಗ್ಗೆ ಏಳುವುದರಿಂದ ಹಿಡಿದು ರಾತ್ರಿ ಮಲಗುವವರೆಗೂ ಒಂದೊಂದು ಕಾರ್ಯಕ್ಕೂ ಒಂದೊಂದು ಶ್ಲೋಕಗಳನ್ನು ಹೇಳುವ ವಾಡಿಕೆಯಿದೆ.

**"ನಾಮಸ್ಮರಣಾದನ್ಯೋಪಾಯಂ ನಹಿಪಶ್ಯಾಮೋ ಭವತರಣೇ"** ಅಂದರೆ ಈ ಭವಸಾಗರವನ್ನು ದಾಟಲು ಭಗವಂತನ ನಾಮಸ್ಮರಣೆ ಅಥವಾ ಪ್ರಾರ್ಥನೆಯಲ್ಲದೆ ಬೇರೆ ದಾರಿಯೇ ಇಲ್ಲ ಎಂದು ನಮ್ಮ ಹಿರಿಯರು ಬಲವಾಗಿ ನಂಬಿದ್ದರು. ಹಾಗಾಗಿಯೇ ಯಾವುದೇ ಒತ್ತಡಗಳನ್ನು ಪ್ರಾರ್ಥನೆಗಳ ಮೂಲಕವೇ ಬಗೆಹರಿಸಿಕೊಳ್ಳುತ್ತಿದ್ದರು. ಹಾಗಾಗಿಯೇ **"**Prayer should be the key of the day & the lock of the night" ಎಂಬ ಮಾತಿದೆ.

ವೈದಿಕ ಕಾಲದಿಂದಲೂ ಪ್ರಾರ್ಥನೆಗೆ ಮಹತ್ವವಿದೆ. ಉಪನಿಷತ್ತುಗಳಲ್ಲಿನ ಶಾಂತಿ ಮಂತ್ರಗಳೂ ಕೂಡ ಪ್ರಾರ್ಥನೆಗಳಾಗಿವೆ. ಬೆಳಗ್ಗೆ ಎದ್ದ ಕೂಡಲೇ

**ಕರಾಗ್ರೇ ವಸತೇ ಲಕ್ಷ್ಮೀಃ ಕರಮಧ್ಯೇ ಸರಸ್ವತೀ ।**
**ಕರಮೂಲೇ ಸ್ಥಿತಾ ಗೌರೀ ಪ್ರಭಾತೇ ಕರದರ್ಶನಮ್** ॥ ಎಂಬ ಪ್ರಾರ್ಥನೆಯೊಂದಿಗೆ ದೈನಂದಿನ ಕಾರ್ಯಗಳು ಆರಂಭವಾಗುತ್ತವೆ. ಶ್ಲೋಕಾರ್ಥವೇನೆಂದರೆ ಹಸ್ತದ ತುದಿಯಲ್ಲಿ ಲಕ್ಷ್ಮಿಯು, ಮಧ್ಯದಲ್ಲಿ ಸರಸ್ವತಿ, ಕೊನೆಯಲ್ಲಿ ಗೌರಿ ನೆಲೆಸಿರುತ್ತಾರೆ. ಹಾಗಾಗಿ ಕರದರ್ಶನ ಮಾಡಬೇಕೆಂದಿದ್ದಾರೆ. ತನ್ನ ಕೈಯಲ್ಲೇ ದೇವತೆಗಳು ನೆಲೆಸಿದ್ದಾರೆಂದ ಮೇಲೆ ಕೈಗೊಳ್ಳುವ ಕಾರ್ಯಗಳೆಲ್ಲವೂ ಒಳ್ಳೆಯದೇ ಆಗಿರಬೇಕೆಂದು ದಿನದ ಆದಿಯಲ್ಲೇ ನಿಶ್ಚಯಿಸುವ ಮನೋಪ್ರವೃತ್ತಿಯನ್ನು ಪೂರ್ವಿಕರು ಬೆಳೆಸಿದ್ದಾರೆ.

ನಂತರ ತಮ್ಮ ಹಾಸಿಗೆಯನ್ನು ಬಿಟ್ಟು ಕೆಳಗಿಳಿಯುವ ಸಂದರ್ಭದಲ್ಲೂ ಕೂಡ –

**ಸಮುದ್ರವಸನೇ ದೇವಿ ಪರ್ವತಸ್ತನಮಂಡಲೇ ।**
**ವಿಷ್ಣುಪತ್ನೀ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ ॥**

ಸಕಲ ಜೀವಿಗಳ ಜೀವನಕ್ಕೂ ಆಧಾರ ಪ್ರಾಯವಾಗಿರುವ ಭೂಮಿಯನ್ನು ಪ್ರಾರ್ಥಿಸಿ, ತನ್ನ ಪಾದಸ್ಪರ್ಶದಿಂದಾಗುವ ತಪ್ಪಿಗೆ ಕ್ಷಮೆಯನ್ನು ಕೇಳಲಾಗಿದೆ. ಕಾರಣ ಭಾರತೀಯರು ಭೂಮಿಯನ್ನು ತಾಯಿಯಂತೆ ಗೌರವಿಸುತ್ತಾರೆ. ಒಬ್ಬ ತಾಯಿಯು ಒಂದೆರಡು ಮಕ್ಕಳನ್ನು ಹೆತ್ತು, ಕೆಲವು ದಿನ ಹೊತ್ತರೆ, ಭೂಮಿಯು ಎಲ್ಲರನ್ನೂ ಬದುಕಿರುವವರೆಗೂ ಹೊರುತ್ತಾಳೆ. ಕೊನೆಗೆ ತನ್ನಲ್ಲೇ ಲೀನವಾಗಿಸಿಕೊಳ್ಳುತ್ತಾಳೆ. ಹಾಗಾಗಿಯೇ ವೇದಗಳಕಾಲದಿಂದಲೂ ಇಂದಿನ ಜನಪದರವೆಗೂ ಭೂಮಿಗೆ ಗೌರವಿಸದವರಿಲ್ಲ.

ಸ್ನಾನಮಾಡುವ ಸಂದರ್ಭದಲ್ಲಿ

**ಗಂಗೇಚಯಮುನೇ ಚೈವ ಗೋದಾವರೀ ಸರಸ್ವತೀ ।**
**ನರ್ಮದೇ ಸಿಂಧುಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು॥**

ಗಂಗಾ, ಯಮುನಾ ಗೋದಾವರೀ ಸರಸ್ವತೀ ನರ್ಮದಾ ಸಿಂಧೂ, ಕಾವೇರಿ ಇತ್ಯಾದಿ ಪವಿತ್ರ ನದಿಗಳ ಜಲಗಳೆಲ್ಲವೂ ಈ ನೀರಿನಲ್ಲಿ ನೆಲಸಲಿ ಎಂಬ ಭಾವದೊಂದಿಗೆ ಸ್ನಾನವಮಾಡಿದಾಗ ದೇಹಶುದ್ಧಿಯೊಂದಿಗೆ ಪವಿತ್ರಸ್ನಾನಮಾಡಿದ ಫಲವೂ ಈ ನೀರಿನಿಂದ ಸಿಗತ್ತದೆ ಎಂಬ ಕಲ್ಪನೆಯನ್ನು ಈ ಶ್ಲೋಕದಲ್ಲಿ ಕೊಡಲಾಗಿದೆ. ಹಾಗಾಗಿ ನಾವು ಉಪಯೋಗಿಸುವ ಯಾವುದೇ ಜಲಮೂಲವನ್ನು ಕಲುಷಿತಗೊಳಿಸಬಾರದೆಂಬ ಸೂಕ್ಷ್ಮ ತಿಳುವಳಿಕೆ ಈ ಶ್ಲೋಕದಲ್ಲಿದೆ ತನ್ಮೂಲಕ ಜಲಮಾಲಿನ್ಯ ಪಾಪಕಾರ್ಯವೆಂದು ಪರೋಕ್ಷವಾಗಿ ತಿಳಿಸಲಾಗಿದೆ.

ಇಂದು ಈ ಅರಿವಿನ ಕೊರತೆಯಿಂದಾಗಿ ಶುದ್ಧ ಜಲಸಿಗುವ ನದಿಪಾತ್ರದ ಪ್ರದೇಶದಲ್ಲಿ ನಗರೀಕರಣ, ಕೈಗಾರೀಕರಣದಿಂದಾಗಿ ಶುದ್ಧಜಲದ ಕಲ್ಪನೆಯೇ ಇಂದಿನ ಪೀಳಿಗೆಗೆ ಇಲ್ಲವಾಗಿದೆ. ಮಹಾನಗರಗಳಲ್ಲಂತೂ ಶುದ್ಧಜಲದ ಅಭಾವದಿಂದಾಗಿ ಮನುಷ್ಯನು ಎಲ್ಲಾ ಕಾರ್ಯಗಳಿಗೂ ಉಪಯೋಗಿಸಿ ಬಿಟ್ಟಂತಹ ತ್ಯಾಜ್ಯ ಜಲವನ್ನೇ ಶುದ್ಧೀಕರಣ ಘಟಕಗಳ ಮೂಲಕ ಬಳಸುವ ಪರಿಸ್ಥಿತಿಯಿದೆ. ಇರಲಿ. ಹಾಗೆಯೇ –

**ಅಪವಿತ್ರಃ ಪವಿತ್ರೋವಾ ಸರ್ವಾವಸ್ಥಾಂ ಗತೋಽಪಿವಾ ।**
**ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಶ್ಶುಚಿಃ ॥**
ಅಪವಿತ್ರನಾಗಿರಲೀ ಅಥವಾ ಪವಿತ್ರನೇ ಆಗಿರಲಿ ಯಾವುದೇ ಅವಸ್ಥೆಯಲ್ಲಿಯೇ ಇರಲಿ ಯಾರು ದೇವರನ್ನು ಸ್ಮರಿಸುತ್ತಾರೋ ಅವರು ಒಳಗೂ ಹೊರಗೂ ಶುಚಿಯುಳ್ಳವರಾಗಿರುತ್ತಾರೆ ಎನ್ನುವ ಅರ್ಥಕೊಡುವ ಈ ಶ್ಲೋಕವನ್ನೂ ಸಹ ಸ್ನಾನಮಾಡುವಾಗ ಹೇಳಿಕೊಳ್ಳುವ ವಾಡಿಕೆಯಿದೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಶಾಂತಿ ಇತ್ಯಾದಿ ಧಾರ್ಮಿಕ ಕಾರ್ಯಗಳಲ್ಲಿ ವೇದಗಳಲ್ಲಿರುವ ಅಘಮರ್ಷಣ ಸೂಕ್ತದಂತಹ ಕೆಲವು ಸೂಕ್ತಗಳನ್ನು ಸ್ನಾನಮಾಡುವಾಗ ಉಚ್ಚರಿಸುವ ವಾಡಿಕೆಯಿದೆ.

ಸ್ನಾನಾನಂತರ ಇಷ್ಟದೇವತಾ ಪ್ರಾರ್ಥನೆಗಾಗಿಯೇ ಹಲವಾರು ಶ್ಲೋಕಗಳಿವೆ ಎಲ್ಲವೂ ವಿಶೇಷವಾದ ಅರ್ಥವನ್ನೇ ಕೊಡುತ್ತವೆ.

**ಶ್ರದ್ಧಾಂಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಮ್ ।**
**ಆಯಷ್ಯಂ ತೇಜಆರೋಗ್ಯಂ ದೇಹಿಮೇ ಪುರುಷೋತ್ತಮ** ॥
ಎಂದು ಜೀವನ ನಿರ್ವಹಣೆಗೆ ಅಗತ್ಯವಾದ ಬೇಡಿಕೆಗಳನ್ನು ದೇವರಲ್ಲಿ ಬೇಡುವ ಪರಿಪಾಠವಿದೆ. ಹಾಗೆಯೇ ಜೀವನವು ಆದಿಯಿಂದ ಅಂತ್ಯದವರೆಗೂ ಸಾರ್ಥಕವಾಗಿ ಕಳೆಯಬೇಕೆಂಬುದು ಪೂರ್ವಿಕರ ಆಶಯ. ಹಾಗಾಗಿಯೇ

**ಅನಾಯಾಸೇನ ಮರಣಂ ವಿನಾದೈನ್ಯೇನ ಜೀವನಮ್ ।**
**ದೇಹಿಮೇ ಕೃಪಯಾ ಶಂಭೋ ತ್ವಯಿಭಕ್ತಿಮ್ ಅಚಂಚಲಮ್ ॥**
ಮರಣದಲ್ಲಿ ಯಾವುದೇ ಸಂಕಟವಾಗದೇ ನಿಶ್ಚಿಂತೆಯಿಂದ ಮುಪ್ಪಿನಲ್ಲಿ ಸಾವುಬರಲಿ ಹಾಗೂ ಜೀವಿತಾವಧಿಯಲ್ಲಿ ಇನ್ನೊಬ್ಬರನ್ನು ಬೇಡದೇ,

ಪರರ ಹಂಗಿನಲ್ಲಿ ಬಾಳದಂತಿರಲಿ ಹಾಗೂ ಯಾವಾಗಲೂ ಮನಸ್ಸಿನಲ್ಲಿ ನಿನ್ನ ಅಚಲವಾದ ಭಕ್ತಿಯು ಸದಾ ಇರಲಿ ಎಂದು ಪ್ರಾರ್ಥಿಸಲಾಗುತ್ತದೆ. ನಿಜವಾಗಿಯೂ ಯಶಸ್ವೀ ಜೀವನವೆಂದರೆ ಇಂತಹದ್ದೇ. ನಾವು ಇನ್ನೊಬ್ಬರನ್ನು ಆಶ್ರಯಿಸಿದ್ದೇವೆಂದರೆ ದೈನ್ಯದಿಂದಲೇ ಬದುಕಬೇಕಾ ಗುತ್ತದೆ. ಅಂತೆಯೇ ನಮಗಿಷ್ಟವಿಲ್ಲದಿದ್ದರೂ ಅವರ ಕೃಪೆಗೆ ಒಳಗಾಗಲು ಆತ್ಮವಂಚನೆಗೆ ಗುರಿಯಾಗಬೇಕು. ಹಾಗಾಗಿಯೇ ಇದ್ದಷ್ಟುದಿನ ನಿರ್ಭಿಡೆಯಿಂದ ಸ್ವಾಭಿಮಾನಿಯಾಗಿ ಇನ್ನೊಬ್ಬರಿಗೆ ಹೊರೆಯಾಗದೆ ಜೀವನ ಸಾಗಿಸುವುದರಲ್ಲಿನ ಸಮಾಧಾನ ಮತ್ತೊಂದಿಲ್ಲ. ಅಂತೆಯೇ ಮರಣಾವಸ್ಥೆಯಲ್ಲಿಯೂ ಕೂಡ ಆನಂದದಿಂದ ಸಾಯುವುದೂ ಕೂಡ ಅದೃಷ್ಟವೇ ಸರಿ. ಏಕೆಂದರೆ ಸಾಯುವ ಸಂದರ್ಭದಲ್ಲಿ ಅನುಭವಿಸುವ ವೇದನೆ ಹತ್ತಿರದಿಂದ ಕಂಡವರಿಗೇ ಗೊತ್ತು. ಹಾಗಾಗಿಯೇ 'ಮರಣ ಸಂಕಟ' ಎಂಬ ಮಾತಿರುವುದು. ಆದ್ದರಿಂದ ಇನ್ನೊಬ್ಬರಿಗೆ ಹೊರೆಯಾಗದೇ ಮರಣವನ್ನು ಹೊಂದುವಂತಾಗಲಿ ಎಂದು ಕೇಳುವುದು. ಇದರೊಟ್ಟಿಗೆ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳು ಮನಸ್ಸನ್ನು ಹಾಳುಮಾಡಲು ಕಾಯುತ್ತಿರುತ್ತವೆ. ಅವುಗಳಿಂದ ರಕ್ಷಿಸಲು ಸದಾ ನಿನ್ನಲ್ಲಿ ಭಕ್ತಿಯನ್ನು ಕೊಡು ಎಂದು ಕೇಳುವ ಈ ಶ್ಲೋಕದಲ್ಲಿ ನಮ್ಮ ಬದುಕಿನ ಶೈಲಿ ಹೇಗಿರಬೇಕೆಂದು ಸೂಚ್ಯವಾಗಿ ತಿಳಿಸಲಾಗಿದೆ.

ಸಾಮಾನ್ಯವಾಗಿ ಪೂಜಾ ಕಾರ್ಯದ ನಂತರ ತೀರ್ಥಸೇವನೆಗೆ ಪ್ರಾಮುಖ್ಯತೆಯಿದೆ. ತೀರ್ಥಸೇವನೆ ಮಾಡುವಾಗಲೂ ಕೂಡ

**"ಶರೀರೇ ಜರ್ಜರೀ ಭೂತೇ ವ್ಯಾಧಿಗ್ರಸ್ತೇ ಕಲೇವರೇ ।**
**ಔಷಧಂ ಜಾಹ್ನವೀತೋಯಂ ವೈದ್ಯೋ ನಾರಾಯಣೋ ಹರಿಃ ॥**

ಶರೀರವು ಜರ್ಜರಿತವಾದಾಗ, ರೋಗಗ್ರಸ್ತವಾದಾಗ ಗಂಗಾಜಲವೇ ಔಷಧವು, ಶ್ರೀಮನ್ನಾರಾಯಣನೇ ವೈದ್ಯನು ಎಂಬರ್ಥಕೊಡುವ ಈ ಶ್ಲೋಕದಲ್ಲಿ ಮಾನಸಿಕ ಸ್ವಾಸ್ಥ್ಯ, ದೈಹಿಕ ಸ್ವಾಸ್ಥ್ಯಗಳೆರಡರ ವಿಚಾರವನ್ನು ಸೂಕ್ಷ್ಮವಾಗಿ ಹೇಳಲಾಗಿದೆ. ಹಿಂದೆ ದೇವಾಲಯಗಳಲ್ಲಿ ತುಲಸಿ ಇತ್ಯಾದಿ ವನಸ್ಪತಿಗಳ ಚೂರ್ಣಗಳನ್ನು ಬಳಸಿ ಶುದ್ಧ ನೀರಿನಲ್ಲಿ ತೀರ್ಥವನ್ನು ತಯಾರಿಸಲಾಗುತ್ತಿತ್ತು. ಆ ತೀರ್ಥವು ರೋಗನಿರೋಧಕವಾಗಿ ಕೆಲಸ ಮಾಡುತ್ತಿತ್ತು. ತೀರ್ಥದ ನಿರಂತರ ಸೇವನೆಯಿಂದ ದೈಹಿಕವಾಗಿ, ಮಾನಸಿಕವಾಗಿ ಮನುಷ್ಯ ಗಟ್ಟಿಗೊಳ್ಳುತ್ತಿದ್ದ. ಕೆಲವು ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಕೂಡ ಅನಾರೋಗ್ಯ ಪೀಡಿತರನ್ನು, ಮಾನಸಿಕ ಅಸ್ವಸ್ಥರನ್ನು ಕೆಲವು ದಿನಗಳವರೆಗೆ ದೇವಾಲಯದಲ್ಲೇ ವಾಸ್ತವ್ಯ ಮಾಡಿಸಲಾಗುತ್ತಿತ್ತು. ಕಾರಣ ಅಲ್ಲಿನ ಪ್ರಶಾಂತ ಪರಿಸರ, ಗಿಡಮೂಲಿಕೆಗಳಿಂದ ಮಾಡಿದ ತೀರ್ಥ, ಪ್ರಸಾದ ಹಾಗೂ ಇತರೇ ಔಷಧೋಪಚಾರ, ಭಜನೆ, ನಾಮಸಂಕೀರ್ತನೆಗಳು ರೋಗಿಗೆ ಮಾನಸಿಕವಾಗಿ, ದೈಹಿಕವಾಗಿ ಆಸ್ಪತ್ರೆಗಳಿಗಿಂತಲೂ ಪ್ರಭಾವಯುತವಾಗಿ ಪರಿಣಮಿಸುತ್ತಿದ್ದವು. ಇಂದು ಆ ರೀತಿಯ ವಾತಾವರಣ ದೇವಾಲಯಗಳಿಲ್ಲ. ದೇವಾಲಯಗಳು ವಾಣಿಜ್ಯ ಚಟುವಟಿಕೆಗಳ ಕೇಂದ್ರಗಳಾಗಿ ಪರಿಣಮಿಸುತ್ತಿರುವುದು ಖೇದದ ಸಂಗತಿ.

ಊಟಮಾಡುವ ಸಂದರ್ಭದಲ್ಲಿಯೂ ಕೂಡ ಭಗವನ್ನಾಮಸ್ಮರಣೆ ಮಾಡಿ ಆಹಾರ ಸೇವಿಸಿದರೆ ಅದು ಮನೋ ವಿಕಾರಗಳನ್ನು ಉಂಟುಮಾಡುವುದಿಲ್ಲ. ಹಾಗಾಗಿಯೇ ಭೋಜನ ಮಾಡುವ ಪೂರ್ವದಲ್ಲಿ ಧ್ಯಾನವನ್ನು ಮಾಡಿ ಆನಂತರ ಭೋಜನ ಮಾಡುವ ವಾಡಿಕೆ ಹಲವು ಕಡೆಗಳಲ್ಲಿದೆ. ಭೋಜನಕ್ಕೆ ಹಲವು ಶ್ಲೋಕಗಳಿದ್ದರೂ ಸಾಮಾನ್ಯವಾಗಿ ಈ ಕೆಳಗಿನ ಉಪನಿಷತ್ ಶ್ಲೋಕವೇ ಹೆಚ್ಚು ಪ್ರಚಲಿತದಲ್ಲಿದೆ.

**ಓಂ ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ ।**
**ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ ಓಂಶಾಂತಿಃ, ಶಾಂತಿಃ, ಶಾಂತಿಃ. ॥**

ಅಂದರೆ ನಾವಿಬ್ಬರೂ ಜೊತೆಯಲ್ಲಿಯೇ ಬಾಳೋಣ, ಜೊತೆಯಲ್ಲಿಯೇ ಊಟಮಾಡೋಣ, ಜೊತೆಯಲ್ಲಿಯೇ ಕಾರ್ಯತತ್ಪರರಾಗೋಣ, ಜೊತೆಯಾಗಿಯೇ ಅಧ್ಯಯನ ಮಾಡಿ ತೇಜಸ್ವಿಗಳಾಗೋಣ ನಾವಿಬ್ಬರೂ ಪರಸ್ಪರ ದ್ವೇಷಿಸದೇ ಇರೋಣ ಎಂದು ಹೇಳುವ ಈ ಶ್ಲೋಕವು ಸರ್ವಹಿತವನ್ನು ಬೋಧಿಸುತ್ತದೆ. ಹಸಿವಾದವರಿಗೆ ಹಂಚಿ ಅವನ ಹಸಿವನ್ನು ನೀಗಿಸುವ, ತನ್ನಂತೆಯೇ ಇತರರನ್ನೂ ಕಾಣಬೇಕೆಂಬ ಸಂದೇಶವನ್ನು ಪ್ರತಿಪಾದಿಸುತ್ತದೆ.

ಹೀಗೆ ಪ್ರತಿಯೊಂದು ಕಾರ್ಯವನ್ನೂ ಧ್ಯಾನವನ್ನು ಮಾಡಿಯೇ ಕೈಗೊಳ್ಳುವುದರಿಂದ ಅನಗತ್ಯವಾದ ವಿಚಾರಗಳು ಮನಸ್ಸನ್ನು ಹೊಕ್ಕದೆ ಸದಾ ಸದ್ವಿಚಾರ ಸತ್ಕಾರ್ಯಗಳನ್ನು ಮಾಡುವಂತಹ ಮನಸ್ಥಿತಿಯೇ ಉಂಟಾಗುತ್ತದೆ. ಆದರೂ ಕಾರ್ಯದ ನಡುವೆ ತಿಳಿದೋ ತಿಳಿಯದೆಯೋ ಏನಾದರೂ ಪಾಪಕಾರ್ಯಗಳು ಸಂಭವಿಸಿದರೆ ಅವೆಲ್ಲವನ್ನೂ ಕ್ಷಮಿಸು ಎಂದು ಕೊನೆಯಲ್ಲಿ ಕೇಳುವ ರೂಢಿಯೂ ಇದೆ.

**ಕರಚರಣಕೃತಂ ವಾಕ್ಕಾಯಜಂ ಕರ್ಮಜಂವಾ**
**ಶ್ರವಣನಯನಜಂ ವಾ ಮಾನಸಂ ವಾಪರಾಧಮ್।**
**ವಿಹಿತಮಹಿತಂವಾ ಸರ್ವಮೇತತ್ಕ್ಷಮಸ್ವ ।**
**ಜಯಜಯಕರುಣಾಬ್ಧೇ ಶ್ರೀಮಹಾದೇವಶಂಭೋ ॥**

ಹೇ ಕರುಣಾಸಾಗರನಾದ ಮಹಾದೇವನೆ ಕಾಲಿನಿಂದಾದ, ಕೈಯಿಂದಾದ, ಮಾತಿನಿಂದಾದ, ದೇಹದಿಂದಾದ, ಕೆಲಸದಿಂದ, ಕಿವಿಯಿಂದ, ಕಣ್ಣಿನಿಂದಾದ, ಮನಸ್ಸಿನಿಂದಾದ, ತಿಳಿದೋ ತಿಳಿಯದೆಯೋ ಏನಾದರೂ ಅಪರಾಧವಾಗಿದ್ದಲ್ಲಿ ಅವೆಲ್ಲವನ್ನೂ ಕ್ಷಮಿಸು. ಎಂಬ ಅರ್ಥವಿರುವ ಈ ಶ್ಲೋಕವು ಹೇಳುವುದೇನೆಂದರೆ, ಯಾವುದೇ ರೀತಿಯಲ್ಲೂ ಪಾಪಕಾರ್ಯಗಳು ಸಂಭವಿಸಬಹುದು. ಹಾಗಾಗಿಯೇ ಸಚ್ಚಿಂತನೆಯನ್ನೇ ಮಾಡಬೇಕೆಂದು ಸೂಚ್ಯವಾಗಿ ಹೇಳಲಾಗಿದೆ.

ಹಾಗೆಯೇ ರಾತ್ರಿ ಮಲಗುವ ಮುಂಚೆ ಹಾಸಿಗೆಯಲ್ಲಿ ಕುಳಿತು

**ರಾಮಂ ಸ್ಕಂದಂ ಹನೂಮಂತಂ ವೈನತೇಯಂ ವೃಕೋದರಮ್ ।**
**ಶಯನೇ ಯಃ ಸ್ಮರೇನ್ನಿತ್ಯಂ ದುಃಸ್ವಪ್ನಸ್ತಸ್ಯ ನಶ್ಯತಿ ॥**

ರಾಮ, ಸ್ಕಂದ, ಹನೂಮಂತ, ಗರುಡ, ಭೀಮ ಇವರನ್ನು ನೆನೆದು ಮಲಗಿದರೆ ದುಃಸ್ವಪ್ನವು ನಾಶವಾಗುವುದು ಎಂದು ಹೇಳಲಾಗಿದೆ. ಅಂದರೆ ಈ ಐದೂ ಜನರ ವ್ಯಕ್ತಿತ್ವವು ಸಾಮಾನ್ಯವಾಗಿ ಭಾರತೀಯರಿಗೆ ಗೊತ್ತಿರುವಂತಹದ್ದೇ ಹಾಗಾಗಿಯೇ ಅವರ ಉದಾರತೆಯನ್ನು ಅವರ ಸ್ವಾಮಿನಿಷ್ಠೆ, ಪಿತೃಭಕ್ತಿ ಇತ್ಯಾದಿ ಗುಣಗಳು ಆ ಪಾತ್ರಗಳ ಮೂಲಕ ನಮ್ಮ ಮನಸ್ಸಿಗೆ ಬಂದಲ್ಲಿ ರಾತ್ರಿಯಲ್ಲಿ ಕೆಟ್ಟ ವಿಚಾರಗಳು ದುಃಸ್ವಪ್ನವಾಗಿ ಬಾಧಿಸಲಾರವು.

ಈ ರೀತಿಯ ಸಂಸ್ಕೃತ ಶ್ಲೋಕಗಳ ಉಚ್ಚಾರಣೆಯಿಂದ ಮಾನಸಿಕ ಒತ್ತಡ ಕಡಿಮೆಯಾಗಿ ಬೇಡವಾದ ಯೋಚನೆಗಳು ದೂರಾಗಿ ನಿದ್ರಾಹೀನತೆಯೂ ಹೋಗುವುದು ಹಾಗೂ ಸದ್ವಿಚಾರಗಳನ್ನು ರಾತ್ರಿಯ ವೇಳೆ ಚರ್ಚಿಸುವುದರಿಂದ ಮನಸ್ಸಿನಮೇಲೆ ಸಾತ್ವಿಕಪರಿಣಾಮವಾಗಿ ಒಳ್ಳೆಯ ಸ್ವಪ್ನಗಳು ಕಾಣಿಸುತ್ತವೆ ಎನ್ನುವುದು ವಿಜ್ಞಾನದ ವಾದವೇ ಆಗಿದೆ. ಹಾಗಾಗಿಯೇ ನಿತ್ಯಜೀವನದ ಹಲವು ಪ್ರಸಂಗಗಳಲ್ಲಿ ಓದುವಾಗ,

ಪ್ರಯಾಣಿಸುವಾಗ ಹೀಗೆ ಶ್ಲೋಕಗಳನ್ನು ಪಠಿಸುವ ವಾಡಿಕೆಯಿದೆ. ವಿದ್ಯಾರ್ಥಿಗಳು ಓದುವ ಮೊದಲು ಸಂಸ್ಕೃತ ಶ್ಲೋಕಗಳನ್ನು ಹೇಳುವುದರಿಂದ ಮನಸ್ಸು ಕೇಂದ್ರೀಕೃತವಾಗುತ್ತದೆಂದು ಸಂಶೋಧನೆಯಿಂದ ನಿರ್ಧಾರವಾಗಿದೆ. ಹಾಗಾಗಿಯೇ ವಿದೇಶಗಳೂ ಸೇರಿದಂತೆ ಹಲವು ಶಾಲೆಗಳಲ್ಲಿ ತರಗತಿಗಳ ಆರಂಭಕ್ಕೆ ಮೊದಲು ಪ್ರಾರ್ಥನೆಯನ್ನು ಮಾಡಿಸಿದಾಗ ಉತ್ತಮ ಪರಿಣಾಮ ಕಂಡುಬಂದಿದೆ. ಈ ರೀತಿಯ ಶ್ಲೋಕಗಳನ್ನು ಅರ್ಥವಾಗದಿದ್ದರೂ ಪಠಿಸಿದರೆ ಒಂದುರೀತಿಯ ಕಂಪನ ನಮ್ಮ ಶರೀರದಲ್ಲುಂಟಾಗಿ ಮನಸ್ಸು ಕೇಂದ್ರೀಕೃತವಾಗುತ್ತದೆಂದು ಸಂಶೋಧನೆಗಳಿಂದ ತಿಳಿದಿರುವಂತಹದ್ದು. ಇನ್ನು ಅರ್ಥಸಹಿತವಾಗಿ ಶ್ಲೋಕಗಳ ಉಚ್ಚಾರಣೆ ಮಾಡಿದರೆ ಮಾನಸಿಕ ಒತ್ತಡ ಸಂಪೂರ್ಣವಾಗಿ ಹೋಗದಿದ್ದರೂ ನಿಯಂತ್ರಣವನ್ನಂತೂ ಮಾಡಬಹುದಾಗಿದೆ. ಹೀಗೆ ಧ್ಯಾನಶ್ಲೋಕಗಳು ಕೇವಲ ಕಂದಾಚಾರಗಳಾ ಗಿರದೆ ನಿತ್ಯಜೀವನದಲ್ಲಿ ಸರ್ವರೂ ಅಳವಡಿಸಿಕೊಂಡಲ್ಲಿ ಲಾಭವೇ ಹೆಚ್ಚು.

## ಗಾಂಧಿ ಮತ್ತು ಪರಿಸರವಾದ

*ಚಿನ್ನಸ್ವಾಮಿ.ಎನ್
* ಸಂಶೋಧಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು – 570 006

ಜಗತ್ತು ಇಂದು ಎದುರಿಸುತ್ತಿರುವ ಗಂಭೀರವಾದ ಅನೇಕ ಸಮಸ್ಯೆಗಳಲ್ಲಿ ಪರಿಸರಮಾಲಿನ್ಯವೂ ಒಂದು. ಈ ಸಮಸ್ಯೆಯು ವರ್ಷದಿಂದ ವರ್ಷಕ್ಕೆ ತೀವ್ರವಾಗುತ್ತಾ ಬಂದು ಭೂಮಿಗೆ ಅಪಾರವಾದ ಹಾನಿಯನ್ನು ಉಂಟುಮಾಡುತ್ತಿದೆ. ಇಂದು ಪರಿಸರ ರಕ್ಷಣೆಗೆ ತಮ್ಮನ್ನು ಸಮರ್ಪಿಸಿಕೊಂಡಿರುವ ಸಹಸ್ರಾರು ಸಂಘ ಸಂಸ್ಥೆಗಳು ಜಗತ್ತಿನಲ್ಲಿ ಹರಡಿವೆ. ಪರಿಸರ ಮಾಲಿನ್ಯದ ಸಮಸ್ಯೆಯು ಮತ್ತು ಅದನ್ನು ಕುರಿತು ಇರುವ ಕಳಕಳಿಯು ನಮ್ಮ ಸಮಾಜಕ್ಕೇನೂ ಹೊಸತಲ್ಲ. ಪರಿಸರವನ್ನು ಕುರಿತು ಗಾಢವಾದ ಕಳಕಳಿಯನ್ನು ಹೊಂದಿದ ಜನರು ನೂರಾರು ವರ್ಷಗಳ ಹಿಂದೆಯೇ ಇದ್ದರು.

ದೇಶದ ಪಿತಾಮಹನೆನಿಸಿಕೊಂಡ ಮಹಾತ್ಮ ಗಾಂಧಿಯವರು ಒಬ್ಬ ಮಹಾನ್ ರಾಜಕೀಯ ಮುಖಂಡರು ಮತ್ತು ಅಪ್ರತಿಮ ಸ್ವಾತಂತ್ರ ಹೋರಾಟಗಾರರು ಎಂಬುದು ನಮಗೆ ತಿಳಿದಿದೆ. ಆದರೆ ಅವರೊಬ್ಬ ಮಹಾನ್ ಪರಿಸರವಾದಿ ಎಂಬುದು ಅನೇಕ ಮಂದಿಗೆ ತಿಳಿದಿರಲಿಕ್ಕಿಲ್ಲ. ಸತ್ಯಾಗ್ರಹವನ್ನು ಕುರಿತ ಅವರ ಆಲೋಚನೆಗಳು ಸತ್ಯ ಮತ್ತು ಅಹಿಂಸೆಗಳ ಬುನಾದಿಯನ್ನು ಹೊಂದಿದೆ. ಅವರ ಸರಳ ಜೀವನಶೈಲಿಯು ನಿಸರ್ಗಕ್ಕೆ ಮತ್ತು ನಮ್ಮ ಸಹಜನರಿಗೆ ತೊಂದರೆಯಾಗದಂತೆ ಸ್ಥಿರವಾದ ಅಭಿವೃದ್ಧಿಯು ಹೇಗೆ ಸಾಧ್ಯವೆಂಬುದನ್ನು ತೋರಿಸುತ್ತದೆ. ಆಧುನಿಕ ಪರಿಸರವಾದಕ್ಕೆ "ಎಲ್ಲ ಅಗತ್ಯಗಳನ್ನು ಪೂರೈಸಲು ನಿಸರ್ಗವು ಸಾಕಷ್ಟನ್ನು ಹೊಂದಿದೆಯಾದರೂ ಯಾವುದೇ ಒಬ್ಬ ವ್ಯಕ್ತಿಯ ಲೋಭವನ್ನು ಪೂರೈಸಲು ಅದು ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿಲ್ಲ" ಎಂಬ ಅವರ ಘೋಷಣೆಯು ನೀತಿಮಂತ್ರವಾಗಿದೆ. ಪರಿಸರವಾದಕ್ಕೆ ಅವರ ಕೊಡುಗೆಯು ಎಷ್ಟು ಮಹತ್ವಪೂರ್ಣವಾಗಿದೆಯೆಂದರೆ ಅನೇಕ ಪರಿಸರವಾದಿಗಳು ಗಾಂಧಿಯವರನ್ನು ಭಾರತದಲ್ಲಿನ ಪರಿಸರವಾದದ ಚಳುವಳಿಯ ಪಿತಾಮಹನೆಂದು ಪರಿಗಣಿಸುತ್ತಾರೆ. ಜಗತ್ತಿನಾದ್ಯಂತ ಪರಿಸರವಾದಿಗಳು ಪರಿಸರವಾದಕ್ಕೆ ಅವರ ಕೊಡುಗೆಗಳನ್ನು ಸ್ಮರಿಸಿಕೊಳ್ಳುತ್ತಾರೆ.

ಪ್ರಸ್ತುತ ಲೇಖನದ ಉದ್ದೇಶಗಳು ನಾಲ್ಕು.

1. ಪರಿಸರವನ್ನು ಸಂರಕ್ಷಿಸುವಲ್ಲಿ ಮಹಾತ್ಮ ಗಾಂಧಿಯವರ ಪಾತ್ರವನ್ನು ಚರ್ಚಿಸುವುದು.
2. ಪರಿಸರವನ್ನು ಸಂರಕ್ಷಿಸುವಲ್ಲಿ ಗಾಂಧಿಯವರ ಅಹಿಂಸೆ ಮತ್ತು ಸತ್ಯಾಗ್ರಹಗಳೆಂಬ ಮೌಲ್ಯಗಳು ಹೇಗೆ ಉಪಯುಕ್ತ ಎಂಬುದನ್ನು ಅಧ್ಯಯನ ಮಾಡುವುದು.
3. ಕೈಗಾರಿಕೀಕರಣ ಅಥವಾ ಆಧುನಿಕ ನಾಗರೀಕತೆಯನ್ನು ಕುರಿತ ಗಾಂಧಿಯವರ ನಿಲುವನ್ನು ಮತ್ತು ಪರಿಸರದ ಮೇಲಿನ ಅವುಗಳ ಪರಿಣಾಮವನ್ನು ಅಧ್ಯಯನ ಮಾಡುವುದು.
4. ನಿಸರ್ಗದ ಸಂಪನ್ಮೂಲಗಳ ಅತಿಯಾದ ಶೋಷಣೆಯನ್ನು ಕುರಿತು ಗಾಂಧಿಯವರ ನಿಲುವನ್ನು ಚರ್ಚಿಸುವುದು.

ವಿಜ್ಞಾನ ಮತ್ತು ತಂತ್ರಜ್ಞಾನಗಳು ಪ್ರಮುಖ ಪಾತ್ರವನ್ನು ವಹಿಸುತ್ತಿರುವ ಜಗತ್ತಿನಲ್ಲಿ ನಾವೀಗ ಜೀವಿಸುತ್ತಿದ್ದೇವೆ. ಇವುಗಳೇ ನಮ್ಮ ಬದುಕನ್ನು ಈಗ ರೂಪಿಸುತ್ತಿರುವುದು. ಆದರೆ ಸ್ವಾರ್ಥೋದ್ದೇಶಕ್ಕಾಗಿ ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಶೋಷಣೆಯಿಂದ ಪರಿಸರದ ಮೇಲೆ ಗಂಭೀರವಾದ ಪರಿಣಾಮ ಉಂಟಾಗುತ್ತದೆ. ವಾಸ್ತವವಾಗಿ ಅಭಿವೃದ್ಧಿಯೆಂಬ ಪರಿಕಲ್ಪನೆಯೇ ಪ್ರಸ್ತುತ ಪರಿಸ್ಥಿತಿಯಲ್ಲಿ ಒಂದು ವಿವಾದಾಸ್ಪದ ಪರಿಕಲ್ಪನೆಯಾಗಿದೆ. ಏಕೆಂದರೆ ಅಭಿವೃದ್ಧಿಯ ಹೆಸರಿನಲ್ಲಿ ನಾವು ನಿಸರ್ಗದ ಸಂಪನ್ಮೂಲಗಳನ್ನು ಅನೈತಿಕವಾಗಿ ಕೊಳ್ಳೆ ಹೊಡೆಯುತ್ತಿದ್ದೇವೆ. ನಿಸರ್ಗದ ಅಗತ್ಯಗಳನ್ನು ಗೌರವಿಸದ ವಿಜ್ಞಾನ ಮತ್ತು ಜನರ ಅಗತ್ಯಗಳನ್ನು ಗೌರವಿಸದ ಅಭಿವೃದ್ಧಿ ಮಾನವ ಸಮಾಜದ ಉಳಿವಿಗೆ ಧಕ್ಕೆ ತರುತ್ತದೆಂಬುದು ನಿಜ.

ಗಾಂಧಿಯವರ ಹಸಿರು ಚಿಂತನೆಗಳು ನಿಸರ್ಗ ಮತ್ತು ಜನರ ಅಗತ್ಯಗಳ ನಡುವೆ ಸಮನ್ವಯ ಮಾಡಲು ಒಂದು ಹೊಸ ದೃಷ್ಟಿಯನ್ನು ನೀಡುತ್ತದೆ. ಅವರ ಆಲೋಚನೆಗಳು ಎರಡು ಮೂಲಭೂತ ನಿಯಮಗಳನ್ನು ಆಧರಿಸಿದೆ. 1. ವಿಶ್ವನಿಯಮ (Cosmic Law) 2. ವರ್ಗ ನಿಯಮ (Law of Species) ವಿಶ್ವನಿಯಮವು ಇಡೀ ವಿಶ್ವವನ್ನು ಒಂದು ಸಮಗ್ರ ತತ್ತ್ವವಾಗಿ ಪರಿಗಣಿಸುತ್ತದೆ. ಗಾಂಧೀಜಿ ಹೀಗೆ ಹೇಳಿದರು. "ಇಡೀ ವಿಶ್ವವು ಒಂದು ವಿರಾಟ್ ಚೈತನ್ಯದಿಂದ ಹೇಗೆ ರಚಿತವಾಗಿದೆಯೆಂದರೆ ಎಲ್ಲ ಮನುಷ್ಯರು, ಎಲ್ಲ ಜೀವಗಳು ಮತ್ತು ಇಡೀ ವಿಶ್ವವು ಏಕತತ್ತ್ವವಾಗಿ ಸೃಷ್ಟಿಸಲ್ಪಟ್ಟಿತು.

ಅನೇಕ ಚಿಂತಕರು ಚಿಪ್ಕೊ ಚಳುವಳಿ, ನರ್ಮದಾ ಬಚಾವ್ ಆಂದೋಲನ ಇವೇ ಮುಂತಾದ ಪರಿಸರ ಚಳುವಳಿಗಳಿಗೆ ಗಾಂಧಿ ಪರಿಸರವಾದದ ಜೈವಿಕ ಉದಾಹರಣೆಗಳನ್ನಾಗಿ ಪರಿಗಣಿಸಿದರು.

ಅವರು ಗಾಂಧಿಯವರನ್ನು ಬದುಕನ್ನು ಕುರಿತ ಆಳವಾದ ಪರಿಸರ ಜ್ಞಾನವನ್ನು ಹೊಂದಿದ ವ್ಯಕ್ತಿಯನ್ನಾಗಿ ಪರಿಗಣಿಸಿದರು. ಚಿಪ್ಕೊ ಚಳುವಳಿಯ ಮುಖ್ಯ ಗುರಿಯೆಂದರೆ ಗಾಂಧಿ ದೃಷ್ಟಿಕೋನವನ್ನು ಆಧರಿಸಿ ಹೊಸ ಸಮಾಜವನ್ನು ಕಟ್ಟುವುದಾಗಿತ್ತು. ಮಾನವ ಸಮಾಜದ ಉಳಿವಿಗೆ ಧಕ್ಕೆ ತರುವಂತಹ ನೈಸರ್ಗಿಕ ಶೋಷಣೆಯನ್ನು ತಡೆಯುವುದಾಗಿತ್ತು.

ಆಧುನಿಕ ಕೈಗಾರಿಕೆಯ ನಾಗರಿಕತೆಯು ಮಾನವ ಸಮಾಜ ಹಾಗೂ ಪರಿಸರದ ಮೇಲೆ ಗಾಢವಾದ ಪರಿಣಾಮವನ್ನು ಬೀರಿದೆ. ನೈಸರ್ಗಿಕ ಸಂಪನ್ಮೂಲಗಳ ಅಗಾಧವಾದ ಶೋಷಣೆಯಿಂದಾಗಿ ಜನಸಂಖ್ಯೆಯ ಅತ್ಯಲ್ಪ ಭಾಗವು ಮಾತ್ರವೇ ಶ್ರೀಮಂತಗೊಂಡಿತು. ಆದ್ದರಿಂದ ಗಾಂಧಿರವರು ಕೈಗಾರಿಕೀಕರಣವನ್ನು ಸಂಪತ್ತಿನ ದಾಹ ಮತ್ತು ಪ್ರಾಪಂಚಿಕ ಸುಖದ ಲೋಭವನ್ನಲ್ಲದೆ ಮತ್ತೇನನ್ನೂ ಪ್ರಚೋದಿಸುವುದಿಲ್ಲವೆಂದು ಭಾವಿಸಿದರು.

1909 ರಲ್ಲಿ ಪ್ರಕಟಿಸಲ್ಪಟ್ಟ "ಹಿಂದ್ ಸ್ವರಾಜ್ಯವು ಆಧುನಿಕ ನಾಗರೀಕತೆಯನ್ನು ಸೈತಾನನೆಂದು ಟೀಕಿಸಿತು. ಗಾಂಧಿಯವರು ಹೀಗೆ ಹೇಳಿದರು. ಯಂತ್ರ ವಿಜ್ಞಾನವು ಆಧುನಿಕ ನಾಗರೀಕತೆಯ ಒಂದು ಮುಖ್ಯ ಪ್ರತೀಕವಾಗಿದೆ. ಅದು ಒಂದು ಮಹಾಪಾಪವನ್ನು ಪ್ರತಿನಿಧಿಸುತ್ತದೆ. ಈ ಯಂತ್ರಗಳೇ ಭಾರತವನ್ನು ಬಡತನಕ್ಕೆ ತಳ್ಳಿರುವುದು. ಆಧುನಿಕ ನಾಗರೀಕತೆಯಲ್ಲಿ ನೈಜ ನಾಗರೀಕತೆಯ ಮೌಲ್ಯಗಳು ಇಲ್ಲವೆಂದು ಮತ್ತು ಪ್ರಾಚೀನ ನಾಗರೀಕತೆಗಳು ಅವುಗಳ ಧಾರ್ಮಿಕ ಸ್ವರೂಪದಿಂದಾಗಿ ಪ್ರಾಪಂಚಿಕ ಲೋಭಕ್ಕೆ ಒಂದು ಮಿತಿಯನ್ನು ಒಡ್ಡಿದವೆಂದು ಗಾಂಧೀಜಿಯವರು ಭಾವಿಸಿದರು. ಆಧುನಿಕ ನಾಗರೀಕತೆಯು ನಿಸರ್ಗದ ವಿರುದ್ಧ ಹಿಂಸೆಯನ್ನು ಪ್ರಚೋದಿಸುತ್ತದೆ. ಈ ಹಿಂಸೆಯ ಪರಿಣಾಮವೇ ಖಾಸಗಿ ಸ್ವತ್ತು. ಇದು ಪರಿಸರದೊಂದಿಗೆ ತನ್ನ ಸಹಚರರೊಂದಿಗೆ ಮನುಷ್ಯನ ಏಕತೆಯನ್ನು ಕಡಿಮೆ ಅಲಕ್ಷಿಸಿತು. ಸ್ಥಿರವು ಮತ್ತು ಬಹುಕಾಲದಿಂದಲೂ ರೂಢವಾಗಿದ್ದ ಸಮುದಾಯ ಪರಿಕಲ್ಪನೆಯನ್ನು ಇದು ನಾಶಗೊಳಿಸಿತು. ನೈಸರ್ಗಿಕ ಸಂಪನ್ಮೂಲಗಳು ನಿರ್ದಾಕ್ಷಿಣ್ಯವಾಗಿ ನಾಶಗೊಳಿಸಲ್ಪಟ್ಟವು. ನಿಸರ್ಗದ ಸಮತೆಗೆ ಭಂಗವಾಯಿತು. ಮಾನವೀಯ ಅಗತ್ಯಗಳಿಗಾಗಿ ಪ್ರಾಣಿಗಳು ಕೊಲ್ಲಲ್ಪಟ್ಟವು ಅಥವಾ ಹಿಂಸಿಸಲ್ಪಟ್ಟವು. ಆಧುನಿಕ ನಾಗರಿಕತೆಯ ಅಂಗವಾದ ನಗರೀಕರಣದಿಂದಾಗಿ ಹಳ್ಳಿಗಳು ನಾಶವಾಗುವುದೆಂಬ ಆತಂಕವು ಗಾಂಧೀಜಿಯವರಲ್ಲಿ ಮೂಡಿತು. ಈ ನಗರೀಕರಣದ ಪರಿಣಾಮವೇ ಪರಿಸರ ಅಸಮತೋಲನ ಮತ್ತು ಮಾಲಿನ್ಯ.

ಪಾಶ್ಚಾತ್ಯ ಪರಿಸರವಾದಿಗಳು "ನಿಸರ್ಗಕ್ಕೆ ಹಿಂದಿರುಗುವಿಕೆ" ಎಂಬ ಸಂದೇಶವನ್ನು ಸಾರುತ್ತಿದ್ದರೆ, ಗಾಂಧೀಜಿಯವರು "ಹಳ್ಳಿಗಳಿಗೆ ಹಿಂದಿರುಗುವಿಕೆ" ಎಂಬ ಸಂದೇಶವನ್ನು ಹರಡುತ್ತಿದ್ದರು. ಅವರ ಪ್ರಕಾರ ನಗರಗಳ ಬುನಾದಿಯು ಕಟ್ಟಲ್ಪಟ್ಟಿರುವುದು ಹಳ್ಳಿಗಳ ರಕ್ತವೆಂಬ ಸಿಮೆಂಟಿನಿಂದ.

ಸಂಘರ್ಷ ಪರಿಹಾರವೆಂಬುದು ಈಗಷ್ಟೆ ಹುಟ್ಟಿಕೊಳ್ಳುತ್ತಿರುವ ಸಮಾಜ ವಿಜ್ಞಾನದ ಒಂದು ಶಾಖೆ. ಅದು ದೇಶ–ದೇಶಗಳ ಅಥವಾ ವ್ಯಕ್ತಿ–ವ್ಯಕ್ತಿಗಳ ನಡುವಣ ಸಂಭವಿಸುವ ಹೋರಾಟಗಳಿಗೆ ಪರಿಹಾರ ತಂತ್ರಗಳನ್ನು ಹುಡುಕಲೆತ್ನಿಸುತ್ತದೆ. ಈ ತಂತ್ರಗಳನ್ನು ಪರಿಸರದ ಸಮಸ್ಯೆಗಳಿಗೂ ಅನ್ವಯಿಸಬಹುದು.

ಸಂಘರ್ಷ ಪರಿಹಾರದ ಪರಿಣಾಮಕಾರಿ ತಂತ್ರವಾಗಿ ಗಾಂಧೀಜಿಯವರ ಅಹಿಂಸೆ ಅಥವಾ ಸತ್ಯಾಗ್ರಹವನ್ನು ಅನೇಕ ಮಂದಿ ಸ್ವೀಕರಿಸಿದ್ದಾರೆ. ಭಾರತೀಯ ಪರಿಸರ ಚಳುವಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಈ ಹೋರಾಟವು ವಿವಿಧ ಆಸಕ್ತಿಗಳಿಗಿರುವ ಗುಂಪುಗಳ ನಡುವೆ ಅಥವಾ ರಾಜ್ಯ ಮತ್ತು ಜನರ ನಡುವೆ ಸಂಭವಿಸುತ್ತದೆ. ಈ ಹೋರಾಟದ ಮುಖಂಡತ್ವವನ್ನು ರೈತವರ್ಗ ಇಲ್ಲವೆ ಬುಡಕಟ್ಟಿನ ವರ್ಗವು ವಹಿಸಿಕೊಳ್ಳುತ್ತದೆ. ಇದು ಬದುಕಿನ ರಕ್ಷಣೆಯ ಹೋರಾಟದ ಸಂಪನ್ಮೂಲಗಳ ನಿಯಂತ್ರಣದ ಇಲ್ಲವೇ ಇನ್ನಾವುದೋ ವಿಧದ ಆತ್ಮ ವಿಶ್ವಾಸದ ಮೂಲಕ ವ್ಯಕ್ತವಾಗುತ್ತದೆ. ಪರಿಸರಾತ್ಮಕ ಅನ್ಯಾಯ ಮತ್ತು ಅಲ್ಪದೃಷ್ಟಿಗಳು ಮೂಲಭೂತ ಹಿಂಸೆಗೆ ನಿದರ್ಶನಗಳಾಗಿವೆ. ಗಾಂಧಿಯವರು ಸಂಘರ್ಷ ಪರಿಹಾರಕ್ಕೆ ಹಿಂಸೆ–ಪ್ರತಿಹಿಂಸೆಗಳೆಂದಿಗೂ ಸಹಕಾರಿಗಳಲ್ಲ ಎಂದು ನಂಬಿದರು. ಅವರು ಈ ಸಮಸ್ಯೆಗಳನ್ನು ಎದುರಿಸಲು ಸತ್ಯಾಗ್ರಹ, ಅಹಿಂಸೆ ಅಥವಾ ಪ್ರೀತಿಯೊಂದೇ ಸಾರ್ವತ್ರಿಕ ಅನ್ವಯವನ್ನು ಪಡೆದಿರುವ ಶಕ್ತಿಗಳಾಗಿವೆ ಎಂದು ಭಾವಿಸಿದರು.

ಭಾರತದಲ್ಲಿ ಪರಿಸರ ಚಳುವಳಿಗಳು ಸತ್ಯಾಗ್ರಹವನ್ನು ಯುದ್ಧಕ್ಕೆ ಸಮವಾಗಿ ಒಂದು ನೈತಿಕ ಅಸ್ತ್ರವನ್ನಾಗಿ ಬಳಸಿದರು. ಅರಣ್ಯನಾಶಕ್ಕೆ ವಿರೋಧ ವ್ಯಕ್ತಪಡಿಸಿ ಚಿಪ್ಕೊ ಚಳುವಳಿಯಲ್ಲಿ ಮೊಟ್ಟಮೊದಲ ಬಾರಿಗೆ ಅರಣ್ಯ ಸತ್ಯಾಗ್ರಹವನ್ನು ಪರಿಣಾಮಕಾರಿಯಾಗಿ ಬಳಸಲಾಯಿತು. ಪ್ರಕೃತಿಯನ್ನು ಉಳಿಸಲು ಗಾಂಧೀಜಿ ತಂತ್ರವಾದ ಪಾದಯಾತ್ರೆಗಳನ್ನು ನಡೆಸಲಾಯಿತು. ಪರಿಸರ ಕಾರ್ಯಕರ್ತರಾದ ಚಂಡಿಪ್ರಸಾದ ಭಟ್, ಬಾಬಾ ಆಮ್ಟೆ, ಸುಂದರ್‌ಲಾಲ್ ಬಹುಗುಣ, ಮೇಧಾ ಪಾಟ್ಕರ್‌ರವರೇ ಮುಂತಾದವರು ಅಹಿಂಸೆ ಮತ್ತು ಪರಿತ್ಯಾಗಗಳನ್ನು ಆಧರಿಸಿದ ಬಿಕ್ಕಟ್ಟಿನ ಪರಿಹಾರ ತಂತ್ರಗಳನ್ನು ಬಳಸಿಕೊಂಡರು.

ಪರಿಸರ ಚಳುವಳಿ ಉದಯಿಸುವ ಹತ್ತಾರು ವರ್ಷಗಳ ಮೊದಲು ಗಾಂಧಿ ಕೆಲವು ಮೂಲಭೂತ ಪರಿಸರ ಸಮಸ್ಯೆಗಳನ್ನು ಕೈಗೆತ್ತಿಕೊಂಡರು. ಉದಾಹರಣೆಗೆ ನಿಸರ್ಗದ ವಿರುದ್ಧ ಮನುಷ್ಯನ ಹಿಂಸಾ ಮನೋಭಾವ. ವಿಶ್ವದ ಜಗತ್ತಿನ ವಿವಿಧ ಭಾಗಗಳಲ್ಲಿ ಪರಿಸರಕ್ಕೆ ಆಗುತ್ತಿರುವ ಧಕ್ಕೆ ವಿರುದ್ಧ ಹಲವಾರು ಚಳುವಳಿಗಳು ಹುಟ್ಟಿಕೊಂಡು ಬಂದಿವೆ. ಈ ಚಳುವಳಿಗಳ ಪೈಕಿ ಕೆಲವು ಆಕ್ರಮಣಕಾರಿಯಾಗಿವೆ. ಆದರೆ ಭಾರತ ದೇಶದಲ್ಲಿ ಇಂತಹ ಚಳುವಳಿಗಳು ಅಸಹಕಾರ ಮತ್ತು ಅಹಿಂಸೆಗಳೆಂಬ ಗಾಂಧಿ ಮೌಲ್ಯಗಳಿಂದ ಪ್ರೇರೇಪಿತವಾಗಿವೆ. ಗಾಂಧಿ ಪ್ರಕಾರ ಅಹಿಂಸೆಯು ತಾಟಸ್ಥ್ಯವನ್ನು ಸೂಚಿಸುವುದಿಲ್ಲ. ಅದೊಂದು ಬದುಕಿನ ವಿಧಾನ.

ಗಾಂಧೀಜಿಯವರ ಸತ್ಯಾಗ್ರಹ ಪರಿಕಲ್ಪನೆಯು ದ್ವಂದ್ವ ಪರಿಹಾರದ ಮತ್ತೊಂದು ತಂತ್ರವಾಗಿ ಕಾರ್ಯಶೀಲವಾಗಿದೆ. ಗಾಂಧೀಜಿಯವರು ಸಮಾಜದ ಮೇಲೆ ಆಧುನಿಕತೆಯು ಮತ್ತು ಕೈಗಾರಿಕೀಕರಣವು ಬೀರುವ ಭೀಕರ ಪರಿಣಾಮಗಳನ್ನು ಟೀಕಿಸಿದರು. ಅವರ ಪ್ರಕಾರ ಬ್ರಿಟಿಷರ ಆರ್ಥಿಕ ಸಾಮ್ರಾಜ್ಯಶಾಹಿ ಧೋರಣೆಯು ಇಡೀ ಜಗತ್ತನ್ನು ಬಂಧನದಲ್ಲಿರಿಸಿದೆ. ಒಂದು ಸಣ್ಣ ದ್ವೀಪವು ಇಡೀ ಜಗತ್ತನ್ನು ಆರ್ಥಿಕ ಶೋಷಣೆಗೆ ಒಳಪಡಿಸುವುದೆಂದರೆ ಅದು ಆಶ್ಚರ್ಯವೇ ಸರಿ!

ಗಾಂಧೀಜಿಯವರ ಪ್ರಕಾರ ಭಾರತದ ಆರ್ಥಿಕತೆಗೆ ಒಂದು ಹೊಸ

ದೃಷ್ಟಿಕೋನದ ಅವಶ್ಯಕತೆ ಇದೆ. ಈ ದೃಷ್ಟಿಕೋನವು ವ್ಯವಸಾಯ ಮತ್ತು ಗ್ರಾಮ ಕೈಗಾರಿಕೆಗಳನ್ನು ಅವಲಂಬಿಸಿದೆ. ಗಾಂಧೀಜಿ ಪರಿಸರ ಸಮತೋಲನವನ್ನು ಆಧರಿಸಿದ ಒಂದು ಹೊಸ ಆರ್ಥಿಕ ನೀತಿಯನ್ನು ನಮ್ಮ ಮುಂದಿಟ್ಟರು. ಗ್ರಾಮಕ್ಕೆ ಹೆಚ್ಚು ಮಹತ್ವನ್ನು ನೀಡಿದ ಗಾಂಧೀಜಿಯವರ ದೃಷ್ಟಿಕೋನವು ಅವರ ಪರಿಸರ ತತ್ತ್ವಜ್ಞಾನಕ್ಕೆ ಬಹಳ ಪ್ರಾಮುಖ್ಯತೆಯನ್ನು ನೀಡುತ್ತದೆ. ಗಾಂಧೀಜಿ ಚಿಂತನೆಗಳಿಗೆ ಮಹತ್ವವನ್ನು ನೀಡುವುದು ಹಸಿರು ಕ್ರಾಂತಿಯನ್ನು ನಿರ್ಮಿಸಲು ಸಹಕಾರಿಯಾಗುತ್ತದೆ. ಇಲ್ಲಿ ಲೋಭಕ್ಕೆ ಸ್ಥಾನವಿರುವುದಿಲ್ಲ.

**ಉಪಸಂಹಾರ:** ಒಟ್ಟಾರೆ ಗಾಂಧೀಜಿ ಒಬ್ಬ ಮಹಾಪರಿಸರವಾದಿಯಾಗಿದ್ದರು. ಅವರು ಓಜೋನ್ ಪದರದ ಕ್ಷೀಣತೆಯ ಪರಿಣಾಮಗಳನ್ನು ಮತ್ತು ಕಾರಣಗಳನ್ನು ವಿಶ್ಲೇಷಿಸಿದರು. ತಮ್ಮ ಇಡೀ ಬದುಕಿನಲ್ಲಿ ಅವರು ಜನರಿಗೆ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ತಮ್ಮ ಉದಾಹರಣೆಯ ಮೂಲಕ ತೋರಿಸಿದರು. ಅವರಂತೆ ಪರಿಸರ ಸಮಸ್ಯೆಗಳಿಗೆ ಸಮರ್ಪಣ ಮನೋಭಾವದಿಂದ ಯಾವ ರಾಜಕೀಯ ವ್ಯಕ್ತಿಯು ದುಡಿಯಲಿಲ್ಲ. ಇಂದು ಪರಿಸರವಾದಿಯು ತನ್ನ ಪರಿಸರವಾದವನ್ನು ಕೇವಲ ವಿದ್ವತ್‌ಪೂರ್ಣ ಉಪನ್ಯಾಸಗಳಿಗೆ ಮಾತ್ರ ಸೀಮಿತವಾಗಿರಿಸಿದ್ದಾನೆ. ಕ್ರಿಯಾಶೀಲ ಪರಿಸರವಾದಿಗಳು ಇರುವರೆಂಬುದು ನಿಜ. ಆದರೆ ಕೆಲವು ಸಲ ಅವರ ಕ್ರಿಯಾಶೀಲತೆಯ ಹಿನ್ನೆಲೆಯಲ್ಲಿರುವ ಉದ್ದೇಶವನ್ನು ನಾವು ಪ್ರಶ್ನಿಸಬೇಕಾಗುತ್ತದೆ. ಗಾಂಧೀಜಿಯವರು ತಮ್ಮ ಬದುಕಿನ ಮೂಲಕವೇ ಜನರಿಗೆ ಸಂದೇಶವನ್ನು ನೀಡಿದರು. ಇದೇ ಅವರನ್ನು ಒಬ್ಬ ವಿಭಿನ್ನ ಪರಿಸರವಾದಿಯನ್ನಾಗಿ ಮಾಡಿದುದು.

**References**

1. R P Mishra, "Facing Environmental Challenges; The Gandhian Way" Anasakti Darshan, 2009
2. R C Sharma, Gandhian Environmentalism, New Delhi: Global Vision, 2003
3. Haridas T Mazumdar, Mahatma Gandhi- Peaceful Revolutionary, Gharles Scribner's Sons, London, 1952
4. Kavita Y Suchak, Development and Environment Issues with Special Reference to Gandhian Perspective.
5. Ramachandra Guha, "Radical American Environmentalism and Wilderness Preservation: A Third World Critique", Environmental Ethics,1989

## ಇಂದ್ರಿಯ ಮನಗಳಾಚಿನ ಪಯಣ ಭಗವದ್ಗೀತೆಯ ಮಾರ್ಗದಲ್ಲಿ

ಟಿ ಎನ್ ಶಿವಕುಮಾರ
ನಿರ್ದೇಶಕರು, ಯೋಗವಶಿಷ್ಠ ಸಂಶೋಧನಾ ಕೇಂದ್ರ ಶ್ರೀವಳ್ಳಿ ಪ್ರಕಾಶನ ನಂ.13, 5ನೇ ಅಡ್ಡ ರಸ್ತೆ, ನರಸಿಂಹರಾಜಾ ಕಾಲೋನಿ
ಬೆಂಗಳೂರು-560019

**ಪ್ರಬಂಧ ಸಾರ:-** ಈ ಜಗತ್ತಿನಲ್ಲಿ ಹುಟ್ಟುತಿರುವ ಪ್ರತಿಯೊಂದು ಜೀವಿಯೂ ತನ್ನ ಮರಣದ ವರೆಗೊ ಏರುಪೇರುಗಳಂದ, ಸೋಲು ಗೆಲುವುಗಳಂದ, ನೋವುನಲಿವುಗಳಂದ ಕೊಡಿದ ಬದುಕಿನ ಪಯಣ ಮಾಡಲೇಬೇಕು- ಮಾನವರಾದ ನಮ್ಮಲ್ಲಿ ಅನೇಕರಿಗೆ ಭಗವದ್ಗೀತೆ ಎಂದ ಕೊಡಲೇ ಮನಸ್ಸು ಕಸಿವಿಸಿಗೊಳ್ಳುತ್ತದೆ ಕಾರಣ ಬೆಣ್ಣೆ ಕಳ್ಳ ಕೃಷ್ಣ ನಮಗೆ ಕೆಲಸ ಮಾಡಲಷ್ಟೇ ಅಧಿಕಾರ, ಆದರೆ ನಮ್ಮ ಕೆಲಸದ ಫಲದ ಮೇಲೆಯಾದ ಅಧಿಕಾರ ಅಥಾವ ಹತೋಟಿಯಾಗಲಿ ಇಲ್ಲವೆಂದು ಹೇಳುತ್ತಾನೆ ಎಂದು ಭಗವದ್ಗೀತೆಯಲ್ಲಿ ಹೇಳುವುದರಿಂದ ಎಂದು ಅನೇಕರು ಹೇಳುತ್ತಾರೆ, ಆದರೆ, ಭಗವದ್ಗೀತೆಯಲ್ಲಿ ನಮಗೆ ಇಂದ್ರಿಯಮನಗಳಾಚೆ ಸಾಗುವ ಬದುಕಿನ ಮಾರ್ಗ ತಿಳಿಸುತ್ತಾದೆ ಎನ್ನುವುದು ನಮ್ಮಲ್ಲಿ ಬಹಳಷ್ಟು ಹೆಚ್ಚು ಜನಗಲ್ಲಿಗೆ ತಿಳಿದೆ ಇಲ್ಲ ಆದ್ದರಿಂದ ಭಗವದ್ಗೀತೆಯ ಮಾರ್ಗದರ್ಶನದ ಬಗ್ಗೆ ಅನೇಕರಿಗೆ ಬೇಸರ ಬರುತ್ತದೆ ಎಂದು ಹೇಳಬಹುದು.

ಮನಸ್ಸು ನಮಗೆಲ್ಲರಿಗೊ ಇದೆ, ಅದರೆ ಪ್ರತಿಯೊಬ್ಬರ ಮನೋಭಾವಗಳು ಸನ್ನಿವೇಶ , ಸಂದರ್ಭ ಹಾಗೂ ಬದುಕಿನ ಪರಿಸ್ಥಿತಿ ಗಳಗೆ ಅನುಗುಣವಾಗಿ ಬದಲಾಗುತ್ತಿರುತ್ತದೆ. ಇದಕ್ಕೆ ಕಾರಣ, ನಾವೆಲ್ಲರೂ ನಮ್ಮ ಇಂದ್ರಿಯಗಳಿಗೆ ಗೋಚರ ಆಗುತ್ತಿರುವ ಪ್ರಾಪಂಚಿಕ ವಿಷಯಗಳನ್ನೇ ನಾನು ಕಂಡದ್ದು ನಾನು ಕೇಳದ್ದು ಸತ್ಯ ಎಂದು ಕೂಂಡು ಇಂದ್ರಿಯಾನುಭವಗಳ ಪ್ರಾಪಂಚಿಕ ವ್ಯವಹಾರಗಳಲ್ಲೇ ನಮ್ಮ ಬದುಕು ತೊಡಗಿಸಿಕೊಂಡಿರುದೇ ಆಗಿದೆ.

ಹುಟ್ಟಿನಿಂದ ಸಾವಿನ ವರೆಗೊ ಬದಲಾಗುತ್ತಿರುವ ನಮ್ಮ ದೇಹದ ಹಾಗೊ ಇಂದ್ರಿಯಾನುಭವಗಳ ಬದಲಾವಣೆಗಳನ್ನೆ ನಾವುಗಳು ಯಾರು ಗಮನಿಸುತ್ತಲೇ ಇಲ್ಲ, ಬದುಕಿನ ಪ್ರತಿ ಕ್ಷಣದ ಇಂದ್ರಿಯಾನು ಭವವೇ ಸತ್ಯವೆಂದು ನಂಬುತ್ತಾ ನಮ್ಮ ಮನಸ್ಸು ಆಸೆ ನಿರಾಸೆಗಳು ತಿಕ್ಕಾಟದ ಬೆಯಗ್ಯಲ್ಲ ಬೆಯುತ್ತಿದೆ ಎಂದು ನಮ್ಮಲ್ಲಿ ಅನೇಕರಿಗೆ ತಿಳದೇ ಇಲ್ಲ ನಮಗೆ ಇಂದ್ರಿಯಗಳ ಮೂಲಕ ಪ್ರಾಪಂಚಿಕ ವಿಷಯ/ವಸ್ತುಗಳ ಅನುಭವ ಬಂದ ಕೊಡಲೇ, ನಮ್ಮ ಮನಸ್ಸು (ನನಗೆ) ಇದು ಬೇಕು ಅಥವಾ ಇದು ಬೇಡ ಎಂಬ ತೊಯ್ದಾಟ್ ಅವನ್ನು ಪ್ರಾರಂಭಿಸುತ್ತದೆ. ಅಗ ನಮ್ಮ ಬುದ್ಧಿ ಇದು (ನನಗೆ) ಹೀಗೆ, ಇಂತಲ್ಲಿ, ಇಷ್ಟು ಬೇಕು ಅಥಾವ ಬೇಡ ಎಂದು ನಿರ್ಧರಿಸುತ್ತಾದೆ. ನಮ್ಮ ಬದುಕಿನ ಬೇಕು ಬೇಡಗಳ ಪೂರೈಕೆಗಳ ಆಧಾರದ ಮೇಲೆ ನಮ್ಮ ಅಹಂಕಾರ ನೋವು ನಲಿವುಗಳನ್ನು ಬದುಕಿನಲ್ಲಿ ಅನುಭವಿಸುತ್ತದೆ. ಆದರೇ, ನಮ್ಮ ಬದುಕಿನ ಎಲ್ಲತರಹದು ಬೇಕು ಬೇಡಗಳೊ ನಮ್ಮಂತರಂಗದಲ್ಲಿರುವ ಹಿಂದಿನ ಬದುಕಿನ ಅನುಭವಗಳ ಆಧಾರದ ಮೇಲೆ ನಿರ್ಧರಸಲ್ಪಡುತ್ತದೆ ಎನ್ನುವುದು, ನಮಗೆ ಯಾರಿಗೊ (ಹೆಚ್ಚಿನ ಜನಗಳಗೆ) ತಿಳದೇ ಇಲ್ಲ ಎಂದು ಸಹ ಹೇಳಬಹುದು.

ನಾನು ಈಗ ತಿಂದ ಒಂದು ತಿನಿಸಿನ ಸಂತಸದ ಅನುಭವ ಮತ್ತೆ ನನಗೆ ಅದೇ ತಿನಿಸಿನ್ನು ಹೊಸದಾಗಿ ತಯಾರಿಸಿದ ನಂತರ( ಅಂದರೆ ಭವಿಷತ್ತಿನಲ್ಲಿ/ ಮುಂದಿನ ಅಗಿನ ಸಮಯದಲ್ಲಿ) ಸಿಗುತ್ತದೆ ಎಂಬುದು ಖಂಡಿತ ಸಾಧ್ಯವಿಲ್ಲ ಕಾರಣ ಅ ತಿನಿಸನ್ನು ತಯಾರಿಸಿ ಮುಗಿಸಿ

ತಿನ್ನುವ ವೇಳೆಗೆ ನಮ್ಮ ದೇಹದ, ಮನಸ್ಸಿನ , ಪರಿಸ್ಥಿತಿಗಳು, ಸಂದರ್ಭಗಳು ನಮಗೆ ಈಗ ಆಗುತ್ತಿದ್ದಂತೆಯೇ ಇಖುವುದಿಲ್ಲ ಹಾಗೂ ಅನೇಕ ನಮಗೆ ತಿಳಿಯದ ಕಾರಣಗಳಿಂದ ಬದಲಾಗುವ ಸಾಧ್ಯತೆಗಳೂ ಹೆಚ್ಚು ಆದ್ದರಿಂದಲೇ ಭಗವದ್ಗೀತೆಯಲ್ಲಿ ನಮಗೆ ತಿನ್ನಬೇಕೆನ್ನಿಸುವ ಅಥಾವ ಮಾಡಬೇಕೆನ್ನಿಸುವ ಕೆಲಸವನ್ನು ಈಗ ಮಾಡಲಷ್ಟೆ ನಮಗೆ ಅಧಿಕಾರ, ಅದರೇ ನಾವು ಈಗ ಅನುಭವಿಸಬೇಕೆಂದು ಬಯಸುವ ಫಲ(ಗಳ)ವನ್ನು ಮುಂದೆ ಕೆಲಸ/ ತಿನಿಸಿನ ತಯಾರಿ ಮುಗಿದನಂತರ ಪಡೆಯಲು ಸಾಧ್ಯವಿಲ್ಲ ಎಂದು ಸುಚಿಸುವ ಕ್ಷುಮ ವಾದ ಅರಿವು ನಮ್ಮ ಗಮನಕ್ಕೆ ಬರುವುದಿಲ್ಲ ಆದ್ದರಿಂದಲೇ ನಮ್ಮಲ್ಲಿ ಅನೇಕರಿಗೆ ಭಗವದ್ಗೀತೆಯಲ್ಲಿ ನಮಗೆ ಕೆಲಸ ಮಾಡಲಷ್ಟೆ ಹೇಳುತ್ತಾದೆ, ಫಲವನ್ನು ಬಯಸಬೇಡ ಎಂದು ಹೇಳುತ್ತದೆ ಎಂದು ತಪ್ಪಾಗೆ ತಿಳಿದುಕೊಂಡು ಭಗವದ್ಗೀತೆಯ ಬಗ್ಗೆ ತಿರಸ್ಕಾರ, ಬೇಸರ, ಅಸಡ್ಡೆಗಳು ಉಂಟಾಗಿದೆ ಎಂದೂ ಹೇಳಬಹುದು.

ಇಂದಿನ ವ್ಯವಿಜ್ಞಾನಿಕವಾಗಿ ಮುಂದುವರೆದಿರುವ ಪ್ರಪಂಚದಲ್ಲಿ ಇಂದ್ರಿಯಾನುಭವಗಳ ಪ್ರಾಪಂಚಿಕ ವಿಷೆಯ ಹಾಗೂ ವಸ್ತುಗಳನ್ನು ಪಡೆಯಬೇಕೆಂಬ ಅತಿ ಶೀಘ್ರವಾದ ಓಟದಲ್ಲಿ ಮಾನವರ ಮನಸ್ಸು ಅನೇಕರ ತರಹ ಆತಂಕ, ಭಯ ಬೇಸರ,ಖಿನ್ನತೆ ಮುಂತಾದ ತೊಂದರೆಗಳಲ್ಲಿ ಸಿಕ್ಕಿ ಮಾನವ ದೇಹ ಅನೇಕ ವಿಧವಾದ (ಹಿರಿದೆ ಕೆಲವು ದಶಕಗಳ ಮುಂಚೆ ಕಂಡೆರಿಯದ) ಮನೋದೈಹಿಕ ಖಾಯಿಲೆಗಳಿಂದ ನರಳುತ್ತದೆ.

ಹೆಚ್ಚಾಗಿ ಇಂದಿನ ಸಮಾಜದ ಯುವಕರು ಹಾಗೂ ಮಧ್ಯವಯಸ್ಸಿನ ನಡುಗಾಲದ ಬದುಕಿನ ಮಾನವರು ವಿಶ್ವಾದ್ಯಂತ ಮನೋದೈಹಿಕ ಭಾದೆ ಹಾಗೂ ಖಾಯಿಲೆಗಳಿಗೆ ತುತ್ತಾಗುತ್ತಿರುವುದು ಬಹಳ ಶೋಚನೀಯ ಪರಿಸ್ಥಿತಿ ಅಧುನಿಕ ಪ್ರಪಂಚದ ಮಾನವ ಸಮಾಜ ಎದುರಿಸುತ್ತಾದೆ. ಈ ರೀತಿಯ ಮನೋದೈಹಿಕ ಬಾಧೆಗಳ ತೊಳಲಾಟದಿಂದ ಮಾನವ ಬದುಕನ್ನು ರಕ್ಷಿಸಿಕೊಳ್ಳವ ಜವಾಬ್ದಾರಿ, ಈಗ ನಮ್ಮೆಲ್ಲರದ್ದೊ ಆಗಿದೆ.

ಆದ್ದರಿಂದ ಈಗ ಮನೋದೈಹಿಕ ಅನುಭವಗಳೇ ಸತ್ಯವೆಂದು ಭಾವಿಸುತ್ತಾ ಪ್ರಾಪಂಚಿಕ ಸುಖಗಳನ್ನು(ಗಳನ್ನು) ಪಡೆಯ ಬೇಕೆಂಬ ಹಂಬಲದಿಂದ ಪ್ರಾಪಂಚಿಕತೆಗಳ ಕಡೆಗೆ ಸಾಗುತ್ತಿರುವ ನಮ್ಮ ಬದುಕಿನ ಪಯಣವನ್ನು ಇಂದ್ರಿಯ ಮನಗಳಾಚಿನ ಪಯಣ ಮಾಡುವುದರಿಂದ, ನಮ್ಮ ಬದುಕಿನಲ್ಲಿ ಅನೇಕ ತರಹವಾದ ಮನೋದೈಹಿಕ ತೊಂದರೆಗಳಿಂದ ರಕ್ಷಣೆ ಪಡೆಯಬಹುದು ಎಂದು ತಿಳಿದುಕೊಳ್ಳಬೇಕಾದ ಅವಶ್ಯಕತೆ ನಮಗೆ, ಈಗ ಅತಿಹೆಚ್ಚಾಗಿ ಇದೆ.

ತಲೆತಲಾಂತರಗಳಿಂದ ಇಂದ್ರಿಯಾನುಭವಗಳ ಪ್ರಾಪಂಚಿಕ ಬದುಕಿನ ಕಡೆಗೆ ಸಾಗುತ್ತಿರುವ ನಮ್ಮ ಇಂದಿನ ಬದುಕಿನ ಪಯಣವನ್ನು. ಇಂದ್ರಿಯ ಮನಗಾಳಚಿನ ಪಯಣದತ್ತತಿರುಗಿಸುವುದರಿಂದ ನಮ್ಮ ಇಂದಿನ ಬದುಕನ್ನು ಶಾಂತಿ ಹಾಗೂ ಸಂತಸಗಳಿಂದ ತುಂಬುವ ಪಯಣದ ಮಾರ್ಗವನ್ನು ಈಗ ನಾನು ಈ ಸಂಕ್ಷಿಪ್ತ ಪ್ರಬಂಧದ ಮೂಲಕ ತಮ್ಮೆಲ್ಲರ ಮುಂದೆ ಇಡಲು ಬಯಸುತ್ತೇನೆ. ತಮ್ಮ ವಿಚಾರಾತ್ಮಕ ಬದುಕಿನ ತಮ್ಮ ಪಯಣವನ್ನು ಆರಿಸಿಕೊಳ್ಳುವ ಅಯ್ಕೆಯ ಸ್ವಾತಂತ್ರ್ಯ ಎಂದೆಂದಿಗೂ ತಮ್ಮದೇ ಆಗಿರುತ್ತದೆ ಎಂದೊ ಕೊಡ ಇಲ್ಲಿ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

**ಪೀಠಿಕೆ** : ನಮ್ಮ ಸಮಾಜದಲ್ಲಿ ಅನೇಕರು ಭಗವದ್ಗೀತೆ ಎಂದ ಕೂಡಲೇ, ಅದು ನಮಗೆ ಕೆಲಸ ಮಾಡಲಷ್ಟೇ ಆಧಿಕಾರ, ಅದರೆ ನಮ್ಮ ಕೆಲಸದ ಫಲ ಅಥಾವ ಫಲಿತಾಂಶ ಅಥವಾ ಪರಿಣಾಮದ ಮೇಲೆ ಅಧಿಕಾರವಿಲ್ಲ ಎಂದು ತಿಳಿಸುವ ಗ್ರಂಥ, ಅದ್ದರಿಂದ ಈ ಪುಸ್ತಕದ ಮೇಲೆ ನಮಗೆ ಒಲವಗಲ್ಲಿ ಗೌರವಾಗಲ್ಲಿ ಇಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

ಆದರೆ, ನಮ್ಮ ಈಗ ಪ್ರಾರಂಭಿಸಿದ ಕೆಲಸ ಮುಗಿಯುವ ಅಥಾವ ಫಲ ಕೊಡುವ ವೇಳೆಗೆ (ಆಂದರೆ ಭವಿಷ್ಯದಲ್ಲಿ ಅಥಾವ ಮುಂದಿನ ಸಮಯದಲ್ಲಿ) ನಾವು ಈಗ ಅನುಭವಿಸಲು ಬಯಸುವ ಫಲಗಳು ಅಥಾವ ಫಲಿತಾಂಶ ಅಥಾವ ಪರಿಣಾಮಗಳ, ಸನ್ನಿವೇಶ, ಸಂದರ್ಭ ಹಾಗು ಸ್ಥಿತಿಗತಿಗಳನ್ನು ಇಂದಿನಂತೆಯೋ ಅಥಾವ ಈಗಿನಂತೆಯೇ ಅಗ ಮುಂದೆ ಕೆಲಸ ಮುಗಿಯುವ ಸಮಯಕ್ಕೆ ಕಾಯ್ದಿರಿಸಿಕೋಳ್ಳಲು ಯಾರಿಗೂ ಸಾಧ್ಯವೇ ಇಲ್ಲ, ಎಂಬುದನ್ನು ನಾವು ಯಾರು ಗಮನಿಸಿ ಅರಿತುಕೊಳ್ಳವ ಪ್ರಯತ್ನವೇ ಮಾಡುತ್ತಿಲ್ಲ ಎನ್ನುವುದು, ನಮ್ಮೇಲ್ಲರ ಇಂದಿನ ಪರಿಷ್ಥಿತಿ ಆಗಿದೆ.

ನಾನು ಈಗ ತಿಂದ ತಿನಿಸು, ನನಗೆ ರುಚಿಸಿದಂತೆ, ಮುಂದೆ ( ಭವಿಷ್ಯದಲ್ಲಿ) ಅದೇ ತಿನಿಸನ್ನು ತಯಾರಿಸಿ ತಿನ್ನುವವೇಳೆಗೆ ನನ್ನ ಈಗಿನ ಮನೋದೈಹಿಕ ಪರಿಸ್ಥಿತಿ , ಈಗಿನಂತೆ ಅಗಲೂ ಇರಿಸಿ ಕೂಳ್ಳಲು ನಮಗೆ ಯಾರಿಗೂ ಸಾಧ್ಯವೇ ಇಲ್ಲ ಎನ್ನುವುದನ್ನು, ನಾವುಗಳು ಯಾರು ಒಪ್ಪಿಕೊಳ್ಳಲೇ. ಸಿದ್ದ ಇಲ್ಲದಿರುವುದೇ, ನಮೆಲ್ಲರ ಮನೋದೈಹಿಕ ಬಾಧೆಗಳಿಗೆ ಕಾರಣ ಎಂದು ಅರಿತುಕೂಳ್ಳುವ ಪ್ರಯತ್ನವನ್ನು ಮಾಡುತ್ತಿಲ್ಲ. ಅದ್ದರಿಂದಲೇ ನಮ್ಮಲ್ಲಿ ಅನೇಕರು ಮುಂದೆ ಸಂಭವಿಸಬಹುದಾದ ಫಲ, ಫಲಿತಾಂಶ, ಪರಿಣಾಮಗಳ ಹತೋಟಿ ನಿನ್ನ ಈಗಿನ ಕೆಲಸಕ್ಕೆ ಇಲ್ಲ ಎಂಬ ಭಗವದ್ಗೀತೆಯ ಮಾತು ನಮಗೆ ಕಹಿ ಅನ್ನಿಸುವುದು ಸಹಜ.

ಇಲ್ಲಿ ನಾವೆಲ್ಲರೂ ಭಗವದ್ಗೀತೆಯ ಈ ಮಾತಿನ ಮೇಲೆ ಕೋಪಗೊಳ್ಳು ತ್ತಿರುವ ಕಾರಣ, ನಮ್ಮೆಲ್ಲಿ ಅನೇಕರು. ಈ ಮಾತಿನ ಮುಂದಿನ ಎಚ್ಚರಿಕೆ ಮಾತಾದ “ ಫಲದ ಮೇಲೆ ನಿನಗೆ ಅಧಿಕಾರ/ಹತೋಟಿ ಇಲ್ಲವೆಂಬ ಕಾರಣದಿಂದ– ನಿನ್ನ ಈಗಿನ ಕರ್ತವ್ಯ ಕೆಲಸವನ್ನು ಮಾಡದೇ/ ಮಾಡಿಮುಗಿಸದೇ ಇರಬೇಡ ಎಂಬುದನ್ನು ಗಮನಿಸಿ ಅರಿತುಕೂಳ್ಳುವ ಗೊಜಿಗೆ ನಾವುಗಳು ಯಾರು ಪ್ರಯತ್ನ ಪಡದಿರುವುದೇ ಆಗಿದೆ. ಆಂದರೇ ಭಗವದ್ಗೀತೆ ಮಾತಿನ ಅರ್ಥ ಹೀಗೆ ಆಗುತ್ತದೆ– ಉದಾಹರಣೆ ಖಾಯಿಲೆ ಬಂದ ವೇಕ್ತಿಗೆ ಈಗ ಚಿಕಿತ್ಸೆ ಕೊಡಿಸುವುದರಿಂದ ಆ ವೇಕ್ತಿ ಗುಣ ಹೊಂದುತ್ತಾನೋ, ಸಾಯುತ್ತಾನೋ ನಿನ್ನ ಈಗಿನ ಪರಿಸ್ಥಿತಿಗಳ ಅಧೀನದಲ್ಲಿ ಇಲ್ಲ. ಹಾಗೆಂದಾಕ್ಷಣ, ಈಗ ರೋಗಿಗೆ ನೀಡಬೇಕಾದ ಅವಶ್ಯಕವಾದ ಚಿಕಿತ್ಸೆಗಳನ್ನು ಕೊಡುವ ( ಕೆಲಸವನ್ನು ಮಾಡದೇ ಇರಬೇಡ ಎಂಬುದೆ ಅಗಿದೆ. ಇದೇ ರೀತಿಯಲ್ಲಿ ನಮ್ಮ ಬದುಕಿನ ಪ್ರತಿ ಒಂದು ಕೆಲಸವನ್ನು ನಾವು ಶ್ರದ್ದೆಯಿಟ್ಟು ಭಗವದ್ಗೀತೆ ನೀಡಿರುವ ಮಾರ್ಗದಲ್ಲಿ ನಡೆದರೆ,

ನಾವು ಯಾರು ಬೇಕಿದ್ದರೂ ಅನೇಕ ತರಹದ ನಮ್ಮ ಬದುಕನ್ನು ಸಂತಸವಾಗಿ ನಡೆಸಲು ಸಾಧ್ಯವಿದೆ.

ಹಾಗಾದರೆ, ನಾವು ಈಗ ಅತಿ ಮುಖ್ಯವಾಗಿ ಅರಿತುಕೂಳ್ಳಬೇಕಾದ ವಿಷಯವೆಂದರೇ.

ನಮ್ಮ ದೇಹ ಹೇಗೆ ಆಗಿದೆ?

ಪ್ರತಿ ಜೀವಿಯ ಗಂಡು ಮತ್ತು ಹೆಣ್ಣುಗಳ್ಳು ಕೂಡುವುದರಿಂದ ಅ ಜೀವಿಯ ದೇಹ ಬರುತ್ತದೆ ಎಂದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇದೆ. ಆದರೆ ಭಗವದ್ಗೀತೆ ನಮ್ಮ ದೇಹದ ರಚನೆ ಹಾಗೂ ಅದರೆ ಬದುಕಿನ ವ್ಯವಹಾರಗಳ ಸಂಷೇಪವಾಗಿ ಹೀಗೆ ವಿವರಿಸುತ್ತಾದೆ.

ಮಹಾಭೂತಾನ್ಯಹಂಕಾರೋ ಬುದ್ದಿರವ್ಯಕ್ತಿಮೇವಚ!
ಇಂದ್ರಿಯಾಣಿ ದಶ್ಯೈಕಂ ಚ ಪಂಚ ಚೇಂದ್ರಿಯಗೋಚರಾಃ!
ಭಗೀ-13-5

ಇಚ್ಚಾದ್ವೇಷ ಸುಖಂ ದುಃಖಂ ಸಂಘಾತಶ್ಚೇತನಾದ್ರುತಿಃ!
ಏತತ್ ಸಮಾಸೇನ ಸವಿಕಾರಮುದಾಹ್ರತಮ್!!
ಭಗೀ-13-6

ಪಂಚಮಹಾಭೂತಗಳು, ಅಹಂಕಾರ, ಬುದ್ಧಿ ಅವ್ಯೆಕ್ತಿ, ಹತ್ತು ಇಂದ್ರಿಯಗಳು ಮತ್ತು ಮನಸ್ಸು 5 ಇಂದ್ರಿಯ ವಿಷೆಯಗಳು. ಇಚ್ಛೆ, ದ್ವೇಷ, ಸುಖ, ದುಃಖ, ಸಂಘಾತ, ಚೇತನ, ಧ್ರುತಿ ಇವು ಕ್ಷೇತ್ರ. ಇವು ವಿಕಾರದಿಂದ ಕೂಡಿದೆ. ಇದನ್ನು ಸಂಕ್ಷೇಪವಾಗಿ ಹೇಳಲ್ಪಟ್ಟಿತು.

ಇಲ್ಲಿ ನಮ್ಮ ದೇಹ ಭೂಮಿ, ನೀರು ತೇಜಸ್ಸು /ಬೆಂಕಿ/ಶಾಖ/ ಗಾಳಿ ಮತ್ತು ಅಕಾಶಗಳೆಂಬ 5 ಮಹಾಭೂತಗಳಿಂದ ಮಾಡಲ್ಪಟ್ಟಿದೆ ಎಂದು ವಿವರಿಸಿದೆ. ನಂತರ ಪ್ರತಿ ಜೀವಿ ತನ್ನ ದೇಹವನ್ನೇ ತಾನು/ ನಾನು ತಿಳಿದುಕೂಂಡು ಆಹಂಕಾರದಿಂದ ತನ್ನ ಬದುಕಿನಲ್ಲಿ ವ್ಯೆವಹರಿಸಿ ತೂಡಗುತ್ತದೆ. ಇಂಥಹ ಬದುಕನ್ನು ಪ್ರತಿಯೊಂದು ಜೀವಿಯೂ ತನ್ನ ಬುದ್ಧಿಯಿಂದ ನಡೆಸಲು ಪ್ರಾರಂಭಿಸುತ್ತದೆ. ಆಂದರೇ, ತನ್ನ ಬದುಕಿನಲ್ಲಿ ಯಾವುದನ್ನು, ಹೇಗೆ, ಏಕೆ, ಎಲ್ಲಿ, ಎಷ್ಟು, ಯಾವಾಗ ಮಾಡಬೇಕು ಅಥವಾ ಮಾಡಬಾರದು ಎಂಬುದನ್ನು ಬುದ್ಧಿ ಪ್ರತಿಜೀವಿಯ ಬದುಕಿನಲ್ಲೂ ನಿರ್ಧರಿಸುತ್ತಾದೆ. ಇಂಥಹ ಬುದ್ಧಿ ಎಲ್ಲ ಜೀವಿಗಳಲ್ಲೂ ಬರಬೇಕಾದರೆ ಅದಕ್ಕೆ ಒಂದು ಮೂಲ ಇರಬೇಕು. ಆ ಮೂಲ ಅಹಂಕಾರವೇ ನಮ್ಮೆಲ್ಲರ ದೇಹಗಳಾಗುವುದಕ್ಕೆ 5 ಮಹಾಭೂತಗಳಿದ್ದಂತೆ ಅವ್ಯಕ್ತಿ ಅಥಾವ ತಿಳಿಸಲಾಗದಂಥಹ ಮೂಲ ಅಹಂಕಾರವಾಗಿ ಇದೇ.

ಇಲ್ಲಿಂದ ಮುಂದೆ ನಮಗೆಲ್ಲ ದೇಹದ ಮೂಲಕ ನಮ್ಮ ಬದುಕಿನ ವ್ಯವಹಾರಗಳನ್ನು ನಡೆಸಲು ನಮ್ಮ ದೇಹದಲ್ಲಿ 5 ಕರ್ಮೇಂದ್ರಿಯಗಳು, ಮಾತು, ಕ್ಯೆ, ಕಾಲು, ಜನನ ಮತ್ತು ಮಲ ವಿಸರ್ಜನ ಇಂದ್ರಿಯಗಳು ಮತ್ತು 5 ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಎಂಬ ಜ್ಞಾನೇಂದ್ರಿಗಳು(ಒಟ್ಟು ಹತ್ತು ಇಂದ್ರಿಯಗಳು) ಇದೆ.

ಇವುಗಳ ಸಹಾಯದಿಂದ ನಾವು ಶಬ್ದ, ಮುಟ್ಟುವಿಕೆ, ಆಕಾರ, ರುಚಿ ಹಾಗೂ ವಾಸನೆ ಎಂಬ 5 ವಿಷೆಯಗಳನ್ನು ಪ್ರಾಪಂಚಿಕ ವಸ್ತು ವಿಷಯಗಳ ಬಗ್ಗೆ ತಿಳಿದುಕೂಳ್ಳುತೇನೆ.

ಈ ಪ್ರಾಪಂಚಿಕ ವಸ್ತು ಹಾಗೂ ವಿಷೆಯಗಳೂಡನೆ. ಸಂಘಾತ ಅಥಾವ ಸಂಬಂಧಗಳನ್ನು ನಮ್ಮ ಇಂದ್ರಿಯಗಳ ಮೂಲಕ ಕಲ್ಪಿಸುವ ಸಲಕರಣೆಯೇ "ನಮ್ಮ ಮನಸ್ಸು" ಜಗತ್ತಿನ ಪ್ರತಿಯೂಂದು ಜೀವಿಯ ಹಾಗೂ ಮನುಷ್ಯರ ವ್ಯವಹಾರಗಳು ಬದುಕಿನಲ್ಲಿ ಬೇರೆ ಬೇರೆ ಆದ ತಮ್ಮದೇ ಆಕಾರಗಳಲ್ಲಿ ಇರುತ್ತವೆ. ಒಬ್ಬರಿಗೆ ಮೆಚ್ಚುಗೆ ಆದದ್ದು ಇನೋಒಬ್ಬರಿಗೆ ಇಷ್ಟವಾಗದೇ ಇರಬಹುದು. ಅದ್ದರಿಂದ ಜಗತ್ತಿನ ಎಲ್ಲ ತರಹದ ವ್ಯವಹಾರಗಳೂ ತಮ್ಮದೇ ಅದ ಆಕಾರ ವಿಕಾರಗಳಲ್ಲಿ ಸಂಭವಿಸುತ್ತಿದೆ. ಆದರೇ, ಪ್ರತಿಯೂಬ್ಬರಿಗೂ ಒಂದು ವಿಷೆಯ ಅಥವಾ ವಸ್ತುವಿನ ಬಗ್ಗೆ ಇಚ್ಛೆಯಾಗಲಿ, ದ್ವೇಷವಾಗಲ್ಲಿ ಊಂಟಾಗಬೇಕಾದರೆ, ಅವರ ಮನಸ್ಸೇ ಅದಕ್ಕೆ ಕಾರಣವಾಗುತ್ತದೆ. ನಮ್ಮ ಜೀವ ನಮ್ಮ ದೇಹದ ಬದುಕಿನ ಚ್ಯೆತನ್ಯ ತುಂಬುವ ಚೇತನವಾಗಿದೆ. ಹೀಗೆ ನಮ್ಮ ದೇಹದ ಮುಖಾಂತರ ಸಾಗುತ್ತಿರುವ ನಮ್ಮ ಬದುಕಿನ ಪಯಣದ ರಚನೆ ಹಾಗೂ ವ್ಯವಹಾರಗಳ ಸಂಕ್ಷೇಪ ವಿವರಣೆ ಹೀಗೆ ಭಗವದ್ಗೀತೆ ವಿವರಿಸುತ್ತಾದೆ ಹಾಗಾದರೆ ನಾವು ಈಗ ನಾವು ತಿಳಿದುಕೂಳ್ಳಬೇಕಾದ ಮುಂದಿನ ವಿಷೆಯವೇನೆಂದರೇ ದೇಹದ ಮೂಲಕ ನಮ್ಮ ಬದುಕು ಹೇಗೆ ಸಾಗುತ್ತದೆ:

ನಮ್ಮೆಲ್ಲರ ಜಗತ್ತಿನ ಬದುಕಿನ ವ್ಯವಹಾರಗಳ ಬಗ್ಗೆ ನಮಗೆಲ್ಲಾ ಸಾಮಾನ್ಯವಾಗಿ ತಿಳಿದಿರುವುದೇನೆಂದರೇ ಈ ಪ್ರಪಂಚದಲ್ಲಿ ಹುಟ್ಟಿದ ಪ್ರತಿ ಜೀವಿ/ ವ್ಯಕ್ತಿ ಸಾಯುವವರೆಗೆ ಹೇಗೋ ಬದುಕಿದ್ದು ಒಂದು ದಿನ ಸಾವಿಗೀಡಾಗುತ್ತಾರೆ ಎಂದಷ್ಟೆ. ಆದರೆ, ಮಾನವರಾದ ನಾವು, ನಮ್ಮ ಬದುಕನ್ನು ಅದಷ್ಟು ಸಂತಸ, ಸುಖ ಹಾಗು ಶಾಂತಿಯಿಂದ ಬದುಕಲು ಬಯಸುತ್ತೇವೆ. ಆದ್ದರಿಂದ ಈಗ ನಾವು ನಮ್ಮ ಬದುಕು ನಮ್ಮ ದೇಹದ ಮೂಲಕ ಹೇಗೆ ನಡೆಯುತ್ತದೆ ಎಂಬುದನ್ನು ಸರಿಯಾಗಿ ತಿಳಿದುಕೂಳ್ಳಬೇಕಾದ ಅವಶ್ಯಕತೆ ನಮಗೆ ಇದೆ ಇದನ್ನು ಭಗವದ್ಗೀತೆಯಲ್ಲಿ ಹೀಗೆ ವಿವರಿಸಲಾಗಿದೆ. ಇಂದ್ರಿಯಾಣಿ

ಮನೋಬುದ್ಧಿ ರಸ್ಯಾಧಿಷ್ಠಾನಮುಚ್ಯೆತೇ!ಎತ್ಯೆವಿ
ಮೋಹಯತ್ಯೇಷ ಜ್ಞನ ಮಾವೃತ್ಯ ದೇಹಿನಮ್!!
ಭಗೀ 3-40

ಇಂದ್ರಿಯ, ಮನಸ್ಸು, ಬುದ್ಧಿ ಇವೇ ಕಾಮಕ್ಕೆ (ಆಸೆಗೆ) ಆಶ್ರಯ ಸ್ಥಾನಗಳು. ಕಾಮ (ಆಸೆ) ಇವುಗಳ ಮೂಲಕ ಮುಕ್ತಿ ಜೀವಿಯನ್ನು ಮೋಹಗೂಳಿಸುವುದು

ಅಂದರೇ, ನಮ್ಮ ಪ್ರಪಂಚದಲ್ಲಿರುವ ಅನೇಕ ವಸ್ತು ಮತ್ತು ವಿಷೆಯಗಳ ಇರುವಿಕೆಯ ಬಗ್ಗೆ ಅರಿವನ್ನು ನಮ್ಮ ಕಣ್ಣು, ಕಿವಿ, ಮೂಗು, ನಾಲಿಗೆ, ಹಾಗು ಚರ್ಮ ಎಂಬ 5 ಜ್ಞಾನೇಂದ್ರಿಯುಗಳು ನಮಗೆ ಉಂಟುಮಾಡುವತ್ತವೆ. ಆಗ ನಮ್ಮ ಮನಸ್ಸು ಇವುಗಳ ಬಗ್ಗೆ ಬೇಕೆಂಬ ಇಚ್ಛೆ ಅಥಾವ ಬೇಡವೆಂಬ ದ್ವೇಷದ ಮನೋಭಾವಗಳನ್ನು ನಮ್ಮಲ್ಲಿ ಉಂಟುಮಾಡುತ್ತದೆ. ಆಗ ಬೇಕೆಂಬುದನ್ನು ಪಡೆಯಲು ಅಥವಾ ಬೇಡವೆಂಬುದನ್ನು ದೂರ ಮಾಡಿಕೂಳ್ಳಲು ಹೀಗೆ ನಮ್ಮ ಕ್ಯೆ, ಕಾಲು, ಮಾತು ಮತ್ತು ಎರಡು ಗುಹ್ಯೆಂದ್ರಿಯಗಳೆಂಬ ಕರ್ಮೇಂದ್ರಗಳು ಕೆಲಸಮಾಡಬೇಕೇಂಬ " ನಮ್ಮ ಬುದ್ಧಿ " ನಿರ್ಧರಿಸುತ್ತದೆ ತದನಂತರದಲ್ಲಿ ನಮ್ಮ ದೇಹ, ನಮ್ಮದೇ ಅದ ವ್ಯವಹಾರಗಳಲ್ಲಿ ಆಸೆಯಿಂದ ಜೀವನ ಪಯಣ ನಡೆಸ ತೂಡಗುತ್ತದೆ. ಇಲ್ಲಿಂದ ಮುಂದಕ್ಕೆ ನಾವು ತಿಳಿದುಕೂಳ್ಳಬೇಕಾದ ಮುಖ್ಯ ವಿಷೆಯ.

ಇಂದ್ರಿಯ ಮನಗಳ ಮೂಲಕ ಬದುಕು ಹೇಗೆ ಸಾಗುತ್ತದೆ?

ನಾವು ಹುಟ್ಟದಂದಿನಿಂದ ಸಾಯುವವರೆವಿಗೂ ನಮಗೆ ಬದುಕಲು ಅನೇಕ ವಸ್ತು ಹಾಗು ವಿಷೆಯಗಳ ಅವಶ್ಯಕತೆ ನಮಗೆಲ್ಲರಿಗೂ

ಇದೆ. ಆದರೆ, ಇಂಥಹಾ ಬದುಕನ್ನು ನಾವು ನಮ್ಮ ಇಂದಿನ ದೇಹದ ಮೂಲಕವೇ ನಡೆಸಬೇಕ್ಕಾಗಿ ಇರುವುದರಿಂದ, ನಮ್ಮ ದೇಹದಲ್ಲಿರುವ ಇಂದ್ರಿಯ ಮನಮುಂತದವು ನಮ್ಮ ಬದುಕಿನ ಪಯಣವನ್ನು ಹೇಗೆ ನಡೆಸುತ್ತಾದೆ?

ಎನ್ನುವುದನ್ನು ನಾವು ಸರಿಯಾಗಿ ತಿಳಿದುಕೂಳ್ಳಬೇಕಾದ ಅವಶ್ಯಕತೆ ಎಂದೆಂದಿಗೂ ಇದೆ. ಇದರ ವಿವರಣೆ ಶ್ರೀ ಕ್ರಿಷ್ಣ ಹೀಗೆ ನೀಡುತ್ತಾನೆ.

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ!
ಮನಸಸ್ತು ಪರಾಬುದ್ಧಿರ್ಯ ಬುದ್ಧೇಃ ಪರತಸ್ತು ಸಃ!!
ಭಗೀ ೩–

ಇಂದ್ರಿಯಗಳ ಹೆಚ್ಚಿನವು ಎಂದು ಹೇಳುತ್ತಾರೆ. ಇಂದ್ರಿಯಗಳಂಗಿಂತ ಮನಸ್ಸು ಹೆಚ್ಚಿನದು, ಮನಸ್ಸಿಗಿಂತ ಬುದ್ಧಿ ಹೆಚ್ಚಿನದು, ಆದರೆ ಯಾರು ಬುದ್ಧಿಗಿಂತ ಹೆಚ್ಚಿನದೋ ಅವನ ಅತ್ಮ.

ಈ ವಿವರಣೆಯಿಂದ ನಮಗೆ ಸರಿಯಾಗಿ ತಿಳಿದುಬರುವ ಅರಿವೇನೆಂದರೇ– ಕೇವಲ ನಮ್ಮ ದೇಹದಿಂದ ನಮ್ಮ ಬದುಕನ್ನು ನಡೆಸಲು ಸಾಧ್ಯವಿಲ್ಲ. ದೇಹಕ್ಕಿಂತ ಮಿಗಿಲಾಗಿ ಇಂದ್ರಿಯಗಳು ಪ್ರಾಪಂಚಿಕ ವಿಷಯಗಳನ್ನು ಗ್ರಹಿಸಿ, ಆವುಗಳ ಇರುವಿಕೆ ಅರಿವನ್ನು ನಮಗೆ ಮೂಢಿಸುತ್ತದೆ. ಉದಾಹರಣೆಗೆ ನಮ್ಮ ಕಣ್ಣಿಗೆ ಸರಿಯಾಗಿ ಕಾಣದಿದ್ದರೆ, ಕಿವಿಗೆ ಸರಿಯಾಗಿ ಕೇಳದಿದ್ದರೆ ನಮ್ಮ ಬದುಕಿನ ಪಯಣದಲ್ಲಿ ಅಗುವ ಅಪಘಾತ ಅಥವಾ ತೂಡಕುಗಳ ಬಗ್ಗೆ ನಮ್ಮಗೆಲ್ಲಾ ತಿಳಿದೇ ಇದೆ. ಆದ್ದರಿಂದಲೇ ನಮ್ಮ ಬದುಕುನಲ್ಲಿ ನಮ್ಮ ದೇಹದಲ್ಲಿರುವ ಇಂದ್ರಿಯಗಳು ಹೆಚ್ಚಿನ ಕೆಲಸ ಮಾಡುತ್ತವೆ. ಎಂದು ತಿಳಿದು ಬರುತ್ತದೆ.

ಆದರೂ ಸಹ, ನಮಗೆ ಪ್ರಾಪಂಚಿಕ ವಸ್ತುವಿಷೆಯಗಳ ಬಗ್ಗೆ ನಮ್ಮ ಇಂದ್ರಿಯಗಳು ಕೂಟ್ಟ ಅಥವಾ ಕೊಡುವ ಮಾಹಿತಿಯ ಬಗ್ಗೆ , ನಮ್ಮ ಮನಸ್ಸು ಆಸಕ್ತಿ ತೂರದಿದ್ದರೆ. ಅಂತಹ ಮಾಹಿತಿಯಿಂದ ನಮಗೆ ಏನೂ ಪ್ರಯೋಜನವಿಲ್ಲ. ಉದಾಹರಣೆಗೆ ನಮಗೆ ಮಾರುಕಟ್ಟೆಯಲ್ಲಿ ಅನೇಕ ತರಹದ ನೋಟ, ಶಬ್ದ ಕೆಲವೊಮ್ಮೆ ಸ್ಪರ್ಶ (ಮುಟ್ಟುವಿಕೆ) ಹಾಗು ವಾಸನೆಗಳ ಅನುಭವಗಳು (ನಮ್ಮ ಜ್ಞಾನೇಂದ್ರಿಯಗಳ ಮೂಲಕ) ಆಗುತ್ತಿದ್ದರೂ ಅವುಗಳನ್ನು ಯಾವುದನ್ನು ನಾವು ಲೆಕ್ಕಿಸದೆ. ನಾವು ಮಾರುಕಟ್ಟೆಫೆ ಹೋದ ಮುಖ್ಯ ಉದೇಶದ ಕಡೆಗೆ ಗಮನವಿಟ್ಟು , ಆ ಕೆಲಸವನ್ನು ಮಾತ್ರವೇ ಮಾಡಿ ಮುಗಿಸಿಕೂಂಡು ಬರುತ್ತವೆ. ಇದಕ್ಕೆ ನಮ್ಮ ಮನಸ್ಸೇ ಕಾರಣ. ಇದೇ ರೀತಿ ನಮ್ಮ ಬದುಕಿನ ಏಲ್ಲ ತರಹದ ಬೇಕು ಬೇಡಗಳ ಕಡೆ ನಮ್ಮ ಗಮನ/ ಪಯಣವನ್ನು ಕೆಂದ್ರೀಕರಿಸುವ ಕೆಲಸ ನಮ್ಮ ಮನಸ್ಸನದೇ ಆಗಿದೆ.

ಆದ್ದರಿಂದಲೇ ಇಲ್ಲಿ ನಮ್ಮ ಇಂದ್ರಿಯಗಳಗಿಂತ ನಮ್ಮ ಮನಸ್ಸೆ ಹೆಚ್ಚಿನದು ಎಂದು ತಿಳಿಸಿದೆ.

ಆದರೆ, ನಮ್ಮ ಬದುಕು ನಾವು ಕೇವಲ ನಮ್ಮ ಬದುಕಿನ ಅವಶ್ಯವಾದ ಬೇಕು ಬೇಡಗಳ ಕಡೆ ಕೇವಲ ಗಮನವಿಟ್ಟು ಉತ್ಸುಕತೆಯಿಂದ ಇರುವುದರಿಂದ ಮುಂದೆ ಸಾಗುವುದಿಲ್ಲ. ನಮ್ಮ ಬದುಕಿನ ಪಯಣ ಮುಂದೆ ಸಾಗಬೇಕಾದರೆ, ಎಲ್ಲ ತರಹದ ಬೇಕು ಬೇಡಗಳ ಪೂರೈಕೆ ನಮಗೆ ಬದುಕಿನಲ್ಲಿ ಆಗಬೇಕು. ಆದ್ದರಿಂದ ನಮ್ಮ ದೇಹದಲ್ಲಿರುವ ಮಾತು, ಕೈ, ಕಾಲ್ಲು ಮುಂತಾದ ಕರ್ಮೇಂದ್ರಿಯಗಳನ್ನು ಸರಿಯಾಗಿ ಮಾರ್ಗದಲ್ಲಿ ಕೆಲಸ ಮಾಡುವಂತೆ ಪ್ರಚೋದಿಸಿ ನಿಯಂತ್ರಣ ಮಾಡುವ ಕೆಲಸ ನಮ್ಮ ಬುದ್ದಿಯಾದಾಗಿದೆ ಬುದ್ದಿವಂತಿಕೆಯ ಕೆಲಸ ಸಂತಸತಂದರೆ ಬುದ್ದಿಯಿಲ್ಲದ ಕೆಲಸ ದುಃಖ ನೋವುಗಳನ್ನು ನಮಗೆ ಬದುಕಿನಲ್ಲಿ ಉಂಟು ಮಾಡುತ್ತದೆ. ಆದಕಾರಣ ಬುದ್ಧಿ ಮನಸ್ಸಿಗಿಂತ ಹೆಚ್ಚಿನದು ಎಂದು ಭಗವದ್ಗೀತೆ ತಿಳಿಸಿಕೊಡುತ್ತದೆ.

ಆದರೆ, ಈ ರೀತಿಯಾದ ಪ್ರಾಪಂಚಿಕ ವಸ್ತು ವಿಷೆಯಗಳ ಬಗ್ಗೆ ಆಸಕ್ತಿ, ಬುದ್ದಿವಂತಿಕೆಗಳಿಂದ ನಮ್ಮ ದೇಹದ ಯಾರಿಗಾಗಿ ಬದುಕಿನಲ್ಲಿ ಕೆಲಸ/ದುಡಿತ ಮಾಡಬೇಕಾಗಿದೆ? ಎಂದು ನಾವು ಯಾರನ್ನು ಕೇಳಿದರೂ ನಮಗೆ ಬರುವ ಒಂದೇ ಒಂದು ಉತ್ತರ " ನನಗಾಗಿ" ಎನ್ನುವುದಾಗಿದೆ. ಅಂದರೆ, ನಾವೇಲ್ಲರೂ ನನಗಾಗಿ ನನ್ನ ಬದುಕು/ ಬದುಕಿನ ಪಯಣ ಸಾಗಬೇಕಾಗಿ ಇದೆ ಎಂದೇ ಹೇಳುತೇವೆ. ಹಾಗಾದರೆ, ನನಗಾಗಿ , ನನ್ನ ಬದುಕು ಎನ್ನುವ "ನಾನು" ಯಾರೆಂದರೇ "ನಮ್ಮ ದೇಹವನೇ ನಾನು ಎಂದು ತಿಳಿದುಕೂಂಡಿರುವ" ನಮ್ಮ ಪ್ರತಿಯೊಬ್ಬರ ಬೇರೆ ಬೇರೆ " ಅಹಂಕಾರ" ವೇ ಆಗಿದೆ. ಆದ್ದರಿಂದ ನಮ್ಮ ದೇಹ, ಇಂದ್ರಿಯಗಳು ಮನಸ್ಸು ಹಾಗು ಬುದ್ದಿಗಳಗಿಂತ ಹೆಚ್ಚಿನದೌ, ನಮ್ಮಲ್ಲರ "ನಾನು, ನನ್ನದು" ಎನ್ನುವ "ಅಹಂಭಾವ" ಅಥವಾ "ಅಹಂಕಾರ" ವೇ ಆಗಿದೆ. ಆದ್ದರಿಂದ ನಮ್ಮ ದೇಹ ಇಂದ್ರಿಯಗಳು ಮನಸ್ಸು ಹಾಗು ಬುದ್ದಿಗಳಗಿಂತ ಹೆಚ್ಚಿನದು ನಮ್ಮೆಲ್ಲರ "ನಾನು, ನನ್ನದು" ಎನ್ನುವ "ಅಹಂಭಾವ" ಅಥವಾ "ಅಹಂಕಾರ"ವೇ ಆಗಿದೆ.

ಪ್ರತಿಯೂಂದು ಜೀವಿಯಲ್ಲಿ ಇರತಕ್ಕಂಥಹ "ಜೀವ ಅಥವಾ ಆತ್ಮವೇ" ಎಲ್ಲದಕ್ಕಿಂತಲೂ ಹೆಚ್ಚಿನದ್ದಾದರು ಸಹ ಸಾಮಾನ್ಯವಾದ ಇಂದ್ರಿಯಗಳಿಗೆ ತಿಳಿದು ಬರುವ ಬದುಕೇ ನಿಜವಾದ ಬದುಕೆಂದು ನಂಬಿರುವ ನಮ್ಮಲ್ಲಿ ಹೆಚ್ಚಿನ ಜನಗಳಿಗೆ "ಅತ್ಮದ" ವಿಷೆಯ ತಿಳಿದುಕೊಳ್ಳುವುದು ಸಾಧ್ಯವಿಲ್ಲದ್ದು ಹಾಗು ಕಷ್ಟವು ಆಗಿದೆ. ಆದ್ದರಿಂದ ಈ ಕಿರು ಪ್ರಬಂಧದಲ್ಲಿ "ಅತ್ಮದ" ಬಗ್ಗೆ ಹೆಚ್ಚಿನ ವಿವರಣೆ ಅಗತ್ಯವಿಲ್ಲ. ಆದರೆ, ನಮ್ಮಗೆಲ್ಲರಿಗೂ ತಿಳಿದ ಬರುವಂತಹ "ಒಂದು ಸತ್ಯ" ಯಾವುದೆಂದರೇ, ನಾವೆಲ್ಲರೂ "ನಮ್ಮ ದೇಹವನ್ನೇ ನಾನು ಎಮ್ದು ಗುರುತಿಸಿಕೂಂಡು .ನಮ್ಮ ಬದುಕಿನ ಪಯಣ ಎಲ್ಲ ಹಂತಗಳಲ್ಲೂ "ನಾನು" "ನನ್ನದು" ಎಂದೇ ತೂಳಲಾಡುತ್ತಿರುವುದೇ ಆಗಿದೆ. ಆದ್ದರಿಂದ ನಮ್ಮಲ್ಲಿ ಅನೇಕರಿಗೆ "ಅತ್ಮದ" ಬಗ್ಗೆ ತಿಳಿದುಕೂಳ್ಳಲಾಗದಿದ್ದರೂ ಸಹ " ನನ್ನ ದೇಹವೇ ನಾನು" ಎಂಬ "ಅಹಂಭಾವ" ನಮಗೆಲ್ಲರಿಗೂ ಸುಲಭವಾಗಿ ತಿಳಿದು ಬರುವಂತಹ ನಮ್ಮ ಬದುಕಿನ ಅತ್ಯಂತ ಮುಖ್ಯವಾದ ಹೆಚ್ಚಿನ ಅಂಶ ಎನ್ನುವುದು ಈಗ ಅರಿವಿಗೆ ಬರುತ್ತದೆ. ಹಾಗಾದರೆ ನಮ್ಮ ಇಂದ್ರಿಯಮನಗಳ ಬದುಕು ಹೇಗೆ ಸಾಗುತ್ತಿದೆ?

ನಮ್ಮಗೆಲ್ಲರಿಗೂ ತಿಳಿದಿರುವಂತ ನಾವೆಲ್ಲರೂ ಅಲ್ಲದೇ ಪ್ರತಿಯೂಂದು ಜೀವಿಯು ತನ್ನ ಬದುಕಿನ ಪಯಣ ತನಗಾಗಿ ಎಂದೇ ಸಾಗುಸುತ್ತಿದೆ. ನಮ್ಮ ದೇಹ, ಅದರ ಇಂದ್ರಿಯಗಳು ಮನಸ್ಸು ಬುದ್ಧಿ ಅಹಂಕಾರಗಳು ನಾವೆಲ್ಲದಿದ್ದರೂ ಸಹ ನಮಗೆ ಹೊರಗಿನ ಇಂದ್ರಿಯಾನು ಭವಗಳ ಪ್ರಾಪಂಚಿಕ ಬದುಕು ಹೇಗೆ ಉಂಟಾಗಿ ನಮ್ಮನ್ನು ತೋಳಲಾಟದಲ್ಲಿ ಸಿಕ್ಕಿಸುತ್ತದೆ. ಎಂದು ಈಗ ಅನ್ನಿಸುತ್ತಾದೆ. ಇಂಥಹ ಬದುಕಿನ ಪಯಣದ ಆರಂಭ ಹೀಗೆ ಆಗುತ್ತದೆ.

ಧ್ಯಾಯತೋ ವಿಷೆಯಾನ್ ಪುಂಸಃ ಸಗಸ್ತೇಷೋಪಜಾಯತೇ!
ಸಂಗಾತ್ ಸಂಜಾಯತೇ ಕಾಮಃ ಕಾಮಾತ್
ಕ್ರೋಧೋಭಿಜಾಯತೇ!!
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮ
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ!!

ವಿಷಯವನ್ನು ಚಿಂತಿಸುತ್ತಿರುವ ಮನಷ್ಯನಿಗೆ ಅವುಗಳಲ್ಲಿ ಆಸಕ್ತಿ ಹುಟ್ಟುತ್ತದೆ. ಆಸಕ್ತಿಯಿಂದ ಕಾಮ (ಆಸೆ) ಹುಟ್ಟುವುದು. ಕಾಮದಿಂದ ಕ್ರೋಧ (ಕೋಪ) ಹುಟ್ಟುವುದು. ಕ್ರೋದಿಂದ ಸಂಮೋಹ (ಗಾಬರಿ) ಉಂಟಾಗುತ್ತದೆ. ಸಂಮೋಹದಿಂದ ಸ್ಮೃತಿಭಮೆ ಉಂಟಾಗುತ್ತದೆ. ಸ್ಮೃತಿಭ್ರಮೆಯಿಂದ ಬುದ್ಧಿನಾಶ, ಬುದ್ಧಿನಾಶದಿಂದ ಜೀವಿ ನಾಶವಾಗುವನುಪ್ ಇದದಿಂದ ನಮಗೆ ತಿಳಿದು ಬರುವುದೇನೆಂದರೆ ನಮ್ಮ ದೇಹದಲ್ಲಿ ಇರುವ ಜಾನೇಂದ್ರಿಗಳು ( ಕಿವಿ, ಕಣ್ಣು, ಇತ್ಯಾದಿ) ತಮ್ಮ ಪಾಪಂಚಿಕ ವಿಷೆಯ ವಸ್ತುಗಳ (ನೋಡಿದ್ದು, ಕೇಳಿದ್ದು ಮುಂತಾದವು) ಅರಿವ್ಯ್ ನಮಗೆ (ನಾನು ಎಂಬನಮ್ಮ ಅಹಂಭಾವಕ್ಕೆ) ಕೂಟ್ಟಾಗ, ನಮ್ಮ ಮನಸ್ಸು ಅವುಗಳ ಬಗ್ಗೆ ಚಿಂತಿಸ ತೂಡಗುತ್ತದೆ ಮತ್ತು ಅವುಗಳನ್ನು ಪಡೆಯುಬೇಕು ಅಥಾವ ದೂರ ಮಾಡಿಕೂಳ್ಳಬೇಕೆಂಬ (ಆಸೆ) ಯನ್ನು ನಮ್ಮಲ್ಲಿ ಉಂಟಾಗುತ್ತದೆ. ಗಾಬರಿಯಿಂದ ಅಸ್ತವ್ಯಸ್ತಗೂಂಡ ಬದುಕಿನಲ್ಲಿ ಮನುಷ್ಯರಿಗೆ ಬುದ್ಧಿ ತೋರದಂತ ನಾಶವಾಗುತ್ತದೆ. ಬುದ್ಧಿ ಇಲ್ಲದ/ ನಾಶವದ ಜೀವಿಯು ಬದುಕಿನಲ್ಲಿ ನಾಶಹೂಂದುವುದು ಖಂಡಿತ, ಈಗ ನಮ್ಮ ಮುಂದೆ ಬರುವ ಪ್ರಶ್ನೆ ಏನೆಂದರೆ

**ಮನಸ್ಸು ಇಂದ್ರಿಯ ವಿಷೆಯ ಬಗ್ಗೆ ಹೇಗೆ ಚಿಂತಿಸುತ್ತದೆ?**

ನಾವು ಈ ಪ್ರಶ್ನೆಗೆ ಉತ್ತರಾ ಬರೆಯ ಬೇಕೆಂದರೆ ಒಂದು ಪುಸ್ತಕವನ್ನೇ ಬರೆಯ ಬೇಕಾಗುತ್ತೆದೆ. ಅದರೆ ಜನಸಾಮಾನ್ಯರ ಮಾತಿನಲ್ಲಿ ಹೇಳಬೇಕೆಂದರೆ– ಮನಸ್ಸು ಜ್ಞನೇಂದ್ರಿಯಗಳ ನೆರವಿನಿಂದ ತಾನು ಪಡೆಯುವ ಪ್ರಾಪಚಿಂಕ ವಸ್ತು ಮತ್ತು ವಿಷೆಯಗಳ ಬಗ್ಗೆ ತನ್ನ ( ಮನಸ್ಸಿ) ಅಂತರಾಳ "ಚಿತ್ತ" ವೆಂಬ ನೆನಪಿನ ಕೋಣೆಯಲ್ಲಿ ಶೇಖರಣೆಗೊಂಡಿರುವ ಪ್ರಾಪಂಚಿಕ ಇಂದ್ರಿಯಾನು ಭವಗಳ ನೆನಪಿನ ಸಹಾಯದಿಂದ ಇದು ನನಗೆ (ದೇಹಕ್ಕೆ/ದೇಹಿಗೆ) ಬೇಕು ಅಥವಾ ಬೇಡ ಎಂದು ಚಿಂತಿಸತೂಡಗುತ್ತದೆ. ಬೆಂಕಿ ಸುಟ್ಟದ್ದರಿಂದ ಬೇಡವೆಂಬ ಮನಸ್ಸು,ಚಳಿದೂರ ಮಾಡಿದ ಬೆಂಕಿ ಬೇಕು ಎಂದೂ ಸಹ ಮನಸ್ಸು ಬಯಸುತ್ತಾದೆ. ಇದೇ ನಮ್ಮೆಲ್ಲರ ಬದುಕಿನ ವಿಚಿತ್ರವಾದಂತಹ ವಿಕಾರವೂ ಆಗಿದೆ.

ನಮ್ಮ ದೇಹದೂಳಗಿರುವ ಮನಸ್ಸಿನ ಅಂತರಾಳದಲ್ಲಿ ಏನೆಲ್ಲಾ ಅನುಭವಗಳ ನೆನಪುಗಳ ಸಂಗ್ರಹಣೆ ಅಗಿದೆ ಎನ್ನುವುದನ್ನು ಬಲ್ಲವರು ಯಾರು ಇಲ್ಲವೆಂದು ಹೇಳಬಹುದು. ಆದ್ದರಿಂದಲೇ ಪ್ರಪಂಚದಲ್ಲಿ ಮಾನವ ಸಮಾಜದಲ್ಲಿ ಅನೇಕ ತರಹದ ಏರುಪೇರುಗಳು ಅಗುತ್ತದೆ. ಇನ್ನು ಇಂದ್ರಿಯಗಳಿಂದಲೇ ತಿಳಿಯಬಹುದಾದ ವಿಜ್ಞಾನ ಅಭಿವೃದಿಯಲ್ಲಿರುವ ಇಂದಿನ ವೈಜ್ಞಾನಿಕ ಮಾನವ ಸಮಾಜ ಏಕ ಮನೋದೈಹಿಕ ಭಾದೆ ಹಾಗೂ ಖಾಯಿಲೆಗಳಿಂದ ದಾರಿ ಕಾಣದೆ ತೊಳಲಾಡುತ್ತಿದೆ ಎಂದು ತಿಳಿಯಲು ಈಗ ನಮಗೆ ಕಷ್ಟವಾಗುವುದಿಲ್ಲ ಹಾಗಾದರೆ–

**ನಮಗೆ ಸುಖಶಾಂತಿಗಳ ಜೀವನ ಸಿಗದೆ?**

ಜಗತ್ತಿನಲ್ಲಿ ಪ್ರತಿ ಜೀವಿಯು ತನ್ನ ಬದುಕುಸುಖಶಾಂತಿಗಳಿಂದ ಬದುಕ ಬೇಕೆಂದೇ ಬಯಸುತ್ತೆವೆ. ಅದರೆ, ಮಾನವನೆಂಬ ಜೀವಿಯು ತನ್ನ ದೇಹದ ಇಂದ್ರಿಯಾನುಭವಗಳ ಆಸೆಯನ್ನು ತೀರಿಸಿಕೊಳ್ಳಲು ತನ್ನೊಡನಿರುವ ಮಾನವರಿಗೇ ಅಲ್ಲದೆ ಜಗತ್ತಿನಲ್ಲಿರುವ ಅನೇಕ ಜೀವಿಗಳ ಬದುಕಿನಲ್ಲೂ ಅಶಾಂತಿ ನೋವುಗಳನ್ನು ಉಂಟುಮಾಡುತ್ತಿರುವುದು ಒಂದು ಶೋಚನೀಯ ಸ್ಥಿತಿ ಜಗತ್ತಿನಲ್ಲಿ ಇದೆ. ಆದರೂ ಸಹ ಜಗತ್ತಿನ ಎಲ್ಲ ತರಹದ ಗೊಂದಲಗಳ ಮಧ್ಯದಲ್ಲು ಕೂಡ ಶಾಂತಿ ಸಮಾಧಾನಗಳಿಂದ ನಡೆಸುವ ಬದುಕಿನ ಪಯಣದ ಮಾರ್ಗದರ್ಶನವನ್ನು ಭಗವದ್ಗೀತೆ ನೀಡುತ್ತದೆ. ಈ ಪಯಣವೇ ಇಂದ್ರಿಯ ಮನಗಳಾಚಿನ ಪಯಣ, ಹೀಗೆ ಸಾಗುತ್ತದೆ.

ನಾವೆಲ್ಲರೂ ಸಾಮಾನ್ಯವಾಗಿ ನಮ್ಮ ತಲೆಯಿಂದ ಪಾದಗಳ ವರಿಗೂ ಇರುವುದನ್ನುನಮ್ಮ ದೇಹ ಮತ್ತು ನಾನು ಎಂದುಗುರುತಿಸಿಕೂಂಡು ಪ್ರಪಂಚದಲ್ಲಿ ನಮ್ಮ ಬದುಕನ್ನು ಸಾಗಿಸುತ್ತಿದ್ದೇವೆ. ಅದರೇ ನಮ್ಮ ತೊಡೆಗಳ ಅಧಾರದಿಂದ ಕಾಲುಗಳ ಮೇಲೆ ನಮ್ಮ ತಲೆ ಹಾಗೂ ಕುತ್ತಿಗೆಗಳ ಕೆಳಗಿನ ಭಾಗವು ಮಾತ್ರ ನಮ್ಮ ದೇಹ, ಇದರ ಬದುಕಿಗೆ ನಮ್ಮ ರುಂಡ/ ತಲೆಯ ಭಾಗದಲ್ಲಿ ಇರುವ ಕಣ್ಣು, ಕಿವಿ, ಮೂಗು, ನಾಲಿಗೆಗಳು ಅನುಭವಿಸುವ ಹಾಗು ದೇಹವೆಲ್ಲ ಹರಡಿಕೂಂಡಿರುವ ಚರ್ಮದ ಇಂದ್ರಿಯಾನುಭಗಳಿಂದ, ನಮ್ಮ ದೇಹದಲ್ಲಿರುವ, ಕೈ ಕಾಲು, ಎರಡುಗುಹ್ಯೇಂದ್ರಿಯಗಳು ಮತ್ತು ತಲೆಯ ಭಾಗದಲ್ಲಿರುವ ನಾಲಿಗೆಯಿಂದ ಹೊರಬರುವ " ಮಾತು" ಎಂಬ ಐದು ಕರ್ಮೇಂದ್ರಿಯಗಳು ದುಡಿಯುತ್ತಿದೆ ಎನ್ನುವುದು ನಾವುಗಳು ಯಾರೂ ಗಮನಿಸುತ್ತಲೇ ಇಲ್ಲವೆಂದು ಹೇಳಬಹುದು.

ಅಂದರೇ ನಮ್ಮ ಜ್ಞಾನೇಂದ್ರಿಯಗಳಿಂದ ತಿಳಿದು ಬರುವ ಪ್ರಾಪಂಚಿಕ ವಿಷೆಯಾನುಭವಗಳ ಬಗ್ಗೆ ನಮ್ಮ ಮನಸ್ಸು ಚಿಂತೆ ಮಾಡಿ, ತನ್ನ ( ಮನಸ್ಸಿನ) ನೆನಪಿನ ಕೋಣೆ) ಆಳದಿಂದ ಕಂಡುಕೂಂಡು ಅನುಭವಗಳ ಮೇರೆಗೆ ನಮ್ಮ ಬದುಕಿನ ಬೇಕು ಬೇಡಗಳ ಚಿಂತೆಮಾಡುತ್ತದೆ. ಆಗ ನಮ್ಮ ಬುದ್ಧಿ " ನನಗೆ" ಅಂದರೆ "ನಾನು" ಎಂಬ ನಮ್ಮ ಅಹಂಕಾರ" ದ ತೃಪ್ತಿಗೆ ನಮ್ಮ ಕರ್ಮೇಂದ್ರಿಯಗಳು (ದೇಹದ ತೃಪ್ತಿಗಾಗಿ) ದೇಹ ದುಡಿಯುವಂತೆ ಮಾರ್ಗ ಸೂಚಿಸುತ್ತದೆ. ಹೀಗೆ ನಮ್ಮ ಬದುಕಿನ ಪಯಣದ ದಣಿವನ್ನು ನಾವು, ನಾನು ಎಂದು ತಿಳಿದು ಕೂಂಡಿರುವ ನಮ್ಮ ದೇಹದ ಮೂಲಕ ಪಡೆಯುತ್ತೇವೆ. ಎಲ್ಲಿಯವರೆವಿಗೂ ನಮ್ಮ ಇಂದ್ರಿಯಗಳು ಹಾಗು ಮನಸ್ಸು ಹೊರ ಪ್ರಪಂಚದ ವಿಷೆಯಗಳ ಕಡೆಯೇ ಸಾಗುತ್ತಾ ಇರುತ್ತದೆಯೇ ಅಲ್ಲಿಯವರೆವಿಗೂ ನಮಗೆಯಾರಿಗೂ ಬದುಕಿನ ಖವಣೆಗಳಾಗಲಿ, ಪಯಣದ ದಣಿವಾಗಲಿ ತಪ್ಪುವುದೇ ಇಲ್ಲ. ಹಾಗಾದರೆ, ಇಂದ್ರಿಯ ಮನಗಳಾಚಿನ ಈ ಪಯಣ ಜಗತ್ತಿನಲ್ಲಿ ನಾವು ಹೀಗೆ ನಡೆಸಬೇಕು ಮಾರ್ಗದರ್ಶನವನ್ನು ಭಗವದ್ಗೀತೆ ಇಂದ್ರಿಯ ಮನಸ್ಸು ಮುಂತಾದವುಗಳ ನಿಗ್ರಹ ಅಥವಾ ಹತೋಟಿ ತೆಗೆದುಕೂಳ್ಳುವುದರಿಂದ ಯಾರಿಗೆ ಬೇಕಿದ್ದರೂ ತಮ್ಮ ಬದುಕಿನ ಪಯಣವನ್ನು ಶಾಂತಿ ಸಂತಸಗಳಿಂದ ಸಾಗಿಸಲು ಸಾಧ್ಯವೆಂದು ನೀಡುತ್ತದೆ, ಮೊಟ್ಟಮೊದಲಿಗೆ ನಮ್ಮ ಇಂದ್ರಿಯಗಳನ್ನು ಹತೋಟಿಯಲ್ಲಿ ಇಡುವ ಮಾರ್ಗವನ್ನು ಹೀಗೆ ತಿಳಿಸುತ್ತದೆ.

ಯದಾ ಸಂಹತೇಚಾಯಂ ಕೂರ್ಮೇಂಗಾನೀವ ಸರ್ವತಃ
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯಪ್ರಜ್ಞಾಪತಿಷ್ಠಿತಾ
ಭಗೇ–2–58

ಆಮೆ ಹೊರಗಿರುವ ತನ್ನ ಅಂಗಾಗಗಳನೆಲ್ಲ ಹೇಗೆ ಒಳಗೆ ಸೆಳೆದುಕೊಳ್ಳುವುದೋ ಹಾಗೆ ವ್ಯಕ್ತಿ ತನ್ನ ಇಂದ್ರಿಯಗಳನ್ನು ವಿಷೆಯ ವಸ್ತುಗಳಂದ ಯಾವಾಗ ಸೆಳೆದಕೊಳ್ಳವನೋ ಆಗ ಅವನ ಪ್ರಜ್ಞೆಸ್ಥಿರವಾಗುತ್ತದೆ.

ಎಲ್ಲರಿಗೂ ಬಹಳ ಸುಲಭವಾಗಿ ತಿಳಿದುಕೊಳ್ಳಲು ಅಗುವಂಥಹ ಉದಾಹರಣೆಯಿಂದ ನಮ್ಮ ಇಂದ್ರಿಯಗಳನ್ನು ಹತೋಟಿಯಲ್ಲಿ ತಂದುಕೊಳ್ಳುವ ಉಪಾಯವನ್ನು ಇಲ್ಲಿ ತಿಳಸಿದೆ. ಆಮೆ, ತನ್ನ ಬದುಕಿಗೆ/ ಪ್ರಾಣಕ್ಕೆ ಅಪಾಯ ಬಂದಾಗ ತನ್ನ ಅಂಗಾಂಗಗಳನ್ನು ಒಳಗೆ ಸೆಳೆದುಕೊಂಡು ರಕ್ಷಣೆ ಪಡೆಯುವಂತೆ , ಜಗತ್ತಿನಲ್ಲಿ ಯಾರು ಬೇಕಿದ್ದರೂ ತಮ್ಮಮನಃ ಶಾಂತಿಗೆ ತೂಂದರೆಕೊಡುವ ಪ್ರಾಪಂಚಿಕ ವಿಷೆಯ ವಸ್ತುಗಳಂದ ತಮ್ಮ ಇಂದ್ರಿಯಗಳನ್ನು ಹಿಂದಕ್ಕೆ ಸೆಳೆದುಕೂಂಡರೇ ತಮ್ಮ ಬದುಕಿನ ಪಯಣವನ್ನು ಶಾಂತಿಯಿಂದ ನಡೆಸಬಹುದು ಎಂಬ ಸುಲಭವಾದ ಮಾರ್ಗದರ್ಶನ ಇಲ್ಲಿ ನೀಡಿದೆ.

ಆದರೆ ನಮ್ಮ ಮನ್ಸುಸ್ಸ ಅನೇಕ ತರಹದ ಚಿಂತೆಗಳಂದ ಸದಾ ತೊಯಾಡ್ದುತ್ತಿರುತ್ತದೆ ಎನ್ನುವುದು ನಮ್ಮಗೆಲ್ಲಾ ತಿಳದೇ ಇದೆ. ಇಂಥಹಾ ಚಂಚಲ ಮನಸ್ಸನ್ನು ಹತೋಟಿಗೆ ತಂದುಕೂಳ್ಳುವ ಎರಡನೇಯ ಮಾರ್ಗ ದರ್ಶನ ಹೀಗೆ ನೀಡಲಾಗುತ್ತದೆ

ಯತೋ ಯತೋ ನಿಶ್ಚರತಿಮನಶಂಚಲಮಸ್ಥಿರಮ್!
ತತಸ್ತತೋ ನಿಯಮ್ಯೈತದಾತ್ಮನ್ಯೇವದಶಂ ನಯೇತ್!!
ಭಗೀ–6–26

ಚಂಚಲವೂ ಅಸ್ಥಿರವೂ ಅದ ಮನಸ್ಸು ಯಾವ ಯಾವ ವಿಷಯದಿಂದ ಹೂರಗೆ ಬರುವುದೊ ಅಯಾ ವಿಷಯದಿಂದ ಮನಸ್ಸುನ್ನು ನಿಗ್ರಹಿಸಿ ಅತ್ಮನಲ್ಲಿ ವಶಪಡಿಸಿಕೂಳ್ಳಬೇಕು. ಮನಸ್ಸಿನ ಚಿಂತೆಗಳಗೆ ಇಂಥಹುದೇಕಾರಣ ಎಂದು ಸರ್ವತ್ರಿಕವಾಗಿ ಎಲ್ಲರಿಗೂ ಅನ್ವಯಿಸುವಂತೆ ಹೇಳಲು ಯಾರಿಗೂ ಸಾಧ್ಯವಿಲ್ಲ. ಒಬ್ಬೊರ ಮನಸ್ಸು ಮತ್ತು ಅವರ ಚಿಂತೆ ಒಂದೂದು ತರಹ ಅವರದ್ದೇ ಅಗಿ ಬೇರೆ ಬೇರೆಯೇ ಯಾವಾಗಲೂ ಇರುತ್ತದೆ. ಅದ್ದರಿಂದ ತನ್ನ ಬದುಕಿನಲ್ಲಿ ಶಾಂತಿಯ ಪಯಣ ನಡೆಸಬೇಕೆಂಬ ಪ್ರತಿ ವ್ಯೆಕ್ತಿಯೂ ತನ್ನ ಮನಸ್ಸಿನ ಶಾಂತಿಯನ್ನು ಕದಡುವ ಪ್ರತಿಚಿಂತೆಯಿಂದಲೂ ತನ್ನ ಮನಸ್ಸುನ್ನು ಹಿಂದಕ್ಕೆ ತಂದುಕೂಂಡು ಬದುಕು ನಡೆಸಲು ಕಲಿಯ ಬೇಕು ,ಪ್ರತಿಯೂಬ್ಬರ ಬದುಕಿನಲ್ಲೂ ಅನೇಕ ತರಹದ ಏರುಪೇರುಗಳು ಕಷ್ಟಗಳೂ ಇರುತ್ತದೆ ಅದರೆ ಅವುಗಳ ಬಗ್ಗೆ ಚಿಂತಿಸುತ್ತಾ ಮನಸ್ಸಿನಲ್ಲಿ ಕೂರಗುವುದರಿಂದ ಬದುಕಿನ ಕಷ್ಟಗಳನ್ನು ಎದುರಿಸಿದರೆ ಬದುಕು ಪಯಣ ಹಗರವಾಗುತ್ತದೆ, ಕಷ್ಟಗಳಗೆ ಪರಿಹಾರ ಕಂಡುಕೊಳ್ಳುವ ಸಾಧ್ಯತೆಗಳು ಇರುತ್ತದೆ ಎನ್ನುವುದರಲ್ಲಿ ಸಂದೇಹವೇ ಇಲ್ಲ.

ನಮ್ಮ ಬದುಕಿನ ಪಯಣದಲ್ಲಿ ನಮ್ಮ ಮನಸ್ಸು ಚಿಂತಿಸಿ ಬಯಸುವ ಬೇಕು ಬೇಡಗಳನ್ನು ಪೂರೈಸಲು ನಡೆಸಬೇಕಾದ ನಮ್ಮ ದೇಹದ ಕೆಲಸ ಕಾರ್ಯಗಳನ್ನು ನಿರ್ಧಾರ ಮಾಡುವುದೇ ನಮ್ಮ ಬುದ್ದಿ . ಇಂಥಹ ಚುರುಕಾದ ಬುದ್ದಿಯನ್ನು ನಮ್ಮ ಹತೋಟಿಗೆ ತಂದುಕೊಳ್ಳುವ ದಿಕ್ಸುಚಿ ಭಗವದ್ಗೀತೆ ಹೀಗೆ ನೀಡುತ್ತದೆ.

ನಪ್ರಹೃಷ್ಯೇತ್ ಪ್ರಿಯಂ ಪ್ರಾಪ್ಯನೂದ್ವಿಜೇಕ್
ಪ್ರಾಪ್ಯಚಾಪ್ರಿಯಂ!
ಸ್ಥಿರಬುದ್ದಿರಸಂಮೊಢೋ ಬ್ರಹ್ಮದ್ಬಹ್ಮಣಿ ಸ್ಥಿತಃ
ಭಾಗಿ–5–20

(ಬದುಕಿನಲ್ಲಿ) ಪ್ರಿಯುವಾದದ್ದು ಬಂದಾಗ ಸಂತಸ ಪಡುವುದಾಗಲಿ,ಅಪ್ರಿಯವಾದದ್ದು ಬಂದಾಗ ಸಂಕಟ ಪಡುವುದಾಗಲಿ (ನಾವು) ಮಾಡಬಾರದು ಹೀಗೆ ಬದುಕಿನ ವ್ಯವಹಾರಗಳನ್ನು ಯಾರು ಸರಿಯಾಗೆ ಅರ್ಥ ಮಾಡಿಕೊಂಡು ಗಾಬರಿಗೂಳ್ಳದೇ ಇರು (ಬದುಕು)ತ್ತಾರೋ ಅಂಥಹವರು ದೈವತ್ವವನ್ನು (ಶಾಂತಿಯನ್ನು) ತಿಳದುಕೊಂಡು ದೈವತ್ವದಲ್ಲೇ ( ಶಾಂತಿಯಲ್ಲೇ) ನೆಲೆಸುತ್ತಾರೆ.

ಬದುಕಿನಲ್ಲಿ ಯಾರಿಗೆ ಸುಖದುಃಖಗಳು ಹಾಗು ಸಂತಸ ಕಷ್ಟಗಳೂ ಇಲ್ಲ, ಎಲ್ಲರಿಗೂ ಇದೆ. ಅವರವರಿಗೆ ಅವರವರ ಬದುಕೇ, ಬದುಕಿನ ತಿರುಗಾಟಗಳೇ ಹೆಚ್ಚು, ಅದ್ದರಿಂದ ಬದುಕಿನ ಕಷ್ಟಸುಖಗಳನ್ನು ಸರಿಯಾಗಿ ಅರ್ಥಮಾಡಿಕೂಂಡು ಬದುಕಬಲ್ಲ ಬುದ್ದಿವಂತರು ಶಾಂತ ಬದುಕಿನ ಪಯಣದಲ್ಲೇ ಜೀವನ ನಡೆಸಿತ್ತಿರುತ್ತಾರೆ.

ಇಷ್ಟೆಲ್ಲಾ ಶಾಂತ ಬದುಕಿನ ಪಯಣ ನಡೆಸುವ ಮಾರ್ಗಗಳು ನಮಗೆ ತಿಳದ್ದಿದರೂ ಸಹ ನಾವುಮಾತ್ರ ನನ್ನ ಬದುಕು, ನನ್ನ ಮನಃಶಾಂತಿ ಹಾಳಾಯಿತು ಎಂದು ಗೋಳಾಡುವ ನಾನು, ನನ್ನದು ಎಂಬ ಅಹಂಕಾರದ ಕೂಗನ್ನೇ ಮಾನವಸಮಾಜದಲ್ಲಿ ಕೇಳುತ್ತಿದ್ದೇವೆ. ಇದಕ್ಕೆ ಕಾರಣ? ನಾನು ನನ್ನದು ಎಂಬ ಅಹಂಭಾವನೆ ಬಿಡುವುದು ಅಷ್ಟು ಸುಲಭವಾದ ಕೆಲಸವಲ್ಲ . ಅದರೂ ಸಹ ನಮ್ಮ ಬದುಕಿನಲ್ಲಿ ಶಾಂತಿ ಪಡೆಯುವ ಮಾರ್ಗ ದರ್ಶನವನ್ನು ಭಗವದ್ಗೀತೆ ಹೀಗೆ ನೀಡುತ್ತಾಡೆ.

ವಿಹಾಯ ಕಾಮಾನಯಃ ಸರ್ವಾನ್
ಪೊಮಾಂಶ್ವರತಿನೀಃಸ್ಪೃಹಃ
ನಿರ್ಮಮೋ ನಿರಹಂಕಾರಃಸ ಶಾಂತಿಮಧಿಗಚ್ಚತಿ!!
ಭಾಗೀ 2–7

ಯಾರು ತನ್ನ ಅಸೆಗಳನ್ನೆಲ್ಲಾ ಬಿಟ್ಟು ತನ್ನ (ಬದುಕಿನ) ಕೆಲಸಗಳನ್ನು ಕರ್ತವ್ಯಗಳನ್ನು ನಿರ್ವಹಿಸುತ್ತಾ ಬದುಕುತ್ತಾರೋ ಅಂತಹವರ ತಮ್ಮ ಬದುಕಿನ ಪಯಣವನ್ನು ಶಾಂತಿಯತ್ತ ನಡೆಸಿ, ಶಾಂತಿಯನ್ನು ಪಡೆಯುತ್ತಾರೆ ಏಂದು ಇಲ್ಲಿ ತಿಳಸಿದೆ. ಹಾಗಾದರೆ, ನಮ್ಮ ಬದುಕು ಇಂದ್ರಿಯಾನುಭವಗಳ ಸಂಗ್ರಣೆಯ ನೆನಪಿನ ಕೊಣೆಯನ್ನು ಚಿತ್ತವನ್ನು ಹೇಗೆ ಶುದ್ದಿ ಗೂಳಸಬೇಕು ಎಂದರೇ, ಈ ಕೊನೆಯಹಂತದ ಮಾರ್ಗದರ್ಶನವನ್ನು ಭಗವದ್ಗೀತೆ ಹೀಗೆ ನೀಡುತ್ತದೆ

ಯೋಗೀ ಯುಂಜೀತ ಸತತ ಮಾತ್ಮಾನಂ ರಹಸಿ ಸ್ಥಿತಃ!
ಏಕಾಕೀ ಯತಚಿತ್ತಾತ್ಮ ನಿರಾಶೀರ ಪರಿಗ್ರಹ!!

ದೇಹ ಮನಸ್ಸುಗಳನ್ನು ನಿಗ್ರಹಿಸಿ, ಒಂಟಿಯಾಗಿ (ಬದುಕಿನಲ್ಲಿ) ಯಾವ ಭರವಸೆಗಳನ್ನು ಇಟ್ಟುಕೂಳ್ಳದೆ, ಏನನ್ನು ಪಡೆಯಲು ಇಚ್ಚಿಸಿದ ಯಾರೂ ಇಲ್ಲದ ಸ್ಥಳದಲ್ಲಿ ಮನಸ್ಸನ್ನು ಯೋಗಿದಲ್ಲಿ (ಶಾಂತಿಯೂಡನೆ ಒಂದು ಗೂಡಿಸಿ) ಇಡಬೇಕು.

ಇಲ್ಲಿ ನಾವು ಮೊಟ್ಟಮೊದಲಿಗೆ ಮನಃಶಾಂತಿಯ ಬದುಕು ಎಂದರೆ ಜೀವನದ ಪ್ರಾಪಂಚಿಕ ಝಂ ಝಾಟಗಳು ಇಲ್ಲದೆ, ನಾವೊಬ್ಬರೇ, ಯಾರ ಜೊತೆಯೂ ಇಲ್ಲದೇ ನಮ್ಮ ಮನಸ್ಸಿನಲ್ಲೇ ಅನುಭವಿಸಿ ತತ್ಕಂಥಹ ಮಾನಸಿಕಸ್ಥಿತಿ ಎಂಬುದನ್ನು ಸರಿಯಾಗಿ ಅರ್ಥಮಾಡಿ ಕೂಂಡು ತಿಳದುಕೊಳ್ಳಬೇಕಾದೆ. ನಮ್ಮ ಪ್ರಾಪಂಚಿಕ ಬದುಕಿನಲ್ಲಿ ಅನೇಕ ತರಹದ ಜನರು , ವಸ್ತುಗಳು, ವಿಷಯಗಳು ಒಂದು

ಹೋಗುತ್ತಿರುತ್ತಿವೆ. ಆದ್ದರಿಂದಲೇ ನಮ್ಮ ಮನಸ್ಸು ತಳಮಳಗೊಂಡು ನಮ್ಮ ಪ್ರಾಪಂಚಿಕ ಬದುಕನ್ನು ಅಶಾಂತಿಯಿಂದ ತುಂಬಿರುವಂತೆ ಮಾಡುತ್ತದೆ.

ಅದರೆ ನಮ್ಮ ಈಗಿನ ಇಂದ್ರಿಯಮನಗಳಾಚಿನ ಪಯಣ ನಮ್ಮ ಮನಸ್ಸಿನ, ಒಳಗೆ ಸದಾ ಇರುವ ಮನಃಶಾಂತಿಯ ಕಡೆಗೆ ನಾವೊಬ್ಬರೇ ಮಾಡಬೇಕಾಗಿದೆ. ಅದ್ದರಿಂದ ಈ ರೀತಿಯ ಇಂದ್ರಿಯ ಮನಗಾಳಚಿನ ಪಯಣ ಮಾಡಲು ಬಯಸುವವರು ಸದಾ ತಮ್ಮ ಮನಸ್ಸಿನ್ನು ತಮ್ಮ ಅಂತರಂಗದ ಮನಃಶಾಂತಿಯಕಡೆಗೇ ತಿರುಗಿಸುತ್ತಾ, ತಮ್ಮ ಪ್ರಾಪಂಚಿಕ ಎಲ್ಲ ವ್ಯವಹಾರಗಳನ್ನು ತಾವೊಬ್ಬರೇ ನಿರ್ವಹಿಸುತ್ತಾ ನಡೆಸಿಕೊಡಲ್ಲಿ, ತಮ್ಮ ಬದುಕನ್ನು ಸದಾ ಶಾಂತಿಯಮಾರ್ಗ ಸಾಗಿಸಬಹುದು ಎಂದು ಈಗ ತಿಳಿದುಬರುತ್ತದೆ ಹಾಗಾದರೆ ಇಂಥಹ

**ಶಾಂತ ಮನಸ್ಸಿನ ಬದುಕು ಹೇಗೆ ಇರುತ್ತದೆ?**

ನಮಗೆ ಪ್ರಾಪಂಚಿಕ ಬದುಕಿನಲ್ಲಿ ಅನೇಕ ತರಹದ ಜನರು, ವಿಷೆಯಗಳು, ವಸ್ತುಗಳು ಸಿಗುತ್ತಿರುವುದರಿಂದ ನಮಗೆ ಬದುಕಿನಲ್ಲಿ ಅನೇಕ ತರಹದ ಸಲಹೆ, ಸಹಾಯ ಮುಂತಾದವು ಗಳು ಸಿಗುತ್ತದೆ . ಇಲ್ಲಿ ನಮ್ಮ ಇಂದ್ರಿಯ ಮನಗಳಾಚಿನ ಪಯಣವನ್ನು ನಾವೂಬ್ಬರೇ ಯಾರ ಜೊತೆಯಾಗಲಿ, ಸಲಹೆ ಸಹಾಯಗಳಾಗಲಿ, ವಿಷೆಯ ವಸ್ತುಗಳಾಗಲಿ ಇಲ್ಲದೆ ಹೋಗಬೇಕೆಂದರೆ ಅನೇಕರಿಗೆ ಹೆದರಿಕೆ ಯಾಗುವ ಸಾಧ್ಯತೆಯೂ ಇದೆ. ಅದ್ದರಿಂದಲೇ ಈಗ ನಮ್ಮ ಮನ್ಸು ಶಾಂತಮನಸ್ಸಿನ ಬದುಕಿ ಮನಸ್ಸು ಅಥವಾ ಒಂಟಿ ಜೀವನ ಹೇಗೆ ಇರುತ್ತದೆ ಎಂದು ತಿಳಿಯ ಬಯಸುತ್ತಾದೆ. ಇಂಥಹ ಏಕಾಂತ ಪ್ರಶಾಂತ ಮನಸ್ಸಿನ ಸ್ಥಿತಿಯ ಬದುಕಿನ ಪಯಣದ ವಿವರಣೆ ಭಗವದ್ಗೀತೆ ಹೀಗೆ ನೀಡುತ್ತದೆ.

ಯಥಾ ದೇಪೋ ನಿವಾತಸ್ಥೋನೇಂಗತೇಸೋಮಸ್ಮತಾ!
ಯೋಗಿನೋ ಯತಚಿತ್ತಸ್ಯಯುಂಜತೋ ಯೋಗಮಾತ್ಮನಃ!!
ಭಗೀ 6-19

ಗಾಳಿ ಬೀಸಿದ ಕಡೆ ದೀಪ ಹೇಗೆ ಅಲುಗಾಡುವುದಿಲ್ಲವೋ, ಹಾಗೆಯೇ ಅತ್ಮನ ಯೋಗವನ್ನು ಮಾಡುತ್ತಿರುವ ಯೋಗಿಯ ನಿಗ್ರಹಿಸಿದ ಚಿತ್ತಕ್ಕೆ ಅದೊಂದು ಉಪಾಯವಾಗಿದೆ.

ಬದುಕಿನಲ್ಲಿ ಶಾಂತಿಯನ್ನು ಪಡೆದು ಅನುಭವಿಸಬೇಕೇಂದು ಎಲ್ಲರಿಗೂ ಅಸೆ ಆದರೆ, ಎಲ್ಲರು ಈ ಶಾಂತಿಯನ್ನು ತಮ್ಮಿಂದ ಹೊರಗಿರುವ ಪ್ರಾಪಂಚಿಕ ವಿಷೆಯ ವಸ್ತುಗಳು ಮತ್ತು ಜನರಿಂದ ಪಡೆಯಬೇಕೆಂದು ಬಯಸುತ್ತಾರೆ. ಹಣ ಖರ್ಚು ಮಾಡಿ ಮನಃಶಾಂತಿ ಪಡೆಯುವ ಆನೇಕ ಮಾರ್ಗಗಳನ್ನು ತಿಳಿಯಲು ಮತ್ತು ಕಲಿಯಲು ಬಯಸುತ್ತಾರೆ. ನಮ್ಮ ಬದುಕಿನ ಶಾಂತಿ ಸದಾಕಾಲಕ್ಕೆ ನಮ್ಮ ಮನಸ್ಸಿನಲ್ಲೇ, ನಮ್ಮ ಜೊತೆಯಲ್ಲೇ ಇರುತ್ತಾದೆ ಎಂದು ಅನೇಕರಿಗೆ ತಿಳಿದೇ ಇಲ್ಲ.

ನಮ್ಮಂತರಂಗದ ಮನಃಶಾಂತಿಯನ್ನು ನಾವೊಬ್ಬರೇ ಪಡೆದು ಅನುಭವಿಸ ಬೇಕಾಗಿರುವುದರಿಂದ, ಯಾರು ತಮ್ಮ ಪ್ರಾಪಂಚಿಕ ಬದುಕಿನ ಎಲ್ಲ ವ್ಯವಹಾರಗಳನ್ನು ತಮ್ಮ ಮನಃಶಾಂತಿಗೆ ಭಂಗ ಬಾರದಂತೆ ನಡೆಸಿಕೊಂಡು ಹೋಗುತ್ತಾರೆಯೋ ಅಂಥಹವರ ಮನಸ್ಸು ಗಾಳಿಯ ಹೊಡೆತವಿಲ್ಲದ ಕಡೆ ದೀಪ (ಎಲೆಟ್ರಿಕ್ ದೀಪವಾಗಲಿ ಬ್ಯಾಟರಿ ದೀಪವಾಗಲಿ ಅಲ್ಲ ಎಣ್ಣೆ ದೀಪ) ಅಲುಗಾಡದೆ ಹೇಗೆ ಉರಿಯುತ್ತದೆಯೋ ಹಾಗೆ, ಇಂದ್ರಿಯ ಮನಗಳಾಚಿನ ಪಯಣ ಮಾಡುತ್ತಿರುವ ವ್ಯಕ್ತಿಯ ಮನಸ್ಸು ,ಪ್ರಾಪಂಚಿಕ ಅಗುಹೋಗು ಗಳಿಂದ ವಿಚಲಿತವಾಗದೆ ತನ್ನ ಅಂತರಂಗದ ಶಾಂತಿ ಕಡೆಯೇ ಸಾಗುತ್ತಿರುತ್ತದೆ ಎಂದು ಈಗ ನಾವು ನಮ್ಮ ಏಕಾಂತದ, ಏನೂ ಇಲ್ಲದ ಒಂಟೀ ಪಯಣ್ದ ಬಗ್ಗೆ ಸರಿಯಾಗಿ ತಿಳಿದುಕೊಂಡು

ನಮ್ಮ ಇಂದ್ರಿಯಮನಗಾಳಚಿನ ಪಯಣವನ್ನು ನಾವೊಬ್ಬರೇ ಮಾಡಬೇಕಾಗಿದೆ. ಇಂಥಹ ಏಕಾಂತದ ಅಂತರಂಗದ ಪಯಣ ಮಾಡಲು ಬಯಸುವ ಅಥವಾ ಬಿಡುವ ಸ್ವಾತಂತ್ರ ನಮಗೆ ಎಲ್ಲರಿಗೊ ಸದಾ ಇಷ್ಟೆ ಇರುತ್ತದೆ ಆಯ್ಕೆ ಪಾತ್ರವಷ್ಟೇ ನಮ್ಮದು.

## ಗುರುದೇವ ರಾನಡೆಯವರ ಧರ್ಮ ಮತ್ತು ವಿಜ್ಞಾನದ ಪರಿಕಲ್ಪನೆ – ಒಂದು ವಿಶ್ಲೇಷಣೆ

ಕು. ದೀಪಾ ಕಿತ್ತೂರ
ಸಂಶೋಧನಾ ವಿದ್ಯಾರ್ಥಿನಿ, ತತ್ವಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಪ್ರಬಂಧ ಸಾರ:** ಧರ್ಮ ಮತ್ತು ವಿಜ್ಞಾನಗಳೆರಡು ಮನುಷ್ಯ ಜೀವನದ ಪ್ರಮುಖ ಅಂಗಗಳಾಗಿವೆ. ಇವೆರಡು ಸಂಗತಿಗಳು ಮನುಷ್ಯನ ಜೀವನದುದ್ದಕ್ಕೂ ಇರುವಂಥವುಗಳಾಗಿವೆ. ಧರ್ಮ ಮತ್ತು ವಿಜ್ಞಾನಗಳೆರಡು ಒಂದಕ್ಕೊಂದು ಪೂರಕಗಳಾಗಿದ್ದು ಇವೆರಡು ಮನುಷ್ಯ ಜೀವನದ ಅಂತರಂಗ ಮತ್ತು ಬಹಿರಂಗಗಳೆಂದೆ ಹೇಳಬಹುದು. ಧರ್ಮ ಮನುಷ್ಯನ ಅಂತರಂಗವಾದರೆ ವಿಜ್ಞಾನವು ಬಹಿರಂಗವಾಗಿದೆ. ಆಚಾರ – ವಿಚಾರಗಳು, ನೈತಿಕ ಕಟ್ಟಲೆಗಳು, ಸಂಪ್ರದಾಯಗಳು, ಧಾರ್ಮಿಕ ಗ್ರಂಥಗಳು, ದೇವರ ಮೇಲಿನ ನಂಬಿಕೆಯು ಮನುಷ್ಯನನ್ನು ಧಾರ್ಮಿಕನನ್ನಾಗಿ ಮಾಡುತ್ತವೆ. ಅದರ ಜೊತೆಗೆ ವೈಜ್ಞಾನಿಕ ಅಂಶಗಳನ್ನು ಅರಿತುಕೊಂಡಿದ್ದಾದರೆ ಅವನ ಧಾರ್ಮಿಕ ಶ್ರದ್ಧೆಯು ಇನ್ನಷ್ಟು ಗಟ್ಟಿಯಾಗುತ್ತದೆ.
ಗುರುದೇವ ರಾನಡೆಯವರು 20ನೇ ಶತಮಾನದ ಒಬ್ಬ ಮಹಾನ್ ದಾರ್ಶನಿಕರು ಹಾಗೂ ವಿಶ್ಲೇಷಕರಾಗಿದ್ದರು. ಅವರು ಪರಮಾರ್ಥದ ಸತ್ಯತೆಯನ್ನು ತಿಳಿಯಲು ತಮ್ಮಲ್ಲಿ ನೆಲೆಗೊಂಡಿರುವ ಶ್ರದ್ಧೆಗೆ ಬೌದ್ಧಿಕ ಆಧಾರವನ್ನು ಪಡೆಯಲು ತತ್ವಜ್ಞಾನವನ್ನು ಅಭ್ಯಾಸ ಮಾಡಿದರಷ್ಟೇ ಅಲ್ಲ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು. ರಾನಡೆಯವರು ಹೇಳುವಂತೆ ಯಾವ ಸಿದ್ಧಾಂತವನ್ನು ಆಧುನಿಕ ವಿಜ್ಞಾನವು ಸಮರ್ಥಿಸುವದೋ ಯಾವದನ್ನು ತತ್ವಜ್ಞಾನವು ಸತ್ಯವೆಂದು ಸ್ವೀಕರಿಸುವದೋ ಯಾವದು ಎಲ್ಲ ಧರ್ಮಗಳ ಆಧಾರಕ್ಕೆ ಪಾತ್ರವಾಗುವದೋ ಅದನ್ನೇಯೇ ಬುದ್ಧಿ ಒಪ್ಪುವದು.
ಗುರುದೇವ ರಾನಡೆಯವರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಈ ಲೇಖನದಲ್ಲಿ ಧರ್ಮ ಮತ್ತು ವಿಜ್ಞಾನಗಳೆರಡು ಪರಸ್ಪರ ಬೇರೇ ಬೇರೇ ಅಂಶಗಳಾಗಿದ್ದರು ಅವುಗಳಲ್ಲಿಯು ಕೆಲವೊಂದು ಪೂರಕವಾದ ಅಂಶಗಳನ್ನು ಕಾಣಬಹುದಾಗಿದೆ ಎಂಬುದನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

**ಪೀಠಿಕೆ :** ಆಧುನಿಕ ಭಾರತೀಯ ಚಿಂತನೆಯಲ್ಲಿ 'ಧರ್ಮ' ಮತ್ತು 'ವಿಜ್ಞಾನ'ಗಳೆರಡು ಅತ್ಯಂತ ಮಹತ್ವವನ್ನು ಪಡೆದುಕೊಂಡಿವೆ. ಧರ್ಮವನ್ನು ಕುರಿತು ಹೇಳುವಾಗ ಧರ್ಮವೆಂದರೆ ಒಂದು ನಿರ್ದಿಷ್ಟವಾದ, ಪ್ರತ್ಯೇಕವಾದ ಧರ್ಮವೆಂದು ಊಹಿಸಿದರೆ ಸಾಲದು, ಧಾರ್ಮಿಕ ಆಚರಣೆಗಳು, ಬಾಹ್ಯ ಕಟ್ಟುಪಾಡುಗಳು, ಸಂಸ್ಕಾರಗಳು, ಪೂಜಾಪದ್ಧತಿಗಳನ್ನು ನಾವು ಧರ್ಮವೆಂದು ಕರೆಯುತ್ತೇವೆ. ಆದರೆ ಇವುಗಳು ಧರ್ಮದ ಬಹಿರಂಗವಾಗಿದ್ದು ನಮಗೆ ಧರ್ಮದ ಅಂತರಂಗವಾದ ನಿಷ್ಕಲ್ಮಶ ಪರಿಶುದ್ಧ ಹೃದಯವನ್ನು ಹೊಂದುವುದು ತುಂಬಾ ಅವಶ್ಯವಾಗಿದೆ. ಧರ್ಮದ ಬಾಹ್ಯಾಚರಣೆಗಳೆಂದರೆ ಕೇವಲ ತೊಗಟೆಯಿದ್ದಂತೆ. ಇವುಗಳನ್ನು ಮೀರಿ ನಿಂತಿರುವ ಮಾನವತೆ (Humanity), ಮಾನವೀಯ ಅನುಕಂಪ, ಶುದ್ಧ ನೈತಿಕ ಜೀವನ, ವಿಶಾಲ ಮನೋಭಾವ ಇವುಗಳನ್ನು ಹೊಂದುವುದು ಅತ್ಯಂತ ಅವಶ್ಯವಾಗಿದೆ. ಇದರ ಜೊತೆಗೆ ವೈಜ್ಞಾನಿಕ ವಿಚಾರಗಳನ್ನು ಇಟ್ಟುಕೊಂಡು ನಡೆದದ್ದಾದರೆ ಜೀವನವನ್ನು ವಿಶಾಲ ಅರ್ಥದಲ್ಲಿ ಬಾಳಿದಂತಾಗುತ್ತದೆ. ಗುರುದೇವ ರಾನಡೆಯವರು ಧರ್ಮ ಮತ್ತು ವಿಜ್ಞಾನಗಳೆರಡನ್ನು ಸಮನ್ವಯಗೊಳಿಸಿ ಅಧ್ಯಯನವನ್ನು ಮಾಡಿದ್ದಾರೆ.

**ಧರ್ಮವನ್ನು ಕುರಿತು ಹೇಳಿದ ಕೆಲವು ವ್ಯಾಖ್ಯೆಗಳು:**

**1. ಹರ್ಬರ್ಟ್ ಸ್ಪೆನ್ಸರ್ :** ಎಲ್ಲ ವಸ್ತುಗಳೂ ನಮ್ಮ ಬುದ್ಧಿಗೆ ನಿಲುಕದ ಶಕ್ತಿಯೊಂದರಿಂದಾಗಿ ವ್ಯಕ್ತವಾಗಿವೆ ಎಂಬ ಅರಿವೇ ಧರ್ಮ.

**2. ಮ್ಯಾಕ್ಸ್ ಮುಲ್ಲರ್ :** ಅನಂತವನ್ನು ಗ್ರಹಿಸಲು ಮನುಷ್ಯನಿಗೆ ಸಹಾಯಕವಾಗುವ ಒಂದು ಮಾನಸಿಕ ಶಕ್ತಿ ಅಥವಾ ಮಾನಸಿಕ ಸ್ಥಿತಿಯೇ ಧರ್ಮ.

**3. ಇಮ್ಯಾನುಎಲ್ ಕಾಂಟ್ :** ನಮ್ಮ ಪ್ರತಿಯೊಂದು ಕರ್ತವ್ಯವನ್ನು ಈಶ್ವರನ ಆಜ್ಞೆಯೆಂದು ಮನಗಾಣುವುದೇ ಧರ್ಮ.

**4. ಎ.ಇ. ಹೇಡನ್ :** ಸುಶಾಂತ ಜೀವನದ ಮೌಲ್ಯಗಳಿಗಾಗಿ ಸಮಾಜ ಜೀವಿಯಾದ ಮಾನವನು ಯುಗಯುಗಾಂತರಗಳಿಂದಲೂ ನಡೆಸುತ್ತಿರುವ ಶೋಧವೇ ಧರ್ಮದ ಜೀವಾಳ.

**5. ಗುರುದೇವ ರಾನಡೆ :** ಧರ್ಮವೆಂದರೆ 'ಪಾರಮಾರ್ಥಿಕ ಧರ್ಮ' (Spiritual Religion) ಲೌಕಿಕ ಧರ್ಮವಲ್ಲ. ಅದು ದೇವಮಾನವರಲ್ಲಿಯ ಸಾಕ್ಷಾತ್ ಸಂಬಂಧ. "It is direct relation between God and Man".

ಧರ್ಮವು ಮುಖ್ಯವಾಗಿ ಮೂರು ಅಂಶಗಳನ್ನು ಹೊಂದಿರುತ್ತದೆ. ಅವೆಂದರೆ;

1. ಜ್ಞಾನ ಅಥವಾ ನಂಬಿಕೆ.
2. ನೀತಿ ಅಥವಾ ಮೌಲ್ಯ.
3. ಭಾವ ಅಥವಾ ಸಂವೇಗ.

ಮನುಷ್ಯನು ಯಾವ ಪರಿಸರದಲ್ಲಿ ಹುಟ್ಟುತ್ತಾನೋ ಅಲ್ಲಿಂದಲೇ ಅವನಿಗೆ ಧರ್ಮದ ಬಗೆಗೆ ಇರುವ ಜ್ಞಾನವು ಪ್ರಾರಂಭವಾಗುತ್ತದೆ. ಚಿಕ್ಕಮಗುವಿಗೆ ದೇವರಿಗೆ ನಮಸ್ಕಾರ ಮಾಡಬೇಕು ಎಂಬ ಸಂಸ್ಕಾರದಿಂದ ಪ್ರಾರಂಭವಾಗಿ ಬೆಳೆದಂತೆ ಧಾರ್ಮಿಕ ನಂಬಿಕೆಗಳು ಆಚರಣೆಗಳಲ್ಲಿ ಪಕ್ವತೆಯನ್ನು ಕಾಣಬಹುದಾಗಿದೆ. ಜೀವನದ ಗುರಿಯು ಮೋಕ್ಷ ಸಾಧನೆಯೆನ್ನುವ ವಿಚಾರವು ಅವನಿಗೆ ಬರುತ್ತದೆ. ಆದ್ದರಿಂದ ಧರ್ಮ ವಿಷಯಕ ಜ್ಞಾನ, ನಂಬಿಕೆಗಳೆರಡು ತುಂಬಾ ಅವಶ್ಯವಾಗಿ ಬೇಕಾಗುತ್ತದೆ. ನೀತಿ ಅಥವಾ ನೈತಿಕ ಮೌಲ್ಯಗಳನ್ನು ಮಾನವನು ತಂದುಕೊಂಡರೆ ಮಾತ್ರ ಜೀವನವು ಪರಿಪೂರ್ಣತೆಯನ್ನು ಪಡೆಯಲು ಮತ್ತು ಅದರಿಂದ ನಿಜವಾದ ಸುಖ, ಶಾಂತಿ, ಸಂತೋಷ, ಸಮಾಧಾನಗಳನ್ನು ಪಡೆಯಲು ಸಾಧ್ಯ. ಅದಕ್ಕಾಗಿ ಅಹಿಂಸೆ, ಸತ್ಯ ಮುಂತಾದ ಉದಾತ್ತ ವಿಚಾರಗಳನ್ನು ಮೈಗೂಡಿಸಿಕೊಳ್ಳುವದು ತುಂಬಾ ಅವಶ್ಯವಾಗಿದೆ.

ಭಾವ (feeling) ಮತ್ತು ಸಂವೇಗ (emotion) ಗಳೂ ಧಾರ್ಮಿಕ ಜೀವನದ ಅಂಗವೆಂದು ಹೇಳಬಹುದು. ದೇವರಲ್ಲಿ ಭಯ, ಭಕ್ತಿ, ಗೌರವಗಳ ಒಂದು ಸಮ್ಮಿಶ್ರ ಭಾವನೆಯು ಉಂಟಾಗುತ್ತದೆ. ಈ ಭಾವನೆಯು ಹೆಚ್ಚಾಗಿ ಸಂವೇಗಕ್ಕೊಳಗಾಗಿ ಅದರಲ್ಲಿ ತಮ್ಮನ್ನು ತಾವು ಮರೆತು ಒಂದು ವಿಶಿಷ್ಟವಾದ ಅನುಭೂತಿಯ ಜ್ಞಾನವನ್ನು, ಸಂತೋಷವನ್ನು ಮಾನವನು ಪಡೆಯುತ್ತಾನೆ. ಇದರಿಂದ ತನ್ನ ಎಲ್ಲ ಆಶೆಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ನೈತಿಕ ಚೌಕಟ್ಟಿನೊಳಗಿದ್ದು ಕೊಂಡು ಶಾಂತಚಿತ್ತನಾಗುತ್ತಾನೆ.

ಧರ್ಮವು ಹಂತ ಹಂತವಾಗಿ ಬೆಳವಣಿಗೆಯನ್ನು ಪಡೆದುಕೊಂಡಿದೆ.

1. ಬಣಧರ್ಮ
2. ರಾಷ್ಟ್ರಧರ್ಮ
3. ವಿಶ್ವಧರ್ಮ

1. ಬಣಧರ್ಮವು ಕಾಡುಜನರ ಆಚರಣೆಯಾಗಿದ್ದು ಅವರು ಕೆಲವೊಂದು ಪದ್ಧತಿಗಳನ್ನು ವರ್ಷಕ್ಕೊಮ್ಮೆ ಸದಸ್ಯರೆಲ್ಲರೂ ಸೇರಿ ಆಚರಿಸಲು ಪ್ರಾರಂಭಿಸಿದರು. ಮರ, ನದಿ, ಬಂಡೆಗಳೇ ಅವರಿಗೆ ದೈವವಾಯಿತು. ಇವರು ಐಹಿಕ ಸುಖದ ಅಪೇಕ್ಷೆಯನ್ನು ಇಟ್ಟುಕೊಂಡೇ ಇದನ್ನು ಮಾಡುವವರಾಗಿದ್ದರು. ಉದಾತ್ತವಾದ ಧ್ಯೇಯವನ್ನಾಗಲಿ ಮೋಕ್ಷದ ಪರಿಕಲ್ಪನೆಯನ್ನು ಅವರು ಮಾಡಲಿಲ್ಲ.

2. ರಾಷ್ಟ್ರಧರ್ಮವು ಮನುಷ್ಯನ ಧರ್ಮ ವಿಕಾಸದ ಮುಂದಿನ ಮೆಟ್ಟಿಲೆಂದೇ ಹೇಳಬಹುದು. ಇಲ್ಲಿ ಮನುಷ್ಯನು ವ್ಯವಸಾಯ ವಿಜ್ಞಾನವನ್ನು ಕಲಿತುಕೊಂಡು ಅಲೆಮಾರಿ ಪ್ರವೃತ್ತಿಯನ್ನು ಬಿಟ್ಟು ಒಂದೇ ಕಡೆ ನೆಲೆಯೂರಿ ಇರತೊಡಗಿದ. ತಾನು ಹಾಗೂ ತನ್ನ ಸಾಕುಪ್ರಾಣಿಗಳ ಸಲುವಾಗಿ ವ್ಯವಸಾಯ ಮಾಡತೊಡಗಿದ. ಆಗ ಬೇರೆ ಬೇರೆ ಬಣದವರು ಒಗ್ಗೂಡಿ ಇರತೊಡಗಿದರು. ಇದರಿಂದ ಅವರ ವಿಚಾರಗಳಲ್ಲಿ ಕೆಲವೊಂದು ಬದಲಾವಣೆಗಳನ್ನು ಕಾಣಬಹುದು. ಉದಾ: ದೈವಗಳಿಗೆ ಸ್ಪಷ್ಟರೂಪವನ್ನು ಕೊಟ್ಟು ಅವುಗಳಿಗಾಗಿ ಗುಡಿಗಳನ್ನು ಕಟ್ಟಿ ಗರ್ಭಗುಡಿಯಲ್ಲಿ ವಿಗ್ರಹಗಳನ್ನು ಇಟ್ಟು ಪೂಜಿಸುವಂತಾದರು. ಪೂಜೆಯನ್ನು ಮಾಡುವುದರಿಂದ ರಾಷ್ಟ್ರದ ಎಲ್ಲ ಜನರಿಗೆ ಒಳ್ಳೆಯದಾಗಲಿ ಎಂಬ ನಿಸ್ವಾರ್ಥ ಉದ್ದೇಶವನ್ನು ಇಟ್ಟುಕೊಂಡು ಪೂಜಿಸುತ್ತಿದ್ದರು.

3. ವಿಶ್ವಧರ್ಮ : ಸುಸಂಸ್ಕೃತರಾದ ಧರ್ಮ ಜಿಜ್ಞಾಸುಗಳು ಮತ್ತು ಅನುಭಾವಿಗಳ ಪ್ರಕಾರ ಧರ್ಮವನ್ನು ಎಲ್ಲ ರೀತಿಯ ವ್ಯವಹಾರಗಳಲ್ಲೂ ಆಚರಿಸುವ ಮೂಲಕ ಧಾರ್ಮಿಕ ಮೌಲ್ಯಗಳನ್ನು ತಮ್ಮ ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳಲಿಚ್ಛಿಸುತ್ತಾರೆ. ವಾಸ್ತವಿಕವಾದ ಆಚರಣೆಗಳಲ್ಲಿ ಘರ್ಷಣೆಗಳು ಏರ್ಪಟ್ಟಾಗ ವಿಶಾಲ ಅರ್ಥದಲ್ಲಿ

ವಿಶ್ವಧರ್ಮವು ಸ್ಥಾಪಿಸಲ್ಪಡುತ್ತದೆ.

ಗುರುದೇವ ರಾನಡೆಯವರು ಧರ್ಮಗಳಲ್ಲಿ ಎರಡು ಬಗೆಗಳನ್ನು ಕಲ್ಪಿಸಿರುವರು.

1. ಪಾರಮಾರ್ಥಿಕ ಧರ್ಮ (Spiritual Religion)

2. ಲೌಕಿಕ ಧರ್ಮ (Temporal Religion)

ಒಂದು ನಿವೃತ್ತಿಧರ್ಮ ಇನ್ನೊಂದು ಪ್ರವೃತ್ತಿಧರ್ಮ. ಒಂದು ದೇವ–ಮಾನವನ ಪ್ರತ್ಯಕ್ಷ ಸಂಬಂಧವನ್ನು ಒಳಗೊಂಡಿರುವುದು. ಇನ್ನೊಂದು ದೇವರನ್ನು ಕುರಿತು ಕೆಲವು ನಂಬಿಕೆ, ಆಚಾರ, ಇತ್ಯಾದಿಗಳನ್ನು ನಂಬಿರುವುದು. ಒಂದನೆಯದು 'ಚೈತನ್ಯ' ಎರಡನೆಯದು 'ರೂಪ' ಎಂದು ಹೇಳುತ್ತಾರೆ.

**ವಿಜ್ಞಾನ :** ವಿಜ್ಞಾನವು ಆಧುನಿಕ ಯುಗದಲ್ಲಿ ತನ್ನದೇ ಆದ ಛಾಪನ್ನು ಇಟ್ಟಿದೆ. ಮಾನವನು ತನ್ನ ದಿನನಿತ್ಯದ ಜೀವನವು ವೈಜ್ಞಾನಿಕ ಅಂಶಗಳಿಂದ ಕೂಡಿದ್ದು ಅವನ ವಿಚಾರದಲ್ಲಿಯೂ ಹಾಸುಹೊಕ್ಕಿದೆ. ವಿಜ್ಞಾನವು ಮನುಷ್ಯನನ್ನು ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ವಿಚಾರ ಮಾಡಲು ಅವಕಾಶ ಮಾಡಿಕೊಡುತ್ತದೆ. ಮನುಷ್ಯನು ವಿವೇಚನೆಯಿಂದ ಸರಿಯಾದ ನಿರ್ಧಾರವನ್ನು ಕೈಗೊಳ್ಳುವಂತೆ ಮಾಡುತ್ತದೆ.

ಗುರುದೇವ ರಾನಡೆಯವರು ಧರ್ಮ ಮತ್ತು ವಿಜ್ಞಾನಗಳ ಸಮನ್ವಯವಿರುವುದು ಎಂದು ಅಭಿಪ್ರಾಯಪಡುತ್ತಾರೆ. ವಿಜ್ಞಾನವು ಪರಮಾತ್ಮನ ಸೃಷ್ಟಿಯನ್ನು ಕುರಿತು ವಿಚಾರಿಸುವುದು. ಅದು ಧರ್ಮವನ್ನು ಅಲ್ಲಗಳೆಯುವುದರ ಬದಲು ಅದಕ್ಕೆ ಪೂರ್ಣತೆಯನ್ನು ನೀಡುವುದು. ವಿಜ್ಞಾನ–ಧರ್ಮಗಳು ವಿಶ್ವದ ಎರಡು ಭಿನ್ನ ಪಾರ್ಶ್ವಗಳನ್ನು ವಿಚಾರಿಸುತ್ತಿವೆ. ಆದುದರಿಂದ ಅವುಗಳಲ್ಲಿ ಮೂಲಭೂತ ಸಾಮರಸ್ಯವು ಇರಲೇಬೇಕು. ಧರ್ಮವು ವಿಶ್ವದ ಅಂತರ್ಯಾಮಿಯಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ವಿಧಾನಗಳ ಸಂಶೋಧನೆಯನ್ನೂ, ಪ್ರಯೋಗಗಳನ್ನೂ ಮಾಡಲಿದೆ. ಅದು ಪರಮಾರ್ಥ ಕ್ಷೇತ್ರದಲ್ಲಿಯ ವಿಜ್ಞಾನ ಎನ್ನಬಹುದು. ಈರ್ವರ ಗುರಿ ಸತ್ಯ–ಶೋಧನೆ, ಒಂದರ ಕ್ಷೇತ್ರ ಪರಮಾರ್ಥ–ಸೃಷ್ಟಿ, ಅಂತಃಸೃಷ್ಟಿ; ಇನ್ನೊಂದರದು ಭೌತಸೃಷ್ಟಿ ಬಹಿಃಸೃಷ್ಟಿ ಈರ್ವರ ಸಂಶೋಧನ–ಪದ್ಧತಿಯಲ್ಲಿಯೂ ತುಂಬ ಸಾಮ್ಯವಿರುವುದು. ಮೊದಲು ಒಂದು ವಿಷಯವನ್ನು ಗೃಹೀತಕೃತ್ಯವೆಂದು (Hypothesis) ಬಗೆದು, ಅದನ್ನು ವಿಜ್ಞಾನ ಸತ್ಯವೆಂದು ಸ್ವೀಕರಿಸುವುದು; ಇಲ್ಲದಿದ್ದರೆ ಅದನ್ನು ಬಿಟ್ಟು ಬಿಡುವುದು. ವಿಜ್ಞಾನದಂತೆ ಧರ್ಮವು ಕೂಡ ಇದನ್ನೇ ಮಾಡುವುದು. ಧರ್ಮದ ಪ್ರಯೋಗಶಾಲೆಯು ಮಾನವನ ಶರೀರ–ಅಂತರಂಗ. ಅಲ್ಲಿ ಅವನ ಮನಸ್ಸಿನ ಸಾಧನದಿಂದ ಅದು ಪ್ರಯೋಗಗಳನ್ನು ನಡೆಸುವುದು. ಪರಾತ್ಪರ ಸತ್ಯವನ್ನು ಅರಿಯಲು ಕಾಣಲು ಯತ್ನಿಸುವುದು.

ಧರ್ಮ ಮತ್ತು ವಿಜ್ಞಾನಗಳೆರಡು ಒಂದಕ್ಕೊಂದು ಪೂರಕವಾದ ಬದಲು ಅವುಗಳು ಒಂದಕ್ಕೊಂದು ಮಾರಕ ಸ್ಥಿತಿಯಲ್ಲಿ ಇವೆ. ಇಂತಹ ಪರಿಸ್ಥಿತಿಯಲ್ಲಿ ಎರಡೂ ಕ್ಷೇತ್ರಗಳಲ್ಲಿ ಕಲಹ, ಅರಾಜಕತೆ, ಅಶಾಂತಿಯ ತಲೆದೋರಿವೆ. ಇದನ್ನು ಅಳಿಸಿ ಮತ್ತೆ ಎಲ್ಲೆಡೆ ಮರಳಿ ಸೌಹಾರ್ದ ಶಾಂತಿಗಳು ನೆಲೆಗೊಳ್ಳಬೇಕಾದರೆ ಧರ್ಮ–ವಿಜ್ಞಾನಗಳಲ್ಲಿ ಸಾಮರಸ್ಯ ಉಂಟಾಗಬೇಕು. ಅದಕ್ಕಾಗಿ ಆಧುನಿಕ ವಿಜ್ಞಾನಿ 'ಐನ್‌ಸ್ಟೈನ್'ರು ಹೇಳುವಂತೆ "Science without Religion is lame; Religion without science is blind" **"ಧರ್ಮರಹಿತ ವಿಜ್ಞಾನವು ಕುಂಟು; ವಿಜ್ಞಾನರಹಿತ ಧರ್ಮವು ಕುರುಡು"**, ಇದೊಂದು ತುಂಬಾ ಅರ್ಥಪೂರ್ಣ ಸೂತ್ರ. ವಿಜ್ಞಾನವು ಧರ್ಮದ ತಿರುಳಾದ ನೈತಿಕ ಹಾಗೂ ಪಾರಮಾರ್ಥಿಕ ಕಾಲುಗಳ ಮೇಲೆ ಸ್ಥಿರವಾದ ತಳಹದಿಯ ಆಧಾರದಿಂದ ತನ್ನ ಸಂಶೋಧನದ ಗುರಿ–ದಾರಿಗಳನ್ನು ನಿಶ್ಚಯಿಸಬೇಕು ಮತ್ತು ಅವುಗಳ ಫಲಗಳನ್ನು ಬಳಸಬೇಕು. ಧರ್ಮವು ವಿಜ್ಞಾನದ ತರ್ಕನಿಷ್ಠೆಯನ್ನು, ಪ್ರಯೋಗ ಪದ್ಧತಿಯನ್ನು ಅನುಸರಿಸಿ, ತನ್ನಲ್ಲಿಯ ಲೋಪದೋಷಗಳನ್ನು ಕಳೆದು, ತನ್ನ ಪರಿಶುದ್ಧ ಅತ್ಮತೇಜವನ್ನು ತಳೆಯಬೇಕು.

**ಸಮಾರೋಪ :**ಆಧುನಿಕ ಯುಗದ ತುತ್ತತುದಿಯನ್ನು ಮುಟ್ಟಿರುವ ಮನುಷ್ಯನ ಸ್ಥಿತಿಯು ಹೇಗಿರುವುದೆಂದರೆ ಪಾರಮಾರ್ಥದ ಸಂಸ್ಪರ್ಶವಿಲ್ಲದ ಧರ್ಮ–ವಿಜ್ಞಾನಗಳ ಸಹಾಯದಿಂದ ತನ್ನ ಬುದ್ಧಿಯನ್ನೇನೋ ಬೆಳೆಸಿಕೊಂಡನು. ಆದರೆ ಭಾವವನ್ನು ಬೆಳೆಸಲಿಲ್ಲ. ಅದರಿಂದ ಅವನ ಭೌತಿಕ ಬಲ ಬೆಳೆಯಿತು. ಆತ್ಮಿಕ ಬಲ ಬೆಳೆಯಲಿಲ್ಲ. ಇದರಿಂದ ಮಾನವನಿಗೆ ಶಾಂತಿ, ಸಮಾಧಾನಗಳು ದೊರಕಲು ಹೇಗೆ ಸಾಧ್ಯವಾಗುವುದು. ಆದುದರಿಂದ ಇನ್ನು ಮುಂದಾದರೂ ಪರಮಾರ್ಥದ ಪ್ರಭಾವವು ಧರ್ಮ ವಿಜ್ಞಾನಗಳೆರಡನ್ನೂ ಚೈತನ್ಯಯುತವನ್ನಾಗಿಸಬೇಕು. ಗುರುದೇವ ರಾನಡೆಯವರು ಸಚೇತನ ಧರ್ಮವು ವಿಜ್ಞಾನಕ್ಕೆ ಅವಿರೋಧಿಯಾಗಿ ಬಾಳಲಿ ಮತ್ತು ಸಚೇತನ ವಿಜ್ಞಾನವು ಧರ್ಮಕ್ಕೆ ಉಪಕಾರಕವಾಗಿ ಬೆಳೆಯಲಿ, ಧರ್ಮ ವೈಜ್ಞಾನಿಕವಾಗಲಿ, ವಿಜ್ಞಾನ ಧಾರ್ಮಿಕವಾಗಲಿ, ಬುದ್ಧಿಗೊಪ್ಪದ ತತ್ವಗಳನ್ನು ಧರ್ಮಸಾರದಿರಲಿ. ಅಧಾರ್ಮಿಕ–ಅನೈತಿಕ ಆದರ್ಶಗಳನ್ನು ವಿಜ್ಞಾನವು ಬೆಂಬಲಿಸದಿರಲಿ ಎಂದು ಅರುಹಿರುವರು.

ಜೀವನದ ಏಕಮೇವ ಧ್ಯೇಯವು 'ಒಬ್ಬ ದೇವ, ಒಂದು ಜಗತ್ತು, ಒಂದು ಧರ್ಮ' ಈ ಧ್ವಜದ ನೆರಳಿನಲ್ಲಿ ಇಡೀ ಮಾನವತೆಯನ್ನು ತರುವುದರಿಂದಲೂ ಆಧ್ಯಾತ್ಮಿಕ ವಿಚಾರಗಳನ್ನು ಇದರಲ್ಲಿ ವಿವರಿಸುವುದರಿಂದಲೂ ಮಾನವ ಧರ್ಮವನ್ನು ಸ್ಥಾಪಿಸಬಹುದು ಎಂದು ರಾನಡೆಯವರು ಹೇಳಿದ್ದಾರೆ. ಈ ಭಾವನೆ ಪ್ರತಿಯೊಬ್ಬರಲ್ಲಿ ಉದಯಿಸಬೇಕು ಅದಕ್ಕಾಗಿ ಎಲ್ಲರು ಪ್ರೀತಿ, ಶಾಂತಿ, ಸಮಾಧಾನದಿಂದ ಬಾಳಬೇಕೆಂಬುದು ಅವರ ಆಶಯವಾಗಿತ್ತು. ಅವರ ಆದರ್ಶವಾದ ನುಡಿಗಳನ್ನು ಈ ಪ್ರಬಂಧದ ಮೂಲಕ ಹೇಳಲು ಪ್ರಯತ್ನಿಸಿದ್ದೇನೆ.

**ಆಧಾರ ಗ್ರಂಥಗಳು:**

1) ಡಾ. ಎನ್. ಜಿ. ಮಹಾದೇವಪ್ಪ; ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ವಿಶ್ಲೇಷಣೆ; ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ; 1995

ಶ್ರೀ ಮನೋಹರ ಶ್ರೀ ನಿವಾಸ ದೇಶಪಾಂಡೆ; ಶ್ರೀ ಗುರುದೇವ ರಾನಡೆಯವರ ಸಮನ್ವಯ ದರ್ಶನ; ತುಲನಾತ್ಮಕ ಧರ್ಮ – ದರ್ಶನ ವಿದ್ಯಾಪೀಠ ಬೆಳಗಾವಿ; 2006

# ಮಾನವನ ವಿಕಾಸನದ ಹಾದಿಯಲ್ಲಿ ನಂಬಿಕೆಗಳ ಹಾಗು ಉದ್ದೇಶಗಳ ಪ್ರಾಮುಖ್ಯತೆ

[1]ಚಂದ್ರಮೌಳಿ ಎಂ.ಎಸ್., [2]ಭಾನು ಕೆ.ಎನ್.
[1]ವಿದ್ಯಾರ್ಥಿ, ಕೆ.ಎಸ್.ಒ.ಯು., ಮೈಸೂರು, ಭಾರತ, [2]ಸಹಾಯಕ ಪ್ರಾಧ್ಯಾಪಕರು, ಪಿ.ಆರ್.ಸಿ.ಇ., ಬೆಂಗಳೂರು, ಭಾರತ.

**ಪ್ರಬಂಧ ಸಾರ:–** ಮಾನವನಲ್ಲಿರುವ ನಂಬಿಕೆಗಳು ಹಾಗು ಉದ್ದೇಶಗಳು ಅವನ ಮೇಲೆ ಗಾಢವಾದ ಪರಿಣಾಮವನ್ನು ಬೀರುವಂಥಃವುಗಳೇ ಆಗಿರುವುದಿದೆ. ನಂಬಿಕೆಗಳು ಹಾಗು ಉದ್ದೇಶಗಳು ಒಂದನ್ನೊಂದು ಅವಲಂಬಿಸಿಕೊಂಡಿವೆ ಎಂದರೆ ತಪ್ಪಾಗಲಾರದು. ನಂಬಿಕೆಗಳು ಮಾನವನಲ್ಲಿ ಹಲವಾರು ಮಾಧ್ಯಮಗಳ ಮುಖಾಂತರವಾಗಿಯೂ ರಚನೆಗೊಳ್ಳುವುದಿದೆ. ಮಾನವನು ಯಾವ ಉದ್ದೇಶ ಇಟ್ಟುಕೊಂಡು ಕಲಿತು, ತಿಳುವಳಿಕೆಯಲ್ಲಿ ಮುಂದುವರೆಯುತ್ತಾನೆ ಎಂದೆನ್ನುವರ ಮೇಲೆಯೂ ನಂಬಿಕೆಗಳ ರಚನೆಗಳು ಅವಲಂಬಿತವಾಗಿರುವುದಿದೆ. ಖಂಡನೆ ಹಾಗು ಮಂಡನೆಗಳು ವ್ಯಕ್ತಿಯ ನಂಬಿಕೆಗಳ ಆಧಾರದ ಮೇಲೆಯೆ ಬಹುತೇಕವಾಗಿ ಅವಲಂಬಿತವಾಗಿರುವುದಿದೆ. ನಂಬಿಕೆಗಳು ಅವಿದ್ಯೆ ಹಾಗು ವಿದ್ಯೆಗಳ ಮೇಲೂ ಅವಲಂಬಿತವಾಗಿರುವುದಾಗಿ ವೈದೀಕ ಶಾಸ್ತ್ರಗಳು ವಾದಿಸಿರುವುದಿದೆ.

ನಂಬಿಕೆಗಳು ಹಾಗು ಉದ್ದೇಶಗಳು ವಿಕಾಸದ ಹಾದಿಯಲ್ಲಿ ಮಾನವನ ಮೇಲೆ ಹೇಗೆ ತಮ್ಮ ಪ್ರಭಾವವನ್ನು ಬೀರುತ್ತವೆ ಎಂಬುವುದರ ಕುರಿತಾಗಿ ವೈದೀಕ ಹಾಗು ವೈಜ್ಞಾನಿಕ ಉಲ್ಲೇಖಗಳು ಸಮಗ್ರವಾಗಿ ಚರ್ಚಿಸಿರುವುದಿದೆ. ವಿಜ್ಞಾನ ಕ್ಷೇತ್ರದಲ್ಲಿನ ನಂಬಿಕೆ, ಹಾಗು ಉದ್ದೇಶಗಳ ಕುರಿತಾದ ಹಲವಾರು ಪ್ರಯೋಗಗಳು ನಡೆದಿರುವುದಿದೆ ಹಾಗು ನಡೆಯುತ್ತಿರುವುದೂ ಆಗಿರುವುದಿದೆ. ವಿಶೇಷವಾಗಿ ಭರತೀಯ ತಾತ್ತ್ವಿಕೋದ್ಭಿತ ಯೋಗ ಶಾಸ್ತ್ರ ವಿಭಾಗದ ಧ್ಯಾನ ಎಂಬ ವಿಚಾರದ ಮೇಲಂತೂ ವಿಜ್ಞಾನವು ವಿಶೇಷವಾಗಿ ಗಮನಹರಿಸಿರುವುದಾಗಿದೆ. ಇವುಗಳೆಲ್ಲರ ಮೇಲಿನ ಒಂದು ಸಂಕ್ಷಿಪ್ತ ಅಧ್ಯಯನವೇ ಈ ಪ್ರಬಂಧದ ಮೂಲ ಉದ್ದೇಶವಾಗಿರುವುದಿದೆ.

ಮಾನವನಲ್ಲಿರುವ ನಂಬಿಕೆಗಳು ಹಾಗು ಉದ್ದೇಶಗಳು ಅವನ ಮೇಲೆ ಗಾಢವಾದ ಪರಿಣಾಮವನ್ನು ಬೀರುವಂಥಃವುಗಳೇ ಆಗಿರುವುದಿದೆ. ನಂಬಿಕೆಗಳು ಹಾಗು ಉದ್ದೇಶಗಳು ಒಂದನ್ನೊಂದು ಅವಲಂಬಿಸಿಕೊಂಡಿವೆ ಎಂದರೆ ತಪ್ಪಾಗಲಾರದು. ಏಕೆಂದರೆ, ನಂಬಿಕೆಗಳ ಆಧಾರದ ಮೇಲೆಯೇ ಉದ್ದೇಶಗಳು ಹುಟ್ಟುವುದಾಗಿದೆ ಹಾಗು ಉದ್ದೇಶದ ಫಲಗಳು ನಂಬಿಕೆಗಳ ರಚನೆಗಳನ್ನು ಬದಲಾಯಿಸುವುದಾಗಿದೆ. ನಂಬಿಕೆ ಇಲ್ಲ ಎಂದೆನ್ನುವುದೂ ಕೂಡ ಇನ್ನೊಂದು ಮುಖದಲ್ಲಿ ನಂಬಿಕೆಯೇ ಆಗಿರುವುದಿದೆ, ಹೇಗೆಂದರೆ, ಇಲ್ಲ ಎಂದೆನ್ನುವುದನ್ನು ನಂಬಿರುವುದರ ಕಾರಣದಿಂದಾಗಿಯೆ. ಎಲ್ಲಿ ನಂಬಿಕೆಯು ಇಲ್ಲ ಎಂದೆನ್ನುವ ರೂಪದಲ್ಲಿದೆಯೋ, ಅಂಥಃ ಸಮಯದಲ್ಲಿ, ಆ ವಿಚಾರದ ಪ್ರಯುಕ್ತವಾಗಿ ಉದ್ದೇಶಗಳೂ ಕೂಡ ಇರುವುದಿಲ್ಲವಾಗಿರುತ್ತವೆ.

ನಂಬಿಕೆಗಳು ಮಾನವನಲ್ಲಿ ಹಲವಾರು ಮಾಧ್ಯಮಗಳ ಮುಖಾಂತರವಾಗಿ ರಚನೆಗೊಳ್ಳುವುದಿದೆ. ನಂಬಿಕೆಯ ರಚನೆಗಳು ಸಾಮಾನ್ಯವಾಗಿ ತಂದೆ ತಾಯಿಗಳಿಂದ ಮೊದಲ್ಗೊಂಡು ಗುರುಗಳಿಂದ ಮುಂದುವರೆದು ನಂತರದಲ್ಲಿ ತಾನು ನಂಬುವ ಹಲವಾರು ಮಾಧ್ಯಮಗಳ ಮೇಲೆಯೆ ಅವಲಂಬಿತವಾಗಿರುವುದಿದೆ. ವೈದೀಕ ರಚನೆಗಳಾಗಲೀ ಅಥವಾ ಯಾವುದೇ ಧಾರ್ಮಿಕ ರಚನೆಗಳಾಗಲೀ ಅಥವಾ ವಿಜ್ಞಾನವಾಗಲೀ ಅಥವಾ ಇತಹಾಸವಾಗಲೀ ಅಥವಾ ಸಾಹಿತ್ಯವಾಗಲೀ ಅಥವಾ ಇನ್ನಿತರ ಯಾವುದೇ ವಿಚಾರವಾಗಲಿ, ಮಾನವನ ನಂಬಿಕೆಗಳ ಮೇಲೆ ತನ್ನ ಪ್ರಭಾವವನ್ನು ಖಂಡಿತವಾಗಿಯೂ ಬೀರುವುದೇ ಆಗಿರುವುದಿದೆ..

ಮಾನವನು ಯಾವ ಉದ್ದೇಶ ಇಟ್ಟುಕೊಂಡು ಕಲಿತು, ತಿಳುವಳಿಕೆಯಲ್ಲಿ ಮುಂದುವರೆಯುತ್ತಾನೆ ಎಂದೆನ್ನುವರ ಮೇಲೆಯೂ ನಂಬಿಕೆಗಳ ರಚನೆಗಳು ಅವಲಂಬಿತವಾಗಿರುವುದಿದೆ. ಸಕಲ ರೀತಿಯಾದ ನಂಬಿಕೆಗಳೂ ಕೂಡ ಮಾನವನಿಗೆ ಯಾವುದಾದರೂ ಒಂದು ಸ್ತರದಲ್ಲಿ ಖಂಡಿತವಾಗಿಯೂ ಉಪಯೋಗಕರವಾಗಿರು ವುದೇ ಆಗಿರುವುದಿದೆ. ಜೀವಿಸುವುದರ ಪ್ರಯುಕ್ತವೇ ಆಗಿರಲಿ ಅಥವಾ ಸಂಶೋಧನಾ ಪ್ರಯುಕ್ತವೇ ಆಗಿರಲಿ ಅಥವಾ ಪಾರಮಾ ರ್ಥಿಕ ಪ್ರಯುಕ್ತವೇ ಆಗಿರಲಿ ಮುಂದುವರೆಯುಲು ಆ ವ್ಯಕ್ತಿಗೆ ಪ್ರಾಥಮಿಕವಾಗಿ ಆಯಾ ವಿಚಾರದ ಬಗೆಗೆ ನಂಬಿಕೆಯು ಇರಲೇ ಬೇಕಾಗಿರುವುದಿದೆ. ನಂಬಿಕೆಯು ದೃಢವಾಗಲು ವಿದ್ಯೆಯ ಅವಶ್ಯಕತೆಯು ಬಹಳವಾಗಿ ಇರುವುದಿದೆ. ಸದೃಢವಾದ ನಂಬಿಕೆಯು ಆ ವ್ಯಕ್ತಿಯಲ್ಲಿ ಆತ್ಮವಿಶ್ವಾಸವನ್ನು ಉಂಟುಮಾಡುವುದಿದೆ. ಆತ್ಮವಿಶ್ವಾಸವು ವ್ಯಕ್ತಿಯ ಉದ್ದೇಶವನ್ನು ದೃಢಗೊಳಿಸುವುದರಲ್ಲಿ ಮಹತ್ವದ ಪಾತ್ರ ವಹಿಸುವುದಿದೆ. ಸದೃಢವಾದ ಉದ್ದೇಶವು ವ್ಯಕ್ತಿಗೆ ನಿರೀಕ್ಷಿತವಾದ ಕಾರ್ಯವನ್ನು ಕೊಡಮಾಡುವುದಿದೆ. ಸರಿ ರೀತಿಯಲ್ಲಿ ಕೈಗೊಂಡ ಕಾರ್ಯದ ಫಲವು ವ್ಯಕ್ತಿಯನ್ನು ತನ್ನ ಗುರಿಯೆಡೆಗೆ ಚಲಿಸುವಂತೆ ಮಾಡುವುದಿದೆ. ಚಲನೆಯು ಸತ್ಯವಾದ ಮಾರ್ಗದಲ್ಲಿದ್ದ ಪಕ್ಷದಲ್ಲಿ, ವ್ಯಕ್ತಿಯನ್ನು ವಿಕಾಸದ ಪರಿಧಿಗೆ ಪರಿಚಯಿಸುವುದಿದೆ.

ಯಾವುದೇ ವಿಚಾರದ ಮೇಲಿನ ಖಂಡನೆ ಹಾಗು ಮಂಡನೆ ಎಂದೆನ್ನುವ ಎರಡು ರೂಪಗಳನ್ನು ಮಾನವನ ಸಮಾಜದಲ್ಲಿ ಮಾತ್ರವೇ ಕಾಣಬಹುದಾಗಿದೆ. ಈ ಎರಡೂ ರೂಪಗಳು ಆಯಾ ವ್ಯಕ್ತಿಯ ನಂಬಿಕೆಗಳ ಆಧಾರದ ಮೇಲೆಯೆ ಬಹುತೇಕವಾಗಿ ಅವಲಂಬಿತವಾಗಿರುವುದಿದೆ. ಖಂಡನೆಯಾಗಲೀ ಅಥವಾ ಮಂಡನೆಯಾಗಲೀ ನಂಬಿಕೆಯಿಂದ ಉಂಟಾದ ಉದ್ದೇಶಗಳೇ ಆಗಿರುವುದಿದೆ. ಈ ರೀತಿಯಾದ ಉದ್ದೇಶಗಳು ಸಂಬಂಧಪಟ್ಟ ವಿಚಾರದ ಮೇಲಿನ ವ್ಯಕ್ತಿಯ ಅಂತಿಮವಾದ ನಿರ್ಧಾರವೇ ಆಗಿರುವುದಾಗಿರುತ್ತದೆ. ಅಂತಿಮ ನಿರ್ಧಾರವನ್ನು ಯಾವುದೇ ವ್ಯಕ್ತಿಯು ನಂಬಿಕೆಯ ಆಧಾರದ ಮೇಲೆ ತೆಗೆದುಕೊಳ್ಳುವ ಮೊದಲು ಯಾವ ಯಾವ ಮಾಧ್ಯಮಗಳು ಮನುಜನನ್ನು ಎಲ್ಲಿಲ್ಲಿಗೆ ಒಯ್ಯುತ್ತವೆ ಎಂಬ ಜ್ಞಾನವು ಪ್ರಾಥಮಿಕವಾಗಿ ಇರಲೇಬೇಕಾಗಿದೆ. ಯಾವ ಯಾವ ಮಾಧ್ಯಮಗಳು ಮಾನವನ್ನು ಯಾವ ಯಾವ ದಡ ಸೇರಿಸುತ್ತವೆ ಎನ್ನುವುದರ ಬಗೆಗೆ ಸರ್ವಜ್ಞನು ಕೆಳಕಂಡಂತೆ ಒಟ್ಟು ಸಾರದ ರೀತಿಯಲ್ಲಿ ಹೇಳಿರುತ್ತಾನೆ:

ಅಕ್ಕರವು ಲೇಖಕ್ಕೆ, ತರ್ಕತಾ ವಾದಕ್ಕೆ ।

ಮಿಕ್ಕ ಓದುಗಳು ತಿರುಪೆಗೆ ।
ಮೋಕ್ಷಕ್ಕೆ ಎರಡಕ್ಕರವೇ ಸಾಕೆಂದ ಸರ್ವಜ್ಞ ॥

ಅಕ್ಷರ ಎಂಬ ಮಾಧ್ಯಮವು ಮಾನವನಿಗೆ ಬರೆಯುವುದಕ್ಕೆ ಹಾಗು ಓದುವುದಕ್ಕೆ ಸಹಾಯಮಾಡುವುದಿದೆ. ತರ್ಕ ಎಂದೆನ್ನುವ ಮಾಧ್ಯಮವು ವಾದದ ವಿಚಾರದಲ್ಲಿ ಬಹಳವಾಗಿ ಉಪಯುಕ್ತವಾಗು ವುದಿದೆ. ಇನ್ನುಳಿದ ಓದುಗಳು ಜೀವಿಸುವುದಕ್ಕೆ ಸಹಾಯ ಮಾಡುವು ದಿದೆ. ಆದರೆ ಎರಡೇ ಅಕ್ಷರವಾದ ಸತ್ಯ ಎಂಬ ಮಾಧ್ಯಮವು ಮಾನವನ್ನು ವಿಕಾಸದ ಹಾದಿಗೆ ಒಳಪಡಿಸಿ ಮೋಕ್ಷ ಸಂಪಾದಿಸಿ ಕೊಡುವುದರಲ್ಲಿ ಸಹಾಯ ಮಾಡುವುದಿದೆ. ಮಾನವನ ನಂಬಿಕೆಯು ಸತ್ಯ ಮಾರ್ಗದೆಡೆ ಇದಲ್ಲಿ ಅವನ ವಿಕಾಸವು ಖಂಡಿತವಾಗಿಯೂ ಆಗುವುದಿದೆ. ವೈದೀಕ ಉಲ್ಲೇಖಗಳು ಹಾಗು ವಿಜ್ಞಾನಿಕ ಉಲ್ಲೇಖಗಳು ಸಹ ಖಂಡಿತವಾಗಿಯೂ ಸತ್ಯದ ಸ್ತರಗಳನ್ನು ಮಾನವನಿಗೆ ಪರಿಚಯಮಾಡಿಕೊಡುವುದಕ್ಕಾಗಿಯೇ ಇರುವುದಾಗಿದೆ.

ವಿಕಾಸ ಮಾರ್ಗಕ್ಕೆ ಕೊಂಡೊಯ್ಯುವ ವಿದ್ಯೆಯನ್ನು ಹೊರತುಪಡಿಸಿ ಇನ್ನುಳಿದ ಸಕಲ ವಿದ್ಯೆಗಳನ್ನೂ ವೈದೀಕವು ಅವಿದ್ಯೆ ಎಂದು ಕರೆದಿರುವುದಿದೆ. ವೈದೀಕ ಪ್ರಕಾರದ ವಿದ್ಯೆಯು ವಿಜ್ಞಾನವನ್ನು ಅರ್ಥಾತ್, ವೈಜ್ಞಾನಿಕ ತಳಹದಿಯ ಮೇಲಿನ ನಂಬಿಕೆಯನ್ನು ಮಾನವನಿಗೆ ಗಳಿಸಿಕೊಟ್ಟರೆ, ಅವಿದ್ಯೆಯು ಅವನಿಗೆ ಅಜ್ಞಾನವನ್ನು ಅರ್ಥಾತ್, ಅವೈಜ್ಞಾನಿಕ ತಳಹದಿಯ ಮೇಲಿನ ನಂಬಿಕೆಯನ್ನು ಗಳಿಸಿಕೊಡುವುದೇ ಆಗಿರುವುದಿದೆ. ಹಾಗೆಂದ ಮಾತ್ರಕ್ಕೆ ಅವಿದ್ಯೆ ಇಂದ ಉಂಟಾಗುವ ನಂಬಿಕೆಗಳು ಅನುಪಯುಕ್ತ ಎಂದೇನೂ ಅಲ್ಲದೆ, ಅದರ ಉಪಯುಕ್ತತೆಯು ಕ್ಷಣಿಕ ಹಾಗು ಕೇವಲ ಲೌಕಿಕ ಎಂಬ ಕಾರಣದಿಂದಾಗಿ ಹಾಗು ಪಾರಮಾರ್ಥಿಕದೆಡೆಗೆ ಕೊಂಡೊಯ್ಯುವುದಿಲ್ಲ ಎಂಬ ಕಾರಣದಿಂದಾಗಿ ವೈದೀಕ ಉಲ್ಲೇಖ ಗಳು ಈ ರೀತಿಯಾಗಿ ಹೆಸರಿಸಿರುವುದಾಗಿದೆ ಎಂದರೆ ತಪ್ಪಾಗಲಾ ರದು.

ಮಾನವನು ಬದುಕಲು ಹಾಗು ವಿದ್ಯೆಯ ಕಡೆಗೆ ಬರಲು ಹಾಗು ವಿಕಾಸಗೊಳ್ಳಲು ಮೊದಲು ಅವಿದ್ಯೆಯೇ ಅವಶ್ಯವಿರುವುದಾಗಿದೆ. ಅರ್ಥಾತ್, ವಿಕಾಸದೆಡೆಗೆ ಚಲಿಸಲು ಹಾಗು ವಿಕಾಸದ ಹಾದಿಯನ್ನು ಕ್ರಮಿಸಲು ವಿದ್ಯೆಯ ತಳಹದಿಯ ಮೇಲಿನ ನಂಬಿಕೆಗಳು ಎಷ್ಟು ಅವಶ್ಯಕವಾಗಿ ಇರುಬೇಕಾಗುವುದೋ ಹಾಗೆಯೇ ಅವಿದ್ಯೆ ತಳಹದಿಯ ಮೇಲಿನ ನಂಬಿಕೆಗಳ ಅವಶ್ಯಕತೆಯೂ ಇರಬೇಕಾಗಿದೆ. ಇದರ ಹಿಂದಿನ ತಾತ್ಪರ್ಯವು ಇಷ್ಟೇ, ವಿಕಾಸವು ಕೇವಲ ಬೌದ್ಧಿಕ ಮಟ್ಟದಲ್ಲಿದ್ದರೆ ಸಾಲದು, ದೇಹ ಮಟ್ಟದಲ್ಲೂ ಇರಬೇಕಾದ ಅವಶ್ಯಕತೆಯು ಇರುವುದಿದೆ. ಸಾಧಕನು ಸಾಧನೆಯಲ್ಲಿ ತೊಡಗಿದ್ದಾಗ ದೇಹ ಹಾಗು ಬೌದ್ಧಿಕತೆ, ಇವೆರಡರ ಕಡೆಗೂ ಜಾಗ್ರತನಾಗಿ ಇರಬೇಕಾದ ಅವಶ್ಯಕತೆಯು ಇರುವುದಿದೆ. ವಿಕಾಸವು ಒಂದಕ್ಕೊಂದು ಪೂರಕವಾಗಿ ಆಗಿರಲೇ ಬೇಕಾಗಿದೆ. ಕೇವಲ ದೇಹ ವಿಕಾಸವಾಗಲೀ ಅಥವಾ ಕೇವಲ ಬೌದ್ಧಿಕ ವಿಕಾಸವಾಗಲೀ ಮಾನವನನ್ನು ಅಂತಿಮ ಗುರಿಯೆಡೆಗೆ ಹಾಗು ಅದಕ್ಕನುಕೂಲಕರ ವಾದ ಹಾಗು ಅತ್ಯಂತ ಅವಶ್ಯಕರವಾದ ಸ್ಥಿತ್ಯಂತರದ ಸ್ಥಿತಿಗಳಿಗೆ ಕರೆದೊಯ್ಯುವುದಿಲ್ಲವಾಗಿರುವುದಿದೆ. ಕೆಲವು ಹಂತದವರೆಗೂ ಅವಿದ್ಯೆ ಹಾಗು ವಿದ್ಯೆಗಳ, ಇವೆರಡರ ಅವಶ್ಯಕತೆಗಳು ಇರುವುದೇ ಆಗಿದೆ.

ಸಾಮಾನ್ಯ ಜೀವನದಲ್ಲಿ, ಸೃಷ್ಟಿಯ ಸಕಲ ಚರಾಚರವಸ್ತುಗಳು ಶುದ್ಧ ಪ್ರಜ್ಞೆಯ ಸ್ತರದಲ್ಲಿ ಏಕತ್ವವನ್ನು ಹೊಂದಿವೆ ಎಂಬುವುದು ಮಾನವನ ಅರಿವಿಗೆ ಹಾಗು ನಂಬಿಕೆಗೆ ಸುಲಭವಾಗಿ ಬರುವುದಿಲ್ಲ ವಾಗಿದೆ. ಹೀಗಾಗಿ ಅವನು ಸಂಪೂರ್ಣ ವಿಶ್ವವನ್ನು ಪ್ರತ್ಯೇಕ ವಸ್ತುಗಳಾಗಿ ಹಾಗು ಪ್ರತ್ಯೇಕ ಘಟನೆಗಳಾಗಿ ನೋಡುವಂಥಃ ರೀತಿಯಲ್ಲಿ ನಂಬಿಕೆಯನ್ನು ವೃದ್ಧಿಪಡಿಸಿಕೊಂಡಿರುವಂಥಃವನೇ ಆಗಿರುತ್ತಾನೆ. ಈ ರೀತಿಯಾದ ನಂಬಿಕೆಯು ಅವನ ದಿನಂಪ್ರತಿಯ ಜೀವನದಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸಿದ್ದರೂ, ನೈಜತೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಸಹಾಯಮಾಡುವು ದಿಲ್ಲವಾಗಿದೆ. ಏಕೆಂದರೆ, ಭೇದಭಾವ ಹಾಗು ಗುಂಪುಗಳನ್ನಾಗಿ ವಿಂಗಡಿಸುವ ನಂಬಿಕೆ ಆಧಾರಿತ ಬುದ್ಧಿಯು, ಈ ರೀತಿಯಾದ ಸಾರಂಶವನ್ನು ಅವನಿಗೆ ಕೊಡಮಾಡಿರುವ ಕಾರಣದಿಂದಾಗಿಯೇ. ಪ್ರತ್ಯೇಕವಾದ ವಸ್ತುಗಳು ಹಾಗು ಪ್ರತ್ಯೇಕವಾದ ಘಟನೆಗಳೇ ಪ್ರಕೃತಿಯ ವಾಸ್ತವಿಕತೆಗಳು ಎನ್ನುವಂಥಃ ಸಾರಾಂಶದ ಪರಿಕಲ್ಪನೆಗಳಿಂದೊಡ ಗೂಡಿದಂಥಃ ವಿಚಾರಗಳು ಅವನಲ್ಲಿ ನಂಬಿಕೆಗಳಾಗಿ ಮಾರ್ಪಡಾ ಗುವುದಿದೆ. ಅವನ ನಂಬಿಕೆಗಳೇ ಅವನನ್ನು ಭ್ರಮಾನಿರತನಾಗುವಂತೆ ಮಾಡುವುದಿದೆ.

ವೈದೀಕ ಉಲ್ಲೇಖಗಳು ಮೇಲೆ ದಾಖಲಿಸಿದ ರೀತಿಯಾದ ಭ್ರಮೆಗ ಳನ್ನು ಅವಿದ್ಯೆ ಎಂದು ಕರೆದಿರುವುದಿದೆ. ಅವಿದ್ಯೆ ಎಂದೆನ್ನುವುದರ ಮತ್ತೊಂದು ರೂಪವು ಅಜ್ಞಾನವೇ ಆಗಿದ್ದು, ಅದು ಮಾಯೆಯ ಕಾರಣದಿಂದ ಮಾನವನ ಮನಸ್ಸಿನಲ್ಲಿ ಉಂಟಾದದ್ದು ಎಂದು ಕೂಡ ಉಲ್ಲೇಖಗಳು ಹೇಳುವುದಿದೆ. ಈ ರೀತಿಯಾದ ಭ್ರಮೆಯನ್ನು ಧ್ಯಾನದ ಮುಖಾಂತರವಾಗಿ ಹೋಗಲಾಡಿಸಿಕೊಳ್ಳಬಹುದಾಗಿದೆ ಎಂದು ಉಲ್ಲೇಖಗಳು ಹೇಳುವುದಿದೆ. ಧ್ಯಾನದ ಅಂತಿಮ ಸ್ಥಿತಿಯನ್ನು ಸಂಸ್ಕೃತದಲ್ಲಿ ಸಮಾಧಿ ಎಂದೂ ಕೂಡ ಅರ್ಥೈಸಿರುವು ದಿದೆ. ಧ್ಯಾನವನ್ನು ವೈಜ್ಞಾನಿಕ ದೃಷ್ಟಿಕೋನದಲ್ಲಿ, ಮಾನಸಿಕ ಸಮಸ್ಥಿತಿ ಎಂದೂ ಕೂಡ ಅರ್ಥೈಸಿಕೊಳ್ಳಬಹುದಾಗಿದೆ. ಮಾನಸಿಕ ಸಮಸ್ಥಿತಿಯ ಕಾರಣದಿಂದಾಗಿ ಮಾನವನ ಕೆಳ ಸ್ತರದ ಪ್ರಜ್ಞೆಯು ಉನ್ನತ ಸ್ತರಕ್ಕೆ ಏರಬಹುದಾಗಿದೆ.

ಮಾನವನಲ್ಲಿ ಇರುವ ನಂಬಿಕೆಗಳು ಹಾಗು ಉದ್ದೇಶಗಳು ಅವನ ಪ್ರಜ್ಞಾಸ್ಥಿತಿ ಹಾಗು ಗತಿಗಳನ್ನು ಸಂಪೂರ್ಣವಾಗಿ ಅವಲಂಬಿಸಿರುವು ದಿದೆ. ಇಷ್ಟೇ ಅಲ್ಲದೆ, ಅವನ ಭೌತಿಕ ಅಸ್ತಿತ್ವದ ರಚನೆಯೂ ಕೂಡ ಅವನಲ್ಲಿರುವ ಪ್ರಜ್ಞೆಯನ್ನು ಅವಲಂಬಿಸಿರುವುದೇ ಆಗಿದೆ. ಲೇಖನದ ಮುಂದಿನ ಭಾಗವು, ನಂಬಿಕೆಗಳು ಹಾಗು ಉದ್ದೇಶಗ ಳಿಂದ ರೂಪುಗೊಂಡ ಪ್ರಜ್ಞೆಯು ಹೇಗೆ ಮಾನವನ ದೇಹವನ್ನು ಮೂರು ಆಯಾಮಗಳಲ್ಲಿ ಚಿತ್ರಿತಗೊಳಿಸಿ ಪ್ರದರ್ಶನಗೊಳಿಸುವು ದಾಗಿದೆ ಹಾಗು ಆ ಪ್ರದರ್ಶನವನ್ನು ಹೇಗೆ ನೇರವಾಗಿ ಪ್ರಭಾವಿತ ಗೊಳಿಸಬಹುದಾಗಿದೆ ಎಂಬ ವಿದ್ಯೆಯ ಬಗೆಗೇ ಆಗಿರುವುದಾಗಿದೆ. ಇದರ ಹಿಂದಿರುವ ತತ್ವವನ್ನು ಹಾಗು ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳಲು ಇದರ ಯಾಂತ್ರಿಕ ರಚನೆಯನ್ನು ಅರಿಯಬೇಕಿದೆ.

ಮಾನವನ ಆಲೋಚನೆಗಳು ವಾಸ್ತವಿಕತೆಯನ್ನು ನಿಷ್ಕರ್ಷಿಸಲು ಸಾಧ್ಯವೆ? ಕ್ವಾಂಟಮ್ ಭೌತಶಾಸ್ತ್ರದ ವಿಭಾಗದಲ್ಲಿರುವ ಹಲವಾರು ಪ್ರಮುಖವಾದ ಮೂಲತತ್ವಗಳಲ್ಲಿ ಒಂದು ತತ್ವವು ಈ ಪ್ರಶ್ನೆಗೆ

ಸಾವಿರದ ಒಂಭೈನೂರ ಇಸವಿಯಲ್ಲಿ, ಡಬಲ್ ಸ್ಲಿಟ್ ಪ್ರಯೋಗದ ಮುಖಾಂತರವಾಗಿ ಸೈದ್ಧಾಂತಿಕ ಉತ್ತರವನ್ನು ಸಾಕ್ಷಿ ಆಧಾರಗಳ ಸಮೇತವಾಗಿ ನಿಖರವಾಗಿ ಪ್ರಸ್ತುತಪಡಿಸಿರುವುದಿದೆ. ಕ್ವಾಂಟಮ್ ಸ್ತರದಲ್ಲಿ, ಅಣುವಿನ ಸಾಮರ್ಥ್ಯ ಅಥವಾ ಶಕ್ತಿಯ ನಡತೆಯು ಅವಲೋಕಿಸುವವನ ಅರಿವಿನ ಆಧಾರದ ಮೇಲೆಯೇ ಅವಲಂಬಿತ ವಾಗಿರುತ್ತದೆ ಎನ್ನುವುದನ್ನು ವಿಜ್ಞಾನಿಗಳು ಸಿದ್ಧಪಡಿಸಿರುವುದಿದೆ. ಉದಾಹರಣೆಗೆ, ಎಲೆಕ್ಟ್ರಾನುಗಳು ಒಂದೇ ರೀತಿಯಾದ ಪರೀಸ್ಥಿತಿಯಲ್ಲಿ ಕೆಲವು ಬಾರಿ ಅಣುವಾಗಿ ವರ್ತಿಸಿದರೆ, ಮತ್ತೆ ಇನ್ನು ಕೆಲವು ಬಾರಿ ರೂಪ ರಹಿತವಾದ ಶಕ್ತಿಯ ಅಲೆಗಳಾಗಿ ಪರಿವರ್ತಿತವಾಗಿ ವರ್ತಿಸುವುದಿದೆ. ಏಕೆಂದರೆ, ಅವಲೋಕಿಸುವವನ ನಿರೀಕ್ಷಣೆಯು ಏನಿತ್ತು? ಎನ್ನುವುದರ ಆಧಾರ ಮೇಲೆ ಇದರ ನಡತೆಯು ನಿರ್ಧರಿತವಾಗುವ ಕಾರಣದಿಂದಾಗಿಯೆ. ಏನು ಸಂಭವಿಸಬಹುದು? ಎಂಬುವುದನ್ನು ನಿರೀಕ್ಷಣೆಯು ನಂಬಿಕೊಳ್ಳು

ವುದೋ, ಅದನ್ನೇ ಕ್ವಾಂಟಮ್ ಕಾರ್ಯಕ್ಷೇತ್ರವು ಮಾಡುವುದಾಗಿದೆ. ಇನ್ನೊಂದು ಪ್ರಮುಖವಾದ ಅಂಶ ಎಂದರೆ, ಕ್ವಾಂಟಮ್ ಕಾರ್ಯ ಕ್ಷೇತ್ರದ ಪ್ರಪಂಚವು ತಾನು ಹೇಗೆ ನಡೆದುಕೊಳ್ಳಬೇಕು ಎನ್ನುವುದರ ಬಗೆಗಿನ ತಿಳುವಳಿಕೆಯನ್ನು ಹೊಂದಿರುವಂಥಃಹುದೇ ಆಗಿರುವುದಿದೆ. ಈ ಕಾರಣದಿಂದಾಗಿ, ಅದು ಮಾನವನ ನಿರ್ಧಾರವನ್ನು ಕಾಯ್ದು ಕೊಳ್ಳುವುದೇ ಆಗಿರುವುದಿದೆ. ಹೀಗಾಗಿ, ಈ ಕ್ಷೇತ್ರದಲ್ಲಿ ವ್ಯವಹರಿಸುವ ವಿಜ್ಞಾನಿಗಳಿಗೆ, ಕ್ವಾಂಟಮ್ ಪ್ರಪಂಚವನ್ನು ತೀರ್ಮಾನಿಸುವುದ ಕ್ಕಾಗಲಿ ಹಾಗು ವಿವರಿಸುವುದಕ್ಕಾಗಲಿ ಬಹಳ ಕಷ್ಟಸಾಧ್ಯವಾಗಿರು ವುದಿದೆ.

ನೈಜತೆಯಲ್ಲಿ, ಪ್ರಪಂಚದ ಪ್ರತಿಯೊಂದು ವಿಚಾರದಲ್ಲಿಯೂ, ಅದರಲ್ಲೂ ವಿಶೇಷವಾಗಿ ಸೃಷ್ಟಿಯ ಕಾರ್ಯಕ್ಷೇತ್ರದಲ್ಲಿ ಮಾನವನು ಪರಿಣಿತನೇ ಆಗಿರುವುದಿದೆ. ಏಕೆಂದರೆ, ಪ್ರಪಂಚದ ಸಂಭವನೀಯತೆ ಗಳ ಕಾರ್ಯಕ್ಷೇತ್ರದಲ್ಲಿ ಏನು ಸಂಭವಿಸಬೇಕು ಹಾಗು ಅದು ಯಾವ ರೀತಿಯ ರಚನೆಯನ್ನು ಹೊಂದಿರಬೇಕು ಎಂಬ ವಿಚಾರಗಳನ್ನು ಮಾನವನು ನಿಶ್ಚಯಿಸುವ ಕಾರಣವೇ ಆಗಿರುವುದಿದೆ.

ವೈಜ್ಞಾನಿಕವಾಗಿ ಹೇಳುವುದಾದರೆ, ಕ್ವಾಂಟಮ್ ಮಟ್ಟದ ನೈಜತೆಯು, ಕೇವಲ ಸೃಷ್ಟಿಯ ಉಚಿತವಾದ ಸ್ಥಾನಿಕ ಪ್ರಕಾರ ಮಾತ್ರವೇ ಆಗಿರುವುದಿಲ್ಲವಾಗಿದೆ. ಕ್ವಾಂಟಮ್ ಮಟ್ಟವು ಸರ್ವ ವ್ಯಾಪಿಯಾ ಗಿದ್ದು, ಸೃಷ್ಟಿಯ ಮೂಲಭೂತ ಸಮತಲವೇ ಆಗಿರುವುದಾಗಿದೆ ಹಾಗು ಕಾರ್ಯಕ್ಷೇತ್ರದ ಏಕೀಕರಣದಿಂದ ಬೇರೆಯೇ ಇರುವು ದಾಗಿದೆ.

ಮಾನವನ ಶಕ್ತಿಯ ಕಾರ್ಯಕ್ಷೇತ್ರವು ಕ್ವಾಂಟಮ್ ಕಾರ್ಯಕ್ಷೇತ್ರದ ಜೊತೆಯಲ್ಲಿ ಸದಾಕಾಲವೂ ವ್ಯವಹರಿಸುವುದು ಮಾತ್ರವಲ್ಲದೆ, ಪ್ರಭಾವಿತಗೊಳಿಸುವುದೂ ಇರುವುದಾಗಿದೆ. ಯಾವುದೇ ವ್ಯಕ್ತಿಯ ನಂಬಿಕೆ ಹಾಗು ಉದ್ದೇಶಗಳಿಂದ ಸಂಚಯಗೊಂಡ ಶಕ್ತಿಯು, ಅವನ ಶಕ್ತಿಯ ಕಾರ್ಯಕ್ಷೇತ್ರಕ್ಕೆ ತುಂಬಿಕೊಳ್ಳುವುದಿದೆ. ಏಕೆಂದರೆ, ಅವುಗಳು ಆ ವ್ಯಕ್ತಿಯ ಆಲೋಚನೆ ಹಾಗು ಭಾವನೆಗಳ ಶಕ್ತಿಗಳಿಂದ ರೂಪುಗೊಂಡಿರುವ ಕಾರಣದಿಂದಾಗಿಯೆ. ಹೀಗೆ ಏಕೀಕರಣ ಗೊಂಡ ವ್ಯಕ್ತಿಯ ಆಲೋಚನೆಗಳು ನಂಬಿಕೆಗಳೇ, ಉದ್ದೇಶಗಳೇ ಹಾಗು ಭಾವನೆಗಳೇ ಅವನ ಶಕ್ತಿಯ ಕಾರ್ಯಕ್ಷೇತ್ರ ಎಂಬುದಾಗಿ ಗುರುತಿಸಿಕೊಂಡಲ್ಲಿ, ಅದು ಪುನರಾವರ್ತಿತವಾಗಿ ಆ ವ್ಯಕ್ತಿಯಲ್ಲಿ

ಕ್ವಾಂಟಮ್ ವಾಸ್ತಿವಿಕತೆಯ ಬಗೆಗೆ ಆಂತರ್ಯದಲ್ಲೂ ಹಾಗು ಬಾಹ್ಯದಲ್ಲೂ ಜೀವನದ ಪ್ರತಿಯೊಂದು ಕ್ಷಣವೂ ತಿಳಿಸಿಕೊಡುವುದೇ ಆಗಿರುವುದಿದೆ.

ವೈಜ್ಞಾನಿಕ ವಿಭಾಗದ ರೆಸೊನನ್ಸ್ ಯೋಜನೆಯ ಬಯೋಫಿಸಿಸಿಸ್ಟ್, ವಿಲಿಯಮ್ ಬ್ರೌನ್ ಎಂಬುವರ ಆಧಾರ ಕಲ್ಪನೆಯ ಸಿದ್ಧಾಂತದ ಪ್ರಕಾರವಾಗಿ, ಅಸ್ತಿತ್ವ ಎಂಬುವುದು ಪ್ಲಾನ್ಕ್ ಟೈಮ್ ಸೆಕೆಂಡಿಗೆ ೧೦೪೪ ಬಾರಿ ವ್ಯಕ್ತದ ಹೊರಗೂ ಹಾಗು ಒಳಗೂ ಪ್ರಕಾಶಿಸುವುದೇ ಆಗಿರುವುದಿದೆ. ಪ್ರತಿ ಬಾರಿಯೂ ಮಾನವನ ಅಸ್ತಿತ್ವ ಎಂಬುವುದು ಆಕೃತಿ ಹಾಗು ಕಾರ್ಯ ಕ್ಷೇತ್ರದ ಶುದ್ಧ ಶಕ್ತಿಯ ನಡುವೆ ಹೊಯ್ದಾಡುತ್ತಲೇ ಇರುವುದಾಗಿದೆ. ಆದರೆ ಮಾನವನ ಅರಿವು ಎಂಬುವುದು ಯಾವಾಗಲೂ ಸ್ಥಿರವಾಗಿದ್ದು, ವ್ಯಕ್ತದ ಒಳಗೂ ಹಾಗು ಹೊರಗೂ ಹೊಯ್ದಾಡದಿರುವುದಾಗಿದೆ. ಯಾವುದೇ ವ್ಯಕ್ತಿಯ ಅಸ್ತಿತ್ವವು ಕ್ವಾಂಟಮ್ ಮಟ್ಟದಲ್ಲಿ ಸ್ಥಿತ್ಯಂತರಗೊಂಡು ಹಿಂದಿರುಗು ವಾಗ ಅದು ಪುನಃ ಏನಾಗಿ ಪ್ರಕಟವಾಗಬೇಕು ಎನ್ನುವುದನ್ನು ಕಾರ್ಯಕ್ಷೇತ್ರಕ್ಕೆ ಅವನಲ್ಲಿನ ಅರಿವು ತಿಳಿಸಿಕೊಡುವುದೇ ಆಗಿರುವ ದಿದೆ. ಆದುದರಿಂದ ಪ್ರತೀ ಬಾರಿಯೂ ವ್ಯಕ್ತಿಯು ರೂಪರಹಿತ ವಾದ ಸ್ಥಿತಿಗೆ ಹೊಯ್ದಾಡಿದಾಗ, ಮುಂದಿನ ಕ್ಷಣದಲ್ಲಿ ಕಾರ್ಯಕ್ಷೇತ್ರ ದಿಂದ ವ್ಯಕ್ತವಾಗಲು ಜಾಗ್ರತೆಯಿಂದ ಏನನ್ನು ಅವನು ಆಯ್ದು ಕೊಳ್ಳುತ್ತಾನೆ ಎನ್ನುವ ವಿಚಾರದ ಆಧಾರದ ಮೇಲೆಯೇ ಸಂಪೂರ್ಣವಾದ ಮತ್ತು ಒಟ್ಟಾರೆಯಾದ ಹಿಡಿತ ಮತ್ತು ಜವಾ ಬ್ದಾರಿಯನ್ನು ಆ ವ್ಯಕ್ತಿಯು ಹೊಂದಿರುವಂಥಃವನೇ ಆಗಿರುವುದಿದೆ. ಈ ರೀತಿಯಾದ ವ್ಯಕ್ತಿಯ ಅರಿವಿನ ಧೀಶಕ್ತಿ ಹಾಗು ನಿಯಂತ್ರಣವು, ಅವನು ಏನನ್ನು ನಂಬುತ್ತಾನೆ ಮತ್ತು ಅದರ ಬಗೆಗೆ ಅವನಿಗೆ ಯಾವ ರೀತಿಯಾದ ಅನುಭವ ಇರುವುದಾಗಿದೆ ಎನ್ನುವುದರ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿರುವುದಿದೆ.

ಮೇಲೆ ಪ್ರಸ್ತಾವಿಸಿದ ವಿಚಾರವು ಒಂದು ಆಶ್ಚರ್ಯ ಸಂಗತಿಯಾಗಿ ಕಂಡುಬಂದರೂ, ವೈದೀಕ ಹಾಗು ವಿಜ್ಞಾನದ ರೀತಿ ನೀತಿಗಳಲ್ಲಿ ವಾಸ್ತವಿಕವೇ ಆಗಿರುವುದಾಗಿದೆ. ಶಂಕರಾಚಾರ್ಯರ 'ಯದ್ಭಾವಂ ತದ್ಭವತಿ' (ಅರ್ಥಾತ್, ಯಾವ ಭಾವ ಇದೆಯೋ, ಆ ಭಾವದ ರೀತಿಯಾಗಿಯೇ ಉದ್ಭವಿಸುವುದು) ಎನ್ನುವ ಉಕ್ತಿಯು ಉದ್ಧರಿಸುವ ಹಾಗೆಯೆ, ಮಾನವನ ಉದ್ದೇಶ ಹಾಗು ನಂಬಿಕೆಗಳು ಈ ರೀತಿಯಾದ ಆಶ್ಚರ್ಯಕರ ಸಂಗತಿಯನ್ನು ಕಾರ್ಯಗತಗೊಳಿಸು ವುದೇ ಆಗಿರುವುದಾಗಿದೆ. ಮೆದುಳಿನಲ್ಲಿ ಗೆಡ್ಡೆ (ಟ್ಯೂಮರ್) ಬೆಳೆದು ಬದುಕುವುದೇ ಇಲ್ಲ ಎನ್ನುವಂಥಃ ಪರೀಸ್ಥಿತಿಯಲ್ಲಿದ್ದ ರೋಗಿಯು ಕೇವಲ ಧ್ಯಾನದ ಮುಖಾಂತರವಾಗಿ ವೈದ್ಯಕೀಯ ಲೋಕವೇ ಆಶ್ಚರ್ಯ ಪಡುವಂಥಃ ರೀತಿಯಲ್ಲಿ ಗುಣವಾದದ್ದು, ಮತ್ತೊಬ್ಬನಿಗೆ ಪೃಷ್ಠ ಭಾಗದ ಮೂಳೆಯು ಧ್ಯಾನದ ಮುಖಾಂತರವಾಗಿ ಮೊದ ಲಿದ್ದ ಪರೀಸ್ಥಿತಿತ್ಯಾನುಸಾರವಾಗಿ ಬೆಳೆದುಕೊಂಡಂಥಃದ್ದು, ಹೀಗೆ ಹತ್ತು ಹಲವಾರು ಉದಾಹರಣೆಗಳು ವೈದ್ಯಕೀಯ ವಿಭಾಗದಲ್ಲಿ ಹೇರಳವಾಗಿ ಸಿಗುವುದಿದೆ. ಈ ರೀತಿಯಾದ ಘಟನೆಗಳ ಬಗೆಗೆ ವ್ಯಾಟಿಕನ್ನಿನ ಮೆಡಿಕಲ್ ಕಮಿಷನ್ 'ವೈದ್ಯಕೀಯ ಪ್ರಪಂಚದ ಪೂರ್ವೇತಿಹಾಸದಲ್ಲಿ ಗೊತ್ತಿಲ್ಲವರುವಂಥಃದ್ದು' ಎಂದು ಸ್ಪಷ್ಟವಾಗಿ ಹೇಳಿಕೆ ನೀಡಿರುವುದು ಗಮನಾರ್ಹ ಅಂಶವೇ ಆಗಿರುವುದಾಗಿದೆ. ಪ್ರಮುಖವಾದ ಅಂಶ ಎಂದರೆ, ಮೇಲೆ ಉಲ್ಲೇಖಿಸಿದ ಉದಾಹರಣೆ ಗಳ ಪ್ರಕಾರವಾಗಿ ವೈದ್ಯಕೀಯ ವಿಭಾಗಕ್ಕೆ ಈ ವಿಚಾರವು

ISSN 2249 - 5754 VIJNANA KANNADA (PRINT)


ಆಶ್ಚರ್ಯಕರ ಎಂಬುವಂತಿದ್ದರೂ, ಭೌತಿಕಶಾಸ್ತ್ರದ ವಿಭಾಗಕ್ಕೆ ಹೊಸತೇನೂ ಅಲ್ಲವಾಗಿರುವದಿದೆ. ಭೌತ ಶಾಸ್ತ್ರ ಪ್ರಕಾರವಾಗಿ, ಅಣುವಿನ ಸ್ತರದಲ್ಲಿ, ಅಣುಗಳು ಒಂದಕ್ಕೊಂದು ಬೆಸೆದುಕೊಂಡು ಕಣವಾಗಿ ಪರಿವರ್ತಿತವಾಗುವುದಿದೆ. ಈ ರೀತಿಯಾಗಿ ಪರಿವರ್ತಿತಗೊಂಡ ಕಣಗಳು ಶಕ್ತಿಯುತವಾದ ನೀಲಿನಕ್ಷೆಗಳು ನಿರ್ದೇಶಿಸಿದ ಆಕೃತಿಗಳ ರೀತಿಗೆ ಬದ್ಧವಾಗಿವೆಯೇನೋ ಎನ್ನುವ ಹಾಗೆ ನಿಖರವಾದ ಜ್ಯಾಮಿತಿ ರಚನೆಗಳನ್ನು ಹೊಂದಿ ಪರಸ್ಪರ ನಿರ್ವಹಿಸುವುದಾಗಿದೆ. ಅದೇ ರೀತಿಯಲ್ಲಿ, ಮಾನವನ ದೇಹವು ಪ್ರಜ್ಞೆಯ ಪ್ರದರ್ಶನ ಎನ್ನುವುದಾದರೆ, ಅವನು ಪ್ರಜ್ಞೆಯ ಜಗತ್ತು ಶಕ್ತಿಯುತ ವಾದ ನೀಲಿನಕ್ಷೆಗಳನ್ನು ಸೃಜಿಸುವುದಾಗಿದ್ದು, ಅದು ದೇಹದಲ್ಲಿರುವ ಅಣುಗಳನ್ನು ಹಾಗು ಕಣಗಳನ್ನು ಸಮರೇಖೆಗೊಳಿಸುವುದರ ಜೊತೆಗೆ ದೇಹವನ್ನೂ ಸೃಷ್ಟಿಮಾಡುವುದೇ ಆಗಿರುವುದಿದೆ.

ಮೇಲೆ ಉಲ್ಲೇಖಿಸಿದ ಅಂಶಗಳಿಗೆ ಪೂರಕವಾಗಿ, ಹೊಸದಾಗಿ ಡಿ.ಎನ್.ಎ. ಮೇಲೆ ನಡೆದ ಸಂಶೋಧನೆಯ ಪ್ರಕಾರವಾಗಿ, ಮಾನವನಲ್ಲಿ ಶಕ್ತಿಯುತವಾದ ನೀಲಿನಕ್ಷೆ ಅಥವಾ ಮಾನವನ ಶಕ್ತಿಯ ಕಾರ್ಯಕ್ಷೇತ್ರದ ಇರುವಿಕೆಯು ಸಾಕ್ಷಿ ಹಾಗು ಆಧಾರಗಳ ಸಮೇತವಾಗಿ ಸಿದ್ಧಪಡಿಸಿರುವುದೇ ಆಗಿರುವುದಿದೆ. ಈ ಸಂಶೋಧನೆಯು, ಡಿ.ಎನ್.ಎ.ಗಳು ಶಕ್ತಿಯನ್ನು ಕಾರ್ಯಕ್ಷೇತ್ರದಿಂದ ನೇರವಾಗಿ ಪ್ರಸರಿಸುತ್ತವೆ, ಸ್ವೀಕರಿಸುತ್ತವೆ ಮತ್ತು ಹಾಗೆಯೇ ಓದುತ್ತವೆ ಎಂದೂ ಕೂಡ ಪ್ರತಿಪಾದಿಸಿ ಸಿದ್ಧಪಡಿಸಿರುವುದಾಗಿದೆ.

ಮಾನವನ ದೇಹದ ನಿರ್ವಾತ ರಚನೆಯ ಪುನರ್ ರಚನೆಯ ಶಕ್ತಿ ಹಾಗು ಉದ್ದೇಶಗಳ ಧೀಶಕ್ತಿಯನ್ನು ವೈದ್ಯಕೀಯ ಕ್ಷೇತ್ರದಲ್ಲಿನ ಉದಾಹರಣೆಗಳು ದೃಢೀಕರಿಸಿರುವುದಿದೆ. ವ್ಯಕ್ತಿಯ ಧೀಶಕ್ತಿಯು, ಅವನ ಇಚ್ಛೆಯನ್ನು ಕಾರ್ಯಕ್ಷೇತ್ರದಿಂದ ನೇರವಾಗಿ ಆಶ್ಚರ್ಯಕರ ರೀತಿಯಲ್ಲಿ ಕಾರ್ಯಗತಗೊಳಿಸುವುದನ್ನು ವೈದ್ಯಕೀಯ ಉದಾಹರಣೆಗಳಿಂದ ಕಂಡುಕೊಳ್ಳಬಹುದಾಗಿದೆ. ನಂಬಿಕೆಯಿಂದ ಪ್ರಾರಂಭಗೊಂಡಂಥಃ ಉಪಷಮನವು ಆ ವ್ಯಕ್ತಿಗಳಿಗೆ ಮೊದಲು ಸಾಂತ್ವಾನ ರೂಪವನ್ನು ಕೊಡಮಾಡಿದ್ದು, ನಂತರದಲ್ಲಿ ಆ ವ್ಯಕ್ತಿಯಗ ಅವ್ಯವಸ್ಥೆಗಳನ್ನು ಮೊದಲಿನ ಹಾಗೆ ಪುನರ್ ವ್ಯವಸ್ಥಿತಗೊಳಿಸಿರುವುದಿದೆ.

ಮೇಲೆ ಹೇಳಿದ ಪ್ರಕಾರವಾಗಿ ಉಪಷಮನಗೊಂಡಂಥಃ ಉದಾಹರಣೆಗಳನ್ನು ದೇವರೇ ಮಾಡಿದ ಅಥವಾ ದೇವರ ಕೈವಾಡ ಎಂಬಂಥಃ ನಂಬಿಕೆಗಳನ್ನು ಸಾಮಾನ್ಯವಾಗಿ ಸಮಾಜದಲ್ಲಿ ಕಾಣಬಹುದಾಗಿದೆ. ಮನಃಶಾಸ್ತ್ರದ ಪ್ರಕಾರವಾಗಿ ಅವಲೋಕಿಸಿದಾಗ, ಅದು ಆ ವ್ಯಕ್ತಿಯ ಧೀಶಕ್ತಿಯೇ ಎಂಬುವುದನ್ನು ಮನಗಾಣಬಹುದಾಗಿದೆ. ಈ ವಿಚಾರವನ್ನು, ಬ್ರಹ್ಮಸೂತ್ರಗಳಲ್ಲಿ ಒಂದಾದ 'ಅಹಂ ಬ್ರಹ್ಮಾಸ್ಮಿ' ಅರ್ಥಾತ್, ನಾನೇ ಬ್ರಹ್ಮ ಎಂಬ ಸೂತ್ರವು, ಪುಷ್ಟೀಕರಿಸಿರುವುದಿದೆ. ತಾತ್ಪರ್ಯಾರ್ಥೇ, ಹೇಗೆ ಬ್ರಹ್ಮನು ಸೃಷ್ಟಿಯ ಕಾರ್ಯವನ್ನು ನಿರ್ವಹಿಸುತ್ತಾನೋ, ಅದೇ ರೀತಿಯಾಗಿ ಸೃಷ್ಟಿಸುವ ಸಾಮರ್ಥ್ಯ ಸಕಲ ಮಾನವರಿಗೂ ಇರುವುದಾಗಿದೆ ಎನ್ನುವಂಥಃ ಅಂಶವನ್ನು ಸೂಚಿಸುವುದೇ ಆಗಿದೆ.

ವ್ಯಕ್ತದಲ್ಲಿರುವ ಸಕಲ ಚರಾಚರ ವಸ್ತುಗಳಲ್ಲಿಯೂ ಪರಮಾತ್ಮನ ಅಂಶವು ಇರುವುದು ವೈದೀಕ ರೀತಿಯಲ್ಲಿ ಸಿದ್ಧಗೊಂಡ ವಿಚಾರವೇ ಆಗಿರುವುದಾಗಿದೆ. ಅದೇ ರೀತಿಯಾಗಿ ಮಾನವನಲ್ಲೂ ಪರಮಾತ್ಮನ ಅಂಶವು ಇರುವುದೇ ಆಗಿದೆ. ಈ ಅಂಶವು ಪರಮ ಸಾಮರ್ಥ್ಯದ ಘಟಕಾಂಶವೇ ಆಗಿರುವುದಾಗಿದೆ. ಈ ರೀತಿಯಾದ ಘಟಕಾಂಶವು ಶಕ್ತಿಯೇ ಆಗಿದ್ದು ನಂಬಿಕೆ ಹಾಗು ಉದ್ದೇಶಗಳಿಂದ ರೂಪುಗೊಂಡಂಥಃ ಪ್ರಜ್ಞಾರೂಪದಲ್ಲಿ ಸರ್ವರಲ್ಲೂ ಇರುವುದೇ ಆಗಿದೆ. ವೈದೀಕ ಉಲ್ಲೇಖಗಳ ಪ್ರಕಾರವಾಗಿಯೂ, ಸಕಲ ಸೃಷ್ಟಿಯ ಹಿಂದೆಯೂ ಪರಮ ಸಾಮರ್ಥ್ಯವು ಅಪರಿಮಿತವಾದ ಪ್ರಜ್ಞಾರೂಪದಲ್ಲಿ ಇರುವುದಾಗಿದೆ. ಯಾವುದೇ ಸಾಧಕನು ನಿರಂತರವಾದ ಅಭ್ಯಾಸ ಮುಖಾಂತರವಾಗಿ ಶುದ್ಧವಾದ ಪ್ರಜ್ಞೆಯ ಬಾಗಿಲನ್ನು ವಿಚಾರ ರಹಿತನಾಗಿ ತಟ್ಟುತ್ತಾನೋ, ಆ ಕ್ಷಣದಲ್ಲಿಯೇ ಅವನು ಸ್ವಂತವಾದ ಅಪರಿಮಿತ ಪ್ರಜ್ಞೆಗೆ ತನ್ನನ್ನು ತಾನು ತೆರೆದುಕೊಳ್ಳುವ ಸಂಭವನೀಯತೆ ಇರುವುದಾಗಿದೆ.

ವೈಜ್ಞಾನಿಕ ಹಾಗು ವೈದೀಕ ಪ್ರಕಾರವಾಗಿ, ಸೃಷ್ಟಿಯ ಹಿಂದಿರುವ ಅಪರಿಮಿತವಾದ ಪ್ರಜ್ಞೆ ಹಾಗು ವ್ಯಕ್ತಿಯ ಸ್ವಂತವಾದ ಅಪರಿಮಿತ ಪ್ರಜ್ಞೆಯು ಬೇರೆ ಬೇರೆಯಾಗಿರದೆ ಒಂದೇ ಆಗಿರುವುದಾಗಿದೆ. ವ್ಯಕ್ತಿಯ ಶುದ್ಧವಾದ ಅಪರಿಮಿತ ಪ್ರಜ್ಞೆ ಹಾಗು ಸೃಷ್ಟಿಯ ಹಿಂದಿರುವ ಶುದ್ಧವಾದ ಅಪರಿಮಿತ ಪ್ರಜ್ಞೆ ಎರಡೂ ಒಂದೇ ಎಂಬ ಕಾರಣದಿಂದಾಗಿಯೆ 'ತತ್ವಂ ಅಸಿ' ಎಂಬಂಥಃ ಉಕ್ತಿಯನ್ನು ವೈದೀಕ ಪರಿಭಾಷೆಯಲ್ಲಿ ಉಲ್ಲೇಖಿಸಿರುವುದಿದೆ. ಅರ್ಥಾತ್, ನಾನು ಕೂಡ ಅದೇ ಆಗಿದ್ದೇನೆ ಎಂಬುದಾಗಿ ಇರುವುದಾಗಿದೆ.

ಯಾವುದೇ ವ್ಯಕ್ತಿಯು ಆ ಒಂದು ಅಪರಿಮಿತವಾದ ಪ್ರಜ್ಞೆಗೆ ತೆರೆದುಕೊಂಡು, ಅದು ಅವನಲ್ಲಿ ಪ್ರವಹಿಸಲು ದಾರಿಮಾಡಿ ಕೊಟ್ಟಾಗ, ಆ ವ್ಯಕ್ತಿಗೆ ಪ್ರಭಲವಾಗಿ ತನ್ನ ಅಸ್ತಿತ್ವದ ಅರಿವು ಆಗುವುದಾಗಿದೆ. ಇದರ ಜೊತೆಗೆ, ಯಾವುದಕ್ಕೆ ನೈಜತೆಯನ್ನು ಸೃಷ್ಟಿಸುವ ಅತ್ಯದ್ಭುತ ಶಕ್ತಿಯು ಇರುವುದಿದೆ? ಎಂಬುದರ ಪರಿಚಯವೂ ಆಗುವುದಾಗಿದೆ. ಈ ರೀತಿಯಾಗಿ ವ್ಯಕ್ತಿಯ ಅರಿವಿನಾಳದ ಸ್ತರದಲ್ಲಿ ಘಟಿಸಿದ ಘಟನೆಯು, ಅವನ ಜೀವಶಾಸ್ತ್ರದ ರಚನೆಯ ಮೇಲೂ ನೇರವಾಗಿ ಪ್ರಭಾವ ಬೀರುವುದೇ ಆಗುವುದಿದೆ.

ಮಾನವನ ದೇಹವು ಪ್ರಜ್ಞೆಯ ಪ್ರದರ್ಶನವೇ (ಪ್ರೊಜೆಕ್ಷನ್) ಆಗಿರುವುದಾಗಿದೆ. ನೈಜತೆ ಎನ್ನುವುದು ರಚನೆಯ ಒಳಗೂ ಹೊರಗೂ ಪ್ರಕಾಶಿಸುವುದರಿಂದಾಗಿಯೇ ವೈಜ್ಞಾನಿಕ ಸಿದ್ಧಾಂತಗಳ ಪ್ರಕಾರವಾಗಿ ಈ ರೀತಿಯಾದ ತೀರ್ಮಾನಕ್ಕೆ ಬರಬಹುದಾಗಿದೆ. ಮಾನವ ರಚನೆಯು ಅರ್ಧ ಸಮಯವು ರಚನಾ ರಹಿತವಾಗಿರುವುದರ ಕಾರಣದಿಂದಾಗಿ, ಯಾವುದೇ ರೀತಿಯಾದ ನ್ಯೂನತೆಗಳನ್ನು ಸರಿಪಡಿಸುವುದಾಗಲಿ ಹಾಗು ವಿಕಾಸದೆಡೆಗೆ ಚಲಿಸುವುದಾಗಲಿ ಅವನಿಗೆ ಸಾಧ್ಯವಿರುವುದಾಗಿದೆ ಎಂಬುದನ್ನು ಅರ್ಥೈಸಬಹುದಾಗಿದೆ. ರಚನಾರಹಿತ ಸ್ಥಿತಿಯಿಂದ ರಚನೆಗೆ ಅವಶ್ಯಕವಾಗಿರುವ ವಿಚಾರವು ಹಾಗು ಇದರ ಹಿಂದೆ ಅಡಗಿರುವ ನೀಲಿನಕ್ಷೆಯ ಮಾರ್ಗದರ್ಶನವು ಪ್ರಜ್ಞೆಯೇ ಆಗಿರುವುದಾಗಿದೆ. ಪ್ರಜ್ಞೆಯ ಕಾರ್ಯಕ್ಷೇತ್ರದ ಕಾರಣವು ಮಾನವನ ತನ್ನ ಎಡೆಗಿರುವ ಒಟ್ಟಾರೆಯಾದ ನಂಬಿಕೆಗಳ ಮೇಲೆಯೇ ಆಧಾರವಾಗಿರುವುದಾಗಿದೆ. ನಾಸಿಮ್ ಹಾರಮಿನ್‌ರವರ, 'ಕ್ರಾಸಿಂಗ್ ದಿ ಈವೆಂಟ್ ಹೊರಿಜನ್' ಕೃತಿಯಲ್ಲಿ ಸಿದ್ಧಪಡಿಸಿದಂಥಃ ಹೊಲೊಫ್ರಾಕ್ಟೊಗ್ರಾಫಿಕ್ ಸಿದ್ಧಾಂತದಲ್ಲಿ, 'ಮಾನವನನ್ನು ಭಿನ್ನಗೊಳಿಸುವ ಹಾಗು ಮೂರು

ಆಯಾಮಗಳಲ್ಲಿ ಅಭಿವ್ಯಕ್ತಿಗೊಳಿಸುವಂಥಃ ಅವನ ಪ್ರಜ್ಞೆಯ ರಚನೆ ಹಾಗು ಚಲಶೀಲತ್ವವು ಅಪರಿಮಿತವಾದ ದೇವರ ಪ್ರಜ್ಞೆಯ ಭಾಗವೇ ಆಗಿರುವುದಿದೆ', ಎಂಬುವುದರ ಬಗೆಗಿನ ವಿಚಾರಗಳನ್ನು ಗಮನಿಸಬಹುದಾಗಿದೆ. ಅವರ ಸಿದ್ಧಾಂತದ ಪ್ರಕಾರವಾಗಿ,

ಯಾವುದೇ ವ್ಯಕ್ತಿಯು ತನ್ನ ಬಗೆಗಿರುವ ನಂಬಿಕೆಗಳನ್ನು ಉದ್ದೇಶ ಸಹಿತವಾಗಿ ಬದಲಾಯಿಸಿಕೊಂಡಲ್ಲಿ, ತನ್ನ ಶಕ್ತಿಯ ಕಾರ್ಯಕ್ಷೇತ್ರವನ್ನು ನಿರ್ಧರಿಸುವಂಥಃ ಶಕ್ತಿಯನ್ನು ಬದಲಾಯಿಸಿಕೊಳ್ಳಬಹುದಾಗಿದೆ. ಈ ರೀತಿಯಾಗಿ ವ್ಯಕ್ತಿಯು ಬದಲಾಣೆಗೆ ಒಳಪಟ್ಟಲ್ಲಿ, ಸೆಕೆಂಡಿಗೆ ೧೦೪೪ ಬಾರಿ ದೇಹವನ್ನು ಪುನರ್ ರಚಿಸುವ ಹಾಗು ಸಮರೇಖೆಗೆ ಒಳಪಡಿಸುವ ತನ್ನ ಶಕ್ತಿಯ ನೀಲಿನಕ್ಷೆಯನ್ನು ಬದಲಾಯಿಸಿಕೊಳ್ಳಬಹುದಾಗಿದೆ. ಕ್ವಾಂಟಮ್ ಫಿಸಿಕ್ಸ್ ಕೂಡ, ಮಾನವನ ಆಲೋಚನೆ ಹಾಗು ನಂಬಿಕೆಗಳು ಭೌತಿಕ ಜಗತ್ತಿನ ಕ್ವಾಂಟಮ್ ನೈಜತೆಯನ್ನು ಪ್ರಭಾವಿತಗೊಳಿಸುತ್ತವೆ ಎಂಬುದನ್ನು ಸಾಬೀತು ಪಡಿಸಿರುವುದಾಗಿದೆ. ಹೀಗಾಗಿ, ಯಾವುದೇ ಮಾನವನು ತನ್ನ ಭೌತಿಕ ರಚನೆಗಿಂತಾ ಹೆಚ್ಚಿನವನು ಎಂಬುದನ್ನು ನಿಸ್ಸಂದೇಹವಾಗಿ ಅಭಿಪ್ರಾಯಪಡಬಹುದಾಗಿದೆ.

ವೈಜ್ಞಾನಿಕ ಸಿದ್ಧಾಂತದ ಪ್ರಕಾರವಾಗಿ ನೈಜತೆಯಲ್ಲಿ, ಭೌತಿಕ ದೇಹದಲ್ಲಡಗಿರುವ ತೇಜೋಮಯವಾದ ಶಕ್ತಿಯ ಕಾರ್ಯಕ್ಷೇತ್ರದಿಂದಾಗಿ ತಾನು ರಚಿಸಲ್ಪಟ್ಟಿರುವವನು ಎಂದು ಯಾವುದೇ ವ್ಯಕ್ತಿಯು ತನ್ನ ಬಗೆಗೆ ಅಲೋಚಿಸುವುದು ಅಥವಾ ವೈದೀಕ ಸಿದ್ಧಾಂತದ ಪ್ರಕಾರವಾಗಿ ಶುದ್ಧವಾದ ಪ್ರಜ್ಞೆಯು ತಾತ್ಕಾಲಿಕವಾಗಿ ದೇಹದ ಮುಖಾಂತರವಾದ ಪ್ರಸಕ್ತ ಆಯಾಮದ ಅನುಭವಕ್ಕಾಗಿ ಉದ್ಭವಿಸಿರುವುದಾಗಿದೆ ಎಂಬ ರೀತಿಯಲ್ಲಿ ಮಾನವನು ತನ್ನ ಬಗೆಗೆ ಅರ್ಥೈಸಿಕೊಳ್ಳುವುದು ಸಮಂಜಸವಾಗಿ ಕಾಣುವುದಿದೆ.

ಮಾನವನ ಪ್ರಜ್ಞೆ ಎಂದೆನ್ನುವುದು ಸ್ಥಾನಿಕವೂ ಆಗಿರದು ಹಾಗು ಮೆದುಳಿನ ಮೇಲೆ ಅವಲಂಬಿತವೂ ಆಗಿಲ್ಲದಾಗಿರುವುದು. ಅರ್ಥಾತ್, ಅದರ ಅಸ್ತಿತ್ವವು ದೇಹ ಹಾಗು ಮೆದುಳನ್ನು ಮೀರಿದ್ದೇ ಆಗಿರುವುದು ಎಂಬ ಹೊಸದಾದ ವೈಜ್ಞಾನಿಕ ಸಿದ್ಧಾಂತವೂ ಕೂಡ ಮೇಲೆ ಉಲ್ಲೇಖಿಸಿದ ಸಿದ್ಧಾಂತವನ್ನು ಪುಷ್ಟಿಗೊಳಿಸುವುದಾಗಿದೆ. ಪ್ರಸಕ್ತವಾದ ಈ ಎಲ್ಲಾ ಸಿದ್ಧಾಂತಗಳಿಂದ ವಾಸ್ತವಿಕತೆ ಹಾಗು ನೈಜತೆಗಳ ಬಗೆಗೆ ಹೊಸ ರೀತಿಯಾದ ಆಲೋಚನೆಗಳನ್ನು ಮಾನವನು ಮಾಡಲೇಬೇಕಾಗಿರುವುದು ಅನಿವಾರ್ಯವಾಗಿರುವುದೇ ಆಗಿದೆ. ಮಾನವನು ತನ್ನ ಬಗೆಗಿನ ಪ್ರಸಕ್ತ ತಿಳುವಳಿಕೆಯ ಪರಿಮಿತಿಗಿಂತಲೂ ಹೆಚ್ಚಿನವನೇ ಆಗಿದ್ದಾನೆ ಹಾಗು ವಿಕಾಸದ ಮಾರ್ಗದಲ್ಲಿ ಮುಂದುವರೆದಲ್ಲಿ ತನ್ನ ಕಲ್ಪನೆಗಳಿಗಿಂತನೂ ಹೆಚ್ಚಿನದನ್ನು ಸಾಧಿಸಬಲ್ಲವನಾಗಿದ್ದಾನೆ ಎಂದರೆ ಅತಿಶಯೋಕ್ತಿಯಾಗಲಾರದು. ಹೀಗಾಗಿ, ಮಾನವನ ಮುಂದಿನ ನಡೆಯು ವಿಕಾಸದೆಡೆಗೇ ಆಗಿರುವುದಾಗಿದೆ.

ವಿಕಾಸದೆಡೆಗಿನ ನಡೆಯು, ಮಾನವನು ತನ್ನಲ್ಲಿರುವ ಅಪರಮಿತವಾದ ಶಕ್ತಿಯನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಹಾಗು ಹೇಗೆ ತೀಕ್ಷ್ಣಗೊಳಿಸಿಕೊಳ್ಳಬೇಕು, ಮತ್ತು ಆ ಶಕ್ತಿಯ ಕಾರ್ಯಕ್ಷೇತ್ರದಿಂದ ಯಾವುದನ್ನು ಹೇಗೆ ಪಡೆದುಕೊಳ್ಳಬೇಕು ಎನ್ನುವುದರ ಬಗೆಗೇ ಆಗಿರುವುದಾಗಿದೆ. ಈ ಪ್ರಕಾರದ ಮುಖಾಂತರವಾಗಿ, ನೈಜತೆ ಹಾಗು ವಾಸ್ತವಿಕತೆಯನ್ನು ಪ್ರಭಾವಿತಗೊಳಸಬಹುದೇ ಎಂಬ ಆಲೋಚನೆ ಉಂಟಾಗುವುದು ಮಾನವನಿಗೆ ಸಹಜವೇ ಆಗಿರುವುದಿದೆ. ಆದರೆ, ಈ ರೀತಿಯಾದ ವಿಕಾಸವನ್ನು ಮಾನವನು ನೈಜತೆಯಲ್ಲಿ ಅನುಷ್ಠಾನಗೊಳಿಸುವುದಕ್ಕಾಗಿ ಪ್ರಸಕ್ತದಲ್ಲಿ, ಯಾವ ರೀತಿಯಾದ ಆಶಿಷ್ಯತೆ, ಬಲಿಷ್ಯತೆ ಹಾಗು ದೃಢಿಷ್ಯತೆಯನ್ನು ಸಂಪಾದಿಸಬೇಕು ಎನ್ನುವುದರ ಜ್ಞಾನವೂ ಪ್ರಾಥಮಿಕವಾಗಿ ಅತ್ಯಾವಶ್ಯವಾಗಿರುವುದಾಗಿದೆ. ಇವೆಲ್ಲರ ಕಾರಣದಿಂದಾಗಿ ಹೊಸ ರೀತಿ ನೀತಿಗಳಿಂದ ಕೂಡಿದ ಜೀವನವನ್ನು ಮಾನವನು ವ್ಯವಸ್ಥೆಗೊಳಿಕೊಳ್ಳಬೇಕಾಗಿದೆ.

ಮಾನವನಿಗೆ ಈ ರೀತಿಯಾದ ಹೊಸತನವನ್ನು ಅನುಷ್ಠಾನಿಸುವುದು ಹೇಗೆ? ಎಂಬ ಪ್ರಶ್ನೆಯು ಸಹಜವಾಗಿ ಬರುವುದೇ ಆಗಿದೆ. ಉತ್ತರವು ಬಹಳ ಸರಳವಾಗಿದೆ, ಏನೆಂದರೆ, ಮೊದಲು ನಿಮ್ಮ ಕಾರ್ಯಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳಿ, ಅದು ಸಹಜವಾಗಿಯೇ ನಿಮ್ಮ ದೇಹವನ್ನು ಅಭಿವೃದ್ಧಿಪಡಿಸುವುದು ಎಂಬುದಾಗಿ. ಅರ್ಥಾತ್, ಮಾನವನ ವಿಕಾಸದ ಪ್ರಥಮ ಹೆಜ್ಜೆಯು ಅವನಲ್ಲಿರುವ ವಾಸ್ತವಿಕ ಕಾರ್ಯಕ್ಷೇತ್ರದ ಸ್ಥಿರರಾಶಿಗಳನ್ನು ಹಾಗು ತತ್ವಗಳನ್ನು ವೈಜ್ಞಾನಿಕವಾಗಿ ವೈದೀಕ ಶಾಸ್ತ್ರಗಳ ತಳಹದಿಯ ಮೇಲೆ ಅರಿಯುವುದೇ ಆಗಿರುವುದಾಗಿದೆ.

ಶಕ್ತಿಯ ಕಾರ್ಯಕ್ಷೇತ್ರದ ಪ್ರದರ್ಶನವು ತಡೆರಹಿತವಾಗಿರುವಂತೆ ನೋಡಿಕೊಳ್ಳಲು ಸಾಧಕನು, ಪ್ರಾಥಮಿಕವಾಗಿ ತನ್ನ ಶಕ್ತಿಯನ್ನು ಅವಶ್ಯಕವಾಗಿ ಶುದ್ಧಿಕರಿಸಿಕೊಳ್ಳಬೇಕಾಗಿರುವುದಿದೆ. ನಂತರದಲ್ಲಿ ಮಾತ್ರವೇ ಸಾಧಕನ ದೇಹದಲ್ಲಿನ ಅಣುಗಳು ಹಾಗು ಕಣಗಳು ರಚನೆಗೆ ಅನುಗುಣವಾದ ರೀತಿಯಲ್ಲಿ ಸಮನ್ವಯಕ್ಕೆ ಒಳಗೊಳ್ಳುವುದಾಗಿದೆ, ಏಕೆಂದರೆ, ಪ್ರಜ್ಞೆಯಿಂದ ಮೂರು ಆಯಾಮಗಳಿಂದ ಪ್ರದರ್ಶಿತಗೊಂಡಂಥಃ ದೇಹದ ಪ್ರತಿಬಿಂಬವು ಅವನಲ್ಲಿರುವ ಶಕ್ತಿಯನ್ನು ಅಡ್ಡಿಪಡಿಸದಿರುವಿಕೆಯ ಕಾರಣದಿಂದಾಗಿ. ಈ ರೀತಿಯಾದ ಶುದ್ಧೀಕರಣವನ್ನು ಸಾಧಕನು, ಅಲೋಚನೆಗಳ ಮಧ್ಯದಲ್ಲಿ ಉಂಟಾಗುವ ಅವಕಾಶವನ್ನು ಉದ್ದೇಶಿತ ಮುಖಾಂತರ ಪಡೆಯುವುದರಿಂದಾಗಿ, ನಂಬಿಕೆಗಳು ಅವನ ವಾಸ್ತವಿಕತೆಯನ್ನು ಇನ್ನು ಮುಂದೆ ಪ್ರಭಾವಿತಗೊಳಿಸದಿರುವುದರ ಮುಖಾಂತರವಾಗಿ, ಆಲೋಚನಾ ರಹಿತನಾಗಿ ಇರುವುದರ ಮುಖಾಂತರವಾಗಿ ಹಾಗೂ ನಂಬಿಕೆ ಮತ್ತು ನಿರೀಕ್ಷೆಗಳು ಇಲ್ಲದಿರುವುದರ ಮುಖಾಂತರವಾಗಿ ಸಾಧಿಸಬಹುದಾಗಿದೆ. ಈ ಪ್ರಕಾರವಾದ ಸಾಧನೆಯಿಂದ ಸಾಧಕನು ತನ್ನನ್ನು ತಾನು ವಿಶ್ವದ ಮೂಲ ತತ್ವಗಳ ಜೊತೆಗೆ ಸಮನ್ವಯಗೊಳಿಸಕೊಳ್ಳಬಹುದಾಗಿದೆ. ಇವೆಲ್ಲದರ ನಂತರದಲ್ಲಿ ಸಾಧಕನು, ಸರ್ವ ಸಂಭವನೀಯತೆಗಳ ಶಕ್ತಿಯ ಕಾರ್ಯಕ್ಷೇತ್ರದಿಂದ ಹೊಮ್ಮುತ್ತಿರುವ ಉತ್ತೇಜನ, ಆನಂದ, ದಯೆ, ಕರುಣೆ, ಪ್ರೀತಿ ಇತ್ಯಾದಿ ಧನಾತ್ಮಕವಾದ ಉನ್ನತ ತರಂಗಾಂತರಗಳ ಮುಖಾಂತರವಾಗಿಯೂ ತನ್ನ ಶಕ್ತಿಯನ್ನು ಪರಮ ಶಕ್ತಿಯ ಜೊತೆಗೆ ಸಮನ್ವಯಗೊಳಿಸಿಕೊಳ್ಳಬಹುದಾಗಿದೆ.

ಶಕ್ತಿಯು ಪ್ರಸಕ್ತ ಮಾನವನಲ್ಲಿ ಮಾತ್ರವೇ ಸಂಚಯಗೊಂಡಿರದೆ, ಸೃಷ್ಟಿಯ ಸಕಲ ವ್ಯಕ್ತಾವ್ಯಕ್ತಗಳಲ್ಲೂ ಅದು ಅಪರಿಮಿತವಾಗಿ ಸದಾಕಾಲವೂ ಉಪಸ್ಥಿತಗೊಂಡಿರುವಂಥಃದ್ದೇ ಆಗಿರುವುದಿದೆ. ಈ ಪ್ರಕಾರವಾಗಿ ವಿಶ್ವಾವೃತವಾಗಿರುವ ಅಪರಿಮಿತವಾದ ಶಕ್ತಿ

ಯನ್ನು ಸಾಧಕನು ಉಪಯೋಗಿಸಿಕೊಂಡಲ್ಲಿ, ಅವನು ಇನ್ನೂ ಉನ್ನತವಾದ ಆರೋಗ್ಯ, ಸಂತೋಷ ಹಾಗು ತೇಜಸ್ಸನ್ನು ಸಂಪಾದಿಸಿ, ತನ್ನ ದೇಹವನ್ನು ಹಾಗು ಕೆಳ ಸ್ತರಗಳ ಪ್ರಜ್ಞೆಗಳನ್ನು ಉನ್ನತ ಸ್ತರಗಳಿಗೆ ಕೊಂಡೊಯ್ಯಬಲ್ಲವಂಥಃವನೇ ಆಗಬಹುದಾಗಿದ್ದಾನೆ. ಎಷ್ಟು ಬೇಗ ಮಾನವನು ತನ್ನ ನೈಜ ಗುಣವಾದ ರಚನಾತ್ಮಕ ಶಕ್ತಿಯನ್ನು ಸೃಷ್ಟಿಯ ಅಪರಿಮಿತವಾದ ಶಕ್ತಿಯ ಜೊತೆಗೆ ಸಂಬಂಧ ಏರ್ಪಡಿಸಿಕೊಳ್ಳುತ್ತಾನೆಯೋ, ಅಷ್ಟು ವೇಗವಾಗಿ ಪ್ರದರ್ಶನಗೊಂಡ ಂಥಃ ತನ್ನ ದೇಹವನ್ನು ನೈಜತೆಯ ಸ್ಥಿತಿಗೆ ಪ್ರವರ್ತಿಸುವಂಥಃ ಹಾಗು ದೇಹದಲ್ಲಿರುವ ಶಕ್ತಿಯನ್ನು ತನ್ನ ಅರಿವಿಗೆ ತಂದುಕೊಳುವಂಥಃವನೇ ಆಗಬಹುದಾಗಿದ್ದಾನೆ. ಇಲ್ಲದಿದ್ದಲ್ಲಿ, ಆಲೋಚನೆ, ಭಾವನೆ ಹಾಗು ಸಂಕುಚಿತವಾದ ಉದ್ದೇಶಗಳು ಹಾಗು ನಂಬಿಕೆಗಳು ಅವನ ಪ್ರಜ್ಞೆ ಅಥವಾ ಶಕ್ತಿಯ ಕಾರ್ಯಕ್ಷೇತ್ರದ ಮೇಲೆ ಋಣಾತ್ಮಕವಾದ ಪ್ರಭಾವವನ್ನು ಬೀರಿ ಅವನ ದೇಹದ ಮೂರು ಆಯಾಮಗಳ ಪ್ರದರ್ಶನದ ಮೇಲೆ ಪರಿಣಾಮಕಾರಿಯಾಗಿ ಅಡೆತಡೆಯನ್ನುಂಟು ಮಾಡುವುದೇ ಆಗಿಬಿಡಬಹುದಾಗಿದೆ.

ಯಾವುದೇ ವ್ಯಕ್ತಿಯಲ್ಲಿನ ಶಕ್ತಿಯ ಕಾರ್ಯಕ್ಷೇತ್ರವು ಪ್ರಾಕೃತಿಕವಾಗಿಯೇ ಕಂಪನಗಳನ್ನು ಹೊಂದಿರುವುದಾಗಿರುತ್ತದೆ ಹಾಗು ಆ ಶಕ್ತಿಯು ಪ್ರಾಕೃತಿಕವಾಗಿಯೇ ಪ್ರಜ್ಞೆಯ ಪ್ರವಾಹದಲ್ಲಿ ಅಡೆತಡೆಯಿಲ್ಲದ ಹರಿಯುವಂಥಃಹುದೇ ಆಗಿರುವುದಿದೆ. ಸಾಮಾನ್ಯ ಸಾಮಾಜಿಕ ಜೀವನ ಶೈಲಿಗಳ ಮುಖಾಂತರವಾಗಿ ರೂಪುಗೊಂಡಂಥಃ ವ್ಯಕ್ತಿಯ ಪ್ರಜ್ಞೆಯ ಕೆಳ ಸ್ತರಗಳಲ್ಲಿ, ಶಕ್ತಿಯ ಕಾರ್ಯಕ್ಷೇತ್ರದ ಪ್ರವಾಹವನ್ನು ಅಡಚಣೆಮಾಡದಿದ್ದಲ್ಲಿ, ಅದು ಎಲ್ಲಾ ಕಡೆಗಳಲ್ಲೂ ತನ್ನ ಪರಿಪೂರ್ಣತೆಯನ್ನು ವ್ಯಕ್ತಪಡಿಸಿಕೊಳ್ಳಬಹುದಾಗಿದೆ.

ಖ್ಯಾತ ವೈಜ್ಞಾನಿಕ ಉಪನ್ಯಾಸಕರಾದ ದೀಪಕ್ ಛೋಪ್ರಾರವರು 'ಲಿವಿಂಗ್ ಬಿಯಾಂಡ್ ಮಿರಾಕಲ್ಸ್' ಎನ್ನುವ ಉಪನ್ಯಾಸದಲ್ಲಿ ಮೇಲೆ ಉಲ್ಲೇಖಿಸಿದ ವಿಚಾರವಾಗಿ ಮತ್ತೊಂದು ಕೋನದಿಂದ ಬೆಳಕನ್ನು ಚೆಲ್ಲುತ್ತಾರೆ. ಅದರ ಸಂಕ್ಷಿಪ್ತ ವಿವರಣೆ ಈ ರೀತಿಯಾಗಿದೆ: ವಿಶ್ವದಲ್ಲಿರುವ ಅಣುಗಳಿಗೆ ವಯಸ್ಸು ಎಂಬ ಸ್ಥಿರರಾಶಿಯು ಇಲ್ಲವಾಗಿದ್ದು, ಅವುಗಳು ವಿನಾಶವನ್ನು ಹೊಂದುವುದಿಲ್ಲವಾಗಿರುವುದಿದೆ. ಸರಿ ಸುಮಾರು ಹದಿನಾಲ್ಕು ಬಿಲಿಯನ್ ವರ್ಷಗಳ ಹಿಂದೆ ಬಿಗ್ ಬ್ಯಾಂಗ್ ಆದ ಸಮಯದಲ್ಲಿ ಇದ್ದಂಥಃ ಅಣುಗಳು ಇಂದಿನವರೆಗೂ ಇರುವುದಾಗಿದೆ ಹಾಗು ಅವುಗಳಲ್ಲಿ ಕೆಲವು ಮಾನವರಲ್ಲಿಯೂ ಇರುವುದಾಗಿದೆ. ಪ್ರತಿ ಮನುಷ್ಯನ ದೇಹದಲ್ಲಿರುವ ತೊಂಭತ್ತ ಎಂಟು ಶೇಕಡಾ ಅಣುಗಳು ವರ್ಷಕ್ಕೊಮ್ಮೆ ಹೊಸ ಅಣುವಿನ ಜೊತೆಗೆ ವಿನಿಮಯಮಾಡಿಕೊಳ್ಳುವುದಿದೆ. ಹೀಗಾಗಿ ಮಾನವನು ಸತತವಾಗಿ ಮರಣವನ್ನಪ್ಪಿ, ಪುನಃ ಅಸ್ತಿತ್ವಕ್ಕೆ ಸತತವಾಗಿ ಹಿಂತಿರುಗುವುದಿದೆ. ಅರ್ಥಾತ್, ವ್ಯಕ್ತಿಯ ದೇಹದಲ್ಲಡಗಿರುವ ಅಣುವಿನ ಹಾಗು ಕಣಗಳ ಸ್ತರಗಳಲ್ಲಿ ಸ್ಥಿತ್ಯಂತರವು ಅಕ್ಷರಶಃ ಇರುವುದಾಗಿದೆ. ಈ ಪ್ರಕಾರದ ಸ್ಥಿತ್ಯಂತರದ ಪರಿಣಾಮವಾಗಿ ವ್ಯಕ್ತಿಯು, ಪ್ರತಿ ಮೂರು ದಿನಕ್ಕೊಮ್ಮೆ ಹೊಸದಾದ ಅನ್ನಾಶಯದ ಸಾಲುಗಳನ್ನು, ತಿಂಗಳಿಗೊಮ್ಮೆ ಹೊಸದಾದ ಚರ್ಮವನ್ನು ಮತ್ತು ಪ್ರತಿ ತ್ರೈಮಾಸಿಕದಲ್ಲಿ ಹೊಸದಾದ ಅಸ್ಥಿಪಂಜರವನ್ನು ಹೊಂದುವವನೇ ಆಗಿರುತ್ತಾನೆ. ಒಟ್ಟು ತಾತ್ಪರ್ಯದಲ್ಲಿ, ಸರಿ ಸುಮಾರು ವರ್ಷಕ್ಕೊಮ್ಮೆ ವ್ಯಕ್ತಿಯು ಸಂಪೂರ್ಣ ಹೊಸದಾದ ಶರೀರವನ್ನು ಹೊಂದುವವನೇ ಆಗಿರುತ್ತಾನೆ.

ಮಾನವನ ದೇಹದಲ್ಲಿರುವ ಅಣುಗಳು ಚಿರಕಾಲವೂ ಇರದೆ, ವಲಸೆ ಹೋಗುವ ಜೀವಗಳ ರೀತ್ಯಾ ಬದಲಾಗುತ್ತಲೇ ಇರುವುದಾಗಿರುತ್ತವೆ ಎಂದು ದೀಪಕ್ ಛೋಪ್ರಾರವರು ಪ್ರತಿಪಾದಿಸಿರುತ್ತಾರೆ. ಅಣುಗಳು ಸ್ವತಂತ್ರವಾಗಿದ್ದು, ಕಾಲ ಹಾಗು ದೇಶಗಳ ಹರಿವಿನ ಸೆಳೆತಕ್ಕೆ ನಿಧಾನವಾಗಿ ಒಳಪಡುವುದೇ ಆಗಿರುತ್ತವೆ ಮತ್ತು ಅವುಗಳ ಅಸ್ತಿತ್ವಗಳು ಮಾನವನ ದೇಹದ ರೀತಿಯಲ್ಲಿ ಶುದ್ಧವಾದ ರಚನೆಗಳಾಗಿ ವ್ಯವಸ್ಥಿತಗೊಳ್ಳುವುದೇ ಆಗಿರುತ್ತದೆ. ಈ ರೀತಿಯಾದ ಅಣುಗಳ ವ್ಯವಸ್ಥೆಗೊಳ್ಳುವುದರ ಹಿಂದಿನ ಮರ್ಮವು ಮಾನವನಲ್ಲಿರುವ ಶಕ್ತಿಯ ಕಾರ್ಯಕ್ಷೇತ್ರವೇ ಆಗಿರುವುದಾಗಿರುತ್ತದೆ. ಅಯಸ್ಕಾಂತವು ತನ್ನ ಕಾರ್ಯಕ್ಷೇತ್ರದಲ್ಲಿ ಲೋಹದ ಸಣ್ಣ ಸಣ್ಣ ಚೂರುಗಳನ್ನು ಹೇಗೆ ವ್ಯವಸ್ಥಿತಗೊಳಿಸುವುದೋ, ಹಾಗೆಯೇ ಮಾನವನಲ್ಲಿನ ಶಕ್ತಿಯು ತನ್ನ ಕಾರ್ಯ ಕ್ಷೇತ್ರದಲ್ಲಿ ಅಣುಗಳನ್ನು ಇನ್ನೂ ಹೆಚ್ಚು ಸಂಕೀರ್ಣವಾಗಿ ವ್ಯವಸ್ಥೆಗೊಳಸುವುದೇ ಆಗಿರುವುದಾಗಿರುತ್ತದೆ.

ಮಾನವನಿಗೆ ಅವನ ದೇಹವೇ ನಿಜವಾದ ಅಸ್ತಿತ್ವವಾಗಿರದೆ, ಹೀಗಿರಬೇಕೆಂಬ ಅವನ ನಂಬಿಕೆಯ ಆಧಾರದ ಉದ್ದೇಶದ ಮೇಲಿನ ಶುದ್ಧವಾದ ಪ್ರದರ್ಶನವೇ ಆಗಿರುವುದಾಗಿರುತ್ತದೆ. ಯಾವುದೇ ವ್ಯಕ್ತಿಯು, 'ಶುದ್ಧವಾದ ಪ್ರಜ್ಞೆಯೇ ನಾನು' ಎಂದು ಕಂಡುಕೊಂಡಲ್ಲಿ ಮತ್ತು ತನ್ನತನದ ವಿಷಯಾಂಶಗಳನ್ನು ವಾಸ್ತವಿಕತೆಯಲ್ಲಿ ನೈಜವಾಗಿ ಸೃಷ್ಟಿಸುವ ಅಪರಿಮಿತವಾದ ಸೃಜನಾತ್ಮಕವಾದ ಅರಿವೇ ನಾನು ಎಂದು ಅರಿತುಕೊಂಡಲ್ಲಿ ಅರ್ಥಾತ್, ವೈದೀಕ ಪ್ರಕಾರವಾಗಿ 'ಅರಿವೇ ಬ್ರಹ್ಮ' ಎಂದರಿತಲ್ಲಿ, ಅವನು ತನ್ನ ಜೀವನದ, ಆರೋಗ್ಯದ ಹಾಗು ದೇಹದ ಮೇಲೆ ಸಂಪೂರ್ಣವಾದ ನಿಯಂತ್ರಣವನ್ನು ಹೊಂದಲು ಪ್ರಾರಂಭಿಸಿಕೊಳ್ಳಬಹುದಾಗಿದೆ.

ಮಾನವನ ಆರೋಗ್ಯದ ವಿಚಾರವನ್ನು ತೆಗೆದುಕೊಂಡಾಗ, ಅವನ ದೇಹದಲ್ಲಿ ಕಾಣಿಸಿಕೊಳ್ಳುವಂಥಃ ಹಲವಾರು ರೀತಿಯ ಪುರಾತನವಾದ ಘಾಸಿಗಳು, ದೀರ್ಘಕಾಲದ ವ್ಯಾಧಿಗಳು, ರೋಗ ರುಜಿನಗಳು ವಾಸ್ತವಿಕತೆಯಲ್ಲಿ ಕೇವಲ ದೇಹಕ್ಕೆ ಸಂಬಂಧಪಟ್ಟಿರದೆ, ಬಹುತೇಕವಾಗಿ ಮನಸ್ಸಿಗೆ ಸಂಬಂಧಿಸಿರುವುದೇ ಆಗಿರುತ್ತದೆ ಎಂದು ಪ್ರಸಕ್ತ ಮನಃಶಾಸ್ತ್ರವೂ ಸಿದ್ಧಪಡಿಸಿರುವುದಿದೆ. ಒಟ್ಟಾರೆಯಾಗಿ ವೈದೀಕ ಹಾಗು ವೈಜ್ಞಾನಿಕ ಪ್ರಕಾರಗಳಲ್ಲಿ ಹೇಳಬೇಕೆಂದರೆ, ಮಾನವನ ಎಲ್ಲಾ ರೀತಿಯಾದ ರೋಗ ರುಜಿನಗಳೂ ಬಹುತೇಕವಾಗಿ ಆ ವ್ಯಕ್ತಿಯ ಗ್ರಹಿಕೆಯ ಮೇಲೆಯೇ ಆಧಾರವಾಗಿರುವುದಾಗಿರುತ್ತದೆ. ಈ ಹಿಂದೆ ಅವಲೋಕಿಸಿದಂತೆ ವ್ಯಕ್ತಿಯಲ್ಲಿನ ಅಣುಗಳು ಹಾಗು ಕಣಗಳು ನಿರಂತರವಾಗಿ ಬದಲಾವಣೆಯನ್ನು ಹೊಂದುತ್ತಲೇ ಇರುವುದಾಗಿರುತ್ತದೆ. ವ್ಯಕ್ತಿಯಲ್ಲಿ ಹೊಸದಾದ ಅಣುಗಳು ಹಾಗು ಕಣಗಳು ರೂಪುಗೊಂಡಾಗ, ಮತ್ತು ಅವನ ರಚನೆಯು ಅಸ್ತಿತ್ವದ ಒಳಗೂ ಹಾಗು ಹೊರಗೂ ಪ್ರಕಾಶಿತಗೊಂಡಾಗ, ಅವನಲ್ಲಿರುವ ಶಕ್ತಿಯ ಕಾರ್ಯಕ್ಷೇತ್ರವು, ಅವುಗಳಿಗೆ ಎಲ್ಲಿಗೆ ಹೋಗಬೇಕು, ಒಂದರ ಜೊತೆ ಇನ್ನೊಂದು ಹೇಗೆ ಸಮತ್ವಗೊಳಿಸಿಕೊಳ್ಳಬೇಕು, ಏನುಮಾಡಬೇಕು ಹೀಗೆ ಹಲವಾರು ವಿಚಾರಗಳನ್ನು ಮಾರ್ಗದರ್ಶನ ಮಾಡುವುದಾಗಿದೆ. ಆದುದರಿಂದಾಗಿ, ಹಲವಾರು ರೀತಿಯ

ಪುರಾತನವಾದ ಘಾಸಿಗಳನ್ನು, ದೀರ್ಘಕಾಲದ ವ್ಯಾಧಿಗಳನ್ನು, ಮತ್ತು ರೋಗ ರುಜಿನಗಳನ್ನು ಆ ವ್ಯಕ್ತಿಯು ತನ್ನ ಪ್ರಜ್ಞೆಯಲ್ಲಿ ಹಿಡಿದಿಟ್ಟುಕೊಂಡಿರುವ ಕಾರಣದಿಂದಾಗಿ ಹಾಗು ಅವುಗಳು ಅವನ ಶಕ್ತಿಯ ಕಾರ್ಯಕ್ಷೇತ್ರದ ಮೇಲೆ ಬಲವಾದ ಅಚ್ಚು ಒತ್ತಿದ ಕಾರಣದಿಂದಾಗಿ, ದೇಹ ಹಾಗು ಮನಸ್ಸಿನ ಮೇಲೆ ಅವುಗಳನ್ನು ಮುಂದುವರೆಯುವಂತೆ ಮಾಡುವುದಾಗಿರುತ್ತದೆ. ವೈದೀಕ ಉಲ್ಲೇಖಗಳ ಪ್ರಕಾರವಾಗಿ ಹೇಳುವುದೆಂದರೆ 'ಯದ್ಭಾವಂ ತದ್ಭವತಿ', ಅಂದರೆ, ಯಾವ ಭಾವವು ವ್ಯಕ್ತಿಯ ಪ್ರಜ್ಞೆಯಲ್ಲಿ ಇರುವುದೋ, ಆ ಭಾವದ ರೀತಿಯಾಗಿಯೇ ದೇಹ ಹಾಗು ಮನಸ್ಸುಗಳು ಆ ವ್ಯಕ್ತಿಯಲ್ಲಿ ಉದ್ಭವಿಸುವುದಾಗಿದೆ. ಈ ವಿಚಾರವನ್ನು ಗಮನದಲ್ಲಿರಿಸಿ ಕೊಂಡು ಆಲೋಚಿಸಿದಾಗ, ಯಾವುದೇ ವ್ಯಕ್ತಿಯು ಅವನ ಆರೋಗ್ಯವನ್ನು ತನ್ನ ಹತೋಟಿಗೆ ತೆಗೆದುಕೊಳ್ಳಬಹುದಾಗಿದೆ. ಅದೇ ರೀತಿಯಾಗಿ ತನ್ನ ಯೌವ್ವನವನ್ನೂ ಕೂಡ ಬಹುಮಟ್ಟಿಗೆ ಹಿಡಿತದಲ್ಲಿ ಇರಿಸಿಕೊಳ್ಳಬಹುದಾಗಿದೆ. ಅಷ್ಟೇ ಅಲ್ಲದೆ ಇನ್ನೂ ಮುಂದುವರೆದು ವಿಕಾಸವನ್ನೂ ಕೂಡ ಸಾಧಿಸಿಕೊಳ್ಳಬಹುದಾಗಿದೆ.

ಆರೋಗ್ಯ, ಯೌವ್ವನ ಹಾಗು ವಿಕಾಸಗಳ ಕಡೆಗಿನ ಸಾಧನೆಗಳ ಹಾದಿಯನ್ನು ವೈದೀಕ ಉಲ್ಲೇಖಗಳಲ್ಲಿ ಕಂಡುಕೊಳ್ಳಬಹುದಾಗಿದೆ. ಇವುಗಳನ್ನು ಸಾಧಿಸುವ ಬಗೆಗಳನ್ನೂ ಕೂಡ ಶಾಸ್ತ್ರದ ರೂಪಗಳಲ್ಲಿ ವೈದೀಕ ಸಂಸ್ಕೃತಿಯು ಕೊಡಮಾಡಿರುವುದಿದೆ. ಯೋಗ ಶಾಸ್ತ್ರದಲ್ಲಿ ವಿವರವಾಗಿ ಪ್ರಸ್ತಾವನೆಗೊಂಡಿರುವಂಥಃ ಧ್ಯಾನ ಎಂಬ ತಂತ್ರವು ಮೇಲೆ ಸಾಧಿಸಿರುವ ವಿಚಾರದ ಬಗೆಗೆ ಮತ್ತಷ್ಟು ಬೆಳಕನ್ನು ಚೆಲ್ಲಿರುವುದಿದೆ. ಈ ರೀತಿಯಾದ ವಿಚಾರಗಳನ್ನು ಇತ್ತೀಚಿನವರೆಗೂ 'ಪವಾಡ' ಎಂಬ ಗುಂಪಿಗೆ ವಿಜ್ಞಾನವು ಸೇರಿಸಿಕೊಂಡಿದ್ದರೂ, ನಂತರದಲ್ಲಿ, ಈ ರೀತಿಯಾದ ವಿಚಾರಗಳು ಪ್ರಕೃತಿಗೆ ವಿರೋಧವಾದ ವುಗಳಲ್ಲ, ಬದಲಿಗೆ, ಪ್ರಕೃತಿಯ ಬಗೆಗೆ ಮನುಜರಿಗೆ ಇರುವ ಸೀಮಿತವಾದ ಜ್ಞಾನಕ್ಕೆ ಮಾತ್ರವೇ ವಿರೋಧವಾಗಿ ಕಂಡುಬರುವು ದಾಗಿತ್ತು ಎಂಬುದನ್ನು ಮನಗಂಡು, ಈ ಬಗೆಗಳ ವಿಚಾರಗಳನ್ನು ವೈಜ್ಞಾನಿಕ ಸಂಶೋಧನೆಗಳ ಮುಖಾಂತರವಾಗಿ ಪರಿಶೀಲಿಸಲು ಪ್ರಾರಂಭಿಸಿಕೊಂಡಿವೆ ಎಂದರೆ ತಪ್ಪಾಗಲಾರದು.

**ಆಧಾರ:**

ಉಪನಿಷತ್ತು

ಭೌತಶಾಸ್ತ್ರ

ವೈದ್ಯಕೀಯ ವಿಭಾಗ

## ಪರಿಕಲ್ಪನಾ ಪರಮಾತ್ಮ: ಒಂದು ಚಿಂತನೆ

[1]ಚಂದ್ರಮೌಳಿ ಎಂ.ಎಸ್., [2]ಭಾನು ಕೆ.ಎನ್.

[1]ವಿದ್ಯಾರ್ಥಿ, ಕೆ.ಎಸ್.ಒ.ಯು., ಮೈಸೂರು, ಭಾರತ, [2]ಸಹಾಯಕ ಪ್ರಾಧ್ಯಾಪಕರು, ಪಿ.ಆರ್.ಸಿ.ಇ., ಬೆಂಗಳೂರು, ಭಾರತ.

**ಪ್ರಬಂಧ ಸಾರ:–** ಪ್ರಸಕ್ತ ಕಾಲದಲ್ಲಿನ ಹಲವರು ಸಾಮಾನ್ಯವಾಗಿ ಪರಮಾತ್ಮ ಎಂದರೆ, ಭಯಾನಕವಾದಂಥಃವ, ಕೋಪಗೊಂಡಂಥಃವ, ವ್ಯಾಕುಲ ಗೊಂಡಂಥಃವ, ಉದಾಸೀನನಾದಂಥಃವ, ಕರುಣೆಯಿಂದ ಕೂಡಿದಂಥಃವ ಅಥವಾ ನ್ಯಾಯಾನ್ಯಾಯಗಳನ್ನು ಅಳೆದು ತೀರ್ಮಾನಿಸುವಂಥಃವ, ಹೀಗೆ ಹತ್ತು ಹಲವಾರು ರೀತಿಯಾದ ಅಭಿಪ್ರಾಯಗಳನ್ನು ಹೊಂದಿದಂಥಃವರೇ ಆಗಿದ್ದಾರೆ. ಈ ಪ್ರಕಾರದ ಮಾನವನ ಚಿಂತನೆಯು, ಪರಮಾತ್ಮನ್ನು ಅರ್ಥೈಸುವ ತಾತ್ಪರ್ಯಗಳನ್ನು ಶತ ಶತಮಾನಗಳಿಂದ ಕೇಳಿ ತಿಳಿದುಕೊಂಡು ಬಂದಿರುವುದರ ಕಾರಣದಿಂದಾಗಿಯೇ ಉಂಟಾಗಿರಬಹುದಾಗಿದೆ. ವೈದೀಕ ಉಲ್ಲೇಖಗಳನ್ನು ಅರ್ಥೈಸಿಕೊಂಡಾಗ, ಈ ಪ್ರಕಾರದ ಚಿಂತನೆಗಳು ಮಾನವನ ಹೃದಯ ಹಾಗು ಮನಸ್ಸಿನ ಮೂಲದಿಂದ ಜನಿತವಾಗಿರುವುದೇ ವಿನಃ, ವಾಸ್ತವಿಕತೆಯಲ್ಲಿ ಪರಮಾತ್ಮನ ಬಗೆಗಿನ ವಿಚಾರವು ಬೇರೆಯಾಗಿಯೇ ಇರುವುದಿದೆ ಎಂದು ಅಭ್ಯಸಿಸಿದವರ ಗಮನಕ್ಕೆ ಬರಬಹುದಾಗಿದೆ.

ಪ್ರಸಕ್ತ ಸಂಶೋಧನಾ ಪತ್ರಿಕೆಯು ಮೇಲೆ ಉಲ್ಲೇಖಿಸಿದಂಥಃ ವಿಚಾರವನ್ನು ಸಂಕ್ಷಿಪ್ತವಾಗಿ ವಿವರಿಸುವಂಥಃ ಉದ್ದೇಶವನ್ನು ಹೊಂದಿರುವಂಥಃದ್ದೇ ಆಗಿದೆ. ಅಷ್ಟೇ ಅಲ್ಲದೆ ಈ ವಿಚಾರಕ್ಕೆ ಸಂಬಂಧಪಟ್ಟಂಥಃ ಪರಮ, ಪರುಷ, ವ್ಯಾಕರಣೋಕ್ತವಾದ ಲಿಂಗ, ಮಾನವರ ಜೀವನೋದ್ದೇಶ, ಸಂತೋಷ, ಆನಂದ, ಈ ಪ್ರಕಾರವಾದ ಹತ್ತು ಹಲವಾರು ಸಂಶಯಗಳಿಗೆ ಉತ್ತರವನ್ನು ಆಧಾರಸಹಿತವಾಗಿ ಕಂಡುಕೊಳ್ಳುವ ಪ್ರಯತ್ನವೂ ಆಗಿರುವುದಿದೆ.

ಪ್ರಸಕ್ತ ಕಾಲದಲ್ಲಿನ ಹಲವರು ಸಾಮಾನ್ಯವಾಗಿ ಪರಮಾತ್ಮ ಎಂದರೆ, ಭಯಾನಕವಾದಂಥಃವ, ಕೋಪಗೊಂಡಂಥಃವ, ವ್ಯಾಕುಲಗೊಂಡ ಂಥಃವ, ಉದಾಸೀನನಾದಂಥಃವ, ಕರುಣೆಯಿಂದ ಕೂಡಿದಂಥಃವ ಅಥವಾ ನ್ಯಾಯಾನ್ಯಾಯಗಳನ್ನು ಅಳೆದು ತೀರ್ಮಾನಿಸುವಂಥಃವ ಹೀಗೆ ಹತ್ತು ಹಲವಾರು ರೀತಿಯಾದ ಅಭಿಪ್ರಾಯಗಳನ್ನು ಹೊಂದಿ ದಂಥಃವರೇ ಆಗಿದ್ದಾರೆ. ಈ ಪ್ರಕಾರದ ಮಾನವನ ಚಿಂತನೆಯು, ಪರಮಾತ್ಮನ್ನು ಅರ್ಥೈಸುವ ತಾತ್ಪರ್ಯಗಳನ್ನು ಶತಶತಮಾನಗಳಿಂದ ಕೇಳಿ ತಿಳಿದುಕೊಂಡು ಬಂದಿರುವುದರ ಕಾರಣದಿಂದಾಗಿಯೇ ಉಂಟಾಗಿರಬಹುದಾಗಿದೆ. ವೈದೀಕ ಉಲ್ಲೇಖಗಳನ್ನು ಅರ್ಥೈಸಿ ಕೊಂಡಾಗ, ಈ ಪ್ರಕಾರದ ಚಿಂತನೆಗಳು ಮಾನವನ ಹೃದಯ ಹಾಗು ಮನಸ್ಸಿನ ಮೂಲದಿಂದ ಜನಿತವಾಗಿರುವುದೇ ವಿನಃ, ವಾಸ್ತವಿಕತೆಯಲ್ಲಿ ಪರಮಾತ್ಮನ ಬಗೆಗಿನ ವಿಚಾರವು ಬೇರೆಯಾ ಗಿಯೇ ಇರುವುದು ಎಂದು ಅಭ್ಯಸಿಸಿದವರ ಗಮನಕ್ಕೆ ಬರಬಹು ದಾಗಿದೆ.

ಪರಮಾತ್ಮನನ್ನು ಪರಮ ಪುರುಷ ಎಂಬುದಾಗಿ ಉಲ್ಲೇಖಗಳು ಪ್ರತಿಪಾದಿಸಿರುವುದಾಗಿದೆ. ವೈದೀಕ ಪ್ರಕಾರವಾಗಿ, ಪರಮ ಎಂದರೆ 'ಸ್ಫುಟತ್ವ (ಸ್ಪಷ್ಟ) ಬೋಧಕ' ಎಂದೂ, ಪುರುಷ ಎಂದರೆ 'ಗುಣ ಸಾಮ್ಯಾವಸ್ಥೆಯಲ್ಲಿ ಇರುವವ' ಎಂದೂ ಅರ್ಥೈಸಲಾಗಿದೆ. ಪರಮ ಪುರುಷನಂಥಃವನಿಗೆ ಪರಿಪೂರ್ಣವಾದ, ಪೂರ್ವಾಗ್ರಹಪೀಡಿತ ವಲ್ಲದ ಹಾಗು ಯಾವುದೇ ತೀರ್ಮಾನಗಳಿಗೆ ಮತ್ತು ಅಳತೆಗಳಿಗೆ ಒಳಪಡದಂಥಃ ನಿರೀಕ್ಷಣ ರಹಿತವಾದ ಪ್ರೀತಿಯೇ ಅವನ ಭಾವ

ವಾಗಿರುವುದು. ಸರ್ವಜ್ಞ, ಸರ್ವವ್ಯಾಪಿ ಹಾಗು ಸರ್ವಶಕ್ತ ಎಂಬ ಉಲ್ಲೇಖವೂ; ತ್ರಿಗುಣಾತೀತ ಅರ್ಥಾತ್, ಸಾತ್ವಿಕ, ರಾಜಸ ಹಾಗು ತಾಮಸಗಳನ್ನು ಮೀರಿದವ ಎಂತಲೂ; ಪಾರಬ್ಧ, ಸಂಚಿತ ಹಾಗು ಆಗಮ ಕರ್ಮಸಿದ್ಧಾಂತಗಳೂ, ಭಾವ ಬುದ್ಧಿಗಳನ್ನು ಮೀರಿದವ ಎಂತಲೂ, ಇತ್ಯಾದಿ ಹೀಗೆ ಇರುವ ಹತ್ತು ಹಲವಾರು ವೈದೀಕ ಸಿದ್ಧಾಂತಗಳ ಪ್ರಕಾರಗಳು ನಿರೀಕ್ಷಣಾ ರಹಿತವಾದ ಪ್ರೀತಿಯು ಪರಮಾತ್ಮನ ಭಾವ ಎಂಬ ವಿಚಾರವನ್ನು ಪ್ರತಿಪಾದಿಸುವುದಾಗಿದೆ. ಏಕೆಂದರೆ, ಮೇಲೆ ಹೇಳಿದಂಥಃ ಗುಣಲಕ್ಷಣಗಳು ಪರಮಾತ್ಮನಿಗೆ ಸದಾಕಾಲವೂ ಆನಂದ ಸ್ಥಿತಿಯಲ್ಲಿ ಇಟ್ಟಿರುವುದರಿಂದಾಗಿಯೆ. ಆನಂದ ಸ್ಥಿತಿಯಲ್ಲರುವಂಥಃವನ ಮನೋಭಾವವು ಪ್ರೀತಿಯನ್ನಲ್ಲದೇ ಬೇರೆ ಏನನ್ನೂ ಹೊಮ್ಮಿಸುವುದಿಲ್ಲವಾಗಿದೆ.

ಮಾನವನ ರಾಜ್ಯವು ಹಾಗು ಪರಮಾತ್ಮನ ಹೊರಹೊಮ್ಮುವ ಸಾಮರ್ಥ್ಯವೂ ಕೂಡ ಪ್ರೀತಿ ಎಂದೆನ್ನುವುದರ ಮೇಲೆಯೇ ಆಧಾರಿವಾಗಿರುವುದಾಗಿದೆ ಎಂಬುವ ವಿಚಾರವನ್ನು ಉಲ್ಲೇಖಗಳ ಪ್ರಕಾರವಾಗಿ ಅರಿಯಬಹುದಾಗಿದೆ. ಹೀಗಾಗಿ ಪ್ರೀತಿ ಎಂದೆನ್ನುವುದು ಏನೂ ಆಗಿರದಾಗಿದೆ ಹಾಗು ಎಲ್ಲವೂ ಆಗಿರವುದೇ ಆಗಿದೆ. ಪರಮಾತ್ಮನ ಪರಿಕಲ್ಪನೆಯಲ್ಲಿರುವ ಪ್ರೀತಿ ಎಂಬುವುದರ ಆಳ ಮತ್ತು ಹರಿವು, ಮಾನವನ ತಿಳುವಳಿಕೆಗೆ ಬಹುವಾಗಿ ಎಟುಕುವಂಥಃದ್ದು ಆಗಿರುವುದಿಲ್ಲವಾಗಿದೆ. ಮಾನವನ ಜೀವನ, ನಡೆಯುವ ನೆಲ, ಗಾಳಿ, ಬೆಳಕು, ಧವಸ, ಧನ್ಯ, ಐಶ್ವರ್ಯ, ಆಯಸ್ಸು, ಆರೋಗ್ಯ, ರೂಪ, ರಸ, ಗಂಧ, ದೃಷ್ಟಿ, ಸ್ಪರ್ಷ ಹಾಗು ಕಟ್ಟಕಡೆಗೆ ಸೃಷ್ಟಿ, ಸ್ಥಿತಿ ಹಾಗು ಲಯ ಹೀಗೆ ಪ್ರತಿಯೊಂದೂ ಕೂಡ ಆ ಪ್ರೀತಿಯ ಪ್ರಯುಕ್ತವೇ ಆಗಿರುವುದಾಗಿದೆ. ರಚನೆಗಳ ಜೀವನದ ಪ್ರತಿ ಕ್ಷಣದಲ್ಲೂ, ಮಾಡುವ ಪ್ರತಿ ಕರ್ಮದಲ್ಲೂ ಹಾಗು ಅವುಗಳ ಫಲಗಳಲ್ಲೂ, ಪ್ರತಿಯೊಂದು ಆಲೋಚನೆಗಳಲ್ಲೂ, ಹೀಗೆ ಪ್ರತಿಯೊಂದರಲ್ಲೂ ಪ್ರೀತಿಯ ಹೆಜ್ಜೆಯ ಜಾಡನ್ನು ಅರಿಯಬಹುದಾಗಿದೆ.

ಪರಮಾತ್ಮನ ಪ್ರೀತಿಯಿಂದಲೇ ಸಕಲವೂ ಸೃಷ್ಟಿಗೊಂಡಂಥಃದ್ದಾಗಿದೆ. ಸ್ಥಿತಿಯೂ ಕೂಡ ಪ್ರೀತಿಯ ಆಧಾರದ ಮೇಲೆಯೇ ನಿಂತಿರುವುದಾಗಿದೆ. ಲಯವೂ ಕೂಡ ಪ್ರೀತಿಗೋಸ್ಕರವೇ ಆಗಿರುವುದಾಗಿದೆ. ಈ ರೀತಿಯಾದ ಪ್ರೀತಿಯಾದರು ಏತಕ್ಕಿದೆ? ಎಂಬ ಪ್ರಶ್ನೆಗೆ ಉತ್ತರವು ಆನಂದ ಎಂಬುವುದನ್ನು ಹೊಂದಿರುವುದರಿಂದಾಗಿ ಹಾಗು ಹೊಂದುವುದಕ್ಕೋಸ್ಕರವಾಗಿಯೇ ಆಗಿರುವುದಿದೆ. ಉಪನಿಷತ್ತುಗಳ ಪ್ರಕಾರವಾಗಿಯೂ ಸಕಲ ಕರ್ಮವೂ, ಸಕಲ ಜ್ಞಾನವೂ ಹೀಗೆ ಏನೊಂದೂ ಕೂಡ ಪ್ರಾಕೃತಿಕ ರೀತ್ಯಾ ಆಚರಿಸಲ್ಪಟ್ಟರೆ, ಅದು ಕಟ್ಟ ಕಡೆಗೆ ಆನಂದ ಎಂಬ ಸ್ಥಿತಿಯನ್ನೇ ಕೊಡುವಂಥಃದ್ದಾಗಿದೆ.

ಪ್ರಸ್ತುತವಾದ ತಿಳುವಳಿಕೆಯ ಪ್ರಕಾರವಾಗಿ ಸಂತೋಷ ಹಾಗು ಆನಂದ ಎಂಬ ಎರಡು ಪದಗಳಿರುವುದು ಗೊತ್ತಿರುವ ವಿಚಾರವೇ ಆಗಿರುವುದಾಗಿದೆ. ಸಂತೋಷ ಎಂದೆನ್ನುವುದು ಭಾವವಾದರೆ, ಆನಂದ ಎಂದೆನ್ನುವುದು ಮಾನಸಿಕವಾದ ಒಂದು ಸ್ಥಿತಿಯೇ ಆಗಿರುವುದಿದೆ. ಸಂತೋಷ ಎಂದೆನ್ನುವುದು ಕೆಲವು ಸಮಯ ಮಾತ್ರ ಇರುವುದಾಗಿದ್ದು, ನಂತರದಲ್ಲಿ ಅದು ನಶಿಸಿಹೋಗುವುದಾಗಿದೆ. ಮನಃಶಾಸ್ತ್ರದ ಪ್ರಕಾರವಾಗಿ ಮಾನವನಲ್ಲಿ ಉದಯಿಸುವ ಯಾವುದೇ ಭಾವವು ಎಷ್ಟೇ ತೀವ್ರತೆಯನ್ನು ಹೊಂದಿದ್ದರೂ ಹತ್ತರಿಂದ ಹೆಚ್ಚು ಎಂದರೆ ಇಪ್ಪತ್ತು ನಿಮಿಷಗಳವರೆಗೂ ಮಾತ್ರ ಇರುವುದಾಗಿದೆ. ಇಷ್ಟೇ ಅಲ್ಲದೆ, ಸಂತೋಷ ಎಂದೆನ್ನುವುದು ಮಾನವನಲ್ಲಿನ ಗ್ರಂಥಿಗಳ ಸ್ರವಿಸುವಿಕೆಯಿಂದ ಮೆದುಳಿನಲ್ಲಿ ಉಂಟಾಗುವ ಅನುಭವ ಮಾತ್ರವೇ ಎಂದು ಮನೋವೈದ್ಯಕೀಯ ಶಾಸ್ತ್ರವು ಸಿದ್ಧಪಡಿಸಿರುವ ವಿಚಾರವೇ ಆಗಿರುವುದಾಗಿದೆ. ಆದರೆ ಆನಂದ ಎಂದೆನ್ನುವುದು ಗ್ರಂಥಿಗಳ ಸ್ರವಿಸುವಿಕೆಯಿಂದ ಮೆದುಳಿನಲ್ಲಿ ಉಂಟಾದ ಅನುಭವವಾಗಿರದೆ, ನಿರಂತರವಾದ ಉಪಾಸನೆ ಹಾಗು ಕರ್ಮಗಳಿಂದ ಉಂಟಾಗುವ ಮಾನಸಿಕ ಸ್ಥಿತಿಯೇ ಆಗಿರುವುದಾಗಿದೆ. ಸ್ಥಿತಿ ಎಂದೆನ್ನುವುದು ನಿರಂತರವಾದ ಅಭ್ಯಾಸಗಳಿಂದ ಉಂಟಾಗುವ ಮಾನಸಿಕ ಸ್ಥಿತ್ಯಂತರವೇ ಆಗಿರುವುದಾಗಿದೆ. ಸ್ಥಿತಿ ಎನ್ನುವುದನ್ನು ಭಾವಕ್ಕೆ ಹೋಲಿಸಿದಾಗ, ಅದರ ಉಪಸ್ಥಿತಿಯು ಮತ್ಯಾವುದೇ ಅಡೆತಡೆಗಳು ಉಂಟಾಗಿದ್ದಲ್ಲಿ ಚಿರಕಾಲವೂ ರಚನೆಗಳಲ್ಲಿ ಇರುವಂಥಃದ್ದೇ ಆಗಿರುವುದಾಗಿದೆ. ಮತ್ತೊಂದು ಗಮನಿಸಬೇಕಾದ ಅಂಶ ಎಂದರೆ, ಸಂತೋಷವು ಮಾನವನ ಯಾವುದೋ ಒಂದು ಕರ್ಮದ ಫಲದ ಆಧಾರಿವಾಗಿದ್ದರೆ, ಆನಂದ ಎಂದೆನ್ನುವುದು ಅವನಲ್ಲಿ ತೃಪ್ತಿಯಿಂದ ಅರ್ಥಾತ್, ನಿಷ್ಕಾಮ ಕರ್ಮದಿಂದ ಸೃಜಿತಗೊಳ್ಳುವುದೇ ಆಗಿರುವುದಿದೆ.

ವೇದಾಂತ ಸೂತ್ರಗಳ ಆನಂದಮಯಾಧಿಕರಣದಲ್ಲಿ ಆನಂದದ ವಿಷಯವು ವಿವರವಾಗಿ ಉಲ್ಲೇಖಿಸಲ್ಪಟ್ಟಿರುವುದಾಗಿದೆ. ಇದರ ಭಾಷ್ಯವನ್ನು ಬರೆದಿರುವ ಶ್ರೀ ಶಂಕರಾಚಾರ್ಯರ ಪ್ರಕಾರವಾಗಿ, ಆನಂದ ಎಂದೆನ್ನುವುದು ಕಾರ್ಯಾತ್ಮವೇ ಆಗಿರುವುದಾಗಿದೆ. ಏಕೆಂದರೆ ಉಪನಿಷತ್ತುಗಳಲ್ಲಿ ಆನಂದಮಯನಾದ ಆತ್ಮನಿರುವನು ಎಂಬುದಾಗಿ ಉಲ್ಲೇಖಿಸಲ್ಪಟ್ಟಿರುವ ಕಾರಣವೇ ಆಗಿರುವುದಾಗಿಯೆ. ಆನಂದಮಯ ಎಂಬುವುದರಲ್ಲಿ ಮಯಟ್ ಎಂಬ ಪ್ರತ್ಯಯವನ್ನು ವಿಕಾರಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿರುವುದಾಗಿದೆ. ಹಾಗು ಮತ್ತೊಂದು ಮಂತ್ರದಲ್ಲಿ 'ಏತಮಾನಂದಮಯಮಾತ್ಮಾನಮುಪಸಂಕ್ರಾಮತಿ' ಅಂದರೆ, ಆನಂದಮಯಾತ್ಮನನ್ನು ಉಪಸಂಕ್ರಾಮಿಸುತ್ತಾನೆ ಅರ್ಥಾತ್, ಪ್ರಾಪ್ತಿಗೊಳಿಸಿಕೊಳ್ಳುತ್ತಾನೆ ಎಂಬರ್ಥದಲ್ಲಿ ಹೇಳಿರುವುದಿದೆ. ಇದರಿಂದಾಗಿ ಆನಂದಮಯನನ್ನು ಕಾರ್ಯವರ್ಗಕ್ಕೆ ಸೇರಿಸಬಹುದಾಗಿದೆ. ಆನಂದ ಎಂದೆನ್ನುವುದು ಉಪಾಸನೆ ಹಾಗು ಕರ್ಮ ಇವುಗಳ ಫಲವೇ ಆಗಿರುವುದಾಗಿದೆ. ಹೀಗಾಗಿ ಆನಂದವು ವಿಕಾರಮಯವಾದುದಾಗಿದೆ.

ಈ ರೀತಿಯಾದ ಆನಂದಕ್ಕೆ ಆಧಾರ ಯಾವುದು ಎಂಬ ಪ್ರಶ್ನೆಗೆ ಉತ್ತರವು 'ಬ್ರಹ್ಮವಿದಾಪ್ನೋತಿ ಪರಮ್' ಎಂಬುದಾಗಿ ಇರುವುದಾಗಿದೆ. ಅರ್ಥಾತ್, ಬ್ರಹ್ಮವೇ ಆನಂದಮಯನಿಗೆ ಆಧಾರ ಎಂದೆನ್ನುವುದಾಗಿದೆ. ಆನಂದ ಎಂದೆನ್ನುವುದು ಪ್ರಭೂತವಾಗಿರುವುದಿದೆ ಎಂದು ಶಂಕರಾಚಾರ್ಯರು ಉಲ್ಲೇಖಿಸಿರುವುದಿದೆ. ಪ್ರಸಕ್ತವಾಗಿ ಪ್ರಭೂತ ಎಂದೆನ್ನುವುದು ಬಹಳ ದೊಡ್ಡದಾದ ಎಂಬರ್ಥವನ್ನು ಕೊಡುವುದಿದೆ. ಪ್ರಭೂತ ಎಂಬ ಪದದ ಪ್ರಯೋಗ ಏತಕ್ಕಾಗಿದೆ? ಅಂದರೆ, ಆನಂದ ಎಂಬುವದರಲ್ಲಿ, ಹೆಚ್ಚು ಭಾಗ ಆನಂದ ಇರುವುದಿದ್ದರೂ ಸ್ವಲ್ಪವಾದರೂ ದುಃಖ ಇರುವುದಾಗಿದೆ ಎಂಬ ಅರ್ಥವನ್ನು ತೊಡೆದುಹಾಕುವ ಕಾರಣ ಇರುವುದರಿಂದಾಗಿಯೆ.

ಆತ್ಮ ಎಂದೆನ್ನುವುದು ಪರಮಾತ್ಮನ ಘಟಕಾಂಶವೇ ಆಗಿರುವುದಿದ್ದು, ಅವನು ಪ್ರೀತ್ಯಾಧಾರದ ಮೇಲೆಯೇ ರಚನೆಗಳಿಗೆ ಕೊಡಮಾಡಿರುವುದಾಗಿದೆ. ಈ ರೀತಿಯಾದ ಪ್ರೀತಿಯ ಹರಿವು ಎಂದೆನ್ನುವುದು ಕೇವಲ ಪರಮಾತ್ಮನ ಒಂದು ಭಾವವಾಗಿರದೆ, ಅವನ ಸಾಮರ್ಥ್ಯವೇ ಆಗಿರುವುದಾಗಿದೆ. ಪ್ರೀತಿಯ ಸಾಮರ್ಥ್ಯದ ಹರಿವು ಒಂದು ಕಾಲದಲ್ಲಿ ಕಾಣಿಸಿಕೊಂಡು ಮತ್ತೊಂದು ಕಾಲದಲ್ಲಿ ಮರೆಯಾಗುವಂಥಃ ಗುಣವನ್ನು ಉಳ್ಳದ್ದಾಗಿರದೆ, ಪ್ರತಿಯೊಂದು ಕಾಲದಲ್ಲಿನ ಕ್ಷಣದ ಮಿಡಿಯುವಿಕೆಯಲ್ಲಿಯೂ ಇರುವುದಾಗಿದೆ. ಜೊತೆಯಲ್ಲಿ, ನಿರಂತರವಾಗಿಯೂ ಹರಿಯುವ ಹಾಗು ಸದಾಕಾಲವೂ ಇರುವಂಥಃ ಲಕ್ಷಣವನ್ನು ಹಾಗು ಶಕ್ತಿ ಸಾಮರ್ಥ್ಯವನ್ನು ಪ್ರೀತಿಯು ಹೊಂದಿರುವಂಥಃವುದೇ ಆಗಿರುವುದಿದೆ.

ಮಾನವನನ್ನು ಹಾಗು ಅವನ ಜೀವನವನ್ನು ಪರಮಾತ್ಮನು ನ್ಯಾಯಾಧೀಶನ ರೀತಿಯಲ್ಲಿ ಅವಲೋಕಿಸಿ, ತೀರ್ಮಾನಿಸಿ, ಅಳೆದಳೆದು ತೀರ್ಪುಕೊಡುತ್ತಾನೆಯೆ? ಇದು ಬಹುಶಃ ಬಹುಜನರಿಗೆ ಕಾಡುವ ಪ್ರಶ್ನೆಯೇ ಆಗಿರುವುದಿದೆ. ಇದಕ್ಕುತ್ತರವು ವೈದೀಕ ರೀತ್ಯಾ ಇಲ್ಲ ಎಂದೆನ್ನುವುದೇ ಆಗಿದೆ. ಮಾನವನಲ್ಲಿರುವ ಆತ್ಮನು ಪರಮಾತ್ಮನ ಸಾಮರ್ಥ್ಯದ ಘಟಕಾಂಶವೇ ಆಗಿರುವುದಾಗಿದ್ದು, ಅದು ಸರ್ವ ಜೀವರಾಶಿಗಳಲ್ಲಿ ಇರುವುದಾಗಿದೆ. ವೈದೀಕ ಉಲ್ಲೇಖಗಳ ಪ್ರಕಾರವಾಗಿ, ಆತ್ಮನು ಯಾವುದೇ ರೀತಿಯಾದ ನಾನತ್ವ ಅಥವಾ ಅಹಂ ಎಂಬಂಥಃವುಗಳನ್ನು ಒಳಗೊಂಡಂಥಃ ಸ್ಥಿರರಾಶಿಗಳನ್ನು ಹೊಂದಿಲ್ಲದಿರುವುದೇ ಆಗಿರುವುದಿದೆ. ಹೀಗಾಗಿ, ಒಳ್ಳೆಯದು ಹಾಗು ಕೆಟ್ಟದು, ಪರಿಪೂರ್ಣ ಹಾಗು ಅಪರಿಪೂರ್ಣ, ಮತ್ತು ತಪ್ಪು ಹಾಗು ಸರಿ ಇತ್ಯಾದಿಗಳ ರೀತಿಯದಾದ ವಿಷಯಾಂಶಗಳನ್ನು ಇಲ್ಲವಾಗಿರುವುದಾಗಿದೆ. ನಾನತ್ವ, ಅಹಂಕಾರ, ವಿಷಯಾಂಶಗಳು ಹಾಗು ವ್ಯಕ್ತಿತ್ವ ಇತ್ಯಾದಿಗಳು, ಆತ್ಮವು ರಚನೆಯಲ್ಲಿ ಸೇರಿದಾಗ ಉದ್ಭವಿಸುವ ಅಂಶಗಳಾಗಿರುವವೇ ವಿನಃ, ಸ್ವಯಂ ಆತ್ಮನೇ ಅವುಗಳಿಂದ ರಚಿಸಲ್ಪಟ್ಟಿಲ್ಲದಿರುವುದಾಗಿದೆ.

ಆತ್ಮನ ಗುಣಲಕ್ಷಣಗಳು ಮೇಲೆ ವಿವರಿಸಿದ ರೀತಿಯಾಗಿರುವಾಗ, ಇದರ ಮೂಲವಾದ ಪರಮ ಆತ್ಮನು ಇವೆಲ್ಲಕ್ಕೂ ಖಂಡಿತವಾಗಿಯೂ ಮೀರಿದವನೇ ಆಗಿರುವುದಾಗಿದ್ದಾನೆ. ಈ ರೀತಿಯಾಗಿರುವ ಪರಮ ಆತ್ಮನು ಅಥವಾ ದೇವರು ಒಂದು ಕ್ಷಣ ಮಾನವ ರೀತಿಯ ಅಹಂ ಎಂಬುವುದನ್ನು ಹೊಂದಿದ್ದರೆ ಏನಾಗುತ್ತಿತ್ತು ಎಂಬುವುದನ್ನು ಆಲೋಚಿಸಿದರೆ, ದೊರಕುವ ವೈದೀಕ ಉತ್ತರದ ಸಾರಾಂಶವು ಈ ರೀತಿಯಾಗಿದೆ: 'ತನ್ನಲ್ಲೇ ಬೇರೆ ಬೇರೆ ರೀತಿಯಾದ ಬದಲಾವಣೆಗಳನ್ನು ಉಂಟಾಗಿಸಿಕೊಳ್ಳುತ್ತಿತು ಹಾಗು ಅದರ ಜೊತೆಜೊತೆಗೆ ಗ್ರಹಿಸುವಿಕೆಯ ಶಕ್ತಿಯನ್ನೂ ಕೂಡ ಹೊಂದಿರುವಂಥಃದ್ದೇ ಆಗಿರುವುದಿತ್ತು. ಯಾವುದೇ ಸಮಯದಲ್ಲಿ, ತನ್ನ ಅಸ್ತಿತ್ವದೊಳಗೇ ಉಂಟಾದ ಬದಲಾವಣೆಗಳನ್ನು ಒಂದು ಕ್ಷಣಕ್ಕಾದರೂ ಧ್ಯಾನಿಸಿದ್ದಲ್ಲಿ, ಅದರ ಸ್ಥಿತಿಯು ಮುಂದಿನ ಕ್ಷಣದಲ್ಲೇ ಮುಕ್ತಾಯವಾಗುವುದಿತ್ತು ಹಾಗು ಪುನಃ ಹಿಂದಿನ ಸ್ಥಿತಿಯನ್ನು ಹೊಂದುವುದು ಅಸಾಧ್ಯವೇ ಆಗಿರುತ್ತಿತ್ತು'.

ಉಲ್ಲೇಖಗಳ ಪ್ರಕಾರವಾಗಿ, ಪರಮ ಆತ್ಮನು ಧನಾತ್ಮನ ಹಾಗು ಋಣಾತ್ಮಕ ವಿಚಾರಗಳಿಲ್ಲದ ಅಖಂಡನೇ ಆಗಿರುವುದಾಗಿದ್ದನೆ, ಮತ್ತು ಪರಿಪೂರ್ಣತೆ ಹಾಗು ಅಪರಿಪೂರ್ಣತೆಗಳನ್ನೂ ಕೂಡ ಮೀರಿದವನೇ ಆಗಿದ್ದಾನೆ. ವ್ಯಕ್ತದಲ್ಲಿನ ಧನಾತ್ಮಕತೆ, ಋಣಾತ್ಮಕತೆ, ಪರಿಪೂರ್ಣತೆ ಹಾಗು ಅಪರಿಪೂರ್ಣತೆಗಳು ತನ್ನದೇ ಆದ ಗುಣಲಕ್ಷಣಗಳನ್ನು, ಸ್ಥಿರರಾಶಿಗಳನ್ನು ಹಾಗು ಪರಿಮಿತಿಗಳನ್ನು ಹೊಂದಿರವುಂಥಃವುಗಳೇ ಆಗಿರುವುದಿದೆ. ಈ ರೀತಿಯಾದ ಪರೀಸ್ಥಿತಿಗಳಗೆ ಒಳಪಟ್ಟಂಥಃವುಗಳಗೆ,  ಮುಂದುವರೆಯುವಿಕೆ, ಬದಲಾವಣೆ ಹೊಂದುವಿಕೆ ಹಾಗು ಸಮೃದ್ಧಿ ಎಂಬಂಥಃ ಚಲನಶೀಲತ್ವದ ಸ್ಥಿರರಾಶಿಗಳಿಗೆ ಒಳಪಡುವುದೇ ಆಗಿರುವುದಾಗಿದೆ. ಪರಮ ಆತ್ಮ ಎಂಬುವುದರ ಸ್ಥಿತಿಯನ್ನು ರಚನೆಗಳ ವಿಜ್ಞಾನಗಳ ಆಧಾರಿತವಾಗಿ ವಿವರಿಸುವುದು ಸಾಧ್ಯವಿಲ್ಲವಿರುವುದರಿಂದಾಗಿ ಹಾಗು ಮತ್ತೊಂದು ಉಪಮೇಯ ಇಲ್ಲದಿರುವ ಕಾರಣದಿಂದಾಗಿ ಸರಳವಾಗಿ ಹೇಳಬೇಕೆಂದರೆ ಅದು ಅದೇ ಆಗಿರುವುದಾಗಿದೆ. ಸೃಷ್ಟಿ, ಸ್ಥಿತಿ ಹಾಗು ಲಯಗಳ ಹಿಂದಿರುವ ಯಾಂತ್ರಿಕತೆಯ ಜ್ಞಾನವನ್ನು ಉಪಯೋಗಿಸಿಕೊಂಡು ಪರಮಾತ್ಮನನ್ನು ಅಳೆಯುವುದಾಗಲಿ ಅಥವಾ ಹೀಗೆ ಎಂದು ಸೈದ್ಧಾಂತಿಕರಣಗೊಳಿಸುವದಕ್ಕಾಗಲಿ ಅಸಾಧ್ಯವೇ ಆಗಿರುವುದಾಗಿದೆ. ಪ್ರತಿಯೊಂದು ಪರಮ ಆತ್ಮನಿಂದ ಅಭಿವ್ಯಕ್ತಗೊಳ್ಳುವುದಿದೆ ಹಾಗು ಅದು ಅವನ ಸಾಮರ್ಥ್ಯವೇ ಆಗಿರುವುದಿದೆ.

ಪರಮ ಆತ್ಮನು ಅತ್ಯುನ್ನತವಾದ ಅಸ್ತಿತ್ವದ, ಅಪರಿಮಿತವಾದ ಹಾಗು ಪೂರ್ಣವಾದ ಪ್ರೇಮವೇ ಆಗಿರುವವವನಾಗಿದ್ದಾನೆ. ಅಂಥಃ ಪ್ರೇಮವೇ ಅವನ ನಾನತ್ವ ಎಂದೂ ಕೂಡ ಅರ್ಥೈಸಬಹುದಾಗಿದೆ. ಅವನ ಅಗಾಧ ಪ್ರೇಮವೇ ಮನುಜನಿಗೆ, ಒಳ್ಳೆಯದು, ಕೆಟ್ಟದ್ದು, ಧನಾತ್ಮಕ, ಋಣಾತ್ಮಕ, ಅಪರಿಪೂರ್ಣ, ಪರಿಪೂರ್ಣ ಹೀಗೆ ಹಲವಾರು ರೀತಿಯಾದ ಮಾಯೆಗೊಳಪಟ್ಟ ದ್ವಂದ್ವಗಳನ್ನು ಉದ್ಭವಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟಿರುವುದಿದೆ. ಹಾಗು ಮನುಜನಿಗೆ ಇಂದ್ರಿಯಗಳನ್ನು ಕೊಡಮಾಡಿ ಗ್ರಹಿಕೆ ಎಂಬುದನ್ನು ಕೊಡಮಾಡಿರುವುದಿದೆ. ಗ್ರಹಿಕೆಗಳಿಗೆ ಪರಿಮಿತಿಗಳನ್ನೂ ಕೂಡ ಇಟ್ಟವನಾಗಿದ್ದಾನೆ. ಪರಿಮಿತಿಗಳಿಂದ ಅಪರಿಮಿತವನ್ನು ಅಂದಾಜು ಮಾಡಬಹುದಾಗಲೀ ಅಥವಾ ಪ್ರಯೋಗಕ್ಕೆ ಒಳಪಡಿಸಿ ನಿಖರವಾಗಿ ಅಳೆಯುವುದಾಗಲೀ ಸಾಧ್ಯವಿಲ್ಲದಾಗಿರುವುದಿದೆ.

ಕಲ್ಪನೆ ಎಂದೆನ್ನುವುದು ಮಾನವನ ಪ್ರಭಲವಾದ ಸ್ಥಿರಿರಾಶಿಯೇ ಆಗಿರುವುದಿದೆ. ಕಲ್ಪನೆಯು ವಾಸ್ತವಿಕವಾಗಿ ದೇಶ ಹಾಗು ಕಾಲವನ್ನು ಮೀರಿದ್ದರೂ, ಅದರ ಕಾರ್ಯಾಚರಣೆಯು ವ್ಯಾಪ್ತಿಯು ಸೃಷ್ಟಿಯಲ್ಲಿನ ವ್ಯಕ್ತದ ಪರಿಮಿತಿಯನ್ನು ಉಪಯೋಗಿಸಿಕೊಳ್ಳುವುದೊಂದಿಗೇ ಇರುವುದಾಗಿದೆ. ಅರ್ಥಾತ್, ಕಲ್ಪನೆಯೂ ಕೂಡ ಸೃಷ್ಟಿಯ ಭಾಗವೇ ಆಗಿರುವುದಾಗಿದೆ. ಶೃಂಗೇರಿ ಮೊದಲ ಗುರುಗಳು ರಚಿಸಿರುವ, ಶಂಕರಾಚಾರ್ಯರ ಅದ್ವೈತ ಭಾಷ್ಯದ ಸಾರವಾಗಿರುವ 'ಸಂಬಂಧ ವಾರ್ತಿಕ' ಕೃತಿಯ ಪ್ರಕಾರವಾಗಿಯೂ, 'ಮಾನವನ ಕಲ್ಪನಾ ಶಕ್ತಿಗೂ ಪರಮಾತ್ಮನನ್ನು ತಲುಪುವುದು ಹಾಗು ಹಿಡಿದಿಡುವುದು ಅಸಾಧ್ಯವೇ ಆಗಿರುವುದಿದೆ' ಎಂಬ ಸಿದ್ಧಾಂತವು ಇರುವುದಾಗಿದೆ.

ಮಾನವನು ಜೀವಿಸುವ ಪ್ರಸಕ್ತ ಕ್ಷಣವನ್ನಾಗಲೀ ಅಥವಾ ಜೀವಿಸುವ ಯಾವುದೇ ಕ್ಷಣವನ್ನಾಗಲೀ ಪರಮ ಆತ್ಮನು ಅಳೆಯದವನಾಗಿದ್ದಾನೆ. ಅದರ ಬದಲಿಗೆ, ಅವನೇ ಮಾನವನಲ್ಲಿ ಆತ್ಮನ ಅಂಶವಾಗಿ ಸೇರಿಕೊಂಡು, ತನ್ನ ಸೃಷ್ಟಿಯಲ್ಲಿ ತಾನೇ ವ್ಯಕ್ತಪಡಿಸಿ

ಕೊಂಡಂಥಃವನಾಗಿದ್ದಾನೆ. ಇಷ್ಟೇ ಅಲ್ಲದೆ, ಮನುಜನಿಗೆ ನಿಶ್ಚಿತವಾದ ಗುರಿಯನ್ನೂ ಕೂಡ ಕೊಡಮಾಡಿದ್ದಾನೆ. ಪ್ರತಿಯೊಬ್ಬ ಮನುಜನಿಗೂ ಕೇವಲ ಅವನದೇ ಆದಂಥಃ ಅಹಂ ಎಂಬುವುದನ್ನು ಕೊಟ್ಟಿದ್ದು, ಅವನು ಏನಾಗಬೇಕೆಂದು ಬಹಸುತ್ತಾನೆಯೋ, ಅಂಥಃಹುದನ್ನು ಸಾಧಿಸಿಕೊಳ್ಳುವಂಥಃ ಸ್ವಾತಂತ್ರ್ಯವನ್ನೂ ಕೂಡ ಕೊಡಮಾಡಿದ್ದಾನೆ. ಯಾವ ರೀತಿಯಲ್ಲಿ ಮನುಜನು ಜಗತ್ತನ್ನು ಗ್ರಹಿಸು ಇಷ್ಟಪಡುತ್ತಾನೆಯೋ, ಅಂಥಃಹುದೇ ರೀತಿಯಲ್ಲಿ ಗ್ರಹಿಸುವಂತೆ ಅನುಕೂಲ ಕಲ್ಪಿಸಿದ್ದಾನೆ. ಉಲ್ಲೇಖಗಳ ಸಾರಾಂಶದ ಪ್ರಕಾರವಾಗಿ, ಮಾನವನು ಏನೇ ಮಾಡಿರಲಿ, ಮಾಡದಿರಲಿ, ಏನನ್ನು ಯೋಚಿಸಲಿ ಅಥವಾ ಯೋಚಿಸದಿರಲಿ, ಉತ್ತಮನೋ, ಅಧಮನೋ ಅಥವಾ ನೀಚನೋ ಏನೇ ಆಗಿರಲಿ, ಪರಮಾತ್ಮನು ಸದಾ ಕಾಲವು ಅವನನ್ನು ಅಸ್ತಿತ್ವದ ಆತ್ಮೋಪಾದಿಯಲ್ಲಿ ನೋಡುತ್ತಾನೆಯೇ ವಿನಃ ಬೇರೆ ಇನ್ಯಾವುದೇ ರೀತಿಯಲ್ಲಿ ಆಗಿರುವುದಿಲ್ಲವಾಗಿದೆ. ಇವೆಲ್ಲವೂ ಕೇವಲ ನಿರೀಕ್ಷಣೆ ಇಲ್ಲದ ಪ್ರೇಮದ ಫಲವೇ ಆಗಿರುವುದಾಗಿದೆ.

ಮಾನವನು ಪರಮ ಆತ್ಮನ ಪ್ರೇಮದ ರೀತಿಯನ್ನು ಜಗತ್ತಿನಲ್ಲಿ ಬೇರೆ ಯಾವುದೇ ಪ್ರಕಾರಗಳಲ್ಲಿಯೂ ನೋಡಲು ಅಥವಾ ಅನುಭವಿಸಲು ಸಾಧ್ಯವೇ ಇರದಾಗಿದೆ. ಮಾನವನು ಬಯಸಲಿ, ಬಯಸದಿರಲಿ, ನಿಂದಿಸಲಿ, ಹೊಗಳಲಿ ಅಥವಾ ಏನೇ ಮಾಡಲಿ, ಅವನು ಸಕಲ ಸಂಭವನೀಯತೆಗಳ ಹಾಗು ಆಕರಗಳ ಸಕಲ ಸಂಪತ್ತನ್ನೂ ಸದಾಕಾಲವೂ ಪಡೆಯುವಂಥಃವನೇ ಆಗಿದ್ದಾನೆ. ಮನುಜನು ಬಯಸುವ ರೀತಿಯಲ್ಲಿಯೆ ಅವನ ಜೀವನವನ್ನು ಕಲ್ಪಿಸಿಕೊಳ್ಳಲು ಪರಮ ಆತ್ಮನು ಅನವರತವೂ ಅನುಕೂಲ ಮಾಡಿಕೊಡುವಂಥಃವನೇ ಆಗಿದ್ದಾನೆ. ಏಕೆಂದರೆ, ಅವನು ಸದಾ ಕಾಲವೂ ಮಾನವನನ್ನು ಪ್ರೀತಿಸುವಂಥಃವನೇ ಆಗಿದ್ದಾನೆ. ಈ ರೀತಿಯನ್ನು ಬಿಟ್ಟು ಬೇರೆ ಯಾವುದೇ ರೀತಿಯನ್ನು ಪರಮ ಆತ್ಮನು ಬಲ್ಲದವನಾಗಿದ್ದಾನೆ ಹಾಗೆಯೇ ಹೊಂದದವನೂ ಆಗಿದ್ದಾನೆ. ಹೀಗಾಗಿ ಪರಮಾತ್ಮನೇ ಅಂಶದ ರೂಪದಲ್ಲಿ ಮಾನವನಲ್ಲಿ ಇರುವುದಾಗಿದ್ದಾನೆ.

ಪರಮಾತ್ಮನು ಮಾನವನಲ್ಲಿ ಯಾವುದೇ ತಪ್ಪುಗಳನ್ನು ಅಳೆಯದವನಾಗಿದ್ದು, ಕೇವಲ ತನ್ನನ್ನು ತಾನೇ ನೋಡುವವನಾಗಿದ್ದಾನೆ. ಅವನು ಯಾವುದೇ ರೀತಿಯಾದ ಮಾನವನ ವಿಫಲತೆಯನ್ನು ಗಮನಿಸದೆ, ಆತ್ಮ ಎಂದೆನ್ನುವುದು ನಿರಂತರವಾಗಿ ಮುಂದುವರೆಯುವುದನ್ನು ಗಮನಿಸುವವನಾಗಿದ್ದಾನೆ. ಮಾನವನು ದುರ್ಮಾರ್ಗಿಯಾಗಿದ್ದರೆ ದುರ್ಮಾರ್ಗವನ್ನೇ, ಸನ್ಮಾರ್ಗಿಯಾಗಿದ್ದರೆ ಸನ್ಮಾರ್ಗವನ್ನೇ ಪರಮಾತ್ಮನು ವಿಕಸಿತಗೊಳಿಸುತ್ತಾನೆಯೇ ವಿನಃ, ಇವುಗಳನ್ನು ಅಳೆದು ತೂಗಿ ಯಾವುದು ಉಚ್ಚ, ಯಾವುದು ನೀಚ ಎಂಬುವುದನ್ನು ತೀರ್ಮಾನಿಸುವಂಥಃ ಕಾರ್ಯವನ್ನು ಅವನು ಯಾವತ್ತೂ ಮಾಡದವನಾಗಿದ್ದಾನೆ. ಅವನು ಕೇವಲ ಅವನಾಗಿದ್ದುಕೊಂಡು, ಮಾನವನು ಏನನ್ನಾಗಿ ವ್ಯಕ್ತವಾಗಲು ಇಷ್ಟಪಡುತ್ತಾನೆಯೋ ಅದೇ ರೀತಿಯಾಗಿ ವ್ಯಕ್ತಪಡಿಸಿಕೊಳ್ಳಲು ಆತ್ಮದ ಮುಖಾಂತರವಾಗಿ ದಾರಿಮಾಡಿಕೊಡುವುದಾಗಿದ್ದಾನೆ. ಇವೆಲ್ಲವೂ ಅವನಲ್ಲಿನ ನಿರೀಕ್ಷಣಾ ರಹಿತವಾದ ಪ್ರೀತಿಯ ಸಾಮರ್ಥ್ಯವೇ ಕಾರಣವಾಗಿರುವುದಾಗಿದೆ. ಏನಾದರು ಈ ಪ್ರಕಾರದ ಬದಲಾಗಿ ಬೇರೆ ಇನ್ಯಾವುದೇ ಮಾನವ ಆಲೋಚನಾ ರೀತ್ಯಾ ಪ್ರಕಾರಗಳು ಪರಮನಾದ ಆತ್ಮನಲ್ಲಿ ಇದ್ದಿದ್ದ ಪಕ್ಷದಲ್ಲಿ, ಸಕಲ ಜೀವಿಗಳ ಜೀವನವು ಬೇರೆಯದೇ ರೀತಿಯಲ್ಲಿ ಇರುತ್ತಿತ್ತು ಎಂಬ ಅಂಶವನ್ನು ಅಧ್ಯಯನದ ಮುಖಾಂತರವಾಗಿ ಕಂಡುಕೊಳ್ಳಬಹುದಾಗಿದೆ.

ಮಾನವನು ತನ್ನ ಮನೋವೃತ್ತಿ ಹಾಗು ಬೇರೆಯವರ ಮನೋವೃತ್ತಿಯ ಮುಖಾಂತರವಾಗಿ ತನ್ನನ್ನು ತಾನು ಅಳೆದುಕೊಳ್ಳುವವನಾಗಿದ್ದಾನೆ. ಅವನ ಸಕಲ ವಿಫಲತೆಗಳಗೂ ಸ್ವತಃ ಅವನೇ ಕಾರಣಕರ್ತನಾಗಿದ್ದಾನೆ. ಏಕೆಂದರೆ, ಸರ್ವ ರೀತ್ಯಾ ಸಫಲತೆಗಳನ್ನು ವಾಸ್ತವದಲ್ಲಿ ಕಾರ್ಯಗತಗೊಳಿಸಲು ಅವನು ಸಕಲ ರೀತಿಯಾದ ಸಂಭವನೀಯತೆಗಳನ್ನೂ ಪರಮ ಆತ್ಮನಿಂದ ಕೊಡಮಾಡಲ್ಪಟ್ಟಿದ್ದಾನೆ. ಮಾನವನು ತನ್ನ ಜೀವನವನ್ನು ತನ್ನ ಇಚ್ಛೆಯ ರೀತಿಯಲ್ಲಿ ರೂಪಿಸಿಕೊಳ್ಳುವುದಕ್ಕೆ ಸಮರ್ಥನಾಗಿರುವುದಾಗಿದ್ದಾನೆ. ತನ್ನ ಬಗೆಗೆ ಸಕಲ ತೀರ್ಮಾನಗಳನ್ನು ಸ್ವತಃ ಅವನೇ ತೆಗೆದುಕೊಳ್ಳಬಲ್ಲವನಾಗಿದ್ದಾನೆ. ಆದರೆ ಇವೆಲ್ಲದರ ಸಫಲತೆಯು, ಅವನ ಧನಾತ್ಮಕ, ಋಣಾತ್ಮಕ, ಒಳ್ಳೆಯದು ಹಾಗು ಕೆಟ್ಟದ್ದು ಎನ್ನುವುದರ ಬಗೆಗೆ ಇರುವ ತಿಳುವಳಿಕೆಯ ಮೇಲೆಯೇ ಆಧಾರಿತವಾಗಿರುವುದಾಗಿರುತ್ತದೆ. ಇವೆಲ್ಲದರಲ್ಲೂ ಅಹಂ ಎನ್ನುವುದರ ಪಾತ್ರವು ಇರುವುದೇ ಆಗಿರುವುದಾಗಿದೆ.

ಮಾನವನು ಪರಿಮಿತವಾದ ಆಲೋಚನೆಗಳನ್ನು ಮಾತ್ರವೇ ಹೊಂದಿರುವವನಾಗಿದ್ದಾನೆ. ಈ ರೀತಿಯಾದ ಪರಿಮಿತವಾದ ಸಾಮರ್ಥ್ಯದಿಂದ ತಪ್ಪುಗಳನ್ನು ಹುಡುಕುವಂಥಃವನಾಗಿದ್ದು, ಅದು ಕೆಟ್ಟದ್ದು ಎಂಬಂಥಃ ತೀರ್ಮಾನಕ್ಕೆ ಬರುವಂಥಃವನೇ ಆಗಿದ್ದಾನೆ. ಇದು ವಾಸ್ತವಿಕತೆಯ ಬಗೆಗಿನ ಕೇವಲ ಮಾನವನ ಆಯ್ಕೆಯಾಗಿದ್ದು, ಸಕಲವೂ ಪರಮ ಆತ್ಮನಿಂದ ಸೃಷ್ಟಿಸಲ್ಪಟ್ಟಿರುವುದೇ ಆಗಿರುವುದಿದೆ. ಸೃಷ್ಟಿಯಲ್ಲಿರತಕ್ಕ ಪ್ರತಿಯೊಂದರ ಅವಶ್ಯಕತೆಯು ಇರುವುದರಿಂದಾಗಿಯೇ ಅವುಗಳು ಇರುವುದಾಗಿದೆ. ಕೆಟ್ಟದ್ದು, ಒಳ್ಳೆಯದು, ಧನಾತ್ಮಕ, ಋಣಾತ್ಮಕ ಹೀಗೆ ಹತ್ತು ಹಲವಾರು ವಿಂಗಡಣೆಗಳು ವಾಸ್ತವದಲ್ಲಿರದೆ, ಅದು ರಚನೆಗಳ ಪರಿಮಿತವಾದ ಅಲೋಚನಾ ಕ್ರಮಗಳ ಆಧಾರಿತವಾಗಿಯೆ ಆಗಿರುವುದಾಗಿದೆ. ಅದೇ ರೀತಿಯಲ್ಲಿ ಅಮೂಲ್ಯವಾದ್ದು, ತುಚ್ಛವಾದದ್ದು, ಉನ್ನತವಾದದ್ದು, ಕೆಳಮಟ್ಟದ್ದು ಹೀಗೆಲ್ಲವೂ ಸೃಷ್ಟಿಯಲ್ಲಿ ತಾರತಮ್ಯ ರೀತಿಯಲ್ಲಿರದೆ, ಎಲ್ಲವೂ ಅಮೂಲ್ಯವಾದದ್ದೇ ಆಗಿರುವುದಾಗಿದೆ.

ಮಾನವನು ಎಲ್ಲವನ್ನು ಯಾವ ರೀತಿ ಕಾಣುತ್ತಾನೆ, ಎಲ್ಲವನ್ನೂ ಯಾವ ರೀತಿಯಲ್ಲಿ ಉಪಯೋಗಿಸುತ್ತಾನೆ ಹಾಗು ವಿಂಗಡಿಸುತ್ತಾನೆ ಎಂಬೆಲ್ಲವನ್ನೂ ಪರಮ ಆತ್ಮನು ಗಮನಿಸದೆ, ಕೇವಲ ಅದರಿಂದ ಏನನ್ನು ಕಲಿತ ಹಾಗು ಯಾವ ದಿಕ್ಕಿನಲ್ಲಿ ವರ್ಧಿಸುತ್ತಿದ್ದಾನೆ ಎಂಬುದನ್ನು ಮಾತ್ರವೇ ಗಮನಿಸುತ್ತಾನೆ ಎಂದು ಉಲ್ಲೇಖಗಳು ಹೇಳುವುದಿದೆ. ಅರ್ಥಾತ್, ಆತ್ಮಾಭಿವೃದ್ಧಿಯನ್ನು ಮಾತ್ರವೇ ಗಮನಸಿವುವಂಥಃವನಾಗಿದ್ದಾನೆ. ಏಕೆಂದರೆ ಮಾನವನಲ್ಲಿ ಅವಿಭಿನ್ನವಾದ ಹಾಗು ಜರಾಮರಣಗಳಿಲ್ಲದ ಆತ್ಮನು ಇರುವುದರಿಂದಾಗಿ, ಹಾಗು ರಚನೆಗಳ ಯಾವುದೇ ಕಾರ್ಯವು ಅಥವಾ ಆಲೋಚನೆಯು ಅಥವಾ ಫಲವು ಆತ್ಮನನ್ನು ನಾಶ ಮಾಡಲು ಸಾಧ್ಯವಿಲ್ಲದಿರುವ ಕಾರಣದಿಂದಾಗಿ ಹಾಗು ಆತ್ಮವು ಅವನ ಘಟಕಾಂಶವೇ ಆಗಿರುವುದರಿಂದಾಗಿ. ಆತ್ಮನವು ರಚನೆಯನ್ನು ಹೊಂದಿರಲಿ ಅಥವಾ

ಹೊಂದದಿರಲಿ, ಸಕಲ ಕಾಲದಲ್ಲೂ ಪರಮ ಆತ್ಮನು ಪ್ರೇಮದಿಂದ ಆತ್ಮನನ್ನು ಸಂರಕ್ಷಿಸುವಂಥಃವನೇ ಆಗಿದ್ದಾನೆ. ಸಕಲ ಆತ್ಮಗಳು ಪರಮಾತ್ಮನ ಸೃಷ್ಟಿ ಎಂದೆನ್ನುವ ವೇದಿಕೆಯನ್ನು ಉಪಯೋಗಿಸಿ ಕೊಂಡು ತನ್ನ ನಾಳೆಗಳನ್ನು, ಕಲ್ಪನೆಗಳನ್ನು ಹಾಗು ಕನಸುಗಳನ್ನು ಸಾಕಾರಗೊಳಿಸಿಕೊಳ್ಳುವುದರ ಮುಖಾಂತರವಾಗಿ ವಿಕಾಸಗೊಳ್ಳು ವುದೇ ಆಗಿರುವುದಿದೆ.

ಪರಮಾತ್ಮನು ಆತ್ಮೋಪಾದಿಯಲ್ಲಿ ಮಾನವ ರಚನೆಗಳಲ್ಲಿ ತನ್ನನ್ನು ತಾನು ಪ್ರಕಟಗೊಳಿಸಿಕೊಂಡಿರುವಂಥಃವನೇ ಆಗಿದ್ದಾನೆ. ಉಲ್ಲೇಖ ರೀತ್ಯಾ, ಆತ್ಮಾವನ್ನು ಅವಲೋಕಿಸಿ, ಆಲೋಚಿಸಿ, ಸರಿಯಾದ ರೀತಿಯಲಿ ಅರ್ಥೈಸಿಕೊಂಡು ಅನುಷ್ಠಾನಿಸಿದಾಗ ಮಾತ್ರವೇ ಅವನು ಮಾನವನಿಗೆ ಸಿಕ್ಕಬಹುದಾಗಿದ್ದಾನೆ ಎಂದರೆ ತಪ್ಪಾಗಲಾರದು.

ಶಂಕರಾಚಾರ್ಯರ 'ಯದ್ಭಾವಂ ತದ್ಭವತಿ' ಎನ್ನುವ ಉಲ್ಲೇಖದ ಪ್ರಕಾರವಾಗಿ, ಹಿಂದೆಯೊ, ವರ್ತಮಾನದಲ್ಲೂ ಹಾಗು ಭವಿಷ್ಯ ದಲ್ಲೂ ಸಂಕಲ್ಪಾಲೋಚನೆಗಳೇ ಸಕಲ ಸೃಷ್ಟಿಗೆ ಮೂಲಾಧಾರವಾ ಗಿರುವುದಿದೆ. ಸಂಕಲ್ಪಾಲೋಚನೆಗಳ ತಾತ್ಪರ್ಯದಿಂದಲೇ ಸಕಲವೂ ವ್ಯಕ್ತವಾಗಿರುವುದಿದೆ. ಈ ಪ್ರಕಾರವು ಸಕಲ ಆತ್ಮಗಳಿಗೆ ಮಾತ್ರವಲ್ಲದೆ ಪರಮಾತ್ಮನಿಗೂ ಅನ್ವಯವಾಗುವುದಿದ್ದೆ. ಈ ಮೇಲೆ ಹೇಳಿದಂಥಃ ವಿಚಾರವನ್ನು ಪುಷ್ಟಿಕರಗೊಳಿಸುವಂಥಃ ಶ್ಲೋಕವನ್ನು ಬ್ರಹ್ಮಾಂಡ ಪುರಾಣದ ಭೂತ ಸೃಷ್ಟಿ ಎಂಬ ಅಧ್ಯಾಯದಲ್ಲಿ ಕೆಳಕಂಡಂತೆ ಉಲ್ಲೇಖಿಸಲಾಗಿದೆ:

ತತೋಭಿಧ್ಯಾಯತಸ್ತಸ್ಯ ಮಾನಸ್ಯೋ ಜಜ್ಞಿರೇ ಪ್ರಜಾಃ ।
ತಚ್ಛರೀರಸಮುತ್ಪನ್ನೈಃ ಕಾರ್ಯ್ಯೈಸ್ತೈಃ ಸಹ ॥
ಕ್ಷೇತ್ರಜ್ಞಾಃ ಸಮವರ್ತಂತ ಕ್ಷೇತ್ರಸ್ಯೈ ತಸ್ಯ ಧೀಮತಃ ।
ತತೋ ದೇವಾಸುರ ಪಿತೃನ್ಮನುಷ್ಯಾಂಶ್ಚ ಚತುಷ್ಟಯಂ ॥

ಸೃಷ್ಟಿಯ ಸಕಲ ಅಸ್ತಿತ್ವ ಹಾಗು ರಚನೆಗಳನ್ನು ಯಾವುದು ಸಾಮ್ಯತೆಯ ಸ್ಥತಿಯಲ್ಲಿ ಹಿಡಿದಿಟ್ಟುಕೊಂಡಿರುವುದು ಎಂಬುದನ್ನು ಅವಲೋಕಿಸಿ ಅಧ್ಯಯಿಸಿದಾಗ, ದೊರಕುವ ಉತ್ತರವೇ ಸಂಕಲ್ಪಾ ಲೋಚನೆಗಳೇ ಎಂಬುವುದು ಸ್ಪಷ್ಟವಾಗುವುದಿದೆ. ಇವುಗಳ ಹಿಂದಿರುವ ಜಗದ ಅಂಟು 'ಪ್ರೀತಿಯೇ' ಎಂಬುವುದೂ ಕೂಡ ಗಮನಕ್ಕೆ ಬರುವುದಿದೆ. ಈ ರೀತಿಯಾದ ಅಂಟೇ ಸಕಲ ಕಣಗಳನ್ನೂ ಕೂಡ ಜೊತೆಯಲ್ಲಿರುವಂತೆ ಮಾಡಿರುವುದಿದೆ. ಪ್ರೀತಿ ಎಂಬುವುದು ಪರಮ ಉಚ್ಛವೇ ಆಗಿರುವುದಾಗಿದ್ದು, ಪರಮಾತ್ಮನೇ ಸ್ವರೂಪವೇ ಆಗಿರುವುದಾಗಿದೆ. ಪ್ರೀತಿಯೊಂದು, ಮಾನವನ ರಚನೆಯ ದೇಹವೂ ಸೇರಿಕೊಂಡು ಸಕಲವೂ ಸ್ಥಿತಿಯಲ್ಲಿರುವುದು ಸಂಕಲ್ಪಾಲೋಚನೆಗಳೇ ಎಂಬುವುದರ ಕಾರಣದಿಂದಾಗಿಯೆ. ಪ್ರತಿಯೊಂದು ಅವಲೋಕನವೂ ಕೂಡ ಸಂಕಲ್ಪಾಲೋಚನಾ ಧಾರಿತವಾಗಿರುವುದೇ ಆಗಿದೆ. ಸಂಕಲ್ಪಾಲೋಚನ ರಹಿತವಾಗಿದ್ದಲ್ಲಿ ಯಾವುದೇ ರಚನೆಯು ತನ್ನ ಸ್ಥಿತಿ ಹಾಗು ಗತಿಗಳನ್ನು ಸ್ಥತಿಯಲ್ಲು ಳಿಸಿಕೊಳ್ಳಲು ಹಾಗು ತನನ್ನು ತಾನು ವಿಕಾಸಗೊಳಿಸಲು ಅಶಕ್ಯವಾಗಿ ರುವುದೇ ಆಗಿರುವುದಿದೆ.

ಪ್ರೀತಿ ಎಂಬ ಸಂಕಲ್ಪಾಲೋಚನೆಗಳ ಸ್ವರೂಪದಿಂದೊಡಗೂಡಿದ ಪರಮಾತ್ಮನು ಉದಾಸೀನ ಅಥವಾ ಭಯಂಕರವಾಗಿರಲು ಸಾಧ್ಯವಾಗಿರದೆ, ಅವನು ಸದಾಕಾಲವೂ ಆನಂದದಿಂದ ಹಾಗು ಉತ್ಸಾಹದಿಂದ ಇರುವಂಥಃವನೇ ಆಗಿರುತ್ತಾನೆ. ಪ್ರೀತಿಯೇ ಸ್ವರೂಪವಾಗಿರುವೆಡೆ ಬೇರೆ ರೀತಿಯಾದ ವ್ಯಕ್ತಿತ್ವದ ಸಂಭವನೀ ಯತೆಯು ಅಸಂಭವವೇ ಆಗಿರುವುದಿದೆ. ಅವನ ನಿರಪೇಕ್ಷಿತವಾದ ಅಖಂಡ ಪ್ರೇಮದಿಂದಾಗಿಯೇ ಸೃಷ್ಟಿಯಲ್ಲಿ ಪ್ರತಿಯೊಂದೂ ಕೂಡ ಸಹಬಾಳ್ವೆಯಿಂದೊಡಗೂಡಿದ ಜೀವನವನ್ನು ಹೊಂದಿರುವುಂ ಥಃವುಗಳೇ ಆಗಿವೆ.

ಪರಮಾತ್ಮನನ್ನು ಕೆಲವು ಕಡೆ ಪುರುಷ ಎಂದು ಕರೆದಿರುವುದರ ಔಚಿತ್ಯವೇನು? ಈ ಪ್ರಶ್ನೆಯು ಸಹಜವಾಗಿ ಮಾನವನಿಗೆ ಅನಿಸುವುದಿದೆ. ಇದಕ್ಕುತ್ತರವು ಈ ರೀತಿಯಾಗಿದೆ. ಪ್ರಾಥಮಿಕವಾಗಿ, ಮಾನವನಿಗೆ ಪರಮಾತ್ಮನನ ಬಗೆಗೆ ತಿಳಿಸಿಕೊಡುವುದಕ್ಕಾಗಿ ಹಲ ವಾರು ರೀತಿಯಾದ ಪರಿಭಾಷಿಕ ಪದ ಸಂಗ್ರಹವನ್ನು ಬಳಸುವುದಿದೆ. ಈ ರೀತಿಯಾದ ಪದಗಳು ಸುಮ್ಮನೆ ಬಂದಿರದೆ ಅನ್ವರ್ಥವಾಗಿ ಇರುವುದಾಗಿದೆ. ವೈದೀಕ ಪರಿಭಾಷೆಯಲ್ಲಿ, ಪುರುಷ ಎಂಬುದು, ಗುಣ ಸಾಮ್ಯಾವಸ್ಥೆಯಲ್ಲಿ ಇರುವವ ಎಂಬ ಅರ್ಥಕ್ಕೆ ಇರುವ ಪದವಾಗಿರುವುದಿದೆ. ಸಂಸ್ಕೃತ ಭಾಷೆಯಲ್ಲಿ ಪುರುಷ ಎಂಬ ಪದವು ಪುಲ್ಲಿಂಗವನ್ನು ಸೂಚಿಸುವುದಾಗಿದೆ. ಹೀಗಾಗಿ ಪುರುಷ ಎಂಬ ಪದಕ್ಕೆ ಅವನು ಎಂಬ ಸರ್ವನಾಮ ಪದವನ್ನು ಬಳಸುವುದಿದೆ. ಎರಡನೆಯದಾಗಿ, ಪರಮ ಪುರುಷನು ಮಾನವನಾಗಿರದೆ ಮತ್ತು ಯಾವುದಕ್ಕೂ ಜನಿಸದೆ, ಬ್ರಹ್ಮಾಂಡ ಪುರಾಣ ಪ್ರಕಾರವಾಗಿ ಸ್ವಯಂಭುವೇ ಆಗಿದ್ದಾನೆ. ಭಾಷಾ ವ್ಯಾಕರಣ ಪ್ರಯುಕ್ತವಾಗಿ ಅವನ ಮೇಲಿನ ಭಾಷಾ ಪದ ಪ್ರಯೋಗಗಳು ಪುಲ್ಲಿಂಗವಾಗಿ ಕಂಡರೂ, ಪರಮಾತ್ಮನು ಗಂಡು ಅಲ್ಲದ, ಹೆಣ್ಣೂ ಅಲ್ಲದ, ಹಾಗು ಯಾವುದೇ ಲಿಂಗಕ್ಕೂ ಮೀರಿದಂಥಃವನೇ ಆಗಿದ್ದಾನೆ. ಇಷ್ಟೇ ಅಲ್ಲದೆ ಪರಮಾತ್ಮನನ್ನು ಅಪರಿಮಿತವಾದ ಶುದ್ಧ ಪ್ರಜ್ಞೆ ಎಂಬ ರೂಪದಲ್ಲೂ ಉಲ್ಲೇಖಗಳಲ್ಲಿ ನೋಡಲಾಗಿದೆ.

ಎಲ್ಲಕ್ಕಿಂತಲೂ ಮಿಗಿಲಾಗಿ ಪರಮಾತ್ಮ ಎಂದೆನ್ನುವುದು ಮಾನವನ ಅತ್ಯುನ್ನತವಾದ ಒಂದು ಪರಿಕಲ್ಪನೆಯೇ ಆಗಿರುವುದಿದೆ ಎಂದರೆ ತಪ್ಪಾಗಲಾರದು. ಈ ರೀತಿಯಾದ ಪರಿಕಲ್ಪನೆಯು ಮತ್ಯಾವ ಜೀವರಚನೆಗಳಲ್ಲೂ ಕಾಣದೆ ಕೇವಲ ಮಾನವ ಜಂತುವಿನಲ್ಲಿ ಮಾತ್ರವೇ ಕಾಣಬಹುದಾಗಿದೆ. ಪರಿಕಲ್ಪನೆಯು ಬಹು ದೀರ್ಘವಾದ ಸಂಕಲ್ಪಾಲೋಚನೆಗಳಿಂದ ಉಂಟಾದ ಕರ್ಮಗಳನ್ನು ಅನುಷ್ಠಾನ ಕೈಗೊಳ್ಳುವ ಮುಖಾಂತರವಾಗಿ ಮಾನವನು ಗಳಿಸಿಕೊಂಡ ಅನುಭವದ ಆಧಾರದ ಮೇಲೆಯೆ ಸೃಷ್ಟಿಗೊಂಡಂಥಃದ್ದಾಗಿ ರುವುದಿದೆ. ವೈದೀಕ ಉಲ್ಲೇಖಗಳು ಕೇವಲ ಯಾವುದೆ ಒಂದು ವ್ಯಕ್ತಿಯ ಅನುಭಾವದ ಮೇಲೆ ಮಾತ್ರವೇ ಆಧಾರವಾಗಿರದೆ, ಬೇರೆ ಬೇರೆ ಸಮಯಗಳಲ್ಲಿ ಹಾಗು ಸ್ಥಳಗಳಲ್ಲಿ ಬಹು ದೀರ್ಘಕಾಲ ಮಾನವನು ಆಚರಿಸಿದ ತಪಸ್ಸಿನಿಂದ ಕೃತಗೊಂಡ ಅನುಭಾವದ ಮೇಲೆ ಆಧಾರವಾಗಿರುವುದಾಗಿದೆ. ಇನ್ನೊಂದು ಪ್ರಮುಖವಾದ ಅಂಶ ಎಂದರೆ, ವೈದೀಕ ಉಲ್ಲೇಖಗಳು ಪ್ರತಿಯೊಬ್ಬ ವ್ಯಕ್ತಿಗೂ ಸ್ವಾತಂತ್ರ್ಯವನ್ನು ನೀಡಿ, ಅವರವರ ಅನುಭವದ ಆಧಾರದ ಮೇಲೆ ಪರಮಾತ್ಮನನ್ನು ಅರಿಯಲು ಪ್ರೇರೇಪಿಸುವುದೇ ಆಗಿರುವುದಿದೆ. ಮಹಾನ್ ಪ್ರವಾದಿಯಾದ ರಾಂಥ ಎನ್ನುವವರ ಉಲ್ಲೇಖವು ಈ ಮೇಲೆ ದಾಖಲಿಸಿದಂಥಃ ವಿಚಾರವನ್ನು ತಾತ್ಪರ್ಯ ರೂಪದಲ್ಲಿ ಕೆಳಕಂಡಂತೆ ಉದ್ಧರಿಸಿರುವುದಿದೆ:

"ತಂದೆಯು (ಅರ್ಥಾತ್, ಪರಮಾತ್ಮನು), ನೀನು ಜೀವಿಸುವ ಈ ಕ್ಷಣವನ್ನಾಗಲೀ ಅಥವಾದ ಜೀವಿಸಿದ ಯಾವುದೇ ಕ್ಷಣವನ್ನಾಗಲಿ ಎಂದೂ ಅಳಿಯುವಂಥಃವನಾಗಿರನು. ಅವನೇ ನಿನ್ನ ಅಸ್ತಿತ್ವವು, ಮತ್ತು ನೀನೇ ವ್ಯಕ್ತಪಡಿಸಿಕೊಂಡಂಥಃ ನಿನ್ನಲ್ಲಿರುವ ದೈವಿಕತೆ ಹಾಗು ಉದ್ದೇಶಪೂರಿತವಾದ ನಿನ್ನ ಆತ್ಮ, ಇವುಗಳು ಜೀವಿಸುವ ವೇದಿಕೆಯು. ಅವನು ನಿನಗೆ ಅದ್ವಿತೀಯವಾದ ಆತ್ಮ ಎಂಬುವುದನ್ನು ಕೊಡಮಾಡಿರುವನು ಮತ್ತು ನೀನು ಏನಾಗ ಬೇಕೆಂದು ಬಯಸುತ್ತೀಯೋ ಅದನ್ನು ಸಾಧಿಸುವುದಕ್ಕಾಗಿ ಸ್ವತಂತ್ರ್ಯ ವಾದ ಚಿತ್ತವನ್ನು ಕೊಡಮಾಡಿರುವನು, ಏಕೆಂದರೆ, ಜೀವಚೇತನವೇ ಆಗಿರುವ ಅವನನ್ನು ಗ್ರಹಿಸಲು, ಯಾವರೀತಿಯಲ್ಲಾದರೂ ಸರಿ ಅದನ್ನು ಗ್ರಹಿಸು ಎಂದು."

**ಆಧಾರ:**

ಬ್ರಹ್ಮಾಂಡ ಪುರಾಣ
ಉಪನಿಷತ್ತು
ಡೈಲಾಗ್ ವಿತ್ ರಾಂಥ
ಸಂಬಂಧ ವಾರ್ತಿಕ
ಬ್ರಹ್ಮಸೂತ್ರ ಭಾಷ್ಯ

## ಶಿವಸಂಹಿತೆಯಲ್ಲಿ ಪ್ರಾಣಾಯಾಮ ಎಂಬ ಯಜ್ಞ

Dr.M.A.Shruthikirti
Chairperson, P.G.Dept. of Sanskrit,Kuvempu University, Sahydricollege Campus, Shimoga -577204

**ಪ್ರಬಂಧಸಾರ:–** 'ಯೋಗಾಭ್ಯಾಸದ ಮೂಲಕ ವೈಶ್ವಾನರಾಗ್ನಿಯನ್ನು ಪ್ರಜ್ವಲಿಸಿ ಅದರಲ್ಲಿ ಅನ್ನದ ಆಹುತಿ ನೀಡಬೇಕೆಂದು ಶಿವಸಂಹಿತೆಯಲ್ಲಿ ಹೇಳಲಾಗಿದೆ'. ಯಜ್ಞಕ್ಕೆ ಮತ್ತೊಂದು ಹೆಸರು – ಧ್ವರ ಎಂದರೆ ಹಿಂಸೆ, 'ಅಧ್ವರ' ಎಂದರೆ ಹಿಂಸೆಯ ಪ್ರತಿಷೇಧ. ವೇದಾದಿಗಳಲ್ಲಿ ಹೇಳಿರುವ ಯಜ್ಞವಾದರೋ ಪ್ರಾಣಿಬಲಿ ಬೇಡುತ್ತದೆ. ಆದರೆ ಶಿವಸಂಹಿತೆಯಲ್ಲಿ ಪ್ರಾಣಾಯಾಮ ಯಜ್ಞವನ್ನು ಹೇಳುವುದರಿಂದ ಇದು ಅಧ್ವರ. ಆತ್ಮ ಎಂಬ ಯಜಮಾನ– ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮನಸ್ಸು, ಬುದ್ಧಿ ಎಂಬ ಋತ್ವಿಜರ ಮೂಲಕ ಶರೀರವೆಂಬ ಯಜ್ಞಕುಂಡದಲ್ಲಿ, ದೇವತೆಗಳ ಪ್ರೀತ್ಯರ್ಥ (ಇಡಾ, ಪಿಂಗಳಾ, ಸುಷುಮ್ನಾ, ಚಿತ್ರಾ–ಯಜ್ಞಪರಿಕರಗಳ ಸಹಾಯದಿಂದ) ಅನ್ನ ಮತ್ತು ಪ್ರಾಣಾಯಾಮವೆಂಬ ಹವಿಸ್ಸಿನ ಮೂಲಕ ವೇದಗಳ ಫಲವಾದ ಅಗ್ನಿಹೋತ್ರ ಮಾಡಲು ವೈಶ್ವಾನರಾಗ್ನಿಯನ್ನು ಪ್ರಜ್ವಲಿಸಿ ಸಕಲ ರೋಗಗಳೆಂಬ ಪಾಪಗಳನ್ನು ಸುಡುವ, ಶರೀರವನ್ನು ಸುದೃಢಗೊಳಿಸುವ ನಿರಂತರವಾದ ಈ ಕ್ರಿಯೆಯ ಮೂಲಕ ಶೋಕ ದಾಟಿ 'ಅಹಂ ಬ್ರಹ್ಮಾಸ್ಮಿ' ಎಂಬ ಸಾಕ್ಷಾದನುಭೂತಿ ಹೊಂದುವುದೇ ಈ ಯಜ್ಞ ಸಾಧನೆಯ ಸಿಗುವ ಪ್ರತಿಫಲ, ಇದೇ ಪ್ರಾಣಾಯಾಮಯಜ್ಞ, ಶ್ರೇಷ್ಠಕರ್ಮ. ಇಂದಿನ ತೀವ್ರಗತಿಯ ಚಟುವಟಿಕೆಯ ಮನುಷ್ಯನಿಗೆ ಅತ್ಯಂತ ಅಗತ್ಯ. ತಾಂತ್ರಿಕಪರಂಪರೆ ಮತ್ತು ಸಾಧನಪದ್ಧತಿಯಿಂದ ಪ್ರಭಾವಿತವಾದ ಇದು ಒಂದು ಅನುಭಾವ ವಿಜ್ಞಾನವಾಗಿದೆ.

**ಪೀಠಿಕೆ :** 'ಯಾಗ' 'ದೇವಪೂಜೆ' ಎಂದು ಅರ್ಥ ಕೊಡುವ 'ಯಜ್ಞ' ಶಬ್ದವು 'इज्यन्ते देवता अत्र' ಎಂಬ ನಿಷ್ಪತ್ತಿಯನ್ನು ಹೊಂದಿದ್ದು, ಯಜ ದೇವಪೂಜಾದೌ ಧಾತುವಿನಿಂದಾಗಿದೆ. ('नङ्' – 3.3.90) जपयज्ञ स्वरूपत्वात् यज्ञ इत्युच्यते बुधैः' ಎಂಬುದಾಗಿ ನಿರುಕ್ತಿಯಿರುವ ಯಜ್ಞವು ಮೂರು ವಿಧ. ಅವು– ಸಾತ್ತ್ವಿಕ, ರಾಜಸ ಮತ್ತು ತಾಮಸ. ಇದು ದ್ರವ್ಯಯಜ್ಞ, ತಪೋಯಜ್ಞ, ಜ್ಞಾನಯಜ್ಞ, ಸ್ವಾಧ್ಯಾಯಯಜ್ಞ ಮುಂತಾಗಿ ನಾನಾವಿಧವಾಗುತ್ತದೆ. ಮನು ತನ್ನ ಸ್ಮೃತಿಯಲ್ಲಿ ಪಂಚಮಹಾಯಜ್ಞಗಳನ್ನು ಹೇಳಿ, ಅವುಗಳನ್ನು ಗೃಹಸ್ಥನು ಪ್ರತಿದಿನವೂ ಆಚರಿಸಲೇಬೇಕಾದ ಮಹಾಯಜ್ಞಗಳೆಂದಿದ್ದಾನೆ. ಅವುಗಳೆಂದರೆ –

अध्यापनं ब्रह्मयज्ञः पितृयज्ञस्तु तर्पणम् ।
होमो दैवो बलिर्भौतो नृयज्ञोऽतिथिपूजनम् ॥ 3 - 70

ಅಧ್ಯಾಪನಾದಿಗಳಿಂದ ಬ್ರಹ್ಮಯಜ್ಞ, ಹೋಮಾದಿ ಅಗ್ನಿಕಾರ್ಯಗಳಿಂದ ದೇವಯಜ್ಞ, ತರ್ಪಣಾದಿಗಳಿಂದ ಪಿತೃಯಜ್ಞ, ಬಲಿಕಾರ್ಯಾದಿಗಳಿಂದ ಭೂತಯಜ್ಞ, ಅತಿಥಿಸತ್ಕಾರಾದಿಗಳಿಂದ ಮನುಷ್ಯಯಜ್ಞಗಳನ್ನು ಆಚರಿಸಬೇಕೆಂದು ಮನುವಿನ ಅಭಿಪ್ರಾಯ.

पाठो होमश्चातिथीनां सपर्या तर्पणं बलिः ।
अमी पञ्चमहायज्ञा ब्रह्मयज्ञादिनामकाः ॥ (ಶ್ರೀಮದ್ಭಗವದ್ಗೀತೆ. ಪು. 130)

ಎಂದೂ ಇದೆ. ಯಾವ ರೀತಿಯಿಂದಲಾದರೂ ದೇವತೆಗಳನ್ನು ಸಂತೋಷಪಡಿಸುವಿಕೆಗೆ ಯಜ್ಞ ಎನ್ನಲಾಗುತ್ತದೆ. ಇದನ್ನು ಯೋಗರೂಢಿಯಿಂದ[1] 'देवतोद्दे ापूर्वकद्रव्यत्यागो यागः'– ದೇವತೆಗಳನ್ನುದ್ದೇಶಿಸಿ ನಿರ್ದಿಷ್ಟವಾದ ದ್ರವ್ಯಾರ್ಪಣೆಯೇ ಯಾಗ ಅಥವಾ ಯಜ್ಞ ಎನ್ನಲಾಗುತ್ತದೆ. (ಯಾವ ದೇವತೆಗೆ, ಯಾವುದನ್ನು ಬಯಸಿ, ಯಾವ ದ್ರವ್ಯ ನೀಡಬೇಕೆನ್ನುವುದಕ್ಕೆ ಶ್ರುತಿಯೇ ಪ್ರಮಾಣ). ಹೀಗೆ ರೂಢಿಯಲ್ಲಿ ಹೆಸರಾದರೂ ಶ್ರುತಿ, ಸ್ಮೃತಿಗಳಲ್ಲಿ ಇದರ ಅರ್ಥ ವ್ಯಾಪಕವಾಗಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ದ್ರವ್ಯಯಜ್ಞ, ಜ್ಞಾನಯಜ್ಞ, ತಪೋಯಜ್ಞಾದಿಗಳನ್ನು ತಿಳಿಸಿ ಆತ್ಮ ಸಾಕ್ಷಾತ್ಕಾರವನ್ನೂ ಯಜ್ಞವೆಂದೇ ಹೇಳಿದ್ದಾನೆ.

देवान् भावयतानेन ते देवा भावयन्तु वः ।
rÉxrÉQûpÉÉÉÉ Ê ´É Ê rÉoÉÉÉxrÉÉ|| (ಶ್ರೀಮದ್ಭಗವದ್ಗೀತೆ. 11-3. ಪು. 127)

ಎಂದು ಹೇಳುವಂತೆ ದೇವತೆಗಳನ್ನು ಸಂತೋಷಪಡಿಸಲೋಸುಗ ಯಜ್ಞವಾದರೂ ಅವುಗಳಿಂದ ಲೌಕಿಕಪ್ರಯೋಜನಗಳೂ ಇವೆ ಎಂಬಂತೆ ವೇದೋಕ್ತ ಯಜ್ಞಗಳಿಂದಲೂ ಫಲವಿದ್ದೇ ಇವೆ. ಮನುಸ್ಮೃತಿಯಲ್ಲಿ

अग्नौ प्रास्ताहुतिः सम्यगादित्यमुपतिष्ठते ।
आदित्या ायते वृ ि: वृ ेरन्नं ततः प्रजाः ॥(3-96. ಪು. 94)

'ವಿಧಿವತ್ತಾಗಿ ಅಗ್ನಿಯಲ್ಲಿ ನೀಡಿದ ಹವಿಸ್ಸಿನ ರಸವು, ಆದಿತ್ಯನು ರಸವೆಲ್ಲವನ್ನೂ ಹೀರುವವನಾದುದರಿಂದ ಅವನಲ್ಲಿ ಸೇರುತ್ತದೆ. ಆ ರಸವೇ ವೃಷ್ಟಿ. ಇದರಿಂದ ಆಹಾರ, ಆಹಾರದಿಂದ ಪ್ರಜೆಗಳ ಸೃಷ್ಟಿ' ಎನ್ನಲಾಗಿದೆ.

ಭಗವದ್ಗೀತೆಯಲ್ಲಿ ಹೀಗೆ ಹೇಳಲಾಗಿದೆ –

अन्नाद्भवन्ति भूतानि पर्जन्यादन्नसंभवः ।

यज्ञाद्भवति पर्जन्यो यज्ञः कर्मसमुद्भवः ॥ (3-24. ಪು. 131)

ತನಗೆ ಉಪಕರಿಸುವ ಪ್ರತಿಯೊಂದನ್ನೂ ದೇವರೆಂದು ಭಾವಿಸಿ ಅದನ್ನು ಪೂಜಿಸುವುದು ನಮ್ಮ ಭಾರತೀಯ ಸಂಪ್ರದಾಯವಾಗಿದೆ. ಅಂತೆಯೇ ಪಂಚಮಹಾಭೂತಗಳ ಆರಾಧನೆ. ಅದರಲ್ಲಿ (ಅಗ್ನಿಯ) ತೇಜಸ್ಸಿನ ಆರಾಧನೆ ಹೆಚ್ಚು ಪ್ರಮುಖವಾಗಿದೆ. ತೇಜದ ಮೂಲದಲ್ಲಿ ಪ್ರಮುಖವಾದದ್ದು ಸೂರ್ಯ–

आदित्यस्य नमस्कारं ये कुर्वन्ति दिने दिने ।
जन्मान्तर सहस्रेषु दारिद्र्यं नोपजायते ॥(6-12.ವೈದ್ಯಕೀಯಸುಭಾಷಿತಸಾಹಿತ್ಯ ಪು.23)

ಎನ್ನಲಾಗಿದೆ. ಹಾಗೇ ನಂತರದ ಸ್ಥಾನ ಅದರ ಮತ್ತೊಂದು ರೂಪವಾದ ಅಗ್ನಿಗೆ. ಅಗ್ನಿಯ ಆರಾಧನೆ ನಮ್ಮ ಸಂಸ್ಕೃತಿಯಲ್ಲಿ ಪ್ರಾಚೀನಕಾಲ ದಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಕುರಿತಾಗಿ ಗೀತೆಯಲ್ಲಿ ಹೀಗೆ ಹೇಳಲಾಗಿದೆ– 'ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸು ವಾಗಲೇ ಯಜ್ಞಗಳನ್ನು ಸೃಷ್ಟಿಸಿದನು. ಯಜ್ಞಗಳಿಂದ ನೀವು ವೃದ್ಧಿ ಹೊಂದಿರಿ, ಅದು ನಿಮಗೆ ಬಯಸಿದ್ದನ್ನು ನೀಡಲೆಂದು ಪ್ರಜೆಗಳಿಗೆ ಹೇಳಿದನು'.

सहयज्ञाः प्रजाःसृष्ट्वा पुरोवाच प्रजापतिः ।
अनेन प्रसविष्यध्वमेष वोऽस्त्वि कामधुक् ॥ (3-10. ಪು. 126)

'ಯಜ್ಞಭಾವಿತರಾದ ದೇವತೆಗಳು ಇಷ್ಟ ಭೋಗಗಳನ್ನು ನೀಡುವರು. ಅವುಗಳನ್ನು ತೆಗೆದುಕೊಂಡು ದೇವತೆಗಳಿಗೆ ಏನನ್ನೂ ನೀಡದೇ ಅನುಭವಿಸುವವನು ಕಳ್ಳನೇ ಆಗುತ್ತಾನೆ'.

इ न्भोगान्हि वो देवा दास्यन्ते यज्ञभाविताः ।
तैर्दत्तानप्रदायैभ्यो यो भुंक्ते स्तेन एव सः ॥

(ಶ್ರೀಮದ್ಭಗವದ್ಗೀತೆ. 3-12. ಪು. 128)

'ಯಜ್ಞಗಳನ್ನು ಮಾಡಿ, ಯಜ್ಞಶೇಷ[2] ಭೋಗಿಯು 'ಅಮೃತಾಶಿ'[3] ಯು. ಔಪಾಸನಾಗ್ನಿಯನ್ನು ಗೃಹ್ಯಾಗ್ನಿ ಅಥವಾ ಸ್ಮಾರ್ತಾಗ್ನಿ (ಪ್ರತಿಯೊಬ್ಬ ಗೃಹಸ್ಥ ಬ್ರಾಹ್ಮಣನೂ ರಕ್ಷಿಸಿಡಬೇಕಾದ ಗಾರ್ಹಪತ್ಯಾಗ್ನಿ) ಎನ್ನುತ್ತಾರೆ. ನಂತರ ಅಗ್ನಿಯ ವಿಶೇಷ ಆರಾಧನೆಗಾಗಿ ಶ್ರೌತಾಗ್ನಿಯ (ಗಾರ್ಹಪತ್ಯ ಆಹವನೀಯ ಮತು ದಕ್ಷಿಣಾ ಎಂಬ ಮೂರು ಅಗ್ನಿಗಳು. श्रुतौ भवम् – श्रुति 'अण' (4.3.53). त्रयो ये गार्हपत्याहवनीयदक्षिणाग्नयः । इदमग्नित्रिकं श्रौतं त्रेताग्निहोत्रमित्यपि ॥ ಶ್ರುತ್ಯುಕ್ತವಾದ ಕಾರ್ಯವು ಶ್ರೌತ ಮತ್ತು ಸ್ಮಾರ್ತ ಎಂದು ಎರಡು ವಿಧ – धर्मज्ञैर्विहितो धर्मः श्रौतः स्मार्तोद्विधा द्विजैः । दानाग्निहोत्रसंबन्धमिज्या श्रौतस्य लक्षणम् ॥ स्मार्तोवर्णाश्रमाचारो यमैश्च नियमैर्युतः ॥ पूर्वेभ्यो वेदयित्वेह श्रौतं सप्तर्षयोऽब्रुवन् ॥) ಉಪಾಸನೆ ಮಾಡಬೇಕು.

जातपुत्रः कृष्णके ाः अग्निनादधीत ।
जायामवाप्य द ामेऽहन्यग्नीनादधीत ॥ – बोधायनगृह्यसूत्र ।

ಈ ಅಗ್ನಿಯನ್ನು ತ್ರೇತಾಗ್ನಿ ಎಂದೂ ಕರೆಯುತ್ತಾರೆ. ಇವು गार्हपत्य, दक्षिणाग्नि, आहवनीय ಎಂದೂ ಹೆಸರು ಪಡೆದಿವೆ. ಜನ್ಮದೊಡನೇ ಬಂದ ಅಗ್ನಿ ವಿಸ್ತೃತಗೊಂಡುದರಿಂದ ಇದಕ್ಕೆ वैतानिकाग्नि ಎಂದೂ ಹೆಸರು. ಆಪಸ್ತಂಭರು ಮತ್ತು ಬೋಧಾಯನರು ಯಜ್ಞಗಳ 21 ಬಗೆಗಳನ್ನು ಹೇಳಿದ್ದಾರೆ– 'एकविं ातिस्थो यज्ञः'. (ತಲಾ 7 ಪಾಕಯಜ್ಞ ಸಂಸ್ಥೆಗಳು, ಹವಿರ್ಯಜ್ಞ ಸಂಸ್ಥೆಗಳು ಮತ್ತು ಸೋಮ ಸಂಸ್ಥೆಗಳು). ऋक्, यजुस्, ಸಾಮ ವೇದಗಳಿಂದ ಈ 21 ಯಜ್ಞಗಳ ಅನುಷ್ಠಾನವಾಗಬೇಕು. ಗ್ರಾಮ್ಯಪಶುಗಳು, ಅರಣ್ಯಪಶುಗಳು ಮತ್ತು ಓಷಧಿಗಳೇ ಅವುಗಳ ಹವಿಸ್ಸು. ಋತ್ವಿಜರಿಗೆ ನೀಡುವ ದಕ್ಷಿಣೆಯಿಂದ ಯಜ್ಞವು ಆಯುಷ್ಮಂತವಾಗುತ್ತದೆ. ಅದು ನಾಲ್ಕು ಬಗೆ – ವೇದಾಧ್ಯಯನ, ಜಪ, ಕರ್ಮ ಮತ್ತು ಮಾನಸ ಯಜ್ಞ. ಇವು ಒಂದಕ್ಕಿಂತ ಒಂದು 10 ಪಟ್ಟು ಫಲವನ್ನೀಯುವುದು. ಇವೆಲ್ಲವೂ ನಿತ್ಯಯಜ್ಞಗಳು. 'याज िवमग्निहोत्रं जुहोति' ಹಾಗೂ 'याज िवं द पूर्णमासाभ्यां यजेत' ಎಂಬ ಶ್ರುತಿವಾಕ್ಯವೂ ಸಪ್ತಹವಿರ್ಯಜ್ಞ ಸಂಸ್ಥೆಗಳನ್ನು ನಿತ್ಯಕರ್ಮಗಳನ್ನಾಗಿ ತಿಳಿಸುತ್ತವೆ. 'वसन्ते वसन्ते ज्योतिषा यजेत' ಎಂಬುದು ಅಗ್ನಿಷ್ಟೋಮಾದಿ ಸಪ್ತ ಸೋಮಸಂಸ್ಥೆಗಳನ್ನು ನಿತ್ಯಕರ್ಮಗಳೆನ್ನುವುದರಿಂದ ಮತ್ತು ಔಪಾಸನಾದಿ ಸಪ್ತಪಾಕಯಜ್ಞಗಳೂ ನಿತ್ಯಕರ್ಮಗಳಾದ್ದರಿಂದ ಎಲ್ಲ 21 ಯಜ್ಞಗಳೂ ನಿತ್ಯಕರ್ಮದಲ್ಲಿ ಸೇರುತ್ತವೆ. ಯಾವ ಕರ್ಮವಾದರೂ ಫಲನೀಡುತ್ತವೆ. ಹಾಗಾಗಿ ಪಾಪ ಪರಿಹಾರವನ್ನು ಬಯಸುವುದರಿಂದ ನಿತ್ಯಕರ್ಮಗಳು ಪಾಪಪರಿಹಾರ ಮಾಡುವುವು ಎಂಬುದು ಬಹು ಸಮ್ಮತ. 'उपात्तसमस्तदुरितक्षयद्वारा श्री परमेश्वरप्रीत्यर्थं' ಎಂದೇ ನಿತ್ಯಕರ್ಮಗಳಿಗೆ ಸಂಕಲ್ಪ. ಯಾವುದಾದರೂ ನಿಮಿತ್ತವೊದಗಿದಾಗ ಮಾಡುವ ಯಜ್ಞಗಳು ನೈಮಿತ್ತಿಕ ಯಜ್ಞಗಳು. ಈ ನಿತ್ಯ, ನೈಮಿತ್ತಿಕಗಳಲ್ಲದೆ ನಿರ್ದಿಷ್ಟ ಫಲ ಬಯಸಿ ಮಾಡುವುವು – ಕಾಮ್ಯಯಜ್ಞಗಳು.

**ಹೋಮ ಮತ್ತು ಯಜ್ಞ** – ಯಜ್ಞ ಮತ್ತು ಯಾಗಗಳು ಪರ್ಯಾಯ ಗಳು. ಆದರೆ ಹೋಮ ಮತ್ತು ಯಜ್ಞಗಳಲ್ಲ. ಒಂದೇ ಅಗ್ನಿಯಲ್ಲಿ ಮಂತ್ರಗಳ ಕಡೆಯಲ್ಲಿ ಸ್ವಾಹಾ ಪದ ಸೇರಿಸಿ, ಒಂದು ದಿವಸದಲ್ಲಿ ಅಥವಾ ಕ್ಲೃಪ್ತವಾದ ಕೆಲವು ದಿನಗಳವರೆಗೆ ನಡೆಸುವ ಅಗ್ನಿಯ ಉಪಾಸನೆಗೆ ಹೋಮ, ಹವನಗಳೆಂದು ಹೆಸರು. हूयते इति होमः । प्रक्षेपप्रधानको होमः ಇಲ್ಲಿ ಹವಿಸ್ಸಮರ್ಪಣಾ ನಂತರ इदं न मम ಎನ್ನಲಾಗುತ್ತದೆ. त्याग (प्रक्षेप) प्रधानको होमः यज्ञः । – ಹವಿಸ್ಸಮರ್ಪಣ ಕಾಲದಲ್ಲೇ इदं न मम ಎನ್ನಲಾಗುತ್ತದೆ.

जुहोतिचोदनः स्वाहाकारप्रदानः दर्वीहोमः ।
यजतिचोदनः वषट्कारप्रदानः यागः ॥ – आपस्तंब श्रौतसूत्र.

ಜುಹುಯಾತ್ ಎಂಬ ಪದಗಳಿರುವ ವಾಕ್ಯದಿಂದ ತಿಳಿಸಲ್ಪಟ್ಟು – ಸ್ವಾಹಾ ಪದದಿಂದ ಹವಿಸ್ಸಮರ್ಪಣ – दर्वीहोम. ಇದನ್ನು गृह्यहोम ಎಂದೂ ಹೇಳುತ್ತಾರೆ. यजेत ಪದದ ವಾಕ್ಯದಿಂದ ವೇದದಿಂದ ವಿಧಿಸಲ್ಪಟ್ಟು वषट् ಪದದಿಂದ ಹವಿಸ್ಸಮರ್ಪಣವೇ ಯಾಗ. 3 ಅಗ್ನಿಗಳಲ್ಲಿ, (गार्हपत्य, आहवनीय, दक्षिणाग्नि) 2 ಅಥವಾ 3 ವೇದಗಳಿಂದ, आश्रावण, प्रत्याश्रावण ಆದಿಗಳಿಂದ ಅನುಷ್ಠಿಸುವ ಅಗ್ನಿ ಉಪಾಸನೆಗೂ 'ಯಜ್ಞ' ಎಂದು ಹೆಸರು. ಹೀಗೆ ಈ 21 ಯಜ್ಞಗಳಲ್ಲದೇ ಅವನ್ನೇ ವಿಸ್ತರಿಸಿ ಅನುಷ್ಠಿಸಲು ಅಗತ್ಯವಾದ ಎಲ್ಲ ಮಂತ್ರಗಳೂ ಮತ್ತು ಯಾಗಾಂಗಗಳೂ ಸಂಪೂರ್ಣ ವೇದದಲ್ಲಿಯೇ ಹೇಳಲ್ಪಟ್ಟಿರುತ್ತವೆಯೋ ಅವನ್ನು प्रकृतियाग ಎನ್ನುತ್ತಾರೆ. (प्रकृतिवत् विकृतिः कर्तव्या– पू. मी) ಯಜ್ಞವಿಂಗಡಣೆ ಮತ್ತೊಂದು ರೀತಿಯೂ ಇದೆ – 1) ಐಷ್ಟಿಕ, 2) ಪಾಶುಕ, 3) ಸೌಮಿಕ. ಇದಲ್ಲದೇ ಸೋಮಯಾಗವನ್ನು ವಿಸ್ತರಿಸಿ ಅನುಷ್ಠಿಸಿದಾಗ ಮಾಡುವ ದ್ವಿರಾತ್ರ ಮೊದಲಾದವು, ಹಾಗೂ ಸೋಮಯಾಜಿಗಳು ಸೇರಿ ಮಾಡುವ ಸತ್ರಾದಿಗಳೂ ಯಾಗಗಳೇ. ಆದರೆ ಸತ್ರಯಾಗಕ್ಕೆ ದಕ್ಷಿಣೆಯಿಲ್ಲ.

ಬೋಧಾಯನ ಗೃಹ್ಯಸೂತ್ರದಲ್ಲಿ ಯಜ್ಞ ಪದವನ್ನು ಸ್ವಾಧ್ಯಾಯ, ಜಪ, ಕರ್ಮ, ಮಾನಸಯಜ್ಞ ಎಂಬುದಾಗಿ ವ್ಯಾಪಾಕಾರ್ಥದಲ್ಲಿ ಬಳಸಿದ್ದಾರೆ. 'ऋतौ वसन्तादिकाले यजन्ति इति ऋत्विजः' – ವಸಂತಾದಿ ಕಾಲದಲ್ಲಿ ಮಾಡುವ ಯಾಗದಲ್ಲಿ ಯಜಮಾನನಿಗಾಗಿ, ಆತ ಕೊಡುವ ದಕ್ಷಿಣೆಯಿಂದ ಪ್ರೀತರಾಗಿ ಯಾಗ ಮಾಡುವವರು ಋತ್ವಿಜರು. ಯಜ್ಞ ನಿರ್ವಹಣೆಗೆ ಮುಖ್ಯರು ನಾಲ್ವರು ಋತ್ವಿಜರು – ಹೋತಾ, ಅಧ್ವರ್ಯು, ಉದ್ಗಾತಾ

ಮತ್ತು ಬ್ರಹ್ಮಾ.

**ಋತ್ವಿಜ ಲಕ್ಷಣ.**

'ऋत्विजो वृणीते यूनः स्थविरान् वा अनूचानान् ऊर्ध्ववाचः अनंगहीनान्' ।

– आपस्तंबश्रौतसूत्र 20.1.1

'ब्राह्मणा ऋत्विजो योनिगोत्रश्रुतवृत्तसंपन्ना अविगुणांगा अत्रिकिणिनः' । –

बोधायन श्रौतसूत्र 2.2.1

ಸಂಪತ್ತನ್ನು ಬಯಸುವವನು ಶುಚಿಯಾಗಿಯೂ, ಸಂಯಮಿಯಾಗಿಯೂ ಇದ್ದು, ನಿತ್ಯವೂ ಲಕ್ಷ್ಮೀದೇವಿಯ 15 ಋಕ್‌ಗಳಿಂದ ಆಜ್ಯಹೋಮವನ್ನು ಮಾಡಬೇಕು ಮತ್ತು ಈ ಸೂಕ್ತವನ್ನು ನಿರಂತರ ಜಪಿಸಬೇಕು. ಆಗ 'तरति ोकमात्मवित्' (ಛಾ.ಉ.)– ಆತ್ಮವೇತ್ತನು ಶೋಕವನ್ನು ದಾಟುತ್ತಾನೆ. ಋಗ್ವೇದವು ಅಗ್ನಿಯಿಂದಲೂ ಯಜು–ವಾಯು, ಸಾಮವು – ಆದಿತ್ಯನಿಂದಲೂ ಸೃಷ್ಟಿಯಾಯಿತು. अग्निहोत्रफलाः वेदाः ವೇದಗಳಿಗೆ ಫಲ – ಅಗ್ನಿಹೋತ್ರಾದಿಗಳು. ಅಗ್ನಿಯಲ್ಲಿ ಶಾಸ್ತ್ರೋಕ್ತಕ್ರಮದಿಂದ ಹೋಮ ಮಾಡಿದಾಗ ಇಂದ್ರನು ತೃಪ್ತನಾಗಿ ಮೂರು ಲೋಕಕ್ಕೂ ಮಂಗಳಕರ ನಾಗುತ್ತಾನೆ. 'अग्निहोत्रं जुहुयात् स्वर्गकामः' 'ಪರಮಾತ್ಮನಿಂದ ಹುಟ್ಟಿದ ಪ್ರಥಮ ದೇವತೆ ಅಗ್ನಿ. ಎಲ್ಲ ಆಹುತಿಗಳೂ ಅಗ್ನಿಮುಖೇನವೇ ದೇವತೆಗಳಿಗೆ ಸೇರಬೇಕು. ಆತ ವಿಶ್ವವ್ಯಾಪಕನೂ, ಜಾತವೇದನೂ, ಐಶ್ವರ್ಯಾಧಿಪನೂ, ಸರ್ವಜ್ಞನೂ, ಸರ್ವಾಂತರ್ಯಾಮಿಯೂ ಆಗಿರುವನು. ಆದ್ದರಿಂದ ಅವನಿಗೆ ಪ್ರಥಮ ಹವಿಸ್ಸು ಸೇರಬೇಕು. ಇವನ ಮೂಲಕವೇ ಪ್ರಜಾಪತಿಯಿಂದ ಸೃಷ್ಟಿಯಾಗುವುದು. ವಿಶ್ವದ ಕ್ರಿಯೆಯೆಲ್ಲವೂ ಅಗ್ನಿಯಲ್ಲಾದ ಆಹುತಿಗಳಿಂದಲೇ ನಡೆಯುತ್ತಿವೆ. ಇದೇ ಯಜ್ಞ'.

ಜಗದ ಜೀವಿಗಳಿಗೆ ಜೀವನಾಧಾರವಾದ ಅನ್ನ, ನೀರು, ಗಾಳಿ ಮುಂತಾದವುಗಳನ್ನು ಅನುಗ್ರಹಿಸುತ್ತಿರುವ ದೇವತೆಗಳಿಗೆ ಪವಿತ್ರವಾಗಿ ಹವಿಸ್ಸಿನ ರೂಪದಲ್ಲಿ ನಮ್ಮ ಕೃತಜ್ಞತೆಯನ್ನು ಯಾಗದ ಮೂಲಕ ಅರ್ಪಿಸಬೇಕು – 'देवेभ्य इदं न मम' ಎಂಬ ಸ್ವಾರ್ಥತ್ಯಾಗದ ಮೂಲಕ ಸಕಲ ಪಾಪಮುಕ್ತರಾಗಿ ಚಿತ್ತಶುದ್ಧಿಯನ್ನು ಹೊಂದಿ, ದೇವಋಣದಿಂದ ಮುಕ್ತರಾಗುವುದೇ ಯಾಗದ ಉದ್ದೇಶ. ಯಜ್ಞ ಎಂದರೆ 'ಆತ್ಮ', 'ಜೀವ' ಎಂಬ ಅರ್ಥಗಳೂ ಉಂಟು. (यज्ञोऽन्यात्महरी षु), ಪ್ರಸ್ತುತ ಈ ಅರ್ಥಕ್ಕೆ ಸಂಬಂಧಿಸಿದಂತೆ ಶಿವಸಂಹಿತೆಯಲ್ಲಿ ಯಜ್ಞ ಪರಿಕಲ್ಪನೆ ಹೇಗಿದೆ ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ. ಪ್ರಮುಖ ಹಠಯೋಗ ಗ್ರಂಥವಾದ ಶಿವಸಂಹಿತೆಯು[4] ಶಿವ ಮತ್ತು ಪಾರ್ವತಿಯರ (ಹರ–ಗೌರೀ) ನಡುವೆ ನಡೆದ ಸಂವಾದ ರೂಪಾತ್ಮಕವಾಗಿದ್ದು, ಯೋಗ ಚರ್ಚೆಯು ಸಂಗ್ರಹವಾಗಿದೆ. इति श्री िविसंहितायां योग ाास्त्रे हरगौरी संवादे ಎಂಬ ಪರಿಸಮಾಪ್ತಿವಾಕ್ಯ ಇದರ ಚರ್ಚೆಯನ್ನು ತಿಳಿಸುತ್ತದೆ. ಶಿವನಿಂದ ಯೋಗಜ್ಞಾನ ಪ್ರದತ್ತವಾಗಿದ್ದು, ಯೋಗಾಭ್ಯಾಸದ ಚರಮಾವಸ್ಥೆಯನ್ನು ಸೂಚಿಸುತ್ತದೆಯಲ್ಲದೇ ಶಿವತತ್ತ್ವವನ್ನು ನೀಡುವ ಸಂಹಿತಾ ಗ್ರಂಥವಾಗಿದೆ.

ಜ್ಞಾನ ಮತ್ತು ಯೋಗದ ಆಚರಣೆಗಳೆರಡಕ್ಕೂ ಸಮಾನ ಮಹತ್ತ್ವ ನೀಡಿರುವ ಈ ಗ್ರಂಥವು ಶರೀರದಿಂದ 'ಅಶರೀರ'ವನ್ನರಿಯುವ ಸಾಧ್ಯತೆಯನ್ನು ತೋರಿಸಿದೆ. ತಾಂತ್ರಿಕಪರಂಪರೆ ಮತ್ತು ಸಾಧನಪದ್ಧತಿಯಿಂದ ಪ್ರಭಾವಿತವಾದ ಇದು ಒಂದು ಅನುಭಾವ ವಿಜ್ಞಾನವಾಗಿದೆಯೆನ್ನಬಹುದು (Experiencial Scince).

ಐದು ಪಟಲಗಳಲ್ಲಿ 650 ಶ್ಲೋಕಗಳುಳ್ಳ ಈ ಗ್ರಂಥದಲ್ಲಿ ಜ್ಞಾನ ಮತ್ತು ಯೋಗದ ಆಚರಣೆಗಳೆರಡಕ್ಕೂ ಸಮಾನ ಮಹತ್ತ್ವ ನೀಡಿದೆ. ಜ್ಞಾನದ ಚರ್ಚೆಗೂ ಮೊದಲು ಅಜ್ಞಾನದ ಬಗ್ಗೆ ವಿಪುಲ ಚರ್ಚೆಯಿದೆ. ಆತ್ಮವನ್ನರಿಯಲು ಆತ್ಮವಲ್ಲದ್ದನ್ನರಿಯುವುದು ಮಹತ್ತ್ವವಾಗಿದೆ ಹಾಗೂ ಅಗತ್ಯವಾಗಿದೆ ಎನ್ನುವ ಶಿವಸಂಹಿತೆಯು ಗೃಹಸ್ಥಾಶ್ರಮಿಗಳಿಗಾಗಿ ಯೋಗ ಸಾಧನೆ ಇಲ್ಲ ಎಂಬ ಭ್ರಮೆಯನ್ನು ನಿರಾಕರಿಸಿದೆ – ನಾಲ್ಕು ಪ್ರಕಾರದ ಯೋಗ ಚರ್ಚೆಯಿದ್ದು, ಮೃದು, ಮಧ್ಯ ಮತ್ತು ಅಧಿಮಾತ್ರಪ್ರಕಾರದ ಸಾಧಕರು ಕ್ರಮವಾಗಿ ಮಂತ್ರ, ಲಯ ಮತ್ತು ಹಠಯೋಗದ ಅಧಿಕಾರಿಗಳಾಗುತ್ತಾರೆ. ಆದರೆ ಅಧಿಮಾತ್ರತಮಕೋಟಿಯ ಸಾಧಕರು ಎಲ್ಲ ಪ್ರಕಾರದ ಯೋಗದ ಅಧಿಕಾರಿಗಳಾಗುತ್ತಾರೆ ಎಂದಿದೆಯಲ್ಲದೇ, ಯೋಗಸಾಧನೆಯಲ್ಲಿ ಬರುವ ಬಾಧಕಗಳಾದ ಭೋಗರೂಪ ವಿಘ್ನ, ಧರ್ಮರೂಪ ವಿಘ್ನ ಹಾಗೂ ಜ್ಞಾನರೂಪ ವಿಘ್ನಗಳನ್ನು ಕುರಿತು ಹೇಳಲಾಗಿದೆ.

अपरे नियताहाराः प्राणान् प्राणेषु जुह्वति ।
सर्वेऽप्येते यज्ञविदो यज्ञक्षपितकल्मषाः ॥ (4.30. ಪು. 214)

'ಕೆಲವರು ನಿಯುತಾಹಾರರಾಗಿ ಪ್ರಾಣಗಳನ್ನು ಪ್ರಾಣಗಳಲ್ಲಿ ಹೋಮಿಸುತ್ತಿರುವರು. ಇವರೆಲ್ಲರೂ ಯಜ್ಞವೇತ್ತರು. ಯಜ್ಞಗಳಿಂದ ಕಲ್ಮಷಗಳನ್ನು ಕಳೆದುಕೊಂಡಿರುವರು' ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಇದೇ ದಾರಿಯನ್ನು ಹಿಡಿದಿರುವ ಶಿವಸಂಹಿತೆಯು 'मिताहारी योग लक्षणम्' ಎಂದು ಹೇಳಿ, ದಾರ್ಶನಿಕತತ್ತ್ವವನ್ನು ಅನುಸರಿಸಿದೆ. ಈ ಸಂಹಿತೆಯು ಜೀವ, ಜಗತ್ತು, ಆತ್ಮ, ದುಃಖ, ಬಂಧನ, ಮೋಕ್ಷ, ಅಜ್ಞಾನ, ಕರ್ಮ, ಜ್ಞಾನ, ಮೋಕ್ಷಸಾಧನ, ಸತ್ಯ, ಅಸತ್ಯಾದಿಗಳ ಚರ್ಚೆಯನ್ನು ಮಾಡಿದೆಯೇ ಹೊರತು ಚಾರ್ವಾಕದರ್ಶನವನ್ನಲ್ಲ. ನಿತ್ಯವಾದುದೇ ಸತ್ಯ, ಅಪರಿವರ್ತನಶೀಲ, ಕೂಟಸ್ಥ, ಆದ್ಯಂತರಹಿತ, ನಿರಾಕಾರ, ಪುಣ್ಯ, ಸಚ್ಚಿದಾನಂದಮಯ, ಚೈತನ್ಯ ಮತ್ತು ದ್ವೈತರಹಿತವಾದದ್ದನ್ನು ಆತ್ಮ, ಬ್ರಹ್ಮ, ಪರಮೋತ್ತಮ, ಜ್ಞಾನ, ಆದಿಯೆಂದು ಕರೆಯಲಾಗಿದೆ. ಇದರ ಅಜ್ಞಾನ ಮನುಷ್ಯನಿಗೆ ಜಗತ್ತಿನ ಅನುಭವ ನೀಡುತ್ತದೆ. ಹಾಗಾಗಿ ಸತ್ಯದ ಜ್ಞಾನಕ್ಕೆ, ಮೋಕ್ಷ ಮಾರ್ಗಕ್ಕೆ ಯೋಗವೇ ಸಾಧನವೆನ್ನಲಾಗಿದೆ. ಸತ್ಯಕ್ಕೆ ವಿರುದ್ಧವಾದ ಅಂತರ್ಗತ ಜಗತ್ತು, ಶರೀರೇಂದ್ರಿಯಗಳು, ಮನ, ಬುದ್ಧಿ, ಅಹಂಕಾರ, ಸಕಾಮಕರ್ಮ, ಭೋಗ, ಪಾಪ, ಪುಣ್ಯ, ಸ್ವರ್ಗ, ದುಃಖ, ನಾನಾತ್ವಾದಿಗಳ ಸಮೂಹವಾದದ್ದೇ ಅಸತ್ಯ. ಇದಕ್ಕೆ ಕಾರಣ ಅವಿದ್ಯಾ ಅಥವಾ ಮಾಯಾ. ಮಾಯೆಯು ಜ್ಞಾನದ ಅಭಾವವಲ್ಲ. ವಿಜ್ಞಾನಾತ್ಮಕವಾಗಿದೆ. ಅಸತ್ಯವನ್ನು ಮುಚ್ಚಿ ಅದನ್ನು ವಿಶ್ವರೂಪದಲ್ಲಿ ಪ್ರಕಟಗೊಳಿಸುತ್ತದೆ. ಇದು ಮಾಯೆಯ ಆವರಣದ ವಿಕ್ಷೇಪ ಶಕ್ತಿಯಾಗಿದೆ. ತ್ರಿಗುಣಾತ್ಮಕವಾಗಿರುವ ಇದು ನಿತ್ಯ ಮತ್ತು ಕ್ಷಣ ಭಂಗುರವಾಗಿದೆ. ಇದನ್ನೇ ಅದ್ವೈತ ವೇದಾಂತದಲ್ಲಿ ವಿವರ್ತವಾದವೆನ್ನಲಾಗಿದೆ.

ಆತ್ಮಸಾಕ್ಷಾತ್ಕಾರದಿಂದ ಮುಕ್ತಿಯು ಸಾಧ್ಯ. ಸಚ್ಚಿದಾನಂದವಾದ, 'ಅಹಂ ಬ್ರಹ್ಮಾಸ್ಮಿ' ಎಂಬ ಸಾಕ್ಷಾದನುಭೂತಿಯೇ ಮುಕ್ತಿ. ಇದನ್ನು ಸಾಧಿಸಲು ಯೋಗಾನುಶಾಸನವೇ ಏಕಮಾತ್ರ ಮಾರ್ಗ ಎನ್ನುವ ಇದು ಅನುಭವದಿಂದ ಹೊರಬಂದ ಶಾಸ್ತ್ರವಾಗಿದೆ. ಇಲ್ಲಿ ಮಾನವಶರೀರವೇ ವಿಶಾಲ ಬ್ರಹ್ಮಾಂಡದ ಪ್ರತಿಮೂರ್ತಿ. ಎಲ್ಲ ಅಂಗಗಳ ಕಾರ್ಯಗಳು ಮೇರುದಂಡದ ಆಶ್ರಯದಿಂದಲೇ ನಡೆಯುತ್ತವೆ. ಇದು ಎರಡು ಧಾರೆಗಳಿಂದ ಕೂಡಿದ್ದು, ಒಂದು ವಾಯುಮಾರ್ಗ ಅಂದರೆ ಇಡಾದಿಂದ ಪ್ರವಹಿತವಾಗಿ, ಶರೀರದ ಪೋಷಣೆಗೆ ಕಾರಣವಾಗುತ್ತದೆ ಮತ್ತು ಎರಡನೆಯ ಧಾರೆ – ಮಧ್ಯಮಾರ್ಗ ಅಥವಾ ಸುಷುಮ್ನಾದಿಂದ ಪ್ರವಹಿತವಾಗಿ ಸೃಷ್ಟಿಯ ಕಾರಣವಾಗುತ್ತದೆ. ಮೇರುವಿನ ಮೂಲದಲ್ಲಿ ಸೂರ್ಯಮಂಡಲದ ಸ್ಥಿತಿಯಿದೆ. ವಾಯುಮಂಡಲದ ಮೂಲಕ, ದಕ್ಷಿಣಮಾರ್ಗದಿಂದ

ಸಂಪೂರ್ಣ ಶರೀರದಲ್ಲಿ ಭ್ರಮಿಸುತ್ತಿರುವ ಸೂರ್ಯನು ಚಂದ್ರನಿಂದ ಸ್ರವಿಸುವ ಧಾತುಗಳನ್ನು ಹೀರುವನು. ಹಾಗೇ ಚಂದ್ರನಿಂದ ಸ್ರವಿಸುವ ಅಮೃತಧಾರೆಯಿಂದ ಸಮ್ಮಿಲಿತ ರೂಪದಿಂದ ಪ್ರವಹಿತನಾದರೆ ಆಗ ಸೃಷ್ಟಿ ಮತ್ತು ಸಂಹಾರದ ಕಾರಣವಾಗುತ್ತದೆ.

ನಾಡಿಗಳಿಗೆ 'भोगवहाः च वायुसंचारदक्षकाः' ಎನ್ನಲಾಗಿದ್ದು, ಅವು ಒಟ್ಟು 3,50,000 ಎನ್ನಲಾಗಿದೆ. ಅವುಗಳಲ್ಲಿ 14 ನಾಡಿಗಳು ಪ್ರಮುಖವಾಗಿದ್ದು ಇಡಾ, ಪಿಂಗಳಾ ಮತ್ತು ಸುಷುಮ್ನಾಗಳು ಅತಿಪ್ರಮುಖವಾಗಿವೆ. ಇವುಗಳಲ್ಲಿಯೂ ಸುಷುಮ್ನಾ ಸರ್ವೋತ್ತಮ. ಅದರೊಳಗೆ ಒಂದು ಅನ್ಯ ನಾಡಿಯಿದ್ದು, ಅದಕ್ಕೆ ಚಿತ್ರಾ ಎನ್ನಲಾಗಿದೆ. ಇದು ಶರೀರದ ಉಪಾಧಿಯಾಗಿದೆ. ಇದಕ್ಕೆ ಬ್ರಹ್ಮರಂಧ್ರ ಅಥವಾ ದಿವ್ಯಮಾರ್ಗ ಎನ್ನಲಾಗಿದೆ. ಇದರ ಮೇಲೆ ಧ್ಯಾನ ಮಾಡುವ ಸಾಧಕನ ಮಹಾಪಾಪಗಳೂ ನಾಶವಾಗುತ್ತವೆ. ಮೇರುದಂಡದ ಮೂಲದಲ್ಲಿ ಚಕ್ರವಿದ್ದು, ಚಕ್ರದ ಯೋನಿಯಲ್ಲಿ ಮೂರೂವರೆ ಸುತ್ತಿನ ಕುಂಡಲಿನಿಯಿದೆ. ಇದೇ ಸಂಪೂರ್ಣ ಜಗತ್ತಿನ ಕಾರಣರೂಪಿಯಾಗಿದೆ. ಸೂರ್ಯಮಂಡಲದ ನಡುವೆ ವೈಶ್ವಾನರಾಗ್ನಿಯಿದ್ದು, ಅದು 12 ಕಲೆಗಳಿಂದ ಕೂಡಿದ್ದು, ಅನ್ನಪಾಚಕರೂ ಪದಲ್ಲಿದೆ. ಇದು ರೋಗಗಳನ್ನು ದೂರಗೊಳಿಸುವ ಮತ್ತು ಶರೀರವನ್ನು ಸುದೃಢಗೊಳಿಸುವ ದಿವ್ಯವಸ್ತುವಾಗಿದೆ. 'ಯೋಗಾಭ್ಯಾಸದ ಮೂಲಕ ಈ ಅಗ್ನಿಯನ್ನು ಪ್ರಜ್ವಲಿಸಿ ಅದರಲ್ಲಿ ಅನ್ನದ ಆಹುತಿಯನ್ನು ನೀಡಬೇಕು ಎಂದು ಹೇಳಲಾಗಿದೆ'. ಮಂತ್ರಯೋಗ, ಹಠಯೋಗ, ಲಯಯೋಗ ಮತ್ತು ರಾಜಯೋಗ ನಾಲ್ಕು ಪ್ರಕಾರದ ಯೋಗಚರ್ಚೆಯಿದ್ದು, ಭಗವದ್ಗೀತೆಯಲ್ಲಿ ಹೇಳುವ ಹಲವು ಪ್ರಕಾರದ ಯಜ್ಞಗಳಲ್ಲಿ ಪ್ರಾಣಾಯಾಮ ಯಜ್ಞವನ್ನು ಇಲ್ಲಿ ವಿವರಿಸಲಾಗಿದೆ.

सूर्यमण्डलमध्यस्थः कलाद्वाद ासंयुतः ।
वस्तिदे े ज्वलद्वर्न्हिवर्तते चान्नपाचकः ॥
वैश्वानराग्निरेषो मम तेजों ा सम्भवः ।
करोति विविधं पाकं प्राणिनां देहमास्थितः ॥

ವಸ್ತಿ ಪ್ರದೇಶದಲ್ಲಿ ಹನ್ನೆರಡು ಕಲೆ(ಪಟಲ)ಗಳನ್ನು ಹೊಂದಿದ ಸೂರ್ಯನು ಉದರ ಮಧ್ಯದಲ್ಲಿದ್ದು, ಅನ್ನ ಪಾಚಕವಾದ ಜ್ವಲಿಸುವ ಅಗ್ನಿ(ವಹ್ನಿ)ಯಾಗಿದ್ದಾನೆ. ವೈಶ್ವಾನರಾಗ್ನಿಯಾಗಿರುವ ಈತ ನನ್ನ ಶಕ್ತಿಯ ಅಂಶದಿಂದ ಸಂಭೂತನಾಗಿದ್ದಾನೆ. ರೋಗಗಳ ಉತ್ಪತ್ತಿಯನ್ನು ನಾಶಗೊಳಿಸುವ ಈ ವೈಶ್ವಾನರರೂಪಿ ಅಗ್ನಿಯು ಆಯುಸ್ಸನ್ನು, ಬಲವನ್ನು ಪೋಷಣವನ್ನು, ಮತ್ತು ಶಾರೀರಿಕ ಸ್ಫೂರ್ತಿಯನ್ನೂ ನೀಡುವವನಾಗಿದ್ದಾನೆ.

आयुः प्रदायको वह्निर्बलं पुि ददाति सः ।
ारीरपाटवञ्चापि ध्वस्तरोगसमुद्भवः ॥
तस्माद्वैश्वानराग्निञ्च प्रज्वाल्य विधिवत्सुधीः ।
तस्मिन्नन्नं हुनेद्योगी प्रत्यहं गुरु िक्षया ॥

ಆದ್ದರಿಂದ ಸುಧೀಯು ವಿಧಿವತ್ತಾಗಿ ವೈಶ್ವಾನರಾಗ್ನಿಯನ್ನು ಪ್ರಜ್ವಲಿಸಿ ಆಧ್ಯಾತ್ಮಿಕ ಗುರುವಿನ ಮಾರ್ಗದರ್ಶನದಂತೆ ಪ್ರತಿದಿನವೂ ಅದರಲ್ಲಿ ಹವನ ಮಾಡಬೇಕು ಎನ್ನಲಾಗಿದೆ. ಗೀತೆಯಲ್ಲಿ ಹೀಗೆ ಹೇಳಿದೆ –

अपाने जुह्वति प्राणं प्राणेऽपानं तथापरे ।
प्राणापानगती रुद्ध्वा प्राणायामपरायणाः ॥ (2.29. ಪು. 214)

'ಕೆಲವರು ಪ್ರಾಣಾಪಾನಗಳ ಗತಿಗಳನ್ನು ತೆಗೆದುಕೊಂಡು ಪ್ರಾಣಾಯಾಮ ಪರಾಯಣರಾಗಿ, ಅಪಾನದಲ್ಲಿ ಪ್ರಾಣವನ್ನೂ ಹಾಗೂ ಪ್ರಾಣದಲ್ಲಿ ಅಪಾನವನ್ನೂ ಹೋಮ ಮಾಡುವರು'. ಇಲ್ಲಿ ಹೇಳುವಂತೆ ಉಸಿರನ್ನು ಹಿಡಿದು ರೇಚಕ, ಪೂರಕ, ಕುಂಭಕಗಳನ್ನು ಮಾಡುವುದೇ ಪ್ರಾಣಾಯಾಮ ಯಜ್ಞ. ಯಜ್ಞಕ್ಕೆ ಮತ್ತೊಂದು ಹೆಸರು – ಧ್ವರ ಎಂದರೆ ಹಿಂಸೆ, 'ಅಧ್ವರ' ಎಂದರೆ ಹಿಂಸೆಯ ಪ್ರತಿಷೇಧ. ಈ ಅರ್ಥದ ಯಜ್ಞವು ಶಿವಸಂಹಿತೆಯಲ್ಲಿ ನಾವು ಭಾವಿಸುವ ಯಜ್ಞಕ್ಕೆ ಸರಿಹೋಗುತ್ತದೆ. ವೇದಾದಿಗಳಲ್ಲಿ ಹೇಳಿರುವ ಯಜ್ಞವಾದರೋ ಪ್ರಾಣಿಬಲಿಯನ್ನು ಬೇಡುತ್ತದೆ. ಆದರೆ ಈ ಶಿವಸಂಹಿತೆಯಲ್ಲಿ ಪ್ರಾಣಾಯಾಮಯಜ್ಞವನ್ನು ಹೇಳುವುದರಿಂದ ಇದು ಅಧ್ವರ. ಆತ್ಮ ಎಂಬ ಯಜಮಾನನು ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಮನಸ್ಸು, ಬುದ್ಧಿ ಎಂಬ ನಾಲ್ವರು ಋತ್ವಿಜರುಗಳ ಮೂಲಕ ಶರೀರವೆಂಬ ಯಜ್ಞಕುಂಡದಲ್ಲಿ, ದೇವತೆಗಳ ಪ್ರೀತ್ಯರ್ಥವಾಗಿ (ಇಡಾ, ಪಿಂಗಳಾ, ಸುಷುಮ್ನಾ ಮತ್ತು ಚಿತ್ರಾ ಎಂಬ ಯಜ್ಞಪರಿಕರಗಳ ಸಹಾಯದಿಂದ) ಅನ್ನ ಮತ್ತು ಪ್ರಾಣಾಯಾಮವೆಂಬ ಹವಿಸ್ಸಿನ ಮೂಲಕ ವೇದಗಳ ಫಲವಾದ ಅಗ್ನಿಹೋತ್ರವನ್ನು ಮಾಡಲು (अग्निहोत्रफलाः वेदाः) ವೈಶ್ವಾನರಾಗ್ನಿಯನ್ನು ಪ್ರಜ್ವಲಿಸಿ ಸಕಲ ರೋಗಗಳೆಂಬ ಪಾಪಗಳನ್ನು ಸುಡುವ ಮೂಲಕ, ಶರೀರವನ್ನು ಸುದೃಢಗೊಳಿಸುವ ನಿರಂತರವಾದ ಈ ಕ್ರಿಯೆಯ ಮೂಲಕ ಶೋಕವನ್ನು ದಾಟಿ 'ಅಹಂ ಬ್ರಹ್ಮಾಸ್ಮಿ' ಎಂಬ ಸಾಕ್ಷಾದನುಭೂತಿಯನ್ನು ಹೊಂದುವುದೇ ಈ ಯಜ್ಞ ಸಾಧನೆಯಿಂದ ಸಿಗುವ ಪ್ರತಿಫಲ, ಇದೇ ಪ್ರಾಣಾಯಾಮಯಜ್ಞ, ಇದೇ ಶ್ರೇಷ್ಠಕರ್ಮ 'यज्ञो हि श्रेष्ठतमं कर्म'.

ಯೋಗ ಸಾಧನೆಯಲ್ಲಿ ಬರುವ ಭೋಗರೂಪ, ಧರ್ಮರೂಪ ಮತ್ತು ಜ್ಞಾನರೂಪ ವಿಘ್ನಗಳೇ – ಯಜ್ಞಫಲವನ್ನಪಹರಿಸುವ 15 ಮಂದಿ ದೇವತೆಗಳು (5 ಜ್ಞಾನೇಂದ್ರಿಯ 5 ಕರ್ಮೇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ, ಧರ್ಮಜ್ಞಾನ ಮತ್ತು ಭೋಗ). ಒಟ್ಟಾರೆ ಈ ಯಜ್ಞಯಾಗಾದಿಗಳ ಪರಮಗುರಿ ಮೋಕ್ಷಪ್ರಾಪ್ತಿಯಾದ್ದರಿಂದ ಅದನ್ನು ಹೇಳುವ ಈ ಪ್ರಾಣಾಯಾಮ ಯಜ್ಞವು ಇಂದಿನ ತೀವ್ರಗತಿಯ ಚಟುವಟಿಕೆಯನ್ನು ಹೊಂದಿರುವ ಮನುಷ್ಯನಿಗೆ ಅತ್ಯಂತ ಅಗತ್ಯವಾಗಿದೆ ಎನ್ನಬಹುದು.

[1]. ಯೋಗ ರೂಢಿ – ಪಂಕಜ – ಕೆಸರಲ್ಲಿ ಹುಟ್ಟಿದುದೆಲ್ಲವೂ ಪಂಕಜ, ಆದರೆ ಕಮಲಕ್ಕೆ ಮಾತ್ರ ಹೇಳುವುದು – ಯೋಗರೂಢ (ಯೋಗರೂಢಪದ)

[2]. ಯಜ್ಞಶೇಷ – ಅಮೃತ. ಭೋಜನಶೇಷ – ವಿಘಸ – विि ः गुर्वादिभिदद्यते – अद (भक्षणे) 'अप्' (3.3.59), अदेः घसल् आदे ाः (2.4.28) .

[3]. ಅಮೃತಾಶಿ : अमृतं विघसो यज्ञ ेषभोजन ेषयोः – ಅಮರಕೋಶ, ಬ್ರಹ್ಮವರ್ಗ. ಪು. 106.

ಯಜ್ ಧಾತುವಿನಿಂದ ನಿಷ್ಪನ್ನವಾದ ಯಜ್ಞ ಶಬ್ದಕ್ಕೆ ದೇವಪೂಜಾದಿ ನಾನಾರ್ಥಗಳಿವೆ.

'यज देवपूजासंगतिकरणदानेषु' (यज् + नञ्, 'नञ्' [3.3.90] इज्यन्ते देवता अत्र)

[4]. ಹಠಪ್ರದೀಪಿಕಾ, ಘೇರಂಡಸಂಹಿತೆ, ಶಿವಸಂಹಿತಾ, ಗೋರಕ್ಷಶತಕ ಮತ್ತು ಸಿದ್ಧ ಸಿದ್ಧಾಂತ ಪದ್ಧತಿಗಳಲ್ಲಿ ಶಿವಸಂಹಿತೆಯ ಉಲ್ಲೇಖವಿದೆ.

**ಪರಾಮರ್ಶನ ಗ್ರಂಥಗಳು :-**

1) ಕೃಷ್ಣ ಯಜುರ್ವೇದ, ಸಂಪುಟ– 1, ಕನ್ನಡ ಪ್ರಕಾಶನ, ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ,
ಬೆಂಗಳೂರು, ಏಪ್ರಿಲ್ – 1988.
2)ಯಜ್ಞಾಯುಧಗಳು – ವಿ॥ ತಾಡಿಚರ್ಲವೀರರಾಘವ ಶರ್ಮ.

ಸಂಸ್ಕೃತಿ ಸಾಹಿತ್ಯ ಪ್ರತಿಷ್ಠಾನ,ಎ – 19/1, ಕೆ.ಪಿ.ಡಬ್ಲುಡಿ ಕ್ವಾರ್ಟರ್ಸ್, ಜೀವನ ಭೀಮಾ ನಗರ, ಬೆಂಗಳೂರು – 560075

3) ಶ್ರೀಮದ್ಭಗವದ್ಗೀತೆ – ತತ್ತ್ವ ವಿವೇಚನಿ ಟೀಕೆ, ಗೀತಾ ಪ್ರೆಸ್, ಗೋರಖ್ ಪುರ – 2010.
4) ಶಿವಸಂಹಿತಾ – ಅನು : ಡಾ।। ಸಿ. ಎಸ್. ನಾಯ್ಕರ್, ಕುಲಸಚಿವರು, ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು.
5) मनुस्मृतिः – ಸಂಪಾದಕರು – ಪ್ರೊ ।। ಜೆ. ಎಲ್. ಶಾಸ್ತ್ರಿ, **ಮೋತಿಲಾಲ್**
ಬನಾರಸೀದಾಸ್ ಪಬ್ಲಿಷರ್ಸ್ ಪ್ರೈ. ಲಿ., ವಾರಾಣಾಸಿ. 1990.
6) Vaidyakeeya Subhashitha Sahitya - ಅನುವಾದಕರು – Dr. K. ಲೀಲಾ, ವಿದ್ಯುತ್ ಪ್ರಕಾಶನ, ಮೈಸೂರು – 2002.
7) ಶಬ್ದಾರ್ಥ ಕೌಸ್ತುಭಃ (ಶಬ್ದಕೋಶ) – ಸಂಪುಟ 1 – 6, ವಿ. ಚಕ್ರವರ್ತಿ ಶ್ರೀನಿವಾಸಗೋಪಾಲಾಚಾರ್ಯ, ಬಾಪ್ಕೋ ಪ್ರಕಾಶನ, ಬೆಂಗಳೂರು ಪ್ರೆಸ್, ಬೆಂಗಳೂರು – 2003.
8) ಅಮರಕೋಶ – ಸಂಪಾದನೆ – ಲೂಯಿರೈಸ್, ಪ್ರಸಾರಾಂಗ, ಮೈ. ವಿ.ವಿ. ಮೈಸೂರು – 1989.

# ಶ್ರೀ ಶಂಕರರ ಆತ್ಮಬೋಧ

SHIVANNA
RESEARCH SCHOLAR, DOS IN PHILOSOPHY, UNIVERSITY OF MYSORE, MANASA GANGOTRI
MYSURU-570 006

**ಪ್ರಬಂಧ ಸಾರ:–** ಶಂಕರರ ಪ್ರಕಾರ ಮನುಷ್ಯನ ಗುರಿ ತನ್ನನ್ನು ತಾನು ತಿಳಿದುಕೊಳ್ಳುವುದು. ಇಂದು ಮನುಷ್ಯ ತನ್ನನ್ನು ಹೊರತುಪಡಿಸಿ ಮತ್ತೆಲ್ಲಾ ಬಾಹ್ಯ ವಿಷಯಗಳನ್ನು ಅರಿತುಕೊಳ್ಳಲು ಹಂಬಲಿಸುತ್ತಿದ್ದಾನೆ. ಆದರೆ ತನ್ನ ಜ್ಞಾನವಿಲ್ಲದೇ ಅವನ ಜ್ಞಾನಾನ್ವೇಷಣೆ ಪೂರ್ಣತೆಯನ್ನು ಪಡೆಯಲಾರದು. ಮನುಷ್ಯನು "ಜ್ಞಾನದಲ್ಲಿ ಪೂರ್ಣತೆಯನ್ನು ಪಡೆದೆ" ಎಂಬ ಹಂತಕ್ಕೆ ಬರುವುದು ತನ್ನನ್ನು ಅರಿತಾಗ ಮಾತ್ರ. ಆತ್ಮಜ್ಞಾನವಿಲ್ಲದ ಅವನ ಅನ್ವೇಷಣೆಯೆಲ್ಲವೂ ಕತ್ತಲೆಯಲ್ಲಿ ತಡಕಾಡಿದಂತೆ. ಪ್ರಪಂಚದಲ್ಲಿ ಎಲ್ಲ ಸಂಗತಿಗಳಿಗಿಂತಲೂ ಶ್ರೇಷ್ಠತಮವಾದ ಆತ್ಮಸಂಗವನ್ನು ಪಡೆದುಕೊಳ್ಳುವುದೇ ಇಲ್ಲಿ ಯುಕ್ತಿ ಅಥವಾ ವಿಚಾರವೆಂದರೆ ನಮಗಿಷ್ಟ ಬಂದಂತೆ ಆಲೋಚಿಸುವುದಲ್ಲ. ಸ್ವೇಚ್ಛಾಲೋಚನೆಯೇ ಯುಕ್ತಿಯಲ್ಲ. ಯುಕ್ತಿಯೆಂದರೆ ಶ್ರುತಿಗೆ ವಿರುದ್ಧವಲ್ಲದ ಆಲೋಚನೆ. (ಶ್ರುತ್ಯನುಕೂಲತರ್ಕ). ಶ್ರುತಿಯ ಮಾರ್ಗದರ್ಶನವಿಲ್ಲದೇ ನಾವು ಮಾಡುವ ತರ್ಕವೆಲ್ಲವೂ ನಮ್ಮನ್ನು ಕತ್ತಲೆಗೇ ಕೊಂಡೊಯ್ಯುವುದು. ಇದೇನೇ ಇರಲಿ, ಗುರು ಉಪದೇಶಿಸಿದ ಮಹಾವಾಕ್ಯಗಳನ್ನು ಕುರಿತಂತೆ ಶ್ರುತ್ಯನುಕೂಲ ವಿಚಾರವು ನಮ್ಮೆಲ್ಲ ಸಂದೇಹಗಳನ್ನೂ ನಿವಾರಿಸುತ್ತದೆ. ಸಂಶಯಗಳು ನಾಶವಾಯಿತೆಂದರೆ ನಮಗೆ ಚಿತ್ತೈಕಾಗ್ರತೆ ಬರುತ್ತದೆ. ಇದಕ್ಕೆ ನಿದಿಧ್ಯಾಸನ ಅಥವಾ ಧ್ಯಾನವೆಂದು ಹೆಸರು. ಈ ಧ್ಯಾನವು ಕೊನೆಗೆ ಸಾಧಕನನ್ನು **ಆತ್ಮಬೋಧ**ಕ್ಕೆ ಒಯ್ಯುತ್ತದೆ.

ಹೀಗೆ ಆಚಾರ್ಯರು ಮನುಷ್ಯ, ತನ್ಮೂಲಕ ಕುಟುಂಬ, ಸಮಾಜ, ದೇಶ ಮತ್ತು ಇಡೀ ವಿಶ್ವದಲ್ಲಿ ದಿವ್ಯಜೀವನವು ನೆಲೆಸಬಹುದಾದ ಮಾರ್ಗವನ್ನು ಸರಳ ಹಾಗೂ ಸುಂದರ ಶ್ಲೋಕಗಳಲ್ಲಿ ನಮಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಜಗತ್ತಿನ ಇಂದಿನ ವಿಷಮಸ್ಥಿತಿಗೆ ಕಾರಣ ಬಾಹ್ಯವಲ್ಲ, ಆಂತರಿಕವಾದುದು. ಅದೇ ನಮ್ಮ ನೈಜಜ್ಞಾನದ ಕೊರತೆ. ನಾವೆಲ್ಲರೂ ಈ ಜ್ಞಾನವನ್ನು ಪಡೆದುಕೊಂಡರೆ, ಅಥವಾ ಅದನ್ನು ಪಡೆಯಲು ಪ್ರಯತ್ನಿಸಿದರೆ ಅಥವಾ ಕಡೆಯ ಪಕ್ಷ ಅದನ್ನು ಕುರಿತು ಅನುಸಂಧಾನವನ್ನಾದರೂ ಮಾಡಿದರೆ ಜಗತ್ತಿನಲ್ಲಿ ತಾಂಡವವಾಡುತ್ತಿರುವ ಈ ಪ್ರಕ್ಷುಬ್ಧತೆ ಸ್ತಬ್ಧವಾಗಬಹುದೇನೋ. ಏಕೆಂದರೆ ಇನ್ನೊಂದರ ಅರಿವಿನಲ್ಲಿ ಮಾತ್ರ ಭಯ ಉದ್ರೇಕಗಳುಂಟಾಗುವುದು. ಇನ್ನೊಂದೇ ಇಲ್ಲದಿದ್ದಾಗ ಎಲ್ಲವೂ ಬ್ರಹ್ಮಮಯವಾಗಿರುವಾಗ ಭಯವೇತರದು? ಕ್ಷಾತ್ರಬಲವು ಬಲವಲ್ಲ, ಬ್ರಹ್ಮಬಲವೇ ಬಲ. ಅಂತಹ ಕೆಲವು ಜ್ಞಾನಿಗಳು ಬಹುಶಃ ಪ್ರಪಂಚದಲ್ಲಿ ಇನ್ನು ಇರುವುದರಿಂದಲೇ ಈ ಪ್ರಪಂಚವು ಪೂರ್ಣವಾಗಿ ಪ್ರಲಯಸ್ಥಿತಿಗೆ ತಲುಪದಿರುವುದು.

ಆದಿಶಂಕರರು ಪ್ರಸ್ಥಾನತ್ರಯ ವ್ಯಾಖ್ಯಾನಗಳಲ್ಲದೇ, ಗದ್ಯ ಅಥವಾ ಪದ್ಯಗಳಲ್ಲಿರುವ ಪ್ರಕರಣವೆಂಬ ಸಣ್ಣ ಸಣ್ಣ ಕೃತಿಗಳಿಗೂ ಪ್ರಸಿದ್ಧರೆಂಬುದು ಎಲ್ಲರಿಗೂ ತಿಳಿದ ವಿಷಯ. ಇವುಗಳಲ್ಲಿ ಉಪದೇಶಸಾಹಸ್ರಿ ಮತ್ತು ವಿವೇಕಚೂಡಾಮಣಿಗಳಂತಹ ಕೆಲವು ಕೃತಿಗಳು ಸಾಕಷ್ಟು ವಿಸ್ತಾರವಾದವು. ಮನೀಷಾಪಂಚಕ, ಆತ್ಮಷಟ್ಕ ಅದ್ವೈತ ಪಂಚರತ್ನಗಳಂತಹ ಇನ್ನೂ ಕೆಲವು ಕೃತಿಗಳು ಸಂಕ್ಷಿಪ್ತವಾ ದವು. ಆದಿಶಂಕರರು ವೇದಾಂತ ವಿಷಯವನ್ನು ಕಾವ್ಯದ ವಿಸ್ತಾರಕ್ಕೆ ಅನುಗುಣವಾಗಿ ಹೊಂದಿಸುವ ಅದ್ಭುತ ಸಾಮರ್ಥ್ಯವನ್ನು ಹೊಂದಿದ್ದವರು. ಇಡೀ ವೇದಾಂತವನ್ನು ಐದು ಅಥವಾ ಒಂದೇ ಶ್ಲೋಕದಲ್ಲಿ (ಏಕಶ್ಲೋಕೀ) ಅಳವಡಿಸುವ ಅಸಾಧಾರಣಶಕ್ತಿ ಅವರಿಗಿತ್ತು. ಹಾಗೆಯೇ ಅದನ್ನು ನೂರಾರು ಶ್ಲೋಕಗಳಿಗೆ ವಿಸ್ತರಿಸುವ ಸಾಮರ್ಥ್ಯವೂ ಅವರಿಗಿತ್ತು. ಈ ಸ್ತೋತ್ರಗಳು ಸಾಮಾನ್ಯ ಓದುಗನಿಗೆ ಇಂದಿಗೂ ಸುಲಭಗ್ರಾಹ್ಯ. ಕಾರಣ, ಅವರು ತಮ್ಮ ದರ್ಶನವನ್ನು ನಮ್ಮ ಸಾಮಾನ್ಯ ಜೀವನಕ್ಕೆ ಬಹಳ ಹತ್ತಿರವಾಗಿರುವ ಉಪಮೆ ಉದಾಹರಣೆಗಳ ಮೂಲಕ ಮಂಡಿಸಿದುದು. ಇಲ್ಲಿ ಕವಚ ಸುಲಭಗ್ರಾಹ್ಯ. ಆದರೆ ಆ ಕವಚದಲ್ಲಿರುವ ವಿಷಯ (Content) ಬಲುಗಹನ. ಇಂತಹ ಸ್ತೋತ್ರಗಳಲ್ಲಿ ಆತ್ಮಬೋಧವೂ ಒಂದು. ಅದು ಬಹಳ ವಿಸ್ತಾರವೂ ಅಲ್ಲದ ಬಹಳ ಸಂಕ್ಷಿಪ್ತವೂ ಅಲ್ಲದ ಗ್ರಂಥ. ನೋಡುವುದಕ್ಕೆ ಅರವತ್ತೆಂಟೇ ಶ್ಲೋಕಗಳಿರುವ ಈ ಗ್ರಂಥವು ಎಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೆಂದರೆ ಅದು ಆಚಾರ್ಯರ ನೇರಶಿಷ್ಯರಾದ ಪದ್ಮಪಾದಾಚಾರ್ಯರಿಂದ ವ್ಯಾಖ್ಯಾನಿತವಾಗಿದೆ. ಈಚಿನವರಾದ ಶ್ರೀಬೋಧೇಂದ್ರ ಯತಿಗಳೂ ಕೂಡ ಇದರ ಮೇಲೆ ಒಂದು ಸರಳ ವ್ಯಾಖ್ಯಾನವನ್ನು ರಚಿಸಿದ್ದಾರೆ. ಆದ್ದರಿಂದ ಅದರ ಪ್ರಾಮುಖ್ಯತೆ ಮತ್ತು ಜನಪ್ರಿಯತೆಯ ಬಗ್ಗೆ ಎರಡು ಮಾತಿಲ್ಲ. ಮುಮುಕ್ಷುಗಳಿಗೆ ಇದೊಂದು ಕೈಪಿಡಿ.

ಶ್ರೀಶಂಕರರ ಆತ್ಮಬೋಧವನ್ನು ವಿವರಿಸುವಾಗ ಅದರ ಎಲ್ಲ ಶ್ಲೋಕಗಳನ್ನು ಪ್ರಸ್ತಾಪಿಸುವುದು ಬಹಳ ಕಷ್ಟ. ಕೆಳಕಂಡ ಪ್ರಶ್ನೆಗಳ ಹಿನ್ನೆಲೆಯಲ್ಲಿ ಅದರ ಕೆಲವು ಶ್ಲೋಕಗಳ ಅವಲೋಕನ ಮಾತ್ರ ಸಾಧ್ಯ.

1. ಮನುಷ್ಯರಾಗಿ ನಮ್ಮ ಗುರಿಯೇನು? ಈ ಗುರಿಯ ಸ್ವರೂಪವೇನು?

2. ಈ ಗುರಿಯನ್ನು ನಾವು ತಲುಪದಿರಲು ಕಾರಣವೇನು?
3. ಈ ಗುರಿಯನ್ನು ತಲುಪುವ ನೇರ ಸಾಧನ ಯಾವುದು?
4. ಈ ಸಾಧನವನ್ನು ಗಳಿಸಿಕೊಳ್ಳುವ ಬಗೆಯೇನು?
5. ಈ ಗುರಿಯನ್ನು ತಲುಪಿದ ಮೇಲೆ ನಮ್ಮ ಸ್ಥಿತಿ ಹೇಗಿರುತ್ತದೆ? ಎಂದರೆ ಮೋಕ್ಷಾವಸ್ಥೆಯ ಸ್ವರೂಪವೇನು?

ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ಶಂಕರರ ಆತ್ಮಬೋಧದ ಕೆಲವು ಶ್ಲೋಕಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

ಶಂಕರರ ಪ್ರಕಾರ ಮನುಷ್ಯನ ಗುರಿ ತನ್ನನ್ನು ತಾನು ತಿಳಿದುಕೊಳ್ಳುವುದು. ಇಂದು ಮನುಷ್ಯ ತನ್ನನ್ನು ಹೊರತುಪಡಿಸಿ ಮತ್ತೆಲ್ಲಾ ಬಾಹ್ಯ ವಿಷಯಗಳನ್ನು ಅರಿತುಕೊಳ್ಳಲು ಹಂಬಲಿಸುತ್ತಿದ್ದಾನೆ. ಆದರೆ ತನ್ನ ಜ್ಞಾನವಿಲ್ಲದೇ ಅವನ ಜ್ಞಾನಾನ್ವೇಷಣೆ ಪೂರ್ಣತೆಯನ್ನು ಪಡೆಯಲಾರದು. ಮನುಷ್ಯನು **"ಜ್ಞಾನದಲ್ಲಿ ಪೂರ್ಣತೆಯನ್ನು ಪಡೆದೆ"** ಎಂಬ ಹಂತಕ್ಕೆ ಬರುವುದು ತನ್ನನ್ನು ಅರಿತಾಗ ಮಾತ್ರ. ಆತ್ಮಜ್ಞಾನವಿಲ್ಲದ ಅವನ ಅನ್ವೇಷಣೆಯೆಲ್ಲವೂ ಕತ್ತಲೆಯಲ್ಲಿ ತಡಕಾಡಿದಂತೆ. ಪ್ರಪಂಚದಲ್ಲಿ ಎಲ್ಲ ಸಂಗತಿಗಳಿಗಿಂತಲೂ ಶ್ರೇಷ್ಠತಮವಾದ ಆತ್ಮಸಂಗವನ್ನು ಪಡೆದುಕೊಳ್ಳುವುದೇ ಅವನ ಗುರಿ. ಇದಿಲ್ಲದೇ ಅವನ ಜೀವನ ವ್ಯರ್ಥ.

'ನಾನು' ಅಥವಾ ಆತ್ಮದ ಸ್ವರೂಪವೇನು? ಶಂಕರರು ಹೀಗೆ ಹೇಳುತ್ತಾರೆ.

**ಪ್ರಕಾಶೇರ್ಕಸ್ಯ ತೋಯಸ್ಯ ಶೈತ್ಯಮಗ್ನೇರ್ಯಥೋಷ್ಣತಾ ।**
**ಸ್ವಭಾವಃ ಸಚ್ಚಿದಾನಂದೋ ನಿತ್ಯನಿರ್ಮಲತಾತ್ಮನಃ ॥**

ಎಂದರೆ ಶಂಕರರ ಪ್ರಕಾರ ನಾವು ತಿಳಿದಿರುವಂತೆ ನಾವು ಪರಿಮಿತರಲ್ಲ. ನಾವು ಯಾರು? ನಾವು ಇಡೀ ಈ ದ್ವೈತ ಪ್ರಪಂಚಕ್ಕೆ ಅಧಿಷ್ಠಾನ ಅಥವಾ ಆಧಾರವಾದ ಬ್ರಹ್ಮವಲ್ಲದೇ ಬೇರೆಯಲ್ಲ. ಸೂರ್ಯನಿಗೆ ಪ್ರಕಾಶ, ನೀರಿಗೆ ತಂಪು ಮತ್ತು ಬೆಂಕಿಗೆ ಉಷ್ಣವು ಹೇಗೋ ಹಾಗೆ ಆತ್ಮಕ್ಕೆ ಸತ್, ಚಿತ್, ಆನಂದ, ನಿರ್ಮಲಗಳು. ಎಂದರೆ ಈ 'ನಾನು' ಸದಾಕಾಲ ಇರುತ್ತೇನೆ. ನಾನು ಚಿನ್ಮಯ ಮತ್ತು ಆನಂದಮಯ.

ಆತ್ಮವಾಗಿ ನಾನು ಈ ಬುದ್ಧಿಯೇ, ಅಹಂಕಾರವೇ, ಮನಸ್ಸೇ, ಪಂಚಜ್ಞಾನೇಂದ್ರಿಯಗಳೇ, ಪಂಚಕರ್ಮೇಂದ್ರಿಯಗಳೇ ಅಥವಾ ಪಂಚಭೂತಗಳೇ ಎಂಬ ಪ್ರಶ್ನೆಗೆ ಇಲ್ಲವೆಂದೇ ಉತ್ತರ. ನಾನು ಇವೆಲ್ಲಕ್ಕಿಂತಲೂ ಈ ಎಲ್ಲ ಕವಚಗಳಿಗಿಂತಲೂ ಭಿನ್ನ. **"ದೇಹೇಂದ್ರಿಯ ಮನೋಬುದ್ಧಿ ಪ್ರಕೃತಿ ಭ್ಯೋ ವಿಲಕ್ಷಣಮ್"** (17). ಕಾರಣ, ಇವೆಲ್ಲವೂ ಜಡವಾಗಿದ್ದು ಪ್ರಕೃತಿಯಿಂದ ಜನ್ಯ. ಇವು ಆತ್ಮವನ್ನು ಪ್ರಕಾಶಿಸುವುದಿರಲಿ, ಇವೇ ತಮ್ಮ ಪ್ರಕಾಶಕ್ಕೆ ಆತ್ಮವನ್ನು ಅವಲಂಬಿಸುತ್ತವೆ. ಘಟಾದಿಗಳು ದೀಪವನ್ನೇ ಅವಲಂಬಿಸುವಂತೆ. ಇಲ್ಲಿ ಇನ್ನೊಂದು ಪ್ರಶ್ನೆ. ಆತ್ಮವು ಬುದ್ಧ್ಯಾದಿಗಳನ್ನು ಪ್ರಕಾಶಪಡಿಸಲು ಇನ್ನೊಂದು ಬೆಳಕನ್ನು ಅವಲಂಬಿಸುವುದೇ? ಈ ಪ್ರಶ್ನೆಗೆ ಇಲ್ಲವೆಂದೇ ಉತ್ತರಿಸಬೇಕು. ಏಕೆಂದರೆ ಅದು ಸ್ವಯಂಪ್ರಕಾಶ. ಅದರ ಮೂಲಸ್ವರೂಪವೇ ಚೈತನ್ಯ. ಚಿತ್ ಅಥವಾ ಜ್ಞಾನ. ಒಂದು ದೀಪವು ತನ್ನ ಬೆಳಕಿಗೆ ಮತ್ತೊಂದು ಬೆಳಕನ್ನು ಆಶ್ರಯಿಸುವುದಿಲ್ಲ.

**ಸ್ವಬೋಧೇ ನಾನ್ಯಬೋಧೇಚ್ಛಾ ಬೋಧರೂಪತಮಾತ್ಮನಃ ।**
**ನ ದೀಪಸ್ಯ ಅನ್ಯದೀಪೇಚ್ಛಾ ಯಥಾಸ್ವಾತ್ಮಪ್ರಕಾಶಕೇ ॥**

ಈಗ ನಮಗೆ ಎರಡನೇ ಪ್ರಶ್ನೆ ಎದುರಾಗುತ್ತದೆ. ಮೂಲತಃ ನಾವು ಅದ್ವೈತವೇ ಆಗಿದ್ದರೂ ನಮಗೇಕೆ ಈ ದ್ವೈತಾನುಭವ ತನ್ಮೂಲಕ ದುಃಖ? ಶಂಕರರ ಪ್ರಕಾರ ಇದಕ್ಕೆ ಅವಿದ್ಯೆಯೇ ಕಾರಣ. ನಮ್ಮನ್ನು ಕುರಿತ ಅಜ್ಞಾನವೇ ಈ ದ್ವೈತಾನುಭವಕ್ಕೆ ತನ್ಮೂಲಕ ದುಃಖಕ್ಕೆ ಕಾರಣ. ಮನುಷ್ಯನ ಎಲ್ಲ ದುಃಖಗಳಿಗೂ ಇದೇ ಮೂಲ ಕಾರಣ. ಈ ಅವಿದ್ಯೆಯು ಅನಾದಿ. ಎಂದರೆ ಅದು ನಮ್ಮೊಳಗೆ ಯಾವಾಗ, ಹೇಗೆ ಮತ್ತು ಏಕೆ ಸೇರಿಕೊಂಡಿತೆಂದು ಹೇಳುವುದು ಬಹಳ ಕಷ್ಟ. ಒಟ್ಟಿನಲ್ಲಿ ಅದಿದೆಯೆಂಬುದಂತೂ ನಿಜ. ಈ ಅವಿದ್ಯೆಯ ಕಾರ್ಯವೇನೆಂದರೆ ಅದು ಅದ್ವೈತವನ್ನು ಮರೆಮಾಚುವುದಷ್ಟೇ ಅಲ್ಲ, ದ್ವೈತವನ್ನೂ ತೋರಿಸುತ್ತದೆ. ಇದರಿಂದಾಗಿ ನಾವು ಇರುವುದನ್ನು ಕಾಣದಿರುವುದಷ್ಟೇ ಅಲ್ಲ. ಇಲ್ಲದಿರುವುದನ್ನು ನೋಡುತ್ತೇವೆ. ನಾವಾಗಿರದ ಶರೀರೇಂದ್ರಿಯಗಳನ್ನು ನಾವೆಂದು ತಿಳಿದು ನಮ್ಮ ಮೇಲೆ ಪರಿಮಿತಿಯನ್ನು ಎಂದರೆ ಜೀವತ್ವವನ್ನು ಅಧ್ಯಾರೋಪಿಸಿಕೊಳ್ಳುತ್ತೇವೆ. ಇದರ ಪರಿಣಾಮವಾಗಿ ಅದ್ವೈತ ಸತ್ಯದಲ್ಲಿ ಜೀವ ಮತ್ತು ಪ್ರಪಂಚವೆಂಬ ಭೇದವು ನಮಗೆ ತೋರುತ್ತದೆ. ಎಲ್ಲಿ ಭೇದಜ್ಞಾನವಿದೆಯೋ ಅಲ್ಲಿ ಹೋರಾಟ ಸಂಘರ್ಷಗಳು (Conflict or Struggle) ತನ್ಮೂಲಕ ದುಃಖವು ಅನಿವಾರ್ಯವಾಗುತ್ತದೆ.

ಇಲ್ಲಿ ನಮಗೆ ಇನ್ನೊಂದು ಸಮಸ್ಯೆಯು ತಲೆದೋರುತ್ತದೆ. ಹಾಗಾದರೆ ಈ ಜೀವ ಮತ್ತು ಪ್ರಪಂಚಗಳು ಸುಳ್ಳೇ? ಕಣ್ಣಿಗೆ ಕಟ್ಟಿದಂತಿರುವ ಈ ವಸ್ತುಗಳು ಹೇಗೆ ಸುಳ್ಳಾಗಲು ಸಾಧ್ಯ? ಸುಳ್ಳಾದರೆ ಶಂಕರರಿಗೂ ಶೂನ್ಯವಾದಿಗಳಾದ ಬೌದ್ಧರಿಗೂ ಏನು ವ್ಯತ್ಯಾಸ? ಇದಕ್ಕೆ ಭಗವಾನ್ ಶಂಕರರು ಹೀಗೆ ಸಮಾಧಾನ ನೀಡುತ್ತಾರೆ.

**ಸಂಸಾರಃ ಸ್ವಪ್ನತುಲ್ಯೋ ಹಿ ರಾಗದ್ವೇಷಾದಿ ಸಂಕುಲಃ ।**
**ಸ್ವಕಾಲೇ ಸತ್ಯವತ್‌ಭಾತಿ ಪ್ರಬೋಧೇ ಸತಿ ಅಸದ್ಭವೇತ್ ॥**
**ತಾವತ್ ಸತ್ಯಂ ಜಗದ್ಭಾತಿ ಶುಕ್ತಿಕಾರಜತಂ ಯಥಾ ।**
**ಯಾವನ್ನ ಜ್ಞಾಯತೇ ಬ್ರಹ್ಮ ಸರ್ವಾಧಿಷ್ಠಾನಮದ್ವಯಮ್ ॥**

ಎಂದರೆ ಶಂಕರರ ಪ್ರಕಾರ ಅವಿದ್ಯೆಯ ಚೌಕಟ್ಟಿನೊಳಗೆ ಭೇದಭೂಯಿಷ್ಠವಾದ ಈ ಸಂಸಾರಕ್ಕೆ ಸತ್ಯತೆಯಿದೆ. ಆದರೆ ಅದು ಶಾಶ್ವತವಲ್ಲ. ಸ್ವಪ್ನದಲ್ಲಿರುವವರೆಗೆ ನಮಗೆ ಈ ಸ್ವಪ್ನವು ನಿಜವಾಗಿಯೇ ಇರುತ್ತದೆ. ಸ್ವಪ್ನಭಂಗವಾಗಿ ನಮಗೆ ಎಚ್ಚರವಾದಾಗ ಮಾತ್ರ ಅದು ಸುಳ್ಳಾಗುವುದು. ಹಾಗೆಯೇ ಕಪ್ಪೆಚಿಪ್ಪನ್ನು ಕಾಣದಿರುವವರೆಗೆ ಅದರ ಮೇಲೆ ನಮಗೆ ತೋರುವ ಬೆಳ್ಳಿ ನಿಜವಾಗುತ್ತದೆ. ಆದರೆ ಅದರ ಯಥಾರ್ಥಜ್ಞಾನ ಬಂದಾಗ ರಜತವು ಸುಳ್ಳಾಗುತ್ತದೆ. ಅದೇ ರೀತಿ ಎಲ್ಲಿಯವರೆಗೆ ನಮಗೆ ಈ ಜಗತ್ತಿನ ಅಧಿಷ್ಠಾನವಾದ ಅದ್ವೈತ ಬ್ರಹ್ಮದ ಜ್ಞಾನವಿಲ್ಲವೋ ಅಲ್ಲಿಯವರೆಗೆ ಈ ಜಗತ್ತು ವ್ಯಾವಹಾರಿಕವಾಗಿ ನಮ್ಮ ವ್ಯಾವಹಾರಿಕ ಅಗತ್ಯಗಳನ್ನು ಪೂರೈಸುವಷ್ಟರ ಮಟ್ಟಿಗೆ ನಿಜ. ಆದರೆ ಬ್ರಹ್ಮಸಾಕ್ಷಾತ್ಕಾರವಾಯಿತೆಂದರೆ ಈ ಪ್ರಪಂಚವೂ ನಮಗೆ ಸುಳ್ಳಾಗುತ್ತದೆ. ಆದ್ದರಿಂದ ಶಂಕರರ ಸಿದ್ಧಾಂತವು ಬೌದ್ಧರ ಶೂನ್ಯವಾದಕ್ಕಿಂತಲೂ ಎರಡು ಅರ್ಥಗಳಲ್ಲಿ ಭಿನ್ನ. (1) ಈ ಪ್ರಪಂಚಕ್ಕೆ ಅದು ತಾತ್ಕಾಲಿಕವಾಗಿದ್ದರೂ ಒಂದು ಅಸ್ತಿತ್ವವಿದೆ. ಅದೇನೂ ಗಗನ ಕುಸುಮದಂತೆ, ಶಶವಿಷಾಣದಂತೆ (ಮೊಲದ ಕೊಂಬು), ಬಂಜೆಯ ಮಗನಂತೆ (ವಂಧ್ಯಾಪುತ್ರ), ಬಿಸಿಯ ಮಂಜುಗಡ್ಡೆಯಂತೆ, ರೆಕ್ಕೆಯುಳ್ಳ ಕುದುರೆಯಂತೆ ಅಸತ್ ಎಂದರೆ ಶಾಶ್ವತವಾಗಿ ಇಲ್ಲದಿರುವ ವಸ್ತುವಲ್ಲ. ಅದು ನಮ್ಮೆಲ್ಲರ ಅನುಭವಕ್ಕೆ ತಾತ್ಕಾಲಿಕವಾಗಿಯಾದರೂ ದತ್ತವಾಗಿರುವುದರಿಂದ ಅದು ಸದ್ಯಕ್ಕೆ

ನಿಜ. (2) ಪ್ರಪಂಚವು ತನ್ನ ತಾತ್ಕಾಲಿಕ ಅಸ್ತಿತ್ವಕ್ಕೆ ಬ್ರಹ್ಮವೆಂಬ ಅಧಿಷ್ಠಾನವನ್ನು ಅವಲಂಬಿಸಿದೆ. ಹಗ್ಗದ ಆಧಾರವಿಲ್ಲದೇ ಹಾವಿನ ತೋರ್ಪಡಿಕೆ ಸಾಧ್ಯವಿಲ್ಲ. ಪರದೆಯೆಂಬ ಸ್ಥಿರ ಹಿನ್ನೆಲೆಯಿಲ್ಲದೇ ಚಲನಚಿತ್ರ ದೃಶ್ಯಗಳು ಸಾಧ್ಯವಿಲ್ಲ. ತೋರ್ಪಡಿಕೆಯೂ ಕೂಡ ತನ್ನ ತೋರ್ಪಡಿಕೆಗೆ ಒಂದು ಆಧಾರವನ್ನು ಅವಲಂಬಿಸುತ್ತದೆ. ಆದ್ದರಿಂದ ಬ್ರಹ್ಮವೆಂಬ ಅಧಿಷ್ಠಾನವಿಲ್ಲದೇ ಪ್ರಪಂಚದ ತೋರ್ಪಡಿಕೆ ಸಾಧ್ಯವಿಲ್ಲ. ಬೌದ್ಧರ ಪ್ರಕಾರ ಇಲ್ಲದಿರುವ ಶೂನ್ಯವು ಇರುವ ಪ್ರಪಂಚವಾಗಿ ತೋರಿದರೆ ಅದ್ವೈತಾ ಪ್ರಕಾರ ಇರುವ ಬ್ರಹ್ಮವು ಭೇದ ಪ್ರಪಂಚವಾಗಿ ತೋರುತ್ತದೆ.

ನಾವೀಗ ಎರಡು ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ. ಮನುಷ್ಯನ ಜೀವನ ಧ್ಯೇಯವು ತನ್ನನ್ನು ತಾನು ತಿಳಿದುಕೊಳ್ಳುವುದು. ಈ ಧ್ಯೇಯ ಸಾಧನೆಗೆ ಅಡಚಣೆ ಅವಿದ್ಯೆ ಅಥವಾ ಅಜ್ಞಾನ. ನಾವೀಗ ಅವಿದ್ಯೆಯನ್ನು ನಾಶಗೊಳಿಸುವ ಮೂಲಕ ಗುರಿಯನ್ನು ತಲುಪಲು ನೇರಸಾಧನವೆಂಬ ಮೂರನೇ ಪ್ರಶ್ನೆಯ ಬಗ್ಗೆ ಪ್ರಸ್ತಾಪಿಸಬೇಕಾಗಿದೆ. ಆಚಾರ್ಯರ ಪ್ರಕಾರ ಅವಿದ್ಯೆಯು ಅನಾದಿಯಾದ ಮಾತ್ರಕ್ಕೆ ಅದಕ್ಕೆ ಅಂತ್ಯವೇ ಇಲ್ಲವೆಂದರ್ಥವಲ್ಲ. ಮನುಷ್ಯನು ಇದನ್ನು ನಾಶಗೊಳಿಸಬಹುದು. ಕತ್ತಲೆಯು ಅದರ ವಿರುದ್ಧವಾದ ಬೆಳಕಿನಿಂದ ಹೇಗೋ ಹಾಗೆಯೇ ಅವಿದ್ಯೆಯೂ ಕೂಡ ಅದರ ವಿರುದ್ಧವಾದ ವಿದ್ಯೆ ಅಥವಾ ಜ್ಞಾನದಿಂದ ಮಾತ್ರ ನಾಶವಾಗುತ್ತದೆ. ಕರ್ಮವು ಅವಿದ್ಯೆಯನ್ನು ನಾಶಗೊಳಿಸಲಾರದು. ಏಕೆಂದರೆ ಕರ್ಮ ಮತ್ತು ಅವಿದ್ಯೆಗಳು ವಿರೋಧಿಗಳಲ್ಲ. ವಾಸ್ತವವಾಗಿ ಅವಿದ್ಯೆಯೇ ಕರ್ಮದ ಮೂಲ. ಆಚಾರ್ಯರ ಕೃತಿಗಳಲ್ಲಿ **'ಅವಿದ್ಯಾಕಾಮಕರ್ಮ'** ಎಂಬ ಪದ ಸಮುಚ್ಚಯವನ್ನು ನಾವು ಪದೇ ಪದೇ ಕಾಣಬಹುದು. ಎಂದರೆ ಮನುಷ್ಯನು ತಾನು ಪರಿಮಿತ (Finite, limited) ಎಂಬ ಅಜ್ಞಾನದಿಂದ ತನ್ನ ಪರಿಮಿತಿಯನ್ನು ನೀಗಿಕೊಳ್ಳಲು ಹಂಬಲಿಸುತ್ತಾನೆ. ಈ ಹಂಬಲವು ಅವನನ್ನು ಕರ್ಮಕ್ಕೆ ಪ್ರೇರೇಪಿಸುತ್ತದೆ. ಆದರೆ ಅವನ ಈ ಕರ್ಮಾಚರಣೆ ಪುನಃ ಅವನನ್ನು ಬಂಧನಕ್ಕೆ ತಳ್ಳುತ್ತದೆ. ಈ ಬಂಧನವನ್ನು ಕಳಚಿಕೊಳ್ಳಲು ಅವನು ಮತ್ತೆ ಹೊಸಕರ್ಮಗಳನ್ನು ಮಾಡಿ ಪುನಃ ಬಂಧನಕ್ಕೆ ಸಿಲುಕುತ್ತಾನೆ. ಹೀಗೆ ಕರ್ಮದ ವಿಷವರ್ತುಲವು (Vicious Circle) ವು ಮುಂದುವರಿಯುತ್ತಲೇ ಇರುತ್ತದೆ.

**ಅವಿರೋಧಿತಯಾ ಕರ್ಮ ನಾವಿದ್ಯಾಂ ವಿನಿವರ್ತಯೇತ್ ।**
**ವಿದ್ಯಾಽವಿದ್ಯಾಂ ನಿಹಂತೇವ ತೇಜಸ್ತಿಮಿರ ಸಂಘವತ್ ॥3 ॥**

ಶಂಕರರು ಇನ್ನೂ ಒಂದು ಉಪಮೆಯನ್ನು ನೀಡುತ್ತಾರೆ. **'ಪಾಕಸ್ಯ ವಹ್ನಿವತ್ ಜ್ಞಾನಂ ವಿನಾ ಮೋಕ್ಷೋ ನ ಸಿಧ್ಯತಿ"** (2) ಎಂದರೆ ಅಗ್ನಿಯಿಲ್ಲದೇ ಪಾಕವು ಹೇಗೋ ಹಾಗೆಯೇ ಜ್ಞಾನವಿಲ್ಲದೇ ಮೋಕ್ಷವು ಸಿದ್ಧಿಸುವುದಿಲ್ಲ. ಮನುಷ್ಯನಿಗೆ ಆಧ್ಯಾತ್ಮಿಕ ಪರಿಪಕ್ವತೆ ಬರುವುದು ಜ್ಞಾನದಿಂದಲೇ ಎಂಬುದನ್ನು ಶಂಕರರು ಸರಳಸುಂದರವಾದ ಉಪಮೆಯ ಮೂಲಕ ವಿವರಿಸುತ್ತಾರೆ.

ಈ ಸಂದರ್ಭದಲ್ಲಿ ನಮಗಿಲ್ಲಿ ಇನ್ನೆರಡು ಪ್ರಶ್ನೆಗಳು ಎದುರಾಗುತ್ತವೆ. ಜ್ಞಾನವೇ ಅಜ್ಞಾನವನ್ನು ತೊಲಗಿಸುವುದು ಎಂದು ಹೇಳಲಾಗಿದೆ. (1) ಯಾವ ವಸ್ತುವಿನ ಜ್ಞಾನವು ಅಜ್ಞಾನವನ್ನು ನಾಶಮಾಡುತ್ತದೆ? (1) ಈ ಜ್ಞಾನವು ಯಾರಲ್ಲಿ ಉದಯಿಸಬೇಕು? ನೋಡುವುದಕ್ಕೆ ಬಾಲಿಶವೆನಿಸಿದರೂ ಈ ಪ್ರಶ್ನೆಗಳಿಗೆ ಹಿನ್ನೆಲೆಯಿಲ್ಲದಿಲ್ಲ. ಅದಕ್ಕೊಂದು ದೀರ್ಘ ಹಿನ್ನೆಲೆಯೇ ಇದೆ. ಎಲ್ಲವೂ ಆತ್ಮವಾದರೆ ಯಾವನೋ ಒಬ್ಬನಿಗೆ ಜ್ಞಾನಬಂದರೆ ಉಳಿದೆಲ್ಲರೂ ಜ್ಞಾನಿಗಳೇ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ನೋಡಿದಾಗ ಈ ಪ್ರಶ್ನೆಗಳು ತಮ್ಮ ಅರ್ಥವನ್ನು ಪಡೆದುಕೊಳ್ಳುತ್ತವೆ. ಅದೇನೇ ಇರಲಿ, ಈ ಪ್ರಶ್ನೆಗಳಿಗೆ ನಾವು ಹೀಗೆ ಉತ್ತರಿಸಬಹುದು. ಮೊದಲ ಪ್ರಶ್ನೆಯೇನೆಂದರೆ ಯಾವ ವಸ್ತುವಿನ ಜ್ಞಾನವು ನಮ್ಮ ಅಜ್ಞಾನವನ್ನು ನಾಶ ಮಾಡುತ್ತದೆ ಎಂಬುದು ಯಾವ ವಸ್ತುವಿನ ಬಗ್ಗೆ ನಮಗೆ ಅಜ್ಞಾನವಿದೆಯೋ ಆ ವಸ್ತುವಿನ ಜ್ಞಾನವು ಮಾತ್ರ ನಮ್ಮ ಅಜ್ಞಾನವನ್ನು ನಾಶಗೊಳಿಸುತ್ತದೆ. ವಸ್ತುವೊಂದರ ಅಜ್ಞಾನವನ್ನು ಬೇರೊಂದು ವಸ್ತುವಿನ ಜ್ಞಾನವು ನಿವಾರಿಸಲಾರದು. ನಮಗೆ ಅಜ್ಞಾನವಿರುವುದು ನಮ್ಮ ನೈಜಸ್ವರೂಪದ ಬಗ್ಗೆ. ಆದ್ದರಿಂದ ನಮ್ಮನ್ನು ಕುರಿತ ನೈಜಜ್ಞಾನವು ಮಾತ್ರ ನಮ್ಮನ್ನು ಕುರಿತು ಅಜ್ಞಾನವನ್ನು ನಾಶಮಾಡುವುದು. ಇನ್ನು ಎರಡನೇ ಪ್ರಶ್ನೆ. ಜ್ಞಾನವು ಯಾರಲ್ಲಿ ಉದಯಿಸಬೇಕು? ಯಾರಲ್ಲಿ ಅಜ್ಞಾನವಿದೆಯೋ ಅವನಲ್ಲಿ ಮಾತ್ರ ಜ್ಞಾನ ಉದಯಿಸಬೇಕು. ಒಬ್ಬನ ಅಜ್ಞಾನವನ್ನು ಬೇರೊಬ್ಬನ ಜ್ಞಾನವು ನಾಶಮಾಡುವುದಿಲ್ಲ. ಬೇರೊಬ್ಬನ ಜ್ಞಾನವು ಅಜ್ಞಾನ ನಿರ್ಮೂಲನೆಗೆ ಎಷ್ಟೇ ಸಹಕಾರಿಯಾಗಿರಬಹುದು. ಆದರೆ ಜ್ಞಾನ ಉದಯಿಸಬೇಕಾಗಿರುವುದು ಅಜ್ಞಾನವಿರುವವನಲ್ಲಿ ಮಾತ್ರ. ಆದ್ದರಿಂದ ನಮ್ಮ ಅಜ್ಞಾನವು ತೊಲಗಬೇಕಿದ್ದರೆ ಜ್ಞಾನವು ನಮ್ಮಲ್ಲಿ ಉದಯಿಸಬೇಕೇ ಹೊರತು ಬೇರೊಬ್ಬರಲ್ಲಿ ಅಲ್ಲ. ಹೀಗೆ ಜ್ಞಾನದ ವಸ್ತುವೂ (Content) ನಾವೇ ಮತ್ತು ಅದರ ನೆಲೆಯೂ (Locus) ನಾವೇ.

ಇನ್ನು ನಾಲ್ಕನೆಯ ಪ್ರಶ್ನೆ. ಜ್ಞಾನವೆಂಬ ನೇರ ಸಾಧನವನ್ನು ಗಳಿಸಿಕೊಳ್ಳುವುದು ಹೇಗೆ? ಇದು ಯಾವ ಪ್ರಯತ್ನವೂ ಇಲ್ಲದೇ ತನಗೆ ತಾನೇ ಬರುವಂತಹುದಲ್ಲ. ಆಚಾರ್ಯರ ಪ್ರಕಾರ ಒಬ್ಬನು ಜ್ಞಾನದ ಅತ್ಯುನ್ನತ ಮಜಲಿಗೆ ಏರಿರಬೇಕಾದರೆ ಅವನು ಎರಡು ಹಂತಗಳನ್ನು ಹಾದುಹೋಗಬೇಕು. ಮೊದಲನೆಯದು preliminary ಎಂದರೆ ಪೂರ್ವಭಾವಿ ನೈತಿಕ ಹಂತ. ಇದಿಲ್ಲದೇ ಜ್ಞಾನ ವಿರಲಿ ಅದನ್ನು ಬೋಧಿಸುವ ಆಧ್ಯಾತ್ಮಿಕ ಗ್ರಂಥಗಳನ್ನು ಓದುವ ಅರ್ಹತೆಯೂ ನಮಗೆ ಬರುವುದಿಲ್ಲ. ಇದರ ಬಗ್ಗೆ ಭಗವಾನ್ ಶಂಕರರು ಮೊದಲ ಶ್ಲೋಕದಲ್ಲೇ ಎಚ್ಚರಿಸುತ್ತಾರೆ.

**ತಪೋಭಿಃ ಕ್ಷೀಣಪಾಪಾನಾಂ ಶಾಂತಾನಾಂ ವೀತರಾಗಿಣಾಮ್ ।**
**ಮುಮುಕ್ಷೂಣಾಮಪೇಕ್ಷ್ಯೋಽಯಂ ಆತ್ಮಬೋಧೋ ವಿಧೀಯತೇ ॥**

ಎಂದರೆ "ಯಾರು ತಪಸ್ಸಿನಿಂದ ತಮ್ಮೆಲ್ಲ ಪಾಪಗಳನ್ನು ಕಳೆದುಕೊಂಡಿರುವರೋ, ಯಾರು ಶಾಂತರಾಗಿರುವರೋ, ಯಾರು ರಾಗವನ್ನು ತೊರೆದಿರುವರೋ ಮತ್ತು ಯಾರಿಗೆ ಮುಕ್ತಿ ಬೇಕೆಂಬ ತೀವ್ರ ಹಂಬಲವಿದೆಯೋ ಅವರಿಗೆ ಮಾತ್ರ ಆತ್ಮಬೋಧವು ವಿಧಿಸಲ್ಪಡುತ್ತದೆ".

ಆದ್ದರಿಂದ ನೈತಿಕ ಪರಿಪೂರ್ಣತೆಯಿಲ್ಲದೇ ಆಧ್ಯಾತ್ಮ ಸಾಧ್ಯವಿಲ್ಲ. ಆಧ್ಯಾತ್ಮವಿರಲಿ, ಲೌಕಿಕ ಧ್ಯೇಯ ಸಾಧನೆಯೂ ಸಾಧ್ಯವಿಲ್ಲ.

ಈ ಪೂರ್ವಭಾವಿ ಹಂತವನ್ನು ಸಾಧಿಸಿಕೊಂಡ ನಂತರ ಸಾಧಕನು ಆತ್ಮಬೋಧದಂತಹ ವೇದಾಂತ ಗ್ರಂಥಗಳನ್ನು ಯೋಗ್ಯಗುರುವಿನ ಚರಣದಡಿಯಲ್ಲಿ ಅಧ್ಯಯನ ಮಾಡಲು ಸಮರ್ಥನಾಗುತ್ತಾನೆ. ಸದ್ಗುರುವಿನಿಂದ ಉಪದೇಶವನ್ನು ಪಡೆಯುತ್ತಾನೆ (ಶ್ರವಣ). ಅನಂತರ ತನಗೆ ಸಹಜವಲ್ಲದಿರುವುದನ್ನು ತನ್ನಿಂದ ಬೇರ್ಪಡಿಸಲು

ಅವನು ವಿಚಾರ, ಯುಕ್ತಿ, ವಿಶ್ಲೇಷಣೆ, ತರ್ಕ ಅಥವಾ ಮನನವನ್ನು ಅನುಸರಿಸುತ್ತಾನೆ. ಶಂಕರರು ಇದಕ್ಕೆ ಮತ್ತೊಂದು ಸರಳ ಉಪಮೆಯನ್ನು ನೀಡುತ್ತಾರೆ. ಒನಕೆಯ ತಾಡನದಿಂದ ಅಥವಾ ಕುಟ್ಟುವಿಕೆಯಿಂದ ಒಬ್ಬನು ಅಕ್ಕಿ ಮತ್ತು ಹೊಟ್ಟನ್ನು ಬೇರ್ಪಡಿಸುವಂತೆ ಸಾಧಕನು ತನ್ನ ವಿಚಾರದಿಂದ ನೈಜ ಆತ್ಮವನ್ನು ಅನಾತ್ಮದಿಂದ ಬೇರೆಂದು ತಿಳಿಯುತ್ತಾನೆ.

**ವುಪುಸ್ತುಷಾದಿಭಿಃ ಕೋಶೈರ್ಯುಕ್ತಂ ಯುಕ್ತ್ಯವಘಾತತಃ ।**
**ಆತ್ಮಾನಮಾಂತರಂ ಶುದ್ಧಂ ವಿವಿಚ್ಯಾತ್ತಂಡುಲಂ ಯಥಾ ॥**

ಇಲ್ಲಿ ಯುಕ್ತಿ ಅಥವಾ ವಿಚಾರವೆಂದರೆ ನಮಗಿಷ್ಟ ಬಂದಂತೆ ಆಲೋಚಿಸುವುದಲ್ಲ. ಸ್ವೇಚ್ಛಾಲೋಚನೆಯೇ ಯುಕ್ತಿಯಲ್ಲ. ಯುಕ್ತಿಯೆಂದರೆ ಶ್ರುತಿಗೆ ವಿರುದ್ಧವಲ್ಲದ ಆಲೋಚನೆ. (ಶ್ರುತ್ಯನುಕೂಲತರ್ಕ). ಶ್ರುತಿಯ ಮಾರ್ಗದರ್ಶನವಿಲ್ಲದೇ ನಾವು ಮಾಡುವ ತರ್ಕವೆಲ್ಲವೂ ನಮ್ಮನ್ನು ಕತ್ತಲೆಗೇ ಕೊಂಡೊಯ್ಯುವುದು. ಇದೇನೇ ಇರಲಿ, ಗುರು ಉಪದೇಶಿಸಿದ ಮಹಾವಾಕ್ಯಗಳನ್ನು ಕುರಿತಂತೆ ಶ್ರುತ್ಯನುಕೂಲ ವಿಚಾರವು ನಮ್ಮೆಲ್ಲ ಸಂದೇಹಗಳನ್ನೂ ನಿವಾರಿಸುತ್ತದೆ. ಸಂಶಯಗಳು ನಾಶವಾಯಿತೆಂದರೆ ನಮಗೆ ಚಿತ್ತೈಕಾಗ್ರತೆ ಬರುತ್ತದೆ. ಇದಕ್ಕೆ ನಿದಿಧ್ಯಾಸನ ಅಥವಾ ಧ್ಯಾನವೆಂದು ಹೆಸರು. ಈ ಧ್ಯಾನವು ಕೊನೆಗೆ ಸಾಧಕನನ್ನು **ಆತ್ಮಬೋಧಕ್ಕೆ** ಒಯ್ಯುತ್ತದೆ.

ಹೀಗೆ ಜ್ಞಾನಾಗ್ನಿಯು ನೈತಿಕ ಪರಿಪೂರ್ಣತೆ ಹಾಗೂ ಶ್ರವಣಮನನ ಧ್ಯಾನಗಳಿಂದ ಹೊತ್ತಿಕೊಳ್ಳುತ್ತಿದೆ. ಇದರಿಂದ ಸಾಧಕನ ಕಶ್ಮಲಗಳೆಲ್ಲವೂ ನಾಶವಾಗಿ ಅವನಿಗೆ ಸತ್ವವು ಪುಟವಿಕ್ಕಿದ ಚಿನ್ನದಂತೆ ಪ್ರಕಾಶಿಸುತ್ತದೆ. ಹೇಗೆ ಕರಟಕಾಯಿ ನೀರಿನ ಕಶ್ಮಲಗಳೆಲ್ಲವನ್ನು ಸೆಳೆದುಕೊಂಡು ಕೊನೆಗೆ ಏನೂ ಇಲ್ಲವಾಗುವುದೋ (ಕತಕರೇಣು ವತ್–5) ಹಾಗೆಯೇ ಜೀವವೂ ಕೂಡ ಧ್ಯಾನಾಭ್ಯಾಸಗಳಿಂದ ತನ್ನ ಅಜ್ಞಾನವನ್ನು ಕಳೆದುಕೊಂಡು ಕೊನೆಗೆ ತನ್ನ ಜೀವತ್ವವನ್ನು ತೊರೆದು ಬ್ರಹ್ಮವಾಗಿ ಪ್ರಕಾಶಿಸುತ್ತದೆ. ಇದೇ ಮೋಕ್ಷ.

ಇಲ್ಲಿ ನಮ್ಮ ನಿಜಸ್ವರೂಪವು ನಮಗೆ ಹೊಸದಾಗಿ ಸಿಕ್ಕಿತು ಎನ್ನುವ ಹಾಗಿಲ್ಲ. ಏಕೆಂದರೆ ಅಲ್ಲಿ ನಾವು ನಾವಾಗಿರದ ಇನ್ನಾವುದೇ ವಸ್ತುವನ್ನು ಅಥವಾ ಇನ್ನಾವುದೋ ಲೋಕವನ್ನು ಹೊಸದಾಗಿ ಪಡೆಯುತ್ತಿಲ್ಲ. ಇಲ್ಲಿ ನಮ್ಮ ನೈಜಜ್ಞಾನಕ್ಕೆ ಅಡ್ಡಿಯಾಗಿರುವ ಅವಿದ್ಯೆಯನ್ನು ಮಾತ್ರ ನಾಶಮಾಡಿ ತನ್ಮೂಲಕ ನಾವು ಮೂಲತಃ ಏನಾಗಿದ್ದೇವೋ ಅದನ್ನು ತಿಳಿಯುತ್ತಿದ್ದೇವೆ. ಈ ಅವಿದ್ಯೆಯು ನಾಶವಾದಾಗ ಕಾಲದಲ್ಲಿ ಆತ್ಮವು ಹೊಸದಾಗಿ ಪ್ರಾಪ್ತವಾದಂತೆ ತೋರುವುದೇ ಹೊರತು ಹೊಸದಾಗಿ ಪ್ರಾಪ್ತವಾಗುವುದಿಲ್ಲ. ಏಕೆಂದರೆ ಜಗತ್ತಿನಲ್ಲಿ ಅದು ಎಲ್ಲಿ ವಸ್ತುಗಳಿಗಿಂತಲೂ ನಮಗೆ ಅತ್ಯಂತ ಸಮೀಪವಾಗಿರುವ ವಸ್ತು. ನಾವೇ ಆಗಿರುವ ವಸ್ತು, ಅವಿದ್ಯೆಯಿಂದ ಅದು ದೂರವಾದಂತೆ ಕಾಣುತ್ತದೆ. ಇದು ನಮ್ಮ ಕತ್ತಿನಲ್ಲಿರುವ ಸ್ವರ್ಣಮಾಲೆಯನ್ನು ನಾವು ಬೇರೆಲ್ಲೋ ಹುಡುಕುತ್ತಿದ್ದು ಅದನ್ನು ಒಬ್ಬ ಹಿತೈಷಿಯ ಸಹಾಯದಿಂದ ನಮ್ಮ ಕತ್ತಿನಲ್ಲೇ ಕಾಣುವಂತೆ. ಇಲ್ಲಿ ಹೊಸದಾಗಿ ಲಭಿಸುವುದು ವಸ್ತುವಲ್ಲ, ಆ ವಸ್ತುವನ್ನು ಕುರಿತ ಜ್ಞಾನ. ಆ ವಸ್ತುವು ಮೊದಲೂ ಇತ್ತು, ಈಗಲೂ ಇದೆ ಮತ್ತು ಮುಂದೆಯೂ ಇರುತ್ತದೆ. ಆದರೆ ಅದಿದೆಯೆಂದು ನಮಗೆ ತಿಳಿದಿದ್ದು ಈಗ ಮಾತ್ರ.

**ಆತ್ಮಾ ತು ಸತತಂ ಪ್ರಾಪ್ತಃ ಅಪ್ಯಪ್ರಾಪ್ತವತ್ ಅವಿದ್ಯಯಾ ।**
**ತನ್ನಾಶೇ ಪ್ರಾಪ್ತವತ್ ಭಾತಿ ಸ್ವಕಂಠಾಭರಣಂ ಯಥಾ ।**

ಈ ಸ್ಥಿತಿಯಲ್ಲಿ ಸಾಧಕನಿಗೆ ತಾನು ಪರಮಾತ್ಮನಿಗಿಂತ ಬೇರೆಯಲ್ಲವೆಂಬ ಭಾವ ಬರುತ್ತದೆ. ಅವನು ಎಲ್ಲವನ್ನು ತನ್ನೊಳಗೇ ಕಾಣುತ್ತಾನೆ (46–47), ಎಲ್ಲ ಜೀವಗಳೊಡನೆ ತಾದಾತ್ಮ್ಯ ಗೊಳಿಸಿಕೊಂಡು ಅವುಗಳ ಸುಖದುಃಖಗಳನ್ನು ಹಂಚಿಕೊಳ್ಳುತ್ತಾನೆ. ಇದಕ್ಕೆ ಸರ್ವಾತ್ಮಭಾವ ಮತ್ತು ಜೀವನ್ಮುಕ್ತಿಯೆಂದು ಹೆಸರು. ಜೀವನ್ಮುಕ್ತನಿಗೆ ಶರೀರವೇನೋ ಇರುತ್ತದೆ. ಆದರೆ ಅದು ಅವನ ಮುಕ್ತಸ್ಥಿತಿಗೆ ಭಂಗವನ್ನು ತರುವುದಿಲ್ಲ. ಏಕೆಂದರೆ ಅವನು ಅದಕ್ಕೆ ಅಂಟಿಕೊಂಡಿರುವುದಿಲ್ಲ. ಉಪಾಧಿಸ್ಥೋಽಪಿ ತದ್ಧರ್ಮೈರಲಿಪ್ತೋ ವ್ಯೋಮವನ್ಮುನಿ:(50), ಆಚಾರ್ಯರು ಮುಕ್ತನ ಈ ಸಾಧನೆಯನ್ನು ವಿವರಿಸುವಲ್ಲಿ ಇಡೀ ರಾಮಾಯಣಕ್ಕೆ ಒಂದೇ ಒಂದು ಶ್ಲೋಕದಲ್ಲಿ ಒಂದು ವ್ಯಕ್ತಿನಿಷ್ಠ ತಿರುವನ್ನು ನೀಡುತ್ತಾರೆ.

**ತೀರ್ತ್ವಾ ಮೋಹಾರ್ಣವಂ ಹತ್ವಾ ರಾಗದ್ವೇಷಾದಿರಾಕ್ಷಸಾನ್ ।**
**ಯೋಗೀ ಶಾಂತಿ ಸಮಾಯುಕ್ತ ಆತ್ಮಾರಾಮೋ ವಿರಾಜತೇ ॥49॥**

ಇಲ್ಲಿ ಸಮುದ್ರವು ಅಜ್ಞಾನದ ಸಂಕೇತವಾದರೆ ರಾಕ್ಷಸರು ರಾಗದ್ವೇಷಗಳ ಸಂಕೇತ. ಇವುಗಳನ್ನು ನಿಗ್ರಹಿಸಿದರೆ ಪ್ರತಿಯೊಬ್ಬನೂ ಬರಿಯ ರಾಮನಲ್ಲ, ಆತ್ಮಾರಾಮನಾಗಬಲ್ಲ. ಎಂದರೆ ಇಡೀ ವಿಶ್ವವನ್ನು ತನ್ನೊಳಗೆ ಕಂಡು ಆಂತರಿಕ ಆನಂದದಲ್ಲಿ ಮಗ್ನನಾಗಿರಬಲ್ಲ.

ಹೀಗೆ ಆಚಾರ್ಯರು ಮನುಷ್ಯ, ತನ್ಮೂಲಕ ಕುಟುಂಬ, ಸಮಾಜ, ದೇಶ ಮತ್ತು ಇಡೀ ವಿಶ್ವದಲ್ಲಿ ದಿವ್ಯಜೀವನವು ನೆಲೆಸಬಹುದಾದ ಮಾರ್ಗವನ್ನು ಸರಳ ಹಾಗೂ ಸುಂದರ ಶ್ಲೋಕಗಳಲ್ಲಿ ನಮಗೆ ಮನದಟ್ಟು ಮಾಡಿಕೊಟ್ಟಿದ್ದಾರೆ. ಜಗತ್ತಿನ ಇಂದಿನ ವಿಷಮಸ್ಥಿತಿಗೆ ಕಾರಣ ಬಾಹ್ಯವಲ್ಲ, ಆಂತರಿಕವಾದುದು. ಅದೇ ನಮ್ಮ ನೈಜಜ್ಞಾನದ ಕೊರತೆ. ನಾವೆಲ್ಲರೂ ಈ ಜ್ಞಾನವನ್ನು ಪಡೆದುಕೊಂಡರೆ, ಅಥವಾ ಅದನ್ನು ಪಡೆಯಲು ಪ್ರಯತ್ನಿಸಿದರೆ ಅಥವಾ ಕಡೆಯ ಪಕ್ಷ ಅದನ್ನು ಕುರಿತು ಅನುಸಂಧಾನವನ್ನಾದರೂ ಮಾಡಿದರೆ ಜಗತ್ತಿನಲ್ಲಿ ತಾಂಡವವಾಡುತ್ತಿರುವ ಈ ಪ್ರಕ್ಷುಬ್ಧತೆ ಸ್ತಬ್ಧವಾಗಬಹುದೇನೋ. ಏಕೆಂದರೆ ಇನ್ನೊಂದರ ಅರಿವಿನಲ್ಲಿ ಮಾತ್ರ ಭಯ ಉದ್ರೇಕ ಗಳುಂಟಾಗುವುದು. ಇನ್ನೊಂದೇ ಇಲ್ಲದಿದ್ದಾಗ ಎಲ್ಲವೂ ಬ್ರಹ್ಮಮಯ ವಾಗಿರುವಾಗ ಭಯವೇತರದು? ಕ್ಷಾತ್ರಬಲವು ಬಲವಲ್ಲ, ಬ್ರಹ್ಮ ಬಲವೇ ಬಲ. ಅಂತಹ ಕೆಲವು ಜ್ಞಾನಿಗಳು ಬಹುಶಃ ಪ್ರಪಂಚದಲ್ಲಿ ಇನ್ನು ಇರುವುದರಿಂದಲೇ ಈ ಪ್ರಪಂಚವು ಪೂರ್ಣವಾಗಿ ಪ್ರಲಯಸ್ಥಿತಿಗೆ ತಲುಪದಿರುವುದು.

**ಆಧಾರ ಗ್ರಂಥಗಳು**

1. ಶ್ರೀ ಶಂಕರರ ಆತ್ಮಬೋಧ
2. Sri Krishnaswamy, *Sri Shankaracharya- His Life and Times*, G.A.Naksh & Co. Madras.
3. Srinatha Datta, *Shankaracharya Indian Literature,* Calcutta 1911
4. Pundi Sheshadri, *Sri Shankaracharya* Thiruvankuru University, Thiruvananthapura,1949
5. TMP Mahadevan, *Shankaracharya* National Book Trust, Delhi, 1968

# ಸ್ವಾಮಿ ವಿವೇಕಾನಂದರು, ಸಾಮಾಜಿಕ ಸ್ವಾತಂತ್ರ್ಯ ಮತ್ತು ಕರ್ಮಯೋಗ

*ದಿವಾಕರ ಟಿ.ಎಸ್.
*ಸಂಶೋಧಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು – 570 006.

**ಪ್ರಬಂಧ ಸಾರ:–** ಈ ಜಗತ್ತಿನಲ್ಲಿ ವೈವಿಧ್ಯ ಮತ್ತು ಪಾಪಗಳು ಏಕೆ ಇವೆ ಎಂಬ ಪ್ರಶ್ನೆ ಜನಸಾಮಾನ್ಯನಿಗೆ ಅಸಂಗತವೇ ಸರಿ. ಏಕೆಂದರೆ ಅವನಿಗೆ ಈ ಪ್ರಪಂಚವು ಸತ್ಯ. ಆದಿಮಾನವನು ಉದ್ವೇಗಪರ. ಅವನು ಸರಿತಪ್ಪುಗಳನ್ನು ವಿವೇಚಿಸಿದೇ ತನಗೆ ತೋಚಿದನ್ನು ಮಾಡುತ್ತಿದ್ದ. ಅವನು ತನ್ನ ಈ ಸ್ವಭಾವನ್ನು ದೇವತೆಗಳಿಗೂ ಆರೋಪಿಸಿದ. ಅವನ ದೇವತೆಗಳೂ ಕೂಡ ಉದ್ವೇಗಜೀವಗಳು ಮತ್ತು ಸ್ವೇಚ್ಛಾವರ್ತಿಗಳಾದರು. ಆದಿಮಾನವನ ಈ ಸ್ವಭಾವಕ್ಕೆ ಕಾರಣವೇನೆಂದು ಯಾರಿಗೂ ತಿಳಿದಿರಲಿಲ್ಲ. ಏಕೆಂದರೆ ಆಗ ಪ್ರಶ್ನಿಸುವ ಅಭ್ಯಾಸವಿರಲಿಲ್ಲ.

ಆದರೆ ಈ ಗುರಿಯನ್ನು ಸಾಧಿಸಲು ಕೆಲವು ಆಧ್ಯಾತ್ಮಿಕ ಸಾಧನಗಳು ಅಗತ್ಯ, ವಿವೇಕಾನಂದರು ಕರ್ಮಯೋಗ, ಭಕ್ತಿಯೋಗ, ರಾಜಯೋಗ, ಮತ್ತು ಜ್ಞಾನಯೋಗ ಎಂಬ ನಾಲ್ಕು ಸಾಧನಗಳನ್ನು ನಮ್ಮ ಮುಂದಿಡುತ್ತಾರೆ ಎಂದರೆ, ಅವರ ಪ್ರಕಾರ ಒಬ್ಬನು ಒಲವು ಮತ್ತು ಸಂಸ್ಕಾರಗಳಿಗೆ ಅನುಸಾರವಾಗಿ ತನ್ನ ಆಧ್ಯಾತ್ಮಿಕ ಗುರಿಯನ್ನು ತಲುಪಲು ಯಾವುದೇ ಮಾರ್ಗವನ್ನು ತಲುಪಬಹುದೆಂದರ್ಥ. ಪ್ರಪಂಚದ ಎಲ್ಲಾ ಧರ್ಮಗಳು ಈ ನಾಲ್ಕು ಯೋಗಗಳನ್ನು ಒಂದಲ್ಲ ಒಂದು ರೀತಿ ಒಪ್ಪಿಕೊಂಡಿವೆ ಎಂಬುದು ವಿವೇಕಾನಂದರ ಅಭಿಪ್ರಾಯ. ವಿವೇಕಾನಂದರ ಪ್ರಕಾರ ಧರ್ಮ ಶಬ್ದವು ಯಾವುದೇ ನಿರ್ದಿಷ್ಟ ಪಂಥ ಅಥವಾ ಮತ ಎಂಬ ಸಂಕುಚಿತ ಅರ್ಥವನ್ನು ನೀಡುವುದಿಲ್ಲ. ಅದರ ಅರ್ಥಪರಿಧಿಯು ವಿಶಾಲವಾದುದು. ಸಾಕ್ಷಾತ್ಕಾರದ ಗುರಿಯನ್ನು ತಲುಪಲು ಸಾಧನವಾಗಿರುವ ಯಾವುದೇ ಪಥವನ್ನು ಧರ್ಮವೆನ್ನಬಹುದು. ಈ ಅರ್ಥದಲ್ಲಿ ವಿವೇಕಾನಂದರ ಪ್ರಕಾರ ಧರ್ಮವೆಂದರೆ ಆಧ್ಯಾತ್ಮಿಕ ಗುರಿಯೂ ಹೌದು ಮತ್ತು ಆ ಗುರಿಯನ್ನು ತಲುಪುವ ಸಾಧನವೂ ಹೌದು.

ಈ ಜಗತ್ತಿನಲ್ಲಿ ವೈವಿಧ್ಯ ಮತ್ತು ಪಾಪಗಳು ಏಕೆ ಇವೆ ಎಂಬ ಪ್ರಶ್ನೆ ಜನಸಾಮಾನ್ಯನಿಗೆ ಅಸಂಗತವೇ ಸರಿ. ಏಕೆಂದರೆ ಅವನಿಗೆ ಈ ಪ್ರಪಂಚವು ಸತ್ಯ. ಆದಿಮಾನವನು ಉದ್ವೇಗಪರ. ಅವನು ಸರಿತಪ್ಪುಗಳನ್ನು ವಿವೇಚಿಸಿದೇ ತನಗೆ ತೋಚಿದನ್ನು ಮಾಡುತ್ತಿದ್ದ. ಅವನು ತನ್ನ ಈ ಸ್ವಭಾವನ್ನು ದೇವತೆಗಳಿಗೂ ಆರೋಪಿಸಿದ. ಅವನ ದೇವತೆಗಳೂ ಕೂಡ ಉದ್ವೇಗಜೀವಗಳು ಮತ್ತು ಸ್ವೇಚ್ಛಾವರ್ತಿಗಳಾದರು. ಆದಿಮಾನವನ ಈ ಸ್ವಭಾವಕ್ಕೆ ಕಾರಣವೇನೆಂದು ಯಾರಿಗೂ ತಿಳಿದಿರಲಿಲ್ಲ. ಏಕೆಂದರೆ ಆಗ ಪ್ರಶ್ನಿಸುವ ಅಭ್ಯಾಸವಿರಲಿಲ್ಲ.

ಆದರೆ ಕ್ರಮೇಣ ಮನುಷ್ಯನೊಳಗೆ ನೈತಿಕಪ್ರಜ್ಞೆಯು ಬೆಳೆಯಲು ಪ್ರಾರಂಭವಾಯಿತು. ಅದನ್ನು ನಾವು ದೈವವಾಣಿಯೆಂದಾಗಲೀ ಅಥವಾ ಪೂರ್ವಶಿಕ್ಷಣದ ಫಲವೆಂದಾಗಲೀ ಕರೆಯಬಹುದು. ಇದು ಅವನ ಸಹಜ ಉದ್ವೇಗಗಳನ್ನು ನಿಗ್ರಹಿಸಲು ನೆರವಾಯಿತು. ಅದು ಅವನನ್ನು ನಿರ್ದಿಷ್ಟ ಕೆಲಸಗಳನ್ನು 'ಮಾಡು' ಅಥವಾ 'ಮಾಡಬೇಡ' ಎಂಬ ಆಲೋಚನೆಗೆ ಪ್ರಚೋದಿಸಿತು. ಅವನು ಮಾಡಬೇಕಾದ ಕೆಲಸವನ್ನು ಪ್ರವೃತ್ತಿಯೆಂದು ಮತ್ತು ಮಾಡಬಾರದ ಕೆಲಸವನ್ನು ನಿವೃತ್ತಿಯೆಂದು ಕರೆಯುತ್ತಾರೆ. ಪ್ರವೃತ್ತಿಯು ನಮ್ಮನ್ನು ಕರ್ತವ್ಯಗಳಲ್ಲಿ ತೊಡಗಿಸುತ್ತದೆ. ನಿವೃತ್ತಿಯು ಮಾಡಬಾರದ ಕೆಲಸಗಳಿಂದ ನಮ್ಮನ್ನು ಹಿಂತಿರುಗಿಸುತ್ತದೆ. ಆದರೆ ವಿವೇಕಾನಂದರ ಪ್ರಕಾರ ನಿಜವಾದ ಧರ್ಮ ಅಥವಾ ಆಧ್ಯಾತ್ಮವು ಪ್ರಾರಂಭಿಸುವುದು ನಿವೃತ್ತಿಯಲ್ಲಿ. ಅದು ನಾವು ಏನು ಮಾಡಬಾರದೆಂಬುದನ್ನು ತಿಳಿಸುತ್ತದೆ. ವಿವೇಕಾನಂದರ ಪ್ರಕಾರ ಮನುಷ್ಯನು ಬೆಳೆದದ್ದು ಈ ನಿವೃತ್ತಿಯಿಂದಲೇ.

ಈ ನೈತಿಕ ಪ್ರಜ್ಞೆಯ ಜೊತೆಗೆ ಕ್ರಮೇಣ ಮನುಷ್ಯನ ಹೃದಯದಲ್ಲಿ ಸ್ವಲ್ಪ ಪ್ರೀತಿಯೂ ಬೆಳೆಯಿತು. ಮೊದಲು ಇದು ಯಾವುದೋ ಒಂದು ಕುಲ ಅಥವಾ ಪಂಗಡದವರಿಗೆ ಮಾತ್ರ ಸೀಮಿತವಾಗಿತ್ತು. ಎಂದರೆ ಮನುಷ್ಯನು ತನ್ನ ಕುಲ ಅಥವಾ ಪಂಗಡದವರನ್ನು ಮಾತ್ರ ಪ್ರೀತಿಸುತ್ತಿದ್ದ. ಅದರಂತೆ ಅವನ ದೇವರು ಅವನ ಕುಲ ಮತ್ತು ಪಂಗಡದವರನ್ನು ಮಾತ್ರ ರಕ್ಷಿಸಿದ. ಕುಲಭಾವನೆಯು ಬೆಳೆಯುತ್ತಿದ್ದಂತೆ ಸಣ್ಣಸಣ್ಣ ಸಾಮೂಹಿಕ ಸಂಸ್ಥೆಗಳು ಏರ್ಪಟ್ಟು ಅವನಲ್ಲಿ ಕರ್ತವ್ಯದ ಭಾವನೆ ಬೆಳೆಯಿತು. "ಇಡೀ ಸಮಾಜವು ನಿಂತಿರುವುದು ಸಹನೆ ಮತ್ತು ನಿಗ್ರಹಗಳ ಮೇಲೆ, ಒಬ್ಬರೊಬ್ಬರನ್ನು ಸಹಿಸದೇ ಬದುಕುವುದು ಸಾಧ್ಯವಿಲ್ಲ" ಎಂಬ ಭಾವನೆಯು ಮೂಡಿಬಂತು.

ನೀತಿ ಪ್ರೀತಿಗಳೊಂದಿಗೆ, ಮೊದಲು ಸಂಕುಚಿತವಾಗಿದ್ದ ಮನುಷ್ಯನ ದೇವರ ಕಲ್ಪನೆಯೂ ವಿಶಾಲವಾಯಿತು. ಅವನು ಪ್ರತಿಯೊಂದು ದೇವತೆಯ ಗುಣ ಮತ್ತು ಕ್ರಿಯೆಗಳನ್ನು ಪರಿಶೀಲಿಸಿ ಅವುಗಳಲ್ಲಿ ಸೂಕ್ತವಾದುದನ್ನು ಸ್ವೀಕರಿಸಿ, ಅಸಮರ್ಪಕವಾದುದನ್ನು ತ್ಯಜಿಸಿದ. ಇದರ ಫಲವೇ ಭಗವಂತನ ಕಲ್ಪನೆ. ಭಗವಂತನ ಕಲ್ಪನೆಗೂ ದೇವತೆಗಳ ಕಲ್ಪನೆಗೂ ಇದ್ದ ವ್ಯತ್ಯಾಸವೆಂದರೆ ದೇವತೆಗಳಲ್ಲಿ ಇದ್ದ ದೋಷಗಳು ಭಗವಂತನಲ್ಲಿ ಇರಲಿಲ್ಲ. ಆತನು ಅನಂತ ಶಕ್ತಿಯಷ್ಟೇ ಅಲ್ಲ, ಅನಂತ ಪ್ರೀತಿಯ ಸಂಕೇತವೂ ಆದ.

ಆದರೆ ಇಲ್ಲೊಂದು ಪ್ರಶ್ನೆ ಎದ್ದಿತು. ಪ್ರೇಮನಿಧಿಯಾದ ಈ ದೇವರ ಪ್ರಪಂಚದಲ್ಲಿ ಕ್ರೌರ್ಯವೇಕೆಯಿದೆ? ಇದೊಂದು ಭಯಂಕರ ಪ್ರಪಂಚ. ಇಲ್ಲಿ ನಾವು ಬದುಕುವಂತೆಯೂ ಇಲ್ಲ, ಬದುಕದಿರುವಂತೆಯೂ ಇಲ್ಲ. ಇಂದ್ರಿಯಾತೀತ ಆದರ್ಶಗಳನ್ನು ತಲುಪಲು ನಮಗೆ ಈ ಪ್ರಪಂಚವೇ ಅಡ್ಡಿ. ಹಾಗೆಂದು ಈ ಆದರ್ಶಗಳನ್ನು ತೊರೆದರೆ ನಾವು ಮೃಗಗಳಾಗುತ್ತೇವೆ. ಹೀಗೆ ಆದರ್ಶ ಜೀವನ ಪ್ರಯಾಸಕರವಾದರೆ ಪ್ರಾಪಂಚಿಕ ಜೀವನ ಮೃಗಸ್ಥಿತಿಯಾಗುತ್ತದೆ. ಹೀಗೇಕೆ ಎಂಬುದಕ್ಕೆ ನಮಗೆ ವಿವರಣೆ ಇಲ್ಲ.

ಆದ್ದರಿಂದ ದೇವರ ಕಲ್ಪನೆಯು ಅತೃಪ್ತಿಕರವಾಯಿತು. ಅದು ಪ್ರೇಮ ಮತ್ತು ಕ್ರೌರ್ಯಗಳನ್ನು ಹಾಗೂ ಕರುಣೆ ಮತ್ತು ನ್ಯಾಯಗಳೆಂಬ ವಿರೋಧ ಲಕ್ಷಣಗಳನ್ನು ಒಳಗೊಂಡಿದೆ. ಇವು ಜೊತೆ–ಜೊತೆಯಿರಲು ಸಾಧ್ಯವಿಲ್ಲ. ನ್ಯಾಯಪರನು ಅನೇಕ ವೇಳೆ ಕ್ರೂರಿಯು ಮತ್ತು ದಯಾಶೀಲನು ಅನೇಕ ವೇಳೆ ಅನ್ಯಾಯಗಳನ್ನು ಮಾಡಬೇಕಾಗುತ್ತದೆ. ಈ ಜಗತ್ತಿನಲ್ಲಿ ಒಬ್ಬನು ಮತ್ತೊಬ್ಬನನ್ನು ಕೊಂದು ಬದುಕುತ್ತಾನೆ. ನಾವು ಬಿಡುವ ಪ್ರತಿಯೊಂದು ಉಸಿರು ಕೋಟ್ಯಾಂತರ ಜೀವಿಗಳನ್ನು ಕೊಲ್ಲುತ್ತದೆ. ದೇವರು ಕೃಪಾಸಾಗರನಾದರೆ ಅವನ ಮಕ್ಕಳಾದ ಈ ಜಂತುಗಳಿಗೆ ಈ ಕ್ರೌರ್ಯವೇಕೆ? ಆದ್ದರಿಂದ ವಿವೇಕಾನಂದರ ಪ್ರಕಾರ ಕರುಣೆ ಮತ್ತು

ನ್ಯಾಯಗಳು ಒಟ್ಟಿಗಿರಲಾರವು.

ಒಂದು ದೇಶದ ಬೆಳವಣಿಗೆಗೆ ಸಾಮಾಜಿಕ ಮತ್ತು ಧಾರ್ಮಿಕ – ಹೀಗೆ ಎರಡು ರೀತಿಯ ಸ್ವಾತಂತ್ರವು ಅಗತ್ಯ. ಇವುಗಳಲ್ಲಿ ಯಾವುದೊಂದೂ ಕೊರತೆಯಾದರೆ ಆ ದೇಶದ ಪ್ರಗತಿಯು ಸಾಧ್ಯವಿಲ್ಲ. ಭಾರತದಲ್ಲಿ ಸಾಮಾಜಿಕ ಸ್ವಾತಂತ್ರ್ಯದ ಕೊರತೆಯಿತ್ತು. ಇಲ್ಲಿ ಆಚಾರ ವಿಚಾರಗಳಲ್ಲಿ ತೀವ್ರ ಕಟ್ಟುಪಾಡಿತ್ತು. ಮೊಟ್ಟ ಮೊದಲ ರೈಲುಬಂಡಿಯನ್ನು ನೋಡಲು ಹೋದವನನ್ನು ಸಮಾಜವು ಬಹಿಷ್ಕರಿದ್ದುಂಟು. ಹೀಗೆ ಸಾಮಾಜಿಕ ಕಟ್ಟುಪಾಡುಗಳಿದ್ದರೂ ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿತ್ತು. ಒಬ್ಬನು ಯಾವುದೇ ಧರ್ಮವನ್ನು ಮೊರೆ ಹೋಗ ಬಹುದಿತ್ತು. ಆದ್ದರಿಂದಲೇ ಇಲ್ಲಿ ಆಸ್ತಿಕನಾಸ್ತಿಕರು, ವೈದಿಕಅವೈದಿಕರು ಜೊತೆ–ಜೊತೆಯಲ್ಲಿಯೇ ಸೌಹಾರ್ದದಿಂದ ವಾಸಿಸುತ್ತಿದ್ದುದು. ವಿದೇಶದಲ್ಲಿ ಸಾಮಾಜಿಕ ಸ್ವಾತಂತ್ರ್ಯವಿದೆಯಾದರೂ, ಧಾರ್ಮಿಕ ಸ್ವಾತಂತ್ರ್ಯವಿಲ್ಲ. ಅಲ್ಲಿ ಮನುಷ್ಯನು ಹೇಗೆ ಬೇಕಾದರೂ ಇರಬಹುದು, ತಿನ್ನಬಹುದು, ಅಥವಾ ವಸ್ತ್ರಗಳನ್ನು ಧರಿಸಬಹುದು. ಆದರೆ ಅವನ ಧರ್ಮವು ಮಾತ್ರ ಒಂದೇ ಆಗಿರಬೇಕು. ಅದನ್ನು ಜನರ ಮೇಲೆ ಬಲಾತ್ಕಾರವಾಗಿ ಹೇರಿದ ನಿದರ್ಶನಗಳುಂಟು. ಈ ಕಾರಣದಿಂದಲೇ ಯೂರೋಪ್‌ನಲ್ಲಿ ಧರ್ಮವು ಬೆಳೆಯಲಿಲ್ಲವೆಂದು ವಿವೇಕಾನಂದರ ಮತ. ವಿವೇಕಾನಂದರ ಪ್ರಕಾರ ಈ ಸಾಮಾಜಿಕ ಮತ್ತು ಧಾರ್ಮಿಕ ಶೃಂಖಲೆಗಳು ನಾಶವಾದಾಗ ಮಾತ್ರ ಜಗತ್ತಿನಲ್ಲಿ ಅದ್ಭುತ ಸಮಾಜದ ರಚನೆಯಾಗುವುದು. ವೇದಾಂತಕ್ಕೆ ಈ ಸಾಮರ್ಥ್ಯವುಂಟು. ಅದು ಮನುಷ್ಯನಿಗೆ ಸಾಮಾಜಿಕ ಹಾಗೂ ಧಾರ್ಮಿಕ ಸ್ವಾತಂತ್ರ್ಯಗಳೆರಡನ್ನೂ ನೀಡುತ್ತದೆ. ಅವನಲ್ಲಿರುವ ಪ್ರಚಂಡ ಆಧ್ಯಾತ್ಮಿಕ ಶಕ್ತಿಯನ್ನು ಅವನಿಗೆ ಮನದಟ್ಟು ಮಾಡಿಕೊಡುತ್ತದೆ.

ಇಲ್ಲಿ ಒಂದು ವಿಷಯವು ಗಮನಾರ್ಹ. ಕೆಲವೊಮ್ಮೆ ನಾವು ಬರಿ ಟೀಕೆಯನ್ನೇ ಸ್ವಾತಂತ್ರ್ಯವೆಂದು ಭಾವಿಸುವುದುಂಟು. ಅನೇಕವೇಳೆ ಇದು ಮತಾಂಧತೆಯಾಗಿ ಪರಿಣಮಿಸುತ್ತದೆ. ಆದರೆ ಇಂತಹ ಟೀಕೆಗಳಿಂದ ಯಾವುದೇ ಪ್ರಯೋಜನವಿಲ್ಲವೆಂದು ವಿವೇಕರ ಮತ. ಟೀಕೆಗಳು ಸಮಾಜದ ಲೋಪದೋಷಗಳನ್ನೇನೋ ಎತ್ತಿತೋರುತ್ತವೆ. ಆದರೆ ಆ ದೋಷಗಳನ್ನು ನಿವಾರಿಸುವ ಬಗೆಯನ್ನು ಸೂಚಿಸುವುದಿಲ್ಲ. ವಾಸ್ತವವಾಗಿ ಸಾಮಾಜಿಕ ಸಂಸ್ಥೆಯ ರಚನೆ ಒಂದು ದಿನದ ಕೆಲಸವಲ್ಲ. ಅದಕ್ಕೆ ಅನೇಕ ದಶಕಗಳೇ ಅಗತ್ಯ. ಒಂದು ಸಮಾಜದ ಕೆಡುಕನ್ನು ತೆಗೆಯಬೇಕಿದ್ದರೆ ನಾವು ಅದರ ಮೂಲಕ್ಕೇ ಹೋಗಬೇಕು. ಕಾರಣವು ನಾಶವಾಯಿತೆಂದರೆ ಕಾರ್ಯವೂ ಕೂಡ ತಾನಾಗಿಯೇ ನಾಶವಾಗುತ್ತದೆ. ಸಮಸ್ಯೆಯ ಮೂಲವನ್ನು ನಾಶಮಾಡುವ ಬಗೆಯನ್ನು ಅರಿತವರೇ ಮಹಾತ್ಮರು. ಇವರು ಜಗತ್ತಿಗೆ ಬಂದುದು, ಪೂರೈಸಲೆಂದೇ ಹೊರತು ಧ್ವಂಸಗೊಳಿಸಲು ಅಲ್ಲ (They came not to destroy but to fulfil). ಅನೇಕವೇಳೆ ಅವರ ಸಹನೆಯನ್ನು ನಾವು ದೌರ್ಬಲ್ಯವೆಂದು ಪರಿಗಣಿಸುತ್ತೇವೆ. ಆದರೆ ಅವರ ಹೃದಯದಲ್ಲಿದ್ದ ಅಪಾರವಾದ ಪ್ರೇಮಶಕ್ತಿ ನಮಗಿನ್ನೂ ಅರ್ಥವಾಗಿಲ್ಲ. ಅವರು ಜಗತ್ತಿನ ಎಲ್ಲ ಜೀವಿಗಳನ್ನೂ ತಮ್ಮ ಮಕ್ಕಳೆಂದು ಭಾವಿಸಿದರು. ಅವರು ಜನರನ್ನು ಅಂಜಿಸುವ ಮೂಲಕ ಸಮಾಜದ ಲೋಪದೋಷಗಳನ್ನು ತಿದ್ದಲಿಲ್ಲ. ಬದಲಾಗಿ ಕ್ಷಮೆಯ ಮೂಲಕ ಸಮಾಜವನ್ನು ಹಂತಹಂತವಾಗಿ ಉದ್ಧರಿಸಿದರು.

ಹೊಸದಾಗಿ ಏನನ್ನೂ ನಿರ್ಮಿಸಲು ಸಾಧ್ಯವಿಲ್ಲ, ಕೇವಲ ಬದಲಿಸಬಹುದಷ್ಟೇ. ಇದರ ಅರಿವು ಮಹಾತ್ಮರಿಗಿತ್ತು. ದೇವರ ಕಲ್ಪನೆಯು ಆಧುನಿಕ ಯುಗಕ್ಕೆ ಸರಿಹೊಂದುವುದಿಲ್ಲ ಎಂದು ದೇವರನ್ನು ಅವರು ತಿರಸ್ಕರಿಸಲಿಲ್ಲ. ಬದಲಾಗಿ ಅವರು ತಮ್ಮ ಅಂತರಾಳದಲ್ಲಿರುವ ಸತ್ಯವನ್ನು ಅರಸಲು ಪ್ರಯತ್ನಿಸಿದರು. ಇದರ ಫಲವೇ ವೇದಾಂತ ದರ್ಶನ. ಬಹುದೇವತೆಗಳಿಗಿಂತಲೂ, ಸೃಷ್ಟಿಪಾಲಕನಾದ ಏಕದೇವನಿಗಿಂತಲೂ ಇನ್ನೂ ಶ್ರೇಷ್ಠವಾದ ಭಾವನೆಯನ್ನು ಅವರು ಅದ್ವೈತದಲ್ಲಿ ಕಂಡರು. ವೈವಿಧ್ಯಮಯವಾದ ಈ ಜಗತ್ತಿನ ಅಂತರಾಳದಲ್ಲಿ ಏಕವನ್ನೇ ಕಂಡರು. ಯಾರಿಗೆ ಈ ಅದ್ವೈತ ಜ್ಞಾನವಾಗುವುದೋ, ಅವರಿಗೆ ಮಾತ್ರ ಶಾಂತಿ, ಇತರರಿಗಲ್ಲವೆಂಬುದು ವಿವೇಕಾನಂದರ ವಾಣಿ.

ಆದರೆ ಈ ಗುರಿಯನ್ನು ಸಾಧಿಸಲು ಕೆಲವು ಆಧ್ಯಾತ್ಮಿಕ ಸಾಧನಗಳು ಅಗತ್ಯ. ವಿವೇಕಾನಂದರು ಕರ್ಮಯೋಗ, ಭಕ್ತಿಯೋಗ, ರಾಜಯೋಗ, ಮತ್ತು ಜ್ಞಾನಯೋಗ ಎಂಬ ನಾಲ್ಕು ಸಾಧನಗಳನ್ನು ನಮ್ಮ ಮುಂದಿಡುತ್ತಾರೆ ಎಂದರೆ, ಅವರ ಪ್ರಕಾರ ಒಬ್ಬನು ಒಲವು ಮತ್ತು ಸಂಸ್ಕಾರಗಳಿಗೆ ಅನುಸಾರವಾಗಿ ತನ್ನ ಆಧ್ಯಾತ್ಮಿಕ ಗುರಿಯನ್ನು ತಲುಪಲು ಯಾವುದೇ ಮಾರ್ಗವನ್ನು ತಲುಪಬಹುದೆಂದರ್ಥ. ಪ್ರಪಂಚದ ಎಲ್ಲಾ ಧರ್ಮಗಳು ಈ ನಾಲ್ಕು ಯೋಗಗಳನ್ನು ಒಂದಲ್ಲ ಒಂದು ರೀತಿ ಒಪ್ಪಿಕೊಂಡಿವೆ ಎಂಬುದು ವಿವೇಕಾನಂದರ ಅಭಿಪ್ರಾಯ. ವಿವೇಕಾನಂದರ ಪ್ರಕಾರ ಧರ್ಮ ಶಬ್ದವು ಯಾವುದೇ ನಿರ್ದಿಷ್ಟ ಪಂಥ ಅಥವಾ ಮತ ಎಂಬ ಸಂಕುಚಿತ ಅರ್ಥವನ್ನು ನೀಡುವುದಿಲ್ಲ. ಅದರ ಅರ್ಥಪರಿಧಿಯು ವಿಶಾಲವಾದುದು. ಸಾಕ್ಷಾತ್ಕಾರದ ಗುರಿಯನ್ನು ತಲುಪಲು ಸಾಧನವಾಗಿರುವ ಯಾವುದೇ ಪಥವನ್ನು ಧರ್ಮವೆನ್ನಬಹುದು. ಈ ಅರ್ಥದಲ್ಲಿ ವಿವೇಕಾನಂದರ ಪ್ರಕಾರ ಧರ್ಮವೆಂದರೆ ಆಧ್ಯಾತ್ಮಿಕ ಗುರಿಯೂ ಹೌದು ಮತ್ತು ಆ ಗುರಿಯನ್ನು ತಲುಪುವ ಸಾಧನವೂ ಹೌದು.

ಈ ಸಾಧನವು ನಾವು ಮೇಲೆ ತಿಳಿಸಿರುವಂತೆ ಕರ್ಮಯೋಗ, ಭಕ್ತಿಯೋಗ, ರಾಜಯೋಗ ಮತ್ತು ಜ್ಞಾನಯೋಗ ಎಂಬ ನಾಲ್ಕು ರೂಪಗಳನ್ನು ತಳೆಯುತ್ತದೆ. ಆದರೆ ಪ್ರಸ್ತುತ ಚರ್ಚೆಯು ಕರ್ಮಯೋಗಕ್ಕೆ ಮಾತ್ರ ಸೀಮಿತವಾಗಿದೆ. ಕರ್ಮಯೋಗವನ್ನು ಅರ್ಥಮಾಡಿಕೊಳ್ಳುವ ಮುನ್ನ ನಾವು ಕರ್ಮಶಬ್ದದ ಅರ್ಥವನ್ನು ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಕರ್ಮಶಬ್ದಕ್ಕೆ ಸ್ಥೂಲವಾಗಿ ಎರಡು ಅರ್ಥಗಳಿವೆ. ತಾತ್ವಿಕವಾಗಿ (ontological) ಈ ಶಬ್ದವು ಜೈನರು ಹೇಳುವಂತೆ ಪರಮಾಣುಗಳನ್ನು ಅಥವಾ ಪುದ್ಗಲವನ್ನು ಸೂಚಿಸುತ್ತದೆ.[1] ಅಥವಾ ವೈಶೇಷಿಕರು ಹೇಳುವಂತೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಸ್ತುವಿನ ಚಲನೆಯನ್ನು ಸೂಚಿಸುತ್ತದೆ. ವೈಶೇಷಿಕರ ಪ್ರಕಾರ ಕರ್ಮವೆಂಬುದು ಏಳು ಪದಾರ್ಥಗಳಲ್ಲಿ ಒಂದಾಗಿದೆ.[2] ಇನ್ನು ಪುರುಷಾರ್ಥದ ದೃಷ್ಟಿಯಿಂದ (Axiological Perspective) ಕರ್ಮ ಶಬ್ದವನ್ನು ಎರಡು ಹಂತಗಳಲ್ಲಿ ಅರ್ಥೈಸಬಹುದು. ಮೊದಲನೆಯದು ಸಾಧನಹಂತ ಮತ್ತು ಎರಡನೆಯದು ಸಾಧ್ಯ ಅಥವಾ ಗುರಿಯ ಹಂತ.

ಸಾಧನದ ದೃಷ್ಟಿಯಿಂದ ಕರ್ಮವು ನಾವು ದೈಹಿಕ ಹಾಗೂ ಮಾನಸಿಕವಾಗಿ ಮಾಡುವ ಯಾವುದೇ ಕೆಲಸವನ್ನು ಸೂಚಿಸುತ್ತದೆ. ವಾಸ್ತವವಾಗಿ ಕರ್ಮ ಶಬ್ದವು 'ಕೃ' ಎಂಬ ಮೂಲದಿಂದ ಬಂದಿದ್ದು. 'ಕೃ' ಎಂದರೆ 'ಮಾಡು' ಎಂದರ್ಥ. ಹೀಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ನಾವು ಮಾಡುವ ಯಾವುದೇ ಕೆಲಸವು ಕರ್ಮವಾಗುತ್ತದೆ. ಇನ್ನು ಗುರಿಯ ದೃಷ್ಟಿಯಿಂದ ಕರ್ಮವು ನಾವು ಮಾಡಿದ

ಕರ್ಮದ ಪರಿಣಾಮವನ್ನು ಸೂಚಿಸುತ್ತದೆ. ಹೀಗೆ ಸ್ವಾಮಿ ವಿವೇಕಾನಂದರು ಕರ್ಮಯೋಗದ ಚರ್ಚೆಯನ್ನು ಪುರುಷಾರ್ಥದ ದೃಷ್ಟಿಕೋನದಿಂದ ಗ್ರಹಿಸುವರೇ ಹೊರತು ಜೈನರು ಅಥವಾ ವೈಶೇಷಿಕರು ಹೇಳುವಂತೆ ತಾತ್ತ್ವಿಕ ದೃಷ್ಟಿಕೋನದಿಂದ ಅಲ್ಲ. ಇಲ್ಲಿ ಮತ್ತೊಂದು ಗಮನಾರ್ಹ ವಿಷಯವೆಂದರೆ ವಿವೇಕಾನಂದರು ತಮ್ಮ ಚರ್ಚೆಯಲ್ಲಿ ಕರ್ಮ ಶಬ್ದವನ್ನು ಒಳ್ಳೆಯ ಕೆಲಸಕ್ಕೆ ಸೀಮಿತವಾಗಿಸುವರೆಂಬುದು.

ಈಗ ಪ್ರತಿಯೊಂದು ಕೆಲಸಕ್ಕೂ ಒಂದು ಉದ್ದೇಶವಿರುತ್ತದೆ. ವಿವಿಧ ವ್ಯಕ್ತಿಗಳು ವಿವಿಧ ಉದ್ದೇಶಗಳಿಗಾಗಿ ಕ್ರಿಯಾಶಿಲರಾಗುತ್ತಾರೆ. ಆದರೆ ವಿವೇಕಾನಂದರು ನಿರೀಕ್ಷಿಸುವುದು ಉದ್ದೇಶ ಸಹಿತವಾದ ಕ್ರಿಯಾಶೀಲತೆಯನ್ನಲ್ಲ. ಅವರ ಪ್ರಕಾರ ಮನುಷ್ಯನು ಕ್ರಿಯೆಗೋಸ್ಕರ ಕ್ರಿಯಾಶೀಲನಾಗಿರಬೇಕೇ ಹೊರತು ಸ್ವಾರ್ಥ ಉದ್ದೇಶವನ್ನು ಪೂರೈಸಿಕೊಳ್ಳಲು ಅಲ್ಲ. ಮನುಷ್ಯನು ಸ್ವಾರ್ಥ ಉದ್ದೇಶಗಳನ್ನು ಬದಿಗಿಟ್ಟು ತನ್ನ ಕರ್ತವ್ಯಗಳನ್ನು ಆಚರಿಸಬೇಕಾಗುತ್ತದೆ. ಇದೇ ಸ್ವಾಮಿ ವಿವೇಕಾನಂದರ ಪ್ರಕಾರ ಕರ್ಮಯೋಗ. ನಾವು ಒಬ್ಬ ವ್ಯಕ್ತಿಗೆ ಉಪಕರಿಸಲು ಇಚ್ಛಿಸಿದ್ದಲ್ಲಿ ನಮ್ಮ ಬಗ್ಗೆ ಆತನ ಮನೋಭಾವವೇನು ಎಂಬುದನ್ನು ಚಿಂತಿಸದೇ ನಾವು ಆತನಿಗೆ ಸಹಾಯ ಮಾಡಬೇಕೆಂದು ವಿವೇಕಾನಂದರು ಸಾರುತ್ತಾರೆ. ಇದೇನೂ ಸುಲಭದ ಕೆಲಸವಲ್ಲ. ಇದನ್ನು ಸಾಧ್ಯಗೊಳಿಸಲು ಮನುಷ್ಯನಿಗೆ ಅಸಾಧಾರಣವಾದ ಸಹನೆ ಮತ್ತು ನಿಗ್ರಹಗಳಿರಬೇಕೆಂದು ವಿವೇಕಾನಂದರು ಸಾರುತ್ತಾರೆ. ಅವರ ಪ್ರಕಾರ ಕರ್ಮವನ್ನು ಈ ಮನೋಭಾವದಿಂದ ಐದು ದಿವಸಗಳಾದರೂ ಸರಿ ಅಥವಾ ಕಡೆಯ ಪಕ್ಷ ಐದು ನಿಮಿಷಗಳಾದರೂ ಸರಿ ಮಾಡಿದಲ್ಲಿ, ಅದು ನಮ್ಮಲ್ಲಿ ಅಗಾಧವಾದ ಶಕ್ತಿಯನ್ನು ಮೂಡಿಸಿ ನಮ್ಮಲ್ಲಿರುವ, ನಮ್ಮೊಳಗೇ ಹುದುಗಿರುವ ಬುದ್ಧನನ್ನೋ ಅಥವಾ ಕ್ರಿಸ್ತನನ್ನೋ ಜಾಗೃತಗೊಳಿಸುತ್ತದೆ. ಎಂದರೆ, ನಾವೊಬ್ಬರು ನೈತಿಕವಾಗಿ ಅಸಾಧಾರಣ ವ್ಯಕ್ತಿಗಳಾಗುತ್ತೇವೆ.[3]

ವಿವೇಕಾನಂದರು **'ಮನುಷ್ಯ'** ಎಂಬ ಶಬ್ದಕ್ಕೆ ಒಂದು ಸುಂದರ ವ್ಯಾಖ್ಯೆಯನ್ನು ನೀಡುತ್ತಾರೆ. ನೈಜಮಾನವನು ಶೀಲದ ಸಾಕಾರವಾಗಿರುತ್ತಾನೆ ಮತ್ತು ಸಮಾಜಕ್ಕೆ ಒಂದು ಮಾದರಿಯಾಗಿರುತ್ತಾನೆ. ಮನುಷ್ಯನನ್ನು ಕುರಿತು ವ್ಯಾಖ್ಯೆಯನ್ನು ನೀಡುವಲ್ಲಿ ವಿವೇಕಾನಂದರು ದೇವರನ್ನು ಕುರಿತ ಪತಂಜಲಿಯ ವ್ಯಾಖ್ಯೆಯನ್ನು ನಮ್ಮ ನೆನಪಿಗೆ ತರುತ್ತಾರೆ. ಪಾತಂಜಲ ಯೋಗದ ಪ್ರಕಾರ ದೇವರು ತನ್ನ ಆಧ್ಯಾತ್ಮಿಕ ಸಾಧನದಿಂದ ಸರ್ವಜ್ಞತ್ವವನ್ನು ಪಡೆದ ಒಬ್ಬ **ಪುರುಷ ವಿಶೇಷ.** ಆತನನ್ನು ಹೊರತುಪಡಿಸಿ ಇನ್ನಾವ ದೇವರೂ ಇಲ್ಲ ಎಂದರ್ಥ. ಸತ್ಕರ್ಮಗಳಿಂದ ಸಂಪಾದಿಸಲ್ಪಟ್ಟ ಶೀಲದ (character) ಮೂಲಕ ಮನುಷ್ಯನು ದೇವರಾಗಬಹುದೆಂದರ್ಥ. ವಿವೇಕಾನಂದರು ಹೀಗೆ ಹೇಳುತ್ತಾರೆ. **"**ಒಳ್ಳೆಯದು ಮತ್ತು ಕೆಟ್ಟದ್ದು, ಸುಖ ಮತ್ತು ದುಃಖ ಇವೆಲ್ಲವೂ ಆತನೆಡೆಗೆ ಚಲಿಸಿ ಆತನನ್ನು ಸುತ್ತುವರಿಯುತ್ತವೆ. ಅವುಗಳಿಂದ ಅವನು ಸಂಸ್ಕಾರವೆಂಬ ಪ್ರಬಲ ನದಿಯನ್ನು ಹೊರಹೊಮ್ಮಿಸಿ ಅದನ್ನು ಬಾಹ್ಯ ಜಗತ್ತಿನೆಡೆಗೆ ಹರಿಸುತ್ತಾನೆ. ಅವನಿಗೆ ಹೊರಗಿನಿಂದ ತನ್ನೆಡೆಗೆ ಸೆಳೆಯುವ ಮತ್ತು ತನ್ನಿಂದ ಸಮಾಜದೆಡೆಗೆ ಎಸೆಯುವ ಅದ್ಭುತ ಶಕ್ತಿಯಿದೆ**"**.[4]

ಹೀಗೆ ಮನುಷ್ಯನು ತನ್ನ ಕರ್ಮದಿಂದ ದೊಡ್ಡವನಾಗುತ್ತಾನೆ. ತನ್ನ ಸ್ವಯಾರ್ಜಿತವಿಲ್ಲದೇ ಯಾರೂ ದೊಡ್ಡವರಾಗಲು ಸಾಧ್ಯವಿಲ್ಲವೆಂದು ವಿವೇಕಾನಂದರು ಸಾರುತ್ತಾರೆ. ಕರ್ಮವು ಮನುಷ್ಯನ ಶೀಲವನ್ನು ಮತ್ತು ಶೀಲವು ಮನುಷ್ಯನ ಸಂಕಲ್ಪ ಶಕ್ತಿಯನ್ನು ರೂಪಿಸುತ್ತದೆ. ಈ ಶೀಲದಿಂದಲೇ ಬುದ್ಧಕ್ರಿಸ್ತರೇ ಮೊದಲಾದವರು ಅಸಾಧಾರಣ ಶಕ್ತಿಸಂಕಲ್ಪಗಳುಳ್ಳವರಾಗಿರುವುದು. ಅವರಿಗೆ ಈ ಸಂಕಲ್ಪಶಕ್ತಿ ಬಂದುದು ಅವರ ನಿರಂತರ ಕ್ರಿಯಾಶೀಲತೆಯಿಂದಾಗಿ. ಅವರು ಇದ್ದಕ್ಕಿದ್ದಂತೆಯೇ ಯಾವುದೋ ಒಂದು ದಿನ ದಿಢೀರ್ ನಾಯಕರಾಗಿ ಬಿಡಲಿಲ್ಲ. ಅವರು ತಮ್ಮ ಸಂಕಲ್ಪ ಶಕ್ತಿಯನ್ನು ಆನುವಂಶೀಯತೆಯಿಂದಲೂ ಪಡೆದುಕೊಳ್ಳಲಿಲ್ಲ. ವಿವೇಕಾನಂದರು ಹೀಗೆ ಹೇಳುತ್ತಾರೆ, **"**ಆನುವಂಶೀಯತೆಯೇ ಕಾರಣವಾಗಿದ್ದಲ್ಲಿ ತನ್ನ ಸೇವಕರಿಂದಲೇ ಬಹುಶಃ ಸೇವೆಯನ್ನು ಪಡೆದುಕೊಳ್ಳಲು ಅಸಮರ್ಥನಾದ ಶುದ್ಧೋಧನನೆಂಬ ಸಣ್ಣ ರಾಜನಿಗೂ ಮತ್ತು ವಿಶ್ವದ ಅರ್ಧಭಾಗದಿಂದ ಪೂಜಿಸಲ್ಪಟ್ಟ ಆತನ ಮಗನಾದ ಬುದ್ಧನಿಗೂ ಇರುವ ಅಂತರವನ್ನು ನಾವು ವಿವರಿಸಲು ಸಾಧ್ಯವೇ ಇಲ್ಲ. ಹಾಗೆಯೇ ಜೋಸೆಫ್ ಎಂಬ ಮರಗೆಲಸದವನಿಗೂ ಕೋಟ್ಯಾಂತರ ಮಂದಿಯಿಂದ ಪೂಜಿಸಲ್ಪಡುವ ಜೀಸಸ್‌ನಿಗೂ ಇರುವ ಅಂತರವನ್ನು ಹೇಗೆ ವಿವರಿಸಲಾದೀತು!**"**. ಆದ್ದರಿಂದ ಜೀನಿಯಸ್ ಎಂಬುದು ಆನುವಂಶೀಯತೆಯ ಫಲವಲ್ಲ. ಅದು ಯುಗಯುಗಾಂತರಗಳಿಂದ ಮನುಷ್ಯನು ಆಚರಿಸಿದ, ಸತ್ಕರ್ಮಗಳ ಪರಿಣಾಮ ರೂಪವಾದ ಅದ್ಭುತ ಸಂಕಲ್ಪ ಶಕ್ತಿಯ ಫಲ. ಈ ಸಂಕಲ್ಪ ಶಕ್ತಿಯು ವಿಸ್ತರಿಸುತ್ತಾ ಬುದ್ಧ ಅಥವಾ ಜೀಸಸ್ ರೂಪದಲ್ಲಿ ಸಮಾಜದೆಡೆಗೆ ಎಸೆಯಲ್ಪಟ್ಟಿತೆಂದು ವಿವೇಕಾನಂದರು ಸಾರುತ್ತಾರೆ.[5]

ಕರ್ಮವೆಂಬುದು ಅಸಂಖ್ಯಾತವಾದ ಸಣ್ಣ ಸಣ್ಣ ಕರ್ಮಗಳ ಒಂದು ಮೊತ್ತವಷ್ಟೆ. ಸಮುದ್ರದಲ್ಲಿ ಅಲೆಗಳ ಸದ್ದನ್ನು ನಾವು ಕೇಳುತ್ತೇವೆ. ಆದರೆ ಈ ಅಲೆಗಳು ಕೋಟ್ಯಾಂತರ ಸಣ್ಣ ಸಣ್ಣ ಅಲೆಗಳಿಂದ ಕೂಡಿದವು. ಯಾವುದು ಮೂರ್ತವಾಗಿದೆಯೋ ಅಥವಾ ಸ್ಥೂಲವಾಗಿದೆಯೋ ಅದು ಅಸಂಖ್ಯಾತ ಸೂಕ್ಷ್ಮಗಳ ಒಂದು ಮೊತ್ತವಷ್ಟೆ. ಹಾಗೆಯೇ ಕರ್ಮವೆಂಬುದು ಅಸಂಖ್ಯಾತ ಸಣ್ಣ ಕೆಲಸಗಳ ಒಂದು ಮೊತ್ತ. ಈ ಮೊತ್ತವೇ ಅಥವಾ ಸಂಘಾತವೇ ಮನುಷ್ಯನ ಶೀಲವನ್ನು ನಿರ್ಧರಿಸುವುದು. ಎಂದರೆ, ಮನುಷ್ಯನು ಯಾವುದೋ ಒಂದು ನಿರ್ದಿಷ್ಟ ಕಾಲದಲ್ಲಿ ಒಮ್ಮೆಲೇ ನಾಯಕನಾಗಿ ಬಿಡಲು ಸಾಧ್ಯವಿಲ್ಲ. ನೀಚರಲ್ಲಿ ಅತ್ಯಂತ ನೀಚನೂ ಕೂಡ ಯಾವುದೋ ಒಂದು ಕಾಲಕ್ಕೆ ನಾಯಕನಾಗಬಲ್ಲ (Hero). ಆದರೆ ವಿವೇಕಾನಂದರ ಪ್ರಕಾರ ನಿಜವಾದ ನಾಯಕನೆಂದರೆ, ಯಾವಾಗಲೂ ಸಚ್ಚಾರಿತ್ರ್ಯವುಳ್ಳವನು. ಅವರ ಪ್ರಕಾರ ಪ್ರಾಸಂಗಿಕ ಅಥವಾ ಆನುಷಂಗಿಕ ನಾಯಕತ್ವವು ನಾಯಕತ್ವೇ ಅಲ್ಲ. ನೈಜ ನಾಯಕತ್ವದ ಲಕ್ಷಣಗಳು ಸ್ಥಿರತೆ ಮತ್ತು ನಿರಂತರತೆ.[6]

ಹೀಗೆ, ನಮ್ಮ ವ್ಯಕ್ತಿತ್ವವು ನಮ್ಮ ಕರ್ಮದಿಂದ ನಿರ್ಧಾರಿತವಾಗಿರುತ್ತದೆ. ಈಗ ನಾವು ಏನಾಗಿರುವೆವೋ ಅದಕ್ಕೆ ಕಾರಣ ನಾವೇ. ನಮ್ಮ ವರ್ತಮಾನವು ನಮ್ಮ ಭೂತಕಾಲದಿಂದ ರೂಪಿತವಾಗಿದ್ದರೆ, ನಮ್ಮ ಭವಿಷ್ಯವು ಸಹಜವಾಗಿಯೇ ನಮ್ಮ ವರ್ತಮಾನದಿಂದ ರೂಪಿತವಾಗಬಲ್ಲದೆಂದರ್ಥ. ಇಲ್ಲಿ ನಾವು ಮಾಡಬೇಕಾದುದೆಂದರೆ, ನಾವು ಹೇಗೆ ಕ್ರಿಯಾಶೀಲರಾಗಬೇಕೆಂಬ ತಂತ್ರವನ್ನು ತಿಳಿಯಬೇಕೆಂಬುದಷ್ಟೇ. ನಮಗೆ ನೈಪುಣ್ಯ, ಬುದ್ಧಿವಂತಿಕೆ, ಚತುರತೆ, ಅಥವಾ ಗೀತೆಯು ಸಾರುವಂತೆ ಕರ್ಮದಲ್ಲಿನ ಕೌಶಲವು ಅಗತ್ಯ.[7] ಸಾಮಾನ್ಯವಾಗಿ ಕರ್ಮದಲ್ಲಿ ಎರಡು ಅಪಾಯಗಳುಂಟು. ಒಂದು ನಾವು ನಮ್ಮ ಕೆಲಸದಲ್ಲಿ ಸ್ವಾರ್ಥಪರರಾಗುವ ಸಂಭವವುಮಟು. ನಾವು ಕರ್ಮಕ್ಕಿಂತಲೂ ಹೆಚ್ಚಾಗಿ ಕರ್ಮಫಲಕ್ಕೆ ಅಂಟಿಕೊಂಡಿರುತ್ತೇವೆ. ಎರಡನೆಯದಾಗಿ, ನಿಸ್ವಾರ್ಥ ಕ್ರಿಯಾಶೀಲತೆ

ಯಿಂದ ನಾವು ಸ್ವಲ್ಪ ಯಶಸ್ಸು ಕಂಡುಕೊಂಡರೂ, ಅನಂತರ ಅದು ಅಹಂಕಾರವಾಗಿ ಮಾರ್ಪಡುವ ಸಾಧ್ಯತೆಯುಂಟು. ನಮ್ಮ ಯಶಸ್ಸಿನಲ್ಲಿ ನಾವು ಅಹಂಕಾರಿಗಳಾಗುವ ಸಾಧ್ಯತೆಯುಂಟು. ಹೀಗೆ ಆಸೆ ಮತ್ತು ಅಹಂಕಾರಗಳು ಕರ್ಮದೊಡನೆ ಬೆಸೆದುಕೊಂಡಿರುವ ಎರಡು ಅಪಾಯಗಳು. ಒಂದರಿಂದ ತಪ್ಪಿಸಿಕೊಳ್ಳಲು ನಾವು ಪ್ರಯತ್ನಿಸಿದಷ್ಟೂ, ನಾವು ಮತ್ತೊಂದು ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುತ್ತದೆ. ಹೀಗಿದ್ದರೂ ನಾವು ಕ್ರಿಯಾರಾಗಬೇಕಾಗುತ್ತದೆ. ಏಕೆಂದರೆ, ಒಂದೇ ಒಂದು ಕ್ಷಣವು ಕ್ರಿಯೆಯಿಲ್ಲದೇ ನಾವು ಬದುಕಲು ಸಾಧ್ಯವಿಲ್ಲ.[8] ನಾವು ಯಾವ ರೀತಿ ಉಪಾಯವಾಗಿ ಕ್ರಿಯಾಶೀಲರಾಗಬೇಕೆಂದರೆ ನಾವು ಕರ್ತವ್ಯವನ್ನು ಮಾಡಬೇಕು. ಜೊತೆಗೆ ನಮ್ಮನ್ನು ಸ್ವಾರ್ಥ ಅಹಂಕಾರಗಳು ಆವರಿಸಿದಂತೆಯೂ ನೋಡಿಕೊಳ್ಳಬೇಕು. ಇದೊಂದು ಕೌಶಲವಷ್ಟೇ ಅಲ್ಲ, ಇದು ನಮ್ಮ ಜೀವನಕ್ಕೆ ಒದಗಿರಲು ಒಂದು ದೊಡ್ಡ ಸವಾಲು ಎಂದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಏಕೆಂದರೆ, ಜೀವನದ ಅವಿಭಾಜ್ಯ ಅಂಗವಾಗಿರುವ ಕ್ರಿಯಾಶೀಲತೆಯಿಲ್ಲದೇ ನಾವು ಬದುಕಿರಲು ಸಾಧ್ಯವಿಲ್ಲ. ಹಾಗೆಯೇ ಸ್ವಾರ್ಥ ಅಹಂಕಾರಗಳಿಲ್ಲದೇ ಅಷ್ಟು ಸುಲಭವಾಗಿ ಕೆಲಸಮಾಡಲೂ ಸಾಧ್ಯವಿಲ್ಲ. ಬುದ್ಧ ಮತ್ತು ಜೀಸಸ್ ಈ ಸವಾಲುಗಳನ್ನು ಎದುರಿಸಿಯೇ ಮಹಾವಿಜ್ಞಾನಿಗಳೆಂದು ಎನಿಸಿಕೊಂಡರೆಂದರೆಂದು ವಿವೇಕಾನಂದರು ಸಾರುತ್ತಾರೆ. ಅವರು ಈ ರೀತಿಯ ಕ್ರಿಯಾಶೀಲತೆ ಯಿಂದಾಗಿ ತಮ್ಮೊಳಗೇ ಈಗಾಗಲೇ ಹುದುಗಿದ್ದ ಅದ್ಭುತಶಕ್ತಿಯನ್ನು ಜಾಗೃತಗೊಳಿಸಿದರು.

ವಿವೇಕಾನಂದರ ಪ್ರಕಾರ ಜನರು ಎರಡು ರೀತಿಯ ಜೀವನಗಳನ್ನು ನಡೆಸುತ್ತಾರೆ. ಸಂಸಾರದ ಜಂಜಾಟದ ಮಧ್ಯದಲ್ಲಿದ್ದುಗೊಂಡು ಕಾರ್ಯಶೀಲರಾಗುವುದು ಮೊದಲ ರೀತಿ. ಸಂಸಾರವನ್ನು ತೊರೆದು ಏಕಾಂತ ಜೀವನವನ್ನು ನಡೆಸುವುದು ಎರಡನೆಯ ರೀತಿ. ಒಂದು **ಪ್ರವೃತ್ತಿಯಾದರೆ** ಮತ್ತೊಂದು **ನಿವೃತ್ತಿ**. ಆದರೆ ಈ ಎರಡೂ ರೀತಿಗಳಲ್ಲೂ ತಮ್ಮದೇ ಆದ ಪರಿಮಿತಿಗಳಿವೆ. ಜಂಜಾಟದ ಜೀವನಕ್ಕೆ ಹೊಂದಿಕೊಂಡವನು. ಏಕಾಂತತೆಯ ಪ್ರಶಾಂತತೆಗೆ ಹೊಂದಿಕೊಳ್ಳಲಾರ. ಪ್ರಶಾಂತತೆಯಲ್ಲಿ ಅವನನ್ನು ಒಂದು ರೀತಿಯ ಅಸಹನೆ, ಭೀತಿ, ಪ್ರಕ್ಷುಬ್ಧತೆಗಳು ಕಾಡುವ ಸಂಭವವುಂಟು. ಹಾಗೆಯೇ ಏಕಾಂತ ಜೀವನಕ್ಕೆ ಹೊಂದಿಕೊಂಡಿರುವವನಿಗೆ ಪ್ರಪಂಚವು ಅವನ ಆಂತರಿಕ ಶಾಂತಿಗೆ ಧಕ್ಕೆ ತರುವಂತೆ ತೋರುತ್ತದೆ. ವಿವೇಕಾನಂದರ ಪ್ರಕಾರ ಈ ಎರಡು ರೀತಿಯ ಜೀವನಗಳಿಗೆ ಹೊಂದಿಕೊಂಡವನೇ ಆದರ್ಶ ವ್ಯಕ್ತಿ. ಆದರ್ಶವ್ಯಕ್ತಿಯು ಅಗಾಧವಾದ ಪ್ರಶಾಂತತೆಯಲ್ಲಿ ತೀವ್ರವಾಗಿ ಕ್ರಿಯಾಶೀಲನಾಗಿರುತ್ತಾನೆ ಮತ್ತು ಪ್ರಾಪಂಚಿಕ ಗದ್ದಲದಲ್ಲಿದ್ದು ನಿರಂತರವಾಗಿ ಕ್ರಿಯಾಶೀಲನಾಗಿದ್ದರೂ ಆಂತರಿಕ ಶಾಂತಿಯನ್ನು ಅನುಭವಿಸುತ್ತಾನೆ. ಎಂದರೆ ಆತನು ನಿವೃತ್ತಿಯಲ್ಲಿ ಪ್ರವೃತ್ತನು ಮತ್ತು ಪ್ರವೃತ್ತಿಯಲ್ಲಿ ನಿವೃತ್ತನೂ ಆಗಿರುತ್ತಾನೆ.[9] ಗೀತೆಯು ಸಾರುವಂತೆ ಆತನು ಅಕರ್ಮದಲ್ಲಿ ಕರ್ಮಿಯೂ ಮತ್ತೂ ಕರ್ಮದಲ್ಲೂ ಅಕರ್ಮಿಯಾಗಿರುತ್ತಾನೆ.[10] ಚಿಕ್ಕದಾಗಿ ಹೇಳಬೇಕೆಂದರೆ, ಆತನು ಸಂಸಾರದಲ್ಲಿದ್ದು ಯಾವುದೇ ಫಲಾಪೇಕ್ಷೆಯಿಲ್ಲದೇ ಸಮಾಜದ ಹಿತಕೋಸ್ಕರ ಕ್ರಿಯಾಶೀಲನಾಗಿರುತ್ತಾನೆ. ವಿವೇಕಾನಂದರ ದೃಷ್ಟಿಯಲ್ಲಿ ಇದೇ ಮನುಷ್ಯನು ತನ್ನ ಸಾಮಾಜಿಕ ಸ್ವಾತಂತ್ರ್ಯವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವ ವಿಧಾನ.

**ಆಧಾರ ಗ್ರಂಥಗಳು**

1. M.Hiriyanna, ***Outlines of Indian Philosophy***, George Allen and Unwin (India), Bombay, 1973, Pp.168-169.
2. Ibid., Pp. 232-233
3. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ–1, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು, 2006, ಪುಟ 34
4. ಅದೇ ಪುಟ 31–32
5. ಅದೇ ಪುಟ 32
6. ಅದೇ ಪುಟ 31
7. ಅದೇ ಪುಟ 33; ಭಗವದ್ಗೀತೆ ಸಾಂಖ್ಯಯೋಗ, 50ನೇ ಶ್ಲೋಕ
8. ಭಗವದ್ಗೀತೆ ಕರ್ಮಯೋಗ, 5ನೇ ಶ್ಲೋಕ
9. ಕೃತಿಶ್ರೇಣಿ ಸಂಪುಟ 1, ಪೂರ್ವೋಕ್ತ, ಪುಟ 36
10. ಭಗವದ್ಗೀತೆ ಜ್ಞಾನಯೋಗ, 18ನೇ ಶ್ಲೋಕ

## ಧ್ಯಾನದಲ್ಲಿ ಮನಸ್ಸಿನ ಪಾತ್ರ

ಡಾ|| ಕೆ. ವ್ಹಿ. ಜುಕ್ತಿಮಠ
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ತತ್ವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಮನುಷ್ಯನ ಬದುಕಿನಲ್ಲಿ ಧ್ಯಾನದ ಪಾತ್ರ ಬಹು ಮುಖ್ಯ ಆಧ್ಯಾತ್ಮದಲ್ಲಂತು ಇನ್ನೂ ಹೆಚ್ಚು, ಸಾಮಾನ್ಯವಾಗಿ ಮನುಷ್ಯನ ಬದುಕಿನಲ್ಲಿ ಗೊಂದಲಗಳೇ ಹೆಚ್ಚು ಹೊಂದಾಣಿಕೆಯ ಭಾವನೆಗಳು ಕಡಿಮೆ, ಭೌತಿಕ ಸಂಪತ್ತನ್ನು ಗಳಿಸುವ ನಿಟ್ಟಿನಲ್ಲಿ ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು, ರಸ ಬೇರ್ಪಡಿಸಿದ ಕಬ್ಬಿನ ಸಿಪ್ಪೆಯಂತಾಗಿ ಮನುಷ್ಯ ಕೊರಗುತ್ತಿದ್ದಾನೆ. ದೇಹದ ಶಕ್ತಿಯನ್ನು ಕರಗಿಸಿಕೊಂಡು, ಮತ್ತೆ ಅದನ್ನು ಪಡೆಯುವ ಗಳಿಸಿದ ಸಂಪತ್ತನ್ನು ವಿನಿಯೋಗಿಸುವುದು ಎಷ್ಟು ಅರ್ಥಹೀನವಲ್ಲವೆ? ಧ್ಯಾನ-ಏಕಾಗ್ರತೆ ಬಹುಮುಖ್ಯವಾಗಿ ಆದ್ಯಾತಿಮ ಪ್ರಕ್ರಿಎಯೆಯಾದರೂ, ಪ್ರತಿಯೊಬ್ಬ ಮನುಷ್ಯನಿಗೂ ಸ್ವಾಸ್ಥ ಆರೋಗ್ಯವನ್ನು ನೀಡಲು ಸಹಕಾರಿ, ಮನುಷ್ಯ ಹಣದಿಂದ ಔಷಧ ಇತ್ಯಾದಿಗಳನ್ನು ಗಳಿಸಬಹುದು, ಆದರೆ ಆರೋಗ್ಯ-ನೆಮ್ಮದಿ-ಮುಂತಾದವುಗಳನ್ನು ಕೊಳ್ಳಲು ಸಾಧ್ಯವಿಲ್ಲ. ಸಂಘರ್ಷಮಯವಾದ ವಾತಾವರಣದಲಿ, ಸಂಪತ್ತು, ಅಧಿಕಾರ, ಯೌವ್ವನಗಳು ಅವನನ್ನು ಮಾನಸಿಕ ದ್ವಂದಗಳಿಗೆ ದೂಡಬಲ್ಲವು.

ಭಾರತೀಯ ಇಲ್ಲವೇ ಪಾಶ್ಚಾತ್ಯ ಸಂತರಾಗಲಿ ಮನಸ್ಸಿನ ಕ್ರಿಯೆ ಮತ್ತು ಪ್ರತಿಕ್ರಿಯೆಯ ಕುರಿತು ಮಾತನಾಡುತ್ತಾರೆ. ಅವರ ಬೋಧನೆಗಳು ಅರ್ಥಪೂರ್ಣ ಅವುಗಳೇ ನಮಗೆ ಮಾರ್ಗದರ್ಶಕಗಳು. ಆದರೆ ಅವುಗಳನ್ನು ಎಷ್ಟು ಜನ ಪಾಲಿಸುತ್ತಾರೆ! ಇಂದು ಮನುಷ್ಯ ಮಾನಸಿಕ ಖಿನ್ನತೆಗೆ ಒಳಗಾಗಿ ಒತ್ತಡದಲ್ಲಿ ಸಿಲುಕಿದ್ದಾನೆ ಅವನಿಗೆ ಎಷ್ಟು ಸಂಪಾದನೆ ಮಾಡಿದರೂ ನೆಮ್ಮದಿ ಇಲ್ಲ. ಅಂತೆಯೇ, ಅದನ್ನು ಅರಸುತ್ತಾ ಹಲವಾರು ತರಬೇತಿ ಕೇಂದ್ರಗಳಿಗೆ ಅಲೆಯುತ್ತಾನೆ. ಇಂದು ಮನಸ್ಸು ವಿಕೃತಗೊಳ್ಳಲು ಹಲವು ಕಾರಣಗಳು, ಅದರಲ್ಲಿ ಮುಖ್ಯವಾಗಿ ತಾನು ಕಂಡುಕೊಂಡ ವೈಜ್ಞಾನಿಕ ಅವಿಷ್ಕಾರಗಳು, ಅವನನ್ನು ಇಂಥ ಸ್ಥಿತಿಗೆ

ತಂದು ನಿಲ್ಲಿಸಿರಬಹುದೇ? ಎಂದು ಪ್ರಶ್ನಿಸಬೇಕಾಗುತ್ತದೆ. ಹಣವನ್ನು ಸಂಪಾದಿಸಿದ ಮನುಷ್ಯ ಮಾನಸಿಕ ನೆಮ್ಮದಿಯನ್ನೇ ಕಳೆದುಕೊಂಡಿದ್ದಾನೆ. ಸಂಪತ್ತಿನ ದಾಸನುದಾಸನಾಗಿ ಓಡುತ್ತಿದ್ದಾನೆ. ಆದರೆ ಅವನಿಗೆ ಸ್ವಸ್ಥ ಜೀವನದ ಕಡೆ ಗಮನವೇ ಇಲ್ಲ. ಇದಕ್ಕೆ ಪರಿಹಾರವೇ ಧ್ಯಾನ. ಅದರಲ್ಲಿ ಮನಸ್ಸಿನ ಪಾತ್ರ ಬಹುಮುಖ್ಯ, ಧ್ಯಾನವು ದೈಹಿಕ ಆರೋಗ್ಯ ಹಾಗೂ ಶಾಂತಿ ಸಮಾಧಾನಗಳಿಗೆ ದಿವ್ಯೌಷಧ, ಅಂತಹ ಧ್ಯಾನವನ್ನು ಪಡೆಯಬೇಕಾದರೆ ಚಲ್ಲಟವಾಡುವ ಮನಸ್ಸನ್ನು ನಿಯಂತ್ರಿಸಬೇಕು. ಮನಸ್ಸಿನ ಕಾರ್ಯಗಳು ಹಲವು: ಒಳ್ಳೆಯದರ ಕಡೆ ಗಮನಕೊಡುವುದು, ಕೆಟ್ಟ ಆಲೋಚನೆಗಳ ಕಡೆ ಸಂಚರಿಸುವುದು, ಕ್ಷಣಚಿತ್ತವೆಂಬಂತೆ ವಿಷಯ ವಾಸನೆಗಳ ಕಡೆ ಹರಿದಾಡುವುದು. ಅದನ್ನು ನಿಯಂತ್ರಿಸುವುದು ಸುಲಭವಲ್ಲ. ಅದನ್ನು ನಿಯಂತ್ರಿಸಿದವನೇ. ಮಹಾಂತ, ಅಂತೆಯೇ, ಭಾರತೀಯ ದಾರ್ಶನಿಕರು-ಸಂತರು ಮನಸ್ಸನ್ನು ಮಂಗನಿಗೆ ಹೋಲಿಸಿದ್ದಾರೆ. ಮನಸ್ಸನ್ನು ಅಂತರ್ ಇಂದ್ರಿಯವೆಂದು ಗುರುತಿಸಿದ್ದಾರೆ. ಮನಸ್ಸನ್ನು ಹೇಗೆ ನಿಯಂತ್ರಿಸಲು ಸಾಧ್ಯವೆಂಬ ಹಲವು ವಿಚಾರಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಧ್ಯಾನವೆಂದರೇನು? ಅದನ್ನು ಹೇಗೆ ಮಾಡುವುದು, ಧ್ಯಾನಕ್ಕಾಗಿ ಅನುಸರಿಸಬೇಕಾದ ಸೋಪಾನಗಳಾವುವು? ಧ್ಯಾನ ಮಾಡಲು ಯಾವ ವಿಧಾನವನ್ನು ಅಥವಾ ಪದ್ಧತಿಯನ್ನು ಅನುಸರಿಸಬೇಕು? ಅದರಲ್ಲಿ ಮನಸ್ಸಿನ ಪಾತ್ರವೇನು? ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಅದರ ಕುರಿತು ಮಾತನಾಡಿದ ತತ್ವಜ್ಞಾನಿಗಳಾಗಲಿ, ಮನೋವಿಜ್ಞಾನಿಗಳಾಗಲಿ, ಯೋಗಿಗಳಾಗಲಿ, ಅವರೆಲ್ಲರ ನಿಲುವುಗಳನ್ನು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಿಕೊಂಡು ಚರ್ಚಿಸಲಾಗಿದೆ. ಮುಖ್ಯವಾಗಿ ಶಿವಶರಣರ ವಚನಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ವಿಶಾಲವಾದ ಭೂಮಂಡಲದಲ್ಲಿ ಎಂಬತ್ನಾಲ್ಕು ಲಕ್ಷ ಜೀವಗಳ ಸಂತತಿ ಬಾಳಿ–ಬದುಕುತ್ತಿವೆ ಎಂದು ತತ್ವಜ್ಞಾನಿಗಳು ಹೇಳುತ್ತಾರೆ. ಎಲ್ಲ ಪ್ರಾಣಿ–ಪಕ್ಷಿಗಳಿಗಿಂತಲೂ ಮನುಷ್ಯನ ಬದುಕು ಅರ್ಥಪೂರ್ಣ. ಅವನ ಜೀವನ ಶ್ರೇಷ್ಠ ಹಾಗೂ ಉತ್ಕೃಷ್ಟವು ಆಗಿದೆ. ಕಾರಣ ಆತ ವಿಚಾರವಂತ. ಅಂತೆಯೇ ತತ್ವಜ್ಞಾನಿಗಳು **ಮನುಷ್ಯನನ್ನು ಚಿಂತನಾಶೀಲ ಪ್ರಾಣಿ** ಎಂದು ಕರೆದಿರುವರು. ಅವನು ವಿಚಲಿತನಾದಾಗ ಇಲ್ಲವೇ ಮನಸ್ಸಿನ ಮೇಲೆ ನಿಯಂತ್ರಣ ಕಳೆದುಕೊಂಡಾಗ ಅವನ ವರ್ತನೆ ಅಸಹಜವಾಗಿರುತ್ತದೆ. ಆಗ ನಾವು ಅವನಲ್ಲಿಯ ಪ್ರಾಣಿಯ ಈ ರೀತಿಯ ವರ್ತನೆಯಿಂದ ಮನುಷ್ಯತ್ವ ಇದೆಯೋ? ಇಲ್ಲವೋ? ಎಂದು ಪ್ರಶ್ನಿಸುತ್ತೇವೆ. ಪ್ರಾಣಿಗಳಲ್ಲಿಯ ಮನಸ್ಸಿಗೂ ಹಾಗೂ ಮನುಷ್ಯರಲ್ಲಿಯ ಮನಸ್ಸಿಗೆ ವ್ಯತ್ಯಾಸವಿದೆ. ಇಲ್ಲಿ ಮನುಷ್ಯನ ಮನಸ್ಸಿಗೆ ನೀಡಿದ ತರಬೇತಿ ಮುಖ್ಯ. ಮನಸ್ಸಿನ ಕಾರ್ಯ ವೈಖರಿಯಾಗಲಿ, ಅದರ ರಚನಾ ಕ್ರಮದಲ್ಲಿ ವ್ಯತ್ಯಾಸವಿದೆಯಾ? ಎಂಬ ಪ್ರಶ್ನೆಯೂ ಸಹಜ. ಆದರೆ ಈ ಪ್ರಶ್ನೆಗಿಂತ ಮನಸ್ಸನ್ನು ನಿಯಂತ್ರಣದಲ್ಲಿಡಲು ಸಾಧ್ಯವೇ? ಸಾಧ್ಯವೆಂದು ಹೇಳುತ್ತದೆ ಸಂಶೋಧನೆ. ಅದಕ್ಕೆ ಸರಿಯಾದ ತಿಳುವಳಿಕೆ (ಬುದ್ಧಿ) ಬಹುಮುಖ್ಯ. ಬುದ್ಧಿಯಲ್ಲಿ ಪ್ರಾಣಿಗಳಿಗಿಂತ ಮನುಷ್ಯನೇ ಶ್ರೇಷ್ಠ. **ಬುದ್ಧಿ** ಎಂಬ ಆಂತರಿಕ ತತ್ವದಿಂದ ಮನುಷ್ಯನನ್ನು ಪ್ರಾಣಿ–ಪಕ್ಷಿಗಳಿಂದ ಪ್ರತ್ಯೇಕಿಸಲು ಸಾಧ್ಯ. ನಾವು 'ಮನಸ್ಸೆ'ಂಬ ಅಂತರಿಂದ್ರಿಯದ ಅಸ್ತಿತ್ವವನ್ನು ನಿರಾಕರಿಸುವ ಹಾಗಿಲ್ಲ. ಬಹುತೇಕ ಭಾರತೀಯ ತತ್ವಶಾಸ್ತ್ರದಲ್ಲಿ ಮನಸ್ಸನ್ನು ಒಪ್ಪಿಕೊಂಡಿದ್ದಾರೆ. ನ್ಯಾಯ–ವೈಶೇಷಿಕ ದರ್ಶನದಲ್ಲಿ ಒಂಬತ್ತು ದ್ರವ್ಯಗಳಲ್ಲಿ **ಮನಸ್ಸು** ಒಂದು ದ್ರವ್ಯವೆಂದು ಗುರುತಿಸಿದ್ದಾರೆ. ಅದನ್ನು ಪರಮಾಣು ರೂಪದಲ್ಲಿ ಸತ್ಯವೆಂದು ಒಪ್ಪಿಕೊಂಡಿದ್ದಾರೆ. ಅದೊಂದು ಅರಿಯುವ ಸಾಧನ. ಇದು ಬಾಹ್ಯವಸ್ತುಗಳ ಹಾಗೂ ಅಂತರಂಗದ ಸ್ಥಿತಿಗಳಿಗೂ ಅಲ್ಲದೇ ಸಮಸ್ತ ಜ್ಞಾನಕ್ಕೂ ಅಗತ್ಯವಾಗಿ ಬೇಕು. ಕೆಲವೊಮ್ಮೆ ನಾವು ಗಡಿಯಾರವನ್ನು ನಮ್ಮ ಕಣ್ಣುಗಳು ನೋಡುತ್ತಿದ್ದರು, ನಾವು ಸಮಯವನ್ನು ನೋಡುತ್ತಿರುವುದಿಲ್ಲ. ಏಕೆಂದರೆ ಇಂದ್ರಿಯಗಳು ಹಾಗೂ ವಸ್ತುವಿನ ಮಧ್ಯೆ 'ಮನಸ್ಸು' ಕರ್ತವ್ಯವನ್ನು ಪಾಲಿಸಬೇಕು. ಅದು ಪಾಲಿಸದಿದ್ದಾಗ ಹೀಗಾಗುವುದು ಸಹಜ. ಅದನ್ನು ಆತ್ಮದಿಂದ ಪ್ರತ್ಯೇಕವೆಂತಲೂ ಹೇಳುತ್ತಾರೆ. ಅದು ಇಂದ್ರಿಯಗಳು ಮತ್ತು ದೇಹದೊಂದಿಗೆ ಆತ್ಮದ ಸಂಬಂಧವನ್ನು ಕಲ್ಪಿಸಿಕೊಳ್ಳಲು ಕಾರಣವಾಗುವುದು. ಆತ್ಮಕ್ಕೆ ಸಂಪರ್ಕವನ್ನು ಕಲ್ಪಿಸುವ ಕೊಂಡಿ.

ಅಂತರಂಗದ ಚೇತನಾಶಕ್ತಿಯನ್ನು ಆತ್ಮ ಅಥವಾ ಜೀವಾತ್ಮ ಎಂದು ಕರೆಯುತ್ತಾರೆ. ದರ್ಶನಗಳ ಗುರಿಗಳಲ್ಲಿ ಆತ್ಮಜ್ಞಾನವು ಒಂದು. ಅದನ್ನು ಸಾಧಿಸುವಾಗ ಶ್ರವಣ–ಮನನ–ನಿಧಿಧ್ಯಾಸನಗಳಿಗೆ ಮನಸ್ಸು ಮುಖ್ಯ ಸಾಧನ. ಇದರ ಸಹಾಯದಿಂದಲೇ ಆತ್ಮವು ಸುಖ–ದು:ಖಗಳನ್ನು ಅನುಭವಿಸುತ್ತದೆ. ಜಾಗತಿಕ ಅತ್ಯಂತ ಹಳೆಯ ದಾಖಲೆಗಳಾದ ವೇದಗಳ ಕೊನೆಯ ಭಾಗವಾಗಿ ಜ್ಞಾನ ಸಿಂಚನವನ್ನೆ ಉಣಬಡಿಸಿದ, ಉಪನಿಷತ್ತುಗಳಲ್ಲಿ ಮನಸ್ಸಿನ ಕುರಿತು ವಿಸ್ತೃತ ಚರ್ಚೆ ನಡೆದಿದೆ. ಕಠೋಪನಿಷತ್ತಿನಲ್ಲಿ ನಡೆದ ಅಂತಹ ಚರ್ಚೆಯನ್ನು ಗಮನಿಸೋಣ.

ಆತ್ಮಾನಾಂ ರಥಿನಂ ವಿದ್ಧಿ ಶರೀರಂ ರಥಮೇವತು।
ಬುದ್ಧಿಂತು ಸಾರಥಿಂ ವಿದ್ಧಿ ಮನ: ಪ್ರಗ್ರಹ ಮೇವಚ॥
ಇಂದ್ರಿಯಾಣಿ ಹಯಾನಾಹುರ್ವಿಷಯನ್ ತೇಷು ಗೋಚರಾನ್।
ಆತ್ಮೇಂದ್ರಿಯ ಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣ:॥
(ಕಠ.ಉ. 2–3–4)

ನಿಶ್ಶಬ್ದವಾದ ಆತ್ಮತತ್ವವನ್ನು ಶಬ್ದದಿಂದ ವಿವರಿಸುವಾಗ 'ಆತ್ಮ ನಿತ್ಯವಾದ ವಸ್ತು. ಅದಕ್ಕೆ ಮರಣವಿಲ್ಲ, ದು:ಖವಿಲ್ಲ, ನಾಶವಿಲ್ಲ, ವಿಕಾರವಿಲ್ಲ, ಅವಸ್ಥಾದಿ ದೋಷಗಳೂ ಅಂಟಲಾರವು. ಅದು ನಮಗೆ ಜ್ಞಾನವನ್ನು ಒದಗಿಸಲು, ವಿಷಯ ವಾಸನೆಗಳನ್ನು ಗ್ರಹಣ ಮಾಡುವ ಇಂದ್ರಿಯಗಳಿಗಿಂತಲೂ, ಸಂಕಲ್ಪ–ವಿಕಲ್ಪಾತ್ಮಕವಾದ ಮನಸ್ಸುಗಳಿಗಿಂತಲೂ, ವಿವೇಚನೆ ಮಾಡಿ ಸರಿದೂಗುವ ಬುದ್ಧಿಗಿಂತಲೂ ಬೇರೆಯಾಗಿದೆ' ಎಂದು ಹೇಳಿರುವುದನ್ನು ಉಪಮೆಯಿಂದ ನೋಡಲಾಗಿದೆ. ಈ ಮೇಲಿನ ಶ್ಲೋಕದಲ್ಲಿ ಯಮರಾಜ ಮತ್ತು ನಚಿಕೇತನ ಮಧ್ಯೆ ನಡೆದ ಸಂವಾದದ ರೂಪದಲ್ಲಿ ಯಮನು ಮನಸ್ಸಿನ ಅಸ್ತಿತ್ವವನ್ನು ಹೀಗೆ ಹೇಳಿದ್ದಾನೆ: "ಶರೀರವೇ ಒಂದು ರಥ, ಬುದ್ಧಿಯೇ ಸಾರಥಿ, ಮನಸ್ಸೇ ಲಗಾಮು (ನಿಯಂತ್ರಕ ಅಥವಾ ಜೋಡಿಸುವ ಸಾಧನ) ವಿಷಯ ರೂಪದಲ್ಲಿ ಚಲಿಸುವ ಇಂದ್ರಿಯಗಳೇ ಕುದುರೆಗಳು, ಕೊನೆಗೆ ಆತ್ಮವೇ ರಥದಲ್ಲಿ ಕುಳಿತಿರುವ ಯಾತ್ರಿಕ (ಒಡೆಯ)". ಇದರಿಂದ ಮನಸ್ಸು, ಶರೀರ ಇತ್ಯಾದಿ ಪದಾರ್ಥಗಳಿಂದ ಬೇರೆಂದು ಅದರ ಅಸ್ತಿತ್ವನ್ನು ಸ್ವೀಕರಿಸಿದ್ದು ಬಹುಮುಖ್ಯ. ಮನಸ್ಸು ಇಂದ್ರಿಯಗಳಿಗೆ ಗೋಚರಿಸದಿದ್ದರು ಅದರ ಅಸ್ತಿತ್ವವನ್ನು ತಾರ್ಕಿಕವಾಗಿ ಸ್ವೀಕರಿಸಬೇಕಾಗುತ್ತದೆ. ಪ್ರತ್ಯಕ್ಷ ಜ್ಞಾನದಲ್ಲಿ ವಿಷಯದೊಡನೆ ಇಂದ್ರಿಯಗಳ, ಇಂದ್ರಿಯಗಳೊಡನೆ ಮನಸ್ಸಿನ, ಮನಸ್ಸಿನೊಡನೆ ಆತ್ಮದ ಸಂಬಂಧ ಇರುತ್ತದೆ. ಯಾವುದೇ ವಸ್ತುವಿನ ಜ್ಞಾನವಾಗಬೇಕಾದರೆ ಬಾಹ್ಯದಲ್ಲಿಯ ವಸ್ತು/ ವಿಷಯದ ಅವಶ್ಯಕತೆಯೊಂದಿಗೆ, ಆಂತರಿಕವಾದ ಮನಸ್ಸು ಬೇಕು. ಅಂತೆಯೇ ಮನಸ್ಸಿನ ಅಸ್ತಿತ್ವವು ಅಪೇಕ್ಷಿತ ಸತ್ಯವು ಹೌದು.

ಹನ್ನೆರಡನೇಯ ಶತಮಾನದಲ್ಲಿ ಕರ್ನಾಟಕದಲ್ಲಿ ಆಗಿಹೋದ ಶಿವಶರಣೆಯರ ಗುಂಪಿನಲ್ಲಿ ಅಗ್ರಳಾದ ಅಕ್ಕಮಹಾದೇವಿ ತನ್ನ ವಚನದಲ್ಲಿ ಮನಸ್ಸಿನ ಅಸ್ತಿತ್ವ ಹಾಗೂ ಅದರ ಕಾರ್ಯ ವೈಖರಿಯ ಕುರಿತು ಹೇಳಿದ್ದಾಳೆ.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನ ಮಲ್ಲಿಕಾರ್ಜುನಾ?
(ಅ.ವ.ಸಂ:297)

ಜಗತ್ತಿನಲ್ಲಿ ನಡೆಯುವ ದೈನಂದಿಕ ಕಾರ್ಯಕಲಾಪಗಳಿಗೆ ಬೆಳಕಾಗುವ ಶಕ್ತಿಯೇ 'ಸೂರ್ಯ'. ಸೂರ್ಯನ ಬರುವಿಕೆಯಿಂದ ಪ್ರತಿಯೊಂದು ಕ್ರಿಯೆಗಳು ನಡೆಯುತ್ತವೆ ಹಾಗೂ ಜಾಗ್ರತರಾಗುತ್ತೇವೆ. ಸೂರ್ಯ ಸಂಜೀವಿನಿ ಶಕ್ತಿ ಇದ್ದಂತೆ. ಸಸ್ಯಗಳಾಗಲಿ, ಹೊಲದಲ್ಲಿಯ ಪೈರಾಗಲಿ, ಗಿಡಮರಗಳಿಗಾಗಲಿ, ಪ್ರಾಣಿಪಕ್ಷಿಗಳ ಕಲರವಗಳಿಗಾಗಲಿ ಸೂರ್ಯಶಕ್ತಿ ಬೇಕು. ಅದರಂತೆ ಮಾನವನಿಗೂ ಅವಶ್ಯವೆಂಬ ಮಾತು ಈ ವಚನದಲ್ಲಿ ಕಂಡುಬರುವುದು. ಮುಂದುವರಿದು ಇಂದ್ರಿಯಗಳು ಕಾರ್ಯ ಪ್ರವೃತ್ತರಾಗಲು 'ಮನಸ್ಸೆ' ಬೀಜ ಶಕ್ತಿ ಎಂಬುದು ಅಕ್ಕಳ ಮಾತಿನಲ್ಲಿ ಧ್ವನಿತವಾಗಿದೆ. ಮನಸ್ಸೆಂಬ ಚಾಲಕ ಶಕ್ತಿಯಿಂದ ಇಂದ್ರಿಯಗಳು ಕಾರ್ಯನಿರತವಾಗಲು ಸಾಧ್ಯ. ಸೂರ್ಯ ಜಗದ ಕ್ರಿಯೆಗೆ ಚಾಲಕ ಶಕ್ತಿಯಾದರೆ, ಮನಸ್ಸು ದೇಹಕ್ರಿಯೆಗೆ ಚಾಲಕ ಶಕ್ತಿ. ಅವುಗಳ ಮಧ್ಯ ಹೇಗೆ ಕಾರ್ಯ ನಡೆಯುತ್ತೆ ಎಂದು ತೋರಿಸಲು ಸಾಧ್ಯವಿಲ್ಲದಿದ್ದರೂ, ಅನೋನ್ಯವಾದ ಸಂಬಂಧವಿದೆ ಎಂದು, ಮನೋವೈಜ್ಞಾನಿಕವಾಗಿ ವಿವರಿಸಿದ್ದಾಳೆ.

ಹಾಗಾಗಿ, ನಿತ್ಯದ ಬದುಕಿನಲ್ಲಿ ಮನಸ್ಸು ಆಲೋಚನ ಮಾರ್ಗಕ್ಕನುಸಾರವಾಗಿ ನಡೆ–ನುಡಿಗಳನ್ನು ರಚಿಸುವುದು. ಮನಸ್ಸು ಮುಂದೆ ಮುಂದೆ ಸಾಗಿದರೆ ಅದರ ಹಿಂದೆ ಶರೀರವು ಸಾಗುತ್ತದೆ. ಬ್ರಹ್ಮಚಾರಿಗಳಾಗಿರಲಿ, ಸಂಸಾರಸ್ಥರಾಗಲಿ, ಧಾರ್ಮಿಕ ಆಧ್ಯಾತ್ಮಿಕ ಜೀವಿಗಳಾಗಲಿ ಇಲ್ಲವೇ ವೈಜ್ಞಾನಿಕ ಭಾವವುಳ್ಳವರಾಗಲಿ, ಅವರಲ್ಲಿ ಸೌಂದರ್ಯಪ್ರಜ್ಞೆ, ಸಂತೋಷಮಯ ವಾತಾವರಣ, ಕಹಿಭಾವನೆ ಮುಂತಾದ ಗುಣಗಳು ಮೂಡಲು ಮನಸ್ಸು ಕಾರಣ. ನಿತ್ಯದ ನಮ್ಮ ಬದುಕನ್ನು ಬದಲಾಯಿಸುವ ಮತ್ತು ಸುಸ್ಥಿರಗೊಳಿಸುವ ಗುಣವು ಅದರಲ್ಲುಂಟು. ಶರೀರ ಮನಸ್ಸಿನ ಹತೋಟಿಯಲ್ಲಿ ಬಂದರೆ ಕೆಲವು ಸಂದರ್ಭದಲ್ಲಿ ಕಷ್ಟಕ್ಕೂ ಸಿಲುಕುವ ಸಾಧ್ಯತೆಗಳುಂಟು. ಮನಸ್ಸಿನ ಕಾರ್ಯ ಚಟುವಟಿಕೆ ಒಮ್ಮೆ ಗಮನಿಸಿ: ಆಕಾಶದ ಕಡೆ ನೋಡಿದಾಗ ಅದರ ವಿಸ್ತಾರತೆ ನಮ್ಮ ಮನಸ್ಸಿನಲ್ಲಿ ಪರಿವರ್ತನೆಯನ್ನು ಹಾಗೂ ನಾವೆಲ್ಲರೂ ವಿಶಾಲವಾದ ಆಕಾಶದಡಿಯಲ್ಲಿದ್ದೇವೆಂಬ ಭಾವನೆಯನ್ನು ಸೃಜಿಸುವುದು. ಇದರಿಂದ ನಿತ್ಯ ಬದುಕಿನ ಸಾಮಾನ್ಯ ಭಾವನೆಯಿಂದ ಸೈದ್ಧಾಂತಿಕ ಬೆಳಕಿನೆಡೆಗೆ 'ಎಲ್ಲ ಮಾನವರು ಒಂದು' ಎಂಬ ಬದುಕಿನೆಡೆಗೆ ಹೆಜ್ಜೆ ಹಾಕಬಹುದು. ನಮ್ಮದಲ್ಲದ ವಸ್ತುವನ್ನು ಅಪೇಕ್ಷಿಸಿ ಕಳ್ಳತನ ಮಾಡಿದರೆ ಅದರಿಂದ ಶಿಕ್ಷೆಗೂ ಗುರಿಯಾಗಬಹುದಲ್ಲವೇ? ಹೀಗೆ ಮನಸ್ಸು ಧನಾತ್ಮ ಹಾಗೂ ಋಣಾತ್ಮಕ ಕಾರ್ಯವನ್ನು ಮಾಡಲು ಪ್ರೇರೇಪಿಸಬಹುದು. ಆದರೆ, ಯಾವುದನ್ನು ಮಾಡಬೇಕು ಅಥವಾ ಮಾಡಬಾರದೆಂಬ ನಿರ್ಣಯ ಮಾತ್ರ ಬುದ್ಧಿಯದು.

ಬದುಕಿನಲ್ಲಿ ಪರಿವರ್ತನೆಯ ಗುಣಬೇಕು. ಆದರ್ಶಗಳಿಲ್ಲದ ಬದುಕು ನಿರುಪಯುಕ್ತ ಧಾರ್ಮಿಕ ಹಾಗೂ ಆಧ್ಯಾತ್ಮ ಜೀವಿಗಳ ಮುಖ್ಯ ಉದ್ದೇಶ; ಅರಿಯುವುದು ಬದುಕನ್ನು ವಿಸ್ತರಿಸಿಕೊಳ್ಳುವುದು. ಅಂತೆಯೇ ಸಂತರು, ಋಷಿಗಳು, ಮಹಾಂತರು ಆಧ್ಯಾತ್ಮಿಕ ಸ್ಥಿತಿಯನ್ನು ಅನುಭವಾತೀತ ಸ್ಥಿತಿಗೆ ಅಥವಾ ಇಂದ್ರಿಯಾತೀತ ಸ್ಥಿತಿಗೆ ಹೋಲಿಸುತ್ತಾರೆ. ಜಗತ್ತಿನಲ್ಲಿ ಒಂದು ಸ್ಥಿತಿ ಇದೆ ಎಂದು ಹೇಳುವಾಗ ಅದರ ವಿರುದ್ಧದ ಸ್ಥಿತಿಯನ್ನು ಒಪ್ಪಿಕೊಳ್ಳಲೇಬೇಕು. ಇಂದ್ರಿಯಗಳ ಜ್ಞಾನ (ಸ್ಥಿತಿ) ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯವೇ. ಇದನ್ನೆ ಸಾಮಾನ್ಯ ಜ್ಞಾನವೆಂದು ಕರೆಯುತ್ತಾರೆ. ಅದಕ್ಕಿಂತಲೂ ವಿಶೇಷವಾದ ಜ್ಞಾನವೇ ಇಂದ್ರಿಯಾತೀತ ಜ್ಞಾನ. ಅದನ್ನು ಪಡೆಯಲು ಸಾಧ್ಯವಿದೆ. ನಾವು ಕತ್ತಲೆಯ ಜ್ಞಾನವನ್ನು ಹೊಂದಬೇಕೆಂದರೆ ಬೆಳಕಿನ ಅರಿವು ಇರಲೇಬೇಕು. ದು:ಖದ ಅರಿವಾಗಬೇಕಾದರೆ ಸುಖವೆಂದರೇನು ಎಂಬುದರ ಅರಿವು ಇರಬೇಕು. ಆಧ್ಯಾತ್ಮಿಕ ಜೀವನದಲ್ಲಿ ಬಹುಮುಖ್ಯವಾಗಿ ಲಭಿಸುವುದು 'ಆನಂದ'. ಈ ಸ್ಥಿತಿಯು ದಾರ್ಶನಿಕ ಜಗತ್ತಿನಲ್ಲಿ ಸತ್–ಚಿತ್–ಆನಂದ ಸ್ವರೂಪನಾದ ಬ್ರಹ್ಮನಿಗೆ ಹೋಲಿಸಲಾಗಿದೆ. ಆನಂದವೆಂದರೆ ಲೌಕಿಕವಲ್ಲ. ಅಲೌಕಿಕ ಆಧ್ಯಾತ್ಮಿಕ ಆನಂದಕ್ಕೆ ವಿರುದ್ಧವಾದುದನ್ನು ಹೇಳಲು ಸಾಧ್ಯವಿಲ್ಲವೆಂದು ಹೇಳುವುದು ಸಮಂಜಸವಲ್ಲ. ಆದರೂ ವೈಜ್ಞಾನಿಕವಾಗಿ (ಭೌತಿಕವಾಗಿ) ನಾವು ಆನಂದವನ್ನು ಸುಖವೆಂದು ಹೆಸರಿಸಬಹುದು. ಇದರ ಕುರಿತು ವಿಜ್ಞಾನ ಹೆಚ್ಚು ಚರ್ಚಿಸುತ್ತದೆ. ಅದು ತಾತ್ಪೂರ್ತಿಕವಾದುದು. ಆದರೆ, ಆನಂದ ಇದೆಲ್ಲವನ್ನು ಮೀರಿದ್ದು. ಅದರ ಬಗೆಗೆ ಮಾತನಾಡುವುದೇ ವಿಜ್ಞಾನಕ್ಕೆ ಕಷ್ಟ. ಮೌನವೇ ಅದರ ವಿವರಣೆ. ಅದನ್ನು ಪಡೆಯಲು ನಮಗೆ ಬೇಕಾದ ಅತ್ಯಂತ ಸರಳವಾದ ವಿಧಾನವೆಂದರೆ 'ಧ್ಯಾನ'.

ವಿಶ್ವದಲ್ಲಿರುವ ದ್ವಂದ್ವಗಳು ಪ್ರತಿಯೊಂದು ವಿಷಯವನ್ನು ಸಂಶಯದ ದೃಷ್ಟಿಯಿಂದ ನೋಡಲು ತೊಡಗಿಸುತ್ತವೆ. ಅದನ್ನೇ ಶಂಕರಾಚಾರ್ಯರು 'ಮಾಯೆ' ಎಂದು ಕರೆದಿರುವರು. 'ಮಾಯೆ'ಯಿಂದ ಹೊರಗುಳಿಯಲು ಸಾಧ್ಯವಾದ ಸ್ಥಿತಿಯೇ ಧ್ಯಾನ. ಧ್ಯಾನವು ಮಾಯಾಸ್ಥಿತಿಯ ನಿವೃತ್ತಿ. ಆಗ ತನ್ನಿಂದ ತಾನೆ ಆನಂದ ಸ್ಥಿತಿ ಪ್ರಾಪ್ತವಾಗುವುದು. ಇದರ ಕುರಿತು ಮಾತನಾಡಲು ಸರಳವೆನಿಸಿದರು, ಇದರ ಲಾಭ ಪಡೆಯಲು ಬುದ್ಧನಿಗೆ ಹದಿನೈದು ವರ್ಷಗಳೇ ಗತಿಸಿದವು. ಇನ್ನೂ ಮಹಾವೀರರಿಗೆ ಹೆಚ್ಚಿನ ವರ್ಷಗಳೇ ಬೇಕಾದವು. ಇದೊಂದು ಧೀರ್ಘಕಾಲಿನ ಪ್ರಕ್ರಿಯೆ. ಅಷ್ಟೇಅಲ್ಲದೆ ಸಧೃಡ–ಸಬಲ ಮನಸ್ಕರಿಗೆ ಮಾತ್ರ ಸಾಧ್ಯ. ಅದಕ್ಕಾಗಿ ತ್ಯಾಗ ಮತ್ತು ತಾಳ್ಮೆ ಬಹುಅವಶ್ಯ. ನಿಸರ್ಗದಲ್ಲಿರುವ ಎಷ್ಟೋ ದ್ವಂದ್ವಗಳಿಗೆ ಹಲವು ತರ್ಕಬುದ್ಧಿಯ ವಿಚಾರಗಳಿಗೆ ತೆರೆ ಎಳೆದಾಗಲೇ–ಗೊಂದಲಗಳಿಗೆ ವಿರಾಮವಾದಾಗಲೇ–ಆನಂದ ಸ್ಥಿತಿ ಉಂಟಾಗುವುದು. ಇದನ್ನು ದ್ವಂದ್ವಗಳಿಗೆ ಮೀರಿದ ಇಲ್ಲವೇ ಏಕಾಗ್ರತೆಯನ್ನು ಸಾಧಿಸಿದ ಸ್ಥಿತಿ ಎಂದು ಅರ್ಥೈಸಲಾಗಿದೆ. ಪ್ರಾಚೀನ ಕಾಲದ ಮಹಾ ಮೇಧಾವಿ ಮನೋವಿಜ್ಞಾನಿ, ಯೋಗದರ್ಶನದ ಪಿತಾಮಹ ಪತಂಜಲಿ **ಅಷ್ಟಾಂಗಯೋಗ**ದಲ್ಲಿ ಏಳನೆಯ ಮೆಟ್ಟಿಲನ್ನಾಗಿ ಧ್ಯಾನವನ್ನು ಹೇಳಿದ್ದಾರೆ. ಯೋಗ ಸೂತ್ರದಲ್ಲಿ ಹೀಗೆ ವರ್ಣಿಸಲಾಗಿದೆ.

**ತತ್ರ ಪ್ರತ್ಯಯೈಕ ತಾನತಾ ಧ್ಯಾನಂ** (ಯೋಗ ಸೂತ್ರ 3=2)

ಧ್ಯಾನಾವಸ್ಥೆಯಲ್ಲಿ ಧ್ಯೇಯವಸ್ತು ಇರಲೇಬೇಕು. ಇಲ್ಲವಾದರೆ ಧ್ಯಾನಕ್ರಿಯೆಗೆ ಮಹತ್ವ ಸಿಗಲಾರದು. ಅಲ್ಲದೆ ಧ್ಯಾನಕ್ರಿಯೆ ನಡೆಯದು. ಧ್ಯೇಯ–ಧಾತೃ–ಧ್ಯಾನ ಈ ಮೂರರ ಸಂಗಮೇ ಧ್ಯಾನಾವಸ್ಥೆ. ಧಾತೃ,

ತಾನು ಪಡೆಯಬೇಕಾದ ಯಾವ ಅಡೆತಡೆ ಇಲ್ಲದೆ/ನಿರಾತಂಕವಾಗಿ ಪ್ರವಹಿಸುವ ಹಾಗೂ ತಡೆಯಲು ಬೇರಾವ ಸನ್ನಿವೇಶಗಳು ಇರದಿರುವ ಸ್ಥಿತಿಯೇ ಧ್ಯಾನ. ಇಲ್ಲಿ ವಿಷಯದಲ್ಲಿ ಚಿತ್ತವು ಬಂಧಿಸಲ್ಪಡದಿರುವ ಹಾಗೂ ಏಕಾಗ್ರತೆಯಲ್ಲಿ (ಧ್ಯೇಯವಸ್ತುವಿನಲ್ಲಿ) ಅಖಂಡವಾಗಿ ನಿಲ್ಲುವ ಸ್ಥಿತಿ ಉಂಟಾಗುವುದು. ಅದರಿಂದ ಕೇವಲ ಆಧ್ಯಾತ್ಮ ಜ್ಞಾನಮಾತ್ರ ಉತ್ಪತ್ತಿಯಾಗುವದೆಂದು ಭಾವಿಸಬೇಕಾಗಿಲ್ಲ. ಇದೊಂದು ಆತ್ಮಜ್ಞಾನದ ಪ್ರಕ್ರಿಯೆಯಷ್ಟೇ ಅಲ್ಲ. ಎಲ್ಲ ವಿಧದ ನೈಜ ಜ್ಞಾನಕ್ಕೆ ತುಂಬಾ ಸಹಕಾರಿಯಾಗುವುದು. ಸಾಮಾನ್ಯ ಓದುವ ಪ್ರಕ್ರಿಯೆಯಲ್ಲಿ ಇದರ ಅವಶ್ಯಕತೆ ಇದೆ. ಹೀಗೆ **ಧ್ಯಾನ** ವಿಶಾಲವಾದ ಅರ್ಥದಲ್ಲಿ ತನ್ನ ಹೊಳಪನ್ನು ವಿನ್ಯಾಸಗೊಳಿಸುತ್ತದೆ. ಉದಾಹರಣೆ: ವಿದ್ಯಾರ್ಥಿಗಳು, ವಿದ್ಯಾರ್ಜನೆಯಲ್ಲಿ ಏಕಾಗ್ರತೆಯನ್ನು ಕಾಯ್ದುಕೊಂಡಾಗ ಮಾತ್ರ ಯಶಕಾಣಲು ಸಾಧ್ಯ. ಪತಂಜಲಿಯವರ ಪ್ರಕಾರ ಧ್ಯಾನಾವಸ್ಥೆಯ ಪೂರ್ವದಲ್ಲಿ ಆರು ಅವಸ್ಥೆಗಳಿವೆ (ಮೆಟ್ಟಿಲುಗಳು). ಅವೆಲ್ಲವನ್ನು ಸಾಧಿಸಿದಾಗ ಮಾತ್ರ ಧ್ಯಾನ ಸಾಧ್ಯವಾಗುವುದು–ಪೂರ್ಣವಾಗುವುದು. ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಹಾಗೂ ಅಂತಃಕರಣಗಳೂ (ಮನಸ್ಸನ್ನು ಒಳಗೊಂಡು) ಪ್ರತ್ಯಾಹಾರವನ್ನು ಕೈಕೊಂಡಾಗ ಮಾತ್ರ ಸಾಧ್ಯವೆಂಬುದು ಮನೋವೈಜ್ಞಾನಿಕ ಸತ್ಯ.

ಧ್ಯಾನದಲ್ಲಿ ಜೀವಾತ್ಮನ ಮೂಲ ಸ್ವರೂಪವನ್ನು–ಸಹಜ ಸ್ಥಿತಿಯನ್ನು–ಗುರುತಿಸಲು ಸಾಧ್ಯ. ಜೀವಾತ್ಮನಲ್ಲಿ ಆನಂದವುಂಟಾಗಿ ವಿಶ್ವವೆಲ್ಲವು ಆನಂದಮಯವಾಗುವುದು. ವಿಶ್ವವೆಲ್ಲವು ಸತ್ಯ–ಶಿವ–ಸುಂದರಮಯ. ಅಂತೆಯೇ ಅನುಭಾವಿಗಳು **ವಿಶ್ವತೋ ಬಾಹು ನೀನೆ ದೇವಾ**. . . ಎಂದು ಹಾಡಿದ್ದಾರೆ. ಅನುಭಾವಿ ಅಥವಾ ಧ್ಯಾನಿಯು ಮರಳಿ ಅಜ್ಞಾನದ ಸುಳಿಗೆ ಸಿಲುಕಲಾರ. ಪರಿಪೂರ್ಣದೆಡೆಗೆ ಆತನ ಪಯಣವಾದಾಗ, ಹೊರಳಿ ಬರಲಾರ. ಆಗ ಅವನು ವಿಶ್ವದ ಒಂದು ಭಾಗವಾಗುತ್ತಾನೆ. ಇಲ್ಲವೇ ವಿಶ್ವವೇ ತಾನಾಗುತ್ತಾನೆ. ಈ ಸ್ಥಿತಿಯಲ್ಲಿ ವಿಶ್ವವಲ್ಲದ ನಾನಾಗಲಿ, ನಾನಿಲ್ಲದ ವಿಶ್ವವಾಗಲಿ ಅರ್ಥಾಥ ದೇವನಿಲ್ಲದೆ ಇರಲು ಸಾಧ್ಯವಿಲ್ಲ. ವಿಶ್ವವು ಸಾಕ್ಷಾತ್ ಬ್ರಹ್ಮವೇ ಆಗಿದೆ. ಸರ್ವಾಂತರ್ಯಾಮಿಯಾದ ಹಾಗೂ ಸರ್ವವ್ಯಾಪಕನಾದ ಪರಬ್ರಹ್ಮದ ಸ್ವರೂಪ ಅದು. ಅಂತೆಯೇ ಮನುಷ್ಯ ನಿಸರ್ಗದ ಕೂಸು. ಅಷ್ಟೇಅಲ್ಲ, ದೈವದ ಕೂಸು. ಕೊನೆಗೆ ದೈವಸ್ವರೂಪಿ ಆಗುತ್ತಾನೆ. ಇನ್ನೂ ಮುಂದುವರಿದು ಶಂಕರರಂತಹ ಮಹಾಜ್ಞಾನಿಗಳು ವೇದಗಳ ಮಾತಾದ 'ಅಹಂ ಬ್ರಹ್ಮಾಸ್ಮಿ' ಎಂಬ ನುಡಿಯನ್ನು ವಿನಮ್ರತೆಯಿಂದ ಪುಷ್ಟಿಕರಿಸಿದ್ದಾರೆ. ಇದು ಅಹಂಕಾರದ ಮಾತಲ್ಲ. ಈ ಸ್ಥಿತಿಯಲ್ಲಿ ಅಹಂಕಾರ ಮೂಡಲು ಸಾಧ್ಯವಿಲ್ಲ. **ನದಿ ಸಮುದ್ರವ ಬೆರತಂತೆ** ಎಂದು **ಉಪ್ಪಿನ ಗೊಂಬೆ ಸಮುದ್ರವ ಸೇರಿದಂತೆ** ಎಂದು ಮುಂತಾಗಿ ವಚನಕಾರರು ಹಾಡಿಹೊಗಳಿದ್ದಾರೆ. ಇದೆಲ್ಲ ಮನಸ್ಸಿನ ತಾದಾತ್ಮ್ಯತೆಯ ಭಾವನೆ. ಅಂತೆಯೇ ಮನಸ್ಸಿನ ಪಾತ್ರವು ಕೂಡಾ ಅಷ್ಟೇ ಹಿರಿದು. ಮನಸ್ಸು ಕಣ್ಣಿಗೆ ಕಾಣದಿದ್ದರೂ, ಕೈಗೆ ಹಿಡಿಯಲು ಸಾಧ್ಯವಿಲ್ಲದಿದ್ದರು, ಎಲ್ಲ ಕ್ರಿಯೆಯನ್ನು ಮನಸ್ಸು ಮೂಡಿಸುವುದಂತು ¸ÀÀ CAvÉiÁÀ MAz ÀUÁz Éª ÀÀw£ÀvÉ **ಮನಸ್ಸಿದ್ದಲ್ಲೆ ಮಾರ್ಗ**. ಎಲ್ಲಿ ಮನಸ್ಸು ಹರಿದಾಡುವುದೋ/ಚಲಿಸುವುದೋ ಅಲ್ಲೆಲ್ಲ ನಮಗೆ ಚಲಿಸಲು ದಾರಿಗಳುಂಟು. ಒಂದು ವೇಳೆ ಅಲ್ಲಿ ಮನಸ್ಸು ಚಲಿಸದಿದ್ದರೆ, ದಾರಿ ಇಲ್ಲವೆಂದರ್ಥ. ಮನುಷ್ಯ ಮನಸ್ಸು ಮಾಡಿದರೆ ಎಲ್ಲವನ್ನು ಸಾಧಿಸಬಹುದೆಂಬುದಕ್ಕೆ ಇದುವೇ ಸಾಕ್ಷಿ. ಅಲ್ಲಿ ನಾವು ಪೂರ್ಣವಾಗಿ ನಮ್ಮನ್ನು ಸಮರ್ಪಿಸಿಕೊಳ್ಳುವುದು. ಅಂತೆಯೇ ಮನಸ್ಸಿನ ಕ್ರಿಯೆ ಧ್ಯಾನದಲ್ಲಿ ಬಹುಮುಖ್ಯ.

**ಸಮಾರೋಪ:** ಧ್ಯಾನ ಸಂಜೀವಿನ ರೂಪದ ಒಂದು ಉತ್ತಮವಾದ ಸಾಧನ ಸಿದ್ದಿಗಾಗಿ, ಯೋಜನೆಗಾಗಿ, ಯೋಚನೆಗಾಗಿ, ಅಂದಂತೆ ಸಾಧಿಸಲು (ಲೌಕಿಕ ಹಾಗೂ ಅಲೌಕಿಕ) ಜೀವನಿಗೆ ಜೀವ ತುಂಬಬಲ್ಲದು. ಕೇವಲ ಯೋಗಿಗಷ್ಟೇ ಅಲ್ಲ ಎಲ್ಲರಿಗೂ ಬೇಕು. ಧ್ಯಾನವನ್ನು ಸಾಧಿಸಿದಾತನಿಂದ ಅದರ ಔಚಿತ್ಯವನ್ನು ತಿಳಿಯಬಹುದು. ಅಲ್ಲಿ ಮನಸ್ಸಿನ ಪಾತ್ರವು ಬಹು ಹಿರಿದು. ಕ್ಷಣಕ್ಷಣಕ್ಕೆ ಎಲ್ಲೆಂದರಲ್ಲಿ ಓಡಾಡುವ ಮನಸ್ಸಿಗೆ ನಿಯಂತ್ರಣ ಬಲು ಅವಶ್ಯ. ಅದರಿಂದ ಅಜರಾಮರವಾದ–ಶಾಶ್ವತವಾದ ಸತ್ಯವನ್ನು ಸಾಧಿಸಲುಬಹುದು. ಮನಸ್ಸನನ್ನು ಊರ್ಧ್ವಮುಖಿಯಾಗಿ ಮಾಡುವ ಕೆಲಸ ಬಹು ಕಷ್ಟ. ಆದರೆ ಅಸಾಧ್ಯವೆಂದಲ್ಲ. ನಿರಂತರ ಅಭ್ಯಾಸಬಲದಿಂದ ಸಾಧಿಸಬಹುದು. ಅಂತೆಯೇ 'ಮನಸ್ಸಿದ್ದಲ್ಲೆ ಮಾರ್ಗ'ವೆಂದು ಕರೆಯಲಾಗಿದೆ.

**ಗ್ರಂಥಋಣ:**

1) ತೀರ್ಥರಾಮ ವಳಲಂಬೆ: ದೇಶಕಾಲ ಬದುಕು ಮತ್ತು ದೇವರು, ಪ್ರಕಾಶಕರು: ಯಾನ ಪ್ರಕಾಶನ ಮಂಗಳೂರು (2010)

2) ಜೆ.ಕೃಷ್ಣಮೂರ್ತಿ: ಧ್ಯಾನದಲ್ಲಿ ಮನಸ್ಸು ಪ್ರಕಾಶಕರು: ಬೆಂಗಳೂರು ಎಜ್ಯುಕೇಷನ್ ಸೆಂಟರ್, ಕೃಷ್ಣಮೂರ್ತಿ ಫೌಂಡೇಷನ್ (ಇಂಡಿಯಾ) ಬೆಂಗಳೂರು (1996)

3) ಹಾ.ಮೂ. ನಾಯಕ್ (ಸಂ): ಭಾರತೀಯ ದರ್ಶನ ಪ್ರಕಾಶಕರು: ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು (1970)

4) ಡಾ. ಪ್ರಭುಶಂಕರ (ಭಾಷಾಂತರ): ಭಾರತೀಯ ತತ್ವಶಾಸ್ತ್ರದ ರೂಪರೇಖೆಗಳು: ಪ್ರಕಾಶಕರು: ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು (1973)

## ಭಾರತೀಯ ತತ್ವಜ್ಞಾನದಲ್ಲಿ ಚಾರ್ವಾಕ ನೀತಿಶಾಸ್ತ್ರ

ಡಾ.ಬಿ.ಎಚ್.ಗುಜಲಾರ್
ಸಹ ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೦೩.

ನೀತಿಶಾಸ್ತ್ರ ಎಂದರೆ ಸಾಮಾನ್ಯವಾಗಿ ಮನುಷ್ಯನ ನಡವಳಿಕೆಯ ಸಂಬಂಧವನ್ನು ಅಧ್ಯಯನ ಮಾಡುವುದಾಗಿದೆ ಒಂದು ಸಮಾಜದಲ್ಲಿ ಅದರ ಚೌಕಟ್ಟುಗಳಿಗೆ ಅನ್ವಯವಾಗಿ ನಡೆದುಕೊಳ್ಳುವುದೇ ನೀತಿಶಾಸ್ತ್ರದ ಇನ್ನೊಂದು ಪರ್ಯಾಯ ಅರ್ಥವಾಗಿರುತ್ತದೆ.

ಆದರೆ ವೈದಿಕ ದರ್ಶನಗಳಲ್ಲಿ ಬರುವ ಚಾರ್ವಾಕ ದರ್ಶನವು ನೀತಿಶಾಸ್ತ್ರವನ್ನು ವಿಭಿನ್ನ ರೀತಿಯಲ್ಲಿ ವ್ಯಕ್ತ ಪಡಿಸುತ್ತಾರೆ. ಎಸ್.ಕೆ. ಮೈತ್ರ ಅವರ The Ethics of the Hindus ಎನ್ನುವ ಗ್ರಂಥದಲ್ಲಿ ಚಾರ್ವಾಕರು ಸುಖವಾದಿಗಳಾಗಿದ್ದರೆ ಮತ್ತು ನಾವು ಯಾವುದೇ ಕರ್ತವ್ಯವನ್ನು ಮಾಡಿದರೂ ಅದರಿಂದ ಹೆಚ್ಚು ಹೆಚ್ಚು ಸುಖವನ್ನು ಇಚ್ಚಿಸುತ್ತೇವೆ. 'ಚಾರ್ವಾಕರು ಇಂದ್ರಿಯ ಸುಖಕ್ಕೆ ಹೆಚ್ಚು ಪ್ರಾಧ್ಯಾನ್ಯತೆ ಕೊಡುತ್ತಾರೆ. ಅವರ ಮುಖ್ಯ

ಉದ್ದೇಶವಾದ 'Eat leave & enjoy' ಎಂಬುದಾಗಿದೆ. ಏಕೆಂದರೆ ಈ ಜೀವನದಲ್ಲಿ ಪರಿಪೂರ್ಣವಾಗಿ ದು:ಖವನ್ನು ತೆಗೆದು ಸಂತೋಷವನ್ನು ಅನುಭವಿಸಲು ಸಾಧ್ಯವಿಲ್ಲ. ಆದ್ದರಿಂದ ಬುದ್ಧಿವಂತ ವ್ಯಕ್ತಿಯು ಹೆಚ್ಚು ಸುಖವನ್ನು ಅನುಭವಿಸುತ್ತಾನೆ ಮತ್ತು ಕಡಿಮೆ ದು:ಖವನ್ನು ಅನುಭವಿಸುತ್ತಾನೆ. ಚಾರ್ವಾಕರ ಪ್ರಕಾರ ಉಪಕಾರ ಎಂದರೆ ಒಳ್ಳೆಯದು ಅಪಕಾರ ಎಂದರೆ ಕೆಟ್ಟದ್ದು ಎನ್ನುವರು. ಈ ಪ್ರಬಂಧದಲ್ಲಿ ಚಾರ್ವಾಕರ ನೀತಿಶಾಸ್ತ್ರದ ಪ್ರಮುಖ ಅಂಶಗಳನ್ನು ಮತ್ತು ಅದನ್ನು ಕುರಿತಾದ ವಿಮರ್ಶೆಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ.

ಚಾರ್ವಾಕರ ನೈತಿಕಸಿದ್ಧಾಂತವು ಸುಖತತ್ತ್ವದ ತಿರುಳಾಗಿದೆ. ಸುಖವೇ ಜೀವನದ ಪರಮಧರ್ಮ. ಸ್ವಾರ್ಥಪರವಾದ ಭೋಗ ಲಾಲಸೆಯೇ ಜೀವನದ ಗುರಿ. ಹಸಿವು ತೃಷೆಗಳು ನೈಸರ್ಗಿಕವಾದವು. ನಮಗೆ ಇಚ್ಛೆ ಬಂದ ರೀತಿಯಲ್ಲಿ ಅವುಗಳನ್ನು ತೃಪ್ತಿಪಡಿಸುವುದು ಅನ್ಯಾಯವೇನಲ್ಲ. ಸಾವು ಅನಿವಾರ್ಯ, ಆದುದರಿಂದ ಜೀವವಿರುವವರೆಗೂ ಸುಖಪಡಬೇಕು. ತಿನ್ನು, ಕುಡಿ, ಮತ್ತು ಉಲ್ಲಾಸವಾಗಿರು ಎಂಬುದೇ ಚಾರ್ವಾಕರ ಘೋಷಣೆ. ಸ್ವರ್ಗ ನರಕ ಮತ್ತು ಪುನರ್ಜನ್ಮಗಳ ಕಲ್ಪನೆ ಒಂದು ಭ್ರಮೆ. ಹಾಗೆಯೇ ಸದ್ಗುಣವು ಒಂದು ಭ್ರಾಂತಿ. ಆದುದರಿಂದ ಐಹಿಕಜೀವನದಲ್ಲಿ ಸುಖಪಡದೇ ಸ್ವರ್ಗ ಅಥವಾ ಮುಂದಿನ ಜನ್ಮದಲ್ಲಿ ಸುಖಪ್ರಾಪ್ತವಾಗುತ್ತದೆ ಎಂಬುದು ಮೂರ್ಖತನ. ಹೀಗೆ ಚಾರ್ವಾಕದರ್ಶನವು ಮಾನವನ ಎಲ್ಲಾ ಮೌಲ್ಯಗಳಿಗೂ ಕೊಡಲಿಪೆಟ್ಟನ್ನು ಕೊಟ್ಟಿದೆ. ಚಾರ್ವಾಕದರ್ಶನದ ಪ್ರಕಾರ ಎಲ್ಲಾ ಮೌಲ್ಯಗಳು ಕೆಟ್ಟಮನಸ್ಸು ಸೃಷ್ಟಿಸಿದ ಪೆಡಂಭೂತಗಳಾಗಿವೆ. ಮತಧರ್ಮವು ಪುರೋಹಿತರ ಮತ್ತು ಪೂಜಾರಿಗಳ ಜೀವನಕ್ಕೆ ಒಂದು ಸಾಧನವಾಗಿದೆ. ಉಪನಿಷತ್ತುಗಳು ಮತ್ತು ಇತರೆ ಭಾರತೀಯ ವಿಚಾರಪಂಥಗಳು ಪ್ರತಿಪಾದಿಸಿರುವ ವೈರಾಗ್ಯ, ಸಂತಮ, ದಯೆ, ಮುಂತಾದವುಗಳನ್ನು ತಿರಸ್ಕರಿಸಿ ಚಾರ್ವಾಕರು ಸ್ವಾರ್ಥ, ಮತ್ತು ಸ್ವೇಚ್ಛಾ ಜೀವನವನ್ನು ಒತ್ತಿಹೇಳಿದ್ದಾರೆ. ನೀತಿನಿಯಮಗಳು ಮಾನವನ ಸುಖಕ್ಕೆ ಪ್ರತಿಬಂಧಕಗಳಾಗಿವೆ. ತಪಸ್ಸು, ಉಪವಾಸ, ಮುಂತಾದವು ಮನುಷ್ಯನ ಸುಖವನ್ನು ತಪ್ಪಿಸುವ ಮಾರ್ಗವಾಗಿವೆ ಎಂಬುದು ಚಾರ್ವಾಕರ ದೃಷ್ಟಿಯಾಗಿದೆ.

ಹಿಂದೂಧರ್ಮ ನಾಲ್ಕುಪುರುಷಾರ್ಥಗಳನ್ನು ಒಪ್ಪಿಕೊಂಡಿದೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಲ್ಲಿ ಚಾರ್ವಾಕರು ಅರ್ಥ ಮತ್ತು ಕಾಮಗಳನ್ನು ಮಾತ್ರ ಒಪ್ಪಿಕೊಂಡಿದ್ದಾರೆ. ಚಾರ್ವಾಕರ ದೃಷ್ಟಿಯಲ್ಲ ಧರ್ಮ ಮತ್ತು ಮೋಕ್ಷಗಳು ಅರ್ಥಹೀನವಾದ ಕಲ್ಪನೆಗಳಾಗಿವೆ. ಜೀವನದಲ್ಲಿ ಸುಖವೂ ಇದೆ. ದು:ಖವೂ ಇದೆ. ಹೀಗೆಯೇ ತಿಳಿದು ಜೀವನವನ್ನು ತ್ಯಜಿಸುವುದು ಮೂರ್ಖತನ, ಕಾಳುಗಳು ಹೊಟ್ಟಿನಿಂದ ಆವೃತವಾಗಿದೆ ಎಂದು ತಿಳಿದು ಕಾಳನ್ನು ಬಿಸಾಡುವುದಿಲ್ಲ. ಭಿಕ್ಷುಕರ ಹಾವಳಿಯಿಂದ ಅಡಿಗೆ ಮಾಡುವುದನ್ನು ಬಿಡುವುದಿಲ್ಲ. ಹಾಗೇಯೇ ಜೀವನದಲ್ಲಿ ದು:ಖವಿದೆ ಎಂದು ತಿಳಿದು ಸುಖವನ್ನು ತ್ಯಾಗಮಾಡಬಾರದು. ಚಾರ್ವಾಕರ ಪ್ರಕಾರ ಅರ್ಥ ಮತ್ತು ಕಾಮಗಳಿಗೆ ಧರ್ಮದ ಕಡಿವಾಣವಿರಬೇಕಾಗಿಲ್ಲ. ಈ ಎರಡು ಪುರುಷಾರ್ಥಗಳ ಸಾಧನೆಗಾಗಿ ಯಾವ ಮಾರ್ಗವನ್ನಾದರೂ ಅನುಸರಿಸಬಹುದೆಂದು ಅವರು ಬೋಧಿಸಿದ್ದಾರೆ.

ವೇದಗಳು ಪ್ರತಿಪಾದಿಸಿರುವ ಯಜ್ಞಯಾಗಾದಿಗಳು ಮತ್ತು ಧಾರ್ಮಿಕ ಆಚಾರಗಳು ಮೂರ್ಖರು ಮತ್ತು ಹೇಡಿಗಳಿಂದ ಸೃಷ್ಟಿಯಾಗಿವೆ. ಜೀವನೋಪಾಯಕ್ಕಾಗಿ ಅನೇಕ ಬಗೆಯ ಕರ್ಮ ಕಾಂಡಗಳನ್ನು ಪುರೋಹಿತರು ಮತ್ತು ಪೂಜಾರಿಗಳು ಮತಧರ್ಮದಲ್ಲಿ ಅಳವಡಿಸಿದ್ದಾರೆ. ಒಂದು ಯಜ್ಞದಲ್ಲಿ ಒಂದು ಪ್ರಾಣಿಯನ್ನು ಬಲಿಕೊಡುವುದರಿಂದ ಆ ಪ್ರಾಣಿಯು ಸ್ವರ್ಗಕ್ಕೆ ಹೋಗುವುದಾದರೆ ಯಜ್ಞಕರ್ತನ ತಂದೆಯನ್ನು ಏಕೆ ಬಲಿ ಕೊಡಬಾರದು. ಎಂದು ಚಾರ್ವಾಕರು ಕೇಳುತ್ತಾರೆ. ಸ್ವರ್ಗದಲ್ಲಿರುವ ಪಿತೃಗಳಿಗೆ ಆಹಾರವನ್ನು ಅರ್ಪಿಸುವ ಬದಲು ಭೂಮಿಯ ಮೇಲೆ ಹಸಿದವರಿಗೆ ಏಕೆ ಬಡಿಸಬಾರದು? ಎಂದು ಪ್ರಶ್ನಿಸುತ್ತಾರೆ. ಸುಖವೇ ಜೀವನದ ಪರಮೋದ್ದೇಶ ಎಂದು ಬೋಧಿಸುವ ಚಾರ್ವಾಕರು "ಸಾಲ ಮಾಡಿಯಾದರು ತುಪ್ಪ ತಿನ್ನು" ಎಂದು ಉಪದೇಶಿಸುತ್ತಾರೆ. ವೇದಗಳ ಕರ್ತೃಗಳು ಕೋಡಂಗಿಗಳು, ತಕ್ಕುಗಾರರು ಮತ್ತು ರಾಕ್ಷಸು ಆಗಿದ್ದಾರೆ. ಪೂಜಾರಿಗಳು ಯಜ್ಞಯಾಗಾದಿಗಳಲ್ಲಿ ಲಭ್ಯವಾಗುದ ಕಾಣಿಕೆಗಳನ್ನು ಪಡೆಯುವ ವಂಚಕರಾಗಿದ್ದಾರೆ.

ಚಾರ್ವಾಕರು ಬೋಧಿಸಿರುವ ವೈಯಕ್ತಿಕ ಸುಖತತ್ತ್ವವಾದ ಮಾವನನನ್ನು ಪ್ರಾಣಿಜೀವನಕ್ಕೆ ಕೊಂಡೊಯ್ಯುವ ಒಂದು ಉಪಾಯವಾಗಿದೆ. ಚಾರ್ವಾಕದರ್ಶನಕ್ಕೆ ಬಹುಕಾಲ ಪ್ರಚಲಿತವಾಗಿರಲು ಅವಕಾಶವಾಗಲಿಲ್ಲ. ನೈತಿಕ ಪತನವನ್ನು ಬೋಧಿಸಿದ ಈ ದರ್ಶನಕ್ಕೆ ಭಾರತದಲ್ಲಿ ಬೆಂಬಲ ದೊರೆಯಲಿಲ್ಲ. ಸುಖಪಡುವುದೊಂದೇ ಜೀವನದ ಧ್ಯೇಯವಲ್ಲ. ಜೀವನ ಸುಖಕರವಾಗಿರಬೇಕಾದರೆ ಅದು ಮೌಲ್ಯಾಧಾರವನ್ನು ಹೊಂದಿರಬೇಕು. ಧರ್ಮ ಮತ್ತು ನ್ಯಾಯರಹಿತ ಜೀವನದಿಂದ ಯಾವ ಸುಖವು ದೊರೆಯುವುದಿಲ್ಲ. ಜೀವನ ಉದಾತ್ತವಾದ ಗುರಿಯನ್ನು ಹೊಂದಿರಬೇಕು. ಹಾಗೇಯೇ ಆ ಗುರಿಯನ್ನು ಸಾಧಿಸಲು ಬಳಸುವ ಮಾರ್ಗವೂ ಉದಾತ್ತವಾಗಿರಬೇಕು. ವಾತ್ಸ್ಯಾಯನನ ಕಾಮಸೂತ್ರವು ಇಂದ್ರಿಯಗಳ ಸುಖವನ್ನು ಬೋಧಿಸಿದ್ದರೂ ಅಂತಹ ಸುಖ ಧರ್ಮಬದ್ಧವೂ, ನೀತಿಬದ್ಧವೂ ಆಗಿರಬೇಕು ಎಂದು ಹೇಳುತ್ತದೆ. ಮಾನವನು ಕೇವಲ ಒಂದು ಪ್ರಾಣಿಯಲ್ಲ. ಅವನು ಒಂದು ನೈತಿಕ ಜೀವಿಯಾಗಿದ್ದಾನೆ. ಅವನಲ್ಲಿ ಧರ್ಮ ಅಧರ್ಮಗಳ ಪ್ರಜ್ಞೆ ಇದೆ. ಅವನು ಕಲಾಭಿಮಾನಿಯೂ ಮತ್ತು ಮೌಲ್ಯಗಳನ್ನು ಆದರಿಸುವವನೂ ಆಗಿದ್ದಾನೆ. ಆದುದರಿಂದ ಚಾರ್ವಾಕದರ್ಶನವು ಪ್ರತಿಪಾದಿಸಿರುವ ನೀತಿಸಿದ್ದಾಂತವು ಮಾನವನನ್ನು ಇತರೇ ಪ್ರಾಣಿಗಳಿಗೆ ಸಮಾನವೆಂದು ಪರಿಗಣಿಸುತ್ತದೆ. ಆ ದರ್ಶನವು ಬೋಧಿಸಿರುವ ಜೀವಮಾರ್ಗವು ಮಾನವನನ್ನು ಪ್ರಾಣಿಜೀವನಕ್ಕೆ ಕೊಂಡೊಯ್ಯುತ್ತದೆ.

ಅಂಗನಾದ್ಯಾಲಿಂಗನಾದಿಜನ್ಯಂ ಸುಖಮೇವ ಪುರುಷಾರ್ಥ:। ನಚಾಸ್ಯ ದು:ಖಸಂಭಿನ್ನತಯಾ ಪುರುಷಾರ್ಥತ್ವಮೇವ ನಾಸ್ತೀತಿ ಮಂತವ್ಯಮ್। ಅವರ್ಜ ನೀಯತಯಾ ಪ್ರಾಪ್ತಸ್ಯ ದು:ಖಸ್ಯ ಪರಿಹಾರೇಣ ಸುಖಮಾತ್ರಸ್ಯೈವ ಭೋಕ್ತ ವ್ಯತ್ವಾತ್ – ತದ್ಯಥಾ ಮತ್ಸ್ಯಾರ್ಥೀಸಶಲ್ಯಾನ್ ಸಂಕಟಕಾನ್ ಮತ್ಸ್ಯಾನುಪಾದತ್ತೇ, ಸ ಯಾವದಾದೇಯಂ ತಾವದಾದಾಯ ನಿವರ್ತತೇ, ಯಥಾ ವಾ ಧಾನ್ಯಾರ್ಥೀ ಸಪಲಾಲಾನಿ ಧಾನ್ಯಾನ್ಯಾಹರತಿ, ಸ ಯಾವದಾದೇಯಂ ತಾವದಾದಾಯ ನಿವರ್ತತೇ। ತಸ್ಮಾತ್ ದು:ಖಭಯಾತ್ ನ ಅನುಕೂಲವೇದನೀಯಂ ಸುಖಂ

ತ್ಯಕ್ತುಮುಚಿತಮ್। ನ ಹಿ ಮೃಗಾ: ಸಂತೀತಿ ಶಾಲಯೋ ನೋಪ್ಯಂತೇ। ನ ಹಿ ಭಿಕ್ಷುಕಾ: ಸಂತೀತಿ

ಭೋಗವೇ ಜೀವನದ ಮುಖ್ಯ ಗುರಿ

ಅಂಗನೆಯರ ಆಲಿಂಗನ ಮುಂತಾದವುಗಳಿಂದ ಉಂಟಾಗುವ ಸುಖವೇ ಪುರುಷಾರ್ಥ. ಈ ಸುಖಮಯ ದು:ಖಮಿಶ್ರಿತವಾಗಿರುವುದರಿಂಧ ಪುರುಷಾರ್ಥವೇ ಅಲ್ಲ ಎಂದು ಯಾರೂ ಭಾವಿಸಬಾರದು. ಅವರ್ಜನೀಯವಾದ ದು:ಖವನ್ನು ಆದಷ್ಟು ದೂರಮಾಡಿ ಸುಖವನ್ನು ಮಾತ್ರ ಅನುಭವಿಸಬೇಕು. ಉದಾಹರಣೆಗೆ–ಮೀನು ಬಯಸುವವನು ಹೇಗೆ ತನಗೆ (ಬೇಡವಾದ) ಚರ್ಮ ಮತ್ತು ಮುಳ್ಳುಗಳನ್ನು ಬಿಟ್ಟು ಉಳಿದ ಭಾಗವನ್ನು ಮಾತ್ರ ಉಪಯೋಗಿಸುತ್ತಾನೋ, ಅಕ್ಕಿ ಬಯಸುವವನು ಭತ್ತದಲ್ಲಿನ ಹೊಟ್ಟು ಮುಂತಾದ ಅಸಾರವಾದುದನ್ನು ತ್ಯಜಿಸಿ, ಹೇಗೆ ಸಾರವಾದುದನ್ನು ಸ್ವೀಕರಿಸುತ್ತಾನೊ, ಅದರಂತೆಯೇ ಸುಖವನ್ನೇ ಅನುಭವಿಸುತ್ತಾ ದು:ಖವಾದುದನ್ನು ಬಿಡಬೇಕು. ಆದುದರಿಂದ – ಸುಖವು ದು:ಖ ಮಿಶ್ರಿತವಾದುದು ಎಂಬ ಭಯದಿಂದಲೇ ನಮಗೆ ಅನುಕೂಲವಾಗಿರುವ ಇಡೀ (ಪ್ರಾಕೃತಿಕ) ಸುಖವನ್ನೇ ತ್ಯಜಿಸುವುದು ಯುಕ್ತವಲ್ಲ.

ದನಗಳು ತಿನ್ನುತ್ತವೆ ಎಂದು ಯಾರೂ ಭತ್ತವನ್ನು ಬಿತ್ತದೆ ಇರುವುದಿಲ್ಲ. ಭಿಕ್ಷುಕರು ಬೇಡುತ್ತಾ ಎಂದು ಭಾವಿಸಿ ಯಾರೂ ಅಡಿಗೆ ಮಾಡದೆ ಇರುವುದಿಲ್ಲ. ತೊಂದರೆ ಇದೆ ಸ್ಥಾಲ್ಯೋ ನಾಧಿಶ್ರೀಯಂತೇ ಯದಿ ಕಶ್ಚಿದ್ಭೀರು: ದೃಷ್ಟಂ ಸುಖಂ ತ್ಯಜೇತ್, ತರ್ಹಿ ಸ ಪಶುವತ್ ಮೂರ್ಖೋ ಭವೇತ್ ತದುಕ್ತಮ್ -

ತ್ಯಾಜ್ಯಂ ಸುಖಂ ವಿಷಯಸಂಗಮಜನ್ಮ ಪುಂಸಾಂ
ದು:ಖೋಪಸೃಷ್ಟಮಿತಿ ಮೂರ್ಖವಿಷಾರಣೈಷಾ।
ವ್ರೀಹೀನ್ ಜಿಹಾಸತಿ ಸೀತೋತ್ತಮತಂಡುಲಾಢ್ಯಾನ್
ಕೋ ನಾಮ ಭೋಸ್ತುಷಕಣೋಪಹಿತಾನ್ ಹಿತಾರ್ಥೀ॥

ನನು ಪಾರಲೌಕಿಕಸುಖಾಭಾವೇ ಬಹುವಿತ್ತವ್ಯಯಶರೀರಾಯಾಸಸಾಧ್ಯೇ ಅಗ್ನಿಹೋತ್ರಾದೌ ವಿದ್ಯಾವೃದ್ಧಾ: ಕಥಂ ಪ್ರವರ್ತಿಷ್ಯಂತೇ? ಇತಿ ಚೇತ್ – ಸದೇಪಿ ನ ಪ್ರಮಾಕೋಟಿಂ ಪ್ರವೇಷ್ಟುಮೀಷ್ಟೇ ಅನೃತವ್ಯಾಘಾತಪು ನರುಕ್ತದೋಷೈ: ದೂಷಿತತಯಾ ವೈದಿಕಮ್ಮನ್ಯೈರೇವ ಧೂರ್ತವಕೈ: ಪರಸ್ಪರಂ – ಕರ್ಮಕಾಂಡ ಪ್ರಾಮಾಣ್ಯವಾದಿಭಿ: ಜ್ಞಾನಕಾಂಡಸ್ಯ, ಜ್ಞಾನಕಾಂಡಪ್ರಾಮಾಣ್ಯವಾದಿಭಿ: ಕರ್ಮ ಎಂದು ಒಂದು ವೇಳೆ ತಿಳಿದು ಯಾವನಾದರೂ ಭೀರು ಪ್ರತ್ಯಕ್ಷ ಸುಖವನ್ನು ಬಿಡುವುದಾದರೆ ಆಗ ಆತನು ಪಶುಸಮಾನ ಎಂದೇ ಭಾವಿಸಬೇಕು. ಆದ್ದರಿಂದಲೇ ಈ ರೀತಿ ಹೇಳಿದೆ.– ವಿಷಯ ಸಂಪರ್ಕದಿಂದ ಜನಿಸುವ ಸುಖವು ಯಾವಾಗಲೂ ದು:ಖಸಹಿತವಾದದ್ದು, ಆದುದರಿಂದ ಮನುಷ್ಯರು ಸುಖವನ್ನು ತ್ಯಜಿಸಬೇಕು ಎಂಬ ಅಭಿಪ್ರಾಯವು ಕೇವಲ ಮೂರ್ಖರ ವಿಚಾರ. ತನ್ನ ಕ್ಷೇಮವನ್ನು ಬಯಸುವ ಯಾವನು ತಾನೆ, ಶ್ರೇಷ್ಠವಾದ ಬಿಳುಪಾದ (ಅಕ್ಕಿಯುಳ್ಳ) ಭತ್ತವನ್ನು– ಅದು ತೌಡು ಮತ್ತು ಬೂಸದಿಂದ ಕೂಡಿದೆ ಎಂಬ ಕಾರಣದಿಂದ ಬಿಡಲು ಬಯಸುತ್ತಾನೆ?

ನೈತಿಕತೆ ಎಂದರೆ ವ್ಯಕ್ತಿಯ ನಡತೆಯನ್ನು ಅಭ್ಯಾಸ ಮಾಡುವ ಶಾಸ್ತ್ರ ಮತ್ತು ವ್ಯಕ್ತಿಯು ಇತರ ಪ್ರಾಣಿಗಳೊಂದಿಗೆ ಸಂಬಂಧವನ್ನು ಅಭ್ಯಸಿಸುವದೆಂದು ಸಹ ಅರ್ಥವಾಗುತ್ತದೆ. ಅಲ್ಲದೆ ಒಂದು ಸಮಾಜದಲ್ಲಿ ಶಾಂತಿ ಸೂವ್ಯಸ್ಥೆಯು ಸುಘಮವಾಗಿ ಸಾಗಬೇಕಾದರೆ ನೈತಿಕತೆಯ ಅವಶ್ಯಕತೆಯು ಇರುತ್ತದೆ. ನಮ್ಮ ಸಮಾಜದಲ್ಲಿರುವ ಪ್ರತಿಯೊಬ್ಬ ಸದಸ್ಯನು ಸುಖವಾಗಿಯೂ ಶಾಂತಿಯಿಂದಲೂ ಬದುಕಬೇಕಾದರೆ ಕೆಲವು ನೀತಿ ನಿಯಮಗಳನ್ನು ತಪ್ಪದೆ ಪಾಲಿಸಬೇಕಾಗುತ್ತದೆ. ಒಬ್ಬರನೊಬ್ಬರೂ ಹಿಂಸಿಸಬಾರದು. ಕೊಲ್ಲಬಾರದು. ಸುಳ್ಳು ಹೇಳಬಾರದು. ಹಾದರ ಮಾಡಬಾರದು ಮುಂತಾದ ನೀತಿಗಳನ್ನು ರೂಪಿಸಿಕೊಂಡು ಅದರಂತೆಯೇ ನಡೆದುಕೊಳ್ಳಬೇಕಾಗುತ್ತದೆ. ನೈತಿನಕ ನಿಯಮಗಳು ವಿಶ್ವದ ಪ್ರಮುಖ ಧರ್ಮಗಳಲ್ಲಿ ಪ್ರಮುಖ ಸ್ಥಾನಪಡೆದಿದೆ. ಗಾಂಧೀಜಿಯವರ ಪ್ರಕಾರ ನೀತಿ ಮತ್ತು ಧರ್ಮ ಒಂದೇ ನಾಣ್ಯದ ಎರಡು ಮುಖಗಳು.

ಆದ್ದರಿಂದ ಚಾರ್ವಾಕರ ದರ್ಶನದಲ್ಲಿ ವಯಕ್ತಿಕ ಆಸಕ್ತಿಗೆ ಹೆಚ್ಚು ಬೆಲೆಯನ್ನು ಕೊಟ್ಟಿದ್ದಾರೆ. ಈ ದರ್ಶನದಲ್ಲಿ ಸಂತೋಷಕ್ಕೆ ಮತ್ತು ಆನಂದಕ್ಕೆ ಹೆಚ್ಚು ಉತ್ತರವನ್ನು ಕೊಟ್ಟಿದ್ದಾರೆ. ಇಗೋಯಿಸ್ಟಿಕ್ ಆಗಿರುವುದರಿಂದ ವ್ಯಕ್ತಿಯು ತನ್ನ ಇಂದ್ರಿಯಗಳ ಬಯಕೆಗಳನ್ನು ಈಡೇರಿಸುವುದೆ ಒಂದು ಪ್ರಮುಖವಾಗಿರುವ ನೈತಿಕ ವಿಷಯವಾಗಿರುತ್ತದೆ. ಏಕೆಂದರೆ ಇಂದ್ರಿಯಗಳನ್ನು ಮತ್ತು ಅವುಗಳಿಂದ ಉತ್ಪತ್ತಿಯಾಗುವ ಎಲ್ಲ ಆಸೆ ಆಕಾಂಕ್ಷೆಗಳನ್ನು ಪೂರೈಸುವುದೆ ಒಂದು ಮುಖ್ಯ ನೈತಿಕ ಗುರಿಯಾಗಿರುತ್ತದೆ ಏಕೆಂದರೆ ಆಯಾ ಸುಖವನ್ನು ಬಯಸುವ ಇಂದ್ರಿಯಗಳು ಅದರಿಂದ ವಂಚನೆಯಾಗುತ್ತದೆ ಆದ್ದರಿಂದ ಇಂದ್ರಿಯಗಳು ಮತ್ತು ಅವುಗಳಿಂದ ಉತ್ಪತ್ತಿಯಾವುದು ಬಯಕೆಗಳನ್ನು ಪ್ರತಿಯೊಬ್ಬರೂ ಪೂರೈಸಬೇಕು ಎಂಬುದೇ ಚಾರ್ವಾಕರ ಮುಖ್ಯಗುರಿ ಯಾಗಿರುತ್ತದೆ.

ಮತ್ತೊಂದು ವಿಷಯ ಎಂದರೆ ಮುಂದೆ ಅಂದರೆ ಭವಿಷ್ಯದಲ್ಲಿ ಸುಖವು ಸಿಗುತ್ತದೆ ಎಂದು ಈಗಿನಿಂದಲೇ ಎಲ್ಲವನ್ನು ತ್ಯಜಿಸುವುದು ಒಂದು ಅಪರಾಧವಾಗುತ್ತದೆ ಮತ್ತು ಅನ್ಯಾಯವಾಗುತ್ತದೆ ಎಂದು ಚಾರ್ವಾಕರ ದರ್ಶನದಲ್ಲಿ ತಿಳಿಸಲಾಗಿರುತ್ತದೆ. ಅವರು ಭವಿಷ್ಯದಲ್ಲಿ ನಂಬಿಕೆಯನ್ನು ಇಟ್ಟಿಲ್ಲವಾದ್ದರಿಂದ ಏನೇ ಮಾಡಿದರು ಈ ಗತಿ ಇಲ್ಲಿಯೇ ಪೂರ್ತಿಯಾಗಬೇಕು ಎಂಬುದು ಚಾರ್ವಾಕರ ಉದ್ದೇಶವಾಗಿರುತ್ತದೆ ನಾಳೆ ಎಂಬುದು ಇಲ್ಲ ಆದ್ದರಿಂದ ಸಾಲವನ್ನು ಮಾಡಿಯಾದರು ತುಪ್ಪ ತಿನ್ನು ಎಂಬುದು ಅವರ ಉದ್ದೇಶವಾಗಿದೆ.

ಚಾರ್ವಾಕರ ಈ ಅಭಿಪ್ರಾಯವನ್ನು – ದರ್ಶನಗಳಾದ ನ್ಯಾಯ, ವೈಷೇಶಿಕ ಸಾಂಖ್ಯ ಮಿಮಾಂಸಕ ಮುಂತಾದ ದರ್ಶನಗಳು ಬಹಳ ಕಠಿಣವಾಗಿ ವಿರೋಧಿಸುತ್ತದೆ ಮತ್ತು ವಿಮರ್ಶೆಯನ್ನು ಸಹ ಮಾಡುತ್ತಾರೆ.

ಒಟ್ಟಾರೆಯಾಗಿ ಚಾರ್ವಾಕ ದರ್ಶನದಲ್ಲಿ ನೀತಿಶಾಸ್ತ್ರವನ್ನು ವಿಭಿನ್ನ ರಈತಿಯನ್ನು ವಿವರಿಸಿದ್ದಾರೆ.

**ಗ್ರಂಥಋಣ**

1) ಸರ್ವದರ್ಶನ ಸಂಗ್ರಹ:

2) ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು–570006. 1991

# ಸ್ವಾಮಿ ವಿವೇಕಾನಂದರ ಪ್ರಕಾರ ಭಕ್ತಿಯೋಗ

ಡಾ.ಎಂ.ಪಿ.ರಮೇಶ್
ಸಹಾಯಕ ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೦೩.

ಅತ್ಯುನ್ನತ ಸತ್ಯಗಳು ಎಲ್ಲಿ ಅನುಷ್ಠಾನಗೊಳ್ಳುವುದೇ ಆ ಸಮಾಜವೇ ಪರಮಶ್ರೇಷ್ಠವಾದುದು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಆಧುನಿಕ ಚಿಂತನೆಗೆ ಸ್ವಾಮಿ ವಿವೇಕಾನಂದರ ಮುಖ್ಯವಾದ ಕೊಡುಗೆ ಎಂದರೆ ಸಮಾಜವು ಐತಿಹಾಸಿನ ಅವಶ್ಯಕತೆಗಳಿಗೆ ಅನುಗುಣವಾಗಿ ಅನಂತ ರೀತಿಯಲ್ಲಿ ಪರವರ್ತನೆಯಾಗುವುದು. ಆದರೆ ಮಾನವನ ಪ್ರತಿ ಪ್ರಯತ್ನದ ಹಿಂದೆ ಮೂಲಭೂತವಾಗಿರುವ ಶಾಶ್ವತ ಮೌಲ್ಯಗಳನ್ನು ಬಿಡುವುದು ಬದಲಾಯಿಸುವುದು ಎನ್ನುವ ಮಾತಲ್ಲಿ ಯಾವ ಔಚಿತ್ಯವೂ ಇಲ್ಲ. 'ಇವುಗಳು ಮಾತ್ರವೇ ಪ್ರಗತಿಗೆ ಚಾಲನ ಶಕ್ತಿಯನ್ನು ಒಲಗಿಸಬಲ್ಲವು ಎಂದು ಅವರು ಒತ್ತಿ ಹೇಳಿದರು. ಅವರ ಕಲ್ಪನೆಯಲ್ಲಿ ಆಧ್ಯಾತ್ಮಿಕತೆಯು ಒಂದು ಪ್ರೇರಕಶಕ್ತಿ. ಅದು ಸಾಮಾಜಿಕ ಮತ್ತು ಇತರ ನೆಲೆಗಳಲ್ಲಿ ಹಲವು ಕಾರ್ಯಚಟುವಟಿಕೆಗಳ ಮುಖಾಂತರ ಮಾನವನ ಏಕೈಕ ಗುರಿಯತ್ತ ಹೋಗುವುದು. ಅಂದರೆ ಭಗವಂತನ ಸಾಕ್ಷಾತ್ಕಾರದತ್ತ'.

ಸ್ವಾಮಿ ವಿವೇಕಾನಂದರ ಪ್ರಕಾರ ಆತ್ಮ ಸಾಕ್ಷಾತ್ಕಾರಗಳ ಮಾರ್ಗಗಳು ಜ್ಞಾನಯೋಗ ಕರ್ಮಯೋಗ, ಭಕ್ತಿಯೋಗ ಮತ್ತು ರಾಜಯೋಗ. ಇವುಗಳಲ್ಲಿ ಭಕ್ತಿಯೋಗವನ್ನು ಕುರಿತು ಹೇಳುವಾಗ, ಭಕ್ತಿ ಯೋಗ ಎಂಬುದು ನಿಜವಾದ ಭಗವಂತನ ಅನ್ವೇಷಣೆ ಇದು ಪ್ರೀತಿಯಲ್ಲಿ ಆರಂಭವಾಗಿ ಅದರಲ್ಲಿಯ ಸಾಗಿ ಅಂತಿಮವಾಗಿ ಪ್ರೀತಿಯಲ್ಲಿಯೇ ಅಂತ್ಯವಾಗುವುದು.

ಸ್ವಾಮಿ ವಿವೇಕಾನಂದರು ಅತ್ಯಾಕರ್ಷಕ ವ್ಯಕ್ತಿಯೂ ಅಧ್ಯಾತ್ಮಿಕ ಅಚಾರ್ಯರು ಹೌದು ಮಾನವ ಇತಿಹಾಸ ಕಂಡ ಅಮೂಲ್ಯ ರತ್ನ, ಅಪಾರ, ಪಾಂಡಿತ್ಯ, ಪ್ರಗಲ್ಬ ವೈರಾಗ್ಯ, ವೀರ ಸಂನ್ಯಾಸಿ, ಸನಾತನ ಧರ್ಮದಲ್ಲಿ ಅಪಾರ ನಂಬಿಕೆ ಜೊತೆಗೆ ವೈಜ್ಞಾನಿಕ ವಿಚಾರಗಳು. ಅಡಕವಾಗಿದ್ದವು. ಅವರು ಆಧ್ಯಾತ್ಮದ ಪ್ರತೀಕ 'ದೇಶಕಾಲಗಳನ್ನು ಮೀರಿ ನಿಂತ ಧೀಮಂತ ವ್ಯಕ್ತಿತ್ವ ಅವರದು. ಮಾನವ ಜನಾಂಗದ ಉದ್ಧಾರಕ್ಕಾಗಿ ಶ್ರಮಿಸಿದರು. ಧರ್ಮದಲ್ಲಿ ಅಚಲವಾಗಿ ನಂಬಿಕೆಯಿದ್ದರೂ ಅದು ಕುರುಡು ನಂಬಿಕೆಯಾಗಿರಲಿಲ್ಲ. ಅವರು ದರಿದ್ರನಲ್ಲಿ ಹರಿಯನ್ನು ನೋಡಿದವರು. ದೀನದಲಿತರಿಗೂ ಆಧ್ಯಾತ್ಮದ ಕಿಡಿಯನ್ನು ಹಚ್ಚಿದವರು.

ಸ್ವಾಮಿ ವಿವೇಕಾನಂದರು (1863–1902) ಇಂದು ಜಗತ್ಪ್ರಸಿದ್ಧರಾಗಿದ್ದಾರೆ. ಅವರಿಗೆ ಈ ಖ್ಯಾತಿ ಬಂದಿದ್ದು ಅವರ ನೆಚ್ಚಿನ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರ ಸರ್ವಧರ್ಮ ಸಮನ್ವಯ ಸರ್ವೋದಯ ದಿವ್ಯ ಸಂದೇಶದಿಂದ; ಅವರು ವಿಶ್ವ ಧರ್ಮದರ್ಶನಗಳಲ್ಲಿ ಹೊಸನಾವಿನ್ಯತೆಯನ್ನುಂಟು ಮಾಡುವುದರ ಮುಖಾಂತರ ವಿಶ್ವದ ಜನರಿಗೆ ಸಮ್ಮೋಹಕ ಶಕ್ತಿಯಾಗಿದ್ದಾರೆ. ಅವರಿಗೆ ಪ್ರಾಚ್ಯ ಮತ್ತು ಪಾಶ್ಚಾತ್ಯ ತಾತ್ವಿಕ ವಿಚಾರಗಳಲ್ಲಿ ಪ್ರಭುದ್ಧತೆಯಿತ್ತು. ಪಾಶ್ಚಾತ್ಯ ವಿಜ್ಞಾನ, ಸಾಹಿತ್ಯ, ತತ್ವಗಳನ್ನು ಬಲ್ಲವರಾಗಿದ್ದರು.

ಸತ್ಯವು ಏಕಮೇವಾದ್ವಿತಿಯವೆಂದು ಸಾರುವ ಅದ್ವೈತ ತತ್ವವೇ ಪರಮಶ್ರೇಷ್ಠವೆಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಅದರಂತೆಯೇ ದ್ವೈತ, ವಿಶಿಷ್ಟಾದ್ವೈತ, ಅದ್ವೈತಗಳು ಆಧ್ಯಾತ್ಮ ವಿಕಾಸದ ಹಲವು ಹಂತಗಳಾಗಿವೆ. ಅದರಲ್ಲಿ ಅದ್ವೈತಸಿದ್ಧಿಯೇ ಈ ವಿಕಾಸದ ಆತ್ಯಂತಿಕ ಗುರಿಯೆಂಬ ನಾವಿನ್ಯ ಭಾವನೆಯನ್ನು ಸನಾತನ ಧರ್ಮವನ್ನು ಜಗತ್ತಿಗೆ ಸಾರಿದರು.

ಯದಾತ್ಮ ತತ್ವೇನತು ಬ್ರಹ್ಮ ತತ್ವಮ್
ದೀಪೋಪಮೇನೇಹ ಯುಕ್ತ: ಪ್ರಪಶ್ಯೇತ್;
ಅಜಂ ಧ್ರುವಂ ಸರ್ವ ತತ್ವೈ: ವಿಶುದ್ಧಮ್
ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಪೈ:–

"ಆತ್ಮದ ಸತ್ಯದ ಮೂಲಕವಾಗಿ ಸಂಯಮಿಯಾದ ಆಧ್ಯಾತ್ಮಿಕ ಸಾಧಕನು ಈ ದೇಹದಲ್ಲೇ ಬ್ರಹ್ಮದ ಸತ್ಯವನ್ನು ಬೆಳಕಿನಂತೆ ಸ್ವಯಂ ಪ್ರಕಾಶವಾದದ್ದೆಂದು ಕಂಡುಕೊಳ್ಳುತ್ತಾನೆ. ಆಗ ಅಜಾತವೂ ಅನಂತವೂ ಪ್ರಕೃತಿಯ ಬದಲಾವಣೆಗಳಿಂದ ಬಾಧಿತವಲ್ಲದುದೂ ಆದ ದಿವ್ಯತೆಯನ್ನು ಅರಿತು ಎಲ್ಲ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ಇದೊಂದು ಗಹನವಾದ ಹರ್ಷಮಯ ಕಂಡುಹಿಡಿಕೆ ಎಂಬುದು ಉಪನಿಷತ್ತುಗಳು ಅದನ್ನು ನಿರೂಪಿಸಲು ಬಳಸಿರುವ ಭಾಷೆಯಿಂದಲೇ ಗೊತ್ತಾಗುತ್ತದೆ. ಆತ್ಮದ ಬಗೆಗೆ ಅಂತಿಮ ಸತ್ಯವನ್ನು ಮುಟ್ಟುವದರಲ್ಲಿಯೇ ಅವರು ಅಂತಿಮ ಜ್ಞಾನವನ್ನೂ ಶಾಂತಿ ಆನಂದಗಳನ್ನೂ ಮುಟ್ಟಿದ್ದರು. ಆದ್ದರಿಂದಲೇ ಅವರು ತಮ್ಮ ಕಂಡು ಹಿಡಿಕೆಯನ್ನು ಸತ್ಯ, ಜ್ಞಾನ, ಅನಂತ ಅಥವಾ ಸತ್, ಚಿತ್, ಆನಂದಗಳ ತವನಿಧಿಯನ್ನು ಕಂಡಂತೆ ನಿರೂಪಿಸಿದ್ದರು. ಈ ಸತ್ಯವನ್ನೂ ಅದು ನೀಡುವ ಜೀವನ ಸಾಫಲ್ಯವನ್ನೂ ಕಾಣಲು ನಡೆಸಿದ ಪ್ರಯತ್ನದಲ್ಲೇ ಅವರು ವಿಶ್ವವಿಕಾಸದ ಮಾನವ ವಿಕಾಸದ ಸಮಸ್ತ ಪ್ರಕ್ರಿಯೆಯ ನಿಜವಾದ ಅರ್ಥವಿದೆ ಎಂಬುದನ್ನು ಕಂಡರು."[1]

ಆಧ್ಯಾತ್ಮಿಕ ಜ್ಞಾನವು ಮಾನವನಿಗೆ ಅನಂತ ಶಕ್ತಿ, ನಿರ್ಭೀತಿಗಳ ವರವನ್ನು ಕರುಣಿಸುತ್ತದೆ. ಅದು ಸತ್ಯ ಮತ್ತು ಪ್ರಯೋಜನಕಾರಿಯಾದದ್ದು ಎಂಬುದಕ್ಕೆ ಅತ್ಯುತ್ತಮ ಸಾಕ್ಷಿ ಅದೇ. 'ವೇದಾಂತ ಮತ್ತು ಭಾರತೀಯ ಜೀವನಕ್ಕೆ ಅದರ ಅನ್ವಯ' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ.

ಮಾನವನು ತನ್ನ ಬುದ್ಧಿ, ವಿಚಾರಗಳನ್ನು ಹರಿತಗೊಳಿಸಬಹುದು. ಅತ್ಯುತ್ತಮ ಶ್ರೀಮಂತಿಕೆ ಅಧಿಕಾರಗಳು ಅವನಲ್ಲಿರಬಹುದು. ಕಲೆ, ಸಾಹಿತ್ಯಗಳು ಒದಗಿಸುವ ಆನಂದವನ್ನು ಅವನು ಅನುಭವಿಸಬಹುದು. ಆದರೂ ಅವನ ಹೃದಯವು ಶೂನ್ಯವಾಗಿಯೇ ಇರುತ್ತದೆ. ತನ್ನ ಅಧ್ಯಾತ್ಮಿಕ ಆಯಾಮವನ್ನು ಕಂಡುಕೊಳ್ಳುವವರೆಗೆ, ದೇವರನ್ನು ಕಾಣುವವರೆಗೆ ಅವನು ತುಯ್ತ, ದು:ಖಗಳಿಗೆ ಬಲಿಯಾಗುತ್ತಾನೆ. ಭಾರತೀಯ ಚಿಂತನೆಯ ವೇದ ವಾಕ್ಯ ಇದೇ. ಶ್ವೇತಾಶ್ವತರೋಪನಿಷತ್ತು. (IV– ೯: ಶ್ಲೋಕ ಹೀಗಿದೆ. ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾ: ತದಾ ದೇವಂ ಅವಿಜ್ಞಾಯ ದು:ಖಸ್ಯಾಂತೋ ಭವಿಷ್ಯತಿ ಮಾನವರು (ತಮ್ಮ ತಾಂತ್ರಿಕ ದಕ್ಷತೆಯ ಮೂಲಕ) ಆಕಾಶವನ್ನು ಚರ್ಮದಂತೆ ಸುರುಳಿ ಸುತ್ತಬಲ್ಲರಾದರೂ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳದೆ ದು:ಖದ ಕೊನೆಯನ್ನು ಕಾಣಲಾರರು.

"ವಿವೇಕಾನಂದರ ಸೃಜನಶೀಲ ಪ್ರತಿಭೆಯನ್ನು ಸಮತೋಲನ ಮತ್ತು ಸಮನ್ವಯ ಎಂಬ ಎರಡು ಮಾತುಗಳಲ್ಲಿ ಸಂಗ್ರಹಿಸಬಹುದು. ಆತ್ಮದ ಸಕಲ ಪಥಗಳನ್ನೂ ಅವರು ಒಳಗೊಂಡಿದ್ದರು : ಸಮಗ್ರವಾದ ನಾಲ್ಕು ಯೋಗಗಳು, ತ್ಯಾಗ ಮತ್ತು ಸೇವೆ, ಕಲೆ ಮತ್ತು ವಿಜ್ಞಾನ ಧರ್ಮ ಮತ್ತು ಕ್ರಿಯೆ, ಅತ್ಯಂತ ಆಧ್ಯಾತ್ಮಿಕವಾದುದರಿಂದ ಹಿಡಿದ ಅತ್ಯಂತ ಕಾರ್ಯ ಯೋಗ್ಯವಾದುದುದರವರೆಗೆ. ಅವರು ಬೋಧಿಸಿದ ಪ್ರತಿಯೊಂದು ಮಾರ್ಗಕ್ಕೂ ತನ್ನದೇ ಆದ ಇತಿಮಿತಿಗಳಿದ್ದುವು. ಆದರೆ ಪ್ರತಿಯೊಂದನ್ನೂ ಅವರು ತಾವೇ ಸಾಧಿಸಿದ್ದು ಎಲ್ಲವನ್ನೂ ಒಳಗೊಂಡಿದ್ದರು. ನಾಲ್ಕು ಕುದುರೆಗಳನ್ನುಳ್ಳ ರಥದಲ್ಲಿ ಹೇಗೋ ಹಾಗೆ, ಸತ್ಯದ ನಾಲ್ಕು ಪಥಗಳ ಲಗಾಮುಗಳನ್ನು ಹಿಡಿದು ಅವೆಲ್ಲರಲ್ಲಿಯೂ ಏಕಕಾಲದಲ್ಲಿ ಐಕ್ಯತೆಯ ಕಡೆಗೆ ಸಂಚರಿಸಿದರು. ಸಮಸ್ತ ಮಾನವ ಶಕ್ತಿಯ ಸಮನ್ವಯದ ಸಾಕಾರ ಸ್ವರೂಪ ಅವರು."[2]

ಮುಕ್ತಿಯ ವಿಚಾರವಾಗಿ ಸ್ವಾಮಿ ವಿವೇಕಾನಂದರು ಬೋಧಿಸಿರುವ ಕರ್ಮ, ಜ್ಞಾನ, ಭಕ್ತಿಯೋಗಗಳು ಬೇರೆಯಲ್ಲ ಅವರ ಪಾಲಿಗೆ ಕಾರ್ಖಾನೆ, ಪಾಠಶಾಲೆ, ಹೊಲ ಇವುಗಳೂ ಸಂನಾಸಿಯ ಕುಟೀರ ಮತ್ತು ದೇವಸ್ಥಾನಗಳಷ್ಟೆ ದೇವರನ್ನು ಸಂಧಿಸುವುದಕ್ಕೆ ಸತ್ಯವಾದ ಮತ್ತು ಯೋಗವಾದ ಪವಿತ್ರ ಸ್ಥಳಗಳು ಅವರ ಪ್ರಕಾರ ಮಾನವ ಸೇವೆ ಮತ್ತು ದೇವರ ಪೂಜೆಗಳು, ಪುರುಷಕಾರ ಮತ್ತು ನಂಬಿಕೆಗೂ ನೈತಿಕತೆ ಮತ್ತು ಆಧ್ಯಾತ್ಮಿಕತೆಗೂ ಯಾವ ವ್ಯತ್ಯಾಸವಿಲ್ಲ ಎಂದಿದ್ದಾರೆ.

"ವಿವೇಕಾನಂದರ ತತ್ವಚಿಂತನೆ ಆಕಾಶದಷ್ಟು ವಿಶಾಲವಾದುದು. ಸಾಗರದಷ್ಟು ಆಳವಾದುದು. ಅಂತಿಮಾರ್ಥದಲ್ಲಿ ಅವರು ಅದ್ವೈತಿಗಳು. ಅದ್ವೈತ ದರ್ಶನದ ದಿವ್ಯ ಬೋಧನೆಗಳನ್ನು ಅವರು ಪುನರುಚ್ಚರಿಸಿ ಅನುಮೋದಿಸುತ್ತಾರೆ; ಎಲ್ಲವೂ ಬ್ರಹ್ಮಮಯ ಸಚ್ಚಿದಾನಂದ ಸ್ವರೂಪ. ಜೀವಾತ್ಮ ಸಾರದಲ್ಲಿ ಬ್ರಹ್ಮವೇ ಆಗಿದೆ. ಜೀವಾತ್ಮನೇ ಶಿವ. ಎಲ್ಲರಲ್ಲೂ ಒಂದೇ ಶಕ್ತಿ ನೆಲಸಿದೆ. ವಿಶ್ವದಲ್ಲಿ ಎಲ್ಲೆಲ್ಲೂ ದೈವಿಕತೆಯಿದೆ. ದೈವೀ ಆವಿರ್ಭಾವವಿದೆ. ವಿಶ್ವದ ಪ್ರತಿಯೊಂದು ವಸ್ತುವಿನಲ್ಲಿಯೂ ದೇವರು ಅವ್ಯಕ್ತನಾಗಿದ್ದಾನೆ. ಅವ್ಯಕ್ತನಾಗಿರುವ ದೈವಿಕತೆಯ ವಿಕಾಸವೇ ಧರ್ಮ. ಅದೇ ಜೀವನದ ಗುರಿ ಎಂದು ಅವರು ಮೊಳಗುತ್ತಾರೆ. ಹೀಗೆ ವೇದಾಂತ ಬೋಧನೆಯು ಅವರ ತತ್ವ ಚಿಂತನೆಯ ಕೇಂದ್ರ ಬಿಂದುವಾಗಿದೆ. ಅವರ ಮಾತುಗಳಲ್ಲೇ ಹೇಳುವುದಾದರೆ: ನಾವು ಆತ್ಮ ಶ್ರದ್ಧೆಯನ್ನು ಕಳೆದುಕೊಂಡಿರುವೆವು. ಮನುಷ್ಯರನ್ನು ಜಾಗೃತಗೊಳಿಸುವುದಕ್ಕೆ, ಅವರ ಆತ್ಮದ ಕೀರ್ತಿಯನ್ನು ಪ್ರಕಾಶಿಸುವುದಕ್ಕೆ ಅದ್ವೈತ ಸಿದ್ಧಾಂತದ ಬೋಧನೆ ಅತ್ಯಾವಶ್ಯಕ. ಅದಕ್ಕೇ ನಾನು ಅದ್ವೈತವನ್ನು ಸಾರುವುದು. ನಾನು ಅದನ್ನು ಸಣ್ಣ ಕೋಮಿನ ದೃಷ್ಟಿಯಿಂದ ವಿವರಿಸುವುದಿಲ್ಲ. ಎಲ್ಲರ ಒಪ್ಪಿಗೆಗೆ ಪಾತ್ರವಾದ ಸರ್ವ ಸಾಮಾನ್ಯ ತತ್ವಗಳ ಮೂಲಕ ಬೋಧಿಸುತ್ತೇನೆ."[3]

ವೇದಾಂತದ ದೃಷ್ಟಿ ವಿಶಾಲವಾದುದು. ಅದು ಸಂಕುಚಿತವಲ್ಲ. ಭಗವಂತನ ಸಾಕ್ಷಾತ್ಕಾರಕ್ಕೆ ಎಷ್ಟು ದಾರಿಗಳಿವೆಯೋ ಅವೆಲ್ಲವನ್ನು ಮಾನವ ಗೌರವ, ವಿಶಾಲ ಹೃದಯದಿಂದ ಕಾಣಬೇಕೆಂದು ಸ್ವಾಮಿ ವಿವೇಕಾನಂದರು ಬೋಧಿಸುತ್ತಾರೆ. ಸಾಧನಕನ ಸಾಮರ್ಥ್ಯಕ್ಕೆ ಅನುಸಾರವಾಗಿ ಯಾವುದೇ ಮಾರ್ಗಗಳನ್ನು ಆಯ್ದುಕೊಳ್ಳುವ ಸ್ವಾತಂತ್ರವನ್ನು ಸಾಧಕ ಪಡೆದಿದ್ದಾನೆ. ಯಾವುದೇ ಒಂದು ನಿರ್ದಿಷ್ಟ ಮಾರ್ಗವನ್ನು ಮಾತ್ರ ಹೊಂದಬೇಕೆಂಬುದಿಲ್ಲ ಭಗವಂತನ ಸಾಕ್ಷಾತ್ಕಾರಕ್ಕೆ ಕರ್ಮಯೋಗ, ಭಕ್ತಿಯೋಗ, ರಾಜಯೋಗ, ಜ್ಞಾನಯೋಗ ಹೀಗೆ ಹಲವು ಮಾರ್ಗಗಳಿಗೆ. ಸಾಧಕನಿಗೆ ಯಾವ ಮಾರ್ಗದಲ್ಲಿ ಅಭಿರುಚಿಯಿದೆಯೋ ಅದನ್ನು ಅನುಸರಿಸುವುದರಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯಬಹುದು. "ಈ ಅರ್ಥದಲ್ಲಿ ವೇದಾಂತ ಪಾರಿವಾಳದ ಗೂಡಲ್ಲ. ಎಲ್ಲಾ ಸಾಧಕರನ್ನೂ ಒಂದೇ ಪಾರಿವಾಳದ ಗೂಡಿಗೆ ತುರುಕುವುದನ್ನು ವೇದಾಂತ ಒಪ್ಪುವುದಿಲ್ಲ. ಎಲ್ಲಾ ಆಧ್ಯಾತ್ಮಿಕ ಸಾಧಕರಿಗೂ ಅದು ಮಾರ್ಗದರ್ಶನವನ್ನು ನೀಡುತ್ತದೆ. ಈ ಅರ್ಥದಲ್ಲಿ ವೇದಾಂತವನ್ನು ಒಂದು ಭವ್ಯ ಬಂಗಲೆಗೆ ಹೋಲಿಸಬಹುದು. ಅಸಂಖ್ಯಾತ ಭವ್ಯ ಕೊಠಡಿಗಳನ್ನು ಹೊಂದಿರುವ ಈ ಬಂಗಲೆಯಲ್ಲಿ ಪ್ರತಿಯೊಬ್ಬ ಸಾಧಕನೂ ತನಗೆ ಅಭಿರುಚಿಯಿರುವ ಕೊಠಡಿಯಲ್ಲಿ ವಾಸಮಾಡಬಹುದು. ಅಂದರೆ ತನ್ನ ಸ್ವಭಾವಕ್ಕೆ, ಅಭಿರುಚಿಗೆ ತಕ್ಕಂತೆ ಸಾಧಕ, ಸಾಧುವಾದ ಯಾವುದೇ ಮಾರ್ಗವನ್ನು ಜೀವನದ ಹಾದಿಯನ್ನಾಗಿ ಮಾಡಿಕೊಂಡು ದೈವಸಾಕ್ಷಾತ್ಕಾರವನ್ನು ಹೊಂದಬಹುದೆಂದು ವೇದಾಂತ ಸಾರುತ್ತದೆ. ಹೀಗೆ ವೇದಾಂತದ ದೃಷ್ಟಿ ವಿಶಾಲವಾದುದೂ, ಸಮರಸವಾದುದೂ ಆಗಿದೆ."[4]

ಸತ್ಯದ ಪರಿಕಲ್ಪನೆಯನ್ನು ಸ್ವಾಮಿ ವಿವೇಕಾನಂದರು ಅರಿತಿದ್ದರು. ಅವರದು ಅನುಷ್ಠಾನ ವೇದಾಂತ ಅತೀ ಯಾವುದೇ ರಹಸ್ಯವಿಲ್ಲ. ಕೀಳು–ಮೇಲೆಂಬ ತಾರತಮ್ಯವಿಲ್ಲ. ಅದು ಸಾರ್ವತ್ರಿಕವಾದದ್ದು ಮಾವನ ಜನಾಂಗವೆಲ್ಲವೂ ಅನುಸರಿಸಲು ಯೋಗ್ಯವಾದ ತತ್ವಗಳನ್ನು ಅವರ ಅನುಷ್ಠಾನ ವೇದಾಂತದಲ್ಲಿ ಕಾಣುತ್ತೇವೆ. ವೈಚಾರಿಕತೆ, ಹೃದಯ ವೈಶಾಲ್ಯತೆ, ಆಶಾವಾದ, ಮಾನತಾವಾದದ ಲಕ್ಷಣಗಳು ಅಲ್ಲಿ ನೋಡುತ್ತೇವೆ. ಪರಮಸತ್ಯವನ್ನು ಕುರಿತ ಸ್ವಾಮಿ ವಿವೇಕಾನಂದ ತಾತ್ವಿಕ ವಿಶ್ಲೇಷಣೆ ಬಹುಸರಳವಾಗಿ ತೋರಿದರೂ ಕಠಿಣತೆಯಿಂದ ಕೂಡಿದೆ. ಸಚ್ಚಿದಾನಂದ ಸ್ವರೂಪವಾದ ಬ್ರಹ್ಮವೊಂದೇ ಸತ್ಯ. ಅದು ಎಲ್ಲದರ ಮೂಲವಾಗಿದೆ.

ಭಕ್ತಿಯ ವಿಚಾರವಾಗಿ ಬರೆದ ತತ್ತ್ವಜ್ಞಾನಿಗಳು, ಅದನ್ನು ದೇವರ ಮೇಲೆ ಇರುವ ಪರಮಪ್ರೇಮ ಎಂದು ವಿವರಿಸಿದ್ದಾರೆ. ಮಾನವರು ದೇವರನ್ನು ಏತಕ್ಕೆ ಪ್ರೀತಿಸಬೇಕು ಎಂಬ ಪ್ರಶ್ನೆಯನ್ನು ಮೊದಲು ಪರಿಹರಿಸಬೇಕಾಗಿದೆ. ಅದನ್ನು ನಾವು ತಿಳಿದುಕೊಳ್ಳುವ ತನಕ ಈ ವಿಷಯವನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಪ್ರಪಂಚದಲ್ಲಿ ಸಂಪೂರ್ಣ ಪ್ರತ್ಯೇಕವಾದ ಎರಡು ಜೀವನಾದರ್ಶಗಳಿವೆ. ಮನುಷ್ಯನು ಯಾವ ದೇಶಕ್ಕಾದರೂ ಸೇರಿರಲಿ ಅವನಿಗೊಂದು ಧರ್ಮವಿದ್ದರೆ, ಅವನು ತಾನು ದೇಹ ಮತ್ತು ಆತ್ಮನೂ ಸಹ ಆಗಿರುವೆನು ಎಂಬುದನ್ನು ತಿಳಿದಿರುವನು. ಆದರೆ ಮಾನವನ ಜೀವನದ ಗುರಿಯ ವಿಷಯದಲ್ಲಿ ತುಂಬಾ ಭಿನ್ನಾಭಿಪ್ರಾಯಗಳಿವೆ.

ಸ್ವಾಮಿ ವಿವೇಕಾನಂದರ ಪ್ರಕಾರ ಆತ್ಮ ಸಾಕ್ಷಾತ್ಕಾರಗಳ ಮಾರ್ಗಗಳು ಜ್ಞಾನಯೋಗ ಕರ್ಮಯೋಗ, ಭಕ್ತಿಯೋಗ ಮತ್ತು ರಾಜಯೋಗ. ಇವುಗಳಲ್ಲಿ ಭಕ್ತಿಯೋಗವನ್ನು ಕುರಿತು ಹೇಳುವಾಗ, ಭಕ್ತಿ ಯೋಗ ಎಂಬುದು ನಿಜವಾದ ಭಗವಂತನ ಅನ್ವೇಷಣೆ ಇದು ಪ್ರೀತಿಯಲ್ಲಿ ಆರಂಭವಾಗಿ ಅದರಲ್ಲಿಯ ಸಾಗಿ ಅಂತಿಮವಾಗಿ ಪ್ರೀತಿಯಲ್ಲಿಯೇ ಅಂತ್ಯವಾಗುವುದು.

ಭಗವಂತನ ಮೇಲೆ ಮಾನವನಿಗಿರುವ ಅಮಿತ ಪ್ರೇಮವೇ ಭಕ್ತಿ. ಭಕ್ತಿಶಾಸ್ತ್ರದ ರಚನಕಾರ ಶಾಂಡಿಲ್ಯರ ಪ್ರಕಾರ ಪರಮಸ್ವರೂಪವೇ ಭಕ್ತಿ. ಭಕ್ತಿರೂಪವನ್ನು ತಾಳಿದ ಉಪಾಸನೆ ಎಲ್ಲ ಧರ್ಮಗಳಲ್ಲಿಯೂ ನೆಲೆಸಿದೆ. ಜ್ಞಾನಕ್ಕಿಂತ ಭಕ್ತಿಮಾರ್ಗ ಸುಲಭ. ಭಗವಂತನ ಮೇಲೆ

ಇಟ್ಟಿರುವ ದೃಢ ಭಕ್ತಿಯಿಂದ ನಮ್ಮ ಮನಸ್ಸು ಶುದ್ಧಿಯಾಗುತ್ತದೆ ಎಂಬುದು ಭಕ್ತರ ಅನುಭವದ ತಿರುಳು. ಭಕ್ತಿಯಲ್ಲಿ ಬಾಹ್ಯಪೂಜೆ ಇರುವುದರಿಂದ ಮಾನವಪೂಜೆಯೇ ಶ್ರೇಷ್ಠಪೂಜೆಯಾಗುವುದು. ಇದೇ ಭಕ್ತಿಗೆ ದಾರಿ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು ತಮ್ಮ ಯೋಗ್ಯತೆಗೆ ತಕ್ಕಂತೆ ಬಡವರನ್ನು ಕರೆದು ಉಪಚರಿಸಿ ಅದರ ಸೇವೆ ಮಾಡುವುದು. ಅದನ್ನನುಸರಿಸಿದಾಗ ಅವರೆಲ್ಲಾ ದರಿದ್ರನಾರಾಯಣರೆಂಬ ಭಾವದಿಂದ ಮಾಡಿ ಎನ್ನುತ್ತಾರೆ. ಭಕ್ತಿ ಎಂದರೆ ಪರಮಪ್ರೇಮ. ಅದನ್ನು ಪಡೆದರೆ ಆ ಸಾಧಕನು ಎಲ್ಲರನ್ನು ಪ್ರೀತಿಸುತ್ತಾನೆ. ಯಾರನ್ನು ದ್ವೇಷಿಸುವುದಿಲ್ಲ ಅವನು ಎಂದೆಂದಿಗೂ ತೃಪ್ತನು. ಇದು ಯಾರ ಆಸೆಗೆ ಸಂಬಂಧಿಸಿದಲ್ಲ ಎಲ್ಲಿಯ ತನಕ ಆಸೆಗಳು ಇರುವುದೊ ಅಲ್ಲಿಯ ತನಲ್ಲಿ ಭಗವಂತನ ಪ್ರೇಮ ಲಭಿಸದು. ಭಕ್ತಿ ಕರ್ಮಕ್ಕಿಂತ ಮೇಲು ಯೋಗಕ್ಕಿಂತ ಮೇಲು ಏಕೆಂದರೆ ಇವುಗಳೆಲ್ಲ ಇನ್ನಾವುದನ್ನೋ ಪಡೆಯುವುದಕ್ಕಾಗಿದೆ. ಆದರೆ ಭಕ್ತಿಗಾದರೂ ಅದೇ ಫಲ, ಭಕ್ತಿಯೇ ಗುರಿ. ಭಕ್ತಿಯೇ ದಾರಿ.

ಭಕ್ತಿಯನ್ನು ಪಡೆಯುವುದಕ್ಕೆ ಭಗವಂತನ ನಾಮಜಪ ಮಾರ್ಗವೊಂದಿದೆ. ಮಂತ್ರಜಪ ತುಂಬಾ ಉಪಯುಕ್ತವಾದುದು. ಭಕ್ತಿಯನ್ನು ಪಡೆಯಬೇಕಾದರೆ ಅದನ್ನು ಪಡೆದ ಅನುಭಾವಿ ಸಾಧುಸಂತರ ಸಹವಾಸ ಮಾಡಿ ಭಗವದ್ಗೀತೆ ಇಮಿಟೇಷನ್ ಆಫ್ ಕ್ರೈಸ್ಟ ಮುಂತಾದ ಹಲವು ಗ್ರಂಥಗಳನ್ನು ಓದಿ, ಯಾವಾಗಲೂ ಭಗವಂತನ ಗುಣಗಳನ್ನು ಮನನ ಮಾಡಬಹುದಾಗಿದೆ.

“ಸುಮ್ಮನೇ ದೇವರ ವಿಷಯದಲ್ಲಿ ತರ್ಕಮಾಡುತ್ತಿದ್ದರೆ ಸಾಲದು. ಯಾವಾಗ ಆಧ್ಯಾತ್ಮಿಕ ಭಾವನೆ ಇನ್ನೂ ಪ್ರಾರಂಭದೆಸೆಯಲ್ಲಿ ಇದೆಯೋ ಆಗ ಪ್ರಾಪಂಚಿಕ ವಸ್ತುಗಳಿಂದ ದೂರ ಇರಿ. ಸಾಧ್ಯವಾದಷ್ಟೂ ಹಗಲೂ ರಾತ್ರಿ ದೇವರಲ್ಲದೆ ಅನ್ಯಥಾ ಯಾವುದನ್ನೂ ಭಾವಿಸಬೇಡಿ. ನಾವು ನಿತ್ಯ ಮಾಡಬೇಕಾದ ಅವಶ್ಯಕ ಆಲೋಚನೆಗಳನ್ನು ಕೂಡ ದೇವರ ಮೂಲ ಮಾಡಬಹುದು. ಅವನಿಗಾಗಿ ಊಟ ಮಾಡಿ, ಅನವಿಗಾಗಿ ಕುಡಿಯಿರಿ, ಅವನಿಗಾಗಿ ಮಲಗಿರಿ, ಅವನಿಗಾಗಿ ಎಲ್ಲವನ್ನೂ ಮಾಡಿರಿ. ಇತರರೊಂದಿಗೆ ದೇವರ ವಿಷಯವನ್ನು ಕುರಿತು ಮಾತನಾಡಿ ಭಗವಂತ ಮತ್ತು ಆತನ ಶ್ರೇಷ್ಠತಮ ಭಕ್ತರ ಸಂಗ ಅತಿ ದುರ್ಲಭ. ಐದು ನಿಮಿಷಗಳು ಅವರೊಡನೆ ಕಳೆದರೂ ಅದು ನಿಮ್ಮ ಇಡೀ ಜೀವನವನ್ನೇ ಬದಲಾಯಿಸುವುದು. ನಿಮಗೆ ಅದು ತೀವ್ರವಾಗಿ ಬೇಕು ಅನ್ನಿಸಿದರೆ ಲಭಿಸುವುದು. ಭಗವತ್ ಭಕ್ತರ ಸಾನ್ನಿಧ್ಯದಿಂದ ಒಂದು ಸ್ಥಳ ಪವಿತ್ರವಾಗುವುದು. ಭಗವತ್ ಭಕ್ತರ ಮಹಿಮೆ ಅಂತಹುದು. ಅವರೇ ದೇವರು. ಅವರು ಮಾತನಾಡುವುದೇ ಶಾಸ್ತ್ರವಾಗುವುದು. ಅವರಿದ್ದ ಸ್ಥಳ ಅವರ ಭಾವನೆಯಿಂದ ಓತಪ್ರೋತವಾಗುವುದು. ಯಾರು ಅಲ್ಲಿಗೆ ಹೋಗುವರೋ ಅವರಿಗೆ ಇದು ವೇದ್ಯವಾಗುವುದು. ಅವರು ಕೂಡ ಭಕ್ತರಾಗಲು ಬಯಸುವರು.”[5]

ಭಕ್ತಿ ತ್ಯಜಿಸು ಎನ್ನುವುದಿಲ್ಲ; ಪ್ರೀತಿಸು, ಶ್ರೇಷ್ಠವಾದುದನ್ನು ಪ್ರೀತಿಸು ಎನ್ನುವುದು. ಯಾರು ಈ ಶ್ರೇಷ್ಠವನ್ನು ಪ್ರೀತಿಸುವರೋ ಅವರ ಮನಸ್ಸಿನಿಂದ ಹೀನವಾದುದೆಲ್ಲ ಸ್ವಭಾವತ: ಬಿದ್ದು ಹೋಗುವುದು.

ಧರ್ಮವನ್ನು ಸಾಕ್ಷಾತ್ಕಾರಮಾಡಿಕೊಳ್ಳಿ, ಮಾತಿನಿಂದ ಪ್ರಯೋಜನವಿಲ್ಲ. ಇದೇ ವೇದಾಂತದ ಬೋಧನೆಯ ಪಲ್ಲವಿ. ಆದರೆ ಇದನ್ನು ಬಹಳ ಕಷ್ಟದಿಂದ ಸಾಧಿಸಬೇಕಾಗಿದೆ. ಮಾನವಜೀವಿಯ ಹೃದಯಾಂತರಾಳ ದಲ್ಲಿರುವ ಈ ಪುರಾಣ ಪುರುಷ ಸೂಕ್ಷ್ಮಕಣದ ಅಂತರಾಳದಲ್ಲಿ ಹುದುಗಿರುವುನು. ಋಷಿಗಳು ಏಕಾಗ್ರ ಶಕ್ತಿಯಿಂದ ಅವನನ್ನು ಅರಿತರು; ಸುಖದು:ಖಗಳಾಚೆ ಪಾಪಪುಣ್ಯಗಳಾಚೆ ಆಸ್ತಿನಾಸ್ತಿಗಳ ಆಚೆ ಹೋದರು. ಯಾರು ಅವನನ್ನು ನೋಡಿರುವರೋ ಅವರು ಸತ್ಯವನ್ನು ಕಂಡಿರುವರು. ಹಾಗಾದರೆ ಸ್ವರ್ಗವೆಂದರೇನು? ದು:ಖವಿಲ್ಲದ ಸುಖವೆಂಬ ಭಾವನೆ. ಅಂದರೆ, ನಮಗೆ ಬೇಕಾಗಿರುವುದು ದು:ಖವಿಲ್ಲದಿರುವ ಈ ಪ್ರಪಂಚದ ಸುಖ. ನಿಸ್ಸಂಶಯವಾಗಿ ಇದು ಒಳ್ಳೆಯ ಭಾವನೆಯೇ ಸರಿ. ಇದು ಸ್ವಾಭಾವಿಕವಾಗಿ ಬರುವುದು. ಏಕೆಂದರೆ ಕೇವಲ ಒಳ್ಳೆಯದು ಅಥವಾ ಕೆಟ್ಟದ್ದು ಎಂಬುದೇ ಇಲ್ಲವೆಂದ ಮೇಲೆ ಮೊದಲಿಂದಲೂ ಬಂದ ಈ ಭಾವನೆಯೇ ತಪ್ಪು.

“ಭಕ್ತಿಮಾರ್ಗ ಸ್ವಾಭಾವಿಕವಾದುದು, ಹರ್ಷದಾಯಕವಾದುದು. ಜ್ಞಾನ ಒಂದು ನದಿಯನ್ನು ಪರ್ವತದಲ್ಲಿರುವ ಅದರ ಉಗಮಸ್ಥಾನಕ್ಕೆ ಒಯ್ದಂತೆ. ಇದೇನೂ ಹತ್ತಿರದ ಮಾರ್ಗ, ಆದರೆ ಬಹಳ ಕಠಿಣ. ಜ್ಞಾನ ಎಲ್ಲವನ್ನೂ ನಿಗ್ರಹಿಸು ಎನ್ನುವುದು ಭಕ್ತಿ ಎಲ್ಲವನ್ನೂ ಭಗವಂತನಿಗೆ ಅರ್ಪಿಸು, ಅವನಲ್ಲಿ ಶರಣಾಗತನಾಗು ಎನ್ನುವುದು. ಇದೇನೋ ದೂರ ಮಾರ್ಗ ಆದರೆ ಸುಲಭ, ಸುಖ. ಶಾಶ್ವತವಾದ ಭಕ್ತಿ ಬೇಕಾದರೆ ದ್ವೇಷಭಾವನೆಯನ್ನು ತ್ಯಜಿಸಿ. ದ್ವೇಷ ಭಾವನೆ ಭಕ್ತಿಗೆ ದೊಡ್ಡ ಆತಂಕ. ಯಾರನ್ನೂ ದ್ವೇಷಿಸದವನು ದೇವರನ್ನು ಸೇರುವನು.”[6]

ಸ್ವಾಮಿ ವಿವೇಕಾನಂದ ಪ್ರಕಾರ ಭಕ್ತಿ ಎಂದರೆ ಭಗವಂತನನ್ನು ಪ್ರೀತಿಸುವುದೇ ಭಕ್ತಿಯಾಗಿದೆ. ಅಲ್ಲಿ ವ್ಯಾಪಾರಕ್ಕೆ ಜಾಗವಿಲ್ಲ. ಭಕ್ತಿಯೇ ಪರಮಪ್ರೇಮವಾದುದು. ತಾನು ಎಲ್ಲದಕ್ಕೂ ಭಗವಂತನನ್ನೆ ಅವಲಂಬಿತನಾಗಿರುವ ದೃಢ ನಂಬಿಕೆಯೆ ಭಕ್ತಿ ಅದು ಲಭಿಸಿದ ಮೇಲೆ ಸಾಧಕ ಎಂದೆಂದಿಗೂ ತೃಪ್ತಿ. ಭಕ್ತಿಯೋಗದ ವಿಶಿಷ್ಟತೆ ಎಂದರೆ, ಅದು ಪ್ರೇಮದಲ್ಲಿ ಆರಂಭವಾಗಿ ಪ್ರೇಮದ ಮುಖಾಂತರ ಸಾಗುವುದು. ಪ್ರೇಮದಲ್ಲಿ ಯಾರೊಬ್ಬರನ್ನು ದ್ವೇಷಿಸುವುದಲ್ಲ. ಅಲ್ಲಿ ಪ್ರೇಮವೆಂದರೆ ಲೌಕಿಕ ಕಾಮಗಳಲ್ಲ; ಭಗವಂತನ ಮಹಿಮೆಯನ್ನರಿತ ನಂತರ ನೆಲೆನಿಲ್ಲುವ ಬೇಷರತ್ ಸಮರ್ಪಣಭಾವ ಶರಣಾಗತಿ, ಪ್ರೀತಿ ಮುಂತಾದ ಯಾವ ಫಲಗಳನ್ನು ಯೋಚಿಸುವುದಲ್ಲ. ಭಕ್ತಿಯೇ ಸಾಧನ ಮತ್ತು ಗುರಿಯೂ ಹೌದು. ಸಾಧಕನ ಹೃದಯ ಯಾವಾಗಲೂ ದಿವ್ಯ ಪ್ರೇಮಾಮೃತದಿಂದ ತುಂಬಿರುತ್ತದೆ.

ವಿವೇಕಾನಂದರು ಒಂದು ಅಂಶವನ್ನು ಸ್ಪಷ್ಟಪಡಿಸುತ್ತಾರೆ. ಭಕ್ತಿ ಮತಭ್ರಾಂತಿಯಲ್ಲ. ಭಕ್ತಿ ಗೌಣೀ ಸ್ಥಿತಿಯಲ್ಲೇ ನಿಲ್ಲಲಾಗದು. ಅಂದರೆ ತನ್ನ ಧರ್ಮದಲ್ಲಿ, ತನ್ನ ಇಷ್ಟ ದೇವತೆಯಲ್ಲಿ ಮಾತ್ರ ಭಕ್ತಿ, ಉಳಿದ ಧರ್ಮಗಳು ಮತ್ತು ಆದರ್ಶಗಳು ಇವುಗಳ ಬಗ್ಗೆ ಅಸಹನೆ, ಕೋಪ, ಒಟ್ಟಿನಲ್ಲಿ ಅನ್ಯಮತದ್ವೇಷ ಇದು ಗೌಣೀ ಭಕ್ತಿ ಎನಿಸುವುದು. ಇದು ಅಪಾಯಕಾರಿ. ಭಕ್ತಿ ಮಾಗಬೇಕು. ಪರಾಭಕ್ತಿಯಾಗಬೇಕು. ವಿಶ್ವಸಹೋದರ ಭಾವನೆ, ನಿಷ್ಕಾಮ ಪ್ರೇಮ, ಭಗವಂತನ ಆಕರ್ಷಣೆ ಇವು ಪರಾಭಕ್ತಿಯ ಚಿನ್ಹೆಗಳು. ಪರಾಭಕ್ತಿಯಲ್ಲಿ ನೆಲಸುವ ಜೀವಿ ದೇವರ ಸಮೀಪವರ್ತಿಯಾಗುವನು.

ಜನರು, ಮುಕ್ತಿಗೆ ಸಾಧನ ಭಕ್ತಿ ಎನ್ನುವರು. ಆದರೆ ಭಕ್ತಿಯೇ ಸಾಧನ, ಭಕ್ತಿಯೇ ಗುರಿ ಎನ್ನುವರು. ಈ ವ್ಯತ್ಯಾಸವನ್ನು ಸಾಧಾರಣ ಜನರು ಭಾವಿಸುವರು. ಆದರೂ ಅಂತಿಮವಾಗಿ ಜ್ಞಾನ ಭಕ್ತಿಗಳೆರಡೂ ಒಂದೇ ಎಂಬ ಶ್ರೀ ರಾಮಕೃಷ್ಣರ ನಿಲುವನ್ನು ವಿವೇಕಾನಂದರು ಪುನರುಚ್ಚರಿ ಸುತ್ತಾರೆ.

“ಭಕ್ತಿಯೋಗವನ್ನು ಕುರಿತು ವಿವೇಕಾನಂದರ ವಿಶ್ಲೇಷಣೆಯನ್ನು ಹೀಗೆ

ನಿರೂಪಿಸಬಹುದು. ಭಕ್ತಿ ಎಂದರೆ ಸಂಪೂರ್ಣ ಶರಣಾಗತಿ; ಭಗವಂತನ ಇಚ್ಛೆಗೆ ವಿರುದ್ಧವಾಗಿ ಕಿಂಚಿತ್ತು ನಡೆಯದಂತೆ ಎಚ್ಚರ ವಹಿಸುವುದು; ಅವನ ಸಂಕಲ್ಪಕ್ಕೆ ತುಂಬು ಹೃದಯದಿಂದ ತಲೆಬಾಗುವುದು; 'ಅಹಂ'ನ್ನು ಮೆಟ್ಟಿ 'ಸೋಹಂ' ಎಂದು ಜೀವನ ನಡೆಸುವುದು; ಜೀವಕೋಟಿಯಲ್ಲಿ ಅಭಿವ್ಯಕ್ತವಾಗಿರುವ ಭಗವಂತನನ್ನು ಅಮಿತವಾಗಿ, ಬೇಷರತ್ತಾಗಿ ಪ್ರೀತಿಸುವುದು, ಭಗವಂತನ ಮಹಾತ್ಮೆಯಲ್ಲಿ ಅಚಲ ಶ್ರದ್ಧೆ, ವಿಶ್ವಾಸ, ಆಶಭಾವನೆಗಳನ್ನು ಹೊಂದಿ, ಅವನೇಗತಿಯೆಂದು, ಹೃದಯಾಂತರಾಳದಿಂದ ತಿಳಿದು ತನು ಮನದಲ್ಲಿ ವಂಚಕನಾಗದೆ, ಲೌಕಿಕದ ವ್ಯಾಮೋಹವನ್ನು ಬಿಟ್ಟು, ದ್ವೇಷಾಸೂಯೆಗಳನ್ನು, ಅಹಂಕಾರ ಮಮಕಾರಗಳನ್ನು ತೊರೆದು, ಆಧ್ಯಾತ್ಮಿಕತೆಯ ಮಹತ್ವವನ್ನು ಮನಗಂಡು, ಪರಿಶುದ್ಧ ಜೀವನವನ್ನು ನಡೆಸುತ್ತಾ, ತನ್ನ ಸುತ್ತಮುತ್ತಲಿನ ಜೀವನವೂ ಹಸನಾಗುವಂತೆ ಪ್ರಭಾವ ಬೀರುವುದು; ಭಗವಂತನ ಪ್ರೇಮಮಯ ಸಾಮ್ರಾಜ್ಯವನ್ನು ಈ ಭೂಮಿಯ ಮೇಲೆ ಸಂಸ್ಥಾಪಿಸುವುದು."[7]

ಸ್ವಾಮಿ ವಿವೇಕಾನಂದ ತತ್ವಚಿಂತನೆ ಸರಳವೂ, ಸುಲಭವೂ ಆದುದು. ಬುದ್ಧನಂತೆ ವಿವೇಕಾನಂದರು ಸಹ ಸಾಮಾನ್ಯರಿಗೆ ಅರ್ಥವಾಗುವ ಭಾಷೆಯನ್ನೇ ಬಳಸಿಕೊಂಡಿರುವುದು ವಿಶೇಷ. ಧಾರ್ಮಿಕ ಕೇಂದ್ರದಲ್ಲಿ ಸ್ತ್ರೀಯರು ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದರಲ್ಲಿ ವಿವೇಕಾನಂದರು ಬುದ್ಧ ಬಸವಣ್ಣರಿಗೆ ಸಮೀಪಿಸುತ್ತಾರೆ. ವಿವೇಕಾನಂದರ ಧಾರ್ಮಿಕ ಜೀವನವನ್ನು ನೋಡಿದಾಗ ಅವರ ತತ್ವದುದ್ದಕ್ಕೂ ದೀನ ದಲಿತರ ಸೇವೆ ಮಾಡುವುದಕ್ಕೆ ವಿಶೇಷ ಒತ್ತು ನೀಡಿದ್ದಾರೆ. ಆದರೆ ಅವರ ಸಂನ್ಯಾಸ ಶಿಷ್ಯರಲ್ಲಿ ಅಸ್ಪೃಶ್ಯನೊಬ್ಬನೂ ಇಲ್ಲದಿರುವುದು ವಿಷಾದನೀಯ ಸಂಗತಿಯಾಗಿದೆ. ಅವರು ವ್ಯಕ್ತಿಪೂಜೆಯನ್ನು ನಿರಾಕರಿಸುತ್ತಾರೆ. ಏಕೆಂದರೆ ಇದರಿಂದ ಮಾನವೀಯ ಸಂಬಂಧಗಳಿಗೆ ದಕ್ಕೆಯುಂಟಾಗುತ್ತದೆ. ಮಾನವರಲ್ಲಿ ತಾರತಮ್ಯ ಎದ್ದುಕಾಣುತ್ತದೆ ಎಂದಿದ್ದಾರೆ.

"ಆಧುನಿಕ ಭಾರತದಲ್ಲಿ ಆಧ್ಯಾತ್ಮಿಕ ಧಾರ್ಮಿಕ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ವಿಮೋಚನಾ ಕ್ರಾಂತಿಯನ್ನುಂಟುಮಾಡಿದ ಅಧ್ವರ್ಯುಗಳಾಗಿದ್ದಾರೆ. ಸ್ವಾಮಿ ವಿವೇಕಾನಂದರು. ಅವರು ವೈಜ್ಞಾನಿಕದೃಷ್ಟಿ ಮತ್ತು ವಿಚಾರಬುದ್ಧಿಯ ಪಕ್ಷಪಾತಿ. ಮಾನವನೇ ಅವರ ತತ್ವಚಿಂತನೆಯ ಮಹಾನ್ ವಸ್ತು, ಶ್ರೇಷ್ಠ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಅವರು ಅಪ್ರತಿಮ ಧೈರ್ಯ ಸ್ಥೈರ್ಯಗಳನ್ನು ತೋರಿದ್ದಾರೆ. ಅವರ ಉಜ್ವಲ ಮಾನವಪ್ರೇಮ, ಪುರೋಗಾಮಿ ದೃಷ್ಟಿ ಮತ್ತು ಸಾಮಾಜಿಕ ನ್ಯಾಯವನ್ನು ಕುರಿತ ಅವರ ಆಳವಾದ ಪರಿತಾಪ, ಕಾಳಜಿ, ಇವು ಎಲ್ಲ ಮಾನವರ ಹೃದಯಲ್ಲಿ ಅವರಿಗೆ ಅಚ್ಚಳಿಯದ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ. ಆಧುನಿಕ ಭಾರತೀಯ ತಾತ್ವಿಕ ಚಿಂತನೆಯಲ್ಲಿ ಅವರ ಸ್ಥಾನ ಅತ್ಯಂತ ಮಹತ್ವದ್ದು, ಚಿರಸ್ಥಾಯಿಯಾಗಿ ನಿಲ್ಲುವಂಥಾದ್ದು."[8]

ಪ್ರಪಂಚದ ಭಾವನಾವಿಕಾಸಕ್ಕೆ ಭಾರತೀಯರ ಪ್ರಭಾವ ಯಾರಿಗೂ ಕಾಣದೆ ಕೇಳದೆ ಬೀಳುವ, ಅತಿ ಸುಂದರವಾದ ಗುಲಾಬಿಯನ್ನು ಅರಳುವಂತೆ ಮಾಡುವ ಹಿಮಮಣಿಯಂತೆ ಇದೆ. ಭಾರತೀಯರ ಪ್ರಭಾವ ಮೌನವಾಗಿದೆ. ಅಗೋಚರವಾಗಿದೆ. ಆದರೂ ಅದ್ಭುತ ಪರಿಣಾಮಕಾರಿಯಾಗಿದೆ. ಇದು ಪ್ರಪಂಚದ ಭಾವನೆಯನ್ನೇ ಕ್ರಾಂತಿಗೊಳಿಸಿದೆ. ಭಾರತೀಯ ಭಾವನೆಯ ಒಂದು ವೈಶಿಷ್ಟ್ಯವೇ ಅದರ ಶಾಂತಿ ಮತ್ತು ಮೌನ ಎಂದಿದ್ದಾರೆ ಸ್ವಾಮಿ ವಿವೇಕಾನಂದರು.

ಅಡಿಟಿಪ್ಪಣಿಗಳು:

1) ಪುಟ 276 – ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು (ಸಂ.2), ಸ್ವಾಮಿ ರಂಗನಾಥಾನಂದ, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು, 2010.

2) ಅದೇ ಪುಟ – 351

3) ಪುಟ – 52 ಸಮಕಾಲೀನ ಭಾರತೀಯ ತತ್ವಶಾಸ್ತ್ರ, ಡಾ. ವಿ.ಎನ್. ಶೇಷಗಿರಿ ರಾವ್ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, 1985.

4) ಅದೇ ಪುಟ – 58

5) ಪುಟ – 12, 13, ಸ್ವಾಮಿ ವಿವೇಕಾನಂದರ ಬೋಧನೆಯ ಸಾರ, ಶ್ರೀ ರಾಮಕೃಷ್ಣ ಆಶ್ರಮ ಮೈಸೂರು 2013.

6) ಅದೇ ಪುಟ– 14

7) ಪುಟ–147, ಸ್ವಾಮಿ ವಿವೇಕಾನಂದ ದರ್ಶನ, ಡಾ. ಎಸ್. ವೆಂಕಟೇಶ್, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು 1997.

8) ಪುಟ– 94 ಸಮಕಾಲೀನ ಭಾರತೀಯ ತತ್ವಶಾಸ್ತ್ರ, ಡಾ. ವಿ.ಎನ್. ಶೇಷಗಿರಿ ರಾವ್ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, 1985.

## ಪತಂಜಲಿ ಯೋಗಸೂತ್ರದಲ್ಲಿ ಯೋಗಪ್ರಜ್ಞೆ

ರಾಜಶ್ರೀ. ಕೆ. ನಾಯ್ಕ.

ಉಪನ್ಯಾಸಕಿ, ಜಿ. ಚನ್ನಪ್ಪ ಪದವಿಪೂರ್ವ ಮಹಾವಿದ್ಯಾಲಯ, ಆನಗೋಡು. ದಾವಣಗೆರೆ-ಜಿಲ್ಲೆ. E mail ID: rajashriknaik@ yahoo.com.

ಭಾರತೀಯ ತತ್ವಶಾಸ್ತ್ರದಲ್ಲಿ ಷಡ್ದರ್ಶನಗಳಿಗೆ ಮಹತ್ವದ ಸ್ಥಾನವಿದೆ. ದಾರ್ಶನಿಕರು ಮಾನವ ಜನ್ಮ ಎಷ್ಟೇ ಸುಖಮಯವಾಗಿದ್ದರೂ ಅನೇಕ ರೀತಿಯ ಕರ್ಮಗಳ ಸಂಕೀರ್ಣದಿಂದ ದುಃಖ ಉಂಟಾಗುವುದು. ಆ ದುಃಖದಿಂದ ಸಂಪೂರ್ಣ ಬಿಡುಗಡೆಗೆ ಶಾಶ್ವತ ಪರಿಹಾರ ಸೂಚಿಸುವುದು ತತ್ವಶಾಸ್ತ್ರದ ಕರ್ತವ್ಯವೆಂದು ನಂಬಿ, ಅದಕ್ಕಾಗಿ ವಿವಿಧ ರೀತಿಯ ಪರಿಹಾರಗಳನ್ನು ಬೋಧಿಸಿದ್ದಾರೆ. ಇದನ್ನೇ ಮೋಕ್ಷ ಎಂದು ಕರೆದು, ಅದನ್ನು ಪಡೆಯಲು ಯೋಗವನ್ನು ಅವಲಂಬಿಸಿದ್ದಾರೆ. ಯೋಗದರ್ಶನದ ಮೂಲಗ್ರಂಥವಾದ ಯೋಗಸೂತ್ರವು ರಾಜಯೋಗವನ್ನು ಬೋಧಿಸುವ ಅಧಿಕೃತ ಗ್ರಂಥವಾಗಿದೆ. ಚಿತ್ತವೃತ್ತಿ ನಿರೋಧವನ್ನುಂಟುಮಾಡುವ ಯೋಗವು ಪತಂಜಲಿ ಮುನಿಗಳಿಗಿಂತ ಮೊದಲೇ ಪ್ರಚಲಿತವಿತ್ತಾದರೂ ಪತಂಜಲಿ ಮಹರ್ಷಿಗಳು ತಮ್ಮ ಯೋಗಸೂತ್ರ ಗ್ರಂಥದಲ್ಲಿ ಕ್ರಮಬದ್ಧವಾಗಿ ವ್ಯಕ್ತಪಡಿಸಿರುವರು. ಯೊಗಶಾಸ್ತ್ರ ಪಿತಾಮಹರಾದ ಪತಂಜಲಿ ಮಹರ್ಷಿಗಳು **ಯೋಗಃ ಚಿತ್ತವೃತ್ತಿನಿರೋಧಃ** ಎಂದು ಹೇಳುತ್ತಾರೆ.

**ಯೋಗಪ್ರಜ್ಞೆ:** ಸಾಧಾರಣ ಜನರಿಗೆ ಇಂದ್ರಿಯ ಪ್ರತ್ಯಕ್ಷ ತೋರಿಸುವ ಸತ್ಯವಷ್ಟೇ ಗೊತ್ತು. ಆದರೆ ಅವರ ಅರಿವಿನ ಶಕ್ತಿಯನ್ನು ಮೀರಿದ ಆಧ್ಯಾತ್ಮಿಕ ಪಾರಮಾರ್ಥಿಕ ಸತ್ಯವೊಂದಿದೆ. ನಮ್ಮ ಬುದ್ಧಿಯನ್ನು ಪೂರ್ಣ ಆಧ್ಯಾತ್ಮಿಕ ಶಿಕ್ಷಣಕ್ಕೆ ಒಳಪಡಿಸಿದಾಗ ಸಾಧಾರಣ ಬುದ್ಧಿಯನ್ನು ಮೀರಿದ ಸತ್ಯದ ಅರಿವನ್ನು ಮಾಡಿಕೊಳ್ಳಬಹುದು.

ಅದನ್ನೇ **ಯೋಗಪ್ರಜ್ಞೆ** ಎನ್ನುವರು. ಈ ಅನುಭವಕ್ಕೆ ಯೋಗಪ್ರತ್ಯಕ್ಷ. ಸಮಾಧಿ ಮುಂತಾದ ಪದಗಳನ್ನು ಬಳಸುವರು. ಇಂದ್ರಿಯಾನುಭವದಿಂದ ಭಿನ್ನವಾದ ಯೋಗದ ಅನುಭವಕ್ಕೆ ಪಾರಮಾರ್ಥಿಕ ಸತ್ಯವನ್ನು ನೇರವಾಗಿ ಅರಿಯಲು ಸಹಾಯವಾಗುವ ಒಂದು ವಿಶಿಷ್ಟ ರೀತಿಯ ಅತೀಂದ್ರಿಯ–ಅತಿಭೌದ್ಧಿಕ–ಅನುಭವ ಎಂದು ವ್ಯಾಖ್ಯಾನಿಸಬಹುದು. ಇದು ಇಂದ್ರಿಯ ಮತ್ತು ಬುದ್ದಿಯ ವ್ಯಾಪಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಿದಾಗ ಮಾತ್ರ ಯೋಗಪ್ರಜ್ಞೆ ಸಾಧ್ಯವಾಗುತ್ತದೆ. ಅದು ಅನಂತಕಾಲ ಆನಂದಾತಿಶಯದಲ್ಲಿ ಇರುವ ಸ್ಥಿತಿ. ಇದನ್ನೇ ಕೆಲವರು ಪರಮಾತ್ಮನ ನೇರ ಅನುಭವ, ನೈಜ ಸ್ವರೂಪದ ಜ್ಞಾನವೆಂದು ಅಂಥ ಜ್ಞಾನವನ್ನು ಪಡೆಯಲು ಅಷ್ಟಾಂಗಯೋಗವೇ ಪರಿಣಾಮಕಾರಿ ಸಾಧನ. ಇದನ್ನು ಒದಗಿಸುವುದೇ ಯೋಗದ ಗುರಿಯಾಗಿದೆ.

**ಚಿತ್ತವೃತ್ತಿನಿರೋಧ**ವನ್ನುಂಟುಮಾಡುವಲ್ಲಿ ಎಂಟು ಅಂಗಗಳಿರುವುದರಿಂದ **ಅಷ್ಟಾಂಗಯೋಗ** ಎಂದು ಕರೆಯುತ್ತಾರೆ. ಅವುಗಳೆಂದರೆ: ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿ. ಪತಂಜಲಿ ಮಹರ್ಷಿಗಳು ಸಮಾಧಿ ಸ್ಥಿತಿಯಲ್ಲಿ ಸಂಪ್ರಜ್ಞಾತ ಮತ್ತು ಅಸಂಪ್ರಜ್ಞಾತ ಎಂದು ಎರಡು ಸ್ತರವನ್ನು ಗುರುತಿಸಿದ್ದಾರೆ. ಅಸಂಪ್ರಜ್ಞಾತ ಸಮಾಧಿಯಲ್ಲಿ ಧ್ಯೇಯ ವಸ್ತುವಿನ ಜ್ಞಾನವಾಗಲಿ ನಾನು ಧ್ಯಾನಿಸುತ್ತಿದ್ದೇನೆ ಎಂಬ ಧಾತೃ ಜ್ಞಾನವಾಗಲೀ ನಾನು ಧ್ಯೇಯದಲ್ಲಿ ಲೀನವಾಗಿದ್ದೇನೆ ಎಂಬ ಜ್ಞಾನವಾಗಲೀ ಇರುವುದಿಲ್ಲ. ಆಗ ಪ್ರತಿಯೊಬ್ಬ ಯೋಗಿಯೂ ತಾನು ಪರಿಶುದ್ಧ, ಪ್ರತ್ಯೇಕ ಆತ್ಮ ಅಷ್ಟೇ, ಅಲ್ಲ ಬ್ರಹ್ಮನ್ ಅಲ್ಲ. ಅಥವಾ ವಿಶ್ವದ ಯಾವುದೇ ಭಾಗವೂ ಅಲ್ಲ ಎನ್ನುವ ಅನುಭವ ಪಡೆಯುತ್ತಾನೆ. ಆಗ ಆತನ ದೇಹ ಇಂದ್ರಿಯಗಳು ಆತನು ನಿದ್ರೆಯಲ್ಲಿದ್ದಂತೆ ವಿಶ್ರಾಂತಿಯಲ್ಲಿರುತ್ತದೆ. ಆದರೆ ಅವನ ಮನಸ್ಸು ಮತ್ತು ಬುದ್ಧಿ ಎಚ್ಚರವಾಗಿದ್ದವನಂತೆ ಜಾಗೃತವಾಗಿರುತ್ತದೆ. ಆದರೂ ಆತನು ಸಾಮಾನ್ಯ ಜಾಗೃತಾವಸ್ಥೆಗಿಂತ ಅತೀತ ಸ್ಥಿತಿಯಲ್ಲಿರುತ್ತಾನೆ. ಸಮಾಧಿಸ್ಥನಾಗಿರುವವನು ಪೂರ್ಣ ಜಾಗೃತನಾಗಿರುತ್ತಾನೆ. ಆಗ ಆನಂದದ ಅನುಭವ ಮಾತ್ರ ಅವನಿಗಿರುತ್ತದೆ.

ಭಾರತೀಯ ತತ್ವಶಾಸ್ತ್ರದಲ್ಲಿ ಷಡ್ದರ್ಶನಗಳಿಗೆ ಮಹತ್ವದ ಸ್ಥಾನವಿದೆ. ದಾರ್ಶನಿಕರು ಮಾನವ ಜನ್ಮ ಎಷ್ಟೇ ಸುಖಮಯವಾಗಿದ್ದರೂ ಅನೇಕ ರೀತಿಯ ಕರ್ಮಗಳ ಸಂಕೀರ್ಣದಿಂದ ದುಃಖ ಉಂಟಾಗುವುದು. ಆ ದುಃಖದಿಂದ ಸಂಪೂರ್ಣ ಬಿಡುಗಡೆಗೆ ಶಾಶ್ವತ ಪರಿಹಾರ ಸೂಚಿಸು ವುದು ತತ್ವಶಾಸ್ತ್ರದ ಕರ್ತವ್ಯವೆಂದು ನಂಬಿ, ಅದರ ಪರಿಹಾರೋಪಾಯ ಮೋಕ್ಷವೆಂದು ತಿಳಿಸಿ ಅದಕ್ಕಾಗಿ ವಿವಿಧ ರೀತಿಯ ಮೋಕ್ಷಮಾರ್ಗ ಗಳನ್ನು ಬೋಧಿಸಿದ್ದಾರೆ.

**ಯೋಗಪ್ರಜ್ಞೆ:** ಸಾಧಾರಣ ಜನರಿಗೆ ಇಂದ್ರಿಯ ಪ್ರತ್ಯಕ್ಷ ತೋರಿಸುವ ಸತ್ಯವಷ್ಟೇ ಗೊತ್ತು. ಆದರೆ ಅವರ ಅರಿವಿನ ಶಕ್ತಿಯನ್ನು ಮೀರಿದ ಆಧ್ಯಾತ್ಮಿಕ ಪಾರಮಾರ್ಥಿಕ ಸತ್ಯವೊಂದಿದೆ. ನಮ್ಮ ಬುದ್ಧಿಯನ್ನು ಪೂರ್ಣ ಆಧ್ಯಾತ್ಮಿಕ ಶಿಕ್ಷಣಕ್ಕೆ ಒಳಪಡಿಸಿದಾಗ ಸಾಧಾರಣ ಬುದ್ಧಿಯನ್ನು ಮೀರಿದ ಸತ್ಯದ ಅರಿವನ್ನು ಮಾಡಿಕೊಳ್ಳಬಹುದು. ಅದನ್ನೇ ಯೋಗಪ್ರಜ್ಞೆ ಎನ್ನುವರು. ಎಲ್ಲ ಪುರಾತನ ಭಾರತೀಯ ದಾರ್ಶನಿಕರು ಯೋಗದ ಅಂತಿಮ ಸ್ಥಿತಿ(ಸಮಾಧಿ, ಯೋಗಪ್ರಜ್ಞೆ) ಯಲ್ಲಿ ಮಾತ್ರ ನಮಗೆ ಅರಿವು, ಆತ್ಮಸಾಕ್ಷಾತ್ಕಾರ ಆಗುತ್ತದೆ ಎನ್ನುವರು. ಯೋಗ, ವೇದಾಂತ, ಮುಂತಾದ ದರ್ಶನಗಳೆಲ್ಲ ಹೆಚ್ಚಾಗಿ ಸಮಾಧಿ(ತುರೀಯ) ಸ್ಥಿತಿಯಲ್ಲಾಗುವ ಅನುಭವವೇ ನಿಜವಾದ ಜ್ಞಾನ(ಪರಾವಿದ್ಯೆ) ಎಂದೂ, ಉಳಿದ ಜ್ಞಾನಪ್ರಕಾರಗಳೆಲ್ಲ ಅಪರಾವಿದ್ಯೆ ಎಂದೂ ಸಾರಿದ್ದಾರೆ. ಏಕೆಂದರೆ ತುರೀಯ ಸ್ಥಿತಿಯಲ್ಲಿ ಪಡೆದ ಜ್ಞಾನವು ಶಾಶ್ವತ, ಸತ್ಯ ಅಥವಾ ಅಬಾಧಿತ. ಇಂದ್ರಿಯ ಪ್ರತ್ಯಕ್ಷದ ಮೂಲಕ ಪಡೆದ ಜ್ಞಾನವು ದೃಷ್ಟಿದೋಷ, ಭ್ರಮೆ, ಮುಂತಾದ ದೋಷಗಳಿಂದ ಕೂಡಿದ್ದು, ಅದು ಅಬಾಧಿತವಲ್ಲ. ಕೇವಲ ವೈದಿಕ(ಆಸ್ತಿಕ) ದಾರ್ಶನಿಕರಷ್ಟೇ ಅಲ್ಲ, ಅವೈದಿಕರಾದ ಜೈನ ಮತ್ತು ಬೌದ್ಧರೂ ಸಹ ಸಮಾಧಿ ಮೂಲಕ ಪಡೆದ ಜ್ಞಾನಕ್ಕೆ ಅತ್ಯಂತ ಹೆಚ್ಚಿನ ಬೆಲೆ ಕೊಡುತ್ತಾರೆ.

ಯೋಗದ ಅನುಭವವೆಂಬುದು ಅಲೌಕಿಕವಾದದ್ದು, ನಿಗೂಢವಾದದ್ದು. ಯೋಗದ ಅನುಭವವು ಸಾಮಾನ್ಯ ಅನುಭವದಿಂದ ಭಿನ್ನವಾಗಿದ್ದು ಇಂದ್ರಿಯ ಮತ್ತು ಬುದ್ಧಿಯ ವ್ಯಾಪಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಾಗ ಮಾತ್ರ ಸಾಧ್ಯವಾಗುವುದು. ಯೋಗದ ಅನುಭವ ಅಥವಾ ಯೋಗಪ್ರಜ್ಞೆಗೆ **'**ಮಿಸ್ಟಿಕ್ ಎಕ್ಸಪೀರಿಯೆನ್ಸ್,' 'ಅನುಭಾವ,' **'**ಯೋಗ**'**, ಯೋಗಪ್ರತ್ಯಕ್ಷ, ಸಮಾಧಿ, ಹಾಗೂ ತುರೀಯ(ತೂರ್ಯ) ಮುಂತಾದ ಪದಗಳನ್ನು ಪರ್ಯಾಯವಾಗಿ ಬಳಸಲಾಗುವುದು.

**ವಾಖ್ಯೆ:** ಇಂದ್ರಿಯಾನುಭವದಿಂದ ಪೂರ್ಣ ಭಿನ್ನವಾದ ಯೋಗಪ್ರಜ್ಞೆಗೆ ಪರವಸ್ತು ಅಥವಾ ಪಾರಮಾರ್ಥಿಕ ಅಥವಾ ಸಂವೃತ ಸತ್ಯವನ್ನು ನೇರವಾಗಿ ಅರಿಯಲು ಸಹಾಯಕವಾಗುವ ಒಂದು ವಿಶಿಷ್ಟ ರೀತಿಯ ಅತೀಂದ್ರೀಯ ಅತಿಭೌತಿಕ ಅನುಭವ ಎಂದು ವ್ಯಾಖ್ಯಾನಿಸಬಹುದು.

**ಪತಂಜಲಿಯ ಯೋಗದರ್ಶನ:** ಚಿತ್ತವೃತ್ತಿ ನಿರೋಧವನ್ನುಂಟು ಮಾಡುವ ಯೋಗವು ಪತಂಜಲಿ ಮುನಿಗಳಿಗಿಂತ ಮೊದಲೇ ಪ್ರಚಲಿತವಿತ್ತಾದರೂ ಪತಂಜಲಿ ಮಹರ್ಷಿಗಳು ತಮ್ಮ ಯೋಗಸೂತ್ರ ಗ್ರಂಥದಲ್ಲಿ ಕ್ರಮಬದ್ಧವಾಗಿ ವ್ಯಕ್ತಪಡಿಸಿರುವರು. ಯೋಗದರ್ಶನದ ಮೂಲಗ್ರಂಥವಾದ ಯೋಗಸೂತ್ರವು ರಾಜಯೋಗವನ್ನು ಬೋಧಿಸುವ ಅಧಿಕೃತ ಗ್ರಂಥವಾಗಿದೆ. ಯೋಗದರ್ಶನಕ್ಕೆ ತನ್ನದೇ ಆದ ತತ್ವಮೀಮಾಂಸೆ ಇಲ್ಲ. ಅದು ಸಾಂಖ್ಯದ ಬಹುಪಾಲು ತತ್ವ ಮೀಮಾಂಸೆಯನ್ನು ಒಪ್ಪಿಕೊಳ್ಳುತ್ತದೆ. ಈ ಕಾರಣಕ್ಕಾಗಿಯೇ ಇವೆರಡನ್ನೂ ಜೋಡಿಯಾಗಿ **'**ಸಾಂಖ್ಯಯೋಗ**'** ಎಂದು ಕರೆಯುವುದು. ಯೋಗದರ್ಶನದ ಪ್ರವರ್ತಕರಾದ ಪತಂಜಲಿಯು ಸಾಂಖ್ಯದರ್ಶನದಲ್ಲಿ ಪ್ರತಿಪಾದಿತವಾಗಿರುವ 25 ತತ್ವಗಳನ್ನು ಒಪ್ಪುವುದರೊಂದಿಗೆ ಈಶ್ವರ ತತ್ವವನ್ನೂ ಅಂಗೀಕರಿಸಿರುವುದರಿಂದ ಯೋಗದರ್ಶನಕ್ಕೆ ಸೇಶ್ವರ–ಸಾಂಖ್ಯ ಎಂಬುದಾಗಿ ಮತ್ತೊಂದು ಹೆಸರಿದೆ. ತಾತ್ತ್ವಿಕ ಸಿದ್ಧಾಂತವು ಸಾಂಖ್ಯಮತದಲ್ಲಿಯೂ, ಆಚರಣೆಯ ಮಾರ್ಗವು ಯೋಗಮತದ ಲ್ಲಿಯೂ ಪ್ರತಿಪಾದಿತವಾಗಿದೆ.

ಮನುಷ್ಯನೆಂದರೆ ಆತ್ಮ ಮತ್ತು ಪ್ರಕೃತಿಗಳ ಸಂಘಾತ. ಇಲ್ಲಿ ಪ್ರಕೃತಿ ಎಂಬುದು 24 ತತ್ವಗಳಿಗೆ ಅನ್ವಯಿಸುತ್ತದೆ. ಅವುಗಳೆಂದರೆ ಪಂಚಭೂತಗಳು(ಗಾಳಿ, ನೀರು, ನೆಲ, ಬೆಂಕಿ ಮತ್ತು ಆಕಾಶ), ಪಂಚ ತನ್ಮಾತ್ರೆಗಳು (ರೂಪ, ರಸ, ಗಂಧ, ಸ್ಪರ್ಶ ಮತ್ತು ಶಬ್ದ) ಪಂಚ ಕರ್ಮೇಂದ್ರಿಯಗಳು(ಕೈ, ಕಾಲು, ಗುದ, ಗುಹ್ಯ, ಮತ್ತು ವಾಕ್ಕು). ಪಂಚ ಜ್ಞಾನೇಂದ್ರಿಯಗಳು(ಕಣ್ಣು, ಕಿವಿ, ನಾಲಗೆ, ಮೂಗು ಮತ್ತು ಚರ್ಮ) ಮೂರು ಅಂತಃಕರಣಗಳು(ಬುದ್ಧಿ, ಮನಸ್ಸು ಮತ್ತು ಅಹಂಕಾರ) ಮತ್ತು ಮೂಲ ಪ್ರಕೃತಿ. ಪ್ರಕೃತಿಯ ಇಂಥ ವಿಕಾರಗಳ ಸಂಗವಿರುವ ಆತ್ಮಕ್ಕೆ ಜೀವಾತ್ಮ ಎಂದು ಹೆಸರು.[1] ಸಾಂಖ್ಯದರ್ಶನದಲ್ಲಿ ಆತ್ಮನನ್ನು ಪುರುಷ ಎನ್ನುವರು. ಪುರುಷರು ಅನೇಕ. ಪ್ರಕೃತಿಗಿಂತ ಸಂಪೂರ್ಣ ಭಿನ್ನ. ಪುರುಷ(ಆತ್ಮ) ಚಿದ್ವಸ್ತು. ಅದಕ್ಕೆ ಮಾತ್ರ

ಚಿತಿಶಕ್ತಿ(ಯೋಚಿಸುವ ಶಕ್ತಿ) ಇದೆ. ಪುರುಷನು ಯಾವಾಗಲೂ ಶುದ್ಧ. ಅವನಲ್ಲಿ ಯಾವ ವಿಕಾರಗಳೂ ಉಂಟಾಗುವುದಿಲ್ಲ. ಅವನು ಏನನ್ನೂ ಮಾಡಲಾರ. ಜೀವಾತ್ಮನ ಸುಖ–ದುಃಖಗಳೆಲ್ಲವೂ ಪ್ರಕೃತಿಯ ಸಂಪರ್ಕದಿಂದುಂಟಾಗುತ್ತದೆ. ಪ್ರಕೃತಿ ಜಡವಸ್ತು. ಮನುಷ್ಯನನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ದೇಹ, ಇಂದ್ರಿಯ, ಅಂತಃಕರಣಗಳೆಲ್ಲವೂ ಪ್ರಕೃತಿಯ ರೂಪಾಂತರಗಳಾದುದರಿಂದ ಅವೆಲ್ಲ ಜಡವಸ್ತುಗಳು. ಅವಕ್ಕೆ ಸ್ವಂತ ಚಿತಿಶಕ್ತಿ ಇಲ್ಲ. ಆದರೆ ಅವು ಪುರುಷನ ಸಂಪರ್ಕಕ್ಕೆ ಬಂದರೆ (ಅಂದರೆ ಜೀವಂತ ಮನುಷ್ಯನಲ್ಲಿ ಪುರುಷ ಮತ್ತು ದೇಹೇಂದ್ರಿಯಾದಿಗಳು ಇರುವುದರಿಂದ) ಅವು ಯೋಚಿಸಬಲ್ಲವು, ನಿರ್ಧಾರ ತೆಗೆದುಕೊಳ್ಳಬಲ್ಲವು ಮತ್ತು ಆಶಿಸ ಬಲ್ಲವು, ಸುಖ–ದುಃಖಗಳನ್ನು ಅನುಭವಿಸಬಲ್ಲವು. ಜನ್ಮಾಂತರವಿರುವುದು ಲಿಂಗಶರೀರಕ್ಕೇ ಹೊರತು ಶುದ್ಧ, ಚೈತನ್ಯ ಸ್ವರೂಪನಾದ ಪುರುಷನಿಗಲ್ಲ. ಏಕೆಂದರೆ ಆತ ವಿಭು. ಪುರುಷನು ಬದ್ಧನೂ ಅಲ್ಲ. ಮುಕ್ತನೂ ಅಲ್ಲ. ಆತ ನಿಸ್ಸಂಗ. ಯೋಗದಾರ್ಶನಿಕರು ಬುದ್ಧಿ ಅಥವಾ ಅಂತಕರಣಕ್ಕೆ ಚಿತ್ತ ಎನ್ನುತ್ತಾರೆ. ಚಿತ್ತಕ್ಕೆ ಪುರುಷನ ಸಾನಿಧ್ಯದಿಂದ ಚಿತಿಶಕ್ತಿ ಬಂದಾಗ ಆ ಶಕ್ತಿ ತನ್ನ ಸ್ವಭಾವವೆಂದು ತಪ್ಪು ತಿಳಿದುಕೊಳ್ಳುತ್ತದೆ. ಮತ್ತು ತಾನು ಜಡ ಎಂಬುದನ್ನು ಮರೆಯುತ್ತದೆ. ಪುರುಷ ಸುಖ–ದುಃಖಗಳನ್ನು ಭೋಗಿಸುವ ಭೋಕ್ತನಲ್ಲ. ಆದರೂ ತಾನೇ ಕರ್ತ, ತಾನೇ ಭೋಕ್ತ ಎಂದು ತಪ್ಪು ತಿಳಿಯುತ್ತಾನೆ. ಈ ತಪ್ಪು ತಿಳುವಳಿಕೆಗೆ **ಅಜ್ಞಾನ** ಎಂದು ಹೆಸರು. ಪ್ರಕೃತಿ–ಪುರುಷರು ಸಂಪೂರ್ಣವಾಗಿ ಭಿನ್ನರು ಎಂಬ ವಿವೇಕವಿಲ್ಲದಿರುವುದರಿಂದ ಪುರುಷ ಧರ್ಮವನ್ನು ಪ್ರಕೃತಿಯಲ್ಲೂ, ಪ್ರಕೃತಿಯ ಧರ್ಮವನ್ನು ಪುರುಷನಲ್ಲೂ ಆರೋಪಿಸಿಕೊಳ್ಳುವುದೇ **ಬಂಧ**. ಆತ್ಮ ತಾನು ಯಾವಾಗ ಚಿತ್ತ ಎಂದು ತಪ್ಪು ತಿಳಿಯುತ್ತದೆಯೋ ಆಗ ಅದರ ಅಜ್ಞಾನ ಪ್ರಾರಂಭವಾಗುವುದರಿಂದ ಬಂಧನ ಉಂಟಾಗುತ್ತದೆ. ಹೀಗೆ ಅಜ್ಞಾನವೂ ಅದರಿಂದುಂಟಾಗುವ ಕರ್ಮಗಳೂ ಅವುಗಳಿಂದುಂಟಾಗುವ ಸುಖ–ದುಃಖಗಳ ಬಂಧನವೂ **ಅನಾದಿ**ಯಾಗಿರುತ್ತದೆ. ಚಿತ್ತಕ್ಕೆ ತಾನು ಸಹಜವಾಗಿ ಜಡ, ಆತ್ಮ(ಪುರುಷ) ಅಲ್ಲ. ಎಂಬ ಅರಿವು ಮೂಡಿದಾಗ ಅದು ಪುರುಷನನ್ನು ಬಾಧಿಸುವುದಿಲ್ಲ. ಅದೇ ರೀತಿ, ಆತ್ಮ ಚಿತ್ತವಷ್ಟೇ ಸುಖಿ ಅಥವಾ ದುಃಖಿ ತಾನಲ್ಲ ಎಂದು ಅರಿತಾಗ ಅದು ಚಿತ್ತದ ಸಂಗ ಮಾಡುವುದಿಲ್ಲ. ಆತ್ಮದರ್ಶನರೂಪ ಜ್ಞಾನದಿಂದ ಅವಿದ್ಯೆಯ ಅಭಾವ ಉಂಟಾಗಲು ಸಂಯೋಗವೂ ತಂತಾನೆ ಇಲ್ಲವಾಗುತ್ತದೆ. ಅದು ಬುದ್ಧಿಯ ಧ್ಯಾನದಲ್ಲಿ ಸಂಪೂರ್ಣವಾಗಿ ಮುಳುಗಿದ ಸ್ಥಿತಿ. ಆದ್ದರಿಂದಲೇ ಅದನ್ನು ಪ್ರಜ್ಞೆಯಿಂದ ಕೂಡಿದ ಸಮಾಧಿ ಅಥವಾ ಅಧಿಪ್ರಜ್ಞೆಯ ಸ್ಥಿತಿ ಎಂದು ಕರೆದಿರುವುದು. ಪುರುಷ–ಚಿತ್ತಗಳಿಗಿರುವ ವ್ಯತ್ಯಾಸವನ್ನು ಅಥವಾ ಪುರುಷನ ಶುದ್ಧತೆಯನ್ನು ಯೋಗಪ್ರಜ್ಞೆ(ಸಮಾಧಿ)ಯಲ್ಲಿ ಮಾತ್ರ ಅರಿಯಬಹುದು. ಏಕೆಂದರೆ ಆಗ ಕರ್ಮದ ಬೀಜಗಳೆಲ್ಲ ಸುಟ್ಟು, ನಿರ್ಬೀಜ ಸಮಾಧಿ ಉಂಟಾಗುತ್ತದೆ. ಪುರುಷನ ಈ ಸ್ಥಿತಿಗೆ ಕೈವಲ್ಯ(ಯೋಗಪ್ರಜ್ಞೆ) ಎಂದು ಹೆಸರು.

**ಯೋಗಪ್ರಜ್ಞೆ(ಸಮಾಧಿ)ಯ ಪ್ರಾಪ್ತಿಯ ಸಾಧನಗಳು** : ಪತಂಜಲಿ ಮಹರ್ಷಿಗಳು ಯೋಗದರ್ಶನದಲ್ಲಿ 196 ಸೂತ್ರಗಳನ್ನು ಪ್ರತಿಪಾದಿಸುತ್ತಾರೆ. ಯೋಗದರ್ಶನದಲ್ಲಿ ನಾಲ್ಕು ಪಾದಗಳಿವೆ. ಮೊದಲನೇ ಸಮಾಧಿ ಪಾದದಲ್ಲಿ ಸಂಪ್ರಜ್ಞಾತ ಮತ್ತು ಅಸಂಪ್ರಜ್ಞಾತ ಯೋಗದ ಪ್ರಭೇದಗಳನ್ನೂ, ಎರಡನೇಯ ಸಾಧನ ಪಾದದಲ್ಲಿ ಯೋಗದ ಮಾರ್ಗಗಳನ್ನು, ಮೂರನೇಯ ವಿಭೂತಿ ಪಾದದಲ್ಲಿ ಅಲೌಕಿಕ ವಿಭೂತಿಗಳನ್ನೂ, ನಾಲ್ಕನೇಯ ಕೈವಲ್ಯ ಪಾದದಲ್ಲಿ ಯೋಗದ ಫಲವಾದ ಮೋಕ್ಷವನ್ನು ಪ್ರತಿಪಾದಿಸಲಾಗಿದೆ.

ಯೋಗಶಾಸ್ತ್ರ ಪಿತಾಮಹರಾದ ಪತಂಜಲಿ ಮಹರ್ಷಿಗಳ ಯೋಗದ ಅರ್ಥವನ್ನು ಹೀಗೆ ಹೇಳುತ್ತಾರೆ. **ಯೋಗವೆಂದರೆ ಚಿತ್ತದ ಚಾಂಚಲ್ಯ ವೃತ್ತಿಗಳನ್ನು ನಿರೋಧಿಸುವುದು**.[2] ಅಸಂಪ್ರಜ್ಞಾತ ಸಮಾಧಿಸ್ಥಿತಿ ಪ್ರಾಪ್ತವಾದಾಗ ಜೀವಾತ್ಮನು ತನ್ನ ಮೂಲ ಸ್ವರೂಪದಲ್ಲಿ ಸ್ಥಿತನಾಗುತ್ತಾನೆ. ಚಿತ್ತವೃತ್ತಿ ನಿರೋಧವನ್ನುಂಟುಮಾಡುವ ಯೋಗದಲ್ಲಿ ಎಂಟು ಅಂಗಗಳಿರುವುದರಿಂದ ಅಷ್ಟಾಂಗಯೋಗ ಎನ್ನುವರು. ಅವುಗಳೆಂದರೆ, 1)ಯಮ 2)ನಿಯಮ 3)ಆಸನ 4)ಪ್ರಾಣಾಯಾಮ 5)ಪ್ರತ್ಯಾಹಾರ 6)ಧಾರಣಾ 7)ಧ್ಯಾನ 8)ಸಮಾಧಿ. ಈ ಅಂಗಗಳಲ್ಲಿ ಯಮದಿಂದ ಪ್ರಾಣಾಯಾಮದವರೆಗಿನ ಐದು ಅಂಗಗಳು ಯೋಗದ ಬಹಿರ್‌ಅಂಗಗಳು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಯಮ ಹಾಗೂ ಶೌಚ ಸಂತೋಷ. ತಪಸ್, ಸ್ವಾಧ್ಯಾಯ ಈಶ್ವರ ಪ್ರಣಿಧಾನವೆಂಬ ನಿಯಮಗಳು ಸಾಮಾಜಿಕ ಶಾಂತಿಗೆ ಭದ್ರ ತಳಹದಿಯಾಗಿರುವುದರ ಜೊತೆಗೆ ದೈಹಿಕ ಮಾನಸಿಕ, ಸ್ವಾಸ್ಥ್ಯಕ್ಕೆ ಪರಮಸಾಧನಗಳಾಗಿವೆ. ಈಶ್ವರ ಪ್ರಣಿಧಾನದಿಂದ ಸಮಾಧಿ ಸಿದ್ಧಿ ದೊರೆಯುತ್ತದೆ. ಅಚಲವಾಗಿಯೂ ಸುಖಪೂರ್ವಕವಾಗಿಯೂ ಕೂಡುವುದೇ ಆಸನ. ಆಸನದ ಸ್ಥಿರತೆಯುಂಟಾದಾಗ ಆಗ ಶೀತೋಷ್ಣಾದಿ ದ್ವಂದ್ವಗಳ ಆಘಾತವಿರದು. ಅವುಗಳನ್ನು ಸಹಿಸುವ ಶಕ್ತಿ ಯೋಗಿ ಶರೀರಕ್ಕೆ ಉಂಟಾಗುತ್ತದೆ. ಆಗ ಆ ದ್ವಂದ್ವಗಳು ಚಿತ್ತವನ್ನು ಚಂಚಲಗೊಳಿಸಲಾರವು. ಶ್ವಾಸ ಪ್ರಶ್ವಾಸಗತಿ ನಿರೋಧವೇ ಪ್ರಾಣಾಯಾಮ. ಆಸನ ಪ್ರಾಣಾಯಾಮಗಳಿಂದ ದೇಹ–ಮನಸ್ಸುಗಳು ಸಬಲವಾಗುತ್ತವೆ. ದೇಹವು ಶೀತೋಷ್ಣಾದಿ ದ್ವಂದ್ವಗಳನ್ನು ಸಹಿಸಲು ಸಮರ್ಥವಾಗಿ ಮನಸ್ಸು ತನ್ನ ಚಾಂಚಲ್ಯವನ್ನು ಕಳೆದುಕೊಂಡು ಸಮಾಧಿಗೆ ಯೋಗ್ಯತೆಯುನ್ನು ಪಡೆಯುತ್ತದೆ.[3] ಸಾಧಕನನ ಬಹಿರ್ಮುಖವಾದ ಮನಸ್ಸನ್ನು ವಿಷಯಾಕಾರದಿಂದ ತಡೆಹಿಡಿಯುವುದೇ ಪ್ರತ್ಯಾಹಾರ. ಅದರಿಂದ ಇಂದ್ರಿಯಗಳು ಸ್ವಾಧೀನವಾಗಿ ಮನಸ್ಸಿಗೆ ಸ್ಥಿರತೆ, ಶಾಂತಿ ಉಂಟಾಗುತ್ತದೆ. ಧಾರಣಾ, ಧ್ಯಾನ, ಸಮಾಧಿಗಳು ಯೋಗದ ಅಂತರ್‌ಅಂಗ ಸಾಧನಗಳಾಗಿದ್ದು ಮನೋಲಯದ ಮೂಲಕ ಸಾಧಕನಿಗೆ ಕೈವಲ್ಯ ದೊರೆಯುವಂತೆ ಮಾಡುತ್ತವೆ. ಯಾವುದಾದರೊಂದು ದೇಶದಲ್ಲಿ ಚಿತ್ತವನ್ನು ನೆಲೆಗೊಳಿಸುವುದೇ ಧಾರಣಾ. ಧ್ಯೇಯ ವಸ್ತುವಿನಲ್ಲಿ ವೃತ್ತಿಯ ಏಕಾರತೆ ಧ್ಯಾನವೆನಿಸುವುದು. ಧ್ಯಾನವೃತ್ತಿಗೆ ಕೇವಲ ಧ್ಯೇಯವೊಂದೇ ಭಾಸವಾದಾಗ ಸ್ವರೂಪಶೂನ್ಯವಾದಂತೆ ಆಗುವುದೇ ಸಮಾದಿ. ಧಾರಣಾದಿ ತ್ರಯವು ಒಂದೇ ಧ್ಯೇಯದಲ್ಲಿದ್ದರೆ ಸಂಯಮವೆಂದು ಕರೆಯಲ್ಪಡುತ್ತದೆ. ಅದರ ಸ್ಥಿರತೆಯಿಂದ ಬುದ್ಧಿಯ ಪ್ರಕಾಶ ಉಂಟಾಗುತ್ತದೆ. ಸರ್ವಾರ್ಥ ಚಿಂತನದ ಕ್ಷಯ ಹಾಗೂ ಏಕಾರ್ಥ ಚಿಂತನದ ಏಕಾಗ್ರತೆ ಉದಯ ಇದುವೇ ಚಿತ್ತದ ಸಮಾಧಿ ಪರಿಣಾಮ. ಹೃದಯದಲ್ಲಿ ಸಂಯಮ ಸಾಧಿಸುವುದರಿಂದ ಚಿತ್ತಸ್ವರೂಪ ಜ್ಞಾನವುಂಟಾಗುತ್ತದೆ.

ಪತಂಜಲಿ ಮಹರ್ಷಿಗಳು ಸಮಾಧಿ ಸ್ಥಿತಿಯಲ್ಲಿ ಸಂಪ್ರಜ್ಞಾತ ಮತ್ತು ಅಸಂಪ್ರಜ್ಞಾತ ಎಂದು ಎರಡು ಸ್ತರವನ್ನು ಗುರುತಿಸಿದ್ದಾರೆ. ವಿತರ್ಕ, ವಿಚಾರ, ಆನಂದ, ಅಸ್ಮಿತಾ ಎಂಬ ನಾಲ್ಕು ವಿಷಯಗಳೊಡನೆ ಸಂಬಂಧಿಸಿರುವ ಚಿತ್ತ ಸಮಾಧಾನಕ್ಕೆ **ಸಂಪ್ರಜ್ಞಾತ ಸಮಾಧಿ**

ISSN 2249 - 5754 VIJNANA KANNADA (PRINT)


ಎನ್ನುವರು.[4] ಈ ಅವಸ್ಥೆಯಲ್ಲಿ ಬುದ್ಧಿಯು ಒಂದು ವಸ್ತುವಿನ ಮೇಲೆ ಏಕಾಗ್ರತೆಯನ್ನು ಹೊಂದಿ ಸಂಪೂರ್ಣವಾಗಿ ಧ್ಯಾನದಲ್ಲಿ ಮುಳುಗಿರುವುದು. ಶಬ್ದ, ಅರ್ಥ ಮತ್ತು ಜ್ಞಾನ ಇವುಗಳಿಂದ ಸಂಕೀರ್ಣವಾದ ಸಮಾಧಿಗೆ ಸವಿತರ್ಕ ಸಮಾಪತ್ತಿಯೆನ್ನುತ್ತಾರೆ[5] ಸಭೀಜ ಸಮಾಧಿಯಲ್ಲಿ ಉತ್ಪನ್ನವಾಗುವ ಪ್ರಜ್ಞೆ ಸತ್ಯವನ್ನು ಗ್ರಹಿಸುವುದು.[6] ಬುದ್ಧಿ ಮತ್ತು ಪುರುಷರಲ್ಲಿ ಭೇದಜ್ಞಾನವುಳ್ಳ ಸಬೀಜ ಸಮಾಧಿ ಹೊಂದಿದ ಯೋಗಿಗೆ ಸರ್ವಭಾವಸ್ವಾಮಿತ್ವ ಮತ್ತು ಸರ್ವಜ್ಞತ್ವದ ಭಾವ ಉಂಟಾಗುತ್ತದೆ[7] ಇದನ್ನು ವಿವೇಕ ಜ್ಞಾನವೆಂದೂ ಪುರುಷ ಜ್ಞಾನವೆಂದೂ ಕರೆಯಲಾಗುತ್ತದೆ. ಅದರಲ್ಲಿಯೂ ವೈರಾಗ್ಯವುಂಟಾದರೆ ದೋಷ ಬೀಜ ನಾಶದಿಂದ ಕೈವಲ್ಯ ಪ್ರಾಪ್ತಿ ಆಗುತ್ತದೆ.[8] ಹೀಗೆ ಎಲ್ಲ ಚಿತ್ತವೃತ್ತಿಗಳ ನಿರೋಧವನ್ನೇ **ಅಸಂಪ್ರಜ್ಞಾತ ಸಮಾಧಿ** ಎನ್ನುವರು. ವಿತರ್ಕಾದಿಗಳಿಂದ ವಿಶ್ರಾಂತಿ, ಸಾಕ್ಷಾತ್ಕಾರ ಪೂರ್ವಾವಸ್ಥೆಯಾಗಿರುವ ಚಿತ್ತಸಂಸ್ಕಾರ ಶೇಷವಾಗಿರುವ ಯೋಗವೇ ಅಸಂಪ್ರಜ್ಞಾತ ಸಮಾಧಿ.[9] ಸಾಂಕೇತಿಕ ಶಬ್ದ, ಸ್ಮೃತಿ ಇಲ್ಲದೇ ಚಿತ್ತವೃತ್ತಿಯ ಸ್ವರೂಪವು ಶೂನ್ಯವಾದಂತಾಗಿ ಅರ್ಥವೊಂದೇ ಚೆನ್ನಾಗಿ ಉಳಿಯುವುದೇ ನಿರ್ವಿತರ್ಕ ಸಮಾಪತ್ತಿ.[10] ನಿರ್ವಿಚಾರ ಸಮಾಧಿಯು ಪಕ್ವವಾದಾಗ ಬುದ್ಧಿಯು ಪೂರ್ಣ ನಿರ್ಮಲವಾಗುತ್ತದೆ. ಸಂಪ್ರಜ್ಞಾತ ಸಮಾಧಿ ಸಂಸ್ಕಾರದ ನಿರೋಧವಾಗಲು ಚಿತ್ತವೃತ್ತಿಗಳ ನಿರೋಧ ವುಂಟಾಗಿ ನಿರ್ಬೀಜ ಸಮಾಧಿ ದೊರೆಯುತ್ತದೆ.(ವಿವೇಕ ಖ್ಯಾತಿಯನ್ನು ಹೊಂದಿದ) ಪುರುಷನ ಬುದ್ಧಿ(ಪ್ರಜ್ಞೆ) ಸಪ್ತಪ್ರಕಾರದ (ಅಂತಿಮ) ಸ್ಥಿತಿಯನ್ನು ಹೊಂದಿರುತ್ತದೆ.[11] ಅವುಗಳೆಂದರೆ ಜ್ಞೇಯಶೂನ್ಯಾವಸ್ಥೆ ಹೇಯಶೂನ್ಯಾವಸ್ಥೆ, ಪ್ರಾಪ್ಯಪ್ರಪ್ತಾವಸ್ಥೆ, ಚಿಕೀರ್ಷಾಶೂನ್ಯಾವಸ್ಥೆ. ಚಿತ್ತಕೃತಾರ್ಥಾವಸ್ಥೆ, ಗುಣಲೀನಾವಸ್ಥೆ ಹಾಗೂ ಆತ್ಮಸ್ಥಿತ್ಯವಸ್ಥೆ. ಸಪ್ತಪ್ರಾಂತಭೂಮಿ ಪ್ರಜ್ಞೆಯು ಅನುಭವವಿರುವ ಯೋಗಿ ಜೀವನ್ಮುಕ್ತ(ಕುಶಲ)ನೆಂದೂ ಚಿತ್ತ ತನ್ನ ಸ್ವರೂಪದಲ್ಲಿ ಲೀನವಾದಾಗ ವಿದೇಹಮುಕ್ತನೆಂದೂ ಕರೆಯಲ್ಪಡುತ್ತಾನೆ.

ಅಸಂಪ್ರಜ್ಞಾತ ಸಮಾಧಿಯಲ್ಲಿ ತನ್ನ ಇರುವಿಕೆಯ ಅರಿವೂ ಸಂಪೂರ್ಣವಾಗಿ ಲಯವಾಗುವುದು. ಇದೇ ಪೂರ್ಣತೆ. ಆಗ ಧ್ಯೇಯ ವಸ್ತುವಿನ ಜ್ಞಾನವಾಗಲಿ, ನಾನು ಧ್ಯಾನಿಸುತ್ತಿದ್ದೇನೆ ಎಂಬ ಧಾತೃ ಜ್ಞಾನವಾಗಲೀ, ನಾನು ಧ್ಯೇಯದಲ್ಲಿ ಲೀನವಾಗಿದ್ದೇನೆ ಎಂಬ ಜ್ಞಾನವಾಗಲೀ ಇರುವುದಿಲ್ಲ. ಆಗ ಪ್ರತಿಯೊಬ್ಬ ಯೋಗಿಯೂ ತಾನು ಪರಿಶುದ್ಧ, ಪ್ರತ್ಯೇಕ ಆತ್ಮ, ಅಷ್ಟೇ ಅಲ್ಲ ಬ್ರಹ್ಮನ್ ಅಲ್ಲ. ಅಥವಾ ವಿಶ್ವದ ಯಾವುದೇ ಭಾಗವೂ ಅಲ್ಲ ಎನ್ನುವ ಅನುಭವ ಪಡೆಯುತ್ತಾನೆ. ಆಗ ಆತನ ದೇಹ ಇಂದ್ರಿಯಗಳು ಆತನು ನಿದ್ರೆಯಲ್ಲಿದ್ದಂತೆ ವಿಶ್ರಾಂತಿಯಲ್ಲಿರುತ್ತದೆ. ಆದರೆ ಅವನ ಮನಸ್ಸು ಮತ್ತು ಬುದ್ಧಿ ಎಚ್ಚರವಾಗಿದ್ದವನಂತೆ ಜಾಗೃತವಾಗಿರುತ್ತದೆ. ಆದರೂ ಆತನು ಸಾಮಾನ್ಯ ಜಾಗೃತಾವಸ್ಥೆಗಿಂತ ಅತೀತ ಸ್ಥಿತಿಯಲ್ಲಿರುತ್ತಾನೆ. ಸಮಾಧಿಸ್ಥನಾಗಿರುವವನು ಪೂರ್ಣ ಜಾಗೃತನಾಗಿರುತ್ತಾನೆ.

ಪತಂಜಲಿಮುನಿಗಳು ಸಮಾಧಿ ಸ್ಥಿತಿಯನ್ನು ಪಡೆಯಲು ಅಷ್ಟಾಂಗ ಮಾರ್ಗಗಳನ್ನು ತಿಳಿಸಿರುವುದಲ್ಲದೇ ಸಾಧನಾಮಾರ್ಗದಲ್ಲಿ ಬರುವ ಅನೇಕ ವಿಘ್ನಗಳ ನಾಶಕ್ಕಾಗಿ ಹಲವು ಉಪಾಯಗಳನ್ನು ತಿಳಿಸಿದ್ದಾರೆ. ಯೋಗಿಗಳ ಸಮಾಧಿಯು ಶ್ರದ್ಧೆ, ವೀರ್ಯ, ಸ್ಮೃತಿ, ಏಕಾಗ್ರತೆ ಹಾಗೂ ಪ್ರಜ್ಞೆಗಳೆಂಬ ಉಪಾಯದಿಂದ ದೊರೆಯುತ್ತದೆ.[12] ಸಂಸ್ಕಾರವು ತೀವ್ರವಾಗಿದ್ದರೆ ಸಮಾಧಿ ಶೀಘ್ರ ದೊರೆಯುವುದು. ಅಲ್ಲದೆ ಈಶ್ವರ ಭಕ್ತಿ ವಿಶೇಷದಿಂದಲೂ ಸಮಾಧಿ ಲಾಭವಾಗುತ್ತದೆ. ಈಶ್ವರ ಪ್ರಣಿಧಾನದಿಂದ ಜೀವನ ನಿಜಸ್ವರೂಪ ದರ್ಶನ ಹಾಗೂ ವ್ಯಾಧಿ ಮುಂತಾದ ವಿಘ್ನಗಳ ನಿವಾರಣೆಯಾಗುತ್ತದೆ. ಆಗ ಆತ್ಮ ಸಾಕ್ಷಾತ್ಕಾರ, ಅಂತರಾತ್ಮನ ಸ್ವರೂಪಜ್ಞಾನ ಸುಲಭವಾಗಿ ಉಂಟಾಗುತ್ತದೆ. ವ್ಯಾಧಿ, ಸ್ತ್ಯಾನ, ಸಂಶಯ ಪ್ರಮಾದ, ಆಲಸ್ಯ, ಅವಿರತಿ, ಭ್ರಾಂತಿದರ್ಶನ, ಅಲಬ್ಧ ಭೂಮಿಕತ್ವ ಮತ್ತು ಅನವಸ್ಥಿತ್ವ ಈ ಒಂಭತ್ತು ಚಿತ್ತ ವಿಕ್ಷೇಪಗಳು ಯೋಗವಿಘ್ನಗಳಾಗಿವೆ.[13] ಇವುಗಳ ಜೊತೆ ದುಃಖ, ದೌರ್ಮನಸ್ಯ, ಅಂಗಮೇಜಯತ್ವ, ಶ್ವಾಸ ಮತ್ತು ಪ್ರಶ್ವಾಸ ಮುಂತಾದವುಗಳು ಹುಟ್ಟಿಕೊಳ್ಳುತ್ತವೆ.[14] ಇವುಗಳ ನಾಶಕ್ಕಾಗಿ ಮತ್ತು ಚಿತ್ತದ ಏಕಾಗ್ರತೆಗಾಗಿ ಈಶ್ವರ ಪ್ರಣಿಧಾನ ಸಾಧ್ಯವಾಗದವರು ಯಾವುದಾದರೊಂದು ತತ್ತ್ವದಲ್ಲಿ ಚಿತ್ತವನ್ನು ನಿರಂತರವಾಗಿ ನಿಲ್ಲಿಸುವ ಅಭ್ಯಾಸ ಮಾಡಬೇಕು. ಆಗ ಚಿತ್ತದ ಏಕಾಗ್ರತೆ ಸಿದ್ಧಿಸುತ್ತದೆ. ಅದರಿಂದ ಎಲ್ಲ ವಿಘ್ನಗಳ ನಿವಾರಣೆ ಸಾಧ್ಯವಾಗುತ್ತದೆ. ಸುಖ, ದುಃಖ, ಪುಣ್ಯ, ಪಾಪ ವಿಷಯಗಳಲ್ಲಿ ಕ್ರಮವಾಗಿ ಮೈತ್ರಿ(ಗೆಳೆತನ). ಕರುಣೆ, ಮೋದ ಮತ್ತು ಉಪೇಕ್ಷೆಯ ಭಾವನೆಯಿಂದ ಚಿತ್ತ ಪ್ರಸನ್ನವಾಗುತ್ತದೆ.[15] ಸುಖಿಗಳಲ್ಲಿ ಗೆಳೆತನ, ದುಃಖಿಗಳಲ್ಲಿ ದಯೆ, ಪುಣ್ಯಪುರುಷರಲ್ಲಿ ಸಂತೋಷ ಹಾಗೂ ಪಾಪಾತ್ಮರಲ್ಲಿ ಉಪೇಕ್ಷೆ ಮುಂತಾದ ಭಾವಗಳಿಂದ ಸಾಧಕನು ವರ್ತಿಸಿದ್ದಾದರೆ ಚಿತ್ತದಲ್ಲಿಯ ದ್ವೇಷ ಅಸೂಯೆ ತಿರಸ್ಕಾರ ಹಾಗೂ ಕ್ರೋಧ ಮುಂತಾದ ಮಲಗಳು ನಾಶವಾಗಿ ಚಿತ್ತ ಪ್ರಸನ್ನವಾಗಿ ಏಕಾಗ್ರತೆ ಹೊಂದುತ್ತದೆ. ಉದರದಲ್ಲಿಯ ವಾಯುವನ್ನು ಹೊರಹಾಕುವುದರಿಂದಲೂ ಮತ್ತು ಕುಂಭಕದಿಂದಲೂ ಚಿತ್ತಶುದ್ಧಿ ಆಗುತ್ತದೆ. ರಾಗ–ದ್ವೇಷಾದಿ ರಹಿತರಾದ ಮಹಾಮಹಿಮರ ಚಿಂತನೆ ಮಾಡುವ ಸಾಧಕನ ಚಿತ್ತವೂ ಸ್ಥಿರವಾಗುತ್ತದೆ. ವಿರಕ್ತರ ಧ್ಯಾನ ಮಾಡುವುದರಿಂದ, ಅವರಂತೆಯೇ ತಾನೂ ವಿರಾಗಿಯಾಗಬೇಕೆಂಬ ಭಾವನೆ ಉದಯಿಸಿದಾಗಿ ಮನಸ್ಸಿನಲ್ಲಿ ಏಕಾಗ್ರತೆ ಸಾಧ್ಯವಾಗುವುದು. ಈ ಜಗತ್ತನ್ನು ಸ್ವಪ್ನ ನಿದ್ರೆಗಳಂತೆ ಕಾಣುವ ಜ್ಞಾನವನ್ನು ಅವಲಂಬಿಸಿದ ಚಿತ್ತವು ಸ್ಥಿರವಾಗುತ್ತದೆ. ಈ ಸಂಸಾರವು ಸ್ವಪ್ನದಂತೆ ಅಸ್ಥಿರವೆಂದು ತಿಳಿದರೆ ಸಂಸಾರ ವ್ಯಾಮೋಹವುಂಟಾಗದು. ತನಗಿಷ್ಟವಾದ ವಸ್ತುವಿನ ಧ್ಯಾನದಿಂದಲೂ ಏಕಾಗ್ರತೆ ಸಾಧ್ಯ.

ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನ ಈ ಮೂರು ಕ್ರಿಯಾಯೋಗವಾಗಿದೆ. ಈ ಕ್ರಿಯಾಯೋಗವು ಸಮಾಧಿಯ ಸಿದ್ಧಿಗೆ ಮತ್ತು ಕ್ಲೇಶಗಳನ್ನು ಕ್ಷೀಣ ಮಾಡಲು ಸಹಾಯಕವಾಗುತ್ತದೆ. ಅವಿದ್ಯೆ, ಅಸ್ಮಿತಾ, ರಾಗ, ದ್ವೇಷ, ಮತ್ತು ಅಭಿನಿವೇಶ ಇವು ಐದು ದುಃಖದಾಯಕ ಕ್ಲೇಶಗಳು.[16] ಆ ಪಂಚಕ್ಲೇಶಗಳನ್ನು ಧ್ಯಾನದಿಂದ ನಾಶ ಮಾಡಲು ಸಾಧ್ಯವಾಗುತ್ತದೆ. ಆಗ ಪುಣ್ಯ–ಪಾಪವೆಂಬ ಕರ್ಮಸಂಸ್ಕಾರಗಳು ನಾಶ ಹೊಂದಿ ಪುರುಷನು ನಿರ್ಲೇಪನಾಗಿ ಕೈವಲ್ಯ ಸ್ಥಿತಿಯನ್ನು ಹೊಂದುತ್ತಾನೆ. ಅಂಥಹ ಯೋಗಿಯು ಪ್ರಾರಬ್ಧಕರ್ಮದ ವಾಸನೆಯಿರುವವರೆಗೆ ದೇಹಧಾರಿಯಾಗಿರುತ್ತಾನೆ. ಆದರೆ ಅವನ ದೇಹದ ಕರ್ಮಗಳು ಅವನನ್ನು ಬಂಧಿಸುವುದಿಲ್ಲ. ಜೀವನ್ಮುಕ್ತನಾದ ಅವನಿಗೆ ದೇಹದಲ್ಲಿ ಆಸಕ್ತಿಯೇ ಇರುವುದಿಲ್ಲ. ಅಸಂಪ್ರಜ್ಞಾತ ಸಮಾಧಿಯನ್ನು ತಲುಪುವ ಮೂಲಕ ಸಾಧಕನಲ್ಲಿದ್ದ ಬಂಧನಕಾರಿಯಾದ ಎಲ್ಲ ಹಳೆಯ ಕರ್ಮಬೀಜಗಳೂ, ಕಾಮ, ಕ್ರೋಧ ಮುಂತಾದ ಸಂಸ್ಕಾರಗಳು ನಾಶವಾಗಿ ಅವನ ಚಿತ್ತವು ನಿರುದ್ಧ ಎನಿಸಿಕೊಳ್ಳುತ್ತದೆ. ಅವನು ಜಾಗೃತ ಸ್ಥಿತಿಗೆ ಮರಳಿದಾಗಲೂ

ಸಹ ಅವನ ಬಂಧಕಾರಕ ಸಂಸ್ಕಾರಗಳು ಹುಟ್ಟುವುದಿಲ್ಲ. ಹೀಗೆ ಪುರುಷನು ಚಿತ್ತದಿಂದ ಪ್ರಭಾವಿತನಾಗದೇ ಕೈವಲ್ಯವನ್ನು ಪಡೆಯುತ್ತಾನೆ. ಆಗ ಆತ್ಮನು ಶುದ್ಧನಾಗುತ್ತಾನೆ. ಹೀಗೆ ಉಭಯವಿಧ ಶುದ್ಧಿಯೇ ಕೈವಲ್ಯವು.[17] ಆಗ ಪುರುಷನು ಸ್ವರೂಪದಲ್ಲಿ ಇದ್ದು ಬಿಡುತ್ತಾನೆ. ಅಂದರೆ ಜನನ ಮರಣ ರೂಪವಾದ ಸಂಸಾರಕ್ಕೆ ಮರಳುವುದಿಲ್ಲ.

ಯೋಗಸಾಧನೆಯಿಂದ ಅನೇಕ ಅಲೌಕಿಕ ಶಕ್ತಿಗಳೂ, ಆಶ್ಚರ್ಯಕರವಾದ ಸಿದ್ಧಿಗಳುಂಟಾದರೂ ಯೋಗಿಗಳು ಅವು ಕೈವಲ್ಯಪ್ರದವಾದ ಸಮಾಧಿಗೆ ವಿಘ್ನಗಳೆಂದು ತಿಳಿದು ಅವುಗಳ ಬಗೆಗೆ ಉದಾಸೀನರಾಗಿರಬೇಕು. ಅವು ಆತ್ಮಸಾಕ್ಷಾತ್ಕಾರಕ್ಕೆ ನಿಜವಾಗಿಯೂ ಅಡ್ಡಿಗಳು. ಯೋಗಿಯು ತನ್ನ ಗುರಿಯಿಂದ ವಿಚಲಿತವಾಗದೆ ಆ ಭೋಗಗಳಲ್ಲಿ ಸಂಗವನ್ನಾಗಲೀ, ಅವುಗಳ ಬಗ್ಗೆ ಅಭಿಮಾನವನ್ನಾಗಲೀ ಮಾಡಬಾರದು. ಆ ಭೋಗಗಳು ಶಾಶ್ವತವಲ್ಲ. ಏಕೆಂದರೆ ಪುನಃ ಅನಿಷ್ಟ ಸಂಭವಿಸುತ್ತದೆ. ಸಾಧಕರ ಗುರಿ ಕೈವಲ್ಯ ಅದನ್ನು ಪಡೆಯದೇ ವಿರಮಿಸಬಾರದೆಂಬ ಎಚ್ಚರಿಕೆಯನ್ನು ಪತಂಜಲಿ ಮುನಿಗಳು ತಮ್ಮ ಗ್ರಂಥದುದ್ದಕ್ಕೂ ಕೊಡುತ್ತಾರೆ.

ಯೋಗ ದಾರ್ಶನಿಕರು ಮುಕ್ತ ಪುರುಷನನ್ನು ನಿತ್ಯಮುಕ್ತನಾದ 'ಈಶ್ವರ'ನಿಗೆ ಹೋಲಿಸಿದರೆ ಸಾಂಖ್ಯರು ಅವನನ್ನು 'ಬ್ರಹ್ಮನ್' ಎಂದು ಕರೆಯುತ್ತಾರೆ. ಆದರೆ ಆ ಪದಗಳಿಗೆ ಉಪನಿಷತ್ತುಗಳಲ್ಲಿರುವ ಅರ್ಥವಿಲ್ಲ ಎಂಬುದನ್ನು ನಾವು ಗಮನಿಸಬೇಕು. ದೇಹದಲ್ಲಿರುವ ಆತ್ಮವು ಅನೇಕ ಪರಿಮಿತಿಗಳಿಗೆ ಒಳಗಾಗಿರುತ್ತದೆ. ಅದು ಆ ಪರಿಮಿತಿಗಳಿಂದ ತಪ್ಪಿಸಿಕೊಂಡ ಕೂಡಲೇ ಅಂದರೆ ಮೋಕ್ಷವನ್ನು ಗಳಿಸಿಕೊಂಡ ಕೂಡಲೆ ಅಪರಿಮಿತವಾಗುತ್ತದೆ.[18] ಯೋಗದಾರ್ಶನಿಕರು ಅಷ್ಟಾಂಗಯೋಗದ ಅನುಷ್ಠಾನದಿಂದ, ವೈರಾಗ್ಯ ಹಾಗೂ ಧ್ಯಾನದಿಂದ ಜ್ಞಾನ ಬರುತ್ತದೆ ಎನ್ನುತ್ತಾರೆ. ಅಂಥ ಜ್ಞಾನವು ಕರ್ಮಯೋಗದಿಂದಾಗಲೀ ಭಕ್ತಿಯೋಗದಿಂದಾಗಲೀ ಅಥವಾ ಅವೆರಡರ ಸಂಯುಕ್ತ ಪ್ರಯತ್ನದಿಂದಾಗಲಿ ಬರುವುದಿಲ್ಲವೆಂಬುದು ಅವರ ಅಭಿಪ್ರಾಯ.

ಯೋಗಪ್ರಜ್ಞೆಯ ವಿಚಾರದಲ್ಲಿ ಭಾರತೀಯ ದರ್ಶನಗಳಲ್ಲಿ ಒಮ್ಮತವಿಲ್ಲ. ಒಂದೊಂದು ದರ್ಶನದಲ್ಲಿ ಒಂದೊಂದು ರೀತಿಯಲ್ಲಿ ಹೇಳಿರುವುದರಿಂದ ಭಾರತೀಯ ದರ್ಶನದಲ್ಲಿ ಯೋಗಪ್ರಜ್ಞೆಯು ಒಂದು ಚರ್ಚಾವಿಷಯವಾಗಿದೆ. ಸ್ವಸ್ವರೂಪದ ಸ್ಥಿತಿಯೇ ಯೋಗಪ್ರಜ್ಞೆಯೆಂದು ಅದ್ವೈತಿಗಳೂ ಹಾಗೂ ಯೋಗದಾರ್ಶನಿಕರು ಹೇಳುತ್ತಾರೆ. ಆ ಸ್ಥಿತಿಯ ಬಗೆಗೆ ಅದ್ವೈತಕ್ಕೂ ಯೋಗಕ್ಕೂ ಮತಭೇದವಿಲ್ಲ. ಯೋಗದಾರ್ಶನಿಕರ ಪ್ರಕಾರ ಯೋಗಪ್ರಜ್ಞೆಯಲ್ಲಿ ಪ್ರಕೃತಿ ಪುರುಷ ವಿವೇಕ ಜ್ಞಾನ ಉಂಟಾಗುತ್ತದೆ. ಆದರೆ ಅದ್ವೈತಿಗಳಲ್ಲಿ ಜಗವೆಲ್ಲ ಮಿಥ್ಯೆ ನಾನೇ ಪರಬ್ರಹ್ಮವಾಗಿದ್ದೇನೆಂಬ ಜ್ಞಾನ ಉಂಟಾಗುತ್ತದೆ. ಈ ಎರಡು ಜ್ಞಾನಗಳಲ್ಲಿ ಭೇದವಿದ್ದರೂ ಜ್ಞಾನವು ಜ್ಞಾನವೇ ಜ್ಞಾನದಿಂದಲೇ ಮುಕ್ತಿಯೆಂಬುದನ್ನು ಯೋಗದರ್ಶನವೂ, ಅದ್ವೈತ ದರ್ಶನಗಳೂ ಒಪ್ಪುತ್ತದೆ. ಆದರೆ ಪುರುಷ–ಪ್ರಕೃತಿ ಸಂಗರೂಪವಾದ ಬಂಧನದ ಬಗೆಗೆ ಯೋಗದರ್ಶನಗಳಲ್ಲಿ ಸಮರ್ಪಕವಾದ ಕಾರಣವನ್ನು ಕೊಟ್ಟಿಲ್ಲ.

ಸಾಂಖ್ಯ–ಯೋಗ ದಾರ್ಶನಿಕರ ಪ್ರಕಾರ ಯೋಗಪ್ರಜ್ಞೆಯಲ್ಲಿ ದುಃಖದಿಂದ ಮುಕ್ತನಾಗುವ ಅನುಭವವಾಗುವುದೇ ಹೊರತು, ಆನಂದದ ಅನುಭವವಲ್ಲ. ಅಂದರೆ ಯೋಗಪ್ರಜ್ಞೆಯಲ್ಲಿ ದುಃಖವೂ ಇಲ್ಲ, ಸುಖವೂ ಇಲ್ಲ. ಅಲ್ಲದೇ ಮುಕ್ತಿಯಲ್ಲಿ ಪುರುಷನು ಜ್ಞಾನಸ್ವರೂಪನೆಂಬುದನ್ನು ಯೋಗಿಗಳು ಒಪ್ಪಿದರೂ ಆನಂದ ಸ್ವರೂಪನೆಂಬುದನ್ನು ಅದ್ವೈತಿಗಳು ಒಪ್ಪಿದಂತೆ ಒಪ್ಪಿಲ್ಲ. ಚಿತ್ತವೃತ್ತಿ ನಿರೋಧ ಮಾಡಿದ ಯೋಗಿಯನ್ನು ಭಗವದ್ಗೀತೆಯ ಸ್ಥಿತಪ್ರಜ್ಞನಿಗೆ ಹೋಲಿಸಬಹುದು.

**ಆಕರ ಗ್ರಂಥ:**

1) ಯೋಗಸೂತ್ರಮ್: ಡಾ ಮಲ್ಲಿಕಾರ್ಜುನ ಪರಡ್ಡಿ . ಸಂಸ್ಕೃತ ವಿಭಾಗ. ಕೆ.ಯು.ಡಿ. 1989

2) ಯೋಗ ಮತ್ತು ಭಾರತೀಯ ತತ್ವಶಾಸ್ತ್ರ: ಎನ್.ಜಿ.ಮಹಾದೇವಪ್ಪ. ಸುಂಯೋಗ ಪ್ರಕಾಶನ. ಧಾರವಾಡ. 2008

3) ಜೀವನ್ಮುಕ್ತಿ ದರ್ಶನ: ಡಾ. ಬಸವರಾಜ ಪಿ. ಸಿದ್ದಾಶ್ರಮ. ಸಿದ್ಧಪ್ರಕಾಶನ. ಧಾರವಾಡ. 2008

**ಅಡಿ ಟಿಪ್ಪಣಿ:**

1 ಯೋಗ ಮತ್ತು ಭಾರತೀಯ ತತ್ವಶಾಸ್ತ ಪು.ಸಂ–61

2 ಯೋಗಃ ಚಿತ್ತವೃತ್ತಿನಿರೋಧಃ. ಯೋ.ಸೂ.–1.2

3 ಜೀವನ್ಮುಕ್ತಿದರ್ಶನ.–ಪು.ಸಂ.42

4 ವಿತರ್ಕ, ವಿಚಾರಾನಂದಾಸ್ಮಿತಾನಗಮಾತ್ ಸಂಪ್ರಜ್ಞಾತಃ. ಯೋ.ಸೂ–1.17

5 ತತ್ರ ಶಬ್ದಾರ್ಥಜ್ಞಾನವಿಕಲ್ಪೈಃ ಸಂಕೀರ್ಣಾ ಸವಿತರ್ಕಾಹಾರ ಸಮಾಪತ್ತಿಃ. ಯೋ.ಸೂ–1.42

6 ಋತಂಭರಾ ತತ್ರ ಪ್ರಜ್ಞಾ. ಯೋ.ಸೂ–1.48

7 ಸತ್ವಪುರುಷಾನ್ಯಥಾಖ್ಯಾತಿ ಮಾತ್ರಸ್ಯ ಸರ್ವಭಾವಾಧಿಷ್ಠಾತೃತ್ವಂ ಸರ್ವಜ್ಞಾತೃತ್ವಂ ಚ. ಯೋ.ಸೂ–3.49

8 ತದ್ವೈರಾಗ್ಯಾದಪಿ ದೋಷಬೀಜಕ್ಷಯೇ ಕೈವಲ್ಯಮ್. ಯೋ.ಸೂ–3.50

9 ವಿರಾಮ ಪ್ರತ್ಯಯಾಭ್ಯಾಸ ಪೂರ್ವಃ ಸಂಸ್ಕಾರ ಶೇಷೋ..ನ್ಯಃ. ಯೋ.ಸೂ–1.18

10 ಸ್ಮೃತಿಪರಿಶುದ್ಧೌ ಸ್ವರೂಪಶೂನ್ಯೇವಾರ್ಥಮಾತ್ರ ನಿರ್ಭಾಸಾ ನಿರ್ವಿತರ್ಕಾ. ಯೋ.ಸೂ–1.43

11 ತಸ್ಯ ಸಪ್ತದಾ ಪ್ರಾಂತಭೂಮಿಃ ಪ್ರಜ್ಞಾ. ಯೋ.ಸೂ–2.27

12 ಶ್ರದ್ಧಾ ವೀರ್ಯ ಸ್ಮೃತಿ ಸಮಾಧಿ ಪ್ರಜ್ಞಾಪೂರ್ವಕ ಇತರೇಷಾಮ್. ಯೋ.ಸೂ–1.20

13 ಚಿತ್ತ ವಿಕ್ಷೇಪಾಸ್ತೇಂ. ಯೋ.ಸೂ–1.30

14 ದುಃಖ ದೌರ್ಮನಸ್ಯಾಂಗ ಮೇಜಯತ್ವ ಶ್ವಾಸ ಪ್ರಶ್ವಾಸಾ ವಿಕ್ಷೇಪ ಸಹಭುವಃ. ಯೋ.ಸೂ–1.31

15 ಮೈತ್ರೀ ಕರುಣಾ ಮುದಿತೋಪೇಕ್ಷಾಣಾಂ ಸುಖದುಃಖ ಪುಣ್ಯಾಪುಣ್ಯ ವಿಷಯಾಣಾಂ ಭಾವನಾತಶ್ಚಿತ್ತ ಪ್ರಸಾದನಮ್.ಯೋ.ಸೂ–1.33

16 ಅವಿದ್ಯಾಸ್ಮಿತಾರಾಗದ್ವೇಷಾಭಿನಿವೇಶಾಃಕ್ಲೇಶಾಃ. ಯೋ.ಸೂ–2.3

17 'ಸತ್ವಪುರಷಯೋಃಶುದ್ಧಿಸಾಮ್ಯೇ ಕೈವಲ್ಯಮ್'. ಯೋ.ಸೂ–3.55.

18 ಯೋಗ ಮತ್ತು ಭಾರತೀಯ ತತ್ವಶಾಸ್ತ ಪು.ಸಂ–120

# ವಿಷಯ:–03

# ಭಾರತೀಯಮ್

# ಸಮಾಜ ಸಾಂಸ್ಕೃತಿಕವನ್ನೊಳಗೊಂಡ ಕಲೆ, ಸಂಗೀತ ಮತ್ತು ನಾಟ್ಯಶಾಸ್ತ್ರ ವಿಜ್ಞಾನಗಳು

## THEME:-03

## BHARATEEYAM

## SOCIOCULTURAL SCIENCES, ARTS, MUSIC & NATYASASTRA

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಭಾರತೀಯರ ಸಂಶೋದನೆಗಳು | ಡಾ. ವಿದ್ಯಾಶಂಕರ್ ಎಂ.ಹೆಚ್. | |
| | | ದಿವ್ಯಶಂಕರ್, | 104 – 107 |
| 2 | ಸಮಾನಆಶಯದ ಭಿನ್ನ ಧ್ವನಿಗಳು | ಮಲ್ಲಪ್ಪ ಬಂಡಿ | 107 – 109 |
| 3 | ಕಥೆ ಹುಟ್ಟುವ ಪರಿ | ಧರ್ಮಣ್ಣ, | |
| | | ಡಾ.ಶೀಲಾಕುಮಾರಿ ದಾಸ. | 109 – 112 |
| 4 | ಮಕ್ಕಳ ದುಡಿಮೆ | ಶ್ರೀಮತಿ ಎಚ್. ಜ್ಯೋತಿ | 112 – 114 |

ISSN 2249 - 5754 VIJNANA KANNADA (PRINT)


# ಭಾರತೀಯರ ಸಂಶೋದನೆಗಳು

ಡಾ. ವಿದ್ಯಾಶಂಕರ್ ಎಂ.ಹೆಚ್. ಮತ್ತು ದಿವ್ಯಶಂಕರ್,
ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. ** ಗೃಹಿಣಿ, ಭದ್ರಾವತಿ

**ಪ್ರಬಂಧ ಸಾರ:–** ನಾವು ಅಂದುಕೊಂಡಿರುವುದು ಮುಖ್ಯ ಸಂಶೋದನೆಗಳೆಲ್ಲಾ ಪರದೇಶಿಯರೇ ಮಾಡಿರುವುದು ಭಾರತೀಯ ಸಂಶೋದನೆ ಎಂದರೆ ಅದು ಸೊನ್ನೆ ಮಾತ್ರ ಎಂಬ ವಿಡಂಬನಾತ್ಮಕ ಹೇಳಿಕೆಯನ್ನು ಗಮನಿಸುತ್ತೇವೆ, ಆದರೆ ಇಂದು ನಾವು ಗಮನಿಸಬೇಕಾಗಿದ್ದು ವಿದ್ಯುತ್ ನಿಂದ ಹಿಡಿದು ಇಂದಿನ ವಿಮಾನಯಾನಗಳು ಅಣುಬಾಂಬ್ ಗಳ ಸಹಿತವಾಗಿ ಪ್ರತಿಯೊಂದರಲ್ಲೂ ಭಾರತೀಯ ಪಾತ್ರವಿದೆ.

ಋಷಿಮುನಿಗಳಿಂದಹಿಡಿದು ಕವಿಗಳವರೆಗೆ ಒಂದಲ್ಲಾ ಒಂದು ರೀತಿ ವೈಜ್ಞಾನಿಕ ವಿಷಯಗಳನ್ನು ಕೊಟ್ಟಿದ್ದಾರೆ.

ಈ ವಿಷಯಗಳ ಬಗ್ಗೆ ಬೆಳಕು ಚೆಲ್ಲುವುದೇ ಈ ಪ್ರಬಂದದ ಉದ್ದೇಶವಾಗಿದೆ.

ಆನೋ ಭದ್ರಾ:ಕ್ರತವೋ ಯಂತು ವಿಶ್ವತಃ ( ಎಲ್ಲ ದಿಕ್ಕುಗಳಿಂದಲೂ ಒಳಿತು ನಮ್ಮ ಕಡೆಗೆ ಬರಲಿ) ಎಂದು ಸಾರಿದ ವೇದವು ವಿಜ್ಞಾನಂ ಬ್ರಹ್ಮೇ ದಿವ್ಯಜಾನಾತ್ ಎಂದು ಹೇಳುತ್ತಾ ವೇದಕ್ಕೂ ವಿಜ್ಞಾನಕ್ಕೂ ನಂಟಿದೆ ಎಂದು ತಿಳಿಸುತ್ತದೆ.ನಾಲ್ಕು ವೇದಗಳು ವಿಜ್ಞಾನದ ವಿವಿದ ಆಯಾಮಗಳನ್ನು ತನ್ನದೇ ಶೈಲಿಯಲ್ಲಿ ವಿವರಿಸುತ್ತದೆ.

ನಾವು ಅಂದುಕೊಂಡಿರುವುದು ಮುಖ್ಯ ಸಂಶೋದನೆಗಳೆಲ್ಲಾ ಪರದೇಶಿಯರೇ ಮಾಡಿರುವುದು ಭಾರತೀಯ ಸಂಶೋದನೆ ಎಂದರೆ ಅದು ಸೊನ್ನೆ ಮಾತ್ರ ಎಂಬ ವಿಡಂಬನಾತ್ಮಕ ಹೇಳಿಕೆಯನ್ನು ಗಮನಿಸುತ್ತೇವೆ, ಆದರೆ ಇಂದು ನಾವು ಗಮನಿಸಬೇಕಾಗಿದ್ದು ವಿದ್ಯುತ್ ನಿಂದ ಹಿಡಿದು ಇಂದಿನ ವಿಮಾನಯಾನಗಳು ಅಣುಬಾಂಬ್ ಗಳ ಸಹಿತವಾಗಿ ಪ್ರತಿಯೊಂದರಲ್ಲೂ ಭಾರತೀಯ ಪಾತ್ರವಿದೆ.

ಋಷಿಮುನಿಗಳಿಂದಹಿಡಿದು ಕವಿಗಳವರೆಗೆ ಒಂದಲ್ಲಾ ಒಂದು ರೀತಿ ವೈಜ್ಞಾನಿಕ ವಿಷಯಗಳನ್ನು ಕೊಟ್ಟಿದ್ದಾರೆ.

ಈ ವಿಷಯಗಳ ಬಗ್ಗೆ ಬೆಳಕು ಚೆಲ್ಲುವುದೇ ಈ ಪ್ರಬಂದದ ಉದ್ದೇಶ ವಾಗಿದೆ.



ಭಾರತದ ಇತಿಹಾಸ ಎಂದರೆ ಅದು ಸರ್ವ ಸಮೃದ್ದವಾದ ಇತಿಹಾಸ. ಋಷಿಮುನಿಗಳಿಂದ ಹಿಡಿದು ಇತ್ತೀಚಿನ ವಿಜ್ಞಾನಿಗಳವರೆಗೂ ಸಾಧನೆಗಳನ್ನು ಮಾಡುತ್ತಿದ್ದಾರೆ. ಆದರೆ ಇಂದು ನಾವು ಕೇವಲ ವಿದೇಶಿಯ ವಿಸ್ಮಯಗಳಿಗೆ ಮಾರುಹೋಗಿ ನಮ್ಮ ಯುವಜನತೆ ಇಂದು ಭಾರತೀಯರ ಸಾದನೆ ಎಂದರೆ ಶೂನ್ಯ ಮಾತ್ರ ಬೇರೆ ಎಲ್ಲ ವಿದೇಶಿಯರ ಜ್ಞಾನವನ್ನು ನಾವು ಪಡೆಯುತ್ತಿದ್ದೇವೆ ಎಂಬಂತಾಗಿದೆ. ಆದರೆ ಸತ್ಯವೇನೆಂದು ನಾವು ತಿಳಿಯುವಲ್ಲಿ ವಿಫಲರಾಗಿದ್ದೇವೆ. ನಮ್ಮ ಜ್ಞಾನವನ್ನು ವಿದೇಶಿಯರು ಪಡೆದು/ಕದ್ದು ಇಂದು ಅವೆಲ್ಲ ನಮ್ಮ ಸಂಶೋದನೆ ಎಂದು ಬಿಂಬಿಸುತ್ತಿದ್ದಾರೆ.






ಜೀವನ ನಡೆಸುವು, ಯಜ್ಞ ಗಳನ್ನು ಮಾಡುವುದು, ಸಂಗೀತವನ್ನು ಕಲಿಯುವುದು, ತಂತ್ರಗಾರಿಕೆ, ವ್ಯವಹಾರಜ್ಞಾನ ಮುಂತಾದವುಗಳನ್ನು ವೇದಗಳಲ್ಲಿ ಹೇಳಲಾಗಿದೆ. ವೇದಗಳು ತುಂಬಾ ಹಳೆಯವು, ನಾಗರೀಕತೆ ಬೆಳೆಯುವುದಕ್ಕಿಂತ ಮುಂಚೆಯದು ಎಂದು ಇತಿಹಾಸ ಶಾಸ್ತ್ರ ಪಂಡಿತರು ಅಬಿಪ್ರಾಯ ಪಡುತ್ತಾರೆ. ಋಷಿ ಮುನಿಗಳನ್ನು ನಾವು ದಾರ್ಶನಿಕರು ಎಂದು ಅವರಿಂದ ವೇದಗಳನ್ನು ಶಿಷ್ಯಪರಂಪರೆಗಳ ಮೂಲಕ ಇಂದೂ ಕೂಡ ನಾವು ಕಾಣುತ್ತೇವೆ. ವೇದಗಳನ್ನು ಪ್ರಮಾಣ ಎಂಬುದಾಗಿ ನಂಬಿದರೆ ನಮಗೆ ಅನೇಕ

ವಿಷಯಗಳನ್ನು ತಿಳಿಯಬಹುದಿತ್ತು ಆದರೆ ನಾವು ಅರ್ಥ ಗ್ರಹಿಸದೆ ಸುಮ್ಮನೆ ಶಿಕ್ಷಣದಂತೆ ಕಲಿಯುತ್ತಿದ್ದೇವೆ. ಇಂದು ನಾವು ವಿದ್ಯಾವಂತರೆಂದು ಅನಿಸಿಕೊಳ್ಳುತ್ತಿದ್ದೇವೆಯೆ ಹೊರತು ಬುದ್ದಿವಂತಿಕೆ ತೋರುತ್ತಿಲ್ಲ.







ವಿದ್ಯುತ್ ನಿಂದ ಹಿಡಿದು ವಿಮಾನ, ಪರಮಾಣು ಭಾಂಭ್‌ಗಳ ವರೆಗೆ ಎಲ್ಲಾ ವಿಷಯಗಳು ನಮ್ಮ ಶಾಸ್ತ್ರ, ಪುರಾಣ, ವೇದ, ವೇದಾಂಗಗಳಲ್ಲಿ ತಿಳಿಸಲಾಗಿದೆ. ಆದರೆ ನಾವು ಇಂದು ಇದನ್ನೆಲ್ಲಾ ಮೂಡನಂಬಿಕೆ ಯೆಂದು ಅಥವಾ ನಮಗೆ ಸಂಬಟಂದಿಸಿದಲ್ಲ ಎಂದು ಉದಾಸಿನ ಮಾಡುತ್ತಿದ್ದೇವೆ. ಆದರೆ ವಿದೇಶಿಯರು ನಮ್ಮಲಿರುವ ಗ್ರಂಥಗಳ ಸಹಾಯದಿಂದ ಅನೇಕ ಸಂಶೋದನೆಗಳನ್ನು ಮಾಡಿ ನಾವೇ ಎಲ್ಲಾ ಮಾಡುತ್ತಿರುವವರು ಎಂದು ಬಿಂಬಿಸುತ್ತಿದ್ದಾರೆ. ಈ ಪ್ರಬಂದದಲ್ಲಿ ನಾವು ಕೆಲವು ಸಂಸೋದನೆಗಳ ಸೂತ್ರಗಳ ಸಹಿತ ನಮ್ಮವರ ಸಾದನೆಗಳ ತಿಳಿಸುವ ಪ್ರಯತ್ನ ಮಾಡುತ್ತಿದ್ದೇವೆ.

ನಾಲ್ಕು ವೇದಗಳು ಪ್ರಮಾಣವೆಂದು ತಿಳಿಯುವ ಆಸ್ತಿಕ ಪಂಗಡವು ಅದರಲ್ಲಿನ ವಿಶೇಷಗಳನ್ನು ತಿಳಿಸುವಲ್ಲಿ ವಿಫಲರಾಗಿದ್ದಾರೆ ಎಂಬುದು ಸತ್ಯ.

ಋಗ್ವೇದ: ಜೀವನ ಶೈಲಿ ಮತ್ತು ಪ್ರಾತ್ಯಕ್ಷತೆ.
ಯಜುರ್ವೇದ: ಯಾಗ–ಯಜ್ಞ ಗಳಬಗ್ಗೆ ತಿಳುವಳಿಕೆ, ಜೀವನ ಶೈಲಿ
ಸಾಮವೇದ: ಸಂಗೀತದ ವಿಶೇಷತೆ – ಗಾನ ಪ್ರಾದಾನ ವೇದ
ಅಥರ್ವವೇದ : ತಂತ್ರ ಶಾಸ್ತ್ರ, ವೈದ್ಯ ಶಾಸ್ತ್ರ ಇತ್ಯಾದಿ
ಶಿಕ್ಷಾ – ಸ್ವರವರ್ಣಗಳ ಉತ್ಪತ್ತಿಸ್ಥಾನ




ವ್ಯಾಕರಣ – ಶಬ್ದ ನಿಷ್ಪತ್ತಿ ಹೇಳುವ ಶಾಸ್ತ್ರ
ಛಂದಸ್ಸು – ವೃತ್ತನಿಯಮಗಳು
ನಿರುಕ್ತ – ವೈದಿಕ ಪದಗಳ ಅರ್ಥ
ಜ್ಯೋತಿಷ – ಭವಿಷ್ಯತ್ ಗೆ ಸಂಬಂದಿಸಿದ್ದು –ಆಕಾಶಕಾಯಗಳ ಬಗ್ಗೆ ತಿಳುವಳಿಕೆ.
ಕಲ್ಪ – ಕರ್ಮಾಚರಣೆಗೆ ಸಂಬಂದಿಸಿದ ವಿಷಯಗಳು
ಸಂಹಿತೆ,ಬ್ರಾಹ್ಮಣ,ಅರಣ್ಯಕ,ಉಪನಿಷತ್ತು ಇವುಗಳು ವೇದದ ನಾಲ್ಕು ಭಾಗಗಳು ಇವುಗಳಲ್ಲಿ ದೇವರ ಸ್ತುತಿ ಅದನ್ನು ಮಾಡುವ ವಿದಾನಗಳನ್ನು ತಿಳಿಸಲಾಗುತ್ತಿದೆ.
ಇದರಜೊತೆಗೆ ಶಾಸ್ತ್ರಗಳು ಸಾಹಿತ್ಯ ಪ್ರಪಂಚ, ಜಗತ್ತಿನ ಉತ್ಪತ್ತಿ, ಮೋಕ್ಷ ಮುಂತಾದ ವಿಷಯಗಳ ಬಗ್ಗೆ ತೀಲಿಸುತ್ತವೆ.
ಅಲಂಕಾರ ಶಾಸ್ತ್ರ, ವ್ಯಾಕರಣ , ತರ್ಕ, ಪೂರ್ವಮಿಮಾಂಸ ಮತ್ತು ಉತ್ತರ ಮಿಮಾಂಸ
ಇವುಗಳ ಜೊತೆಗೆ ಸಾಮಾನ್ಯ ಜನರ ತಿಳುವಳಿಕೆಗಾಗಿ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು
ಭಗವದ್ಗೀತೆ, ಮುಂತಾದವಿಗಳ ಮೂಲಕ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ.



1. ಸೂರ್ಯ ವಿಶ್ವದ ಕೇಂದ್ರ : ಯಜುರಾರಣ್ಯಕಮ್, ಪ್ರಶ್ನ 1, ಅನುವಾಕ 8, ವರ್ಗ3
2. ಚಂದ್ರ ಭೂಮಿಯ ಉಪಗ್ರಹ: ಋಗ್ವೇದ ಮಂಡಲ 10, ಸೂಕ್ತ 189, ಮಂತ್ರ 1
3. ಬೆಳಕಿನ ವೇಗ ; ಋಗ್ವೇದ ಮಂಡಲ 1, ಸೂಕ್ತ 50, ಮಂತ್ರ 4
4. ಭೌತದ್ರವ್ಯದ ಉಗಮ: ತೈತ್ತರಿ ಉಪನಿಷತ್
5. ಗುರುತ್ವಾಕರ್ಷಣೆ : ಸಿದ್ಧಾಂತಶಿರೋಮಣಿ- ಭುವನಕೋಶ-6
6. ಅಯಸ್ಕಾಂತ :ರಸಾರ್ಣವ, ಪಾತಾಳ
7. ವಿದ್ಯುತ್ –ಅಗಸ್ತ್ಯ ಸಂಹಿತೆ
8. ಯಂತ್ರಗಳು-ಯಂತ್ರಾರ್ಣವ
9. ಸಾರಿಗೆ -ಭೃಗುಸಂಹಿತೆ
10. ಪಾದರಸ –ರಸರತ್ನಸಮುಚ್ಚಯ
11. ಶೂನ್ಯ –ಆರ್ಯಭಟ
12. ವರ್ಗಮೂಲ -ಘನಮೂಲ -ಆರ್ಯಭಟ
13. ಪೈಥಾಗೊರಸ್ ಪ್ರಮೇಯ -ಬೌಧಾಯನ ಸೂತ್ರ
14. ಪೈ ಬೆಲೆ: ಆರ್ಯಭಟ, ಭಾರತೀ ತೀರ್ಥ
15. ರೋಗಶಾಸ್ತ್ರ -ಭ್ರೂಣಶಾಸ್ತ್ರ –ಚರಕಸಂಹಿತೆ
16. ಸಸ್ಯಗಳ ಜೀವನ –ಮಹಾಭಾರತ
17. ಮಳೆಬರಿಸುವ ಕಲೆ:ಸಾಯಣಬಾಷ್ಯ- ತೈತ್ತರಿಸಂಹಿತೆ
18. ಸಂಗೀತವಾದ್ಯ-ನಾಟ್ಯಶಾಸ್ತ್ರ
19. ಶಸ್ತ್ರಗಳು -ಶುಕ್ರನೀತಿ.
20.ಕಾಮಶಾಸ್ತ್ರ –ವಾತ್ಸ್ಯಯನ










ಬ್ರಹ್ಮಗುಪ್ತನ (ಕ್ರಿ.ಶ 598) ಕಾಲದಲ್ಲಿ ಬೀಜಗಣಿತ ಆಧುನಿಕ ಜಗತ್ತಿನ ಪ್ರತ್ಯೇಕ ಶಾಖೆಯಾಗಿ ರೂಪತಾಳಿತು. $ax^2+bx=c$ ಮಾದರಿಯ ಲೆಕ್ಕಗಳನ್ನು ಸೂತ್ರಗಳ ರೂಪದಲ್ಲಿ ತಿಳಿಸಲಾಗಿದೆ. ಬ್ರಹ್ಮಗುಪ್ತ, ಆರ್ಯಭಟ,ಭಾಸ್ಕರ ಮುಂತಾದವರು ಖಗೋಳ ಪಾಂಡಿತ್ಯ ಹೊಂದಿದವರು ಎಂಬುದಕ್ಕೆ ಅವರ ಶೋದನೆಗಳು ಮತ್ತು ಉಜ್ಜಯನಿಯ ಖಗೋಳ ವೀಕ್ಷಣಾಲಯ(17 ನೇ ಶತಮಾನ) ಸಾಕ್ಷಿಯಾಗುತ್ತದೆ.

ಡಿಕ್ ತೆರಸಿ ಎಂಬ ವಿಜ್ಞಾನಿ ಆರ್ಯಭಟನ 365 ದಿನ 6 ಗಂಟೆ 12 ನಿಮಿಷ 30 ಸೆಕೆಂಡುಗಳು ಒಂದುವರ್ಷ ಎಂಬ ವಾದಕ್ಕೆ ಸಹಮತಿಯನ್ನು ನೀಡಿದ್ದಾನೆ.





ಬ್ರಹ್ಮಗುಪ್ತನ ಖಂಡಖಾದ್ಯಕ ಅರಬ್ಬಿ ಬಾಷೆಗೆ ಮತ್ತು ಲ್ಯಾಟಿನ್ ಬಾಷೆಗೆ ತರ್ಜಿಮೆ ಯಾಗಿ ಕೆಪ್ಲರ್ ನು ಪ್ಯಾರಲೆಲೆಕ್ಸ್ ಸಿದ್ಧಾಂತ (ಖಂಡ ಖಾದ್ಯಕದ ನಕಲು) ಮಂಡಿಸಿರುವನು.

ಬ್ರಿಟಾನಿಕದ ವಿಶ್ವಕೋಶದಲ್ಲಿ ಮಾನವನ ತೊಟ್ಟಿಲನಾಡು ಎಂದರೆ ಭಾರತ ಎಂದು ಉಲ್ಲೇಖವಿದೆ.

ಜರ್ಮನಿಯ ಪುರಾತ್ತವಜ್ಞ ಮತ್ತು ಭಾಷಾವಿಜ್ಞಾನಿ ಫ್ರೆಡ್ರಿಕ್‌ಕ್ರೋಯ್ ಝರ್ ಪ್ರಾಚಿನ ನಾಗರೀಕತೆ ಹೊಂದಿದ ಮತ್ತು ಜ್ಞಾನವು ಮಾನವನ ಎಅರಡನೆ ಹುಟ್ಟು ಎಂದು ತಿಳಿದಿರುವ ನಾಡು ಭಾರತ ಎಂದಿದ್ದಾರೆ. ಫ್ರಾನ್ ಕೋಯಿಸ್ ಎಂಬ ಫ್ರೆಂಚ್ ತತ್ವಜ್ಞಾನಿ ನಮ್ಮೆಡೆಗೆ ಬಂದಿರುವ ಜ್ಞಾನವೆಲ್ಲಾ ಗಂಗಾತೀರದ ಜ್ಞಾನ ಎಂದಿದ್ದಾರೆ.

ಮಾರ್ಕ್ ಟ್ವೈನ್ ಎಂಬ ಅಮೇರಿಕದ ಕಥೆಗಾರ ಭಾರತ ಮಾನವ

ISSN 2249 - 5754 VIJNANA KANNADA (PRINT)


ಬಾಷೆಯ ಹುಟ್ಟೂರು, ಚರಿತ್ರೆಯ ತಾಯಿ, ಪುರಾವೃತ್ತಗಳ ಅಜ್ಜಿ, ಸಂಪ್ರದಾಯಗಳ ಮುತ್ತಜ್ಜಿ ಮತ್ತು ಪ್ರಪಂಚ ನೋಡುವುದು ಮತ್ತು ಭಾರತ ನೋಡುವುದು ಎರಡೂ ಒಂದೇ ಆಗಿದೆ ಎಂದಿದ್ದಾರೆ. ಭಾರತೀಯರು ಅತ್ಯಂತ ಪ್ರತಿಭಾವಂತರು ಹಾಗೂ ಶ್ರೇಷ್ಠರು ಎಂದು ಬಾವಿಸುತ್ತಾರೆ ಆದರೆ ಭಾರತೀಯರು ತಮ್ಮ ಭಾರತೀಯತೆ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವುದನ್ನು ಕಲಿಯಬೇಕಿದೆ.– ಆಡಮ್ ಒಸ್‌ಬ್ರಾನ್–ಆಪಲ್ ಕಂಪೆನಿ ಸಹಸಂಸ್ಥಾಪಕ.






ಹೀಗೆ ಅನೇಕ ಮೇದಾವಿಗಳು ಭಾರತವನ್ನು ಗೌರವ ಯುತವಾಗಿ ನೋಡುತ್ತಾರೆ ಆದರೆ ನಾವುಗಳು ನಮ್ಮ ಸಂಸ್ಕೃತಿಯನ್ನು ಅರಿಯದೆ ಸಂಸ್ಕಾರಗಳನ್ನು ಬಿಡುತ್ತಾ ಭಾರತೀಯರ ಸಾದನೆ ಶೂನ್ಯ ಎಂದು ಹಂಗಿಸುತ್ತಿದ್ದೇವೆ. ಮೊದಲು ನಾವು ನಮ್ಮ ದೇಶದ ಬಗ್ಗೆ ನಮ್ಮವರ ಶೋದನೆಗಳ ಬಗ್ಗೆ ತಿಳಿಯೋಣ ಮತ್ತು ನಾವು ಭಾರತೀಯರು ಎಂದು ಹೆಮ್ಮೆ ಪಡೋಣ.


**ಗ್ರಂಥ ಋಣ**

೧. ಭಾರತೀಯ ವೈಜ್ಞಾನಿಕ ಪರಂಪರೆ

೨. ಹೆಮ್ಮೆಯ ಭಾರತ


## ಸಮಾನಆಶಯದ ಭಿನ್ನ ಧ್ವನಿಗಳು

ಮಲ್ಲಪ್ಪ ಬಂಡಿ

¸ÀºÁAiÀÄPÀ ¥ÁæzsÁå¥ÀPÀgÀÄ, PÀ£ÀßqÀ «¨sÁUÀ, ¸ÀPÁðj ¥ÀzÀ«¥ÀÆªÀð PÁ¯ÉÃdÄ, ºÀ¼À¤ 58110, Email: mallappabandi@gmail.com

**"ಗಾಂಧೀಕಾರಿಣ್ಯದತಂದೆಯಂತೆ.ಜೆಪಿಅಸಹಾಯಕತಾಯಿ. ವಿನೋಬಾ ಮದುವೆಯಾ ಗದವ್ರತನಿಷ್ಠಅಕ್ಕನಂತೆ.ಲೋಹಿಯಾಊರೂರು ಅಲೆಯುವವಮನೆಸೇರದಅಲೆಮಾರಿಮಗ.ಅಂಬೇಡ್ಕರತಾರತಮ್ಯಕ್ಕೆ ಒಳಗಾಗಿ ಮುನಿಸಿಕೊಂಡುಮನೆಹೊರಗೆಇರುವ ಮಗ.ಇದು ನಮ್ಮಕುಟುಂಬ. ನಾವು ಇಲ್ಲಿನ ಸಂತಾನ. ಇದನ್ನು ಹೀಗಲ್ಲದೆ ಹೇಗೆ ನೋಡಬೇಕು? "**

**– ದೇವನೂರು ಮಹಾದೇವ.**

20ನೇ ಶತಮಾನದಲ್ಲಿ ಭಾರತದಲ್ಲಿಜರುಗಿದರಾಷ್ಟ್ರೀಯ ಚಳುವಳಿ, ರೈತ ಚಳುವಳಿ, ಕಾರ್ಮಿಕ ಚಳುವಳಿ ಮತ್ತು ಹಿಂದುಳಿದ ವರ್ಗಗಳ ಆಂದೋಲನಗಳು ಚಾರಿತ್ರಿಕ ಮಹತ್ವ ಪಡೆದುಕೊಂಡಿವೆ. ಈ ಚಾರಿತ್ರಿಕ ಘಟನೆಗಳಿಗೆ ವೈಚಾರಿಕ ಮತ್ತುತಾತ್ವಿಕ ನೆಲೆಗಟ್ಟನ್ನು ನಿರ್ಮಿಸಿದವರು ಮಹಾತ್ಮಾಗಾಂಧೀ, ಅಂಬೇಡ್ಕರ, ಲೋಹಿಯಾ, ನೆಹರೂ, ವಿನೋಬಾ ಮತ್ತುಜಯಪ್ರಕಾಶ ನಾರಾಯಣರು, ಆದರೆ 21ನೇ ಶತಮಾನದಚರಿತ್ರೆಯ ಮೇಲೆ ತಮ್ಮ ಪ್ರಭಾವವನ್ನುಗಾಢವಾಗಿ ಬೀರಿದವ ರಲ್ಲಿಗಾಂಧೀಜಿ, ಡಾ. ಅಂಬೇಡ್ಕರ ಮತ್ತು ಲೋಹಿಯಾರವರು ಮುಖ್ಯರೆನಿ ಸುತ್ತಾರೆ.ಮೋಹನದಾಸ ಮಹಾತ್ಮಾಗಾಂಧೀಯಾದದ್ದು, ಅಸ್ಪೃಶ್ಯಅಂಬೇಡ್ಕರ ಸಾಮಾಜಿಕ ನ್ಯಾಯದ ಹರಿಕಾರರಾದದ್ದು, ಸಾಮಾನ್ಯ ಲೋಹಿಯಾ ಮಹಾಮಾನವತಾವಾದಿ ಆದದ್ದು, ನಮ್ಮಯುಗದ ಆಶ್ಚರ್ಯಗಳಾಗಿವೆ. ಈ ಮೂವರು 20ನೇ ಶತಮಾನದ ಸಾಕ್ಷಿ ಪ್ರಜ್ಞೆಗಳು.ಇವರುರಾಜಕೀಯ ಸಿದ್ಧಾಂತಕಾರರಲ್ಲ, ಸಮಾಜಶಾಸ್ತ್ರಜ್ಞರಲ್ಲ. ಆದರೆತಾವು ನಂಬಿದ ತತ್ವಗಳನ್ನು ಕ್ರಿಯಾನುಷ್ಠಾನಗೊಳಿಸಿದವರು.ತತ್ವ ಮತ್ತು ಕ್ರಿಯೆಗಳೆಡರಲ್ಲಿಯೂ ಭಿನ್ನವೆನಿಸದೆ ನಮ್ಮಕಾಲದ ತಲ್ಲಣಗಳಿಗೆ ಸಮಾಜೋ–ಧಾರ್ಮಿಕ ಸಮಸ್ಯೆಗಳಿಗೆ ಉತ್ತರ ಹುಡುಕಿದದಾರ್ಶನಿಕರಿವರು.

ಪ್ರಸ್ತುತ ಪ್ರಬಂಧದಲ್ಲಿ ಲೋಹಿಯಾ, ಅಂಬೇಡ್ಕರ ಮತ್ತುಗಾಂಧೀಜಿಯವರ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಮಧ್ಯೆಯೂಅವರುತಾವು ನಂಬಿದ ತತ್ವಗಳಿಗೆ ತೋರಿದ ಬದ್ಧತೆ ಮತ್ತು ಅವುಗಳ ಸಾಧನೆಗಾಗಿಕೈಗೊಂಡ ಕ್ರಿಯೆಗಳನ್ನು ಅವಲೋಕಿಸಲಾಗುವುದು.ಗಾಂಧೀಜಿ, ಅಂಬೇಡ್ಕರ ಮತ್ತು ಲೋಹಿಯಾರವರ ಚಿಂತನೆಗಳಲ್ಲಿ ಸಾಪೇಕ್ಷ ಸಾಮ್ಯತಗಳಿವೆ. ಜಾತಿ ನಿರಾಕರಣೆ, ಅಸ್ಪೃಶ್ಯತಾ ನಿರ್ಮೂಲನೆ, ಮೀಸಲಾತಿ, ಅಧಿಕಾರ ವಿಕೇಂದ್ರಿಕರಣ, ಗ್ರಾಮ ಸ್ವರಾಜ್ಯಗಳ ಸ್ಥಾಪನೆ, ಮಾನವ ಹಕ್ಕುಗಳ ರಕ್ಷಣೆ, ಗೃಹ ಕೈಗಾರಿಕೆಗಳ ಬಲವರ್ಧನೆ– ಈ ವಿಷಯಗಳಲ್ಲೆಲ್ಲ ಈ ತಾತ್ವಿಕರಅಂತಿಮಗುರಿಒಂದೆಯಾದರೂ ಸಾಧನೆಯ ಮಾರ್ಗಗಳು ಬೇರೆ ಬೇರೆಯಾಗಿದ್ದವು. ಇವರಅಂತಿಮಆಶಯ ಸಮತಾ ಭಾರತದ ನಿರ್ಮಾಣವೇಆದರೂಗಾಂಧೀಜಿಯವರ ಸತ್ಯಾಗ್ರಹ ಮತ್ತು ಅಹಿಂಸೆ, ಅಂಬೇಡ್ಕರರ ಶಿಕ್ಷಣ, ಸಂಘಟನೆ ಮತ್ತು ಹೋರಾಟ, ಲೋಹಿಯಾರವರುಗಾಂಧೀ ಮಾರ್ಗದಲ್ಲಿ ಮುಂದುವರೆದುರೊಟ್ಟಿ ಮತ್ತು ಸ್ವಾತಂತ್ರ್ಯಗಳೆರಡನ್ನು ಒದಗಿಸಿ ಸಮಾಜವಾದಿ ಭಾರತವನ್ನು ನಿರ್ಮಿಸುವಕನಸುಗಾರರು.ಗಾಂಧೀಜಿ ಕ್ರಿಯೆಗಳಲ್ಲಿ ನಂಬಿಕೆವುಳ್ಳವರಾದರೂ ಕೊಂಚ ಆದರ್ಶವಾದಿ, ಅಂಬೇಡ್ಕರ ವಾಸ್ತವವಾದಿಯಾಗಿ ಶೋಷಿತ ವರ್ಗಗಳಿಗೆ ಧ್ವನಿಯಾದವರು, ಲೋಹಿಯಾರವರು ಮನುಷ್ಯಚಿಂತನೆ ಯುರಾಜಕೀಯ ಕ್ರಿಯಾಶೀಲತೆಯನ್ನು ಆಧರಿಸಬೇಕುಎಂದು ನಂಬಿದವರು.

ಈ ಸೈದ್ಧಾಂತಿಕ ಭಿನ್ನತೆಗಳ ಮಧ್ಯೆಯೂಅವರ ನಡೆ, ಸಮಾನತೆ, ಸ್ವಾತಂತ್ರ್ಯ

ಮತ್ತು ಭ್ರಾತೃತ್ವದಿಂದಕೂಡಿದ ಶೋಷಣೆರಹಿತ ಪ್ರಜಾಸತ್ತಾತ್ಮಕ ಭಾರತವನ್ನು ನಿರ್ಮಿಸುವುದರತ್ತಲೇಇತ್ತು.

ನಮ್ಮರಾಷ್ಟ್ರೀಯಆಂದೋಲನದ ಮೇಲೆ ಗಾಂಧೀಜಿ ಮತ್ತುಅಂಬೇಡ್ಕರರು ಬೀರಿದ ಪ್ರಭಾವ ಬೇರೆಯ ಸ್ವರೂಪದ್ದು.ಅಂಬೇಡ್ಕರಯಾವತ್ತೂಕಾಂಗ್ರೇಸ್ ಪ್ರಣೀತರಾಷ್ಟ್ರೀಯ ವಾದವನ್ನು ಒಪ್ಪಿಕೊಳ್ಳಲಿಲ್ಲ. ಅವರಿಗೆಗಾಂಧೀಜಿಯ ಸತ್ಯಾಗ್ರಹ ಮತ್ತು ನಾಗರಿಕಅಸಹಕಾರಆಂದೋಲನಗಳಲ್ಲಿ ನಂಬಿಕೆ ಅಷ್ಟಾಗಿ ಇರಲಿಲ್ಲ. ಈ ಕಾರಣಗಳಿಂದಾಗಿಯೇ ಅಂಬೇಡ್ಕರ ಸೈಮನ್‌ಕಮೀಷನ್‌ನ್ನು ಬೆಂಬಲಿಸಿದರು. ದುಂಡು ಮೇಜಿನ ಸಭೆಗಳಲ್ಲಿ ಮುಸ್ಲಿಂರಿಗೆ ಪ್ರತ್ಯೇಕಚುನಾವಣಾ ಮತಕ್ಷೇತ್ರಗಳನ್ನು ವ್ಯವಸ್ಥೆ ಪಡಿಸುವಂತೆ ಆಗ್ರಹಿಸಿದರು. ಅಷ್ಟೇ ಅಲ್ಲಜಿನ್ನಾ ಪ್ರತಿಪಾದಿಸಿದ ಭಾರತ ವಿಭಜನೆಯನ್ನು ಮಾನ್ಯ ಮಾಡಿದ ಮುಸ್ಲಿಮೇತರ ಏಕೈಕ ನಾಯಕರೆಂದರೆ ಅಂಬೇಡ್ಕರ. ಅವರ ಈ ರಾಜಕೀಯ ನಿರ್ಧಾರಗಳ ಹಿಂದೆಇದ್ದ ಮುಖ್ಯವಾದ ತಾತ್ವಿಕತೆಎಂದರೆಕಾಂಗ್ರೇಸ್ ಪ್ರಣೀತರಾಷ್ಟ್ರೀಯ ಚಳುವಳಿ ಕೇವಲ ಕುಲೀನರ ಹಿತರಕ್ಷಣೆಯಉದ್ದೇಶದ್ದು, ಅಸ್ಪೃಶ್ಯರು ಬ್ರಿಟೀಷರ ಆಳ್ವಿಕೆಯಿಂದ ಎಷ್ಟು ಶೋಷಣೆಗೊಳಗಾಗಿದ್ದರೊ ಅಷ್ಟೇ ಕುಲೀನ ಸವರ್ಣೀಯ ಹಿಂದೂಗಳಿಂದಲೂ ಶೋಷಣೆಗೀಡಾಗಿದ್ದಾರೆ.ಬ್ರಿಟೀಷರ ಪರಕೀಯ ಆಡಳಿತದಿಂದ ಮುಕ್ತವಾದ ಮೇಲೆ ಮತ್ತೆ ಭಾರತದಅಸ್ಪೃಶ್ಯರು ಸವರ್ಣೀಯ ಕುಲೀನ ಹಿಂದೂಗಳ ದಾಸ್ಯಕ್ಕೆ ಒಳಪಡುವುದು ಅಂಬೇಡ್ಕರರಿಗೆ ಬೇಕಾಗಿರಲಿಲ್ಲ. ‘‘ಪ್ರತಿಯೊಂದುಸಮುದಾಯ ವೂತನ್ನಸಂಸ್ಕೃತಿ, ಧಾರ್ಮಿಕ ಅಸ್ತಿತ್ವಹಾಗೂಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವ ಹಕ್ಕನ್ನುಹೊಂದಿದೆ’’ಎಂದುಅವರುಭಾವಿಸಿದ್ದರು. ಹೀಗಾಗಿಯೇಅಸ್ಪೃಶ್ಯ ಜನಾಂಗಗಳುತಮ್ಮಪ್ರತ್ಯೇಕತೆಯನ್ನು ಉಳಿಸಿಕೊಳ್ಳುವುದು ತಪ್ಪಿಲ್ಲವೆಂದು ಭಾವಿಸಿದ್ದರು.

ಮಹಾತ್ಮಾಗಾಂಧೀಜಿಯವರ ಆಲೋಚನೆ ಇವರಿಗಿಂತ ಭಿನ್ನವಾಗಿತ್ತು.ಕಾಂಗ್ರೇಸ್ ಪ್ರಣೀತರಾಷ್ಟ್ರೀಯ ಚಳುವಳಿ ಪರಿಕಲ್ಪನೆ ಬಹುವಾಗಿ ಮಹಾತ್ಮಾಗಾಂಧೀಜಿಯ ವರಿಂದಲೇ ಸೃಷ್ಟಿಯಾದದ್ದು.ಮಹಾತ್ಮಾಗಾಂಧೀಜಿ ನಮ್ಮಲ್ಲಿರುವಜಾತಿ, ಜನಾಂಗ, ಭಾಷೆ, ಧರ್ಮಗಳ ಭಿನ್ನತೆಯ ಮಧ್ಯೆಯೂ ಏಕತೆತರುವ ‘ಆಶಾವಾದಿಯಾ ಗಿದ್ದರು.ಬ್ರಿಟೀಷರ ವಸಾಹತು ನೀತಿಯನ್ನು ವಿರೋಧಿಸುವುದಕ್ಕಾಗಿ ಸತ್ಯಾಗ್ರಹ, ಅಹಿಂಸೆ, ಕರನಿರಾಕರಣೆ, ನಾಗರಿಕಅಸಹಕಾರದಂತಹ ವಿಧಾಯಕ ಚಟುವಟಿಕೆಗಳಲ್ಲಿ ನಂಬಿಕೆ ಹೊಂದಿದ್ದರು.

ಸ್ವಾತಂತ್ರ್ಯಆಂದೋಲನದಲ್ಲಿ ಭಾಗಿಯಾಗಿದ್ದ ಲೋಹಿಯಾರವರು ಗಾಂಧೀಜಿ ಅನುಯಾಯಿಯಾಗಿ ಈ ತತ್ವಗಳನ್ನು ಒಪ್ಪಿಕೊಂಡರು.ಮತ್ತು ಅವುಗಳನ್ನು ಕ್ರಿಯೆಯಾಗಿ ಪರಿವರ್ತಿಸಲು ಶ್ರಮಿಸಿದರು.ಈ ಭಿನ್ನತೆಗಳ ಮಧ್ಯೆಯೂಅಂಬೇಡ್ಕರ ಮತ್ತುಗಾಂಧೀ ಬ್ರಿಟಿಷ ವಸಾಹತು ಪ್ರಭುತ್ವದಿಂದ ಮುಕ್ತಿ ಪಡೆಯುವ ಸಮಾನಾಂಕ್ಷಿಗಳಾಗಿದ್ದರು.

1947 ರಲ್ಲಿ ನಮ್ಮರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆ ಮಹಾತ್ಮಾಗಾಂಧೀಜಿ ವ್ಯಕ್ತಿಗತಿವಾಗಿಅಪ್ರಸ್ತುತರಾದರು.ಅದುವರೆಗೂಅವರ ತತ್ವಗಳನ್ನು ಮಂತ್ರಗಳೆಂದು ಪಡಿಸುತ್ತಿದ್ದಗಾಂಧೀಜಿಯ ಕೆಲವು ಅನುಯಾಯಿಗಳು.ಅಧಿಕಾರರೂಢರಾದ ಮೇಲೆ ಗಾಂಧೀ ತತ್ವಗಳಿಗೆ ತಿಲಾಂಜಲ ಹಾಡಿದರು.ಆದರೆ ವಿನೋಬಾ ಭಾವೆ, ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾರಂತವರುಗಾಂಧೀವಾದವನ್ನು ಕೆಲವು ಪರಿಷ್ಕರಣೆಗಳೊಡನೆ ಸ್ವತಂತ್ರ್ಯೋತ್ತರ ಭಾರತದ ಸಮಸ್ಯೆಗಳ ಮುಂದೆ ಪ್ರಸ್ತುತವಾಗುವಂತೆ ಪುನರ್ ಹೊಂದಾಣಿಕೆ ಮಾಡಿದರು.ಸ್ವತಂತ್ರ್ಯೋತ್ತರ ಸಂದರ್ಭದಲ್ಲಿಅಂಬೇಡ್ಕರರತಾತ್ವಿಕತೆಯಲ್ಲಿ ಮಹತ್ವದ ಬದಲಾವಣೆಉಂಟಾಗಿಅವರು ಸಂವಿಧಾನರಚನಾ ಸಭೆಯಲ್ಲಿ ನೀಡಿದರಾಷ್ಟ್ರದಐಕ್ಯತೆ ಮತ್ತು ಸಮಗ್ರತೆಗೆ ನೀಡಿದಒತ್ತಿನಿಂದಾಗಿ ಮತ್ತೆರಾಷ್ಟ್ರೀಯವಾದಿಯಾಗಿ ಕಾಣಿಸಿಕೊಂಡರು.ಅಸ್ಪೃಶ್ಯತೆ ನಿವಾರಣೆ, ಹುಟ್ಟುಮೂಲವಾದ ತರತಮಗಳ ನಿವಾರಣೆ, ಅಧಿಕಾರ ವೀಕೇಂದ್ರಿಕರಣ, ಪಂಚಾಯತ್ ರಾಜ್‌ಗಳ ಸಂಸ್ಥಾಪನೆ, ಮೀಸಲಾತಿ, ಶೋಷಿತ ವರ್ಗಗಳಿಗೆ ವಿಶೇಷ ಹಕ್ಕುಗಳ ವ್ಯವಸ್ಥೆ– ಈ ವಿಚಾರಗಳಲ್ಲೆಲ್ಲ ಮಹಾತ್ಮಾಗಾಂಧೀಜಿ ಮತ್ತುಅಂಬೇಡ್ಕರರ ಮಧ್ಯೆಯಾವ ಭಿನ್ನಾಭಿಪ್ರಾಯವೂಇರಲಿಲ್ಲ. ಆದರೆಗಾಂಧೀಜಿ ಹಿಂದೂಧರ್ಮವನ್ನು ಪರಿಷ್ಕರಿಸುವ ಸುಧಾರಣಾವಾದಿ ಮನೋಧರ್ಮದವರು. ವರ್ಣಾಶ್ರಮಧರ್ಮವನ್ನುಕಿತ್ತೆಸೆಯುವ ಪೂರ್ಣಧೈರ್ಯಅವರಿಗಿರಲಿಲ್ಲ. ಮತಾಂತರ ವಿಚಾರದಲ್ಲಿಯೂಗಾಂಧೀಜಿ ಅಷ್ಟು ಮುಕ್ತಮನಸ್ಸಿನವರಾಗಿರಲಿಲ್ಲ. ಅಂಬೇಡ್ಕರಇಂತಹಆಶಾವಾದಿಯಲ್ಲ. ಹಿಂದೂಧರ್ಮವನ್ನು ಸುಧಾರಿಸುವಅವರ ಪ್ರಯತ್ನಗಳೆಲ್ಲ ಆ ಹೊತ್ತಿಗೆ ನೀರುಪಾಲಾಗಿದ್ದವು.‘‘ನಾನುಹಿಂದೂವಾಗಿಹುಟ್ಟಿದ್ದೇನೆ. ಆದರೆಹಿಂದೂವಾಗಿಸಾಯಲಾರೆ’’ಎಂದುಗುಡುಗಿದಅಂಬೇಡ್ಕರಅಕ್ಟೋಬರ 14, 1956 ರಂದುಬೌದ್ಧಮತವನ್ನುಸೇರಿಕೊಂಡರು. ಇನ್ನೂಮುಂದುವರೆದ ಲೋಹಿಯಾರವರುದೇವರು ಮತ್ತು ಧರ್ಮಗಳ ಅಸ್ತಿತ್ವವನ್ನೇ ನಿರಾಕರಿಸಿದರು. ಅವರು ನಾಸ್ತಿಕರು ಜಾತಿ, ಅಸ್ಪೃಶ್ಯತೆ, ಶೋಷಣೆಗಳ ನಿವಾರಣೆಗಾಗಿಅವರ ಸಮಾಜವಾದವನ್ನುಒಂದು ಪ್ರಬಲ ಆಯುಧವಾಗಿ ಮಾಡಿಕೊಂಡರು.

ಮಹಾತ್ಮಾಗಾಂಧೀಜಿಯವರುಜರ್ಮಿ ಬೆಂಥಂ, ಜೇಮ್ಸ್ ಮಿಲ್ಲರರಂತಹ ಬಹುತ್ವವಾದಿಗಳಿಂದಲೂ, ಜಾನರಸ್ಕಿನನಂತಹ ಅಲ್ಪಸಂಖ್ಯಾತವಾದಿಗಳಿಂದಲೂ ಪ್ರಭಾವಿತರಾಗಿ ಸರ್ವೋದಯರಾಜ್ಯ ಸ್ಥಾಪನೆಯ ಕನಸು ಕಂಡಿದ್ದರು.ಸರ್ವೋದಯ ವೆಂದರೆ ಸರ್ವರ ಹಿತವನ್ನು ಸಾಧಿಸುವುದು.ಅಂದರೆ ಪ್ರತಿಯೊಬ್ಬ ವ್ಯಕ್ತಿಯುಇತರರ ಒಳಿತಿಗಾಗಿ ಶ್ರಮಿಸಬೇಕು.ಸರ್ವೋದಯರಾಜ್ಯದಗುರಿಯುಎಲ್ಲರ ಹಿತವನ್ನು ಸಾಧಿಸುವುದೇಆಗಿತ್ತು.ರಾಜ್ಯವು ಪ್ರತಿಯೊಬ್ಬ ವ್ಯಕ್ತಿಯೂತಮ್ಮ ಹಿತವನ್ನು ಮತ್ತು ಹಕ್ಕುಗಳನ್ನು ಕಾಪಾಡಿಕೊಳ್ಳಲು ಪೂರಕವಾದ ವಾತಾವರಣವನ್ನು ನಿರ್ಮಿಸಬೇಕು.ಪ್ರಜೆಗಳ ವೈಯಕ್ತಿಕಜೀವನದಲ್ಲಿರಾಜ್ಯದ ಹಸ್ತಕ್ಷೇಪ ಮಿತವಾಗಿರಬೇಕು.ಅದು ಪ್ರಜೆಗಳ ಸುಖ ಮತ್ತು ಹಕ್ಕುಗಳ ಸ್ಥಾಪನೆಗೆ ಬರುವಅಡೆತಡೆಯನ್ನು ನಿವಾರಿಸಲು ಕನಿಷ್ಠರಾಜ್ಯದ ಕೆಲಸ ಮಾಡಬೇಕು.

ಅಂಬೇಡ್ಕರ ಪರಿಕಲ್ಪನೆಯರಾಜ್ಯವು ಸಾಮಾಜಿಕ ಮತ್ತುಆರ್ಥಿಕ ಪ್ರಜಾಪ್ರಭುತ್ವದ ಸ್ವರೂಪದ್ದು, ಆರ್ಥಿಕ ಪ್ರಜಾಪ್ರಭುತ್ವವಿಲ್ಲದ ಕೇವಲ ರಾಜಕೀಯ ಪ್ರಜಾಪ್ರಭುತ್ವ ಅರ್ಥಶೂನ್ಯವೆಂದುಅಂಬೇಡ್ಕರ ಭಾವಿಸಿದ್ದರು.ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಗಳು ರಾಜ್ಯ ವ್ಯವಸ್ಥೆಯಅಡಿಗಲ್ಲಾಗಬೇಕುಎಂಬುದುಅಂಬೇಡ್ಕರರಅಭಿಮತ.

ಡಾ. ಲೋಹಿಯಾರವರ ಅಭಿಪ್ರಾಯಗಳು ಈ ಇಬ್ಬರೂಚಿಂತಕರ ಅಭಿಪ್ರಾಯ ಗಳಿಗೆ ಪೂರಕವಾಗಿವೆ. ಗಾಂಧೀವಾದ ಮತ್ತು ಮಾರ್ಕ್ಸವಾದಗಳ ಸಾರವನ್ನು ಸಂಗ್ರಹಿಸಿ ಲೋಹಿಯಾರವರು ಭಾರತೀಯ ಸಮಾಜವಾದವನ್ನು ಮಂಡಿಸಿದರು.ಲೋಹಿಯಾಚಿಂತನೆಯಕೇಂದ್ರ ಪ್ರಜ್ಞೆಎಂದರೆ ಭಾರತವನ್ನು ಸಮಾಜವಾದಿ ರಾಜ್ಯವನ್ನಾಗಿಸುವುದು.‘‘ಮಾರ್ಕ್ಸವಾದವಾಗಲಿ, ಬಂಡವಾಳವಾದವಾಗಲಿ, ಭಾರತೀಯ ಸಮಾಜದಸಂಕೀರ್ಣ ಸ್ವರೂಪದ ಸಮಸ್ಯೆಗಳಿಗೆ ಉತ್ತರವಾಗಲಾರವು.ಅವೆರಡೂಅಪೂರ್ಣ ತತ್ವಗಳು, ನಮಗೆ ಇಂದು ಬೇಕಾಗಿರುವುದುಗಾಂಧೀವಾದ ಮತ್ತು ಮಾರ್ಕ್ಸವಾದಗಳಿಂದ ಕೂಡಿದ ನವ ಸಮಾಜವಾದ.’’ ಲೋಹಿಯಾಯುರೋಪಿಯನ್ ಸಮಾಜವಾದ ವನ್ನುತಿರಸ್ಕರಿಸುತ್ತಾರೆ.ಏಕೆಂದರೆಕೈಗಾರಿಕೀಕರಣದಿಂದ ಉದ್ಭವಿಸಿದಸಮಸ್ಯೆ ಗಳಿಗೆಯುರೋಪಿಯನ್ ಸಮಾಜ ಸ್ಪಂದಿಸುತ್ತದೆ.ಅಲ್ಲಿನ ಸಮಸ್ಯೆಯೇ ಬೇರೆ.ಭಾರತದಂತಹತೃತೀಯಜಗತ್ತಿನ ರಾಷ್ಟ್ರಗಳಲ್ಲಿ ಕೃಷಿ ಪ್ರಧಾನವಾದ ಕಸುಬು. ಅಪಾರವಾದ ಮಾನವ ಸಂಪನ್ಮೂಲ ಇರುವ ನಮ್ಮರಾಷ್ಟ್ರದಲ್ಲಿ ಬೃಹತ್ ಕೈಗಾರಿಕೆಗಳನ್ನು ಅಳವಡಿಸಿಕೊಳ್ಳಲಾಗದು.ಕಡಿಮೆ ಬಂಡವಾಳ ಹೂಡಿ, ಅಲ್ಪ ಪ್ರಮಾಣದ ಯಂತ್ರಗಳನ್ನು ಬಳಸಿ ಗರಿಷ್ಠ ಮಾನವ ಸಂಪನ್ಮೂಲವನ್ನು ಬಳಕೆ ಮಾಡಿಕೊಂಡುಅಭಿವೃದ್ಧಿಯ ಗುರಿಗಳನ್ನು ಸಾಧಿಸುವ ಭಾರತೀಯ ಸಮಾಜವಾದವನ್ನು ಲೋಹಿಯಾ ಹುಟ್ಟು ಹಾಕಿದರು.

1990ರ ನಂತರ ದ್ವಿಧ್ರುವಜಗತ್ತು ಕುಸಿದು ಬಿದ್ದುಏಕಧ್ರುವಜಗತ್ತಾಗಿ ಮಾರ್ಪಾಡಾಯಿತು.ಸಮಾಜವಾದಿಗಳು ಮತ್ತು ಬಂಡವಾಳಶಾಹಿಗಳ ನಡುವಿನ ತಾತ್ವಿಕ ಸಂಘರ್ಷಗಳು ತಾರ್ಕಿಕ ಕೊನೆ ಮುಟ್ಟದಿದ್ದರೂ ಭಿನ್ನಾಭಿಪ್ರಾಯಗಳಂತೂ ತಗ್ಗಿದವು.ಇದರಿಂದಾಗಿ**ಐಡಿಯಾಲಜಿ**ಗಳ ಯುಗಕೊನೆಗೊಂಡಿತು ಎಂಬ ಮಾತುಗಳು ಕೇಳಿ ಬರುತ್ತಿವೆ. ಈ ಹೊತ್ತಿನಲ್ಲಿಗಾಂಧೀ, ಅಂಬೇಡ್ಕರ ಮತ್ತು ಲೋಹಿಯಾರವರ**ಐಡಿಯಾಲಜಿ**ಗಳಿಗೆ ಯಾವ ಬೆಲೆ ಇದೆ ಎಂಬ ಪ್ರಶ್ನೆ ಏಳುವುದು ಸಹಜ.ಜಗತ್ತಿನಲ್ಲಿಇನ್ನೂ ಯುದ್ಧಗಳು ಕೊನೆಯಾಗಿಲ್ಲ. ಹಸಿವು, ಬಡತನ, ನಿರಕ್ಷರತೆ, ಜಾತಿಯತೆಯ ಸಮಸ್ಯೆಗಳು ಪರಿಹಾರವಾಗಿಲ್ಲ. ಸಾಮ್ರಾಜ್ಯಶಾಹಿಗಳು ನವವಸಾಹತೀಕರಣದತ್ತದಾಪುಗಾಲು ಹಾಕುತ್ತಿವೆ. ಈ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುತ್ತಾ ಹೊರಡುವವರಿಗೆಗಾಂಧೀ, ಅಂಬೇಡ್ಕರ, ಮತ್ತು ಲೋಹಿಯಾರವರತತ್ವ ಮತ್ತು ಕ್ರಿಯೆಗಳು ಅನಿವಾರ್ಯವಾಗಿ ಪ್ರಸ್ತುತವಾಗುತ್ತವೆ. ಬಂಡವಾಳ ಹೂಡಿಕೆಯ, ರಸಾಯನಿಕ ಶಸ್ತ್ರಾಸ್ತ್ರಗಳನ್ನು ನೀಡುವ, ತಾಂತ್ರಿಕತೆ ನೆರವನ್ನು ನೀಡುವ, ಪ್ರಜಾಪ್ರಭುತ್ವವನ್ನುರಕ್ಷಿಸುವ, ಮಾನವ ಹಕ್ಕುಗಳನ್ನು ರಕ್ಷಿಸುವ ನೆಪದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳಿಂದು ತೃತಿಯಜಗತ್ತಿನ ರಾಷ್ಟ್ರಗಳ ಸಾರ್ವಭೌಮತ್ವವನ್ನು ಹನನ ಮಾಡಲುಯತ್ನಿಸುತ್ತಿವೆ. ಇವುಗಳಿಗೆ ಪರಿಹಾರವೆಂದರೆಗಾಂಧೀಜಿಯ ಸತ್ಯಾಗ್ರಹ ಮತ್ತುಅಹಿಂಸೆಯ ತತ್ವಗಳು. ಆದರೆ ಲೋಹಿಯಾ ಸೂಚಿಸುವಂತೆಗಾಂಧೀಜಿಯವರ ಸತ್ಯಾಗ್ರಹ ಪರಿಕಲ್ಪನೆ ಸ್ವಲ್ಪ ಬದಲಾವಣೆಗೊಳಪಟ್ಟು ಸಾಮಾನ್ಯಜನರಆಯುಧವಾಗಬೇಕಾಗಿದೆ.ಸರ್ವಾಧಿಕಾರಿ ಶಕ್ತಿಗಳು ಅಧಿಕಾರವನ್ನುದುರುಪಯೋಗ ಪಡಿಸಿಕೊಳ್ಳುವಂತೆ ವಿಕೇಂದ್ರೀಕೃತರಾಜಕೀಯ, ಆರ್ಥಿಕ, ಆಡಳಿತಾತ್ಮಕ ಅಧಿಕಾರ ಹಂಚಿಕೆ ಮಾಡಬೇಕಾಗಿದೆ.ತೃತೀಯಜಗತ್ತಿನ ರಾಷ್ಟ್ರಗಳು ತಮ್ಮಅಭಿವೃದ್ಧಿಯೋಜನಾ ಪ್ರಕ್ರಿಯೆಯಲ್ಲಿ ಬಂಡವಾಳಶಾಹಿಗಳ ಪ್ರಭಾವವನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಮಿತಗೊಳಿಸಿಕೊಳ್ಳಬೇಕಾದುದನ್ನು 60 ರದಶಕದಲ್ಲಿಯೇ ಲೋಹಿಯಾ ಸೂಚಿಸಿದ್ದರು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿವಿಧ ಪ್ರಾಂತ್ಯಗಳಲ್ಲಿ ನಡೆದ ಚಳುವಳಿ, ದಲಿತ ಚಳುವಳಿ, ಸಾಹಿತ್ಯ ಚಳುವಳಿಗಳ ಮೇಲೆ ಗಾಂಧೀಜಿ, ಅಂಬೇಡ್ಕರ ಮತ್ತು ಲೋಹಿಯಾರವರ ಪ್ರಭಾವ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ.ಅಂತೆಯೇ 1970ರ ದಶಕದಲ್ಲಿಕರ್ನಾಟಕದಲ್ಲಿಜರುಗಿದ ಸಾಂಸ್ಕೃತಿಕ ಮತ್ತು ವೈಚಾರಿಕಆಂದೋಲನಗಳ ಹಿಂದಿನ ಪ್ರೇರಕ ಶಕ್ತಿಯಾಗಿದ್ದವರುಅಂಬೇಡ್ಕರ, ಲೋಹಿಯಾ ಮತ್ತುಗಾಂಧೀಜಿದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳು, ಬೂಸಾ ಪ್ರಕರಣ, ಕರ್ನಾಟಕದ ಬರಹಗಾರರು ಮತ್ತುಕಲಾವಿದರಒಕ್ಕೂಟದ ಚಟುವಟಿಕೆಗಳು, ಜಾತಿ ವಿನಾಶ ಸಮ್ಮೇಳನ, □ಸಮುದಾಯ'ತಂಡದವರಸಾಂಸ್ಕೃತಿಕ ಕ್ರಿಯೆಗಳು, 1979ರ ಬಂಡಾಯ ಸಮ್ಮೇಳನ ಇವುಗಳ ಮೇಲೆ ಲೋಹಿಯಾ ಮತ್ತುಅಂಬೇಡ್ಕರರಚಿಂತನೆಯ ಹೆಜ್ಜೆ ಗುರುತುಗಳನ್ನು ಲಕ್ಷಿಸಲು ಸಾಧ್ಯವಿದೆ.

ಜಾತಿವಾದ ಮತ್ತು ಮತೀಯವಾದಗಳು ಹೊಸ ವೇಷ ಮತ್ತು ಹೊಸ ರೂಪದೊಂದಿಗೆಇಂದು ನಮ್ಮ ಸಮಾಜವನ್ನು ವಿಘಟಿಸುತ್ತಿವೆ. ಪ್ರಜಾಪ್ರಭುತ್ವ ಬಂಡವಾಳಶಾಹಿಗಳ ಲಾಭದಉದ್ದಿಮೆಯಾಗುತ್ತಿದೆ.ಮೀಸಲಾತಿ ವ್ಯವಸ್ಥೆ, ಮತ ಬ್ಯಾಂಕ್ರಾಜಕಾರಣದ ದಾಳವಾಗುತ್ತಿದೆ.ಅಭಿವ್ಯಕ್ತಿ ಸ್ವಾತಂತ್ರ್ಯವು ಕಾನೂನು, ಪೋಲಿಸ್ ವ್ಯವಸ್ಥೆಗಳ ಬಂಧಿಯಾಗುತ್ತಿದೆ. (ಖಿಠಿಣಾಬ ಠಿಂಟಭೀಜ ನಿರ್ಮಾಣವಾಗುತ್ತಿದೆ) ಈ ಎಲ್ಲ ಸಮಸ್ಯೆಗಳಿರುವವರೆಗೂ ಗಾಂಧೀಜಿಅಂಬೇಡ್ಕರ ಮತ್ತು ಲೋಹಿಯಾರವರತತ್ವ ಮತ್ತು ಕ್ರಿಯೆಗಳು ಉತ್ತರರೂಪವಾಗಿ ಜೀವಂತವಾಗಿರುತ್ತವೆಎನ್ನುವುದರಲ್ಲಿ ಸಂದೇಹವಿಲ್ಲ.

"People will listen to me perhaps after I am dead but listen, they must some day. What is wanted is new type of leadership and a new quality among the people." - Dr. Ram ManoharLohia.

**ಆಧಾರ ಗ್ರಂಥಗಳು**

1) ದೇ. ಜವರೆಗೌಡ, ಸಮಾಜವಾದಿ ಲೋಹಿಯಾ, ಸಹ್ಯಾದ್ರಿ ಪ್ರಕಾಶನ, 1989.
2) ದೇವನೂರ ಮಹಾದೇವ, ಎದೆಗೆ ಬಿದ್ದಅಕ್ಷರ, 2ನೇ ಮುದ್ರಣ, ಅಭಿನವ ಪ್ರಕಾಶನ, 2012.
3) ಡಿ. ಎಸ್. ವೀರಯ್ಯ, ದಲಿತಚಿಂತನ, ಪ್ರಥಮ ಮುದ್ರಣ ಸ್ವಪ್ನ ಬುಕ್ ಹೌಸ್, 2005.
4) N. Jayapalan, Indian political thinkers, Modern Indian Political Thought, Atlantic publishers and distributors, 2000.
5) Ram Rattan and Ruchityagi, Indian political thought.
6) ಸಂ. ವಿಜಯಪೂಣಚ್ಚತಂಬಂಡ, ಭಾರತಉಪಖಂಡದಆಧುನಿಕಚರಿತ್ರೆ, ವಿವಿಧ ಆಯಾಮಗಳು, ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ಸಂಪುಟ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
7) Dr. VishnooBhagwan, Indian Political Thinkers, Published by Atmaram and Sons, 1996.

## ಕಥೆ ಹುಟ್ಟುವ ಪರಿ

ಧರ್ಮಣ್ಣ, ಡಾ.ಶೀಲಾಕುಮಾರಿ ದಾಸ.
ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಾಯನ ವಿಭಾಗ, ಗು.ವಿ.ಕ.

ಕಥೆ ಹುಟ್ಟಿಕೊಳ್ಳುವದು ಅತ್ಯಂತಹ ವಿಸ್ಮಯವಾದದ್ದು. ಬರಹಗಾರನಲ್ಲಿನ ತುಡಿತ, ತವಕ, ಆಲೋಚನ ಶಕ್ತಿಗಳು ಕ್ರಿಯಾಯಾಗುತ್ತದೆ. ಕಥೆಯು ಮೌನ ಕಣಿವೆಯ ನೀರ ಪಯಣವಿದಂತೆ. ಒಂದು ಬೆಟ್ಟದಲ್ಲಿ ಹರಿಯುವ ನೀರು ಭೋರ್ಗರೆಯುತ್ತಲೆ ಮುನ್ನುಗ್ಗುವದರಿಂದ, ತನ್ನ ಪ್ರಭಾವ ಬೀರುವಂತೆ, ಪರಿಸರ, ಕೌಟಂಬಿಕ ಜೀವನ ತನ್ನ ಬಾಲ್ಯದ ನೆನಪುಗಳು, ಗುರು ಹಿರಿಯರ ಅನುಭವದ ಮಾತುಗಳು ಇಂತಹ ತಮ್ಮ ಅನುಭವದ ಗಂಟನ್ನು ಬಿಚ್ಚುತ್ತಲೆ ಬರಹಕ್ಕೆ ಮುಂದಾಗುತ್ತಾರೆ. ಕಣಿವೆ ತುಂಬಿ ಆಳವಿದ್ದಲ್ಲಿ ಹರಿಯುವಂತೆ, ಅನೇಕ ಜನ ಸಮುದಾಯವನ್ನು ಭೆಟಿಯಾಗುವದರೂಂದಿಗೆ, ಅವರಲ್ಲಿನ ಮುಗ್ದತೆ, ಅನಕ್ಷರತೆ, ಕಂದಾಚಾರ ಮೇಲು ಕೀಳುಗಳೆಂಬ ಭಾವನೆ, ಮೌಢ್ಯತೆ, ತುಂಬಿದ ಮನಸ್ಸಗಳನ್ನು ಗುರುತಿಸಿ ಅವರ ಅಂತರಾತ್ಮದ ಒಳಗಣ್ಣನ್ನು ತೇರಿಸಿ ಅವರಗೆ ಮನವರಿಕೆ ಮಾಡುತ್ತಲೆ ಕಥಾ ಬರಹಗಾರ ಮುಂದುವರಿಯುತ್ತಾನೆ.

ಹರಿಯುವಂತ ನೀರು ಮುಂದೆ ಗುಂಡಿಯನ್ನು ತುಂಬಿಕೂಳ್ಳುವಂತೆ, ಈ ಸಮಾಜದಲ್ಲಿ ಯಾವುದೇ ಜಾತಿ, ಧರ್ಮ, ವರ್ಗನೋಡದೆ ಮಾನವಿಯತೆ ಸಂಬಂಧಗಳನ್ನು ಸಮಾನ ದೃಷ್ಠಿಕೋನದಿಂದ ಮುಂದುವರಿಯುತ್ತಾನೆ. ಕಥ ಬರಹಗಾರ ಹರಿಯುವ ನೀರು ಯಾವ ರೀತಿ ತೀರುವನ್ನು ಕಾಣುವದು ಸಹಜ ಬರಹಗಾರನ್ನು ಸಹ ತನ್ನ ಪಾತ್ರ ಬದಲಾವಣೆ ಹೊಂದುವನು. ಕಥಾ ಪಾತ್ರಗಳು ಹರಿಯುವ ನೀರಿನಂತೆ ಚಲಿಸುತ್ತಲಿರುತ್ತವೆ. ಮುಂದೆ ಒದುಗರ ಮನದಾಳದಲ್ಲಿ

ಅಚ್ಚಳಿಯದೆ ಶಕ್ತಿಯುತವಾಗಿ ಓದುಗನ ಮನದಾಳದಲ್ಲಿ ಉಳಿದು ಬಿಡುತ್ತದೆ. ಸಮಾಜದ ವಾಸ್ತವತೆಯನ್ನು ನೀಡುವದರ ಜೋತೆಗೆ, ಮಾನವನ ವಾಸ್ತವ ಬದುಕನ್ನು ಅವರ ಹಲವು ಮುಖ ಚಹರೆಗಳ ಮುಖಾಂತರ ನಮ್ಮ ಮುಂದೆ ತರುವಂತಹದ್ದು ಮಹಾತ್ವವೆನಿಸುತ್ತದೆ. ಕಥಾ ಬರಹಗಾರನಲ್ಲಿ ಸೃಜನಾತ್ಮಕ ಭಾವನೆಗಳನ್ನು ಕೇರಳಿಸುವಂತ್ತದ್ದು. ಹೂಸ ಗಾಳಿ ಹೂಸ ತಲ್ಲಣಗಳು ಯಾವ ರೀತಿಮನದಾಳದಲ್ಲಿ ಹಳಿಯದೆ ಉಳಿದುಕೂಳ್ಳುತ್ತವೆ. ಅದರಂತೆ ಹಳೆತನ ನೆನಪಿಸಿ ಕೋಳ್ಳುವುದರೂಂದಿಗೆ, ಹೊಸ ಚೇತನದತ್ತ ಮುಖಮಾಡುವದು. ಪ್ರತಿಯೊಬ್ಬ ಕತೆಗಾರನಲ್ಲಿ ಇರುವವುದು ಸೂಕ್ತ, ಆಧುನಿಕರಣದಿಂದ ಆಲಿಸುವುಂತಹದ್ದು ಶ್ರೇಷ್ಠತೆಗೆ ಸಾಕ್ಷೀಯಾಗು ವದು. ಪ್ರತಿಯೂಬ್ಬ ಕಥೆಗಾರ ಹಿಂದೆ ನಡೆದ ಅನೇಕ ಘಟನೆಗಳು ಅವನ ಮನದಲ್ಲಿ ಮರೆಯದ ನೆನಪುಗಳಾಗಿ ಕಾಡುವುದರಿಂದ ಇಂತಹ ಕಥಾ ಭಾಗವು ಮನದಲ್ಲಿ ಹುಟ್ಟಿ, ಮುಂದೆ ಚಿಂತನೆ ಗಳೂಂದಿಗೆ ಅದು ಮೋಳಕೆಗೂಳ್ಳುವುದರಿಂದ ಕಥೆಯಾಗಿ ರೂಪಗೂಳ್ಳುವುದು.

ಕಥೆಗಾರ ತಮ್ಮ ಹಳ್ಳಿಯಲ್ಲಿನ ವ್ಯವಸ್ಥೆ, ಜಾತ್ರೆ, ಪೂಜೆ,ಇಂತಹ ಭಾವನೆಗಳೋಂದಿಗೆ ಜನರಲ್ಲಿನ ಮೌಢ್ಯತೆ, ಅನಕ್ಷರತೆ, ಹೂಂದಿದ ಜಾನಪದರಲ್ಲಿನ ತಾವೆ ಸ್ವತ ಜನಪದ ಕಟ್ಟುವ ಕಲೆ, ಹಾಡುವದು, ಕುಣಿಯುವದು ರಾತ್ರಿಯಲ್ಲಾ ಅಜ್ಜಿ, ಅಜ್ಜರಿಂದ ಕಥೆ ಕೇಳಿಕೂಳ್ಳುವದು, ಇಂತಹ ಪಾತ್ರಗಳ ಕುರಿತು ಚಿಂತನೆಗಳೂಂದಿಗೆ ಕಥೆಯಲ್ಲಿ ತೋಡಗಿಕೂಳ್ಳುವದರಿಂದ ಕಥೆ ಬರಹಕ್ಕೆ ಶ್ರೇಯಸ್ಸು ದೂರೆತಂತಾಗು ತ್ತದೆ. ಕತೆಗಾರ ತಮ್ಮ ಊರಿನಲ್ಲಿ ಜನರು ತಮ್ಮ ಬದುಕನ್ನು ಕುರಿತು ಮಾತನಾಡಿಕೋಳ್ಳುವಂತಹ ಸಂದರ್ಭದಲ್ಲಿನ ಮಾತುಗಳು ಬರಹಗಾರನ ಮೇಲೆ ಬೀರಿದ ಪರಿಣಾಮಗಳು ಮತ್ತು ಮಳೆ, ಬೆಳೆ, ತಮ್ಮ ಜೀವನದ ವ್ಯವಸ್ಥೆ ಕುರಿತು ಮತ್ತು ಪರಿಸರದಲ್ಲಿ ಸಕಾಲಕ್ಕೆ ಸರಿಯಾಗಿ ಮಳೆಯಾಗದಿರುವದು, ಜನರ ಸಂತ್ರಪ್ತಿ ಬದುಕು ಮುಂದೆ ಊರಿಗೆ ಕಾರ್ಖಾನೆಗಳು, ಕಾರ್ಮಿಕರು, ಶ್ರೀಮೀಕರು, ಬಡವರುಹತ್ತಾರು ಜೇನು ನೋಣಗಳಂತೆ ಊರಿಗೆ ಬಂದರಿಂದ ಹಣದ ಹೊಳೆ ಹರಿದಾಡಿದವು ಮನೆಗಳ ಮೇಲೆ ಮನೆಗಳೆದ್ದವು, ಕಲೆ, ಸಾಹಿತ್ಯ, ಸಂಸ್ಕೃತಿಯು ಸಮಾನತೆಯನ್ನು ಮರೆತು, ಜನರ ಮೇಲೆ ದುಷ್ಪಾರಿಣಮಗಳು ಅನುಭವಿಸುವದನ್ನು ಕಂಡು ತನ್ನ ಅನುಭವಕ್ಕೆ ತಂದು ಕೂಂಡು, ಕಥೆಗಾರ ತನ್ನ ಬರಹ ಮುಂದುವರಿಸುತ್ತಾನೆ. ಕಥೆಯನ್ನು ಬರೆಯುವದಕ್ಕೆ ಕುಳಿತುಕೊಂಡರೆ ಕಥೆ ಬರೆದು ಬಿಡಬಹುದು, ಅದರೆ ಅದು ಓದುಗರ ಮನ ಗೆಲ್ಲುವಂತ ಮತ್ತು ಈ ಸಮಾಜಕ್ಕೆ ಕಷ್ಠಕರವಾದದ್ದು, ಅದ್ದರಿಂದ ಸರಿಯಾದ ವಸ್ತು ಹಾಗು ಪಾತ್ರಗಳನ್ನು ಆಯ್ಕೆ ಮಾಡಿಕೋಂಡು ಬರೆಯುವಂತ ಚಾಣಕ್ಷತೆ ಬರಹಗಾರನಲ್ಲಿರಬೇಕು, ಈ ಶೈಲಿ ಇದ್ದರೆ ಅರ್ದ ಕಥೆ ಯಶ್ಸಸು ಕಂಡಂತೆ ಸರಿ. ಕಥೆಗಾರ ತೇರದ ಕಣ್ಣಿನಿಂದ ಮತ್ತ ಚಿಕಿತ್ಸಕ ಬುದ್ದಿಯಿಂದ ನೋಡಿದರೆಂದರೆ ಒಂದ ಉತ್ತಮ ಕಥೆಯಾಗುತ್ತದೆ.

ಪ್ರತಿಯೋಬ್ಬ ಕಥೆಗಾರನ ಅತಿ ದೂಡ್ಡ ಶಾಪವೇಂದರೆ ಅತ ಯಾವಗಲು ಸಹ ಬೆರೆಯವರ ಪಾತ್ರದಲ್ಲಿ ಕೋಳೆಯುವದು. ಸದಾ ಅವರ ಸುಖ ದು:ಖಗಳ ಗುಂಗಿನಲ್ಲಿರ ಬೇಕಾಗುತ್ತದೆ. ಮರೆಯಲಾಗದ ಪಾತ್ರಗಳೂಂದಿಗೆ ಹೂಸ ಪಾತ್ರಗಳು ಬಂದು ಸೇರಿಕೋಳ್ಳುವುದು ಸಹಜವೇ ಸರಿ.

➢ **ಕಥೆಯ ಗ್ರಹಿಕೆ** : ಪ್ರತಿಯೊಬ್ಬ ಕಥೆಗಾರನಿಗೆ ತನ್ನದೆ ಅದಂತಹ ಶೈಲಿ ಕ್ರಮಬದ್ದತೆ ಇದ್ದೆ ಇರುತ್ತದೆ ಸಂಪೂರ್ಣ ಗ್ರಹಿಕೆ ಮಾಡಿಕೊಂಡು ಬರೆಯುವುದು ಬರಹಗಾರನಿಗೆ ಬೀಟ್ಟಿದ್ದು.

೧. **ಗಿರಡ್ಡಿಗೂವಿಂದ ರಾಜ್**: ಪ್ರತಿಯೋಂದು ಕಥೆಯಲ್ಲಿ ತೀರ ವಾಸ್ತವತೆ,ಸತ್ಯತೆ,ಹಾಗು ನೀಜ ಜೀವನದಲ್ಲಾಗಲಿ ಸಾಹಿತ್ಯದಲ್ಲಿಯೋ ಕಾಣುವದಕ್ಕೆ ಸಾದ್ಯವಿರದು ಎನ್ನುವದು ಸಾರ್ವತ್ರಿಕ ಸತ್ಯ ಮತ್ತು ತಾತ್ವಿಕತೆಯ ಗ್ರಹಿಕೆಯಾಗಿದೆ.

೨. **ರಂಗನಾಥ,ಎಸ್,ಆರ್**: ಕಥೆಯ ಬರಹವು ಬರಹಗಾರನಲ್ಲಿನ ಯೋಚೆನೆಯ ಲಹರಿ ರೂಪಗೂಂಡಿರುವದು. ಅಕ್ಷರಗಳೂಂದಿಗೆ ನುಡಿಗಳ ವರ್ಣ ಚಿತ್ರಣವೇ ಸರಿ. ಕಥೆ ಎಂದರೆ ಹೇಳುವವನು ವಾಗ್ಮಿಂಯಾಗಿರ ಬೇಕು ಬರೆಂಯುವವನು ಭಾಷೆಂಯನ್ನು ಬಲ್ಲವನಾಗಿರಬೇಕು ಹಾಗಾದರೆಂದ್ದರೆ ಮಾತ್ರ ಕಥೆ ಆಕರ್ಷಕ ಅರ್ಥಪೂರ್ಣವಾಗುವದು. ಕಥ ಬರಹದಿಂದ ಮಾನವನ ಕುಲಕ್ಕೆ ಸನ್ಮಾರ್ಗವು ಮತ್ತು ಮಾರ್ಗದರ್ಶಿಯಾಗಿರುತ್ತದೆ. ಅನೇಕ ಕಥೆಗಳು ನ್ಯಾಯ, ನಿತಿ, ಧರ್ಮವನ್ನು ಕುರಿತು ಹೇಳಬಹುದು. ಅವುಗಳಲ್ಲಿನ ಬಲ್ಲಾವನಾಗಿರ ಬೇಕು ಹಾಗರೆ ಮಾತ್ರ ಕಥೆ ಅರ್ಥಪೂರ್ಣವಾಗು ವುದು. ಕಥ ಬರಹದಿಂದ ಮಾನವನ ಕುಲಕ್ಕೆ ಸನ್ಮಾರ್ಗವು ಮತ್ತು ಮಾರ್ಗದರ್ಶಿಯಾಗುತ್ತದೆ. ಅನೇಕ ಕಥೆಗಳು ನ್ಯಾಯ, ನೀತಿ, ಧರ್ಮವನ್ನು ಕುರಿತು ಹೇಳಬಹುದು. ಅವುಗಳಲ್ಲಿನ ವೈಜ್ಞಾನಿಕ ಮತ್ತು ವೈಚಾರಿಕ ಪ್ರಜ್ಞೆಯನ್ನು ಹೊಂದಿರಬೇಕು, ಅದ್ಧರಿಂದ ಪ್ರತಿಯೊಂದು ಕಥೆಗಳಲ್ಲಿ ನ್ಯಾಯ, ನಿಷ್ಠೆ, ಮಾನವ ಕುಲದ ಪ್ರತಿಬಿಂಬವಾಗಿರುವುದು ನಾವು ಕಾಣುತ್ತೆವೆ.

ಮಾನವ ಮಾನವರಲ್ಲಿ ನಡೆದಂತೆ ಅಂತರ ಸಂಬಂದಗಳು ಮತ್ತು ನಿರೀಕ್ಷಿತ ಅಥವಾ ಅನಿರೀಕ್ಷಿತೆಯಿಂದ ನಡೆದಂತಹ ಘಟನೆಯ ಹಿನ್ನಲೆಯಿಂದ ಹುಟ್ಟಿಕೊಂಡಿರುತ್ತವೆ. ಕೆಲವು ಕಥೆಗಳು ರೋಮಾಂಚನಗೊಳಿಸಬಹುದು ಇನ್ನು ಕೆಲವು ಕಣ್ಣಿರು ತರಿಸಬಹುದು ಕೆಲವು ಚಿಂತನೆಗೆ ಹಚ್ಚಬಹುದು, ಮಾನವನಲ್ಲಿ ಆಳವಾಗಿ ಉಳಿದುಕೊಂಡಿರುವ ಮೋಸ ವಂಚನೆ, ಮುಗ್ದತೆ ಮೇಲು ಕೀಳುವೆಂಬ ಭಾವನೆಗಳು ಅಸಮಾನತೆ, ಅಪನಂಬಿಕೆ, ನೀರ್ಲಕ್ಷತೆ ಕೌಟಂಬಿಕ ಕಲಹ, ಮಹಿಳಾ ಸಮಸ್ಯೆ ಮತ್ತು ಶೈಕ್ಷಣಿಕ ಸಮಸ್ಯೆಗಳು ಇಂತಹ ಹತ್ತು ಹಲವು ಕಾರಣಗಳಿಂದ, ಕಥೆಯ ವ್ಯಥೆಯನ್ನು ಒಳಗೊಂಡು ಹುಟ್ಟುವುದು ಸಹಜ.

೩. **ಸಂಪಗೆ ನಾಗರಾಜ–** ಮನುಷ್ಯನ ಬದುಕು ಹರಿಯುವ ನೀರಿನಂತೆ ಅದರಂತೆ ಕಥೆಗಳು ಸಹ ನಿರಂತರ ಚಲಿಸುವ ಮೊಡವಿಂದತೆ.

೪. **ನಾ.ಡಿಸೋಜ–** ಕೆಲವೊಮ್ಮೆ ಕೆಲ ಕಥೆಗಳು ಕಥೆಗಾರನನ್ನು ಹುಡಿಕಿಕೊಂಡು ಬರಿಸಿಕೋಂಡರೆ, ಕೇಲವು ಕಥೆಗಳನ್ನು ಕಥೆಗಾರನೇ ಹುಡುಕಿ ಬರೆಯುವುದು ಕಾಣುತ್ತೆವೆ. ಅದ್ದರಿಂದ ಕಥೆ ಕಾಲ ಮಾನಕ್ಕೆ ಒಳ ಪಟ್ಟಿರುತ್ತದೆ.

➢ **ಕಥೆ ಎಂಬ ಕಾಮನ ಬೀಲ್ಲು–** ಒಂದು ಕಾಮನ ಬೀಲ್ಲುವಿನಲ್ಲಿ ಯಾವ ರೀತಿ ತನ್ನ ಬಣ್ಣವು ಸಂಪೂರ್ಣ ಒಂದ್ದರೋಳಗೆ ಒಂದು ಏಣಿದುಕೋಂಡಂತೆ ಅದನ್ನು ಬಿಡಿಸಿ ಹೇಳುವದಕ್ಕೆ ಸಾದ್ಯವಿರದು. ಅದರಂತೆ ಕತೆಯ ಪಾತ್ರಗಳು ಸಹ ಇದೆ ರೀತಿಯಾಗುರುತ್ತವೆ. ಯಾವ ಪಾತ್ರಗಳು ಯಾವದರಲ್ಲಿ ಉಳಿದುಕೋಂಡಿವೆಂದು

ಹೇಳುವದಕ್ಕೆ ಸಾದ್ಯವಿರದು. ಪ್ರತಿಯೊಬ್ಬ ಕಥೆಗಾರನ ಚಿಂತನೆ, ಆಲೋಚನೆ, ವಿಮರ್ಶನ್ಮಾಕ ವಿವೇಚನೆಗಳು, ಕಥೆ ಕಟ್ಟುವಂತಹ ಪ್ರಾಮಾಣಿಕ ಪ್ರಯತ್ನದ ಮೇಲೆ ಅವಲಂಬನೆಯಾಗಿರುವದು. ಕಲ್ಪನೆಗಳೊಂದಿಗೆ ಬೇರೆ ಬೇರೆಯಾಗುತ್ತಲೆ ಹೋಗುತ್ತವೆ. ತೇರದ ಮನದ ಅರಿವಿನೋಂದಿಗೆ ಸಸಿಯಾಗಿ ಚಿಗರಬೇಕು, ಕಥೆಯು ಬರೆಯುವ ಮುನ್ನ ಅದರ ಹೂಳ ತೀರಳನ್ನು ಅವಲೋಕಿಸಿ ಮತ್ತು ಸಮಾಜಕ್ಕೆ ನೀಡುವಂತಹ ಸಂದೇಶಗಳನ್ನು ಆಧಾರವಾಗಿಟ್ಟುಕೋಂಡು ಕಥೆಯನ್ನು ಬರೆಯಬೇಕು ಕಥೆಗಾರ ಕಥೆಯನ್ನು ಬರೆಯುವಂತ ಸಂದರ್ಬದಲ್ಲಿ ಕಥೆಯ ಹಂಗು ತೋರೆದು ಬರೆಯಬೇಕು. ಪ್ರತಿಯೋಂದು ಕಥೆಗಳ ಭಾಷೆಯು ಯಾವಗಲು ಹಿತಮಿತದಿಂದ ಕೂಡಿರಬೇಕು ಕಥೆಯನ್ನು ಬರೆಯುವದಕ್ಕೆ ಪ್ರಾರಂಬಿಸಿದರೆ ಅದೂಂದು ಸುದಿರ್ಘ ಪ್ರಯಣವೇ ಸರಿ. ಹಾಗು ಕಥೆಯ ಬದುಕಿನೂಳಗೋ ಬದಕು ಕಥೆಯೊಳಗೋ ಬದುಕುಗಳೇರಡು ಗ್ರಹಿಕೆಯೋಳಗೋ ಏಂಬುವಂತೆ ರೂಪಗೂಂಡಿರುತ್ತದೆ. ಕಥೆಯು ಸದೃಡವಾಗಿ ನಿಂತುಕೋಳ್ಳಬೇಕೆಂದರೇ ಚಿಂತನೆ ಮುಖ್ಯ, ಕಥೆಗಾರರು ತಮ್ಮ ಒಂಟಿತನವನ್ನು ನಿಗಿಸಿಕೂಳ್ಳುವದ್ದಕ್ಕೆಂದು ಬರೆಯುತ್ತಲೇ ಹೋಗುತ್ತಾರೆ. ಕಥೆಯ ನಿರೋಪಣೆಯ ತಂತ್ರವು ಪೂರ್ವಯೋಜಿತದಿಂದ ಕೂಡಿರಬಾರದು. ಪ್ರತಿಯೋಂದು ಕಥೆಯು ಅರಿಯುವದರಿಂದ ಇರುವುದನ್ನು ಅನುಭವಿಸುವಂತಹ ವಿಸ್ಮಯ ಕ್ಷೇಣಿಕವಾಗಿರುವುದು ಹಾಗು ಕಥೆಯು ತನ್ನದೆ ಅದಂತಹ ಪರಿಸತವು ಸಹ ಅಗತ್ಯವಾಗಿರುವುದು. ಅದ್ದರಿಂದ ನಿರಂತರ ಹರಿಯುವಂತಹ ಝುರಿಯಾಗಿರುವುದು.

➢ **ಕಥೆ ಕಟ್ಟುವ ಬಗೆ –**

೧. **ಶಾಂತದೇವಿ ಕಣವಿ=** ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಮೂಡ ಬೇಕೆಂದರೆ, ಇವರ ತಂದೆ ಸಾಹಿತ್ಯದಲ್ಲಿ ತುಂಬಾ ಆಸಕ್ತಿಯನ್ನು ಹೂಂದಿರಿವರು ಇಂತಹ ಪರಿಸರದಲ್ಲಿ ಬೆಳೆದ ಇವರು ಅನೇಕ ಕಥಾಚಿಂತಕರ, ವಿಮರ್ಶಕರ ಅನೇಕ ಕಥೇಬರಹಗಾರರ ಕಥೆಗಳನ್ನು ಓದುವದರೂಂದಿಗೆ, ಸಾಹಿತ್ಯ, ಘಟ್ಟಗಳನ್ನು ಗ್ರಹಿಕೆ ಮಾಡಿಕೂಂಡು, ಹಿರಿಯ, ಕಥೆಗಾರರು ಈ ಸಮಾಜದ ಒಳಗಣ್ಣು ತೇರೆಸಿರುವದು ಕಾಣುತೆವೆ. ಈ ಸಮಾಜದಲ್ಲಿ ಮಹಿಳೆಯರನ್ನು ಕೀಳು ಮನೋಬಾವನೆಯಿಂದ ಕಾಣುವ ಕಂಡು ಮನದಲ್ಲಿ ಸಂಕಟ, ತೀರಸ್ಕಾರದ ಮನಸ್ಸುಗಳು ಭರವಸೆ ಹೂಂದಿರದ ಬದುಕು, ವಯಸ್ಕರ, ವಿವಾಹ, ವಿದಾವ ವಿವಾಹ, ಮಹಿಳೆಯರ ಜೀವನದಲ್ಲಿನ ಸಂಘರ್ಷಗಳು, ನೋವು, ಅವಮಾನಗಳನ್ನು ಎದೆಯಲ್ಲಿಟ್ಟು ಕೂಂಡು ಜೀವನ ಸಾಗಿಸುವದು, ಮತ್ತು ಮಾನಸಿಕ ದೈಹಿಕ, ಶೋಷಣೆ ಕ್ರೌರ್ಯತೆ, ಹೆಣ್ಣು ಹ್ಮಟ್ಟಿದರೆಂದರೆ ಒಂದು ಹುಣ್ಣು ಹ್ಮಟ್ಟಿದಂತೆ ಎನ್ನುವ ಸಂಕಟ ಪಾಲಕರ ಮನಸ್ಸುಗಳು, ತಂದೆ ತಾಯಿಯನ್ನು ಕಳೆದುಕೂಂಡ ನೋವು, ಗಂಡನಿಂದ ಅನೇಕ ಅವಮಾನ ಸಹಿಸಿಕೂಳ್ಳುವದು, ಇಂತಹ ಎಲ್ಲಾ ವಿಷಯಗಳಿಂದ ಕಥೆ ಹುಟ್ಟುತ್ತದೆ.

೨. **ಶ್ರೀಧರ್ ಬಳಿಗಾರ–** ಕಥೆಯಹುಟ್ಟು ಮತ್ತು ನದಿಯ ಮೂಲವನ್ನು ಕುರಿತು ಹೇಳುವದಕ್ಕೆ ಸಾದ್ಯವಿರದು.

೩. **ಸುನಂದಾ ಪ್ರಕಾಶ ಕಡಮೆ =** ಮನದ ಮೇಲೆ ಮೂಡಿದಂತ ಅನೇಕ ದೃಶ್ಯಗಳು ಮುಂದೆ ಕಥಾ ಬರಹಕ್ಕೆ ಮೂಲ ಸಾಮಾಗ್ರಿಗಳಾಗುತ್ತವೆ. ಕಥೆಗೆ ತನ್ನದೆ ಅದಂತ ಪರಿಸರ ಅಗತ್ಯತೆ ಇದೆ, ರಸ್ತೆ ಅಗಲಿಕರಣದ ಉದೇಶದಿಂದ ಅನೇಕ ವ್ಯಾಪಾರಿಗಳನ್ನು ಹೂರ ಹಾಕುವದು, ಇದರಿಂದ ಬಡವರ ಬದಕು ಬೀದಿಪಾಲಗುವದು, ಇಂತಹ ಸ್ಥಿತಿಯನ್ನು ಕಂಡು ಮನವು ಕರಗಿ ದು:ಖ ಬರುತ್ತಲಿತ್ತು. ಅನೇಕ ಸಣ್ಣ ಪುಟ್ಟ ಅಂಗಡಿಗಳು ತೇರವುಗೋಳಿಸುವದರಿಂದ ಸ್ಮಶಾನದಂತೆ ಕಾಣುವ ದೃಶ್ಯಗಳು ಬಣ್ಣ ಅಚ್ಚುವದರೂಂದಿಗೆ ಸರಿ ಪಡಿಸುವದು, ಇಂತಹ ಅನೇಕ ವಿಷಯಗಳು ಹೂರ ಜಗತ್ತಿಗೆ ತಿಳಿಯಪಡಿಸಿದರೆ ಮನಸ್ಸು ಹಗುರಗೂಳ್ಳುವದು.

➢ **ಅನುಭವ ಮತ್ತು ಕಥನೆ–**

೧.**ಸುಮಿತ್ರ,ಎಲ್,ಸಿ.–** ಮನೆಯನ್ನು ಕಟ್ಟುವಂತಹ ಕನಸ್ಸುಗಳನೂತ್ತ ತಂದೆ ಮನೆ ಕಟ್ಟಿ ಮನೆಯೂಳಗೆ ವಾಸಿಸದತೆ ಆತನ ಮಕ್ಕಳು ಹೋರ ಹಾಕುವದು ಮನೆ ಬೀಟ್ಟು ಹೋರದುಡಿದು ಕೋಂಡು ಜೀವನ ಸಾಗಿಸುವದು, ಇಂತಹ ನೋವುಗಳನ್ನು ತನ್ನ ನೋವುಗಳೆಂದು ಪರಿಗಣಿಸಿ ಬರಹಕ್ಕೆ ಮುಂದಾಗುತ್ತಾರೆ.

➢ **ಬದುಕು ಕಲಕಿ ಕಥೇಯಾಗದಿರಲಿ:–** ಮಾನವನ ಬದುಕಿನಲ್ಲಿ ಕಥೆ ಯಾವ ರಿತೀಯಿಂದ ಹುಟ್ಟಿಕೋಳ್ಳುವದು. ಬದುಕಿನೂಳೋಂದು ಕಥೆಯಿರುವದುನ್ನು, ಕಥಾ ಬರಹಗಾರರಾದ "ಅಲಕ ತೀರ್ಥಹಳ್ಳಿ" ಯವರು ಬದುಕು ಯಾವ ರೀತಿ ಬದಲಾವಣೆ ಹೂಂದುವದು, ಈ ಬದಲಾವಣೆಯ ಹೂಸ ಗಾಳಿ ಹೂಸ ತಲ್ಲಣಗಳು ಯಾವ ರೀತಿಯಿಂದ ಮನದಾಳದಲ್ಲಿ ಹಳಿಯದೆ ಉಳಿದುಕೂಳ್ಳುತ್ತವೆ ಮತ್ತು ಹಳೆತನ ನೆನಸಿಕೂಳ್ಳುವದರೂಂದಿಗೆ ಹೊಸ ಚೇತನ ಗಾಳಿಯತ್ತ ಮುಖ ಮಾಡುವುದು ಪ್ರತಿಯೂಬ್ಬ ಕಥೆಗಾರನಲ್ಲಿ ಇರಬೇಕಾದದ್ದೇ ಸೂಕ್ತವೆನಿಸುತ್ತದೆ, ಪ್ರತಿಯೂಬ್ಬ ಕತೆಗಾರ ಆಧುನಿಕರಣವನ್ನು ಆಲಿಸುವದರೂಂದಿಗೆ ತನ್ನ ಬರವಣಿಗೆ ಮುಂದುವರಿಸುತ್ತಾನೆ.

ಅತಿಯಾದಂತಹ ಆನಂಧ ಮತ್ತು ನೋವಿನ ಸಂದರ್ಭ ಸಾಹಿತ್ಯ ರಚನೆಯಾಗುವದು. ಪ್ರತಿಯೂಬ್ಬ ಕಥೆಗಾರನ ಹಿಂದೆ ಅನೇಕ ಘಟನೆಗಳು ನಡೆದಿರಬಹುದು. ಇಂತಹ ಘಟನೆಗಳೆ ಮುಂದೆ ಮನದಲ್ಲಿ ಬೀಜವಾಗಿ ಉಳಿದುಕೂಂಡು ಅದೆ ಮುಂದೆ ನಿತ್ಯ ಮನದ ತವಕದಿಂದಲೇ ಈ ಕಥೆಗೆ ಕಾವು ಕೂಡುವದರೂಂದಿಗೆ, ಮನದಲ್ಲಿ ಬೀಜವು ಮುಂದೆ ಸಸ್ಯವಾಗಿ ಭಾಗುತ್ತಲೆ ಪಾಲುವುದರೂಂದಿಗೆ, ಮುಂದೆ ಅದು ಕವಲುಗಳೂಂದಿಗೆ ಹೂಸ ಪಾತ್ರಗಳನೊಂದಿಗೆ ಅನೇಕ ಟಿಸಿಲುಗಳನ್ನು ಹೂಂದುವದರೂಂದಿಗೆ ಕಥೆಯಾಗಿ ಹೂರ ಜನ್ಮ ತಾಳುವದು.

ಕಥೆಯನ್ನು ಬರೆಯುವಂತಹ ಸಂಧರ್ಭದಲ್ಲಿ ಮೂಲ ಪಾತ್ರದ ಘನತೆಗೆ ಭಂಗ ಬರದಂತೆ ಬರೆಯುವದು ಒಂದು ಸಾವಲೇ ಸರಿ. ಕಥೆಗಾರ ಯಾವುದೆ ಜನಪ್ರೀಯ ಸೂತ್ರಕ್ಕೆ ಕಟ್ಟು ಬೀಳದೆ ಮತ್ತು ಯಾವುದೇ ಪಾತ್ರಗಳು ಮರೆಯಾಗದಂತೆ ಅವುಗಳನ್ನು ಜನ ಪ್ರೀಯತೆಗೆ ತರುವಂತಹ ನಿರೀಕ್ಷೆಯಿಂದ ಆತುರ ಪಡದೆ, ಇದ್ದಕ್ಕಿದಂತೆ ಸೃಷ್ಠಿಮಾಡುವುದು ಕಥೆಗಾರನ ಬರಹಕ್ಕೆ ಮೆರಗನ್ನು ನೀಡಿದಂತಾಗುತ್ತದೆ.

ಕಥೆಯು ಬರಹವು ಅತಿಯಾದಂತಹ ಆನಂದ ಮತ್ತು ನೋವುಗಳೂಂದಿಗೆ ಹುಟ್ಟಿಕೂಳ್ಳುವದು. ಸಾಹಿತ್ಯ ರಚನೆಯು ಹೂಂದುವುದು. ಮಾನವಿಯತೆ ಮರೆತಂತಹ ಅನೇಕ ಜನ ಸಮುದಾಯಕ್ಕೆ ಮನವರಿಕೆಯಾಗುವಂತೆ ಮಾಡುವದು ಕತೆಯಾ

ಜವಾಬ್ದಾರಿಯಾಗಿದೆ ಮತ್ತು ಅನೇಕ ಸಾರಿ ವಿಸ್ಮಯಕಾರಿ ಅನುಭವ ಇಂತಹ ಅನುಭವಗಳ ಪ್ರಕ್ರಿಯಗಳೆ ಕಥೆಯಾಗುವುದು. ಒಂದು ಕಥೆಯಾಗುವದು ಒಂದು ಕಥೆಯನ್ನು ಬರೆಯುವಂತಹ ಸಂದರ್ಭದಲ್ಲಿ ಕಥೆಯು ಮುಂದುವರಿಯುವದು ನೀಜ, ಆದರೆ ಅದು ಅನೇಕ ತೀರುವುಗಳೂಂದಿಗೆ, ಹೂಸ ಹೂಸ ದಾರಿಗಳನ್ನು ಹುಡುಕುತ್ತಲೆ ತಮಗೆ ಸಿಗುವಂತಹ ನೂಟವನ್ನು ಮುಡಿಸುವುದ ರೂಂದಿಗೆ ಕತೆಯು ಮುಂದುವರಿಯುತ್ತದೆ.

ಅನೇಕ ಕಥೆಗಳು ಮಾನವನ ಬದುಕಿನಲ್ಲಿ ಅವರ ಅನುಭವಗಳನ್ನು ಕೇದಕಿದರೆಂದರೇ ಕಥೆ ಹುಟ್ಟಿಕೂಳ್ಳುವದು, ಕಥೆ ಬರೆಯಲು ಜೀವನಾನುಭವ ಬೇಕಿರುವಂತೆ ಬೇರೆ ಬೇರೆ ಭಾಷೆಯ ಸಾಹಿತ್ಯದ ಓದಬೇಕು. ಸೃಜನ ಶೀಲ ಭಾಷೆ ಮತ್ತು ಕಲ್ಪನ ಶಕ್ತಿಗಳನ್ನು ಮೀರಿದ ಒಂದು ಪ್ರಕ್ರೀಯ ಕಥೆಯನ್ನು ಸೃಷ್ಠಿಸುತ್ತದೆ. ಕಥೆಯು ಬರೆಯುವದು ಚಿಂತನೆಯ ಮತ್ತೊಂದು ರೂಪವಾಗಿದೆ ಅದ್ದರಿಂದ ಬರವಣಿಗೆಯ ಜೋತೆಗೆ ಕಥೆಗಾರನ ಯೋಚನೆಯ ಕ್ರಮವಿಸ್ತರಿಸುತ್ತದೆ, ಪಾತ್ರಗಳು ಭೀನ್ನತೆಯಿಂದ ವರ್ತಸುತ್ತಲೆ ಹೋಗುತ್ತವೆ, ಕಥೆಯ ಒಳತಿರುಳು ಬಿಚ್ಚುತ್ತಲೆ ಹೂಸ ಅರಿವು ಅನಾವರಣಗೂಳ್ಳುತ್ತ, ಕಥೆಗಾರನ ಆತ್ಮವಿಶ್ವಾಸ ಬೆಳಸುತ, ಕಥೆಗಾರನ ಕಥೆಗಳು ಬೆಳೆಯುತ್ತ ಬೆಳೆಸುತ್ತಲೆ ಸಾಗುತ್ತಾನೆ.

➢ **ಅಮರೇಶ ನುಗಡೋಣಿಯವರಲ್ಲಿನ ಕಥೆ ಹುಟ್ಟು:–** ಕಥೆ ಸಂಕಲನವು ಅವರಲ್ಲಿ ಹುಟ್ಟಿಕೊಳ್ಳಬೆಕೇಂದರೆ, ಅವರ ಕುಟುಂಬದ ಹಿರಿಯ ವ್ಯಕ್ತಿಗಳಲ್ಲಿನ ಸಾಹಿತ್ಯ ಆಸಕ್ತಿಯು ಒಂದಡೆಯಾದರೆ, ಅವರ ಬೆಳದ ಪರಿಸರ, ಅಂತರಾವಲೋಕನ ಮಾಡುವಂತಹ ಚಿಂತಾನಾತ್ಮಕ ಮತ್ತು ಚಿಕಿತ್ಸಕ ಮನೋಭಾವನೆ ಹೊಂದಡೆಯಾಗಿದೆ.

ಅಮರೇಶ ನುಗಡೋಣಿಯವರು ಅತ್ಯಂತ ಬಡತನ ಕುಟುಂಬದಲ್ಲಿ ಬೆಳೆದಂತವರು, ಬಡತನ, ಕಷ್ಟ, ನೋವು, ಕಿಲುಬುಗಟ್ಟಿದಂತ ಸಂಪ್ರದಾಯದೂಂದಿಗೆ ಕುಡಿದಂತಹ ಹಾಗೂ ಗ್ರಾಮಿಣ ಪ್ರದೇಶದಲ್ಲೇ ಬೆಳೆದ ಸಾಹಿತಿಗಳಿವರು, ತಮ್ಮ ಸುತ್ತ ಮುತ್ತಲಿನ ಪರಿಸರವನ್ನು, ಅವಲೋಕನೆಯೋಂದಿಗೆ ಅನೇಕ ಬಡವರು, ದಿನದಲಿತರು ಮತ್ತು ಮದ್ಯಮ ವರ್ಗದ ಜನರಲ್ಲಿನ, ಮೌಡ್ಯತೆ, ಅಸಮಾನತೆ, ಜಾತಿ, ಧರ್ಮ, ಮತ, ಮಠ, ಜಮಿನುದಾರಿಕೆ, ಎಲ್ಲಾವನ್ನು ಚಿತ್ರಿಸುವದ ರೋಂದಿಗೆ ಅವುಗಳಿಂದ ಬಿಡುಗಡೆಯನ್ನು ಪಡೆಯುವಂತ ಶಕ್ತಿಯನ್ನು ಕುರಿತು ಇವರ ಕಥಾ ಸಂಕಲನವು ಒಳಗೋಂಡಿದೆ.

ಕಥೆಗಳು ಹುಟ್ಟಿಕೂಳ್ಳಬೆಕೇಂದರೆ ಇವರು ಗ್ರಾಮಿಣ ಪರಿಸರವನ್ನು ಸೂಕ್ಷ್ಮ ರೀತಿಯಿಂದ ಅಲಿಸುವದರೂಂದಿಗೆ ಬಡವರು ಮಹಿಳೆಯರ ಮೇಲೆ ಯಾವರಿತಿಯಿಂದ ದೌರ್ಜನ್ಯತೆಗೆ ಒಳಗಾಗುತ್ತಾರೆ ಮತ್ತು ದೌರ್ಜನ್ಯಗಳಿಂದ ಹೂರ ಬಂದು ಮಹಿಳೆಯಾವ ರೀತಿ ಬಿದ್ದಂತಹ ನೆಲದಲ್ಲಿಯೇ ನೆಟ್ಟನೆ ನಿಂತು ದಿಟ್ಟತನದ ಮಹಿಳೆಯಯಾಗುತ್ತಾಳೆ, ಹಾಗು ತಾನು ಸಹ ಯಾವುದೇ ಕ್ಷೇತ್ರದಲ್ಲಿಯು ಸಹ ಕಡಿಮೆಯಲ್ಲಾ ಎನ್ನುವಂತೆ ಸಾದನೆಯನ್ನು ತೋರಿಸುವಂತಹ ಮಹಿಳೆಯರ ಕುರಿತು ಇವರ ಅನೇಕ ಕಥೆಯಗಳಲ್ಲಿ ಜನರಲ್ಲಿನ ನೋವು,ತಮಗೆ ಹರಿವು ಇಲ್ಲಾದಂತೆ ಮೋಸಕ್ಕೆ ಗುರಿಯಾಗುವದು,ಸ್ವತ ಗ್ರಾಮೀಣ ನುಡಿಗಳೋಂದಿಗೆ ಅನಕ್ಷರಸ್ಥ ವ್ಯಕ್ತಿಗಳಿಗೂ ಸಹ ಅರ್ಥವಾಗು ವಂತೆಯೇ ಅನೇಕ ಕಥೆಗಳ ಬರಹವನ್ನು ನಾವು ಕಾಣುತ್ತೇವೆ.

ಅಮರೇಶ ನುಗಡೋಣಿಯರ ಕಥೆಗಳು ಓದುತ್ತ ಕುಳಿತರೆ, ಹಳ್ಳಿಯ ಜನರ ಮುಗ್ದತೆ ಜೀವಮಾನ ತಲೆ ತಲ್ಯಾಂತರ ಜೀತಕ್ಕೆ ದುಡಿಯುವದು, ಗ್ರಾಮೀಣ ಭಾಷೆಗಳೊಂದಿಗೆ ಕೂಡಿದ ಕಥೆಯಾಗಿರುವದರಿಂದ ಮರೆಯಲಾಗದ ಕಥೆಗಳಾಗಿ ಮನದಲ್ಲಿ ಉಳಿದುಕೂಳ್ಳುತ್ತವೆ.

## ಮಕ್ಕಳ ದುಡಿಮೆ

ಶ್ರೀಮತಿ ಎಚ್. ಜ್ಯೋತಿ
ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ಶಾಸ್ತ್ರ ವಿಭಾಗ, ಎಲ್.ವಿ.ಡಿ.ಮಹಾವಿದ್ಯಾಲಯ, ರಾಯಚೂರು.
ಇ–ಮೇಲ್: jyotibhoomikahm@rediffmail.com

ಮಕ್ಕಳ ದುಡಿಮೆಯ ಪರಿಸ್ಥಿತಿಯು ಭಾರತದಲ್ಲಿ ಇತ್ತೀಚಿನ ಸಂಗತಿಯೇನೂ ಅಲ್ಲ, ಇತಿಹಾಸದ ಎಲ್ಲ ಅವಧಿಗಳಲ್ಲಿಯೂ ಇದು ಒಂದಲ್ಲ ಒಂದು ವಿಧದಲ್ಲಿ ಅಸ್ತಿತ್ವದಲ್ಲಿ ಇತ್ತು. ಭಾರತದಲ್ಲಿ ಮಕ್ಕಳಿಗೆ ಕೆಲಸವನ್ನು ಹಚ್ಚಿ ದುಡಿಸಿಕೊಳ್ಳುತ್ತಿದ್ದುದು ೩ನೇ ಶತಮಾನದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖವಿದೆ ಹಿಂದೆ ಶ್ರೀಮಂತರ ಮನೆಗಳಲ್ಲಿಯ ಗೃಹ ಕೃತ್ಯವನ್ನು ಮಾಡಲು ಗುಲಾಮರನ್ನು ನೇಮಿಸಿಕೊಳ್ಳುತ್ತಿದ್ದರು ಇದು ಜಗತ್ತಿನಾದ್ಯಂತ ಚಾಲ್ತಿಯಲ್ಲಿತ್ತು ಮತ್ತು ೧೮ನೇ ಶತಮಾನದ ವರೆಗೂ ಇದು ಮುಂದು ವರೆದಿದ್ದು ಕಂಡು ಬರುತ್ತದೆ. ಗುಲಾಮರ ಮಕ್ಕಳೂ ಸಹ ಶ್ರೀಮಂತರ ಮನೆಗಳಲ್ಲಿ ಕೆಲಸ ಮಾಡುತ್ತಿದ್ದ ವಿಷಯ ಅತ್ಯಂತ ಸಾಮಾನ್ಯವಾಗಿತ್ತು.

ಹಿಂದಿನ ಅವಧಿಯಲ್ಲಿ ಮಕ್ಕಳ ದುಡಿಮೆಯು ಗೃಹ ಕೃತ್ಯಗಳ ಒಂದು ಭಾಗವಾಗಿ ಕಂಡು ಬರುತ್ತಿತ್ತು. ಜೋತೆಗೆ ಮಗುವು ಮಾಡುವ ಕೆಲಸದ ಸ್ವರೂಪವು ಸಾಮಾನ್ಯವಾಗಿ ಹಾನಿಕಾರಕವಾಗಿರಲಿಲ್ಲ. ಆದರೆ, ಅನಂತರದ ದಿನಗಳಲ್ಲಿ ಶೋಷಣೆಯ ಲಕ್ಷಣಗಳು ಕಂಡುಬಂದವು. ಜನರ ಅತಿಯಾಸೆಯಿಂದಾಗಿ ಕಡಿಮೆ ಕೂಲಿ ನೀಡಿ ಅತಿ ಹೆಚ್ಚು ದುಡಿಮೆಯನ್ನು ಮಗುವಿನಿಂದ ನಿರೀಕ್ಷಿಸುವ ಜನರ ಪ್ರಮಾಣ ಹೆಚ್ಚಾಯಿತು. ದುಡಿಮೆಯ ಸ್ಥಳಗಳಲ್ಲಿ ಮಕ್ಕಳಿಗೆ ಅರೆಹೊಟ್ಟೆಗೆ ಹಾಕಿ ಮಗುವಿನಿಂದ ಕೆಲಸ ಮಾಡಿಸುವ ಪರಿ ನಿಂದನೀಯವಾದ ಅಂಶವಾಗಿದೆ. ಅನೇಕ ಕಡೆಗೆ ಕರ ಕುಶಲ ಕೆಲಸಗಳಲ್ಲಿ, ತಮ್ಮ ಮನೆಗಳಲ್ಲಿ ಅಥವಾ ನೆರೆಹೊರೆಯವರ ಗುಡಿ ಕೈಗಾರಿಕೆಗಳಲ್ಲಿನ ಉತ್ಪಾದನೆಗಳಲ್ಲಿ ಮಕ್ಕಳನ್ನು ಚಿಕ್ಕಂದಿನಿಂದಲೇ ತರಬೇತಿಸುವ ಕಾರ್ಯ ನಡೆಯುತ್ತಿತ್ತು.ಇದರ ಉದ್ದೇಶ ಕೇವಲ ಈ ಕಸಬುಗಳನ್ನು ಮುಂದಿನ ಪೀಳಿಗೆಯವರು ಮುಂದುವರೆಸಿಕೊಂಡು ಹೋಗಲು ನೀಡುವ ಉದ್ದೇಶವನ್ನು ಹೊಂದಿತ್ತು. ಆದರೆ ಕೈಗಾರಿಕಾ ಕ್ರಾಂತಿಯ ಫಲವಾಗಿ ದುಡಿಮೆಯಲ್ಲಿ ಹೊಸದಾರಿ ತೋರಿ ಜನರು ಬೃಹತ್ ಸಂಖ್ಯೆಯಲ್ಲಿ ನಗರದೆಡೆಗೆ ವಲಸೆ ಹೋದರು, ಇದರಿಂದ ಕುಟುಂಬದಲ್ಲಿದ್ದ ವ್ಯಕ್ತಿಗಳ ಮಧ್ಯದಲ್ಲಿದ್ದ ಮಾನವ ಸೂಕ್ಷ್ಮಗಳನ್ನು

ಕಳೆದುಕೊಳ್ಳಲು ಕಾರಣವಾಯಿತು. ಗೃಹ ಆಧಾರಿತ ಕಸಬುಗಳಿಗೆ ಅತೀ ಹೆಚ್ಚಿನ ಹಿನ್ನಡೆಯುಂಟಾಯಿತು. ಬದಲಾದ ವಾತಾವರಣದಲ್ಲಿ ಮಕ್ಕಳು ದುಡಿಯಲು ತೊಡಗಿದಂತೆ, ಮಕ್ಕಳು ದುಡಿಮೆಯಲ್ಲಿ ಅಪಾಯಗಳನ್ನು ದೀರ್ಘ ಅವಧಿಯ ದುಡಿಮೆಯನ್ನು ಮತ್ತು ಕೆಟ್ಟ ಪರಿಸ್ಥಿತಿಯನ್ನು ಹಾಗು ಕಳಪೆ ಜೀವನ ಮಟ್ಟವನ್ನು ಎದುರಿಸಬೇಕಾಯಿತು. ಮಕ್ಕಳ ದುಡಿಮೆಯು ಮುಖ್ಯವಾಗಿ ಅಭಿವೃದ್ಧಿ ಪ್ರಕ್ರಿಯೆಯ ಪರಿಣಾಮವಾಗಿ ಸೃಷ್ಟಿಯಾಗಿರುವ ಒಂದು ಸಮಸ್ಯೆ. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಕೈಗಾರಿಕಾ ಕಸುಬು ಮತ್ತುಷ್ಟು ಉಲ್ಬಣಗೊಂಡಿದೆ. ಶಾರೀರಿಕ ಮತ್ತು ಬೌದ್ಧಿಕ ಬೆಳವಣಿಗೆ ಮತ್ತು ಆರೋಗ್ಯಕ್ಕೆ ಹಾನಿಯನ್ನುಂಟು ಮಾಡುವ ಪರಿಸ್ಥಿತಿಯಲ್ಲಿ ಕಡಿಮೆ ಸಂಬಳಕ್ಕೆ ದೀರ್ಘ ಅವಧಿಯವರೆಗೆ ದುಡಿಯುವ, ಅವರ ಉತ್ತಮ ಭವಿಷ್ಯಕ್ಕೆ ಸಹಾಯಕವಾಗಬಲ್ಲಂತಹ ಶೈಕ್ಷನಿಕ ಅವಕಾಶಗಳಿಂದ ವಂಚಿತರಾದಂತಹ, ಜೀವನವನ್ನು ಮಕ್ಕಳು ಅಪಕ್ವ ವಯಸ್ಸಿನಲ್ಲಿಯೇ ನಡೆಸುವದನ್ನು ಮಕ್ಕಳ ದುಡಿಮೆಯು ಒಳಗೊಂಡಿರುತ್ತದೆ. ಎಲ್ಲಾ ಕಾರ್ಯಗಳೂ ಮಕ್ಕಳಿಗೆ ಹೊರೆಯನಿಸುವದಿಲ್ಲ. ಇದರ ಅರ್ಥ ಮಕ್ಕಳಿಗೆ ಅತ್ಯವಶ್ಯಕವಾದ ವಿರಾಮ, ಆಟ ಮತ್ತು ಶಿಕ್ಷಣ ಇವುಗಳನ್ನು ನಿರಾಕರಿಸಿದೆ. ಇರುವ ಕಾರ್ಯವು ಮಕ್ಕಳ ದುಡಿಮೆ ಎನಿಸುವದಿಲ್ಲ. ಆದರೆ ಮಕ್ಕಳ ದುಡಿಮೆ ಎನ್ನುವುದು ನಿಖರವಾದ ಪದವಾಗಿದೆ. ಸ್ವಲ್ಪ ಮಟ್ಟಿನ ಶೋ಼ಷಣೆಯನ್ನು ಒಳಗೊಂಡಿರುವಂತಹದ್ದು. ಈ ಶೋಧನೆಯು ಶಾರೀರಿಕ, ಬೌದ್ಧಿಕ, ಆರ್ಥಿಕ ಮತ್ತು ಸಾಮಾಜಿಕ ಸ್ವರೂಪದ್ದಾಗಿದ್ದು. ಮಕ್ಕಳ ಆರೋಗ್ಯ ಮತ್ತು ಬೆಳವಣಿಗೆಯನ್ನು ಕುಂಠಿತಗೊಳಿಸುವಂತಹದು.

ಮಕ್ಕಳ ದುಡಿಮೆಯೆಂದರೆ, ಮಕ್ಕಳು ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು (ಸ್ವಲ್ಪಮಟ್ಟಿಗೆ) ದುಡಿಮೆಯಲ್ಲ ತೊಡಗಿಸಿಕೊಳ್ಳುವುದು. ಈ ಬಗೆಯ ಆಚರಣೆಯಿಂದ ಮಕ್ಕಳು ತಮ್ಮ ಬಾಲ್ಯದ ಸವಿಯನ್ನು ಸವಿಯಲು ಸಾಧ್ಯವಾಗದೇ ಇದು ಅವರ ಮಾನಸಿಕ ದೈಹಿಕ ಬೆಳವಣಿಗೆಗೆ ಹಾನಿಕಾರಕವಾಗಿದೆ. ಬಡತನ, ಉತ್ತಮ ಶಾಲೆಗಳ ಕೊರತೆ ಮತ್ತು ಅನೌಪಚಾರಿಕ ಆರ್ಥಿಕತೆಯ ಕಾರಣದಿಂದಾಗಿ ಇಂದು ಭಾರತದಲ್ಲಿ ಮಕ್ಕಳ ದುಡಿಮೆಗೆ ದೂಡಿದೆ. 1998ರ ರಾಷ್ಟ್ರೀಯ ಗಣತೆಯ ಪ್ರಕಾರ ಬಾಲ ಕಾರ್ಮಿಕರ ಒಟ್ಟು ಸಂಖ್ಯೆಯಲ್ಲಿ 4 ರಿಂದ 15 ವಯೋಮಾನವ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ಅಂದರೆ 253 ಮಿಲಿಯನ್ ಮಕ್ಕಳಲ್ಲಿ 12.6 ಮಿಲಿಯನ್ ಮಕ್ಕಳು ದುಡಿಮೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೆ, ಸಂವಿಧಾನಾತ್ಮಕ ಸೂಚನೆಯಂತೆ ಅಪಾಯಕಾರಿ ಕೈಕಾರಿಕೋದ್ಯಮಗಳಲ್ಲಿ ದುಡಿಮೆಗೆ ತೊಡಗುವದನ್ನು ನಿಷೇಧಿಸಲಾಗಿದೆ. ಜೊತೆಗೆ ಎಲ್ಲ ಕಾರ್ಮಿಕ ಕೆಲಸಗಳಿಂದಲೂ ಮಕ್ಕಳನ್ನು ರಕ್ಷಿಸಲು ಸೂಚಿಸಿದೆ.

ಆಹಾರ ಮತ್ತು ಕೃಷಿ ಸಂಸ್ಥೆ ಸೂಚಿಸಿದಂತೆ 70% ಮಕ್ಕಳು ಕಾರ್ಮಿಕರಾಗಿ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಭಾರತ ಸಂವಿಧಾನದ 24ನೇ ವಿಧಿಯು ಮಕ್ಕಳ ದುಡಿಮೆಯನ್ನು ನಿಷೇಧಿಸಿದೆ. ಭಾರತದ 2001ರ ಗಣತಿಯ ಪ್ರಕಾರ 17 ವಯಸ್ಸಿನ ಒಳಗಿನ ಮಕ್ಕಳು ಯಾವುದೇ ಆರ್ಥಿಕ ಉತ್ಪನ್ನವನ್ನುಂಟುಮಾಡುವ ಕಾರ್ಯದಲ್ಲಿ ದಿನಗೂಲಿಯಾಗಿ ಅಥವಾ ಲಾಭದಾಯಕದಲ್ಲದ ಅಥವಾ ಪರಿಹಾರ ನೀಡದಿರುವ ಕೆಲಸದಲ್ಲಿ ತೊಡಗಬಹುದು. ಯೂನಿಸೆಫ್‌ನ ಪ್ರಕಾರ ಬಡತನವೇ ಬಾಲ ಕಾರ್ಮಿಕರ ಪದ್ಧತಿಗೆ ಮುಖ್ಯ ಕಾರಣ ಗ್ರಾಮೀಣ ಮತ್ತು ಅಭಿವೃದ್ಧಿ ಕಾಣದ ಪ್ರದೇಶಗಳಲ್ಲಿ ಮಕ್ಕಳಿಗೆ ಅರ್ಥಪೂರ್ಣವಾದ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಶಾಲೆಗಳಲ್ಲಿ ಸೌಲಭ್ಯ ಅವರಿಗಿರುವದಿಲ್ಲ.

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು The International Labour Organisation of spreading smile through Education ಈ ರೀತಿ ಸಲಹೆಗಳನ್ನು ನೀಡುತ್ತದೆ. ಬಡತನವೇ ಬೃಹತ್ ಪ್ರಮಾಣದ ಕಾರಣವಾಗಿದೆ. ಮಕ್ಕಳ ದುಡಿತದಿಂದ ಬರುವ ಹಣದಲ್ಲಿ ಮಗುವಿನ ಮೂಲಭೂತ ಆವಶ್ಯಕತೆಗಳನ್ನು ತನಗೆ ತಾನೇ ನೇರವೇರಿಸಿಕೊಳ್ಳಲು ಅಥವಾ ಕುಟುಂಬದ ನಿರ್ವಹಣೆಗೆ ಕೆಲವೊಂದು ಕುಟುಂಬಗಳಲ್ಲಿ ಮಕ್ಕಳ ದುಡಿಮೆಯ ಹಕ್ಕು ಅವರ ಒಟ್ಟು ವರಮಾನದಲ್ಲಿ ಶೇ 25 ರಿಂದ 40 ರಷ್ಟು ಭಾಗವನ್ನು ಹೊಂದಿ ಖರ್ಚಿಗೆ ದಾರಿಮಾಡಿ ಕೊಡುತ್ತದೆ ಎಂದು ವರದಿ ಸಲ್ಲಿಸಿದೆ.

The International Labour Organisation 2008ರ ಅಧ್ಯಯನದ ಪ್ರಕಾರ ಮಕ್ಕಳನ್ನು ಹಾನಿಕಾರಕವಾದ ಕಾರ್ಮಿಕ ಕೆಲಸಕ್ಕೆ ಮಾಡುವ, ದುಡಿಮೆಗೆ ಮಾಡುವ ಮುಖ್ಯ ಕಾರಣಗಳಲ್ಲಿ ಒಂದೆಂದರೆ ಗುಣಮಟ್ಟದ ಶಾಲೆಗಳ ಕೊರತೆಯಿರುವದು ಕೆಲವೊಂದು ಸಮುದಾಯಗಳಲ್ಲಿ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಶಾಲೆಗಳ ಸೌಲಭ್ಯ ಇಲ್ಲದಿರಬಹದು. ಆಕಸ್ಮಾತ್ ಶಾಲೆಗಳ ಸೌಲಭ್ಯವಿದ್ದರೂ ಅವುಗಳು ಅತಿಯಾದ ದೂರದಲ್ಲಿರುವುದು ಮತ್ತು ಅವುಗಳನ್ನು ತಲುಪಲು ಮಕ್ಕಳು ಪಡಬಾರದ ಕಷ್ಟಪಡಬೇಕಾಗುತ್ತದೆ. ಜೊತೆಗೆ ಕೆಲವೊಂದು ಸಲ ಪೋಷಕರು ತಾವು ಮಕ್ಕಳಿಗೆ ಕೊಡಿಸುವ ಶಿಕ್ಷಣ ಆದಷ್ಟು ಯೋಗ್ಯಕರವಾದದೇ ಅಥವಾ ಇಲ್ಲವೋ ಎಂಬುದು ತಿಳಿಯದೇ ಗೊಂದಲದಲ್ಲಿದ್ದಾರೆ.

ಭಾರತ ಗ್ರಾಮೀಣ ಭಾಗದ ಸ್ಥಿತಿಗತಿಯ ಬಗ್ಗೆ ವರದಿ ಸಲ್ಲಿಸಿದ ಯೂನಿಸೆಫ್ ಹೀಗೆ ತಿಳಿಸುತ್ತದೆ. ಸರಕಾರದ ಹಣಕಾಸಿನಿಂದ ನಡೆಯುತ್ತಿರವ 50% ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ. 40% ಶಾಲೆಗಳಲ್ಲಿ ಕಪ್ಪು ಹಲಗೆಯ ಕೊರತೆಯಿದೆ. ಕೆಲವೊಂದು ಶಾಲೆಗಳಲ್ಲಿ ಮಾತ್ರ ಪುಸ್ತಕಗಳಿವೆ. ಆದರೆ 97% ದಷ್ಟು ಶಿಕ್ಷಣಕ್ಕಾಗಿ ಹಣಕಾಸು ಮುಂಗಡ ಪತ್ರದಲ್ಲಿ ಮೀಸಲಿಟ್ಟ ಹಣ ಕೇವಲ ಶಿಕ್ಷಕರ ಮತ್ತು ಆಡಳಿತಾಧಿಕಾರಿಗಳ ಸಂಬಳಕ್ಕೆ ಖರ್ಚಾಗುತ್ತಿದೆ ಎಂದಿದ್ದಾರೆ.

ಭಾರತ ಸ್ವಾತಂತ್ರ್ಯಾನಂತರ ಸಂವಿಧಾನದಲ್ಲಿ ಮಕ್ಕಳನ್ನು ದುಡಿಮೆಯಿಂದ ತಡೆಗಟ್ಟಲು ಮತ್ತು ಅವರಿಗೆ ರಕ್ಷಣೆ ನೀಡುವ ಅನೇಕ ಕಾನೂನುಗಳನ್ನು ಜಾರಿಗೆ ತಂದಿವೆ. ರಾಜ್ಯದ ಮಾರ್ಗದರ್ಶಿ ತತ್ವಗಳ ನೀತಿಯು 14 ವರ್ಷದೊಳಗಿನ ಮಕ್ಕಳು ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ಮತ್ತು ಅಪಾಯಕಾರಿ ಕೆಲಸಗಳಾದ ಸಿಡಿಮದ್ದನ್ನು ತಯಾರಿಸುವ ಕಡೆಗೆ ಪಟಾಕಿಯನ್ನು ತಯಾರಿಸುವ ಕಡೆಗೆ ಕೆಲಸಗಳಲ್ಲಿ ತೊಡಗಿಸುವದನ್ನು ನಿಷೇಧಿಸಿದೆ.

ಸಂವಿಧಾನದ 24ನೇ ವಿಧಿಯ ಪ್ರಕಾರ ಮತ್ತು 1960 ರಲ್ಲಿ ಸೂಚಿಸಿದಂತೆ ಭಾರತದ ಭವಿಷ್ಯದ ಬಗ್ಗೆ ದೂರದೃಷ್ಟಿಯನ್ನು

ಇಟ್ಟುಕೊಂಡು 21 ಎ ವಿಧಿ ಹಾಗು 456 ವಿಧಿಯ ಪ್ರಕಾರ ನಮ್ಮಲ್ಲಿಯ ಎಲ್ಲ ಸಂಪನ್ಮೂಲಗಳ ಬಗೆಗಿನ ಮಾಹಿತಿ ಇಟ್ಟುಕೊಂಡು 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಹಾಗು ಕಡ್ಡಾಯ ಶಿಕ್ಷಣವನ್ನು ಜಾರಿಯಲ್ಲಿ ತಂದರು.

ಕಾರ್ಖೆನೆಗಳ ವಿಧಿ 1948ರ ಪ್ರಕಾರ 14 ವರ್ಷದೊಳಗಿನ ಮಕ್ಕಳು ಇಲ್ಲಿ ಕೆಲಸ ಮಾಡುವದನ್ನು ನಿಷೇಧಿಸಿದೆ.

1952 ಗಣಿ ಉದ್ಯಮಕ್ಕೆ ಸಂಬಂಧಿಸಿದ ವಿಧಿ 18 ವರ್ಷದೊಳಗಿನ ವಯಸ್ಸಿನ ಮಕ್ಕಳು ಗಣಿ ಉದ್ಯಮದಲ್ಲಿ ಮಾಡುವ ಕೆಲಸವನ್ನು ನಿಷೇಧಿಸಿದೆ.

1986ರ ಬಾಲಕಾರ್ಮಿಕರ ವಿಧಿಯ ಪ್ರಕಾರ 14 ವರ್ಷದೊಳಗಿನ ಮಕ್ಕಳು ಅಪಾಯಕಾರಿ ಎನಿಸುವ ಕೆಲಸಗಳಲ್ಲಿ ತೊಡಗಿರುವ ಕಾನೂನಿಗೆ ವಿರೋಧವೆಂದು ಘೋಷಿಸಿದೆ ಮತ್ತು ದುಡಿಮೆಯನ್ನು ನಿಷೇಧಿಸಿದೆ.

ಬಾಲನ್ಯಾಯಾಲಯದ ಮಕ್ಕಳಿಗೆ ಸಂಬಂಧಿಸಿದ 2000 ವಿಧಿಯ ಪ್ರಕಾರ " ಯಾವುದೇ ಅಪಾಯಕಾರಿ ಉದ್ಯೋಗದಲ್ಲಿ ಮಕ್ಕಳನ್ನು ತೊಡಗಿಸುವಂತೆ ಮಾಡುವದು ಶಿಕ್ಷಾರ್ಹ ಅಪರಾಧ ಮತ್ತು ದಂಡದೊಂದಿಗೆ ಕಾರಗೃಹ ವಾಸದ ಶಿಕ್ಷೆಯನ್ನು ಸೂಚಿಸಿದೆ. "

ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಹೊಂದುವದು ಮಕ್ಕಳಿಗೆ ಹಕ್ಕನ್ನು ನೀಡುವ 2009ರ ವಿಧಿಯ ಪ್ರಕಾರ ಉತಿತ ಮತ್ತು ಕಡ್ಡಾಯ ಶಿಕ್ಷಣವನ್ನು 6 ರಿಂದ 14 ವರ್ಷದ ಮಕ್ಕಳಿಗೆ ಕಾನೂನಿನ ಪ್ರಕಾರ ಮಕ್ಕಳ ಹಕ್ಕಾಗಿದೆ. ಈ ಅಧಿನಿಯಮದ ಪ್ರಕಾರ ಶೇ.25% ಪ್ರವೇಶಾತಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ನೀಡಲಾಗಿದೆ.

ಬಾಲಕರಿಗೆ ಹೋಲಿಸಿದಾಗ ಎರಡು ಪಟ್ಟು ಬಾಲಕಿಯರು ಶಾಲೆಯ ಹೊರಗುಳಿದು ಮನೆಗೆಲಸಗಳಲ್ಲಿ ತೊಡಗಿಕೊಂಡಿರುವದು ಹೆಣ್ಣು ಮಗುವಿಗೆ ಶಿಕ್ಷಣ ಕೊಡಿಸುವದು ಕಡಿಮೆ ಆದ್ಯತೆಯಾಗಿ ಭಾರತದಲ್ಲಿ ಪರಿಗಣಿಸಲಾಗಿದೆ. ಯೂನಿಸೆಫ್ ನ ಪ್ರಕಾರ ಬಡತನ ದಾರಿದ್ರ್ಯವೇ ಮುಖ್ಯವಾದ ಕಾರಣವಾಗಿದೆ. ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದದ ಪ್ರದೇಶಗಳಲ್ಲಿ ಮಕ್ಕಳಿಗೆ ಅರ್ಥಪೂರ್ಣವಾದ ಇನ್ನೊಂದು ಹಾದಿ ದೊರಕದೇ 17 ವಯಸ್ಸಿನೊಳಗಿನ ಮಕ್ಕಳು ನೇರವಾಗಿ ಬಾಲಕಾರ್ಮಿಕರಾಗಿ ಬಿಡುತ್ತಾರೆ.

ಇಂದಿನ ಮಕ್ಕಳೇ ನಾಳಿನ ನಾಗರಿಕರು ಹೀಗಾಗಿ ರಾಷ್ಟ್ರದ ಭವಿಷ್ಯ ಮಕ್ಕಳನ್ನು ಅವಲಂಬಿಸಿದೆ. ಆದರೆ ಇಂದು ಅದೇ ಮಕ್ಕಳ ಸ್ಥಿತಿ ಹೀನಾಯವಾಗಿದೆ. ಮಕ್ಕಳು ದೈಹಿಕವಾಗಿ ದುರ್ಬಲರು ಎಂಬ ಕಾರಣದಿಂದ ಅನೇಕ ರೀತಿಯಿಂದ ಶೋಷಣೆ ಮಾಡಲಾಗುತ್ತಿದೆ. ಪೌಷ್ಟಿಕ ಆಹಾರ ಶಿಕ್ಷಣಪಾಲನೆ ಇತ್ಯಾದಿ ಅಂಶಗಳು ಸರಿಯಾಗಿ ದೊರೆಯದೆ. ಇಂದು ಅನೇಕ ಮಕ್ಕಳು ಬೆಳೆಯುವ ಮುನ್ನವೇ ನೋಡುತ್ತೇವೆ. ಅವರ ಜೀವನಕ್ಕೆ ಭದ್ರತೆ ಬೇಕಿದೆ.

ಮಕ್ಕಳ ಹಕ್ಕುಗಳ ಹೋರಾಟಗಾರರ ಪ್ರಕಾರ ಮಗವು ಶಾಲೆ ಬಿಟ್ಟು ಹೊರಗಿದ್ದನೆಂದರೆ ಅವರು ಒತ್ತಾಯ ಪೂರ್ವಕವಾಗಿ ಈ ಕೆಲಸಕ್ಕೆ ದೂಡಿದ್ದಾರೆಂದೇ ಅರ್ಥ ಯೂನಿಸೆಫ್‌ನ ವರದಿಯಂತೆ ಭಾರತದಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿರುವ ಶಾಲೆಗಳು, ವರ್ಗಕೋಣೆಗಳು, ಕಡಿಮೆ ಶಿಕ್ಷಕರ ಸಂಖ್ಯೆ ಎಲ್ಲವೂ ಕಾರಣವಾಗಿದೆ.

ಇಂದಿನ ಮಗು ನಾಳಿನ ನಾಗರಿಕನಾಗಿ ಮಹತ್ವದ ಕೆಲಸಗಳನ್ನು ಮಾಡಬೇಕಾಗಿ ಬರುತ್ತಿರುವದರಿಂದ ಮಗುವಿನ ವ್ಯಕ್ತಿತ್ವನ್ನು ರೂಪಿಸಲು ಮಗುವಿಗೆ ಯೋಗ್ಯ ಆರೋಗ್ಯ ಮತ್ತು ಶಿಕ್ಷಣಗಳು ಮಹತ್ವದ ಅವಶ್ಯಕತೆಗಳಾಗಿವೆ.

ಮಗುವು ಕುಟುಂಬದ ಸದಸ್ಯನಾಗಿದ್ದಾನೆ. ಹೀಗಾಗಿ ಮಗುವಿನ ಕಲ್ಯಾಣವು ಕುಟುಂಬದ ಕಲ್ಯಾಣವಾಗುತ್ತದೆ. ಕುಟುಂಬವು ಸಮಾಜದ ಮೂಲ ಘಟಕವಾದುದ ರಿಂದ ಮಕ್ಕಳ ಕಲ್ಯಾಣವು ಸಮಾಜ ಕಲ್ಯಾಣವಾಗಿದೆ.

ಸಮಾಜ ಕಲ್ಯಾಣ ಅಧ್ಯಯನ ತಂಡದ ಅಭಿಪ್ರಾಯದಂತೆ ವ್ಯಕ್ತಿತ್ವವು ಆತನ ಬಾಲ್ಯ ಕಾಲದಲ್ಲಿಯೇ ರೂಪುಗೊಳ್ಳುತ್ತದೆ. ಆದ್ದದರಿಂದ ಮಕ್ಕಳ ಆರೋಗ್ಯ ಸೇವೆಗಳಿಗೆ ವಿಶೇಷ ಮಹತ್ವವಿದೆ. ದೇಶದ ಮಾನಸಿಕ ಹಾಗು ದೈಹಿಕ ಸ್ವಾಸ್ಥ್ಯವು ಮಕ್ಕಳ ಆರೋಗ್ಯವು ಬಾಲ್ಯದಲ್ಲಿ ಹೇಗೆ ರೂಪುಗೊಳ್ಳತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ಮಗುವಿನ ಮನಸ್ಸು ಮೃದುವಾಗಿದ್ದು ಆ ಮನಸ್ಸಿನ ಮೇಲೆ ಪ್ರಭಾವಗಳು ಮತ್ತು ಪರಿಣಾಮಗಳು ಬೇಗ ಆಗುತ್ತವೆ. ಹೀಗಾಗಿ ಮನಸ್ಸು ಬಹಳ ನಾಜೂಕಾಗಿದ್ದು. ಅದರ ಮೇಲೆ ಅನಿಷ್ಟಗಳ ಪರಿಣಾಮವಾಗದಂತೆ ಎಚ್ಚರಿಕೆಯಿಂದ ಬೆಳೆಸಿ ಯೋಗ್ಯ ಶಿಕ್ಷಣ ನೀಡಬೇಕು. ಪೌಷ್ಟಿಕ ಆಹಾರ, ಶಿಕ್ಷಣ ಪಾಲನೆ ಇತ್ಯಾದಿ ಅಂಶಗಳು ಸರಿಯಾಗಿ ದೊರೆಯದೆ ಇಂದು ಅನೇಕ ಮಕ್ಕಳು ಬಾಲ್ಯಾವಸ್ಥೆಯಲ್ಲಿಯೇ ಮರಣಕ್ಕೆ ಗುರಿಯಾಗುತ್ತಿದ್ದಾರೆ. ಬೆಳೆಯುವ ಮುನ್ನವೇ ಕಮರುತ್ತಿರುವ ಮಕ್ಕಳ ಬದುಕಿಗೆ ಹಾಗು ಅವರ ಜೀವನಕ್ಕೆ ಭದ್ರತೆ ಬೇಕಿದೆ.

ಆದ್ದದರಿಂದ ಮಕ್ಕಳಿಗೂ ಪ್ರತ್ಯೇಕ ಹಕ್ಕುಗಳ ಆವಶ್ಯಕತೆ ಇದೆಯೆಂದು ಪರಿಗಣಿಸಿ ವಿಶ್ವಸಂಸ್ಥೆಯು 1959 ರಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಯು ಅಂಗೀಕಾರವಾಯಿತು. ಈ ಘೋಷಣೆಯ ನಂತರವೂ ಮಕ್ಕಳ ಹಕ್ಕುಗಳ ಅನುಷ್ಠಾನ ಸಾಧ್ಯವಾಗದಿರುವದರಿಂದ 20 ನವೆಂಬರ್, 1989 ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಂತರಾಷ್ಟ್ರೀಯ ಕಾನೂನಿನ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ. ಈ ಚಟುವಟಿಕೆಯಲ್ಲಿ ಜಗತ್ತಿನ 191 ರಾಷ್ಟ್ರಗಳು ಭಾಗಿಯಾಗಿದ್ದವು. ಈ ಮೂಲಕ ಮಕ್ಕಳ ಹಕ್ಕುಗಳನ್ನು ಘೋಷಿಸುವವರ ಮೂಲಕ ಮಕ್ಕಳ ಹಕ್ಕುಗಳ ರಾಷ್ಟ್ರೀಯ ರಕ್ಷಣಾ ಆಯೋಗವನ್ನು ರಚಿಸಲಾಯಿತು. ಈಗ ಆಯೋಗ ಸಾಧ್ಯವಾದಷ್ಟು ತ್ವರಿತಗತಿಯಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿದೆ.

ಸಂವಿಧಾನದ 45ನೇ ಕಾಲಮು ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಲು ಸೂಚಿಸಿದರೆ. 46ನೇ ಕಾಲಮು ಪೌಷ್ಠಿಕ ಆಹಾರವು ಮಕ್ಕಳಿಗೆ ತೊರೆಯುವಂತೆ ಮಾಡಿ ಅವರ ಜೀವನ ಮಟ್ಟವನ್ನು ಸುಧಾರಿಸುವ ಗುರಿಯನ್ನು ನಿಗದಿಗೊಳಿಸಿದೆ.

ಒಟ್ಟನಲ್ಲಿ ನಾವು A Child is person not an object of Concern ಎಂದು ಪ್ರತಿಯೊಬ್ಬರೂ ಮಕ್ಕಳನ್ನು ಪರಿಗಣಿಸಬೇಕಾಗಿದೆ.

## ವಿಷಯ:–04

# ಕೌಟಿಲ್ಯೀಯಮ್

## ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಆಡಳಿತ ನಿರ್ವಹಣೆ

## THEME:-04

# KAUTILYEEYAM

## ECONOMICS, POLITICAL SCIENCES AND MANAGEMENT

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಆಹಾರ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ; ಅನ್ನ ಭಾಗ್ಯ ಯೋಜನೆಗೆ ವಿಶೇಷವಾಗಿ ಸಂಬಂಧಿಸಿದಂತೆ | ಡಾ.ಪದ್ಮಿನಿ ಎಸ್.ವಿ | 117 – 123 |
| 2 | ಸುಸ್ಥಿರ ರಾಷ್ಟ್ರದೆಡೆಗಿನ ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ: ಆಹಾರ ಸುರಕ್ಷಿತ ಕಾಯಿದೆ,2013 ಹಾಗೂ ಸಂಸ್ಥೆಗಳ ಕಾಯಿದೆ,2013 | ಮಿಸ್.ರಮ್ಯಶ್ರೀ, ಡಾ.ಈಶ್ವರ ಪಿ | 123 – 126 |
| 3 | "ಕರ್ನಾಟಕದಲ್ಲಿ ಮಹಿಳಾ ಹಕ್ಕುಗಳ ಉಲ್ಲಂಘನೆ ಮತ್ತು ಸ್ಥಾನಮಾನ" – ಒಂದು ವಿಶ್ಲೇಷಣೆ | ದೇವರಾಜು ಎಸ್.ಎಸ್ | 126 – 129 |
| 4 | "ಜಾಗತೀಕರಣದಲ್ಲಿ ಮಾನವ ಹಕ್ಕುಗಳು ಮತ್ತು ಅಭಿವೃದ್ಧಿ" – ಒಂದು ವಿಶ್ಲೇಷಣೆ | ದೇವರಾಜು ಎಸ್.ಎಸ್. | 129 – 132 |
| 5 | ಕರ್ನಾಟಕದಲ್ಲಿಆಹಾರಭದ್ರತೆಮತ್ತುರಾಷ್ಟ್ರೀಯ ಬೆಳವಣಿಗೆಯಲ್ಲಿ ಮಾಧ್ಯಮಗಳ ಪಾತ್ರ | ಡಾ.ಸಿ.ಕೆ.ಪುಟ್ಟಸ್ವಾಮಿ | 133 - 134 |

# ಆಹಾರ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ; ಅನ್ನ ಭಾಗ್ಯ ಯೋಜನೆಗೆ ವಿಶೇಷವಾಗಿ ಸಂಬಂಧಿಸಿದಂತೆ

ಡಾ.ಪದ್ಮಿನಿ ಎಸ್.ವಿ
ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ ಮತ್ತು ಸಂಶೋಧನೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಪ್ರಬಂಧ ಸಾರ:–** ಸುಸ್ಥಿರ ಅಭಿವೃದ್ಧಿಯು ಮಾನವ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವ ಒಂದು ಪ್ರಕ್ರಿಯೆಯಾಗಿದ್ದು, ಜನಾಂಗದ ಮುಂದುವರಿಕೆಗೆ ಅಗತ್ಯವಾದ ಸ್ವಾಭಾವಿಕ ಸಂಪನ್ಮೂಲಗಳನ್ನು ಮತ್ತು ಅನುಕೂಲವಾದ ಪರಿಸರಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವುದಾಗಿದೆ.ಒಟ್ಟಾರೆ ಆರ್ಥಿಕತೆಗೆ ಮತ್ತು ಸಮಾಜಕ್ಕೆ ಅಗತ್ಯವಿರುವ ಅನುಕೂಲಕರವಾದ ಸ್ವಾಭಾವಿಕ ಸಂಪನ್ಮೂಲಗಳನ್ನು ಮತ್ತು ಉತ್ತಮವಾದ ಪರಿಸರವನ್ನು ಒದಗಿಸುವುದಾಗಿದೆ.ಆಧುನಿಕ ಸುಸ್ಥಿರ ಅಭಿವೃದ್ಧಿಯು ೧೯೮೭ರ ಬ್ರಂಟ್ ಲ್ಯಾಂಡ್ ವರದಿಯನ್ನಾಧಿರಿಸಿದೆ.ಇದು ಪ್ರಮುಖವಾಗಿ ಸುಸ್ಥಿರ ಅರಣ್ಯ ನಿರ್ವಹಣೆ ಮತ್ತು ೨೦ನೇ ಶತಮಾನಕ್ಕೆ ಸಂಬಂಧಿಸಿದಂತೆ ಇದು ಅಗತ್ಯವಾಗಿರುವ ಪರಿಸರದ ಕಾಳಜಿಯೇ ಆಗಿದೆ.

೧೯೯೬ರ ವಿಶ್ವ ಆಹಾರ ಸಮ್ಮೇಳನ ಅಂತಿಮ ವರದಿಯ ಪ್ರಕಾರ ಆಹಾರ ಭದ್ರತೆಯನ್ನು ವಿವರಿಸುವುದಾಗಿದೆ.ಎಲ್ಲಾ ಜನರಿಗೆ, ಎಲ್ಲಾ ಕಾಲದಲ್ಲಿ ಭೌತಿಕ ಮತ್ತು ಆರ್ಥಿಕ ಅನುಕೂಲಕ್ಕಾಗಿ, ಕ್ರಿಯಾಶೀಲ ಮತ್ತು ಆರೋಗ್ಯಯುತ ಜೀವನಕ್ಕಾಗಿ ಅಗತ್ಯವಿರುವ ಸಮತೋಲನ ಆಹಾರ ಮತ್ತು ಆಹಾರ ಆದ್ಯತೆಗಳಾಗಿವೆ.

**ಈ ಅಧ್ಯಯನದ ಉದ್ದೇಶಗಳು:–** ಸಮಗ್ರ ದೇಶೀಯ ಉತ್ಪನ್ನ, ಉಳಿತಾಯದ ದರ, ಉತ್ಪಾದನೆ, ಬೆಲೆಗಳು, ಬಾಹ್ಯವಲಯ, ಹಣ ಮತ್ತು ಸಾಲ, ವಿವಿಧ ವರ್ಷಗಳಲ್ಲಿ ಭಾರತದ ಆರ್ಥಿಕತೆಯ ಬೆಳವಣಿಗೆಯ ದರ, ಕೃಷಿ ಉತ್ಪಾದನೆ, ಕೃಷಿ ರಫ್ತುಗಳು, ಭಾರತದ ಆರ್ಥಿಕತೆಯ ಕೃಷಿ ಆಮದುಗಳು, ಅನುಭೋಗದ ಆಹಾರ ಸಾಮಗ್ರಯ ಉತ್ಪಾದನೆ, ಮಾರುಕಟ್ಟೆಯ ಮಾರಾಟ, ಬೆಳೆಗಳ ಮಾರಾಟ, ಒಟ್ಟು ಉತ್ಪಾದನೆ, ಪ್ರತಿ ಕೃಷಿ ಉತ್ಪನ್ನದ ಸರಾಸಿ ಮೊತ್ತ ಮತ್ತು ಕೃಷಿ ಉತ್ಪನ್ನಕ್ಕೆ ನೀಡಿದ ಬೆಲೆ ಇತ್ಯಾದಿಗಳನ್ನು ವಿಶ್ಲೇಷಿಸುವುದಾಗಿದೆ.

**ಅಂಕಿ ಅಂಶಗಳ ಸ್ವಭಾವ ಮತ್ತು ಮೂಲ:–** ದ್ವಿತೀಯ ಅಂಕಿ ಅಂಶಗಳ ಅಹಾಯದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.ಈ ದ್ವಿತೀಯ ದತ್ತಾಂಶಗಳನ್ನು ನಿಯತಕಾಲಿಕೆಗಳು, ವರದಿಗಳು, ದಿನಪತ್ರಿಕೆಗಳು ಮತ್ತು ಅಂತರ್ಜಾಲದ ಸಹಾಯದಿಂದ ಪಡೆದು ಕೊಳ್ಳಲಾಗಿದೆ.

ಭಾರತದ ಸಮಗ್ರ ದೇಶೀಯ ಉತ್ಪನ್ನ, ಉಳಿತಾಯದ ದರ, ಉತ್ಪಾದನೆ, ಬೆಲೆಗಳು, ಬಾಹ್ಯ ವಲಯ, ಹಣ ಮತ್ತು ಸಾಲಗಳಲ್ಲಿ ಉತ್ತಮ ಫಲಿತಾಂಶ ಕಂಡು ಬಂದಿದೆ.ಈ ಅಧ್ಯಯನದಲ್ಲಿ ಕೃಷಿ ಉತ್ಪಾದನೆ, ಕೃಷಿ ರಫ್ತುಗಳು, ಕೃಷಿ ಆಮದುಗಳು, ಅನುಭೋಗ, ಆಹಾರ ಧಾನ್ಯ ಉತ್ಪಾದನೆ, ಮಾರುಕಟ್ಟೆಯ ಮಾರಾಟಗಳು, ಧಾನ್ಯಗಳ ಮಾರಾಟ, ಒಟ್ಟು ಉತ್ಪಾದನೆ, ಪ್ರತೀ ಉತ್ಪನ್ನದ ಸರಾಸರಿ ಮೊತ್ತ ಕೃಷಿ ಉತ್ಪನ್ನಗಳನ್ನು ಸ್ವೀಕರಿಸಿರುವಿಕೆ ಮತ್ತು ನೀಡಿರುವ ಬೆಲೆಯನ್ನು ಅಧ್ಯಯನ ಮಾಡಿ ವಿಶ್ಲೇಷಿಸಲಾಗಿದೆ.

ರಾಜ್ಯ ಸರ್ಕಾರವು ಯಶಸ್ವಿಯುತವಾಗಿ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಯಿಂದ ಹಲವು ಫಲಾನುಭವಿಗಳಿಗೆ ಅನುಕೂಲಗಳಾಗಿವೆ. ಈ ಯೋಜನೆಯಿಂದಾಗಿ ಬಡತನದ ರೇಖೆಯ ಕೆಳಗಿರುವ ಜನರು ಆಹಾರವನ್ನು ಸೇವಿಸಿ ತಮ್ಮ ಜೀವಷ್ನ್ನು ನಿರ್ವಹಿಸಬಹುದಾಗಿದೆ.

**ಪರಿಚಯ:–** ಸುಸ್ಥಿರ ಅಭಿವೃದ್ಧಿಯು ಮಾನವ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವ ಒಂದು ಪ್ರಕ್ರಿಯೆಯಾಗಿದ್ದು, ಜನಾಂಗದ ಮುಂದುವರಿಕೆಗೆ ಅಗತ್ಯವಾದ ಸ್ವಾಭಾವಿಕ ಸಂಪನ್ಮೂಲಗಳನ್ನು ಮತ್ತು ಅನುಕೂಲವಾದ ಪರಿಸರಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವುದಾಗಿದೆ.ಒಟ್ಟಾರೆ ಆರ್ಥಿಕತೆಗೆ ಮತ್ತು ಸಮಾಜಕ್ಕೆ ಅಗತ್ಯವಿರುವ ಅನುಕೂಲಕರವಾದ ಸ್ವಾಭಾವಿಕ ಸಂಪನ್ಮೂಲಗಳನ್ನು ಮತ್ತು ಉತ್ತಮವಾದ ಪರಿಸರವನ್ನು ಒದಗಿಸುವುದಾಗಿದೆ.ಆಧುನಿಕ ಸುಸ್ಥಿರ ಅಭಿವೃದ್ಧಿಯು ೧೯೮೭ರ ಬ್ರಂಟ್ ಲ್ಯಾಂಡ್ ವರದಿಯನ್ನಾಧಿರಿಸಿದೆ.ಇದು ಪ್ರಮುಖವಾಗಿ ಸುಸ್ಥಿರ ಅರಣ್ಯ ನಿರ್ವಹಣೆ ಮತ್ತು ೨೦ನೇ ಶತಮಾನಕ್ಕೆ ಸಂಬಂಧಿಸಿದಂತೆ ಇದು ಅಗತ್ಯವಾಗಿರುವ ಪರಿಸರದ ಕಾಳಜಿಯೇ ಆಗಿದೆ.

ಸುಸ್ಥಿರ ಅಭಿವೃದ್ಧಿಯು ಆಹಾರದ ನೀಡಿಕೆ ಮತ್ತು ವ್ಯಕ್ತಿಗಳಿಗೆ ಲಭ್ಯವಾಗುವ ಆಹಾರಕ್ಕೆ ಸಂಬಂಧಿಸಿದ್ದಾಗಿದೆ.ಇತಿಹಾಸದ ಉದ್ದಕ್ಕೂ ಆಹಾರ ಭದ್ರತೆಗೆ ಸಂಬಂಧಿಸಿದ ಕಾಳಜಿಯೇ ಆಗಿದೆ. ಪ್ರಚೀನ ಚೈನಾ ಮತ್ತು ಪ್ರಾಚೀನ ಈಜಿಪ್ಟ್ ಈ ಎರಡು ರಾಷ್ಟ್ರಗಳು ಬರಗಾಲದ (ಕ್ಷಾಮ) ಸಮಯದಲ್ಲಿ ಸಂಗ್ರಹದಿಂದ (ದಾಸ್ತಾನಿನಿಂದ) ಆಹಾರವನ್ನು ಒದಗಿಸಿದ ನಿದರ್ಶನವಿದೆ.೧೯೭೪ರ ವಿಶ್ವ ಆಹಾರ ವಿಚಾರ ಸಂಕಿರಣವು ಆಹಾರ ಭದ್ರತೆಯನ್ನು ವ್ಯಾಖ್ಯಾನಿಸುವಲ್ಲಿ ನೀಡಿಕೆಗೆ ಹೆಚ್ಚಿನ ಒತ್ತು ನೀಡಿದೆ.ಆಹಾರ ಭದ್ರತೆಯು ವಿಶ್ವಕ್ಕೆ ಅಗತ್ಯವಾದ ಮೂಲಭೂತ ಆಹಾರ ಪದಾರ್ಥಗಳನ್ನು ಒದಗಿಸುವುದೇ ಆಗಿದೆ.ಇದರ ಉದ್ದೇಶ ಆಹಾರ ಅನುಭೋಗದ ವಿಸ್ತರಣೆ ಮತ್ತು ಉತ್ಪಾದನೆ ಮತ್ತು ಬೆಲೆಗಳಲ್ಲಿ ಏರಿಕೆಗಳನ್ನು ತಡೆಯುವುದೇ ಆಗಿದೆ. ಆನಂತರದ ವ್ಯಾಖ್ಯೆಗಳು ಬೇಡಿಕೆಗೆ ಮಹತ್ವವನ್ನು ನೀಡಿದೆ.

೧೯೯೬ರ ವಿಶ್ವ ಆಹಾರ ಸಮ್ಮೇಳನ ಅಂತಿಮ ವರದಿಯ ಪ್ರಕಾರ ಆಹಾರ ಭದ್ರತೆಯನ್ನು ವಿವರಿಸುವುದಾಗಿದೆ.ಎಲ್ಲಾ ಜನರಿಗೆ, ಎಲ್ಲಾ ಕಾಲದಲ್ಲಿ ಭೌತಿಕ ಮತ್ತು ಆರ್ಥಿಕ ಅನುಕೂಲಕ್ಕಾಗಿ, ಕ್ರಿಯಾಶೀಲ ಮತ್ತು ಆರೋಗ್ಯಯುತ ಜೀವನಕ್ಕಾಗಿ ಅಗತ್ಯವಿರುವ ಸಮತೋಲನ ಆಹಾರ ಮತ್ತು ಆಹಾರ ಆದ್ಯತೆಗಳಾಗಿವೆ.

ಯುನೈಟೆಡ್ ಸ್ಟೇಟ್ಸ್ ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರ್ ಆಹಾರ ಭದ್ರತೆಯನ್ನು ಈ ರೀತಿ ವ್ಯಾಖ್ಯಾನಿಸಲಾಗಿದೆ.ಅಗತ್ಯವಾಗಿ ಬೇಕಿರುವ

ಪೌಷ್ಠಿಕಾಂಶವುಳ್ಳ ಆಹಾರವನ್ನು ಸಾಮಾಜಿಕವಾಗಿ ಒಪ್ಪಿಗೆಯಾಗುವ ರೀತಿಯಲ್ಲಿ ಒದಗಿಸುವುದಾಗಿದೆ.

**ಸಂಶೋಧನಾ ವಿಧಾನ:–**

**ಈ ಅಧ್ಯಯನದ ಉದ್ದೇಶಗಳು:–** ಸಮಗ್ರ ದೇಶೀಯ ಉತ್ಪನ್ನ, ಉಳಿತಾಯದ ದರ, ಉತ್ಪಾದನೆ, ಬೆಲೆಗಳು, ಬಾಹ್ಯವಲಯ, ಹಣ ಮತ್ತು ಸಾಲ, ವಿವಿಧ ವರ್ಷಗಳಲ್ಲಿ ಭಾರತದ ಆರ್ಥಿಕತೆಯ ಬೆಳವಣಿಗೆಯ ದರ, ಕೃಷಿ ಉತ್ಪಾದನೆ, ಕೃಷಿ ರಫ್ತುಗಳು, ಭಾರತದ ಆರ್ಥಿಕತೆಯ ಕೃಷಿ ಆಮದುಗಳು, ಅನುಭೋಗದ ಆಹಾರ ಸಾಮಗ್ರಿಯ ಉತ್ಪಾದನೆ, ಮಾರುಕಟ್ಟೆಯ ಮಾರಾಟ, ಬೆಳೆಗಳ ಮಾರಾಟ, ಒಟ್ಟು ಉತ್ಪಾದನೆ, ಪ್ರತಿ ಕೃಷಿ ಉತ್ಪನ್ನದ ಸರಾಸಿ ಮೊತ್ತ ಮತ್ತು ಕೃಷಿ ಉತ್ಪನ್ನಕ್ಕೆ ನೀಡಿದ ಬೆಲೆ ಇತ್ಯಾದಿಗಳನ್ನು ವಿಶ್ಲೇಷಿಸುವುದಾಗಿದೆ.

**ಅಂಕಿ ಅಂಶಗಳ ಸ್ವಭಾವ ಮತ್ತು ಮೂಲ:–** ದ್ವಿತೀಯ ಅಂಕಿ ಅಂಶಗಳ ಅಹಾಯದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.ಈ ದ್ವಿತೀಯ ದತ್ತಾಂಶಗಳನ್ನು ನಿಯತಕಾಲಿಕೆಗಳು, ವರದಿಗಳು, ದಿನಪತ್ರಿಕೆಗಳು ಮತ್ತು ಅಂತರ್ಜಾಲದ ಸಹಾಯದಿಂದ ಪಡೆದು ಕೊಳ್ಳಲಾಗಿದೆ.

ಭಾರತದ ಆರ್ಥಿಕತೆಯ ಪಟ್ಟಿ–೧:–
ಸಮಗ್ರ ದೇಶೀಯ ಉತ್ಪನ್ನ, ಉಳಿತಾಯದ ದರ, ಉತ್ಪಾದನೆ, ಬೆಲೆಗಳು, ಬಾಹ್ಯವಲಯ, ಹಣ ಮತ್ತು ಸಾಲ, ರಾಜ್ಯಕೋಶ ಸೂಚಿಗಳು, ಜನಸಂಖ್ಯೆ

| ದತ್ತಾಂಶಗಳು ಮತ್ತು ಪ್ರಮುಖ ಅಂಶಗಳು | ಘಟಕಗಳು | ೨೦೦೫–೦೬ | ೨೦೦೬–೦೭ | ೨೦೦೭–೦೮ | ೨೦೦೯–೧೦ | ೨೦೧೦–೧೧ |
|---|---|---|---|---|---|---|
| ಸಮಗ್ರ ದೇಶೀಯ ಉತ್ಪನ್ನ (ಚಾಲ್ತಿ ಮಾರುಕಟ್ಟೆ ಬೆಲೆ) | ಕೋಟಿಗಳಲ್ಲಿ | ೩೬೯೨೪೮೫ | ೪೨೯೩೬೭೨ | ೪೯೮೬೪೨೬ | ೫೫೮೨೬೨೩ ಪಿ.ಇ | ೬೫೫೦೨೭೧ ಎ.ಇ |
| ಬೆಳವಣಿಗೆ ದರ | ಶೇಕಡಾ | ೧೩–೯ | ೧೬–೩ | ೧೬–೧ | | |

ಭಾರತದ ಆರ್ಥಿಕತೆ ಪಟ್ಟಿ–೧
ಸಮಗ್ರ ದೇಶೀಯ ಉತ್ಪನ್ನ, ಉಳಿತಾಯದ ದರ, ಉತ್ಪಾದನೆ, ಬೆಲೆಗಳು, ಬಾಹ್ಯ ವಲಯ, ಹಣ ಮತ್ತು ಸಾಲ, ರಾಜ್ಯಕೋಶ ಸೂಚಿಗಳು, ಜನಸಂಖ್ಯೆ:–

| ದತ್ತಾಂಶಗಳು | ಘಟಕಗಳು | ೨೦೦೫–೦೬ | ೨೦೦೬–೦೭ | ೨೦೦೭–೦೮ | ೨೦೦೮–೦೯ | ೨೦೦೯–೧೦ | ೨೦೧೦–೧೧ |
|---|---|---|---|---|---|---|---|
| ಸಮಗ್ರ ದೇಶೀಯ ಉತ್ಪನ್ನ | ಕೋಟಿ ರೂಗಳಲ್ಲಿ | ೩೬೯೨೪೮೫ | ೪೨೯೩೬೭೨ | ೪೯೮೬೪೨೬ | ೫೫೮೨೬೨೩ ಪಿ.ಇ | ೬೫೫೦೨೭೧ ಕ್ಯೂ.ಇ | ೭೮೭೭೯೪೭ ಎ.ಇ |
| ಬೆಳವಣಿಗೆ ದರ | ಶೇ ವಾರು | ೧೩.೯ | ೧೬.೩ | ೧೬.೧ | ೧೨.೦ | ೧೭.೩ | ೨೦.೩ |
| ಸಮಗ್ರ ದೇಶೀಯ ಉತ್ಪನ್ನ (ಉತ್ಪಾದ ನಾಂಗ ವೆಚ್ಚ) ೨೦೦೪–೦೫ ಬೆಲೆಗಳಲ್ಲಿ | ಕೋಟಿ ರೂಗಳಲ್ಲಿ | ೩೨೫೪೨೧೬ | ೩೫೬೬೦೧೧ | ೩೮೯೮೯೫೮ | ೪೧೬೨೫೦೯ ಪಿ.ಇ | ೪೪೯೩೭೪೩ ಕ್ಯೂ.ಇ | ೪೮೭೯೨೩೨ ಎ.ಇ |
| ಬೆಳವಣಿಗೆ ದರ | ಶೇ ವಾರು | ೯.೫ | ೯.೬ | ೯.೩ | ೬.೮ | ೮.೦ | ೮.೬ |
| ಉಳಿತಾಯದ ದರ | ಸಮಗ್ರ ದೇಶೀಯ ಉತ್ಪನ್ನದ ಶೇ ವಾರು | ೩೩.೫ | ೩೪.೬ | ೩೬.೯ | ೩೨.೨ | ೩೩.೭ | ಎನ್.ಎ |
| ಬಂಡವಾಳ ಸಂರಚನೆ (ದರ) | ಸಮಗ್ರ ದೇಶೀಯ ಉತ್ಪನ್ನದ ಶೇ ವಾರು | ೩೪.೭ | ೩೫.೭ | ೩೮.೧ | ೩೪.೫ | ೩೬.೫ | ಎನ್.ಎ |

| | | | | | | | |
|---|---|---|---|---|---|---|---|
| ತಲಾ ನಿವ್ವಳ ರಾಷ್ಟ್ರೀಯಆದಾಯ | | | | | | | |
| ಸ್ತುತ ಬೆಲೆಗಳಲ್ಲಿ | ರೂ | ೨೭೧೨೩ | ೩೧೧೯೮ | ೩೫೮೨೦ | ೪೦೬೦೫ | ೪೬೪೯೨ | ೫೪೫೨೭ |
| ಉತ್ಪಾದನೆ | ಮಿಲಿಯನ್ ಟನ್‌ಗಳಲ್ಲಿ | ೨೦೮.೬ | ೨೧೭.೩ | ೨೩೦.೮ | ೨೩೪.೫ | ೨೧೯.೧ | ೨೩೨.೧ |
| ಕೈಗಾರಿಕಾ ಉತ್ಪಾದನಾ ಬೆಳೆವಣಿಗೆಯ ಸೂಚಿ | ಶೇ. ವಾರು | ೮.೦ | ೧೧.೯ | ೮.೭ | ೩.೨ | ೧೦.೫ | ಎನ್.ಎ |
| ವಿದುಚ್ಛಕ್ತಿ ಉತ್ಪಾದನೆ ಬೆಳವಣಿಗೆ | ಶೇ. ವಾರು | ೫.೨ | ೭.೨ | ೬.೪ | ೨.೮ | ೬.೦ | ಎನ್.ಎ |

| ದತ್ತಾಂಶಗಳು (ಬೆಲೆಗಳು) | ಘಟಕಗಳು | ೨೦೦೫–೦೬ | ೨೦೦೬–೦೭ | ೨೦೦೭–೦೮ | ೨೦೦೮–೦೯ | ೨೦೦೯–೧೦ | ೨೦೧೦–೧೧ |
|---|---|---|---|---|---|---|---|
| ಹಣದುಬ್ಬರ (ಸಗಟು ಬೆಲೆ ಸೂಚ್ಯಾಂಕ) (೧೨ ತಿಂಗಳುಗಳ ಸರಾಸರಿ | ಶೇಕಡವಾರು ಬದಲಾವಣೆ | ೪.೩ | ೬.೫ | ೪.೮ | ೮.೦ | ೩.೬ | ೯.೪ ಡಿ |
| ಹಣದುಬ್ಬರ(ಓಟ) (ಸರಾಸರಿ) | ಶೇಕಡವಾರು ಬದಲಾವಣೆ | ೪.೪ | ೬.೭ | ೬.೨ | ೯.೧ | ೧೨.೪ | ೧೧.೦ ಡಿ |
| ಬ್ಯಾಹ ವಲಯ ರಫ್ತು ಬೆಳವಣಿಗೆ (ಯು.ಎಸ್ ಡಾಲರ್‌ಗಳಲ್ಲಿ) | ಶೇಕಡವಾರು ಬದಲಾವಣೆ | ೨೩.೪ | ೨೨.೬ | ೨೯.೦ | ೧೩.೬ | –೩.೫ | ೨೯.೫ ಇ |
| ಆಮದುಬೆಳವಣಿಗೆ (ಯು.ಎಸ್ ಡಾಲರ್‌ಗಳಲ್ಲಿ) | ಶೇ.ವಾರು | ೩೩.೮ | ೨೪.೫ | ೩೫.೫ | ೨೦.೭ | –೫.೦ | ೧೯.೦ ಇ |
| ಚಾಲ್ತಿ ಖಾತೆಯ ಬದಲಾವಣೆ ಸಮಗ್ರ ದೇಶೀಯ ಉತ್ಪನ್ನ | ಶೇ ವಾರು | –೧.೨ | –೧.೦ | –೧.೩ | –೨.೩ | –೨.೮ | ಎನ್.ಎ |
| ವಿದೇಶೀವಿನಿಮಯ ಮೀಸಲುಗಳು | ಯು.ಎಸ್‌ಡಾಲರ್ ಗಳಲ್ಲಿ ಬಿಲಿಯನ್ | ೧೫೧.೬ | ೧೯೯.೨ | ೩೦೯.೭ | ೨೫೨.೦ | ೨೭೯.೧ | ೨೯೭.೩ ಎಫ್ |
| ಸರಾಸರಿವಿನಿಮಯ ದರ | ರೂ ಯು.ಎಸ್ ಡಾಲರ್‌ಗಳಲ್ಲಿ | ೪೪.೨೭ | ೪೫.೨೫ | ೪೦.೨೬ | ೪೫.೯೯ | ೪೫.೯೯ | ೪೫.೬೮ ಜಿ |
| ಹಣ ಮತ್ತು ಸಾಲ ವಿಶಾಲವಾದ ಹಣ ವಾರ್ಷಿಕ | ಶೇ.ವಾರು | ೧೬.೯ | ೨೧.೭ | ೨೧.೪ | ೧೯.೩ | ೧೬.೮ | ೧೬.೫ ಹೆಚ್ |
| ಶೆಡ್ಯುಲ್ ವಾಣಿಜ್ಯ ಬ್ಯಾಂಕು ಸಾಲ (ಬೆಳವಣಿಗೆ ದರ) | ಶೇಕಡವಾರು ಬದಲಾವಣೆ | ೩೦.೮ | ೨೮.೧ | ೨೨.೩ | ೧೭.೫ | ೧೬.೯ | ೨೪.೪ ಹೆಚ್ |

| | | | | | | | |
|---|---|---|---|---|---|---|---|
| ಕೋಶೀಯಸೂಚಿ ಗಳು (ಕೇಂದ್ರ) | ಶೇ.ವಾರು | ೪.೦ | ೩.೮ | ೨.೫ | ೬.೦ | ೬.೩ | ೪.೮ |
| ಆದಾಯ ಕೊರತೆ | ಸಮಗ್ರ ದೇಶೀಯ ಉತ್ಪನ್ನದಶೇ.ವಾರು | ೨.೫ | ೧.೯ | ೧.೧ | ೪.೫ | ೫.೧ | ೩.೫ |
| ಪ್ರಾಥಮಿಕ ಕೊರತೆ | ಶೇ.ವಾರು ಸಮಗ್ರ ದೇಶೀಯ ಉತ್ಪನ್ನ | ೦.೪ | –೦.೨ | –೦.೯ | ೨.೬ | ೩.೧ | ೧.೭ |
| ಜನಸಂಖ್ಯೆ | ಮಿಲಿಯನ್ | ೧೧೦೬ | ೧೧೨೨ | ೧೧೩೮ | ೧೧೫೪ | ೧೧೭೦ | ೧೧೮೬ |
| ವರ್ಷಕ್ಕೆ ಪ್ರೊಜೆಕ್ಟೆಡ್ ಜನಸಂಖ್ಯೆ ಅಕ್ಟೋಬರ್‌ಗೆ | | ೨೦೦೫ | ೨೦೦೬ | ೨೦೦೭ | ೨೦೦೮ | ೨೦೦೯ | ೨೦೧೦ |

ಈ ಮೇಲಿನ ಪಟ್ಟಿಯಿಂದ ತಿಳಿದು ಬರುವಂತೆ ೨೦೦೫–೦೬ ರಿಂದ ೨೦೧೦ರವರೆಗೆ ಸಮಗ್ರ ದೇಶೀಯ ಉತ್ಪನ್ನ (ಚಾಲ್ತಿ ಮಾರುಕಟ್ಟೆ ಬೆಲೆ), ಬೆಳವಣಿಗೆ ದರ, ಸಮಗ್ರ ದೇಶೀಯ ಮಾರುಕಟ್ಟೆ, (ಉತ್ಪಾದನಾಂಗ ವೆಚ್ಚ), ತಲಾ ನಿವ್ವಳ ರಾಷ್ಟ್ರೀಯ ಆದಾಯ, ಆಹಾರದ ಬೆಳೆಯ ಉತ್ಪಾದನೆಯಲ್ಲಿ ಹೆಚ್ಚಳವಾಯಿತು.ಬೆಳವಣಿಗೆ ದರವು ಇಳಿಕೆಯಾಯಿತು.ಉಳಿತಾಯದ ದರ, ಬಂಡವಾಳ ಸಂರಚನೆ ೨೦೦೫–೦೬ ರಿಂದ ೨೦೦೯–೧೦ರವರೆಗೆ ಏರಿಕೆಯಾಯಿತು.ಕೈಗಾರಿಕಾ ಉತ್ಪಾದನೆಯ ಸೂಚಿಯು, ವಿದ್ಯುಚ್ಛಕ್ತಿ ಉತ್ಪಾದನೆ ೨೦೦೫–೦೬ ರಿಂದ ೨೦೦೯–೧೦ ರವರೆಗೆ ಹೆಚ್ಚಳವಾಯಿತು (ಏರಿಕೆಯಾಯಿತು).ರಫ್ತು ಬೆಳವಣಿಗೆಯು ೨೦೦೫–೦೬ ರಿಂದ ೨೦೧೦–೧೧ ರವರೆಗೆ ಏರಿಕೆಯಾಯಿತು. ಆಮದು ಬೆಳವಣಿಗೆಯು ಇಳಿಕೆಯಾಯಿತು.ವಿಸ್ತಾರ ಹಣ ವಾರ್ಷಿಕ ಇಳಿಕೆಯಾಯಿತು.ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್ ಸಾಲ ಇಳಿಕೆಯಾಯಿತು.

ಪಟ್ಟಿ–೨
ಬೇರೆ ಬೇರೆ ವರ್ಷಗಳಲ್ಲಿ ಭಾರತದ ಆರ್ಥಿಕತೆಯ ಬೆಳವಣಿಗೆ ದರ

| ವರ್ಷ | ಬೆಳವಣಿಗೆ (ನೈಜ) ಶೇ. ವಾರು | ವರ್ಷ | ಬೆಳವಣಿಗೆ (ನೈಜ) ಶೇ. ವಾರು |
|---|---|---|---|
| ೨೦೦೦ | ೫.೬ | ೨೦೧೩ | ೫.೧ |
| ೨೦೦೧ | ೬.೦ | ೨೦೧೪ | ೬.೯ |
| ೨೦೦೨ | ೪.೩ | ೨೦೧೫ | ೭.೫ |
| ೨೦೦೩ | ೮.೩ | – | – |
| ೨೦೦೪ | ೬.೨ | – | – |
| ೨೦೦೫ | ೮.೪ | – | – |
| ೨೦೦೬ | ೯.೨ | – | – |
| ೨೦೦೭ | ೯.೦ | – | – |
| ೨೦೦೮ | ೭.೪ | – | – |
| ೨೦೦೯ | ೭.೪ | – | – |
| ೨೦೧೦ | ೭.೧ | – | – |
| ೨೦೧೧ | ೬.೮ | – | – |
| ೨೦೧೨ | ೬.೫ | – | – |

೨೦೦೦ ರಿಂದ ೨೦೧೫ ರವರೆಗೆ ನೈಜ ಬೆಳವಣಿಗೆ ದರವು ಏರಿಳಿತಕ್ಕೊಳಗಾಗಿದೆ.೨೦೦೬ ರಲ್ಲಿ ನೈಜ ಬೆಳವಣಿಗೆ ದರವು ಅತೀ ಹೆಚ್ಚಾಗಿ ಏರಿಕೆಯಾಗಿದೆ.

ಅಂದಾಜು:ಮೂಲ ಆರ್ಥಿಕ ಸಮೀಕ್ಷೆ, ವಿವಿಧ ಸಂಚಿಕೆಗಳು

ಭಾರತದ ಆರ್ಥಿಕತೆಯ ಪಟ್ಟಿ–೩
ಕೃಷಿ ಉತ್ಪಾದನೆ, ಕೃಷಿ ರಫ್ತುಗಳು, ಕೃಷಿ ಆಮದುಗಳು

| ಕೃಷಿ ಉತ್ಪಾದನೆ | ೨೦೦೭ | ೨೦೦೮ | ೨೦೦೯ | ೨೦೧೦ |
|---|---|---|---|---|
| ಅಕ್ಕಿ ಉತ್ಪಾದನೆ | ೧೪೪೫೭೦೦೦೦ ಮೆಟ್ರಿಕಟನ್ | ೧೪೮೦೩೬೦೦೦ ಮೆಟ್ರಿಕಟನ್ | ೧೩೫೬೭೩೦೦೦ ಮೆಟ್ರಿಕಟನ್ | ೧೪೩೯೬೩೦೦೦ ಮೆಟ್ರಿಕಟನ್ |
| ಗೋಧಿ ಉತ್ಪಾದನೆ | ೭೫೮೦೬೭೦೦ ಮೆಟ್ರಿಕಟನ್ | ೭೮೫೭೦೨೦೦ ಮೆಟ್ರಿಕಟನ್ | ೮೦೬೮೦೦೦೦ ಮೆಟ್ರಿಕಟನ್ | ೮೦೭೧೦೦೦೦ ಮೆಟ್ರಿಕಟನ್ |

| | | | | |
|---|---|---|---|---|
| ಮೆಕ್ಕೆ ಜೋಳ ಉತ್ಪಾದನೆ | ೧೮೯೫೫೪೦೦ ಮೆಟ್ರಿಕಟನ್ | ೧೯೭೩೧೪೦೦ ಮೆಟ್ರಿಕಟನ್ | ೧೬೭೧೯೫೦೦ ಮೆಟ್ರಿಕಟನ್ | ೨೧೭೨೫೮೦೦ ಮೆಟ್ರಿಕಟನ್ |
| ಸೋಯಾಬೀನ್ ಉತ್ಪಾದನೆ | ೧೯೬೮೦೦೦೦ ಮೆಟ್ರಿಕಟನ್ | ೯೦೫೦೦೦ ಮೆಟ್ರಿಕಟನ್ | ೧೦೨೧೭೦೦೦ ಮೆಟ್ರಿಕಟನ್ | ೧೨೭೩೬೦೦೦ ಮೆಟ್ರಿಕಟನ್ |
| ಕೃಷಿ ರಫ್ತುಗಳು | ೨೦೦೬ | ೨೦೦೭ | ೨೦೦೮ | ೨೦೦೯ |
| ಅಕ್ಕಿ ರಫ್ತುಗಳು | ೪೭೩೯೮೭೨ ಮೆಟ್ರಿಕಟನ್ | ೬೪೫೦೦೬೨ ಮೆಟ್ರಿಕಟನ್ | ೨೪೮೪೨೭೫ ಮೆಟ್ರಿಕಟನ್ | ೨೧೪೮೦೪೦ ಮೆಟ್ರಿಕಟನ್ |
| ಗೋಧಿ ರಫ್ತು | ೪೬೬೩೩ ಮೆಟ್ರಿಕಟನ್ | ೨೩೭೦೦ ಮೆಟ್ರಿಕಟನ್ | ೧೧೨೧ ಮೆಟ್ರಿಕಟನ್ | ೨೬೦೦೮೨೧ ಮೆಟ್ರಿಕಟನ್ |
| ಮೆಕ್ಕೆಜೋಳ ರಫ್ತು | ೬೩೭೪೧೧ ಮೆಟ್ರಿಕಟನ್ | ೨೭೨೭೭೧೫ ಮೆಟ್ರಿಕಟನ್ | ೩೫೩೭೩೦೩ ಮೆಟ್ರಿಕಟನ್ | ೨೬೦೦೮೨೧ ಮೆಟ್ರಿಕಟನ್ |
| ಸೋಯಾಬೀನ್ ಉತ್ಪಾದನೆ | ೩೫೨೮ ಮೆಟ್ರಿಕಟನ್ | ೭೪೬೦ ಮೆಟ್ರಿಕಟನ್ | ೪೪೮೩೮ ಮೆಟ್ರಿಕಟನ್ | ೨೪೬೯ ಮೆಟ್ರಿಕಟನ್ |
| ಕೃಷಿ ಉತ್ಪಾದನೆ ಆಮದುಗಳು | ೨೦೦೫ ಮೆಟ್ರಿಕಟನ್ | ೨೦೦೬ ಮೆಟ್ರಿಕಟನ್ | ೨೦೦೭ ಮೆಟ್ರಿಕಟನ್ | ೨೦೦೮ ಮೆಟ್ರಿಕಟನ್ |
| ಅಕ್ಕಿ ಆಮದುಗಳು | ೨೫೬೦೦ ಮೆಟ್ರಿಕಟನ್ | ೧೬೨೦೦ ಮೆಟ್ರಿಕಟನ್ | ೧೪೫೦೦ ಮೆಟ್ರಿಕಟನ್ | ೮೫೦೦ ಮೆಟ್ರಿಕಟನ್ |
| ಗೋಧಿ ಆಮದುಗಳು | ೩೭೭೬೦ ಮೆಟ್ರಿಕಟನ್ | ೬೦೭೯೫೬೦ ಮೆಟ್ರಿಕಟನ್ | ೨೬೭೭೮೩೦ ಮೆಟ್ರಿಕಟನ್ | ೨೦೦೦ ಮೆಟ್ರಿಕಟನ್ |
| ಮೆಕ್ಕೆಜೋಳ ಆಮದುಗಳು | ೧೬೩೨ ಮೆಟ್ರಿಕಟನ್ | ೨೦೦೦ ಮೆಟ್ರಿಕಟನ್ | ೪೨೭೩ ಮೆಟ್ರಿಕಟನ್ | ೭೨೮೦ ಮೆಟ್ರಿಕಟನ್ |
| ಸೋಯಾಬೀನ್ ಆಮದುಗಳು | ೨೦೦ ಮೆಟ್ರಿಕಟನ್ | ೩೩೬೦೦ ಮೆಟ್ರಿಕಟನ್ | ೨೯೦೦ ಮೆಟ್ರಿಕಟನ್ | ೩೮೦೦ ಮೆಟ್ರಿಕಟನ್ |

ಈ ಮೇಲಿನ ಪಟ್ಟಿಯಿಂದ ತಿಳಿದು ಬರುವಂತೆ ಕೃಷಿ ಉತ್ಪಾದನೆಗೆ ಸಂಬಂಧಿಸಿದಂತೆ ಅಕ್ಕಿ ಉತ್ಪಾದನೆ, ಗೋಧಿ ಉತ್ಪಾದನೆ ೨೦೦೭ ರಿಂದ ೨೦೧೧ ರವರೆಗೆ ಇಳಿಕೆಯಾಗಿದೆ.ಮೆಕ್ಕಜೋಳಸ ಉತ್ಪಾದನೆ, ಸೋಯಾಬೀನ್ ಉತ್ಪಾದನೆ ೨೦೦೭ ರಿಂದ ೨೦೧೧ ರವರೆಗೆ ಏರಿಕೆಯಾಗಿದೆ.ಅಕ್ಕಿ ರಫ್ತು ಮತ್ತು ಗೋಧಿ ರಫ್ತು ಇಳಿಕೆಯಾಗಿದೆ. ಮೆಕ್ಕೆಜೋಳ ರಫ್ತು ೨೦೦೭ ರಿಂದ ೨೦೧೧ ರವರೆಗೆ ಏರಿಕೆಯಾಗಿದೆ. ಅಕ್ಕಿ ಆಮದುಗಳು, ಗೋಧಿ ಆಮದುಗಳು ೨೦೦೭ ರಿಂದ ೨೦೧೧ ರವರೆಗೆ ಇಳಿಕೆಯಾಗಿದೆ.ಮೆಕ್ಕೆಜೋಳ, ಸೋಯಾಬೀನ್ ಆಮದುಗಳು ಏರಿಕೆಯಾಗಿವೆ.

೧೯೯೧ರ ಆರ್ಥಿಕ ಉದಾರೀಕರಣವು ಭಾರತದ ಸಮಗ್ರ ದೇಶೀಯ ಉತ್ಪನ್ನವು ಅತೀ ಹೆಚ್ಚಿನ ದರಕ್ಕೆ ಏರಿಕೆಯಾಗಿದೆ.

**ಅನ್ನ ಭಾಗ್ಯ ಯೋಜನೆ:–** ಕಾಂಗ್ರೆಸ್ ರಾಜ್ಯ ಸರ್ಕಾರವು ಅನ್ನ ಭಾಗ್ಯ ಯೋಜನೆಯನ್ನು ಬುಧವಾರದಿಂದ ಜಾರಿಗೆ ತಂದಿದ್ದು ಪ್ರತೀ ತಿಂಗಳಿಗೆ ೧ ರೂ ಗೆ ೧ ಕೆ.ಜಿ ಅಕ್ಕಿಯಂತೆ ೩೦ ಕೆ.ಜಿ ಅಕ್ಕಿಯನ್ನು ಬಡತನದ ರೇಖೆಗಿಂತ ಕೆಳಗಿರುವವರಿಗೆ ವಿತರಿಸಲಾಯಿತು. ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಜೂನ್ ೧೩ ರಂದು ಪ್ರಮಾಣ ವಚನ ಸ್ವೀಕರಿಸದ ನಂತರ ಈ ಯೋಜನೆಯನ್ನು ಘೋಷಿಸಿದರು.ಸರ್ಕಾರವು ಪ್ರತೀ ವರ್ಷ ರೂ ೪,೩೦೦ ಕೋಟಿಗಳನ್ನು ಈ ಯೋಜನೆಯ ಮೇಲೆ ವೆಚ್ಚ ಮಾಡುತ್ತಿದೆ.ಈ ಯೋಜನೆಯು ರಾಜ್ಯ ಸರ್ಕಾರದ ಆರ್ಥಿಕತೆಗೆ ಹೊರೆಯಾಗಿದೆ ಎಂದು ಪರಿಣತರು ಅಭಿಪ್ರಾಯ ಪಟ್ಟಿದ್ದಾರೆ.

ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಜೂನ್‌ನಲ್ಲಿ ಯೋಜಿಸಲಾಗಿತ್ತು.ಆದರೆ ಇದು ನೀಡಿಕೆಯ ತೊಂದರೆಗಳಿಂದಾಗಿ ವಿಳಂಬವಾಯಿತು.

ರಾಜ್ಯ ಆಹಾರ, ನಾಗರೀಕ ಸರಬರಾಜು ಮತ್ತು ಅನುಭೋಗದ ಸಚಿವರು ಶ್ರೀ ದಿನೇಶ್ ಗುಂಡೂರಾವ್‌ರವರು ಹೇಳಿದಂತೆ ಕೇಂದ್ರವು ಹೆಚ್ಚುವರಿ ೨೦,೦೦೦ ಟನ್‌ಗಳನ್ನು ಪ್ರತೀ ತಿಂಗಳು ನೀಡುವುದು. ರಾಜ್ಯವು ಛತ್ತೀಸ್‌ಗಢ್ ಸರ್ಕಾರದೊಂದಿಗೆ ೨೫,೦೦೦ ಟನ್ ಹೊಂದಲು ಸಹಿ ಹಾಕಿದೆ.ಕರ್ನಾಟಕವು ದೇಶದ ಅಕ್ಕಿ ಕಣಜದಿಂದ ರೂ ೨೩.೩೦ ರೂಗಳಿಗೆ ಸಾರಿಗೆ ಮತ್ತು ಇತರೆ ವೆಚ್ಚಗಳೂ ಸೇರಿಸಿಕೊಂಡು ರೂ ೨೭ ಕೆ.ಜಿ ಏರಿಕೆಯಾದ ದರದಲ್ಲಿ ಕೊಂಡು ಕೊಂಡಿದೆ.೮೭ ಲಕ್ಷ ಬಡತನ ರೇಖೆಗಿಂತ ಕೆಳಗಿರುವ ಜನರು ಮತ್ತು ೧೧ ಲಕ್ಷ ಅಂತ್ಯೋದಯ ಅನ್ನ ಯೋಜನೆಯ ಫಲಾನುಭವಿಗಳು ಈ ಯೋಜನೆಯಡಿಯಲ್ಲಿ ಬರುತ್ತಾರೆ.ಒಬ್ಬರು ಸದಸ್ಯ ಗುರುತಿನ ಚೀಟಿದಾರರು ಪ್ರತೀ ತಿಂಗಳಿಗೆ ೧೦ ಕೆ.ಜಿ, ಇಬ್ಬರಿಗೆ ೨೦ ಕೆ.ಜಿ ಮತ್ತು ಮೂವರಿಗೆ ಗರಿಷ್ಠ ೩೦ ಕೆ.ಜಿ ದೊರೆಯುವುದು.

ಪ್ರಸ್ತುತ ವರ್ಷದಲ್ಲಿ ಈ ಯೋಜನೆಯ ಯಶಸ್ವಿ ಕಾರ್ಯಾಚರಣೆಗೆ (ಅನುಷ್ಠಾನಗೊಳಿಸಲು) ಸರ್ಕಾರಕ್ಕೆ ರೂ ೪,೨೦೦ ಕೋಟಿಯ ಅಗತ್ಯವಿದೆ.

ಪಟ್ಟಿ–೪
ಆಹಾರ ಧಾನ್ಯಗಳ ಉತ್ಪಾದನೆ, ಅನುಭೋಗ ಮತ್ತು ಬೆಳಗಳ ಮಾರಾಟ ಅನುಭೋಗ (ಕ್ವಿಂಟಾಲ್‌ಗಳಲ್ಲಿ) ಮಾರುಕಟ್ಟೆ ಮಾರಾಟಗಳು, ಒಟ್ಟು ಉತ್ಪಾದನೆ (ಕ್ವಿಂಟಾಲ್‌ಗಳಲ್ಲಿ)

| ಬೆಳೆ | ಗೃಹ ಅನುಭೋಗ (ಕ್ವಿಂಟಾಲ್‌ಗಳಲ್ಲಿ) | ಶೇ.ವಾರು | ಮಾರುಕಟ್ಟೆ ಮಾರಾಟಗಳು | ಶೇ.ವಾರು | ಒಟ್ಟು ಉತ್ಪಾದನೆ (ಕ್ವಿಂಟಾಲ್‌ಗಳಲ್ಲಿ) |
|---|---|---|---|---|---|
| ಅಕ್ಕಿ | ೨೪೩ | ೩೦.೫೨ | ೫೫೩ | ೬೯.೪೫ | ೭೯೬.೨ |
| ರಾಗಿ | ೨೭೫ | ೯೬.೬೯ | ೯ | ೩.೧೬ | ೨೮೪.೪ |
| ಗೋಧಿ | ೩೩ | ೩೧.೨೮ | ೭೨.೫ | ೬೮.೭೨ | ೧೦೫.೫ |
| ಬಿಳಿ ಜೋಳ | ೩೬೫.೫ | ೨೯.೮೨ | ೮೩೯ | ೭.೧೮ | ೧೧೯೫.೫ |

ಈ ಮೇಲಿನ ಪಟ್ಟಿಯಿಂದ ತಿಳಿದು ಬರುವಂತೆ ಗೃಹ ಅನುಭೋಗವು ಬಿಳಿ ಜೋಳಕ್ಕೆ ಸಂಬಂಧಿಸಿದಂತೆ ಅತೀ ಹೆಚ್ಚಿನದಾಗಿದೆ.ಅನಂತರದ ಸ್ಥಾನದಲ್ಲಿ ರಾಗಿ, ಅಕ್ಕಿ ಮತ್ತು ಗೋಧಿ ಈ ಅನುಕ್ರಮದಲ್ಲಿವೆ. ಬಿಳಿ ಜೋಳದ ಮಾರುಕಟ್ಟೆ ಮಾರಾಟಗಳು ಅತೀ ಹೆಚ್ಚಿನದಾಗಿದೆ.ಅನಂತರದ ಸ್ಥಾನದಲ್ಲಿ ರಾಗಿ, ಅಕ್ಕಿ ಮತ್ತು ಗೋಧಿ ಈ ಅನುಕ್ರಮದಲ್ಲಿವೆ. ಬಿಳಿಜೋಳದ ಒಟ್ಟು ಉತ್ಪಾದನೆಯು ಅತೀ ಹೆಚ್ಚಿನದಾಗಿ ದಾಖಲಾಗಿದೆ.ಅನಂತರದ ಸ್ಥಾನದಲ್ಲಿ ಅಕ್ಕಿ, ರಾಗಿ ಮತ್ತು ಗೋಧಿಗಳು ಇವೆ.

ಪಟ್ಟಿ–೫
ಕೃಷಿ ಉತ್ಪನ್ನದ ಸರಾಸರಿ ಮೌಲ್ಯ ಮತ್ತು ಪ್ರತೀ ಕಿಲೋ ಗ್ರಾಂಗೆ ನೀಡಿದ ಬೆಲೆ:–

| ಸರಕುಗಳು | ಸ್ವೀಕರಿಸಲಾದ ಪ್ರಮಾಣಗಳು (ಬಡತನದ ರೇಖೆಗಿಂತ ಕೆಳಗಿರುವವರು ಕೆ.ಜಿಗಳಲ್ಲಿ) | ಸ್ವೀಕರಿಸಲಾದ ಪ್ರಮಾಣಗಳು (ಕೆ.ಜಿಗಳಲ್ಲಿ) | ಪ್ರತೀ ಲೀಟರ್‌ಗೆ ನೀಡಲಾದ ಬೆಲೆ(ರೂ ಗಳಲ್ಲಿ) |
|---|---|---|---|
| ಅಕ್ಕಿ | ೨೨.೧೩ | ೨೮.೦೭ | ೧.೦೦ |
| ಗೋಧಿ | ೬.೧೫ | ೪.೭೬ | ೧.೦೭ |
| ರಾಗಿ | ೧.೭೨ | ೧.೮೩ | ೧.೦೫ |
| ಜೋವರ್ | ೦.೦೦ | ೦.೦೦ | ೦.೦೦ |
| ಒಟ್ಟು | ೩೦ | ೩೪.೬೭ | ೩೦ |
| ಸಕ್ಕರೆ | ೧.೦೧ | ೧.೦೧ | ೧೪.೬೮ |
| ಸೀಮೆ ಎಣ್ಣೆ | ೩.೧೭ | ೩.೧೭ | ೧೮.೭೨ |

ಈ ಮೇಲಿನ ಪಟ್ಟಿಯಲ್ಲಿ ತೋರಿಸಿರುವಂತೆ, ಸ್ವೀಕರಿಸಲಾದ ಅಕ್ಕಿಯ ಪ್ರಮಾಣವು ಅತೀ ಹೆಚ್ಚಿನದಾಗಿ ದಾಖಲಾಗಿದೆ.ಅನಂತರದ ಸ್ಥಾನದಲ್ಲಿ ಗೋಧಿ, ಸೀಮೆಎಣ್ಣೆ, ಸಕ್ಕರೆ ಈ ಕ್ರಮಾನುಗತಿಯಲ್ಲಿದೆ. ಸೀಮೆಎಣ್ಣೆಗೆ ವಿಧಿಸಲಾದ ಬೆಲೆಯು ಅತೀ ಹೆಚ್ಚಿನದಾಗಿದೆ. ಅನಂತರದ ಸ್ಥಾನದಲ್ಲಿ ಸಕ್ಕರೆ, ಗೋಧಿ, ರಾಗಿ ಮತ್ತು ಅಕ್ಕಿ ಈ ಕ್ರಮಾನುಗತಿಯಲ್ಲಿವೆ.

**ಮುಕ್ತಾಯ:–** ಭಾರತದ ಸಮಗ್ರ ದೇಶೀಯ ಉತ್ಪನ್ನ, ಉಫಿತಾಯದ ದರ, ಉತ್ಪಾದನೆ, ಬೆಲೆಗಳು, ಬಾಹ್ಯ ವಲಯ, ಹಣ ಮತ್ತು ಸಾಲಗಳಲ್ಲಿ ಉತ್ತಮ ಫಲಿತಾಂಶ ಕಂಡು ಬಂದಿದೆ.ಈ ಅಧ್ಯಯನ ದಲ್ಲಿ ಕೃಷಿ ಉತ್ಪಾದನೆ, ಕೃಷಿ ರಫ್ತುಗಳು, ಕೃಷಿ ಆಮದುಗಳು, ಅನುಭೋಗ, ಆಹಾರ ಧಾನ್ಯ ಉತ್ಪಾದನೆ, ಮಾರುಕಟ್ಟೆಯ ಮಾರಾ ಟಗಳು, ಧಾನ್ಯಗಳ ಮಾರಾಟ, ಒಟ್ಟು ಉತ್ಪಾದನೆ, ಪ್ರತೀ ಉತ್ಪನ್ನದ ಸರಾಸರಿ ಮೊತ್ತ ಕೃಷಿ ಉತ್ಪನ್ನಗಳನ್ನು ಸ್ವೀಕರಿಸಿರುವಿಕೆ ಮತ್ತು ನೀಡಿರುವ ಬೆಲೆಯನ್ನು ಅಧ್ಯಯನ ಮಾಡಿ ವಿಶ್ಲೇಷಿಸಲಾಗಿದೆ.

ರಾಜ್ಯ ಸರ್ಕಾರವು ಯಶಸ್ವಿಯುತವಾಗಿ ಅನ್ನಭಾಗ್ಯ ಯೋಜನೆ ಯನ್ನು ಜಾರಿಗೆ ತಂದಿದ್ದು, ಈ ಯೋಜನೆಯಿಂದ ಹಲವು ಫಲಾನುಭವಿಗಳಿಗೆ ಅನುಕೂಲಗಳಾಗಿವೆ. ಈ ಯೋಜನೆಯಿಂದಾಗಿ ಬಡತನದ ರೇಖೆಯ ಕೆಳಗಿರುವ ಜನರು ಆಹಾರವನ್ನು ಸೇವಿಸಿ ತಮ್ಮ ಜೀವನ್ನು ನಿರ್ವಹಿಸಬಹುದಾಗಿದೆ.

**ಆಧಾರ ಗ್ರಂಥಗಳು:–**

೧. ದಿ ಫ್ಯೂಚರ್ ವಿ ವಾಂಟ್: ಔಟ್‌ಕಮ್ ಡಾಂಕ್ಯುಮೆಂಟ್ ಆಫ್ ದಿ ಯುನೈಟೆಡ್ ನೇಷನ್ಸ್ ಕಾನ್‌ಫೆರೆನ್ಸ್ ಆನ್ ಸಸ್‌ಟೇನಮಲ್ ಡೆವಲಪ್‌ಮೆಂಟ್, ರಿಟ್ರೀವಡ್ ಫೆಬ್ರವರಿ ೨೬, ೨೦೧೩.

೨. ಗಾಡ್ ಫ್ರೇ.ಹೆಚ್.ಸಿ. ಬೆಡ್ಡಿಂಗ್‌ಟನ್, ಜೆ.ಆರ್.ಕ್ರೂಟ್. ಐ.ಆರ್: ಹಡ್ಡಾದ್.ಎಲ್: ಲಾರೆನ್ಸ್ ಡಿ.ಮಿರ್.ಜೆಎಫ್, ಪ್ರೆಟ್ಟಿ, ಜೆ; ರಾಬಿನ್‌ಸನ್.ಎಸ್: ಥೋಮಸ್.ಎಸ್.ಎಮ್ ಟೌಲ್‌ಮಿನ್.ಸಿ (ಜನವರಿ ೨೮, ೨೦೧೦), "ಫುಡ್ ಸೆಕ್ಯುರಿಟಿ; ದಿ ಚ್ಯಾಲೆಂಜ್ ಆಫ್ ಫೀಡಿಂಗ್ ೯ ಬಿಲಿಯನ್ ಪೀಪಲ್", ಸೈನ್ಸ್ ೩೨೭ (೫೯೬೭), ೮೧೨–೮೧೮.

೩. ಟ್ವೀಟನ್ ಲೂಥರ್ (೧೯೯೦): " ದಿ ಎಕನಾಮಿಕ್ಸ್ ಆಫ್ ಗ್ಲೋಬಲ್ ಫುಡ್ ಸೆಕ್ಯುರಿಟಿ; ರಿವ್ಯೂ ಆಫ್ ಅಗ್ರಿಕಲ್ಚರ್ ಎಕನಾಮಿಕ್ಸ್" ೨೧(೨): ೪೭೩–೪೮೮, ಜೆ.ಎಸ್.ಡಿ.ಓ.ಆರ್ ೧೩೪೯೯೨.

೪. ಫುಡ್ ಪ್ರೈಸ್ ಅನ್‌ರೆಸ್ಟ್ ಎರೌಂಡ್ ದಿ ವರ್ಲ್ಡ್, ಸೆಪ್ಟೆಂಬರ್ ೨೦೦೭– ಏಪ್ರಿಲ್ ೨೦೦೮; ಅರ್ಥ್ ಪಾಲಿಸಿ. ಒ.ಆರ್.ಜಿ ರಿಟ್ರೀವಡ್ ನವೆಂಬರ್ ೧೩, ೨೦೧೧.

೫. ಮ್ಯಾಕ್ಸ್‌ವೆಲ್, ಡೇನಿಯಲ್.ಜಿ (೧೯೯೬); ಮೆಜರಿಂಗ್ ಫುಡ್ ಇನ್ ಸೆಕ್ಯೂರಿಟಿ ದಿ ಫ್ರೀಕ್ವೆನ್ಸಿ ೨೧(೩): ೨೯೧–೩೦೩, ಡಿ ೨ ಐ ೧೦, ೧೦೧೬/೦೩೦೬–೯೧೯೨(೯೬)೦೦೦೦೫–ಎಕ್ಸ್

೬. ಬ್ಯಾರೆಟ್.ಸಿ.ಬಿ (೧೧ ಫೆಬ್ರವರಿ ೨೦೧೦): "ಮೆಜರಿಂಗ್ ಫುಡ್–ಇನ್‌ಸೆಕ್ಯೂರಿಟಿ", ಸೈನ್ಸ್ ೩೨೭ (೫೯೬೭), ೮೨೫, ಡಿ೨ ಐ:೧೦೧೧೨೬/ಸೈನ್ಸ್ ೧೧೮೨೭೬೮.

೭. ಬ್ಯಾಕ್‌ಗ್ರೌಂಡ್ ಪೇಜ್, ಯುನೈಟೆಡ್ ನೇಷನ್ಸ್ ಮಿಲೇನಿಯಮ್ ಡೆವಲಪ್‌ಮೆಂಟ್ ಗೋಲ್ಸ್, ವೆಬ್‌ಸೈಟ್, ರಿಟ್ರೀವ್ಡ್ ೪ ಫೆಬ್ರವರಿ ೨೦೧೩.

೮. ಓಪೆನ್ ವರ್ಕಿಂಗ್ ಗ್ರೂಪ್ ಪ್ರೊ ಪೋಸಲ್ ಫಾರ್ ಸಸ್‌ಟೇನಬಲ್ ಡೆವಲಪ್‌ಮೆಂಟ್ ಗೋಲ್ಸ್; ಯು.ಎನ್, ಸಸ್‌ಟೇನಬಲ್ ಡೆವಲಪ್‌ಮೆಂಟ್ ನಾಲೆಡ್ಜ್ ಪ್ಲಾಟ್‌ಫಾರ್ಮ್, ರಿಟ್ರೀವಡ್ ೧, ಮೇ ೨೦೧೫.

೯. ಸಿಂಗರ್ ಎಚ್.ಡಬ್ಲ್ಯೂ (೧೯೯೭): ಎ ಗ್ಲೋಬಲ್ ವ್ಯೂ ಆಫ್ ಫುಡ್ ಸೆಕ್ಯೂರಿಟಿ, ಅಗ್ರಿಕಲ್ಚರ್+ರೂರಲ್ ಡೆವಲಪ್‌ಮೆಂಟ್, ೪:೩.೬ ಟೆಕ್ನಿಕಲ್ ಸೆಂಟರ್ ಫಾರ್ ಅಗ್ರಿಕಲ್ಚರಲ್ ಎಂಡ್ ರೂರೆಲ್ ಡೆವೆಲಪ್‌ಮೆಂಟ್ (ಸಿ.ಡಿ.ಎ)

೧೦. ಗ್ಯಾರಿ ಬಿಕೆಲ್, ಮಾರ್ಕ್‌ನಾರ್ಡ್, ಕ್ರಿಸ್ಟೋಫರ್ ಪ್ರೈಸ್: ವಿಲಿಯಮ್ ಹ್ಯಾ ಮಿಲ್ಟನ್, ಜಾನ್ ತುಕ್ (೨೦೦೦), ಗೈಡ್ ಟು ಮೆಜರಿಂಗ್ ಹೌಸ್‌ಹೋಲ್ಡ್ ಫುಡ್ ಸೆಕ್ಯೂರಿಟಿ (ಪಿಡಿಎಫ್), ಯುಎಸ್‌ಡಿಎ, ಎ ಫುಡ್ ಅಂಡ್ ನ್ಯೂಟ್ರಿಷನ್ ಸರ್ವೀಸ್ ರಿಟ್ರೀವ್ಡ್) ನವೆಂಬರ್ ೨೦೧೩.

## ಸುಸ್ಥಿರ ರಾಷ್ಟ್ರದೆಡೆಗಿನ ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ: ಆಹಾರ ಸುರಕ್ಷಿತ ಕಾಯಿದೆ,2013 ಹಾಗೂ ಸಂಸ್ಥೆಗಳ ಕಾಯಿದೆ,2013

* ಮಿಸ್.ರಮ್ಯಶ್ರೀ, ** ಡಾ.ಈಶ್ವರ ಪಿ
*ಸಂಶೋಧನಾ ವಿದ್ಯಾರ್ಥಿನಿ, (ಯು.ಜಿ.ಸಿ ಎಸ್.ಆರ್.ಫ್), ** ಸಂಶೋಧನಾ ಮಾರ್ಗದರ್ಶಕ, ವಾಣಿಜ್ಯ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

ಅಹಾರ ಸುರಕ್ಷಿತ ಕಾಯಿದೆ, 2013 ಹಾಗೂ ಸಂಸ್ಥೆಗಳ ಕಾಯಿದೆ, 2013. ಈ ಎರಡೂ ಕಾಯಿದೆಗಳಲ್ಲಿರುವ ಶಾಸನಗಳು ತಮ್ಮದೇ ಆದ ಅತ್ಯುನ್ನತ ಉದ್ದೇಶಗಳನ್ನು ಹೊಂದಿವೆ. ಸಂಸ್ಥೆಗಳ ಕಾಯಿದೆ,2013 ಪ್ರಕಾರ ಸಂಸ್ಥೆಗಳು ತಮ್ಮ ಲಾಭಾಂಶದ ಶೇಕಡವಾರು ಎರಡರಷ್ಟನ್ನು ಸಮಾಜದ ಪರೋಪಕಾರಕ್ಕಾಗಿ ವಿನಿಯೋಗಿಸಬೇಕೆಂದು ಕಡ್ಡಾಯವಾಗಿ ಜಾರಿಗೊಳಿಸಿದೆ. ಹಾಗೇ ಅಹಾರ ಸುರಕ್ಷಿತ ಕಾಯಿದೆ, 2013ರ ಮುಖ್ಯ ಉದ್ದೇಶ ಉತ್ತಮ ಆರೋಗ್ಯ ಸ್ಥಿತಿ ಹಾಗೂ ಯಾರೊಬ್ಬರು ಹಸಿವಿನಿಂದ ನರಳದಿರುವಿಕೆಯಾಗಿದೆ. ಕೃಷಿಯ ಉತ್ಪಾದನೆ, ನೈಸರ್ಗಿಕ ಸಂಪನ್ಮೂಲಗಳ ಸಮತೋಲನ ಉದಾ: ಭೂಮಿ, ನೀರು, ಹವಮಾನ ಮತ್ತು ಪರಿಸರ ಸಂರಕ್ಷಣೆಗಳೊಂದಿಗೆ ಆಹಾರ ಸುರಕ್ಷತೆಯ ವಿಚಾರಗಳು ಸೇರಿಹೋಗಿವೆ. ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆಯು ಕೃಷಿಯ ಕ್ಷೇತ್ರದಲ್ಲಿ ಸಂಸ್ಥೆಗಳ ಪ್ರಗತಿಪರ ಪಾತ್ರ ಹಾಗೂ ಸರಕಾರದ ಯೋಜನೆಗಳ ಸಹಕಾರಗಳು ಒಟ್ಟಾಗಿ ಸುಭದ್ರ ರಾಷ್ಟ್ರವನ್ನು ನಿರ್ಮಿಸಲು ಹಾಗೂ ಜನರ ಜೀವನೋಪಾಯದ ಮಟ್ಟವನ್ನು ಏರಿಸುವಲ್ಲಿ ಛಾಪನ್ನು ಮೂಡಿಸಿದೆ. ಅಲ್ಲದೇ, ನಮ್ಮ ದೇಶದಲ್ಲಿ ಸ್ವಯಂಪ್ರೇರಿತವಾಗಿ ಸಂಸ್ಥೆಗಳು ಮತ್ತು ನಾಗರೀಕರು ಮೇಲಿನ ಕಾಯಿದೆ–ಶಾಸನಗಳು ಜಾರಿಗೊಳಿಸುವ ಮುಂಚಿತವಾಗಿಯೇ ಅಳವಡಿಸಿಕೊಂಡಿದ್ದರು. ಈಗ ಅದರ ಶಾಸನಬದ್ಧ ರೂಪ ನಿರ್ಮಾಣಗೊಂಡಿರುವುದನ್ನು ನೋಡಬಹುದಾಗಿದೆ. ಆದುದರಿಂದ ಒಂದು ಸುಸ್ಥಿರ ರಾಷ್ಟ್ರ ನಿರ್ಮಾಣಕ್ಕೆ ಮತ್ತು ಸಮಸ್ತ ಸಣ್ಣ ಹಿಡುವಳಿಯ ಕೃಷಿ ಜನತೆಯ ಉದ್ಧಾರಕ್ಕೆ ಅಹಾರ ಸುರಕ್ಷಿತ ಕಾಯಿದೆ ಹಾಗೂ ಸಂಸ್ಥೆಗಳ ಕಾಯಿದೆಗಳ ಪಾತ್ರ ಬಹು ದೊಡ್ಡದು. ಈ ಉದ್ದೇಶದ ನಿಟ್ಟಿನಲ್ಲಿ ಎರಡು ಕಾಯಿದೆಗಳಲ್ಲಿ ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆಯ ಅಂಶಗಳನ್ನು ಎತ್ತಿ ಹಿಡಿಯುವ ಧ್ಯೇಯವನ್ನು ಪ್ರಸ್ತುತ ಲೇಖನದಲ್ಲಿ ಉಲ್ಲೇಖಿಸಲಾಗಿದೆ.

***ಮುಖ್ಯ ಪದಗಳು: ಕೃಷಿ, ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ, ಸಂಸ್ಥೆಗಳ ಕಾಯಿದೆ, ಆಹಾರ ಸುರಕ್ಷಿತ ಕಾಯಿದೆ ಹಾಗೂ ಸುಸ್ಥಿರ.***

**ಪರಿಚಯ:**

*"ಈ ಜಗತ್ತಿನಲ್ಲಿ ಯಾರೊಬ್ಬರೂ ಹಸಿವಿನಿಂದ ಬಳಲಬಾರದಷ್ಟು ಬೇಕಾದಷ್ಟಿದೆ. ಆದರೂ ಸರಿಸುಮಾರು ಒಂದು ಬಿಲಿಯನ್‌ನಷ್ಟು ಜನತೆ ತಿನ್ನಲಿಕ್ಕಾಗುತ್ತಿಲ್ಲ. ನನ್ನ ಜೀವಮಾನದಲ್ಲಿ ಎಲ್ಲೆಡೆಯೂ ಹಸಿವಿನ ಅಂತ್ಯವಾಗಿರುವುದನ್ನು ನಾನು ನೋಡಬೇಕು."*

-ಬಾನ್-ಕಿ-ಮೂನ್, ವಿಶ್ವಸಂಸ್ಥೆ ಅಧ್ಯಕ್ಷ

ನಮ್ಮ ದೇಶ ಭಾರತವು ವಿಶ್ವದಲ್ಲೆಡೆ ಆದರ್ಶಕತೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ದೇಶದ ನಾನಾ ಕಾಯಿದೆ ಮತ್ತು ಶಾಸನಗಳಿಂದ ಅಭಿವೃದ್ಧಿ ಶೀಲ ದೇಶದಿಂದ ಅಭಿವೃದ್ಧಿ ಹೊಂದಿದ ದೇಶವನ್ನಾಗಿಸಿ ಭಾರತ ದೇಶವನ್ನು ಒಂದು ಸುಸ್ಥಿರ ರಾಷ್ಟ್ರವನ್ನಾಗಿಸಬೇಕು. ರಾಮ-ರಾಜ್ಯದ ಪರಿಕಲ್ಪನೆಯೊಂದಿಗೆ ಕುಬೇರ ರಾಜ್ಯದ ಪರಿಕಲ್ಪನೆಯನ್ನು ಬಿಂಬಿಸುವ ಮಾದರಿ ದೇಶ ಭಾರತವಾಗಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಎಲ್ಲೆಲ್ಲಿಯೂ ಅರಾಜಕತೆ, ಬಡತನ, ನಿರುದ್ಯೋಗ, ಆಹಾರದಲ್ಲಿ ಅಪೌಷ್ಟಿಕತೆ, ಸರಕಾರದ ಸವಲತ್ತುಗಳು

**ಅಧ್ಯಯನದ ಅವಶ್ಯಕತೆಗಳು:** ಇಂದು ಈ ಜಗತ್ತಿನಲ್ಲಿ ನಾವು ಆಹಾರ ಸಂರಕ್ಷಣೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಒಂದು ಕಡೆ ಪೌಷ್ಟಿಕಾಂಶಗಳ ಕೊರತೆ, ಅತಿಯಾದ ಸೇವನೆ ಹೆಚ್ಚುತ್ತಿರುವ ಆಹಾರದ ದರಗಳು, ಜನಸಂಖ್ಯಾ ಹೆಚ್ಚುವರಿ, ತೀವ್ರ ಜೀರ್ಣಕ್ರಿಯಾವೃತ್ತಿ, ಕೃಷಿಉತ್ಪನ್ನಗಳಿಗಿರುವ ಆತಂಕಗಳು ಮತ್ತು ಆಹಾರದ ಹೊಸ

ಸಂಶೋಧನೆಯಲ್ಲಿರುವ ಇಳುವರಿ. ಇನ್ನೊಂದೆಡೆ ಹೆಚ್ಚುತ್ತಿರುವ ಬಡ ಹಳ್ಳಿಯ ಜನತೆಯ ಅಂದರೆ ರೈತರ ಆತ್ಮಹತ್ಯೆ.

ಹಸಿರು ಕ್ರಾಂತಿಯಿಂದ ಆಹಾರ ಉತ್ಪಾದನೆಯ ಹೆಗ್ಗಳಿಕೆಯು ದೇಶದ ನಾನಾ ಭಾಗಗಳಲ್ಲಿ ಪಸರಿಸಿದೆ. ಆಹಾರ ಸಂರಕ್ಷಣೆ ಮತ್ತು ಬಡತನದ ನಿರ್ಮೂಲನ ಮಾಡಲು ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ ಮಾತ್ರ ಸಾಲದು ಜೊತೆಯಲ್ಲಿ ಸರ್ಕಾರದ ಆಹಾರ ಸಂರಕ್ಷಣೆಯ ಕಾನೂನುಗಳು ಮತ್ತು ಸರ್ಕಾರಿ ಖಾಸಗಿ ಸಂಸ್ಥೆಗಳ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಸಹಕಾರದ ಅವಶ್ಯಕತೆಯಿದೆ.

**ಅಧ್ಯಯನದ ಉದ್ದೇಶಗಳು:-**

**ಪ್ರತಿಯೊಂದು ಅಧ್ಯಯನವು ತನ್ನದೇ ಉದ್ದೇಶಗಳನ್ನು ಅಳವಡಿಸಿಕೊಂಡಿರುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:**

- ಸುಸ್ಥಿರ ದೇಶದ ವಿಶ್ಲೇಷಣೆಯನ್ನು ಮಾಡುವುದು.
- ಆಹಾರ ಸಂರಕ್ಷಣೆ/ಸುರಕ್ಷಿತ/ಭದ್ರತಾ ಕಾಯಿದೆ ೨೦೧೩ರ ಪ್ರಾಮುಖ್ಯತೆಯನ್ನು ಅರ್ಥೈಸಿಕೊಳ್ಳುವುದು.
- ಸಂಸ್ಥೆಗಳ ಕಾಯಿದೆ, ೨೦೧೩ರ ಅಡಿಯಲ್ಲಿರುವ ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆಯನ್ನು ಅರಿತುಕೊಳ್ಳುವುದು.
- ಆಹಾರ ಸಂರಕ್ಷಣೆ ಕಾಯಿದೆ, ೨೦೧೩ ಹಾಗೂ ಸಂಸ್ಥೆಗಳ ಕಾಯಿದೆ, ೨೦೧೩ ರಲ್ಲಿರುವ ಸಾಮಾನ್ಯ ಹೊಂದಾಣಿಕೆಯ ಅಂಶಗಳನ್ನು ಒಂದು ಮಾದರಿ ನಕ್ಷೆಯ ಮೂಲಕ ವಿವರಿಸುವುದು.
- ಅಧ್ಯಯನದ ಆಧಾರದ ಮೇಲೆ ಕೆಲವು ಪ್ರಮುಖ ಅಂಶಗಳನ್ನು ಕಂಡುಹಿಡಿಯುವುದು ಹಾಗೂ ಸಲಹೆಗಳನ್ನು ಒದಗಿಸುವುದು.

**ರೈತರು ಮತ್ತು ಕೃಷಿ:**

**ರೈತರೆಂದರೆ** ತಮ್ಮನ್ನು ತಾವು ಸಂಪೂರ್ಣವಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಮತ್ತು ಅದರಿಂದ ಬಂದ ಆದಾಯದಿಂದ ಜೀವನ ನಡೆಸುವುದು.

ಆಹಾರ ಸರಪಳಿಯಲ್ಲಿ ಕೃಷಿಯ-ಕಚ್ಚಾವಸ್ತುಗಳು ಮತ್ತು ಆಹಾರ ಕಾರ್ಯಗಾರಿಗಳಲ್ಲಿ ಆಹಾರ ಸುರಕ್ಷತೆಯನ್ನು ಹೆಚ್ಚಿಸುವುದು ಅತೀ ಮುಖ್ಯ ಪಾತ್ರವಹಿಸುತ್ತದೆ. ಹಲವು ಆಹಾರ ಕಾರ್ಯಕಾರಿ ಸಂಸ್ಥೆಗಳು, ಬೀಜ ಉತ್ಪಾದಿಸುವ ಕಂಪೆನಿಗಳು ಹಾಗೂ ಕೃಷಿ ಉತ್ಪನ್ನಕ್ಕೆ ಬೇಕಾಗಿರುವ ಸಂಸ್ಥೆಗಳು ತಮ್ಮ ಸಂಸ್ಥೆಗಳಲ್ಲಿ ಸಾಮಾಜಿಕ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿ-ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ.

**ಆಹಾರ ಸಂರಕ್ಷಣೆ ಕಾಯಿದೆ, ೨೦೧೩:**

***"ಮಾನವನ ಜೀವನ-ಚಕ್ರದ ಪ್ರವೃತ್ತಿಯಲ್ಲಿ, ಒಂದು ರೀತಿಯ ವಿಧಾನದ ಉತ್ತಮ ಗುಣಮಟ್ಟದ ಆಹಾರವನ್ನು ಒದಗಿಸುವುದು. ಸಾಕಷ್ಟು ಮೌಲ್ಯವಿರುವ ಪ್ರಮಾಣದಲ್ಲಿ, ನ್ಯಾಯಯುತ ಬೆಲೆಗಳಲ್ಲಿ ಜನಜೀವನದ ಜೀವನೋಪಾಯದ ಮಟ್ಟವನ್ನು ಹೆಚ್ಚಿಸಲು ಮಾನವನ ಜೀವನ ಚಕ್ರದ ಪ್ರವೃತ್ತಿಯಲ್ಲಿ; ಒಂದು ವಿಧಾನದ ಉತ್ತಮ ಆಹಾರವನ್ನು ಮತ್ತು ಪೌಷ್ಠಿಕಾಂಶದ ಸುಭದ್ರತೆಯನ್ನು ಒದಗಿಸುವುದು ಮತ್ತು ಅದರ ಜೊತೆಗಿನ ವಿಷಯುಗಳನ್ನು ಸೇರ್ಪಡಿಸುವುದು ಅಥವಾ ಕೋಣಿಸುವುದು.*** ☐

**- ದೇಶೀಯ ಆಹಾರ ಸುರಕ್ಷಿತ ಕಾಯಿದೆ, ೧೦ ಸೆಪ್ಟೆಂಬರ್, ೨೦೧೩**

**ಆಹಾರದ ಸಂರಕ್ಷತೆ/ ಆಹಾರ ಸುಭದ್ರ ಕಾಯಿದೆಯ ಐದನೇ ಜುಲೈ, ೨೦೧೩ರಂದು ಜಾರಿಗೊಳಿಸಲಾಯಿತು. ಈ ಕಾಯಿದೆಯಡಿಯಲ್ಲಿರುವ ಅಂಶಗಳೆಂದರೆ:-** ಅಂಗನವಾಡಿ, ಆಹಾರ ಧವಸಧಾನ್ಯಗಳ ಸಂಗ್ರಹ, ಅರ್ಹಮನೆಮಳಿಗೆಗಳು, ನ್ಯಾಯಯುತ ಬೆಲೆ ಅಂಗಡಿ, ಧವಸಧಾನ್ಯಗಳು,ಆಹಾರ ಸಂರಕ್ಷಣೆ ಮತ್ತು ಸುಭದ್ರತೆ ಭತ್ಯೆ ಸ್ಥಳೀಯ ಅಧಿಕಾರ, ಸಬ್ಸಿಡಿ, ಅಂಗ-ವಿಕಲ ಚೇತನರು, ಪಡಿತರ ಚೀಟಿ, ಗ್ರಾಮೀಣ ಪ್ರದೇಶ, ಹಿರಿಯ ನಾಗರಿಕರು, ರಾಜ್ಯ ಕಮೀಷನ್, ತನಿಖಾ ಪರಿವೀಕ್ಷಕರು, ದಿನನಿತ್ಯದ ಅಗತ್ಯವಿರುವ ಸರಕುಗಳು ಕಾಯಿದೆ, ೧೯೫೫ ಇತ್ಯಾದಿ.

**ಆಹಾರದ ಸಂರಕ್ಷತೆ/ ಆಹಾರ ಸುಭದ್ರ ಕಾಯಿದೆಯಲ್ಲಿ ಒದಗಿಸಲಾಗಿರುವ ಪ್ರಮುಖಾಂಶಗಳು:-**

೧. **ಗುರುತಿಸಲ್ಪಟ್ಟ ಸಾರ್ವಜನಿಕ ವಿತರಣಾ ವಿಧಾನದ ವ್ಯಾಪ್ತಿ ಮತ್ತು ಒಳಪಡಿಕೆ:** ಇದರ ಪ್ರಕಾರ ೭೫%ರಷ್ಟು ಗ್ರಾಮೀಣ ಜನಸಂಖ್ಯೆ ಮತ್ತು ೫೦% ನಗರ ಜನಸಂಖ್ಯೆಯನ್ನು ಒಳಪಟ್ಟು ಒಬ್ಬ ವ್ಯಕ್ತಿಗೆ ೫ ಕೆ.ಜಿ. ಅಕ್ಕಿಯನ್ನು ಒಂದು ತಿಂಗಳಮಟ್ಟಿಗಾಗಿ ಒದಗಿಸಲಾಗುತ್ತಿದೆ.

೨. **ಸಬ್ಸಿಡಿ ಬೆಲೆ** ೧೯೪೬ ನ ಅಡಿಯಲ್ಲಿ ಮತ್ತು ಅದರ ಪುನರ್ವತನೆ . ಈ ಕಾಯಿದೆ ಜಾರಿಗೊಂಡ ದಿನದಿಂದ ೩ ವರ್ಷದವರೆಗೆ '. ೩/ '. ೨/ '.೧ ಒಂದು ಕೆ.ಜಿ.ಗೆ ಅಕ್ಕಿ, ಗೋಧಿ ಹಾಗೂ ಬೇಳೆಕಾಳುಗಳಿಗೆ ಕ್ರಮಾನುಸಾರವಾಗಿ ಸಬ್ಸಿಡಿ ದರದಲ್ಲಿ ದವಸಧಾನ್ಯಗಳನ್ನು ಒದಗಿಸುವುದು.

೩. **ಅರ್ಹ** ಮನೆಮಳಿಗೆಯನ್ನು ಗುರುತಿಸುವುದು. ಹಾಗೂ ಅರ್ಹ ಮನೆಯವರಿಗೆ ಸಬ್ಸಿಡಿ ದರದಲ್ಲಿ ಆಹಾರಧಾನ್ಯಗಳನ್ನು ಪಡೆಯಲು ಸಾರ್ವಜನಿಕ ವಿತರಣೆ ವಿಧಾನದಡಿಯಲ್ಲಿ ಅವಕಾಶ ಕಲ್ಪಿಸಿಕೊಡುವುದು.

೪. **ಮಹಿಳೆ ಮತ್ತು ಮಕ್ಕಳ ಪೌಷ್ಠಿಕಾಂಶದ** ಬೆಂಬಲ ೬ ತಿಂಗಳಿಂದ -೧೪ ವರ್ಷದವರೆಗಿನ ಮಕ್ಕಳಿಗೆ ೧೫೨೬೩೬೫೨೬೬ .ಮಕ್ಕಳ ಕ್ಷೇಮಾಭ್ಯುದಯ ಸೇವೆಗಳು ಮತ್ತು ೨೫೬೩೨೫೬೬ ಮಧ್ಯಾಹ್ನದ ಬಿಸಿಯೂಟದ ಯೋಜನೆ. ಪೌಷ್ಠಿಕಾಂಶವನ್ನು ಕೊಡುವುದು ಗರ್ಭಿಣಿ ಮಹಿಳೆಯರಿಗೆ ಹಾಗೂ ಪೌಷ್ಠಿಕಾಂಶದ ನ್ಯೂನತೆಯಿಂದ ಬಳಲುತ್ತಿರುವವರಿಗೆ ಪೌಷ್ಠಿಕಾಂಶವನ್ನು ಒದಗಿಸುವುದು.

೫. ತಾಯ್ತನದ ಉಪಲಬ್ಧತೆ '. ೬೦೦೦ಕ್ಕಿಂತ ಕಡಿಮೆಯಿರದ ಮೊತ್ತವನ್ನು ಒದಗಿಸುವುದು.

೬. ಮಹೀಳಾ ಸಬಲೀಕರಣ: ಇದರ ಸವಲತ್ತನ್ನು ಪಡೆಯಲು ಮನೆಯ ಯಜಮಾನಿಕೆ ಮನೆಯ ಹಿರಿಯ ಹೆಂಗಸು ಅಂದರೆ ೧೮ ವರ್ಷ ಮೇಲ್ಪಟ್ಟ ಮಹಿಳೆಯ ಅಧೀನದಲ್ಲಿರಬೇಕು.

೭. ಕುಂದು ಕೊರತೆಗಳ ಗ್ರಹಿಕೆ ಹಾಗೂ ನಿರ್ಮೂಲನ ವಿಧಾನ: ಇದರ ವ್ಯವಸ್ಥಾಪನೆ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿರುತ್ತದೆ.

೮. ಪಾರದರ್ಶಕತೆ ಮತ್ತು ಹೊಣೆಗಾರಿಕೆ

೯. ಆಹಾರ ಸುರಕ್ಷತೆ /ಭದ್ರತೆಯ ಭತ್ಯೆ: ಆಯ್ಕೆ ಮೊದಲಾದ ಫಲಾನುಭವಿಗಳಿಗೆ ಆಹಾರಧವಸಧಾನ್ಯಗಳು ಅಥವಾ ಊಟದ

ವ್ಯವಸ್ಥೆ ಸಿಗದೆ ಇದಾಗ ೧೫೨೬೩೫ಳಲ .ಆಹಾರ ಭದ್ರತಾ/ ಸುರಕ್ಷತೆ ಭತ್ಯೆಯನ್ನು ನೀಡಲಾಗುವುದು.

೧೦. ದಂಡ: ನೇಮಿಸಿದ ಅಧಿಕಾರಿಗಳು ಸರಿಯಾದ ಕತಂವ್ಯ ನಿಭಾಯಿಸದಿದ್ದರೆ, ೧೨೫೬೫೬೮೯ ರಾಜ್ಯ ಅಹಾರ ಕಮಿಷನ್ ದಂಡವನ್ನು ಹಾಕಬಹುದಾಗಿದೆ.

**ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ:**

ಪುರಾತನ ನಾಗರಿಕತೆಯ ಕಾಲದಿಂದಲೂ ಸಾಮಾಜಿಕೆ ಹೊಣೆಗಾರಿಕೆಯ ಬಳಕೆಯನ್ನು ನಾವು ಕಾಣಬಹುದಾಗಿದೆ.ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಸಾಂಸ್ಥಿಕ ತಿಳುವಳಿಕೆ , ಸಾಮಾಜಿಕ ಸಾಮರ್ಥ್ಯ ಅಥವಾ ಸುಸ್ಥಿರ ವ್ಯವಹಾರ. ೨೫೫ಲ೫೬೬೬ ನೀತಿಯ ಕಡ್ಡಾಯಗೊಳಿಸಿದ ಕಾನೂನು, ಸ್ವಂತಿಕೆಯಿಂದ , ಮೌಲ್ಯಾಧಾರಿತವಾಗಿ ಮತ್ತು ಅಂತರರಾಷ್ಟ್ರೀಯ ನಿಯಮಾವಳಿಗೆ ಅನುಗುಣವಾಗಿ ರೂಪಿಸಲಾಗುತ್ತಿದೆ.

ಇತ್ತೀಚಿನ ದಿನಗಳ ಬೆಳವಣಿಗೆಯನ್ನು ಗಮನಿಸಿದರೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಸಂಸ್ಥೆಗಳ ಕಾಯಿದೆ ೨೦೧೩ರ , ಸೆಕ್ಷನ್ ೧೩೫ ಶೆಡ್ಯುಲ್ಡ್ ೨೫೬೮೮೫ರ ಅಡಿಯಲ್ಲಿ ಈ ಸಂಸ್ಥೆಗಳು ಕೆಳಗಿನ ಕಡಕಗಳಿಗೆ ಒಳಪಟ್ಟರೆ ಮೂರು ವರ್ಷದ ನಿವ್ವಳ ಲಾಭದ ಶೇಕಡವಾರು ೨% ರಷ್ಟನ್ನು ಕಡ್ಡಯವಾಗಿ ಸಾಮಾಜಿಕ ಹೊಣೆಗಾರಿಕೆಗೆ ವಿನಿಯೋಗಿಸಬೇಕಾಗಿ ಹೇಳಲಾಗಿದೆ.

**ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಗುಣಲಕ್ಷಣಗಳು:**

೧. ವಿದ್ಯಾಭ್ಯಾಸದ ಹೆಚ್ಚುವರಿಕೆ /ಉನ್ನತಿ.

೨. ಅತಿಯಾದ ಹಸಿವು ಮತ್ತು ಬಡತನದ ನಿರ್ಮೂಲನ

೩. ಲಿಂಗ-ಸಾಮರಸ್ಯ ಮತ್ತು ಮಹಿಳಾ ಸಬಲೀಕರಣ

೪. ನವಜಾತ ಶಿಶುವಿನ ಮರಣ ಕಡಿತ ಮತ್ತು ತಾಯಿತನದ ಆರೋಗ್ಯದ ಸ್ಥಿತಿ ಗತಿಗಳನ್ನು ಹೆಚ್ಚಿಸುವುದು.

೫. ಮಲೇರಿಯ, ಹೆಚ್.ಐ.ವಿ ಹಾಗೂ ಇತ್ಯಾದಿಗಳನ್ನು ತಡೆಗಟ್ಟಲು ಪ್ರಯತ್ನಿಸುವುದು.

೬. ಪರಿಸರದ ಸುಸ್ಥಿರತೆ ಕಾಪಾಡುವುದು.

೭. ಸಾಮಾಜಿಕ ಸ್ಥಳೀಯ ವ್ಯವಹಾರದ ಕಾರ್ಯವೈಖರಿಯ ಯೋಜನೆಗಳನ್ನು ಮಾಡುವುದು.

೮. ವೃತ್ತಿಪರ ಕಲೆಗಳಿಗೆ ಪ್ರೋತ್ಸಾಹ.

೯. ಪ್ರಧಾನಮಂತ್ರಿ ಪರಿಹಾರ ನಿಧಿಗೆ ಹಾಗೂ ರಾಜ್ಯ ಮತ್ತು ಕೇಂದ್ರೀಯ ನಿಧಿಗೆ ಕೊಡುವುದು.

೧೦. ಸಿ.ಎಸ್.ಆರ್‌ಗೆ ಸಂಬಂಧಪಟ್ಟ ಇತ್ಯಾದಿ ಕಾರ್ಯಗಳನ್ನು ಮಾಡುವುದು.

ಮಾದರಿ ನಕ್ಷೆ: ಹಾಗೂ ಸಂಸ್ಥೆಗಳ ಕಾಯಿದೆ, ೨೦೧೩

(ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ) ಹಾಗೂ ಆಹಾರ ಸುರಕ್ಷಿತ ಕಾಯಿದೆ, ೨೦೧೩ ಸಮ್ಮಿಲಿತ ಯೋಜನೆಗಳು



ಮೂಲ: ಸಂಶೋಧನ ವಿದ್ಯಾರ್ಥಿನಿಯ ಸ್ವಯಂರಚಿತ

**ಅಧ್ಯಯನದಿಂದ ಕಂಡುಬಂದ ಅಂಶಗಳು:**

❖ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಗುಣಲಕ್ಷಣಗಳು ವಿಧ್ಯಾಭ್ಯಾಸದ ಉನ್ನತಿ, ಆರೋಗ್ಯದ ಸುಧಾರಣೆ, ಮಹಿಳಾ ಸಬಲೀಕರಣ, ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಯ ಬೆಳವಣಿಗೆ, ಪರಿಸರದ ಸುಸ್ಥಿರತೆ ಇತ್ಯಾದಿಗಳನ್ನು ಒಳಗೊಂಡಿದೆ.

❖ ಸರ್ಕಾರದ ಆಹಾರ ಸುರಕ್ಷಿತ ಕಾಯಿದೆಯು ಅರ್ಹ ಮನೆಯನ್ನು ಆಯ್ಕೆಮಾಡಿ ಮಹಿಳೆ ಮತ್ತು ಮಕ್ಕಳ ಪೌಷ್ಠಿಕಾಂಶವನ್ನು ಒದಗಿಸುತ್ತದೆ, ಬಡ ಜನರಿಗೆ ಸಬ್ಸಿಡಿ ದರದಲ್ಲಿ ದವಸಧಾನ್ಯಗಳನ್ನು ಒದಗಿಸುವುದು, ಅತಿಯಾದ ಹಸಿವು ಹಾಗೂ ಬಡತನ ನಿರ್ಮೂಲನ, ತಾಯ್ತನದ ಉಪಲಬ್ಧತೆ, ಆಯ್ಕೆ ಮಾಡಲಾದ ಫಲಾನುಭವಿಗಳಿಗೆ ನಿಗದಿಪಡಿಸಿದ ಸವಲತ್ತುಗಳು ಸಿಗದ ಸಂದರ್ಭದಲ್ಲಿ ಆಹಾರ ಸುರಕ್ಷತೆಯ ಭತ್ಯೆಯನ್ನು ನೀಡುವುದು. ಇತ್ಯಾದಿಗಳನ್ನು ಒಳಗೊಂಡಿದೆ.

❖ **ಕೆಳಗಿನವುಗಳು ಎರಡು ಕಾಯಿದೆಯಡಿಯಲ್ಲಿರುವ ಸಾಮಾನ್ಯ ಅಂಶಗಳು:**

- ನವಜಾತ ಶಿಶುವಿನ ಮರಣ ಕಡಿತ ಮತ್ತು ತಾಯ್ತನದ ಆರೋಗ್ಯದ ಸುಧಾರಣೆ.
- ಅತಿಯಾದ ಹಸಿವು ಹಾಗೂ ಬಡತನ ನಿರ್ಮೂಲನ.
- ಮಹಿಳಾ ಸಬಲೀಕರಣ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ.
- ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಯ ಬೆಳವಣಿಗೆ.

**ಸಲಹೆಗಳು:**

➢ ಅತ್ಯುನ್ನತ ಕ್ಷೇಮಾಭಿವೃದ್ಧಿ ಯೋಜನೆಯಾದ ರಾಷ್ಟ್ರೀಯ ಆಹಾರ ಸುರಕ್ಷಿತ ಕಾಯಿದೆಗೆ ಅನೇಕ ಸಂಸ್ಥೆಗಳಿಂದ ಹಣಕಾಸಿನ ನೆರವನ್ನು ನೀಡುವುದು.

➢ ಆಹಾರ ಸುರಕ್ಷಿತ ಕಾಯಿದೆ, ೨೦೧೩ ಹಾಗೂ ಸಂಸ್ಥೆಗಳ ಕಾಯಿದೆ, ೨೦೧೩ರ ಪರಿಣಾಮಕಾರಿ ಬೆಳವಣಿಗೆಗೆ ನಾಡಜನತೆಯಲ್ಲಿ ಹಾಗೂ ಅದರ ಕಾರ್ಯಕಾರಿ ಅಧಿಕಾರಿಗಳಲ್ಲಿ ಜಾಗ್ರತಿಯನ್ನು ಮೂಡಿಸಬೇಕು.

➢ ಸಾಮಾಜಿಕ ಲೆಕ್ಕಶೋಧನೆಗೆ ಹೊರಗಿನ ಚಾಣಕ್ಷ ನುರಿತ ಲೆಕ್ಕ ಶೋಧಕರನ್ನು ನೇಮಿಸುವುದು.

➢ ಸರ್ಕಾರವು ಆಹಾರ ಕಾಯ್ದೆಯಡಿಲ್ಲಿ ಒಂದು ನಿಯೋಗವನ್ನು ರೂಪಿಸಿ ಪ್ರತಿವರ್ಷ ಸಾಲ ನೀಡಲಾದ ರೈತ ಕುಟುಂಬವನ್ನು ನಿರೀಕ್ಷೆಯ ಬೆಳೆಯನ್ನು ಪರಿಶೀಲಿಸಬೇಕು. ನಿರೀಕ್ಷೆಗಿಂತ ಕಡಮೆ ಬೆಳೆ ಸಿಕ್ಕಿದ್ದರೆ ನೈಸರ್ಗಿಕ ಕಾರಣವಾದ್ದಲ್ಲಿ ಆಯ್ದ ಕುಟುಂಬಗಳಿಗೆ ಅವಶ್ಯಕ ದವಸ-ಧಾನ್ಯಗಳನ್ನು ನೀಡಬೇಕು.

➢ ಸಾಲ-ಹಿಂತಿರುಗಿಸುವ ಅವಧಿಯನ್ನು ಸುಮಾರು ೫ ವರ್ಷಗಳವರೆಗೆ ಹೆಚ್ಚಿಸುವುದರ ಜೊತೆಗೆ ಬಡ್ಡಿಯನ್ನು ಮನ್ನಾಗೊಳಿಸಬೇಕು.

➢ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಸಂಸ್ಥೆಗಳು ಅಂತಹ ರೈತ ಕುಟುಂಬಗಳಿಗೆ ಉದ್ಯೋಗವಕಾಶಗಳನ್ನು ಒದಗಿಸಿಕೊಡಬೇಕು.

➢ ಜೊತೆಗೆ ರೈತರು ಆತ್ಮಹತ್ಯೆ ಮಾಡಿಕೊಳ್ಳದ ಹಾಗೆ ತಮ್ಮೊಳಗಿನ ಶಕ್ತಿಯನ್ನು ಅರ್ಥೈಸುವುದು.

➢ ರೈತರು ಆತ್ಮಹತ್ಯೆ ತಡೆಗಟ್ಟಲು ರಾಜ್ಯ ಮತ್ತು ಕೇಂದ್ರೀಯ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು.

**ಉಪಸಂಹಾರ:**

ಪ್ರಕೃತಿಯಲ್ಲಾಗುವ ಮತ್ತು ಕಾಲಕಾಲಕ್ಕಾಗುವ ಬದಲಾವಣೆಗಳನ್ನು ಮಾನವನು ತಡೆಯಲಾಗುವುದಿಲ್ಲ. ಆದ್ದರಿಂದ ಕೃಷಿಜನರಿಗೆ ಮತ್ತು ಅವರ ಅಸ್ಥಿರ ಬದುಕಿಗೆ ಸ್ಥಿರ ಭರವಸೆಯ ಅಗತ್ಯವಿದೆ. ಭಾರತವನ್ನು ಒಂದು ಸುಸ್ಥಿರ ರಾಷ್ಟ್ರವನ್ನಗಿಸಲು ಆದಾಯ (ಹಣಕಾಸು), ಜನತೆ ಮತ್ತು ಭೂಮಿ (ಪರಿಸರ) ಈ ಮೂರು ಅಂಶಗಳ ಸಮತೋಲನ ಬೆಳವಣಿಗೆ ಅತ್ಯಗತ್ಯವಾಗಿರುತ್ತದೆ. ಇದನ್ನು ಟ್ರಿಪ್ಪಲ್ ಬಾಟಂ ಲೈನ್ ( ಟಿ.ಬಿ.ಎಲ್) ಎನ್ನಲಾಗುತ್ತದೆ. ಸರ್ಕಾರದ ಕಾನೂನುಗಳು, ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ಮತ್ತು ಸಾರ್ವಜನಿಕರ ಕೊಡುಗೆ ಭಾರತ ರಾಷ್ಟ್ರವನ್ನು ಸುಸ್ಥಿರ ರಾಷ್ಟ್ರವಾಗಿಸಲು ಬಹು ಮುಖ್ಯ ಪಾತ್ರವಹಿಸುತ್ತದೆ. ಸರ್ವತೋಮುಖ ಬೆಳವಣಿಗೆಗೆ ಎಲ್ಲರೂ ಶ್ರಮಿಸಬೇಕು.

**ಆಕರಗಳು:**

೧. ಕಾವ್ಯ ದಶೋರ ಮತ್ತು ವಿ ಕ್ಷೇತ್ರಪಾಲ್ (೨೦೧೪), " ಆಹಾರ ಭದ್ರತೆಯ ಅಂಶವಾಗಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಪುನರ್ ಪರಿಶೀಲನೆ", 'ಇಂಡಿಯನ್ ಜರ್ನಲ್ ಆಫ್ ಅಪ್ಲೈಡ್ ರಿಸರ್ಚ್', ೪(೭):೩೩೨-೩೩೫.

೨. ಹೆಚ್‌ಟಿಟಿಪಿ://ಇಂಡಿಯಕೋಡ್.ನಿಕ್.ಇನ್/ಆಕ್ಟ್ಸ್-ಇನ್-ಪಿಡಿಫ್/೨೦೨೦೧೩.ಪಿಡಿಫ್

೩. ಪಂಕಜ್ ದೋಡ್, ಸರಬಜೀತ್ ಸಿಂಗ್‌ಮತ್ತು ರವಿತಾ (೨೦೧೩), "ಭಾರತದಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮತ್ತು ಸುಸ್ಥಿರ ಬೆಳವಣಿಗೆ", ಗ್ಲೋಬಲ್ ಜರ್ನಲ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಬ್ಯುಸಿನೆಸ್ ಸ್ಟಡೀಸ್', ೩(೬):೬೮೧-೬೮೮.

## "ಕರ್ನಾಟಕದಲ್ಲಿ ಮಹಿಳಾ ಹಕ್ಕುಗಳ ಉಲ್ಲಂಘನೆ ಮತ್ತು ಸ್ಥಾನಮಾನ" – ಒಂದು ವಿಶ್ಲೇಷಣೆ

ದೇವರಾಜು ಎಸ್.ಎಸ್
ಸಂಶೋಧಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.–06
E-Mail: devarajuss19@gmail.com

ವಿಶ್ವದಲ್ಲಿಯೇ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತ ದೇಶದಲ್ಲಿ ಮಾನವ ಹಕ್ಕುಗಳಿಗೆ ಅಧಿಕ ಪ್ರಾಶಾಸ್ತ್ಯ ನೀಡಲಾಗಿದೆ. ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ಬೆಳವಣಿಗೆಗೆ ಮಾನವ ಹಕ್ಕುಗಳು ಪೂರಕವು, ಅತ್ಯಗತ್ಯ, ಅವಶ್ಯವಾದವುಗಳಾಗಿವೆ. ಪ್ರತಿಯೊಬ್ಬ ಮಾನವ ಜೀವಿಯು ಹುಟ್ಟಿನಿಂದಲೇ ತನ್ನ ಹಕ್ಕು ಮತ್ತು ಕರ್ತವ್ಯಗಳನ್ನು ಹೊಂದಿರುತ್ತಾನೆ. ಈ ಹಕ್ಕುಗಳನ್ನು ಪ್ರತಿಯೊಬ್ಬರು ಯಾವುದೇ ಬೇಧಬಾವ, ತಾರತಮ್ಯವಿಲ್ಲದೇ ಸ್ವತಂತ್ರ್ಯವಾಗಿ ಹಕ್ಕುಗಳನ್ನು ಅನುಭವಿಸುವ ಸ್ವಾತಂತ್ರವನ್ನು ಹೊಂದಿದ್ದಾನೆ. "ಭಾರತ ಸಂವಿಧಾನದಿಂದ ಖಾತರಿಪಡಿಸಲಾಗಿರುವ ಅಥವಾ ಅಂತರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಸೇರಿಸಲಾಗಿರುವ ಮತ್ತು ಭಾರತದಲ್ಲಿ ಜಾರಿಗೊಳಿಸಲಾಗಿರುವ

ವ್ಯಕ್ತಿಯ ಜೀವಿಸುವ ಸ್ವಾತಂತ್ರ್ಯ, ಸಮಾನತೆ, ಮತ್ತು ವ್ಯಕ್ತಿ ಘನತೆಯ ಹಕ್ಕುಗಳೇ ಮಾನವ ಹಕ್ಕುಗಳಾಗಿವೆ.” ಈ ಮಾನವ ಹಕ್ಕುಗಳು ವಿಶ್ವದೆಲ್ಲೆಡೆ ಮಾನ್ಯತೆ ಪಡೆದಿವೆ. ಭಾರತದಲ್ಲಿಯು ವಿಶೇಷವಾಗಿ ಮಹಿಳೆಯರ ಮೇಲೆ ಮಾನವ ಹಕ್ಕುಗಳ ಉಲ್ಲಂಘನೆ ನೆಡೆಯುತ್ತಲೇ ಇದೆ.

ಭಾರತದ ಸಾಮಾಜಿಕ ವ್ಯವಸ್ಥೆಯು ಪುರುಷ ಪ್ರಧಾನ ಸಮಾಜವಾಗಿದ್ದು ಮಹಿಳೆಯರನ್ನು ವಿವಿಧ ವಲಯಗಳಲ್ಲಿ ಕಡೆಗಣಿಸಲಾಗಿದೆ. ಭಾರತದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ಅದಿ ಹರೆಯ ಹೆಣ್ಣು ಮಕ್ಕಳ ಕಳ್ಳ ಸಾಗಣೆಯಂತಹ ವಿವಿಧ ಸ್ವರೂಪದ ಹಕ್ಕು ಉಲ್ಲಂಘನೆಗಳು ದಿನನಿತ್ಯ ನಡೆಯುತ್ತಲೇ ಇವೆ, ಇದರಿಂದಾಗಿ ಮಹಿಳೆಯರಿಗೆ ಸೂಕ್ತವಾದ ರಕ್ಷಣೆ ಇಲ್ಲದಂತಾಗಿದೆ. ಭಾರತದ ಸಂವಿಧಾನದಲ್ಲಿ ಮಹಿಳೆಯರ ರಕ್ಷಣೆಗೆಂದೇ ಕಾನೂನುಗಳಿದ್ದರು, ಆ ಕಾನೂನುಗಳು ಕೇವಲ ಕಾಗದದ ಹಾಳೆಯಲ್ಲೇ ಉಳಿದಿವೆ. ಆದರೆ ವಾಸ್ತವವಾಗಿ ಮಹಿಳೆಯರ ಮೇಲಿನ ಹಕ್ಕು ಉಲ್ಲಂಘನೆಯ ಪ್ರಕರಣಗಳ ಪ್ರಮಾಣ ದಿನದಿಂದ ದಿನಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಅಧಿಕವಾಗುತ್ತಿರುವುದು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಠಕಪ್ರಾಯವಾಗಿದೆ.

ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸಿ, ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಜೀವನ ಮಟ್ಟವನ್ನು ಸುಧಾರಿಸಬೇಕಾದುದು ಅತ್ಯಗತ್ಯ. ಮಹಿಳೆಯರು ತಮ್ಮ ಹಕ್ಕುಗಳನ್ನು ಸ್ವತಂತ್ರವಾಗಿ ಯಾವುದೇ ಬಯವಿಲ್ಲದೇ ಮುಕ್ತವಾಗಿ ಅನುಭವಿಸುವಂತೆ ನಾಗರೀಕ ಸಮಾಜ ಸಹಕರಿಸಬೇಕಿದೆ. ಆಗಾ ಮಾತ್ರ ಮಹಿಳೆಯರು ಸಮಾಜದ ಮುಖ್ಯ ವಾಹಿನಿಗೆ ಬರಲುಸಾಧ್ಯ.

**ಪರಿಕಲ್ಪನೆ**: ಮಾವನದ ವಿವೇಚನಾ ಶಕ್ತಿ ಮತ್ತು ನಾಗರೀಕತೆ ಬೆಳದಂತೆ ಮಾನವನುಗೌರವಾನ್ವಿತನಾಗಿ ಮತ್ತು ನಾಗರೀಕ ಪ್ರಜ್ಞೆಯುಳ್ಳವನಾಗಿ ಬದುಕಲು ಪ್ರಾರಂಭಿಸಿದ ಫಲವಾಗಿ ಕಾಲಕಾಲಕ್ಕೆ ಮಾನವ ಹಕ್ಕುಗಳ ಪರಿಕಲ್ಪನೆ ಬೆಳೆಯುತ್ತಾ ಬಂದಿದೆ.[೭] ಮಾನವ ಹಕ್ಕುಗಳ ವಿಚಾರದಲ್ಲಿ ಶಾಸ್ತ್ರಜ್ಞರ ಅಭಿಪ್ರಾಯಗಳು ವಿಭಿನ್ನವಾದವು ಗಳಾಗಿವೆ.

**ಬೊಸಂಕ್ವೆಟ್**: ರವರ ಪ್ರಕಾರ ವ್ಯಕ್ತಿಯಅಭಿವೃದ್ಧಿಗಾಗಿ ಸಮಾಜದಿಂದ ಮಾನ್ಯತೆ ಪಡೆದ ಮತ್ತುರಾಜ್ಯದಿಂದ’ಅಂಗೀಕೃತವಾಗಿರುವ ಹಕ್ಕುಗಳಾಗಿವೆ ಎಂದುಅಭಿಪ್ರಾಯ ಪಟ್ಟಿದ್ದಾರೆ.[೮]

**ಟೈಬರ್ ಮ್ಯಾಕ್ರಾಮ್**:ಇವರ ಪ್ರಕಾರ ವಿಶ್ವದಾದ್ಯಂತ ವ್ಯಾಪಿಸಿರುವ ನ್ಯಾಯಯುತವಾದ ಹಾಗೂ ಹಿಂದಕ್ಕೆ ಪಡೆಯಲಾಗದಂತಹ ಅಂಶಗಳು ಎಲ್ಲಾ ಹಕ್ಕುಗಳು ನ್ಯಾಯ ಮೂಲಾಧಾರಗಳಾಗಿದ್ದು, ಸಮಾಜದ ಪ್ರಥಮ ನೈತಿಕಆಧಾರವೇ ನ್ಯಾಯವಾಗಿರುವುದೇ ಮಾನವ ಹಕ್ಕುಗಳು ಎಂದಿರುವರು. ಇವರು ಮಾನವ ಹಕ್ಕುಗಳನ್ನು ಸಮಾಜದಲ್ಲಿನ ನ್ಯಾಯ ಹಾಗೂ ನೈತಿಕತೆಯನ್ನು ಆಧರಿಸಿ ವಿವರಿಸಿರುವರು ಈ ಎಲ್ಲಾಚಿಂತಕರುತಮ್ಮ ಅಭಿಪ್ರಾಯಗಳಲ್ಲಿ ನೈತಿಕತೆ ಮತ್ತು ಮಾನವ ತತ್ವಗಳಿಗೆ ಆದ್ಯತೆ ನೀಡಿ ಅವುಗಳ ಮೂಲಕವೇ ಮಾನವ ಹಕ್ಕುಗಳನ್ನು ಅರ್ಥೈಸಿರುವರು.[೯]

ವಿಶ್ವಸಂಸ್ಥೆಯ ೧೯೪೮ ಡಿಸೆಂಬರ್ ೧೦ರ ಮಾನವ ಹಕ್ಕುಗಳ ಸಾರ್ವತ್ರಿಕಘೋಷಣೆಯು ಪ್ರತಿಯೊಬ್ಬ ವ್ಯಕ್ತಿಯ ಹಾಗೂ ಇಡೀ ಮನುಕುಲದ ಸ್ವಸ್ಥಜೀವನಕ್ಕೆ ಬೇಕಾದಜಾಗತಿಕ ಕನಿಷ್ಠ ಗುಣಮಟ್ಟವನ್ನು ನಿಗದಿಪಡಿಸಿದೆ.[೧೦] ನಂತರ ಭಾರತವು ೧೯೯೩ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಸಂರಕ್ಷಣಾಕಾಯ್ದೆಗೆ ಅನುಗುಣ ವಾಗಿರಾಷ್ಟ್ರ ಮತ್ತುರಾಜ್ಯಮಟ್ಟದಲ್ಲಿ ಮಾನವ ಹಕ್ಕುಗಳ ಆಯೋಗಗ ಳನ್ನು ಸ್ಥಾಪಿಸುವ ಮೂಲಕ ಮಾನವ ಹಕ್ಕುಗಳನ್ನು ರಕ್ಷಿಸಿ ಪೋಷಿಸುವ ಜವಾಬ್ದಾರಿಯನ್ನು ಹೊಂದಿವೆ. ಅಂತೆಯೇ ಕರ್ನಾಟಕ ರಾಜ್ಯದಲ್ಲಿಯೂ ಮಹಿಳಾ ಹಕ್ಕುಗಳ ಉಲ್ಲಂಘನೆ ಅಧಿಕವಾಗಿ ನಡೆಯುತ್ತಲಿದ್ದು ಮಹಿಳೆಯರ ಹಕ್ಕುಗಳನ್ನು ರಕ್ಷಿಸಿ ಸಂವರ್ಧಿಸುವ ಸಲುವಾಗಿ ಕರ್ನಾಟಕರಾಜ್ಯ ಮಹಿಳಾ ಆಯೋಗ ವನ್ನು ಸ್ಥಾಪಿಸಲಾಗಿದೆ.

**ಮಹಿಳಾ ಹಕ್ಕುಗಳ ಸ್ಥಾನಮಾನ**: ಭಾರತೀಯ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರು, ದುರ್ಬಲರು, ನಿಶಕ್ತರು ಪುರುಷರಂತೆ ಸರಿ ಸಮಾನರಾಗಿಕಾರ್ಯನಿರ್ವಹಿಸಲಾರದಂತವರು ಎಂಬ ನಂಭಿಕೆಗಳು ಪುರಾತನ ಕಾಲದಿಂದಲೂ ಬೆಳೆದುಬಂದಿವೆ. ಮಹಿಳೆಯರನ್ನು ಶತಮಾನಗಳಿಂದ ಆರ್ಥಿಕ, ಸಾಮಾಜಿಕ ಮತ್ತುರಾಜಕೀಯಕ್ಷೇತ್ರದಿಂದದೂರವಿಡಲಾಗಿತ್ತು.ಇದರಜೊತೆಗೆ ಮಹಿಳೆಯರನ್ನು ತುಚ್ಚವಾಗಿಕಾಣುವುದು, ಬಾಲ್ಯವಿವಾಹ, ಸತಿ ಸಹಗಮನ ಆಚರಣೆ, ಲೈಂಗಿಕ ಬಲತ್ಕಾರ, ಭ್ರೂಣಹತ್ಯೆ, ವೈಶ್ಯವಾಟಿಕೆಗೆ ಬಲತ್ಕರಿಸುವುದು ಹೀಗೆ ಅನೇಕ ವಿಧಗಳಲ್ಲಿ ಎಲ್ಲಾ ಸಮುದಾಯಗಳಲ್ಲಿಯೂ ಒಂದಲ್ಲಒಂದು ವಿಧದಲ್ಲಿ ಮಹಿಳೆಯರ ಮೇಲೆ ಶೋಷಣೆ ನಡೆಯುತ್ತಲೇ ಬಂದಿದೆ. ಇಂತಹ ಅಮಾನ ವೀಯತೆಯನ್ನುತೊಡೆದುಹಾಕಲು ಅನೇಕ ಸುಧಾರಣಾವಾದಿಗಳು ಪ್ರಾಚೀನತೆಯಲ್ಲೇ ಪ್ರಯತ್ನಿಸಿದುಂಟು ಆದರೂ ಮಹಿಳೆಯರ ಹಕ್ಕುಗಳ ಉಲ್ಲಂಘನೆ ಪ್ರಸ್ತುತವುಅವ್ಯಾಹತವಾಗಿ ನಡೆಯುತ್ತಲೇ ಬಂದಿವೆ.

ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ವಿಕಸನದ ಸಾಧನಗಳಾದ ಮಾನವ ಹಕ್ಕುಗಳು ಪ್ರಸ್ತುತ ಪ್ರಪಂಚದಾದ್ಯಂತ ಹೆಚ್ಚು ಮಹತ್ವ ಪಡೆದ ವಿಷಯವಾಗಿದೆ.ಜಾಗತೀಕರಣದ ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ಹಕ್ಕುಗಳ ಉಲ್ಲಂಘನೆ ದಿನದಿಂದ ದಿನಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ವಿಬಿನ್ನರೀತಿಯಲ್ಲಿ ಹೆಚ್ಚಾಗುತ್ತಿರುವುದುಗಮನಾರ್ಹ ಹಾಗೂ ಬೇಸರದ ಸಂಗತಿಯಾಗಿದೆ.[೧೧] ಈ ಹಕ್ಕುಗಳ ಉಲ್ಲಂಘನೆಯ ಪ್ರಮಾಣದಲ್ಲಿ ಪುರುಷರು ಪ್ರಧಾನ ಪಾತ್ರವಹಿಸುತ್ತಿರುವುದು ಸಾಮಾಜಿಕ ಶಾಂತಿಯನ್ನುಕದಡುತ್ತಿದೆ.

ಭಾರತದಇತಿಹಾಸದ ಪುಟಗಳನ್ನು ತಿರುಗಿ ನೋಡಿದಾಗ ಮಾನವ ಹಕ್ಕುಗಳ ಉಲ್ಲಂಘನೆಯ ಮೂಲಾಧಾರಗಳು ನಮಗೆ ಸ್ಪಷ್ಟವಾಗಿ ಗೋಚರಿಸುತ್ತವೆ. ಪ್ರಾಚೀನತೆಯ ಮನುಸ್ಮೃತಿಯಲ್ಲಿ ಉಲ್ಲೇಖವಾದ ಅಂಶಗಳು ಪ್ರಸ್ತುತವು ಮನುಷ್ಯನ ಮನಸ್ಸಿನಿಂದ ಮಾಸದಿರುವುದು ಮನುಷ್ಯನ ಬೌದ್ಧಿಕ ಅಃದಪತನಕ್ಕೆ ಸ್ಪಷ್ಟಉದಾಹರಣೆಯಾಗಿದೆ. ಮನುಸ್ಮೃತಿಯಲ್ಲಿಉಲ್ಲೇಖಿಸಲ್ಪಟಂತೆ ಮಹಿಳೆಯರು ಮನೆಯ ನಾಲ್ಕು ಗೋಡೆಗಳ ಮಧ್ಯೆಇರಬೇಕು, ಮನೆ ಬಿಟ್ಟು ಹೊರಹೋಗಿ ಸ್ವತಂತ್ರವಾಗಿಜೀವಿಸುವಂತಿರಲಿಲ್ಲ.[೧೨]ಆದರೆ ಈಗ ಮಹಿಳೆಯರು ಮನೆಬಿಟ್ಟು ಹೊರ ಬಂದುದುಡಿಯಲು ಪ್ರಾರಂಭಿಸಿದ್ದಾರೆ ಆದರೆ

ISSN 2249 - 5754 VIJNANA KANNADA (PRINT)


ಪುರುಷರು ಮಹಿಳೆಯರನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯವಾಗಿ ಬದುಕಲಾರದ ಸ್ಥಿತಿ ನಿರ್ಮಾಣವಾಗಿದೆ. ಅತ್ಯಾಚಾರ, ಸುಲಿಗೆ, ವಂಚನೆಯ ಬಲೆಯಲ್ಲಿ ಪ್ರತಿದಿನ ಜೀವನ ಸಾಗಿಸುತ್ತಿರುವ ಮಹಿಳೆಯರು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವತಂತ್ರ ನೆಲೆ ಕಂಡುಕೊಳ್ಳುವಲ್ಲಿ ಪುರುಷ ಸಮಾಜವು ಸವಾಲಾಗಿ ಪರಿಣಮಿಸಿದೆ. ಮತ್ತೊಂದೆಡೆ ಋತುಮತಿಯರಾದ ಗರ್ಭಿಣಿಯಾದ ಹೆಂಗಸರನ್ನುಊರಿನಿಂದ ಹೊರಹಾಕಿಅವರ ಹಕ್ಕುಗಳನ್ನು ಉಲ್ಲಂಘಿಸುತ್ತಿರುವುದುಉತ್ತರಕರ್ನಾಟಕದಲ್ಲಿ ಪ್ರಸ್ತುತವೂ ಆಚರಣೆಯಲ್ಲಿದೆ.ಇದಕ್ಕೆಅವರು ಮೂಡನಂಬಿಕೆಯದಾಸರಾಗಿರುವುದುದುರಂತವೆ ಸರಿ.

**ಮಹಿಳೆಯರ ರಕ್ಷಣೆಗಿರುವಕಾನೂನುಗಳು**

- ಅನ್ಯೆತಿಕ ವ್ಯವಹಾರತಡೆಕಾಯ್ದೆ – ೧೯೫೬
- ವರದಕ್ಷಿಣೆ ನಿಷೇದಕಾಯ್ದೆ – ೧೯೬೧
- ಮಹಿಳೆಯರ ಅಶ್ಲೀಲ ಚಿತ್ರ ನಿಷೇಧಕಾಯ್ದೆ – ೧೯೮೬
- ಸತಿ ನಿಷೇದಕಾಯ್ದೆ – ೧೯೮೭
- ರಾಷ್ಟ್ರೀಯ ಮಹಿಳಾ ಆಯೋಗಕಾಯ್ದೆ – ೧೯೯೦
- ಮಾನವ ಹಕ್ಕುಗಳ ರಕ್ಷಣಾಕಾಯ್ದೆ – ೧೯೯೩
- ಭ್ರೂಣ ಲಿಂಗ ಪತ್ತೆ ನಿಷೇಧಕಾಯ್ದೆ – ೧೯೯೪
- ಕೌಟುಂಬಿಕದೌರ್ಜನ್ಯ ನಿಷೇದಕಾಯ್ದೆ –೨೦೦೫

**ಭಾರತದಲ್ಲಿ ಮಹಿಳಾ ಹಕ್ಕುಗಳ ಉಲ್ಲಂಘನೆ:** ಭಾರತದಲ್ಲಿ ಮಹಿಳಾ ಹಕ್ಕುಗಳ ಉಲ್ಲಂಘನೆಯು ವಿವಿಧ ಸ್ವರೂಪಗಳಲ್ಲಿ ಪ್ರತಿನಿತ್ಯವು ನಡೆಯುತ್ತಲೇಇದೆ. ೨೦೧೧ರಲ್ಲಿ ೨,೨೮,೬೫೦ ಮಹಿಳಾ ಹಕ್ಕು ಉಲ್ಲಂಘನೆ ಪ್ರಕರಣಗಳು ದಾಖಲಾಗಿವೆ. ೨೦೧೨ರಲ್ಲಿ ೨,೪೪,೨೭೦ ಹಕ್ಕು ಉಲ್ಲಂಘನೆಯ ಪ್ರಕರಣಗಳು ದಾಖಲಾಗುವ ಮೂಲಕ ಹಿಂದಿನ ವರ್ಷಕ್ಕಿಂತ ೬.೪% ರಷ್ಟು ಪ್ರಕಣರಗಳು ೨೦೧೨ರಲ್ಲಿ ಹೆಚ್ಚಾಗಿರುವುದುಕಂಡುಬರುತ್ತದೆ. ಭಾರತದೇಶದಲ್ಲಿ ಪಶ್ಚಿಮ ಬಂಗಾಳದಲ್ಲಿ ೩೦,೯೪೨ ಮೊಕದ್ದಮೆಗಳು ದಾಖಲಾಗುವ ಮೂಲಕ ಭಾರತದಲ್ಲಿದಾಖಲಾದಒಟ್ಟು ಮೊಕದ್ದಮೆಗಳಲ್ಲಿ ೧೨.೭% ರಷ್ಟು ಪಾಲು ಪಡೆದು ಹಕ್ಕು ಉಲ್ಲಂಘನೆಯಲ್ಲಿ ಮೊದಲ ಸ್ಥಾನದಲ್ಲಿದೆ.

೨೦೧೨ರಲ್ಲಿ ದಾಖಲಾದಒಟ್ಟು ಪ್ರಕರಣದಲ್ಲಿ ೨೪,೯೨೩ ಅತ್ಯಾಚಾರ, ೩೮,೨೬೨ ಅಪಹರಣ, ೮,೨೩೩ ವರದಕ್ಷಿಣೆ ಸಾವು, ೧೦೬,೫೨೭ ಪ್ರಕರಣಗಳು ಗಂಡ ಮತ್ತು ಸಂಬಂಧಿಕರಿಂದ ಹಿಂಸೆ ಪ್ರಕರಣಗಳು ಮತ್ತು ೪೫,೩೫೧ ಪ್ರಕರಣಗಳು ಉದ್ದೇಶ ಪೂರ್ವಕವಾಗಿ ಮಹಿಳೆಯರ ಮೇಲೆ ಹಲ್ಲೆ ಮತ್ತು ಬಲತ್ಕಾರದ ಪ್ರಕರಣಗಳು ದಾಖಲಾಗಿವೆ. ೯.೧೭೧ ಪ್ರಕರಣಗಳು ಮಹಿಳೆಯರಿಗೆ ಅವಮಾನ ಮತ್ತುಗೌರವಕ್ಕೆದಕ್ಕೆಯುಂಟುಮಾಡಿರುವ ಪ್ರಕರಣಗಳಾಗಿವೆ. ಹಾಗೂ ವಿದೇಶಗಳಿಂದ ೫೭ ವಯಸ್ಕ ಹುಡುಗಿಯರನ್ನುಆಮದು ಮಾಡಿಕೊಂಡಿರುವ ಪ್ರಕರಣಗಳು ದಾಖಲಾಗಿವೆ. ಹಾಗೂ ೨,೫೬೩ ಪ್ರಕರಣಗಳು ದುರ್ಮಾರ್ಗಿ ವ್ಯವಹಾರಕ್ಕೆ ಸಂಬಂಧಿಸಿವೆ. ಅಲ್ಲದೆ ೧೪೧ ಪ್ರಕರಣಗಳು ಮಹಿಳಾ ಪ್ರಾತಿನಿಧ್ಯಕಾಯ್ದೆಅಡಿಯಲ್ಲಿದಾಖಲಾಗಿವೆ. ೧೯೬೧ರ ವರದಕ್ಷಿಣೆ ನಿಷೇಧಕಾಯ್ದೆಯಡಿಯಲ್ಲಿ ೯,೦೩೮ ಪ್ರಕರಣಗಳು ದಾಖಲಾಗುವ ಮೂಲಕ ಮಹಿಳೆಯರ ವಿರುದ್ದ ಹಕ್ಕು ಉಲ್ಲಂಘನೆಯ ಪ್ರಮಾಣ ಪ್ರತಿನಿತ್ಯ ಹೆಚ್ಚಳವಾಗುತ್ತಿರುವುದನ್ನು ಕಾಣಬಹುದು.[೧೩]

ರಾಷ್ಟೀಯಅಪರಾಧದಾಖಲೆ ವಿಭಾಗದ ವರದಿಯ ಪ್ರಕಾರ ಪ್ರತಿದಿನ ಭಾರತದಲ್ಲಿ ೯೨ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿದೆ. ರಾಷ್ಟ್ರದರಾಜಧಾನಿಯಾದದೆಹಲಿಯಲ್ಲಿ ಪ್ರತಿದಿನ ೪ ಪ್ರಕರಣಗಳು ವರದಿಯಾಗುತ್ತಿವೆ. ೨೦೧೨ರಲ್ಲಿ ೨೪,೯೨೩ ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದರೆ, ೨೦೧೩ರಲ್ಲಿ ೩೩,೭೦೭ ಪ್ರಕರಣಗಳು ವರದಿಯಾಗಿವೆ. ೨೦೧೩ರಲ್ಲಿ ಒಟ್ಟು ಪ್ರಕರಣಗಳ ಪೈಕಿ ೧೫,೫೫೬ ಅತ್ಯಾಚಾರ ಪ್ರಕರಣಗಳಲ್ಲಿ ಅತ್ಯಾಚಾರಕ್ಕೆ ಒಳಗಾದವರು ೧೫ ರಿಂದ ೩೦ ವರ್ಷ ವಯಸ್ಸಿನ ಹೆಣ್ಣು ಮಕ್ಕಳು.ದೆಹಲಿಯಲ್ಲಿ ೨೦೧೨ಕ್ಕೆ ಹೋಲಿಸಿದರೆ ೨೦೧೩ರಲ್ಲಿ ಈ ಪ್ರಕರಣಗಳು ದುಪ್ಪಟ್ಟಾಗಿವೆ. ಕಳೆದ ವರ್ಷದಲ್ಲಿ ೧೪೩೫ ಅತ್ಯಾಚಾರ ಪ್ರಕರಣಗಳು, ೨೦೧೨ರಲ್ಲಿ ೭೦೬ ಪ್ರಕರಣಗಳು ವರದಿಯಾಗಿವೆ. ೨೦೧೩ರಲ್ಲಿ ಮಧ್ಯಪ್ರದೇಶದಲ್ಲಿಅತಿ ಹೆಚ್ಚು ಅಂದರೆ ಪ್ರತಿದಿನ ೧೧ ಅತ್ಯಾಚಾರಗಳಂತೆ ವರ್ಷದಲ್ಲಿ ೪೩೫೫ ಪ್ರಕರಣಗಳು ದಾಖಲಾಗಿವೆ. ರಾಜಸ್ತಾನದಲ್ಲಿ ೩೨೮೫, ಮಹಾರಾಷ್ಟ್ರಲ್ಲಿ ೩೦೬೫, ಉತ್ತರ ಪ್ರದೇಶದಲ್ಲಿ ೩೦೫೦, ಮುಂಬೈನಲ್ಲಿ ೩೯೧, ಜೈಪುರದಲ್ಲಿ ೧೯೨, ಪುಣೆಯಲ್ಲಿ ೧೭೧ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ ಎಂದುರಾಷ್ಟ್ರೀಯ ಅಪರಾಧದಾಖಲೆ ವಿಭಾಗದ ವರದಿ ತಿಳಿಸುತ್ತದೆ.[೧೪]

**ಕರ್ನಾಟಕದಲ್ಲಿ ಮಹಿಳಾ ಹಕ್ಕುಗಳ ಉಲ್ಲಂಘನೆ:** ಕರ್ನಾಟಕರಾಜ್ಯ ಅಪರಾಧದಾಖಲಾತಿಕೇಂದ್ರದ ೨೦೧೨–೧೩ರ ವರದಿಯಂತೆ ಕರ್ನಾಟಕದಲ್ಲಿಒಟ್ಟು ೨೯೭೮ ಉಪದ್ರವ ಮಹಿಳಾ ಹಕ್ಕು ಉಲ್ಲಂಘನೆ ಪ್ರಕರಣಗಳು ದಾಖಲಾಗಿವೆ. ಹಾಗೂ ೫೬೬ ಅತ್ಯಾಚಾರ ಪ್ರಕರಣಗಳು ಮತ್ತು ೨೧೮ ವರದಕ್ಷಿಣಾ ಸಾವು ಪ್ರಕರಣಗಳು ದಾಖಲಾಗಿವೆ. ೨೦೧೩ ಮಾರ್ಚ್‌ವರೆಗೆ ೧೧೨೮ ಉಪದ್ರವ ಸಂಬಂಧಿ ಪ್ರಕರಣಗಳು, ೪೫೨ ಅತ್ಯಾಚಾರ ಪ್ರಕರಣಗಳು ಮತ್ತು ೮೮ ವರದಕ್ಷಿಣೆ ಸಾವು ಪ್ರಕರಣಗಳು ದಾಖಲಾಗಿವೆ.[೧೫] ಇವುಗಳಲ್ಲಿ ಮಹಿಳೆಯರ ಹಕ್ಕು ಉಲ್ಲಂಘನೆ ಶ್ರೇಣಿಯಲ್ಲಿ ಬೆಂಗಳೂರು ನಗರ ಮುಂಚೂಣಿಯಲ್ಲಿದೆ.

❖ **ಉಪದ್ರವಅಥವಾ (ಕಾಟ)ತೊಂದರೆಕೊಡುವುದು:** ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಬಹುವಿಧದಲ್ಲಿ ಶೋಷಣೆ ನಡೆಯುತ್ತಲೇ ಬಂದಿದೆ.ಪ್ರೌಢವಸ್ಥೆಯಲ್ಲಿರುವವರು ಕೇವಲ ಲೈಂಗಿಕ ತೃಪ್ತಿಗಾಗಿ ಹಾಗೂ ಕೆಲವೇ ಲಾಭಕ್ಕಾಗಿ ಹೆಣ್ಣುಮಕ್ಕಳನ್ನು ಮತ್ತು ಸ್ತ್ರೀಯರನ್ನು ಲೈಂಗಿಕವಾಗಿ ಶೋಷಣೆಗೆಗುರಿಪಡಿಸಲಾಗುತ್ತಿದೆ.ಒಬ್ಬ ವ್ಯಕ್ತಿ ಸ್ತ್ರೀಯರನ್ನು ಕೆಟ್ಟದೃಷ್ಟಿಯಿಂದ ನೋಡುವುದಕ್ಕೂ ಮುಂಚಿತವಾಗಿಅವನಲ್ಲಿ ಲೈಂಗಿಕ ಮನೋಭಾವನೆಯ ಉದ್ದೇಶಗಳು ಅಡಗಿರುತ್ತವೆ. ಇದು ಲೈಂಗಿಕ ಶೋಷಣೆಅಥವಾ ಲೈಂಗಿಕ ಅಕ್ರಮಣ ವಿಧಗಳಲ್ಲಿ ಒಂದಾಗಿದೆ.ಇಂತಹ ಪ್ರಕರಣಗಳು ಅಪರಿಚಿತರಿಂದಆದರೆಇನ್ನೂಅಧಿಕ ಸಂದರ್ಭಗಳಲ್ಲಿ ಸಂಬಂಧಿಕರು, ಪೋಷಕರು, ಶಾಲೆಯ ಶಿಕ್ಷಕರು, ವೈದ್ಯರು, ನಿಲಯ ಪಾಲಕರಿಂದ ಹೆಣ್ಣುಮಕ್ಕಳು ಮತ್ತು ಸ್ತ್ರೀಯರ ಮೇಲೆ ನಿರಂತರವಾಗಿ ಶೋಷಣೆಗಳು ನಡೆಯುತ್ತಲೇ ಇವೆ.

ಕರ್ನಾಟಕರಾಜ್ಯಅಪರಾಧದಾಖಲಾತಿಕೇಂದ್ರದ ಮಾಹಿತಿ ಪ್ರಕಾರ ೨೦೧೨ನೇ ಸಾಲಿನಲ್ಲಿಕರ್ನಾಟಕದಾದ್ಯಂತ ೨೯೭೮ ಉಪದ್ರವ

ಪ್ರಕರಣಗಳು ದಾಖಲಾಗಿದೆ.ಇದರಲ್ಲಿ ಬೆಂಗಳೂರು ನಗರದಲ್ಲಿ ೩೨೧ ಪ್ರಕರಣಗಳು ಜರುಗಿವೆ. ೨೦೧೩ ಮಾರ್ಚ್‌ನವರೆಗೆಒಟ್ಟು ೧೧೨೮ ಪ್ರಕರಣಗಳು ದಾಖಲಾಗುವ ಮೂಲಕ ಇಳಿಮುಖ ಅಂಕಿಅಂಶಗಳನ್ನು ಹೊಂದಿರುವುದುಉತ್ತಮ ಬೆಳವಣಿಗೆಯಾಗಿದೆ.

❖ **ಮಹಿಳೆಯರ ಮೇಲೆ ಅತ್ಯಾಚಾರ:** ಅತ್ಯಾಚಾರ ಪ್ರಕರಣಗಳು ಯಥೇಚ್ಚಾಗಿ ನಡೆಯುತ್ತಿವೆ. ಸಾಮಾನ್ಯವಾಗಿ ಪುರುಷರು ಮತ್ತು ಮಹಿಳೆಯರು ಒಬ್ಬರನೊಬ್ಬರ ಸಮ್ಮತಿಇಲ್ಲದೇಜರುಗುವ ಬಲತ್ಕಾರವೇಅತ್ಯಾಚಾರ ಎಂದೆಳಬಹುದು.[೧೬]ಕರ್ನಾಟಕದಲ್ಲಿ ೨೦೧೨ರಲ್ಲಿ ಒಟ್ಟು ೫೫೬ ಪ್ರಕರಣಗಳು ದಾಖಲಾಗಿದ್ದವು.೨೦೧೩ರ ಅಂಕಿಅಂಶಗಳ ಪ್ರಕಾರ ೪೫೬ ಪ್ರಕರಣಗಳು ದಾಖಲಾಗಿದ್ದು ಬೆಂಗಳೂರು ನಗರಒಂದರಲ್ಲೇ ೬೭ ಪ್ರಕರಣಗಳು ದಾಖಲಾಗಿವೆ.

❖ **ವರದಕ್ಷಿಣಾ ಸಾವು:** ಕರ್ನಾಟಕದಲ್ಲಿ ೨೦೧೨ರಲ್ಲಿ ಒಟ್ಟು ೨೧೮ ಪ್ರಕರಣಗಳು ಕರ್ನಾಟಕ ಅಪರಾಧಿ ದಾಖಲಾತಿ ಕೇಂದ್ರದಲ್ಲಿ ದಾಖಲಾಗಿವೆ. ಇವುಗಳಲ್ಲಿ ಬೆಂಗಳೂರು ನಗರಒಂದರಲ್ಲೇ ೫೧ ಪ್ರಕರಣಗಳು ದಾಖಲಾಗಿವೆ. ಕೋಲಾರ, ಮೈಸೂರು, ಉತ್ತರಕನ್ನಡ, ರಾಯಚೂರು ಜಿಲ್ಲೆಗಳಲ್ಲಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. ೨೦೧೩ರ ಮಾರ್ಚ್ ವರೆಗೆಒಟ್ಟು ೮೮ ಪ್ರಕರಣಗಳು ಬೆಂಗಳೂರು ನಗರಒಂದರಲ್ಲಿಯೇ ದಾಖಲಾಗಿವೆ.[೧೭] ಒಟ್ಟಿನಲ್ಲಿ ಬೆಂಗಳೂರು ನಗರದಲ್ಲಿಯೇಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದುಉದ್ಯಾನ ನಗರದ ಸಾಮಾಜಿಕ ಶಾಂತಿಗೆ ಭಂಗತರುವ ಮೂಲಕ ಕರ್ನಾಟಕದಲ್ಲಿ ಶೋಚನಿಯ ಸ್ಥಿತಿ ತಲುಪಿದೆ.

**ಉಪಸಂಹಾರ:** ಒಟ್ಟಿನಲ್ಲಿ ಭಾರತದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯು ಸ್ವರೂಪದಲ್ಲಿ ಮಹಿಳೆಯರ ಮೇಲಿನ ಉಲ್ಲಂಘನೆಗಳು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಟಕಪ್ರಾಯವಾಗಿದೆ. ಹಕ್ಕುಗಳನ್ನು ಸಂರಕ್ಷಿಸಿ ಸಂವರ್ಧಿ ಸುವಜವಾಬ್ದಾರಿಯನ್ನು ಹೊತ್ತಿರುವ ಸರ್ಕಾರಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು, ರಾಷ್ಟ್ರೀಯ ಮತ್ತುರಾಜ್ಯ ಮಟ್ಟದಲ್ಲಿರುವ ಮಾನವ ಹಕ್ಕು ಆಯೋಗಗಳು ಮತ್ತು ಮಹಿಳಾ ಆಯೋಗಗಳು ಹಕ್ಕು ಉಲ್ಲಂಘನೆಯತಡೆಗಾಗಿ ಸೂಕ್ತ ಯೋಜನೆಗಳನ್ನು ರೂಪಿಸಿ ಅವುಗಳನ್ನು ಸರಿಯಾಗಿ ಅನುಷ್ಠಾನ ಮಾಡಿ ಹಕ್ಕುಗಳಿಗೆ ರಕ್ಷಣೆ ನೀಡಿದ್ದೇಆದರೆ ಸಮಾಜದಲ್ಲಿ ಮಹಿಳೆಯರು ಒಳಗೊಂಡಂತೆ ಸರ್ವರು ಸಮಾನಾಗಿ ಸಂವೃದ್ಧಿಯಜೀವನ ಸಾಗಿಸಬಹುದು.

**ಪರಾಮರ್ಶನ ಗ್ರಂಥಗಳು:**

೧. ಟಿ.ಡಿ.ದೇವೇಗೌಡ, ಮಾನವ ಹಕ್ಕುಗಳು, ಚೇತನ ಬುಕ್ ಹೌಸ್, ಮೈಸೂರು. ೨೦೧೧. ಪು. ೦೩.
2. Satnamsinghdeol, Human rights in india : Theory and Practice, Serial Publication, New Dehli, 2011, P. 26.
3. R.K. Tiwari, Women and Human rights, Neeraj Publish ing house, Dehli 2011, P. 22.
೪. ಡಾ.ಹೆಚ್.ಎಸ್.ಅನುಪಮ, ಅತ್ಯಾಚಾರ ಮತ್ತು ಕಾನೂನು, ಲಡಾಯಿ ಪ್ರಕಾಶನ, ಗದಗ ೨೦೧೪, ಪು. ೬೬.
5. United Nations Indicators to Measure Violence AgainstWomen (Report of Expert group Meeting) Oct 2007, P. 5.
೬. ಪ್ರೊ. ಎ.ಎಸ್.ಮಾಸಾಪತಿ, ಮಾನವಾಧಿಕಾರ ಮತ್ತುಅಭಿವೃದ್ಧಿ, ವಿಕಾಸ ಪ್ರಕಾಶನ, ಬೆಂಗಳೂರು ೨೦೦೫. ಪು. ೩೨.
7. Satnamsinghdeol, Human rights in india : Theory and Practice, Serial Publication, New Dehli, 2011, P. 04.
8. J.K. Chopra, Political Science, Unine Publisher, New Delhi, 2013, P. 127.
೯. ಟಿ.ಡಿ.ದೇವೇಗೌಡ, ಮಾನವ ಹಕ್ಕುಗಳು, ಚೇತನ ಬುಕ್ ಹೌಸ್, ಮೈಸೂರು. ೨೦೧೧. ಪು. ೦೪.
10. Ravi C Mandal, Current Issues in Human rights and In ternational Relations Mangalm Publications, Delhi 2011, P. 5.
11. Satnamsinghdeol, Human rights in india : Theory and Practice, Serial Publication, New Dehli, 2011, P. 205.
12. Preeti Mishra, Domestic Violence Against Women, Deep and Deep Publication, New Delhi 2006, P. XIV.
13. Directorate of Economics and Statistic Department. Men and Women in Karnataka 2012-13.
೧೪.ಪ್ರಜಾವಾಣಿ ದಿನಪತ್ರಿಕೆ, ಸೆಪ್ಟೆಂಬರ್ ೫, ೨೦೧೪, ಪು. ೦೭.
15. State Crime Record Bureau, Government of Karnataka 2012. P. 91.
16. Robert JemesMcwhirter, The Criminal Lawyers Guide to Immigration Law questions and Answers, American Bar Association 2006, P. 163.
17. Directorate of Economics and Statistic Department. Men and Women in Karnataka 2012-13. P. 91.

## "ಜಾಗತೀಕರಣದಲ್ಲಿ ಮಾನವ ಹಕ್ಕುಗಳು ಮತ್ತು ಅಭಿವೃದ್ಧಿ" – ಒಂದು ವಿಶ್ಲೇಷಣೆ

ದೇವರಾಜು ಎಸ್.ಎಸ್.
ಸಂಶೋಧಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.–06
E-Mail: devarajuss19@gmail.com

ಸಮಕಾಲೀನ ಪ್ರಪಂಚದ ವಿದ್ಯಾಮಾನಗಳು ಮತ್ತು ವಿವಾದಾಂಶಗಳಲ್ಲಿ ಅಭಿವೃದ್ಧಿ ಮತ್ತು ಮಾನವ ಹಕ್ಕುಗಳು ಗಮನಾರ್ಹ ಸಂಗತಿಗಳಾಗಿವೆ. ಮಾನವ ಹಕ್ಕುಗಳು ಮತ್ತು ಅಭಿವೃದ್ಧಿ ಒಂದಕ್ಕೊಂದು ಪೂರಕವಾಗಿರಬೇಕಾದುದು ಅಗತ್ಯ ಮತ್ತು ಅನಿವಾರ್ಯ. ಅಭಿವೃದ್ದಿಯು ಹಕ್ಕುಗಳ ಸಂವರ್ಧನೆಗೆ ಪೂರಕವಾಗಿರೊವರೆಗೂ ಅಭಿವೃದ್ದಿಯು ಸಾರ್ವಜನಿಕ ಸ್ವೀಕೃತಿಗೆ ಒಳಗಾಗಿರುತ್ತದೆ. ಮಾನವ ಹಕ್ಕುಗಳಿಗೆ

ಆಂತಕಕಾರಿಯಾಗಬಹುದಾದ ಅಭಿವೃದ್ಧಿ ಪ್ರಕ್ರಿಯೆಯು ವಿವಾದಾಂಶಕ್ಕೆ ಒಳಗಾಗಿ ಜನರ ಆಕ್ರೋಶಕ್ಕೆ ತುತ್ತಾಗುತ್ತಿದೆ. ಬೆರಳೆಣಿಕೆಯಷ್ಟು ಜನರ ಸುಖಮಯ ಜೀವನಕ್ಕೆ ನೆರವಾಗುವಂತಹ ಅಭೀವೃದ್ಧಿ ನೀತಿಗಳು ಮತ್ತು ಯೋಜನೆಗಳು ಜಗತ್ತಿನಾದ್ಯಂತ ಸಾರ್ವಜನಿಕ ಟೀಕೆಗೆ ಗುರಿಯಾದ ಉದಾಹರಣೆಗೆ ಕೊರತೆಯೆನಿಲ್ಲ. ಅದರಂತೆಯೇ ಭಾರತದ ಸಂರ್ಭದಲ್ಲಿಯೂ ಅಭಿವೃದ್ಧಿ ಹೆಸರಿನಲ್ಲಿ ಅನುಷ್ಟಾನಗೊಳ್ಳುತ್ತಿರುವ ಜಾಗತಿಕರಣದ ಪರನೀತಿಗಳು ವಿವಿಧ ವರ್ಗದ ಜನರ ಹಕ್ಕುಗಳಿಗೆ ಆತಂಕಕಾರಿಯಾಗುವುದರಿಂದ ಮಾನವ ಹಕ್ಕುಗಳ ಸಂವಾದದಲ್ಲಿ ವಿವಿಧ ಆಯಾಮಗಳುಳ್ಳ ಅಭಿವೃದ್ದಿಯು ವಸ್ತುನಿಷ್ಠ ವಿಶ್ಲೇಷಣೆಗೆ ಒಳಪಟ್ಟಿದೆ. ಈ ಹಿನ್ನಲೆಯಲ್ಲಿ ಅಭಿವೃದ್ದಿಯನ್ನು ಮಾನವ ಹಕ್ಕುಗಳ ದೃಷ್ಠಿಕೋನದಿಂದ ಪರಿಶೀಲಿಸಲು ಈ ಸಂಶೋಧನೆ ಪತ್ರಿಕೆಯಲ್ಲಿ ಪ್ರಯತ್ನಿಸಲಾಗಿದೆ.

ವ್ಯಕ್ತಿಯ ಸರ್ವತೋಮುಖ ಅಭಿವೃದ್ದಿಯೇ ರಾಷ್ಟ್ರದ ಮೂಲ ಗುರಿಯಾಗಿದ್ದು ವ್ಯಕ್ತಿಯ ವ್ಯಕ್ತಿತ್ವದ ಪರಿಪೂರ್ಣ ಅಭಿವೃದ್ದಿಯನ್ನು ಸಾಧಿಸಲು ಸಾಮಾಜಿಕ ಜೀವನಲ್ಲಿ ಕೆಲವು ಹಕ್ಕುಗಳು ನಿಯಮಗಳೂ ಅನಿವಾರ್ಯ ಆದ್ದರಿಂದ ಸಂವಿದಾನಾತ್ಮಕ ಹಕ್ಕುಗಳು ಹುಟ್ಟಿಕೊಂಡಿವೆ. ಈ ಹಿನ್ನೆಲೆಯಿಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ತನ್ನಲ್ಲಿರುವ ಪ್ರತಿಭೆಯನ್ನು ಅಭಿವೃದ್ದಿಗೊಳಿಸಿಕೊಳ್ಳಲು ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಜೀವನದಲ್ಲಿ ಅಭಿವೃದ್ಧಿ ಹೊಂದಲು ಹಕ್ಕುಗಳು ಜೀವನಾಡಿಗಳಾಗಿವೆ ಅಭಿವೃದ್ದಿಯ ಸಾಧನೆಗಾಗಿ ದಕ್ಷವಾದ ಅರ್ಥಪೂರ್ಣವಾದ ನೈಜ ಪ್ರಜಾಸ್ವರೂಪವುಳ್ಳ ಪಾರದರ್ಶಕತೆ ಮತ್ತು ಉತ್ತರದಾಯಿತ್ವವುಳ್ಳ ಪ್ರಜಾಪ್ರಭುತ್ವದಲ್ಲಿ ಹಕ್ಕುಗಳಿಗೆ ಮಾನ್ಯತೆ ದೊರಕಬೇಕಿದೆ. ಮಾನವಾಭಿವೃದ್ದಿಯು ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಹಾಗೂ ಆಯಾಮಗಳನ್ನು ಹೊಂದಿದ್ದು ಹಕ್ಕುಗಳ ಅಭಿವೃದ್ಧಿ ಸಾಧಿಸಲು ನೇರವಾಗುವಂತೆ ಪ್ರಜಾಪ್ರಭುತ್ವವು ಕಾರ್ಯಾಚರಿಸಬೇಕೆದೆ.

**ಪೀಠಿಕೆ:** ೨೦ ಮತ್ತು ೨೧ನೇ ಶತಮಾನದ ಈ ಯುಗವು ಮಾನವ ಹಕ್ಕುಗಳ ಸುವರ್ಣ ಯುಗವಾಗಿದೆ.[೧] ಸಮಕಾಲೀನ ಪ್ರಪಂಚದ ವಿದ್ಯಾಮಾನಗಳು ಮತ್ತು ವಿವಾದಾಂಶಗಳಲ್ಲಿ ಅಭಿವೃದ್ಧಿ ಮತ್ತು ಮಾನವ ಹಕ್ಕುಗಳು ಗಮನಾರ್ಹ ಸಂಗತಿಗಳಾಗಿವೆ. ಮಾನವ ಹಕ್ಕುಗಳು ಮತ್ತುಅಭಿವೃದ್ಧಿಒಂದಕ್ಕೊಂದು ಪೂರಕವಾಗಿರ ಬೇಕಾದುದು ಅಗತ್ಯ ಮತ್ತು ಅನಿವಾರ್ಯ. ಅಭಿವೃದ್ದಿಯು ಹಕ್ಕುಗಳ ಸಂವರ್ಧನೆಗೆ ಪೂರಕವಾಗಿರೊವರೆಗೂಅಭಿವೃದ್ದಿಯು ಸಾರ್ವಜನಿಕ ಸ್ವೀಕೃತಿಗೆ ಒಳಗಾಗಿರುತ್ತದೆ.ಮಾನವ ಹಕ್ಕುಗಳಿಗೆ ಆಂತಕಕಾರಿಯಾಗಬಹುದಾದಅಭಿವೃದ್ಧಿ ಪ್ರಕ್ರಿಯೆಯು ವಿವಾದಾಂಶಕ್ಕೆ ಒಳಗಾಗಿ ಜನರಆಕ್ರೋಶಕ್ಕೆತುತ್ತಾಗುತ್ತಿದೆ. ಬೆರಳೆಣಿಕೆಯುಷ್ಟು ಜನರ ಸುಖಮಯಜೀವನಕ್ಕೆ ನೆರವಾಗುವಂತಹಅಭೀವೃದ್ಧಿ ನೀತಿಗಳು ಮತ್ತು ಯೋಜನೆಗಳು ಜಗತ್ತಿನಾದ್ಯಂತ ಸಾರ್ವಜನಿಕಟೀಕೆಗೆ ಗುರಿಯಾದಉದಾಹರಣೆಗೆಕೊರತೆಯೆನಿಲ್ಲ. ಅದರಂತೆಯೇ ಭಾರತದ ಸಂರ್ಭದಲ್ಲಿಯೂಅಭಿವೃದ್ಧಿ ಹೆಸರಿನಲ್ಲಿ ಅನುಷ್ಟಾನಗೊಳ್ಳುತ್ತಿರುವ ಜಾಗತಿಕರಣದ ಪರನೀತಿಗಳು ವಿವಿಧ ವರ್ಗದಜನರ ಹಕ್ಕುಗಳಿಗೆ ಆತಂಕಕಾರಿಯಾಗುವುದರಿಂದಮಾನವ ಹಕ್ಕುಗಳ ಸಂವಾದದಲ್ಲಿವಿವಿಧ ಆಯಾಮಗಳುಳ್ಳ ಅಭಿವೃದ್ದಿಯು ವಸ್ತುನಿಷ್ಠ ವಿಶ್ಲೇಷಣೆಗೆ ಒಳಪಟ್ಟಿದೆ. ಈ ಹಿನ್ನೆಲೆಯಲ್ಲಿಅಭಿವೃದ್ದಿಯನ್ನು ಮಾನವ ಹಕ್ಕುಗಳ ದೃಷ್ಠಿಕೋನದಿಂದ ಪರಿಶೀಲಿಸಲು ಈ ಸಂಶೋಧನೆ ಲೇಖನದಲ್ಲಿಪ್ರಯತ್ನಿಸಲಾಗಿದೆ.

ವ್ಯಕ್ತಿಯ ಸರ್ವತೋಮುಖಅಭಿವೃದ್ದಿಯೇರಾಷ್ಟ್ರದ ಮೂಲ ಗುರಿಯಾಗಿದ್ದು ವ್ಯಕ್ತಿಯ ವ್ಯಕ್ತಿತ್ವದ ಪರಿಪೂರ್ಣಅಭಿವೃದ್ದಿಯನ್ನು ಸಾಧಿಸಲು ಸಾಮಾಜಿಕಜೀವನಲ್ಲಿ ಕೆಲವು ಹಕ್ಕುಗಳು ನಿಯಮಗಳೂ ಅನಿವಾರ್ಯಆದ್ದರಿಂದ ಸಂವಿದಾನಾತ್ಮಕ ಹಕ್ಕುಗಳು ಹುಟ್ಟಿ ಕೊಂಡಿವೆ. ಈ ಹಿನ್ನೆಲೆಯಿಲ್ಲಿ ಪ್ರತಿಯೊಬ್ಬ ವ್ಯಕ್ತಿಗೆತನ್ನಲ್ಲಿರುವ ಪ್ರತಿಭೆಯನ್ನು ಅಭಿವೃದ್ದಿಗೊಳಿಸಿಕೊಳ್ಳಲು ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕಜೀವನದಲ್ಲಿ ಅಭಿವೃದ್ಧಿ ಹೊಂದಲು ºÀPÀÄÌUÀ¼ÀÄ f ÃªÀ£Á r UÀ¼ÁV ªÉ ಅಭಿವೃದ್ದಿಯ ಸಾಧನೆಗಾಗಿ ದಕ್ಷವಾದಅರ್ಥಪೂರ್ಣವಾದ ನೈಜ ಪ್ರಜಾಸ್ವರೂಪವುಳ್ಳ ಪಾರದರ್ಶಕತೆ ಮತ್ತು ಉತ್ತರದಾಯಿತ್ವವುಳ್ಳ ಪ್ರಜಾಪ್ರಭುತ್ವದಲ್ಲಿ ಹಕ್ಕುಗಳಿಗೆ ಮಾನ್ಯತೆದೊರಕಬೇಕಿದೆ. ಮಾನವಾಭಿವೃದ್ದಿಯು ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಹಾಗೂ ಆಯಾಮಗಳನ್ನುಹೊಂದಿದ್ದು ಹಕ್ಕುಗಳ ಅಭಿವೃದ್ಧಿ ಸಾಧಿಸಲು ನೇರವಾಗುವಂತೆ ಪ್ರಜಾಪ್ರಭುತ್ವವು ಕಾರ್ಯಾಚರಿಸ ಬೇಕಿದೆ. ಮಾನವ ಹಕ್ಕುಗಳ ಪರಿಕಲ್ಪನೆಯುಅತ್ಯಂತ ಪ್ರಾಚೀನವಾದುದ್ದು, ಇದರಇತಿಹಾಸವನ್ನು ಪುನರುಜೀವನದ ಚಳುವಳಿಯ ಕಾಲದಿಂದಲೂಗುರುತಿಸಬಹುದು.[೩]

**ಪರಿಕಲ್ಪನೆಗಳು**

**ಮಾನವ ಹಕ್ಕುಗಳು:** ಆರ್. ವಾಶರ್ ಸ್ಟ್ರಾಮ್, ಇವರ ಪ್ರಕಾರ 'ವ್ಯಕ್ತಿಯುತನ್ನ ಸಾಮರ್ಥ್ಯವನ್ನು ವೃದ್ದಿಸಿಕೊಳ್ಳು ಅಥವಾ ಬೆಳೆಸಿಕೊಳ್ಳಲು ಅವಶ್ಯವಾದ ಅರ್ಹತೆಗಳೆ ಮಾನವ ಹಕ್ಕುಗಳಾಗಿದ್ದು, ಇವು ವ್ಯಕ್ತಿಗೆಇರುವ ನೈತಿಕ ಅರ್ಹತೆಗಳು ಎಂದಿದ್ದಾರೆ.ಇವರು ವ್ಯಕ್ತಿಯುಅಭಿವೃದ್ಧಿಗೆ ನೈತಿಕ ಹಾಗೂ ಅವಶ್ಯಕತೆಗಳನ್ನು ಆಧಾರಿಸಿಕೊಂದು ಮಾನವ ಹಕ್ಕುಗಳನ್ನು ಅರ್ಥೈಸಿರುವರು'.[೪]

**ಜಾಗತೀಕರಣ:** ಎಸ್.ಕೆ.ಮಿಶ್ರ ಮತ್ತು ಪುರಿಇವರ ಪ್ರಕಾರ' ಒಂದುರಾಷ್ಟ್ರದಆರ್ಥಿಕ ಸ್ಥಿತಿಯನ್ನು ವಿಶ್ವದಅರ್ಥ ವ್ಯವಸ್ಥೆಯೊಂದಿಗೆ ಒಂದುಗೂಡಿಸುವ ಪ್ರಯತ್ನಕ್ಕೆಜಾಗತೀಕರಣಎಂದುಅಭಿಪ್ರಾಯ ಪಟ್ಟಿದ್ದಾರೆ'.[೫]

**ಅಭಿವೃದ್ಧಿ:** ಸಿ.ಪಿ.ಕಿಂಡಲ್ ಬರ್ಗರ್ ಮತ್ತು ಬ್ರೂಸ್ಎರಿಕ್ಇವರ ಪ್ರಕಾರ'ಭೌತಿಕಕಲ್ಯಾಣದ ಹೆಚ್ಚಳದಿಂದ ವಿಶೇಷವಾಗಿ ಕೆಳ ಆದಾಯದ ವ್ಯಕ್ತಿಗಳ ಕಲ್ಯಾಣವನ್ನು ಮಾಡಿ ಬಡತನ, ಅನಕ್ಷರತೆ, ಮರಣ ಪ್ರಮಾಣವನ್ನು ನಿವಾರಿಸುವ ಮೂಲಕ ಸಾಧಿಸುವ ಪ್ರಗತಿಯು ಅಭಿವೃದ್ಧಿ'.[೬]

**ಪ್ರಜಾಪ್ರಭುತ್ವ:** ಅಬ್ರಂ ಲಿಂಕನ್ಅವರ ಪ್ರಕಾರ'ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೊಸ್ಕರ ನೆಡೆಸಲ್ಪಡುವ ಸರ್ಕಾರವೇ ಪ್ರಜಾಪ್ರಭುತ್ವ'.[೭]

**UNDP ಮಾನವಅಭಿವೃದ್ಧಿ ವರದಿ ೨೦೦೨ರ** ಪ್ರಕಾರ 'ರಾಜಕೀಯ ಮತ್ತುರಾಜಕೀಯ ಸಂಸ್ಥೆಗಳು ಎಲ್ಲಾಜನರ ಸ್ವಾತಂತ್ರ್ಯ ಮತ್ತುಘನತೆಯನ್ನುಕಾಪಾಡುವುದು, ಅಭಿವೃದ್ಧಿಗೊಳಿಸುವುದು ಮತ್ತುರಕ್ಷಿಸುವುದರಿಂದ ಪ್ರಜಾಪ್ರಭುತ್ವವನ್ನು ಹಾಳವಾಗಿ

ವಿಸ್ತಾರಗೊಳ್ಳುವಂತೆ ಮಾಡುತ್ತದೆಎಂದು ತಿಳಿಸಿದ್ದಾರೆ'.[೮]

ಪ್ರಜಾಪ್ರಭುತ್ವದಲ್ಲಿ ನಾಗರೀಕರು ಬಡವ, ಶ್ರೀಮಂತ, ಜಾತಿ, ಧರ್ಮ ಬೇದವಿಲ್ಲದೆ ನಿರ್ಭೀತಿಯಿಂದ ಬದುಕುವುದು, ಆದರೆ ಭಾರತದ ನಾಗರೀಕರುಇಂದುತಮ್ಮ ಅಸ್ತಿತ್ವಕ್ಕೆ ಹೋರಾಟ ಮಾಡುವ ಸ್ಥಿತಿಉಂಟಾಗಿದೆ.ಈಗಾಗಲೇ ಆಹಾರದತೀವ್ರ ಬಿಕ್ಕಟ್ಟುತಲೆದೋರಿ ಭಾರತದಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರು ನಗರಗಳತ್ತ ಗುಳೆ ಹೊಗುತ್ತಿದ್ದಾರೆ.ಮಾನವ ಹಕ್ಕು ಉಲ್ಲಂಘನೆಯಿಂದ ಭಾರತೀಯ ಸಮಾಜದ ಭೂಗರ್ಭದಲ್ಲಿಅಶಾಂತಿಯ ಹೊಗೆಯಾಡುತ್ತಿದೆ.ಆಧುನಿಕ ಭಾರತದಲ್ಲಿ ಸಮಾಜಿಕ ಅಸಮಾನತೆಗಳು ಬೆಳೆದ ಹಾಗೆ ಹಕ್ಕುಗಳ ಮೌಲ್ಯ ಕುಸಿಯಲಾರಂಭಿಸಿದೆ.ಭಾರತದಅಭಿವೃದ್ಧಿ ಪಥದತ್ತ ಹೊರಟಿದೆಯಾದರೂಆಂತರಿಕವಾಗಿ ಅನೇಕ ಮಜಲು ಗಳುಳ್ಳ ಆಯಾಮಗಳು ಮತ್ತು ಸವಾಲುಗಳನ್ನು ಎದುರಿಸುತ್ತಿರುವುದು ಸ್ಪಷ್ಟವಾಗಿದೆ.ಜಗತ್ತಿನಾದ್ಯಂತ ಮಾನವ ಹಕ್ಕುಗಳು ಮತ್ತು ಅಭಿವೃದ್ಧಿ ಚರ್ಚೆ ದಿನದಿಂದ ದಿನಕ್ಕೆ ವಿಸ್ತಾರವಾಗುತ್ತಿರುವುದು ಮಾನವ ಹಕ್ಕುಗಳ ಮತ್ತುಅಭಿವೃದ್ಧಿಯ ನಡುವಿನ ಸಂಬಂಧವನ್ನು ಬಲಡಿಸುತ್ತದೆ.

ಮಾನವ ಹಕ್ಕುಗಳ ಪರಿಕಲ್ಪನೆಯ ಮೂಲ ಇರುವುದು ಮಾನವ್ಘನತೆಯಲ್ಲಿ.ಪ್ರಜಾತಂತ್ರ ವ್ಯವಸ್ಥೆಯಿರಲಿ ಸರ್ವಾಧಿಕಾರ ವಿರಲಿ ಮಾನವನ ಸಾಮಾಜಿಕ ಸ್ಥಿತ್ಯಾಂತರದಲ್ಲಿ ಹೇಗೆ ಇದ್ದರೂ ಮಾನವಜೀವತನ್ನ ಮೌಲ್ಯ ಕಳೆದುಕೊಳ್ಳುವುದಿಲ್ಲ.ಕೋಮುವಾದ ಮತ್ತಿತರ ವಿದ್ಯಮಾನಗಳನ್ನು ದಾಟಿ ನೋಡಿದಾಗ ಭಾರತದಲ್ಲಿ ಪ್ರತಿಕ್ಷಣವೂ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದು ಸರ್ವವಿಧಿತ.ನಂಬಿಕೆ ಮತ್ತು ಮನೋವೃದ್ದಿಯತೀವ್ರ ವ್ಯತ್ಯಾಸಗಳನ್ನು ಬಹಿರಂಗಪಡಿಸುವಂತಹಆಸಕ್ತಿಪೂರ್ಣವಾದ ಚರ್ಚೆಗಳಿಂದ ಅಭಿವೃದ್ದಿ ಮತ್ತು ಮಾನವ ಹಕ್ಕುಗಳ ಮನ್ನಣೆಯನ್ನು ಗುರ್ತಿಸ ಬಹುದು.

ಪ್ರಥಮಜಾಗತಿಕಯುದ್ಧದ ನಂತರ ಅಸ್ಥಿತ್ವಕ್ಕೆ ಬಂದರಾಷ್ಟ್ರಸಂಘದ ಯೋಜನೆಗಳು, ಮತ್ತು ತತ್ವಗಳೂ, ಹಾಗೂ ದ್ವಿತೀಯಜಾಗತಿಕ ಯುದ್ಧದ ನಂತರ ಅಸ್ಥಿತ್ವಕ್ಕೆ ಬಂದ ವಿಶ್ವಸಂಸ್ಥೆಯ ಪ್ರನಾಳಿಕೆಯ ಪ್ರಸ್ತಾವನೆ ಮತ್ತು ವಿವಿಧ ಕಲಾಮುಗಳ ಅಡಿಯಲ್ಲಿ ಅಳವಡಿಸಿ ಕೊಂಡ ವಿವಿಧಜಾಗತೀಕ ಮಟ್ಟದ ಮಾನವ ಹಕ್ಕುಗಳ ಘೋಷಣೆ ಗಳು ಮತ್ತು ಒಡಂಬಡಿಕೆಗಳು ಅಭಿವೃದ್ಧಿ ಮತ್ತು ಮಾನವ ಹಕ್ಕುಗಳಿಗೆ ಭದ್ರಅಡಿಪಾಯಹಾಕಿದೆ. ಅಂತರಾಷ್ಟ್ರೀಯ ಮಟ್ಟದ ವಿವಿಧ ಘೋಷಣೆಗಳು ಮತ್ತು ಒಡಂಬಡಿಕೆಗಳನ್ನು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಅಂಗೀಕರಿಸಿ, ೧೯೪೮ ಡಿಸೆಂಬರ್ ೧೦ ರಂದು ಮಾನವ ಹಕ್ಕುಗಳ ಸಾರ್ವತ್ರಿಕ ವಿಶ್ವಘೋಷಣೆಯನ್ನು ಅಂಗೀಕರಿಸಲಾಯಿತು.[೯] ನಂತರ ಮಾನವಹಕ್ಕುಗಳನ್ನು ಜಾರಿಮಾಡಿ ಮತ್ತು ಅನುಷ್ಠಾನವನ್ನುಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಾಂತಿಯ ಮಟ್ಟದಲ್ಲಿ ಮತ್ತುರಾಷ್ಟ್ರೀಯ ಮಟ್ಟದಲ್ಲಿ ಸಾರ್ವತ್ರಿಕಘೋಷಣೆ ಮಾಡಿ ವಿಶ್ವದಎಲ್ಲಾ ರಾಷ್ಟ್ರಗಳು ತಮ್ಮ ಸಂವಿಧಾನದಲ್ಲಿಅಥವಾ ಕಾನೂನಿನಲ್ಲಿ ಹಕ್ಕುಗಳನ್ನು ಅನುಭವಿಸುವ ಸ್ವಾತಂತ್ರ್ಯವನ್ನು ನೀಡಿವೆ. ಅಂತೆಯೇ ಮಾನವೀಯ ಹಕ್ಕುಗಳನ್ನು ಅಳವಡಿಸಿಕೊಳ್ಳಲು ತನ್ನ ಸದಸ್ಯರಾಷ್ಟ್ರಗಳು ಮತ್ತು ಸಂಘಟನೆಯ ಅಂಗಗಳು ಪಾಲಿಸುವಂತೆ ಕಡ್ಡಾಯಜವಾಬ್ದಾರಿಕೆಯನ್ನು ನೀಡಿ ಮಾನವ ಹಕ್ಕುಗಳ ಅನುಷ್ಠಾನ ಮಾಡಿರುವುದರಿಂದಅಭಿವೃದ್ಧಿ ಮತ್ತು ಮಾನವ ಹಕ್ಕುಗಳು ಜಾಗತಿಕ ಸಮುದಾಯದ ಕಳಕಳಿ ಮತ್ತು ಕಾಳಜಿಯ ವಿಷಯವಾಗಿವೆ. ಇದರಿಂದಾಗಿರಾಷ್ಟ್ರೀಯ ಮತ್ತುಅಂತರಾಷ್ಟ್ರೀಯ ಕಾನೂನುಗಳ ಭಾಗವಾಗಿ ಹಕ್ಕುಗಳಿಂದ ಪ್ರೇರಣೆಪಡೆದು ಸರ್ಕಾರೇತರ ಸಂಘ ಸಂಸ್ಥೆಗಳು ವಿಶ್ವವ್ಯಾಪ್ತಿ ಹರಡಿಕೊಂಡಿದೆ. ಆದರೂ ಮಾನವ ಹಕ್ಕುಗಳ ಉಲ್ಲಂಘನೆಅವ್ಯಹತವಾಗಿ ನೆಡೆಯುತ್ತಲೇಇದೆ. ಬೃಹತ್ ಪ್ರಜಾಪ್ರಭುತ್ವರಾಷ್ಟ್ರವಾದ ಭಾರತವು ವಿವಿಧಅಂತರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆಒಡಂಬಡಿಕೆಗೆ ಸಹಿಹಾಕಿ ೧೯೯೩ರ ರಾಷ್ಟ್ರೀಯ ಮಾನವ ಹಕ್ಕುಗಳ ಸಂರಕ್ಷಣೆಕಾಯ್ದೆಗೆ ಅನುಗುಣ ವಾಗಿರಾಜ್ಯ ಮಟ್ಟದಲ್ಲಿ ಮತ್ತುಅಂತರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕು ಆಯೋಗಗಳನ್ನು ಸ್ಥಾಪಿಸಿ ಮಾನವ ಹಕ್ಕುಗಳ ಮೇಲ್ವಿಚಾರಣೆ ಮತ್ತುಅಭಿವೃದ್ಧಿ ಮಾಡುವಗುರುತಾದಜವಾಬ್ದಾರಿಯನ್ನು ನಿರ್ವಹಿಸುತ್ತಿವೆ.

ಮಾನವ ಹಕ್ಕುಗಳ ಜಾಗತಿಕ ಮಟ್ಟದಚರ್ಚೆಯ ನಂತರಆದಾ ಮಹತ್ವದಅಭಿವೃದ್ಧಿಎಂದರೆ ೧೯೪೮ ಡಿಸೆಂಬರ್ ೧೦ ರಂದು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಲ್ಪಟ್ಟ ಮಾನವ ಹಕ್ಕುಗಳ ಜಾಗತಿಕಘೋಷಣೆಯುಜಾಗತಿಕ ಮಟ್ಟದ ಮಾನವ ಹಕ್ಕುಗಳ ಬಹುದೊಡ್ಡ ಬೆಳವಣಿಗೆಯೊಂದಿಗೆ ಆದಾಅಭಿವೃದ್ಧಿ ಎಂದೇ ಹೇಳಬಹುದು.[೧೦]ಇದು ವಿವಿಧ ರಾಷ್ಟ್ರಗಳ ಮಾನವ ಸಮಾಜದಲ್ಲಿರುವಎಲ್ಲಾರೀತಿಯುಜನಾಂಗೀಯುತಾರತಮ್ಯ ನಿವಾರಣೆಗಾಗಿ ನೆಡೆದ ಸಮ್ಮೇಳನ ಎಲ್ಲಾರೀತಿಯ ದೌರ್ಜನ್ಯ ಅವಮಾನವಿಯತೆ ಮತ್ತು ಮಹಿಳೆಯರ ಬಗ್ಗೆ ತಾರತಮ್ಯ ನಿವಾರಣೆಗಾಗಿ ನಡೆದ ಸಮ್ಮೇಳನ, ಅಭಿವೃದ್ಧಿ ಹಕ್ಕಿಗಾಗಿ ಘೋಷಣೆ, ಮಕ್ಕಳ ಹಕ್ಕುಗಳ ಕುರಿತು ನಡೆದ ಸಮ್ಮೇಳನ ಮತ್ತಿತರ ಸಮ್ಮೇಳನಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಮಹತ್ವಪೂರ್ಣವಾದ ಬೆಳವಣಿಗೆಯಾಗಿದೆ.

**ಜಾಗತೀಕರಣದಲ್ಲಿ ಮಾನವ ಹಕ್ಕುಗಳು ಮತ್ತುಅಭಿವೃದ್ಧಿ :** ಅಭಿವೃದ್ಧಿ ಪರಿಕಲ್ಪನೆಯಲ್ಲಿ ವ್ಯಾಪಕವಾದುದ್ದಾಗಿದೆ.ಸಾಮಾಜಿಕ, ರಾಜಕೀಯ, ಹಾಗೂ ಆರ್ಥಿಕ ರಂಗಗಳಲ್ಲಿ ಸಂಭವಿಸುವ ಅನೇಕ ವಿದಧ ಮತ್ತು ಅನೇಕ ರೀತಿಗಳ ಪರಿಣಾಮಗಳಿಗೆ ಕಾರಣವಾಗಬಲ್ಲ ಬದಲಾವಣೆಗಳನ್ನು ಅಭಿವೃದ್ಧಿ ಎಂದೇಳಬಹುದು. ದೇಶದ ಅಭಿವೃದ್ಧಿಎಂದರೆ ಕೇವಲ ಸಂಪತ್ತಿನಅಭಿವೃದ್ಧಿಯಲ್ಲ, ಬಂಡವಾಳದ ಅಭಿವೃದ್ಧಿಯಲ್ಲ, ದೇಶದಅಭಿವೃದ್ಧಿಎಂದರೆ ಮಾನವ ಸಂಪನ್ಮೂಲ ಅಂದರೆ ಆ ದೇಶದಕಟ್ಟಕಡೆಯದಟ್ಟದರಿದ್ರ ವ್ಯಕ್ತಿಯ ಬದುಕಿನಅಭಿವೃದ್ಧಿ, ಪ್ರತಿಯೊಬ್ಬ ವ್ಯಕ್ತಿಯು ಮೂಲಭೂತ ಸೌಲಭ್ಯಗಳಾದ ಆಹಾರ, ಶಿಕ್ಷಣ, ಆರೋಗ್ಯ, ಉದ್ಯೋಗಗಳ ಲಭಿಸುವಿಕೆ, ಎಲ್ಲರಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ, ಆರ್ಥಿಕ, ಸ್ವಾತಂತ್ರ್ಯಗಳನ್ನು ಪರಸ್ಪರ ಕ್ಲೇಷಗಳಿಲ್ಲದಂತೆ ಕಾಪಾಡುವುದು "ಎಲ್ಲರಿಗೂ ಸಮಪಾಲು ಎಲ್ಲರಿಗೂ ಸಮಬಾಳು" ಎಲ್ಲ ವರ್ಗದಜನತೆಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ರಾಷ್ಟ್ರದ ಸಮಗ್ರಅಭಿವೃದ್ಧಿ ಮತ್ತು ಸರ್ವಾಂಗೀಣ ವಿಕಾಸವಾಗಬೇಕಾದರೆ ಮಾನವ ಹಕ್ಕುಗಳನ್ನು ಸಕಾಲಿಕವಾಗಿ ಉಪಯೋಗಿಸುವ ಸಾಮರ್ಥ್ಯವಿರಬೇಕು ಆಗ ಮಾತ್ರಒಬ್ಬ ವ್ಯಕ್ತಿಯ ಸರ್ವೋತೊಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ.ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ

ಗಮನಿಸಿದರೆ ಮಾನವ ಹಕ್ಕುಗಳು ಮತ್ತುಅಭಿವೃದ್ಧಿ ನಡುವಿನ ಸಂಬಂಧವುತುಂಬಾಅಗಾದವಾದುದುಎಂದು ತಿಳಿಯುತ್ತದೆ. ಅಭಿವೃದ್ಧಿಗುರಿಯಾದರೆ ಹಕ್ಕುಗಳು ಸಾಧನವಾಗುತ್ತವೆ ಮತ್ತು ಹಕ್ಕುಗಳ ಸಂವರ್ಧನೆಗೆಅಭಿವೃದ್ಧಿ ಅನಿವಾರ್ಯ.

ಪ್ರಸ್ತುತ ಭಾರತದೇಶದಲ್ಲಿ ೧,೨೭೦,೨೭೨,೧೦೫ ಅಂದರೆ ೧.೨೭ ಬಿಲಿಯನ್‌ಜನಸಂಖ್ಯೆ ಹೊಂದಿರುವ ಭಾರತವು ಮಾನವಾಭಿವೃದ್ಧಿ ಯಲ್ಲಿಜಗತ್ತಿನ ೧೩೪ನೇ ಸ್ಥಾನದಲ್ಲಿದೆ.ಇದಕ್ಕೆ ಅನೇಕ ಕಾರಣಗಳೀವೆ. ಭಾರತದಲ್ಲಿ ಬಡತನ ವ್ಯಾಪಕವಾಗಿದ್ದು ವಿಶ್ವದಒಟ್ಟುಬಡವರಲ್ಲಿ ಮೂರನೆಒಂದು ಭಾಗ ನಮ್ಮರಾಷ್ಟ್ರದಲ್ಲಿದ್ದಾರೆಂದು ಭಾರತದ ಯೋಜನಾಆಯೋಗ ಅಂದಾಜಿಸಿದೆ. ವಿಶ್ವ ಬ್ಯಾಂಕಿನ ಪ್ರಕಾರ ೩೮% ರಷ್ಟು ಬಡತನರೇಖೆಗಿಂತ ಕೆಳಗಿದ್ದಾರೆ.ಅದರಲ್ಲಿ ೫೦% ಆದಿವಾಸಿಗಳು ೫೦% ದಲಿತರು ೨೩% ಮುಸ್ಲಿಂರು ೩೧% ರಷ್ಟುಜನ ಬಡತನ ರೇಖೆಗಳಿಂದ ಕೆಳಮಟ್ಟದಲ್ಲಿ ಜೀವನ ನಡೆಸುತ್ತಿದ್ದಾರೆಂದು ಎನ್.ಸಿ.ಎ.ಆರ್ ಅಮೇರಿಕದ ಮೇರಿಲ್ಯಾಂಡ್ ವಿ.ವಿನಡೆಸಿರುವ ಭಾರತೀಯ ಮಾನವಾಭಿವೃದ್ಧಿ ಸಮೀಕ್ಷೆ ತಿಳಿಸಿದೆ.

ಮಾನವ ಹಕ್ಕು ಮತ್ತುಅಭಿವೃದ್ಧಿಗೆಆತಂಕಕಾರಿಯಾದ ವಿವಾದಾಂಶ ಗಳು ಭಾರತದಲ್ಲಿಸರಿಸುಮಾರು. ೪೨.೫% ಮಕ್ಕಳು ಅಪೌಷ್ಟಿಕತೆ ಯಿಂದ ನರಳುತ್ತಿದ್ದಾರೆ. ಅಪೌಷ್ಟಿಕತೆಯಿಂದ ೧೪ ವರ್ಷದ ಒಳಗಿನ ಸುಮಾರು ೨.೬ ಮಿಲಿಯನ್ ಮಕ್ಕಳು ಸಾವಿಗೆ ತುತ್ತಾಗುತ್ತಿದ್ದಾರೆ. ಜಗತ್ತಿನಲ್ಲಿ ೫ ಸೆಕೆಂಡಿಗೆ ೧ ಮಗು ಹಸಿವಿನಿಂದ ಸಾವನಪ್ಪುತ್ತಿದೆ.[೧೧] ಇದರಿಂದ ಮಾನವಾಭಿವೃದ್ಧಿಯ ಮಟ್ಟ ಕುಸಿಯುತ್ತಿದೆ. ಮಕ್ಕಳಿಗೆ ಅಗತ್ಯವಾದ ಪೌಷ್ಟಿಕ ಆಹಾರವನ್ನುಒದಗಿಸುವ ನಿಟ್ಟಿನಲ್ಲಿ ಸರ್ಕಾರಗಳು ಯೋಜನೆಗಳನ್ನು ಅನುಷ್ಠಾನಮಾಡುವ ಮೂಲಕ ಮಾನವಾಭಿವೃದ್ಧಿ ಸಾಧಿಸಬೇಕಾಗಿದೆ.ಭಾರತದಗ್ರಾಮೀಣ ಪ್ರದೇಶದ ಬಹುಪಾಲು ಜನರಿಗೆ ದಿನದ ೩ ಹೊತ್ತು ಸೇವಿಸಲು ಆಹಾರದ ಕೊರತೆಯಿದ್ದು, ಸರಿಯಾದ ಪ್ರಮಾಣದ ಆಹಾರದ ಉತ್ಪಾದನೆ ಯಾಗದೇ, ಆಹಾರದತೀವ್ರ ಬಿಕ್ಕಟ್ಟುಎದುರಿಸುತ್ತಾಜೀವನ ಸಾಗಿಸುವ ಜನ ಸಮುದಾಯ ಪ್ರಸ್ತುತ ಭಾರತದಂತಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿದೆ.ಇದರಿಂದ ಮಾನವನದೇಹದ ಮೇಲೆ ಪರಿಣಾಮ ಬೀರಿ ಮರಣದ ಪ್ರಮಾಣ ಅಧಿಕವಾಗುತ್ತಿರುವುದು ಗೋಚರಿಸುತ್ತಿದೆ. ಅಲ್ಲದೆ ವಿಶ್ವದ ಹಸಿವಿನ ಎರಡು ಭಾಗದಷ್ಟುಜನರು ಬಾಂಗ್ಲಾ, ಚೀನಾ, ಕಾಂಗೋ, ಇತೋಪಿಯ, ಭಾರತ, ಇಂಡೋನೇಷಿಯ ಮತ್ತು ಪಾಕಿಸ್ತಾನ ದೇಶಗಳಲ್ಲಿ ಜೀವಿಸುತ್ತಿದ್ದಾರೆ. ಭಾರತದಲ್ಲಿ ೧೦೦೦ಕ್ಕೆ ಒಬ್ಬ ಹಸಿವಿನಿಂದ ಸತ್ತರೆಒಬ್ಬಅಜೀರ್ಣದಿಂದ ಸಾಯುತ್ತಿದ್ದಾರೆ.[೧೨]

ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ವಾಸಿಸುತ್ತಿರುವ ವಿಶ್ವಜನಸಂಖ್ಯೆಯ ೨.೩ ಶತಕೋಟಿಜನರು ಜಲ ಮಾಲಿನ್ಯದಿಂದ ರೋಗಗಳಿಗೆ ತುತ್ತಾಗಿ ಬಳಲುತ್ತಿದ್ದಾರೆ. ವಿಶ್ವದ ೧.೭ ಶತಕೋಟಿಜನರಿಗೆ ಶುದ್ಧವಾದ ಕುಡಿಯುವ ನೀರು ಸಿಗದೆ ಆರೋಗ್ಯದ ವೈಪಲ್ಯತೆ ಅನುಭವಿಸುತ್ತಿದ್ದಾರೆ, ಸ್ತ್ರೀಯರ ಮೇಲೆ ಅತ್ಯಾಚಾರ, ವರದಕ್ಷಿಣಾ ಪಿಡುಗು, ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯದಂತಹ ಘಟನೆಗಳು ಸ್ತ್ರೀ ಸ್ವಾತಂತ್ರ್ಯಅಪಾಯಕ್ಕೀಡಾಗುವಂತೆ ಮಾಡುತ್ತಿದೆ.ಇದರಿಂದ ಭಾರತದ ಸಾಮಾಜಿಕ ಸ್ವಾಥ್ಯಕದಡುತ್ತಿದೆ. ಬಂಡವಾಳಶಾಹಿಗಳು ರೈತರ ಭೂಮಿಯನ್ನುಅಭಿವೃದ್ಧಿಯ ಹೆಸರಿನಲ್ಲಿ ವಶಪಡಿಸಿಕೊಂಡು, ರೈತರ ಭೂಹಕ್ಕುಗಳನ್ನು ಉಲ್ಲಂಘಿಸಿ ಪಾರಮ್ಯತೆಯಿಂದ ಮೆರೆಯುತ್ತಿರುವ ಪ್ರಕರಣಗಳಿಗೆ ಕೊರತೆ ಏನಿಲ್ಲ. ಅಲ್ಲದೆಇದು ಸಾಮಾಜಿಕಅಸಮಾನತೆಯಿಂದಾಗಿ ಮಾನವ ಹಕ್ಕುಗಳು ಉಲ್ಲಂಘನೆಗೆದಾರಿ ಮಾಡಿಕೊಡುತ್ತಿವೆ. ಇದು ಮಾನವ ಹಕ್ಕುಗಳ ಉಲ್ಲಂಘನೆಯರೂಪವಾಗಿದೆ. ಮಾನವನಆರೋಗ್ಯ ಸುಧಾರಣೆ ಗಾಗಿ ಪೌಷ್ಟಿಕ ಆಹಾರ, ಶುದ್ಧವಾದಕುಡಿಯುವ ನೀರು ನೈರ್ಮಲ್ಯ, ಒಳಚರಂಡಿ ಮುಂತಾದ ಅಗತ್ಯತೆಗಳನ್ನು ನೀಡುವ ಮೂಲಕ ವ್ಯಕ್ತಿಯಅಭಿವೃದ್ಧಿ ಸಾಧ್ಯವಾಗುತ್ತದೆ.

**ಉಪಸಂಹಾರ:** ಒಟ್ಟಿನಲ್ಲಿ ಹೇಳುವುದಾದರೆ ಅಭಿವೃದ್ಧಿ ಮತ್ತು ಮಾನವ ಹಕ್ಕುಗಳೆರಡು ಒಂದಕ್ಕೊಂದು ಪೂರಕವಿದ್ದು, ಅಭಿವೃದ್ಧಿಗುರಿಯಾದರೆ ಹಕ್ಕುಗಳು ಸಾಧನವಾಗುತ್ತವೆ, ಹಕ್ಕುಗಳ ಸಂವರ್ಧನೆಗೆಅಭಿವೃದ್ಧಿ ಅನಿವಾರ್ಯ.ವ್ಯಕ್ತಿಯ ಸಮಗ್ರಅಭಿವೃದ್ಧಿ ಯಿಂದಒಂದುರಾಷ್ಟ್ರದ ಸರ್ವತೋಮುಖಕಲ್ಯಾಣ ಸಾಧ್ಯಅಂತೆಯೇ ಸಾಮಾಜಿಕ ವ್ಯವಸ್ಥೆಯಲ್ಲಿ ಶಾಂತಿ, ಸುವ್ಯವಸ್ಥೆ ಕಾಯ್ದುಕೊಳ್ಳುವು ದರಿಂದ ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟ ಬಹುದುಇದರಿಂದ ವ್ಯಕ್ತಿಯ ವ್ಯಕ್ತಿತ್ವದ ವಿಕಾಸದಲ್ಲಿ ಮಾನವ ಹಕ್ಕುಗಳು ಮಹತ್ವದ ಪಾತ್ರ ನಿರ್ವಹಿಸುತ್ತದೆ.ಮಾನವ ಹಕ್ಕುಗಳ ಮಹತ್ವ ದಿನೇ ದಿನೇ ವಿಸ್ತೃತಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಅವುಗಳನ್ನು ಸಂರಕ್ಷಿಸುವಲ್ಲಿ ಹಾಗೂ ಸಮರ್ಥವಾಗಿ ಅವುಗಳನ್ನು ಜಾರಿಗೊಳಿಸುವಲ್ಲಿ ಸಮಾಜದಎಲ್ಲರ ಸಲಹೆ ಮತ್ತು ಸಹಕಾರಗಳು ಅತ್ಯಂತಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


1. SudhirKapoor, Human rights in 21st Century, Mangaldeep Publication, Jaipur, 2003, P. 43.
2. Rahul Rai, Globalization of Human rights, Author Press, New Delhi, 2006, P. 3.
೩. ಡಾ.ವೈ.ಗಂಗಾಧರರೆಡ್ಡಿ ಮತ್ತುಜಿ.ಆರ್.ಅಶ್ವತ್, ರಾಜ್ಯಶಾಸ್ತ್ರಕನ್ನ ಪ್ರಕಾಶನ ಬೆಂಗಳೂರು, ಪು.೨೬೨.
೪. ಟಿ.ಡಿ.ದೇವೇಗೌಡ, ಮಾನವ ಹಕ್ಕುಗಳು, ಚೇತನ ಬುಕ್ ಹೌಸ್, ಮೈಸೂರು. ೨೦೧೧. ಪು. ೦೫.
೫. ಡಿ.ಎಲ್.ದೇವರಾಜ್, ಭಾರತ ಸಂವಿಧಾನ, ಯಶಸ್ ಪ್ರಕಾಶನ, ಬೆಂಗಳೂರು. ಮುದ್ರಣ ೫, ೨೦೧೫, ಪು. ೩೨೪.
6. C.P.KindalBergarand Bruce Herrick, Economic Devel opment 1977.
7. J.K. Chopra, Political Science, Unine Publisher, New Delhi, 2013, P. 205.
8. A.K. Sharma, Global Governance : Human rights and Development Swasthik Publication Delhi 2011, P. 08.
9. Rajan M S, The Expanding Jurisdiction of The United Nation Wisdom Press, New Delhi 2010.
10. Satnamsinghdeol, Human rights in india : Theory and Practice, Serial Publication, New Dehli, 2011, P. 45.
11. Child rights issues – status and trend 2013.
12. Human development index 2013.

# ಕರ್ನಾಟಕದಲ್ಲಿಆಹಾರಭದ್ರತೆಮತ್ತುರಾಷ್ಟ್ರೀಯ ಬೆಳವಣಿಗೆಯಲ್ಲಿ ಮಾಧ್ಯಮಗಳ ಪಾತ್ರ

ಡಾ.ಸಿ.ಕೆ.ಪುಟ್ಟಸ್ವಾಮಿ
ಅಧ್ಯಕ್ಷರು/ ಸಹಪ್ರಾಧ್ಯಾಪಕರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮಅಧ್ಯಯನ ವಿಭಾಗ, ಮಾನಸಗಂಗೋತ್ರಿ,,
ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು.

ಸ್ವಾತಂತ್ರ್ಯದೊರೆತು 67 ವರ್ಷಗಳಲ್ಲಿ ಆರ್ಥಿಕರಂಗದಲ್ಲಿ ಭಾರತ ಹಲವು ತಪ್ಪುಗಳನ್ನು ಮಾಡಿದೆ. ಆದರೆಆಹಾರ ಭದ್ರತೆಕಾಯ್ದೆಈವರೆಗು ಮಾಡಿದ ಪ್ರಮಾದಗಳಲ್ಲಿ ಅತಿ ಹಿರಿದಾದ್ದು. 21ನೇ ಶತಮಾನದಲ್ಲಿ ವಿಶ್ವದಒಂದುದೊಡ್ಡ ಶಕ್ತಿಯಾಗಿ ಬೆಳೆಯುತ್ತಿದೆಯೆಂದು ಬಿಂಬಿತವಾಗುತ್ತಿರುವ ಭಾರತದಲ್ಲಿ ಶೇ. 37.2 ರಷ್ಟುಜನರುತೀವ್ರ ಬಡತನದಲ್ಲಿ ಬಾಳ್ವೆ ನಡೆಸುತ್ತಿದ್ದಾರೆ. ವಿಶ್ವದಒಟು ಬಡವರಲ್ಲಿಐದನೇಒದು ಭಾಗದಷ್ಟುಜನ ಭಾರತದಲ್ಲೇಇದ್ದಾರೆ. ಕಾರ್ಮಿಕ ವಲಯದಲ್ಲಿ ಶೇ. 93 ರಷ್ಟು ಮಂದಿ ಸೇರಿದ್ದಾರೆ. ಕೇಂದ್ರ ಸರ್ಕಾರವೆ ಬಿಡುಗಡೆ ಮಾಡಿರುವಗ್ರಾಮೀಣಗಣತಿಯ ಪ್ರಕಾರ ಶೇ. 29 ರಷ್ಟುಗ್ರಾಮೀಣರಿಗೆ ಸ್ವಂತ ನೆಲವಿಲ್ಲ. ಶೇ.35 ರಷ್ಟುಗ್ರಾಮೀಣರುಅನಕ್ಷರಸ್ತರು. ದೇಶದಲ್ಲಿಒಟ್ಟು 24 ಕೋಟಿ 91 ಲಕ್ಷ ಕುಟುಂಬಗಳಿದ್ದು ಇದರಲ್ಲಿ ಹಳ್ಳಿಯ ಕುಟುಂಬಗಳೇ 17 ಕೋಟಿ 91 ಲಕ್ಷ. ಇವರಲ್ಲಿ ಶೇ. 69 ರಷ್ಟು ಕುಟುಂಬಗಳರುವ ವ್ಯಕ್ತಿಗೆ ತಿಂಗಳ ಸರಾಸರಿಆದಾಯವು ಹೆಚ್ಚೆಂದರೆ 5,000 ರೂಪಾಯಿಗಳು. 2 ಕೋಟಿ 37 ಲಕ್ಷ ಕುಟುಂಬಗಳಿಗೆ ಗುಡಿಸಲು ವಾಸ. ಈ ಅಂಕಿ ಸಂಖ್ಯೆಗಳು ತೀರಾಇತ್ತೀಚಿನ ಕಟುಸತ್ಯಗಳು. ಹಾಗಾದರೆ ನಮ್ಮದೇಶವೆತ್ತ ಸಾಗುತ್ತದೆ? ಎಂಬುದಕ್ಕೆ ಮಾಧ್ಯಮವೆಉತ್ತರಿಸುವ ಮೂಲಕ ದೇಶದ 24 ಕೋಟಿ 39 ಲಕ್ಷಜನರಿಗೆಧ್ವನಿ. ಶೇ. 67 ರಷ್ಟುಜನಸಂಖ್ಯೆಯ ಪ್ರತಿ ವ್ಯಕ್ತಿಗೆ ತಿಂಗಳಿಗೆ ಐದು ಕಿಲೋ ಅಕ್ಕಿ, ಗೋಧಿ, ಮತ್ತು ಧಾನ್ಯಗಳ ಕ್ರಮವಾಗಿ 3, 2, 1 ರಿಪಾಯಿಗಳಿಗೆ ಒದಗಿಸಲಾಗುತ್ತಿದೆ. ಸರ್ಕಾರಿಅಂದಾಜಿನ ಪ್ರಕಾರಆಹಾರ ಭದ್ರತೆಗೆ ಪ್ರತಿ ವರ್ಷ 1,24,723ರುಪಾಯಿಗಳು ಬೇಕು. ಇದುಒಂದುಅಂದಾಜು ಅಷ್ಟೆ. ರಾಜ್ಯದಲ್ಲಿ 97,35,059 ಕಟುಂಬಗಳಿಗೆ 2,77,2 ಮೆಟ್ರಿಕ್‌ಟನ್ ಪ್ರತಿ ತಿಂಗಳು ಅಗತ್ಯವಿದೆ. ಅಗ್ಗದ ಅಕ್ಕಿ ಯೋಜನೆ ಸರ್ಕಾರದರೂ 4,300 ಕೋಟಿ ವೆಚ್ಚವಾಗಬಹುದು. ಅಗ್ಗದಾ ಪ್ರಮಾಣದಲ್ಲಿ ಬಂಡವಾಳ ಒಳಗೊಂಡಿರುವ ಆಹಾರ ಭದ್ರತಯೋಜನೆಯಲ್ಲಿ ಭ್ರಷ್ಟಚಾರ ಸಾಮನ್ಯವಾಗಿ ನಡೆಯುತ್ತೆ. ಇದನ್ನುಜನತೆಯ ಮುಂದಿಡುಕಾಯಕವು ಮಾಧ್ಯಮ ನಿರ್ವಹಿಸುತ್ತಿದೆ.

ಆಹಾರ ಭದ್ರತೆ ಎಂದರೇ<

1. ಲಭ್ಯವಾಗಿ
2. ಸಮರ್ಥವಾಗಿ
3. ಎಲ್ಲ ಸಮಯದಲ್ಲೂ ಎಲ್ಲಾ ಜನರಿಗೆ ಶಕ್ತವಾಗಿ ಆಹಾರದೊರಕುವುದು.

ಈ ಮೇಲಿನ ಮೂರು ಅಂಶಗಳ ಮೇಲೆ ಆಹಾರ ಭದ್ರತೆ ನಿಂತಿದೆ. ದೇಶದ ಗೋದಾಮು (ಶ್ವೇತಗಾರ) ಗಳಲ್ಲಿ ಸಂಗ್ರಹಿಸಿ ಆ ಮೂಲಕ ಅಗತ್ಯದ ಸಂದರ್ಭಗಳಲ್ಲಿ ಬಳಸಿಕೊಳ್ಳುವುದೆ ಆಹಾರ ಭದ್ರತೆಯ ಮೂಲ ಆಶೆಯ.

**ರಾಷ್ಟ್ರೀಯ ಆಹಾರ ಭದ್ರತೆಕಾಯ್ದು 2013**
ಜಾರಿಯಾದನಂತರ ಮದ್ಯಾಹ್ನದ ಬಿಸಿಯೂಟ ಜೋಜನೆ ಎಲ್ಲ ಮಕ್ಕಳ ಮೂಲಭೂತಹಕ್ಕಾಗಿದ್ದು ರಾಜ್ಯ ಸರ್ಕಾರ ಮಕ್ಕಳಿಗೆ ಪೌಷ್ಟಿಕ ಗುಣಮಟ್ಟದ ಆಹಾರ ಒದಗಿಸುವ ಜವಾಬ್ದಾರಿ ಹೊಂದಿದೆ. ಕಾಯ್ದಿಯ ಸೆಕ್ಷನ್ 5(1) (ಎ) ಅನ್ವಯ 6 ತಿಂಗಳಿಂದ 6 ವರ್ಷಕದ ಮಕ್ಕಳೀಗೆ, ವಯಸ್ಸಿಗನುಗುಣವಾದ ಪೌಷ್ಟಿಕ ಆಹಾರವನ್ನು ಉಚಿತವಾಗಿ ಅಂಗನವಾಡಿ ಮೂಲಕ ವಿತರಿಸಬೇಕು. ಸೆಕ್ಷನ್ 5(1) (ಬಿ) ಅನ್ವಯ ಎಲ್ಲಾ ಸರ್ಕಾರಿ ಸ್ಥಳೀಯ ಸರ್ಕಾರಿ ಹಾಗೂ ಅನುದಾನಿತಶಾಲೆಗಳೂ 6 ರಿಂದ 14 ವರ್ಶವಯಸ್ಸಿನ 8 ನೇ ತರಗತಿವರೆಗಿನ ಮಕ್ಕಳಿಗೆ ರಜಾದಿನಬಿಟ್ಟು ಉಳದೆಲ್ಲ ದಿನಗಳು ಕಾಯ್ದಿಯ ಅನುಸೂಚೆ ಐ ಐ ರಲ್ಲಿ ನಿಗದಿಗೊಳಿಸಿರುವ ಪ್ರಮಾಣದಂತೆ ಮದ್ಯಾಹ್ನದ ಉಚಿತ ಬಿಸಿಯೂಟ ನೀಡಬೇಕು.

ರಾಜ್ಯದ ಗ್ರಾಮೀಣ ಭಾಗದ ಶೇ 76.04 ಹಾಗೂ ನಗರ ಪ್ರದೇಶದ ಶೇ. 49.3 ರಷ್ಟು ಜನರು ಆಹಾರ ಭದ್ರತೆ ವ್ಯಾಪ್ತಿಯೊಳಗಿದ್ದಾರೆ. ಅನ್ನ ಭಾಗ್ಯದ ವ್ಯಾಪ್ತಿಗೆ 2015–16ರ ಬಜೆಟ್ ನಲ್ಲಿ ಎಪಿಎಲ್ ಕಾರ್ಡ್ ದಾರರಿಗೂ ಯೋಜನೆ ವಿಸ್ತರಿಸಿ ಪಡಿತದಾರರ ಒಬ್ಬ ಸದಸ್ಯರಿಗೆ 5 ಕೆ. ಜಿ ಅಕ್ಕಿ ಉಚಿತವಾಗಿ ಪಡೆಯುವಂತೆ ಮಾಡಿ, ದೇಶದಲ್ಲಿ ಸಮರ್ಪಕವಾಗಿ ಆಹಾರ ಭದ್ರತೆಯನ್ನು ಜಾರಿಗೊಳಿಸಿ ಕೊಂಡು ಬರುತ್ತದ್ದಾರೆ.

**ಆಹಾರ ಭದ್ರತೆಯಲ್ಲಿ ಮಾಧ್ಯಮಗಳ ಪಾತ್ರ**:– ಮಾಧ್ಯಮಗಳು ಆಹಾರ ಭದ್ರತೆಯ ಕುರುತಿ ಜನತೆಯಲ್ಲಿ ಯೋಜಿತ ಅರಿಯುವು ಮೂಡಿಸು ವಲ್ಲಿ ಹಾಗೂ ಸಣ್ಣ ಪುಟ್ಟ ಸಮುದಾಯಗಳನ್ನು ಒಗ್ಗುಡಿಸುವ ಮೂಲಕ ಪರಸ್ಪರ ಸಂವಹನ ಮಾಧ್ಯಮ ರೂಪಗಳಲ್ಲಿ ಸಮಾಜದ ಸಹಭಾಗಿತ್ವದೊಂದಿಗೆ ಮಾಹಿತ್ಯನ್ನು ದೇಶದ್ಯಂತ ಪಸರಿಸಲು ರೇಡಿಯೋ, ದೂರದರ್ಶನ, ಪತ್ರಿಕೆಗಳು, ಇಂಟರ್ನೆಟ್ ಮತ್ತು ಇಡೀ ಸಂವಹನ ಪತ್ರಿಕೋದ್ಯಮ ತನ್ನ ಸಾಮರ್ಥ್ಯಕ್ಕೂ ಮೀರಿ ಪ್ರಭಾವ ಬಿರಿತ್ತು. ಆಹಾರ ಉತ್ಪಾದನೆಯ ವಿಧಾನ, ಸಂಸ್ಕರಣೆ, ವಲಯವಾರು ಆಹಾರ ಧಾನ್ಯಗಳ ಲಭ್ಯತೆ, ಗರಿಷ್ಠ ಮಟ್ಟದಲ್ಲಿನ ಬಳಕೆ, ವೆಚ್ಚದ ಇತಿ ಮಿತಿಗಳನ್ನು ಅಂಕಿ ಸಂಖ್ಯಗಳೊಂದಿಗೆ ವಿಶ್ಲೇಷಕರ ಮುಂದೆ ನಿರೂಪಿಸಿತ್ತು. ಇದರಿಂದ ಆಹಾರ ಭದ್ರತೆಯಲ್ಲಿನ ಭ್ರಷ್ಟಾಚಾರಕ್ಕೂ ಅವಕಾಶಗಳು ಇವೆ ಎಂದು ಪ್ರಸ್ತುತಪಡಿಸಿದ್ದು ಮಾಧ್ಯಮಗಳ ಹೇಗಳಿಕೆ.

**ಆಂತರಿಕ ಮತ್ತು ಬಾಹ್ಯ ಅಂಶಗಳು ಒಳಗೊಂಡಂತೆ ಮಾಧ್ಯಮ ಪಾತ್ರ**:

**ಸಂವಹನ ಸೇತುವೆ**: ಜನತೆ ಮತ್ತು ರಾಜಕೀಯ ನಾಯಕರುಗಳ ಮದ್ಯವರ್ತಿಯಂತೆ ಸಂವಹನದ ವಕಾಲತಾಗಿ ಕಾರ್ಯನಿರ್ವಹಿಸಿದೆ.

**ರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದಲ್ಲಿ ನಾಯಕತ್ವ**: ಜನರನ್ನು ಹಳ್ಳಿಯಿಂದ ದಿಲಿಯವರೆಗು ಆಹಾರ ಭದ್ರತೆಯ ಕುರಿತು ಜಾಗೃತಿ ಮೂಡಿಸಿ ಅವರಧ್ವನಿಗೆ ಶಕ್ತಿಯಾಗಿ ಹೋರಾಟಕ್ಕೆ ಮುಂಚುಣಿಯಲ್ಲಿ ನಿಂತು ನಾಯಕತ್ವದ ಜವಬ್ದಾರಿಯನ್ನು ಮಾಧ್ಯಮದ ಹೆಗಲೇರಿತ್ತು.

**ಶಿಕ್ಷಣ ಮತ್ತು ಸಲಹೆ**: ದೇಶದಲ್ಲಿ ಆಹಾರ ಸಮಸ್ಯೆಯಿಂದ ನರಳುತ್ತಿರುವ ಕೋಟ್ಯಾಂತರ ಜನತೆಯ ವಾಸ್ತುವ ಪರಿಸ್ಥಿತಿಯನ್ನು

ಸೂಕ್ತ ದಾಖಲಾತಿಯೊಂದಿಗೆ ಜನತೆಗೆ ಪ್ರಚಾರಪಡಿಸಿ ಆ ಮೂಲಕ ಆಹಾರ ಭದ್ರತೆಯ ಅನೂಕೂಲತೆ ಸ್ವಷ್ಟಪಡಿಸಿತ್ತು. ಅದಕ್ಕೆ ಬೇಕಾದ ಅಗತ್ಯ ಸೂಚಿತ ಸಲಹೆ ಮತ್ತು ಮಾರ್ಗಗಳನ್ನು ನೀಡಿದ್ದು ಮಾಧ್ಯಮ.

**ಸಾರ್ವಜನಿಕ ಆಹಾರ ವಿತರಣೆಯಲ್ಲಿನ ಭ್ರಷ್ಠಚಾರ ಬಯಲ್ಲಿಗೆ ತರುವಲ್ಲಿ ಮಾಧ್ಯಮ:** ಕೇಂದ್ರ ಸರ್ಕಾರ ಕಳೆದ ಸಾಅನ ಬಜೆಟ್‌ನಲ್ಲಿ ಸುಮಾರು 2.3 ಲಕ್ಷಕ್ಕೂ ಅಧಿಕ ಮೊತ್ತದ ಹಣ ಮಿಸಲಅಟ್ಟಿದೆ. ರಾಜಯ್ ಸರ್ಕಾರವು ಸುಮಾರು 10 ಸಾವಿಕಕೋಟಿ ಮಿಸಲಅಟ್ಟಿದೆ. ಇಷ್ಟೊಂದು ಪ್ರಮಾಣದಲ್ಲಿ ಹಣ ಇರುವುದರಿಂದ ಆಹಾರ ಧಾನ್ಯಗಳನ್ನು ಖರಿದಿಯಿಂದ ಅಂತಿಮ ಬಳಕೆದಾರನಿಗೆ ತಲುಪುವವರೆಗೆ ನಡೆಯುವ ಭ್ರಷ್ಟಚಾರವನ್ನು ಅನೇಕ ಬಾರಿ ಹೊರಹಾಕಿದ್ದು ಮಾಧ್ಯಮವೆ. ಉದಾ: ಕರ್ನಾಟಕ್ಕದಲ್ಲಿ ಇದುವರೆಗು ರಾಜ್ಯದಲ್ಲಿ 1.46ಲಕ್ಷ ಮೆಟ್ರಿಕ್ ಅಕ್ಕಿ ಕಳ್ಳತನಕ್ಕೆ ಸಾಕ್ಷಿಯಾಗದೆ. ಕಳೆದ ವರ್ಷ ವಿತರಿಸಲಾಗಿದ 1.03 ಕೋಟಿ ಕುಟುಂಬಗಳ ಪೈಕಿ ಶೇ 30 ರಷ್ಟು ಬೋಗಸ ಕಾರ್ಡ ಗಳಾಗಿವೆ. ಪ್ರತಿ ತಿಂಗಳು ಒಟ್ಟು 110 ಕೋಟಿ ರೂಪಾಯಿ ಗಳಂತೆ ಒಂದು ವರ್ಷಕ್ಕೆ 392 ಕೋಟಿ ರೂಪಾಯಿಗಳು ಹೊರೆಯಾ ಗುತ್ತದೆ ಎಂದು ರಾಜ್ಯದ ಪ್ರತಿಷ್ಟಿತ ಪತ್ರಿಕೆಯ ತನಿಖಾ ವರದಿ. ಇಂತಹ ಸುದ್ದಿಗಳ ಮೂಲಕ ಭ್ರಷ್ಟಚಾರದ ಕರಾಳ ಮೂಕವನ್ನು ಜನತೆಯ ಮುಂದು ಇಡುವಂತ ಕಾಯಕ ಮಾಧ್ಯಮ ಮಾಡುತ್ತ ಬರುತ್ತಿದೆ.

ISSN 2249 - 5754 VIJNANA KANNADA (PRINT)


# ವಿಷಯ:–05

# ಧನ್ವಂತರೀಯಮ್

# ಆಯುರ್ವೇದ ಮತ್ತು ಆರೋಗ್ಯ ವಿಜ್ಞಾನಗಳು

## THEME:-05

## DHANVANTAREEYAM
## AYURVEDA AND HEALTH SCIENCES

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಪ್ರಾಚೀನ ಭಾರತೀಯರಿಗಿದ್ದ ಸ್ವಾಸ್ಥ್ಯ ಪ್ರಜ್ಞೆ ಹಾಗೂ ಅದರ ಪ್ರಸ್ತುತತೆ | ಕಾಶೀನಾಥ ಶಾಸ್ತ್ರಿ ಹೆಚ್.ವಿ. | 137 – 139 |
| 2 | **ಸ್ಥೌಲ್ಯ ರೋಗ (Obesity) ದಲ್ಲಿ ಆಯುರ್ವೇದ ಔಷಧಿಗಳ ಪ್ರಯೋಗ** | ಡಾ। ಶ್ರೀಪತಿ ಆಚಾರ್ಯ ಜಿ. | |
| | **ಒಂದು ವೈಜ್ಞಾನಿಕ ಅಧ್ಯಯನ** | ಪ್ರಪುಲ್ಲ ಆಚಾರ್ಯ | 139 – 141 |
| 3 | **ಮುನಿ ಪ್ರಭಾವಟಿ, ಮುನಿಥೈರಾನ್ ಮತ್ತು ತ್ರಿಫಲಾವಟಿಗಳ** | | |
| | **ಹೈಪೋಥೈರಾಯ್ಡಿಸಮ್ ರೋಗಿಗಳ ಚಿಕಿತ್ಸೆಯಲ್ಲಿ ಚಿಕಿತ್ಸಕೀಯ** | | |
| | **ಅನುಭವ ಒಂದು ವೈಜ್ಞಾನಿಕ ಅಧ್ಯಯನ** | ಡಾ। ಶ್ರೀಪತಿ ಆಚಾರ್ಯ ಜಿ | 141 – 143 |
| 4 | ಪ್ರನಾಳೀಯ ಮತ್ತು ಜೈವಿಕ ವಿಧಾನಗಳಲ್ಲಿ ಕೆಲವು ಆಹಾರ | ಮೋಹನ್ ಗೌಡ ಸಿ.ಎಮ್. | |
| | ಸಂರಕ್ಷಕಗಳ ವಿಷಶಾಸ್ತ್ರೀಯ ಮೌಲ್ಯಮಾಪನ | ರಾಮ್ ಕುಮಾರ್ ಕೆ., ವಿಜಾಯ್ ವಿ. | |
| | | ಚೈತ್ರ ಸಿ.ಎಸ್, ಶ್ರೀಪ್ರಿಯ ಎಮ್ | 144 – 149 |
| 5 | ಶತರೋಗ ನಿವಾರಕ ಶತಾವರಿ | ಹೆಚ್.ಸಿ.ಮಧುಸೂಧನ | |
| | | ಬಿ.ಎಮ್.ನಾಗಭೂಷಣ | 150 - 151 |
| 6 | **ವಿಚರ್ಚಿಕ (Contact dermatitis) ರೋಗದಲ್ಲಿ ಆಯುರ್ವೇದ** | ಕು.ರಾಜೇಶ್ವರಿ ಆಚಾರ್ಯ | |
| | **ಚಿಕಿತ್ಸೆ ಒಂದು ವೈಜ್ಞಾನಿಕ ಅಧ್ಯಯನ** | ಡಾ। ಶ್ರೀಪತಿ ಆಚಾರ್ಯ ಜಿ | 152 – 153 |
| 7 | **ಕಾಮಾಲೆ ರೋಗ (Jaundice) ದಲ್ಲಿ ಆಯುರ್ವೇದೋಕ್ತ** | ಅನಂತ ಆಚಾರ್ಯ ಎಸ್ | |
| | **ಪಥ್ಯಾ ಪಥ್ಯ** | ಡಾ। ಶ್ರೀಪತಿ ಆಚಾರ್ಯ ಜಿ | 153 – 155 |

# ಪ್ರಾಚೀನ ಭಾರತೀಯರಿಗಿದ್ದ ಸ್ವಾಸ್ಥ್ಯ ಪ್ರಜ್ಞೆ ಹಾಗೂ ಅದರ ಪ್ರಸ್ತುತತೆ

ಕಾಶೀನಾಥ ಶಾಸ್ತ್ರಿ ಹೆಚ್.ವಿ.
ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ಸಂಸ್ಕೃತ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಸಹ್ಯಾದ್ರಿಕಾಲೇಜು ಆವರಣ, ಶಿವಮೊಗ್ಗ–577203
ಇ–ಮೇಲ್: panditaradya@gmail.com

**'ಧಾರ್ಯತೆ ಇತಿ ಧರ್ಮ'** ಎಂಬುದು ಧರ್ಮ ಶಬ್ದದ ನಿಷ್ಪತ್ತಿಯಾಗಿದೆ. ಅಂದರೆ ನಾವು ಯಾವುದನ್ನು ಅವಲಂಬಿಸುತ್ತೇವೆಯೋ ಅದು ಧರ್ಮ. ಇಂತಹ ಧರ್ಮಪರಿಪಾಲನೆ ಮಾಡಲು ಶರೀರವೇ ಪ್ರಮುಖ ಸಾಧನ. ಶರೀರವು ಸದೃಢವಾಗಿದ್ದರೆ ಯಾವ ಕರ್ತವ್ಯವನ್ನೂ ನಿರ್ವಹಿಸಬಹುದು. ಹಾಗಾಗಿಯೇ ಮಹಾಕವಿ ಕಾಳೀದಾಸನು ತನ್ನ ಕುಮಾರಸಂಭವ ಮಹಾಕಾವ್ಯದಲ್ಲಿ **'ಶರೀರಮಾದ್ಯಂಖಲು ಧರ್ಮಸಾಧನಂ'** ಎಂದಿದ್ದಾನೆ. ಈ ರೀತಿ ಶಾರೀರಿಕ ಆರೋಗ್ಯದೊಡನೆ ಮನೋಬಲವಿದ್ದರೆ ಅಸಾಧ್ಯವೆಂಬುದೇ ಇರುವುದಿಲ್ಲ. ಆದ್ದರಿಂದ ಶಾರೀರಿಕ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ವೇದಗಳೇ ಆದಿಯಾಗಿ ಸಂಸ್ಕೃತದ ಎಲ್ಲಾ ಪ್ರಕಾರಗಳ ಸಾಹಿತ್ಯಗಳಲ್ಲೂ ಮಹತ್ವವನ್ನು ಕೊಡಲಾಗಿದೆ.

ಸ್ವಾಸ್ಥ್ಯರಕ್ಷಣೆಗೆ ವೈದ್ಯಕೀಯ ಜ್ಞಾನದ ಅವಶ್ಯಕತೆ ಅಗತ್ಯವಾದುದು. ಭಾರತದಲ್ಲಿ ವೈದ್ಯಕೀಯ ಜ್ಞಾನದ ಉಗಮವನ್ನು ಸುಮಾರು 10ಸಾವಿರ ವರ್ಷಗಳ ಹಿಂದಿನ ಋಗ್ವೇದದಿಂದಲೇ ತಿಳಿಯಬಹುದು. ಬಹಳ ಕಾಲದ ತರುವಾಯ ವೈದ್ಯಕೀಯ ಜ್ಞಾನಕ್ಕೆ ಸಂಹಿತೆಯ ರೂಪಕೊಟ್ಟು ಅದನ್ನು 'ಆಯುರ್ವೇದ' ಎಂದು ವ್ಯವಸ್ಥಿತವಾಗಿ ಕರೆಯಲಾಯಿತು. ನಮಗೆಲ್ಲಾ ತಿಳಿದಿರುವಂತೆ ಇದು ಅಥರ್ವವೇದದ ಉಪವೇದ. ಇದೊಂದೇ ಅಲ್ಲದೆ ಹಿಂದಿನ ಹಲವಾರು ಕೃತಿಗಳಲ್ಲಿ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಹಲವು ಮಹತ್ವದ ಅಂಶಗಳನ್ನು ಭಾರತೀಯರು ತಿಳಿಸಿದ್ದಾರೆ ಅದನ್ನು ಕುರಿತಾದ ಅಧ್ಯಯನವನ್ನು ಈ ಪ್ರಬಂಧದಲ್ಲಿ ವಿವರಿಸಲಾಗಿದೆ.

ವೇದಗಳ ಕಾಲದಲ್ಲಿ ಹಾಗೂ ನಂತರದ ಕೆಲವು ಶತಮಾನಗಳವರೆಗೆ ಮಾನವ ತನ್ನ ಜೀವನದ ಕಟ್ಟಕಡೆಯ ಧ್ಯೇಯ ಮೋಕ್ಷ ಎಂದು ಬಲವಾಗಿ ನಂಬಿದ್ದನು. ಮೋಕ್ಷವೇ ಜೀವನದ ಪರಮೋಚ್ಚ ಗುರಿ ಎಂದು ವೇದಾದಿಗಳಲ್ಲಿ ಪ್ರತಿಪಾದಿತವಾಗಿರುವುದರಿಂದ ಮೋಕ್ಷ ಸಾಧನೆಗಾಗಿ ಜನರಿಗೆ ಅವರವರ ಕರ್ತವ್ಯಗಳ ಮೂಲಕ ಮಾರ್ಗಸೂಚಿಯನ್ನು ಮಹರ್ಷಿಗಳು ಎನಿಸಿಕೊಂಡಂತಹ ಅಂದಿನ ವಿಜ್ಞಾನಿಗಳು ಹಾಕಿಕೊಟ್ಟಿದ್ದರು. ಧರ್ಮ, ಅರ್ಥ, ಕಾಮಗಳ ಮೂಲಕ ಮೋಕ್ಷವನ್ನು ಸಂಪಾದಿಸಬೇಕೆಂದು ತಿಳಿಸಿದರು. ಇಲ್ಲಿ ಧರ್ಮವೆಂದರೆ ಕೇವಲ ಪೂಜೆ, ಹೋಮ, ಹವನಗಳೆಂದಲ್ಲ. ತಾವು ಅವಲಂಬಿಸಿರುವ ಕರ್ತವ್ಯಗಳು ಎಂದರ್ಥ. ಉದಾಹರಣೆಗೆ ವಿದ್ಯಾರ್ಥಿಗೆ ಅಧ್ಯಯನವೇ ಧರ್ಮ. ಕೃಷಿಕನಿಗೆ ಉಳುಮೆಯೇ ಧರ್ಮ, ಶಿಕ್ಷಕನಿಗೆ ಬೋಧನೆಯೇ ಧರ್ಮ.

**'ಧಾರ್ಯತೆ ಇತಿ ಧರ್ಮ'** ಎಂಬುದು ಧರ್ಮ ಶಬ್ದದ ನಿಷ್ಪತ್ತಿಯಾಗಿದೆ. ಅಂದರೆ ನಾವು ಯಾವುದನ್ನು ಅವಲಂಬಿಸುತ್ತೇವೆಯೋ ಅದು ಧರ್ಮ. ಇಂತಹ ಧರ್ಮಪರಿಪಾಲನೆ ಮಾಡಲು ಶರೀರವೇ ಪ್ರಮುಖ ಸಾಧನ. ಶರೀರವು ಸದೃಢವಾಗಿದ್ದರೆ ಯಾವ ಕರ್ತವ್ಯವನ್ನೂ ನಿರ್ವಹಿಸಬಹುದು. ಹಾಗಾಗಿಯೇ ಮಹಾಕವಿ ಕಾಳೀದಾಸನು ತನ್ನ ಕುಮಾರಸಂಭವ ಮಹಾಕಾವ್ಯದಲ್ಲಿ **'ಶರೀರಮಾದ್ಯಂಖಲು ಧರ್ಮಸಾಧನಂ'** ಎಂದಿದ್ದಾನೆ. ಈ ರೀತಿ ಶಾರೀರಿಕ ಆರೋಗ್ಯದೊಡನೆ ಮನೋಬಲವಿದ್ದರೆ ಅಸಾಧ್ಯವೆಂಬುದೇ ಇರುವುದಿಲ್ಲ. ಆದ್ದರಿಂದ ಶಾರೀರಿಕ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ವೇದಗಳೇ ಆದಿಯಾಗಿ ಸಂಸ್ಕೃತದ ಎಲ್ಲಾ ಪ್ರಕಾರಗಳ ಸಾಹಿತ್ಯಗಳಲ್ಲೂ ಮಹತ್ವವನ್ನು ಕೊಡಲಾಗಿದೆ.

ಸ್ವಾಸ್ಥ್ಯರಕ್ಷಣೆಗೆ ವೈದ್ಯಕೀಯ ಜ್ಞಾನದ ಅವಶ್ಯಕತೆ ಅಗತ್ಯವಾದುದು. ಭಾರತದಲ್ಲಿ ವೈದ್ಯಕೀಯ ಜ್ಞಾನದ ಉಗಮವನ್ನು ಸುಮಾರು 10ಸಾವಿರ ವರ್ಷಗಳ ಹಿಂದಿನ ಋಗ್ವೇದದಿಂದಲೇ ತಿಳಿಯಬಹುದು. ಬಹಳ ಕಾಲದ ತರುವಾಯ ವೈದ್ಯಕೀಯ ಜ್ಞಾನಕ್ಕೆ ಸಂಹಿತೆಯ ರೂಪಕೊಟ್ಟು ಅದನ್ನು 'ಆಯುರ್ವೇದ' ಎಂದು ವ್ಯವಸ್ಥಿತವಾಗಿ ಕರೆಯಲಾಯಿತು. ನಮಗೆಲ್ಲಾ ತಿಳಿದಿರುವಂತೆ ಇದು ಅಥರ್ವವೇದದ ಉಪವೇದ.

ಆಯುರ್ವೇದ ಎಂದರೆ ಆಯುಸ್ಸಿನ ಪರಿಮಾಣವನ್ನು ತಿಳಿದುಕೊಳ್ಳುವುದು ಎಂದು ಸಾಮಾನ್ಯಾರ್ಥ. "ಆಯುಃ ವಿದ್ಯತೇ ಅಸ್ಮಿನ್" ಯಾವ ವೇದದಲ್ಲಿ ಆಯುವು ಇದೆಯೋ ಅದು ಆಯುರ್ವೇದ ಎಂದು ಆಯುರ್ವೇದದ ಒಂದು ಬಗೆಯ ನಿಷ್ಪತ್ತಿ. ಚರಕ ಸಂಹಿತೆಯಲ್ಲಿ ಆಯುರ್ವೇದ ಎಂಬುದನ್ನು ಈ ರೀತಿ ಅರ್ಥೈಸಲಾಗಿದೆ.

**'ಹಿತಾಹಿತಂ ಸುಖಂ ದುಃಖಮ್ ಆಯುಸ್ತಸ್ಯ ಹಿತಾಹಿತಮ್ ।**
**ಮಾನಂಚ ತಚ್ಚ ಯತ್ರೋಕ್ತಂ ಆಯುರ್ವೇದಃ ಸ ಉಚ್ಯತೇ ॥'**

– ಯಾವುದರಲ್ಲಿ ಹಿತ ಆಯುಷ್ಯ, ಅಹಿತ ಆಯುಷ್ಯ, ಸುಖ ಆಯುಷ್ಯ, ದುಃಖ ಆಯುಷ್ಯ, ಆಯುಷ್ಯಕ್ಕೆ ಹಿತವಾದದ್ದೇನು? ಅಹಿತವಾದದ್ದೇನು ಅವುಗಳ ಪ್ರಮಾಣಗಳು ಯಾವುವು ? ಎಂದು ಹೇಳಿದೆಯೋ ಅದಕ್ಕೆ ಆಯುರ್ವೇದ ಎಂದು ಕರೆಯಲಾಗುತ್ತದೆ ಎಂದು ತಿಳಿಸಲಾಗಿದೆ.

ಕೆಲ ಕಾಲದ ಹಿಂದೆ ಎಂಬ ನಮ್ಮಲ್ಲಿನ ಕೆಲ ವಿದ್ಯಾವಂತರೆನಿಸಿಕೊಂಡಂತಹವರು ಆಯುರ್ವೇದ, ಯೋಗ, ಜ್ಯೋತಿಷ ಇತ್ಯಾದಿ ಜ್ಞಾನರಾಶಿಯನ್ನು ಮೌಢ್ಯ ಎಂದು ನಿರ್ಧರಿಸಿ ಜನರಲ್ಲಿ ಗೊಂದಲವನ್ನುಂಟುಮಾಡಿದ್ದರು. ವಿದೇಶಿಯರು ಇದರ ಮಹತ್ವವನ್ನು ಅರಿತು ಆಚರಣೆಗೆ ತರಹತ್ತಿದಾಗ ಇದೇ ಸಮುದಾಯ ನಿಧಾನವಾಗಿ ಆಯುರ್ವೇದವನ್ನು ಅವಲಂಬಿಸುತ್ತಿದ್ದಾರೆ.

ಬಹಳಷ್ಟು ಜನ ತಿಳಿದಿರುವಂತೆ ಆಯುರ್ವೇದವು ಚಿಕಿತ್ಸಾಪದ್ಧತಿಯಲ್ಲ. ಅದು ಒಂದು ಜೀವನ ಕ್ರಮ. ಚರಕ ಸಂಹಿತೆಯಲ್ಲಿ ಆಯುರ್ವೇದದ ಕಾರ್ಯವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.

**"ಸ್ವಸ್ಥಸ್ಯ ಸ್ವಾಸ್ಥ್ಯರಕ್ಷಣಂ ಆತುರಸ್ಯ ವಿಕಾರ ಪ್ರಶಮನಂ ತಂತ್ರಸ್ಯಾಸ್ಯ ಪ್ರಯೋಜನಂ"**

ಆಯುರ್ವೇದದ ಕಾರ್ಯವೆಂದರೆ ಆರೋಗ್ಯವಂತನ ಆರೋಗ್ಯ ರಕ್ಷಣೆಗೆ ಪ್ರಥಮ ಮೊದಲು ನಂತರದ ಪ್ರಾಶಸ್ತ್ಯ ರೋಗಿಯ ರೋಗದ ಉಪಶಮನಕ್ಕೆ ಎಂಬುದಾಗಿದೆ. ಇದು ನಮ್ಮ ಪ್ರಾಚೀನರು

ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ವಹಿಸುತ್ತಿದ್ದ ಕಾಳಜಿಯನ್ನು ತೋರಿಸುತ್ತದೆ.

ಹಾಗಾದರೆ ಆರೋಗ್ಯವಂತನ ಲಕ್ಷಣವೇನು ಎಂದರೆ ಯಾವ ಆಧುನಿಕ ವಿಜ್ಞಾನವೂ ಇದುವರೆಗೂ ನಿರ್ದಿಷ್ಟವಾಗಿ ಉತ್ತರಿಸಲು ಸಾಧ್ಯವಾಗಿಲ್ಲ. ಆದರೆ ಆಯುರ್ವೇದದಲ್ಲಿ ಇದಕ್ಕೆ ನಿಖರವಾದ ಉತ್ತರವಿದೆ.

**"ಸಮದೋಷ ಸಮಾಗ್ನಿಶ್ಚ ಸಮಧಾತು ಮಲಕ್ರಿಯಃ ।**
**ಪ್ರಸನ್ನಾತ್ಮೇಂದ್ರಿಯಮನಾಃ ಸ್ವಸ್ಥ ಇತ್ಯಭಿಧೀಯತೇ ॥"**

– ಯಾರ ಶರೀರದಲ್ಲಿ ತ್ರಿದೋಷಗಳು (ವಾತ, ಪಿತ್ತ & ಕಫ), ಹದಿಮೂರು ಅಗ್ನಿಗಳು (ಜಠರಾಗ್ನಿ, ಏಳುಧಾತ್ವಗ್ನಿಗಳು, ಐದು ಭೂತಾಗ್ನಿ) ಹಾಗೂ ಏಳು ಧಾತುಗಳು (ರಸ, ರಕ್ತ, ಮಾಂಸ, ಮೇದಃ, ಅಸ್ಥಿ, ಮಜ್ಜೆ ಮತ್ತು ಶುಕ್ರ) ಮತ್ತು ಮೂರು ಮಲಗಳು (ಪುರೀಷ, ಮೂತ್ರ, ಸ್ವೇದ) ಇವು ಸಮಾನಾವಸ್ಥೆಯಲ್ಲಿದ್ದು, ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಿರುತ್ತವೆಯೋ ಹಾಗೂ ಆತ್ಮ, ಇಂದ್ರಿಯ ಮತ್ತು ಮನಸ್ಸುಗಳು ಪ್ರಸನ್ನವಾಗಿರುತ್ತವೆಯೋ ಆತನೇ ಸ್ವಾಸ್ಥ್ಯನು ಅಥವಾ ಆರೋಗ್ಯವಂತನು ಎಂದು ನಿರ್ಧರಿಸಲಾಗಿದೆ. ಇಲ್ಲಿ ಆರೋಗ್ಯವಂತ ಎನ್ನಲು ಮಾನಸಿಕ ಸ್ವಾಸ್ಥ್ಯವು ಮುಖ್ಯ ಎಂಬುದು ಗಮನಾರ್ಹ. ಈ ರೀತಿ ಆರೋಗ್ಯವಂತನೆಂದು ಪರಿಗಣಿಸಲು ಎಲ್ಲಾ ಅಂಶಗಳನ್ನು ಹಿಂದಿನವರು ಗಣನೆಗೆ ತೆಗೆದುಕೊಳ್ಳುತ್ತಿದ್ದರೆಂದರೆ ಅವರಲ್ಲಿದ್ದ ಸ್ವಾಸ್ಥ್ಯ ಪ್ರಜ್ಞೆ ಇಂದಿನ ವೈದ್ಯಕೀಯವಿಜ್ಞಾನಕ್ಕೆ ಇಲ್ಲವೆಂದರೆ ತಪ್ಪಿಲ್ಲ.

ಮಹಾಭಾರತದಲ್ಲೂ ಕೂಡ ಆರೋಗ್ಯ ವಿಜ್ಞಾನದ ಉಲ್ಲೇಖ ಕೆಲವೆಡೆಗಳಲ್ಲಿ ಕಂಡು ಬರುತ್ತದೆ. ಒಂದೆಡೆ –

**ಶೀತೋಷ್ಣೇ ಚೈವ ವಾಯುಶ್ಚ ತ್ರಯಃ ಶಾರೀರಜಾ ಗುಣಾಃ ।**
**ತೇಷಾಂ ಗುಣಾನಾಂ ಯತ್ತದಾಹುಃ ಸ್ವಾಸ್ಥ್ಯ ಲಕ್ಷಣಂ ॥**

ಶೀತ, ಉಷ್ಣ ಮತ್ತು ವಾಯು ಎಂದು ಶರೀರ ಸಂಬಂಧಿಯಾದ ಗುಣಗಳು ಮೂರು. ಈ ಮೂರೂ ಗುಣಗಳು ಯಾರಲ್ಲಿ ಸಮಾನವಾಗಿರುತ್ತವೆಯೋ ಆತನನ್ನು ಸ್ವಸ್ಥನೆಂದು ಕರೆಯಬಹುದು ಎನ್ನಲಾಗಿದೆ. ಸಾಮಾನ್ಯವಾಗಿ ಈ ಮೂರು ಅಂಶಗಳ ವೈಪರೀತ್ಯದಿಂದಲೇ ರೋಗಗಳ ಲಕ್ಷಣಗಳು ಕಾಣಿಸಿಕೊಂಡು ಅವು ಮನುಷ್ಯನನ್ನು ಬಾಧಿಸುತ್ತವೆಂದು ಆರೋಗ್ಯಶಾಸ್ತ್ರಜ್ಞರ ಅಭಿಮತವೂ ಆಗಿದೆ.

ಚಾಣಕ್ಯಶತಕ ಎಂಬ ಗ್ರಂಥದಲ್ಲಿ ಚಾಣಕ್ಯನೂ ಕೂಡ ಸ್ವಾಸ್ಥ್ಯದ ಪರಿಕಲ್ಪನೆಯನ್ನು ಸುಂದರವಾಗಿ ವಿವರಿಸಿದ್ದಾನೆ.

**'ಸುಭಿಕ್ಷಂ ಕೃಷಕೇ ನಿತ್ಯಂ ನಿತ್ಯಂ ಸುಖಮರೋಗಿಣಿ ।**
**ಭಾರ್ಯಾ ಭರ್ತುಃ ಪ್ರಿಯಾ ಯಸ್ಯ ತಸ್ಯ ನಿತ್ಯೋತ್ಸವಂ ಗೃಹಂ ॥'**

ಕೃಷಿಕನ ಮನೆಯಲ್ಲಿ ನಿತ್ಯವೂ ಸುಭಿಕ್ಷತೆಯಿರುವುದು. ರೋಗವಿಲ್ಲದ ಮನೆಯಲ್ಲಿ ನಿತ್ಯವೂ ಸುಖವಿರುವುದು. ಪ್ರಿಯಳಾದ ಹೆಂಡತಿಯುಳ್ಳವನ ಮನೆಯಲ್ಲಿ ನಿತ್ಯವೂ ಹಬ್ಬವೇ ಎಂದಿದ್ದಾನೆ. ಕೃಷಿಕನು ಹೇಗೆ ಆಹಾರಕ್ಕಾಗಿ ಪರಿತಪಿಸುವುದಿಲ್ಲವೋ, ಪ್ರಿಯಳಾದ ಹೆಂಡತಿಯಿದ್ದವನಿಗೆ ಹೇಗೆ ನಿತ್ಯೋತ್ಸವಿರುತ್ತದೆಯೋ ಹಾಗೆಯೇ ರೋಗಿಗಳಿಲ್ಲದ ಮನೆಯು ಸುಖದಿಂದ ಕೂಡಿರುತ್ತದೆ. ಕುಟುಂಬದಲ್ಲಿ ಎಲ್ಲರೂ ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಸುಖವಾಗಿದ್ದರೆ ಮಾತ್ರ ಅದು ಸುಖೀ ಕುಟುಂಬವೆಂದು ಚಾಣಕ್ಯನ ಅಭಿಮತ.

ಶಾರ್ಙ್ಗಧರದೇವ ಎಂಬ ದಾರ್ಶನಿಕ ತನ್ನ ಕೃತಿಯಾದ 'ಶಾರ್ಙ್ಗಧರ ಪದ್ಧತಿ'ಯಲ್ಲಿ ಆರೋಗ್ಯವೇ ಐಶ್ವರ್ಯವೆಂದು ಪ್ರತಿಪಾದಿಸಿದ್ದಾನೆ.

**"ಆರೋಗ್ಯಂ ವಿದ್ವತ್ತಾ ಸಜ್ಜನಮೈತ್ರೀ ಮಹಾಕುಲೇ ಜನ್ಮ ।**
**ಸ್ವಾಧೀನತಾ ಚ ಪುಂಸಾಂ ಮಹದೈಶ್ವರ್ಯಂ ವಿನಾಪ್ಯರ್ಥೇಃ ॥**

– ಈತನ ಪ್ರಕಾರ ಶ್ರೀಮಂತನೆಂದರೆ ಆರೋಗ್ಯ, ವಿದ್ವತ್ತು, ಸಜ್ಜನರ ಸ್ನೇಹ, ಉತ್ತಮ ಕುಟುಂಬದಲ್ಲಿ ಜನನ ಹಾಗೂ ಸ್ವಾವಲಂಬನೆ ಇವು ಯಾವಾತನಲ್ಲಿ ಇರುತ್ತವೆಯೋ ಆತನು ಹಣವಿಲ್ಲದಿದ್ದರೂ ಸಿರಿವಂತನೇ ಸರಿ. ಈ ಮೇಲಿನ ಅಂಶಗಳಲ್ಲಿ ಯಾವೊಂದು ಅಂಶವೂ ಇಲ್ಲದಿದ್ದರೂ ಮನುಷ್ಯ ತನ್ನ ಕಾರ್ಯಗಳಿಗೆ ಇನ್ನೊಬ್ಬರನ್ನು ಆಶ್ರಯಿಸಬೇಕಾಗುತ್ತದೆ. ಹಾಗಾಗಿಯೇ ಮೇಲ್ಕಂಡ ಈ ಐದು ಅಂಶಗಳಲ್ಲಿ ಆರೋಗ್ಯಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿರುವುದು ವೇದ್ಯವಾಗುತ್ತದೆ.

ಮಹಾನ್ ತತ್ತ್ವಜ್ಞಾನಿಯಾದ ಶಂಕರಾಚಾರ್ಯರೂ ಕೂಡ ಸಂವಾದ ರೂಪದಲ್ಲಿ ಒಂದುಕಡೆ –

**"ಕಿಂ ಭಾಗ್ಯಂ ದೇಹವತಾಮಾರೋಗ್ಯಂ, ಕಃ ಫಲೀ ಕೃಷೀಕೃತ್ ।**
**ಕಸ್ಯ ನ ಪಾಪಂ ? ಜಪತಃ ಕಃ ಪೂರ್ಣೋ ? ಯಃ ಪ್ರಜಾವಾನ್ ಸ್ಯಾತ್ ॥**

– ಮನುಷ್ಯರಿಗೆ ಭಾಗ್ಯವೆಂದರೆ ಯಾವುದು? ಆರೋಗ್ಯವೇ ಭಾಗ್ಯ. ಫಲವುಳ್ಳವನಾರು ? ಕೃಷಿಕರ್ಮ ಮಾಡುವವನು. ಯಾರಿಗೆ ಪಾಪವಿಲ್ಲ? ಜಪ ಮಾಡುವವನಿಗೆ. ಯಾರು ಪೂರ್ಣನು? ಮಕ್ಕಳುಳ್ಳವನು. ಎಂದಿದ್ದಾರೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಮನುಷ್ಯನಿಗೆ ಆರೋಗ್ಯವೇ ನಿಜವಾದ ಸೌಭಾಗ್ಯ ಎಂಬುದು. ಆರೋಗ್ಯವಿಲ್ಲದವನು ಐಶ್ವರ್ಯವಿದ್ದರೂ ಅನುಭವಿಸಲಾಗುವುದಿಲ್ಲ. ಇಂದು ನಾವೆಲ್ಲಾ ನೋಡುವಂತೆಯೇ ಮಧುಮೇಹ, ರಕ್ತದೊತ್ತಡ, ಮಾನಸಿಕ ಒತ್ತಡ ಇತ್ಯಾದಿಗಳು ಹಣವಿರುವವರ ಬಳಿಯಲ್ಲಿಯೇ ಇವೆ. ಹಾಗಾಗಿ ಅವರು ಈ ರೋಗಗಳನ್ನು ಹತೋಟಿಯಲ್ಲಿಡುವುದರಲ್ಲಿಯೇ ಜೀವನವನ್ನು ಕಳೆದಿರುತ್ತಾರೆಯೇ ವಿನಃ ಯಾವುದೇ ಸಂತೋಷದಿಂದಲ್ಲ. ಹಾಗಾಗಿಯೇ ಶಂಕರಾಚಾರ್ಯರ ಈ ಮಾತು ಸಾರ್ವಕಾಲಿಕವಾದುದು.

ಆರೋಗ್ಯವನ್ನು ಅತ್ಯಂತ ಕಾಳಜಿಯಿಂದ ಕಾಪಾಡಿಕೊಳ್ಳಲು ಹಲವಾರು ಅಂಶಗಳು ಸಂಸ್ಕೃತದ ಹಲವು ಪ್ರಕಾರಗಳಲ್ಲಿ ಉಪಲಬ್ಧವಿದೆ. ಆರೋಗ್ಯವಂತನಾಗಲು ದೇಹವು ಸದೃಢವಾಗಿರಬೇಕು. ನಾವು ವಾಸಿಸುವ ಮನೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವಂತೆ, ಆತ್ಮನು ವಾಸಿಸುವ ದೇಹವನ್ನು ಪ್ರತಿನಿತ್ಯ ಅಚ್ಚುಕಟ್ಟಾಗಿ ನೋಡಿಕೊಳ್ಳಬೇಕು. ಹಾಗೆಂದ ಮಾತ್ರಕ್ಕೆ ದೇಹವನ್ನು ಅಲಂಕಾರಗೊಳಿಸುವುದೆಂದರ್ಥವಲ್ಲ ಶುಚಿಯಾಗಿಟ್ಟುಕೊಳ್ಳಬೇಕೆಂದು ಹೇಳಿದ್ದಾರೆ.

ನಮ್ಮ ನಿಶ್ಚಿತ ಗುರಿಯನ್ನು ಸಾಧಿಸಲು ದೇಹಾಭಿಮಾನವನ್ನು ಬಿಡಬೇಕೆಂದು ತತ್ತ್ವಶಾಸ್ತ್ರಜ್ಞರು ಹಲವೆಡೆ ಹೇಳಿದ್ದರೂ ಕೂಡ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ದೇಹಾಭಿಮಾನವನ್ನು ಹೊಂದಿದರೆ ತಪ್ಪೇನಿಲ್ಲವೆಂದೂ ಹೇಳಿದ್ದಾರೆ.
ಜೀವನಾನಂದನೆಂಬ ಕವಿಯು –

**'ಪುರಾಭಿಮಾನೋ ನ ವೃಥಾ ತದ್ದಾರ್ಢ್ಯೇನ ವಿನಾ ಕಥಂ ।**
**ಚಿತ್ತಸ್ವಾಸ್ಥ್ಯಂ ವಿನಾತಚ್ಚ ಶಿವಭಕ್ತಿದೃಢಾ ಕಥಂ ? ॥'**

ಶರೀರವೆಂಬ ಪಟ್ಟಣದ ಬಗ್ಗೆ ಇಡುವಂತಹ ಅಭಿಮಾನ ವ್ಯರ್ಥವಾದುದಲ್ಲ. ಏಕೆಂದರೆ ಶರೀರವು ಸದೃಢವಾಗಿಲ್ಲದಿದ್ದರೆ ಮನಸ್ಸು ಆರೋಗ್ಯದಿಂದಿರಲು ಸಾಧ್ಯವಿಲ್ಲ. ಮನಸ್ಸು ಆರೋಗ್ಯದಿಂದಿಲ್ಲವೆಂದರೆ ಶಿವಭಕ್ತಿಯು ದೃಢವಾಗಲು ಹೇಗೆ ಸಾಧ್ಯ ?

ಇಲ್ಲಿ ಮನಸ್ಸು ಯಾವುದೇ ಒಂದು ವಿಷಯದ ಮೇಲೆ ಕೇಂದ್ರೀಕೃತವಾಗಬೇಕೆಂದಲ್ಲಿ ಮನಸ್ಸಿನ ಆವಾಸಸ್ಥಾನವಾಗಿರುವ ದೇಹ ಆರೋಗ್ಯವಾಗಿರಬೇಕು. ಆಗ ಮನಸ್ಸನ್ನು ನಿಯಂತ್ರಿಸಲು ಸಾಧ್ಯ. ವಾಸಿಸುವ ಮನೆಯೇ ದುರ್ಬಲವಾಗಿದ್ದರೆ ಜೀವನವನ್ನು ನಿಶ್ಚಿಂತತೆಯಿಂದ ಮಾಡುವುದಾದರೂ ಹೇಗೆ ಹಾಗಾಗಿ ಮನೋಸ್ವಾಸ್ಥ್ಯ ಹಾಗೂ ದೇಹಸ್ವಾಸ್ಥ್ಯಗಳು ಪರಸ್ಪರಾವಲಂಬಿಗಳಾಗಿವೆ.

ಇದನ್ನೇ ಕೌಟಿಲ್ಯನೂ ಕೂಡ ತನ್ನ ರಾಜನೀತಿ ಶಾಸ್ತ್ರದಲ್ಲಿ –

**'ಸರ್ವಮೇವ ಪರಿತ್ಯಜ್ಯ ಶರೀರಮನುಪಾಲಯೇತ್ ।**
**ಶರೀರಸ್ಯ ಪ್ರಣಷ್ಟಸ್ಯ ಸರ್ವಮೇವ ವಿನಶ್ಯತಿ ॥'**

ಎಲ್ಲವನ್ನು ಬಿಟ್ಟು ಶರೀರವನ್ನು ಕಾಪಾಡಿಕೊಳ್ಳಬೇಕು. ಏಕೆಂದರೆ ಶರೀರವೇ ನಷ್ಟವಾದರೆ ಉಳಿದದ್ದೆಲ್ಲವೂ ನಷ್ಟವಾದಂತೆಯೇ ಎಂದಿದ್ದಾನೆ.

ಹೀಗೆ ಪ್ರಾಚೀನ ಭಾರತೀಯರಲ್ಲಿ ಕೇವಲ ಶಾಸ್ತ್ರಾದಿಗಳ ಅಧ್ಯಯನ, ಅಧ್ಯಾತ್ಮ ಸಾಧನೆಗಳಷ್ಟೇ ಅಲ್ಲದೇ ಸ್ವಾಸ್ಥ್ಯದ ಬಗ್ಗೆ ಅಪಾರಕಾಳಜಿ ಯಿರುವುದನ್ನು ನಾವು ಪ್ರತಿಹಂತದಲ್ಲೂ ಗಮನಿಸಬಹುದಾಗಿದೆ. ಹಾಗಾಗಿಯೇ ವೇದಾದಿಗಳಿಂದ ಹಿಡಿದು ರಾಮಾಯಣಾದಿ ಕಾವ್ಯಗಳಲ್ಲಿ, ಪುರಾಣಗಳಲ್ಲಿ, ಕಾಳಿದಾಸಾದಿ ಮಹಾಕವಿಗಳ ಕೃತಿಗಳಲ್ಲಿ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಹಲವು ಅಂಶಗಳನ್ನು ನಮ್ಮ ಪೂರ್ವಜರು ಜಗತ್ತಿಗೆ ತಲುಪಿಸಿದ್ದಾರೆ. ಹಾಗೂ ಅದರ ಮಹತ್ವವನ್ನು ಸಾರಿದ್ದಾರೆ. ಇಂದು ನಾವು ವೈಜ್ಞಾನಿಕವಾಗಿ ಹಲವು ಕ್ರಾಂತಿಗಳನ್ನು ಮಾಡುತ್ತಿದ್ದರೂ ಸ್ವಾಸ್ಥ್ಯದ ವಿಚಾರದಲ್ಲಿ ಹಿಂದುಳಿಯುತ್ತಿದ್ದೇವೆ. ದಿನದಿಂದ ದಿನಕ್ಕೆ ಹೊಸಹೊಸ ರೋಗಗಳೂ ಹುಟ್ಟುತ್ತಿವೆ. ಹಾಗಾಗಿ ಇಂದಿನ ಜನತೆ ಹಿಂದಿನವರ ಆರೋಗ್ಯ ಕಾಳಜಿಯನ್ನು ಅಳವಡಿಸಿಕೊಳ್ಳುವ ಅಗತ್ಯತೆ ಅನಿವಾರ್ಯ ವಾಗಿದೆ.

---

## ಸ್ಥೌಲ್ಯ ರೋಗ (Obesity) ದಲ್ಲಿ ಆಯುರ್ವೇದ ಔಷಧಿಗಳ ಪ್ರಯೋಗ ಒಂದು ವೈಜ್ಞಾನಿಕ ಅಧ್ಯಯನ

* ಡಾ। ಶ್ರೀಪತಿ ಆಚಾರ್ಯ ಜಿ., ** ಪ್ರಫುಲ್ಲ ಆಚಾರ್ಯ
ಕಾರ್ಯಚಿಕಿತ್ಸಾ ಸ್ನಾತಕೋತ್ತರ ವಿಭಾಗ, ಮುನಿಯಾಲು ಕಾಲೇಜು ಮತ್ತು ಆಸ್ಪತ್ರೆ, ಮಣಿಪಾಲ, ** "ಭಾರದ್ವಾಜ ಕೃಪ"
ಬೈಲೂರು, ಉಡುಪಿ

¸ËÜ®å gÉÆÃUÀ (Obesity) ಇಂದಿನ ಜಾಗತೀಕರಣದ ಯುಗದಲ್ಲಿ ಸರ್ವೆ ಸಾಮಾನ್ಯವಾಗಿ ಕಂಡು ಬರುವ ರೋಗವಾಗಿದೆ. ಕಡಿಮೆ ವ್ಯಾಯಾಮ (Sedentary life style), ಅಧಿಕ ಪ್ರಮಾಣದಲ್ಲಿ ಆಹಾರವನ್ನು ಸೇವಿಸುವುದು (Overnutrition), ಶೋಕ (Depression) ಹಗಲು ನಿದ್ದೆ ಮಾಡುವುದು (Day Sleep), ಬೀಜ ದೋಷ (Heradity) ಯಾ ವಂಶ ಪಾರಂಪರ್ಯತೆ, ಮೊದಲಾದ ಕಾರಣಗಳಿಂದ ಸ್ಥೌಲ್ಯ ರೋಗವು ಸಾಮಾನ್ಯವಾಗಿ ಉಂಟಾಗುವುದು. ಆಯುರ್ವೇದದ ಪ್ರಕಾರ ಕಫಕಾರಕ ಆಹಾರ ವಿಹಾರ ಸೇವನೆಯು ಮುಖ್ಯ ಕಾರಣವಾಗಿರುವುದು. ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ಸ್ಥೌಲ್ಯ ರೋಗಕ್ಕೆ ಉತ್ತಮವಾದ ಚಿಕಿತ್ಸಾ ವಿಧಾನವಿರುವುದು. ಮೇದೋಹರ ಔಷಧಿಗಳ ಬಳಕೆ, ಮಧ್ಯಮ ಪ್ರಮಾಣದ ವ್ಯಾಯಾಮ, ದಿನಾಲೂ 20–30 ನಿಮಿಷದವರೆಗೆ ನಡೆದಾಡುವುದು, ನಿಯಮಿತ ಆಹಾರ ಸೇವನೆ, ಪಥ್ಯ ಆಹಾರ ವಿಹಾರಗಳ ಪ್ರಯೋಗ ಪ್ರಾಣಾಯಾಮ ಹಾಗೂ ಯೋಗಾಸನಗಳನ್ನು ಮಾಡುವುದು ಈ ರೋಗದಲ್ಲಿ ಪರಿಣಾಮಕಾರಿಯಾಗಿರುವುದು.

ತ್ರ್ಯೂಷಣಾದಿ ಲೋಹ, ಅಮೃತಾದಿ ಗುಗ್ಗುಲು, ನವಕಗುಗ್ಗುಲು, ಮೇದೋಹರ ಗುಗ್ಗುಲು, ಮುನಿಯಾಲು ಆಯುರ್ವೇದ ಫಾರ್ಮಸಿ ನಿರ್ಮಿತ ಹೆರ್ಬೋಟ್ರಿಮ್, ಆರೋಗ್ಯ ವರ್ಧಿನಿ, ತ್ರಿಫಲಾವಟಿ ಹಾಗೂ ಪುನರ್ನವಾ ಮಂಡೂರ ಮಾತ್ರೆಗಳ ಈ ರೋಗದಲ್ಲಿ ಅತ್ಯುಪಯುಕ್ತವಾಗಿದೆಯೆಂದು ನಿದರ್ಶನಗಳಿಂದ ದೃಢಪಟ್ಟಿದೆ.

ಮುನಿಪ್ರಭಾ ಮಾತ್ರೆಗಳು, ಪುನರ್ನವಾ ಮಂಡೂರ ಹಾಗೂ ತ್ರಿಫಲಾವಟಿ ಈ ಔಷಧಿಗಳನ್ನು ಸ್ಥೂಲಕಾಯರಲ್ಲಿ ಕೊಟ್ಟು ಉತ್ತಮ ಪರಿಣಾಮವನ್ನು ಕಂಡುಕೊಳ್ಳಲಾಗಿದೆ. ಈ ಪ್ರಬಂಧದಲ್ಲಿ ಸ್ಥೌಲ್ಯ ರೋಗದಲ್ಲಿ ಆಯುರ್ವೇದ ಔಷಧಿಗಳ ಪ್ರಯೋಗದ ಬಗ್ಗೆ ವೈಜ್ಞಾನಿಕವಾಗಿ ವಿವೇಚನೆ ಮಾಡಲಾಗಿದೆ.

**ಮುನ್ನುಡಿ :** ಸ್ಥೌಲ್ಯ ರೋಗವು ಸಾಮಾನ್ಯವಾಗಿ ಚಯಾಪಚಯ ಜನ್ಯ ಹಾಗೂ (Metabolic) ಹಾಗೂ ಅಂತಃ ಸ್ರಾವೀ ಗ್ರಂಥಿ ವಿಕೃತಿ ಜನ್ಯ (Endocrine) ರೋಗವಾಗಿದೆ. ಸಾಮಾನ್ಯವಾಗಿ ಅಲ್ಪ ವ್ಯಾಯಾಮ ಮಾಡುವುದು ಸುಖೀ ಜೀವನ (Sedentary life style), ಅಧಿಕ ಸಂಪೂರಣ (Over nutrition), ಕಫಕಾರಕ ಆಹಾರ ವಿಹಾರ ಸೇವನೆ, ದಿವಾ ಸ್ವಪ್ನ ಹಾಗೂ ವಂಶ ಪಾರಂಪರ್ಯತೆಯಿಂದ ಈ ರೋಗವುಂಟಾಗುವುದು. ಆಯುರ್ವೇದ ಚಿಕಿತ್ಸಕರು ಈ ರೋಗಿಗಳನ್ನು ಸಫಲವಾಗಿ ಚಿಕಿತ್ಸಿಸುತ್ತಾರೆ. ಔಷಧ ಪ್ರಯೋಗ, ಪಂಚಕರ್ಮ, ಪಥ್ಯ ಪ್ರಯೋಗ, ಯೋಗಾಸನಗಳಿಂದ ಈ ರೋಗವನ್ನು ಸಫಲವಾಗಿ ಚಿಕಿತ್ಸಿಸ ಬಹುದಾಗಿದೆ.

**ಆಯುರ್ವೇದದ ಪ್ರಕಾರ ಸ್ಥೌಲ್ಯ ರೋಗಕ್ಕೆ ಕಾರಣಗಳು**

೧) ಅತಿ ಸಂಪೂರಣಾತ್ (Over nutrition)
೨) ಅವ್ಯಾಯಾಮಾತ್ (Lack of exercise)
೩) ಅವ್ಯವಾಯಾತ್ (Absence of sexual intercourse )
೪) ಬೀಜದೋಷಾತ್ ( Hereditory)
೫) ಕಫಕಾರಕ ಆಹಾರ ವಿಹಾರ ಸೇವನಾತ್

೬) ಹರ್ಷ ನಿತ್ಯತ್ವಾತ್ (Always being in pleasant state of mind )
೭) ಅಚಿಂತನಾತ್ (Lack of worries )
೮) ದಿವಾ ಸ್ವಪ್ನಾತ್ ( Day sleep )

**ಸ್ಥೌಲ್ಯ ರೋಗದ ಕಾರಣಗಳು (ಆಧುನಿಕ ಮತ)**

೧) ಅಧಿಕ ಸಂಪೂರಣ Over nourishment
೨) ಅಲ್ಪ ವ್ಯಾಯಾಮ Sedentary life style
೩) ಬೀಜ ದೋಷ ಯಾ ವಂಶಪಾರಂಪರತೆ Heredity
೪) ಅಂತಃ ಸ್ರಾವೀ ಗ್ರಂಥಿಗಳ ವಿಕಾರಗಳು Endocrinal Disorders Eg : Growth Hormone ಗ್ರೋಥ್ ಹಾರ್ಮೋನ್ ಅಧಿಕ ಸ್ರಾವ (Acromegaly) ಕಾರ್ಟಿಸಾಲ್‌ನ ಅಧಿಕತೆ,
ಥೈರಾಕ್ಸಿನ್ ಹಾರ್ಮೋನಿನ ನ್ಯೂನತೆ ಹೈಪೊಥೈರಾಯ್ಡಿಸಮ್ ಇವುಗಳಿಂದ ಸ್ಥೌಲತೆಯು ಉಂಟಾಗುವುದು
೫) ಮನೋ ಅವಸಾದ Mental depression ನಿಂದಾಗಿ ವ್ಯಕ್ತಿಯ ಆಹಾರವನ್ನು ತನಗರಿವಿಲ್ಲದೇನೇ ಅಧಿಕ
ಪ್ರಮಾಣದಲ್ಲಿ ತೆಗೆದುಕೊಳ್ಳುವನು. ಇದರಿಂದಾಗಿ ಅಧಿಕ ಸಂಪೂರ್ಣವಾಗಿ ಸ್ಥೌಲ್ಯವುಂಟಾಗುವುದು.

**ಸ್ಥೌಲ್ಯ ರೋಗದ ಲಕ್ಷಣಗಳು**

೧) ಆಯುಹ್ರಾಸ
೨) ಜವೋಪರೋಧ
೩) ಕೃಚ್ಛ್ರ ವ್ಯವಾಯತಾ
೪) ಸ್ವೇದಾಬಾಧಾ
೫) ಅತಿಕ್ಷುಧಾ
೬) ಅತಿಪಿಪಾಸಾ
೭) ದೌರ್ಗಂಧ್ಯ
೮) ದೌರ್ಬಲ್ಯ
೯) ಶ್ರಮಶ್ವಾಸ

**ಆಧುನಿಕ ಮತ**

೧) ಚರ್ಮರೋಗಗಳು Skin Diseases
೨) ಪಿತ್ತಕೋಶದ ಕಲ್ಲು Choledocholithiasis
೩) ಶ್ವಾಸಕೋಶದಲ್ಲಿ ಕಡಿಮೆ ವಾಯು ಸಂಚಾರವಾಗುವುದು Hypoventilation
೪) ಹೃದ್ರೋಗ – ಹೃತ್‌ರೋಗ IHD & MI
೫) ರಕ್ತನಾಳದಲ್ಲಿ ಮೇದೋ ಸಂಚಯ Atherosclerosis
೬) ಮಧುಮೇಹ Diabetes mellitus
೭) ಅಧಿಕ ರಕ್ತದ ಒತ್ತಡ Hyper tension
೮) ಅರ್ಬುದ
೯) ಮನೋವಸಾದ Depression
೧೦) ಹೈಪೋಥೈರಾಯ್ಡಿಸಮ್
೧೧) ಯಕೃತ್ತಿನ ಮೇದೋ ವ್ಯಪಜನನ Fatty liver
೧೨) ಪಕ್ಷಾ ಘಾತ Stroke
೧೩) ಸಂಧಿಗತ ವಾತ osteo arthritis
೧೪) ಕ್ಲೈಬ್ಯತೆ Impotency

**ಏಕಮೂಲಿಕಾ ಪ್ರಯೋಗ**

೧) ಲಶುನ
೨) ಗುಗ್ಗುಲು
೩) ಮಧು
೪) ಶಿಲಾಜತು
೫) ಸ್ವರ್ಣ ಮಾಕ್ಷಿಕ ಭಸ್ಮ
೬) ಲೋಹ ಭಸ್ಮ
೭) ಮಂಡೂರ ಭಸ್ಮ
೮) ಗೋಮೂತ್ರ
೯) ಆಮ್ಲ ವೇತಸ
೧೦) ತ್ರಿಫಲಾ
೧೧) ಯವ
೧೨) ತೃಣಧಾನ್ಯ, ಶ್ಯಾಮಾಕ, ಕೋರ, ದೂಷ ನೀವಾರ
೧೩) ಶಾಕವರ್ಗ

**ಸ್ಥೌಲ್ಯ ರೋಗದಲ್ಲಿ ಯೋಗಗಳು**

೧. ತ್ರ್ಯೂಷಣಾದಿ ಲೌಹ
೨. ಪುನರ್ನವಾ ಮಂಡೂರ
೩. ತ್ರಿಫಲಾ
೪. ಶಿಲಾಜತ್ವಾದಿ ಲೌಹ
೫. ಪುನರ್ವ ವಾಸವ
೬. ಅಮೃತಾದಿ ಗುಗ್ಗುಲು
೭. ನವಕ ಗುಗ್ಗುಲು
೮. ಮೇದೋಹರ ಗುಗ್ಗುಲು
೯. ನವಾಂಗ ಗುಗ್ಗುಲು
೧೦. ರಸೋನ ಪಿಂಡ
೧೧. ಶ್ವೇತ ಪರ್ಪಟಿ
೧೨. ಯವಾಗೂ
೧೩. ಗೋಮೂತ್ರಾಸವ
೧೪. ಗೋಮೂತ್ರ ಹರೀತಕೀ
೧೫. ಚಂದ್ರ ಪ್ರಭಾವಟೀ
೧೬. ಯೋಗರಾಜ ಗುಗ್ಗುಲು
೧೭. ತ್ರಿಫಲಾದಿ ಗುಗ್ಗುಲು
೧೯. ಲಶುನ ಕ್ಷೀರಪಾಕ
೨೦. ರಸೋನ ಪಿಂಡ
೨೧. ಮಧೂದಕ
೨೨. ಯವಮಂಡ

**ಸ್ಥೌಲ್ಯ ರೋಗದಲ್ಲಿ ಪಥ್ಯ**

೧) ಗುರು ಹಾಗೂ ಅಪತರ್ಪಣ ಆಹಾರ ವಿಹಾರಗಳು
೨) ಯವ (Barley) – ಯವ ಮಂಡ, ಯವಾಗೂ
೩) ಅಧಿಕ ನಾರು ಉಳ್ಳ ಆಹಾರ ಪದಾರ್ಥಗಳು High fibre diet
೪) ಸೊಪ್ಪು ಅಂಶವಿರುವ ತರಕಾರಿಗಳು – ಹರಿವೆ ಸೊಪ್ಪು, ಪಾಲಕ್ ಸೊಪ್ಪು, ಮೆಂತೆ ಸೊಪ್ಪು, ನುಗ್ಗೆ ಸೊಪ್ಪು,
ಕ್ಯಾಬೀಜ, ನುಗ್ಗೆಕಾಯಿ, ಹೀರೆಕಾಯಿ, ಹಾಗಲಕಾಯಿ
೫) ಕಹಿಯಾದ ಆಹಾರ ಪದಾರ್ಥ : – ಹಾಗಲಕಾಯಿ, ಸೋರೆಕಾಯಿ
೬) ಸೌತೆಕಾಯಿ, ಮುಳ್ಳು ಸೌತೆಕಾಯಿ
೭) ವ್ಯಾಯಾಮ, ಸಂಭೋಗ ಮಾಡುವುದು, ನಡೆದಾಡುವುದು, ದಿನಾಲೂ

೨೦ ರಿಂದ ೩೦ ನಿಮಿಷ ನಡೆದಾಡುವುದು.
೮) ಮಧೂಧಕ - ಜೇನುತುಪ್ಪ ಹಾಗೂ ನೀರಿನ ಮಿಶ್ರಣ
೯) ಲಿಂಬೆರಸ ಹಾಗೂ ನೀರಿನ ಮಿಶ್ರಣ

**ಸ್ಥೌಲ್ಯ ರೋಗದಲ್ಲಿ ಅಪಥ್ಯ**

೧) ಸಿಹಿಯಾದ, ಶೀತಲ ಆಹಾರ ಪ್ರಯೋಗ , ಎಣ್ಣೆ, ತುಪ್ಪ, ಬೆಣ್ಣೆ, ಮಾಂಸರಸ ಮಜ್ಜಿಗೆಗಳ ಪ್ರಯೋಗ
೨) ಹಗಲು ನಿದ್ರೆ ಮಾಡುವುದು, ಯಾವುದೇ ಚಿಂತೆ ಇಲ್ಲದೇ ಇರುವುದು ಆಲಸಿಯಾಗಿರುವುದು.
೩) ಅಲ್ಪ ವ್ಯಾಯಾಮ Sedentary life style, ಸಂಭೋಗ ಮಾಡದೇ ಇರುವುದು
೪) ಉದ್ದು, ಉದ್ದಿನಿಂದ ತಯಾರಿಸಿದ ಆಹಾರ ಪದಾರ್ಥ, ಅತಿಯಾಗಿ ಅನ್ನದ ಸೇವನೆ (ಶಾಲ್ಯನ್ನ), ಮಾಂಸ, ಹಂದಿಯ ಮಾಂಸ, ಅಧಿಕ ಸ್ನೇಹ ತತ್ವವುಳ್ಳ ಮೀನು, ಮಾಂಸಗಳ ಪ್ರಯೋಗ ಆನೂಪ ದೇಶದಲ್ಲಿ ಬೆಳೆದ ಪ್ರಾಣಿ ಪಕ್ಷಿಗಳ ಮಾಂಸ, ಜಲಚರ ಪ್ರಾಣಿಗಳ ಮಾಂಸ ಅಧಿಕ ಸೇವನೆ, ಹಾಲಿನ ಉತ್ಪನ್ನಗಳು
೫) ಕಫಕಾರಕವಾದ ಆಹಾರ ವಿಹಾರಗಳ ಅತಿಸೇವನೆ

**ಚರ್ಚೆ :** ಸ್ಥೌಲ್ಯ ರೋಗವು ಆಧುನಿಕ ಭಾರತದಲ್ಲಿ ಹೆಚ್ಚು ಹೆಚ್ಚಾಗಿ ಕಂಡುಬರುವ ರೋಗವಾಗಿರುವುದು. ಇತ್ತೀಚೆಗೆ ಚಿಕ್ಕ ಮಕ್ಕಳಲ್ಲಿ ಕೂಡ ಈ ರೋಗವು ಕಾಣಬರುವುದು. ಅಧಿಕ ಸಂಪೂರಣ ಆಹಾರ ವಿಹಾರ ಅತಿಸೇವನೆ, ದಿವಾಸ್ವಪ್ನ ಹಾಗೂ ವಂಶಪಾರಂಪರ್ಯತೆಯಿಂದ ಸ್ಥೌಲ್ಯ ರೋಗವು ಸಾಮಾನ್ಯವಾಗಿ ಉಂಟಾಗುವುದು, ಸ್ಥೌಲ್ಯರೋಗಕ್ಕೆ ಆಯುರ್ವೇದ ಔಷಧ ವಿಜ್ಞಾನದಲ್ಲಿ ಒಳ್ಳೆಯ ಚಿಕಿತ್ಸಾ ವಿಧಾನವಿರುವುದು. ಲಂಘನ ವ್ಯಾಯಾಮ, ನಡೆದಾಡುವುದು (Walking Meditation) ರೂಕ್ಷ ಉದ್ವರ್ತನ, ವಿರೇಚನ, ಕರ್ಷಣ ಚಿಕಿತ್ಸೆ ಉಪವಾಸಗಳು ಈ ರೋಗದಲ್ಲಿ ಪ್ರಯೋಜನಕಾರಿಯಾಗಿದೆ. ರೂಕ್ಷ, ತಿಕ್ತ ಕಷಾಯರ ಸಯುಕ್ತ, ಶ್ಲೇಷ್ಮ ಮೇದೋಹರ, ಗುರು ಹಾಗೂ ಅಪತರ್ಪಣ ದ್ರವ್ಯ ಪ್ರಯೋಗ ( ಯವ, ಮುದ್ಗ ಆದಿ), ಮಧೂದಕ, ಲಿಂಬೆ ನೀರಿನ ಪ್ರಯೋಗ, ವ್ಯಾಯಾಮಗಳು ಫಲದಾಯಕವಾಗಿರುವುದು.

**ಉಪಸಂಹಾರ :**

೧. ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ಸ್ಥೌಲ್ಯ ರೋಗಕ್ಕೆ ಉತ್ತಮ ಚಿಕಿತ್ಸಾ ವಿಧಾನವಿರುವುದು.
೨. ಸ್ಥೌಲ್ಯ ರೋಗದಿಂದ IHD ಪಕ್ಷಾಘಾತ, ಮಧುಮೇಹ ಗಣನೀಯ ಉಪ ದ್ರವಗಳು ಉಂಟಾಗುವ ಸಾಧ್ಯತೆ ಇರುವುದು ಆದುದರಿಂದ ಈ ರೋಗವನ್ನು ಮೊದಲು ಚೆನ್ನಾಗಿ ಚಿಕಿತ್ಸಿಸುವುದರಿಂದ ಮುಂದೆ ಉಂಟಾಗಬಹುದಾದ ಉತ್ತರೋತ್ತರ ಉಪದ್ರವಗಳನ್ನು ತಡೆ ಹಿಡಿಯಬಹುದಾಗಿದೆ.

**ಆಧಾರ ಭೂತ ಗ್ರಂಥಗಳು**

೧) ಚರಕ ಸಂಹಿತೆ
೨) ಸುಶ್ರುತ ಸಂಹಿತೆ
೩) ಅಷ್ಟಾಂಗ ಹೃದಯ
೪) ರೀಸರ್ಚಸ್ ಇನ್ ಆಯುರ್ವೇದ, ಡಾ। ಶ್ರೀಪತಿ ಆಚಾರ್ಯ, ಮಣಿಪಾಲ
೫) ರುಸತಂತ್ರಸಾರ ವ ಸಿದ್ದ ಪ್ರಯೋಗ ಸಂಗ್ರಹ
೬) Antony s Fauci and Eugine Brand wald, Harrisons Principles of Internal Medicine P 2291, 17th Edn, MC Grow Hill, 2008.

## ಮುನಿ ಪ್ರಭಾವಟಿ, ಮುನಿಥೈರಾನ್ ಮತ್ತು ತ್ರಿಫಲಾವಟಿಗಳ ಹೈಪೋಥೈರಾಯ್ಡಿಸಮ್ ರೋಗಿಗಳ ಚಿಕಿತ್ಸೆಯಲ್ಲಿ ಚಿಕಿತ್ಸಕೀಯ ಅನುಭವ ಒಂದು ವೈಜ್ಞಾನಿಕ ಅಧ್ಯಯನ

ಡಾ। ಶ್ರೀಪತಿ ಆಚಾರ್ಯ ಜಿ.
ಮುನಿಯಾಲು ಕಾಲೇಜು ಮತ್ತು ಆಸ್ಪತ್ರೆ, ಮಣಿಪಾಲ

ಹೈಪೋಥೈರಾಯ್ಡಿಸಮ್ ರೋಗವು ಭಾರತೀಯರಲ್ಲಿ ಸರ್ವೇ ಸಾಮಾನ್ಯವಾಗಿ ಕಂಡು ಬರುವ ಒಂದು ರೋಗವಾಗಿದೆ. ಈ ರೋಗದಲ್ಲಿ ಶರೀರದಲ್ಲಿರುವ ಥೈರಾಯ್ಡ್ ಗ್ರಂಥಿಯ ಕಾರ್ಯವು ಹೀನವಾಗಿರುವುದು ಕಾರಣವಾಗಿರುವುದು. ಅಟೋ ಇಮ್ಯೂನ್ ಕಾರಣಗಳು ಹಾಗೂ ಅಯೋಡಿನ್ ಪ್ರಮಾಣದಲ್ಲಿ ಹೀನತ್ವವು ಈ ರೋಗ ಕಾರಣಗಳಾಗಿ ಕಂಡು ಬರುತ್ತದೆ. ಮುಖ್ಯವಾಗಿ ಅತೀನಿದ್ರತೆ, ನಾಡೀಗತಿ ಮಂದತೆ, ಮಲಬದ್ಧತೆ, ಸ್ಥೂಲಕಾಯತ್ವ ರಕ್ತದಲ್ಲಿ ಕೊಲೆಸ್ಟರಾಲ್‌ನ ಪ್ರಮಾಣದಿಕ್ಯತೆ ಸ್ತ್ರೀಯರಲ್ಲಿ ಮುಟ್ಟಿನ ತೊಂದರೆಗಳು. ಅತಿಯಾದ ಅಜೋಸ್ರಾವ ಚರ್ಮವು ಸುಕ್ಕು ಗಟ್ಟುವುದು ಮನಸ್ಸಿನ ಮಂದತೆ, ಬುದ್ಧಿ ಮಂದಾಗುವುದು ಇತ್ಯಾದಿ ಲಕ್ಷಣಗಳು ಈ ರೋಗಿಗಳಲ್ಲಿ ಕಂಡುಬರುವುದು. ಕೆಲವೊಮ್ಮೆ ಥೈರಾಯ್ಡ್ ಗ್ರಂಥಿಯ ಶೋಥ (Giotre) ಕೂಡಾ ಕಂಡು ಬರುವುದು. ವಯಸ್ಕರಲ್ಲಿ ಈ ರೋಗವನ್ನು ಮಿಕ್ಸೆಡಿಮಾ ಹಾಗೂ ಚಿಕ್ಕ ಮಕ್ಕಳಲ್ಲಿ ಕ್ರೆಟಿನಿಸಮ್ ಎಂದೂ ಕರೆಯುತ್ತಾರೆ.

ಹೈಪೋಥೈರಾಯ್ಡಿಸಮ್‌ನ ಈ ತೆರನಾದ ೩೦ ರೋಗಿಗಳನ್ನು ಮುನಿಯಾಲ್ ಆಯುರ್ವೇದ ಆಸ್ಪತ್ರೆಯ OPD ವಿಭಾಗದಿಂದ ಆಯ್ಕೆ ಮಾಡಿ ಅವರಲ್ಲಿ ಮುನಿಪ್ರಭಾ ಮಾತ್ರೆಗಳು, ಮುನಿಥೈರಾನ್ ಹಾಗೂ ತ್ರಿಫಲಾಪಟಿಗಳನ್ನು 3 ತಿಂಗಳವರೆಗೆ ಸತತವಾಗಿ ನೀಡಲಾಯಿತು. ಶರೀರ ಭಾರ, ಸೀರಮ್ ಕೊಲೆಸ್ಟರಾಲ್ ಮಲಬದ್ಧತೆ, ನಾಡಿಗತಿ, ಮಾನಸಿಕ ಕ್ಷಮತೆ ಹಾಗೂ Hb% ಗಳನ್ನು ಚಿಕಿತ್ಸಾಪೂರ್ವ ಹಾಗೂ ಚಿಕಿತ್ಸಾನಂತರ ರೆಕಾರ್ಡ್ ಮಾಡಲಾಯಿತು. ವಿಶೇಷ ಪ್ರೊಫಾರ್ಮ ತಯಾರಿಸಿ ಈ ಮೇಲಿನ ಅಂಶಗಳನ್ನು ರೆಕಾರ್ಡ್ ಮಾಡಿ ಸಂಖ್ಯಾಶಾಸ್ತ್ರದ ಮುಖೇನ ಪರೀಕ್ಷಣ (Analysis) ವಿಶ್ಲೇಷಣೆ ಮಾಡಲಾಯಿತು. ಪರಿಣಾಮವಾಗಿ ಉತ್ತಮವಾದ ಪರಿಣಾಮವನ್ನು ಕಂಡುಕೊಳ್ಳಲಾಯಿತು. ಈ ರೋಗಗಳಲ್ಲಿ ಚಿಕಿತ್ಸಾನಂತರ ಲಕ್ಷಣ ಸಂಬಂಧಿ ಅಂಶಗಳಲ್ಲಿ ಉತ್ತಮಿಕೆ ಸೀರಮ್ ಕೊಲೆಸ್ಟರಾಲ್‌ನ ಪ್ರಮಾಣದಲ್ಲಿ ಕಡಿಮೆ ಮತ್ತು Hb% ಹೆಚ್ಚಾದುದು ಕಂಡು ಬಂತು.

**ಮುನ್ನುಡಿ :** ಹೈಪೊಥೈರಾಯ್ಡಿಸಮ್ ಥೈರಾಯ್ಡ್ ಗ್ರಂಥಿಯ ಅಲ್ಪ ಕಾರ್ಯದಿಂದ ಉಂಟಾಗುವ ರೋಗವಾಗಿದೆ. ಈ ರೋಗದಲ್ಲಿ ಮುಖ್ಯವಾಗಿ ನಿದ್ರಾಧಿಕ್ಷತೆ ಸ್ಥೂಲಕಾಯತ್ವ, ನಾಡೀಗತಿ ಮಂದತಾ, ರಕ್ತದಲ್ಲಿ ಕೊಲೆಸ್ಟರಾಲ್‌ನ ಆಧಿಕ್ಯ, ಮಲಬದ್ಧತೆ, ಮಂದ ಬುದ್ಧಿ ಯಾ ಮಾನಸಿಕ ಕಾರ್ಯಕ್ಷಮತೆ ಕುಗ್ಗುವುದು. ಈ ಲಕ್ಷಣಗಳು ಉಂಟಾಗುವುದು. ಇದನ್ನು ಮಿಕ್ಸೆಡಿಮಾಎಂದೂ ಕರೆಯುವರು. ಪ್ರಯೋಗ ಶಾಲೆಯ ಪರೀಕ್ಷೆಗಳಾದ **ಸೀರಮ್ ಟೋಟಲ್ ಕೊಲೆಸ್ಟರಾಲ್, ಪ್ಲಾಸ್ಮಾ** $T_3$, $T_4$ ಹಾಗೂ ಖಿಖಊ ಗಳು ಈ ರೋಗದ ವಿನಿಶ್ಚಯದಲ್ಲಿ ಸಹಕಾರಿಯಾಗಿದೆ. ಕೆಲವೊಂದು ನಿರ್ದಿಷ್ಟ ಆಯುರ್ವೇದ ಔಷಧಿಗಳು ಈ ರೋಗದ ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿದೆ. ಈ ನಿಟ್ಟಿನಲ್ಲಿ ಮುನಿಪ್ರಭಾ ಮಾತ್ರೆಗಳು, ಮುನಿಥೈರಾನ್ ಮಾತ್ರೆಗಳು ಹಾಗೂ ತ್ರಿಫಲಾ ವಟಿಗಳು ೩ ಗಂಟೆಗಳವರೆಗೆ ಕೊಟ್ಟು ನಿರ್ದಿಷ್ಟವಾದ ಪರಿಣಾಮವನ್ನು ಕಂಡುಕೊಳ್ಳಲಾಗಿದೆ.

**ವಿಶ್ಲೇಷಣಾ ಅಂಶಗಳು**

**೧. ಲಕ್ಷಣ ಆಧಾರಿತ**

೧) ಶರೀರದ ಭಾರ (Body Weight)
೨) ನಾಡೀಗತಿ (pulse rate)
೩) ಮಲಬದ್ಧತೆ (Constipation)
೪) ನಿದ್ರಾಧಿಕ್ಷತೆ (Sleep)
೫) ಶ್ವಾಸಕಷ್ಟತಾ (Breath lessness)
೬) ಮಾನಸಿಕ ಕಾರ್ಯಕ್ಷಮತೆ (Mentation)

**೨. ಪ್ರಯೋಗಾಲಯ ಅಂಶಗಳು**

೧) ಸೀರಮ್ ಟೋಟಲ್ ಕೊಲೆಸ್ಟರಾಲ್
೨) ಪ್ಲಾಸ್ಮಾ $T_3$
೩) ಪ್ಲಾಸ್ಮಾ $T_4$
೪) ಪ್ಲಾಸ್ಮಾ TSH

**ಸಂಶೋಧನಾ ಪಥ ಮತ್ತು ಸಾಮಗ್ರಿ:** ೩೦ ಹೈಪೊಥೈರಾಯ್ಡಿಸಮ್ ರೋಗಿಗಳನ್ನು ಮುನಿಯಾಲು ಆಯುರ್ವೇದ ಆಕೃತ್ತಿಯ ಹೊರ ಹಾಗೂ ಒಳ ರೋಗಿಗಳ ವಿಭಾಗದಿಂದ ಆರಿಸಿ ಅವರಲ್ಲಿ ಆಯುರ್ವೇದ ಔಷಧಿಗಳನ್ನು ಸತತವಾಗಿ ೩ ತಿಂಗಳುಗಳವರೆಗೆ ನೀಡಲಾಯಿತು.

**ಸಂಶೋಧನಾ ವಿಧಾನ :** ರೋಗಿಗಳನ್ನು ರಾಂಡಮ್ ಆಗಿ ಆರಿಸಿ ಅವರಲ್ಲಿ ಔಷಧಿಯನ್ನು ಕೊಟ್ಟು ಪರಿಣಾಮವನ್ನು ಪ್ರೀಟೆಸ್ಟ್ ಹಾಗೂ ಪ್ರೋಸ್ಟ್‌ಟೆಸ್ಟ್ ಹೋಲಿಕೆ ಮಾಡಿ ವಿಶ್ಲೇಷಿಸಲಾಯಿತು.

**ಔಷಧಿಗಳು :**

**೧) ಮುನಿಪ್ರಭಾ ಮಾತ್ರೆಗಳು :** ಹೊತ್ತಿಗೆ ೨ ಮಾತ್ರೆಯಂತೆ ದಿನಕ್ಕೆ ೩ ಬಾರಿ ಬಳಿಗ್ಗೆ ಮಧ್ಯಾಹ್ನ ರಾತ್ರಿಯ ವೇಳೆಗೆ ನೀಡಲಾಯಿತು.
ಅನುಪಾನ–ಜಲ

**೨) ಮುನಿ ಥೈರಾನ್ ಮಾತ್ರೆಗಳು :** ಹೊತ್ತಿಗೆ ಒಂದರಂತೆ ದಿನಕ್ಕೆ ೩ ಬಾರಿ ಬೆಳಿಗ್ಗೆ ಮಧ್ಯಾಹ್ನ ರಾತ್ರಿ ದಿನಕ್ಕೆ ೩ ಬಾರಿ ಊಟದ ನಂತರ ನೀಡಲಾಯಿತು. ಅನುಪಾನ – ಜಲ

**೩) ತ್ರಿಫಲಾ ಮಾತ್ರೆಗಳು –** ಒಂದು ಮಾತ್ರೆ ಕೇವಲ ರಾತ್ರಿ ಹೊತ್ತು ಮಲಗುವ ವೇಳೆ ನೀಡಲಾಯಿತು.

**ಆಹಾರ, ವಿಹಾರ :–**

೧) ದಿನಾಲೂ ೧೫–೨೦ ನಿಮಿಷ ನಡೆದಾಡಲು ನಿರ್ದೇಶಿಸಲಾಯಿತು (Walking meditation)
೨) ಮಧ್ಯಮ ಪ್ರಮಾಣದ ವ್ಯಾಯಾಮ
೩) ಹಗಲು ನಿದ್ದೆ ನಿಷಿದ್ಧ
೪) ಸ್ನೇಹಯುಕ್ತ (Oily & Fatty)ಗಳನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸಲು ಹೇಳಲಾಯಿತು.

**ತ್ಯಜಿಸಿದ ರೋಗಿಗಳು (Drop Outs) :** ಚಿಕಿತ್ಸೆಯನ್ನು ಯಾರೂ ಮಧ್ಯೆ ತ್ಯಜಿಸಲಿಲ್ಲ
ಎಲ್ಲಾ ರೋಗಿಗಳಲ್ಲಿ ಸಮ್ಮತಿಯನ್ನು ತೆಗೆದುಕೊಂಡ ನಂತರ ಚಿಕಿತ್ಸೆಯನ್ನು ನೀಡಲಾಯಿತು.

**ಫಲಿತಾಂಶ :** ಅಧ್ಯಯನದಲ್ಲಿ ಗಂಡಸರಿಗಿಂತ ಹೆಂಗಸರಲ್ಲಿ ಹೆಚ್ಚಾಗಿ ಈ ರೋಗವು ಕಂಡು ಬಂತು, ಮಧ್ಯ ವಯಸ್ಸಿನವರಲ್ಲಿ ಇದು ಸಾಮಾನ್ಯವಾಗಿ ಕಂಡು ಬಂತು. ಲಕ್ಷಣಾಧಾರಿತ ಹಾಗೂ ಪ್ರಯೋಗಶಾಲೀಯ ಅಂಶಗಳಲ್ಲಿ ಚಿಕಿತ್ಸಾ ನಂತರ ಗಣನೀಯವಾದ ಅಂತರವು ಕಂಡು ಬಂತು. ಲಕ್ಷಣಾಧಾರಿತ ಅಂಶಗಳಲ್ಲಿ ಚಿಕಿತ್ಸಾನಂತರ ಟೋಟಲ್ ಕೊಲೆಸ್ಟರಾಲ್ ಕಡಿಮೆಯಾಯಿತು. ಪ್ಲಾಸ್ಮಾ $T_3, T_4$ ಹೆಚ್ಚಾದದು ಕಂಡು ಬಂದಿತು.









SERUM TOTAL CHOLESTEROL




PLASMA T3




PLASMA T4 IN MICROGRAMS




PLASMA TSH

**ಚರ್ಚೆ :** ಹೈಪೊಥೈರಾಯ್ಡಿಸಮ್ ಥೈರಾಯ್ಡ್ ಗ್ರಂಥಿಯು ಕಡಿಮೆ ಪ್ರಮಾಣದಲ್ಲಿ ಕಾರ್ಯಕ್ಷಮತೆ ಮಾಡುವುದರಿಂದ ಉಂಟಾಗುವ ರೋಗವಾಗಿದೆ. ಈ ರೋಗದಲ್ಲಿ ಈ ಮೇಲಿನ ಆಯುರ್ವೇದ ಔಷಧಿಗಳ ಪ್ರಯೋಗದಿಂದ ಗಣನೀಯವಾದ ಪರಿಣಾಮವನ್ನು ಕಂಡುಕೊಳ್ಳಲಾಗಿದೆ. ಈ ಪರಿಣಾಮವು ಔಷಧಿಗಳ ಈ ಕೆಳಗಿನ ಕಾರ್ಯದಿಂದ ಸಾಧ್ಯವಾಗಿದೆ.

೧) ಥೈರಾಯ್ಡ್ ಗ್ರಂಥಿಯನ್ನು ಉತ್ತೇಜಿಸುವುದು – ಗುಗ್ಗುಲು, ಕಾಂಚನಾರ

೨) ಮೇದಹರ – ಗುಗ್ಗುಲು, ಶಿಲಾಜತು, ಗೋಮೂತ್ರ

೩) ಆಂಟಿಕೊಲೆಸ್ಟೆರೀಮಿಕ್ – ಗುಗ್ಗುಲು

೪) ರಸಾಯನ – ಶಿಲಾಜತು

೫) ವಿರೇಚನ – ತ್ರಿಫಲಾ, ಶಿಲಾಜತು

೬) ಮಲವಾತಾನು ಲೋಮನ – ತ್ರಿಫಲಾ

೭) ನಾಡೀ ಉತ್ತೇಜಕ – ಹರೀತಕೀ, ತ್ರಿಕಟು

೮) CNS ಸ್ಟಿಮ್ಯುಲೆಂಟ್ – ಹರೀತತಿ, ಶುಂಠಿ

ವ್ಯಾಯಾಮ ಹಾಗೂ ನಡೆದಾಡುವುದು ಃಒಖನ್ನು ಹೆಚ್ಚಿಸಿ ಶಕ್ತಿ ಉತ್ಪಾದನೆಯನ್ನು ಉತ್ತೇಜಿಸುವುದು ಹಾಗೂ ಮೇದನಾಶಕವಾಗಿ ಕೆಲಸಮಾಡುವುದು. (Oily food) ಸ್ನೇಹಾಂಶಯುಕ್ತ ಆಹಾರವನ್ನು ವರ್ಜಿಸುವುದುರಿಂದ ಸೀರಮ್ ಕೊಲೆಸ್ಟರಾಲ್ ಹೆಚ್ಚಾಗುವುದಿಲ್ಲ. ಗುಗ್ಗುಲು ಥೈರಾಯ್ಡ್ ಗ್ರಂಥಿಯನ್ನು ಉತ್ತೇಜಿಸುವುದೆಂದು CCRAS, ಮೋನೋಗ್ರಾಫ್‌ನಲ್ಲಿ ಉಲ್ಲೇಖಿಸಲಾಗಿದೆ. ಮುನಿಥೈರಾನ್ ಮಾತ್ರೆಗಳು ಥೈರಾಯ್ಡ್ ಗ್ರಂಥಿಯ ಕಾರ್ಯಕ್ಷಮತೆಯನ್ನು ವೃದ್ಧಿಸುವುದು. ಇದರಿಂದಾಗಿ ಥೈರಾಕ್ಸಿನ್ ಹಾರ್ಮೋನ್ ಸ್ರಾವವು ಹೆಚ್ಚಾಗಿ ರೋಗದ ಲಕ್ಷಣಗಳಲ್ಲಿ ಸಾಮಾನ್ಯವಾಗಿ ಮಲಬದ್ಧತೆ, ಹೊಟ್ಟೆಯುಬ್ಬರ, ಹೊಟ್ಟೆನೋವು ಇರುವುದು. ಈ ಲಕ್ಷಣಗಳು ತ್ರಿಫಲಾವಟಿಯಿಂದ ಉಪಶಮನ ಹೊಂದುವುದು. ಏಕೆಂದರೆ ಇದು ಮಲವಾತಾನು ಲೋಮನ ಹಾಗೂ ವಿರೇಚನವಾಗಿ ಕೆಲಸಮಾಡುವುದು.

**ಉಪಸಂಹಾರ :**

೧. ಈ ಮೇಲಿನ ಔಷಧಿಗಳು (ಮುನಿಪ್ರಭಾ, ಮುನಿಥೈರಾನ್ ಹಾಗೂ ತ್ರಿಫಲಾವಟೀ) ಹೈಪೋಥೈರಾಯ್ಡಿಸಮ್ ರೋಗಿಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯವಹಿಸುತ್ತದೆ.

೨.ಹೈಪೊಥೈರಾಯ್ಡಿಸಮ್ ರೋಗಿಗಳಲ್ಲಿ ಮೊದಲೇ ಥೈರಾಕ್ಸಿನ್ (Thyroxine) ಸೇವನೆಯ ಇತಿಹಾಸವಿದ್ದಲ್ಲಿ ಅದನ್ನು ಕ್ರಮವಾಗಿ ಅಲ್ಪ ಅಲ್ಪವಾಗಿ (Tapering) ನಿಲ್ಲಿಸಿ ಈ ಔಷಧಿಗಳಿಂದ ಚಿಕಿತ್ಸೆ ಮಾಡಬಹುದು.

**ಆಧಾರ ಭೂತ ಗ್ರಂಥಿಗಳು**

೧) ಆಯುರ್ವೇದ ವಿಜ್ಞಾನ, ಡಾ। ಶ್ರೀಪತಿ ಆಚಾರ್ಯ ಮತ್ತಿತರರು ೨೦೧೨

೨) ರೀಸರ್ಚ್ ಇನ್ ಆಯುರ್ವೇದ ಡಾ। ಶ್ರೀಪತಿ ಆಚಾರ್ಯ ೨೦೧೦

೩) ಚರಕ ಸಂಹಿತಾ ಚೌಖಂಭಾ ಪ್ರೆಸ್, ವಾರಾಣಾಸಿ

೪) ಡಾಟಾಬೇಸ್ ಆಫ್ ಇಂಡಿಯನ್ ಮೆಡಿಸಿನಲ್ ಪ್ಲಾಂಟ್ಸ್, CCRAS New delhi

೫) ಆಯುರ್ವೇದ ಕ್ಲಿನಿಕಲ್ ಡೈಗ್ನೊಸಿಸ್, ಸುರೇಂದ್ರ ಮಾರಾಯಣ ತ್ರಿಫಾರಿ ಮತ್ತು ಜೆ. ಡಿ ಸಿಂಘಾಲ್, ಚೌಖಂಭಾ ಪ್ರೆಸ್, ನವದೆಹಲಿ

# ಪ್ರನಾಳೀಯ ಮತ್ತು ಜೈವಿಕ ವಿಧಾನಗಳಲ್ಲಿ ಕೆಲವು ಆಹಾರ ಸಂರಕ್ಷಕಗಳ ವಿಷಶಾಸ್ತ್ರೀಯ ಮೌಲ್ಯಮಾಪನ

ಮೋಹನ್ ಗೌಡ ಸಿ.ಎಮ್., ರಾಮ್ ಕುಮಾರ್ ಕೆ., ವಿಜಾಯ್ ವಿ., ಚೈತ್ರ ಸಿ.ಎಸ್. ಮತ್ತು ಶ್ರೀಪ್ರಿಯ ಎಮ್.*
ಸೂಕ್ಷ್ಮಜೀವಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ,ಜ್ಞಾನಭಾರತಿ, ಬೆಂಗಳೂರು-560 056
**ಇ-ಅಂಚೆ:** mpriya7@yahoo.com

ಆಹಾರ ಸಂರಕ್ಷಕಗಳನ್ನು ಆಹಾರ ಪದಾರ್ಥಗಳ ಸಂರಕ್ಷಿಸಲು ಹಾಗೂ ಅವುಗಳ ಪರಿಮಳ ಮತ್ತು ರುಚಿಯನ್ನು ಹೆಚ್ಚಿಸಲು ಬಳಸಲಾಗುತ್ತದೆ. ಸುಮಾರು 3,000ಕ್ಕೂ ಹೆಚ್ಚು ಆಹಾರ ಸಂರಕ್ಷಕಗಳು ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಶನ್ (ಎಫ್ ಡಿ ಎ) ಯಂತಹ ಆಹಾರ ಸುರಕ್ಷತಾ ನಿಯಂತ್ರಣ ಸಂಸ್ಥೆಗಳಿಂದ ಮಾನವ ಬಳಕೆಗಾಗಿ ಅನುಮೋದಿಸಲ್ಪಟ್ಟಿದೆ. ಹೆಚ್ಚುತ್ತಿರುವ ಸಾರ್ವಜನಿಕ ತಿಳುವಳಿಕೆಯ ಪರಿಣಾಮವಾಗಿ ಆಹಾರ ಸಂರಕ್ಷಕಗಳ ಸುರಕ್ಷತೆ ಮತ್ತು ಮಾನವ ಆರೋಗ್ಯದ ಮೇಲೆ ಅವುಗಳ ದುಷ್ಪರಿಣಾಮಗಳ ಕುರಿತು ಕಾಳಜಿವಹಿಸಲಾಗುತ್ತಿದೆ. ಆದ್ದರಿಂದ ಆಹಾರ ಸಂರಕ್ಷಕಗಳ ಸುರಕ್ಷತೆಯನ್ನು ಸಂಶೋಧಿಸುವುದು ಮತ್ತು ದೃಢೀಕರಿಸುವುದು ವೈಜ್ಞಾನಿಕ ಸಮುದಾಯದ ಆದ್ಯ ಕರ್ತವ್ಯವಾಗಿದೆ. ಪ್ರಸ್ತುತ ಈ ಅಧ್ಯಯನದಲ್ಲಿ ಆಹಾರ ಪದಾರ್ಥಗಳಲ್ಲಿ ವ್ಯಾಪಕವಾಗಿ ಬಳಸುವ ಮೂರು ಆಹಾರ ಸಂರಕ್ಷಕಗಳಾದ ಮೊನೊಸೊಡಿಯಮ್ ಗ್ಲುಟಮೇಟ್, ಆಸ್ಪರ್ಟೆಮ್ ಮತ್ತು ಸೊಡಿಯಮ್ ಬೆಂಜೊಯೆಟ್ಗಳ ಪರಿಣಾಮಗಳನ್ನು ಪ್ರನಾಳೀಯ ಮತ್ತು ಜೈವಿಕ ವಿಧಾನಗಳಲ್ಲಿ ಪರಾಮರ್ಶಿಸಲಾಗಿದೆ. ಮಾನವ ಬಾಹ್ಯರಕ್ತ ದುಗ್ಧಕಣಗಳು, ಇಲಿಯ ಮ್ಯಾಕ್ರೋಫೇಜ್'ಗಳು ಮತ್ತು ಮೇಕೆ ಗುಲ್ಮದ ಲಿಂಫೋಸೈಟ್ಸ್ ಗಳನ್ನು ಪ್ರನಾಳೀಯ ಮಾದರಿಗಳಾಗಿ ಬಳಸಲಾಗಿದೆ. ಪರೀಕ್ಷಾ ಮಾದರಿಗಳ ಪರಿಣಾಮಗಳನ್ನು ಎಮ್.ಟಿ.ಟಿ ವಿಧಾನದ ಮೂಲಕ ಪ್ರನಾಳೀಯವಾಗಿ ಪರೀಕ್ಷಿಸಲಾಯಿತು ಮತ್ತು ಜೈವಿಕ ವಿಧಾನದಲ್ಲಿ ರೇಷ್ಮೆಹುಳುಗಳ ಮೇಲೆ ಪರೀಕ್ಷಿಸಲಾಯಿತು. ರೇಷ್ಮೆಹುಳುಗಳ ಮೇಲೆ ಪರೀಕ್ಷಾ ಮಾದರಿಗಳ ಪರಿಣಾಮಗಳನ್ನು ಅಳೆಯಲು ಅವುಗಳ ಆಹಾರ ಸೇವನೆ, ದೇಹದ ತೂಕ, ಕಾರ್ಬೋಹೈಡ್ರೇಟ್ ಚಯಾಪಚಯ ಮತ್ತು ಪ್ರೋಟೀನಗಳನ್ನು ನಿಯಂತ್ರಿಸುವ ಕಿಣ್ವಗಳನ್ನು ಪರೀಕ್ಷಿಸಲಾಯಿತು. ಈ ಅಧ್ಯಯನದಲ್ಲಿ ಬಳಸಿದ ಎಲ್ಲಾ ಪ್ರನಾಳೀಯ ವಿಧಾನಗಳಲ್ಲಿ ಪರೀಕ್ಷಾ ಮಾದರಿಗಳು 100 ಮೈಕ್ರೊಗ್ರಾಮ್/ಮಿಲೀ ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದ್ದಾಗ ಪ್ರತಿರಕ್ಷಣಾ ವ್ಯವಸ್ಥೆಯ ಮೇಲೆ ದುಷ್ಪರಿಣಾಮಗಳನ್ನುಂಟು ಮಾಡಿದ್ದು ಕಂಡುಬಂತು. ರೇಷ್ಮೆಹುಳುಗಳ ಮೇಲಿನ ಪರೀಕ್ಷೆಯಲ್ಲಿ ಪರೀಕ್ಷಾ ಮಾದರಿಗಳನ್ನು ಆಹಾರದ ಜೊತೆ ರೇಷ್ಮೆಹುಳುಗಳಿಗೆ ತಿನಿಸಿದಾಗ, ಅವುಗಳಲ್ಲಿ ಆಹಾರ ಸೇವನೆ ಮತ್ತು ದೇಹತೂಕದಲ್ಲಿ ಇಳಿಕೆಯಾಗಿರುವುದು ಹಾಗೂ ಕಾರ್ಬೋಹೈಡ್ರೇಟ್ ಚಯಾಪಚಯಕ ಮತ್ತು ಪ್ರೋಟೀನ್ ನಿಯಂತ್ರಿಕ ಕಿಣ್ವಗಳ ಚಟುವಟಿಕೆಗಳಲ್ಲಿ ಮಾರ್ಪಾಟಾಗಿರುವುದು ಕಂಡುಬಂದಿತು. ಪ್ರನಾಳೀಯ ಮತ್ತು ಜೈವಿಕ ವಿಧಾನಗಳಲ್ಲಿ ಪರೀಕ್ಷಿಸಿದ ಎಲ್ಲಾ ಮೂರು ಆಹಾರ ಸಂರಕ್ಷಕಗಳು ವಿಷಕಾರಿ ಪರಿಣಾಮಗಳನ್ನು ಹೊಂದಿರುವುದನ್ನು ಈ ಅಧ್ಯಯನದ ಫಲಿತಾಂಶಗಳು ತೋರುತ್ತವೆ.

**ಕೀಲಿಪದಗಳು**: ಆಹಾರ ಸಂರಕ್ಷಕಗಳು, ಪ್ರನಾಳೀಯ ಮತ್ತು ಜೈವಿಕ ವಿಧಾನ, ದುಗ್ಧಕಣಗಳು, ಮ್ಯಾಕ್ರೋಫೇಜ್'ಗಳು, ರೇಷ್ಮೆಹುಳುಗಳು.

ಪೀಠಿಕೆ: ಆಹಾರ ಜೀವನದ ಮೂಲಭೂತ ಪ್ರಾಮುಖ್ಯತೆಯನ್ನು ಹೊಂದಿದೆ.ಇದು ನಿರ್ವಹಣೆ ಮತ್ತು ಸಂತಾನೋತ್ಪತ್ತಿಯನ್ನು ಒಳಗೊಂಡಂತೆ ಅಭಿವೃದ್ಧಿ ಮತ್ತು ಕಾರ್ಯಚಟುವಟಿಕೆಗೆ ಅಗತ್ಯವಾಗಿದೆ.ಬಹುಪಾಲು ಆಹಾರವನ್ನು ಅದರ ಜೀವಿತಾವಧಿಯನ್ನು, ರಚನೆ, ಅರ್ಹತೆಯನ್ನು ತಿಳಿಯುವ ಅಥವಾ ಸೊಬಗು ರೀತಿಯಲ್ಲಿ ಪರಿಗಣಿಸಲಾಗುತ್ತದೆ.ಆಹಾರ ಪದಾರ್ಥಗಳೊಂದಿಗೆ ಆಹಾರ ಸಂರಕ್ಷಕ/ ಸಂಯೋಜನೀಯಗಳನ್ನು ವಸ್ತುಗಳ ಪರಿಮಳವನ್ನು ರಕ್ಷಿಸಲು ಅಥವಾ ಅದರ ರುಚಿ ಮತ್ತು ನೋಟವನ್ನು ವರ್ಧಿಸಲು ಸೇರಿಸಲಾಗುತ್ತದೆ (ಜಾನ್ಸನ್ ಮತ್ತು ವೋರಾಗನ್.,1997).ಆಹಾರ ಸಂರಕ್ಷಕಗಳನ್ನು, ಆಹಾರದ ಹಾಳಾಗುವಿಕೆಯನ್ನು ತಡೆಗಟ್ಟಲು, ಆಹಾರದ ಪರಿಮಳವನ್ನು ಹೆಚ್ಚಿಸಲು ಮತ್ತು ಆಹಾರಕ್ಕೆ ಬಣ್ಣವನ್ನು ನೀಡಲು ಬಳಸಲಾಗುತ್ತದೆ. ಆಹಾರ ಸಂರಕ್ಷಕಗಳು, ಹಿಟ್ಟು, ಏಕದಳ, ಮಾರ್ಗರೀನ್ ಮತ್ತು ಹಾಲು ಆಹಾರ ಜೀವಸತ್ವಗಳು, ಖನಿಜಗಳು ಮತ್ತು ಇತರ ಪೋಷಕಾಂಶಗಳನ್ನು ಒದಗಿಸುವ ಮೂಲಕ ಪೌಷ್ಟಿಕ ಮೌಲ್ಯವನ್ನು ಸಂರಕ್ಷಿಸುತ್ತವೆ (ಅಂತಾರಾಷ್ಟ್ರೀಯ ಆಹಾರ ಸಂಯೋಜಕಗಳ ಕೌನ್ಸಿಲ್, ಫುಡ್ ಅಡ್ಡಿಟಿವ್ಸ್ ಬುಕ್ಲೆಟ್, 2015).

ಸಂಸ್ಕರಿಸಿದ ಆಹಾರಗಳ ಹೆಚ್ಚುತ್ತಿರುವ ಬಳಕೆಯಿಂದಾಗಿ, ಸುರಕ್ಷತೆ ಹಂತಗಳಲ್ಲಿ ಆಹಾರ ಸಂಯೋಜನೀಯಗಳ ಬಳಕೆಯಲ್ಲಿ ಹೆಚ್ಚಿನ ಏರಿಕೆಯಾಗಿದೆ.ಇವುಗಳನ್ನು ಮಾನವನ ಬಳಕೆಗಾಗಿ ಬಳಸುವುದರಿಂದ, ಇವುಗಳ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸಬೇಕಾಗಿದೆ. ಅನೇಕ ದೇಶಗಳಲ್ಲಿ ಸಂಸ್ಕರಿಸಿದ ಆಹಾರದ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಕಟ್ಟುನಿಟ್ಟಾದ ಶಾಸನಗಳಿಂದ ಅನುಸರಿಸುತ್ತಾರೆ. ಕೆಲವು ಆಹಾರ ಸಂಯೋಜನೀಯಗಳ ಅಪಾಯ ಮತ್ತು ಲಾಭಗಳಿಗೆ ಸಂಬಂಧಿಸಿದಂತೆ ಕೆಲವು ಗಮನಾರ್ಹ ವಿವಾದಗಳು ಉಂಟಾಗಿವೆ.ಕೆಲವು ಕೃತಕ ಆಹಾರ ಸಂಯೋಜನೀಯಗಳಿಂದ ಕ್ಯಾನ್ಸರ್, ಅಜೀರ್ಣ ಸಮಸ್ಯೆ, ನರವೈಜ್ಞಾನಿಕ ಪರಿಸ್ಥಿತಿಗಳ, ಅಟೆನ್ಶನ್ ಡಿಫಿಸಿಟ್ ಹೈಪರ್ಆಕ್ಟಿವಿಟಿ ಡಿಸಾರ್ಡರ್ (ಎಡಿಎಚ್ಡಿ), ಹೃದಯ ರೋಗ ಮತ್ತು ಬೊಜ್ಜು ಬರುತ್ತದೆ.ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವನ್ನು (FSSAI) ಮಾನವ ಬಳಕೆಗಾಗಿ ಸುರಕ್ಷಿತ ಮತ್ತು ಆರೋಗ್ಯಕರ ಆಹಾರ ಲಭ್ಯತೆ ಖಚಿತಪಡಿಸಿಕೊಳ್ಳಲು ತಮ್ಮ ಉತ್ಪಾದನೆ, ಸಂಗ್ರಹ , ವಿತರಣೆ , ಮಾರಾಟ ಮತ್ತು ಆಮದು ಆಹಾರ ಲೇಖನಗಳು ವಿಜ್ಞಾನ ಆಧಾರಿತ ಪ್ರಮಾಣಗಳನ್ನು ನಿಯಂತ್ರಿಸಲು ರಚಿಸಲಾಗಿದೆ .

ನಿಯಂತ್ರಣಾ ಏಜೆನ್ಸಿಗಳ ಕಠಿಣ ಮೇಲ್ವಿಚಾರಣೆಯ ಹೊರತಾಗಿಯೂ, ಸಂಸ್ಕರಿಸಿದ ಆಹಾರಗಳು ಹಾಗೂ ಆಹಾರ ಸಂಯೋಜನೀಯಗಳು ಅನೇಕ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡಿವೆ. ಮೋನೊಸೋಡಿಯಂ ಗ್ಲುಟಮೇಟ್ (ಎಮ್ ಯಸ್ ಜಿ), ಆಸ್ಪರ್ಟೆಮ್ ಮತ್ತು ಸೋಡಿಯಂ ಬೆನ್ಝೋಯೇಟ್ ಆಹಾರ ಉದ್ಯಮದಲ್ಲಿ ವ್ಯಾಪಕವಾಗಿ ಬಳಸುವ ಕೆಲವು ಆಹಾರ ಸಂರಕ್ಷಕಗಳು. ಇವು ಜೈವಿಕ ಮಾದರಿಗಳ ಮೇಲೆ ಉಂಟು ಮಾಡುವ ಅಡ್ಡಪರಿಣಾಮಗಳ ಬಗ್ಗೆ ಅನೇಕ ವೈಜ್ಞಾನಿಕ ವರದಿಗಳಿವೆ. ಆಹಾರ ಸಂರಕ್ಷಕಗಳ ವಿಷಶಾಸ್ತ್ರೀಯ ಪರಿಣಾಮಗಳನ್ನು ಪ್ರನಾಳೀಯ ಮತ್ತು ಜೈವಿಕ ಮಾದರಿಗಳ ಮೇಲೆ ಪ್ರಸ್ತುತ ಅಧ್ಯಯನದಲ್ಲಿ ಮೌಲ್ಯಮಾಪನ ಮಾಡಲಾಯಿತು. ಮಾನವ ಬಾಹ್ಯ ರಕ್ತ ದುಗ್ಧಕಣಗಳು,

ಇಲಿಯ ಮ್ಯಾಕ್ರೋಫೇಜ್ ಗಳು ಹಾಗೂ ಮೇಕೆ ಗುಲ್ಮದ ದುಗ್ದಕಣಗಳನ್ನು ಪ್ರನಾಳೀಯ ಮಾದರಿಗಳಾಗಿ ಬಳಸಲಾಯಿತು. ಪ್ರನಾಳೀಯ ಅಧ್ಯಯನದಿಂದ ಪಡೆದ ವರದಿಗಳನ್ನು ಖಚಿತಪಡಿಸಲು, ರೇಷ್ಮೆಹುಳುಗಳ (ಬಾಂಬಿಕ್ಸ್ ಮೊರಿ) ಮೇಲೆ ವಿಷತ್ವದ ಅಧ್ಯಯನವನ್ನು ನಡೆಸಲಾಯಿತು. ವಿಷತ್ವದ ಪರಿಣಾಮವನ್ನು ಜೀವರಾಸಾಯನಿಕ ವಿಶ್ಲೇಷಣೆಯ ಮೂಲಕ ಅಂದರೆ ಮಧ್ಯಅನ್ನನಾಳದ ಅಂಗಾಂಶಗಳ ಜೀರ್ಣಕಾರಿ ಕಿಣ್ವಗಳಿಂದ ಮತ್ತು ವಿಷಕಾರಿ ಪರಿಣಾಮವನ್ನು ಒಳಗೊಂಡಂತಹ ಪ್ರಾಣಿಗಳ ಹಿಮೋಲಿಂಪ್ ನಿಂದ ಅಂದಾಜು ಮಾಡಲಾಯಿತು.ಒಟ್ಟಾರೆ,ಪ್ರತಿರಕ್ಷಣಾ ಜೀವಕೋಶಗಳು ಮತ್ತು ರೇಷ್ಮೆಹುಳುಗಳ ಮೇಲೆ ಆಯ್ದ ರಾಸಾಯನಿಕಗಳ ಪ್ರಾಥಮಿಕ ಪಾತ್ರ ಹಾಗೂ ಅವುಗಳ ವ್ಯತಿರಿಕ್ತ ಪರಿಣಾಮಗಳನ್ನು ಪ್ರಸ್ತುತ ತನಿಖೆಯ ಫಲಿತಾಂಶಗಳಿಂದ ನಿರೀಕ್ಷಿಸಲಾಗಿದೆ. ಪ್ರನಾಳೀಯ ಅಧ್ಯಯನವನ್ನು ಜೈವಿಕ ಅಧ್ಯಯನದೊಂದಿಗೆ ಪರಾಮರ್ಶಿಸುವುದರಿಂದ ಈ ರಾಸಾಯನಿಕಗಳ ಅಪಾಯಕಾರಿ ಮೌಲ್ಯಮಾಪನದ ಅಧ್ಯಯನವನ್ನು ಸೂಕ್ತ ಪ್ರಾಣಿ ಮಾದರಿಗಳ ಮೇಲೆ ಕೈಗೊಳ್ಳಬಹುದೆ ಎಂದು ನಿರ್ಧರಿಸಬಹುದು.

ವಸ್ತು ಮತ್ತು ವಿಧಾನಗಳು

ಪ್ರನಾಳೀಯ ಅಧ್ಯಯನ

ಪರಿಕ್ಷಾ ಸಂಯುಕ್ತಗಳು: ಮೋನೊಸೋಡಿಯಂ ಗ್ಲುಟಮೇಟ್ (ಅಜಿನೊ ಮೊಟೊ), ಆಸ್ಪರ್ಟೆಮ್ (ಈಕ್ವಾಲ್) ಮತ್ತು ಸೋಡಿಯಂ ಬೆನ್ಜೋಯೇಟ್ ನ್ನು ಸ್ಥಳೀಯ ವಾಣಿಜ್ಯ ಮೂಲಗಳಿಂದ ಖರೀದಿ ಮಾಡಲಾಯಿತು. ಆಸ್ಕೋರ್ಬಿಕ್ ಆಮ್ಲವನ್ನು ಎಸ್ ಆರ್ ಎಲ್ ರಾಸಾಯನಿಕಗಳು ಪ್ರೈವೇಟ್ ಲಿಮಿಟೆಡ್, ಭಾರತದಿಂದ ಸಂಗ್ರಹಿಸಲಾಯಿತು.

**ರಕ್ತ ಪಡೆಯುವಿಕೆಯು ಮತ್ತು ಬೇರ್ಪಡಿಸುವಿಕೆ ಮಾನವನ ಬಾಹ್ಯ ರಕ್ತ ದುಗ್ದಕಣಗಳ ಬೇರ್ಪಡಿಸುವಿಕೆ:** ತಾಜಾ ಮಾನವ ಪರಿಧಿಯ ಮೇಲೆ ರಕ್ತವನ್ನು ಆರೋಗ್ಯಕರ ಸ್ವಯಂಸೇವಕರಿಂದ ಪಡೆಯಲಾಯಿತು. ಹೆಲ್ಸಿಂಕಿ ಘೋಷಣೆಯ ಪ್ರಕಾರ, ಪ್ರಯೋಗದ ವಿನ್ಯಾಸವನ್ನು ಸ್ವಯಂಸೇವಕರಿಗೆ ಸಂಪೂರ್ಣವಾಗಿ ವಿವರಿಸಲಾಯಿತು.ರಕ್ತನಾಳದಲ್ಲಿ ರಕ್ತ ಸಿರೆ ರಂಧ್ರನ ಮೂಲಕ 70% ಮದ್ಯ (ಇಥನಾಲ್) ಸಿಂಪಡಿಸಿದ ನಂತರ (ಮುಂದೋಳಿನ ಮೂಲಕ) ಇಡಿಟಿಎ ಹೊಂದಿರುವ ಬಿಸಾಡಬಹುದಾದ ಬಿರುಡೆಗೆ ವರ್ಗಾಯಿಸಲಾಯಿತು. ಹೀಗೆ ಸಂಗ್ರಹಿಸಿದ ರಕ್ತವನ್ನು ಎರಡು ಗಂಟೆಗಳ ಒಳಗೆ, ದುಗ್ದಕಣಗಳ ಬೇರ್ಪಡುವಿಕೆಗೆ ಬಳಸಲಾಯಿತು. ದುಗ್ದಕಣಗಳನ್ನು ಸಾಂದ್ರತೆಯ ಇಳುಕಲಿನ ಪ್ರಮಾಣ ಬೇರ್ಪಡಿಸುವಿಕೆಯ ತಂತ್ರವನ್ನು ಅನ್ವಯಿಸಿ ಬೊಯುಮ್ (೧೯೬೮) ವಿಧಾನದ ಮೂಲಕ ಬೇರ್ಪಡಿಸಲಾಯಿತು. ದುಗ್ದಕಣಗಳ ಬೇರ್ಪಡಿಸುವಿಕೆಗೆ, ದುಗ್ದಕೋಶ ಪ್ರತ್ಯೇಕಿಸುವಿಕೆ ಮೀಡಿಯಾ (ಹೈಸೆಪ್ ಟಿಎಮ್, 1001 ಎಲ್ ಯಸ್ ಎಮ್) ವನ್ನು ಹೈಮೀಡಿಯಾ ಲ್ಯಾಬೋರೇಟರೀಸ್ ಪ್ರೈವೇಟ್ ಲಿಮಿಟೆಡ್ ಮುಂಬೈ,ಭಾರತದಿಂದ ಸಂಗ್ರಹಿಸಲಾಯಿತು. . ಎಲ್ ಯಸ್ ಎಮ್ ಐಎಸ್‌ಓ ಕಡಿಮೆ ಆಸ್ಮೋಸಿಸ್ ಸ್ನಿಗ್ಧತೆಯನ್ನು ಹೊಂದಿರುವ ಮಾಧ್ಯಮವಾಗಿದ್ದು, ಪಾಲಿ ಸುಕ್ರೋಸ್ ಮತ್ತು ಸೋಡಿಯಂ ಡೈಆಟ್ರಿಜೋಯೆಟ್ ನ್ನು ಹೊಳಗೊಂಡಿದೆ.ಈ ಮಧ್ಯಮ ಮಾನವ ಮಾನೋನ್ಯೂಕ್ಲಿಯರ್ ಜೀವಕೋಶಗಳು ಮತ್ತು ಮಾನವ ರಕ್ತ ಚಿಕಿತ್ಸೆಅಥವಾ ಹೆಪಾರಿನ್ ರಿಂದ ದುಗ್ಧಕಣಗಳ ಸರಳ ಬೇರ್ಪಡಿಸುವಿಕೆಗೆ ಶೀಘ್ರ ಮತ್ತು ವಿಶ್ವಾಸಾರ್ಹ ವಿಧಾನವನ್ನು ಒದಗಿಸುತ್ತದೆ.

**ಮಾಕ್ರೊಫೇಜ್ ಕೋಶಗಳ ಕೃಷಿ ಹಾಗೂ ನಿರ್ವಹಣೆ:** 264, 7 ರಾ ಮುರೈನ್ ಜೀವಕೋಶಗಳನ್ನು ಕೋಶ ವಿಜ್ಞಾನದ ರಾಷ್ಟ್ರೀಯ ಕೇಂದ್ರ (NCCS) ಪುಣೆಯಿಂದ ಖರೀದಿ ಮಾಡಲಾಯಿತು. ಜೀವಕೋಶಗಳನ್ನು T75 ಅಂಗಾಂಶ ಕೃಷಿ ಫ್ಲಾಸ್ಕ್ ನಲ್ಲಿ DMEM ಮೀಡಿಯಾ (10% FBS) ದೊಂದಿಗೆ ಬೆಳೆಯಲಾಗುತ್ತದೆ ಮತ್ತು ಏಕಪದರ ರಚನೆಗಾಗಿ CO2 ಅಕ್ಷಯಪಾತ್ರೆ (37oc ನಲ್ಲಿ, 5% CO2) ಯಲ್ಲಿ ಇಡಲಾಯಿತು .ಉಪಕೃಷಿಯನ್ನು T25 ಅಂಗಾಂಶ ಕೃಷಿ ಫ್ಲಾಸ್ಕ್ (10% FBS ಹೊಂದಿರುವ 5ml ಮಾಧ್ಯಮ) ನಲ್ಲಿ ಮಾಡಲಾಯಿತು. ಪ್ರಯೋಗಗಳಿಗಾಗಿ, ಹಳೆಯ ಮಧ್ಯಮವನ್ನು ತಾಜಾ ಮಧ್ಯಮದೊಂದಿಗೆ ಬದಲಾಯಿಸಲಾಯಿತು ಮತ್ತು ಜೀವಕೋಶಗಳನ್ನು 96 ಮೈಕ್ರೊಟೈಟ್ರ್ ಹಲಗೆಗಳಿಗೆ ವರ್ಗಾಯಿಸಲಾಯಿತು ಮತ್ತು ಬೆಳವಣಿಗೆಗೆ CO2 ಅಕ್ಷಯಪಾತ್ರೆಯಲ್ಲಿ ಇಡಲಾಯಿತು. ಪ್ರಯೋಗಶೀಲತೆಯ ದಿನ, ಜೀವಕೋಶಗಳು ಮಿತವ್ಯಯಿ ಬಳಸಿ ಕೊಯ್ಲು ಮಾಡಿ, ಅವುಗಳ ಎಣಿಕೆಯನ್ನು trypan blue ಪರಿಕ್ಷೆಯ ಮೂಲಕ ನಿರ್ಧರಿಸಲಾಯಿತು. ಹೆಚ್ಚಿನ 90% ಗಿಂತ ಕಾರ್ಯಸಾಧ್ಯತೆಯನ್ನು ಹೊಂದಿರುವ ಸೆಲ್ ಸಿದ್ಧತೆಗಳನ್ನು ಜೀವಕೋಶಗಳ ಬೆಳವಣಿಗೆಯ ವಿಶ್ಲೇಷಣೆಗಾಗಿ ಬಳಸಲಾಗುತ್ತಿತ್ತು. ಜೀವಕೋಶಗಳ ಎಣಿಕೆಯನ್ನು 1 X 10 6 ಗೆ ಸರಿಪಡಿಸಿ 96 ಮೈಕ್ರೊಟೈಟ್ರ್ ಹಲಗೆಗಳಿಗೆ ವರ್ಗಾಯಿಸಲಾಯಿತು.

**ಮೇಕೆಯ ಗುಲ್ಮದ ದುಗ್ದಕಣಗಳನ್ನು ತೆಗೆದುಕೊಳ್ಳುವಿಕೆ:** ಮೇಕೆ ಗುಲ್ಮ ಸ್ಥಳೀಯ ವಧೆ ಮನೆಯಲ್ಲಿ ಆಗಷ್ಟೇ ತ್ಯಾಗ ಮಾಡಿದ ಮೇಕೆಯಿಂದ ಗುಲ್ಮ ವನ್ನು ಸಂಗ್ರಹಿಸಲಾಯಿತು. ಸೂಕ್ಷ್ಮ ಜೀವಿಗಳ ಮಾಲಿನ್ಯವನ್ನು ತಪ್ಪಿಸಲು ಗುಲ್ಮ ವನ್ನು ಅತ್ಯಂತ ಎಚ್ಚರಿಕೆಯಿಂದ ಬರಡಾದ ಫ್ರಿ ಚಿಲ್ಡ್ ಬಫರ್ ಗೆ ತಕ್ಷಣವೇ ವರ್ಗಾಯಿಸಲಾಯಿತು. ಪ್ರತ್ಯೇಕತೆಯ ನಂತರ ವಿಧಾನವನ್ನು ಆರಂಭಿಸಲಾಯಿತು. ಆಟೋಕ್ಲೇವ್ಡ್ ಮತ್ತು UV ಬೆಳಗಿದ ಶಸ್ತ್ರಚಿಕಿತ್ಸಕ ಉಪಕರಣಗಳನ್ನು ಛೇದನ (ಕತ್ತರಿ, ಇಕ್ಕುಳ, ಚಿಕ್ಕಚಾಕು ಇತ್ಯಾದಿ) ಕ್ಕೆ ಬಳಸಲಾಗುತ್ತದೆ. ಗುಲ್ಮ ವನ್ನು ಅಪೂರ್ಣ ಮಾಧ್ಯಮ ಹೊಂದಿರುವ ಬರಡಾದ ಬಿಸಾಡಬಹುದಾದ ಪೆಟ್ರಿ ಪ್ಲೇಟ್ ಗೆ ವರ್ಗಾಯಿಸಿ, ಗೊಡ್ಡು ಗಾಜಿನ ಹೆಪ್ಪುಗಟ್ಟಿದ ಸ್ಲೈಡ್ ನಿಂದ ಆರ್ದ್ರೀಕರಣ ಮಾಡಲಾಯಿತು. ಗುಲ್ಮ ದೊಂದಿಗಿರುವ ಎಲ್ಲಾ ಕೊಬ್ಬಿನ ವಸ್ತುಗಳನ್ನು ಆರ್ದ್ರೀಕರಣದ ಪ್ರಕ್ರಿಯೆಯಲ್ಲಿ ತೆಗೆದುಹಾಕಲಾಯಿತು.ಸೆಂಟ್ರಿಫ್ಯೂಗೆಶನ್ (10 ನಿಮಿಷಗಳ ಕಾಲ 2500rpm ನಲ್ಲಿ) ನ ಮೂಲಕ ಏಕ ಕೋಶಗಳಾಗಿ ವಿಭಾಗಿಸಲಾಯಿತು. ಬೇರ್ಪಡಿಸುವಿಕೆಯ ನಂತರ, ಸೂಪರ್ನೆಟೆಂಟ್ ನನ್ನು ಎಚ್ಚರಿಕೆಯಿಂದ ಬಿಸಾಡಿ, ಸ್ಪಷ್ಟವಾಗಿದ್ದ ಬಿಳಿಯ ಸೆಲ್ ಮಾತ್ರೆಯನ್ನು 10% FBS ಹೊಂದಿರುವ ಸಂಪೂರ್ಣ ಮಾಧ್ಯಮ (DMEM) ದಲ್ಲಿ ಇಡಲಾಯಿತು.

**ಜೀವಕೋಶಗಳ ಬೆಳವಣಿಗೆ ಹಾಗೂ ಕಾರ್ಯಸಾಧ್ಯತೆಯ ಪರಿಕ್ಷೆ MTT ಪರಿಕ್ಷೆ:** MTT ಪರಿಕ್ಷೆಯನ್ನು ಮೊಸ್ಮನ್ (೧೯೮೩) ವಿಧಾನದ ಮೂಲಕ ಮಾಡಲಾಯಿತು.

ಜೈವಿಕ ಅಧ್ಯಯನ

ರೇಷ್ಮೆಹುಳು (ಬಾಂಬಿಕ್ಸ್ ಮೊರಿ) ಮೇಲಿನ ಅಧ್ಯಯನ

**ರೇಷ್ಮೆಹುಳು (ಬಾಂಬಿಕ್ಸ್ ಮೊರಿ) ಖರೀದಿ ಮತ್ತು ನಿರ್ವಹಣೆ:** ಬೈವೊಲ್ಟೈನ್ ರೇಷ್ಮೆಹುಳು ಬಾಂಬಿಕ್ಸ್ ಮೊರಿ. ಎಲ್ (ಲೆಪಿಡೋಪ್ಟೆರ) ಸಿಎಸ್‌ಆರ್ II ಅವಾಂತರ ರೂಪದ 2 ಎಕ್ಸ್ 4 ಮಿಶ್ರತಳಿಗಳನ್ನು ಸೆಂಟ್ರಲ್ ಸಿಲ್ಕ್ ತಾಂತ್ರಿಕ ಸಂಶೋಧನಾ ಸಂಸ್ಥೆ, ರಾಮನಗರ ಘಟಕದಿಂದ

ಸಂಗ್ರಹಿಸಲಾಯಿತು ಮತ್ತು ಪ್ರಯೋಗಾಲಯದ ಪರಿಸರದಲ್ಲಿ ಹೊಂದಿಕೊಳ್ಳಲು ಬಿಡಲಾಯಿತು. ಹುಳುಗಳನ್ನು ಕಸ್ಟಮ್ ಮಾಡಿದ ಮರದ ಕಪಾಟಿನಲ್ಲಿ ಸಾಕಣೆ ಮಾಡಲಾಯಿತು. ಈ ಕಸ್ಟಮ್ ಆಕೃತಿಯಾಗಿ ಚಿಕಿತ್ಸೆ ವೇಳಾಪಟ್ಟಿ ಪ್ರಕಾರ ಹುಳುಗಳನ್ನು ಪ್ರತ್ಯೇಕಿಸಿ ವಿವಿಧ ವಿಭಾಗಗಳಲ್ಲಿ ಬೆಳೆಸಲಾಯಿತು. ಕೀಟಗಳ ಪ್ರವೇಶ ತಡೆಯಲು ಇಡೀ ಘಟಕವನ್ನು ನೈಲಾನ್ ಮೆಶ್ಗಳಿಂದ ಆವರಿಸಲಾಯಿತು ಹಾಗು ಇಡೀ ಘಟಕಕ್ಕೆ ಸಾಕಷ್ಟು ಗಾಳಿ ಇರುವಂತೆ ನೋಡಿಕೊಳ್ಳಲಾಯಿತು.ಪ್ರಯೋಗಾಲಯದಲ್ಲಿನ ರೇಷ್ಮೆಹುಳುವಿನ ನಿರ್ವಹಣೆ ಹಾಗೂ ಪಾಲನೆಯನ್ನು ಕೃಷ್ಣಸ್ವಾಮಿ 1978 ವಿಧಾನವನ್ನು ಪಾಲನೆ ಮಾಡಲಾಯಿತು. 2 % ಫಾರ್ಮಾಲಿನ್ ನಂತಹ ಸೋಂಕು ನಿವಾರಕಗಳ ಬಳಕೆ ಹಾಗೂ ಇತರ ಮುನ್ನೆಚ್ಚರಿಕಾ ಕ್ರಮಗಳ ಮೂಲಕ ರೋಗ ರೇಷ್ಮೆಹುಳುಗಳ ಸಾಮಾನ್ಯ ಸ್ವಚ್ಛತೆ ಮತ್ತು ನೈರ್ಮಲ್ಯ ತಂತ್ರಗಳನ್ನು ಕೃಷ್ಣಸ್ವಾಮಿ ಮತ್ತು ಇತರರು., (1973, 1978) ವಿಧಾನದ ಪ್ರಕಾರ ಮಾಡಲಾಯಿತು.

**ರೇಷ್ಮೆಹುಳುಗಳ ಬೇರ್ಪಡಿಸುವಿಕೆ ಮತ್ತು ಅವುಗಳ ಮೇಲೆ ಪರಿಕ್ಷಾ ಸಂಯುಕ್ತಗಳ ಪ್ರಯೋಗ:** ಪ್ರಯೋಗಕ್ಕಾಗಿ ರೇಷ್ಮೆಹುಳುಗಳನ್ನು ಕೆಳಗಿನ ಗುಂಪುಗಳಂತೆ ವಿಭಾಗಿಸಲಾಯಿತು

ಗುಂಪು ೧: ಸಂಸ್ಕರಿಸದ ನಿಯಂತ್ರಕ ರೇಷ್ಮೆಹುಳುಗಳು

ಗುಂಪು ೨: ಮೋನೊಸೋಡಿಯಂ ಗ್ಲುಟಮೇಟ್ ಚಿಕಿತ್ಸೆ ಒಳಗೊಂಡಿರುವ ರೇಷ್ಮೆಹುಳುಗಳು

ಗುಂಪು ೩: ಆಸ್ಪರ್ಟೆಮ್ ಚಿಕಿತ್ಸೆ ಒಳಗೊಂಡಿರುವ ರೇಷ್ಮೆಹುಳುಗಳು

ಗುಂಪು ೪: ಸೋಡಿಯಂ ಬೆನ್ಝೋಯೇಟ್ ಚಿಕಿತ್ಸೆ ಒಳಗೊಂಡಿರುವ ರೇಷ್ಮೆಹುಳುಗಳು

ಗುಂಪು ೫: ಸೋಡಿಯಂ ಬೆನ್ಝೋಯೇಟ್ + ಆಸ್ಕೋರ್ಬಿಕ್ ಆಮ್ಲ ಚಿಕಿತ್ಸೆ ಒಳಗೊಂಡಿರುವ ರೇಷ್ಮೆಹುಳುಗಳು

ರೇಷ್ಮೆಹುಳುಗಳಿಗೆ ಜ್ಞಾನ ಭಾರತಿ ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾಲಯದ ತೋಟದಿಂದ ಪಡೆದ ತಾಜಾ ಹಿಪ್ಪುನೇರಳೆ (M5 ಮಾದರಿಯ ವಿವಿಧ) ಎಲೆಗಳನ್ನು ಆಹಾರವಾಗಿ ನೀಡಲಾಗುತ್ತಿತ್ತು. ಪರೀಕ್ಷೆ ಸಂಯುಕ್ತಗಳನ್ನು ರೇಷ್ಮೆ ಹುಳುಗಳಿಗೆ ೩ನೇ ರೂಪ ಹಂತದಿಂದ ನೀಡಲು ಆರಂಭಿಸಲಾಯಿತು. ಗುಂಪು 2,3,4,5 ಹುಳುಗಳಿಗೆ 1 % ಮತ್ತು 5% ಸಾಂದ್ರತೆಯಲ್ಲಿ ಆಯಾ ಪರೀಕ್ಷಾ ಸಂಯುಕ್ತಗಳನ್ನು ನೀಡಲಾಯಿತು. ರೇಷ್ಮೆಹುಳುಗಳಿಗೆ ಪರೀಕ್ಷಾ ಸಂಯುಕ್ತಗಳನ್ನು ಉಪ್ಪುನೇರಳೆ ಎಲೆಗಳ (ಹತ್ತು ನಿಮಿಷಗಳ ಕಾಲ ನೆನೆಸಿಡುವುದು) ಮೂಲಕ ೫ ನೇ ರೂಪ ಹಂತದವರೆಗೆ ಮುಂದುವರಿಸಲಾಯಿತು.

ರೇಷ್ಮೆಹುಳುವಿನ ಮಧ್ಯಅನ್ನನಾಳದ ಅಂಗಾಂಶದಿಂದ, ಆಲ್ಕಲಿನ್ ಫಾಸ್ಫಟೇಸ್(ಕಿಂಡ್ ಮತ್ತು ಕಿಂಗ್ 1954), ಆಸಿಡ್ ಫಾಸ್ಫಟೇಸ್ (ಆಸಿಡ್ ಫಾಸ್ಫಟೇಸ್), ಅಮೈಲೇಸ್ (ಸುಧಾ ಮತ್ತು ಇತರರು., 2011), ಇನ್ವರ್ಟೇಸ್ (ಲಿನ್ ಮತ್ತು ಇತರರು., 2015), ಪ್ರೋಟಿಯೆಸ್ (ಮನ್ ಮತ್ತು ಇತರರು., 2015), ಯೂರಿಯೆಸ್ (ರೌಪ್ ಮತ್ತು ಇತರರು., 2015) ನ್ನು ಹಾಗೂ ಹಿಮೋಲಿಂಪ್ ನಿಂದ ಒಟ್ಟಾರೆ ಪ್ರೋಟೀನ್ (ಲೌರಿ ಮತ್ತು ಇತರರು., 1951), ಒಟ್ಟು ಸಕ್ಕರೆ (ಡುಬೊಯ್ಸ್ ಮತ್ತು ಇತರರು., 1956), ರೆಡ್ಯುಸಿಂಗ್ ಶುಗರ್ (ಬರ್ಟನ್, 1956) ನ ಮಟ್ಟವನ್ನು ಕೀಟಗಳ ವಿವಿಧ ಗುಂಪುಗಳಲ್ಲಿ ನಿರ್ಧರಿಸಲಾಯಿತು.

ಸಾಂಖ್ಯಿಕ ವಿಶ್ಲೇಷಣೆ: ಎಲ್ಲಾ ಪ್ರಯೋಗಗಳನ್ನು ಕನಿಷ್ಠ ಮೂರು ವಿವಿಧ ಸಂದರ್ಭಗಳಲ್ಲಿ ನಡೆಸಲಾಯಿತು ಮತ್ತು ಪ್ರತಿರೂಪ ಮೌಲ್ಯಗಳ ಸರಾಸರಿಯನ್ನು ತೆಗೆದುಕೊಳ್ಳಲಾಗಿದೆ. ಮೌಲ್ಯಗಳನ್ನು ಸರಾಸರಿ ± ಎಸ್ಡಿ ಎಂದು, ಅಂಕಿ ಅಂಶಗಳ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯನ್ನು ಸ್ಟೂಡೆಂಟ್ ಟಿ– ಪರೀಕ್ಷೆಯ ಮೂಲಕ ಮತ್ತು ಹೋಲಿಕೆಗಳನ್ನು ನಿಯಂತ್ರಣ ಮತ್ತು ಇತರ ಗುಂಪುಗಳ ನಡುವೆ ಮಾಡಲಾಯಿತು.

ಫಲಿತಾಂಶಗಳು ಮತ್ತು ವಿಶ್ಲೇಷಣೆ: ಮಾನವನ ಬಾಹ್ಯ ರಕ್ತ ದುಗ್ದಕಣಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು– MTT ಪರಿಕ್ಷೆ:

ಚಿತ್ರ 1 ದುಗ್ದಕಣಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮವನ್ನು ಸೂಚಿಸುತ್ತದೆ. ಈ ಅಧ್ಯಯನದಲ್ಲಿ ಬಳಸಿದ ಅತ್ಯಧಿಕ ಪ್ರಮಾಣದ (100µg / ಮಿಲಿ) ಎಲ್ಲಾ ಮೂರು ಸಂಯುಕ್ತಗಳು ಕೋಶಗಳ ಕಾರ್ಯಸಾಧ್ಯತೆಯನ್ನು ಕಡಿಮೆ ಮಾಡಿದೆ ಎಂದು ಫಲಿತಾಂಶಗಳು ಸೂಚಿಸುತ್ತವೆ.ಎಲ್ಲಾ ನಾಲ್ಕು ಸಂಯುಕ್ತಗಳ ಪೈಕಿ ಮೋನೊಸೋಡಿಯಂ ಗ್ಲುಟಮೇಟ್ ಮತ್ತು ಸೋಡಿಯಂ ಬೆನ್ಝೋಯೇಟ್ ಗಳು ಆಸ್ಪರ್ಟೆಮ್ ಸೋಡಿಯಂ ಬೆನ್ಝೋಯೇಟ್ + ಆಸ್ಕೋರ್ಬಿಕ್ ಆಮ್ಲ ಕ್ಕಿಂತ ಹೆಚ್ಚು ಹೆಚ್ಚು ವಿಷಕಾರಿಯಾಗಿರುವುದು ಕಂಡುಬಂತು.ಎಲ್ಲಾ ಸಂಯುಕ್ತಗಳು 100µg / ml ಸಾಂದ್ರತೆಯಲ್ಲಿ ೫೦% ಕಾರ್ಯಸಾಧ್ಯತೆ ಯನ್ನು ಹೊಂದಿವೆ. ಸಂಯುಕ್ತಗಳು ಈ ಸರದಿಯಾಗಿ ವಿಷಕಾರಿ ಪರಿಣಾಮಗಳನ್ನು ಹೊಂದಿವೆ– ಎಮ್ ಯಸ್ ಜಿ > ಯಸ್ ಬಿ ಜೆಡ್ > ಎಎಸ್ಪಿ > ಯಸ್ ಬಿ ಜೆಡ್ + ಎಎ.

ಇಲಿಯ ಮಾಕ್ರೊಫೇಜ್ ಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು–MTT ಪರಿಕ್ಷೆ

ಚಿತ್ರ 2 ಇಲಿಯ ಮಾಕ್ರೊಫೇಜ್ ಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮವನ್ನು ಸೂಚಿಸುತ್ತದೆ. ಇತರ ಸಂಯುಕ್ತಗಳಿಗೆ ಹೋಲಿಸಿದರೆ ಎಮ್ ಯಸ್ ಜಿ ಅತಿ ವಿಷತ್ವದ ಪರಿಣಾಮ ಹೊಂದಿದೆ ಎಂದು ಈ ಫಲಿತಾಂಶಗಳು ಸೂಚಿಸುತ್ತದೆ. ಎಲ್ಲಾ ಸಂಯುಕ್ತಗಳು ಎರಡೂ 100µg / ಮಿಲಿ ಒಂದು ಪ್ರಮಾಣದಲ್ಲಿ ಮಾತ್ರ ಸುಮಾರು 50% ಅಥವಾ ಕಡಿಮೆ 50% ಕಾರ್ಯಸಾಧ್ಯತೆಯನ್ನು ತೋರಿಸುತ್ತಿವೆ.

ಮೇಕೆಯ ಗುಲ್ಮದ ದುಗ್ದಕಣಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು–MTT ಪರಿಕ್ಷೆ

ಚಿತ್ರ 3 ದುಗ್ದಕಣಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮವನ್ನು ಸೂಚಿಸುತ್ತದೆ. ಫಲಿತಾಂಶಗಳು ನಿಯಂತ್ರಣ ಜೀವಕೋಶಗಳಿಗೆ ಹೋಲಿಸಿದರೆ ಚಿಕಿತ್ಸಕ ಜೀವಕೋಶಗಳ ಕಾರ್ಯಸಾಧ್ಯತೆ ಡೋಸ್ ಅವಲಂಬಿತವಾಗಿ ಕಡಿಮೆಯಾಗಿದೆ ಎಂದು ಈ ಫಲಿತಾಂಶಗಳು ಸೂಚಿಸುತ್ತವೆ.

ಈ ಅಧ್ಯಯನದಲ್ಲಿ ಬಳಸಿದ ಅತ್ಯಧಿಕ ಪ್ರಮಾಣದ (100µg / ಮಿಲಿ) ಎಲ್ಲಾ ಮೂರು ಸಂಯುಕ್ತಗಳು ಕೋಶಗಳ ಕಾರ್ಯಸಾಧ್ಯತೆಯನ್ನು

ಕಡಿಮೆ ಮಾಡಿದೆ ಎಂದು ಫಲಿತಾಂಶಗಳು ಸೂಚಿಸುತ್ತವೆ.ಎಲ್ಲಾ ನಾಲ್ಕು ಸಂಯುಕ್ತಗಳ ಪೈಕಿ ಮೋನೊಸೋಡಿಯಂ ಗ್ಲುಟಮೇಟ್ ಮತ್ತು ಸೋಡಿಯಂ ಬೆನ್ಝೋಯೇಟ್ ಗಳು ಆಸ್ಪರ್ಟೆಮ್ ಸೋಡಿಯಂ ಬೆನ್ಝೋಯೇಟ್ + ಆಸ್ಕೋರ್ಬಿಕ್ ಆಮ್ಲ ಕ್ಕಿಂತ ಹೆಚ್ಚು ಹೆಚ್ಚು ವಿಷಕಾರಿಯಾಗಿರುವುದು ಕಂಡುಬಂತು.ದುಗ್ಧಕೋಶದ ಪ್ರಸರಣ ಮತ್ತು ಪ್ರತ್ಯೇಕಿಸುವಿಕೆಯು ಪ್ರತಿರಕ್ಷಣಾ ಪ್ರತಿಕ್ರಿಯೆಯ ಪ್ರಮುಖ ಆಧಾರವಾಗಿದೆ. ಪರೀಕ್ಷಾ ಸಂಯುಕ್ತಗಳಿಂದ ದುಗ್ಧಕೋಶದ ಪ್ರಸರಣ ನಿಗ್ರಹ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿರುವುದು ತಮ್ಮ ಪ್ರತಿರಕ್ಷಣವಿಷತ್ವದ ಪರಿಣಾಮಗಳ ಬಗ್ಗೆ ಸ್ಪಷ್ಟ ಸೂಚನೆ ನೀಡುತ್ತದೆ. ಮ್ಯಾಕ್ರೋಫೇಜಸ್ ಗಳು ಇಮ್ಯುನಿಟಿಯ ಪ್ರಮುಖ ಕೇಂದ್ರ ಆಟಗಾರರಾಗಿದ್ದು, ವಿವಿಧ ಸೈಟೊಕಿನ್ ಮತ್ತು ಕೀಮೊಕೈನ್ ಗಳನ್ನು ಉತ್ಪಾದನೆ ಮಾಡಿ ಪ್ರತಿರಕ್ಷಣಾ ಪ್ರತಿಕ್ರಿಯೆಯಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ವಹಿಸಿದೆ.ಈ ಸೈಟೊಕಿನ್ ಮತ್ತು ಕೀಮೊಕೈನ್ ಗಳು ಒಂದಕ್ಕೊಂದು ಮತ್ತು ರೋಗನಿರೋಧಕ ಶಕ್ತಿಯ ಅನೇಕ ಪ್ರತಿಕ್ರಿಯಾ ನಿರ್ಣಾಯಕ ಪ್ರಕ್ರಿಯೆಗಳನ್ನು ನಿಯಂತ್ರಿಸುತ್ತವೆ.ಮ್ಯಾಕ್ರೋಫೇಜಸ್ ನ ಜೊತೆ ಪಡೆದ ಬಹುತೇಕ ಫಲಿತಾಂಶಗಳು ಲಿಂಫೋಸೈಟ್ಸ್ ಗಳ ಫಲಿತಾಂಶಗಳೊಂದಿಗೆ ಹೋಲಿಕೆ ಹೊಂದಿವೆ. ಬೇರೆ ಸಂಯುಕ್ತಗಳಿಗೆ ಹೋಲಿಸಿದರೆ ಎಮ್ ಯಸ್ ಜಿ ಯು ಲಿಂಫೋಸೈಟ್ಸ್ ಗಳಲ್ಲಿ ಅತ್ಯಧಿಕ ಪ್ರಮಾಣದ ವಿಷತ್ವವನ್ನು ಹೊಂದಿದೆ.

ರೇಷ್ಮೆ ಹುಳುಗಳ ದೇಹ ತೂಕದ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು:
ಕೋಷ್ಟಕ –1 ರೇಷ್ಮೆ ಹುಳುಗಳ ದೇಹ ತೂಕದ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳನ್ನು ಸೂಚಿಸುತ್ತವೆ. ನಿಯಂತ್ರಣ ಗುಂಪಿಗೆ ಹೋಲಿಸಿದರೆ ಗುಂಪು 2 (ಎಮ್ ಯಸ್ ಜಿ ಚಿಕಿತ್ಸೆ), ಗುಂಪು 3 (ಆಸ್ಪರ್ಟೆಮ್ ಚಿಕಿತ್ಸೆ), ಗುಂಪು 4 (ಸೋಡಿಯಂ ಬೆನ್ಝೋಯೇಟ್ ಚಿಕಿತ್ಸೆ), ಮತ್ತು ಗುಂಪು 5 (ಸೋಡಿಯಂ ಬೆನ್ಝೋಯೇಟ್ + ಆಸ್ಕೋರ್ಬಿಕ್ ಆಮ್ಲ ಚಿಕಿತ್ಸೆ) ಗಳ ದೇಹದ ತೂಕ ಗಮನಾರ್ಹವಾಗಿ ಇಳಿಕೆಯಾಗಿದೆ ಎಂದು ಈ ಫಲಿತಾಂಶಗಳು ತಿಳಿಯಪಡಿಸುತ್ತವೆ.

ಮಧ್ಯಅನ್ನನಾಳ ಕಿಣ್ವಗಳ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು:
ಕೋಷ್ಟಕ–2 ವಿವಿಧ ಗುಂಪುಗಳ ರೇಷ್ಮೆ ಹುಳುಗಳ ಮಧ್ಯಅನ್ನನಾಳದ ಅಂಗಾಂಶ ಕಿಣ್ವಗಳ ಮೇಲೆ ಪರೀಕ್ಷಾ ಸಂಯುಕ್ತಗಳ ಪರಿಣಾಮವನ್ನು ತೋರಿಸುತ್ತದೆ. ನಿಯಂತ್ರಣ ಪ್ರಾಣಿಗಳಿಗೆ ಹೋಲಿಸಿದರೆ ಪರೀಕ್ಷೆ ಸಂಯುಕ್ತಗಳನ್ನು ಪರೀಕ್ಷಿಸಿದ ರೇಷ್ಮೆ ಹುಳುಗಳ ಮಧ್ಯಅನ್ನನಾಳ ಕಿಣ್ವಗಳ ಚಟುವಟಿಕೆ ಗಮನಾರ್ಹವಾಗಿ ಇಳಿಕೆಯಾಗಿದೆ ಎಂದು ಫಲಿತಾಂಶಗಳು ಸೂಚಿಸುತ್ತವೆ. ಫಾಸ್ಫೇಟೇಸ್ ನ ಚಟುವಟಿಕೆಯಲ್ಲಿ ಸಂಖ್ಯಾಶಾಸ್ತ್ರೀಯವಾಗಿ ಗಣನೀಯ (PiLike kaMDiruvudu hAgU 5 % ಪರೀಕ್ಷಾ ಸಾಂದ್ರತೆಯು 1 % ಪರೀಕ್ಷಾ ಸಾಂದ್ರತೆಗಿಂತ ಹೆಚ್ಚು ಪರಿಣಾಮಕಾರಿ ಯಾಗಿದೆ. ಎಮಿಲೇಸ್ ಮತ್ತು ಇನ್ವರ್ಟೇಸ್ ನ ಚಟುವಟಿಕೆಯಲ್ಲಿ ಒಂದನೆ ಗುಂಪಿಗಿಂತ 2,3,4,5 ಗುಂಪುಗಳ ಹುಳುಗಳು (1 % ಮತ್ತು ಚಿಕಿತ್ಸೆ 5% ಎರಡರಲ್ಲೂ) ಕಡಿಮೆ ಚಟುವಟಿಕೆ ಹೊಂದಿರುವುದು ತಿಳಿಯುತ್ತದೆ. ಕೇವಲ 5 ನೇ ಗುಂಪಿನಲ್ಲಿ (5%) ಮಾತ್ರ ಪ್ರೊಟೀಯೆಸ್ ಮತ್ತು ಯೂರಿಯೆಸ್ ಚಟುವಟಿಕೆಯಲ್ಲಿ ಇಳಿಕೆ ಕಂಡು ಬಂದಿದ್ದು, ಬೇರೆ ಯಾವುದೇ ಗುಂಪಿನಲ್ಲೂ ತೋರದೆ ಇರುವುದು ಈ ಫಲಿತಾಂಶಗಳಿಂದ ತಿಳಿದು ಬಂದಿದೆ.

ಹಿಮೋಲಿಂಪ್ ನ ಶರ್ಕರ (ರೆಡ್ಯೂಸಿಂಗ್ ಶುಗರ್), ಒಟ್ಟು ಸಕ್ಕರೆ ಮತ್ತು ಒಟ್ಟಾರೆ ಪ್ರೋಟೀನ್ ನ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು:

ಕೋಷ್ಟಕ–3 ಹಿಮೋಲಿಂಪ್ ನ ಶರ್ಕರ (ರೆಡ್ಯೂಸಿಂಗ್ ಶುಗರ್), ಒಟ್ಟು ಸಕ್ಕರೆ ಮತ್ತು ಒಟ್ಟಾರೆ ಪ್ರೋಟೀನ್ ನ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳನ್ನು ಸೂಚಿಸುತ್ತವೆ.ಈ ಪರಿಣಾಮವನ್ನು 1 % ಮತ್ತು 5% ಚಿಕಿತ್ಸೆ ಹುಳುಗಳ ಮೇಲೆ ಗಮನಿಸಲಾಯಿತು. ಎಲ್ಲಾ ಗುಂಪುಗಳಲ್ಲಿಯೂ ಒಟ್ಟು ಸಕ್ಕರೆಯ ಮಟ್ಟ ಹಾಗೂ ಒಟ್ಟಾರೆ ಪ್ರೋಟೀನ್ ಗಣನೀಯವಾಗಿ (1 % ಮತ್ತು 5%) ಏರಿಕೆಯಾಗಿರುವುದು ಕಂಡು ಬಂದಿದೆ.

ಪ್ರನಾಳೀಯ ಮಾದರಿಗಳಿ0ದ ಪಡೆದ ಫಲಿತಾಂಶಗಳನ್ನು ರುಜುವಾತು ಮಾಡಲು ರೇಷ್ಮೆ ಹುಳು ಬಾಂಬಿಕ್ಸ್ ಮೊರಿಯ ಮೇಲೆ ಜೀವರಾಸಾಯನಿಕ ಅಧ್ಯಯನಗಳನ್ನು ನಡೆಸಲಾಯಿತು. ರೇಷ್ಮೆ ಹುಳು ಮಧ್ಯಅನ್ನನಾಳ ಅಂಗಾಂಶ ಜೀರ್ಣಕಾರಿ ಕಿಣ್ವಗಳು ಮತ್ತು ಹಿಮೋಲಿಂಪ್ ನ ಕೆಲವು ಜೀವರಾಸಾಯನಿಕ ಮಾನದಂಡಗಳ ಚಟುವಟಿಕೆ ಮೇಲೆ ಎಮ್ ಯಸ್ ಜಿ, ಎಎಸ್ಪಿ, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಮಿಶ್ರಣದ ಪರೀಕ್ಷಾ ಪ್ರಭಾವವನ್ನು ಈ ಅಧ್ಯಯನದಲ್ಲಿ ಅಭ್ಯಸಿಸಲಾಯಿತು. ರೇಷ್ಮೆಹುಳು ಸೋಂಕು ಮಾದರಿಯಲ್ಲಿ ಪ್ರತಿಜೀವಕಗಳ ಪರಿಣಾಮಕಾರಿ ಪ್ರಮಾಣದಲ್ಲಿ (ED50) ಸಸ್ತನಿಯ ಮಾದರಿಗಳನ್ನು ಹೋಲುತ್ತವೆ. ಪ್ರತಿಜೀವಕಗಳ ಮುಖ ಆಡಳಿತ ಪಡೆದ ಫಲಿತಾಂಶಗಳು ಹುಳುಗಳ ಮತ್ತು ಸಸ್ತನಿಗಳ (Hamamoto ಮತ್ತು ಇತರರು., 2004, 2005) ನಡುವೆ ಹೋಲಿಕೆಯನ್ನು ತೋರುತ್ತವೆ. ರೇಷ್ಮೆಹುಳ ರಾಸಾಯನಿಕ ಹೀರುವಿಕೆ, ವಿತರಣೆ, ಚಯಾಪಚಯ, ಮತ್ತು ವಿಸರ್ಜನೆಯು ಸಸ್ತನಿಗಳನ್ನು ಹೋಲುತ್ತವೆ ಎಂದು ಈ ಶೋಧನೆಗಳು ಸೂಚಿಸುತ್ತವೆ. ಪರೀಕ್ಷೆ ಸಂಯುಕ್ತಗಳು ಆಹಾರ ಸೇವನೆ ವರ್ತನೆಯನ್ನು ಕಡಿಮೆ ಮಾಡುವುದರೊಂದಿಗೆ ದೇಹದ ತೂಕವನ್ನು ಕಡಿಮೆಮಾಡಿವೆ. ನಿಯಂತ್ರಣ ಗುಂಪುಗಳಿಗೆ ಹೋಲಿಸಿದರೆ ಟಾಕ್ಸಿಕ್ಯಾಂಟ್ ಬಹಿರಂಗ ಗುಂಪುಗಳಲ್ಲಿ ಹಿಪ್ಪುನೇರಳೆಯ ಆಹಾರ ಸೇವನೆಯು ಗಣನೀಯವಾಗಿ ಕಡಿಮೆಯಾಯಿತು. ವಿಶೇಷವಾಗಿ ಅವಾಂತರ ರೂಪ ಅವಧಿ ಹಾಗೂ III ಅವಾಂತರ ರೂಪ ನಡುವೆ ಮರಿ ಹಂತದಲ್ಲಿ ಆಹಾರ ಮಾದರಿಯಲ್ಲಿ ಚಯಾಪಚಯ ತೀವ್ರ ಅಡಚಣೆಗೆ ಕಾರಣವಾಗಬಹುದು, ವ್ಯತಿರಿಕ್ತ ಮೌಲ್ಟಿಂಗ್ ನ ವಿಳಂಬದ ಮೂಲಕ ಪ್ಯೂಪಲ್ ಹಂತದವರೆಗೆ ಮರಿ ಹಂತದಲ್ಲಿ ಪರಿವರ್ತನೆಗೆ ಹಾಗೂ ಕಡಿಮೆ ಶಕ್ತಿಯ ಸಮತೋಲನ ಪರಿಣಾಮ ಬೀರಬಹುದು.

ರೇಷ್ಮೆಹುಳು ಮರಿಗಳ ರಕ್ತ ಮತ್ತು ಮಧ್ಯಅನ್ನನಾಳ ಅಂಗಾಂಶಗಳ ಫಾಸ್ಫೇಟೇಸ್ ಆಮ್ಲದ ಚಟುವಟಿಕೆಗಳು ರೇಷ್ಮೆ ಪ್ರೋಟೀನ್ ನ ಸಂಶ್ಲೇಷಣೆ, ಜೀರ್ಣಕ್ರಿಯೆ ಮತ್ತು ದ್ರವ್ಯ ಫಾಸ್ಫೊರಿಲೇಟ್ ಹೀರುವಿಕೆ ಗೆ ಬಲವಾಗಿ ಸಂಬಂಧಿಸಿವೆ. ಆದ್ದರಿಂದ,ವಿಷತ್ವವನ್ನು ನೀಡಿದ ಹುಳುಗಳ ಹೀರಿಕೆ, ಚಯಾಪಚಯ ಮತ್ತು ಸಾರಿಗೆಯಲ್ಲಿ ತೀವ್ರ ಅಡಚಣೆ ಉಂಟಾಗಿರುವುದು ರಕ್ತ ಮತ್ತು ಮಧ್ಯಅನ್ನನಾಳದ ಕಿಣ್ವಗಳ ಚಟುವಟಿಕೆಯಲ್ಲಿ ಕಡಿಮೆಯಾಗಿರುವುದನ್ನು ಕಾಣಬಹುದು.

ಜೀರ್ಣಕ್ರಿಯೆ ಎಂದರೆ ಜೀರ್ಣಕಾರಿ ಕಿಣ್ವಗಳಿಂದ,ನೀರನ್ನು ಸೇರಿಸುವುದರಿಂದ ಆಹಾರವನ್ನು ಪ್ರಯೋಜನಕ್ಕೆ ಬರುವ ಮತ್ತು ಹೀರಿಕೊಳ್ಳುವ ಕಣಗಳಾಗಿ ವಿಭಜಿಸುವ ಒಂದು ಪ್ರಕ್ರಿಯೆ . ಶರೀರದ ಜೀರ್ಣಾಂಗ ವ್ಯವಸ್ಥೆಯನ್ನು ತಿಳಿಯಲು ಜೀರ್ಣಕಾರಿ ಕಿಣ್ವಗಳು ಪ್ರಮುಖ ಪಾತ್ರ ವಹಿಸುತ್ತವೆ. ಜೀರ್ಣಕ್ರಿಯೆ ಹಾಗೂ ಕಾರ್ಬೊಹೈಡ್ರೇಟ್ ಚಯಾಪಚಯತೆಯು ಪರಿಕ್ಷಾ ಸಂಯುಕ್ತಗಳಿಂದ ತೀವ್ರ ಅಡಚಣೆಯಾಗಿವೆ ಎಂದು ಜೀರ್ಣಕಾರಿ ಕಿಣ್ವಗಳ ಇಳಿಕೆಯಿಂದ ತಿಳಿದುಬರುತ್ತದೆ. ಪ್ರೊಟೀನ್ 1 % ಚಿಕಿತ್ಸೆ ಹುಳುಗಳ ಗುಂಪಿನ ಚಟುವಟಿಕೆಯಲ್ಲಿ ಯಾವುದೇ ಗಮನಾರ್ಹ ಬದಲಾವಣೆಯಾಗಿಲ್ಲ ಆದರೆ 5% ಗುಂಪಿನಲ್ಲಿ ಬದಲಾವಣೆಯಾಗಿರುವುದು ಕಂಡು ಬಂದಿದೆ. ಇದನ್ನು ತಿಳಿಯಲು ಇದರ ಬಗ್ಗೆ ಮತ್ತಷ್ಟು ವಿವರವಾದ ಅಧ್ಯಯನ ನಡೆಸಬೇಕಿದೆ. ಈ ಹಂತದಲ್ಲಿ ಬದಲಾದ ಪ್ರೋಟೀನ್ ನ ಜೀರ್ಣಕ್ರಿಯೆ ಮತ್ತು ಜೀವರಾಸಾಯನಿಕ ಕ್ರಿಯೆಯನ್ನು ಮಾತ್ರ ಅರ್ಥೈಸಿಕೊಳ್ಳಬಹುದಾಗಿದೆ. ಕಾರ್ಬೋಹೈಡ್ರೇಟ್, ಪ್ರೋಟೀನ್ ಮತ್ತು ಲಿಪಿಡ್ ಗಳು ಕೀಟಗಳ ಜೀವರಾಸಾಯನಿಕ ಪ್ರಕ್ರಿಯೆಗೆ ಆಧಾರವಾಗಿರುವ ಬೆಳವಣಿಗೆಯಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಎಮಿಲೇಸ್ ಮತ್ತು ಇನ್ವರ್ಟೇಸ್ ಗಳ ಚಟುವಟಿಕೆ ಕಡಿಮೆಯಾಗಿರುವುದರಿಂದ ಹಿಮೋಲಿಂಪ್ ನಲ್ಲಿ ಕಾರ್ಬೋಹೈಡ್ರೇಟ್ಗಳ ಕ್ರೋಢೀಕರಣ ಗಮನಾರ್ಹವಾಗಿ ಏರಿಕೆ ಕಂಡಿರುವುದು ಕಾರಣ ಆಗಿರಬಹುದು. ಎಲ್ಲಾ ಗುಂಪುಗಳಲ್ಲಿಯೂ ಒಟ್ಟಾರೆ ಪ್ರೋಟೀನ್ ಗಣನೀಯವಾಗಿ (1 % ಮತ್ತು 5%) ಏರಿಕೆಯಾಗಿರುವುದು ಕಂಡು ಬಂದಿದೆ.

ಮೋನೊಸೋಡಿಯಂ ಗ್ಲುಟಮೇಟ್, ಆಸ್ಪರ್ಟಮೆ, ಸೋಡಿಯಂ ಬೆನ್ಝೋಯೇಟ್ ಮತ್ತು ಸೋಡಿಯಂ ಬೆನ್ಝೋಯೇಟ್ + ಆಸ್ಕೋರ್ಬಿಕ್ ಆಮ್ಲಗಳು ಪ್ರನಾಳೀಯ ಮತ್ತು ಜೈವಿಕ ಮಾದರಿಗಳಲ್ಲಿ ವಿಷಯುಕ್ತ ಪರಿಣಾಮ ಹೊಂದಿರುವುದನ್ನು ಈ ಅಧ್ಯಯನದ ಫಲಿತಾಂಶಗಳು ಸೂಚಿಸುತ್ತವೆ.ಪ್ರನಾಳೀಯ ಮಾದರಿಗಳಲ್ಲಿ, ಬೇರೆ ಎಲ್ಲಾ ಸಂಯುಕ್ತಗಳಿಗೆ ಹೊಲಿಸಿದರೆ ಮೋನೊಸೋಡಿಯಂ ಗ್ಲುಟಮೇಟ್ ಪ್ರತಿರಕ್ಷಣಾ ಜೀವಕೋಶಗಳಿಗೆ ಅತೀ ವಿಷಯುಕ್ತವಾಗಿರುವುದು ಕಂಡುಬಂತು ಎಂದು ನಿರ್ಣಯಿಸಬಹುದು.ಎಲ್ಲಾ ಸಂಯುಕ್ತಗಳು ರೇಷ್ಮೆಹುಳುಗಳಲ್ಲಿ ಸಮಾನವಾದ ವಿಷಕಾರಿ ಪರಿಣಾಮವನ್ನು ಹೊಂದಿವೆ

ಉಲ್ಲೇಖನಗಳು

Boyum A. Isolation of mononuclear cells and granulocytes from human blood. Scand.J. Clin. Lab. Invest. 1968; 21(97):77-89.

Burton KC A study of the condition and mechanism of the diphenylamine reaction for the colorimetric estimation of deoxyribonucleic acid .Biochem J, 1956; 62: 315-323.

Dubois M, Gilles K A. Hamilton J K, Rebers P A, and Smith F. Colorimetric Method for Determination of Sugars and Related Substances. Anal. Biochem, 1956: 28(3):350-356.

Hamamoto, H., Kurokawa, K., Kaito, C., Kamura, K., Manitra Razanajatovo, I., Kusuhara, H.,Santa, T., and Sekimizu, K. Quantitative evaluation of the therapeutic effects of antibiotics using silkworms infected with human pathogenic microorganisms. Antimicrob. Agents Chemother, 2004: 48: 774–779.

Hamamoto H, Sekimizu K. Evaluation of the therapeutic effects of antibiotics using silkworm as an animal model. Res Adv Antimicrob Agents Chemother. 2005: 5:1–23.

Janssen M M T and. Voragen A G J. Introduction to the raw materials of food (chapter one). Food Safety and Toxicity, 1997: CRC Press LLC.

Kind P R N, King E J. Estimation of plasma phosphatase by determination of hydrolyzed phenol with antipyrene. J Clin Pathol, 1954; 7:322-330.

Krishnaswami, S, Narasimhanna M N, Suryanarayan S K and Kumararaj S. Silk worm rearing in Manuel on Sericulture, Food and Agricultural organization of the United Nations. Rome. 1973; 2:129.

Krishnaswamy S, New technology of silkworm rearing. Food and agriculture organization of the United Nations.1978; 17(3):13-20.

Lin Y et al. Subtle Regulation of Potato Acid Invertase Activity by a Protein Complex of Invertase, Invertase Inhibitor, and sucrose nonfermenting1-related protein kinase. Plant Physiol. 2015: 168(4):1807-19.

Lowry O H, Rosebrough N H, Farr A L, Randall RI. Protein measurement with the Folin-Phenol reagent. J Biol Chem, 1951:1932:265-275.

Mann K, et al. Proteomic analysis of quail calcified eggshell matrix: a comparison to chicken and turkey eggshell proteomes. Proteome Sci. 2015: 13:22.

Mossman T.Rapid colorimetric assay for cellular growth and survival: application to proliferation and cytotoxicity assays. J. Immunol Methods, 1983; 65(1-2):55-63.

Rauf A et al. Design and synthesis of new barbituric- and thiobarbituric acid derivatives as potent urease inhibitors: Structure activity relationship and molecular modeling studies. Bioorg Med Chem. 2015: 23(17):6049-6058.

Sudha p et al. Potent a-amylase inhibitory activity of Indian Ayurvedic medicinal plants. BMC Complementary and Alternative Medicine, 2011: 11:5




ಚಿತ್ರ 1: ಮಾನವನ ಬಾಹ್ಯ ರಕ್ತ ದುಗ್ದಕಣಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು–MTT ಪರಿಕ್ಷೆ:

ISSN 2249 - 5754 VIJNANA KANNADA (PRINT)





ಚಿತ್ರ 2: ಇಲಿಯ ಮಾಕ್ರೊಫೇಜ್ ಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು–MTT ಪರಿಕ್ಷೆ




ಚಿತ್ರ 3 : ಮೇಕೆಯ ಗುಲ್ಮದ ದುಗ್ಧಕಣಗಳ ಬೆಳವಣಿಗೆ ಮತ್ತು ಕಾರ್ಯಸಾಧ್ಯತೆಯ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು–MTT ಪರಿಕ್ಷೆ

ಕೋಷ್ಟಕ–೧: ರೇಷ್ಮ ಹುಳುಗಳ ದೇಹ ತೂಕದ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್. ಜಿ ಜೆಡ್, ಯಸ್ ಬಿ ಜೆಡ್+ಎ ಎ ಗಳ ಪರಿಣಾವಗಳು

| | ದೇಹ ತೂಕ | | |
|---|---|---|---|
| ಸಂಖ್ಯೆ | ಸಂಯುಕ್ತಗಳು | **1 g** | **5 g** |
| 1 | ನಿಯಂತ್ರಕಗಳು | 1.70 ± 0.1 | 1.90 ± 0.1 |
| 2 | ಎಮ್. ಯಸ್. ಜಿ | 0.90 ± 0.01*** | 0.76 ± 0.16*** |
| 3 | ಎ ಎಸ್ಪ್ | 1.10 ± 0.2*** | 0.80 ± 0.05*** |
| 4 | ಯಸ್ ಬಿಜೆಡ್ | 0.65 ± 0.02*** | 0.31 ± 0.03*** |
| 5 | ಯಸ್ ಬಿ ಜೆಡ್ + ಎ ಎ | 0.82 ± 0.02*** | 0.35 ± 0.05*** |

ಕೋಷ್ಟಕ–೨: ಮದ್ಯ ಅನ್ನನಾಳ ಕಿಣ್ವಗಳ ಮೇಲೆ ಎಮ್. ಯಸ್. ಜಿ, ಎ ಎಸ್ಫ್, ಯುಸ್.ಜಿಜೆಡ್, ಯುಸ್ ಬಿಜೆಡ್+ಎ ಎ ಗಳ ಪರಿಣಾವಗಳು:

| ಗುಂಪುಗಳು | ನಿಯಂತ್ರಕಗಳು | ಎಮ್. ಯಸ್. ಜಿ | ಎ ಎಸ್ಟ್ | ಯಸ್ ಬಿಜೆಡ್ | ಯಸ್ ಬಿ ಜೆಡ್ + ಎ ಎ |
|---|---|---|---|---|---|
| ಎಸಿಪಿ | 1g : 11115 ± 130<br>5g : 11159 ± 120 | 3888 ± 113***<br>1423 ± 212*** | 2592 ± 206***<br>1422 ± 121*** | 2152 ± 108***<br>4122 ± 420*** | 1268 ± 203***<br>1352 ± 120*** |
| ಎಎಲ್ಪಿ | 1g : 12685 ± 120<br>5g : 11982 ± 150 | 3888 ± 320***<br>1434 ± 175*** | 1434 ± 175***<br>1423 ± 180*** | 2153 ± 285***<br>4122 ± 190*** | 1126 ± 190***<br>1353 ± 140*** |
| ಅಮೈಲೇಸ್ | 1g :1027 ± 10.7<br>5g :1029 ± 11.7 | 881 ± 8.6 ***<br>441 ± 5.0*** | 732 ± 9.1***<br>586 ± 9.5*** | 586 ± 6.3***<br>880 ± 9.7*** | 232 ± 11.1***<br>172 ± 8.6*** |
| ಇನ್ವರ್ಟೇಸ್ | 1g :224 ± 16.0<br>5g :224 ± 13.0 | 128 ± 13.0***<br>64 ± 17.5*** | 96 ± 12.5***<br>128 ± 18.0*** | 160 ± 14.0***<br>96 ± 9.0*** | 64 ± 17.0***<br>192 ± 10.8*** |
| ಪ್ರೋಟಿಯೆಸ್ | 1g :1.16 ± 0.1<br>5g :1.16 ± 0.2 | $1.14 \pm 0.2^{NS}$<br>$1.06 \pm 0.1^{NS}$ | $1.13 \pm 0.1^{NS}$<br>$1.16 \pm 0.1^{NS}$ | $1.12 \pm 0.3^{NS}$<br>$1.08 \pm 0.2^{NS}$ | $1.14 \pm 0.1^{NS}$<br>0.72 ± 0.2** |
| ಯೂರಿಯೆಸ್ | 1g :1.16 ± 0.1<br>5g :1.16 ± 0.2 | $1.14 \pm 0.2^{NS}$<br>$1.06 \pm 0.1^{NS}$ | $1.13 \pm 0.1^{NS}$<br>$1.16 \pm 0.1^{NS}$ | $1.12 \pm 0.3^{NS}$<br>$1.08 \pm 0.2^{NS}$ | $1.14 \pm 0.1^{NS}$<br>0.72 ± 0.2** |

ಕೋಷ್ಟಕ–3 : ಹಿಮೋಲಿಂಪ್ ನ ಶರ್ಕರ (ರೆಡ್ಯೊಸಿಂಗ್ ಶುಗರ್), ಒಟ್ಟು ಸಕ್ಕರೆ ಮತ್ತು ಒಟ್ಟಾರೆ ಪ್ರೋಟೀನ್ ನ ಮೇಲೆ ಎಮ್ ಯಸ್ ಜಿ, ಎಎಸ್ಪ್, ಯಸ್ ಬಿ ಜೆಡ್, ಯಸ್ ಬಿ ಜೆಡ್ + ಎಎ ಗಳ ಪರಿಣಾಮಗಳು:

| ಸಂಖ್ಯೆ | **1** | **2** | **3** | **4** |
|---|---|---|---|---|
| ಗುಂಪುಗಳು | ನಿಯಂತ್ರಕಗಳು | ಎಮ್ ಯಸ್ ಜಿ | ಎಎಸ್ಟ್ | ಯಸ್ ಬಿ ಜೆಡ್ |
| ರೆಡ್ಯುಸಿಂಗ್ ಶುಗರ್ | 1g:0.58 ± 0.05<br>5g:0.57 ± 0.05 | $0.68 \pm 0.02^{N}$<br>$0.75 \pm 0.06^{NS}$ | $0.53 \pm 0.06^{NS}$<br>$0.35 \pm 0.04^{NS}$ | $0.43 \pm 0.03^{NS}$<br>$0.68 \pm 0.05^{NS}$ |
| ಒಟ್ಟು ಸಕ್ಕರೆ | 1g:400 ± 5.0<br>5g:420 ± 5.0 | 720 ± 5.0***<br>810 ± 7.5*** | $450 \pm 3.0^{NS}$<br>710 ± 6.0*** | 650 ± 2.5***<br>$705 \pm 5.0^{NS}$ |
| ಒಟ್ಟಾರೆ ಪ್ರೋಟೀನ್ | 1g:237 ± 5.0<br>5g:273 ± 5.0 | 975 ± 7.5***<br>1250 ± 9.5*** | 1250 ± 6.0***<br>1775 ± 7.0*** | 1185 ± 7.8***<br>725 ± 5.5*** |

# ಶತರೋಗ ನಿವಾರಕ ಶತಾವರಿ

ಹೆಚ್.ಸಿ.ಮಧುಸೂಧನ[1,*], ಬಿ.ಎಮ್.ನಾಗಭೂಷಣ [2]
[1]ಭೌತಶಾಸ್ತ್ರ ವಿಭಾಗ, ದಯಾನಂದ ಸಾಗರ್‌ತಾಂತ್ರಿಕ ಮತ್ತು ಆಡಳಿತ ಮಹಾವಿದ್ಯಾಲಯ, ಬೆಂಗಳೂರು–೫೬೦೦೭೮, [2]ರಸಾಯನಶಾಸ್ತ್ರ ವಿಭಾಗ, ಎಮ್.ಎಸ್.ರಾಮಯ್ಯತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು–೫೬೦೦೫೪
Corresponding author: msudhan01@gmail.com

ಆಯುರ್ವೇದದಲ್ಲಿ ಶತಾವರಿಗೆ ಬಹಳ ಮಹತ್ವದ ಸ್ಥಾನ ಇದರಆಂಗ್ಲ ಹೆಸರುಅಸ್ಪರಾಗಸ್ ಮತ್ತು ವೈಜ್ಞಾನಿಕ ಹೆಸರುಆಸ್ಪಾರಾಗಸ್ ರೆಸಿಮೊಸಸ್. ಶತವರಿಯು ಆಸ್ಪ್ಯಾರಗೆಸಿ ಕುಲದಲ್ಲಿನಒಂದು ಹೂಬಿಡುವ ಸಸ್ಯಜಾತಿ.ಇದರ ಮೂಲಸ್ಥಾನ ಯುರೋಪ್‌ಆಗಿದ್ದರೂ ಭಾರತದಲ್ಲಿ ಆಯುರ್ವೇದೀಯ ಔಷಧವಾಗಿ ಪ್ರಖ್ಯಾತವಾಗಿದೆ.ಕಾಡುಗಳಲ್ಲಿ ಮರದಆಸರೆ ಪಡೆದು ಶತಾವರಿ ಬಳ್ಳಿ ಹಬ್ಬುತ್ತದೆ. ಶತಾವರಿಯುಒಂದು ಮೂಲಿಕೆಯಂಥ ಬಹುವಾರ್ಷಿಕ ಸಸ್ಯವಾಗಿದ್ದು ೫ ರಿಂದ ೧೦ ಸೆಂ.ಮೀ.ಎತ್ತರವಾಗಿ ಬೆಳೆಯುವುದು.ಶತಾವರಿಯ ಎಳೆ ಚಿಗುರುಗಳನ್ನು ಮಾತ್ರವೇತಿನ್ನಲು ಬಳಸುವರು. ಶತಾವರಿಯಲ್ಲಿನ ಕ್ಯಾಲೊರಿಗಳ ಪ್ರಮಾಣಕಡಿಮೆಯಿದ್ದು,ಕೊಬ್ಬನ್ನುಇದು ಹೊಂದಿಲ್ಲ. ಸೋಡಿಯಂ ಪ್ರಮಾಣವುಇದರಲ್ಲಿತುಂಬಾಕಡಿಮೆಯಿರುವುದರಿಂದ ಶತಾವರಿತುಂಬಾಆರೋಗ್ಯಕರ. ಫೋಲಿಕ್‌ಆಮ್ಲ, ಪೊಟಾಷಿಯಂ, ನಾರುಪದಾರ್ಥ ಮತ್ತು ಪ್ರೋಟೀನ್ ಇವೇ ಮೊದಲಾದವು ಶತಾವರಿಯಲ್ಲಿ ಹೇರಳವಾಗಿವೆ. ಶತಾವರಿ ಸಸ್ಯದಲ್ಲಿಆಸ್ಪರಾಜಿನ್ ಎಂಬ ಅಮೈನೋ ಆಮ್ಲವು ಹೇರಳವಾಗಿದ್ದು, ಆಸ್ಪ್ಯಾರಗಸ್ (ಶತವಾರಿ) ಸಸ್ಯದಲ್ಲಿ ಅದು ಇರುವ ಕಾರಣದಿಂದಾಗಿಯೇ ಆ ಸಂಯುಕ್ತಕ್ಕೆಆಸ್ಪರಾಜಿನ್ ಎಂಬ ಹೆಸರುಬಂದಿದೆ. ಶತಾವರಿ ಬೇರನ್ನುಅರೆದುರಸತೆಗೆದುಅದೇ ಪ್ರಮಾಣದ ಹಾಲು ಬೆರೆಸಿ ದಿನವೂ ಒಂದೊಂದು ಲೋಟಕುಡಿದರೆ ಮಧುಮೇಹ ಹತೋಟಿಗೆ ಬರುತ್ತದೆ ಮತ್ತು ಮೂತ್ರಕೋಶದಕಲ್ಲು ಹಾಗೂ ಮೂತ್ರಕ್ಕೆ ಸಂಭಂದಿಸಿದ ಯಾವುದೇ ತೊಂದರೆಗಳು ನಿವಾರಣೆಯಾಗುವವು.ಶತಾವರಿ ಬೇರನ್ನುಅಥವಾಗಡ್ಡೆಯನ್ನುಅರೆದುಜೇನುತುಪ್ಪ ಬೆರೆಸಿ ಸೇವಿಸಿದರೆ ಬಾಯಿಯಲ್ಲಿಉಂಟಾಗುವರಕ್ತಸ್ರಾವಕಡಿಮೆಯಾಗುತ್ತದೆ.ಶತಾವರಿ ಬೇರು ಹಾಗೂ ಚಿಗುರುಔಷದೀಯ ಗುಣಗಳ ಆಗರ.

**ಪ್ರಮುಖ ಪದಗಳು:** ಶತಾವರಿ; ಆಸ್ಪ್ಯಾರಗಸ್ ರೆಸಿಮೊಸಸ್; ಕೊಬ್ಬುರಹಿತ; ಆಸ್ಪರಾಜಿನ್

**ಪೀಠಿಕೆ :** ಆಯುರ್ವೇದಕ್ಕೆ ಹೆಸರುವಾಸಿ ನಮ್ಮ ನಾಡುಅದರಲ್ಲಿ ಗಿಡಮೂಲಿಕೆಗಳ ಪಾತ್ರಅತ್ಯಮೂಲ್ಯವಾದುದು. ಇಂತಹಆಯುರ್ವೇದ ದಲ್ಲಿತುಂಬ ಮಹತ್ವದ ಸ್ಥಾನ ಗಳಿಸಿರುವ ಗಿಡಮೂಲಿಕೆಯೆಂದರೆಅದುವೇ ಶತಾವರಿ. ಹೆಸರಿಗೆತಕ್ಕಂತೆ ನೂರಕ್ಕೂ ಹೆಚ್ಚು ಬೇರುಗಳನ್ನು ಹೊಂದಿದ ಈ ಸಸ್ಯ ಹಾಡುಭಾಷೆಯಲ್ಲಿಹಲವು ಮಕ್ಕಳ ತಾಯಿಯೆಂದೇ ಜನಜನಿತ ವಾಗಿದೆ. ಆಯುರ್ವೇದದಲ್ಲಿ ಶತಾವರಿಯನ್ನು ಗಿಡಮೂಲಿಕೆಗಳ ರಾಣಿಎಂದುಕರೆಯಲಾಗುತ್ತದೆ.ಇದರ ಬಗ್ಗೆ ಚರಕ ಸಂಹಿತ, ಶುಶ್ರೃತ ಸಂಹಿತ, ಕಶ್ಯಪ ಸಂಹಿತ ಮತ್ತು ಅಸ್ಟಾಂಗ ಸಂಗ್ರಹಗಳಲ್ಲಿ ಹಾಗು ಸುಮಾರು ೩ ನೇ ಶತಮಾನದಲ್ಲಿಗ್ರೀಕರು ಮತ್ತುರೋಮನ್ನರು ಶತಾವರಿ ಯನ್ನು ಬಳಸಿದ ಹಾಗೂ ಬೆಳೆದ ಉಲ್ಲೇಕಗಳಿವೆ.ಶ್ರೀಲಂಕ, ಭಾರತ ಹಾಗು ಹಿಮಾಲಯದಲ್ಲಿಇದರ ಅಸ್ತಿತ್ವ ಉಳಿಸಿಕೊಂಡಿರುವ ಈ ಬಹುಪಯೋಗಿ ಸಸ್ಯವು ಸಹ ಅಳಿವಿನಂಚಿನಲ್ಲಿರುವ ಗಿಡಮೂಲಿಕೆ ಎಂದು ಪರಿಗಣಿಸಲ್ಪಟ್ಟಿದೆ.

**ಶತಾವರಿಯ ವೈಜ್ಞಾನಿಕ ವರ್ಗ:**

| | |
|---|---|
| ಜಾತಿ | : ಸಸ್ಯ |
| ಕುಟುಂಬ | : ಆಸ್ಪ್ಯರಾಗೆಸಿ |
| ಸಸ್ಯ ಕುಲ | : ಆಸ್ಪ್ಯರಾಗಸ್ |
| ಭಾರತದ ತಳಿ ಸಸ್ಯನಾಮ | : ಶತಾವರಿ |
| ಬೆಳೆಯುವ ಸ್ಥಳ | : ಲವಣಯುಕ್ತ ಮಣ್ಣಲ್ಲಿ ಹುಲುಸಾಗಿಬೆಳೆಯುತ್ತದೆ, ಉತ್ತರಭಾರತದ ಕಾಡುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. |
| ಎತ್ತರ | : ಸುಮಾರು ೨–೪ ಅಡಿ |
| ಉಪಯೋಗ | : ಎಳೆಯ ಚಿಗುರು ಮತ್ತು ಬೇರು |

**ಶತಾವರಿಯ ಗುಣಲಕ್ಷಣಗಳು :** ಶತಾವರಿಯು ಬಹುವಾರ್ಷಿಕ ಸಸ್ಯ.ಇದರಕಾಂಡವು ಬಲಿಷ್ಟವಾಗಿದ್ದು ವಿವಿಧ ಶಾಖೆಗಳಾಗಿ ಹಬ್ಬಿರುವಗರಿಯಂಥ ಎಲೆಗೊಂಚಲನ್ನು ಹೋಂದಿರುತ್ತದೆ ಹಾಗು ೪–೧೫ ಎಲೆಗಳು ಒಟ್ಟಾಗಿಗುಚ್ಛದಂತ್ತಿರುತ್ತದೆ.ಸುಮಾರು ೬೦ ರಿಂದ ೧೦೦ ಬೇರುಗಳು ಒಂದಕ್ಕೊಂದು ಅಂಟಿಕೊಂಡಂತೆ ಕಂಡರೂ ಒಂದೇ ತಾಯಿ ಬೇರಿಂದಕುಡಿಯೊಡೆದಿರುತ್ತವೆ ಹಾಗು ಆಕಾರದಲ್ಲಿ ಗೆಡ್ಡೆಯ ಹಾಗಿರುತ್ತವೆ. ಹೂವುಗಳು ಘಂಟಾಕಾರದಲ್ಲಿದ್ದು ನಸು ಹಸಿರು ಬಣ್ಣ ಬಿಳಿಯಿಂದ ಮೋದಲ್ಗೊಂಡು ಬಹುತೇಕ ಹಳದಿ ಬಣ್ಣದಛಾಯೆ ಯವರೆಗೆ ಅವುಗಳ ಬಣ್ಣವಿರುತ್ತದೆ.

**ಶತಾವರಿ ಚಿತ್ರ ವಿವರಣೆ :**









**ಶತಾವರಿಯಲ್ಲಿನರಾಸಾಯನಿಕ ಅಂಶಗಳು:**

• ಶತಾವರಿಯ ಸಸ್ಯವು ಹೇರಳವಾಗಿ ರಾಸಾಯನಿಕ ಅಂಶಗಳನ್ನು ಹೊಂದಿದ್ದುಅದರಲ್ಲಿ ಜೀವಸತ್ವಗಳಾದ ಎ, ಬಿ೧, ಬಿ೨, ಸಿ ಮತ್ತು ಇ ಗಳಿವೆ.

• ಇದುಯಾವುದೇರೀತಿಯಕೊಬ್ಬಿನಂಶವನ್ನು ಹೊಂದಿಲ್ಲ.

• ಇದಲ್ಲದೆ ಮೆಗ್ನಿಷಿಯಮ್, ಪಾಸ್ಪರಸ್, ಕಬ್ಬಿಣಾಂಶ ಹಾಗು ಫೋಲಿಕ್ಆಮ್ಲವು ಸಹ ಸೇರಿದೆ.

• ಶತಾವರಿ ಸಸ್ಯದಲ್ಲಿಆಸ್ಪ್ಯರಾಜಿನ್ ಎಂಬ ಅಮೈನೋ ಆಮ್ಲವು ಹೇರಳವಾಗಿದ್ದು, ಆಸ್ಪ್ಯರಾಗಸ್(ಶತಾವರಿ) ಸಸ್ಯದಲ್ಲಿಅದು ಇರುವ ಕಾರಣದಿಂದಲೇ ಆ ಸಂಯುಕ್ತಕ್ಕೆಆಸ್ಪ್ಯರಾಜಿನ್ ಎಂಬ ಹೆಸರುಬಂದಿದೆ.

**ಶತಾವರಿಯಔಷಧೀಯ ಗುಣಗಳು:** ಶತಾವರಿ ಬೇರು ಹಾಗು ಚಿಗುರು ಔಷಧೀಯ ಗುಣಗಳ ಆಗರ.ಶತಾವರಿಯ ಸೇವನೆಯಿಂದ ಶುದ್ಧರಕ್ತ ಹೆಚ್ಚಾಗುತ್ತದೆ.ಶತಾವರಿ ಬೇರನ್ನು ಅಥವಾ ಗಡ್ಡೆಯನ್ನು ಅರೆದು ಜೇನುತುಪ್ಪ ಬೆರೆಸಿ ಸೇವಿಸಿದರೆ ಬಾಯಿಯಲ್ಲಿ ರಕ್ತಸ್ರಾವವಾದರೆ ಅದುಕಡಿಮೆಯಾಗುತ್ತದೆ.ಕ್ಯಾನ್ಸರ್ಆದಾಗ ನಡೆಸುವಕೀಮೋಥೆರಪಿ ಆದ ನಂತರ ಈ ಔಷದಿ ಯಾವುದೇಅಡ್ಡಪರಿಣಾಮವಿಲ್ಲದಂತೆ ಕೆಲಸ ಮಾಡುತ್ತದೆ.ಇದರ ಬೇರನ್ನುಅರೆದುರಸತೆಗೆದುಅದೇ ಪ್ರಮಾಣದ ಹಾಲು ಬೆರೆಸಿ ದಿನವೂ ಒಂದೊಂದು ಲೋಟ ೪೫ ದಿನಗಳ ಕಾಲ ಕುಡಿದರೆ ಮಧುಮೇಹ ಹತೋಟಿಗೆ ಬರುತ್ತದೆ.ಶತಾವರಿ ನರದೌರ್ಬಲ್ಯ ಮತ್ತು ಗ್ಯಾಸ್ಟ್ರಿಕ್ ಅಲ್ಸರಿನಚಿಕಿತ್ಸೆಯಲ್ಲಿ ಸಹ ಉಪಯೋಗಿಸುತ್ತಾರೆ.ಇದರ ಸೇವನೆಯಿಂದದೇಹದರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ.ಮಕ್ಕಳ ತಾಯಂದಿರಿಗೆಎದೆಹಾಲು ವೃದ್ಧಿಸಲು ಉಪಯೋಗಿಸುತ್ತಾರೆಹಾಗು ಗರ್ಭಿಣಿಯರಿಗೆ ನಿಶಕ್ತಿಯಿಂದದೂರವಿಡಲು ಹಾಗು ಗರ್ಭಕ್ಕೆ ಪುಷ್ಠಿ ನೀಡಲು ಶತಾವರಿಯನ್ನುಉಪಯೋಗಿಸುತ್ತಾರೆ.

**ಉಪಸಂಹಾರ :** ಆರೋಗ್ಯವಂತ ಭವಿಷ್ಯದಉತ್ತಮ ಸಮಾಜಕ್ಕೆ ಶತಾವರಿಯ ಪಾತ್ರ ಬಹಳ ಮುಖ್ಯವಾಗಿದೆ.ಅಳಿವಿನಂಚಿನಲ್ಲಿರುವ ಈ ಸಸ್ಯವನ್ನು ನಾವು ರಕ್ಷಿಸಿ ಪೋಷಿಸಬೇಕಿದೆ.ಶತಾವರಿಯ ಬೆಳವಣಿಗೆಗೆ ಉತ್ತೇಜನ ಹಾಗು ಪೋಷಣೆಯಅಗತ್ಯವಿದೆ.ಬನ್ನಿ ಎಲ್ಲರೂಒಂದಾಗಿ ಕೈಜೋಡಿಸೋಣ ಮುಂದಿನ ಪೀಳಿಗೆಗೆ ಇದರ ಬಗ್ಗೆ ಅರಿವು ಮೂಡಿಸೋಣ.

**ಉಲ್ಲೇಖಗಳು :**

1. http://health.learninginfo.org/asparagus-nutrition.htm
2. “BBC - Food - Glossary - ‘S’”. BBC Online. Archived from the original on 2012-08-03.
3. Molly Spence. “Asparagus: The King of Vegetables” (DOC). German Agricultural Marketing Board. 2007-02-26
4. http://www.ibiblio.org/pfaf/cgi-bin/arr_html?Asparagus+officinalis
5. Vaughan, J.G.; Geissler, C.A. (1997). The New Oxford Book of Food Plants. Oxford University Press.

**ರಾಸಾಯನಿಕರಚನೆ :**




Shatavarin

# ವಿಚರ್ಚಿಕ (Contact dermatitis) ರೋಗದಲ್ಲಿ ಆಯುರ್ವೇದ ಚಿಕಿತ್ಸೆ ಒಂದು ವೈಜ್ಞಾನಿಕ ಅಧ್ಯಯನ

* ಕು.ರಾಜೇಶ್ವರಿ ಆಚಾರ್ಯ, ** ಡಾ। ಶ್ರೀಪತಿ ಆಚಾರ್ಯ ಜಿ.
* ಪೂರ್ಣಪ್ರಜ್ಞ ಕಾಲೇಜು, ಉಡುಪಿ, ** ಕಾರ್ಯಚಿಕಿತ್ಸಾ ಸ್ನಾತಕೋತ್ತರ ವಿಭಾಗ, ಮುನಿಯಾಲು ಕಾಲೇಜು ಮತ್ತು ಆಸ್ಪತ್ರೆ, ಮಣಿಪಾಲ

ವಿಚರ್ಚಿಕಾ (Eczema dermatitis) ಒಂದು ಚರ್ಮ ರೋಗವಾಗಿದ್ದು ಚರ್ಮದಲ್ಲಿ ತುರಿಕೆ, ಪದರ ಏಳುವುದು (Scaling) ಹಾಗೂ ಸ್ರಾವ (oozing) ನಿಂದ ಕೂಡಿದ ವ್ಯಾದಿಯಾಗಿದೆ. ಇದರಲ್ಲಿ ಹೆಚ್ಚಾಗಿ ಕೈ ಹಾಗೂ ಕಾಲಿನ ಚರ್ಮವು ಬಾಧಿತವಾಗಿರುವುದು. ಹೆಚ್ಚಾಗಿ ರಾತ್ರಿ ಹೊತ್ತಿನಲ್ಲಿ ತುರಿಕೆಯು ಅಧಿಕವಾಗಿರುವುದು. ಕೆಲವೊಂದು ಆಹಾರ ಪದಾರ್ಥಗಳು, ಹೂವಿನ ಪರಾಗರೇಣು, ಕೆಲವೊಂದು ರಾಸಾಯನಿಕ ವಸ್ತುಗಳು ಹಾಗೂ ಧೂಳು, ಬೆಕ್ಕಿನ ರೋಮ ಇತ್ಯಾದಿಗಳ ಸಂಪರ್ಕದಿಂದ ತುರಿಕೆಯು ಹೆಚ್ಚಾಗುವುದು ಕಾಣಬಹುದು. ಆಯುರ್ವೇದ ಶಾಸ್ತ್ರದ ಪ್ರಕಾರ ಕ್ಷುದ್ರ ಕುಷ್ಠರೋಗಗಳ ಪ್ರಭೇದವಾಗಿದ್ದು ವಾತ ಹಾಗೂ ಕಫ ದೋಷದಿಂದ ಈ ರೋಗ ಉಂಟಾಗುವುದೆಂದು ತಿಳಿಯಲಾಗಿದೆ.

ಕೆಲವೊಂದು ಆಯುರ್ವೇದ ಔಷಧಿಗಳು ಈ ರೋಗದ ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿರುವುದನ್ನು ಕಂಡುಕೊಳ್ಳಲಾಗಿದೆ. ಉದಾ : ಮಹಾ ಮರಿಚ್ಯಾದಿ ತೈಲ, ಮಹಾಮಂಜಿಷ್ಠಾದಿ ಕಷಾಯ, ಮಹಾತಿಕ್ತಕ ಕಷಾಯ, ಸಾರಿವಾದ್ಯಾಸವ, ಚಂದನಾಸವ, ಖದಿರಾರಿಷ್ಟ, ಚೋಪಚೀನ್ಯಾದಿ ಪಾಕ, ಚೋಪಚೀನ್ಯಾದಿ ಚೂರ್ಣ, ಮಧುಸ್ನುಹೀ ಹೀರಸಾಯನ, ಆರೋಗ್ಯ ವರ್ಧಿನಿ ವಟಿ, ಮುನಿಲಿವ್ ಮಾತ್ರೆಗಳು, ಮುನಿಲಿವ್ ಸೀರಪ್, ಇವು ಉಪಯುಕ್ತವಾಗಿದೆ. ಪಂಚಕರ್ಮ ಚಿಕಿತ್ಸೆಗಳಾದ ವಿರೇಚನ, ಸ್ನೇಹನಗಳು ಕೂಡಾ ಫಲದಾಯಕವಾಗಿದೆ. ಆಯುರ್ವೇದ ಔಷಧಿಗಳು ವ್ಯಾಧಿ ಪ್ರತ್ಯನೀಕವಾಗಿರುವುದಲ್ಲದೇ ಕುಷ್ಠಘ್ನ, ಕಂಡೂಘ್ನ, ರಕ್ತ ಶುದ್ಧೀಕರ, ರಸಾಯಾನ, ಪಿತ್ತಹರ, ಶೀತವೀರ್ಯ ತಿಕ್ತರಸ ಪ್ರಧಾನ ಹಾಗೂ ರಕ್ತಪ್ರಸಾದಕ ಗುಣಗಳನ್ನು ಹೊಂದಿರುತ್ತೇವೆ.

ಪ್ರಸಕ್ತ ಪ್ರಬಂಧದಲ್ಲ ವಿಚರ್ಚಿಕಾ (Eczema) ರೋಗದಲ್ಲಿ ಆಯುರ್ವೇದ ಚಿಕಿತ್ಸೆಯ ಬಗ್ಗೆ ವೈಜ್ಞಾನಿಕ ಅಧ್ಯಯನ ಮಾಡಲಾಗಿದೆ.

**ಮುನ್ನುಡಿ :** ವಿಚರ್ಚಿಕಾ ಒಂದು ಚರ್ಮ ರೋಗವಾಗಿದ್ದು ಆಯುರ್ವೇದ ಸಂಹಿತೆಯಲ್ಲಿ 11 ವಿಧದ ಕ್ಷುದ್ರ ಕುಷ್ಠ ರೋಗಗಳಲ್ಲಿ ಒಂದು ಪ್ರಭೇದವನ್ನಾಗಿ ಪರಿಗಣಿಸಲಾಗಿದೆ. "ಸಕಂಡೂ ಸ್ರಾವ ಪಿಡಕಾ ಬಹುಸ್ರಾವೀ ವಿಚರ್ಚಿಕಾ" ಎಂದು ತುರಿಕೆಯಿಂದ ಹಾಗೂ ಬಹಳ ಸ್ರಾವದಿಂದ ಕೂಡಿಸಿ ಚರ್ಮದಲ್ಲಿ ಪಿಡಕೆಯುಂಟಾಗುವುದಕ್ಕೆ ವಿಚರ್ಚಿಕಾ ಎನ್ನುವರು. ಸಾಮಾನ್ಯವಾಗಿ ಇದು ಕೈ ಹಾಗೂ ಕಾಲುಗಳಲ್ಲಿ ಉಂಟಾಗುವುದು. ರೋಗಭಾದಿತ ಚರ್ಮವು ಕಪ್ಪು ಬಣ್ಣಕ್ಕೆ ತಿರುಗುವುದು ಹಾಗೂ ಸುಕ್ಕುಗಟ್ಟುವುದು (Criscross lines, Lichenification of Skin) ತುರಿಸಿದಲ್ಲಿ ಗಂಧದಿಂದ ಕೂಡಿದ ವಾಸನೆಯುಳ್ಳ ನೀರಿನಂತಹ ಸ್ರಾವವಾಗುವುದು. ಇದು ಬಹಳ ಸಮಯದವರೆಗೆ ಗುಣವಾಗುವುದಿಲ್ಲ. ಸಾಮಾನ್ಯವಾಗಿ ಅಲರ್ಜಿಕಾರಕ ಪ್ರಾಣಿಗಳ ರೋಮ, ಧೂಳು, ಕೆಲವೊಂದು ವಿದಾಹಿ ಆಹಾರಗಳ ಸೇವನೆ, ರಾಸಾಯನಿಕಗಳಾದ ಡಿಟರ್ಜೆಂಟ್, ವಿಸಂಕ್ರಾಮಕಗಳ ಸಂಪರ್ಕಗಳಿಂದ ಈ ರೋಗವು ಉಂಟಾಗುವುದೆಂದು ತಿಳಿಯಲಾಗಿದೆ. ಆಯುರ್ವೇದದ ಪ್ರಕಾರ ಇದು ವಾತ ಮತ್ತು ಕಫದೋಷಗಳ ಪ್ರಾಧಾನ್ಯತೆಯಿಂದ ಉಂಟಾಗುತ್ತದೆಂದು ತಿಳಿಯಲಾಗಿದೆ. ಕೆಲವೊಂದು ಆಯುರ್ವೇದ ಔಷಧಿಗಳು ಈ ರೋಗದ ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿದೆ. ವಿರೇಚನ , ವಮನ, ರಕ್ತ ಮೋಕ್ಷಣ, ಲಂಘನ, ರಸಾಯನ ಹಾಗೂ ಶಮನೌಷಧಿಗಳ ಪ್ರಯೋಗ, ಪಥ್ಯ ಪ್ರಯೋಗ ಹಾಗೂ ಯೋಗ ಹಾಗೂ ಪ್ರಾಣಾಯಾಮಗಳು ಫಲದಾಯಕವಾಗಿವೆ.

**ವಿಚರ್ಚಿಕಾ ರೋಗದಲ್ಲಿ ಉಪಯುಕ್ತ ಔಷಧಿಗಳು**

**೧. ಏಕ ಮೂಲಿಕಾ ಪ್ರಯೋಗ**

೧) ಸಾರಿವಾ Hemidesmus indicus
೨) ಖದಿರ Acacia arabica
೩) ಮಂಜಿಷ್ಠಾ Rubia cordifolia
೪) ಹರಿದ್ರಾ Curcuma longa
೫) ಉಶೀರ Veteveria Zizinoides
೬) ಚಂದನ Santalinum album
೭) ರಕ್ತಚಂದನ
೮) ಮರಿಚ Piper nigrum
೯) ಶುಂಠಿ Zengiberis officinalis
೧೦) ಚಿತ್ರಕ Plumbago Zelenica
೧೧) ಸ್ವರ್ಣಕ್ಷೀರೀ
೧೨) ಬಾಕುಚೀ Psoralea Corillifolia
೧೩) ಕಟುಕರೋಹಿಣಿ Picrorrhiza Kurora
೧೪) ವಟ Ficus bengalancis
೧೫) ಅಶ್ವತ್ಥ Ficus religiosa
೧೬) ಪ್ಲಕ್ಷ
೧೭) ಉದುಂಬರ Ficus racemosa
೧೮) ಕಾಕೋದುಂಬರ
೧೯) ಪಲಾಶ Beutea monosperma

**ಯೋಗಗಳು**

೧) ಆರೋಗ್ಯ ವರ್ಧಿನಿವಟಿ – ಕಟುಕೀ, ಕಜ್ಜಲಿ
೨) ಗಂಧಕರಸಾಯನ – ಶುದ್ಧಗಂಧಕ, ಸಾರಿವಾ
೩) ಮಹಾ ಮಂಜಿಷ್ಠಾದಿಕಷಾಯ – ಮಂಜಿಷ್ಠಾ
೪) ಹರಿದ್ರಾಖಂಡ – ಹರಿದ್ರಾ, ಸಿತ
೫) ಆರ್ದ್ರಕಖಂಡ – ಆರ್ದ್ರಕ
೬) ಬ್ರಹನ್ ಮರೀಚ್ಯಾದಿತೈಲ – ಮರಿಚ, ತೈಲ
೭) ನಲ್ಪಾಮರಾದಿ ತೈಲ
೮) ಸ್ತ್ರೀಕುಟಜ ತೈಲ – ಕುಟಜ, ನಾರಿಕೇಲ ತೈಲ
೯) ಕುಷ್ಠಗಜ ಕೇಸರಿ – ಹಿಂಗು
೧೦) ಖದಿರಾರಿಷ್ಟ – ಖದಿರ

೧೧) ಸಾರಿವಾದ್ಯಾಸವ – ಸಾರಿವಾ
೧೨) ಚಂದವಾಸವ – ಚಂದನ
೧೩) ಉಶೀರಾಸವ – ಉಶೀರ
೧೪) ಮಹಾತಿಕ್ತಕಮ್ ಕಷಾಯ – ಕಿರಾತಚಿಕ್ತ, ಗುಡೂಚಿ
೧೫) ಅಮೃತಾದಿ ಕಷಾಯ – ಗುಡೂಚಿ, ವಾಸಾ
೧೬) ಪಂಚತಿಕ್ತ ಕಷಾಯ –
೧೭) ಫಲತ್ರಿಕಾದಿ ಕಷಾಯ, ತ್ರಿಫಲಾ, ನಿಂಬತ್ವಕ್, ಕಟುಕ ರೋಹಿಣಿ
೧೮) ಪಟೋಲ ಕಟುರೋಹಿಣ್ಯಾದಿ ಕಷಾಯ
೧೯) ಅಮೃತಾರಿಷ್ಟ
೨೦) ಚೋಪಚೀನ್ಯಾದಿ ಪಾಕ
೨೧) ಚೋಪಚೀನೀ ಚೂರ್ಣ
೨೨) ತ್ರಿಫಲಾ ಕಷಾಯ
೨೩) ತ್ರಿಫಲಾ ವಟೀ

**ವಿಚರ್ಚಿಕಾ ರೋಗದ ಪಥ್ಯ**

೧) ಶಾಲಿ ಅನ್ನ, ಗಂಜಿ, ಷಷ್ಟಿಕ ಶಾಲಿ,ಕೆಂಪಕ್ಕಿ, ಹಾಲು, ಹಾಲಿನ ತ್ಪನ್ನಗಳು
2) ಮುದ್ಗ, ತುವರೀ, (Toor Dal), ಸೌತೆಕಾಯಿ, ಹಾಗಲಕಾಯಿ, ಮುಳ್ಳುಸೌತೆ, ಬಾಳೆಕಾಯಿ, ಬಾಳೆಹಣ್ಣು, ಸೇಬು
ಇತ್ಯಾದಿ.
೩) ನಂಜು ಹಾಗೂ ಉಷ್ಣ ವೀರ್ಯ ಮೀನು ಪದಾರ್ಥ ಸೇವನೆ ತಂಪಾದ ಪದಾರ್ಥಗಳು.

**ವಿಚರ್ಚಿಕಾ ರೋಗದಲ್ಲಿ ಅಪಥ್ಯ**

೧. ಉಷ್ಣವೀರ್ಯ ಯುಕ್ತ, ತೀಕ್ಷ್ಣವಾದ ಗುಣಗಳುಳ್ಳ ಪದಾರ್ಥ, ಸರ್ಷಪ,(ಸಾಸಿವೆ), ರಾಜಿಕಾ, ಗರಂ ಮಸಾಲೆ ಪದಾರ್ಥ, ಮೆಣಸು
೨. ಬದನೆಕಾಯಿ ಅವಲಕ್ಕಿ, ಉದ್ದಿನಿಂದ ತಯಾರಿಸಿದ ಇಡ್ಲಿ, ದೋಸೆ, ವಡೆ ಇತ್ಯಾದಿ
೩. ನಂಜಿನ ಮೀನು ಹಾಗೂ ಮಾಂಸ ಸೇವನೆ, ಕೋಳಿ ಮೊಟ್ಟೆ, ಸೇವನೆ

**ಚರ್ಚೆ :** ವಿಚರ್ಚಿಕಾ ರೋಗವು ಸಾಮಾನ್ಯವಾಗಿ ಅಲರ್ಜಿಯಿಂದ ಬರುವ ಚರ್ಮ ರೋಗವಾಗಿದೆ. ಚರ್ಮದಲ್ಲಿ ಪಿಡಕೆಗಳು, ತುರಿಕೆ ಹಾಗೂ ನೀರಿನಂತಹ ಸ್ರಾವ ಯಾ ಖಿಛಿಟಟಚಿರ ನಿಂದ ಕೂಡಿದ ರೋಗವಾಗಿದೆ. ಸಾಮಾನ್ಯವಾಗಿ ಕೈ ಹಾಗೂ ಕಾಲುಗಳಲ್ಲಿ Extensor suface ನಲ್ಲಿ ಉಂಟಾಗುವುದು. ಚರ್ಮವು ಕಪ್ಪು ಬಣ್ಣಕ್ಕೆ ತಿರುಗುವುದು ಸಾಮಾನ್ಯ ಲಕ್ಷಣವಾಗಿದೆ. ರಾತ್ರಿ ಹೊತ್ತಿನಲ್ಲಿ ತುರಿಕೆಯು ಹೆಚ್ಚಾಗಿ ಕಂಡು ಬರುವುದು. ಇದು ಚಿರಕಾಲೀನ ವ್ಯಾಧಿಯಾಗಿದ್ದು ಚಿಕಿತ್ಸೆಗೆ ಕಷ್ಟಕರವಾಗಿರುವುದು. ವಿರೇಚನ, ವಮನ ಹಾಗೂ ರಕ್ತ ಮೋಕ್ಷಣ ಚಿಕಿತ್ಸೆಗಳು ಕೆಲವೊಮ್ಮೆ ಉತ್ತಮ ಪರಿಣಾಮವನ್ನು ಕೊಡುವುದು ನಿದರ್ಶನಗಳಿಂದ ಸಾಭೀತಾಗಿದೆ.

ವಿಚರ್ಚಿಕಾ ರೋಗದಲ್ಲಿ ಉಪಯೋಗಿಸುವ ಆಯುರ್ವೇದ ಔಷಧಿಗಳು ಈ ಕೆಳಗಿನ ಕರ್ಮವನ್ನು ಹೊಂದಿರುವುದು.
೧) ಕುಷ್ಠಘ್ನ – ಸಾರಿವಾ, ಖದಿರ, ಉಶೀರ
೨) ಕಂಡೂಘ್ನ – ಸಾರಿವಾ, ಚಂದನ, ಶುಂಠಿ
೩) ರಕ್ತ ಶುದ್ಧಿಕಾರಕ – ಸಾರಿವಾ, ಚೋಪಚೀನೀ, ಚಂದನ
೪) ಪಿತ್ತಹರ – ಪ್ರವಾಳಭಸ್ಮ, ಮುಕ್ತಾ ಪಿಷ್ಠಿ
೫) ಕಫಹರ – ಭಲ್ಲಾತಕ, ಚಿತ್ರಕ
೬) ರಸಾಯನ – ಖದಿರ, ಕದರ
೭) ತಿಕ್ತರಸಯುಕ್ತ – ಕಟುಕ ರೋಹಿಣಿ, ಭೂನಿಂಬ
೮) ಶೀತವೀರ್ಯಯುಕ್ತ – ಶತಾವರಿ, ಕಮಲ
೯) ರಕ್ತ ಪ್ರಸಾದಕ – ಚಂದನ, ಉಶೀರ
೧೦) ತ್ವಚ್ಯ– ಖದಿರ, ಕದರ
೧೧) ವರ್ಣ್ಯ – ರಕ್ತಚಂದನ , ತಗರ ಚಂಗಲ್‌ಕೋಷ್ಠ

ವಿಚರ್ಚಿಕಾ ರೋಗಕ್ಕೆ ಉತ್ತಮವಾದ ಆಯುರ್ವೇದ ಉಪಚಾರವಿದೆ ಆದರೆ ಈ ರೋಗವು ಉಪಶಮನವಾಗಲು ಅಧಿಕ ಸಮಯವನ್ನು ತೆಗೆದುಕೊಳ್ಳುವುದು ರಕ್ತಮೋಕ್ಷಣವು ಕೆಲವೊಂದು ಬಾರಿ ಅಧಿಕ ಲಾಭದಾಯಕವಾಗಿದೆ. ವಿರೇಚನ ಚಿಕಿತ್ಸೆಯೂ ಕೂಡಾ ಉತ್ತಮ ಫಲದಾಯಕವಾಗಿದೆ. ನಿತ್ಯ ವಿರೇಚನವನ್ನು ಈ ರೋಗದ ಚಿಕಿತ್ಸಾ ಅಂಗವಾಗಿ ಪ್ರಯೋಗಿಸಬಹುದಾಗಿದೆ.

**ಉಪಸಂಹಾರ :**

೧) ವಿಚರ್ಚಿಕಾ ರೋಗವು ಮುಖ್ಯವಾಗಿ ವಾತ ಹಾಗೂ ಕಫ ದೋಷದಿಂದ ಉಂಟಾಗುವ ಚರ್ಮರೋಗವು ಕಫ ಪ್ರಧಾನವಾದ ವ್ಯಾಧಿಯಾಗಿರುವುದು.
೨) ಇದನ್ನು ಆಧುನಿಕ ಅಠಟಿಣಚಿಛಿಣ Dermatitis ಯಾ Eczema ರೋಗದೊಡನೆ ಹೋಲಿಸಬಹುದು.
೩) ಈ ರೋಗಗಳಲ್ಲಿ ದೀರ್ಘ ಕಾಲೀನ ಚಿಕಿತ್ಸೆಯನ್ನು ಮಾಡಬೇಕಾಗುವುದು. ಆದರೆ ದೀರ್ಘಕಾಲೀನ ಆಯುರ್ವೇದ ಚಿಕಿತ್ಸೆ ಮಾಡಿದರೆ ಅತೀ ಕಡಿಮೆ ಅಡ್ಡ ಪರಿಣಾಮಗಳು ಉಂಟಾಗುವುದನ್ನು ನಾವು ಕಾಣಬಹುದು.

**ಆಧಾರ ಭೂತ ಗ್ರಂಥಗಳು :–**

೧. ಚರಕ ಸಂಹಿತಾ, ಚಕ್ರಪಾಣಿದತ್ತಟೀಕಾ, ಚೌಖಂಭಾಪ್ರೆಸ್, ವಾರಣಾಸಿ
೨. ಸುಶ್ರುತ ಸಂಹಿತಾ, G.D.Singhal ಮತ್ತಿತರು, ನವದೆಹಲಿ
೩. ಅಷ್ಟಾಂಗ ಹೃದಯ, ವಿದ್ಯಾನಾಥ್, ಚೌಖಂಭಾ ಸುರಭಾರತಿ, ವಾರಣಾಸಿ
೪. ರೀಸರ್ಚಸ್ ಇನ್ ಆಯುರ್ವೇದ, ಡಾ। ಶ್ರೀಪತಿ ಆಚಾರ್ಯ ಮಣಿಪಾಲ
೫. ಅಪ್‌ಡೇಟೆಡ್ ಆಯುರ್ವೇದ, ಡಾ। ಶ್ರೀಪತಿ ಆಚಾರ್ಯ, ಮಣಿಪಾಲ

## ಕಾಮಾಲೆ ರೋಗ (Jaundice) ದಲ್ಲಿ ಆಯುರ್ವೇದೋಕ್ತ ಪಥ್ಯಾ ಪಥ್ಯ

* ಅನಂತ ಆಚಾರ್ಯ ಎಸ್, ** ಡಾ। ಶ್ರೀಪತಿ ಆಚಾರ್ಯ ಜಿ.
* ಅರೇನಾ ಅನಿಮೇಶನ್ ಕಾಲೇಜು, ಉಡುಪಿ, ** ಮುನಿಯಾಲು ಕಾಲೇಜು ಮತ್ತು ಆಸ್ಪತ್ರೆ, ಮಣಿಪಾಲ

ಕಾಮಾಲೆ ರೋಗವೂ ಯಕೃತ್ (ಲಿವರ್) ಹಾನಿಗೊಳಗಾಗಿ ಉಂಟಾಗುವ ರೋಗವಾಗಿದ್ದು ಶರೀರದ ಚರ್ಮವು ಹಳದಿ ಬಣ್ಣಕ್ಕೆ ತಿರುಗುವುದು, ಶರೀರದಲ್ಲಿ ತುರಿಕೆ, ವಾಂತಿ ಬಂದಂತೆ ವಾಂತಿ ಉಂಟಾಗುವುದು, ಹಸಿವೆ ಕಡಿಮೆಯಾಗುವುದು, ನಿಶ್ಯಕ್ತಿ ಹಾಗೂ ತೂಕಡಿಕೆ ಈ ಲಕ್ಷಣಗಳಿಂದ ಕೂಡಿರುವುದು. ಸಾಮಾನ್ಯವಾಗಿ ಮದ್ಯಪಾನ ಮಾಡುವ ವ್ಯಕ್ತಿಗಳಲ್ಲಿ ಉಂಟಾಗುವ ಈ ರೋಗವು ವೈರಾಣುಗಳ ಸೋಂಕಿನಿಂದಲೂ ಉಂಟಾಗುವುದು. ವೈರಸ್‌ಗಳ ಸೋಂಕಿನಿಂದ ಉಂಟಾಗುವ ರೋಗಗಳನ್ನು ಹೆಪಟೈಟಿಸ್ 'ಎ', ಹೆಪಟೈಟಿಸ್ 'ಬಿ', ಹೆಪಟೈಟಿಸ್ 'ಸಿ', ಹೆಪಟೈಟಿಸ್ ನಾನ್ 'ಎ', ನಾನ್ ಬಿ ಮುಂತಾಗಿ ವಿಂಗಡಿಸಿರುತ್ತಾರೆ. ಅತೀ ಮಧ್ಯಪಾನವನ್ನು ಹೆಚ್ಚು

ಸಮಯದವರೆಗೆ ಸೇವನೆ ಮಾಡುವುದರಿಂದ ಯಕೃತ್ ಕೋಷಾಣುಗಳು ಕ್ಷತಿಗೊಳಪಟ್ಟು ಜಾಂಡೀಸ್ ಉಂಟಾಗುವುದು. ಈ ರೋಗವನ್ನು ಅಲ್ಕೋಹಾಲಿಕ್ ಹೆಪಟೈಟಿಸ್ ಎಂದು ಕರೆಯುವರು. ಪ್ರೀಹಿಪಾಟಿಕ್ ಜಾಂಡೀಸ್ ಎಂಬ ರೋಗವು ಮುಖ್ಯವಾಗಿ ಕೆಂಪು ರಕ್ತ ಕಣಗಳ (RBC) ವಿಕೃತಿಯಿಂದ ಉಂಟಾಗುವುದನ್ನು ನಾವು ಕಾಣಬಹುದು. ಸ್ಪೆರೋ ಸೈಟೋಸಿಸ್, ಎಲಿಪ್ಟೊ ಸೈಟೋಸಿಸ್, ಸಿಕಲ್ ಸೆಲ್ ಎನೀಮಿಯಾ, ಥೆಲೇಸೀಮಿಯಾ ಹಾಗೂ ಮಲೇರಿಯ ಮೊದಲಾದ ರೋಗಗಳಿಂದ ರಕ್ತಕಣಗಳು ಹೆಚ್ಚಿನ ಪ್ರಮಾಣದಲ್ಲಿ ಒಡೆದು ಜಾಂಡೀಸ್ ಉಂಟಾಗುವುದು. ಇದನ್ನು ಪ್ರಿಹಿಪಾಟಿಕ್ ಜಾಂಡೀಸ್ ಎಂದು ಕರೆಯುವರು.

ಜಾಂಡೀಸ್ ರೋಗದಲ್ಲಿ ಆಯುರ್ವೇದ ಔಷಧಿಯು ವಿಶೇಷವಾಗಿ ಪರಿಣಾಮಕಾರಿಯಾಗಿರುವುದು. ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ವಿಶೇಷವಾಗಿ ಯಕೃತ್ ಉತ್ತೇಜಕ, ಪಿತ್ತವಿರೇಚಕ ಹಾಗೂ ಯಕ್ರತ್ ಕೋಷಾಣು ರಕ್ಷಕ ದ್ರವ್ಯಗಳ ಪ್ರಯೋಗವನ್ನು ಮಾಡಲಾಗುವುದು. ಲಘು, ದೀಪನ, ಪಾಚನ , ಪಿತ್ತ ಹರ, ಶೀತವೀರ್ಯ ಹಾಗೂ ಪ್ರೀಣನ ಆಹಾರಗಳನ್ನು ಮುಖ್ಯವಾಗಿ ಪ್ರಯೋಗಿಸುವುದು.

ಈ ಪ್ರಬಂಧದಲ್ಲಿ ಮುಖ್ಯವಾಗಿ ಕಾಮಾಲೆ ರೋಗವು ಆಯುರ್ವೇದೋಕ್ತ ಪಥ್ಯ ಪ್ರಯೋಗದ ಬಗ್ಗೆ ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಲಾಗುವುದು.

**ಮುನ್ನುಡಿ :** ಕಾಮಾಲೆ ರೋಗವು ಯಕೃತ್ ಕೋಷಾಣುಗಳ ಕ್ಷತಿಯಿಂದ ಉಂಟಾಗುವ ರೋಗವಾಗಿದೆ. ಇದನ್ನು ಪ್ರೀಹಿಪಾಟಿಕ್, ಹೆಪಾಟಿಕ್ ಮತ್ತು ಪೋಸ್ಟ್ ಹೆಪಾಟಿಕ್ ಎಂದು ಕಾರಣ ಭೇಧಾನುಸಾರ ೩ ವಿಧಗಳಾಗಿ ವರ್ಗೀಕರಿಸಿರುತ್ತಾರೆ. ಪ್ರೀಹಿಪಾಟಿಕ್ ಜಾಂಡೀಸ್‌ನಲ್ಲಿ ರಕ್ತಕಣಗಳ ಅಧಿಕ ಪ್ರಮಾಣದಲ್ಲಿ ಒಡೆಯುವ ಕಾರಣಗಳಾದ ಸಿಕಲ್‌ಸೆಲ್ ಏನೀಮಿಯಾ, ಕಂಜೆನಿಟಲ್ ಸ್ಪೆರೋಸೈಟೋಸಿಸ್, ಅಕೇಂತೋ ಸೈಟೋಸಿಸ್, ಎಲಿಪ್ಟೊಸೈಟೋಸಿಸ್, ಸ್ಟೊಮೆಟೋ ಸೈಟೋಸೀಸ್ ಹಾಗೂ ಮಲೇರಿಯಾ ರೋಗಗಳಲ್ಲಿ ಕಂಡುಬರುವುದು. ಇದರಲ್ಲಿ ರಕ್ತಕಣಗಳನ್ನು ಅಧಿಕ ಪ್ರಮಾಣದಲ್ಲಿ ನಾಶವಾಗಿ ಬಿಲಿರುಬಿನ್ ಎಂಬ ವರ್ಣ ತತ್ವವು ಯಕೃತ್‌ನಲ್ಲಿ ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗುವುದು. ಇದರಿಂದಾಗಿ ರಕ್ತದಲ್ಲಿ ಬಿಲಿರುಬಿನ್‌ನ ಪ್ರಮಾಣವು ಜಾಸ್ತಿಯಾಗಿ ಜಾಂಡೀಸ್ ಉಂಟಾಗುವುದು. ಕೆಲವೊಂದು ಆಧುನಿಕ ಔಷಧಿಗಳು ಕೂಡಾ ಕೆಂಪುರಕ್ತಕಣಗಳ ಒಡೆಯುವಿಕೆಯನ್ನು ಹೆಚ್ಚಿಸುತ್ತವೆ. G6PD ಕೊರತೆ ಕೂಡಾ ಜಾಂಡೀಸನ್ನುಂಟು ಮಾಡುವುದು. ಹಿಪಾಟಿಕ್ ಜಾಂಡಿಸಿನಲ್ಲಿ ಕೆಲವೊಂದು ಔಷಧಗಳ ಪ್ರಯೋಗ (ಉದಾ ಕ್ಷಯ ರೋಗದಲ್ಲಿ ಉಪಯೋಗಿಸುವುವ ಔಷಧಿಗಳು Eg : INH, Rifampicin, Ethambutol etc), ಯಾ ವೈರಾಣುಗಳ ಸೋಂಕು (ಹೆಪಟೈಟಿಸ್ A ಹೆಪಟೈಟಿಸ್ B ಹೆಪಟೈಟಿಸ್ ನಾಸ್ A ನಾಸ್ B ಮತ್ತು ಹೆಪಟೈಟಿಸ್ C) ಯಾ ಅತಿಯಾದ ಮದ್ಯಪಾನ (Chronic Alcoholism) ಗಳಿಂದ ಉಂಟಾಗುವುದು. ಅತಿಯಾದ ಮದ್ಯಪಾನ ಮಾಡುವುದರಿಂದ ಯಕೃತ್ತ್‌ನ ಮೇದೋ ವ್ಯಪಜನನ (Fatty degeneration of liver), ಅಲ್ಕೋಹಾಲಿಕ್ ಹೆಪಟೈಟಿಸ್ ಯಾ ಅಲ್ಕೋಹಾಲಿಕ್ ಸಿರ್ರೊಸಿಸ್ ರೋಗಗಳು ಕ್ರಮವಾಗಿ ಉಂಟಾಗುವುದನ್ನು ನಾವು ಕಾಣುತ್ತೇವೆ. ಈ ರೋಗಗಳು ಉತ್ತರೋತ್ತರವಾಗಿ ಚಿಕಿತ್ಸೆಗೆ ಕಷ್ಟ ಸಾಧ್ಯವಾಗಿದೆ. ಪೋಸ್ಟ್‌ಹಿಪಾಟಿಕ್ ಜಾಂಡೀಸಿನಲ್ಲಿ ಪಿತ್ತನ ಲಿಕಾದಲ್ಲಿ (common bile duct) ಅವರೋಧ ಉಂಟಾಗಿ ಉಂಟಾಗುವುದು. ಈ ಅವರೋಧವು ನಾಲಿಕಾ ಅಂತರ್ ಜನ್ಯ (Intraluminal) ಯಾ ನಾಲಿಕಾ ಬಾಹ್ಯ (Extra luminal) ೨ ವಿಧವಾಗಿದೆ.

ಪಾಂಕ್ರಿಯಾಸ್ (ಅಗ್ನ್ಯಾಶಯ) ವ ಅರ್ಬುದವಲ್ಲಿ ನಾಲಿನಾ ಬಾಹ್ಯಜ ಅವರೋಧದಿಂದ ಜಾಂಡೀಸ್ ಉಂಟಾಗುವುದು.

ಚರಕ ಸಂಹಿತೆಯಲ್ಲಿ ಈ ಕೆಳಗಿನ ಕಾಮಲಾ ಪ್ರಭೇದ ಹೇಳಿರುತ್ತಾರೆ,

೧) ಕೋಷ್ಠಶಾಖಾಶ್ರಿತ ಕಾಮಲಾ
೨) ಶಾಖಾಶ್ರಿತ ಕಾಮಲಾ
೩) ಹಲೀಮಕ
೪) ಕುಂಭ ಕಾಮಲಾ

**ಏಕಮೂಲಿಕಾ ಪ್ರಯೋಗಗಳು**

೧) ಗುಡೂಚಿ Tinospora cordifolia
೨) ಕಟುಕ ರೋಹಿಣಿ Picrorrhiza curroua
೩) ಖರ್ಜೂರ Phoenix sylvestris
೪) ದ್ರೋಣಪುಷ್ಪಿ Leucas aspera
೫) ಪುನರ್ನವಾ Borhaevia diffusa
೬) ಇಕ್ಷು Saccharum indicum
೭) ದ್ರಾಕ್ಷಾ Vitis vinifera
೮) ಭೂಮ್ಯಾಮಲಕೀ Phylanthus neruri
೯) ಆಮಲಕೀ Embelia Officinalis
೧೦) ಕಿರಾತತಿಕ್ತ Swertia Chirayata
೧೧) ಭೃಂಗರಾಜ Eclipta alba
೧೨) ದಾರುಹರಿದ್ರಾ Berberis aristata
೧೩) ಹರಿದ್ರಾ Curcuma longa
೧೪) ಶುಂಠಿ Zinziberis officianale
೧೫) ರೋಹಿತಕ Techoma undulata
೧೬) ಕುಮಾರಿ Aloe vera
೧೭) ಭೂನಿಂಬ Andrographis panniculata
೧೮) ವಾಸಾ Adathoda Vasika
೧೯) ಕೂಷ್ಮಾಂಡ Benincasa hispida
೨೦) ಏರ್ವಾರು

**ಕಾಮಾಲೆ ರೋಗದಲ್ಲಿ ಪಥ್ಯಗಳು**

೧) ಗಂಜಿ ಪ್ರಯೋಗ
೨) ತೊಗರಿಬೇಳೆ ಯಾ ಹೆಸರುಬೇಳೆ ಸಾರು
೩) ಸೋರೆಕಾಯಿ ಪಲ್ಯ – ಎಣ್ಣೆ ಮತ್ತು ತುಪ್ಪ ರಹಿತ
೪) ಬಿಳಿ ಮೂಲಂಗಿ ಪಲ್ಯ
೫) ಎಳೆ ನೀರು (Tender Cocunut Water)
೬) ಬೆಲ್ಲ ಯಾ ಸಕ್ಕರೆ ಉಪಯೋಗಿಸಬಹುದು
೭) ಬಾರ್ಲಿ ನೀರು ಪ್ರಯೋಗ
೮) ಹಾಗಲಕಾಯಿಯ ಉಪಯೋಗ
೯) ಹಾಲು, ಮತ್ತು ಹಾಲಿನ ಪದಾರ್ಥಗಳು

**ಕಾಮಲೆ ರೋಗದಲ್ಲಿ ಅಪಥ್ಯಗಳು**

೧) ವ್ಯಾಯಾಮ, ವ್ಯವಾಯ
೨) ಎಣ್ಣೆ ಪದಾರ್ಥ, ತುಪ್ಪ, ಹುರಿದ, ಕರಿದ ಪದಾರ್ಥಗಳು
೩) ಖಾರ ಪದಾರ್ಥ, ಗರಂ ಮಸಾಲೆ ಪದಾರ್ಥ, ಮೆಣಸು
೪) ತೀಕ್ಷ್ಣ ಹಾಗೂ ಉಷ್ಣವೀರ್ಯವುಳ್ಳ ಪದಾರ್ಥ, ವಿದಾಹಿ, ಅಭಿಷ್ಯಂಧಿ ಪದಾರ್ಥಗಳು
೧೫) ಪಚನಕ್ಕೆ ಗುರುವಾದ ಪದಾರ್ಥಗಳು ಗೋಧಿ, ಉದ್ದು ಆದಿ.

**ಕಾಮಲೆ ರೋಗದಲ್ಲಿ ಔಷಧಗಳು**

೧) ನೆಲನೆಲ್ಲಿ ಸ್ವರಸ (ಭೂಮ್ಯ ಮಲಕೀ)
೨) ಗರಗದ ಸ್ವರಸ (ಭೃಂಗರಾಜ)
೩) ದ್ರೋಣಪ್ರಷ್ಪಿ ಸ್ವರಸ
೪) ಆಮಲಕೀ ಸ್ವರಸ
೫) ಆಮಲಕೀ ಚೂರ್ಣ
೬) ಗುಡೂಚೀ ಕ್ವಾಥ (ಅಮೃತಬಳ್ಳಿ)
೭) ಇಕ್ಷು ಸ್ವರಸ (ಕಬ್ಬಿನ ಹಾಲು)
೮) ಪುನರ್ನವಾ ಸ್ವರಸ
೯) ಫಲತ್ರಿಕಾದಿ ಕಷಾಯ
೧೦) ಕುಮಾರ್ಯಾ ಸವ
೧೧) ಪುನರ್ನವಾ ವಾಸವ
೧೨) ಅಮೃತಾದಿ ಕ್ವಾಥ
೧೩) ಕಟುಕೀ ಕ್ವಾಥ
೧೪) ಕಿರಾತತಿಕ್ತ ಕ್ವಾಥ
೧೫) ಪಂಚತಿಕ್ತ ಕಷಾಯ
೧೬) ಮಹಾತಿಕ್ತಕ ಕಷಾಯ
೧೭) ತ್ರಿಫಲಾ ಚೂರ್ಣ
೧೮) ನಿಂಬ ಕ್ವಾಥ
೧೯) ಆರೋಗ್ಯವರ್ಧಿನಿ ವಟಿ
೨೦) ಯಕೃತ್ ಪ್ಲೀಹಾರಿ ಲೌಹ
೨೧) ಯಕೃದರಿ ಲೌಹ
೨೨) ರೋಹಿತಕಾರಿಷ್ಟ
೨೩) ಪ್ರವಾಳ ಭಸ್ಮ
೨೪) ಪ್ರವಾಳ ಪಿಷ್ಠಿ
೨೫) ಮುಕ್ತಾ ಭಸ್ಮ
೨೬) ಮುಕ್ತಾ ಪಿಷ್ಠಿ
೨೭) ಪವಾಲ ಪಂಚಾಮೃತ ರಸ
೨೮) ಮುಕ್ತಾ ಪಂಚಾಮೃತ ರಸ
೨೯) ಕಾಮದು ಘಾರಸ
೩೦) ಗೋದಂತಿ ಭಸ್ಮ
೩೧) ಕರ್ಪೂರ ಶಿಲಾಜತು ಭಸ್ಮ
೩೨) ಪುನರ್ನವಾ ಮಂಡೂರ
೩೩) ಖರ್ಜೂರಾದಿ ಮಂಥ
೩೪) ಉಶೀರಾದಿ ಪೇಯ
೩೫) ಸಾರಿವಾದಿ ಹಿಮ
೩೬) ಚಂದನಾದಿ ಕಷಾಯ
೩೭) ದ್ರಾಕ್ಷಾದಿ ಕಷಾಯ
೩೮) ದ್ರಾಕ್ಷಾದಿ ಚೂರ್ಣ

**ಕಾಮಾಲೆ ರೋಗದಲ್ಲಿ ಪ್ರಯೋಗಶಾಲೀಯ ಪರೀಕ್ಷೆಗಳು**

1. ° ªÀgï ¥sÀAPÀë£ï mÉ¹ï Ö (LFT)
೧) ಸೀರಮ್ ಟೋಟಲ್ ಬಿಲಿರುಬಿನ್
೨) ಡೈರೆಕ್ಟ್ ಬಿಲಿರುಬಿನ್
೩) ಇನ್‌ಡೈರೆಕ್ಟ್ ಬಿಲಿರುಬಿನ್
೪) SGOT ಸೀರಮ್ ಗ್ಲುಟಮಿಕ್ ಆಕ್ಸಲೋ ಎಸಿಟಿಕ್ ಟ್ರಾನ್ಸ್‌ಮೈನೇಸ್
೫) SGPT ಸೀರಮ್ ಗ್ಲುಟಮಿಕ್ ಪಿರುವೇಟ್ ಟಾನ್ಸ ಮೈನೇಸ್
೬) ಅಲ್ಕಲೈನ್ ಫಾಸ್ಪಟೇಸ್
೭) ಸೀರಮ್ ಟೋಟಲ್ ಪ್ರೋಟೀನ್
೮) ಸೀರಮ್ ಅಲ್ಬುಬಿನ್
೯) ಸೀರಮ್ ಗ್ಲೊಬ್ಯುಲಿನ್
೧೦) ಅಲ್ಬುಮಿನ್ / ಗ್ಲೊಬ್ಯುಲಿನ್ ಅನುಪಾತ
೧೧) ಸೀರಮ್ ಟೋಟಲ್ ಕೊಲೆಸ್ಟರಾಲ್
೨. ಅಲ್ಟ್ರಾ ಸೌಂಡ್ ಪರೀಕ್ಷೆ – ಲಿವರ್, ಗಾಲ್‌ಬ್ಲಾಡರ್ ಮತ್ತು ಉಃಆ, ಪೋರ್ಟಲ್ ವೈನ್, ಅಸೈಟಿಸ್ ಪರೀಕ್ಷೆ.

**ಚರ್ಚೆ :** ಕಾಮಾಲೆ ರೋಗವು ಯಕೃತ್ ಪೂರ್ವ ಕಾರಣ ಜನ್ಯ, ಯಕೃತಿಕ ಹಾಗೂ ಯಕೃತ್ತೋತ್ತರ ಕಾರಣಗಳಿಂದ ಉಂಟಾಗುವುದು. ಈ ರೋಗದಲ್ಲಿ ಶರೀರದ ತ್ವಚೆಯ ಹಳದಿ ಬಣ್ಣಕ್ಕೆ ತಿರುಗುವುದು, ಮೂತ್ರ ಹಳದಿಯಾಗುವುದು, ಹಸಿವೆ ಕಡಿಮೆಯಾಗುವುದು, ನಿಶ್ಯಕ್ತಿ, ಮೈಯಲ್ಲಿ ತುರಿಕೆಯುಂಟಾಗುವುದು. ಆದಿ ಲಕ್ಷಣಗಳು ಕಂಡುಬರುವುದು. ಪ್ರಯೋಗ ಶಾಲೆಯ ಪರೀಕ್ಷೆಗಳಾದ ಸೀರಮ್ ಟೋಟಲ್ ಬಿಲಿರುಬಿನ್, ; ಅಲ್ಬುಬಿನ್ ಗ್ಲೊಬ್ಯುಲಿನ್ ರೇಷಿಯೋ ; SGOT, ಸೀರಮ್ ಗ್ಲುಟಾಮಿಕ್ ಪಿರುವೇಟ್ ಟ್ರಾನ್ಸ್‌ಮೈನೇಸ್, ಅಲ್ಕಲೈನ್ ಪಾಸ್ಪಟೇಸ್, ಮೂತ್ರ ಪರೀಕ್ಷೆ ಹಾಗೂ ಅಟ್ರಾಸೌಂಡ್ ಪರೀಕ್ಷೆಗಳಿಂದ ವಿನಿಶ್ಚಯ ಮಾಡಬಹುದು. ಕಾಮಲೆ ರೋಗದಲ್ಲಿ ಆಯುರ್ವೇದ ಚಿಕಿತ್ಸೆಯು ತನ್ನದೇ ಪ್ರಾಮುಖ್ಯತೆಯನ್ನು ಹೊಂದಿದೆ. ಇಲ್ಲಿ ಪಥ್ಯ ಪಾಲನೆಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗುವುದು. ಪಿತ್ತಹರ, ಮೂತ್ರ ವಿರೇಚನ, ಮಲವಾತಾನುಲೋಮನ, ಹಾಗೂ ರಸಾಯನ ದೀಪನ ಪಾಚನ ಔಷಧಿಗಳ ಪ್ರಯೋಗ ಮಾಡಲಾಗುವುದು. ಇದರೊಂದಿಗೆ ಯಕೃದುತ್ತೇಜನ ಹಾಗೂ ಯಕೃತ್ ಕೋಷಾಣು ರಕ್ಷಕ (Hepatoprotective) ದ್ರವ್ಯ ಪ್ರಯೋಗ ಮಾಡಲಾಗುವುದು.

**ಉಪಸಂಹಾರ :**

೧. ಕಾಮಾಲೆ ರೋಗದ ಚಿಕಿತ್ಸೆಯಲ್ಲಿ ಪಥ್ಯ ಪಾಲನೆಯು ಅಧಿಕ ಪ್ರಾಮುಖ್ಯತೆಯನ್ನು ಹೊಂದಿರುವುದು.
೨. ಮುಖ್ಯವಾಗಿ ಯಕೃತ್ತಿನ (Hepato cellular) ಕಾಮಾಲೆ ರೋಗವು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುವುದು.
೩. ಅವರೋಧ ಜನ್ಯ ಕಾಮಲ ರೋಗದಲ್ಲಿ ಶಲ್ಯ ಚಿಕಿತ್ಸೆಯು ಹೆಚ್ಚಾಗಿ ಅನಿವಾರ್ಯವಾಗಿರುವುದು.

**ಆಧಾರ ಭೂತ ಗ್ರಂಥಗಳು**

೧. ಚರಕ ಸಂಹಿತಾ
೨. ಸುಶ್ರುತ ಸಂಹಿತಾ
೩. ಆಯುರ್ವೇದ ಸಾರ
೪. ಬೈಷಜ್ಯ ರತ್ನಾವಲಿ
೫. ಆಯುರ್ವೇದ ವಿಜ್ಞಾನ, ಡಾ। ಶ್ರೀಪತಿ ಆಚಾರ್ಯ, ಮಣಿಪಾಲ ೨೦೧೧

# ವಿಷಯ:–06

# ಪರಾಶರೀಯಮ್

# (ಅ) ಕೃಷಿ, (ಆ) ತೋಟಗಾರಿಕೆ, ಅರಣ್ಯ, (ಕ) ಪಶುಸಂಗೋಪನೆ ಮತ್ತು ಮೀನುಗಾರಿಕೆ

## THEME:-06

## PARASHAREEYAM

## (A) AGRICULTURAL, (B) HORTICULTURAL, FORESTRY, (C) ANIMAL HUSBANDRY & FISHERIES

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| **(ಅ) ಕೃಷಿ** | | | |
| 1. | ಸಾವಯವ ಕೃಷಿ ಹಾಗೂ ಮಣ್ಣಿನ ಫಲವತ್ತತೆ | ಆಶೀಫ ಹಾದಿಮನಿ<br>ಗುರು, ಪಿ. ಎನ್ | 159 – 161 |
| 2 | ತೊಗರಿಯಲ್ಲಿ ವರ್ಣತಂತು ಆಧಾರಿತ ಬೀಜ ತಳಿ ಶುದ್ದತಾ ಪರೀಕ್ಷೆ | ರಾಕೇಶ್.ಸಿ.ಮಠದ<br>ಲೊಕೇಶ್.ಜಿ.ವೈ, ಬಸವೇಗೌಡ | 161 – 166 |
| 3 | ಹವಾಮಾನ ಬದಲಾವಣೆಯಿಂದಾಗಿ ಕೃಷಿ ಕ್ಷೇತ್ರದ ಮೇಲಾಗುವ ಪರಿಣಾಮಗಳು: ಒಂದು ತೌಲನಿಕ ಅಧ್ಯಯನ | ಯು. ಕೆ. ಶಾನವಾಡ<br>ವಿಶ್ವನಾಥ ಬೀರಾದಾರ,<br>ಐ. ಶಂಕರಗೌಡ | 166 – 173 |
| 4 | ಜೈವಿಕ ಗೊಬ್ಬರಗಳ ಬೀಜೋಪಚಾರದಿಂದ ಸಂಕರಣ ಗೋವಿನ ಜೋಳದ ಗುಣಮಟ್ಟ ಹಾಗೂ ಬೆಳೆ ಬೆಳವಣಿಗೆಯ ಮೇಲೆ ಉಂಟಾಗುವ ಪ್ರಭಾವ | ಮಧುಕೇಶ್ವರ, ಬಿ. ಪುಟ್ಟಪ್ಪನವರ<br>ಡಾ. ವಿ. ಕೆ. ದೇಶಪಾಂಡೆ<br>ಕೊಟೇಶಿ ಲಮಾಣಿ,<br>ಡಾ. ಎನ್. ಕೆ. ಬಿರಾದಾರಪಾಟೀಲ | 173 – 175 |
| 5 | ಕಾಸಮಾಸ್ ಹೂ ಗಿಡದ ಬೀಜ ಇಳುವರಿ ಹಾಗೂ ಗುಣಮಟ್ಟದ ಮೇಲೆ ಪೋಷಕಾಂಶಗಳ ಪ್ರಮಾಣ ಹಾಗೂ ಸಸಿ ಚಿವುಟುವಿಕೆಯ ಪ್ರಭಾವ | ಮಧುಕೇಶ್ವರ, ಬಿ. ಪುಟ್ಟಪ್ಪನವರ<br>ಡಾ. ವಿ. ಕೆ. ದೇಶಪಾಂಡೆ,<br>ಕೊಟೇಶಿ ಲಮಾಣಿ<br>ಡಾ. ಡಿ. ಎಸ್. ಉಪ್ಪಾರ | 176 – 179 |
| 6 | ಸ್ಥಳೀಯ ಭತ್ತದ ತಳಿಗಳಲ್ಲಿ ಸಾರಜನಕದ ಸಲುವಳಿ ಸಾಮರ್ಥ್ಯದ ಅನುವಂಶೀಯ ವಿರಳಿತ | ಎಮ್.ಎಸ್.ಉಮ<br>ನವೀನ್‌ಕುಮಾರ್ ವಿ. ಎಂ | 179 – 182 |
| 7 | ಬೀಜೋತ್ಪಾದನೆಯಲ್ಲಿ ಲಘುಪೋಷಕಾಂಶಗಳ ಬಳಕೆಯಿಂದ ಬೆಳವಣಿಗೆ, ಬೀಜದ ಇಳುವರಿ ಮತ್ತು ಗುಣಮಟ್ಟದ ಮೇಲಿನ ಪರಿಣಾಮವನ್ನು ಮೂಲಂಗಿಯಲ್ಲಿ ಅಧ್ಯಯನ (ರಾಫಾನಸ್ ಸಟೈವಸ್ ಎಲ್.) ಸಿವಿ.ಅರ್ಕಾನಿಶಾಂತ್ | ದೀಪಿಕಾ, ಸಿ.<br>ಚನ್ನಕೇಶವ, ಬಿ.ಸಿ. | 183 – 185 |
| 8 | ಉಪವನ ನಿರ್ಮಾಣಕ್ಕೊಂದು ಕೈಪಿಡಿ | ನಾಗಭೂಷಣ ಹೆಚ್. ಎಸ್. | 186 – 188 |
| 9 | ಸುಸ್ಥಿರ ಕೃಷಿಯಲ್ಲಿ ದೂರ ಸಂವೇದಿ ಉಪಗ್ರಹಗಳ ಪಾತ್ರ | ಯು. ಕೆ. ಶಾನವಾಡ<br>ಎನ್. ಎಲ್. ರಾಜೇಶ್<br>ಕೆ. ಅಶೋಕರೆಡ್ಡಿ<br>ಡಿ. ಕೆ. ಪ್ರಭುರಾಜ | 188 – 195 |
| 10 | ವಿವಿಧ ರೂಪದ ಗೊಬ್ಬರಗಳನ್ನು ವಿವಿಧ ಮಾದರಿಯಲ್ಲಿ ಹಾಕುವುದರಿಂದ ಮೆಕ್ಕೆಜೋಳದ ಇಳುವರಿ ಮತ್ತು ಪೋಷಕಾಂಶಗಳ ಹೀರುವಿಕೆಯ ಮೇಲಾಗುವ ಪರಿಣಾಮ | ಬಸವರಾಜ, ಪಿ. ಕೆ., ಸಂತೋಷ, ವಿ. ಪಿ<br>ಮೊಹಮ್ಮದ್ ಸಾಖೀಬ್‌ಉಲ್ಲಾ, ಹೆಚ್<br>ಪ್ರದೀಪ್ ಡಿ. | 196 – 200 |
| 11 | ಕರ್ನಾಟಕ ರಾಜ್ಯದ ಜೌಗು, ಸವಳು ಮತ್ತು ಕ್ಷಾರ ಭೂಮಿಗಳ ನಿವಾರಣೆ ಮತ್ತು ಬೆಳೆ ಉತ್ಪಾದಕತೆ ಹೆಚ್ಚಿಸುವಲ್ಲಿ ಒಳಮೈ ಬಸಿಗಾಲುವೆಗಳ ಮಹತ್ವ | ಬಸವರಾಜ, ಪಿ. ಕೆ.<br>ಯೊಗೇಂದ್ರ, ಎನ್.ಡಿ<br>ಮೊಹಮ್ಮದ್ ಸಾಖೀಬ್‌ಉಲ್ಲಾ, ಹೆಚ್.<br>ನಳಿನ, ಸಿ. ಎನ್ | 200 – 206 |
| **(ಆ) ತೋಟಗಾರಿಕೆ, ಅರಣ್ಯ** | | | |
| 1 | ಪಶ್ಚಿಮಘಟ್ಟದ ಮಿರಿಸ್ಟಿಕ ಜೌಗು ಪ್ರದೇಶಗಳ ಸ್ಥಿತಿಗತಿ | ಅಶ್ವತ್, ಎಮ್.ಎನ್<br>ಚರಣ ಕುಮಾರ್, ಮನು, ಟಿ.ಎನ್.,<br>ಬಸವರಾಜು, ಎಸ್ ಕುಶಾಲಪ್ಪ, ಸಿ.ಜಿ | 207 – 208 |
| 2 | ಕೊಡಗಿನ ದೇವರ ಕಾಡುಗಳು ಅರಣ್ಯ ಸಂರಕ್ಷಣೆಯಲ್ಲಿ ಪಾತ್ರವಹಿಸುತ್ತವೆಯೇ..? | ಬಸವರಾಜು, ಎಸ್, ಚರಣ ಕುಮಾರ್<br>ಮನು, ಟಿ.ಎನ್, ಅಶ್ವತ್, ಎಮ್.ಎನ್<br>ಜಡೇಗೌಡ, ಎಮ್.ಕುಶಾಲಪ್ಪ, ಸಿ.ಜಿ | 208 – 210 |

| | | | |
|---|---|---|---|
| 3 | ಕೊಡಗಿನ ಕಾಫಿ, ಕೃಷಿ ಅರಣ್ಯ ಪದ್ಧತಿಯಲ್ಲಿ ಪುನರ್ಪುಳಿ ಮರದ ಜಾತಿಯ ಸ್ಥಿತಿಗತಿ | ಚರಣ ಕುಮಾರ್, ಮನು, ಟಿ.ಎನ್ ಕ್ಲಾರಾ ಮಾನಸ, ರಶ್ಮಿ ದೇಸಾಯಿ, ವರ್ಷ, ಕೆ.ಜೆ | 210 – 211 |
| 4 | ಅರಣ್ಯ ಸಂರಕ್ಷಣೆ ಮತ್ತು ಜೀವ ವೈವಿಧ್ಯತೆ ಕಾಪಾಡುವಲ್ಲಿ ಗಿರಿಜನರ ತಿಳುವಳಿಕೆ | ಮಂಜುನಾಥ್, ಎಸ್.ಪಿ ಚರಣ ಕುಮಾರ್, ಮನು, ಟಿ.ಎನ್, ಜಡೇಗೌಡ, ಎಮ್, ಅಶ್ವತ್, ಎಮ್.ಎನ್ | 212 – 213 |
| 5 | ಮೂಲೆಯಲ್ಲಿದ್ದ ಮುಜಂಟಿ ಜೇನಿಗೆ ಇಂದು ಅತಿ ಹೆಚ್ಚು ಬೇಡಿಕೆ. | ಮನು, ಟಿ.ಎನ್[1]., ಚರಣ ಕುಮಾರ್ ಕೆಂಚರಡ್ಡಿ, ಆರ್.ಎನ್. ಅಶ್ವತ್, ಎಮ್.ಎನ್ | 213 – 215 |


**(ಇ) ಪಶುಸಂಗೋಪನೆ ಮತ್ತು ಮೀನುಗಾರಿಕೆ**


| | | | |
|---|---|---|---|
| 1 | ಅಂದಿನ ಭಾರತದ ನಾಟಿಕೋಳಿಗಳೇ ಇಂದಿನ ವಿಶ್ವದ ಬಹುರೂಪಿ ಕೋಳಿತಳಿಗಳು | ಡಾ. ಸಿ.ಆರ್. ಗೋಪಿನಾಥ್ ಡಾ. ಮಹದೇವಪ್ಪ. ಡಿ. ಗೌರಿ ಡಾ. ಎಚ್.ಎನ್.ನರಸಿಂಹಮೂರ್ತಿ ಡಾ.ರಾಜಕುಮಾರ್ ನಾಗರಹಳ್ಳಿ | 216 – 218 |
| 2 | ನಾಟಿ ಕೋಳಿ ಮೊಟ್ಟೆ ; ಸ್ವಾಬಾವಿಕ, ಉತ್ಕೃಷ್ಟ ಹಾಗು ರಕ್ಷಣಾತ್ಮಕ ಆಹಾರ – ಒಂದು ವಿಶ್ಲೇಷಣೆ | ಡಾ. ಸಿ.ಆರ್. ಗೋಪಿನಾಥ್ ಡಾ. ಮಹದೇವಪ್ಪ. ಡಿ. ಗೌರಿ ಡಾ. ಎಚ್.ಎನ್. ನರಸಿಂಹಮೂರ್ತಿ ಡಾ.ರಾಜಕುಮಾರ ನಾಗರಹಳ್ಳಿ | 218 – 221 |
| 3 | ಅಝೋಲ್ಲಾ : ಸುಸ್ಥಿರ ಪಶುಪಾಲನೆಯಲ್ಲಿ ಪೌಷ್ಠಿಕಾಂಶಭರಿತ ಹಾಗೂ ಕಡಿಮೆ ಖರ್ಚಿನ ಪೂರಕ ಪಶು ಆಹಾರ | ಎ. ಹೆಬ್ಬಾರ್., ಎಮ್.ಟಿ. ಮಹಂತೇಶ್. ಜಿ. ಚಂದ್ರಶೇಖರ್ | 221 – 224 |
| 4 | ಮಾಂಸದ ಕೋಳಿ ಸಾಕಾಣಿಕೆಯಲ್ಲಿ ಪೂರಕ ಕೋಳಿ ಆಹಾರವಾಗಿ ಅಝೋಲ್ಲಾ ಬಳಕೆ | ಎಮ್.ಟಿ. ಮಹಂತೇಶ್. ಎಸ್.ಬಿ. ಗೌಡರ., ಎ. ಹೆಬ್ಬಾರ್., ಜಿ. ಚಂದ್ರಶೇಖರ್ | 225 – 227 |
| 5 | ಜಾನುವಾರುಗಳಲ್ಲಿ ಉಣ್ಣೆಯ ನಿಯಂತ್ರಣ | ಅಶ್ವಿನಿ, ಎಂ.ಎಸ್, ಸಂತೋಷ್ ಕುಮಾರ್, ಸಿ.ಎಸ್ ಪುಟ್ಟಲಕ್ಷಮ್ಮಮ್ಮ, ಜಿ.ಸಿ ಮಮತಾ, ಜಿ.ಎಸ್ | 227 – 229 |
| 6 | ಅಸಂಪ್ರದಾಯಿಕ ಪಶು ಆಹಾರ ಕತ್ತಾಳೆ | ಡಾ. ಮಹದೇವಪ್ಪ. ಡಿ. ಗೌರಿ ಡಾ. ಗೋಪಿನಾಥ್, ಸಿ. ಆರ್ ಡಾ. ಹೆಚ್. ಎನ್. ಎನ್. ಮೂರ್ತಿ ಡಾ. ಪ್ರಸನ್ನ ಎಸ್. ಬಿ | 230 – 233 |
| 7 | ಜಾನುವಾರುಗಳಲ್ಲಿ ಹೈಡ್ರೋಪೋನಿಕ್ ಮೇವು – ಉತ್ಪಾದನೆ ಹಾಗೂ ಅದರ ಪ್ರಾಮುಖ್ಯತೆ – ಒಂದು ಪರಾಮರ್ಶೆ | ಡಾ. ಮಹದೇವಪ್ಪ. ಡಿ. ಗೌರಿ ಡಾ. ಗೋಪಿನಾಥ್, ಸಿ. ಆರ್ ಡಾ. ಹೆಚ್. ಎನ್. ಎನ್. ಮೂರ್ತಿ ಡಾ. ಪ್ರಸನ್ನ ಎಸ್. ಬಿ | 233 – 238 |
| 8 | ಹಳ್ಳಿ ವ್ಯವಸ್ಥೆಯಲ್ಲಿ ಹಸುಗಳಲ್ಲಿ ಕತ್ತಿನ ಅನ್ನನಾಳದ ತಡೆಯನ್ನು ಶಸ್ತ್ರಚಿಕಿತ್ಸೆ ನಡೆಸದೇ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳಿಂದ ಗುಣಪಡಿಸುವ ಮಾರ್ಗ | ಮಂಜುನಾಥ್ ಎಸ್. ಪಿ ಚಂದ್ರೇಗೌಡ ಸಿ.ಟಿ | 238 – 240 |
| 9 | ದನಗಳಲ್ಲಿ ಮೂರನೇ ಕಣ್ಣಿನ ರೆಪ್ಪೆಯ ಕ್ಯಾನ್ಸರ್–ಚಿಕಿತ್ಸೆ ನೀಡಲಾದ 36 ರೋಗಿಗಳ ಪುನರಾವಲೋಕನ | ಮಂಜುನಾಥ್ ಎಸ್. ಪಿ. | 240 – 241 |

# (ಅ) ಕೃಷಿ

## ಸಾವಯವ ಕೃಷಿ ಹಾಗೂ ಮಣ್ಣಿನ ಫಲವತ್ತತೆ

ಆಶೀಫ ಹಾದಿಮನಿ[1] ಮತ್ತು ಗುರು, ಪಿ. ಎನ್[2]

[1]ಅನುವಂಶಿತೆ ಮತ್ತು ತಳಿ ಅಭಿವೃದಿ ವಿಭಾಗ, ಕೃಷಿ ವಿಶ್ವವಿದ್ಯಾಲಯ, ರಾಯಚೂರು–584104, [2]ಕೃಷಿ ಕೀಟಶಾಸ್ತ್ರ ವಿಭಾಗ, ಕೃಷಿ « ±Àé zÁå®AiÀÄ, zsÁgÀªÁqÀ- 580 005. « ÄÄAZÀAZÉ adh4992@gmail.com

**ಪ್ರಬಂಧ ಸಾರ:–** ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ಅಧಿಕ ಆಹಾರ ಉತ್ಪಾದನೆ ಅವಶ್ಯಕತೆಯಿಂದಾಗಿ ನಾವು ನಮ್ಮ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ನೀರು ಹಾಗೂ ಅರಣ್ಯ ಸಂಪತ್ತುಗಳನ್ನು ಸರಿಯಾಗಿ ಕಾಪಾಡಿಕೊಂಡು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳಬೇಕಾಗಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಜಮೀನುಗಳ ಉತ್ಪಾದನಾ ಶಕ್ತಿ ಅರ್ಧದಷ್ಟು ಕಡಿಮೆಯಾದುದು ತಿಳಿದುಬಂದಿದೆ. ಸುಸ್ಥಿರ ಕೃಷಿಯಲ್ಲಿ, ಅಧಿಕ ಇಳುವರಿ ಕೊಡುವ ಹಾಗೂ ಅತ್ಯುತ್ತಮ ಗುಣಮಟ್ಟದ ಬೆಳೆಯನ್ನು ಬೆಳೆಯುವುದಕ್ಕಾಗಿ ಅತೀಯಾಗಿ ರಸಾಯನಿಕ ಗೊಬ್ಬರಗಳು, ಕೀಟ ಹಾಗೂ ಶಿಲೀಂದ್ರ ನಾಶಕಗಳನ್ನು ಉಪಯೋಗಿಸಲಾಗುತ್ತಿದ್ದು ಸಾವಯವ ಗೊಬ್ಬರಗಳ ಬಳಕೆ ಕಡಿಮೆಯಾಗುತ್ತಿರುವುದರಿಂದ ಮಣ್ಣಿನ ಆರೋಗ್ಯದ ಮೇಲೆ ದುಷ್ಪರಿಣಾಮವಾಗಿ ಇಳುವರಿ ಕಡಿಮೆಯಾಗುತ್ತಿದೆ. ಒಂದಲ್ಲ ಒಂದು ಕಾರಣದಿಂದ ಮಣ್ಣು ಸವಕಳಾಗುವುದು ಸರ್ವೆಸಾಮಾನ್ಯ. ಮಣ್ಣು ಸವಕಳಾಗುವುದೆಂದರೆ ಸಾವಯವ ವಸ್ತು ಕಡಿಮೆಯಾಗುತ್ತಿದೆ ಎಂದರ್ಥ. ಸಾವಯವ ವಸ್ತು ಮತ್ತು ಮಣ್ಣಿನ ಇಂಗಾಲ ಬಹುಪಾಲು ಮಣ್ಣಿನ ಮೇಲ್ಪದರದಲ್ಲಿಯೇ ಇರುವುದು. ಇದು ಕೊಚ್ಚಿ ಹೋದರೆ ಭೂಮಿ ಬರಡಾಗುವುದು. ಸಾವಯವ ಕೃಷಿಯಿಂದ ಮಣ್ಣಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ವಾತಾವರಣಗಳು ಉತ್ತಮಗೊಂಡು ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತಾ ಶಕ್ತಿ ಹೆಚ್ಚುವುದು. ಸಾವಯವ ಕೃಷಿಯಲ್ಲಿ ಸಾವಯವ ಗೊಬ್ಬರಗಳು, ಹಸಿರೆಲೆ ಗೊಬ್ಬರಗಳು, ಬೆಳೆ ಉಳಿಕೆಗಳು, ಜೈವಿಕ ಗೊಬ್ಬರಗಳು, ಬೆಳೆ ಪರಿವರ್ತನೆ, ಅಂತರ ಬೆಳೆ ಪದ್ದತಿಗಳು, ಮಣ್ಣಿನ ಹೊದಿಕೆ ಹೀಗೆ ಮುಂತಾದವುಗಳಿಂದ ಮಣ್ಣಿನಲ್ಲಿಯ ಸಾವಯವ ಪದಾರ್ಥದ ಅಂಶವನ್ನು ಹೆಚ್ಚಿಸಿ ಅದರ ಫಲವತ್ತತೆ ಹಾಗೂ ಉತ್ಪಾದನಾ ಶಕ್ತಿ ಅಭಿವೃದ್ಧಿಪಡಿಸಬಹುದಾಗಿದೆ. ಸಾವಯವ ಗೊಬ್ಬರಗಳಿಂದಾಗಿ ಮಣ್ಣಿನ ಸ್ಥೂಲಸಾಂದ್ರತೆ ಕಡಿಮೆಯಾಗಿ, ಬೇರುಗಳು ಚೆನ್ನಾಗಿ ಬೆಳೆದು, ಬೆಳೆಗಳ ಬೆಳವಣಿಗೆಗೆ ಸಹಾಯವಾಗುವುದು. ಮಣ್ಣಿನಲ್ಲಿ ಉರುಟು ಸಾವಯವ ಪದಾರ್ಥದಿಂದ ಭೂಮಿಗೆ ಬೀಳುವ ಮಳೆ ಹನಿಗಳ ಹೊಡೆತ ಕಡಿಮೆಯಾಗುವುದಲ್ಲದೆ, ನೀರಿನ ಹರಿವು ಹಾಗೂ ಮಣ್ಣಿನ ಕೊಚ್ಚಣೆಯು ಕಡಿಮೆಯಾಗುತ್ತದೆ. ಸಾವಯವ ಪದಾರ್ಥವು ಆಚ್ಛಾದನೆಯಂತೆ ಕಾರ್ಯ ನಿರ್ವಹಿಸುವುದರಿಂದ ಮಣ್ಣಿನಿಂದ ನೀರು ಹೆಚ್ಚಿನ ಪ್ರಮಾಣದಲ್ಲಿ ಆವಿಯಾಗುವುದಿಲ್ಲ ಹಾಗೂ ಕೊಚ್ಚಣೆ ಕಡಿಮೆಯಾಗುತ್ತದೆ. ಒಟ್ಟಾಗಿ ಸಾವಯವ ಕೃಷಿಯಿಂದ ಸುಸ್ಥಿರ ಉತ್ಪಾದನೆ ಹಾಗೂ ಮಣ್ಣಿನ ಪಲವತ್ತತೆ ನಿಶ್ಚಿತ.

1. **ಸಾವಯವ ಕೃಷಿ ಹಾಗೂ ಸುಸ್ಥಿರ ಉತ್ಪಾದನೆ:** ಸ್ವಾತಂತ್ರ್ಯ ನಂತರ ಕೃಷಿ ಜ್ಞಾನ ಹಾಗೂ ತಂತ್ರಜ್ಞಾನದ ಅಭಿವೃದ್ಧಿ ಜೊತೆಗೆ ರಾಷ್ಟ್ರೀಯ ಕೃಷಿ ನೀತಿಯಿಂದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪ್ರಚಲಿತದಲ್ಲಿರುವ ಆಧುನಿಕ ಹಾಗೂ ರಸಾಯನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಕೃಷಿ ಪದ್ಧತಿಯಲ್ಲಿ ಅಮೂಲಾಗ್ರ ಬದಲಾವಣೆ ತರಲಾಯಿತು. ಆಧುನಿಕ ಕೃಷಿ, ಇಂಧನ ಮೂಲ ಪರಿಕರಗಳಾದ ರಸಗೊಬ್ಬರಗಳು, ರಸಾಯನಿಕ ಕೀಟನಾಶಕಗಳು, ಶಿಲೀಂಧ್ರನಾಶಕಗಳು, ಕಳೆನಾಶಕಗಳು ಹಾಗೂ ಯಂತ್ರೋಪಕರಣಗಳ ಮೇಲೆ ಹೆಚ್ಚು ಅವಲಂಭಿಸಿ, ಈ ತಂತ್ರಜ್ಞಾನಕ್ಕೆ ಹೆಚ್ಚು ಪ್ರತಿಕ್ರಿಯೆ ಕೊಡುವ ಅಧಿಕ ಇಳುವರಿ ತಳಿಗಳು, ಸಂಕರಣಗಳು ಮತ್ತು ಇತ್ತೀಚೆಗೆ ಕುಲಾಂತರಿ ತಳಿಗಳು ಬೆಳಕಿಗೆ ಬಂದವು. ಈ ಆಧುನಿಕ ತಂತ್ರಜ್ಞಾನ ಜಗತ್ತಿನಾದ್ಯಂತ ಅಲ್ಲದೇ ನಮ್ಮ ದೇಶದಲ್ಲಿ ಕೂಡ 1970 ಹಾಗೂ 1980 ರ ದಶಕಗಳಲ್ಲಿ ಅಳವಡಿಸಿ ಕೃಷಿ ಉತ್ಪಾದನೆ ಹೆಚ್ಚಿಸಲಾಯಿತು. ಇದು ಹಸಿರು ಕ್ರಾಂತಿಯ ಹೆಸರಿನಲ್ಲಿ ಪ್ರಸಿದ್ಧಿ ಪಡೆಯಿತು. ಆಹಾರ ಉತ್ಪಾದನೆಯಲ್ಲಿ ಭಾರತ ಜಗತ್ತಿನಲ್ಲಿಯೆ ಒಂದು ಸ್ವಾವಲಂಬಿ ರಾಷ್ಟ್ರವೆಂಬ ಪ್ರಸಿದ್ಧಿಗೆ ಪಾತ್ರವಾದರೂ ಕೂಡ, ಇತ್ತೀಚೆಗೆ ಆಧುನಿಕ ಬೇಸಾಯದ ಎಲ್ಲ ತಂತ್ರಜ್ಞಾನ ಬಳಸಿಯೂ ದೇಶದ ಸರಾಸರಿ ಕೃಷಿ ಉತ್ಪಾದನಾ ಬೆಳವಣಿಗೆ 3–4 ಪ್ರತಿಶತದಿಂದ ಈಗ 1.5 ಪ್ರತಿಶತಕ್ಕೆ ಕಡಿಮೆಯಾಗಿದೆ ಹಾಗೂ ಮುಂಬರುವ ದಿನಗಳಲ್ಲಿ ದೇಶದ ಆಹಾರ ಭದ್ರತೆಗೆ ಧಕ್ಕೆ ಉಂಟಾಗಬಹುದೆಂದು ಊಹಿಸಲಾಗಿದೆ. ಆಧುನಿಕತೆಯ ಸೋಗಿನಲ್ಲಿ ಕಳೆದ 4 ದಶಕಗಳಲ್ಲಿ ನಾವು ಸಮಗ್ರ ಕೃಷಿ ಪದ್ಧತಿಗಳನ್ನು ಬದಿಗೊತ್ತಿ, ಸಾಕಷ್ಟು ಸಂಶೋಧನಾ ಫಲಿತಾಂಶಗಳು ಲಭ್ಯವಿದ್ದರೂ ಕೂಡ ಗಮನಿಸದೆ ರಸಾಯನಿಕ ಗೊಬ್ಬರಗಳಿಗೆ ಹೆಚ್ಚು ಹೆಚ್ಚು ಉತ್ತೇಜನ ಕೊಟ್ಟು ಬಳಸಲಾಯಿತು. ಇವುಗಳ ಅಸಮತೋಲನ ಬಳಕೆಯಿಂದ ಬೆಳೆ, ಕೀಟ ಮತ್ತು ರೋಗಗಳಿಗೆ ಬೇಗನೇ ತುತ್ತಾಗುತ್ತಿವೆಯಲ್ಲದೆ, ಭೂಮಿಯ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಧರ್ಮಗಳ ಮೇಲೆ ಪ್ರತಿಕೂಲಕರ ಪರಿಣಾಮ ಉಂಟಾಗಿ ಮಣ್ಣಿನ ಆರೋಗ್ಯ ಕ್ಷೀಣಿಸುತ್ತದೆ.

ಹಸಿರು ಕ್ರಾಂತಿಯ ಸಾಧನೆಗಳಿಂದ, ದೇಶವು 70 ಮತ್ತು 80 ರ ದಶಕಗಳಗಳಲ್ಲಿ ಅಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಕಂಡುಕೊಂಡಿತು. ಆದರೆ ಈ ಬೆಳವಣಿಗೆ 1990 ರಿಂದೀಚೆಗೆ ಮಂಕಾಗಿ ಉತ್ಪಾದನಾ ಬೆಳವಣಿಗೆ ಕುಂಠಿತಗೊಂಡು (1.5%) ಹಾಗೂ ಅದು ಜನಸಂಖ್ಯೆ ಬೆಳವಣಿಗೆಗಿಂತ (1.70%) ಕಡಿಮೆಯಾಗಿ, ಮುಂಬರುವ ದಿನಗಳಲ್ಲಿ ದೇಶದ ಆಹಾರ ಭದ್ರತೆಗೆ ಗಂಡಾಂತರ ಬಂದೊದಗಬಹುದೆಂಬ ಸೂಚನೆ ಎದ್ದು ಕಾಣತೊಡಗಿದೆ. ಆಧುನಿಕ ಕೃಷಿಯ ನೆಪದಲ್ಲಿ, ನಾವು ಪಾರಂಪರಿಕವಾಗಿ ಅನುಸರಿಸಿಕೊಂಡು ಬರುತ್ತಿರುವ ನಮ್ಮ ಸುಸ್ಥಿರ ಕೃಷಿ ಪದ್ಧತಿಗಳ ಕಡೆ ಗಮನ ಕೊಡದೆ, ರಸಾಯನಿಕಗಳಿಂದ ಹೆಚ್ಚು ಪ್ರಚೋದನೆಗೊಂಡು, ಕೃಷಿಯನ್ನು ಒಂದು ಯಂತ್ರವನ್ನಾಗಿ ಪರಿವರ್ತಿಸಲು ಹೊರಟಿದ್ದೇವೆ. ಆದರೆ, ಇದು ಈ ಕ್ಷೇತ್ರದ ಅಸ್ಥಿರತೆಗೆ ಕಾರಣವಾಗುತ್ತದೆ ಎಂದು ಸಾಕಷ್ಟು ಅಧ್ಯಯನಗಳಿಂದ ಕಂಡುಬಂದಿದೆ. ಈ ಆಧುನಿಕ ಕೃಷಿಯಲ್ಲಿ ರಾಸಾಯನಿಕಗಳ ಜೊತೆಗೆ ಪಾರಂಪರಿಕವಾಗಿ ಅನುಸರಿಸಿಕೊಂಡು ಬಂದಿದ್ದ ಜೈವಿಕ ಕೃಷಿ ಅಥವಾ ಸಾವಯವ ಕೃಷಿ ಪದ್ಧತಿಗಳನ್ನು ಅನುಸರಿಸಿಕೊಂಡಿದ್ದರೆ ಕೃಷಿಕ್ಷೇತ್ರ ಹೇಗಿರುತ್ತಿತ್ತು ಹಾಗೂ ನಮ್ಮ ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ ಒಂದು ಪ್ರಶ್ನೆಯಾಗಿಯೇ ಉಳಿದಿದೆ. ವಿವಿಧ ಬೆಳೆಗಳಲ್ಲಿ ಉತ್ಪಾದನಾ ಮಟ್ಟ ಕಾಯ್ದುಕೊಂಡು ಬರಲು ರಸಗೊಬ್ಬರಗಳ ಬಳಕೆ ಪ್ರಮಾಣ ಹೆಚ್ಚಾಗುತ್ತಿದೆ ಹೊರತು ಕಡಿಮೆಯಾಗುತ್ತಿಲ್ಲ. ಅಲ್ಲದೇ, ಇದರ ಪರಿಣಾಮ ಮಣ್ಣಿನ ಆರೋಗ್ಯ ಹಾಗೂ ಬೆಳೆಗಳ ಆರೋಗ್ಯದ ಮೇಲೆ ಉಂಟಾಗಿ

ಕೀಟರೋಗದ ಭಾದೆ ತೀವ್ರಗೊಂಡಿದೆ. ಈ ಕೀಟರೋಗಗಳ ನಿಯಂತ್ರಣಕ್ಕೆ ಹೆಚ್ಚು ಹೆಚ್ಚು ವಿಷಕಾರಕ ಕೀಟೌಷದಿಗಳನ್ನು ಹಾಗೂ ಶಿಲೀಂದ್ರನಾಶಕಗಳನ್ನು ಬಳಸುತ್ತಿದ್ದು ಇದರಿಂದ ವಾತಾವರಣ ಕಲುಷಿತಗೊಳ್ಳುತ್ತಿದೆ. ಈ ದಿಸೆಯಲ್ಲಿ ಸಾವಯವ ಕೃಷಿ ಜಗತ್ತಿನಾದ್ಯಂತ ರಸಾಯನಿಕ ಕೃಷಿಗೆ ಒಂದು ಪರ್ಯಾಯ ಕೃಷಿಯಾಗಿ ಅಭಿವೃದ್ಧಿ ಹೊಂದುತ್ತಿದ್ದು, ಕೃಷಿ ಕ್ಷೇತ್ರದ ಅಭಿವೃದ್ಧಿಯಲ್ಲದೆ, ನೈಸರ್ಗಿಕ ಸಂಪನ್ಮೂಲಗಳ ಗುಣಮಟ್ಟದಲ್ಲಿ ಅಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆ ಸಾವಯವ ಕೃಷಿಯ ಮುಖ್ಯ ಉದ್ಧೇಶವಾಗಿದೆ.

ಸಾವಯವ ಕೃಷಿಯು ಒಂದು ಸಮಗ್ರ ಕೃಷಿ ಉತ್ಪಾದನಾ ನಿರ್ವಹಣಾ ಪದ್ಧತಿಯಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ವಿಧಾನಗಳನ್ನು ಅನುಸರಿಸಿ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಬರುವುದು ಹಾಗೂ ಪರಿಸರ ಸ್ನೇಹಿ ಜೈವಿಕ ವಿಧಾನಗಳಿಂದ ಕಳೆ, ಕೀಟ ಮತ್ತು ರೋಗಗಳ ನಿರ್ವಹಣೆ ಕೈಗೊಂಡು, ನೈಸರ್ಗಿಕ ಸಂಪನ್ಮೂಲಗಳನ್ನು ವೃದ್ಧಿಸುವುದು ಹಾಗೂ ಗುಣಮಟ್ಟದ ಆಹಾರ ಉತ್ಪಾದಿಸುವ ಸುಸ್ಥಿರ ಬೇಸಾಯ ಪದ್ಧತಿ. ಸಾವಯವ ಕೃಷಿ ಅಂದರೆ ರಸಾಯನಿಕ ಗೊಬ್ಬರ, ಕೀಟೌಷಧಿಗಳನ್ನು, ಶಿಲೀಂದ್ರನಾಶಕಗಳನ್ನು ಹಾಗೂ ಕಳೆನಾಶಕಗಳನ್ನು ಬಳಸದೇ ಇರುವದಕ್ಕೆ ಮಾತ್ರ ಸೀಮಿತವಾಗಿರದೆ, ಇದು ನೈಸರ್ಗಿಕ ತತ್ವಗಳನ್ನು ಆಧರಿಸಿ ಕೈಗೊಳ್ಳುವ ಒಂದು ಸುಸ್ಥಿರ ಬೇಸಾಯ ಪದ್ಧತಿಯಾಗಿದೆ. ಸಾವಯವ ಕೃಷಿ, ಸಾಧ್ಯವಾದಷ್ಟು ಹೊರಗಡೆಯಿಂದ ಖರೀದಿಸಿದ ಕೃಷಿ ಪರಿಕರಗಳನ್ನು ಬಳಸದೇ, ತಮ್ಮ ಕ್ಷೇತ್ರದಲ್ಲಿ ಉತ್ಪಾದನೆಯಾದ ಸಸ್ಯ ಜನ್ಯ ಹಾಗೂ ಪ್ರಾಣಿ ಜನ್ಯ ಪೋಷಕಾಂಶಗಳು, ಕೀಟೌಷಧಿಗಳು, ಸಸ್ಯ ವರ್ಧಕಗಳು ಹಾಗೂ ಬೀಜ, ಸಸಿಗಳನ್ನು ಅಭಿವೃದ್ಧಿ ಪಡಿಸಿ ಬಳಸಲು ಹೆಚ್ಚು ಪ್ರಾಮುಖ್ಯತೆ ಕೊಡುತ್ತದೆ. ಸ್ಥಳೀಯ ಸಂಪನ್ಮೂಲಗಳು ಸಾಲದೇ ಹೋದರೆ ಅವಶ್ಯವಿದ್ದ ಪಕ್ಷದಲ್ಲಿ ಹೊರಗಿನಿಂದ ಸಾವಯವ ಪರಿಕರಗಳನ್ನು ಬಳಸುವ ಒಂದು ವ್ಯವಸ್ಥೆ ಕಲ್ಪಿಸಿಕೊಳ್ಳಬಹುದು.

ಆಧುನಿಕ ಕೃಷಿಯ ಕೆಲವೊಂದು ನ್ಯೂನ್ಯತೆಗಳಾದ ಏಕಬೆಳೆ ಪದ್ಧತಿ, ಅನಿಯಂತ್ರಿತ ನೀರಾವರಿ, ಅಸಮರ್ಪಕ ರಸಗೊಬ್ಬರಗಳ ಹಾಗೂ ಪೀಡೆನಾಶಕಗಳ ಬಳಕೆ, ಕೃಷಿ ಉತ್ಪಾದನಾ ಮಟ್ಟ ಕಾಯ್ದುಕೊಂಡು ಬರಲು ಸಾಧ್ಯವಾಗುತ್ತಿಲ್ಲ. ಉತ್ಪಾದನಾ ಮಟ್ಟ ಕಾಯ್ದುಕೊಳ್ಳಲು ಉತ್ತಮ ಬೇಸಾಯ ಪದ್ಧತಿಗಳ ಕಡೆ ಲಕ್ಷ ಕೊಡದೆ ಇಂದು ಹೆಚ್ಚು ಹೆಚ್ಚು ರಸಾಯನಿಕ ಗೊಬ್ಬರಗಳನ್ನು ಹಾಗೂ ಕೀಟ ನಾಶಕಗಳನ್ನು ಬಳಸಲಾಗುತ್ತಿದೆ. ರಸಾಯನಿಕಗಳು ಅದರಲ್ಲೂ ಪ್ರಮುಖವಾಗಿ ನೈಟ್ರೇಟ ನೀರಿನ ಮೂಲ ಸೇರಿ, ನೀರು ಮನುಷ್ಯರಿಗೆ, ಪ್ರಾಣಿಗಳಿಗೆ ಹಾಗೂ ಪಕ್ಷಿಗಳಿಗೆ ಬಳಸಲು ಅನುಪಯುಕ್ತವಾಗುತ್ತಿದೆ. ಅಲ್ಲದೇ, ಕೀಟನಾಶಕಗಳು ವಾತಾವರಣದಲ್ಲಿ ಹೆಚ್ಚು ಹೆಚ್ಚು ಉಳಿಕೆ ಪ್ರಮಾಣ ಹೊಂದಿ ಉದಾ : ಡಿ.ಡಿ.ಟಿ, ಬಿ.ಎಚ್.ಸಿ, ಮಿಥೈಲ್ ಪ್ಯಾರಾಥಿಯಾನ ಇತ್ಯಾದಿ. ಪ್ರಾಣಿ, ಪಕ್ಷಿಗಳಿಗೆ, ಮಣ್ಣಿನಲ್ಲಿರುವ ಜೀವ ಜಂತುಗಳಿಗೆ ಹಾಗೂ ಸೂಕ್ಷ್ಮಾಣುಗಳಿಗೆ ವಿಷಕಾರಕವಾಗಿ ಜೀವ ವೈವಿದ್ಯತೆಗೆ ದಕ್ಕೆ ತಂದೊಡುತ್ತಿವೆ ಎಂದರೆ ತಪ್ಪಾಗಲಿಕ್ಕಿಲ್ಲ, ಕಾಸರಗೋಡದಲ್ಲಿ 1990 ರಲ್ಲಿ ಗೇರು ಬೆಳೆ ಮೇಲೆ ಬಳಸಿದ ಎಂಡೋಸಲ್ಫಾನ್ ಎಂಬ ಕೀಟನಾಶಕ ವಾತಾವರಣ ಸೇರಿ ಇದರ ಉಳಿಕೆ ಪರಿಣಾಮ ಜನ, ಜಾನುವಾರು ಹಾಗೂ ಪ್ರಾಣಿ ಪಕ್ಷಿಗಳ ಮೇಲೆ ಇಲ್ಲಿಯವರೆಗೆ ಉಂಟಾಗಿದ್ದು, ಕೀಟನಾಶಕಗಳ ಬಳಕೆ ಮುಂದುವರಿಸಬೇಕೆ ಹಾಗೂ ಯಾರ ಒಳತಿಗಾಗಿ ಮಾಡಬೇಕು ಎಂಬುದು ಪ್ರಶ್ನೆಯಾಗಿದೆ.

ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ ಅಂತರ್ಜಲ, ನೈಟ್ರೇಟ ಪ್ರಮಾಣ ಹೆಚ್ಚಾಗಿ ಕಲುಶಿತಗೊಳ್ಳುತ್ತಿದೆ. ನಮ್ಮ ದೇಶದ ಅಂತರ್ಜಲದಲ್ಲಿ ನೈಟ್ರೇಟ ಅಂಶ 0.1–870 ಮಿ. ಗ್ರಾ / ಲೀ ಪ್ರಮಾಣದಲ್ಲಿದ್ದು, ಸರಾಸರಿ ಇದು 65 ಮಿ. ಗ್ರಾ ಪ್ರತಿ ಲೀಟರ್ ನೀರಿನಲ್ಲಿದೆ. ನೈಟ್ರೇಟ ಪ್ರಮಾಣವು ರಾಷ್ಟ್ರದ 11 ರಾಜ್ಯಗಳಲ್ಲಿ ನಿಗಧಿತ 45 ಪಿ.ಪಿ.ಎಮ್ (ಟಂ/ಟ) ಗಿಂತ ಹೆಚ್ಚಿದ್ದುದು ಕಂಡುಬಂದಿದೆ. ಅಂತರ್ಜಲ ಕಲುಶಿತತೆ ಪ್ರಮಾಣ, ಮಣ್ಣಿನ ಗುಣಧರ್ಮ, ಗೊಬ್ಬರಗಳ ಹಾಗೂ ಪೀಡೆನಾಶಕಗಳ ಬಳಕೆ ಪ್ರಮಾಣ, ಅವುಗಳ ವಿಭಜನೆ ಹಾಗೂ ಮಣ್ಣಿನಲ್ಲಿರುವ ಸಾವಯವ ಅಂಶದ ಮೇಲೆ ಅವಲಂಬಿಸಿದೆ. ಮಾಹಾರಾಷ್ಟ್ರ ರಾಜ್ಯದಲ್ಲಿ ನೈಟ್ರೇಟ್ ಕಲುಶಿತತೆ ಪ್ರಮಾಣ ದೇಶದಲ್ಲಿಯೇ ಅತ್ಯಂತ ಹೆಚ್ಚಾಗಿದೆ. ಕೇಂದ್ರೀಯ ಅಂತರ್ಜಲ ನಿಗಮ ಕೈಗೊಂಡ ಒಂದು ಸಮೀಕ್ಷೆಯ ಪ್ರಕಾರ 25 ಪ್ರತಿಶತ ಅಂತರ್ಜಲ ನಿಗದಿತ ಮಟ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನೈಟ್ರೇಟ ಹೊಂದಿದ್ದು ಅದರಲ್ಲಿ 14 ಪ್ರತಿಶತ ನಮೂನೆಗಳು 100 ಪಿ.ಪಿ.ಎಮ್‌ಗಿಂತ ಹೆಚ್ಚಿನ ಪ್ರಮಾಣದಲ್ಲಿ ನೈಟ್ರೇಟ ಹೊಂದಿವೆ. ಅಂತರ್ಜಲ ನೈಟ್ರೇಟದಿಂದ ಕಲುಶಿತಗೊಳ್ಳುವುದು ಜಗತ್ತಿನಾದ್ಯಂತ ಸಾಮಾನ್ಯವಾಗಿದ್ದರೂ ಕೂಡ ಇದರ ಪ್ರಮಾಣ ಕುಡಿಯುವ ನೀರಿನಲ್ಲಿ ಹೆಚ್ಚಾದಾಗ ಮನುಷ್ಯರಿಗೆ, ದನಕರು, ಪ್ರಾಣಿ ಹಾಗೂ ಪಕ್ಷಿಗಳಿಗೆ ಹಾನಿ ಉಂಟುಮಾಡುತ್ತದೆ.

ಜಾಗತಿಕ ಬ್ಯಾಂಕಿನ ಒಂದು ಅಧ್ಯಯನದ ಪ್ರಕಾರ ನೈಟ್ರೇಟ ಕಲುಶಿತಗೊಂಡಿರುವುದು ಕರ್ನಾಟಕದ ಎಲ್ಲಾ ನೀರಾವರಿ ಪ್ರದೇಶದಲ್ಲಿ ಸಾಮಾನ್ಯವಾಗಿದೆ. ಆದರೆ ಪಂಜಾಬ ಮತ್ತು ಹರಿಯಾಣ ರಾಜ್ಯಗಳಲ್ಲಿ ಪ್ರತಿಶತ 33 ರಷ್ಟು ಮಾದರಿಗಳು ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿಗೆ ನೈಟ್ರೇಟ ಅಂಶ ಹೊಂದಿದ್ದು ಕಂಡು ಬಂದಿದೆ. ಗುಜರಾತ, ರಾಜಸ್ಥಾನ ಮತ್ತು ಪಶ್ಚಿಮಬಂಗಾಳ ರಾಜ್ಯಗಳಲ್ಲೂ ಕೂಡ ಅಂತರ್ಜಲ ನೈಟ್ರೇಟದಿಂದ ಕಲುಶಿತಗೊಂಡಿದೆ. ನೈಟ್ರೇಟನಿಂದ ಅಂತರ್ಜಲ ಕಲುಶಿತಗೊಳ್ಳುವುದು ಆಧುನಿಕ ಕೃಷಿ ಹಾಗೂ ಸಾವಯವ ಕೃಷಿ ಪದ್ಧತಿಗಳಲ್ಲಿ ಕೂಡ ಕಂಡುಬಂದಿದ್ದು ಇದರ ಪ್ರಮಾಣ ಆಧುನಿಕ ಕೃಷಿಯಲ್ಲಿ ಹೆಚ್ಚಾಗಿದೆ. ಇದಕ್ಕೆ ಪ್ರಮುಖ ಕಾರಣ ಆಧುನಿಕ ಕೃಷಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಸಾಯನಿಕ ಗೊಬ್ಬರಗಳನ್ನು ಬಳಸುತ್ತಿರುವುದು. ಒಂದು ಅಧ್ಯಯನದ ಪ್ರಕಾರ ಸಾರಜನಕ ನೈಟ್ರೇಟ ರೂಪದಲ್ಲಿ ಹಾನಿಯಾಗುವ ಪ್ರಮಾಣ ವಿವಿಧ ಬೆಳೆಗಳಲ್ಲಿ ಸಾವಯವ ಕೃಷಿಯಲ್ಲಿ 47 ಕೆಜಿ/ಹೆ ಇದ್ದರೆ ಅದು ರಾಸಾಯನಿಕ ಕೃಷಿಯಲ್ಲಿ 58 ಕೆಜಿ/ಹೆ ಇದ್ದಿದ್ದು ಕಂಡುಬಂದಿದೆ. ಇದರಿಂದ ಸಾವಯವ ಕೃಷಿಯಲ್ಲಿ ನೈಟ್ರೇಟ ಪೋಲಾಗುವುದು ಕಡಿಮೆ ಎನ್ನಬಹುದು. ಸಾವಯವ ಕೃಷಿ ಹಾಗೂ ಉತ್ತಮ ಬೇಸಾಯ ಕ್ರಮಗಳನ್ನು ಅನುಸರಿಸುವದರಿಂದ ಅಂತರ್ಜಲ ನೈಟ್ರೇಟದಿಂದ ಕಲುಶಿತಗೊಳ್ಳುವದನ್ನು ಕಡಿಮೆಗೊಳಿಸಬಹುದು.

ನಮ್ಮ ದೇಶದಲ್ಲಿ ಸದ್ಯ 145 ಪೀಡೆನಾಶಕಗಳನ್ನು ಉಪಯೋಗಿಸಲಾಗುತ್ತಿದ್ದು ಸುಮಾರು 85 ಸಾವಿರ ಮೆಟ್ರಿಕ ಟನ್ ಪೀಡೆನಾಶಕ ಬಳಸಲಾಗುತ್ತಿದೆ. ಇವುಗಳ ಅವೈಜ್ಞಾನಿಕ ಬಳಕೆಯಿಂದ ಪರಿಸರ, ಪ್ರಾಣಿ, ಜಾನುವಾರುಗಳ ಹಾಗೂ ಜನರ ಮೇಲೆ ಪ್ರತಿಕೂಲಕರ ಪರಿಣಾಮ ಉಂಟಾಗುತ್ತಿದೆ. ನಮ್ಮ ದೇಶದಲ್ಲಿ ಪೀಡೆನಾಶಕಗಳ ಬಳಕೆ 0.5 ಕೆಜಿ ಪ್ರತಿ ಹೆಕ್ಟೇರಿಗೆ ಇದ್ದು, ಇದು ಕೊರಿಯಾ ಮತ್ತು ಜಪಾನ ದೇಶಗಳಿಗೆ ಹೋಲಿಸಿದರೆ (6.6 ಮತ್ತು 7.0 ಕೆಜಿ/ಹೆ ಅನುಕ್ರಮವಾಗಿ) ಕಡಿಮೆ ಎನ್ನಬಹುದು. ಆದರೂ ಕೂಡ ಪ್ರತಿಶತ 51 ರಷ್ಟು ಆಹಾರ ಪದಾರ್ಥಗಳು ಇವುಗಳಿಂದ ಕಲುಶಿತಗೊಂಡಿವೆ. ಇದರಲ್ಲಿ 20 ರಷ್ಟು ಆಹಾರ ಪದಾರ್ಥಗಳು ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಉಳಿಕೆ ಪ್ರಮಾಣ ಇದ್ದದ್ದು ಕಂಡುಬಂದಿದೆ. ಇದರಿಂದ ರೋಗ ತಡೆದುಕೊಳ್ಳುವ ಸಾಮರ್ಥ್ಯ(ನಿರೋಧಕತೆ) ಕಳೆದುಕೊಂಡು, ಹಾರ್ಮೋನುಗಳ ಅಸಮತೋಲನ, ಬುದ್ಧಿಮಂದತ್ವ, ಕ್ಯಾನ್ಸರ, ಗರ್ಭಪಾತ ಇತ್ಯಾದಿ ರೋಗಗಳಿಂದ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿದೆ. (ಟೋಕ್ಸಿಕೋಲೊಜಿ 20 ಮೇ, 2004).

ಇನ್ನೊಂದು ವಿಷಾದಕರ ಸಂಗತಿ ಎಂದರೆ, ನಮ್ಮ ದೇಶದಲ್ಲಿ ಒಟ್ಟು ಪೀಡೆನಾಶಕಗಳ ಪ್ರತಿಶತ 76 ರಷ್ಟನ್ನು ಕೀಟನಾಶಕಗಳಾಗಿ ಬಳಸಲಾಗುತ್ತಿದ್ದು, ಇವು ಕಳೆನಾಶಕ ಹಾಗೂ ಶಿಲೀಂದ್ರನಾಶಕಗಳಿಗಿಂತ ಹೆಚ್ಚು ಹಾನಿಕಾರಿಯಾಗಿವೆ. ಇದು ಅಲ್ಲದೆ

ಒಟ್ಟು ಪೀಡೆನಾಶಕಗಳ ಪೈಕಿ ಪ್ರತಿಶತ 45 ರಷ್ಟನ್ನು ಹತ್ತಿಯಲ್ಲಿ ಬಳಸುತ್ತಿದ್ದು, ತದನಂತರ ಭತ್ತ ಹಾಗೂ ಗೋದಿ ಪ್ರಮುಖ ಬೆಳೆಗಳಾಗಿವೆ. ಈ ಪೀಡೆನಾಶಕಗಳು ಅಂತರ್ಜಲ ಸೇರಿ ಅದನ್ನು ಕಲುಶಿತಗೊಳಿಸುತ್ತಿವೆ. ಹರಿಯಾಣದಲ್ಲಿ ಕೈಗೊಂಡ ಅಧ್ಯಯನದಿಂದ ಪ್ರತಿಶತ 80 ರಷ್ಟು ಮಳೆನೀರಿನ ಮಾದರಿಯಲ್ಲಿ 0.5 ಪಿ.ಪಿ.ಬಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕೀಟನಾಶಕ ಉಳಿಕೆಗಳು ಕಂಡುಬಂದಿವೆ. ಪೀಡೆನಾಶಕಗಳನ್ನು ಬೆಳೆಗಳಲ್ಲಿ ಸಿಂಪರಣೆ ಮಾಡಿದಾಗ ಅದರಿಂದ ಮಣ್ಣಿನಲ್ಲಿರುವ ಸೂಕ್ಷ್ಮಾಣುಜೀವಿಗಳು, ಉಪಯುಕ್ತ ಕೀಟಗಳು, ಇತರೆ ಜೀವಜಂತುಗಳು. ಮೀನು, ಪ್ರಾಣಿ, ಪಕ್ಷಿಗಳು ಹಾಗೂ ವನ್ಯಜೀವಿಗಳ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಮಣ್ಣಿನಲ್ಲಿ ಸಮರ್ಪಕ ಪೋಷಕಾಂಶಗಳ ಪೂರೈಕೆಗೆ ಸೂಕ್ಷ್ಮಾಣು ಜೀವಿಗಳ ಜೈವಿಕ ಕ್ರಿಯೆ ಬಹಳ ಅವಶ್ಯ. ಈ ಜೀವಿಗಳು ಸಾವಯವ ಪದಾರ್ಥ ವಿಭಜನೆಗೊಳಿಸಿ, ಪೋಷಕಾಂಶಗಳನ್ನು ಪರಿವರ್ತನೆಗೊಳಿಸಿ ಬೆಳೆಗೆ ಲಭಿಸುವಂತೆ ಮಾಡುತ್ತವೆ. ಆದರೆ ಹೆಚ್ಚು ಹೆಚ್ಚು ರಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳ ಬಳಕೆಯಿಂದ ಮಣ್ಣಿನ ಜೈವಿಕ ಕ್ರಿಯೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ.

**2. ಸಾವಯವ ಕೃಷಿ ಹಾಗೂ ಆಹಾರ ಭದ್ರತೆ :** ಇತ್ತೀಚೆಗೆ, ನಾವು ಆಹಾರ ಸ್ವಾವಲಂಬನೆಯನ್ನು ಕಳೆದುಕೊಳ್ಳುತ್ತಿದ್ದೇವೆ ಎಂದೆನಿಸುತ್ತಿದೆ. ರಾಷ್ಟ್ರೀಯ ಆಹಾರ ಭದ್ರತೆ ಆಂದೋಲನ, ಸುಮಾರು ಎಂಟು ಸಾವಿರ ಕೋಟಿ ರೂಪಾಯಿಗಳ ಅಂದಾಜಿನ ಒಂದು ಯೋಜನೆ ಹಾಕಿಕೊಂಡಿದ್ದು, ಆಹಾರ ಉತ್ಪಾದಕತೆಯನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಇನ್ನೊಂದೆಡೆ ಆಹಾರ ಪದಾರ್ಥಗಳ ಆಮದು ಶುಲ್ಕವನ್ನು ಕಡಿಮೆ ಮಾಡಿರುವುದು ವಿಷಾದನೀಯ. ಇದರಿಂದ ನಮ್ಮ ಆಂತರಿಕ ಆಹಾರ ಉತ್ಪಾದನೆಗೆ ಪ್ರೋತ್ಸಾಹ ದೊರೆಯುವುದಿಲ್ಲ ಉದಾ : 1997–98 ರಲ್ಲಿ 1.2 ಮಿಲಿಯನ್ ಟನ್‌ದಷ್ಟು ಖಾದ್ಯ ತೈಲನ್ನು ಆಮದು ಮಾಡಿಕೊಂಡಿದ್ದು ಈಗ ಅದು ಗರಿಷ್ಟ ಪ್ರಮಾಣ 5.98 ಮಿಲಿಯನ್ ಟನ್‌ಗೆ ಮುಟ್ಟಿದೆ. ನಮ್ಮ ದೇಶ ಜಗತ್ತಿನಲ್ಲಿಯೇ ಅತೀ ಹೆಚ್ಚು ಎಣ್ಣೆ ಆಮದು ಮಾಡಿಕೊಳ್ಳುವ ದೇಶವಾಗಿದೆ. ಇನ್ನೊಂದೆಡೆ ನಾವು ಕೂಲಂಕುಷವಾಗಿ ಅಧ್ಯಯನ ಮಾಡಿದರೆ ನಮ್ಮ ದೇಶದ ಪ್ರತಿಯೊಬ್ಬರಿಗೆ ಪ್ರತಿದಿನ ದೊರೆಯುವ ಆಹಾರದ ಪ್ರಮಾಣ 1980 ರಲ್ಲಿ 476.5 ಗ್ರಾಂ ಇದ್ದದ್ದು 2006 ರಲ್ಲಿ 445 ಗ್ರಾಂ ಗೆ ಕಡಿಮೆಯಾಗಿದೆ. ಇದು 2005 ನೇ ಇಸ್ವಿಯಲ್ಲಿ 422 ಗ್ರಾಂ ದಷ್ಟಿತ್ತು. ಇನ್ನೂ ದ್ವಿದಳ ಧಾನ್ಯಗಳ ಲಭ್ಯತೆ 1951ರಲ್ಲಿ ಸರಾಸರಿ 60.7 ಗ್ರಾಂ ಪ್ರತಿಯೊಬ್ಬರಿಗೆ ಪ್ರತಿ ದಿನಕ್ಕೆ ಇದ್ದದ್ದು, 5 ದಶಕಗಳ ನಂತರ ಇದು 32.5 ಗ್ರಾಂ ಪ್ರತಿಯೊಬ್ಬರಿಗೆ ಪ್ರತಿದಿನಕ್ಕೆ ಕಡಿಮೆ ಯಾಗಿದ್ದು ಶೋಚನೀಯ. ಇನ್ನೊಂದು ಅಂಶ ನಾವು ವಿವಿಧ ಕಾರ್ಯಕ್ರಮಗಳಲ್ಲಿ ದ್ವಿದಳ ಧಾನ್ಯದ ಬೆಳೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿಲ್ಲ. ಭಾರತ ಸಸ್ಯಹಾರ ಪ್ರಧಾನ ದೇಶವಾಗಿದ್ದು, ನಾವು ಪೌಷ್ಠಿಕ ಆಹಾರ ಪೂರೈಕೆ ಮಾಡಲು ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸುವ ವಿಶೇಷ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕು. 1996 ರಿಂದ 2006 ರ ವರೆಗೆ ಒಟ್ಟಾರೆ ಕೃಷಿ ಬೆಳವಣಿಗೆ ಪ್ರತಿಶತ 2 ಕ್ಕಿಂತ ಕಡಿಮೆ ಇದ್ದದ್ದು, ಅದರಲ್ಲೂ ಆಹಾರ ಧಾನ್ಯಗಳ ಬೆಳವಣಿಗೆ ಬಹಳ ಕಡಿಮೆಯಾಗಿದೆ. ಈ ಸಂಗತಿಯಿಂದ ನಮ್ಮ ದೇಶದ ಆಹಾರ ಸುರಕ್ಷತೆಗೆ ಬಲವಾದ ಪೆಟ್ಟು ಬಿದ್ದಿದೆ. ಈ ಬೆಳವಣಿಗೆ ಜಗತ್ತಿನಾದ್ಯಂತ ಕೂಡ ಕಂಡು ಬರುತ್ತಿದ್ದು, ಭಾರತ ತನ್ನ ಆಂತರಿಕ ಆಹಾರ ಭದ್ರತೆ ಕಾಯ್ದುಕೊಳ್ಳುವುದು ಅವಶ್ಯವಾಗಿದೆ ಇದು ಬೆಳೆಯುತ್ತಿರುವ ಜನಸಂಖ್ಯೆಗೆ ಸರಿದೂಗುವಂತಿರಬೇಕು. ಆಹಾರ ಸುಭದ್ರತೆಯ ಸಮಸ್ಯೆ ಒಂದೆಡೆಯಾದರೆ, ಇನ್ನೊಂದೆಡೆ ಕೃಷಿ ಉತ್ಪಾದನಾ ವೆಚ್ಚ ನಿರಂತರವಾಗಿ ಹೆಚ್ಚುತ್ತಿದ್ದು, ನಿವ್ವಳ ಆದಾಯ ಕಡಿಮೆಯಾಗುತ್ತಿದೆ. ಬಾಹ್ಯ ಪರಿಕರಗಳಾದ ಬೀಜ, ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ಕಳೆನಾಶಕಗಳು, ಶಿಲೀಂದ್ರನಾಶಕಗಳು ಹಾಗೂ ಇಂಧನಗಳ ಬೆಲೆ ಹೆಚ್ಚುತ್ತಿದ್ದು ಕೃಷಿ ವೆಚ್ಚ ಅಧಿಕಗೊಳ್ಳುತ್ತಿದೆ. ಇದಕ್ಕೆ ಪೂರಕವಾಗಿ ಕೃಷಿ ಉತ್ಪನ್ನಗಳ ಬೆಲೆ ವೃದ್ಧಿಯಾಗದೆ ಅಥವಾ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗದೆ ಕೃಷಿ ಲಾಭದಾಯಕವಲ್ಲ ಎಂಬ ಕೂಗು ಕೇಳಿಬರುತ್ತಿದೆ. ರಾಸಾಯನಿಕ ಗೊಬ್ಬರಗಳ ಉತ್ಪಾದನೆಗೆ ಬೇಕಾಗುವ ಕಚ್ಚಾವಸ್ತುಗಳ ಪೂರೈಕೆ ಕಡಿಮೆಯಾಗಿ ಇದರಿಂದ ರಂಜಕ ಹಾಗೂ ಪೊಟ್ಯಾಶ್ ಗೊಬ್ಬರಗಳ ಕೊರತೆ ಕೂಡ ಉಂಟಾಗಿದೆ. ಈ ಎಲ್ಲಾ ಕಾರಣಗಳಿಂದ ಸದ್ಯದ ಕೃಷಿ ಪದ್ಧತಿಯಿಂದ ಉತ್ಪಾದನೆ ಹೆಚ್ಚಿಸುವುದು, ಸಂಪನ್ಮೂಲಗಳನ್ನು ಸಂರಕ್ಷಿಸುವುದು ಹಾಗೂ ಅವಶ್ಯವಿರುವ ಪ್ರಮಾಣದಲ್ಲಿ ಹಾಗೂ ಪೌಷ್ಟಿಕ ಆಹಾರ ಪೂರೈಕೆ ಮಾಡುವುದು ಕಷ್ಟದಾಯಕ. ಈ ದೆಸೆಯಲ್ಲಿ, ಕೃಷಿ ಪದ್ಧತಿಯಲ್ಲಿ ಬದಲಾವಣೆ ತರುವುದು ಹಾಗೂ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಆಹಾರ ಭದ್ರತೆ ಗುರಿ ಸಾಧಿಸುವುದು ಅವಶ್ಯವಾಗಿದೆ. ಇದಕ್ಕಿಂತ ಹೆಚ್ಚಾಗಿ ರೈತರು ಹಾಗೂ ಜನಸಾಮಾನ್ಯರ ಆರ್ಥಿಕ ಭದ್ರತೆ ಹಾಗೂ ಜೀವನ ಮಟ್ಟ ಸುಧಾರಣೆಗೆ ಹೆಚ್ಚು ಮಹತ್ವ ಕೊಡುವ ಬಗ್ಗೆ ಶ್ರೇಷ್ಠ ಕೃಷಿ ತಜ್ಞ ಡಾ. ಎಮ್. ಎಸ್. ಸ್ವಾಮಿನಾಥನ ಹೇಳಿದ್ದಾರೆ. ಇದಕ್ಕೆ ಜಗತ್ತಿನಾದ್ಯಂತ ಸುಸ್ಥಿರ ಹಾಗೂ ಸಾವಯವ ಕೃಷಿ ಬಗ್ಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಅಲ್ಲದೇ, ಒಣಪ್ರದೇಶಗಳಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆ ಕೈಗೊಂಡು ಭೂಮಿ ಬರಡಾಗುವುದನ್ನು ನಿಯಂತ್ರಿಸಬೇಕಾಗಿದೆ. ಈ ಪ್ರದೇಶಗಳ ಅಭಿವೃದ್ಧಿಗೆ ಜಲಾನಯನ ಆಧಾರದ ಮೇಲೆ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಅನುಷ್ಠಾನಗೊಳಿಸಬೇಕಾಗಿದೆ. ಮಳೆಯಾಶ್ರಯದಲ್ಲಿ ಭೂಸಾಮರ್ಥ್ಯಕ್ಕನುಗುಣವಾಗಿ, ಬೆಳೆಪದ್ಧತಿಗಳು ಹಾಗೂ ಸಮಗ್ರ ಕೃಷಿ ಪದ್ಧತಿಗಳ ಆಯ್ಕೆಮಾಡುವುದು ಅವಶ್ಯ, ಅವು ಹವಾಮಾನಕ್ಕೆ ಹೊಂದಿಕೊಂಡು ಬೆಳೆಯುವಂತಿರಬೇಕು ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಅವುಗಳನ್ನು ನಿರಂತರವಾಗಿ ಸಂರಕ್ಷಿಸುವಂತಿರಬೇಕು. ರೈತರ ಅವಶ್ಯಕತೆಗಳು ಉದಾ : ಆಹಾರ ಧಾನ್ಯ, ಎಣ್ಣೆಕಾಳು, ವಾಣಿಜ್ಯಬೆಳೆಗಳು, ದನಕರುಗಳಿಗೆ ಮೇವು, ಕಾಯಿಪಲ್ಯ, ಹಣ್ಣು ಹಂಪಲು, ನಾರು, ಉರುವಲು ಕಟ್ಟಿಗೆ ಇತ್ಯಾದಿ ಸ್ಥಳೀಯವಾಗಿ ಪೂರೈಸುವಂತಿರಬೇಕು. ಇಂತಹ ಮಾದರಿ ಸಮಗ್ರ ಕೃಷಿ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಿ, ರೈತರಿಗೆ ಪ್ರಾತ್ಯಕ್ಷಿಕೆ ಮೂಲಕ ತೋರಿಸಿ ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಬೇಕು.

# ತೊಗರಿಯಲ್ಲಿ ವರ್ಣತಂತು ಅಧಾರಿತ ಬೀಜ ತಳಿ ಶುದ್ದತಾ ಪರೀಕ್ಷೆ

ರಾಕೇಶ್.ಸಿ.ಮಠದ, ಲೊಕೇಶ್.ಜಿ.ವೈ ಮತ್ತು ಬಸವೇಗೌಡ
ಬೀಜ ಘಟಕ, ಕೃಷಿ ವಿಶ್ವವಿದ್ಯಾಲಯ, ರಾಯಚೂರು – 584 104, ಇ–ಮೇಲ್: rakeshcmrnr@gmail.com

**ಪ್ರಬಂಧ ಸಾರ:–** ಕೃಷಿಯಲ್ಲಿ ಉತ್ತಮ ಇಳುವರಿ ಮತ್ತು ರೋಗ ನಿರೋಧಕತೆ ಮುಂತಾದ ಗುಣಧರ್ಮಗಳಿಗೆ ತಳಿ ಶುದ್ಧತೆ ಅತಿ ಮುಖ್ಯವಾಗಿದೆ. ತಳಿಯು ನಿರ್ದಿಷ್ಟ ಗುಣಧರ್ಮಗಳನ್ನು ಹೊಂದಿದೆಯೂ ಅಥವಾ ಇಲ್ಲವೋ ಎಂಬುದನ್ನು ಬೀಜ ಪ್ರಯೋಗಾಲಯದಲ್ಲಿ ತಿಳಿದುಕೊಳ್ಳಬಹುದು. ಈ ಪರೀಕ್ಷೆಯನ್ನು ಕ್ಷೇತ್ರ ತಳಿ ಶುದ್ಧತೆ ಪರೀಕ್ಷೆ ಎಂದು ಕರೆಯುತ್ತಾರೆ. ಕ್ಷೇತ್ರ ತಳಿ ಶುದ್ಧತೆ ಪರೀಕ್ಷೆ ನಿಖರವಾದರೂ ಕೆಲವು ದೀರ್ಘಾವಧಿ ಬೆಳೆಗಳಲ್ಲಿ ಮಾಡುವುದು ಕಷ್ಟಕರ. ತೊಗರಿ ಬೆಳೆ ಸುಮಾರು 160–180 ದಿವಸಗಳ ಬೆಳೆಯಾಗಿದ್ದು, ಹೂವಿನ ರಚನೆ ಅಥವಾ ಬಣ್ಣ ಮುಂತಾದ ಗುಣಧರ್ಮಗಳನ್ನು ಪರೀಕ್ಷಿಸಲು ಸುಮಾರು 130–140 ದಿವಸಗಳು ಬೇಕಾಗುತ್ತದೆ. ತೊಗರಿ ದ್ವದಳ

ಧಾನ್ಯವಾದ್ದುರಿಂದ ತಳಿ ಶುದ್ಧತೆ ಪರೀಕ್ಷೆಯ ಫಲಿತಾಂಶ ಬರುವವರೆಗೆ ಮುಂಗಾರು ಪ್ರಾರಂಭವಾಗಿರುತ್ತದೆ. ಅಲ್ಲದೆ ಬೀಜ ಶೇಖರಣೆಗೆ ಅತಿ ಹೆಚ್ಚು ಸಮಯ ಹಾಗೂ ಜಾಗ ಬೇಕಾಗುತ್ತದೆ. ಇದರಿಂದ ಬೀಜೋತ್ಪಾದನೆ ಖರ್ಚು ಹೆಚ್ಚಾಗಬಹುದು. ತೊಗರಿ ಹಾಗೂ ಇತರೆ ದೀರ್ಘಾವಧಿ ಬೆಳೆಗಳಲ್ಲಿ ತಳಿ ಶುದ್ಧತೆಯನ್ನು ಅತಿ ಕಡಿಮೆ ಸಮಯದಲ್ಲಿ ಕಂಡುಕೊಳ್ಳಲು ವರ್ಣತಂತು ಅಧಾರಿತ ಬೀಜ ತಳಿ ಶುದ್ಧತೆ ಪರೀಕ್ಷೆಯನ್ನು ಮಾಡಲಾಗುತ್ತದೆ. ಈ ಪರೀಕ್ಷೆಯಲ್ಲಿ ತೊಗರಿ ತಳಿಯ ವರ್ಣತಂತುವನ್ನು ಕೆಲವು ನಿರ್ದಿಷ್ಟ ಎಸ್.ಎಸ್.ಆರ್ ಸೂಚಿಕೆಗಳೊಂದಿಗೆ ತಾಳೆಹಾಕಿ ನೋಡಲಾಗುತ್ತದೆ. ಈ ಸೂಚಿಕೆಗಳು ಕೂಡ ವರ್ಣತಂತುಗಳಾಗಿದ್ದು ತೊಗರಿ ತಳಿಯನ್ನು ಬೇರೆ ಕಲಬೇರಿಕೆ ಗಿಡಗಳಿಂದ ಬೇರ್ಪಡಿಸಲು ಬೇಕಾದ ವಿಶಿಷ್ಟವಾದ ವರ್ಣತಂತು ಪಟ್ಟಿಯನ್ನು ತಳಿ ಶುದ್ಧತೆ ಪರೀಕ್ಷೆಯಲ್ಲಿ ನೀಡುತ್ತದೆ.

ಈ ವಿಶಿಷ್ಟವಾದ ವರ್ಣತಂತು ಪಟ್ಟಿ ನಮಗೆ ಬೇಕಾಗಿರುವ ತೊಗರಿ ತಳಿಗೆ ಹೊಂದುವಂತಿದ್ದರೆ ಪರೀಕ್ಷೆ ಮಾಡುತ್ತಿರುವ ಬೀಜಗಳು ಶುದ್ಧ ತಳಿಯವೂ, ಇಲ್ಲವಾದರೆ ಕಲಬೇರಿಕೆ ಬೀಜಗಳನ್ನು ಹೊಂದಿವೆ ಎಂದರ್ಥ. 2014–15 ಸಾಲಿನಲ್ಲಿ ತೊಗರಿಯ ಟಿ.ಎಸ್–3ಆರ್ ಎಂಬ ತಳಿಗೆ ವರ್ಣತಂತು ಅಧಾರಿತ ಬೀಜ ತಳಿ ಶುದ್ಧತೆಯನ್ನು ಕರ್ನಾಟಕ ಸರ್ಕಾರದ ಧನ ಸಹಾಯದಿಂದ ಬೀಜ ಘಟಕ, ಕೃ.ವಿ.ವಿ., ರಾಯಚೂರಿನಲ್ಲಿ ಅಭಿವೃದ್ಧಿ ಪಡಿಸಲಾಯಿತು. ಇದರಲ್ಲಿ ಟಿ.ಎಸ್–3ಆರ್ ತಳಿಯನ್ನು ಇತರೆ ಕಲಬೇರಿಕೆ ಗಿಡಗಳಿಂದ ಬೇರ್ಪಡಿಸಬಲ್ಲ ಎರಡು ನಿರ್ದಿಷ್ಟ ಪರಿವಯಾತ್ಮಕ ಸೂಚಿಕೆಗಳಾದ ಸಿ.ಸಿ.ಎಮ್ 95 ಮತ್ತು ಸಿ.ಸಿ.ಎಮ್ 293 ಎಂಬ ಸೂಚಿಕೆಗಳನ್ನು ಕಂಡುಹಿಡಿಯಲಾಯಿತು.

**ಪೀಠಿಕೆ :** ತೊಗರಿ ಬೆಳೆ ಭಾರತದ ಬಹುಮುಖ್ಯ ದ್ವಿದಳ ಧಾನ್ಯವಾಗಿದ್ದು ಸುಮಾರು 23.63 ದಶಲಕ್ಷ ಹೇಕ್ಟರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಇದರಿಂದ 14.76 ದಶಲಕ್ಷ ಇಳುವರಿಯನ್ನು ಪಡೆಯಲಾಗುತ್ತಿದೆ. ಅದರೂ ಭಾರತದಲ್ಲಿ ಪ್ರತಿ ವರ್ಷ 3–4 ದಶಲಕ್ಷ ಟನ್ ತೊಗರಿ ಧಾನ್ಯವನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ದೇಶದ ಅಂತರಿಕ ಬೇಡಿಕೆಯನ್ನು ಭರಿಸಲು ಆಮದಿನ ಆವಶ್ಯಕತೆ ಇದೆಯಾದರೂ ಪ್ರತಿ ಹೇಕ್ಟರ್‌ನಲ್ಲಿನ ಉತ್ಪಾದಕತೆ ಹೆಚ್ಚು ಮಾಡಬೇಕಾಗಿದೆ. ಸರಾಸರಿ ಇಳುವರಿ ಮತ್ತು ಉತ್ಪಾದಕತೆಯನ್ನು ಹೆಚ್ಚು ಮಾಡಲು ಉತ್ತಮ ತಳಿಗಳ ಆವಶ್ಯಕತೆ ಇದೆ. ಈ ಬೆಳೆಯಲ್ಲಿ ಉತ್ತಮ ತಳಿಗಳ ಲಭ್ಯತೆ ಇದ್ದು, ಅದರಲ್ಲಿ ಟಿ.ಎಸ್–3ಆರ್ ತಳಿ ಉತ್ತಮ ಇಳುವರಿಯ ಜೊತೆಗೆ ನೆಟೆರೋಗಕ್ಕೆ ನಿರೋಧಕತೆಯನ್ನು ಹೊಂದಿದೆ. ಈಗಾಗಲೆ ಟಿ.ಎಸ್–3ಆರ್ ತಳಿಯನ್ನು ಕರ್ನಾಟಕದಲ್ಲಿ ಸುಮಾರು 2 ರಿಂದ 3 ಲಕ್ಷ ಹೇಕ್ಟರ್‌ಗಳಲ್ಲಿ ಬೆಳೆಯಲಾಗುತ್ತದೆ. ಈ ತಳಿಯು ಇತರೆ ತಳಿಗಳಿಗೆ ಹೋಲಿಸಿದರೆ 160 ದಿವಸಗಳಲ್ಲಿ ಬರುವ ಬೆಳೆಯಾಗಿದ್ದು ಉತ್ತಮ ಇಳುವರಿ ಕೂಡ (6–7 ಕ್ವಿ/ಎಕರೆ) ಕೊಡುತ್ತದೆ. ಉತ್ತಮ ತಳಿಯ ಬೀಜಗಳನ್ನು ರೈತರಿಗೆ ವಿವಿಧ ಯೋಜನೆಗಳಲ್ಲಿ ಮತ್ತು ಪ್ರಮಾಣಿಕರಿಸಿ ವಿವಿಧ ಸಂಸ್ಥೆಗಳ ಮುಖಾಂತರ ವಿತರಿಸಲಾಗುತ್ತಿದೆ. ಈ ಉತ್ತಮ ತಳಿಯ ಸಾಮರ್ಥ್ಯವನ್ನು ಕಾಪಾಡಲು ಬೀಜ ಪರೀಕ್ಷೆ ಅತಿ ಮುಖ್ಯವಾಗಿದ್ದು, ಅದರಲ್ಲಿ ಮೂಲ ಬೀಜಕ್ಕೆ ಮಾಡುವ ತಳಿ ಶುದ್ಧತೆ ಪರೀಕ್ಷೆ ಅತಿ ಮುಖ್ಯವಾಗಿದೆ ಮೂಲ ಬೀಜೋತ್ಪಾದನೆ ಹಂತದಲ್ಲಿ ತಳಿ ಶುದ್ಧತೆಯನ್ನು ಕಾಪಾಡಿಕೊಂಡರೆ ಮುಂದೆ ಪ್ರಮಾಣಿಕರಿಸಿದ ಬೀಜದ ಸಾಮರ್ಥ್ಯಕ್ಕೆ ಯಾವುದೇ ಕುಂದು ಬರದು. ತಳಿ ಶುದ್ಧತೆ ಪರೀಕ್ಷೆಯನ್ನು ಸಾಂಪ್ರದಾಯಿಕವಾಗಿ ಕ್ಷೇತ್ರ ತಳಿ ಶುದ್ಧತೆ ಪರೀಕ್ಷೆಯ ಮುಖಾಂತರ ಮಾಡಲಾಗುತ್ತದೆ. ಅದರೆ ಟಿ.ಎಸ್–3ಆರ್ ತಳಿಯಲ್ಲಿ ಹೂವಿನ ಬಣ್ಣ ಮತ್ತು ರಚನೆ ಬೇರೆ ತಳಿಗಳಿಂದ ಮತ್ತು ಕಲಬೇರಿಕೆ ಗಿಡಗಳಿಂದ ವರ್ಗಿಕರಣ ಮಾಡಲು ಮುಖ್ಯ ಮನದಂಡ ಅದ್ದರಿಂದ ಕ್ಷೇತ್ರದಲ್ಲಿ ಪರೀಕ್ಷೆ ಮಾಡುವಾಗ ಕನಿಷ್ಠ 120–130 ದಿವಸ ಕಾಯಬೇಕಾಗುತ್ತದೆ.

ಕ್ಷೇತ್ರದಲ್ಲಿ 120–130 ದಿವಸ ಕಾಯುವ ಬದಲು ವರ್ಣತಂತು ಅಧಾರಿತ ತಳಿ ಶುದ್ಧತೆ ಪರೀಕ್ಷೆ ಮಾಡಿದರೆ ಅತಿ ಕಡಿಮೆ ಸಮಯದಲ್ಲಿ, ಅಂದರೆ ಕೇವಲ 15 ದಿವಸಗಳಲ್ಲಿ ಫಲಿತಾಂಶಗಳು ಲಭ್ಯವಾಗುತ್ತವೆ. ಇದರಿಂದ ಬೀಜೋತ್ಪಾದನೆಗೆ ಮತ್ತು ಬೀಜ ಶೇಖರಣೆಗೆ ಅಗಬಹುದಾದ ಖರ್ಚನ್ನು ಕಡಿಮೆ ಮಾಡಬಹುದಲ್ಲದೆ, ಸಮಯಕ್ಕೆ ಸರಿಯಾಗಿ ಬೀಜ ಮಾರಾಟಕ್ಕೆ ಅನುಕೂಲವಾಗುತ್ತದೆ. ಇದರಿಂದ ಗುಣಮಟ್ಟವನ್ನೂ ಕಾಯ್ದುಕೊಳ್ಳಬಹುದು. ಈ ಉದ್ದೇಶದಿಂದ ತೊಗರಿಯ ಟಿ.ಎಸ್–3ಆರ್ ತಳಿಗೆ 2014–15 ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದ ಧನ ಸಹಾಯದೊಂದಿಗೆ ಬೀಜ ಘಟಕ, ಕೃ.ವಿ.ವಿ., ರಾಯಚೂರಿನಲ್ಲಿ ವರ್ಣತಂತು ಅಧಾರಿತ ತಳಿ ಶುದ್ಧತಾ ಪರೀಕ್ಷೆ ಯನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ಪರೀಕ್ಷೆ ನಿರ್ದಿಷ್ಟ ಪರಿಯಾತ್ಮಕ ಎಸ್.ಎಸ್.ಆರ್ ವರ್ಣತಂತು ಸೂಚಿಕೆಗಳ ಸಹಾಯದಿಂದ ಮಾಡಬಹುದಾದ ಪರೀಕ್ಷೆ ಅಗಿದ್ದು ಅತಿ ಕಡಿಮೆ ಸಮಯದಲ್ಲಿ ಮಾಡಬಹುದು.

**ವಿಧಾನಗಳು ಮತ್ತು ಕ್ರಮಾನುಸರಣೆ:** ತೊಗರಿಯಲ್ಲಿ ವರ್ಣತಂತು ಅಧಾರಿತ ತಳಿ ಶುದ್ಧತೆ ಪರೀಕ್ಷೆ ಎಸ್.ಎಸ್.ಆರ್ ವರ್ಣತಂತು ಸೂಚಿಕೆಗಳ ಸಹಾಯದಿಂದ ಮಾಡಲಾಗುತ್ತದೆ. ಈ ಪರೀಕ್ಷೆಯಲ್ಲಿ ಈ ಕೆಳಗಿನ ವಿಧಾನಗಳನ್ನು ಅಳವಡಿಸಲಾಗುತ್ತದೆ.

**1.1. ವರ್ಣತಂತುವನ್ನು ಟಿ.ಎಸ್–3ಆರ್ ತಳಿಯ ಎಲೆಗಳಿಂದ ಬೇರ್ಪಡಿಸುವುದು:** ಎಲೆಗಳಿಂದ ವರ್ಣತಂತುವನ್ನು ಬೇರ್ಪಡಿಸಲು ಬೀಜಗಳನ್ನು ಹದಗೊಳಿಸಿದ ಮಣ್ಣಿನ ತಾಕಿನಲ್ಲಿ ಹಾಕಿ 2–15 ದಿವಸಗಳಾದ ಮೇಲೆ ಮೃದುವಾಗಿರುವ ಎಲೆಗಳನ್ನು ಸಂಗ್ರಹಿಸಬೇಕು. ತೊಗರಿ ಟಿ.ಎಸ್–3ಆರ್ ತಳಿಯ ಜೊತೆಗೆ ಪರೀಕ್ಷೆಗೆ ಬೇಕಾಗಿರುವ ಇತರ ಕಲಬೇರಿಕೆ ಗಿಡಗಳಿಂದಲೂ ಅಂದರೆ ಮಾರುತಿ, ಆಶಾ ಮತ್ತು ಜಿ.ಆರ್.ಜಿ–811 ತಳಿಗಳಿಂದಲೂ ಸಂಗ್ರಹಿಸಲಾಯಿತು. ಎಲೆಗಳನ್ನು (ಕನಿಷ್ಟ 20 ಗ್ರಾಂ) ಸಂಗ್ರಹಿಸಿದ ಮೇಲೆ 24 ತಾಸುಗಳ ವರೆಗೆ $4^0$ ಸೆಂಟಿಗ್ರೇಡ್ ಉಷ್ಣಾಂಶದಲ್ಲಿ ಶೀತಕದಲ್ಲಿ ಸಂಗ್ರಹಿಸಿಡಬೇಕು. ಎಲೆಗಳನ್ನು ತಕ್ಷಣ ಪರೀಕ್ಷೆಗೆ M¼À ¹ ¢ zÀgÉCªÀÄÄÄ– $20^0$ ಸೆಂಟಿಗ್ರೇಡನಲ್ಲಿ ಸಂಗ್ರಹಿಸಡ ಬೇಕಾಗುತ್ತದೆ. ದ್ರವರೂಪದ ಸಾರಜನಕ ($-196^0$ ಸೆಂಟಿಗ್ರೇಡ) ದಲ್ಲೂ ಸಂಗ್ರಹಣೆ ಮಾಡಬಹುದು. ಈ ಎಲೆಗಳಿಂದ ವರ್ಣತಂತು ವನ್ನು ಸಿ–ಟಾಬ್ ಎಂಬ ಪದ್ದತಿಯಿಂದ ಬೇರ್ಪಡಿಸ ಬಹುದು. ಈ ಪದ್ದತಿಯನ್ನು ಮುರ್ರೆ ಮತ್ತು ಥಾಮ್ಸನ್ (1980) ರಲ್ಲಿ ಅಭಿವೃದ್ಧಿ ಪಡಿಸಿದ್ದಾರೆ ಮತ್ತು ವಾನರ್ (1987) ಮತ್ತಿತರರು ಉತ್ತಮಗೊಳಿಸಿದ್ದಾರೆ.

**1.2. ವರ್ಣತಂತು ಬೇರ್ಪಡಿಸುವ ಪದ್ಧತಿಯಲ್ಲಿ ಈ ಕೆಳಗಿನ**

**ಹಂತಗಳಿವೆ.**

1. 12–15 ದಿವಸಗಳ ಸಸಿಗಳಿಂದ ಎಲೆಗಳನ್ನು ಸಂಗ್ರಹಣೆ ಮಾಡಿ ಅಲ್ಯೂಮಿನಿಯಂ ಹಾಳೆಯಲ್ಲಿ ಸಂಗ್ರಹಣೆ ಮಾಡಬೇಕು.
2. ವರ್ಣತಂತು ಬೇರ್ಪಡಿಸಲು ಬೇಕಾದ ಸಂಗ್ರಾಹಕ ರಾಸಾಯನಿಕದಲ್ಲಿ $65^0$ ಸೆಂಟಿಗ್ರೇಡಗೆ ಕಾಯಿಸಬೇಕು. ಈ ಸಂಗ್ರಾಹಕ ವರ್ಣತಂತು ಬೇರ್ಪಡಿಸಲು ಸಹಾಯಕಾರಿ.
3. ಸಂಗ್ರಹಣೆ ಮಾಡಿದ ಎಲೆಗಳನ್ನು ಪುಡಿ ರೂಪದಲ್ಲಿ ಉಪಯೋಗಿಸಬೇಕು.
4. ಪುಡಿ ಮಾಡಿದ ಮಾದರಿಗೆ ಸಂಗ್ರಾಹಕ ರಾಸಾಯನಿಕವನ್ನು ಸೇರಿಸಿ 30 ನಿಮಿಷಗಳ ವರೆಗೆ ಬಿಸಿ ನೀರಿನಲ್ಲಿ ಕಾಯಿಸಬೇಕು.
5. ತಿಳಿಯಾದ ದ್ರಾವಣವನ್ನು ಪಡೆಯಲು ಈ ಮಿಶ್ರಣವನ್ನು 10000 ಆರ್.ಪಿ.ಎಮ್ ವೇಗದಲ್ಲಿ 10 ನಿಮಿಷಗಳ ವರೆಗೆ $4^0$ ಸೆಂಟಿಗ್ರೇಡ್‌ನಲ್ಲಿ ತಿರುಗಿಸಬೇಕು ಮತ್ತು ಬಂದಂತ ತಿಳಿ ದ್ರಾವಣವನ್ನು ಸಂಗ್ರಹಿಸಬೇಕು.
6. ಎಲೆಯಿಂದ ಪಡೆದ ತಿಳಿಯ ದ್ರಾವಣಕ್ಕೆ 24:1 ರ ಪ್ರಮಾಣದಲ್ಲಿ ಕ್ಲೋರೋಫಾರ್ಮ:ಐಸೋಲಿಮೈಲ್ ಅಲ್ಕೊಹಾಲ ಜೊತೆಗೆ ಮಿಶ್ರಣ ಮಾಡಿ 10000 ಆರ್.ಪಿ.ಎಮ್ ವೇಗದಲ್ಲಿ 10 ನಿಮಿಷಗಳವರೆಗೆ $4^0$ ಸೆಂಟಿಗ್ರೇಡ ಉಷ್ಣಾಂಶ ತಿರುಗಿಸಬೇಕು ಮತ್ತು ತಿಳಿ ದ್ರಾವಣವನ್ನು ಸಂಗ್ರಹಿಸಬೇಕು.
7. ಈ ತಿಳಿ ದ್ರಾವಣಕ್ಕೆ ತಂಪಾದ ಐಸೋ ಪ್ರೋಪೆನಾಲ್ ರಾಸಾಯನಿಕವನ್ನು ಸೇರಿಸಿ 5 ಮೋಲಾರ್ ಸೋಡಿಯಂ ಕ್ಲೋರೈಡ್ ಜೊತೆ ಸೇರಿಸಿ – $20^0$ ಸೆಂಟಿಗ್ರೇಡ ಶಾಖದಲ್ಲಿ ಕನಿಷ್ಟ 24 ತಾಸುಗಳವರೆಗೆ ಇಡಬೇಕು.
8. ಈ ಮಿಶ್ರಣವನ್ನು 8000 ಆರ್.ಪಿ.ಎಮ್ ವೇಗದಲ್ಲಿ 10 ನಿಮಿಷಗಳ ವರೆಗೆ $4^0$ ಸೆಂಟಿಗ್ರೇಡ ಉಷ್ಣಾಂಶದಲ್ಲಿ ತಿರುಗಿಸಬೇಕು ಬಂದಂತ ತಿಳಿ ದ್ರಾವಣವನ್ನು ಶೇ.70% ರಷ್ಟು ಅಲ್ಕೋಹಾಲ ಜೊತೆ ಸೇರಿಸಿ, ಆರಲು ಬಿಡಬೇಕು. ಅಲ್ಕೋಹಾಲಿನ ವಾಸನೆ ಹೊದನಂತರ 10–15 ಮೈಕ್ರೊಲೀಟರ್ ಸಂಗ್ರಾಹಕ ರಾಸಾಯನಿಕ ಜೊತೆ ಮಿಶ್ರಣ ಮಾಡಬೇಕು. ಇದರಿಂದ ವರ್ಣತಂತು ಕರಗಲು ಸಹಾಯ ಮಾಡುತ್ತದೆ.
9. ವರ್ಣತಂತುವಿನ ಪ್ರಮಾಣವನ್ನು ಕಂಡುಹಿಡಿಯಲು 1% ಅಗಾರೋಜ ಎಂಬ ಅರೆಘನರೂಪದ ಜೆಲ್ ದ್ರಾವಣವನ್ನು ಉಪಯೋಗ ಮಾಡಿ ವಿದ್ಯುದ್ವಿಭಜನೆ ಮುಖಾಂತರ ಮಾಡಬೇಕು.

**1.3. ವರ್ಣತಂತುವಿನ ಪ್ರಮಾಣವನ್ನು ಕಂಡುಹಿಡಿಯುವಿಕೆ :** ವರ್ಣತಂತುವಿನ ಒಟ್ಟು ಪ್ರಮಾಣವನ್ನು ರೋಹಿತದಲ್ಲಿ (spectrophotometer) ಮತ್ತು ಫ್ಲುರೋಮೇಟ್ರೈ (fluorometry) ಪದ್ಧತಿಯಿಂದ ಮೈಕ್ರೊಗ್ರಾಮ ಮತ್ತು ನ್ಯಾನೊಗ್ರಾಮ ಪರಿಮಾಣಗಳಲ್ಲಿ ಮಾಡಬಹುದು. ಒಂದು ಮೈಕ್ರೊಗ್ರಾಮ ಎಂದರೆ ಗ್ರಾಮಿನ ಆರರ ಒಂದು ಭಾಗ ಮತ್ತು ಒಂದು ನ್ಯಾನೊಗ್ರಾಮ ಎಂದರೆ ಗ್ರಾಮಿನ ಒಂಬತ್ತರ ಒಂದು ಭಾಗ ರಷ್ಟು ಎಂದರ್ಥ.

**1.4. ವರ್ಣತಂತುವಿನ ಗುಣಮಟ್ಟ ಕಂಡು ಹಿಡಿಯುವಿಕೆ:** ರೋಹಿತದಲ್ಲಿ 260 ಎನ್.ಎಮ್ ಮತ್ತು 280 ಎನ್.ಎಮ್ ವ್ಯಾಪ್ತಿಯಲ್ಲಿ ಬರುವ ವರ್ಣತಂತು ಗುಣಮಟ್ಟದಾಗಿರುತ್ತದೆ. 260–280 ಎನ್.ಎಮ್ ದಲ್ಲಿ ಯು.ವಿ ಬೆಳಕನ್ನು ವರ್ಣತಂತು ಮಾತ್ರವೆ ಹೀರಿಕೊಳ್ಳುತದೆ.ಇನ್ನಿತರ ಪ್ರೋಟಿನ್ ಮುಂತಾದ ಕಲಬೇರಿಕೆಗಳು 260 ಕ್ಕಿಂತ ಕಡಿಮೆ ಅಥವಾ 320 ಎನ್.ಎಮ್ ಗಿಂತ ಹೆಚ್ಚಿಗೆ ಬೆಳಕನ್ನು ಹಿರಿಕೊಳ್ಳುತ್ತವೆ.

**1.5. ಅಗಾರೋಜ ಜೆಲ್‌ನಿಂದ ವಿದ್ಯುದ್ವಿಭಜನೆ ಮುಖಾಂತರ ವರ್ಣತಂತುವಿನ ಪ್ರಮಾಣ ಕಂಡುಹಿಡಿಯುವಿಕೆ.:** ಅಗಾರೋಜ ಜೆಲ್ ಒಂದು ಅರೆಘನರೂಪದ ರಾಸಾಯನಿಕವಾಗಿದ್ದು ವರ್ಣತಂತುವನ್ನು ಹಿಗ್ಗಿಸಿ ಒಂದು ವಿಶಿಷ್ಟ ಬಗೆಯ ವರ್ಣತಂತುವಿನ ಪಟ್ಟಿಯನ್ನು ನೀಡುತ್ತದೆ. ಇದು ಸೂಚಿಕೆಗಳ ಜೊತೆ ತಾಳೆಹಾಕಿದಾಗ ನಮಗೆ ಟಿ.ಎಸ್–3ಆರ್ ತಳಿಯನ್ನು ಇತರೆ ಕಲಬೇರಿಕೆ ಗಿಡಗಳಿಂದ ವರ್ಗಿಕರಿಸಲು ಸಹಾಯವಾಗುತ್ತದೆ.

**1.6 ಎಸ್.ಎಸ್.ಆರ್–ಪಿ.ಸಿ.ಆರ್ ಪದ್ಧತಿಯಲ್ಲಿ ವರ್ಣತಂತುವಿನ ವಿಸ್ತರಣೆ.:** ಟಿ.ಎಸ್–3ಆರ್ ತಳಿಯನ್ನು ಇನ್ನಿತರ ಕಲಬೇರಿಕೆ ತಳಿಗಳ ಬೀಜಗಳಿಂದ ವರ್ಗಿಕರಣ ಮಾಡಲು ಅಗಾರೋಜನಲ್ಲಿ ಬಂದಂತ ವರ್ಣತಂತುವಿನ ಪಟ್ಟಿ ಉಪಯೋಗಿಸಬಹುದಾದರೂ ಸ್ಪಷ್ಟತೆಗಾಗಿ ಎಸ್.ಎಸ್.ಆರ್–ಪಿ.ಸಿ.ಆರ್ ಪದ್ಧತಿಯಲ್ಲಿ ಸೂಚಿಕೆಗಳ ಜೊತೆಗೆ ವಿಸ್ತರಣೆ ಮಾಡಲಾಯಿತು.

ಈ ಅಧ್ಯಯನದಲ್ಲಿ ಒಟ್ಟು 40 ಎಸ್.ಎಸ್.ಆರ್ ಪರಿಚಯಾತ್ಮಕ ಸೂಚಿಕೆಗಳನ್ನು ಬಳಸಲಾಯಿತು. (ವಿವರಗಳನ್ನು ಕೋಷ್ಟಕ.1 ರಲ್ಲಿ ಕೊಡಲಾಗಿದೆ). ಈ ಸೂಚಿಕೆಗಳನ್ನು ಟಿ.ಎಸ್–3ಆರ್ ಮತ್ತು ಇತರೆ ಕಲಬೇರಿಕೆ ಗಿಡಗಳ ವರ್ಣತಂತುಗಳ ಜೊತೆಗೆ ವಿಸ್ತರಣೆ ಮಾಡಲಾಯಿತು. ಇದಕ್ಕೆ ಈ ಸೂಚಿಕೆಗಳ 0.25 ಮೈಕ್ರೊಮೋಲಾರ ತೆಗದುಕೊಂಡು 1 ಯೂನಿಟ್ ಟಾಕ್ – ಡಿ.ಎನ್.ಎ ಪಾಲಿಮರೇಜ ಮತ್ತು 12 ಮೈಕ್ರೊ ಲೀಟರ್ ಪಿ.ಸಿ.ಆರ್ ಮಿಶ್ರಣವನ್ನು ಬಳಸಿ ಥರ್ಮಲ್ ಸೈಕ್ಲರ್ ಯಂತ್ರದಲ್ಲಿ 30 ಸಲ $94^0$ ಸೆಂಟಿಗ್ರೇಡನಲ್ಲಿ ಮೂರು ನಿಮಿಷ, 50–55 ಸೆಂಟಿಗ್ರೇಡನಲ್ಲಿ 40 ಸೆಕೆಂಡ ಮತ್ತು $72^0$ ಸೆಂಟಿಗ್ರೇಡನಲ್ಲಿ 40 ಸೆಕೆಂಡುಗಳ ಕಾಲ ಇಡಲಾಯಿತು.

**ಕೋಷ್ಟಕ–1 : ಟಿ.ಎಸ್–3ಆರ್ ತಳಿಗೆ ವರ್ಣತಂತು ಅಧಾರಿತ ತಳಿ ಶುದ್ಧತೆ ಪರೀಕ್ಷೆಯನ್ನು ಅಭಿವೃದ್ಧಿ ಪಡಿಸಲು ಉಪಯೋಗಿಸಲಾದ ಎಸ್.ಎಸ್.ಆರ್ ಸೂಚಿಕೆಗಳ ವಿವರ.**

| | | | |
|---|---|---|---|
| 1 | CcM0008F | TA-19 | CGGTGAAAAGGGTCAATGAG |
| | CcM0008R | | CAAAATTAAAGCCTACTTATTTTACGA |
| 2 | CcM0021F | (TTA)10 | TGAATGTTTTCCAGGATTTTACA |
| | CcM0021R | | GCGCAAATATAAGAGCCCAG |
| 3 | CcM0030F | (AAT)8 | GCAATATCAATTCAATGGTGGA |
| | CcM0030R | | TGACAGATGCACTCTCTCGTTT |
| 4 | CcM0039F | (AT)37 | AGGAATAATGTTTGCTGCGG |

| | | | |
|---|---|---|---|
| | CcM0039R | | TTGGTATGTGGAACGATTGC |
| 5 | CcM0047F | A12n(TC)5 | TGTCTTTTGGATGAAAGTAGGGA |
| | CcM0047R | | GTTGGGGATGGGAAGAGAAT |
| 6 | CcM0051F | (AT)8 | ACCTTTATTTTGAGCAGGAAAA |
| | CcM0051R | | TGAATCATTTTCTGTTGAAGGG |
| 7 | CcM0057F | (AAAT)6 | CAATGTTGGCATAGGAACCA |
| | CcM0057R | | GCTTAAAACTTGTGGGGCAA |
| 8 | CcM0080F | (AT)13 (AG)11n(AG)8 | TGCATGTTGTATGTTGGTTGG |
| | CcM0080R | | GTAATGCATCTCAATAATTTCAACA |
| 9 | CcM0082f | (AT)16n(TA)7 | TGTCAATGTCATGTTGGGCT |
| | CcM0082R | | CATGCCATCTTCCTTTCTCC |
| 10 | CcM0093F | (AT)27 | TCATTGACCCCTCTGGAAAT |
| | CcM0093R | | ACAATTGGAAAAATAAGTGAGTGAT |
| 11 | CcM0095F | (TC)9 | ATAATTAGTGGGCTGGGCCT |
| | CcM0095R | | TGCCTCATAATCATGTTGCTTC |
| 12 | CcM0112F | (TA)7 | GCAGGCATGCAAGCTTATTA |
| | CcM0112R | | GCGCGCCATCTTAATATCAT |
| 13 | CcM0121F | (TA)17 | AGAAATTGGAGGCTTGGTCA |
| | CcM0121R | | GGTATAAGGCTCAAACCCGA |
| 14 | CcM0126F | (TAT)21 | TGGTCCATGTTCCTCACTCA |
| | CcM0126R | | CCAATGAAAATGAGAACCTTCA |
| 15 | CcM0133F | (TA)9 | GTTGTCCCATTTTGACCTCC |
| | CcM0133R | | CCATAATCCAATCCAAATCCA |
| 16 | CcM0134F | (AT)12 | CTCTGCCCCGATGTCATATT |
| | CcM0134R | | TTGGGATGTGAAGATGATGAA |
| 17 | CcM0179F | (TTA)6 (TA)17 | GCAAAATTGCACTAAAATTTGTTT |
| | CcM0179R | | CCATCTTCGCCTGTCGTATT |
| 19 | CcM0183F | (AT)10n (TA)s | GCCCATTTTGTCATCCCTAA |
| | CcM0183R | | TTCAACAGTTGGATCGTTCA |
| 20 | CcM0185F | (TA)8 | TTGATCATGACTTATGCCTTTGA |
| | CcM0185R | | GGCTTGCTTTGAGTTCCTTG |
| 21 | CcM0193F | (TA)20 | TAAATCACCACCCTTGAGGC |
| | CcM0193R | | TGCAAAAACACATCCTGGAA |
| 22 | CcM0195F | (AT)11 | CAACAATAAAGCATAAACCACCA |
| | CcM0195R | | TGACGTAGATTGGGTAGTTAGGA |
| 23 | CcM0207F | (AT)15 | TTTTGGCGGTCATTTTAACC |
| | CcM0207R | | TTAGTCGGGAGCAACATGA |
| 24 | CcM0208F | (TAT)10n (TTA)7 | GCATCTAAATACAATTAATATTGTGGG |
| | CcM0208R | | ATAGGGTGGATCTCTGGTGC |
| 25 | CcM0246F | (AT)16n(TA)7 | ATGGAGCCAAAGTGTCCAAG |
| | CcM0246R | | ATGAAAAGCAACTACGCGCT |
| 26 | CcM0248F | (AT)6 | TGGAATTTGACTCATTTAGAATAGGA |
| | CcM0248R | | CCCACAGACAGCATATCAACA |
| 27 | CcM0252F | (AT)23 | CATAGAAGCCCACCTTCCAA |
| | CcM0252R | | CTGCATGCAAAACGAAGAAG |
| 28 | CcM0257F | (AG)7 (TG)15 | GCCGTTACGAGGGTAATGAA |
| | CcM0257R | | CTGTCTCAAAGGGACCCTGA |
| 29 | CcM0268F | (AT24 (GT)10 | CCTTTTGGGTTAGGGTATCCA |
| | CcM0268R | | CCCCTAACGTAGCCTGTCAA |
| 30 | CcM0271F | (A)23 (AT)25 | TGCTTCGCATTCCTCTTTTT |
| | CcM0271R | | AGGAAAATGCTGCTTTGCAC |
| 31 | CcM0273F | (CTT)5 | CAGGTATACGCTGCTCACCA |
| | CcM0273R | | GCAGTTGCTGATGGAGTTGA |
| 32 | CcM0293F | (TA)11 | GTTCCCGGCTACCAAATGTA |

| | | | |
|---|---|---|---|
| | CcM0293R | | AAAAACACAAAAGATAAACATACATGC |
| 33 | CcM0303F | (TA)7nt (GC)6 | CAAGCTTTTGAGGTTCGACA |
| | CcM0303R | | TCACGCAAGAAATTCACAGC |
| 34 | CcM0353F | (AT)14 | GATTCGCAAGTTGCTCCTTC |
| | CcM0353R | | TTGTGATCACTTCATCATTTTGG |
| 35 | CcM0361F | (TA)9 | TCTTCCTGTCCTCATCCTCG |
| | CcM0361R | | TGGAAACCAAAGTTGTGCAT |
| 36 | CcM0366F | (AT)8 | CCTATGCTCCACAACAAGAAAA |
| | CcM0366R | | GCGATAGAAACATATTGCACACA |
| 37 | CZ681920F | ca8 | GCGGGATTCTCTTGCTTAC |
| | R | | TCACAAAACAATTTGGCACA |
| 38 | CZ681922F | (gaa)5g(gaa)5 | ACACCACCATGCTAAAGAACAAG |
| | R | | CCAAGCAAGACACGAGTAATCATA |
| 39 | CZ681923F | aag5 | CATCGCCTACAATCATACAAAGA |
| | R | | TCTTGTCCTTTTTCAGTCATCGT |
| 40 | CZ681924F | gaa6 | ATCGCTTTGCATCCTTATC |
| | R | | CTTCACGTACATTTTCGTTT |

ಈ ವರ್ಣತಂತುವಿನ ಮಿಶ್ರಣವನ್ನು 6% ಅಕ್ರಿಲ್ ಅಮೈಡ ಜೆಲ್ ಮತ್ತು ಇಥಿಡಿಯಮ್ ಬ್ರೋಮೈಡ ಬಣ್ಣದೊಂದಿಗೆ ಗುರುತು ಮಾಡಿ ಯು.ವಿ ಬೆಳಕಿನ ಸಹಾಯದಿಂದ ಫೋಟೊ ತೆಗೆಯ ಲಾಯಿತು. ಹೀಗೆ ಟಿ.ಎಸ್–3ಆರ್ ತಳಿಯ ವರ್ಣತಂತುವನ್ನು ಇತರೆ ಕಲಬೇರಿಕೆ ಗಿಡಗಳಿಂದ ಬೇರ್ಪಡಿಸಬಹುದಾದ. ಸೂಚಿಕೆ ಗಳನ್ನು ಕಂಡುಹಿಡಿಯಲಾಯಿತು. ಈ ವಿಧಾನವನ್ನು ಜಾಕರ್ಡ (1908) ಎಂಬುವವರ ಅಭಿವೃದ್ಧಿ ಪಡಿಸಿದ ಪದ್ಧತಿಯಿಂದ ಮಾಡಲಾಯಿತು.

**ಫಲಿತಾಂಶಗಳು ಮತ್ತು ಚರ್ಚೆ:** ಅಗಾರೋಜ ವಿದ್ಯುದ್ವಿಭಜನೆ ಮತ್ತು ಪಿ.ಸಿ.ಆರ್ ವಿಸ್ತರಣೆಯಲ್ಲಿ ಬಳಸಿದ 40 ಪರಿಚಯಾತ್ಮಕ ವರ್ಣತಂತು ಸೂಚಿಕೆಗಳಲ್ಲಿ ಸಿ.ಸಿ.ಎಮ್ 95 ಮತ್ತು ಸಿ.ಸಿ.ಎಮ್ 293 (ಚಿತ್ರ–1) ಸೂಚಿಕೆಗಳು ಹೆಚ್ಚಿನ ವೈವಿಧ್ಯತೆಯನ್ನು ತೋರಿಸುತ್ತದೆ. ಈ ಸೂಚಿಕೆಗಳು ಟಿ.ಎಸ್–3ಆರ್ ತಳಿಯನ್ನು ಇತರೆ ಕಲಬೆರಿಕೆ ಗಿಡಗಳಾದ ಮಾರುತಿ, ಜಿ.ಆರ್.ಜಿ–811 ಮತ್ತು ಆಶಾ ಗಿಡಗಳಿಂದ ಬೇಪರ್ಡಿಸುವುದಕ್ಕೆ ಸಹಾಯಕಾರಿಯಾಗಬಲ್ಲವು. ಈ ಸೂಚಿಕೆ ಗಳನ್ನು ಉಪಯೋಗಿಸಿ ತಳಿ ಶುದ್ಧತೆ ಪರೀಕ್ಷೆಯನ್ನು ಅತಿ ಕಡಿಮೆ ಸಮಯದಲ್ಲಿ ಮಾಡಬಹುದಾಗಿದೆ. ಈ ಅಧ್ಯಯನ ಫಲಿತಾಂಶಗಳು ಯಾಶಿತೋಲಾ ಮತ್ತಿತರರು (2002) ಮತ್ತು ಸುಂದರಮ್ ಮತ್ತಿತರರು (2008) ಮಾಡಿದ ಅಧ್ಯಯನದ ಫಲಿತಾಂಶಗಳ ಜೊತೆಗೆ ತಾಳೆಯಾಗುತ್ತವೆ ಮತ್ತು ತಳಿ ಶುದ್ಧತೆ ಪರೀಕ್ಷೆಯಲ್ಲಿ ಎಸ್.ಎಸ್.ಆರ್ ಸೂಚಿಕೆಗಳ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

**ಚಿತ್ರ.1: ಟಿ.ಎಸ್–3ಆರ್ ತಳಿಯನ್ನು ಇತರೆ ಕಲಬೇರಿಕೆ ಗಿಡಗಳಿಂದ ಬೇರ್ಪಡಿಸಬಹುದಾದ ಸೂಚಿಕೆಗಳ ವರ್ಣತಂತು ಪಟ್ಟಿ.**



ಮೂಲ ಬೀಜೋತ್ಪಾದನೆಯಲ್ಲಿ ಉತ್ಪಾದಿಸಿದ ತೊಗರಿ/ಟಿ.ಎಸ್–3ಆರ್ ಲಾಟ್‌ಗಳ ಮಾದರಿ ತೆಗೆದುಕೊಂಡು ಅದರ ವರ್ಣತಂತು ಬೇರ್ಪಡಿಸಿ ಸೂಚಿಕೆಗಳ ಜೊತೆ ತಾಳೆ ಹಾಕಿದಾಗ ನಮಗೆ ತಳಿ ಶುದ್ಧತೆ ಪ್ರಮಾಣ ಕಂಡುಕೊಳ್ಳಬಹುದು. ಉದಾಹರಣೆಗೆ ತೊಗರಿ/ಟಿ.ಎಸ್–3ಆರ್ ತಳಿಯ x–256 ಲಾಟಿನ 25 ಬೀಜಗಳನ್ನು ಬಿತ್ತನೆ ಮಾಡಿ 10–15 ದಿವಸಗಳ ನಂತರ ಈ ಮೇಲೆ ವಿಧಾನಗಳಲ್ಲಿ ಹೇಳಿದಹಾಗೆ ವರ್ಣತಂತು ಬೇರ್ಪಡಿಸಿ ಸಿ.ಸಿ.ಎಮ್ 95 ಅಥವಾ ಸಿ.ಸಿ.ಎಮ್ 93 ಸೂಚಿಕೆಯೊಂದಿಗೆ ವಿದ್ಯುದ್ವಿಭಜನೆ ಅಥವಾ ಪಿ.ಸಿ.ಆರ್ ವಿಸ್ತರಣೆ ಮಾಡಿದಾಗ ಯಾವ ಬೀಜ ಸೂಚಿಕೆಯೊಂದಿಗೆ ತಾಳೆಯಾಗುತ್ತಿಲ್ಲವೂ ಅವು ಕಲಬೇರಿಕೆಗಳಾಗಿರುತ್ತವೆ. 25 ಬೀಜಗಳ ಮಾದರಿಯಲ್ಲಿ 2 ಬೀಜಗಳು ಸೂಚಿಕೆಗಳ ಜೊತೆಗೆ ತಾಳೆಯಾಗದ್ದಿಲ್ಲಿ ತಳಿ ಕಲಬೇರಿಕೆ ಪ್ರಮಾಣ ಶೇ.8% ರಷ್ಟು ಎಂದು ಮತ್ತು ಈ ಲಾಟಿನ ತಳಿ ಶುದ್ಧತೆ ಶೇ.92% ರಷ್ಟು ಇದೆ ನಿಖರವಾಗಿ ಫಲಿತಾಂಶವನ್ನು ನೀಡಬಹುದು.

**ಉಲ್ಲೇಖ:**

1. ಜಾಕರ್ಡ್,ಪಿ. (1908). ಫ್ರಾನ್ಸ ದೇಶದ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನದ ನಿಯತಕಾಲಿಕೆ. ಸಂಪುಟ 44 : ಪುಟ 223–270.

2. ಮುರ್ರೆ, ಎಮ್.ಜಿ ಮತ್ತು ಥಾಮ್ಸನ್, ಡಬ್ಲು.ಎಫ್. (1980). ನ್ಯೂಕ್ಲೀಕ್ ಅಸಿಡ್ ರಿಸರ್ಚ ನಿಯತಕಾಲಿಕೆ ಸಂಪುಟ 8 : ಪುಟ 4321–4325.

3. ಸುಂದರಮ್, ಆರ್.ಎಮ್., ನವಿನ್ ಕುಮಾರ,ಬಿ., ಬಿರಾದರ, ಎಸ್.ಕೆ., ಬಾಲಚಂದ್ರನ,ಎಸ್.ಎಮ್., ಮಿಶ್ರಾ,ಬಿ., ಇಳ್ಯಾಸ ಅಹ್ಮದ, ಎಮ್., ವಿರಕ್ತಮಠ,ಬಿ.ಸಿ., ರಮೇಶ,ಎಮ್.ಎಸ್ ಮತ್ತು ಶರ್ಮಾ,ಎನ್.ಪಿ (2008) ಯೂಫೈಟಿಕಾ ನಿಯತಕಾಲಿಕೆ. ಸಂಪುಟ 163 : ಪುಟ 215–224.

4. ವಾನರ್,ಡಿ.ಬಿ., ಪುರ್ನಯಿರ್,ಜಿ.ಆರ್., ಸಾಗೆ–ಮಾರೂಫ, ಎಮ್. ಎ., ವಿಲಿಯಮ್ಸ,ಎಸ್.ಎಮ್., ಡಾನ್‌ಸಿಕ್.ಬಿ.ಪಿ ಮತ್ತು ಅಲ್ಲರ್ಡ, ಆರ್.ಡಬ್ಲು. (1987). ಅಮೇರಿಕೆಯ ರಾಷ್ಟ್ರೀಯ ವಿಜ್ಞಾನ ಪರಿಷತ್ತಿನ ನಡಾವಳಿ. ಪುಟ 2097–2100.

5. ಯಾಶಿತೋಲಾ,ಜಿ., ಧೀರುಮುರುಗನ್,ಟಿ., ಸುಂದರಮ್, ಆರ್.ಎಮ್., ನಾಸಿರುಲ್ಲಾ, ಎಮ್.ಕೆ., ರಮೇಶ,ಎಮ್.ಎಸ್., ಶರ್ಮಾ,ಎನ್.ಪಿ ಮತ್ತು ಸೋಟಿ,ಆರ್.ವಿ. (2002). ಕ್ರಾಪ್‌ಸೈನ್ಸ ನಿಯತಕಾಲಿಕೆ. ಸಂಪುಟ 42 : ಪುಟ–1369–1373.

## ಹವಾಮಾನ ಬದಲಾವಣೆಯಿಂದಾಗಿ ಕೃಷಿ ಕ್ಷೇತ್ರದ ಮೇಲಾಗುವ ಪರಿಣಾಮಗಳು: ಒಂದು ತೌಲನಿಕ ಅಧ್ಯಯನ

ಯು. ಕೆ. ಶಾನವಾಡ *, ವಿಶ್ವನಾಥ ಬೀರಾದಾರ ** ಹಾಗೂ ಐ. ಶಂಕರಗೌಡ ***

* ವಿಜ್ಞಾನಿ (ಬೇಸಾಯ ಶಾಸ್ತ್ರ), ** ತಾಂತ್ರಿಕ ಅಧಿಕಾರಿ, *** ಪ್ರಧಾನ ಅಧಿಕಾರಿ(ಕೃಷಿ ಹವಾಮಾನ ವಿಭಾಗ), ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ರಾಯಚೂರು 584 104. ಈ ಮೇಲ್: shanwar@gmail.com

ಈ ಮೇಲ್: vishwa_agron@yahoo.co.in ಈ ಮೇಲ್: adrraichur@rediffmail.com

**ಪ್ರಬಂಧಸಾರ:–** ಇತ್ತೀಚಿಗಿನ ವರ್ಷಗಳಲ್ಲಿ ಹವಾಮಾನದಲ್ಲಿ ಸಾಕಷ್ಟು ಬದಲಾವಣೆಗಳು ಕಂಡು ಬಂದಿವೆ. "ಹವಾಮಾನ ಬದಲಾವಣೆ" ಎಂಬ ಪೀಡೆ ಪ್ರತಿ ಎರಡು – ಮೂರು ವರ್ಷಗಳಿಗೊಮ್ಮೆ ಮರುಕಳಿಸಿ ತನ್ನ ಕದಂಬ ಬಾಹುಗಳನ್ನು ಕೃಷಿ ಕ್ಷೇತ್ರಕ್ಕೆ ವ್ಯಾಪಿಸಿ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಒಂದು ಕಾಲದಲ್ಲಿ ಅಂದರೆ 1964 – 65 ರ ಹಸಿರು ಕ್ರಾಂತಿಯಿಂದ ಉಚ್ಛ್ರಾಯ ಸ್ಥಿತಿ ತಲುಪಿದ ಭಾರತೀಯ ಕೃಷಿಗೆ ಇದೀಗ ವಿಪತ್ತು ಬಂದು ಒದಗಿದೆ. ಒಂದು ಕಡೆ ಭೀಕರ ಬರಗಾಲ, ರೈತರ ಆತ್ಮಹತ್ಯೆ ಇನ್ನೊಂದೆಡೆ ಭಾರೀ ಪ್ರವಾಹ, ಆಲಿಕಲ್ಲು ಮಳೆಯಿಂದ ಬೆಳೆ ನಾಶವಾಗಿ ಮನುಕುಲದ ಅಳಿವಿಗೆ ಮಾರಕವಾಗಿ ಪರಿಣಮಿಸಿವೆ. ತಾಪಮಾನದಲ್ಲಿ ಏರುಪೇರುಗಳು ಉಂಟಾಗುತ್ತಿರುವುದರ ಜೊತೆಗೆ, ಮಳೆಯ ಪ್ರಮಾಣ ಹಾಗೂ ತೀವ್ರತೆಯಲ್ಲಿ ಬದಲಾವಣೆ ಆಗಿರುವದನ್ನು ಕಾಣಬಹುದಾಗಿದೆಯಲ್ಲದೇ, ಅಕಾಲಿಕ ಮಳೆಯಾಗುವ ಸಂದರ್ಭಗಳೂ ಹೆಚ್ಚಾಗುತ್ತಿವೆ. ಇದರಿಂದ, ಅತೀವೃಷ್ಟಿ ಹಾಗೂ ಅನಾವೃಷ್ಟಿಯಂತಹ ಪ್ರಕೃತಿ ವಿಕೋಪಗಳು ಮೇಲಿಂದಮೇಲೆ ಸಂಭವಿಸುತ್ತಿರುವುದು ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯವಾಗಿದೆ. ಜಾಗತಿಕ ತಾಪಮಾಣದಲ್ಲಿಯ ನಿರಂತರ ಹೆಚ್ಚಳವೇ ಇದಕ್ಕೆ ಮುಖ್ಯ ಕಾರಣವೆನ್ನುವದು ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಜಾಗತಿಕವಾಗಿ, 1990 ರಿಂದ 2014 ನೇ ಇಸ್ವಿಯವರೆಗಿನ 25 ವರ್ಷಗಳಲ್ಲಿ, 14 ವರ್ಷಗಳು, ಅತಿವೃಷ್ಟಿ–ಅನಾವೃಷ್ಟಿಯಿಂದ ಕೂಡಿವೆ, ಬೇಸಿಗೆಯ ತಿಂಗಳಲ್ಲಿ ತಾಪಮಾನದ ಹೆಚ್ಚಳವು ಅನುಭವಕ್ಕೆ ಬಂದಿದೆ. ಮುಂದಿನ ವರ್ಷಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ, ವಿಶೇಷವಾಗಿ ಕೃಷಿಯಲ್ಲಿ ಇದರ ಪ್ರಭಾವದಿಂದಾಗಿ ಅನೇಕ ಹೊಸ ಸಮಸ್ಯೆಗಳು ಉದ್ಭವವಾಗಿ ಆಹಾರ ಉತ್ಪಾದನೆಯ ಗುರಿಯನ್ನು ಮುಟ್ಟುವಲ್ಲಿ ಅಡಚಣೆಯಾಗುವ ಸಾಧ್ಯತೆಗಳಿವೆ, ಒಂದು ಅಂದಾಜಿನಂತೆ ಈ ಶತಮಾನದ ಅಂತ್ಯಕ್ಕೆ ಜಾಗತಿಕ ತಾಪಮಾನದಲ್ಲಿ $3^0$ ರಿಂದ $5^0$ ಸೆ. ಹೆಚ್ಚಳವಾಗಲಿದೆ. ಇದರಿಂದ ಧ್ರುವ ಪ್ರದೇಶದ ಹಿಮ ಕರಗುವಿಕೆಯಿಂದಾಗಿ ನೆರೆಹಾವಳಿ ಹಾಗೂ ಸಮುದ್ರ ಮಟ್ಟದ ಹೆಚ್ಚಳವಾಗುವ ಸಾಧ್ಯತೆಗಳಿವೆ. ಇದರಿಂದ, ಕರಾವಳಿ ಹಾಗೂ ತಗ್ಗು ಪ್ರದೇಶಗಳು ಜಲಾವೃತವಾಗಬಹುದಾಗಿದ್ದು ಇದರ ಪ್ರತ್ಯಕ್ಷ ಹಾಗೂ ಪರೋಕ್ಷ ಪರಿಣಾಮಗಳು ಸಕಲ ಜೀವರಾಶಿಯ ಮೇಲೆ ಹಾನಿ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ. ಮನುಷ್ಯ, ಪ್ರಾಣಿ–ಪಕ್ಷಿಗಳ ನೆಲೆ–ವಾಸಗಳ ನಾಶ ಹಾಗೂ ಪ್ರಾಣಿ ಮತ್ತು ಸಸ್ಯ ಪ್ರಬೇಧಗಳು ನಶಿಸಿ ಹೋಗುವ ಸಾಧ್ಯತೆಗಳಿವೆ. ಅತೀವೃಷ್ಟಿ ಹಾಗೂ ಅನಾವೃಷ್ಟಿಯಂತಹ ಪ್ರಕೃತಿ ವಿಕೋಪಗಳು ಮೇಲಿಂದಮೇಲೆ ಸಂಭವಿಸಬಹುದು. ಹವಾಮಾನವನ್ನೇ ಅವಲಂಬಿಸಿದ ಕೃಷಿ ಕ್ಷೇತ್ರದ ಮೇಲೂ ಇದರ ಕರಾಳ ಛಾಯೆ ಬೀಳುವದೆಂದು ಶಾಸ್ತ್ರಜ್ಞರ ಹೇಳಿಕೆಯಾಗಿದೆ.

ಭಾರತವು ಕೃಷಿ ಪ್ರಧಾನ ದೇಶವಾಗಿದ್ದು ಶೇ 65 ರಷ್ಟು ಜನತೆಯ ಜೀವನಾಧಾರವಾಗಿದೆ. ದೇಶದ ಪ್ರತಿ ವರ್ಷದ ಆರ್ಥಿಕತೆಯು ಮುಂಗಾರು ಮಳೆಯ ಆರಂಭ, ಪ್ರಮಾಣ ಹಾಗೂ ಹಂಚಿಕೆಯನ್ನು ಅವಲಂಭಿಸಿದೆ. ತಾಪಮಾನದ ಏರಿಕೆಯಿಂದ ಒತ್ತಡದಲ್ಲಿ ಇಳಿಕೆಯಾಗಿ ಸ್ಥಳದಿಂದ ಸ್ಥಳಕ್ಕೆ ಒತ್ತಡದ ವ್ಯತ್ಯಾಸ ಉಂಟಾಗುವುದು. ಈ ಒತ್ತಡದ ವ್ಯತ್ಯಾಸದಿಂದ ಗಾಳಿಯ ರಭಸವಾಗಿ ಒಂದು

ಕಡೆಯಿಂದ ಮತ್ತೊಂದು ಕಡೆಗೆ ಚಲಿಸಿ ಕೆಲವೊಮ್ಮೆ ಬಿರುಗಾಳಿ, ಅಕಾಲಿಕ ಮಳೆ ಅಥವಾ ವಾತಾವರಣದಲ್ಲಿ ಅನಿರೀಕ್ಷಿತ–ಅನಪೇಕ್ಷಿತ ಏರು ಪೇರುಗಳನ್ನು ಉಂಟುಮಾಡುವದರಿಂದ ಕೃಷಿ ಚಟುವಟಿಕೆಗಳಲ್ಲಿ ತೊಂದರೆ ಉದ್ಭವಿಸುತ್ತವೆ. ವಾತಾವರಣದ ಇಂಗಾಲದ ಡೈಆಕ್ಸೈಡದ ಪ್ರಮಾಣವು 550 ಪಿ.ಪಿ.ಎಮ್. ನಷ್ಟು ಹೆಚ್ಚಾದಾಗ ಭತ್ತ, ಗೋದಿ, ದ್ವಿದಳ ಧಾನ್ಯಗಳು ಹಾಗೂ ಎಣ್ಣೆ ಬೆಳೆಗಳ ಇಳುವರಿ ಯು ಶೇ. 10 ರಿಂದ 20 ರಷ್ಟು ಹೆಚ್ಚಾಗಬಹುದು. ಆದರೆ ವಾತಾವರಣದ ತಾಪಮಾನವು 1 ಡಿಗ್ರಿ ಸೆಂಟಿಗ್ರೇಡ್ ನಷ್ಟು ಹೆಚ್ಚಾದಾಗ ಗೋಧಿ, ಸೋಯಾಬಿನ್, ಶೇಂಗಾ ಮತ್ತು ಆಲೂಗಡ್ಡೆಯ ಇಳುವರಿಯು ಶೇ. 3 ರಿಂದ 7 ರಷ್ಟು ಕಡಿಮೆಯಾಗುವುದು. ವಾಯವ್ಯ ಭಾರತದ ರಾಜ್ಯಗಳಾದ ಪಂಜಾಬ, ಹರಿಯಾಣಾ ಮತ್ತು ರಾಜಸ್ಥಾನ ಮುಂತಾದ ಪ್ರದೇಶಗಳಲ್ಲಿ ಆಲೂಗಡ್ಡೆ, ಸಾಸಿವೆ ಮತ್ತು ತರಕಾರಿ ಬೆಳೆಗಳ ಇಳುವರಿಯು ತಾಪಮಾನದ ಏರಿಕೆಯಿಂದ ಹೆಚ್ಚಾಗಬಹುದು. ಯಾಕೆಂದರೆ ಹವಾಮಾನ ಬದಲಾವಣೆಯಿಂದ ವಾತಾವರನದ ತಾಪಮಾನವು ಏರವುದರಿಂದ ಹಿಂಗಾರಿ ಬೆಳೆಗಳಿಗೆ ಬೀಳುವ ಮಂಜಿನ ಪ್ರಮಾಣ ಕಡಿಮೆಯಾಗುವುದು. ಅಧಿಕ ಇಂಗಾಲದ ಡೈಆಕ್ಸೈಡ ಪ್ರಮಾಣವು ಬಹಳ ಬೆಳೆಗಳಿಗೆ ಪ್ರಯೋಜಕಾರಿಯಾದರೂ. ಇದರಿಂದ ಉಂಟಾಗುವ ಏರಿದ ಉಷ್ಣತೆ ಮತ್ತು ಮಳೆಯ ಹಂಚಿಕೆಯಲ್ಲಿನ ವ್ಯತ್ಯಾಸವು ಕೃಷಿ ಉತ್ಪಾದನೆಯ ಮೇಲೆ ಗಣನೀಯವಾಗಿ ಪರಿಣಾಮವನ್ನು ಉಚಿಟುಮಾಡುವುದು. ಹವಾಮಾನ ಬದಲಾವಣೆಯ ಕುರಿತಾದ ಅಂತರ ಸರಕಾರಿ ಸಮಿತಿಯ (ಐ.ಪಿ.ಸಿ.ಸಿ) ಹಾಗೂ ಇನ್ನಿತರ ಸಂಶೋಧನಾ ವರದಿಯ ಪ್ರಕಾರ ಈ ಶತಮಾನದ ಅಂತ್ಯದ ವೇಳೆಗೆ ಭಾರತದ ಕೃಷಿ ಉತ್ಪಾದನೆಯಲ್ಲಿ ಶೇ. 10 ರಿಂದ 40 ರಷ್ಟು ಕುಂಠಿತವಾಗಬಹುದಾಗಿದೆ. ಇವೆಲ್ಲಾ ಅಂಶಗಳನ್ನು ಗಮನದಲ್ಲಿಟ್ಟು ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರಿನ ಕಳೆದ 30 ವರ್ಷಗಳ (1986 – 2014) ಹವಮಾನದ ಅಂಶಗಳನ್ನು ವಿಶ್ಲೇಷಿಸಿದಾಗ ಕಳೆದ ಒಂದು ದಶಕದಲ್ಲಿ ಹೆಚ್ಚಿನ ಏರು – ಪೇರುಗಳು ಸಂಭವಿಸಿರುವುದು ಕಂಡುಬಂದು ರಾಯಚೂರು ಭಾಗದ ಪ್ರಮುಖ ಬೆಳೆಗಳಾದ ಹತ್ತಿ, ಸೂರ್ಯಕಾಂತಿ, ಶೇಂಗಾ ಮುಂತಾದವುಗಳ ಮೇಲೆ ವ್ಯತಿರಿಕ್ತ ಪರಿಣಾಮ ಭೀರಿರುವುದು ತಿಳಿದುಬಂದಿದೆ.

**ಪೀಠಿಕೆ:** ಕಳೆದ ಶತಮಾನದ ಮೊದಲ ಹಾಗೂ ಕೊನೆಯ ದಶಕಗಳಲ್ಲಿನ ತಾಪಮಾನದ ಪ್ರಮಾಣವನ್ನು ಹೋಲಿಸಿ ನೋಡಿದಾಗ, ಉತ್ತರ ಕರ್ನಾಟಕದ ರಾಯಚೂರ, ವಿಜಾಪೂರ, ಕಲಬುರ್ಗಿ ಜಿಲ್ಲೆಗಳಲ್ಲಿ ಅಕ್ಟೋಬರ್, ನವ್ಹೆಂಬರ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿಯ ಕನಿಷ್ಟ (ರಾತ್ರಿ) ತಾಪಮಾನದಲ್ಲಿ 1.5 ರಿಂದ $3.3^0$ ಸೆ ಹಾಗೂ ರಾಯಚೂರು ಮತ್ತು ವಿಜಾಪುರ ಜಿಲ್ಲೆಯಲ್ಲಿ ಮಾರ್ಚ ತಿಂಗಳ ಗರಿಷ್ಟ (ಹಗಲಿನ) ತಾಪಮಾನದಲ್ಲಿ $1^0$ ಸೆ ಹೆಚ್ಚಳ ದಾಖಲಾಗಿರುವದು ಕಂಡುಬಂದಿದೆ. ತಾಪಮಾನದಲ್ಲಿನ ಹೆಚ್ಚಳವು ಈ ಮೊದಲಿನ ಎಲ್ಲ ದಾಖಲೆಗಳನ್ನು ಮುರಿದಿರುತ್ತವೆ. ತಾಪಮಾನದ ಹೆಚ್ಚಳ ಹಾಗೂ ಏರಿಳಿತಗಳ ಪರಿಣಾಮವಾಗಿ ವಾತಾವರಣದ ಭೌತಿಕಸ್ಥಿತಿಯ ಇತರ ಪರಿಮಾಪಕಗಳಲ್ಲಿ (ಮಳೆ/ಆರ್ದ್ರತೆ/ಗಾಳಿ/ಬಿಸಿಲು..) ಸಾಮಾನ್ಯ ಕ್ಕಿಂತಲೂ ಅತಿ ಹೆಚ್ಚಿನ ಏರಿಳಿತಗಳನ್ನು (ಪ್ರಮಾಣ ಹಾಗೂ ಅವಧಿ) ಕಾಣಬಹುದಾಗಿದೆ. ಇಂತಹ ಅನಿರೀಕ್ಷಿತ ಹಾಗೂ ಅನಪೇಕ್ಷಿತ. ಏರುಪೇರುಗಳಿಗೆ **"ವಿಪರೀತ ಹವಾಮಾನ ಪರಿಸ್ಥಿತಿ"** ಅಥವಾ **"ಹವಾಮಾನ ವೈಪರಿತ್ಯ"** ಎಂದು ಕರೆಯಲಾಗುತ್ತದೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ, ಹಾಗೂ ಒಂದು ಋತುವಿನಿಂದ ಮತ್ತೊಂದು ಋತುವಿಗೆ ಈ ಹವಾಮಾನ ವೈಪರಿತ್ಯಗಳ ಪ್ರಮಾಣ ಹಾಗೂ ಅವಧಿಗಳು ಬೇರೆ ಬೇರೆ ಯಾಗಿರುತ್ತವೆ. ಅಕಲ್ಪಿತ ಮೊಡಕವಿದ ವಾತಾವರಣ; ಗುಡುಗು–ಮಿಂಚು ಹಾಗೂ ಬಿರುಗಾಳಿಯಿಂದ ಕೂಡಿದ ತೀವ್ರಮಳೆ, ಆಣೇಕಲ್ಲಿನ ಮಳೆ, ಒಂದೇ ದಿನದಲ್ಲಿ ಹೆಚ್ಚು ಮಳೆಯಾಗುವಿಕೆ, ಸತತವಾಗಿ ಹೆಚ್ಚಿನ ದಿನಗಳವರೆಗೆ ಮಳೆ ಆಗುವಿಕೆ; ಕಡಿಮೆ ಪ್ರಮಾಣದ ಮಳೆ, ಹೆಚ್ಚಿನ ದಿನಗಳವರಗೆ ಮಳೆ ಆಗದಿರುವಿಕೆ (ಬರ), ಸತತವಾಗಿ 4–5 ದಿನಗಳವರೆಗೆ ಕನಿಷ್ಟ ತಾಪಮಾನದಲ್ಲಿ ಅನಿರೀಕ್ಷಿತ ಹೆಚ್ಚಳ, ಬಿಸಿಗಾಳಿ; ಸತತವಾಗಿ 4–5 ದಿಗಳವರೆಗೆ ಕನಿಷ್ಟ ತಾಪಮಾನದಲ್ಲಿ ಅನಿರೀಕ್ಷಿತ ಇಳಿಕೆ, ಶೀತಗಾಳಿ; ಇಬ್ಬನಿ; ಹೊಗೆಮಂಜು; ಚಂಡಮಾರುತ ಇವೆಲ್ಲವೂ ನಾವು ಕಾಣತ್ತಿರುವ ಹಾಗೂ ಅನುಭವಿಸುತ್ತಿರುವ ಹವಾಮಾನ ವೈಪರಿತ್ಯಗಳೇ! ಈ ವೈಪರಿತ್ಯಗಳು ಮನುಷ್ಯ, ಪ್ರಾಣಿ–ಪಕ್ಷಿ, ಗಿಡ–ಮರ, ಬೆಳೆ, ಅಲ್ಲದೇ ಸಕಲ ಜೀವರಾಶಿಗಳ ಮೇಲೆ ವಿವಿಧ ತರಹದ ಹಾಗೂ ಅಗಾಧವಾದ ದುಷ್ಪಪರಿಣಾಮಗಳನ್ನು ಉಂಟುಮಾಡುತ್ತವೆ.

**ತಾಪಮಾನದ ಹೆಚ್ಚಳಕ್ಕೆ ಕಾರಣಗಳು :** ಸೂರ್ಯನ ಕಿರಣಗಳಿಂದ ಭೂಮಿಯ ತಾಪಮಾನ ಹೆಚ್ಚಾಗಿ, ಭೂಮಿಯಿಂದ ವಿಕಿರಣಗಳು ಬಾಹ್ಯಾಕಾಶದ ಕಡೆಗೆ ಬಿಡುಗಡೆಯಾಗುವವು. ಭೂಮಿಯಿಂದ ಬಿಡುಗಡೆ ಹೊಂದಿದ ಈ ವಿಕಿರಣಗಳ ಸ್ವಲ್ಪ ಭಾಗವನ್ನು ವಾತಾವರಣದಲ್ಲಿ ಸ್ವಾಭಾವಿಕವಾಗಿ ಇರುವ ಅನಿಲಗಳು (ಹಸಿರು ಮನೆ ಅನಿಲಗಳು) ಹಿಡಿದಿಟ್ಟುಕೊಳ್ಳುವುದರಿಂದ, ವಾತಾವರಣದ ತಾಪಮಾನವು ಹೆಚ್ಚುತ್ತದೆ.ವಾತಾವರಣದಲ್ಲಿಯ ಅನಿಲಗಳ ಸಾಂದ್ರತೆಯನ್ನು ಅವಲಂಬಿಸಿ ವಾತಾವರಣದ ತಾಪಾಮಾನದ ಪ್ರಮಾಣವು ನಿರ್ಧರಿಸಲ್ಪಡುತ್ತದೆ. ಇಂಧನ ಘಟಕಗಳಿಂದ ಕಲ್ಲಿದ್ದಲು ಸುಡುವುದು, ಕಾರ್ಖಾನೆ ಹಾಗೂ ವಾಹನಗಳಿಂದ ವಿಸರ್ಜಿಸಲ್ಪಡು ತ್ತಿರುವ ಇಂಗಾಲದ ಡೈಆಕ್ಸೈಡ ಹೊಗೆ ಮತ್ತು ಕೃಷಿ ಹಾಗೂ ಇತರ ಕ್ಷೇತ್ರಗಳಿಂದ ಬಿಡುಗಡೆಯಾಗುವ ಮುಥೇನ್, ನೈಟ್ರಸ್ ಆಕ್ಸೈಡ್‌ನ ಹಾಗೂ ಸಲ್ಫರ್ ಹೆಕ್ಸಾಫ್ಲೋರೈಡ್ ಅಲ್ಲದೇ ಇನ್ನಿತರ ಅನಿಲಗಳು ವಾಯುಮಾಲಿನ್ಯಕ್ಕೆ ಕಾರಣವಾಗುವವಲ್ಲದೆ. ಇವು ಭೂಮಿಯಿಂದ ಬಿಡುಗಡೆ ಆಗುವ ವಿಕಿರಣಗಳನ್ನು ಹೆಚ್ಚಿನ ಪ್ರಮಾಣದಲ್ಲಿ ವಾತಾವರಣದಲ್ಲಿಯೇ ಹಿಡಿದಿಟ್ಟುಕೊಳ್ಳುವುದರಿಂದ, ವಾತಾವರಣದ ತಾಪಮಾನವು ನಿರೀಕ್ಷಿತಮಟ್ಟಕ್ಕಿಂತಲೂ ಹೆಚ್ಚಾಗು ತ್ತದೆ. ವಿಶ್ವದಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಇಂಗಾಲದ ಡೈಆಕ್ಸೈಡ್ ಹೊರಸೂಸುವ ದೇಶಗಳ ವಿವರ ಇಂತಿದೆ. (ಪ್ರಮಾಣ ನೂರು ಕೋಟಿ ಟನ್ನಗಳಲ್ಲಿ). ಅಮೇರಿಕ (596). ಚೀನಾ (532), ರಶಿಯಾ (1.7). ಜಪಾನ (1.23), ಭಾರತ (1.17), ಜರ್ಮನಿ (0.84), ಕೆನಡಾ (0.63), ಬ್ರಿಟನ್ (0.58), ದ. ಕೋರಿಯಾ (0.50) ಹಾಗೂ ಇಟಲಿ (0.58).

**ಭೌಗೋಳಿಕ ಹಿನ್ನೆಲೆ:** ಬೇಸಿಗೆಯ ಬಿಸಿಲಿಗೆ ಹೆಸರಾಗಿರುವ ಉತ್ತರ

ಕರ್ನಾಟಕದ ರಾಯಚೂರು ಜಿಲ್ಲೆ ಇಂದು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದು, ಈ ಹಿಂದೆ ಬಹುಮನಿ ಸುಲ್ತಾನರು, ಹೈದರಾಬಾದ್ ನಿಜಾಮರು ಆಳಿದಂತಹ ನಾಡು, ಅಂದು ಕಲ್ಯಾಣಿ ಕರ್ನಾಟಕದ ಪ್ರಮುಖ ಜಿಲ್ಲೆಯಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಮೆರೆದಿದ್ದ ರಾಯಚೂರು ಜಿಲ್ಲೆ ಇಂದು ಹೈದರಾ ಬಾದ್ ಕರ್ನಾಟಕ ಪ್ರದೇಶದ ಒಂದು ಹಿಂದುಳಿದ ಜಿಲ್ಲೆಯಾಗಿ ಪರಿವರ್ತಿತವಾಗಿದೆ. ಇದರ ಒಟ್ಟು ವಿಸ್ತೀರ್ಣ 14,265 ಚದುರ ಕಿಲೋ ಮೀಟರಗಳು ಜಿಲ್ಲೆಯ ಉತ್ತರ ಭಾಗದಲ್ಲಿ ಕೃಷ್ಣಾ ನದಿ ಹರಿಯುತ್ತಿದ್ದರೆ ದಕ್ಷಿಣಕ್ಕೆ ತುಂಗಭದ್ರಾ ನದಿಯು ಹರಿಯುತ್ತಿದೆ, ಆದುದರಿಂದಲೇ ರಾಜ್ಯದಲ್ಲಿ ಒಂದು ಪ್ರಮುಖ ನೀರಾವರಿ ಪ್ರದೇಶ ಹೊಂದಿದಂತಹ ಜಿಲ್ಲೆಯಾಗಿದೆ. ರಾಯಚೂರು ಅರೆಉಷ್ಣವಲಯ ಪ್ರದೇಶದಲ್ಲಿ ಬರುತ್ತಿದ್ದು, ಭೌಗೋಳಿಕವಾಗಿ ಸಮುದ್ರ ಮಟ್ಟದಿಂದ 389.5 ಮೀಟರ್ ಎತ್ತರದಲ್ಲಿದ್ದು $16.12^0$ ಉತ್ತರ ಅಕಾಂಶ ಹಾಗೂ $76.24^0$ ಪೂರ್ವ ರೇಖಾಂಶಗಳನ್ನು ಹೊಂದಿದ್ದು, ಕರ್ನಾಟಕ ರಾಜ್ಯದ ಉತ್ತರ-ಪೂರ್ವ ಒಣಪ್ರದೇಶ ಕೃಷಿ ಹವಾಮಾನ ವಲಯದಲ್ಲಿ ಬರುತ್ತಿದೆ. ಜಿಲ್ಲೆಯು ಕಡಿಮೆ ಮಳೆ ಬೀಳುವ ಪ್ರದೇಶವಾಗಿದ್ದು, ವಾರ್ಷಿಕ ಸುಮಾರು 663.8 ಮಿ.ಮಿ ಮಳೆ ಪ್ರಮಾಣ ಹೊಂದಿದೆ, ಏಪ್ರೀಲ್ ತಿಂಗಳಿನಲ್ಲಿ ಬಿಸಿಲಿನ ಅವಧಿಯು ಹೆಚ್ಚು ಇದ್ದು 16 ನೇ ವಾರ (10.3 ಗಂಟೆಗಳು), 31 ನೇ ವಾರ ಜುಲೈ-ಅಗಸ್ಟನಲ್ಲಿ ಕಡಿಮೆ ಇರುವುದು (4.1 ಗಂಟೆಗಳು), ವಾತಾವರಣದ ತೇವಾಂಶ ಮಳೆಗಾಲದಲ್ಲಿ ಹೆಚ್ಚಿದ್ದು (80–90%) ಹಾಗೂ ಬೇಸಿಗೆಯಲ್ಲಿ ಅತಿ ಕಡಿಮೆ ಮಟ್ಟಕ್ಕೆ ತಲುಪಿರುತ್ತದೆ (30–40%). ಅದೇ ರೀತಿ ಗಾಳಿಯ ವೇಗ ಮಳೆಗಾಲದಲ್ಲಿ ಹೆಚ್ಚಿದ್ದು (7.2 ಕಿ.ಮಿ/ಗಂಟೆಗೆ) ಹಿಂಗಾರಿನ ತಿಂಗಳುಗಳಲ್ಲಿ ಕಡಿಮೆ ಇರುವುದು ಕಂಡು ಬಂದಿದೆ. ರಾಯಚೂರು ಜಿಲ್ಲೆಯ ಭೂಗರ್ಭವು ಗ್ರಾನೈಟಿಕ್ ಮತ್ತು ಗ್ನೈಸಿನ್‌ಗಳಿಂದ ಕೂಡಿದ್ದು, ಬಹಳಷ್ಟು ವ್ಯಾಪ್ತಿಯು ಆಳವಾದ ಕಪ್ಪು ಭೂಮಿಯಿಂದ ಉಳಿದ ಭಾಗ ಕೆಂಪು ಭೂಮಿಯಿಂದ ಕೂಡಿರುತ್ತದೆ. ಮಣ್ಣು ಹಾಗೂ ನೀರಿನ ಸವಕಳಿಗೆ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳುವುದು ಮುಖ್ಯವಾಗಿದೆ. ರಾಯುಚೂರು ಜಿಲ್ಲೆಯುಲ್ಲಿ ಎಲ್ಲ ತರಹದ ಬೆಳೆಗಳನ್ನು ಬೆಳೆಬಹುದಾಗಿದ್ದು, ಮುಖ್ಯವಾಗಿ ಜೋಳ, ಶೇಂಗಾ, ಕಿರುಧಾನ್ಯಗಳು, ತೊಗರಿ, ಸೂರ್ಯಕಾಂತಿ, ಸಜ್ಜೆ. ಮುಂತಾದವುಗಳನ್ನು ಕೆಂಪು ಮಣ್ಣಿನಲ್ಲಿ ಮುಂಗಾರಿನಲ್ಲಿ ಬೆಳೆಯುತ್ತಿದು. ಹತ್ತಿ, ಎಳ್ಳು, ಹೆಸರು ಹಾಗೂ ಉದ್ದು ಮುಂತಾದವುಗಳನ್ನು ಕಪ್ಪು ಮಣ್ಣಿನಲ್ಲಿ ಮುಂಗಾರಿನಲ್ಲಿ ಬೆಳೆಯುತ್ತಾರೆ. ಹಿಂಗಾರಿ ಜೋಳ, ಹತ್ತಿ ಹಾಗೂ ಕುಸುಬೆಗಳನ್ನು ಹಿಂಗಾರು ಹಂಗಾಮಿನಲ್ಲಿ ತೆಗೆದುಕೊಳ್ಳುತ್ತಾರೆ.

**ಹವಾಮಾನ ಬದಲಾವಣೆಯ ವಸ್ತು-ಸ್ತಿತಿ:** ರಾಯಚೂರು ಜಿಲ್ಲೆ ಮೂಲತಹ ಅರೆ-ಉಷ್ಣವಲಯದಲ್ಲಿ ಬರುತ್ತಿದ್ದು, ಕಳೆದ ಒಂದು ಶತಮಾನದ ಮಳೆಪ್ರಮಾಣ ನೋಡಿದರೆ ಸರಾಸರಿ ಪ್ರತಿ ವರ್ಷಕ್ಕೆ 722 ಮಿ.ಮಿ ಬರುತ್ತಿದ್ದು ಕೆಲವೊಂದು ವರ್ಷಗಳಲ್ಲಿ ಹೆಚ್ಚು ಹಾಗೂ ಕೆಲವೊಂದರಲ್ಲಿ ಕಡಿಮೆಯಾಗಿರುವುದು ಕಂಡು ಬಂದಿದೆ, 1950, 1960, 1970 ಹಾಗೂ 1990 ರ ದಶಕಗಳಲ್ಲಿ ಸರಾಸರಿಗಿಂತ ಹೆಚ್ಚಿನ ಮಳೆಯಾಗಿದ್ದರೆ, 1930, 1940 1980 ಹಾಗೂ 2000 ರ ದಶಕಗಳಲ್ಲಿ ಸರಾಸರಿಗಿಂತ ಕಡಿಮೆ ಮಳೆಯಾಗಿರುವುದು ಕಂಡು ಬಂದಿದೆ. ರಾಯಚೂರು ಜಿಲ್ಲೆಗೆ ಮುಂಗಾರು ಹಮಗಾಮಿನ ಮಳೆಯ ಮಹತ್ವದ್ದಾಗಿದ್ದು, ಮುಂಗಾರು ಹಂಗಾಮಿನ ನಾಲ್ಕು ತಿಂಗಳುಗಳ (ಜೂನ್-ಸೆಪ್ಟೆಂಬರ) ವರಗಿನ ಮಳೆಯನ್ನು ತುಲನೆ ಮಾಡಿ ನೋಡಿದಾಗ 1950 ಹಾಗೂ 1960 ರ ದಶಕಗಳನ್ನು ಬಿಟ್ಟರೆ ಉಳದೆಲ್ಲ ದಶಕಗಳಲ್ಲಿ ಸರಾಸರಿ (130 ಮಿ.ಮಿ) ಗಿಂತ ಕಡಿಮೆ ಮಳೆಯಾಗಿರುವುದು ಕಂಡು ಬಂದಿದೆ. ಇದರಿಂದ ಮುಂಗಾರು ಹಂಗಾಮಿನ ಬೆಳೆಗಳಾದ ಹೆಸರು, ಉದ್ದು, ಸೂರ್ಯಕಾಂತಿ ಮುಂತಾದ ಬೆಳೆಗಳ ಮೇಲೆ ಗಂಭೀರ ಪರಿಣಾಮ ಬೀರಿ ಇಳುವರಿಯಲ್ಲಿ ಇಳಿಮುಖವಾಗಿರುವುದು ಕಂಡು ಬಂದಿದೆ. ಇನ್ನು ಹಿಂಗಾರು ಹಂಗಾಮಿನಲ್ಲಿ 1940, 1950, 1980 ರ ದಶಕಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ದಶಕಗಳಲ್ಲಿ ಸರಾಸರಿಗಿಂತ (45 ಮಿ.ಮಿ) ಹೆಚ್ಚಿನ ಮಳೆಯಾಗಿರುವುದು ಕಂಡು ಬಂದಿದೆ. ಇದರಿಂದ ಹಿಂಗಾರು ಹಂಗಾಮಿನ ಬೆಳೆಗಳಾದ ಜೋಳ, ತೊಗರಿ, ಶೇಂಗಾ, ಹತ್ತಿ ಮುಂತಾದವುಗಳಲ್ಲಿ ಇಳುವರಿಯ ಪ್ರಮಾಣ ಹೆಚ್ಚೆಗೆಯಾಗಿರುವುದು ಕಂಡುಬಂದಿದೆ. 1941ರಲ್ಲಿ ಬಂದಂತಹ ಭೀಕರವಾದ ಬರಗಾಲದಿಂದ ಈ ಭಾಗದ ಜನತೆ ತತ್ತರಿಸಿಹೋಗಿದ್ದು ಇನ್ನೂ ಹಚ್ಚಹಸರಾಗಿ ಉಳಿದಿದೆ. ಆಗಿನ ಸರಕಾರವು ಪರಿಸ್ಥಿತಿಯ ಗಂಭೀರತೆಯನ್ನು ಪರಿಗಣಿಸಿ ಹವಾಮಾನ ಆಧಾರಿತ ಕೃಷಿಯ ಬಗ್ಗೆ ಅಧ್ಯಯನ ಕೈಗೊಳ್ಳಲು ಒಣ ಬೇಸಾಯ ಸಂಶೋಧನಾ ಕೇಂದ್ರವನ್ನು ರಾಯಚೂರಿನಲ್ಲಿ ಪ್ರಾರಂಭ ಮಾಡಿತು.

ರಾಯಚೂರು ಜಿಲ್ಲೆ ಒಂದುಕಡೆ ಶಕ್ತಿನಗರದಲ್ಲಿರುವ ಶಾಖೋತ್ಪನ್ನ ಕೇಂದ್ರಗಳಿಗೆ ಹೆಸರುವಾಸಿಯಾಗಿದ್ದರೆ, ಇನ್ನೊಂದೆಡೆ ಅತಿಯಾದ ತಾಪಮಾನಕ್ಕೆ ಹೆಸರು ಗಳಿಸಿಕೊಂಡಿದೆ, ಕಳೆದ ಒಂದು ಶತಮಾನದಲ್ಲಿ ದಾಖಲಿಸಲ್ಪಟ್ಟ ತಾಪಮಾನವನ್ನು ಅವಲೋಕಿಸಿ ನೋಡಿದಾಗ, ಡಿಸೆಂಬರ್ ಹಾಗೂ ಜನೇವರಿ ತಿಂಗಳುಗಳಲ್ಲಿ ಅತೀ ಕಡಿಮೆ ತಾಪಮಾನ ($16.5^0$ ಸೆಂ) ಹಾಗೂ ಏಪ್ರಿಲ್-ಮೇ ತಿಂಗಳುಗಳಲ್ಲಿ ಅತೀ ಹೆಚ್ಚಿನ ತಾಪಮಾನ ($40^0$ ಸೆಂ) ದಾಖಲಾಗಿರುವುದು ಕಂಡು ಬಂದಿದೆ. ಏಪ್ರಿಲ್-ಮೇ ತಿಂಗಳುಗಳಲ್ಲಿ ಮನುಷ್ಯನಿಗೆ ಅಷ್ಟೆ ಅಲ್ಲದೆ ಭೂಮಿಯ ಮೇಲಿನ ಎಲ್ಲ ಜೀವರಾಶಿಗಳಿಗೂ ಶಾಪವಾಗಿ ಪರಿಣಮಿಸಿದೆ, ದನಕರುಗಳಿಗೆ ಕುಡಿಯುವ ನೀರಿನಿಂದ ಹಿಡಿದು ಮೇವು, ಹಸಿರು ಹುಲ್ಲು, ಆಡು-ಕುರಿಗಳಿಗೆ ವ್ಯೆತಿರಿಕ್ತ ಪರಿಣಾಮವನ್ನು ಬೀರಲಿದೆ. ಈವರೆಗೂ ದಾಖಲಾದ ಅತೀ ಹೆಚ್ಚಿನ ತಾಪಮಾನ 45 ಸೆಂ $17^{th}$ ಮೇ. 2003 ರಂದು ದಾಖಲಾಗಿದ್ದು ಕಂಡು ಬಂದಿದೆ: ಹೀಗೆ ತಾಪ ಮಾನದಲ್ಲಾಗುವ ಏರುಪೇರುಗಳು ವಿವಿಧ ಬೆಳೆಗಳ ಇಳುವರಿಯ ಮೇಲೂ ವ್ಯೆತಿರಿಕ್ತ ಪರಿಣಾಮ ಬೀರಿರುವುದು ಪ್ರಯೋಗಗಳಿಂದ ಸಾದರಪಟ್ಟಿದೆ. ಇನ್ನು, ವಾತಾವರಣದಲ್ಲಿಯ ತೇವಾಂಶಕ್ಕೆ ಬಂದರೆ, ಅತೀ ಹೆಚ್ಚಿನ ತೇವಾಂಶವು ಜೂನ್-ಜುಲೈ ತಿಂಗಳುಗಳಲ್ಲಿ (70–80%) ಹಾಗೂ ಕಡಿಮೆ ತೇವಾಶ (20–25%) ಎಪ್ರಿಲ್-ಮೇ ತಿಂಗಳುಗಳಲ್ಲಿ ದಾಖಲಾಗಿರುವುದು ಕಂಡು ಬಂದಿದೆ. ಇದಲ್ಲದೆ ಗಾಳಿಯ ವೇಗವು ಸಹ ಮುಂಗಾರು ಹಂಗಾಮಿನಲ್ಲಿ ಹೆಚ್ಚಾಗಿದ್ದು (15–20 ಕಿ.ಮಿ/ಗಂಟೆಗೆ) ಹಿಂಗಾರು ಹಂಗಾಮಿನಲ್ಲಿ ಕಡಿಮೆ ಇರುವುದು (8–10 ಕಿ ಮಿ/ಗಂಟೆಗೆ) ಕಂಡು ಬಂದಿದೆ, ಒಟ್ಟಾರೆಯಾಗಿ ವಾತಾವರಣದಲ್ಲಿಯ ಏರಿಳಿತಗಳು ಮಾನವನಿಗಷ್ಟೇ ಅಲ್ಲದೆ ದನ-ಕರು, ಪ್ರಾಣಿಗಳು ಹಾಗೂ ಬೆಳೆಗಳ ಮೇಲೂ

ಗಂಭೀರವಾದ ಪರಿಣಾಮ ಬೀರುತ್ತದೆ ಎನ್ನುವುದು ಸಾಬೀತಾಗಿದೆ. ಇತ್ತೀಚಿನ ವರ್ಷಗಳಲ್ಲಿ ಹಲವಾರು ಹವಾಮಾನ ವೈಪರೀತ್ಯಗಳು ನಮ್ಮ ಪ್ರದೇಶದಲ್ಲಿಯೇ ಕಂಡುಬಂದಿವೆ. ಇವುಗಳಲ್ಲಿ ಮುಖ್ಯವಾದವು ಗಳೆಂದರೆ:

❖ 1997 ರ ಹಿಂಗಾರು ಹಂಗಾಮಿನ ನವೆಂಬರ್ ತಿಂಗಳಲ್ಲಿ ಗರಿಷ್ಠ ಉಷ್ಣಾಂಶವು ವಾಡಿಕೆಗಿಂತ (29º ಸೆ.) ಹೆಚ್ಚಿಗೆ (31–32º ಸೆ.) ಹಾಗೂ ನವೆಂಬರ–ಡಿಸೆಂಬರತಿಂಗಳುಗಳಲ್ಲಿ ಕನಿಷ್ಠ ಉಷ್ಣಾಂಶವು ವಾಡಿಕೆಗಿಂತ (15–19 º.ಸೆ) ಕಡಿಮೆ (8–14º ಸೆ.) ಇದ್ದದ್ದು ಕಂಡುಬಂದಿದ್ದರ ಪರಿಣಾಮವಾಗಿ ಹಿಂಗಾರು ಜೋಳದಲ್ಲಿ ಕಾಳುಗಳು ಸರಿಯಾಗಿ ತುಂಬದೇ ಇಳುವರಿಯಲ್ಲಿ ಗಣನೀಯವಾಗಿ ಕಡಿಮೆಯಾಗಿರುವುದು ದಾಖಲಾಗಿದೆ.

❖ 1998ರ ಜೂನ್–ಅಕ್ಟೋಬರ್ ತಿಂಗಳಲ್ಲಿ ವಾಡಿಕೆಗಿಂತ (479 ಮಿ.ಮಿ.) ಅತಿ ಹೆಚ್ಚಿನ ಪ್ರಮಾಣದಲ್ಲಿ (955 ಮಿ.ಮಿ) ಮಳೆಯಾದ ಕಾರಣ ಮಣ್ಣಿನ ತೇವಾಂಶವು ಅದರ ಧಾರಣ ಶಕ್ತಿಗಿಂತಲೂ ಅತೀ ಹೆಚ್ಚಾಗಿ ಇದ್ದುದರಿಂದ, ಕೃಷಿ ಚಟುವಟಿಕೆ ಗಳನ್ನು ಕೈಕೊಳ್ಳಲು ಅಸಾಧ್ಯವಾಗಿ, ಹೊಲಗಳು ಕಳೆಭರಿತವಾದ ಕಾರಣ ಬೆಳೆಗಳ ಬೆಳವಣಿಗೆ ಕುಂಠಿತವಾಗಿ, ಕೃಷಿ ಉತ್ಪಾದನೆಯು ಗಣನೀಯವಾಗಿ ಕಡಿಮೆಯಾಗಿತ್ತು. ಇದಲ್ಲದೇ, ಹಿಂಗಾರು ಬೆಳೆಗಳನ್ನು ಸಾಮಾನ್ಯವಾಗಿ ಬಿತ್ತುವ ಅವಧಿಗಿಂತ ತಡವಾಗಿ ಬಿತ್ತನೆ ಮಾಡಬೇಕಾಯಿತು.

❖ 2001 ರಿಂದ 2003ರ ವರೆಗೆ ಸತತವಾಗಿ ಮೂರು ವರ್ಷಗಳಲ್ಲಿ ಮುಂಗಾರು ಮಳೆ ಕ್ಷೀಣಿಸಿದ್ದಲ್ಲದೇ, 2003–04ರ ಹಿಂಗಾರಿನ ಮಳೆಯ ಪ್ರಮಾಣವೂ ಸಹ ವಾಡಿಕೆಗಿಂತ ಕಡಿಮೆಯಾದ ಕಾರಣ, ಬರಗಾಲವು ತೀವ್ರವಾಗಿ, ಎಲ್ಲ ಬೆಳೆಗಳು ನಾಶವಾಗಲು ಕಾರಣವಾಯಿತು.

❖ 2004ರ ಮಾರ್ಚ ತಿಂಗಳಲ್ಲಿ ಗರಿಷ್ಠ ತಾಪಮಾನವು ಸತತವಾಗಿ 10 ದಿನಗಳವರೆಗೆ ಸುಮಾರು 42$^0$ ಸೆ.ರಷ್ಟು ಇದ್ದ ಕಾರಣ, ದೀರ್ಘಾವಧಿ ಬೆಳೆಗಳ ನೀರಿನ ಬೇಡಿಕೆ ಹೆಚ್ಚಾಗಿದ್ದು ಕಂಡುಬಂದಿತು.

❖ 2007 ರ ಜೂನ 22 ರಂದು ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಕೇವಲ ಆರೆಂಟು ತಾಸಿನಲ್ಲಿ 200 ಮಿ.ಮಿ.ರಷ್ಟು ಮಳೆಯಾಗಿದ್ದರಿಂದ, ಅಧಿಕ ಪ್ರಮಾಣದಲ್ಲಿ ಜನ–ಪ್ರಾಣಿ–ಪಕ್ಷಿ–ಬೆಳೆ–ಆಸ್ತಿಗೆ ಹಾನಿ ಉಂಟಾಯಿತು.

❖ 2007ರ ನವೆಂಬರ 22 ರಿಂದ 25ರ ವರೆಗೆ ಪ್ರತಿ ದಿನವೂ ಕನಿಷ್ಠ ಉಷ್ಣಾಂಶವು ಅತಿ ಕಡಿಮೆ, ಅಂದರೆ, 8 ರಿಂದ 10$^0$ ಸೆ. ರಷ್ಟು ದಾಖಲಾಗಿತ್ತು.

❖ 2008ರ ಮಾರ್ಚ 10 ರಿಂದ ಎಪ್ರೀಲ 10 ರ ವರೆಗೆ ಕರ್ನಾಟಕದಾದ್ಯಂತ ಅವರಿಸಿದ ಅಕಾಲಿಕ ಮೋಡಕವಿದ ವಾತಾವರಣ ಹಾಗೂ ಆ ಅವಧಿಯಲ್ಲಿ ಆದ ಮಳೆಯಿಂದಾಗಿ ತೋಟಗಾರಿಕೆ ಹಾಗೂ ಕ್ಷೇತ್ರ ಬೆಳೆಗಳಲ್ಲಿ ಅಪಾರ ಪ್ರಮಾಣದ ನಷ್ಟವಾಯಿತು. ಅಕಾಲಿಕವಾಗಿ ಹಾಗೂ ಮಳೆಯ ಜೊತೆಗೆ ಗುಡುಗು–ಮಿಂಚು–ಸಿಡಿಲು ಹಾಗೂ ಬಿರುಗಾಳಿ ಬೀಸುವದು ಮತ್ತು ಇದರಿಂದ ನೆರೆ ಹಾವಳಿ ಉಂಟಾಗಿದ್ದು, ಸ್ವಾಭಾವಿಕ. ಈ ರೀತಿಯ ಮಳೆಗಳು ಫಬ್ರುವರಿ ಹಾಗೂ ಮಾರ್ಚ ತಿಂಗಳುಗಳಲ್ಲಿ ಆದಾಗ, ಕಟಾವು ಹಂತದಲ್ಲಿರುವ ಹಿಂಗಾರು ಬೆಳೆಗಳು ನಾಶವಾಗುವುವು ಹಾಗೂ ಅವುಗಳಿಗೆ ಶಿಲೀಂದ್ರ ರೋಗಗಳ ಬಾಧೆ ಉಂಟಾಗುವದು. ಅದರಂತೆ, ಏಪ್ರೀಲ್ ಮತ್ತು ಮೇ ತಿಂಗಳುಗಳಲ್ಲಿ ಈ ಮಳೆಯಾದರೆ, ಮಾವಿನ ಕಾಯಿಗಳು ಉದುರುವುದರಿಂದ ಮಾವಿನ ಉತ್ಪನ್ನ ಹಾಗೂ ಹಣ್ಣಿನ ಗುಣಮಟ್ಟ ಕಡಿಮೆಯಾಗುವುದಲ್ಲದೇ ಕೀಟ–ರೋಗಗಳ ಬಾಧೆ ಹೆಚ್ಚಾಗುವುದು. ಇಂತಹ ಮಳೆಯು ಅಲ್ಪಾವಧಿಯದಾಗಿದ್ದರೂ ಸಹ, ಕೃಷಿ ಕ್ಷೇತ್ರದಲ್ಲಿ ಅಪಾರ ನಷ್ಟವನ್ನು ಉಂಟುಮಾಡುವ ಶಕ್ತಿಯನ್ನು ಹೊಂದಿದೆ. ಮೇಲಿಂದಮೇಲೆ ಅತೀ ಬಲಿಷ್ಠ ಚಂಡಮಾರುತಗಳು ಉಂಟಾಗಿ ಅವು ಸಾಗುವ ದಾರಿಯಲ್ಲಿ ಬರುವ ಪ್ರದೇಶ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆ, ಗಾಳಿ, ತೇವಾಂಶ ಹೆಚ್ಚಿಗೆಯಾಗುತ್ತದೆ. ಇದು ಬೆಳೆಗಳ ಮೇಲೆ ಹಾನಿಕರ ಪ್ರಭಾವವನ್ನು ಬೀರುತ್ತದೆ. ಹವಾಮಾನ ವೈಪರೀತ್ಯದಿಂದ ಎಲೆಗಳ ಮೇಲೆ ಸಂಗ್ರಹವಾಗುವ ನೀರಿನ ಹನಿಗಳು (ಇಬ್ಬನಿ) ಎಲೆಯ ಮೇಲೆಯ ತೇವಾಂಶವನ್ನು ಹೆಚ್ಚಿಗೆ ಮಾಡುವುದರಿಂದ ರೋಗಾಣುಗಳ ಹೆಚ್ಚಳಕ್ಕೆ ಕಾರಣವಾಗುವುದು. ಇದರಂತೆ, ಹೊಗೆ ಮಂಜು ಇರುವ ಅವಧಿಯಲ್ಲಿ ಬೆಳೆಗಳಿಗೆ ಉಸಿರಾಟಕ್ಕೆ ತೊಂದರೆಯಾಗಿ ಅವು ಒತ್ತಡವನ್ನು ಅನುಭವಿಸುವವು. ಶೀತಗಾಳಿಯಿಂದಲೂ ಬೆಳೆಗಳು ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ.

❖ 2009 ರ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಕಡಿಮೆ ಕನಿಷ್ಠ ಉಷ್ಣಾಂಶ ದಾಖಲಾಗಿದ್ದು ಇದರಿಂದಾಗಿ ಬತ್ತದ ತೆನೆಗಳು ಕಾಳು ತುಂಬದೆ ಇಳುವರಿಯಲ್ಲಿ ಗಣನೀಯ ಇಳಿಕೆ ಕಂಡು ಬಂದಿದೆ, ಅಲ್ಲದೆ ಮುಂಗಾರು ಹಂಗಾಮಿನ ಜೂನ್ ಕಡೆಯ ವಾರದಿಂದ ಅಗಸ್ಟ ತಿಂಗಳವರೆಗೆ ಅತ್ಯಂತ ಕಡಿಮೆ ಮಳೆಯಾಗಿದ್ದು ಎಲ್ಲ ಅಲ್ಪಾವದಿ ಬೆಳೆಗಳ ಇಳುವರಿ ಸಂಪೂರ್ಣ ಇಲ್ಲದಂತಾಗಿ ಸೆಪ್ಟೆಂಬರ್ ಕಡೆಯ ಮತ್ತು ಅಕ್ಟೋಬರ ಮೊದಲನೇ ವಾರದ ಅತ್ಯಧಿಕ ಮಳೆಯ (582 ಮಿ.ಮಿ) ಪರಿಣಾಮದಿಂದಾಗಿ ಬಹಳಷ್ಟು ಪ್ರದೇಶಗಳಲ್ಲಿ ನೆರೆ ಹಾವಳಿಗೆ ಕಾರಣವಾಯಿತಲ್ಲದೆ ಎಲ್ಲ ಬೆಳೆಗಳು ನೀರಿನಿಂದ ಜಲಾವೃತಗೊಂಡು ಕೈಗೆ ಬಂದ ತುತ್ತು ಬಾಯಿಗೆ ಬಾರದೇ ಹೋಯಿತು.

❖ ಇನ್ನು 2010 ರಲ್ಲಿ ನಿಗಧಿತ ಸಮಯಕ್ಕೆ ಮಳೆಯು ಪ್ರಾರಂಭವಾಗಿ ಜುಲೈ ತಿಂಗಳಲ್ಲಿ ಅತ್ಯಧಿಕ ಮಳೆಯಾಗಿದ್ದರಿಂದ (265 ಮಿ.ಮಿ) ಜೂನ್ ತಿಂಗಳಲ್ಲಿ ಬಿತ್ತಿದ ಬೆಳೆಗಳು ಹೆಚ್ಚು ನೀರಿನಿಂದ ಹಾನಿಗೊಳಗೊಂಡು ಜುಲೈ ತಿಂಗಳು ಬಿತ್ತುವ ಬೆಳೆಗಳ ಅವಧಿಯು ಮಂದಕ್ಕೆ ಹೋಗಿದ್ದು ಕಂಡುಬಂದಿದೆ.

ಈ ರೀತಿ ಪ್ರತಿ ವರ್ಷ ಒಂದಲ್ಲ ಒಂದು ರೀತಿಯಲ್ಲಿ ಹವಾಮಾನ ಬದಲಾವಣೆಯ ಕೃಷಿ ಕ್ಷೇತ್ರದಲ್ಲಿ ವಿವಿಧ ತರಹದ ಪರಿಣಾಮವನ್ನು ಬೀರಿ ರೈತರಿಗೆ, ವಿಜ್ಞಾನಿಗಳಿಗೆ, ಸರಕಾರ–ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಅನೇಕ ಸವಾಲುಗಳನ್ನು ಒಡ್ಡುತ್ತಿದೆ.

**ಪ್ರಮುಖ ಬೆಳೆಗಳಲ್ಲಿ ಹವಾಮಾನ ಬದಲಾವಣೆಯ ಪರಿಣಾಮಗಳು:**

❖ ವಾತಾವರಣದಲ್ಲಿಯ ಹೆಚ್ಚಿನ ಪ್ರಮಾಣದ ಇಂಗಾಲದ ಡೈಆಕ್ಸೈಡದಿಂದ ಸಾಮಾನ್ಯವಾಗಿ ಏಕದಳ ಧಾನ್ಯದ ಬೆಳೆಗಳಿಗಿಂತ ದ್ವಿದಳ ಧಾನ್ಯದ ಬೆಳೆಗಳು ಹೆಚ್ಚಿನ ಪ್ರತಿಕ್ರೀಯೆ ನೀಡುತ್ತವೆ.

❖ ಇಂಗಾಲದ ಡೈಆಕ್ಸೈಡನ ಪ್ರಮಾಣದ ಏರಿಕೆಯಿಂದ ಮುಖ್ಯ ಹಂಗಾಮಿನ (ಮುಂಗಾರು) ಭತ್ತದ ಬೆಳೆಯ ಇಳುವರಿ ಹೆಚ್ಚಳವಾಗು

ವದು. ಆದರೆ, ತಾಪಮಾನದ ಏರಿಕೆಯಿಂದ ಹಿಂಗಾರು ಭತ್ತದ ಬೆಳೆಯ ಇಳುವರಿ ಕಡಿಮೆಯಾಗಬಹುದೆಂದು ಅಂದಾಜಿಸಲಾಗಿದೆ.

❖ ವಾತಾವರಣದ ಉಷ್ಟತೆಯ 2 ರಿಂದ 4 ರಷ್ಟು ಡಿಗ್ರಿ ಸೆಚಿಟಗ್ರೇಡ್‌ನಷ್ಟು ಏರಿದಾಗ ಮತ್ತು ಇಂಗಾಲದ ಡೈಆಕ್ಸೈಡದ ಸಾ0ಧ್ರತೆಯ 425 ಪಿ.ಪಿ.ಎಮ್, ನಷ್ಟು ಏರಿದಾಗ ಭತ್ತದ ಇಳುವರಿಯು ಕಡಿಮೆಯಾಗುವುದಾಗಿ ಅಂದಾಜಿಸಲಾಗಿದೆ.

❖ ಹೆಚ್ಚಿನ ಪ್ರಮಾಣದ ಇಂಗಾಲದ ಡೈಆಕ್ಸೈಡನ ವಾತಾವರಣದಲ್ಲಿ ಬೆಳೆಗಳ ಉಸಿರಾಟದ ಪ್ರಮಾಣ ಕಡಿಮೆಯಾಗುವುದರಿಂದ ಬರ ಪರಿಸ್ಥಿತಿಯಲ್ಲಿಯೂಸಹ ಮಳೆಯಾಶ್ರಿತ ಬೆಳೆಗಳ ಬೆಳೆವಣಿಗೆಗೆ ಉತ್ತಮ ವಾತಾವರಣ ಸಿಕ್ಕಂತಾಗುತ್ತದೆ.

❖ ಭಾರತೀಯ ಕೃಷಿ ಅನುಸಚಿಧಾನ ಪರಿಷತ್, ನವದೆಹಲಿಯಾ ವರದಿಯ ಪ್ರಕಾರ ಪ್ರತಿ 1 ಡಿಗ್ರಿ ಸೆಲ್ಸಿಯಸ್ ತಾಪಮಾನದ ಏರಿಕೆಯ ಗೋಧಿಯ ಉತ್ಪಾದನೆಯಲ್ಲಿ 4 ರಿಂದ 5 ಮಿಲಿಯನ್ ಟನ್‌ಗಳಷ್ಟು ಕುಂಠಿತೊಳಿಸುವುದು. ಆದರೆ ಉಳಿದ ಬೆಳೆಗಳ ಇಳುವರಿಯಲ್ಲಿ ಇಷ್ಟೊಂದು ಪ್ರಮಾಣದ ಪರಿಣಾಮ ಉಂಟು ಮಾಡುವುದಿಲ್ಲ.

❖ ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ಕೃಷಿ ಪದ್ಧತಿಗಳನ್ನು (ಬಿತ್ತನೆಯ ಕಾಲದಲ್ಲಿ ಬದಲಾವಣೆ, ಬರನಿರೋಧಕ ತಳಿಗಳು, ಇತ್ಯಾದಿಗಳು) ಅನುಸರಿಸುವುದರಿಂದ ಗೋಧಿಯ ಉತ್ಪಾದನೆಯಲ್ಲಿ ಆಗಬಹುದಾದ ಇಳಿಕೆಯನ್ನು ಶೇ. 50 ರಷ್ಟು ತಗ್ಗಿಸಬಹುದಾಗಿದೆ.

❖ ಹವಾಮಾನ ಬದಲಾವಣೆಯಿಂದ ಹವಾಮಾನ ವೈಪರಿತ್ಯ ಉದ್ಭವಾಗಿ (ಬರ, ನೆರೆ, ಬಿರುಗಾಳಿ, ಅತೀ ಮಳೆ, ಅಕಾಲಿಕ ಮಳೆ, ಬಿಸಿಗಾಳಿ ಬೀಸುವಿಕೆ) ಕೃಷಿ ಉತ್ಪಾದನೆಯಲ್ಲಿ ಋಣಾತ್ಮಕ ಪರಿಣಾಮ ಉಂಟಾಗುವುದು.

❖ ಹಿಮಾಲಯ ಪರ್ವತದಿಂದ ಅಪಾರ ಪ್ರಮಾಣದಲ್ಲಿ ಹಿಮಗಡ್ಡೆಗಳು ಕರಗುವುದರಿಂದ ನೀರಾವರಿ ಲಭ್ಯತೆಯಲ್ಲಿ ಏರುಪೇರು ಉಂಟಾಗಿ ಕೃಷಿ ಉತ್ಪಾದನೆಯ ಮೇಲೆ ಪರಿಣಾಮವನ್ನು ಉಚಿಟುಮಾಡುವುದು.

❖ ಜಾಗತಿಕ ತಾಪಮಾನ ಏರಿಕೆಯು ತಂಪು ವಾತಾವರಣವನ್ನು ಹೊಂದಿದೆ ಖಂಡಗಳಿಗೆ (ಉತ್ತರ ಅಮೇರಿಕಾ, ಉತ್ತರ ಯುರೋಪ್) ಧನಾತ್ಮಕವಾದ ಪರಿಣಾಮವನ್ನು ಹಾಗೂ ಉಷ್ಣ ಖಂಡಗಳಿಗೆ (ದಕ್ಷಿಣ ಏಶಿಯಾ, ಆಫ್ರಿಕಾ ಇತ್ಯಾದಿಗಳು) ಋಣಾತ್ಮಕವಾದ ಪರಿಣಾಮವನ್ನು ಉ0ಟುಮಾಡುವುದು. ಇದರಿಂದ ಅಂತ ರಾಷ್ಟ್ರೀಯ ಮಟ್ಟದಲ್ಲಿ ಆಹಾರ ಧಾನ್ಯಗಳ ಬೆಲೆಗಳು ಏರಿಕೆಯಾಗಿ ಆಹಾರದ ಭದ್ರತೆಯ ಮೇಲೆ ಪರಿಣಾಮವನ್ನು ಉ0ಟುಮಾಡುವುದು.

❖ ಉಷ್ಣತೆ ಮತ್ತು ಮಳೆಯಲ್ಲಿನ ಸ್ವಲ್ಪ ಪ್ರಮಾಣದ ಬದಲಾವಣೆಯು ಆಹಾರ ಧಾನ್ಯಗಳು, ಹಣ್ಣುಗಳು ಹಾಗೂ ಸುಗಂಧ ಮತ್ತು ಔಷಧಿ ಸಸ್ಯಗಳ ಗುಣಮಟ್ಟವನ್ನು ಕಡಿಮೆ ಮಾಡುವುದರಿಂದ ಅವುಗಳ ಬೆಲೆ ಮತ್ತು ವ್ಯಾಪಾರದ ಮೇಲೆ ಪರಿಣಾಮವನ್ನು ಉಂಟುಮಾಡುವದು.

❖ ರೋಗಕಾರಕ ಸೂಕ್ಷ್ಮ ಜೀವಿಗಳು ಮತ್ತು ಕೀಟಗಳ ಸಂಖ್ಯೆಗಳು ಉಷ್ಣತೆ ಮತ್ತು ಅರ್ದತೆಯ ಮೇಲೆ ಅವಲಂಬಿತವಾತುವುದರಿಂದ, ಈ ಹವಾಮಾನ ಪರಿಮಾಪಕಗಳಲ್ಲಾಗುವ ಹೆಚ್ಚಳವು ಅವುಗಳ ಸಂಖ್ಯೆಗಳ ಮೇಲೆ ಬದಲಾವಣೆಯನ್ನು ತಂದು ಆಹಾರ ಧಾನ್ಯಗಳ ಇಳುವರಿಯಲ್ಲಿ ನಷ್ಟವನ್ನು ಉಚಿಟುಮಾಡುವುದು.

**ಹವಾಮಾನ ಬದಲಾವಣೆಗೆ ಭಾರತದ ಕೃಷಿ ಹೊಂದಿಕೊಳ್ಳುವ ಕ್ಷಮತೆಯನ್ನು ಹೆಚ್ಚಿಸಲು ಅನುಸರಿಸಬೇಕಾದ ಕಾರ್ಯಯೋಜನೆಗಳು:**

❖ ವ್ಯತಿರಿಕ್ತ ಹವಾಮಾನದಲ್ಲೂ ಉತ್ತಮ ಇಳುವರಿ ಕೊಡುವಂತೆ ಭೂಮಿಯನ್ನು ಉಪಯೋಗಿಸುವ ವಿಧಾನ ಹಾಗೂ ಬೆಳೆ ಮತ್ತು ತಳಿಗಳ ಕುರಿತು ಸಧೃಢವಾದ ಇನ್ನಷ್ಟು ಹೆಚ್ಚಿನ ವ್ಯವಸ್ಥಿತ ಸಂಶೋಧನೆಯನ್ನು ಕೈಕೊಳ್ಳವದು.

❖ ವ್ಯತಿರಿಕ್ತ ಹವಾಮಾನ ಪರಿಸ್ಥಿತಿಗಳಲ್ಲಿ ರೈತರಿಗೆ ಸೂಕ್ತ ಮಾರ್ಗದರ್ಶನ ಮಾಡುವುದು, ಅನುಸರಿಸಬೇಕಾದ ತಾಂತ್ರಿಕತೆ ಹಾಗೂ ಪರಿಹಾರೋಪಾಯಗಳನ್ನು ತಿಳಿಸಿಕೊಡುವದು (ಹವಾಮಾನ ಮುನ್ಸೂಚನೆ, ಹವಾಮಾನ ಆಧಾರಿತ ಕೃಷಿ ಸಲಹೆಗಳು, ರೋಗ ಹಾಗೂ ಕೀಟಗಳ ನಿರ್ವಹಣೆ, ಬೆಳೆ ವಿಮೆ ಇತ್ಯಾದಿ).

❖ ಸಂಪನ್ಮೂಲಗಳ (ಇಂಗಾಲ, ನೀರು, ಶಕ್ತಿ) ಮಿತವಾದ ಬಳಿಕೆ ಹಾಗೂ ಅವುಗಳನ್ನು ಕ್ಷಮತೆಯಿಂದ ವಿನಿಯೋಗಪಡಿಸಿಕೊಳ್ಳುವಂತೆ ರೈತರನ್ನು ಪ್ರೋತ್ಸಾಹಿಸುವುದು.

❖ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಸಂಗ್ರಹಣೆಯಾಗಿ ಸೂಕ್ತ ವ್ಯವಸ್ಥೆ ಮಾಡಿಕೊಳ್ಳವುದು.

❖ ಹವಾಮಾನ ವ್ಯಪರಿತ್ಯಗಳಲ್ಲಿ ರೈತರು ಪಾರಂಪರಿಕವಾಗಿ ಅಳವಡಿಸಿಕೊಂಡಿರುವ ಬೆಳೆ ಪದ್ಧತಿಗಳು ಹಾಗೂ ತಾಂತ್ರಿಕತೆಗಳನ್ನು ಪರಿಷ್ಕರಿಸಿ, ಸಂಶೋಧನೆಗಳಿಂದ ಇವುಗಳನ್ನು ಇನ್ನಷ್ಟು ಬಲಪಡಿಸಿ ಸೂಕ್ತವಾಗಿ ಉಪಯೋಗಿಸುವದು. ಉದಾ: ಮಿಶ್ರ ಬೆಳೆ, ಅಂತರ ಬೆಳೆ ಪದ್ಧತಿಗಳಿಂದ ಬರದ ದುಷ್ಪಪರಿಣಾಮದ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳುವದು. ಬೆಳೆಗಳ ಬೆಳೆವಣಿಗೆಯ ವಿವಿಧ ಹಂತಗಳಲ್ಲಿ ಇರಬಹುದಾದ ಹವಾಮಾನ, ನೀರಿನ (ಮಳೆ) ಲಭ್ಯತೆಯ ಪ್ರಮಾಣಕ್ಕನುಗುಣವಾಗಿ ಬೆಳೆ/ತಳಿ/ಬಿತ್ತನೆಕಾಲ ಇವುಗಳಲ್ಲಿ ಬದಲಾವಣೆ ಮಾಡಿಕೊಳ್ಳವದು. ಕೃಷಿಯೊಡನೆ ಇತರ ಪೂರಕ ಉದ್ಯೋಗಗಳನ್ನು (ಹೈನುಗಾರಿಕೆ, ಪಶುಸಂಗೋಪನೆ, ರೇಶ್ಮೆ ವ್ಯವಸಾಯ) ಅಳವಡಿಸಿಕೊಂಡು ಆದಾಯವನ್ನು ಹೆಚ್ಚಿಸಿಕೊಳ್ಳುವದು ಹಾಗೂ ಸಂಪನ್ಮೂಲಗಳ ಕ್ರೋಢೀಕರಣ ಮಾಡುವದು.

❖ ಗಿಡಮರಗಳನ್ನು ನೆಡುವುದರಿಂದ ವಾತಾವರಣದ ಶುದ್ದೀಕರಣಕ್ಕೆ ಸಹಾಯಕಾರಿ. ಸಧ್ಯದ ಅರಣ್ಯದ ಪ್ರಮಾಣವು ದೇಶದ ಒಟ್ಟು ಭೌಗೋಲಿಕ ಪ್ರದೇಶದ ಶೇ. 20.6 ರಷ್ಟು ಇದ್ದು. ಇದನ್ನು ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ ಶೇ. 33.0 ಕ್ಕೆ ಏರಿಸುವುದು. ಅರಣ್ಯಗಳ ಸಂರಕ್ಷಣೆ ಮಾಡುವುದರಿಂದ ಹವಾಮಾನ ಬದಲಾವಣೆಯ ವೇಗವನ್ನು ಕಡಿಮೆ ಮಾಡಬಹುದಾಗಿದೆ.

❖ ಭತ್ತವು ಭಾಗಶ: ಜಲಪ್ರಿಯ ಪ್ರಮಾಣದಲ್ಲಿ ಮಿಥೇನ್ ಅನಿಲವು ಬಿಡುಗಡೆಯಾಗುವುದು. ಈ ಅನಿಲ ಬಿಡುಗಡೆಯನ್ನು ಕೆಲವು ಮುಖ್ಯ ಬೇಸಾಯ ಪದ್ಧತಿಗಳಿಂದ ಕಡಿಮೆ ಮಾಡಬಹುದಾಗಿದೆ. ಅ) ಭತ್ತದ ಬೆಳೆಯ ಅವಧಿಯಲ್ಲಿ ಸ್ಥಳ ನೀರು ಬಸಿಯುವಂತೆ ಮಾಡುವುದು. ಬ) ಸಾವಯವ ವಸ್ತುಗಳನ್ನು ನೀರು ಬಸಿದು ಹೋದ ನಂತರ ಭೂಮಿಗೆ ಸೇರಿಸಬೇಕು ಅಥವಾ ವಿಘಟಿತವಾದ ಸಾವಯುವ ವಸ್ತುಗಳನ್ನು ಭತ್ತದ ಬೆಳೆಗೆ ಉಪಯೋಗಿಸಬೇಕು. ಕ) ಸ್ಮಧಾರಿತ ನೀರು ನಿರ್ವಾಹಣೆ ಪದ್ಧತಿಯನ್ನು ಅನುಸರಿಸುವುದು. ಡ) ಕಡಿಮೆ ಮಿಥೇನ್ ಅನಿಲವನ್ನು

ಹೊರಹಾಕುವ ತಳಿಗಳನ್ನು ಉಪಯೋಗಿಸುವುದು. ಇ) ಕಡಿಮೆ ನೀರಿನ ಆಶ್ರಯದಲ್ಲಿ ಬೆಳೆಯಬಹುದಾದ ಭತ್ತ ತಳಿಗಳನ್ನು ಬೆಳೆಯುವುದು.

❖ ಸಾವಯವ ಕೃಷಿ ಪದ್ಧತಿ ಅನುಸರಿಸುವುದರಿಂದ ಹಸಿರು ಮನೆ ಅನಿಲಗಳ ಬಿಡುಗಡೆ ಪ್ರಮಾಣ ಕಡಿಮೆ ಮಾಡಬಹುದಾಗಿದೆ. ಸಂಪನ್ಮೂಲಗಳ ಸಮರಕ್ಷಣಾ ಕೃಷಿ ಪದ್ಧತಿಗಳ ಅಳವಡಿಕೆ, ಉದಾ – ಶೂನ್ಯ ಸಾಗುವಳಿ ಪದ್ಧತಿಯಿಂದ ಪ್ರತಿ ವರ್ಷ ಒಂದು ಎಕರೆಗೆ ಸುಮಾರು 32 ಕಿ.ಗ್ರಾಂ ಇಂಗಾಲದ ಡೈಆಕ್ಸೈಡ್ ಬಿಡುಗಡೆಯು ಕಡಿಮೆಯಾಗವುದಾಗಿ ತಿಳಿದು ಬಂದಿದೆ. ಕೃಷಿ ಮತ್ತು ಮನೆಯ ತ್ಯಾಜ್ಯ ವಸ್ತುಗಳನ್ನು ಸ್ಮಡದೇ ಅವುಗಳನ್ನು ಕಾಂಪೋಷ್ಟ ಮಾಡಿ ಮರು ಬಳಕೆ ಮಾಡಬೇಕು.

❖ ಕೃಷಿ ತ್ಯಾಜ್ಯ ವಸ್ತುಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡಿ ಜೈವಿಕ ಅನಿಲವನ್ನು ಉತ್ಪಾದಿಸುವುದು. ಇದರಿಂದ ಸಾಂಪ್ರದಾಯಕ ಇಚಿಧನಗಳ ಮೇಲಿನ ಅವಲಂಬನೆ ಕಡಿಮೆಯಾಗುವುದು.

❖ ಸೂಕ್ತವಾದ ಬೆಳೆ ಪದ್ಧತಿಗಳ ಆಯ್ದೆ, ಅಂತರ ಬೇಸಾಯ ಪದ್ಧತಿ, ಆಳವಾದ ಬೇರುಗಳಿರುವ ಬೆಳೆಯನ್ನು ಬೆಳೆಯುವುದು ಹಗೂ ಹೊಲದ ಸುತ್ತಲೂ ಹಾಗೂ ಕೃಷಿಗೆ ಯೋಗ್ಯವಲ್ಲದ ಜಾಗಗಳಲ್ಲಿ ಗಿಡಮರಗಳನ್ನು ನೆಡುವುದು.

❖ ಕೃಷಿ ಅರಣ್ಯ ಪದ್ಧತಿಯು ಭೂಮಿಯಲ್ಲಿ ಇಂಗಾಲದ ಕ್ರೋಡಿ ಕರಣಕ್ಕೆ ಸಹಾಯಕಾರಿ. ಇದರಿಂದ ವಾತಾವರಣಕ್ಕೆ ಹೋಗುವ ಇಂಗಾಲದ ಡೈಆಕ್ಸೈಡ್ ಪ್ರಮಾಣವನ್ನು ಕಡಿಮೆ ಮಾಡಬಹು ದಾಗಿದೆ. ಭೂಮಿ ಮತ್ತು ನೀರು ಸಂರಕ್ಷಣಾ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು.

❖ ಭೂಮಿಯಲ್ಲಿ ನೀರು ಇಂಗುವ ಗುಂಡಿಗಳನ್ನು ನಿರ್ಮಿಸಿ, ಮಳೆಯ ನಿರನ್ನು ಸಂಗ್ರಹಿಸಿ, ಭೂಮಿಯ ಅಂತರ್ಜಲ ಮಟ್ಟ ಹೆಚ್ಚುವಂತೆ ಮಾಡಬೇಕು. ಇದರಿಂದ ತೇವಾಂಶ ಹೆಚ್ಚಾಗಿ ಅರಣ್ಯ ಸಮೃದ್ಧವಾಗಿ ಬೆಳೆದು, ಇಂಗಾಲದ ಡೈಆಕ್ಸೈಡ್‌ನ್ನು ಹೀರಿಕೊಳ್ಳಲು ಸಹಾಯವಾಗುತ್ತದೆ.

**ಆಕರಗಳು :** ಅಗರವಾಲ್ ಪಿ. ಕೆ., 2009/ ಜಾಗತಿಕ ಹವಾಮಾನ ಬದಲಾವಣೆ ಹಾಗೂ ಭಾರತೀಯ ಕೃಷಿ – ಕೇಸ ಸ್ಟಡೀಸ್ ಆಫ್ ಐ.ಸಿ.ಎ.ಆರ್. ನೇಟ್‌ವರ್ಕ್ ಪ್ರಜೇಕ್ಟ್, ನವದೆಹಲಿ. ಪು. 148.

ಜೈನ್ ಆರ್.ಸಿ. ಹಾಗೂ ಅಗರವಾಲ ಆರ್. 1984, ಪ್ರಿನ್ಸಿಪಾಲ್ ಕಾಂಪೋನೇಂಟ್ ಅನಾಲೈಸೀಸ್ ಟೆಕ್‌ನಿಕ್ ಫಾರ್ ಫೊರಕಾಸ್ಟಿಂಗ್ ಆಫ್ ಸೋರ್‌ಗಮ್ ಇಲ್ಡ್. ಇಂಡಿಯನ್ ಜನರಲ್ ಆಫ್ ಅಗ್ರಿಕಲ್ಚರಲ್ ಸೈನ್ಸ್‌ಸ್, 54 (6) : 467–42.

ಸ್ವಾನ್‌ಸನ್ ಹಾಗೂ ನಾಯನಕೋರಿ ಜೆ.ಸಿ 1979. ಇನ್‌ಫ್ಲ್ಯೂಯನ್ಸ್ ಆಫ್ ವೆಥರ್ ಆ್ಯಂಡ ಟೆಕ್ನೋಲಜಿ ಆನ್ ಕಾರ್ನ್ ಆ್ಯಂಡ ಸೋಯಾಬಿನ್ ಇಲ್ಡ ಟ್ರೆಂಡ್ಸ್. ಅಗ್ರಿಕಲ್ಚರಲ್ ಮೇಟಿಯಾರೋಲಾಜಿ. 20 : 327–342

**ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು 29 ವರ್ಷಗಳ (1986–2014) ಮಳೆಯ ಚಿತ್ರಣ ಹಾಗೂ ಕೃಷಿ ಬರಗಲಾದ ವಿಶ್ಲೇಷಣೆ**

| Sl. No. | Year | Annual RF (mm) | Deviation (%) | Drought Condition | Agricultural Drought weeks |
|---|---|---|---|---|---|
| 1 | 1986 | 570.10 | -21.37 | Mild | 24-27 / 3235 |
| 2 | 1987 | 714.40 | -1.47 | Mild | — |
| 3 | 1988 | 826.10 | 13.94 | No Drought | 40-45 |
| 4 | 1989 | 592.00 | -18.35 | Mild | — |
| 5 | 1990 | 571.50 | -21.18 | Mild | — |
| 6 | 1991 | 651.20 | -10.18 | Mild | — |
| 7 | 1992 | 709.00 | -2.21 | Mild | — |
| 8 | 1993 | 906.10 | 24.97 | No Drought | 22-25 / 26-29 |
| 9 | 1994 | 471.40 | -34.98 | Moderate | 22-25 / 36-39 |
| 10 | 1995 | 958.60 | 32.21 | No Drought | — |
| 11 | 1996 | 985.10 | 35.86 | No Drought | — |
| 12 | 1997 | 587.20 | -19.01 | Mild | — |
| 13 | 1998 | 1054.20 | 45.39 | No Drought | — |
| 14 | 1999 | 746.40 | 2.94 | No Drought | 24-27 |
| 15 | 2000 | 656.90 | -9.40 | Mild | — |
| 16 | 2001 | 670.50 | -7.52 | Mild | 25-28 |
| 17 | 2002 | 523.40 | -27.81 | Moderate | 24-27 |
| 18 | 2003 | 435.00 | -40.00 | Moderate | 35-38 |
| 19 | 2004 | 722.20 | -0.39 | Mild | 32-35 / 42-47 |
| 20 | 2005 | 935.60 | 29.04 | No Drought | 22-25 |
| 21 | 2006 | 572.80 | -20.99 | Mild | 32-35 / 39-42 |
| 22 | 2007 | 928.90 | 28.11 | No Drought | 22-25 / 26-29 |
| 23 | 2008 | 588.90 | -18.77 | Mild | — |
| 24 | 2009 | 962.30 | 32.72 | No Drought | 27-30 |

| | | | | | |
|---|---|---|---|---|---|
| 25 | 2010 | 786.50 | 8.48 | No Drought | — |
| 26 | 2011 | 467.80 | -34.70 | Moderate | 23-26 / 40-42 |
| 27 | 2012 | 468.90 | -34.79 | Moderate | 29-32 / 39-39 |
| 28 | 2013 | 729.90 | 0.39 | No Drought | — |
| 29 | 2014 | 875.30 | 14.77 | No Drought | — |

**Drought Information**

| **Drought Condition** | **No. of Years** | **% of Years** |
|---|---|---|
| No Drought | 12 | 41.40 |
| Mild Drought | 12 | 41.40 |
| Moderate Drought | 05 | 17.20 |
| Severe Drought | 00 | 00 |
| | **Total** | **29 100** |




**ಚಿತ್ರ 1: ರಾಯಚೂರಿನ 80 ವರ್ಷಗಳ(1930 ರಿಂದ 2009) ಸಾಮಾನ್ಯ ಮಳೆಯೊಂದಿಗೆ ಆಯಾ ವರ್ಷಗಳ ವಾರ್ಷಿಕ ಮಳೆಯ ತುಲನೆ. (ಮಿ.ಮಿ)**

**ರಾಯಚೂರಿನ 25 ವರ್ಷಗಳ ಮಳೆಯ ಚಿತ್ರಣ**







**ರಾಯಚೂರಿನ 25 ವರ್ಷಗಳ ಗರಿಷ್ಠ ಉಷ್ಣಾಂಶದ ಚಿತ್ರಣ**




**ರಾಯಚೂರಿನ 25 ವರ್ಷಗಳ ಕನಿಷ್ಠ ಉಷ್ಣಾಂಶದ ಚಿತ್ರಣ**

# ಜೈವಿಕ ಗೊಬ್ಬರಗಳ ಬೀಜೋಪಚಾರದಿಂದ ಸಂಕರಣ ಗೋವಿನ ಜೋಳದ ಗುಣಮಟ್ಟ ಹಾಗೂ ಬೆಳೆ ಬೆಳವಣಿಗೆಯ ಮೇಲೆ ಉಂಟಾಗುವ ಪ್ರಭಾವ

ಮಧುಕೇಶ್ವರ, ಬಿ. ಪುಟ್ಟಪ್ಪನವರ ಡಾ. ವಿ. ಕೆ. ದೇಶಪಾಂಡೆ, ಕೊಟೇಶಿ ಲಮಾಣಿ ಹಾಗೂ ಡಾ. ಎನ್. ಕೆ. ಬಿರಾದಾರಪಾಟೀಲ
ಬೀಜ ವಿಜ್ಞಾನ ಹಾಗೂ ತಂತ್ರಜ್ಞಾನ ವಿಭಾಗ, ಕೃಷಿ ಮಹಾ ವಿದ್ಯಾಲಯ, ಧಾರವಾಡ–580 005
Email : bpmadhukeshwar86@gmail.com

**ಪ್ರಬಂಧಸಾರ:–** ಇತ್ತೀಚಿಗೆ ಕೃಷಿ ವಿಶ್ವವಿದ್ಯಾಲಯ, ಧಾರವಾಡದಿಂದ ಬಿಡುಗಡೆಯಾದ ಗೋವಿನ ಜೋಳದ ಸಂಕರಣ ತಳಿಯ ಜೆ.ಎಚ್. 0727 (ಸೃಷ್ಟಿ) ಬೀಜ ಗುಣಮಟ್ಟ ಹಾಗೂ ಬೆಳೆ ಬೆಳವಣಿಗೆಯ ಮೇಲೆ ಜೈವಿಕ ಗೊಬ್ಬರಗಳ ಪ್ರಭಾವವನ್ನು ಶಾಸ್ತ್ರೀಯವಾಗಿ ಅಭ್ಯಸಿಸಲಾಯಿತು. ಜೀವಾಣು ಗೊಬ್ಬರ ಅಥವಾ ರಾಸಾಯನಿಕವನ್ನು ನೀರಿನಲ್ಲಿ ಕರಗಿಸಿ ದಾವಣ ಮಾಡಿ ನಂತರ ಬೀಜಗಳನ್ನು 12 ಗಂಟೆ ನೆನೆಸಲಾಯಿತು. ಈ ಪ್ರಯೋಗದಲ್ಲಿ ಒಟ್ಟು 10 ಉಪಚಾರಗಳನ್ನು 4 ರೆಪ್ಲಿಕೇಶನಗಳಲ್ಲಿ ಕೈಗೊಳ್ಳಲಾಯಿತು. ಪೋಟ್ಯಾಸಿಯಂ ಡೈಹೈಡ್ರೋಜನ್ ಫಾಸ್ಫೇಟ್ (1%), ಅಜೊಸ್ಪಿರಿಲಂ (10 ಹಾಗೂ 20%), ಸುಡೋಮೋನಾಸ್ (10 ಹಾಗೂ 20%) ಇದಲ್ಲದೆ ಅಜೋಸ್ಪಿರಿಲಂದೊಂದಿಗೆ ಪೊಟ್ಯಾಸಿಯಂ ಡೈಹೈಡ್ರೋಜನ್ ಫಾಸ್ಪೇಟ ಹಾಗೂ ಸುಡೋಮೋನಾಸ್‌ದೊಂದಿಗೆ ಪೊಟ್ಯಾಸಿಯಂ ಡೈಹೈಡ್ರೋಜನ್ ಫಾಸ್ಪೇಟ ಹೊಂದಾಣಿಕೆಯೊಂದಿಗೆ ಬೀಜೋಪಚಾರ ಮಾಡಿ, ಬೀಜಗಳ ಮೊಳಕೆ ಪ್ರಮಾಣ, ಬಲಸತ್ವ, ಹಾಗೂ ಹೊಲದಲ್ಲಿ ಬೆಳೆ ಬೆಳವಣಿಗೆ ಹಾಗೂ ಇಳುವರಿಯನ್ನು ಅಭ್ಯಸಿಸಲಾಯಿತು. ಅಜೋಸ್ಪರಿಲಂ ಬ್ರಾಸಿಲೆನ್ಸ (20%) ಹಾಗೂ ಸುಡೋಮೊನಾಸ್ ಸ್ಟ್ರೈಯೇಟಾ (20%) ಗಳಿಂದ ವಯಕ್ತಿಕವಾಗಿ ಉಪಚಾರ ಮಾಡಿದ ಬೀಜಗಳು ಶೇ 97 ಹಾಗೂ 96.8 ಮೊಳಕೆ ಪ್ರಮಾಣ ಹಾಗೂ 3587 ಮತ್ತು 3528 ಬಲಸತ್ವವನ್ನು ಪ್ರಕಟಿಸಿದಲ್ಲದೇ ಕೆಟಲೇಜ ಮತ್ತು ಪೆರಾಕ್ಸಿಡೇಜ ಕಿಣ್ವಗಳ ಅಧಿಕ ಕ್ರಿಯೆಯನ್ನೂ ಸಹ ತೋರಿಸಿದ್ದು ಈ ಎರಡೂ ಜೈವಿಕ ಗೊಬ್ಬರಗಳ ಧನಾತ್ಮಕ ಗುಣವನ್ನು ಎತ್ತಿ ತೋರಿಸುತ್ತದೆ. ಹೊಲದಲ್ಲಿ ಈ ಅಜೋಸ್ಪರಿಲಂ (20%) ಜೀವಾಂಶಗಳಿಂದ ಉಪಚರಿಸಿ ಬಿತ್ತಿದ ಬೀಜಗಳು ಅಧಿಕ ಗಿಡಗಳ ಎತ್ತರ (210 ಸೆಂ. ಮೀ.) ಹೆಚ್ಚು ಎಲೆಗಳನ್ನು (13), ಕಡಿಮೆ ಅವಧಿ ಹೂ ಬಿಡಲು (53), ಅಧಿಕ ತೆನೆ ಉದ್ದ (18.83 ಸೆಂ. ಮೀ), ಅಗಲ (15.2 ಸೆಂ. ಮೀ) ಅಧಿಕ ಇಳುವರಿ (68.28 ಕ್ವಿ./ಹೆ) ಯನ್ನು ನೀಡಿತು ಇದರಿಂದ ಅಜೋಸ್ಪಿರಿಲಂ ಬ್ರಾಸಿಲೆನ್ಸ್ (20%) ಒಟ್ಟಾರೆ ಶೇ 18ರಷ್ಟು ಮೊಳಕೆ ಪ್ರಮಾಣ ಹಾಗೂ 22 ರಷ್ಟು ಬೀಜ ಇಳುವರಿ ಹೆಚ್ಚಾಗಿದ್ದು ಸಂಶೋಧನೆಯಿಂದ ತಿಳಿದುಬಂದಿದೆ.

**ಪರಿಚಯ:** ಮೆಕ್ಕೆಜೋಳವು (ಜಿಯಾ ಮೇಜ್) ವಿಶ್ವದ ಪ್ರಮುಖ ಏಕದಳ ಧಾನ್ಯಗಳಲ್ಲಿ ಒಂದಾಗಿದ್ದು ಹೆಚ್ಚಿನ ಇಳುವರಿ ನೀಡುವ ಸಾಮರ್ಥ್ಯ ಹೊಂದಿದೆ, ಹಾಗಾಗಿ ಇದನ್ನು ಪವಾಡ ಬೆಳೆ ಅಥವಾ ಧಾನ್ಯಗಳ ರಾಣಿ ಎಂದು ಕರೆಯಲಾಗುತ್ತದೆ. ಕೀಟನಾಶಕಗಳು ಹಾಗೂ ರಾಸಾಯನಿಕ ಗೊಬ್ಬರಗಳ ಅತಿಯಾದ ಮತ್ತು ನಿರಂತರ ಬಳಕೆಯಿಂದ ಸಾಗುವಳಿ ಮತ್ತು ಉತ್ಪಾದನೆಗೆ ಹಾನಿಕರ ಪರಿಣಾಮಗಳನ್ನು ಉಂಟುಮಾಟುತ್ತದೆ. ಹಾಗಾಗಿ ರಾಸಾಯನಿಕ ಗೊಬ್ಬರಗಳ ಬದಲು ಪರಿಸರ ಸ್ನೇಹಿ ಜೈವಿಕ ಗೊಬ್ಬರಗಳ ಉಪಯೋಗ ಇಂದಿನ ದಿನಗಳಲ್ಲಿ ಹೆಚ್ಚಾಗಿದೆ. ಪ್ರಸ್ತುತ ವಾಹಕ ಜೈವಿಕ ಗೊಬ್ಬರಗಳು ಪೂರ್ವ ಮೊಳಕೆತನದ ಶಾರೀರಿಕ ಹಾಗೂ ಜೀವ ರಸಾಯನಿಕ ಬದಲಾವಣೆಗಳು, ಬೀಜಗಳು ಚಿಗುರುವ ವೇಗ, ಏಕರೂಪದ ಹುಟ್ಟು ಹೆಚ್ಚಿಸುತ್ತದೆ (ಖಾನ್, 1992). ಜೈವಿಕ ಗೊಬ್ಬರಗಳು ಬೀಜ ಮೊಳಕೆಯೊಡೆಯಲು ಹಾರ್ಮೋನ್ಗಳ ಪ್ರಚಾರ ಸ್ರವಿಸುವಿಕೆ ಹಾಗೂ ಸಸ್ಯ ಬೆಳವಣಿಗೆಗೆ ವಾತಾವರಣದ ಸಾರಜನಕ ಮತ್ತು ರಂಜಕವನ್ನು ನೀರೀಕರಿಸಲು ಸಹಾಯ ಮಾಡುತ್ತದೆ. ಕಳೆದ ಎರೆಡು ದಶಕಗಳಲ್ಲಿ ವಿಶೇಷವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಬೆಳೆಗಳ ಮೊಳಕೆ ಪ್ರಮಾಣ ಮತ್ತು ಬೆಳೆಸ್ಥಾಪನೆ ಏಕರೂಪತೆಯನ್ನು ಹೆಚ್ಚಿಸಲು ಜೈವಿಕ ಪ್ರೈಮಿಂಗ್ ಪರಿಣಾಮಕಾರಿ ಬೀಜೋಪಚಾರವಾಗಿದೆ. ಜೈವಿಕ ಬೀಜೋಪಚಾರವು ಪ್ರತಿಕೂಲವಾದ ವಾತಾವರಣದಲ್ಲಿ ಹೆಚ್ಚಿನ ಮೊಳಕೆ ಸಾಮರ್ಥ್ಯ, ಅಧಿಕ ಸಸ್ಯ ಸ್ಥಾಪನೆಗೆ ಹಾಗೂ ಹೆಚ್ಚಿನ ಸಾಂದ್ರತೆಗೆ ಕಾರಣವಾಗುತ್ತದೆ (ಬಾಲಬಾಕಿ ಮತ್ತು ಇತರರು, 1999). ಜೈವಿಕ ಬೀಜೋಪಚಾರವು ಅಂತಿಮ ಇಳುವರಿ ಮತ್ತು ಗುಣಮಟ್ಟದ ಮೇಲೆ ಪ್ರಭಾವ ಹೊಂದಿದೆ. ಆದ್ದರಿಂದ ಜಿಎಚ್–0727 ಮೆಕ್ಕೆಜೋಳ ಬೆಳೆಯ ಬೆಳವಣಿಗೆ

ಹಾಗೂ ಇಳುವರಿ ಮೇಲೆ ಜೈವಿಕ ಗೊಬ್ಬರಗಳ ಬೀಜೋಪಚಾರದಿಂದ ಆಗುವ ಪ್ರಭಾವವನ್ನು ಅಭ್ಯಸಿಸಲಾಯಿತು.

**ವಸ್ತು ಮತ್ತು ವಿಧಾನಗಳು**: ಪ್ರಯೋಗಾಲಯದ ಬೀಜ ಗುಣಮಟ್ಟ ಪರೀಕ್ಷೆ ಮತ್ತು ಹೊಲದ ಬೆಳೆಯ ಪ್ರಯೋಗವನ್ನು ಕ್ರಮವಾಗಿ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ, ವಿಭಾಗ ಮತ್ತು ಮುಖ್ಯ ಕೃಷಿ ಸಂಶೋಧನಾ ಘಟಕ, ಕೃ.ವಿ.ವಿ, ಧಾರವಾಡದಲ್ಲಿ 2014 ರಂದು ನಡೆಸಲಾಯಿತು.

**ಚಿಕಿತ್ಸೆಗಳು**: ಕಂಟ್ರೋಲ್ ($ಟಿ_1$), ಶೇ. 1 ರಷ್ಟು ಕೆಹೆಚ್ಚುಪಿಒಫೋರ್ ($ಟಿ_2$), ಶೇ. 10 ರಷ್ಟು ಅಜೋಸ್ಪಿರಿಲಂ ($ಟಿ_3$) ಶೇ. 20 ರಷ್ಟು ಅಜೋಸ್ಪಿರಿಲಂ ($ಟಿ_4$), ಶೇ. 10 ರಷ್ಟು ಸೂಡೊಮೊನಾಸ್ ($ಟಿ_5$), ಶೇ. 20 ರಷ್ಟು ಸೂಡೊಮೊನಾಸ್ ($ಟಿ_6$), ಶೇ. 10 ರಷ್ಟು ಅಜೋಸ್ಪಿರಿಲಂ + ಶೇ. 1 ರಷ್ಟು ಕೆಹೆಚ್ಚುಪಿಒಫೋರ್ ($ಟಿ_7$), ಶೇ. 20 ರಷ್ಟು ಅಜೋಸ್ಪಿರಿಲಂ + ಶೇ. 1 ರಷ್ಟು ಕೆಹೆಚ್ಚುಪಿಒಫೋರ್ ($ಟಿ_8$), ಶೇ. 10 ರಷ್ಟು ಸೂಡೊಮೊನಾಸ್ + ಶೇ. 1 ರಷ್ಟು ಕೆಹೆಚ್ಚುಪಿಒಫೋರ್ ($ಟಿ_9$), ಶೇ. 20 ರಷ್ಟು ಸೂಡೊಮೊನಾಸ್ + ಶೇ. 1 ರಷ್ಟು ಕೆಹೆಚ್ಚುಪಿಒಫೋರ್ ($ಟಿ_{10}$).

ಜಿಹೆಚ್-0727 ಹೈಬ್ರಿಡ್ ತಳಿಯ ಬೀಜಗಳನ್ನು ರಾಷ್ಟ್ರೀಯ ಬೀಜ ಯೋಜನೆ, ಕೃ.ವಿ.ವಿ, ಧಾರವಾಡದಿಂದ ಪಡೆಯಲಾಯಿತು. ಈ ಬೀಜಗಳನ್ನು 12 ಗಂಟೆಗಳ ಕಾಲ ಜೈವಿಕ ಗೊಬ್ಬರದ ದ್ರಾವಣದಲ್ಲಿ ನೆನೆಸಲಾಯಿತು, ನಂತರ ಬೀಜಗಳನ್ನು ನೆರಳಿನಲ್ಲಿ ಮೂಲ ತೇಮಾಂಶಕ್ಕೆ ಒಣಗಿಸಿ ಪ್ರಾಯೋಗಿಕ ಹಾಗೂ ಕ್ಷೇತ್ರ ಪರಿಶೀಲನೆ ನಡೆಸಲಾಯಿತು.

**ಫಲಿತಾಂಶಗಳು ಮತ್ತು ವಿಮರ್ಶೆ**: ಜೈವಿಕ ಬೀಜೋಪಚಾರದಿಂದ ಜಿಹೆಚ್-0727 ಮೆಕ್ಕೆ ಜೋಳದ ಗುಣಮಟ್ಟದ ಮೇಲಾದ ಪ್ರಭಾವವನ್ನು ಟೇಬಲ್-1ರಲ್ಲಿ ತಿಳಿಸಿದೆ. ಶೇ. 20 ಅಜೋಸ್ಪಿರಿಲಂ ಉಪಚಾರ ಮಾಡಿದ ಬೀಜಗಳು ಹೆಚ್ಚಿನ ಗುಣಮಟ್ಟವನ್ನು ಅಂದರೆ ಶೇ. ವಾರು ಮೊಳಕೆ (97%), ಬೀಜ ಚಟುವಟಿಕೆ ಸೂಚಾಂಕ (3585), ಬೇರು ಅಳತೆ (25.88 ಸೆಂ.ಮೀ), ಶೂಟ್ ಅಳತೆ (11.10 ಸೆಂ.ಮೀ) ತೋರಿತು. ಜೈವಿಕ ಬೀಜೋಪಚಾರ ಮಾಡಿದ ಬೀಜಗಳಲ್ಲಿ ಹೆಚ್ಚಿನ ಐ.ಎ.ಎ ಪ್ರಚಾರ ಸ್ರವಿಸುವಿಕೆ, ಕಿಣ್ವಗಳ ಪ್ರಚೋದನೆ ಮೂಲಕ ಬೀಜ ಮೊಳಕೆಗೆ ಉತ್ತೇಜಿಸುತ್ತದೆ (ರಾಮಮೋರ್ತಿ ಮತ್ತು ಇತರರು, 2000).

ಕ್ಷೇತ್ರ ಪರಿಶೀಲನೆಯಲ್ಲಿಯೂ ಸಹ ಶೇ. 20 ಅಜೋಸ್ಪಿರಿಲಂ ಬೀಜೋಪಚಾರ ಮಾಡಿದ ಗಿಡಗಳು ಉತ್ತಮ ಬೆಳವಣಿಗೆಯನ್ನು ತೋರಿದವು, ಅಂದರೆ ಕೊಯ್ಲಿನ ಸಮಯದಲ್ಲಿ ಗಿಡದ ಎತ್ತರ (210 ಸೆಂ.ಮೀ), ಎಲೆಗಳ ಸಂಖ್ಯೆ (13)ಯನ್ನು ತೋರಿತು. ಜೈವಿಕ ಬೀಜೊಪಚಾರ ನಡೆಸಿದ ಗಿಡಗಳಲ್ಲಿ ಮೊಳಕೆಯಾಗುವ ಸಂಗತಿಗಳು ವೇಗವಾಗುವುದರಿಂದ ಗಿಡಗಳ ಎತ್ತರ ಮತ್ತು ಎಲೆಗಳ ಸಂಖ್ಯೆ ಹೆಚ್ಚಾಗುವುದು (ಶಿರಿನ್ ಮೊಕಾರಿ ಮತ್ತು ಇತರರು, 2012). ಅಜೋಸ್ಪಿರಿಲಂ ಬೀಜೊಪಚಾರದಿಂದ ಶೇ. 50 ಹೂಬಿಡುವ ದಿನಗಳು ಕಡಿಮೆಯಾಯಿತು. ಶೇ. 20 ಅಜೋಸ್ಪಿರಿಲಂ ಬೀಜೋಪಚಾರ ಮಾಡಿದ ಗಿಡಗಳು ಟ್ಯಾಸಲಿಂಗ್ ಮತ್ತು ಸಿಲ್ಕಿಂಗ್ ಗೆ ಅತಿ ಕಡಿಮೆ (ಕ್ರಮವಾಗಿ 53 ಮತ್ತು 57.39) ದಿನ ಪಡೆದವು. ಜೈವಿಕ ಬೀಜೊಪಚಾರ ನಡೆಸಿದ ಗಿಡಗಳಲ್ಲಿ ಮೊಳಕೆಯಾಗುವ ಸಂಗತಿಗಳು ವೇಗವಾಗುವುದರಿಂದ, ಸಾರಜನಕ ಮತ್ತು ರಂಜಕ ನೀರೀಕರಿಸುವಿಕೆ ಯಿಂದ ಶೇ. 50 ಹೂಬಿಡುವ ದಿನಗಳು ಕಡಿಮೆಯಾಗುವುದು (ಮೆಸಮ್ ಬೇಜೆದ್ ಮತ್ತು ಇತರರು, 2013). . ಶೇ. 20 ಅಜೋಸ್ಪಿರಿಲಂ ಬೀಜೋಪಚಾರ ಮಾಡಿದ ಗಿಡಗಳು ಹೆಚ್ಚಿನ ಇಳುವರಿ ಅಂಶಗಳನ್ನು, ಜೊಂಡಿನ ಉದ್ದ (18.83 ಸೆಂ.ಮೀ), ಜೊಂಡಿನ ಸುತ್ತಳತೆ (15.17 ಸೆಂ.ಮೀ) ಹಾಗೂ ಹೆಕ್ಟೇರ್ ಇಳುವರಿ (68.28 ಕ್ವಿ) ನೀಡಿತು. ಶೇ. 20 ಅಜೋಸ್ಪಿರಿಲಂ ಬೀಜೋಪಚಾರ ದಿಂದಾಗಿ ಶೇ. 20 ರಷ್ಟು ಇಳುವರಿ ಹೆಚ್ಚಾಯಿತು. ಅಜೋಸ್ಪಿರಿಲಂ ಬೀಜೋಪಚಾರದಿಂದಾಗಿ ಉತ್ತಮ ಮೊಳಕೆ ಪ್ರಮಾಣ, ಸಾರಜನಕ ಸ್ಥಿರೀಕರಣ, ರಂಜಕ ನೀರೀಕರಣದಿಂದಾಗಿ ಹೆಚ್ಚಿನ ಪೋಷಕಾಂಶಗಳ ಲಭ್ಯತೆಯಿಂದಾಗಿ ಬೀಜದ ಇಳುವರಿ ಹೆಚ್ಚಾಗುತ್ತದೆ (ಯಾಜ್ದಾನಿ ಮತ್ತು ಇತರರು, 2009: ನಿಜಾರತ್ ಮತ್ತು ಗೊಲಾಮಿ 2009).

**ಟೇಬಲ್.1. ಜೈವಿಕ ಬೀಜೊಪಚಾರದಿಂದ ಜಿಹೆಚ್-0727 ಮೆಕ್ಕೆ ಜೋಳದ ಗುಣಮಟ್ಟದ ಮೇಲಾಗುವ ಪ್ರಭಾವ.**

| **ಉಪಚಾರಗಳು** | **ಮೊಳಕೆ ಪ್ರಮಾಣ (%)** | **ಶೂಟ್ ಅಳತೆ (ಸೆಂ.ಮೀ.)** | **ರೂಟ್ ಅಳತೆ (ಸೆಂ.ಮೀ.)** | **ಬೀಜ ಚಟುವಟಿಕೆ ಸೂಚಾಂಕ** |
|---|---|---|---|---|
| $ಟಿ_1$: ಕಂಟ್ರೋಲ್ | 88.7(70.40)* | 7.58 | 19.16 | 2373 |
| $ಟಿ_2$: ಶೇ. 1 ರಷ್ಟು ಕೆಹೆಚ್ಚುಪಿಒಫೋರ್ | 94.5 (76.42) | 8.68 | 21.13 | 2816 |
| $ಟಿ_3$: ಶೇ. 10 ರಷ್ಟು ಅಜೋಸ್ಪಿರಿಲಂ | 94.0 (75.79) | 8.31 | 20.18 | 2679 |
| $ಟಿ_4$: ಶೇ. 20 ರಷ್ಟು ಅಜೋಸ್ಪಿರಿಲಂ | 97.0 (80.00) | 11.10 | 25.88 | 3587 |
| $ಟಿ_5$: ಶೇ. 10 ರಷ್ಟು ಸೂಡೊಮೊನಾಸ್ | 94.0 (75.81) | 8.69 | 20.77 | 2778 |
| $ಟಿ_6$: ಶೇ. 20 ರಷ್ಟು ಸೂಡೊಮೊನಾಸ್ | 96.8 (79.79) | 10.98 | 25.50 | 3528 |
| $ಟಿ_7$: ಶೇ. 10 ರಷ್ಟು ಅಜೋಸ್ಪಿರಿಲಂ + ಶೇ. 1 ರಷ್ಟು ಕೆಹೆಚ್ಚುಪಿಒಫೋರ್ | 94.8 (76.77) | 8.78 | 21.14 | 2827 |
| $ಟಿ_8$: ಶೇ. 20 ರಷ್ಟು ಅಜೋಸ್ಪಿರಿಲಂ + ಶೇ. 1 ರಷ್ಟು ಕೆಹೆಚ್ಚುಪಿಒಫೋರ್ | 96.0 (78.48) | 10.89 | 25.20 | 3464 |
| $ಟಿ_9$: ಶೇ. 10 ರಷ್ಟು ಸೂಡೊಮೊನಾಸ್ + | | | | |

| | | | | |
|---|---|---|---|---|
| ಶೇ. 1 ರಷ್ಟು ಕೆಹೆಚ್ಟುಪಿಒಫೋರ್ | 94.7 (76.79) | 8.79 | 21.16 | 2838 |
| ಟಿ$_{10}$: ಶೇ. 20 ರಷ್ಟು ಸೂಡೊಮೊನಾಸ್ + ಶೇ. 1 ರಷ್ಟು ಕೆಹೆಚ್ಟುಪಿಒಫೋರ್ | 95.5 (77.77) | 10.88 | 25.06 | 3432 |
| **ಮೀನ್** | **94.6 (76.81)** | **9.47** | **22.52** | **3032** |
| **ಎಸ್ಇಎಂಶಿ** | 0.5 | 0.14 | 0.37 | 46.09 |
| **ಸಿಡಿ (0.01)** | 1.97 | 0.54 | 1.44 | 180 |

*** ಆರ್ಕ ಸೈನ್ ಅಂಕಗಳು.**

**ಟೇಬಲ್.2. ಜೈವಿಕ ಬೀಜೋಪಚಾರದಿಂದ ಜಿಹೆಚ್-0727 ಮೆಕ್ಕೆ ಜೋಳದ ಬೆಳಮಣಿಗೆ ಮತ್ತು ಇಳುವರಿಯ ಮೇಲಾಗುವ ಪ್ರಭಾವ.**

| ಉಪಚಾರಗಳು | ಎಲೆಗಳ ಸಂಖ್ಯೆ | ಗಿಡಗಳ ಎತ್ತರ (ಸೆಂ.ಮೀ) | ಶೇ. 50 ಟ್ಯಾಸಲಿಂಗ್ ದಿನಗಳು | ಶೇ. 50 ಸಿಲ್ಕಿಂಗ್ ದಿನಗಳು | ಜೊಂಡಿನ ಉದ್ದ (ಸೆಂ.ಮಿ) | ಜೊಂಡಿನ ಸುತ್ತಳತೆ (ಸೆಂ.ಮಿ) | ಇಳುವರಿ (ಕ್ವಿ/ಹೆ) |
|---|---|---|---|---|---|---|---|
| ಟಿ$_1$: ಕಂಟ್ರೋಲ್ | 11.47 | 191 | 57.39 | 61.67 | 16.37 | 13.66 | 55.58 |
| ಟಿ$_2$: ಶೇ. 1 ರಷ್ಟು ಕೆಹೆಚ್ಟುಪಿಒಫೋರ್ | 12.07 | 204 | 55.00 | 58.33 | 18.25 | 14.34 | 58.23 |
| ಟಿ$_3$: ಶೇ. 10 ರಷ್ಟು ಅಜೋಸ್ಪಿರಿಲಂ | 11.93 | 202 | 55.33 | 59.00 | 17.90 | 14.09 | 57.43 |
| ಟಿ$_4$: ಶೇ. 20 ರಷ್ಟು ಅಜೋಸ್ಪಿರಿಲಂ | 12.40 | 210 | 53.00 | 57.33 | 18.83 | 15.17 | 68.28 |
| ಟಿ$_5$: ಶೇ. 10 ರಷ್ಟು ಸೂಡೊಮೊನಾಸ್ | 12.00 | 202 | 54.67 | 58.67 | 18.27 | 14.37 | 57.96 |
| ಟಿ$_6$: ಶೇ. 20 ರಷ್ಟು ಸೂಡೊಮೊನಾಸ್ | 12.40 | 209 | 53.00 | 57.33 | 18.79 | 15.13 | 67.49 |
| ಟಿ$_7$: ಶೇ. 10 ರಷ್ಟು ಅಜೋಸ್ಪಿರಿಲಂ + ಶೇ. 1 ರಷ್ಟು ಕೆಹೆಚ್ಟುಪಿಒಫೋರ್ | 12.13 | 203 | 53.67 | 58.00 | 18.35 | 14.21 | 59.29 |
| ಟಿ$_8$: ಶೇ. 20 ರಷ್ಟು ಅಜೋಸ್ಪಿರಿಲಂ + ಶೇ. 1 ರಷ್ಟು ಕೆಹೆಚ್ಟುಪಿಒಫೋರ್ | 12.27 | 209 | 53.33 | 57.67 | 18.61 | 14.87 | 63.26 |
| ಟಿ$_9$: ಶೇ. 10 ರಷ್ಟು ಸೂಡೊಮೊನಾಸ್ + ಶೇ. 1 ರಷ್ಟು ಕೆಹೆಚ್ಟುಪಿಒಫೋರ್ | 12.13 | 203 | 54.00 | 58.33 | 18.35 | 14.25 | 59.02 |
| ಟಿ$_{10}$: ಶೇ. 20 ರಷ್ಟು ಸೂಡೊಮೊನಾಸ್ + ಶೇ. 1 ರಷ್ಟು ಕೆಹೆಚ್ಟುಪಿಒಫೋರ್ | 12.07 | 209 | 53.33 | 57.67 | 18.56 | 14.72 | 62.99 |
| **ಮೀನ್** | **12.09** | **204.2** | **54.3** | **58.40** | **18.23** | **14.48** | **60.95** |
| **ಎಸ್ಇಎಂಶಿ** | 0.19 | 2.55 | 0.29 | 0.29 | 0.13 | 0.11 | 0.56 |
| **ಸಿಡಿ (0.05)** | ಎನ್ಎಸ್ | 7.57 | 0.87 | 0.86 | 0.39 | 0.32 | 1.67 |

**ಎನ್ಎಸ್: ನಾನ್ ಸಿಗ್ನಿಫಿಕೆಂಟ್.**

**ತೀರ್ಮಾನ:** ಶೇ. 20 ಅಜೋಸ್ಪಿರಿಲಂ ಬೀಜೋಪಚಾರದಿಂದ ಮೆಕ್ಕೆ ಜೋಳದ ಬೀಜ ಗುಣಮಟ್ಟ, ಬೆಳವಣಿಗೆ ಹಾಗೂ ಇಳುವರಿಯನ್ನು ಹೆಚ್ಚಿಸಬಹುದಾಗಿದೆ.

**ಉಲ್ಲೇಖನಗಳು:**

ಬಾಲಬಾಕಿ, ಆರ್. ಆಡ್., ಜುರಯಿಕ್, ಎ. ಎನ್. ಮತ್ತು ತಾಜುಕ್, ಎನ್., 1999, ಬೀಜೋಪಚಾರದಿಂದ ತೇವಾಂಶ ಒತ್ತಡದಲ್ಲಿ ಗೋಧಿ ಬೀಜ ಗುಣಮಟ್ಟದ ಮೇಲಾಗುವ ಪರಿಣಾಮ., ಸೀಡ್ ಸೈ. ಟೆಕ್., 27: 291–302.

ಖಾನ್, ಎ. ಎ. 1992, ಪೂರ್ವ ಸಸ್ಯ ಶಾರೀರಿಕ ನಿಯಂತ್ರಣ, ಹಾರ್ಟಿ.ರಿಸರ್ಚ., 13: 131–181.

ನಿಜಾರತ್, ಎಸ್. ಮತ್ತು ಘೊಲಾಮಿ, ಎ., 2009, ಮೆಕ್ಕೆ ಜೋಳ ಬೆಳವಣಿಗೆ ಮತ್ತು ಇಳುವರಿಯ ಮೇಲೆ ಪ್ರೈಮಿಂಗ್ ಪ್ರಭಾವ, ಪಾಕ್. ಜ. ಬಯೊ. ಸೈ., 12(1): 26–32.

ರಾಮಮೂರ್ತಿ, ಕೆ., ನಟರಾಜನ್, ಎನ್. ಮತ್ತು ಲಕ್ಷ್ಮಣನ್, ಎ., 2000, ಅಜೋಸ್ಪಿರಿಲಂ ಬೀಜೋಪಚಾರದಿಂದ ಅಕ್ಕಿ ಮೊಳಕೆ ಮತ್ತು ಇಳುವರಿಯ ಮೇಲಾಗುವ ಪ್ರಭಾವ., ಸೀಡ್ ಸೈ. ಟೆಕ್., 28(3): 809–815.

ಶಿರಿನ್ ಮೊಕಾರಿ, ಎಫ್., ಬಹ್ರಾಂ, ಎಂ. ಮತ್ತು ಸಾಹರ್ ಬಶೀರ್, ಕೆ., 2012, ಮೆಕ್ಕೆ ಜೋಳದ ಮೊಳಕೆ ಮತ್ತು ಬೆಳವಣಿಗೆಯ ಮೇಲೆ ಜೈವಿಕ ಗೊಬ್ಬರ ಬೀಜೋಪಚಾರದ ಪ್ರಭಾವ, ಇಂಟ್. ರಿಸರ್ಚ. ಜ. ಮತ್ತು ಬೇಸಿಕ ಸೈ., 3(5): 1097–1102.

# ಕಾಸಮಾಸ್ ಹೂ ಗಿಡದ ಬೀಜ ಇಳುವರಿ ಹಾಗೂ ಗುಣಮಟ್ಟದ ಮೇಲೆ ಪೋಷಕಾಂಶಗಳ ಪ್ರಮಾಣ ಹಾಗೂ ಸಸಿ ಚಿವುಟುವಿಕೆಯ ಪ್ರಭಾವ

ಮಧುಕೇಶ್ವರ, ಬಿ. ಪುಟ್ಟಪ್ಪನವರ ಡಾ. ವಿ. ಕೆ. ದೇಶಪಾಂಡೆ, ಕೊಟೇಶಿ ಲಮಾಣಿ ಮತ್ತು ಡಾ. ಡಿ. ಎಸ್. ಉಪ್ಪಾರ
ಬೀಜ ವಿಜ್ಞಾನ ಹಾಗೂ ತಂತ್ರಜ್ಞಾನ ವಿಭಾಗ, ಕೃಷಿ ಮಹಾ ವಿದ್ಯಾಲಯ, ಧಾರವಾಡ–580 005
Email : bpmadhukeshwar86@gmail.com

**ಪ್ರಬಂಧಸಾರ:–** ಕಾಸಮಾಸ್ ಸುಂದರ ಹಳದಿ, ಬಿಳಿ ಇಲ್ಲವೆ ತಿಳಿ ಗುಲಾಬಿ ಹೂ. ಕಾಸಮೊಸ್ ಗಿಡಗಳಿಲ್ಲದ ಉಪವನವಿಲ್ಲ. ಕಾಸಮಾಸ್ ಹೂ ಬೀಜೋತ್ಪಾದನೆ ಬಗೆಗೆ ಸಂಶೋಧನಾತ್ಮಕ ಅಭ್ಯಾಸಗಳು ಅತೀ ವಿರಳವಾಗಿರುವುದರಿಂದ ರಸಗೊಬ್ಬರ ಹಾಗೂ ಸಸಿ ಚಿವಿಟುವಿಕೆ (ಕೈಯಿಂದ ಹಾಗೂ ರಾಸಾಯನ ಸಿಂಪರಣೆಯಿಂದ) ಗಳ ಪ್ರಭಾವವನ್ನು ಕಾಸಮಾಸ್ ಬೀಜೋತ್ಪಾದನೆಯಲ್ಲಿ 2012–13 ರಲ್ಲಿ ಕೃ.ವಿ.ವಿ., ಧಾರವಾಡದಲ್ಲಿ ಕೈಗೊಳ್ಳಲಾಯಿತು. 3 ಹಂತಗಳ ರಸಗೊಬ್ಬರಗಳಲ್ಲಿ ಪ್ರತಿ ಹೆಕ್ಟೇರಿಗೆ 270ಸಾ:180ರಂ:110ಪೊ ಪ್ರಮಾಣ ಒದಗಿಸುವಿಕೆ ಅತ್ಯುತ್ತಮ ಬೆಳೆ ಬೆಳವಣಿಗೆ, ಹೂ ಬಿಡುವಿಕೆ ಹಾಗೂ ಬೀಜ ಇಳುವರಿ (54 ಕೆ.ಜಿ./ಹೆ) ಯನ್ನು ನೀಡಿತು.

ಸಸಿ ನೆಟ್ಟ ಹದಿನೈದು ದಿನಗಳ ನಂತರ ಕೈಯಿಂದ ಚಿವಿಟುವುದರಿಂದ ಗಿಡವು ಕುಬ್ಜವಾಗಿ ಅತೀ ಹೆಚ್ಚು ಟೊಂಗೆಗಳನ್ನು ಬಿಟ್ಟು ಕಡಿಮೆ ಅವಧಿಯಲ್ಲಿ ಹೂ ಬಿಡಲು ಪ್ರಾರಂಭಿಸಿತು. ಅಧಿಕ ಹೂ ಹಾಗು ಹೆಚ್ಚು ಬೀಜ ಇಳುವರಿ (70 ಕೆ.ಜಿ./ಹೆ) ಕಂಡು ಬಂದಿತಲ್ಲದೆ ಕಂಟ್ರೋಲ ಪ್ಲಾಟಿಗೆ ಹೋಲಿಸಿದಲ್ಲಿ ಶೇ 40 ಕ್ಕೂ ಹೆಚ್ಚು ಬೀಜ ಇಳುವರಿ ಪಡಿಯಲಾಯಿತು. ಮೆಪಿಕ್ವಾಟ್ ಕ್ಲೋರೈಡ್ (500 ಪಿ.ಪಿ.ಎಮ್) ರಾಸಾಯನ ಸಿಂಪರಣೆ ಉಪಚಾರ ರಹಿತ ಟ್ರೀಟಮೆಂಟಿಗಿಂತಲೂ ಅಧಿಕ ಇಳುವರಿ ನೀಡಿತಾದರೂ ಅದು ಎರಡನೆ ಸ್ಥಾನ ಪಡೆಯಿತು. ಸಸಿ ಚಿವಿಟುವ ಕ್ರೀಯೆಯಿಂದ ಗಮನಾರ್ಹವಾಗಿ ಬೀಜ ಗುಣಮಟ್ಟ ಕಂಡು ಬರಲಿಲ್ಲವಾದರೂ ಶೇ 3 ರಷ್ಟು ಅಧಿಕ ಮೊಳಕೆ ಪ್ರಮಾಣ ಹಾಗೂ ಬೀಜ ಬಲಸತ್ವ (2056) ಕಂಡುಬಂದವು. ಆದ್ದರಿಂದ ಅಧಿಕ ಇಳುವರಿ ಪಡೆಯಲು ಪ್ರತಿ ಹೆಕ್ಟೆರಿಗೆ 270ಸಾ:180ರಂ:110ಪೊ ರಸಗೊಬ್ಬರ ನೀಡಬೇಕಲ್ಲದೆ ಸಸಿ ನಾಟಿ ಮಾಡಿದ 15 ದಿನಗಳ ನಂತರ ಕೈಯಿಂದ ಇಲ್ಲವೆ ಪಿಕ್ವಾಟ್ ಕ್ಲೋರೈಡ್ (500 ಪಿ.ಪಿ.ಎಮ್) ಸಿಂಪರಣೆಯಿಂದ ಚಿವುಟಬೇಕು.

ಕಾಸ್ಮೋಸ ಸಲುಮರಿಯಸ ಇದೊಂದು ಉಷಣವಲಯದ ಉತ್ತರ ಭಾರತದಲ್ಲಿ ಬೆಳೆಯುವ ಉದ್ಯಾನವನದ ಅನಿವಾರ್ಯ ಹೂ ಗಿಡವಾಗಿದೆ. ಹಳದಿ, ಬಿಳಿ, ಕಿತ್ತಳೆ ಹಾಗು ಗುಲಾಬಿ ಬಣ್ಣದ ಹೋಗಳನ್ನು ಬಿಡುತ್ತದೆ. ಹಬ್ಬ ಹರಿದಿನ ಹಾಗು ದೈನ0ದಿನ ಕತರಿಸಿದ ಹುಗಳಿಗೆ ದಿನೇ ದಿನೇ ಬೇಡಿಕೆ ಹೆಚುತಿರುವುದರಿ0ದ ರೈತ ಸಮುದಾಯದಲ್ಲಿ ಕಾಸಮೊಸ ಬೀಜದ ಬೇಡಿಕೆ ಹೆಚ್ಚಾಗುತ್ತಿದೆ. ಸಾಕಷ್ಟು ಪ್ರಮಾಣದಲ್ಲಿ ಗುಣಮಟ್ಟದ ಬೀಜಗಳ ಅವಶ್ಯಕತೆ ಹಾಗೂ ಉತ್ಪಾದನೆಯ ಬಗ್ಗೆ ವೈಜ್ಞನಿಕ ಮಾಹಿತಿ ವಿರಳವಿರುವುದರಿ0ದ ಪ್ರಸ್ತುತವಾಗಿ ಕಾಸಮೊಸ ಹೂ ಗಿಡದ ಬೀಜ ಇಳುವರಿ ಮತ್ತು ಗುಣಮಟ್ಟದ ಮೇಲೆ ಪೋಷಕಾ0ಶಗಳ ಪ್ರಮಾಣ ಹಾಗೂ ಸಸಿ ಚಿವುಟುವಿಕೆಯ ಪ್ರಭಾವ ಎ0ಬ ಸ0ಶೋಧನೆಯನ್ನು ಕೈಗೊಳ್ಳಲಾಗಿದೆ.

**ವಸ್ತು ಮತ್ತು ವಿಧಾನಗಳು:** ಈ ಪ್ರಸ್ತುತ ಕ್ಷೇತ್ರ ಹಾಗೂ ಪ್ರಯೋಗಾಲಯದ ಸ0ಶೋಧನೆಯನ್ನು ಧಾರವಾಡ ಕೃ.ವಿ.ವಿ ಯ ಬೀಜ ವಿಜ್ಞನ ಮತ್ತು ತ0ತ್ರಜ್ಞನ ವಿಭಾಗದಲ್ಲಿ 2014 ಮು0ಗಾರಿನಲ್ಲಿ ಕೈಗೊಳ್ಳಲಾಯಿತು.

ರಸಗೊಬ್ಬರಗಳ ಪ್ರಮಾಣ ಉಪಚಾರಗಳು ಹೀಗಿವೆ
ಎಫ–1: 180:120:60 ಕಿಗ್ರಾ0 ಸಾ:ರ0:ಪೊ/ಹೆ
ಎಫ–2: 225:150:85 ಕಿಗ್ರಾ0 ಸಾ:ರ0:ಪೊ/ಹೆ(ಶೇ 25 ಹೆಚ್ಚಳ)
ಎಫ–3: 270:180:110 ಕಿಗ್ರಾ0 ಸಾ:ರ0:ಪೊ/ಹೆ(ಶೇ 50 ಹೆಚ್ಚಳ)
ಇದಲ್ಲದೆ 4 ಬಗೆಯ ಚಿವುಟುವಿಕೆ ಉಪಚಾರಗಳಿವೆ
ಪಿ1: ಚಿವುಟುವಿಕೆ ಇಲ್ಲ (ಕ0ಟ್ರೋಲ್)
ಪಿ2: ಚಿವುಟುವುದು (ಕೈಯಿ0ದ)
ಪಿ3: ಮೆಪಿಕ್ವಾಟ ಕ್ಲೋರೈಡ 500 ಪಿಪಿಯ0 ಹಾಗೂ
ಪಿ4: ಸಿಸಿಸಿ 500 ಪಿಪಿಯ0

ಸಸಿಗಳನ್ನು ನಾಟಿ ಮಾಡುವ ಎರಡು ದಿನ ಮೊದಲು ಮೇಲೆ ತಿಳಿಸಿದ0ತೆ ರಸಗೊಬ್ಬರಗಳನ್ನು ನೀಡಲಾಯಿತು ಹಾಗೂ ಚಿವುಟುವಿಕೆ(ಕೈಯಿ0ದ ಹಾಗೂ ರಾಸಾಯನಿಕ ಚಿವುಟುವಿಕೆ)ಯನ್ನು 15 ದಿನಗಳ ನ0ತರ ಕೈಗೊಳ್ಳಲಾಯಿತು.

**ಫಲಿತಾಂಶ ಮತ್ತು ವಿಮರ್ಶೆ:** ಕೊಯ್ಲಿನ ಸಮಯದಲ್ಲಿ ಗಿಡಗಳ ಎತ್ತರ ಅಳತೆ ಮಾಡಿದಾಗ ಎಫ–3 ಪಿ–1 (165 ಸೆ0.ಮೀ) ಹಾಗೂ ಕಡಿಮೆ ಎತ್ತರ ಎಫ1 ಪಿ4 ಉಪಚಾರದಲ್ಲಿ (135.3 ಸೆ0.ಮೀ) ಕ0ಡುಬ0ದಿತು. ಗಿಡಗಳಲ್ಲಿ ಅಧಿಕ ಶಾಖೆಗಳು 270:180:110 ಕಿಗ್ರಾ0 ಹಾಗೂ 225:150:85 ಕಿಗ್ರಾ0/ಹೆ ರಸಗೊಬ್ಬರ ಉಪಚಾರದಿ0ದ ಕ0ಡುಬ0ದಿತು. ಅಧಿಕ ಪೋಷಕಾ0ಶಗಳ ಹೀರುವಿಕೆ ತದನ0ತರದ ಜೀವಕೋಶ ವಿಭಜನೆ ಹಾಗೂ ಪ್ರೋಟೀನ ಸ0ಶ್ಲೇಷಣೆಗೆ ಈ ಅಧಿಕ ಶಾಖೆಗಳು ಬೆಳೆಯಲು ಕಾರಣವಾಗಿವೆ ಎ0ದು ಸೈ0ಗ ಮತ್ತು ಸ0ಗಮ (2000), ದೊಡ್ಡಗೋಡರ ಹಾಗೂ ಸ0ಗಡಿಗರು (2002) ಅಲ್ಲದೆ ಕುಮಾರ ಮತ್ತು ಸ0ಗಡಿಗರು (2003) ಸ0ಶೋಧನಾತ್ಮಕವಾಗಿ ಅಭೀಪ್ರಾಯ ಪಟ್ಟಿದ್ದಾರೆ. ಚಿವುಟುವಿಕೆಯಿ0ದಲು ಗಮನಾರ್ಹವಾಗಿ ಅಧಿಕ ಸ0ಖ್ಯೆ ಶಾಖೆಗಳು ಕ0ಡುಬ0ದಿದ್ದು ಕೈಯಾರೆ ಅಥವಾ ರಾಸಾಯನಿಕದಿ0ದ ಚಿವುಟುವಿಕೆ ಮಾಡಬಹುದು ಎ0ದು ಅಭಿಪ್ರಾಯ ಪಡಲಾಗಿದೆ. ಆದರೆ ಚಿವಿಟುವಿಕೆ ಮಾಡದೇ ಇರುವ ಉಪಚಾರದಲ್ಲಿ ಅತೀ ಕಡಿಮೆ ಶಾಖೆಗಳು ಕ0ಡುಬ0ದವು. ಕೈಯಾರೆ ಹಾಗೂ ರಾಸಾಉನಿಕ ಚಿವುಟಿದ ಗಿಡಗಳ ಲ0ಬ ಬೆಳವಣಿಗೆ ನಿಯಂತ್ರಣಗೊಂಡು, ಅಧಿಕ ಸಮತಲ ಬೆಳವಣಿಗೆ ಹಾಗೂ ಅಧಿಕ ಪೋಷಕಾಂಶಗಳ ಸರಬರಾಜು ಆಗುವುದೆಂದು ಟೋಮರ ಹಾಗೂ ಸಂಗಡಿಗರು (2004), ಅಯ್ಯನಗೋಡ (2003) ಸುದರ್ಶನ ಅವರ (2004) ರ ಸಂಶೋಧನೆಯಿಂದ ಕಂಡುಬಂದಿದೆ. ಹೂಗಳ ಸಂಖ್ಯೆ ಸಹ ರಸಗೊಬ್ಬರ (ಎಫ–3 ಹಾಗೂ ಎಫ–2) ಹಾಗೂ ಚಿವುಟುವಿಕೆಯಿಂದ (ಪಿ–2 ಹಾಗೂ ಪಿ–3) ಅಧಿಕಗೊಂಡವು. ಅತ್ಯಂತ ಕಡಿಮೆ ಹೂಗಳ ಸಂಖ್ಯೆ ಚಿವುಟುವಿಕೆ ಮಾಡದ ಉಪಚಾರದಲ್ಲಿ ಕಂಡುಬಂದವು. ಇದರಂತೆ ಪ್ರತಿ ಹೂವಿನಲ್ಲಿ ಬೀಜಗಳ ಸಂಖ್ಯೆ, ಪ್ರತಿ ಗಿಡಗಳಲ್ಲಿ ಬೀಜಗಳ ತೂಕವು ಸಹ 270:180:110 ಕಿ.ಗ್ರಾಂ.(ಸಾ:ರಂ:ಪೊ) ರಸಗೊಬ್ಬರ ಹಾಕಿದ ಉಪಚಾರಗಳಲ್ಲಿ ಮಾತ್ರ ಕಂಡುಬಂದವು. ಕೈಯಿಂದ ಚಿವುಟುವುದರಿಂದ (60.90 ಕಿ.ಗ್ರಾಂ) ಹಾಗೂ ಮೆಪಿಕ್ವಾಟ ರಾಸಾಯನಿಕ ಸಿಂಪಡಣೆಯಿಂದಲೂ ಅಧಿಕ ಬೀಜ ಇಳುವರಿ (58.63 ಕಿ.ಗ್ರಾಂ) ಪಡೆಯಲಾಯಿತು. ಈ ಗಿಡಗಳ ಅಧಿಕ

ಬೆಳವಣಿಗೆ, ದ್ಯುತಿಸಂಶ್ಲೇಷಣೆ, ಹೆಚ್ಚು ಶಾಖೆಗಳು ಹಾಗೂ ಅಧಿಕ ಬೀಜಗಳ ಸಂಖ್ಯೆಯಿಂದ ಒಟ್ಟಾರೆಯಾಗಿ 270:180:110 ಕಿ.ಗ್ರಾಂ.(ಸಾ:ರಂ:ಪೊ) ರಸಗೊಬ್ಬರ ಪಡೆದ ಹಾಗೂ ತದನಂತರ 225:150:85 ಕಿ.ಗ್ರಾಂ.(ಸಾ:ರಂ:ಪೊ) ನೀಡಿದ ಉಪಚಾರಗಳಲ್ಲಿ ಹಾಗೂ ಚಿವುಟುವುದರಿಂದ ಮತ್ತು ಮೆಪಿಕ್ವಾಟ ಕ್ಲೋರೈಡ 500 ಪಿಪಿಎಂ ಸಿಂಪರಣೆಯಿಂದ ಕಂಡುಬಂದವು.

ಕೊಯ್ಲಿನ ನಂತರ ನಡೆಸಲಾದ ಬೀಜಗಳ ಗುಣಮಟ್ಟದ ಪರೀಕ್ಷೆಯಲ್ಲಿಯೂ ಸಹ 270:180:110 ಕಿ.ಗ್ರಾಂ.(ಸಾ:ರಂ:ಪೊ) ರಸಗೊಬ್ಬರ ಹಾಗೂ ಕೈಯಿಂದ ಚಿವುಟಿದ ಗಿಟಗಳಿಂದ ಪಡೆದ ಬೀಜಗಳು ಉತ್ತಮ ಗುಣಮಟ್ಟ ಅಂದರೆ ಕ್ರಮವಾಗಿ ಮೊಳಕೆ ಪ್ರಮಾಣ (91.38%, 91.84%), ಶೂಟ್ ಅಳತೆ (12.18, 12.97 ಸೆಂ.ಮೀ), ರೂಟ್ ಅಳತೆ (10.36, 11.58 ಸೆಂ.ಮೀ), ಬೀಜ ಬಲಸತ್ವ (2022, 2145) ಮತ್ತು ಸೀಡ್ಲಿಂಗ್ ಡ್ರಯ್ವೆಟ್ (1.38, 1.46 ಮಿ.ಗ್ರಾಂ) ಕಂಡುಬಂದಿತು. ಈ ಬೀಜದ ಗಿಡಗಳ ಅಧಿಕ ಬೆಳವಣಿಗೆ ಮತ್ತು ದ್ಯುತಿಸಂಶ್ಲೇಷಣೆಯಿಂದ ಉತ್ತಮ ಬೀಜ ಉತ್ಪಾದನೆಯಿಂದಾಗಿ ಉತ್ತಮ ಗುಣಮಟ್ಟ ಕಂಡುಬರುವುದು (ಸಜ್ಜನ್ ಹಾಗೂ ಇತರರು, 2002; ವೆಂಕಟರೆಡ್ಡಿ ಹಾಗೂ ಇತರರು, 1997.)

**ಟೇಬಲ್.1. ಶಾಖೆಗಳ ಸಂಖ್ಯೆಯ ಮೇಲೆ ರಸಗೊಬ್ಬರಗಳ ಪ್ರಮಾಣ ಹಾಗೂ ಸಸಿ ಚಿವುಟುದಿಕೆಯ ಪ್ರಭಾವ.**

| ಚಿವುಟುವುದು | ಶಾಖೆಗಳ ಸಂಖ್ಯೆ (30 ದಿ.ನಂ) | | | | ಶಾಖೆಗಳ ಸಂಖ್ಯೆ (50 ದಿ.ನಂ) | | | | ಶಾಖೆಗಳ ಸಂಖ್ಯೆ (ಕೊಯ್ಲಿನ ಸಮಯ) | | | |
|---|---|---|---|---|---|---|---|---|---|---|---|---|
| | ರಸಗೊಬ್ಬರ | | | | ರಸಗೊಬ್ಬರ | | | | ರಸಗೊಬ್ಬರ | | | |
| | ಎಫ್$_1$ | ಎಫ್$_2$ | ಎಫ್$_3$ | ಮೀನ್ | ಎಫ್$_1$ | ಎಫ್$_2$ | ಎಫ್$_3$ | ಮೀನ್ | ಎಫ್$_1$ | ಎಫ್$_2$ | ಎಫ್$_3$ | ಮೀನ್ |
| ಪಿ$_1$ | 14.47 | 17.55 | 18.87 | 16.97 | 20.46 | 22.07 | 22.60 | 21.71 | 19.98 | 20.73 | 21.02 | 20.57 |
| ಪಿ$_2$ | 22.37 | 22.51 | 23.17 | 22.68 | 26.68 | 26.90 | 27.41 | 27.00 | 25.37 | 26.01 | 26.77 | 26.05 |
| ಪಿ$_3$ | 21.11 | 21.21 | 21.49 | 21.27 | 25.28 | 25.57 | 26.29 | 25.72 | 23.51 | 24.11 | 25.31 | 24.31 |
| ಪಿ$_4$ | 19.51 | 20.47 | 20.52 | 20.17 | 22.71 | 23.19 | 25.18 | 23.69 | 21.87 | 22.50 | 23.23 | 22.53 |
| ಮೀನ್ | **19.36** | **20.43** | **21.01** | **20.27** | **23.78** | **24.43** | **25.37** | **24.53** | **22.68** | **23.34** | **24.08** | **23.37** |
| | ಎಸ್.ಇಎಂಶಿ | | ಸಿಡಿ 1% | | ಎಸ್.ಇಎಂಶಿ | | ಸಿಡಿ 1% | | ಎಸ್.ಇಎಂಶಿ | | ಸಿಡಿ 1% | |
| ಪಿ | 0.37 | | 1.09 | | 0.47 | | 1.38 | | 0.37 | | 1.09 | |
| ಎಫ್ | 0.32 | | 0.94 | | 0.41 | | 1.19 | | 0.32 | | 0.94 | |
| ಪಿ ಇ ಎಫ್ | 0.64 | | ಎನ್ಎಸ್ | | 0.81 | | ಎನ್ಎಸ್ | | 0.64 | | ಎನ್ಎಸ್ | |

ಎನ್ ಎಸ್– ನಾನ್ ಸಿಗ್ನಿಫಿಕೆಂಟ್

| ಚಿವುಟುವುದು (ಕೈಯಿಂದ ಮತ್ತು ರಾಸಾಯನಿಕ) (ಪಿ) | ರಸಗೊಬ್ಬರಗಳ ಪ್ರಮಾಣ (ಎಫ್) |
|---|---|
| ಪಿ1: ಚಿವುಟುವಿಕೆ ಇಲ್ಲ (ಕಂಟ್ರೋಲ) | ಎಫ್1– 180:120:60 ಕಿ.ಗ್ರಾಂ.ಸಾ.ರಂ.ಪೊ |
| ಪಿ2: ಚಿವುಟುವುದು (ಕೈಯಿಂದ) | ಎಫ್2– 225:150:85 ಕಿ.ಗ್ರಾಂ.ಸಾ.ರಂ.ಪೊ |
| ಪಿ3: ಮೆಪಿಕ್ವಾಟ ಕ್ಲೋರೈಡ 500 ಪಿಪಿಯಂ ಹಾಗೂ | ಎಫ್3– 270:180:110 ಕಿ.ಗ್ರಾಂ.ಸಾ.ರಂ.ಪೊ |
| ಪಿ4: ಸಿಸಿಸಿ 500 ಪಿಪಿಯಂ | |

**ಟೇಬಲ್.2. ಗಿಡಗಳ ಎತ್ತರ ಮತ್ತು ಬೀಜ ಇಳುವರಿಯ ಮೇಲೆ ರಸಗೊಬ್ಬರಗಳ ಪ್ರಮಾಣ ಹಾಗೂ ಸಸಿ ಚಿವುಟುವಿಕೆಯ ಪ್ರಭಾವ.**

| ಚಿವುಟುವುದು | ಗಿಡಗಳ ಎತ್ತರ (ಸೆಂ.ಮೀ) | | | | ಬೀಜ ಇಳುವರಿ/ಹೆ.( ಕಿ.ಗ್ರಾಂ) | | | |
|---|---|---|---|---|---|---|---|---|
| | ರಸಗೊಬ್ಬರ | | | | ರಸಗೊಬ್ಬರ | | | |
| | ಎಫ್$_1$ | ಎಫ್$_2$ | ಎಫ್$_3$ | ಮೀನ್ | ಎಫ್$_1$ | ಎಫ್$_2$ | ಎಫ್$_3$ | ಮೀನ್ |
| ಪಿ$_1$ | 151.52 | 160.10 | 165.03 | **158.88** | 38.78 | 42.76 | 43.14 | 41.56 |
| ಪಿ$_2$ | 148.73 | 150.75 | 151.45 | **150.31** | 58.55 | 61.45 | 62.69 | 60.90 |
| ಪಿ$_3$ | 138.80 | 147.11 | 148.10 | **144.67** | 54.33 | 59.02 | 62.54 | 58.63 |
| ಪಿ$_4$ | 135.32 | 138.43 | 138.00 | **137.25** | 40.37 | 46.71 | 48.01 | 45.03 |
| ಮೀನ್ | **143.59** | **149.10** | **150.65** | **147.78** | **48.01** | **52.48** | **54.09** | **51.53** |
| | ಎಸ್.ಇಎಂ± | | ಸಿಡಿ 1% | | ಎಸ್.ಇಎಂ± | | ಸಿಡಿ 1% | |
| ಪಿ | 1.58 | | 4.64 | | 0.05 | | 0.15 | |
| ಎಫ್ | 1.37 | | 4.02 | | 0.04 | | 0.13 | |
| ಪಿ ಇ ಎಫ್ | 2.74 | | ಎನ್ಎಸ್ | | 0.09 | | ಎನ್ಎಸ್ | |

**ಎನ್ ಎಸ್- ನಾನ್ ಸಿಗ್ನಿಫಿಕೆಂಟ್**

| **ಚಿವುಟುವುದು (ಕೈಯಿಂದ ಮತ್ತು ರಾಸಾಯನಿಕ) (ಪಿ)** | **ರಸಗೊಬ್ಬರಗಳ ಪ್ರಮಾಣ (ಎಫ್)** |
|---|---|
| ಪಿ1: ಚಿವುಟುವಿಕೆ ಇಲ್ಲ (ಕಂಟ್ರೋಲ) | ಎಫ್1- 180:120:60 ಕಿ.ಗ್ರಾಂ.ಸಾ.ರಂ.ಪೊ |
| ಪಿ2: ಚಿವುಟುವುದು (ಕೈಯಿಂದ) | ಎಫ್2- 225:150:85 ಕಿ.ಗ್ರಾಂ.ಸಾ.ರಂ.ಪೊ |
| ಪಿ3: ಮೆಪಿಕ್ವಾಟ ಕ್ಲೋರೈಡ 500 ಪಿಪಿಯಂ ಹಾಗೂ | ಎಫ್3- 270:180:110 ಕಿ.ಗ್ರಾಂ.ಸಾ.ರಂ.ಪೊ |
| ಪಿ4: ಸಿಸಿಸಿ 500 ಪಿಪಿಯಂ | |

**ಟೇಬಲ್.3. ಮೊಳಕೆ ಪ್ರಮಾಣ ಹಾಗೂ ಶೂಟ ಮತ್ತು ರೂಟ ಅಳತೆಯ ಮೇಲೆ ರಸಗೊಬ್ಬರಗಳ ಪ್ರಮಾಣ ಹಾಗೂ ಸಸಿ ಚಿವುಟುವಿಕೆಯ ಪ್ರಭಾವ.**

| **ಚಿವುಟುವುದು** | **ಮೊಳಕೆ ಪ್ರಮಾಣ** (%) | | | | **ಶೂಟ ಅಳತೆ** (ಸೆಂ.ಮೀ) | | | | **ರೂಟ ಅಳತೆ** (ಸೆಂ.ಮೀ) | | | |
|---|---|---|---|---|---|---|---|---|---|---|---|---|
| | ರಸಗೊಬ್ಬರ | | | | ರಸಗೊಬ್ಬರ | | | | ರಸಗೊಬ್ಬರ | | | |
| | **ಎಫ್$_1$** | **ಎಫ್$_2$** | **ಎಫ್$_3$** | **ಮೀನ್** | **ಎಫ್$_1$** | **ಎಫ್$_2$** | **ಎಫ್$_3$** | **ಮೀನ್** | **ಎಫ಼$_1$** | **ಎಫ಼$_2$** | **ಎಫ಼$_3$** | **ಮೀನ್** |
| **ಪಿ$_1$** | 86.80 (68.67) | 90.30 (71.82) | 90.53 (72.05) | 89.21 (70.79) | 10.38 | 11.74 | 11.92 | 11.35 | 8.63 | 9.31 | 9.41 | 9.12 |
| **ಪಿ$_2$** | 91.40 (72.92) | 92.00 (73.54) | 92.13 (73.68) | 91.84 (73.37) | 12.01 | 13.25 | 13.66 | 12.97 | 11.82 | 11.12 | 11.79 | |
| **ಪಿ$_3$** | 91.33 (72.85) | 91.53 (73.05) | 91.67 (73.20) | 91.51 (73.03) | 12.10 | 12.57 | 13.12 | 12.60 | 9.80 | 10.39 | 10.40 | |
| **ಪಿ$_4$** | 89.07 (70.67) | 90.60 (72.12) | 91.20 (72.71) | 90.29 (71.81) | 11.19 | 12.06 | 12.12 | 11.79 | 8.47 | 9.42 | 9.84 | |
| **ಮೀನ್** | **89.65 (71.20)** | **91.11 (72.62)** | **91.38 (72.90)** | **90.71 (72.23)** | **11.42** | **12.41** | **12.70** | **12.18** | **9.68** | **10.06** | **10.36** | **10.03** |
| | ಎಸ್.ಇಎಂಶಿ | | ಸಿಡಿ 1% | | ಎಸ್.ಇಎಂಶಿ | | ಸಿಡಿ 1% | | ಎಸ್.ಇಎಂಶಿ | | ಸಿಡಿ 1% | |
| ಪಿ | 0.34 | | 0.99 | | 0.11 | | 0.33 | | 0.17 | | 0.50 | |
| ಎಫ್ | 0.29 | | 0.86 | | 0.10 | | 0.29 | | 0.15 | | 0.43 | |
| ಪಿ ಇ ಎಫ್ | 0.58 | | ಎನ್ಎಸ್ | | 0.19 | | ಎನ್ಎಸ್ | | 0.29 | | ಎನ್ಎಸ್ | |

**ಎನ್ ಎಸ್- ನಾನ್ ಸಿಗ್ನಿಫಿಕೆಂಟ್**

| **ಚಿವುಟುವುದು (ಕೈಯಿಂದ ಮತ್ತು ರಾಸಾಯನಿಕ) (ಪಿ)** | **ರಸಗೊಬ್ಬರಗಳ ಪ್ರಮಾಣ (ಎಫ್)** |
|---|---|
| ಪಿ1: ಚಿವುಟುವಿಕೆ ಇಲ್ಲ (ಕಂಟ್ರೋಲ) | ಎಫ್1- 180:120:60 ಕಿ.ಗ್ರಾಂ.ಸಾ.ರಂ.ಪೊ |
| ಪಿ2: ಚಿವುಟುವುದು (ಕೈಯಿಂದ) | ಎಫ್2- 225:150:85 ಕಿ.ಗ್ರಾಂ.ಸಾ.ರಂ.ಪೊ |
| ಪಿ3: ಮೆಪಿಕ್ವಾಟ ಕ್ಲೋರೈಡ 500 ಪಿಪಿಯಂ ಹಾಗೂ | ಎಫ್3- 270:180:110 ಕಿ.ಗ್ರಾಂ.ಸಾ.ರಂ.ಪೊ |
| ಪಿ4: ಸಿಸಿಸಿ 500 ಪಿಪಿಯಂ | |

**ಟೇಬಲ್.4. ಬೀಜ ಬಲಸತ್ವ ಮತ್ತು ಸೀಡ್ಲಿಂಗ್ ಡ್ರಯ್ವೆಟ್ ಮೇಲೆ ರಸಗೊಬ್ಬರಗಳ ಪ್ರಮಾಣ ಹಾಗೂ ಸಸಿ ಚಿವುಟುವಿಕೆಯ ಪ್ರಭಾವ.**

| **ಚಿವುಟುವುದು** | **ಬೀಜ ಬಲಸತ್ವ** | | | | **ಸೀಡ್ಲಿಂಗ್ ಡ್ರಯ್ವೆಟ್** (ಮಿ.ಗ್ರಾಂ/10 ಸೀಡ್ಲಿಂಗ್) | | | |
|---|---|---|---|---|---|---|---|---|
| | ರಸಗೊಬ್ಬರ | | | | ರಸಗೊಬ್ಬರ | | | |
| | **ಎಫ್$_1$** | **ಎಫ್$_2$** | **ಎಫ್$_3$** | **ಮೀನ್** | **ಎಫ್$_1$** | **ಎಫ್$_2$** | **ಎಫ್$_3$** | **ಮೀನ್** |
| **ಪಿ$_1$** | 1857 | 1914 | 1926 | 1899 | 1.22 | 1.24 | 1.33 | 1.26 |
| **ಪಿ$_2$** | 1910 | 2114 | 2145 | 2056 | 1.37 | 1.48 | 1.51 | 1.46 |
| **ಪಿ$_3$** | 1900 | 1986 | 2056 | 1981 | 1.22 | 1.35 | 1.34 | 1.30 |
| **ಪಿ$_4$** | 1793 | 1956 | 1962 | 1904 | 1.19 | 1.34 | 1.34 | 1.29 |
| **ಮೀನ್** | **1865** | **1993** | **2022** | **1960** | **1.25** | **1.35** | **1.38** | **1.33** |
| | ಎಸ್.ಇಎಂಶಿ | | ಸಿಡಿ 1% | | ಎಸ್.ಇಎಂಶಿ | | ಸಿಡಿ 1% | |
| ಪಿ | 15.05 | | 44.13 | | 0.02 | | 0.04 | |
| ಎಫ್ | 13.03 | | 38.22 | | 0.01 | | 0.04 | |
| ಪಿ ಇ ಎಫ್ | 26.06 | | ಎನ್ಎಸ್ | | 0.03 | | ಎನ್ಎಸ್ | |

**ಎನ್ ಎಸ್– ನಾನ್ ಸಿಗ್ನಿಫಿಕೆಂಟ್**

| ಚಿವುಟುವುದು (ಕೈಯಿಂದ ಮತ್ತು ರಾಸಾಯನಿಕ) (ಪಿ) | ರಸಗೊಬ್ಬರಗಳ ಪ್ರಮಾಣ (ಎಫ್) |
|---|---|
| ಪಿ1: ಚಿವುಟುವಿಕೆ ಇಲ್ಲ (ಕಂಟ್ರೋಲ) | ಎಫ್1– 180:120:60 ಕಿ.ಗ್ರಾಂ.ಸಾ.ರಂ.ಪೊ |
| ಪಿ2: ಚಿವುಟುವುದು (ಕೈಯಿಂದ) | ಎಫ್2– 225:150:85 ಕಿ.ಗ್ರಾಂ.ಸಾ.ರಂ.ಪೊ |
| ಪಿ3: ಮೆಪಿಕ್ವಾಟ ಕ್ಲೋರೈಡ 500 ಪಿಪಿಯಂ ಹಾಗೂ | ಎಫ್3– 270:180:110 ಕಿ.ಗ್ರಾಂ.ಸಾ.ರಂ.ಪೊ |
| ಪಿ4: ಸಿಸಿಸಿ 500 ಪಿಪಿಯಂ | |

**ತೀರ್ಮಾನ**: ಈ ಒಂದು ಸಂಶೋಧನೆಯಿಂದ 270:180:110 ಕಿ.ಗ್ರಾಂ. (ಸಾ:ರಂ: ಪೊ) ರಸಗೊಬ್ಬರ ಹಾಗೂ ಕೈಯಿಂದ ಚಿವುಟುವುದು ಕಾಸಮೊಸ ಹೂಗಿಡದ ಬೀಜ ಇಳುವರಿ ಮತ್ತು ಗುಣಮಟ್ಟ ಹೆಚ್ಚಿಸಬಹುದಾಗಿದೆ.

**ಉಲ್ಲೆಖನಗಳು**:

ಸುದರ್ಶನ್, ಜೆ.ಎಸ್, 2004, ಬೀಜ ಇಳುವರಿ ಮತ್ತು ಮೆಂತೆಯ ಗುಣಮಟ್ಟದ ಮೇಲೆ ಮೊಗ್ಗು ಚಿವುಟುವಿಕೆ ಹಾಗೂ ರಾಸಾಯನಿಕ ಸಿಂಪಡಣೆ ಮತ್ತು ಶಾರೀರಿಕ ಪರಿಪಕ್ವತೆಯ ಪ್ರಭಾವ. ಎಂ.ಎಸ್‌ಸಿ (ಅಗ್ರಿ) ಪ್ರಬಂಧ, ಕೃ.ವಿ.ವಿ, ಧಾರವಾಡ, ಕರ್ನಾಟಕ (ಭಾರತ).

ಐಯನಗೋಡ, ಎಸ್, 2003, ಸಸ್ಯ ಬೆಳವಣಿಗೆ, ಬೀಜ ಇಳುವರಿ ಮತ್ತು ಕೊತ್ತುಂಬರಿ ಗುಣಮಟ್ಟದ ಮೇಲೆ ಅಂತರ, ಪೋಷಣೆ ಮತ್ತು ಹಾರ್ಮೋನುಗಳ ಎಂ.ಎಸ್‌ಸಿ (ಅಗ್ರಿ) ಪ್ರಬಂಧ, ಕೃ.ವಿ.ವಿ, ಧಾರವಾಡ, ಕರ್ನಾಟಕ (ಭಾರತ).

ದೊಡ್ಡಗೌಡರ್, ಎಸ್. ಆರ್., ವ್ಯಾಕರಣಾಳ್, ಬಿ. ಎಸ್., ಶೇಖರಗೋಡ, ಎಂ., ನಳನಿಪ್ರಭಾಕರ್. ಮತ್ತು ಪಾಟೀಲ್, ವಿ., 2002, ಚೈನಾ ಆಸ್ಟರ್ ಬೆಳವಣಿಗೆ ಮತ್ತು ಬೀಜ ಇಳುವರಿಯ ಮೇಲೆ ತಾಯಿ ಸಸ್ಯ ಪೋಷಣೆ ಹಾಗೂ ರಾಸಾಯನಿಕ ಸಿಂಪಡಣೆ ಪರಿಣಾಮ. ಸೀಡ್ ರಿಸರ್ಚ., 30(2): 269–274.

ಕುಮಾರ್, ಜೆ. ಚೊಹಾಣ್, ಎಸ್. ಎಸ್. ಮತ್ತು ಸಿಂಗ್, ಡಿ. ವಿ., 2003, ಚೈನಾ ಆಸ್ಟರ್ ಮೇಲೆ ಎನ್ ಪ್ರತಿಕ್ರಿಯೆ ಮತ್ತು ಪಿ ಫಲೀಕರಣ. ಜರ್ನಲ್ ಆಫ್ ಹಾರ್ಟಿಕಲ್ಚರ್., 6(1): 82.

ಸಜ್ಜನ್, ಎ.ಎಸ್, ಶೇಖರಗೋಡ, ಎಂ. ಮತ್ತು ಬಾಡನುರ್. ವಿ. ಪಿ., 2002, ಬೆಂಡೆಕಾಯಿ ಗಿಡ ಬೆಳಮಣಿಗೆ ಮತ್ತು ಬೀಜ ಇಳುವರಿಯ ಮೇಲೆ ಚಿವುಟುವಿಕೆಯ ಪ್ರಭಾವ. ಕರ್ನಾಟಕ ಜ. ಅಗ್ರಿಕ್. ಸೈ., 15(2): 367–372.

ಸಿಂಗ್, ಕೆ. ಪಿ. ಮತ್ತು ಸಂಗಮ., 2000, ಚೈನಾ ಆಸ್ಟರ್ ತಳಿಯ ಬೀಜ ಇಳುವರಿ ಮೇಲೆ ಎನ್ ಪ್ರತಿಕ್ರಿಯೆ ಮತ್ತು ಪಿ ಫಲೀಕರಣ, ಇಂಡಿಯನ್ ಜ. ಹಾರ್ಟಿಕಲ್ಚರ್., 57(1): 87–89.

ತೋಮರ್, ಬಿ. ಎಸ್, ಸಿಂಗ್, ಬಿ. ನೇಗಿ, ಮತ್ತು ಸಿಂಗ್, ಕೆ. ಕೆ., 2004, ಆಫ್ರಿಕನ್ ಮಾರಿಗೋಲ್ಡ ಬೀಜ ಇಳುಮರಿಯ ಮತ್ತು ಗುಣಮಟ್ಟದ ಮೇಲೆ ಚಿವುಟುವಿಕೆಯ ಪ್ರಭಾವ. ಜ. ಆರ್ನಮೆಂಟಲ್ ಹಾರ್ಟಿಕಲ್ಚರ್., 7(4): 124–126.

ವೆಂಕಟ ರೆಡ್ಡಿ, ಡಿ. ಎಂ, ಭಟ್, ಪಿ. ಚಂದ್ರ ಮತ್ತು ಚಂದ್ರಶೇಖರ್. ಆರ್., 1997, ಬೆಂಡೆಕಾಯಿ ಇಳುವರಿ ಮತ್ತು ಗುಣಮಟ್ಟದ ಮೇಲೆ ಚಿವುಟುವಿಕೆಯ ಪ್ರಭಾವ., ಸೀಡ್ ರಿಸರ್ಚ., 25(1): 41 – 44.

## ಸ್ಥಳೀಯ ಭತ್ತದ ತಳಿಗಳಲ್ಲಿ ಸಾರಜನಕದ ಸಲುವಳಿ ಸಾಮರ್ಥ್ಯದಅನುವಂಶೀಯ ಏರಿಳಿತ

ಎಮ್.ಎಸ್.ಉಮ* ಮತ್ತು ನವೀನ್‌ಕುಮಾರ್ ವಿ. ಎಂ
*ಡಾ.ಉಮಾ ಎಂ. ಎಸ್,ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,ಅನುವಂಶಿಯತೆ ಹಾಗೂ ಸಸ್ಯತಳಿ ಅಭಿವೃದ್ಧಿ ವಿಭಾಗ
ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯ –571405

**ಪ್ರಬಂಧಸಾರ**:- ಭತ್ತವು ಪ್ರಮುಖಆಹಾರ ಬೆಳೆಯಾಗಿದ್ದು ,ಪ್ರಪಂಚದಅರ್ಧ ಭಾಗದಷ್ಟುಜನರಿಗೆಆಹಾರಧಾನ್ಯವಾಗಿದೆ.ಸ್ಥಳೀಯ ಭತ್ತದ ತಳಿಗಳು ಉಪಯುಕ್ತ ಗುಣಲಕ್ಷಣಗಳನ್ನು ಒಳಗೊಂಡಿವೆ. ಸಾರಜನಕ ಸಲುವಳಿ ಸಾಮರ್ಥ್ಯವುಸಾಮಾನ್ಯವಾಗಿನೀರಾವರಿ ಭತ್ತದ ಬೇಸಾಯದಲ್ಲಿ ಅತಿಕಡಿಮೆ ಇರುತ್ತದೆ. ಆದ್ದರಿಂದ ಕಡಿಮೆ ಸಾರಜನಕಮತ್ತು ಸಾರಜನಕವಿಲ್ಲದ ಮಣ್ಣಿನ ಸ್ಥಿತಿಗಳಲ್ಲಿ ಸ್ಥಳೀಯ ಭತ್ತದ ತಳಿಗಳ ಸಾರಜನಕ ಸಲುವಳಿ ಸಾಮರ್ಥ್ಯ,ಇಳುವರಿ ಸಂಬಂಧಿತ ಗುಣಲಕ್ಷಣಗಳು ಮತ್ತುಗುಣಮಟ್ಟ ಸಂಬಂಧಿತ ಗುಣಲಕ್ಷಣಗಳ ಅನುವಂಶೀಯ ಏರಿಳಿತದ ಅಧ್ಯಯನವನ್ನು೨೦೧೪ ನೇ ಸಾಲಿನ ಮುಂಗಾರಿನಲ್ಲಿಕೃಷಿ ಮಹಾವಿದ್ಯಾಲಯ,ವಿ.ಸಿ.ಫಾರಂ,ಮಂಡ್ಯದಲ್ಲಿ ನಡೆಸಲಾಯಿತು. ಈ ಪ್ರಯೋಗದಲ್ಲಿ೫೫ಸ್ಥಳೀಯ ಭತ್ತದ ತಳಿಗಳನ್ನು ಅಧ್ಯಯನ ಮಾಡಿದಾಗ, ಎಲ್ಲಾ ಗುಣಲಕ್ಷಣಗಳಲ್ಲಿ ಗಮನಾರ್ಹ ವ್ಯತ್ಯಾಸಕಂಡುಬಂದಿದೆ. ಸಾರಜನಕ ಸಲುವಳಿ ಸಾಮರ್ಥ್ಯ, ಪ್ರತಿಗಿಡದ ಕಾಳಿನ ಇಳುವರಿ ಮತ್ತು ಪ್ರತಿಗಿಡದಜೈವಿಕತೂಕಎಂಬ ಗುಣಲಕ್ಷಣಗಳ ವ್ಯತ್ಯಾಸ ವಿಭಿನ್ನಾರ್ಥಕಗುಣಾಂಕ (ಪಿ.ಸಿ.ವಿ) ಮತ್ತು ವ್ಯತ್ಯಾಸ ವಂಶವಾಹೀಗುಣಾಂಕ (ಜಿ.ಸಿ.ವಿ)ವು ಹೆಚ್ಚಾಗಿದ್ದು, ಈ ಗುಣಲಕ್ಷಣಗಳ ಮೇಲೆ ಪರಿಸರ ವರ್ತನೆಯುಅತಿಕಡಿಮೆಎಂದು ತಿಳಿದುಬಂದಿದೆ. ಗಿಡದಎತ್ತರ,ಒಟ್ಟುತೆಂಡೆಗಳ ಸಂಖ್ಯೆ,ಫಲಭರಿತ ತೆಂಡೆಗಳ ಸಂಖ್ಯೆ,ತೆನೆಯಉದ್ದ ,ತೆನೆಯತೂಕ, ಪ್ರತಿತೆನೆಯ ಕಾಳುಗಳ ಸಂಖ್ಯೆ,೧೦೦೦ ಕಾಳುಗಳ ತೂಕ,ಪ್ರತಿಗಿಡದ ಕಾಳು ಇಳುವರಿ, ಪ್ರತಿಗಿಡದ ಹುಲ್ಲಿನ ಇಳುವರಿ,ಪ್ರತಿಗಿಡದಜೈವಿಕತೂಕಹಾಗೂ ಸಾರಜನಕ ಸಲುವಳಿ ಸಾಮರ್ಥ್ಯ,ಎಂಬ ಗುಣಲಕ್ಷಣಗಳು ಅತಿ ಹೆಚ್ಚು ಅನುವಂಶೀಯತೆ ಜೊತೆಗೆ ಹೆಚ್ಚು ಅನುವಂಶೀಯ ಅಭಿವೃದ್ದಿಯನ್ನುಕಡಿಮೆ ಸಾರಜನಕ ಮತ್ತು ಸಾರಜನಕವಿಲ್ಲದ ಮಣ್ಣಿನ ಸ್ಥಿತಿಗಳಲ್ಲಿ ಹೊಂದಿವೆ.ಇದಕ್ಕೆ ಪ್ರಮುಖಕಾರಣ ಸಂಯೋಜಿತ ಧಾತುಗಳ ಪ್ರಭುತ್ವಎಂದು ತಿಳಿದುಬಂದಿರುವುದರ ಜೊತೆಗೆ ಪರಿಸರ ಪ್ರಭಾವಕಡಿಮೆಯಾಗಿದ್ದು, ಈ ಗುಣಲಕ್ಷಣಗಳ ಸುಧಾರಣೆಗೆ ಸರಳ ಆಯ್ಕೆ ಯೋಜನೆಗಳು ಪರಿಣಾಮಕಾರಿಯಾಗಿವೆ.ಸಾರಜನಕ ಸಲುವಳಿ ಸಾಮರ್ಥ್ಯವುಪ್ರತಿಗಿಡದ ಕಾಳಿನ ಇಳುವರಿ, ಪ್ರತಿಗಿಡದ ಹುಲ್ಲಿನ ಇಳುವರಿ ಮತ್ತುಪ್ರತಿಗಿಡದಜೈವಿಕತೂಕದಜೊತೆಗೆಗಮನಾರ್ಹ ಮತ್ತುಧನಾತ್ಮಕ ಸಂಬಂಧವುಕಡಿಮೆ ಸಾರಜನಕ ಮತ್ತು ಸಾರಜನಕವಿಲ್ಲದ ಮಣ್ಣಿನ ಸ್ಥಿತಿಗಳಲ್ಲಿದೆ ಎಂದು ತಿಳಿದುಬಂದಿದೆ.ಪ್ರತಿಗಿಡದ ಕಾಳಿನ ಇಳುವರಿ ಮತ್ತು ಸಾರಜನಕ ಸಲುವಳಿ

**ಸಾಮರ್ಥ್ಯವುಗಿಡದಎತ್ತರಜೊತೆಗೆಋಣಾತ್ಮಕ ಮತ್ತುಗಮನಾರ್ಹ ಸಂಬಂಧವನ್ನು ಹೊಂದಿದೆ.ಪರಿಮಳ ಕಳವಿ,ಮೊಸಳೆಪುಟ್ಟಭತ್ತ,ಮುಂಡೊನಿ,ಬಿಳಿಹಸುಡಿ ಮತ್ತು ಬೊಳುಮಲ್ಲಿಗೆ ಎಂಬ ಸ್ಥಳೀಯ ಭತ್ತದ ತಳಿಗಳು ಉತ್ತಮ ಸಾರಜನಕ ಸಲುವಳಿ ಸಾಮರ್ಥ್ಯವನ್ನು ಹೊಂದಿವೆ.**

**ಪೀಠಿಕೆ:** ಭತ್ತವು ಪ್ರಪಂಚದ ಅರ್ಧದಷ್ಟು ಭಾಗಕ್ಕೆ ಪ್ರಮುಖ ಆಹಾರ ಧಾನ್ಯವಾಗಿದ್ದು, ಶೇಕಡಾ 90% ಭತ್ತವನ್ನು ಏಷ್ಯಾ ರಾಷ್ಟಗಳಲ್ಲಿ ಬೆಳೆಯಲಾಗುತ್ತಿದೆ(ಫಾಜೇರಿಯಾ ಮತ್ತು ಬಾರ್ ಬೋಸಾ ಫಿಲೋ 2001). ಶೇಕಡಾ 20% ರಷ್ಟು ಒಟ್ಟು ಸಾರಜನಕವನ್ನು ಭತ್ತದ ಬೆಳೆಯಲ್ಲಿ ಉಪಯೋಗಿಸುತ್ತಿದ್ದು, 2025ರ ಬೇಡಿಕೆಯ ಪ್ರಕಾರ ಇದರ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಅವಶ್ಯಕತೆಯಿದೆ. ಸಾರಜನಕವನ್ನು ಬಳಸುವ ತಾಂತ್ರಿಕತೆಗಳು ಬದಲಾಗದೆ ಇದ್ದರೆ, ಭತ್ತದ ಉತ್ಪಾದನೆಯು ಶೇಕಡಾ 300ರಷ್ಟು ಹೆಚ್ಚು ಸಾರಜನಕವನ್ನು ಅವಲಂಬಿಸಿರುತ್ತದೆ. ಇದು ಆರ್ಥಿಕವಾಗಿ ಮತ್ತು ಪರಿಸರ ವರ್ತನೆಯ ಪರಿಣಾಮಗಳ ಮೇಲೆ ಹೆಚ್ಚು ಪ್ರಭಾವ ಬೀರು ತ್ತದೆ(ಫೀಶರ್,1998). ಸಾಮನ್ಯವಾಗಿ ಸಾರಜನಕ ಸಲುವಳಿ ಸಾಮರ್ಥ್ಯವು ನೀರಾವರಿ ಪ್ರದೇಶಗಳಲ್ಲಿ ಕಡಿಮೆಯಾಗಿದ್ದು, ಮಣ್ಣಿನ ಪೋಷಕಾಂಶಗಳ ಇಂಗುವಿಕೆ ಮತ್ತು ನೀರಿನ ಹರಿವು ನಷ್ಟದಿಂದ ಸಾಕಷ್ಟು ಪ್ರಮಾಣದ ಸಾರಜನಕವು ನಷ್ಟವಾಗುತ್ತದೆ(ಡಿ ದತ್ತ ಮತ್ತು ಬುರೇಶ್,1989). ಅತಿ ಹೆಚ್ಚು ಸಾರಜನಕವನ್ನು ಭತ್ತದಲ್ಲಿ ಬಳಸುವುದರಿಂದ, ಮೀಥೇನ್ ಅನೀಲ ಬಿಡುಗಡೆಯಾಗುವುದ ರೊಂದಿಗೆ ಪರೋಕ್ಷವಾಗಿ ಪರಿಸರಕ್ಕೆ ಹಾನಿಯುಂಟುಮಾಡುತ್ತದೆ. ಆದ್ದರಿಂದ ಸತತವಾಗಿ ಹೆಚ್ಚಿನ ಪ್ರಮಾಣದಲ್ಲಿ ಭತ್ತವನ್ನು ಉತ್ಪಾದಿಸ ಬೇಕಾದರೆ, ಕೆಲವು ಅಂಶಗಳನ್ನು ಯೋಚಿಸಿ ಅಳವಡಿಸಬೇಕಾಗು ತ್ತದೆ, ಅವುಗಳೆಂದರು ಸಾರಜನಕ ಪೋಷಕಾಂಶದ ನಿರ್ವಹಣೆ ಮತ್ತು ಸುಧಾರಿತ ಅತಿ ಹೆಚ್ಚು ಸಾರಜನಕ ಸಲುವಳಿ ಸಾಮರ್ಥ್ಯ ಹೊಂದಿದ ತಳಿಗಳನ್ನು ಬಳಸುವುದು.

ಸುಧಾರಿತ ತಳಿಗಳ ಅಭಿವೃದ್ದಿಯಲ್ಲಿ ತಳಿಶಾಸ್ತ್ರದ ಪಾತ್ರ ಪ್ರಮುಖ ವಾಗಿದ್ದು, ಸಾರಜನಕ ಸಲುವಳಿ ಸಾಮರ್ಥ್ಯದ ಏರಿಳಿತಗಳನ್ನು ಅಧ್ಯಯನ ಮಾಡಿದಾಗ ಉತ್ತಮ ಸಮರ್ಥ ತಳಿಗಳನ್ನು ಅಭಿವೃದ್ಧಿಪಡಿಸಬಹುದು. ಹಾಗೆಯೇ ಸ್ಥಳೀಯ ಭತ್ತದ ತಳಿಗಳು ಪ್ರಮುಖ ಗುಣಲಕ್ಷಣಗಳ ಆಗರಗಳಾಗಿದ್ದು, ಉತ್ತಮ ಸಮರ್ಥ ತಳಿಯ ಆಯ್ಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಉತ್ಕೃಷ್ಟ ಗುಣಲಕ್ಷಣಗಳ ಅನುವಂಶೀಯ ಏರಿಳಿತವು ಉತ್ತಮ ತಳಿಯ ಆಯ್ಕೆಯಲ್ಲಿ ನೇರವಾಗಿ ಪ್ರಮುಖ ಪಾತ್ರವಹಿಸುತ್ತವೆ. ಇಂತಹ ಸಂದರ್ಭದಲ್ಲಿ ಸಸ್ಯ ತಳಿಶಾಸ್ತ್ರದ ಮುಖ್ಯ ಉದ್ದೇಶವೇನೆಂದರೆ ಸಹಜವಾಗಿ ದೊರೆಯುವ ಅನುವಂಶೀಯ ಏರಿಳಿತವನ್ನು ಉಪಯೋಗಿಸಿಕೊಂಡು ತಳಿ ಅಭಿವೃದ್ಧಿ ಮಾಡುವುದು.ವಿವಿದ ಬಗೆಯ ಏರಿಳಿತಗಳನ್ನು ಅಧ್ಯಯನ ಮಾಡುವ ಮೂಲಕ ಉತ್ತಮ ಅನುವಂಶೀಯ ಗುಣಲಕ್ಷಣಗಳನ್ನು ಆಯ್ಕೆಮಾಡಬಹುದು.

**ಪರಿಕರಗಳು ಮತ್ತು ವಿಧಾನಗಳು:** ಸುಮಾರು 55 ಸ್ಥಳೀಯ ಭತ್ತದ ತಳಿಗಳಲಿ ಸಾರಜನಕ ಸಲುವಳಿ ಸಾಮರ್ಥ್ಯದ ಅನುವಂಶೀಯ ಏರಿಳಿತದ ಅಧ್ಯಯನವನ್ನು 2014 ನೇ ಸಾಲಿನ ಮುಂಗಾರಿನಲ್ಲಿ ಅನುವಂಶೀಯುತೆ ಮತ್ತು ತಳಿಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯದಲ್ಲಿ ನಡೆಸಲಾಯಿತು. ಈ ತಳಿಗಳ ಸಾರಜನಕ ಸಲುವಳಿ ಸಾಮರ್ಥ್ಯ ತಿಳಿಯಲು, ಮೊದಲಿಗೆ ಮಣ್ಣಿನ ಸಾರಜನಕದ ಪ್ರಮಾಣವನ್ನು ತಿಳಿದುಕೊಂಡು, ಆ ನಂತರ 55 ಸ್ಥಳೀಯ ಭತ್ತದ ತಳಿಗಳನ್ನು ಎರಡು ಪ್ರತೇಕ ತಾಕುಗಳಲ್ಲಿ (ಕಡಿಮೆ ಸಾರಜನಕ ಮತ್ತು ಅತಿ ಕಡಿಮೆ ಅಥವಾ ಸಾರಜನಕವಿಲ್ಲದ ಮಣ್ಣಿನ ಸ್ಥಿತಿಗಳಲ್ಲಿ) ಪ್ರಯೋಗ ನಡೆಸಲಾಯಿತು. ಸಾರಜನಕ ಸಲುವಳಿ ಸಾಮರ್ಥ್ಯ ಸಂಬಂಧಿತ ಗುಣಲಕ್ಷಣಗಳನ್ನು ತಿಳಿಯಲು, ಪ್ರತಿ ತಳಿಯಲ್ಲಿ ಐದು ಗಿಡಗಳ ಆಯ್ಕೆಮಾಡಲಾಯಿತು. ಈ ತಳಿಗಳಲ್ಲಿ ಗಮನಿಸಿದ ಗುಣಲಕ್ಷಣಗಳೆಂದರೆ, ಗಿಡದಎತ್ತರ, ಒಟ್ಟು ತೆಂಡೆಗಳ ಸಂಖ್ಯೆ, ಫಲಭರಿತ ತೆಂಡೆಗಳ ಸಂಖ್ಯೆ, ತೆನೆಯ ಉದ್ದ ,ತೆನೆಯತೂಕ, ಪ್ರತಿ ತೆನೆಯ ಕಾಳುಗಳ ಸಂಖ್ಯೆ, 1000 ಕಾಳುಗಳ ತೂಕ, ಪ್ರತಿ ಗಿಡದ ಕಾಳು ಇಳುವರಿ, ಪ್ರತಿ ಗಿಡದ ಹುಲ್ಲಿನ ಇಳುವರಿ, ಪ್ರತಿ ಗಿಡದ ಜೈವಿಕತೂಕ ಮತ್ತು ಸಾರಜನಕ ಸಲುವಳಿ ಸಾಮರ್ಥ್ಯ. ಕೊನೆಯದಾಗಿ ಸಾರಜನಕ ಸಲುವಳಿ ಸಾಮರ್ಥ್ಯವನ್ನು ಪ್ರತಿ ಗಿಡದ ಇಳುವರಿ ಆಧಾರದ ಮೇಲೆ, ಪ್ರತಿ ಕೆ.ಜಿ. ಸಾರಜನಕಕ್ಕೆ ಪ್ರತಿಫಲವಾಗಿ ಭತ್ತದ ಕಾಳಿನ ಇಳುವರಿಗೆ ಹೋಲಿಸಿ ಕಂಡುಹಿಡಿಯಲಾಯಿತು. ಸಾರಜನಕ ಸಲುವಳಿ ಸಾಮರ್ಥ್ಯ ಸಂಬಂಧಿತ ಗುಣಲಕ್ಷಣಗಳ ಅನುವಂಶೀಯ ಏರಿಳೀತವನ್ನು ಲಷ್ (1945) ರ ಪ್ರಕಾರ ಕಂಡುಹಿಡಿದರೆ, ಅನುವಂಶೀಯ ಮಂಗಡವನ್ನು ಜಾನ್ಸನ್ (1945)ರ ಪ್ರಕಾರ ಕಂಡುಹಿಡಿಯಲಾಯಿತು.

**ಫಲಿತಾಂಶ ಮತ್ತು ವಿವರಣೆ:** ಸ್ಥಳೀಯ ಭತ್ತದ ತಳೀಗಳಲ್ಲಿ ಹದಿನೇಳು ಗುಣಲಕ್ಷಣಗಳ ವ್ಯತ್ಯಾಸವನ್ನು ಕಡಿಮೆ ಮತ್ತು ಸಾರಜನಕವಿಲ್ಲದ ಮಣ್ಣಿನ ಸ್ಥಿತಿಗಳಲ್ಲಿ ಅವಲೋಕಿಸಿದಾಗ, ಈ ಗುಣಲಕ್ಷಣಗಳ ಪರಸ್ಪರ ತುಲಾನಾತ್ಮಕ ಮತ್ತು ಗುಣಾಂಕಗಳ ವ್ಯತ್ಯಾಸವನ್ನು ತಿಳಿಯಲಾಯಿತು. ಸ್ಥಳೀಯ ತಳಿಗಳಲ್ಲಿ ಎಲ್ಲಾ ಗುಣಲಕ್ಷಣಗಳ ಸರಾಸರಿ ವರ್ಗಗಳ ಮೌಲ್ಯಗಳನ್ನು ನೋಡಿದಾಗ, ಗಮನಾರ್ಹ ವ್ಯತ್ಯಾಸವನ್ನು ಹೊಂದಿವೆ(ಕೋಷ್ಟಕ.1).

ಕಡಿಮೆ ಸಾರಜನಕ ಮಣ್ಣಿನ ಸ್ಥಿತಿಗಳಲ್ಲಿ, ಪ್ರತಿ ಗಿಡದ ತಂಡೆಗಳ ಸಂಖ್ಯೆ, ಒಟ್ಟು ಫಲಭರಿತ ತೆಂಡೆಗಳ ಸಂಖ್ಯೆ, ತೆನೆ ಉದ್ದ, ತೆನೆ ತೂಕ, ಪ್ರತಿ ತೆನೆಯ ಕಾಳುಗಳ ಸಂಖ್ಯೆ, ಕಾಳು ಇಳುವರಿ ಮತ್ತು ಹುಲ್ಲಿನ ಇಳುವರಿ ಹಾಗು ಸಾರಜನಕ ಸಲುವಳಿ ಸಾಮರ್ಥ್ಯ ಎಂಬ ಗುಣಲಕ್ಷಣಗಳು ಅತಿ ಹೆಚ್ಚು ವ್ಯತ್ಯಾಸ ವಿಭಿನ್ನಾರ್ಥಕ ಗುಣಾಂಕ (ಪಿ.ಸಿ.ವಿ) ಮತ್ತು ವ್ಯತ್ಯಾಸ ವಂಶವಾಹೀ ಗುಣಾಂಕ (ಜಿ.ಸಿ.ವಿ)ವನ್ನು ಹೊಂದಿವೆ. ಇದೇ ರೀತಿಯ ಸಮಾನವಾದ ಫಲಿತಾಂಶವನ್ನು ವೈಶಾಲಿ(2003) ಎಂಬುವರು ಮಂಡಿಸಿದ್ದರು. ಹಾಗೆಯೇ ಹೆಚ್ಚು ಅನುವಂಶೀಯತೆ ಜೊತೆಗೆ ಅನುವಂಶೀಯ ಮುಂಗಡವನ್ನು ಸಹ ಈ ಗುಣಲಕ್ಷಣಗಳು ಹೊಂದಿವೆ. ಕಡಿಮೆ ಸಾರಜನಕ ಮಣ್ಣಿನ ಸ್ಥಿತಿಗಳಲ್ಲಿ ವಿವಿದ ಗುಣಲಕ್ಷಣಗಳ ಶೇಕಡಾ ಅನುವಂಶೀಯತೆ ಸಸ್ಯದ ಎತ್ತರ(98.9%),ಒಟ್ಟು ತೆಂಡೆಗಳ ಸಂಖ್ಯೆ(85.70%),ಫಲಭರಿತ ತೆಂಡೆಗಳ ಸಂಖ್ಯೆ(95.90%),ತೆನೆಯ ಉದ್ದ(95.20%), ತೆನೆಯ ತೂಕ (98.30%),ಪ್ರತಿ ತೆನೆಯ ಕಾಳುಗಳ ಸಂಖ್ಯೆ(95.30%), ಪ್ರತಿ ಗಿಡದ ಕಾಳುಗಳ ಇಳುವರಿ(96.6%) ಮತ್ತು ಸಾರಜನಕದ ಸಲುವಳಿ ಸಾಮರ್ಥ್ಯ(95.60%) ಹೊಂದಿವೆ(ಟೇಬಲ್.1).

ಕಡಿಮೆ ಸಾರಜನಕ ಮಣ್ಣಿನ ಸ್ಥಿತಿಗಳಲ್ಲಿ, ಪ್ರತಿ ಗಿಡದ ತಂಡೆಗಳ ಸಂಖ್ಯೆ, ಒಟ್ಟು ಫಲಭರಿತ ತೆಂಡೆಗಳ ಸಂಖ್ಯೆ, ತೆನೆ ಉದ್ದ, ತೆನೆ ತೂಕ, ಪ್ರತಿ ತೆನೆಯ ಕಾಳುಗಳ ಸಂಖ್ಯೆ, ಕಾಳು ಇಳುವರಿ ಮತ್ತು ಹುಲ್ಲಿನ ಇಳುವರಿ ಹಾಗು ಸಾರಜನಕ ಸಲುವಳಿ ಸಾಮರ್ಥ್ಯ ಎಂಬ ಗುಣಲಕ್ಷಣಗಳು ಅತಿ ಹೆಚ್ಚು ವ್ಯತ್ಯಾಸ ವಿಭಿನ್ನಾರ್ಥಕ ಗುಣಾಂಕ (ಪಿ.ಸಿ.ವಿ) ಮತ್ತು ವ್ಯತ್ಯಾಸ ವಂಶವಾಹೀ ಗುಣಾಂಕ (ಜಿ.ಸಿ.ವಿ)ವನ್ನು ಹೊಂದಿವೆ. ಇದೇ ರೀತಿಯ ಸಮಾನವಾದ ಫಲಿತಾಂಶವನ್ನು ವೈಶಾಲಿ(2003),ರೀತ ಬಿನ್ಸೇ(2009) ಮತ್ತು ಸೆಲ್ವರಾಜ್.ಎಟ್.ಆಲ್(2003) ಎಂಬುವರು ಮಂಡಿಸಿದ್ದರು. ಹಾಗೆಯೇ ಹೆಚ್ಚು ಅನುವಂಶೀಯತೆ ಜೊತೆಗೆ ಅನುವಂಶೀಯ ಮುಂಗಡವನ್ನು ಸಹ ಈ ಗುಣಲಕ್ಷಣಗಳು ಹೊಂದಿವೆ. ಕಡಿಮೆ ಸಾರಜನಕ ಮಣ್ಣಿನ ಸ್ಥಿತಿಗಳಲ್ಲಿ ವಿವಿದ ಗುಣಲಕ್ಷಣಗಳ ಶೇಕಡಾ ಅನುವಂಶೀಯತೆ ಸಸ್ಯದ ಎತ್ತರ(98.9%),ಒಟ್ಟು ತೆಂಡೆಗಳ ಸಂಖ್ಯೆ(85.70%),ಫಲಭರಿತ ತೆಂಡೆಗಳ ಸಂಖ್ಯೆ(95.90%),ತೆನೆಯ ಉದ್ದ(95.20%), ತೆನೆಯ ತೂಕ (98.30%),ಪ್ರತಿ ತೆನೆಯ ಕಾಳುಗಳ ಸಂಖ್ಯೆ(95.30%), ಪ್ರತಿ ಗಿಡದ ಕಾಳುಗಳ ಇಳುವರಿ(96.6%) ಮತ್ತು ಸಾರಜನಕದ ಸಲುವಳಿ ಸಾಮರ್ಥ್ಯ(95.60%) ಹೊಂದಿವೆ (ಕೋಷ್ಟಕ.1).

ಸಾರಜನಕವಿಲ್ಲದ(ಸಾರಜನಕ ಬಳಸದ) ಮಣ್ಣಿನ ಸ್ಥಿತಿಗಳಲ್ಲಿ, ಪ್ರತಿ ಗಿಡದ ತಂಡೆಗಳ ಸಂಖ್ಯೆ, ಒಟ್ಟು ಫಲಭರಿತ ತೆಂಡೆಗಳ ಸಂಖ್ಯೆ, ತೆನೆ ಉದ್ದ, ತೆನೆ ತೂಕ, ಪ್ರತಿ ತೆನೆಯ ಕಾಳುಗಳ ಸಂಖ್ಯೆ, ಕಾಳು ಇಳುವರಿ ಮತ್ತು ಹುಲ್ಲಿನ ಇಳುವರಿ ಹಾಗು ಸಾರಜನಕ ಸಲುವಳಿ ಸಾಮರ್ಥ್ಯ ಎಂಬ ಗುಣಲಕ್ಷಣಗಳು ಅತಿ ಹೆಚ್ಚು ವ್ಯತ್ಯಾಸ ವಿಭಿನ್ನಾರ್ಥಕ ಗುಣಾಂಕ (ಪಿ.ಸಿ.ವಿ) ಮತ್ತು ವ್ಯತ್ಯಾಸ ವಂಶವಾಹೀ ಗುಣಾಂಕ (ಜಿ.ಸಿ.ವಿ)ವನ್ನು ಹೊಂದಿವೆ. ಇದೇ ರೀತಿಯ ಸಮಾನವಾದ ಫಲಿತಾಂಶವನ್ನು ವೈಶಾಲಿ(2003) ಎಂಬುವರು ಮಂಡಿಸಿದ್ದರು. ಹಾಗೆಯೇ ಹೆಚ್ಚು ಅನುವಂಶೀಯತೆ ಜೊತೆಗೆ ಅನುವಂಶೀಯ ಮುಂಗಡವನ್ನು ಸಹ ಈ ಗುಣಲಕ್ಷಣಗಳು ಹೊಂದಿವೆ. ಕಡಿಮೆ ಸಾರಜನಕ ಮಣ್ಣಿನ ಸ್ಥಿತಿಗಳಲ್ಲಿ ವಿವಿದ ಗುಣಲಕ್ಷಣಗಳ ಶೇಕಡಾ ಅನುವಂಶೀಯತೆ ಸಸ್ಯದ ಎತ್ತರ (98.9%),ಒಟ್ಟು ತೆಂಡೆಗಳ ಸಂಖ್ಯೆ(85.70%),ಫಲಭರಿತ ತೆಂಡೆಗಳ ಸಂಖ್ಯೆ(95.90%),ತೆನೆಯ ಉದ್ದ(95.20%), ತೆನೆಯ ತೂಕ (98.30%),ಪ್ರತಿ ತೆನೆಯ ಕಾಳುಗಳ ಸಂಖ್ಯೆ(95.30%), ಪ್ರತಿ ಗಿಡದ ಕಾಳುಗಳ ಇಳುವರಿ(96.6%) ಮತ್ತು ಸಾರಜನಕದ ಸಲುವಳಿ ಸಾಮರ್ಥ್ಯ(95.60%) ಹೊಂದಿವೆ ಕೋಷ್ಟಕ.2:

**ಉಪಸಂಹಾರ**: ಈ ಪ್ರಯೋಗದಲ್ಲಿ ಅತಿ ಕಡಿಮೆ ಮತ್ತು ಸಾರಜನಕವಿಲ್ಲದ ಮಣ್ಣಿನ ಸ್ಥಿತಿಗಳನ್ನು ಗಮನಿಸಿದಾಗ ಎಲ್ಲಾ ಗುಣಲಕ್ಷಣಗಳ ಜಿ.ಸಿ.ವಿ ಮತ್ತು ಪಿ.ಸಿ.ವಿ ಜಾಸ್ತಿಯಾಗಿದ್ದು, ಅನುವಂಶೀಯತೆ ಉತ್ತಮವಾಗಿರುವುದರ ಜೊತೆಗೆ,ಅತಿ ಹೆಚ್ಚು ಅನುವಂಶೀಯ ಅಭಿವೃದ್ಧಿಯನ್ನು ಹೊಂದಿವೆ. ಆದ್ದರಿಂದ ಈ ಸ್ಥಳೀಯ ಭತ್ತದ ತಳಿಗಳಲ್ಲಿ ಸಾರಜನಕ ಸಲುವಳಿ ಸಾಮರ್ಥ್ಯಕ್ಕೆ ಉತ್ತಮ ಸಮರ್ಥ ತಳಿಯ ಆಯ್ಕೆ ಹೆಚ್ಚಿನ ಪರಿಣಾಮಕಾರಿ ಯಾಗಿದೆ. ಹಾಗೆಯೇ ಈ ಗುಣಲಕ್ಷಣಗಳ ಪ್ರದರ್ಶಣೆಯಲ್ಲಿ ಪರಿಸರ ವರ್ತನೆಯ ಪಾತ್ರ ತುಂಬಾ ಕಡಿಮೆಯಾಗಿದೆ ಎಂದು ತಿಳಿದುಬಂದಿದೆ. ಪ್ರತಿ ಗಿಡದ ಕಾಳಿನ ಇಳುವರಿ ಮತ್ತು ಸಾರಜನಕ ಸಲುವಳಿ ಸಾಮರ್ಥ್ಯವು ಗಿಡದ ಎತ್ತರ ಜೊತೆಗೆ ಋಣಾತ್ಮಕ ಮತ್ತು ಗಮನಾರ್ಹ ಸಂಬಂಧವನ್ನು ಹೊಂದಿದೆ. ಪರಿಮಳ ಕಳವಿ, ಮೊಸಳೆಪುಟ್ಟಭತ್ತ, ಮುಂಡೊನಿ, ಬಿಳಿಹಸುಡಿ ಮತ್ತು ಬೊಳುಮಲ್ಲಿಗೆ ಎಂಬ ಸ್ಥಳೀಯ ಭತ್ತದ ತಳಿಗಳು ಉತ್ತಮ ಸಾರಜನಕ ಸಲುವಳಿ ಸಾಮರ್ಥ್ಯವನ್ನು ಹೊಂದಿವೆ ಎಂದು ಈ ಅಧ್ಯಯನದಿಂದ ತಿಳಿದುಬಂದಿದೆ.

ಕೋಷ್ಟಕ.1: ಕಡಿಮೆ ಸಾರಜನಕದ ಮಣ್ಣಿನ ಸ್ಥಿತಿಗಳಲ್ಲಿ ಸ್ಥಳೀಯ ಭತ್ತದ ತಳಿಗಳ ಇಳುವರಿ ಮತ್ತು ಸಾರಜನಕ ಸಲುವಳಿ ಸಾಮರ್ಥ್ಯ ಸಂಬಂಧಿತ ಗುಣಲಕ್ಷಣಗಳ ಅನುವಂಶೀಯ ಏರಿಳಿತ.

| ಗುಣಲಕ್ಷಣಗಳು | ಸರಾಸರಿ | ಪಿ.ಸಿ.ವಿ % | ಜಿ.ಸಿ.ವಿ % | ಅನುವಂಶೀಯತೆ (%) | ಸರಾಸರಿ ಅನುವಂಶೀಯ ಅಭಿವೃದ್ಧಿ (%) |
|---|---|---|---|---|---|
| **35 ದಿನದ ನಂತರ ಸಸ್ಯದ ಎತ್ತರ (ಸೆಂ.ಮೀ)** | 51.00 | 12.98 | 11.92 | 98.90 | 26.62 |
| **35 ದಿನದ ನಂತರ ಪ್ರತಿ ಗಿಡದ ತಂಡೆಗಳ ಸಂಖ್ಯೆ** | 14.67 | 29.88 | 27.65 | 85.70 | 67.39 |
| **ಎಸ್.ಪಿ.ಎ.ಡಿ ಮೌಲ್ಯ** | 39.28 | 7.98 | 7.39 | 85.60 | 18.63 |
| **ಶೇ. 50 ರಷ್ಟು ಹೂಬಿಡುವ ಕಾಲ(ದಿನಗಳಲ್ಲಿ)** | 97.24 | 11.16 | 11.13 | 99.40 | 24.01 |
| **ಕೋಯ್ಲಿಗೆ ತೆಗೆದುಕೊಂಡ ಕಾಲ(ದಿನಗಳಲ್ಲಿ)** | 134.95 | 4.54 | 4.53 | 99.50 | 10.08 |
| **ಕೋಯ್ಲುಮಾಡುವಾಗ ಸಸ್ಯದ ಎತ್ತರ (ಸೆಂ.ಮೀ)** | 104.56 | 17.41 | 17.17 | 97.30 | 36.79 |
| **ಕೋಯ್ಲುಮಾಡುವಾಗ ಒಟ್ಟು ತಂಡೆಗಳ ಸಂಖ್ಯೆ** | 14.74 | 5.65 | 5.48 | 94.20 | 18.03 |
| **ಒಟ್ಟು ಫಲಭರಿತ ತಂಡೆಗಳ ಸಂಖ್ಯೆ** | 11.02 | 25.2 | 24.63 | 95.50 | 60.58 |
| **ತೆನೆಯ ಉದ್ದ(ಉದ್ದ)** | 21.70 | 12.79 | 12.47 | 95.20 | 30.86 |
| **ತೆನೆಯ ತೂಕ (ಗ್ರಾಂ.)** | 3.15 | 29.66 | 29.4 | 98.30 | 92.32 |
| **ಪ್ರತಿ ತೆನೆಯ ಕಾಳುಗಳ ಸಂಖ್ಯೆ** | 118.38 | 34.07 | 33.27 | 95.30 | 70.99 |
| **ತೆನೆಯ ಫಲವತ್ತತೆ** (%) | 92.82 | 4.26 | 4.25 | 99.50 | 9.85 |

| | | | | | |
|---|---|---|---|---|---|
| ಪ್ರತಿ ಗಿಡದ ಕಾಳಿನ ಇಳುವರಿ (ಗ್ರಾಂ.) | 25.85 | 27.39 | 27.33 | 99.60 | 60.27 |
| ಪ್ರತಿ ಗಿಡದ ಹುಲ್ಲಿನ ಇಳುವರಿ (ಗ್ರಾಂ.) | 22.69 | 23.19 | 22.8 | 96.60 | 52.04 |
| 1000 ಕಾಳುಗಳ ತೂಕ (ಗ್ರಾಂ.) | 22.61 | 22.19 | 22.14 | 99.60 | 50.11 |
| ಜೈವಿಕ ತೂಕ (ಗ್ರಾಂ.) | 48.52 | 19.28 | 19.15 | 98.70 | 41.75 |
| ಸಾರಜನಕದ ಸಲುವಳಿ ಸಾಮರ್ಥ್ಯ | 34.42 | 26.76 | 26.16 | 95.60 | 57.90 |

ಕೋಷ್ಟಕ.2: ಸಾರಜನಕವಿಲ್ಲದ ಮಣ್ಣಿನ(ಸಾರಜನಕ ಬಳಸದ ಮಣ್ಣಿನ) ಸ್ಥಿತಿಗಳಲ್ಲಿ ಸ್ಥಳೀಯ ಭತ್ತದ ತಳಿಗಳ ಇಳುವರಿ ಮತ್ತು ಸಾರಜನಕ ಸಲುವಳಿ ಸಾಮರ್ಥ್ಯ ಸಂಬವಂಧಿತ ಗುಣಲಕ್ಷಣಗಳ ಅನುವಂಶೀಯ ಏರಿಳಿತ.

| ಗುಣಲಕ್ಷಣಗಳು | ಸರಾಸರಿ | ಪಿ.ಸಿ.ವಿ % | ಜಿ.ಸಿ.ವಿ % | ಅನುವಂಶೀಯತೆ (%) | ಸರಾಸರಿ ಅನುವಂಶೀಯ ಅಭಿವೃದ್ಧಿ (%) |
|---|---|---|---|---|---|
| 35 ದಿನದ ನಂತರ ಸಸ್ಯದ ಎತ್ತರ (ಸೆಂ.ಮೀ) | 47.62 | 13.33 | 12.58 | 89.01 | 29.34 |
| 35 ದಿನದ ನಂತರ ಪ್ರತಿ ಗಿಡದ ತಂಡೆಗಳ ಸಂಖ್ಯೆ | 8.13 | 28.18 | 27.15 | 92.88 | 69.45 |
| ಎಸ್.ಪಿ.ಎ.ಡಿ ಮೌಲ್ಯ | 37.42 | 8.38 | 6.76 | 65.07 | 19.00 |
| ಶೇ. 50 ರಷ್ಟು ಹೂಬಿಡುವ ಕಾಲ(ದಿನಗಳಲ್ಲಿ) | 93.80 | 9.90 | 9.79 | 97.74 | 21.43 |
| ಕೋಯ್ಲಿಗೆ ತೆಗೆದುಕೊಂಡ ಕಾಲ(ದಿನಗಳಲ್ಲಿ) | 131.38 | 4.46 | 4.41 | 97.87 | 9.93 |
| ಕೋಯ್ಲುಮಾಡುವಾಗ ಸಸ್ಯದ ಎತ್ತರ (ಸೆಂ.ಮೀ) | 100.25 | 17.49 | 17.07 | 95.22 | 36.98 |
| ಕೋಯ್ಲುಮಾಡುವಾಗ ಒಟ್ಟು ತಂಡೆಗಳ ಸಂಖ್ಯೆ | 10.98 | 26.93 | 26.51 | 96.91 | 64.29 |
| ಒಟ್ಟು ಫಲಭರಿತ ತಂಡೆಗಳ ಸಂಖ್ಯೆ | 9.23 | 27.51 | 24.89 | 81.87 | 65.55 |
| ತೆನೆಯ ಉದ್ದ(ಉದ್ದ) | 21.48 | 11.49 | 11.35 | 97.54 | 28.20 |
| ತೆನೆಯ ತೂಕ (ಗ್ರಾಂ.) | 2.96 | 31.68 | 31.13 | 96.60 | 97.84 |
| ಪ್ರತಿ ತೆನೆಯ ಕಾಳುಗಳ ಸಂಖ್ಯೆ | 117.08 | 32.84 | 32.37 | 97.19 | 68.47 |
| ತೆನೆಯ ಫಲವತ್ತತೆ (%) | 92.04 | 7.93 | 7.88 | 98.72 | 17.41 |
| ಪ್ರತಿ ಗಿಡದ ಕಾಳಿನ ಇಳುವರಿ (ಗ್ರಾಂ.) | 18.55 | 29.05 | 28.08 | 93.43 | 64.88 |
| ಪ್ರತಿ ಗಿಡದ ಹುಲ್ಲಿನ ಇಳುವರಿ (ಗ್ರಾಂ.) | 16.41 | 25.54 | 24.78 | 94.08 | 58.35 |
| 1000 ಕಾಳುಗಳ ತೂಕ (ಗ್ರಾಂ.) | 22.76 | 23.70 | 22.91 | 93.50 | 52.92 |
| ಜೈವಿಕ ತೂಕ (ಗ್ರಾಂ.) | 41.29 | 18.41 | 18.16 | 97.27 | 40.28 |
| ಸಾರಜನಕದ ಸಲುವಳಿ ಸಾಮರ್ಥ್ಯ | 33.74 | 27.99 | 26.81 | 91.78 | 60.37 |

**ಉಲ್ಲೇಖನಗಳು:**

ಡಿ ದತ್ತ, ಎಸ್.ಕೆ. ಮತ್ತು ಬುರೇಶ್ಆರ್.ಜೆ.,1989, ಇಂಟಿಗ್ರೇಟೇಡ್ ನೈಟ್ರೋಜನ್ ಮ್ಯಾನೇಜ್ಮೆಂಟ್ ಇನ್ ಇರಿಗೇಟೇಡ್ ರೈಸ್. ಅಡ್ವಾನ್ಸ್. ಸಾಯಿಲ್ ಸೈನ್ಸ್.,10:143–163.

ಫಾಜೇರಿಯಾ,ಎನ್.ಕೆ. ಮತ್ತು ಬಾರ್ ಬೋಸಾ ಫಿಲೋ,ಎಮ್.ಪಿ., 2001, ನೈಟ್ರೋಜನ್ ಯುಸ್ ಎಫೀಶಿಯಾನ್ಸಿ ಇನ್ ಲೋಲ್ಯಾಂಡ್ ರೈಸ್ ಜೀನೊಟೈಪ್ಸ್.ಕಮ್ಯುನಿಕೇಷನ್ಸ್ ಇನ್ ಸಾಯಿಲ್ ಸೈನ್ಸ್ ಅಂಡ್ ಪ್ಲಾಂಟ್ ಅನಾಲಿಸಿಸ್.,32:2079–2089.

ಫೀಶರ್,ಕೆ.,1998, ಟುವಾರ್ಡ್ಸ ಇನ್ಕ್ರಸಿಂಗ್ ನೈಟ್ರೋಜನ್ ಯುಸ್ ಎಫೀಶಿಯಾನ್ಸಿ ಇನ್ ಕ್ರಾಫಿಂಗ್ ಸಿಸ್ಟಮ್: ದ ನೆಸ್ಟ್ ಜನರೇಷನ್ ಟೇಕ್ನೋಲಜಿ. ಫೀಲ್ಡ್ ಕ್ರಾಫ್ ರೀಸರ್ಚ್.,**56**:1–6.

ಜಾನ್ಸನ್, ಹೆಚ್.ಡಬ್ಲೋ., ರಾಬಿನ್ಸನ್,ಹೆಚ್ಟ್.ಎಫ್ ಅಂಡ್ ಕಾಮ್ಸ್ಟಾಕ್,ಆರ್.ಇ., 1995, ಎಸ್ಟಿಮೇಷನ್ ಆಫ್ ಜೆನೆಟಿಕ್ ಅಂಡ್ ಎನ್ವಿರಾನ್ಮೆಂಟಲ್ ವೇರಿಯುಬಿಲಿಟಿ ಇನ್ ಸೋಯಾಬಿನ್.ಅಗಾನ್. ಜೇ.,7(7):314–318.

®µï , eÉJ ¯ï ., 1945,ಇಂಟ್ರ–ಸೈರ್ ಕೋರುಲೇಷನ್ ಆನ್ ರಿಗ್ರೀಷನ್ ಆಫ್ ಆಫ್ಸ್ಪ್ರಿಂಗ್ ಆನ್ ಆಸ್ ಎ ಮೆಥಡ್ ಆಫ್ ಎಸ್ಟಿಮೇಷನ್ ಆಫ್ ಕ್ಯಾರಕ್ಟರ್.ಪ್ರೋಸಿಡಿಂಗ್ಸ್. ಆಮೇರಿಕನ್. ಸೋ. ಅನಿಮಲ್ ಪ್ರೋಡ್.,33:292–301.

ವೈಶಾಲಿ, ಎಮ್.ಜಿ.(2003),ಡಿಎನ್ಎ ಮಾರ್ಕರ್ ಅಸಿಸ್ಟೆಡ್ ಮ್ಯಾಪಿಂಗ್ ಆಫ್ ಬ್ಲಾಸ್ಟ್ ಅಂಡ್ ಯೀಲ್ಡ್ ಲೊಸ್ಸೈ, ಗ್ರಾಫೀಕಲ್ ಜಿನೊಟೈಪಿಂಗ್ ಅಂಡ್ ಕ್ಯಾಂಡಿಡೆಟ್ ಜೀನ್ ಅನಾಲಿಸಿಸ್ ಇನ್ ರೈಸ್(ಒರೈಸಾ ಸಟೈವಾ ಎಲ್.)ಪಿಚ್.ಡಿ. ತೀಸಿಸ್, ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸ್, ಬೆಂಗಳೂರು, ಇಂಡಿಯಾ.

# ಬೀಜೋತ್ಪಾದನೆಯಲ್ಲಿ ಲಘುಪೋಷಕಾಂಶಗಳ ಬಳಕೆಯಿಂದ ಬೆಳವಣಿಗೆ, ಬೀಜದ ಇಳುವರಿ ಮತ್ತು ಗುಣಮಟ್ಟದ ಮೇಲಿನ ಪರಿಣಾಮವನ್ನು ಮೂಲಂಗಿಯಲ್ಲಿ ಅಧ್ಯಯನ (*ರಾಫಾನಸ್ ಸಟೈವಸ್* ಎಲ್.) ಸಿವಿ.ಅರ್ಕಾನಿಶಾಂತ್

ದೀಪಿಕಾ, ಸಿ. ಮತ್ತು ಚನ್ನಕೇಶವ, ಬಿ.ಸಿ.
ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಯುಎಎಸ್, ಬೆಂಗಳೂರು–೫೬೦೦೬೫ deepika.812@gmail.com

**ಸಾರಾಂಶ :** ದೇಶದ ಹಲವಾರು ಭಾಗಗಳಲ್ಲಿ ಅಧಿಕ ರಾಸಾಯನಿಕ ಗೊಬ್ಬರಗಳ ಬಳಕೆ ಮತ್ತು ಮತ್ತು ತೀವ್ರ ಕೃಷಿ ಉತ್ಪಾದನ ಕ್ರಮದಿಂದ ಭೂಮಿಯಲ್ಲಿ ಲಘುಪೋಷಕಾಂಶಗಳ ಕೊರತೆ ಹಲವೆಡೆ ಕಂಡುಬಂದಿದೆ. ಹೆಚ್ಚಿನ ಬೀಜ ಇಳುವರಿ ಮತ್ತು ಗುಣಮಟ್ಟ ಪಡೆಯುವುದಕ್ಕೆ ಪೂರಕವಾಗಿ ಸರಿಯಾದ ತಂತ್ರಜ್ಞಾನ ಮತ್ತು ಸಮತೋಲನ ಗೊಬ್ಬರಗಳು ಅವಶ್ಯಕ. ಈ ದಿಶೆಯಲ್ಲಿ ಲಘುಪೋಷಕಾಂಶಗಳ ಬಳಕೆಯಿಂದ ಬೀಜದ ಇಳುವರಿ ಮತ್ತು ಬೀಜಕೋಶದ ಇಳುವರಿ ಮೇಲಿನ ಪರಿಣಾಮವನ್ನು ಮೂಲಂಗಿಯಲ್ಲಿ ವಲಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ನವಿಲೆ, ಶಿವಮೊಗ್ಗದಲ್ಲಿ ಕ್ಷೇತ್ರ ಪ್ರಯೋಗವನ್ನು ಮತ್ತು ಪ್ರಯೋಗಾಲಯದ ಪ್ರಯೋಗಗಳನ್ನು ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಕೃಷಿ ಮಹಾ ವಿದ್ಯಾಲಯ, ಜಿ.ಕೆ.ವಿ.ಕೆ, ಬೆಂಗಳೂರಿನಲ್ಲಿ ೨೦೧೩ರಲ್ಲಿ ಮಾಡಲಾಯಿತು. ಈ ಪ್ರಯೋಗದಲ್ಲಿ ನಾಲ್ಕು ಪೋಷಕಾಂಶಗಳ ಹಂತಗಳಿವೆ.ಲಘುಪೋಷಕಾಂಶಗಳನ್ನು ಉಪಚರಿಸಿದುದರಲ್ಲಿ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರ (೭೫:೮೦:೮೦ ಕೆಜಿ/ಹೆ ಎನ್.ಪಿ.ಕೆ) + ಸತುವಿನ ಸಲ್ಫೇಟ್ (೧೦ ಕೆ ಜಿ/ಹೆ) ನಾಟಿಮಾಡುವ ಹಂತದಲ್ಲಿ ಮಣ್ಣಿಗೆ + ೦.೧ ರಷ್ಟು ಪ್ರಮಾಣದ ಬೋರ್ಯಾಕ್ಸ್‌ನ್ನು ಮೊಗ್ಗು ಕಟ್ಟುವ ಹಂತದಲ್ಲಿ ಸಿಂಪಡಣೆ ಮಾಡಿದ ತಾಕಿನಲ್ಲಿ ಅತ್ಯಧಿಕ ಸಸ್ಯ ಎತ್ತರ (೩೩.೮೦ ಸೆಂ.ಮೀ) ಮತ್ತು ಎಲೆಗಳ ಸಂಖ್ಯೆ (೩೪.೩೦), ಹೂಗೊಂಚಲಿನ ಉದ್ದ (೯೩.೮೦ ಸೆಂ.ಮೀ), ಬೀಜಕೋಶಗಳ ಸಂಖ್ಯೆ (೩೬೩), ಬೀಜಕೋಶದ ತೂಕ (೨೬.೭೦ ಗ್ರಾಂ), ಬೀಜಕೋಶದ ಉದ್ದ (೫.೩೪ ಸೆಂ.ಮೀ) ಮತ್ತು ಪ್ರತಿ ಹೆಕ್ಟೇರಿಗೆ ಬೀಜ ಇಳುವರಿ (೧೯೯.೯೩ ಕೆ.ಜಿ/ಹೆ) ಉಪಚರಿಸದೆ ಇರುವುದರ ಮೇಲೆ ಪ್ರತಿ ಶತ ೪೪.೦೯% ಹೆಚ್ಚು ಇಳುವರಿ ಮತ್ತು ಬೀಜ ಗುಣಮಟ್ಟದ ನಿಯತಾಂಕಗಳಾದ ಬೀಜ ಮೊಳಕೆ (೯೨%), ಸರಾಸರಿ ಮೊಳಕೆಯ ಉದ್ದ (೨೨.೭೭ಸೆಂ.ಮೀ), ಸರಾಸರಿ ಸಸಿಯ ಒಣ ತೂಕ (೫.೦೭ಮಿ.ಗ್ರಾಂ) ಮತ್ತು ಮೊಳಕೆಯ ಸಾಮರ್ಥ್ಯ ೧ ಮತ್ತು ಮೊಳಕೆಯ ಸಾಮರ್ಥ್ಯ ೨ (೨೧೦೦ ಮತ್ತು ೪೬೭).

**ಪೀಠಿಕೆ:** ಭಾರತದಲ್ಲಿ ಮೂಲಂಗಿ ಕೂಡ ಪ್ರಮುಖವಾದ ತರಕಾರಿ ಬೆಳೆಯಾಗಿದೆ.ಇದನ್ನು ಮುಖ್ಯವಾಗಿಯೂ ಮತ್ತು ಮಿಶ್ರ ಬೆಳೆಯಾಗಿ ಬೆಳೆಯ ಬಹುದಾಗಿದೆ. ಇದರ ಎಲೆಗಳು ಶೇ.೮೯ ರಷ್ಟು ನೀರಿನಂಶವನ್ನು ಹೊಂದಿದ್ದು, ಹೇರಳವಾದ ಎ,ಬಿ ಮತ್ತು ಸಿ ಅನ್ನಾಂಗವನ್ನು ಹೊಂದಿದ್ದು, ಇದನ್ನು ಮೂತ್ರಕೋಶ, ಪಿತ್ತಕೋಶ ಮತ್ತು ಪೈಲ್ಸ್ ತೊಂದರೆಗಳ ಚಿಕಿತ್ಸೆಯಲ್ಲಿ ಉಪಯೋಗಿಸಲಾಗುತ್ತದೆ. ಮೂಲಂಗಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುವ ರಾಜ್ಯಾಗಳೆಂದರೆ, ಪಶ್ಚಿಮಬಂಗಾಳ, ಬಿಹಾರ, ಉತ್ತರ ಪ್ರದೇಶ, ಕರ್ನಾಟಕ, ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ಅಸ್ಸಾಂ. ಭಾರತದಲ್ಲಿ ೧,೬೦,೦೦೦ ಹೆಕ್ಟೇರ್ ಪ್ರದೇಶದಲ್ಲಿ ೨೨೮೬,೦೦೦ ಮಿಲಿಯನ್ ಟನ್ ಮೂಲಂಗಿಯ ಗೆಡ್ಡೆಯ ಉತ್ಪಾದನೆ,ಕರ್ನಾಟಕದಲ್ಲಿ ೫೩೦೭ ಹೆಕ್ಟೇರ್ ಪ್ರದೇಶದಲ್ಲಿ ೬೦,೧೫೩ ಮಿಲಿಯನ್ ಟನ್ ಮೂಲಂಗಿ ಗೆಡ್ಡೆಯನ್ನು ಉತ್ಪಾದಿಸಿದೆ. ಸತು ಮತ್ತು ಬೋರಾನ್ ಪೋಷಕಾಂಶಗಳು ಹಲವಾರು ಜೀವಕಿಣ್ವಗಳ ರಾಸಾಯನಿಕ ಕ್ರಿಯೆಯಲ್ಲಿ ಸಹಭಾಗಿಯಾಗುವುದಲ್ಲದೆ ಬೀಜದ ಮೊಳಕೆ ಮತ್ತು ಬೇರುಗಳ ರಚನೆಗೆ ಅಗತ್ಯವಾಗಿರುವ ಶರ್ಕರ ಪಿಷ್ಟ, ಸಸಾರಜನಕ ಮತ್ತು ಫಾಸ್ಫೇಟ್ ವಸ್ತುಗಳ ಸಾಗಾಣಿಕೆಯಲ್ಲಿ ಭಾಗವಹಿಸುವ ಕಿಣ್ವಗಳನ್ನು ಚುರುಕುಮಾಡುತ್ತವೆ. ಪರಾಗರೇಣುಗಳ ಉತ್ಪಾದನೆ ಮತ್ತು ಪರಾಗ ನಾಳದ ಬೆಳವಣಿಗೆಯಲ್ಲಿ ಮುಖ್ಯವಾದ ಕಾರ್ಯ ನಿರ್ವಹಿಸುತ್ತವೆ. ಈ ಪೋಷಕಾಂಶಗಳು ಒಟ್ಟಾರೆ ಶೇ.೪೪ ರಷ್ಟು ಅಧಿಕ ಮೂಲಂಗಿ ಬೀಜದ ಇಳುವರಿ ಮತ್ತು ಶೇ. ಮೊಳಕೆಯ ಪ್ರಮಾಣವನ್ನು ಹೆಚ್ಚುಸುತ್ತವೆ. ಈ ಮೇಲಿನ ಎಲ್ಲಾಂಶಗಳನ್ನು ಆಧರಿಸಿ ಮೂಲಂಗಿಯ ಬೀಜೋತ್ಪಾದನೆ ಮತ್ತು ಗುಣಮಟ್ಟದ ಮೇಲೆ ಲಘುಪೋಷಕಾಂಶಗಳನ್ನು ಬಳಸುವುದರಿಂದ ಆಗುವ ಪರಿಣಾಮ ವನ್ನು ಕುರಿತು ಈ ಅಧ್ಯಯನವನ್ನು ಕೈಗೊಳ್ಳಲಾಯಿತು.

**ಸಾಮಾನುಗಳು ಮತ್ತು ಪದ್ದತಿಗಳು:** ಕ್ಷೇತ್ರಪ್ರಯೋಗವನ್ನು ವಲಯ ಕೃಷಿ ಸಂಶೋಧನಾ ಕೇಂದ್ರ ನವಿಲೆ, ಶಿವಮೊಗ್ಗ ದಲ್ಲಿ, ೨೦೧೩–೧೪, ಮುಂಗಾರಿನ ಹಂಗಾಮಿನಲ್ಲಿ ನಡೆಸಲಾಯಿತು. ಪೋಷಕಾಂಶಗಳಾ ಹಂತಗಳು ನಾಲ್ಕು ಅದರಲ್ಲಿ ಎಮ್೧: ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರವಾದ ೭೫:೮೦:೮೦ ಕೆ.ಜಿ/ಹೆ, ಎಮ್೨:ಎಮ್೧+ಸತುವಿನ ಸಲ್ಫೇಟ್ ೧೦ ಕೆ.ಜಿ/ಹೆ,ಎಮ್೩:ಎಮ್೧+ಬೋರ್ಯಾಕ್ಸ್ ೦.೧ ಶೇ ಪ್ರಮಾಣವನ್ನು ಮೊಗ್ಗು ಕಟ್ಟುವ ಹಂತದಲ್ಲಿ ಸಿಂಪರಣೆ ಮಾಡಬೇಕು,ಎಮ್೪:ಎಮ್೧+ಎಮ್೨+ಎಮ್೩.ಈ ಪ್ರಯೋಗವನ್ನು ಮಾಡಲು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಮೂಲಂಗಿ ಬೀಜವನ್ನು ಬಳಸಲಾಯಿತು.ಈ ಬೀಜದ ಪ್ರಥಮ ಗುಣಮಟ್ಟವನ್ನು ಪರೀಕ್ಷೆ ಮಾಡಿದ ನಂತರ ವಿವಿಧ ಉಪಚರಣೆಗಳನ್ನು ಮಾಡಲಾಯಿತು. ಪ್ರಯೋಗವನ್ನು ಫ್ಯಾಕ್ಟೋರಿಯಲ್ ರಾಂಡಮೈಸ್ಡ್ ಬ್ಲಾಕ್ ಡಿಸೈನ್ ಜೊತೆಗೆ ಮೂರು ಮೂಲತಃ ಗಳನ್ನು ಮತ್ತು ೪ ಉಪಚರಣೆಗಳನ್ನು ತೆಗೆದುಕೊಂಡು ಪ್ರಯೋಗವನ್ನು ಮಾಡಲಾಯಿತು. ಮೂಲಂಗಿ ಬೀಜೋತ್ಪಾದನೆಯುನ್ನು ಎರಡು ವಿಧಾನಗಳಲ್ಲಿ ಮಾಡಬಹುದು. ೧) ಮೂಲಂಗಿ ಬೀಜವನ್ನು ಉಪಯೋಗಿಸಿಕೊಂಡು ಬೀಜೋತ್ಪಾದನೆ ಮಾಡುವುದು. ೨) ಮೂಲಂಗಿ ಗೆಡ್ಡೆಯನ್ನು ಉಪಯೋಗಿಸಿಕೊಂಡು ಬೀಜೋತ್ಪಾದನೆಯನ್ನು ಮಾಡುವುದು. ನಾವು ಮೂಲಂಗಿ ಗೆಡ್ಡೆಯುನ್ನು ಉಪಯೋಗಿಸಿಕೊಂಡು ಬೀಜೋತ್ಪಾದನೆಯುನ್ನು ಮಾಡಲಾಯಿತು. ಸಸ್ಯದ ಬೆಳವಣಿಗೆ ಮತ್ತು ಬೀಜದ ಇಳುವರಿಯ ನಿಯತಾಂಕಗಳಾದ, ಸಸ್ಯದ ಎತ್ತರ(ಸೆಂ.ಮೀ) ಮತ್ತು ಎಲೆಗಳ ಸಂಖ್ಯೆ ಮೊಗ್ಗು ಕಟ್ಟುವ ಹಂತದಲ್ಲಿ ತೆಗೆದು ಕೊಂಡೆವು. ಹೂಗೊಂಚಲಿನ ಉದ್ದ(ಸೆಂ.ಮೀ), ಕಾಯಿಗಳ ಸಂಖ್ಯೆ ಪ್ರತಿ ಗಿಡಕ್ಕೆ, ಕಾಯಿಗಳ ತೂಕ(ಗ್ರಾಂ), ಕಾಯಿಯ ಉದ್ದ(ಸೆಂ.ಮೀ), ಬೀಜಗಳ ಸಂಖ್ಯೆ ಪ್ರತಿ ಕಾಯಿ, ಬೀಜದ ಇಳುವರಿ ಪ್ರತಿ ತಾಕಿಗೆ (ಗ್ರಾಂ), ಬೀಜದ ಇಳುವರಿ ಪ್ರತಿ ಹೆ, ಬೀಜ

ಗುಣಮಟ್ಟದ ನಿಯತಾಂಕಗಳಾದ ಬೀಜ ಮೊಳಕೆ, ಸರಾಸರಿ ಮೊಳಕೆಯ ಉದ್ದ (ಸೆಂ.ಮೀ), ಸರಾಸರಿ ಸಸಿಯ ಒಣ ತೂಕ (ಮಿ.ಗ್ರಾಂ) ಮತ್ತು ಮೊಳಕೆಯ ಸಾಮರ್ಥ್ಯ ೧ ಮತ್ತು ಮೊಳಕೆಯ ಸಾಮರ್ಥ್ಯ ೨. ಈ ಬೆಳೆಯುನ್ನು ಮರಳು ಮಿಶ್ರಿತ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಈ ಮಣ್ಣಿನಲ್ಲಿ ಸಾರಜನಕ (೧೭೮.೬೦ಕೆಜಿ/ಹೆ), ರಂಜಕ (೬೮.೭೦ಕೆಜಿ/ಹೆ), ಗಂಧಕ (೧೬೭.೯೯ಕೆಜಿ/ಹೆ) ಮತ್ತು ಮಣ್ಣಿನ ರಸಸಾರ(೫.೮೬), ಬೋರಾನ್ (೦.೪೩ ಮಿಗ್ರಾಂ/ಕೆಜಿ) ಮತ್ತು ಸತು (೦.೪೬ಮಿಗ್ರಾಂ/ಕೆಜಿ).

**ಫಲಿತಾಂಶ ಮತ್ತು ವಿಶ್ಲೇಷಣೆ:** ಈ ಅಧ್ಯಯನದಲ್ಲಿ ಲಘುಪೋಷಕಾಂಶಗಳು ಮತ್ತು ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರವನ್ನು ಹಾಕುವುದರಿಂದ ಎಮ್ ೪ ಉಪಚರಿಸಿದ ತಾಕಿನಲ್ಲಿ **(ಟೇಬಲ್ ೧)** ಸಸ್ಯದ ಎತ್ತರ (೩೩.೮೦ಸೆ.ಮೀ) ಮತ್ತು ಎಲೆಗಳ ಸಂಖ್ಯೆ(೩೪.೩೦) ಮೊಗ್ಗುಕಟ್ಟುವ ಹಂತದಲ್ಲಿ ತೆಗೆದುಕೊಳ್ಳಲಾಯಿತು. ಹೂಗೊಂಚಲಿನ ಉದ್ದ (೯೩.೮೦ಸೆಂ.ಮೀ) ಹೆಚ್ಚಾಗಿ ದಾಖಲಾಗಿದೆ. ದ್ಯುತಿಸಂಶ್ಲೇಷಣೆ ಕ್ರಿಯೆ ಮತ್ತು ಕೋಶಗಳ ವಿಭಜನೆ ಹೆಚ್ಚಾದಂತೆಲ್ಲಾ ಸಸ್ಯದ ಎತ್ತರ ಮತ್ತು ಎಲೆಗಳ ಸಂಖ್ಯೆ ಜಾಸ್ತಿಯಾಗಿ ಹೂಗೊಂಚಲಿನ ಉದ್ದದಲ್ಲಿ ಕಂಡು ಬಂದಿದೆ. ಇದೆ ಫಲಿತಾಂಶವು ಮಖಾನ್ ಸಿಂಗ್ *ಎಟ್ ಆಲ್.* (೨೦೦೩) ಟಮೋಟದಲ್ಲಿ,ಪ್ರನಬ್ ಜ್ಯೋತಿ ಶರ್ಮ *ಎಟ್ ಆಲ್.(೨೦೦೩)* ಎಲೆಕೋಸಿನಲ್ಲಿ, ಯಾದವ್ *ಎಟ್ ಆಲ್. (೨೦೦೯)* ಎಲೆ ಕೋಸಿನಲ್ಲಿ, ಸಾಹ *ಎಟ್ ಆಲ್. (೨೦೧೦)* ಬ್ರಕೋಲಿ, ಸುರೇಶ್‌ಕುಮಾರ್ *ಎಟ್ ಆಲ್. (೨೦೧೦)* ಹೂಕೋಸಿನಲ್ಲಿ, ಅಂಕುರ್ ಅಗರ್‌ವಾಲ್ ಮತ್ತು ಅಹಮದ್ (೨೦೦೭) ಹೂಕೋಸಿನಲ್ಲಿ ದಾಖಲಾಗಿದೆ.

**ಟೇಬಲ್ ೧: ಮೂಲಂಗಿಯಲ್ಲಿ ಲಘುಪೋಷಕಾಂಶಗಳ ಬಳಕೆಯಿಂದ ಸಸ್ಯದ ಬೆಳವಣಿಗೆಯಲ್ಲಿನ ಪರಿಣಾಮ.**

| ಪೋಷಕಾಂಶಗಳ ಉಪಚರಣೆಗಳು | ಸಸ್ಯದ ಎತ್ತರ (ಸೆಂ.ಮೀ) ಮೊಗ್ಗುಕಟ್ಟುವ ಹಂತದಲ್ಲಿ | ಎಲೆಗಳ ಸಂಖ್ಯೆ ಮೊಗ್ಗು ಕಟ್ಟುವ ಹಂತದಲ್ಲಿ | ಹೂಗೊಂಚಲಿನ ಉದ್ದ (ಸೆಂ.ಮೀ) |
|---|---|---|---|
| ಎಮ್೧ | ೩೦.೦೯ | ೨೬.೬೦ | ೮೧.೭೦ |
| ಎಮ್೨ | ೩೧.೫೩ | ೨೮.೯೦ | ೮೬.೩೦ |
| ಎಮ್೩ | ೩೨.೪೦ | ೩೦.೧೦ | ೮೭.೦೦ |
| ಎಮ್೪ | ೩೩.೮೦ | ೩೪.೩೦ | ೯೩.೮೦ |
| **ಎಸ್.ಇಎಮ್** | **೦.೩೫೧** | **೦.೯೫೨** | **೧.೪೨೮** |
| **ಸಿ ಡಿ(ಪಿ=೦.೦೫)** | **೧.೦೩೦** | **೨.೭೯೧** | **೪.೧೯೦** |

ಈ ಅಧ್ಯಯನದಲ್ಲಿ ಲಘುಪೋಷಕಾಂಶಗಳು ಮತ್ತು ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರವನ್ನು ಹಾಕುವುದರಿಂದ ಎಮ್ ೪ ಉಪಚರಿಸಿದ vÁQÀ è**(ಟೇಬಲ್ ೨)** ಕಾಯಿಗಳ ಸಂಖ್ಯೆ/ಸಸ್ಯ (೩೬೩), ಕಾಯಿಯ ತೂಕ( ೨೬.೩೦ಗ್ರಾಂ), ಕಾಯಿಯ ಉದ್ದ (೫.೩೪ಸೆಂ.ಮೀ), ಬೀಜಗಳ ಸಂಖ್ಯೆ/ಕಾಯಿ (೫.೬೭), ಬೀಜದ ಇಳುವರಿ/ ತಾಕು (೧೨೬ಗ್ರಾಂ) ಮತ್ತು ಬೀಜದ ಇಳುವರಿ (೧೯೯.೯೩ ಕೆಜಿ/ಹೆ). ಇದೆ ಫಲಿತಾಂಶವು ಹಂಸವೇಣಿ *ಎಟ್ ಆಲ್.(೨೦೦೩)* ಟಮೋಟದಲ್ಲಿ, ನಟೇಶ್ *ಎಟ್ ಆಲ್. (೨೦೦೫)* ಮೆಣಸಿನಕಾಯಿಯಲ್ಲಿ, ಗೀತರಾಣಿ *ಎಟ್ ಆಲ್. (೨೦೦೮)* ಈರುಳ್ಳಿಯಲ್ಲಿ, ದಿಲೀಪ್ ಕುಮಾರ್ *ಎಟ್ ಆಲ್. (೨೦೦೩)* ಅಲಸಂದಿಯಲ್ಲಿ,ನಾಗರಾಜು ಮತ್ತು ಮೋಹನ್ ಕುಮಾರ್ *ಎಟ್ ಆಲ್. (೨೦೧೦)* ಸೋಯ ಅವರೆ ಮತ್ತು ನಾಗಾ *ಎಟ್ ಆಲ್. (೨೦೧೩)* ಟಮೋಟದಲ್ಲಿ ದಾಖಲಾಗಿದೆ.

**ಟೇಬಲ್ ೨: ಮೂಲಂಗಿಯಲ್ಲಿ ಲಘುಪೋಷಕಾಂಶಗಳ ಬಳಕೆಯಿಂದ ಬೀಜದ ಇಳುವರಿಯಲ್ಲಿನ ಪರಿಣಾಮ.**

| ಪೋಷಕಾಂಶಗಳ ಉಪಚರಣೆಗಳು | ಕಾಯಿಗಳ ಸಂಖ್ಯೆ/ಸಸ್ಯ | ಕಾಯಿಯ ತೂಕ(ಗ್ರಾಂ) | ಕಾಯಿಯ ಉದ್ದ(ಸೆಂ.ಮೀ) | ಬೀಜಗಳ ಸಂಖ್ಯೆ/ ಕಾಯಿ | ಬೀಜದ ಇಳುವರಿ /ತಾಕು(ಗ್ರಾಂ) | ಬೀಜದ ಇಳುವರಿ ಕೆಜಿ /ಹೆ |
|---|---|---|---|---|---|---|
| ಎಮ್೧ | ೨೧೫ | ೧೩.೮೦ | ೪.೬೩ | ೪.೫೯ | ೮೪ | ೧೩೮.೭೫ |
| ಎಮ್೨ | ೨೬೩ | ೧೫.೭೦ | ೪.೮೨ | ೪.೮೫ | ೯೪ | ೧೫೦.೮೦ |
| ಎಮ್೩ | ೨೮೦ | ೧೮.೭೦ | ೪.೯೩ | ೫.೦೩ | ೧೦೦ | ೧೫೮.೦೪ |
| ಎಮ್೪ | ೩೬೩ | ೨೬.೩೦ | ೫.೩೪ | ೫.೬೭ | ೧೨೬ | ೧೯೯.೯೩ |
| **ಎಸ್.ಇಎಮ್** | **೧೧.೪೪೦** | **೦.೪೩೪** | **೦.೦೬೩** | **೦.೦೯೬** | **೨.೦೬೦** | **೬.೩೪೫** |
| **ಸಿ ಡಿ(ಪಿ=೦.೦೫)** | **೩೩.೫೫೦** | **೧.೨೭೩** | **೦.೧೮೬** | **೦.೨೮೧** | **೬.೦೪೦** | **೧೮.೬೧೦** |

ಈ ಅಧ್ಯಯನದಲ್ಲಿ ಲಘುಪೋಷಕಾಂಶಗಳು ಮತ್ತು ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರವನ್ನು ಹಾಕುವುದರಿಂದ ಎಮ್ ೪ ಉಪಚರಿಸಿದ ತಾಕಿನಲ್ಲಿ **(ಟೇಬಲ್ ೩)** ಬೀಜದ ಮೊಳಕೆ(೯೨), ಸಸಿಯ ಸರಾಸರಿ ಉದ್ದ (೨೨.೭೭ಸೆಂ.ಮೀ), ಸಸಿಯಸರಾಸರಿ ಒಣತೂಕ (೫.೦೭ಮಿಗ್ರಾಂ), ಮೊಳಕೆಯ ಸಾಮರ್ಥ್ಯ ೧ (೨೧೦೦) ಮತ್ತು ಮೊಳಕೆಯ ಸಾಮರ್ಥ್ಯ ೨ (೪೬೭). ಇದೆ ಫಲಿತಾಂಶವು ದಿಲೀಪ್ ಕುಮಾರ್ *ಎಟ್ ಆಲ್.(೨೦೦೯)* ಅಲಸಂದೆ,ಹಂಸವೇಣಿ *ಎಟ್ ಆಲ್. (೨೦೦೩)* ಟಮೋಟ, ನಟೇಶ್ *ಎಟ್ ಆಲ್. (೨೦೦೫)* ಮೆಣಸಿನಕಾಯಿ ಮತ್ತು ಗೀತಾರಾಣಿ *ಎಟ್ ಆಲ್. (೨೦೦೮)* ಈರುಳ್ಳಿಯಲ್ಲಿ, ಅರವಿದ್ ಕುಮಾರ್ *ಎಟ್ ಆಲ್. (೨೦೧೨)* ಹಾಗಲ ಕಾಯಿಯಲ್ಲಿ ದಾಖಲಾಗಿದೆ.

**ಟೇಬಲ್ ೩: ಮೂಲಂಗಿಯಲ್ಲಿ ಲಘುಪೋಷಕಾಂಶಗಳ ಬಳಕೆಯಿಂದ ಬೀಜದ ಗುಣಮಟ್ಟದಲ್ಲಿನ ಪರಿಣಾಮ.**

| ಪೋಷಕಾಂಶಗಳ ಉಪಚರಣೆಗಳು | ಬೀಜದ ಮೊಳಕೆ (ಶೇ) | ಸಸಿಯ ಸರಾಸರಿ ಉದ್ದ(ಸೆಂ.ಮೀ) | ಸಸಿಯಸರಾಸರಿ ಒಣತೂಕ(ಮಿಗ್ರಾಂ) | ಮೊಳಕೆಯ ಸಾಮರ್ಥ್ಯ ೧ | ಮೊಳಕೆಯ ಸಾಮರ್ಥ್ಯ ೨ |
|---|---|---|---|---|---|
| ಎಮ್೧ | ೮೩.೭೦ | ೧೪.೮೫ | ೪.೨೭ | ೧೨೪೩ | ೩೫೭ |
| ಎಮ್೨ | ೮೬.೬೦ | ೧೮.೪೮ | ೪.೪೯ | ೧೪೪೯ | ೩೮೮ |
| ಎಮ್೩ | ೮೯.೩೦ | ೧೯.೮೮ | ೪.೭೭ | ೧೭೭೬ | ೪೨೬ |

| | | | | | |
|---|---|---|---|---|---|
| ಎಮ್‌ಳ | ೯೨.೨೦ | ೨೨.೭೭ | ೫.೦೭ | ೨೧೦೦ | ೪೬೭ |
| ಎಸ್.ಇ ಎಮ್ | ೦.೫೩೧ | ೦.೧೭೨ | ೦.೦೩೮ | ೧೬.೮೦೦ | ೪.೩೨೦ |
| ಸಿ ಡಿ(ಪಿ=೦.೦೫) | ೧.೫೨೨ | ೦.೪೯೫ | ೦.೧೧೧ | ೪೮.೧೮೦ | ೧೨.೪೦ |

**ಆಧಾರಗಳು**


ಅಂಕುರ್ ಅಗರ್‌ವಾಲ್ ಮತ್ತು ಜಮೀದ್, ೨೦೦೭, ಲಡಕ್ ಪ್ರದೇಶದ ಹೂ ಕೋಸಿನಲ್ಲಿ ಲಘುಪೋಶಕಾಂಶಗಳ ಬಳಕೆಯಿಂದ ಬೆಳವಣಿಗೆಯಲ್ಲಾದ ಪ್ರತಿಕ್ರಿಯೆ, *ಇಂಡಿಯನ್ ಜರ್ನಲ್ ಆಫ್ ಅಗ್ರಿಕಲ್ಚರ್ ಸೈನ್ಸಸ್*, ೭೭(೨೪): ೧೦೪-೧೦೫.

ಅರವಿಂದ್‌ಕುಮಾರ್, ಪಿ, ಆರ್., ವಾಸುದೇವನ್, ಎಸ್.ಎನ್., ಪಾಟೀಲ್, ಎಮ್.ಜಿ. ಮತ್ತು ರಾಜರಾಜೇಶ್ವರಿ, ಸಿ., ೨೦೧೨, ಹಾಗಲ ಕಾಯಿಯಲ್ಲಿ ಎನ್ಎಎ, ಟ್ರೈಕಾಂಟನೋಲ್ ಮತ್ತು ಬೋರಾನ್ ಸಿಂಪಡಣೆಯಿಂದ ಬೀಜದ ಇಳುವರಿ ಮತ್ತು ಗುಣಮಟ್ಟದ ಮೇಲಿನ ಪ್ರಭಾವ, ಸಿವಿ. ಪೂಸ ವಿಶೇಷ್, *ದಿ ಏಶಿಯನ್ ಜರ್ನಲ್ ಆಫ್ ಹಾರ್ಟಿಕಲ್ಚರ್*, ೭(೧): ೩೬-೩೯.

ದಿಲೀಪ್ ಕುಮಾರ್ ಮಸೂಥಿ, ಎ., ವ್ಯಾಕರನಹಾಲ್, ಬಿ.ಎಸ್. ಮತ್ತು ದೇಶಪಾಂಡೆ, ವಿ.ಕೆ., ೨೦೦೯, ತರಕಾರಿ ಅಲಸಂದಿಯಲ್ಲಿ ಲಘು ಪೋಷಕಾಂಶಗಳ ಹೊದಿಕೆಯಿಂದ ಬೆಳವಣಿಗೆ, ಬೀಜದ ಇಳುವರಿ ಮತ್ತು ಗುಣಮಟ್ಟದ ಮೇಲಿನ ಪ್ರಭಾವ. *ಕರ್ನಾಟಕ ಜರ್ನಲ್ ಆಫ್ ಅಗ್ರಿಕಲ್ಚರ್ ಸೈನ್ಸ್‌ಸ್*, ೨೨(೪): ೮೯೮-೯೦೦.

ಗೀತಾರಾಣಿ, ಪಿ., ಮಣಿವಣ್ಣನ್, ಎಂ.ಐ. ಮತ್ತು ಪೊನ್ನುಸ್ವಾಮಿ, ಎ.ಎಸ್., ೨೦೦೮, ಈರುಳ್ಳಿಯಲ್ಲಿ ಬೆಳವಣಿಗೆಯ ಪ್ರತಿವರ್ಧಕಗಳು ಮತ್ತು ಪೋಷಕಾಂಶ ಬಳಕೆಯಿಂದ ಬೀಜೋತ್ಪಾದನೆಯಲ್ಲಾದ ಪ್ರಭಾವ. *ದಿ ಏಶಿಯನ್ ಜರ್ನಲ್ ಆಫ್ ಹಾರ್ಟಿಕಲ್ಚರ್*, ೩(೨): ೩೦೧-೩೦೩.

ಹಂಸವೇಣಿ, ಎಂ.ಆರ್., ಕುರುಡಿಕೇರಿ, ಎಂ.ಬಿ., ಶೇಕರ್ ಗೌಡ, ಎಂ., ಶಶಿಧರ್, ಎಸ್.ಡಿ. ಮತ್ತು ಧರ್ಮಟ್ಟಿ, ಪಿ.ಆರ್., ೨೦೦೩, ಟೊಮ್ಯಾಟೊದಲ್ಲಿ ಜಿಪ್ಸಂ ಮತ್ತು ಬೋರಾನ್ ಬಳಕೆಯಿಂದ ಬೀಜದ ಇಳುವರಿ ಮತ್ತು ಗುಣಮಟ್ಟದ ಮೇಲಿನ ಪರಿಣಾಮ, *ಕರ್ನಾಟಕ ಜರ್ನಲ್ ಆಫ್ ಅಗ್ರಿಕಲ್ಚರ್ ಸೈನ್ಸ್‌ಸ್*, ೧೬(೨): ೪೫೭-೪೫೯.

ಮಖಾನ್ ಸಿಂಗ್, ಬಟ್ರಾ,ವಿ.ಕೆ., ವಿರೇಂದ್ರ ಸಿಂಗ್ ಮತ್ತು ಅರೋರ, ಎಸ್.ಕೆ., ೨೦೦೩, ಲಘು ಪೋಶಕಾಂಶಗಳನ್ನು ಹಾಕುವುದರಿಂದ ಟಮೋಟ ಹಿಸ್ಸಾರ್ ಅರುಣ್ ತಳಿಯಲ್ಲಾದ ಪ್ರಭಾವ, *ವೆಜಿಟೆಬಲ್ ಸೈನ್ಸಸ್.* ೩೦(೨):೧೮೨-೧೮೪.

ನಾಗ್,ಕೆ., ನಾಥ್, ಎಮ್.ಆರ್. ಮತ್ತು ಬಿಸ್ವಾಸ್,ಜೆ., ೨೦೦೩, ಆಫ್ರಿಕನ್ ಚೆಂಡು ಹೂವಿನ ತಳಿ ಸಿರಾಕೋಲ್ ನಲ್ಲಿ ಜಿಂಕ್ ಬಳಕೆಯಿಂದ ಬೆಳವಣಿಗೆ, ಹೂ ಬಿಡುವ ಮತ್ತು ಇಳುವರಿಯ ಪರಿಣಾಮ, *ಒರಿಸ್ಸಾ ಜರ್ನಲ್ ಆಫ್ ಹಾರ್ಟಿಕಲ್ಚರ್*, ೩೧(೨):೮೯-೯೫.

ನಾಗಶಿವಯ್ಯ, ಕೆ., ಸ್ವೈನ್, ಎಸ್.ಕೆ., ರಾಜು,ಬಿ. ಮತ್ತು ಸಂದೀಪ್ ವರ್ಮ, ವಿ., ೨೦೧೩,ಟಮೋಟಾ ಬೆಳೆಯಲ್ಲಿ ಲಘುಪೋಷಕಾಂಶಗಳ ಬಳಕೆಯಿಂದ ಬೆಳವಣಿಗೆ ಮತ್ತು ಬೀಜದ ಇಳುವರಿನ ಪ್ರಭಾವ, *ಇಂಟರ್ ನ್ಯಾಶನಲ್ ಜರ್ನಲ್ ಆಫ್ ಡೆವಲೆಪಮೆಂಟ್ ರಿಸರ್ಚ್*, ೩(೧೧):೧೯೧-೧೯೫.

ನಾಗರಾಜು, ಎ.ಪಿ. ಮತ್ತು ಮೋಹನ್‌ಕುಮಾರ್, ಹೆಚ್.ಕೆ., ೨೦೧೦, ಸೋಯಾ ಅವರೆಯಲ್ಲಿ ಲಘು ಪೋಷಕಾಂಶಗಳು ಮತ್ತು ಅಣು ಜೀವಿಗಳ ಬಳಕೆಯಿಂದ ಬೆಳವಣಿಗೆ ಮತ್ತು ಇಳುವರಿಯಲ್ಲಿನ ಪರಿಣಾಮಗಳು. *ಮೈಸೂರು ಜರ್ನಲ್ ಆಫ್ ಅಗ್ರಿಕಲ್ಚರ್ ಸೈನ್ಸ್‌ಸ್*, ೪೪(೨): ೨೬೦-೨೬೫.

ನಟೇಶ್, ಎನ್., ವ್ಯಾಕರಣಾಹಾಳ್, ಬಿ.ಎಸ್., ಶೇಖರ್ ಗೌಡ, ಎಂ. ಮತ್ತು ದೇಶಪಾಂಡೆ, ವಿ.ಕೆ., ೨೦೦೫, ಮೆಣಸಿನಕಾಯಿಯಲ್ಲಿ ಲಘು ಪೋಷಕಾಂಶಗಳು ಮತ್ತು ಸಾವಯವ ವಸ್ತುಗಳ ಬಳಕೆಯಿಂದ ಬೆಳವಣಿಗೆ, ಬೀಜದ ಇಳುವರಿ ಮತ್ತು ಗುಣಮಟ್ಟದ ಮೇಲಿನ ಪರಿಣಾಮ. *ಕರ್ನಾಟಕ ಜರ್ನಲ್ ಆಫ್ ಅಗ್ರಿಕಲ್ಚರ್ ಸೈನ್ಸ್‌ಸ್*, ೧೮(೨): ೩೩೪-೩೩೭.

ಪ್ರಣಬ್‌ಜ್ಯೋತಿ ಶರ್ಮ, ಗೋಸ್ವಾಮಿ, ಬಿ.ಕೆ. ಮತ್ತು ಬಿದ್ಯುಟ್, ಸಿ. ದೆಖಾ, ೨೦೦೩, ಎಲೆಕೋಸಿನಲ್ಲಿ ಲಘು ಪೋಷಕಾಂಶಗಳ ಬಳಕೆಯಿಂದ ಬೆಳವಣಿಗೆಯ ಲಕ್ಷಣಗಳಲ್ಲಿ ಆದ ಪರಿಣಾಮ. *ಒರಿಸ್ಸಾ ಜರ್ನಲ್ ಆಫ್ ಹಾರ್ಟಿಕಲ್ಚರ್*, ೩೧(೨): ೫೧-೫೩.

ಸಹ, ಪಿ., ಚಟರ್ಜಿ, ಆರ್. ಮತ್ತು ದಾಸ್, ಎನ್.ಆರ್., ೨೦೧೦, ಬ್ರಕೊಲಿಯಲ್ಲಿ ಬೋರಾನ್ ಮತ್ತು ಮಾಲ್ಬಿಡಿನಂ ಹಾಕುವುದರಿಂದ ಆದ ಪರಿಣಾಮ. *ರಿಸರ್ಚ್ ಜರ್ನಲ್ ಆಫ್ ಅಗ್ರಿಕಲ್ಚರ್ ಸೈನ್ಸಸ್*, ೧(೪): ೩೩೫-೩೩೭.

ಸುಂದರಾಜ್, ಎನ್., ನಾಗರಾಜು, ಎಸ್., ವೆಂಕಟರಾಮುಲು, ಎಂ.ಎನ್. ಮತ್ತು ಜಗನ್ನಾಥ್, ಎಂ.ಕೆ., ೧೯೭೨, ಕ್ಷೇತ್ರ ಪ್ರಯೋಗಗಳಲ್ಲಿನ ವಿನ್ಯಾಸ ಮತ್ತು ವಿಶ್ಲೇಷಣೆ. *ಯು.ಎ.ಎಸ್. ಬೆಂಗಳೂರು.*

ಸುರೇಶ್ ಕುಮಾರ್, ಪಿ., ಭಗವತಿ, ಆರ್., ಚೌದರಿ, ವಿ.ಕೆ., ಪ್ರೇಮದೇವಿ ಮತ್ತು ರೋನ್ಯಾ, ಟಿ., ೨೦೧೦, ಹೂಕೋಸಿನಲ್ಲಿ ಬೋರಾನ್ ಮತ್ತು ಮಾಲ್ಬಿಡಿನಂ ಬಳಕೆಯಿಂದ ಬೆಳವಣಿಗೆ, ಇಳುವರಿ ಮತ್ತು ಗುಣಮಟ್ಟದ ಮೇಲಿನ ಪರಿಣಾಮ. *ವೆಜಿಟೇಬಲ್ ಸೈನ್ಸ್.* ೩೭(೨): ೧೯೦-೧೯೩.

ಯಾದವ್, ಬಿ.ಡಿ., ಖಂಡೇಲ್ವಾಲ್, ಆರ್.ಬಿ. ಮತ್ತು ಶರ್ಮ, ವೈ.ಕೆ., ೨೦೦೯, ಎಲೆಕೋಸಿನಲ್ಲಿ ಲಘು ಪೋಷಕಾಂಶಗಳ ಪ್ರಭಾವ. *ವೆಜಿಟೇಬಲ್ ಸೈನ್ಸ್.* ೩೬(೧): ೪೭-೫೦.

ISSN 2249 - 5754 VIJNANA KANNADA (PRINT)



# ಉಪವನ ನಿರ್ಮಾಣಕ್ಕೊಂದು ಕೈಪಿಡಿ

ನಾಗಭೂಷಣ ಹೆಚ್. ಎಸ್.,

ನೆಮ್ಮದಿ, ೬ನೇ ತಿರುವು, ವಿದ್ಯಾನಗರ, ಶಿವಮೊಗ್ಗ.– ೫೭೭೨೦೩.nagabushanahs@gmail.com

**ಪ್ರಬಂಧಸಾರ:–** ಉಪವನ ನಿರ್ಮಾಣಕ್ಕಾಗಿ ಶಿವತತ್ತ್ವರತ್ನಾಕರ (ಸಂಸ್ಕೃತ ವಿಶ್ವಕೊಶ)ದಲ್ಲಿ ಸೂಚಿಸಿರುವಂತೆ ಅಯ್ದ ಕೆಲವೊಂದು ಅಂಶಗಳನ್ನು ಈ ಸಂಶೋಧನಾ ಪ್ರಬಂಧದಲ್ಲಿ ವಿವೇಚಿಸಲಾಗಿದೆ. ಆರಂಭದಲ್ಲಿ 'ಉಪವನಮ್' ಶಬ್ದೋತ್ಪತ್ತಿಯನ್ನು ಹೇಳಲಾಗಿದೆ. ಅನಂತರ ಜಲಸಂಪನ್ಮೂಲಗಳು, ಸಸ್ಯೋತ್ಪತ್ತಿ ಕ್ರಮ, ಬೀಜೋಪಚಾರ ಮತ್ತು ಸಸ್ಯ ಸಂರಕ್ಷಣಾದಿ ಕ್ರಮಗಳನ್ನು ಉಲ್ಲೇಖಿಸಲಾಗಿದೆ. ಅನಂತರ ಉಪವನದ ಮಹತ್ತ್ವ ಹಾಗೂ ಅದರ ಸಂಪತ್ತನ್ನು ವಿವರಿಸಲಾಗಿದೆ. ಅಂತಿಮವಾಗಿ ಉಪಸಂಹಾರದಲ್ಲಿ ಪ್ರಸ್ತಾಪಿತ ವಿಷಯಗಳನ್ನು ಸೂತ್ರೀಕರಿಸಿ ಪರಾಮರ್ಶನ ಗ್ರಂಥಗಳನ್ನು ಕಾಣಿಸಲಾಗಿದೆ. ಇವೆಲ್ಲವುಗಳಿಗೆ ಪೂರಕವಾಗುವಂತೆ ಸೂಕ್ತ ಅಡಿಟಿಪ್ಪಣಿಗಳನ್ನು ನೀಡಲಾಗಿದೆ.

**೧.೦ ಪೀಠಿಕೆ:** ಉಪವನಗಳು ಪುರುಷರ ಎಲ್ಲಾಸುಖಗಳಿಗೂ ಸಾಧನಗಳೆಂದು ತಿಳಿದು ಪೋಷಿಸಲ್ಪಡುತ್ತಿವೆ. ಉಪವನದ ಶಬ್ದೋತ್ಪತ್ತಿಯು ಸಂಸ್ಕೃತದ 'ಉಪ' ಮತ್ತು 'ವನಮ್' ಎಂಬ ಶಬ್ದದಿಂದ ಕೂಡಿದೆ. 'ಉಪ' ಎಂಬ ಉಪಸರ್ಗದ ಅರ್ಥವು [೧]'ಉಪೇತ್ಯುಪಜನಮ್' ಎಂದು ಅಧಿಕಾರಾರ್ಥದಲ್ಲಿ ಸ್ವೀಕರಿಸಿ, ಉಪವನವನ್ನು ಕೇವಲ ಅರಣ್ಯವೆಂದು ತಿಳಿಯದೆ [೨]'ಉಪಮಿತಂವನೇನ' ಎಂದು ತಿಳಿಯುವುದು ಯುಕ್ತವಾಗುತ್ತದೆ. ವೈಜ್ಞಾನಿಕವಾಗಿ ಸಸ್ಯವರ್ಗಗಳನ್ನು ಬೆಳೆಸಿ ಪೋಷಿಸುವ ವಿಶಿಷ್ಟಕ್ರಮವೆನ್ನಬಹುದಾಗಿದೆ. ಇದರ ನಾಮಾಂತರಗಳೆಂದರೆ ಜನಸಾಮಾನ್ಯರು ಕೈತೋಟ ಅಥವಾ ಉದ್ಯಾನವನವೆಂದು, ಸಂಪ್ರದಾಯಸ್ಥರು ನಾಗಬನವೆಂದು, ಅರಸರು ಉಪವನ ಅಥವಾ ಪ್ರಮದವನಗಳೆಂದು ಕರೆಯುತ್ತಿದ್ದರು. ಮಹಾಕಾವ್ಯಗಳ ಅಷ್ಟಾದಶ ವರ್ಣನೆಗಳಲ್ಲಿ ಉಪವನದ ವರ್ಣನೆಯೂ ಸ್ಥಾನ ಪಡೆದಿದೆ. ಸಂಶೋಧನಾ ಪ್ರಬಂಧದಲ್ಲಿನ ಕಾರ್ಯವಿಧಾನ–

೧.೦ ಪೀಠಿಕೆ ೨.೦ ಜಲಸಂಪನ್ಮೂಲ ೩.೦ ಉಪವನದ ಕೃಷಿ

೪.೦ ಉಪವನದ ಮಹತ್ತ್ವ ೫.೦ ಉಪಸಂಹಾರ ೬.೦ ಗ್ರಂಥ ಋಣ

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಸಸ್ಯವರ್ಗಗಳು ಉಪವನಗಳ ರೂಪಗಳಲ್ಲಿ ಅವಿಭಾಜ್ಯ ಅಂಗವಾಗಿವೆ. ಉಪವನಗಳ ಸರ್ವೋತೋಮುಖ ಅಭಿವೃದ್ಧಿಗೆ ಕೆಳದಿಯ ಅರಸ ಬಸವಭೂಪಾಲ ವಿರಚಿತ [೩]ಶಿವತತ್ತ್ವರತ್ನಾಕರ ಗ್ರಂಥದಲ್ಲಿ ಅನೇಕ ವಿಚಾರಗಳು ಮೂಡಿಬಂದಿವೆ. ಅದರಲ್ಲಿನ ಪ್ರಾಯೋಗಿಕ ವಿಚಾರಧಾರೆಗಳನ್ನು ಈ ನನ್ನ ಸಂಶೋಧನಾ ಪ್ರಬಂಧದಲ್ಲಿ ಸಾದರಪಡಿಸುವುದೇ ಉದ್ದೇಶವಾಗಿದೆ.

**೨.೦ ಜಲಸಂಪನ್ಮೂಲ:** ಉಪವನದ ನಿರ್ಮಾಣದಲ್ಲಿ ಜಲಸಂಗ್ರಹಣೆಯು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಮಾನವರಂತೆ ಸಸ್ಯಗಳಿಗೂ ಜಲವೇ ಜೀವನಾಡಿ. ಹಾಗಾಗಿ ಸೂಕ್ತವಾದ ನೀರಿನ ಮೂಲವನ್ನು ಗುರುತಿಸಿಕೊಳ್ಳಬೇಕಾಗಿದೆ. ಏಕೆಂದರೆ ಉಪವನಗಳು ಹೇರಳವಾಗಿ ನೀರಿನ ಅಪೇಕ್ಷೆಯನ್ನು ಬಯಸುತ್ತವೆ. ಸಂಸ್ಕೃತ ವಿಶ್ವಕೋಶ ಶಿವತತ್ತ್ವರತ್ನಾಕರ ಗ್ರಂಥದ ಆರನೆಯ ಕಲ್ಲೋಲದ ಹತ್ತನೆಯ ತರಂಗದಲ್ಲಿ ಶ್ಲೋಕ ಸಂಖ್ಯೆ ೮೨ದಿಂದಾರಭ್ಯ ೧೩೫ ಶ್ಲೋಕದ ಪರ್ಯಂತ ಭೂಮಿಯಲ್ಲಿನ ಜಲೋತ್ಪತ್ತಿ ಚಿನ್ಹೆಗಳನ್ನು ವಿವರಿಸಲಾಗಿದೆ. ವಿಶೇಷವಾಗಿ ಹುತ್ತದ ಸುತ್ತಮುತ್ತ ಜಲೋತ್ಪತ್ತಿಯ ಕೇಂದ್ರವಾಗಿರುತ್ತ ವೆಂದು ತಿಳಿಯಲಾಗಿದೆ. ಪ್ರಾಚೀನರು ಅನುಸರಿಸುತ್ತಿದ್ದ ಜೀವನ ವಿಧಾನಗಳೆಲ್ಲವೂ ಮೌಢ್ಯವೆಂಬ ಉದಾಸೀನಭಾವದಿಂದ ತುರ್ತಾಗಿ ಹೊರಬರಬೇಕಾಗಿದೆ. ಈ ವಿಚಾರವಾಗಿ ಅಧುನಿಕ ವಿಜ್ಞಾನಿಗಳು ಹೆಚ್ಚಿನ ಸಂಶೋಧನೆಗಳನ್ನು ಹಮ್ಮಿಕೊಳ್ಳುವಂತಾಗಲು ಸರಕಾರಗಳು ಮತ್ತು ಖಾಸಗಿ ಸಂಸ್ಥೆಗಳು ಮುಂದಾಗಬೇಕಾಗಿದೆ. ನಮ್ಮ ಪೂರ್ವಿಕರು ಕಂಡುಕೊಂಡ ವಿವಿಧ ನಮೂನೆಯ ಜಲಮೂಲಗಳೆಂದರೆ–

ಬಾಗಿಲಿಲ್ಲದ್ದು ಬಾವಿ, ಒಂದೇ ಬಾಗಿಲಿದ್ದರೆ ವಾಪಿ, ಅನೇಕ ಬಾಗಿಲುಗಳಿದ್ದರೆ ಪುಷ್ಕರಣಿಯೆಂದು, ಅದು ಉದ್ದವಾಗಿದ್ದರೆ ದೀರ್ಘಿಕಾವೆಂದು, ಹಣಿದ ತಿಳಿಯಲ್ಲದ ನೀರಿನ ಸಂಗ್ರಹಕ್ಕೆ ಹಳ್ಳಕೊಳ್ಳಗಳೆಂದು ಕರೆಯಲಾಗುತ್ತದೆ. ಇಂತಹ ಜಲಸಂಗ್ರಾಹಕಗಳ ನಿರ್ಮಾಣ ಹಂತದಲ್ಲಿ ಎದುರಾಗುವ ಬಂಡೆಗಳ ನಿರ್ಮೂಲನೆಗೆ ಅನೇಕ ತಂತ್ರಗಳನ್ನು ಅನುಸರಿಸುತಿದ್ದರು. ಅವುಗಳಲ್ಲಿನ ಒಂದು ಕ್ರಮವೆಂದರೆ–

ಎದುರಾದ ಶಿಲಾಪದರಕ್ಕೆ ರಂಧ್ರವನ್ನು ಕೊರೆದು ಅದರೊಳಗೆ ಕುದಿಸಿದ ಗಂಜಿ ಮತ್ತು ಸುರೆಯ ಮಿಶ್ರಣವನ್ನು ತುಂಬಿ ಬೋರೆಹಣ್ಣಿನಿಂದ ಆರಂಧ್ರವನ್ನು ಮುಚ್ಚಬೇಕು. ಈ ದ್ರಾವಣವನ್ನು ಏಳು ದಿನಗಳ ಪರ್ಯಂತ ಶಿಲಾಪದರದ ಮೇಲೆ ಬೆಂಕಿಯನ್ನು ಹಾಕಿ ಕುದಿಯುವಂತೆ ಮಾಡಬೇಕು. ಆನಂತರ ಆ ಶಿಲಾಪದರದ ಮೇಲೆ ನೀರನ್ನು ಚಿಮುಕಿಸಿದರೆ ಶಿಲಾಪದರವು ಭಗ್ನವಾಗುವುದನ್ನು ಕಾಣಬಹುದಾಗಿರುತ್ತದೆ. ಶಿಲಾಪದರಗಳನ್ನು ಒಡೆಯುವ ಪರಿಸರಸ್ನೇಹಿ ಈ ಕ್ರಮಕ್ಕೂ ಇಂದಿನ ಡೈನೊಮೈಟ್ ಸಂಸ್ಕೃತಿಗೂ ನಡುವಿನ ವ್ಯತ್ಯಾಸಗಳನ್ನು ಒಮ್ಮೆ ಪರಿಶೀಲಿಸಿ. ಅಂದೂ ಸುರೆಯನ್ನು ತಯಾರಿಸಲಾಗುತಿತ್ತು ಆದರೆ ಅದರ ಬಳಕೆ ಕ್ಷೇತ್ರ ಚಟುವಟಿಕೆಗಳಿಗೆ ಮೀಸಲಾಗಿತ್ತು.

**೩.೦ ಉಪವನದ ಕೃಷಿ:** ಉಪವನಕ್ಕೆ ಜಲಪೂರೈಕೆಯ ವ್ಯವಸ್ಥೆಯ ನಂತರ, ಭೂಮಿಯ ವಿವಿಧ ಮಾದರಿ ಗುಣಗಳ ಜ್ಞಾನ ಅವಶ್ಯಕ. ಭೂಮಿಯು ಪ್ರಾಕೃತಿಕವಾಗಿ ಗುಣ, ಬಣ್ಣ ಮತ್ತು ರುಚಿಗಳಿಂದ ವೈವಿಧ್ಯದಿಂದ ಕೂಡಿರುತ್ತದೆ.

ಜಾಂಗಲವೆಂದರೆ ಖುಷ್ಕಿ, ಬೆಟ್ಟು, ಕಾಡುಪ್ರದೇಶವೆಂದು ಕರೆಯುತ್ತಾರೆ. ಇಂತಹ ಭೂಮಿ ನುಗ್ಗೆ, ಅಶೋಕ, ಬನ್ನಿ, ಬೇವು ತೇಗ ಮುಂತಾದವುಗಳನ್ನು ಬೆಳೆಸಲು ಸೂಕ್ತವಾಗಿರುತ್ತದೆ. ಅನೂಪವೆಂದರೆ ಜೌಗು, ಸವಳು, ಲವಣಯುಕ್ತಪ್ರದೇಶವೆಂದು ಕರೆಯುತ್ತಾರೆ. ಹಲಸು ಬಿದಿರು ಮಾವು ಇತ್ಯಾದಿ ಮರಗಳನ್ನು ಬೆಳೆಸಲು ಸೂಕ್ತವಾಗಿರತ್ತದೆ. ಸಾಮಾನ್ಯವೆಂದರೆ ಎಲ್ಲಾಬಗೆಯ ಬೆಳೆಗಳನ್ನೂ ಬೆಳೆಯಬಹುದಾದ ಭೂಮಿಯಾಗಿರುತ್ತದೆ. ಈ ಪ್ರದೇಶಗಳಲ್ಲಿ ಮಾದಳ, ಜಾಯಿಕಾಯಿ, ದಾಳಿಂಬೆ, ಬೇಲ ಮುಂತಾದವುಗಳನ್ನು ಸಮೃದ್ಧಿಯಾಗಿ ಬೆಳೆಯಬಹುದು.

ಬಣ್ಣಗಳ ಆಧಾರದನ್ವಯ ಭೂಮಿಯುನ್ನು ಆರು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳು ಕಪ್ಪು, ಕೆಂಪು, ಹಳದಿ, ಬೂದು, ಬಿಳಿ, ಮತ್ತು ಮಾಸಲುಬಿಳಿ ಎಂಬುದಾಗಿರುತ್ತವೆ. ಬಹುದಿನಗಳವರೆಗೆ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿರುವ ಕಪ್ಪು ಮತ್ತು ಕೆಂಪುಬಣ್ಣದ ಭೂಮಿಗಳು ಉತ್ಕೃಷ್ಟವೆಂದು ತಿಳಿಯಲಾಗಿದೆ.

ISSN 2249 - 5754 VIJNANA KANNADA (PRINT)


ಮಣ್ಣಿನಲ್ಲಿರುವ ವಿವಿಧ ರುಚಿಗನುಗುಣವಾಗಿ ಆರು ಬಗೆಯಾಗಿರುತ್ತವೆ. ಸಿಹಿ, ಕಹಿ, ಸಪ್ಪೆ ಖಾರ, ಲವಣ, ಮತ್ತು ಒಗರು. ಈ ರೀತಿಯ ವೈವಿಧ್ಯತೆಯನ್ನು ನಮ್ಮ ಪೂರ್ವಿಕರು ಹೀಗೆ ಗುರುತಿಸಿದ್ದಾರೆ.–

ಉಪವನ ಕೃಷಿಗೆ ಸಸ್ಯೋತ್ಪತ್ತಿ ಹಾಗೂ ಬೀಜೋಪಚಾರ ಕ್ರಮಗಳ ಜ್ಞಾನವು ಅವಶ್ಯಕ.

**೩.೧ ಸಸ್ಯೋತ್ಪತ್ತಿ ಕ್ರಮ:** ಉಪವನಕ್ಕಾಗಿ ಸಸ್ಯೋತ್ಪತ್ತಿ ಕ್ರಮದ eÁÕÀÄÀCvÀÄvÀC ªÀÄaÁVgÀÄvÀÛ ¸ÀÄ¸À¸ÀÄ¸ÀÄ ಮೂರು ವಿಧಗಳಲ್ಲಿ ಉತ್ಪತ್ತಿ ಮಾಡಿಕೊಳ್ಳಬಹುದು. ೧) ಬೀಜ, ೨) ಕಾಂಡ ಮತ್ತು ೩) ಗೆಡ್ಡೆಯಿಂದ ಉತ್ಪತ್ತಿಯಾಗುತ್ತವೆ.

೧)ಬೀಜದಿಂದ ಹುಟ್ಟುವ ಸಸ್ಯಗಳು–ನೇರಳೆ, ಸಂಪಿಗೆ, ಬೇವು, ಮಾವು, ಹಲಸು ಮುಂತಾದವು.

೨)ಕಾಂಡದಿಂದ ಹುಟ್ಟುವ ಸಸ್ಯಗಳು– ನಂದಿಬಟ್ಟಲು, ಮಲ್ಲಿಗೆ, ಲಕ್ಕಿಗಿಡ, ವಿಳ್ಳೆದೆಲೆ ಮುಂತಾದವು.

(ಬೀಜ ಮತ್ತು ಕಾಂಡಗಳೆರಡರಿಂದಲೂ ಪಾಟಲ, ದಾಳಿಂಬೆ, ಅತ್ತಿ, ಆಲಾದಿಗಳು ಹುಟ್ಟಬಲ್ಲವು.)

೩)ಗೆಡ್ಡೆಗಳಿಂದ ಹುಟ್ಟುವ ಸಸ್ಯಗಳು– ಗೆಣಸು, ಏಲಕ್ಕಿ, ತಾವರೆ, ಮುಂತಾದವು (ಬೀಜಗಳಿಂದಲೂ ಸಾಧ್ಯ)

**೩.೨ ಬೀಜೋಪಚಾರ :** ಸಸ್ಯೋತ್ಪಾದನೆಯ ಕಾರ್ಯದಲ್ಲಿ [೫]ಬೀಜಗಳ ನಿರ್ವಹಣೆಯು ಒಂದು ಮಹತ್ತರವಾದ ಘಟ್ಟ. ಚನ್ನಾಗಿ ಮಾಗಿದ ಹಣ್ಣುಗಳನ್ನು ಒಣಗಿಸಿ ಉತ್ತಮವಾದ ಬೀಜಗಳನ್ನುಸಂಗ್ರಹಿಸಬೇಕು . ಅಂತಹ ಬೀಜಗಳನ್ನು ಹಾಲು ಇಲ್ಲವೆ ನೀರಿನಲ್ಲಿ ನೆನೆಸಿ ಐದು ದಿನಗಳ ಪರ್ಯಂತವಾಗಿ ನೆರಳಿನಲ್ಲಿ ಒಣಗಿಸಿದ ನಂತರ ಕ್ರಿಮಿಬಾಧೆ ನಿವಾರಣೆಗಾಗಿ ತುಪ್ಪ ಮತ್ತು ವಾಯುವಿಳಂಗದ ಮಿಶ್ರಣದಿಂದ ಧೂಪೋಪಚಾರ ನೀಡಬೇಕು. ಶೀಘ್ರವಾಗಿ ಮೊಳಕೆಯೊಡೆಯಲು ಬೀಜವನ್ನು ಹಾಲಿನಲ್ಲಿ ನೆನೆಸಿ ಮತ್ತೆ ಐದು ದಿನಗಳ ಪರ್ಯಂತ ನೆರಳಿನಲ್ಲಿ ಒಣಗಿಸಿ ಎಳ್ಳಿನಿಂದ ತಯಾರಿಸಿದ ಬೂದಿ, ತುಪ್ಪ, ಹಾಗೂ ಸಗಣಿಯಿಂದ ಸವರಿ ಕೊಬ್ಬಿನ ಧೂಪೋಪಚಾರ ನಡೆಸಬೇಕು. ಇಷ್ಟಾದ ನಂತರ ಜೇನುತುಪ್ಪದೊಂದಿಗೆ ವಾಯುವಿಳಂಗದ ಪುಡಿಯನ್ನು ಪೂಸಿ ಹದ ಮಾಡಿದ ಬೀಜಗಳನ್ನು ಪಾತಿಯಲ್ಲಿ ಹಾಕಬಹುದು. ಪಾತಿಯು ಮಳೆ, ಗಾಳಿ, ಬಿಸಿಲಿಗೆ ಈಡಾಗದಂತೆ ಒಣಗಿದ ಹುಲ್ಲು ಇಲ್ಲವೆ ಎಲೆಗಳಿಂದ ಹೊದಿಸಲ್ಪಡಬೇಕು. ನಿತ್ಯವೂ ಬೆಳಿಗ್ಗೆ ಮತ್ತು ಸಂಜೆ ನೀರನ್ನು ಚಿಮುಕಿಸಿ ಪಾತಿಯ ಆರ್ದ್ರತೆಯನ್ನು ಕಾಪಾಡಿಕೊಳ್ಳಬೇಕು. ಆರೈಕೆಯಿಂದ ಪುಷ್ಕಳವಾದ ಸಸಿಗಳು ಉದ್ದೇಶಿತ ಸ್ಥಳಗಳಲ್ಲಿ ನೆಡಲು ಯೋಗ್ಯವಾಗಿರುತ್ತವೆ.

**೩.೩ ಸಸ್ಯಸಂರಕ್ಷಣೆ:** ಭಾರತ ದೇಶವು ಪ್ರಾಚೀನ ಜ್ಞಾನ, ವಿಜ್ಞಾನ, ಹಸ್ತಪ್ರತಿ, ವೈದ್ಯಕೀಯ, ವಾಸ್ತುಶಿಲ್ಪ, ಇತಿಹಾಸ ಮುಂತಾದವುಗಳಂತೆ ಸಸ್ಯಸಂಪತ್ತಿಗೂ ಪ್ರಸಿದ್ಧಿಯಾಗಿದೆ. ಉಪವನಗಳಲ್ಲಿ ಬೆಳೆಸುವ ಸಸ್ಯವರ್ಗವನ್ನು ಮುಖ್ಯವಾಗಿ ನಾಲ್ಕು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳನ್ನು ವನಸ್ಪತಿ, ದ್ರುಮ, ಲತೆ ಹಾಗೂ ಗುಲ್ಮವೆನ್ನಲಾಗುತ್ತದೆ. ೧)[೬]ವನಸ್ಪತಿಗಳೆಂದರೆ ಗಾತ್ರದಲ್ಲಿ ದೊಡ್ಡದಾಗಿಯೂ, ಇವುಗಳು ಪುಷ್ಪವಿಲ್ಲದೆ ಫಲಗಳನ್ನು ಕೊಡುವ ಮರಗಳಾಗಿರುತ್ತವೆ. ೨) ದ್ರುಮಗಳೆಂದರೆ ಮಧ್ಯಮ ಗಾತ್ರದ ಮರಗಳಾಗಿದ್ದು ಹೂಗಳೊಂದಿಗೆ ಫಲವನ್ನು ಬಿಡುವಂತಹವು. ೩)ಲತೆಗಳೆಂದರೆ ಮರಗಳ ಆಶ್ರಯದಲ್ಲಿ ಹರಡಿಕೊಂಡು ಬೆಳೆಯುವ ಸಸ್ಯವರ್ಗಗಳಾಗಿರುತ್ತವೆ. ೪)ಗುಲ್ಮಗಳೆಂದರೆ ಪೊದೆಯಾಕಾರದಲ್ಲಿ ಅನೇಕ ರೆಂಬೆಕೊಂಬೆಗಳಿಂದ ಬೆಳೆಯುವ ಸಸ್ಯಸಂಕುಲವಾಗಿರುತ್ತವೆ.

ಪಾತಿಯಲ್ಲಿ ಬೆಳೆಸಿದ ಗಿಡಗಳನ್ನು ಮೇಲೆ ತಿಳಿಸಿದ ಸಸ್ಯಗಳ ಪ್ರಕಾರಗಳಿಗನುಣವಾಗಿ ನಿರ್ದಿಷ್ಟ ಅಂತರ ಹಾಗೂ ಗೊತ್ತಾದ ಸ್ಥಳದಲ್ಲಿ ಎರಡು ವರ್ಷಗಳ ವರೆಗೆ ಜಾಗ್ರತೆಯಿಂದ ಗಮನಿಸಬೇಕು. ಅಂದಿನ ದಿನಗಳಲ್ಲಿ ಹುಳುಹಪ್ಪಟೆಗಳಿಂದುಂಟಾಗುವ ಉಪದ್ರವವನ್ನು ನಿವಾರಿಸಲು ಸಿಡಿಲು ಬಡಿದ ಮರದಿಂದ ತಯಾರಿಸಿದ ಬೂದಿಯನ್ನು ಎಲೆಗಳ ಮೇಲೆ ಎರಚುವ [೭]ಸಾಂಪ್ರದಾಯಿಕ ವೃಕ್ಷಸಂರಕ್ಷಣಾ ಕ್ರಮವಾಗಿ ಅನುಸರಿಸುತ್ತಿದ್ದರು. ದುರದೃಷ್ಟವಶಾತ್ ಇಂದಿನ ದಿನಗಳಲ್ಲಿ ಅವ್ಯಾಹತ ವಾಗಿ ರಾಸಾಯನಿಕಗಳನ್ನು ಬಳಸಲಾಗುತ್ತಿದೆ. ಇದರಿಂದ ಮಾನವರ ಆರೋಗ್ಯದ ಮೇಲುಂಟಾಗುವ ಪರಿಣಾಮಗಳು ಕಲ್ಪನೆಗೂ ಅತೀತವಾಗಿರು ತ್ತದೆ. 'ದೋಹದಕಾರ್ಯ'

ಮತ್ತೊಂದು ವೃಕ್ಷಸಂರಕ್ಷಣಾಕಮವಾಗಿರುತ್ತದೆ. ಇದನ್ನು ಹಲವು ಸಂಸ್ಕೃತ ನಾಟಕಗಳಲ್ಲೂ ಗಮನಿಸಬಹುದಾಗಿದೆ.

ಈ ಶ್ಲೋಕದಲ್ಲಿ ಉಪವನದಲ್ಲಿನ ವೃಕ್ಷಗಳು ಸೂಕ್ತ ಕಾಲದಲ್ಲಿ ಪುಷ್ಪಿತವಾಗುವಂತೆ ಯೋಜಿಸಲಾಗಿದೆ. ಶ್ರೀಹರ್ಷನ ನೈಷಧೀಯಚರಿತಮ್ ಪ್ರಥಮ ಸರ್ಗದ ಎಂಭತ್ತೊಂದನೆಯ ಶ್ಲೋಕದಲ್ಲಿ ಉಪವನದಲ್ಲಿನ ದಾಳಿಂಬೆಯ ಅಕಾಲಫಲಪ್ರಾಪ್ತಿಗಾಗಿ ಯೋಜಿಸಲಾಗಿದೆ. ಇದು ಕೇವಲ ಕವಿಸಮಯದ ಅಂಗಕ್ಕಾಗಿಯೋ ಅಥವಾ ತಥ್ಯವೇನಾದರೋ ಇದೆಯೋ ಎಂಬುದರ ಬಗ್ಗೆ ಸಂಶೋಧನೆಯಾಗ ಬೇಕಿದೆ.

**೪.೦ ಉಪವನದ ಮಹತ್ತ್ವ :** ಪರಿಸರದ ಸಮತೋಲನವನ್ನು ಕಾಪಾಡಿಕೊಳ್ಳಲು ಸಸ್ಯಗಳು ಮಹತ್ತರ ಪಾತ್ರವನ್ನು ವಹಿಸುತ್ತವೆ. ಭಾರತೀಯ ಜೀವವಿಜ್ಞಾನದನ್ವಯ ಸಸ್ಯಗಳಿಗೆ ಸಜೀವ ಮತ್ತು ಚಲನಶೀಲ ಲಕ್ಷಣಗಳ ಜೊತೆಗೆ ರೂಪ, ರಸ, ಗಂಧ, ಶಬ್ದ ಮತ್ತು ಸ್ಪರ್ಶ(ತನ್ಮಾತ್ರ)ಜ್ಞಾನಗಳೂ ಇವೆ ಎಂಬ ವಾದವನ್ನು ಪುಷ್ಟೀಕರಿಸಲು [೮]ಭೃಗು ಮತ್ತು ಭಾರದ್ವಾಜ ಮಹರ್ಷಿಗಳ ಸಂವಾದದಿಂದ ತಿಳಿಯಬಹುದಾಗಿದೆ. ಸಸ್ಯಗಳು ತಮ್ಮ ಹಬ್ಬುವ ಲಕ್ಷಣದಿಂದ ರೂಪಜ್ಞಾನವೂ, ಕ್ಷಾರಾದಿ ಜಲರುಚಿಗಳಿಂದ ಬೆಳವಣಿಗೆಯಲ್ಲುಂಟಾ ಗುವ ವ್ಯತ್ಯಯಕ್ಕೆ ರಸಜ್ಞಾನವೂ, ಪತ್ರ, ಪುಷ್ಪಗಳ ವಿಶಿಷ್ಟ ಸುವಾಸನೆಗಳಿಂದ ಗಂಧಜ್ಞಾನವೂ, ಇವು ಮಾರುತ ಹಾಗೂ ಗುಡುಗಿಗೆ ನಾಶವಾಗುವುದರಿಂದ ಶಬ್ದಜ್ಞಾನವೂ, ಉಷ್ಣತೆಗೆ ಬಾಡುವುದರಿಂದ ಸ್ಪರ್ಶಜ್ಞಾನವೂ ಇವೆ ಎಂದು ನಿರೂಪಿಸಲ್ಪಟ್ಟಿವೆ.

ಸಮಸ್ತ ಜೀವಿಗಳು ಒಂದಿಲ್ಲೊಂದು ಕಾರಣಕ್ಕೆ ಸಸ್ಯಗಳನ್ನು ಅವಲಂಬಿಸಿವೆ. ಇದರ ಮಹತ್ತ್ವವನ್ನು ಅರಿತ ನಮ್ಮ ಪೂರ್ವಿಕರು ತಮ್ಮ ಸಂತಾನಕ್ಕಿಂತಲೂ ಮಿಗಿಲಾಗಿ ಸಸ್ಯಗಳ ಪೋಷಣೆಗೆ ವಿಶೇಷ ಕಾಳಜಿ ಹೊಂದಿದ್ದರು.

ಒಂದು ಕೊಳ ಹತ್ತು ಬಾವಿಗಳಿಗೂ, ಒಂದು ಕೆರೆ ಹತ್ತು ಕೊಳಗಳಿಗೂ, ಒಬ್ಬ ಮಗ ಹತ್ತು ಕೆರೆಗಳಿಗೂ, ಒಂದು ಮರವು ಹತ್ತು ಮಕ್ಕಳಿಗೂ ಸಮವೆಂದು ಸಾರಿದ್ದಾರೆ. ಉಪವನಗಳನ್ನು ಬಹಳ ಹಿಂದಿನಿಂದ ಇಂದಿನವರೆಗೂ ರಾಜರು, ಸರ್ಕಾರಗಳು, ಸಂಘಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳು ವಿಶೇಷ ಆಸಕ್ತಿಯಿಂದ ವಿಶಾಲವಾದ ಪ್ರದೇಶಗಳಲ್ಲಿ ಪೋಶಿಸುತ್ತಿರುವುದೇ ಇದರ ಜನಪ್ರಿಯತೆಗೆ ಸಾಕ್ಷಿ. ಜನರು ತಮ್ಮ

ಸುಖ ಹಾಗೂ ದುಃಖದ ಸಂದರ್ಭಗಳಲ್ಲಿ ಉಪವನದ ಮೊರೆ ಹೋಗುತ್ತಿದ್ದುದಕ್ಕೆ ಚರಿತ್ರೆಗಳೇ ಪ್ರಮಾಣ. ಸಮಾಜದ ಆಗುಹೋಗುಗಳಿಗೆ ಕಾವ್ಯಗಳೇ ಕನ್ನಡಿ. ಕಾಳಿದಾಸಾದಿ ಕವಿಗಳು ತಮ್ಮ ಕಾವ್ಯಗಳ ಅನೇಕ ಪ್ರಸಂಗಗಳಿಗೆ ಉಪವನಗಳನ್ನು ಸಮರ್ಥವಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

**೪.೧ ವೃಕ್ಷ ಸಂಪತ್ತು :** ಪ್ರಾಚೀನ ಕಾಲದಿಂದಲೂ ನಮ್ಮಲ್ಲಿ ವೃಕ್ಷಸಂಪತ್ತು ಹೇರಳವಾಗಿತ್ತು. [೯]ಚಿತ್ರಕೂಟ ಪರ್ವತದಲ್ಲಿರುವ ಉಪವನದ ವರ್ಣನೆಯನ್ನು ಮಾಡಲಾಗಿದೆ. ವನವಾಸದ ಬೇಸರಿಕೆಯನ್ನು ನೀಗಿಸಲು ಶ್ರೀರಾಮನು ಸೀತೆಗೆ ಆಹ್ಲಾದವನ್ನುಂಟು ಮಾಡಲು ಕಿನ್ನರಕಾಮಿಗಳ ವಿಹಾರಧಾಮಗಳ ಪರಿಚಯ ಮಾಡಿಸುವ ಪ್ರಸಂಗವು ಹಿಗಿದೆ.

ಕಿನ್ನರ ಜೋಡಿಗಳು ತಮ್ಮ ಸಮಾಗಮವನ್ನು ಪತ್ರಪುಷ್ಪಶಯ್ಯೆಗಳಲ್ಲಿ ಆಚರಿಸಿದ ಕ್ರಮಗಳೊಂದಿಗೆ ಯಥೇಚ್ಛವಾಗಿ ಹಣ್ಣುಗಳನ್ನು ಅಲ್ಲಲ್ಲಿ ಕಚ್ಚಿ ಎಸೆಯಲಾಗಿತ್ತೆಂದು ವರ್ಣಿಸಲಾಗಿದೆ.. ಇದರಿಂದ [೧೦]ಚಿತ್ರಕೂಟದ ಉಪವನವು ಕುಬೇರನ ಅಲಕಾಪಟ್ಟಣದ ಉಪವನಕ್ಕಿಂತಲೂ, ಇಂದ್ರನ ಅಮರಾವತಿಯ ಉಪವನಕ್ಕಿಂತಲೂ ಸಂಪದ್ಭರಿತವಾಗಿತ್ತೆಂದು ಉಲ್ಲೇಖಿತವಾಗಿದೆ.

**೫.೦ ಉಪಸಂಹಾರ :** ಇಂದು ಕೊಳವೆ ಬಾವಿಗಳು ಮುಖ್ಯವಾದ ಜಲಸಂಪನ್ಮೂಲಗಳಾಗಿವೆ. ಕ್ರಮೇಣವಾಗಿ ಇವೂ ಕೂಡ ನಿರುಪಯುಕ್ತವಾಗುತ್ತಿವೆ. ಸಾಲಗಾರರ ಉಪದ್ರವದಿಂದ ಮಾನಸಿಕವಾಗಿ ಹತಾಶರಾಗಿ ಅಂತಹ ಬಾವಿಗಳನ್ನು ಮುಚ್ಚಿಸುವುದರಲ್ಲಿಯೂ ಉದಾಸೀನರಾಗಿ ಕೊನೆಯಲ್ಲಿ ಮಕ್ಕಳ ದುರ್ಮರಣಕ್ಕೆ ಸಾಕ್ಷಿಗಳಾಗಿರುವುದನ್ನು ಕಾಣುತ್ತಿದ್ದೇವೆ. ಇನ್ನೊಂದು ವಿಚಾರವೆಂದರೆ, ಖಚಿತವಾದ ಜಲನಾಡಿಯನ್ನರಿಯಲು ಹಾಗೂ ದೋಹ'ದ ಕಾರ್ಯಗಳ ಬಗೆಗೆ ಈ ಪ್ರಬಂಧದಲ್ಲಿ ಉಕ್ತವಾದ ವಿಚಾರಗಳತ್ತ ಇಂದಿನ ವಿಜ್ಞಾನಿಗಳು ಹಾಗೂ ಸರಕಾರಗಳು ಗಮನಿಸಬೇಕಾಗಿದೆ. ಶಿಲಾಪದರಗಳ ಭಗ್ನಕ್ಕಾಗಿ ಉಪಯೋಗಿಸುತ್ತಿದ್ದ ಸುರೆಯನ್ನು ಇಂದು ಮಾದಕದ್ರವ್ಯವಾಗಿಯೂ ಮತ್ತು ಸಸ್ಯಗಳ ಕೀಟ ನಿರ್ವಹಣೆಗಾಗಿ ರಾಸಾಯನಿಕ ಪದಾರ್ಥಗಳು ಯಥೇಚ್ಛವಾಗಿ ಉಪಯೋಗವಾಗುತ್ತಿರುವುದು ಶೋಚನೀಯ ವಿಚಾರವಾಗಿದೆ.

ನಮ್ಮ ಪ್ರಾಚೀನರ ದೃಷ್ಟಿಯಲ್ಲಿ ಉಪವನಗಳೆಂದರೆ ಕೇವಲ ಮನರಂಜನೆಯ ತಾಣಗಳಾಗಿರದೆ ವಿವಿಧ ಬಗೆಯ ಸಸ್ಯಗಳ ಪ್ರಯೋಗ ಶಾಲೆಗಳಾಗಿದ್ದವೆಂದು ತಿಳಿಯಬಹುದಾಗಿದೆ. ಇಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳೂ ಜನಸಾಮಾನ್ಯರು ಕೂಡ ಎಚ್ಚರಿಕೆಯಿಂದ ಗಮನಿಸುತ್ತಿದ್ದರು. ಹಾಗಾಗಿ ಉಪವನದ ಕೃಷಿಯು ಅತ್ಯಂತ ಶ್ರದ್ಧೆ ಹಾಗೂ ಜವಾಬ್ದಾರಿಯಿಂದ ನಿರ್ವಹಣೆಯಾಗುತ್ತಿತ್ತು. ಅಂದಿನ ಎಲ್ಲ ಕೃಷಿ ಚಟುವಟಿಕೆಗಳು ಸೈದ್ಧಾಂತಿಕ ಆಧಾರದ ಹಿನ್ನಲೆಯಲ್ಲಿ ನಡೆಯುತ್ತಿದ್ದವು. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಬೇಸಾಯದ ಕಾರ್ಯಗಳಿಗೆ ಪರಿಕರಗಳನ್ನು ನೈಸರ್ಗಿಕಮೂಲಗಳಿಂದ ಒದಗಿಸಿಕೊಳ್ಳುತ್ತಿದ್ದುದು. ಕಲುಷಿತಗೊಂಡಿರುವ ಇಂದಿನ ಕೃಷಿ ಚಟುವಟಿಕೆಗಳಿಗೆ ಪರಿಹಾರೋಪಾಯವಾಗಿ ಈ ಸಂಶೋಧನಾಕೃತಿಯು ಸಾರ್ಥಕವಾದೀತೆಂದು ಆಶಿಸುತ್ತೇನೆ.

**೬.೦ ಗ್ರಂಥ ಋಣ**

1.ಶಿವತತ್ತ್ವರತ್ನಾಕರ :–ಪ್ರಾಚ್ಯ ವಿದ್ಯಾಷಸಂಃಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ 1964.

6.ಶಿವತತ್ತ್ವರತ್ನಾಕರ :– ಸಂ. ಪ್ರೊ. ಮಲ್ಲೇಪುರಂ ಜಿ ವೆಂಕಟೇಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ವಿದ್ಯಾರಣ್ಯಪುರ, ಕಮಲಾಪುರ,

೨. ಶ್ರೀಮದ್ವಾಲ್ಮೀಕಿರಾಮಯಣಮ್:– ಭಾರತದರ್ಶನ– ಮುದ್ರಕರು ಮತ್ತು ಪ್ರಕಾಶಕರು ಬೆಂಗಳೂರು

೩. ಮಾಲವಿಕಾಗ್ನಿಮಿತ್ರಮ್ ಆಫ್ ಕಾಳಿದಾಸ:– ಚೌಕಾಂಬ ಸಂಸ್ಕೃತ ಪ್ರತಿಷ್ಠಾನ ದೆಹಲಿ

4. ಅಮರಕೋಶ– ಅಮರಸಿಂಹ, ಟಿ.ಎನ್.ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್ ಬೆಂಗಳೂರು.

5. ಶಬ್ದಾರ್ಥಕೌಸ್ತುಭ– ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ– ಬಾಪ್ಕೋ ಪ್ರಕಾಶನ–ಬೆಂಗಳೂರು ಪ್ರೆಸ್, ಬೆಂಗಳೂರು.

[1] ಯಾಸ್ಕನಿರುಕ್ತಮ್ ಪ್ರಥಮ ಕಾಂಡ, ಪ್ರಥಮ ಪಾದ.

[2] ಶಬ್ದಾರ್ಥಕೌಸ್ತುಭ ಸಂಪುಟ–೧, ಪುಟ ಸಂಖ್ಯೆ–೪೬೧

[3] ಇದು ಒಂದು ಸಂಸ್ಕೃತ ವಿಶ್ವಕೋಶ ಎರಡು ಸಂಪುಟಗಳಿವೆ

[4] ಅದೇ.., ಶ್ಲೋಕ ಸಂಖ್ಯೆ ೨೮ರಿಂದ ೩೩ನೆಯ ಶ್ಲೋಕದವರೆಗೆ

[5] ಶಿವರತ್ತ್ವರತ್ನಾಕರ ೬–೧೦–ಶ್ಲೋಕ ಸಂಖ್ಯೆ ೩೫ರಿಂದ ೩೮ನೆಯ ಶ್ಲೋಕದವರೆಗೆ

[6] ಅಮರಕೋಶ ದ್ವಿತಿಯಕಾಂಡ ವನೌಷಧಿವರ್ಗ ಶ್ಲೋಕ ಸಂಖ್ಯೆ–೫೫: ಶಿವತತ್ತ್ವರತ್ನಾಕರ ೬–೧೦–೨೮

[7] ಶಿವರತ್ತ್ವರತ್ನಾಕರ ೬–೧೦–ಶ್ಲೋಕ ಸಂಖ್ಯೆ ೬೨

[8] ಮಹಾಭಾರತ–ಶಾಂತಿಪರ್ವ, ಅಧ್ಯಾಯ ೧೮೪,ಶ್ಲೋಕ ಸಂಖ್ಯೆ ೧೧–೧೫

[9] ವಾಲ್ಮೀಕಿ ರಾಮಾಯಣ, ಅಯೋಧ್ಯಾಕಾಂಡ, ೯೪ನೆಯ ಸರ್ಗ ಶ್ಲೋಕ ಸಂಖ್ಯೆ ೮–೧೧

[10] ಅಯೋಧ್ಯಾಕಾಂಡ ೯೪–೨೫

## ಸುಸ್ಥಿರ ಕೃಷಿಯಲ್ಲಿ ದೂರ ಸಂವೇದಿ ಉಪಗ್ರಹಗಳ ಪಾತ್ರ

**ಯು. ಕೆ. ಶಾನವಾಡ *, ಎನ್. ಎಲ್. ರಾಜೇಶ್**, ಕೆ. ಅಶೋಕರೆಡ್ಡಿ *** ಹಾಗೂ ಡಿ. ಕೆ. ಪ್ರಭುರಾಜ ******

* ವಿಜ್ಞಾನಿ (ಬೇಸಾಯ ಶಾಸ್ತ್ರ), ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ** ಸಹಾಯಕ ಪ್ರಾಧ್ಯಪಕರು (ಮಣ್ಣು ವಿಜ್ಞಾನ ವಿಭಾಗ), ಕೃಷಿ ವಿಶ್ವವಿದ್ಯಾಲಯ, ರಾಯಚೂರು 584 104. *** ವಿಜ್ಞಾನಿ, **** ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಉಪಗ್ರಹಗಳ ಮಾಹಿತಿ ಅನ್ವಯಿಕ ಕೇಂದ್ರ, ಬೆಂಗಳೂರು 584 104. *ಈ ಮೇಲ್: shanwar@gmail.com, **ಈ ಮೇಲ್: karunadu@gmail.com , ***ಈ ಮೇಲ್: ashokaksac@rediffmail.com, ****ಈ ಮೇಲ್: : ksrsac_gok@yahoo.co.in

21 ನೆಯ ಶತಮಾನದಲ್ಲಿ ತೀವ್ರಗತಿಯ ಬದಲಾವಣೆಗಳೊಂದಿಗೆ ದಾಪುಗಾಲು ಹಾಕುತ್ತಿರುವ ಇಂದಿನ ವಿನೂತನ ವಿಶ್ವ ಹಲವಾರು

ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪನ್ನು ಒತ್ತಿದೆ. ಇದಕ್ಕೆ ವಿಜ್ಞಾನ ಕ್ಷೇತ್ರ ಹೊರತಲ್ಲ. ಈ ವಿಜ್ಞಾನ ಕ್ಷೇತ್ರದಲ್ಲಿ ಕೃಷಿ ಹಾಗೂ ಬಾಹ್ಯಾಕಾಶ ಕ್ಷೇತ್ರಗಳು ಇತರ ಕ್ಷೇತ್ರಗಳಿಗಿಂತ ವಿಭಿನ್ನ ರೀತಿಯಲ್ಲಿ ಸಾಧನೆ ಮಾಡಿ ತಮ್ಮ ಕೀರ್ತಿ ಪತಾಕಿಯನ್ನು ಹಾರಿಸಿವೆ. ಒಂದು ನಿರ್ದಿಷ್ಠ ಪ್ರದೇಶದ ಸಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯು ಅಲ್ಲಿಯ ಪರಿಮಿತ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ ಮತ್ತು ಸಸ್ಯಗಳು ವೃದ್ಧಿಸುತ್ತಿರುವ ಜನರ ಅವಶ್ಯಕತೆಗಳನ್ನು ಪೂರೈಸಲು ಹೆಚ್ಚು ಪ್ರಯತ್ನಿಸುತ್ತಿವೆ. ಜೊತೆಗೆ ಸಂಪನ್ಮೂಲಗಳ ಅಸಮರ್ಪಕ ನಿರ್ವಹಣೆ ಮತ್ತು ಅತಿಯಾದ ಬಳಕೆಯಿಂದ ಪರಿಸರದ ಮೇಲೂ ದುಷ್ಪರಿಣಾಮ ಬೀರುತ್ತಿರುವದನ್ನು ಹಿಂದೆಂದಿಗಿಂತಲೂ ಇಂದು ಹೆಚ್ಚು ಕಾಣುತ್ತಿದ್ದೇವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯಗಳೆಂದರೆ ಭೂಸವಕಳಿ ತಡೆಗಟ್ಟವುದು ಶಿಥಿಲವಾದ, ಕೃಷಿಗೆ ಯೋಗ್ಯವಲ್ಲದ ಜಮೀನುಗಳನ್ನು ಕೃಷಿಗೆ ಯೋಗ್ಯವಾಗಿಸುವುದು ಮತ್ತು ಈಗಾಗಲೇ ಕೃಷಿಯಲ್ಲಿ ಅಳವಡಿಸಿರುವ ಜಮೀನಿನಲ್ಲಿ ಕೃಷಿ ಚಟುವಟಿಕೆಗಳನ್ನು ತೀವ್ರಗೊಳಿಸುವುದು. ಇದರಿಂದ ಕೃಷಿಗೆ ಯೋಗ್ಯವಲ್ಲದ, ಗುಣಮಟ್ಟವಿಲ್ಲದ ಇತರ ಜೀವನಾವಶ್ಯಕ ಕೃಷಿಯೇತರ ಚಟುವಟಿಕೆಗಳಿಗೆ ಉಪಯೋಗಿಸಲು ಸಾಧ್ಯವಾಗುತ್ತದೆ. ಸುಸ್ಥಿರ ಅಭಿವೃದ್ಧಿಗೆ ಸೂಕ್ತ ಪದ್ಧತಿಯೊಂದನ್ನು ಅಭಿವೃದ್ಧಿಪಡಿಸಲು, ಒಂದು ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳು, ಕೈಗೊಂಡ ಸಂರಕ್ಷಣಾ ಕ್ರಮಗಳು, ಈಗಾಗಲೇ ಸತ್ವಹೀನ ಪ್ರದೇಶಗಳಿಗೆ ಬೇಕಾಗುವ ಯೋಗ್ಯ ಪರ್ಯಾಯ ಬೆಳೆಪದ್ಧತಿ ಇತ್ಯಾದಿ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಆ ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ಮತ್ತು ಅವುಗಳ ಬಳಕೆಯ ಮಟ್ಟದ ಬಗ್ಗೆ ಸಮಗ್ರ ಮಾಹಿತಿ ಅವಶ್ಯ. ಭೂಗರ್ಭಶಾಸ್ತ್ರ, ಪ್ರಾಕೃತಿಕ ಭೂಗೋಳ, ಮಣ್ಣಿನ ಮೇಲ್ಮೈ ಲಕ್ಷಣಗಳು, ಅಂತರ್ಜಲ, ಭೂಬಳಕೆ / ಭೂಹೊದಿಕೆ, ಹವಮಾನ ಅಂಕಿ ಅಂಶಗಳು, ಸಾಮಾಜಿಕ, ಅರ್ಥಿಕ ಮತ್ತು ಮೂಲಭೂತ ಸೌಕರ್ಯಗಳನ್ನು ಒಟ್ಟಾಗಿ ಗಮನಕ್ಕೆ ತೆಗೆದುಕೊಂಡು ಸಮಗ್ರ ಯೋಜನೆಗೆ ಒತ್ತು ಕೊಡಬೇಕು.

ಬಾಹ್ಯಾಕಾಶಾಧಾರಿತ ದೂರಸಂವೇದಿ ತಂತ್ರಜ್ಞಾನವನ್ನು ಬಳಸಿಕೊಂಡು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಹಾಗೂ ಅಭಿವೃದ್ಧಿಪಡಿಸಲು ಭಾರತವು ಭಾರತೀಯ ದೂರಸಂವೇದಿ ಉಪಗ್ರಹ ವ್ಯವಸ್ಥೆಯನ್ನು ಪ್ರಾರಂಭಿಸಿತು. ಇದರ ಅಂಗವಾಗಿ ಐಆರ್‌ಎಸ್–1ಎ ಉಪಗ್ರಹವನ್ನು 1988 ರ ಮಾರ್ಚನಲ್ಲಿ ಉಡಾಯಿಸಲಾಯಿತು. 1995 ರಲ್ಲಿ ಉಡಾವಣೆಗೊಂಡ ಐಆರ್‌ಎಸ್–1ಸಿ ಬಾಹ್ಯಾಕಾಶ ಸಂಬಂಧಿ ಮಾಹಿತಿಯನ್ನು ಒದಗಿಸುವಲ್ಲಿ ಪ್ರಪಂಚದ ಒಂದು ಅತ್ಯುತ್ತಮ ದೂರಸಂವೇದಿ ಉಪಗ್ರಹವೆಂಬ ಕೀರ್ತಿ ಪಡೆದುಕೊಂಡಿತು. ಇದೇ ವಿಧದ ಇನ್ನೊಂದು ಉಪಗ್ರಹ ಐಆರ್‌ಎಸ್–1ಡಿ ಯನ್ನು ಭಾರತವೇ ಅಭಿವೃದ್ಧಿಪಡಿಸಿದ ಉಡಾವಣಾವಾಹನ ಪಿಎಸ್‌ಎಲ್‌ವಿ ಮೂಲಕ ಸೆಪ್ಟೆಂಬರ್–29, 1997 ರಂದು ಹಾರಿಬಿಡಲಾಯಿತು. ಭಾರತದ ಉಡಾವಣಾವಾಹನ ಪಿಎಸ್‌ಎಲ್‌ವಿ ಮೂಲಕ ಉಡಾವಣೆ ಗೊಂಡ ಇನ್ನೊಂದು ಉಪಗ್ರಹ ಐಆರ್‌ಎಸ್–ಸಿ3, ಉಪಗ್ರಹವನ್ನು ಒಳಗೊಂಡ ಐಆರ್‌ಎಸ್ ಪ್ರಣಾಳಿ ಈಗ ಪ್ರಪಂಚದಲ್ಲೇ ಅತಿ ದೊಡ್ಡದಾದ ದೂರಸಂವೇದಿ ಉಪಗ್ರಹಗಳ ಸಮೂಹವಾಗಿದೆ. ನಂತರ ಇನ್ನೂ ಮೂರು ಉಪಗ್ರಹಗಳು ಸಾಗರ ಸಂಪನ್ಮೂಲಗಳ ಸರ್ವೇಕ್ಷಣೆಗಾಗಿ ಐಆರ್‌ಎಸ್–ಸಿ4 ಭೂರೇಖಾ ರಚನೆಗಾಗಿ ನೆರವಾಗಲು ಐಆರ್‌ಎಸ್–ಪಿ5 ಮತ್ತು ಸಂಪನ್ಮೂಲ ಸಮೀಕ್ಷೆಗಾಗಿ ಐಆರ್‌ಎಸ್–ಪಿ6 ಗಳನ್ನು ಹಾರಿಬಿಡಲಾಗಿದೆ. ಅಂತರಿಕ್ಷ ವಿಜ್ಞಾನ, ಇಂದು ಅಪರಿಮಿತ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಆಧುನಿಕ ತಂತ್ರಜ್ಞಾನವಾಗಿ ಪರಿಣಮಿಸುತ್ತಿದೆ. ಆಕಾಶಗರ್ಭದಲ್ಲಿ ಅಡಗಿರುವ ಉಪಗ್ರಹಗಳು "ರವಿ ಕಾಣದ್ದನ್ನು ಕವಿ ಕಂಡ" ಎಂಬಂತೆ ಬರಿಗಣ್ಣಿಗೆ ಗೋಚರಿಸುವ ಭೂಮಿಯ ಮೇಲಿನ (ಭೌಗೋಳಿಕ) ವಿವರಗಳನ್ನೆಲ್ಲ ಕಲೆಹಾಕುವಂತೆ ಭೂಗರ್ಭದೊಳಗೆ ಇಣಕಿ ನೋಡುವ ಅಸಾಧಾರಣ ಕಾರ್ಯವನ್ನೂ ನಿರ್ವಹಿಸುತ್ತಿವೆ. ಮರಳಗಾಡು, ಅರಣ್ಯ, ಬೆಳೆ, ಖನಿಜ ಕ್ಷೇತ್ರಗಳ ವಿವರಗಳನ್ನೊದಗಿಸುತ್ತಿವೆ. ಬಿರುಗಾಳಿ, ಪ್ರವಾಹ, ಚಂಡಮಾರುತಗಳ ಬಗೆಗೆ ಮುನ್ಸೂಚನೆ ಕೊಡುತ್ತಿವೆ. ಆದರೆ ಮೈಕ್ರೊ ತರಂಗ ಗ್ರಾಹಕಗಳಿಂದ ಇನ್ನೂ ಹೆಚ್ಚಿನ ವಿವರಗಳನ್ನು ನಿಖರವಾಗಿ ಸಂಗ್ರಹಿಸಲು ಸಾಧ್ಯ. ಮುಂದಿನ ದೂರಸಂಪರ್ಕ ಉಪಗ್ರಹಗಳಲ್ಲಿ ಈ ಬಗೆಗೆ ವ್ಯವಸ್ಥೆಯಲ್ಲಿ ಕಲ್ಪಿಸುವುದರ ಬಗೆಗೆ ಉದ್ದೇಶಿಸಲಾಗಿದೆ. ಹೀಗೆ ದೂರಗ್ರಹಣ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಬಳಕೆ ದೇಶದ ಕೃಷಿ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡಬಲ್ಲದು.

**ಬಾಹ್ಯಾಕಾಶದ ಹಿನ್ನೆಲೆ:** ರಾಷ್ಟ್ರೀಯ ಬಾಹ್ಯಾಕಾಶ ಕಾರ್ಯಕ್ರಮವನ್ನು ಜೂನ್ 1972 ರಲ್ಲಿ ಬಾಹ್ಯಾಕಾಶ ಆಯೋಗ ಮತ್ತು ಬಾಹ್ಯಾಕಾಶ ಇಲಾಖೆ – ಇವುಗಳನ್ನು ರಚಿಸುವುದರ ಮೂಲಕ ಪ್ರಾರಂಭಿಸಲಾಯಿತು. 1969 ರಲ್ಲಿ ಪ್ರಾರಂಭವಾಗಿ ಅಣುಶಕ್ತಿ ಇಲಾಖೆಯ ಅಧೀನದಲ್ಲಿದ್ದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯನ್ನು ಬಾಹ್ಯಾಕಾಶ ಇಲಾಖೆಯ ಅಧೀನದಲ್ಲಿ ತರಲಾಯಿತು. ಬಾಹ್ಯಾಕಾಶ ಇಲಾಖೆಯ ಮುಖ್ಯ ಉದ್ದೇಶ ದೇಶದ ಸಾಮಾಜಿಕ – ಆರ್ಥಿಕ ಉನ್ನತಿಗಾಗಿ ಬಾಹ್ಯಾಕಾಶ ತಂತ್ರಜ್ಞಾನ ಮತ್ತು ವಿಜ್ಞಾನವನ್ನು ಅಭಿವೃದ್ಧಿಪಡಿಸುವುದಾಗಿದೆ.

ಈ ದಿಶೆಯಲ್ಲಿ ಭಾರತವು ಅಮೇರಿಕಾದ ಉಪಗ್ರಹ ಎಟಿಎಸ್ ಅನ್ನು ಬಳಸಿಕೊಂಡು 1975–77 ರಲ್ಲಿ ಉಪಗ್ರಹ ಶೈಕ್ಷಣಿಕ ದೂರದರ್ಶನ ಪ್ರಯೋಗವನ್ನು (ಸೈಟ್) ಕೈಗೊಂಡಿತು. ಇದರ ಅಂಗವಾಗಿ ಆರೋಗ್ಯ, ಕುಟುಂಬ ಕಲ್ಯಾಣ, ವ್ಯವಸಾಯ ಮುಂತಾದ ಕ್ಷೇತ್ರಗಳಿಗೆ ಪ್ರಯೋಜನವಾಗುವಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ಭಾರತದ 2,500 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಪ್ರಸಾರ ಮಾಡಲಾಯಿತು. ಪ್ರಪಂಚದಲ್ಲೇ ಅತಿ ದೊಡ್ಡದಾದ ಈ ಹಿಂದೆಂದೂ ನಡೆದಿರದಂಥ ಸಾಮಾಜಿಕ ಕಾರ್ಯಕ್ರಮ ಇದಾಗಿತ್ತು. ಮುಂದೆ ಫ್ರಾಂಕೋ– ಜರ್ಮನಿಯ ಸಿಂಫೋನಿ ಉಪಗ್ರಹವನ್ನು ಬಳಸಿಕೊಂಡ 1977–79 ರಲ್ಲಿ ಇಂಥದೇ ಇನ್ನೊಂದು ಕಾರ್ಯಕ್ರಮವನ್ನು ಉಪಗ್ರಹ ದೂರಸಂಪರ್ಕ ಪ್ರಾಯೋಗಿಕ ಯೋಜನೆಯನ್ನು (ಸ್ಟೆಪ್) ಖಾಜಾ ನಡೆಸಲಾಯಿತು. ಸ್ಟೆಪ್ ಕಾರ್ಯಕ್ರಮವು ದೂರ ಸಂಪರ್ಕ ಕ್ಷೇತ್ರಕ್ಕೆ ಅಗತ್ಯವಾದ ಉಪಗ್ರಹಗಳ ರಚನೆ ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿ ಹೊಸ ಹೆಜ್ಜೆ ಇಟ್ಟಿತು. ಅಮೇರಿಕಾದ ಉಪಗ್ರಹ ಲ್ಯಾಂಡ್‌ಸ್ಯಾಟ್‌ನಿಂದ ಲಭ್ಯವಾದ ಮಾಹಿತಿಯೊಡನೆ ಹಾಗೂ ವಿಮಾನಾಧಾರಿತ ಸೆನ್ಸಾರ್‌ಗಳನ್ನು ಬಳಸಿಕೊಂಡು ಹಲವಾರು ದೂರ ಸಂವೇದಿ ಪ್ರಯೋಗಗಳನ್ನು

ನಡೆಸಲಾಯಿತು. 1975 ರ ಎಪ್ರಿಲ್‌ನಲ್ಲಿ ಉಡಾವಣೆಗೊಂಡ ಆರ್ಯಭಟದಂತಹ ಪ್ರಾಯೋಗಿಕ ಉಪಗ್ರಹ ಕ್ರಮಪ್ರಕಾರವಾಗಿ 1979 ಮತ್ತು 1981 ರಲ್ಲಿ ಉಡಾವಣೆಗೊಂಡ ಭಾಸ್ಕರ್–1 ಮತ್ತು ಭಾಸ್ಕರ್–2 ಗಳಂಥ ದೂರಸಂವೇದಿ ಉಪಗ್ರಹಗಳನ್ನು ಮತ್ತು 1981 ರಲ್ಲಿ ಉಡಾವಣೆಗೊಂಡ ಆ್ಯಪಲ್ (Apple) ನಂಥ ಹಾಗೂ 2001 ರಲ್ಲಿ ಟಿಇಎಸ್ (TES Technology Experiment Satellite) ನಂಥ ತಂತ್ರಜ್ಞಾನ ಪ್ರಯೋಗಿಕ ಉಪಗ್ರಹಗಳನ್ನು ದೇಶದಲ್ಲಿಯೇ ವಿನ್ಯಾಸಗೊಳಿಸಲಾಯಿತು. ಇವುಗಳಿಂದಾಗಿ ಪ್ರಸ್ತುತದ ಇನ್‌ಸ್ಯಾಟ್ ಮತ್ತು ಐಆರ್‌ಎಸ್ ಪ್ರಣಾಳಿಕೆಗಳನ್ನು ಪ್ರಾರಂಭಿಸಲು ನೆರವಾಯಿತು.

ಬಾಹ್ಯಾಕಾಶಾಧಾರಿತ ದೂರಸಂವೇದಿ ತಂತ್ರಜ್ಞಾನವನ್ನು ಬಳಸಿ ಕೊಂಡು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಹಾಗೂ ಅಭಿವೃದ್ಧಿಪಡಿಸಲು ಭಾರತವು ಭಾರತೀಯ ದೂರಸಂವೇದಿ ಉಪಗ್ರಹ ವ್ಯವಸ್ಥೆಯನ್ನು ಪ್ರಾರಂಭಿಸಿತು. ಇದರ ಅಂಗವಾಗಿ ಐಆರ್‌ಎಸ್–1ಎ ಉಪಗ್ರಹವನ್ನು 1988 ರ ಮಾರ್ಚನಲ್ಲಿ ಹಾಗೂ 1991 ರ ಅಗಸ್ಟನಲ್ಲಿ ಉಡಾವಣೆಗೊಂಡ ಐಆರ್‌ಎಸ್– 1ಬಿ ಉಡಾಯಿಸಲಾಯಿತು. ಭಾರತಕ್ಕೆ ಕಿರೀಟಪ್ರಾಯವಾದ ಯಶಸ್ಸು ದೊರತಿದ್ದು 1995 ರಲ್ಲಿ. ಆಗ ಉಡಾವಣೆಗೊಂಡ ಐಆರ್‌ಎಸ್– 1ಸಿ ಬಾಹ್ಯಾಕಾಶ ಸಂಬಂಧಿ ಮಾಹಿತಿಯನ್ನು ಒದಗಿಸುವಲ್ಲಿ ಪ್ರಪಂಚದ ಒಂದು ಅತ್ಯುತ್ತಮ ದೂರಸಂವೇದಿ ಉಪಗ್ರಹವೆಂಬ ಕೀರ್ತಿ ಪಡೆದುಕೊಂಡಿತು. ಇದೇ ವಿಧದ ಇನ್ನೊಂದು ಉಪಗ್ರಹ ಐಆರ್‌ಎಸ್– 1ಡಿ ಯನ್ನು ಭಾರತವೇ ಅಭಿವೃದ್ಧಿಪಡಿಸಿದ ಉಡಾವಣಾವಾಹನ ಪಿಎಸ್‌ಎಲ್‌ವಿ ಮೂಲಕ ಸೆಪ್ಟೆಂಬರ್–29, 1997 ರಂದು ಹಾರಿಬಿಡಲಾಯಿತು. ಭಾರತದ ಉಡಾವಣಾವಾಹನ ಪಿಎಸ್‌ಎಲ್‌ವಿ ಮೂಲಕ ಉಡಾವಣೆಗೊಂಡ ಇನ್ನೊಂದು ಉಪಗ್ರಹ ಐಆರ್‌ಎಸ್– ಸಿ3, ಉಪಗ್ರಹವನ್ನು ಒಳಗೊಂಡ ಐಆರ್‌ಎಸ್ ಪ್ರಣಾಳಿ ಈಗ ಪ್ರಪಂಚದಲ್ಲೇ ಅತಿ ದೊಡ್ಡದಾದ ದೂರಸಂವೇದಿ ಉಪಗ್ರಹಗಳ ಸಮೂಹವಾಗಿದೆ. ನಂತರ ಇನ್ನೂ ಮೂರು ಉಪಗ್ರಹಗಳು ಸಾಗರ ಸಂಪನ್ಮೂಲಗಳ ಸರ್ವೇಕ್ಷಣೆಗಾಗಿ ಐಆರ್‌ಎಸ್– ಸಿ4 ಭೂರೇಖಾ ರಚನೆಗಾಗಿ ನೆರವಾಗಲು ಐಆರ್‌ಎಸ್–ಪಿ5 ಮತ್ತು ಸಂಪನ್ಮೂಲ ಸಮೀಕ್ಷೆಗಾಗಿ ಐಆರ್‌ಎಸ್– ಪಿ6 ಗಳನ್ನು ಹಾರಿಬಿಡಲಾಗಿದೆ.

**ಕೃಷಿ ಕ್ಷೇತ್ರಕ್ಕೆ ದೂರಸಂವೇದಿ ಉಪಗ್ರಹಗಳ ಪ್ರವೇಶ:** ಒಂದು ನಿರ್ದಿಷ್ಟ ಪ್ರದೇಶದ ಸಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯು ಅಲ್ಲಿಯ ಪರಿಮಿತ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ ಮತ್ತು ಸಸ್ಯ ಸಂಪತ್ತುಗಳ ಮೇಲೆ ಅವಲಂಭಿಸಿದೆ. ಜೊತೆಗೆ ಸಂಪನ್ಮೂಲಗಳ ಅಸಮರ್ಪಕ ನಿರ್ವಹಣೆ ಮತ್ತು ಅತಿಯಾದ ಬಳಕೆಯಿಂದ ಪರಿಸರದ ಮೇಲೂ ದುಷ್ಪರಿಣಾಮ ಬೀರುತ್ತಿರುವದನ್ನು ಹಿಂದೆಂದಿಗಿಂತಲೂ ಇಂದು ಹೆಚ್ಚು ಕಾಣುತ್ತಿದ್ದೇವೆ. ಇಲ್ಲಿ ಮುಖ್ಯ ವಾಗಿ ಗಮನಿಸಬೇಕಾದ ವಿಷಯಗಳೆಂದರೆ ಭೂಸವಕಳಿ ತಡೆಗಟ್ಟ ವುದು ಶಿಥಿಲವಾದ, ಕೃಷಿಗೆ ಯೋಗ್ಯವಲ್ಲದ ಜಮೀನುಗಳನ್ನು ಕೃಷಿಗೆ ಯೋಗ್ಯವಾಗಿಸುವುದು ಮತ್ತು ಈಗಾಗಲೇ ಕೃಷಿಯಲ್ಲಿ ಅಳವಡಿಸಿರುವ ಜಮೀನಿನಲ್ಲಿ ಕೃಷಿ ಚಟುವಟಿಕೆಗಳನ್ನು ತೀವ್ರಗೊಳಿಸುವುದು. ಇದರಿಂದ ಕೃಷಿಗೆ ಯೋಗ್ಯವಲ್ಲದ, ಗುಣಮಟ್ಟ ವಿಲ್ಲದ ಭೂಮಿಯನ್ನು ಇತರ ಜೀವನಾವಶ್ಯಕ ಕೃಷಿಯೇತರ ಚಟುವಟಿಕೆಗಳಿಗೆ ಉಪಯೋಗಿಸಲು ಸಾಧ್ಯವಾಗುತ್ತದೆ. ಸುಸ್ಥಿರ ಅಭಿವೃದ್ಧಿಗೆ ಸೂಕ್ತ ಪದ್ಧತಿಯೊಂದನ್ನು ಅಭಿವೃದ್ಧಿಪಡಿಸಲು, ಒಂದು ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳು, ಕೈಗೊಂಡ ಸಂರಕ್ಷಣಾ ಕ್ರಮಗಳು, ಈಗಾಗಲೇ ಸತ್ವಹೀನ ಪ್ರದೇಶಗಳಿಗೆ ಬೇಕಾಗುವ ಯೋಗ್ಯ ಪರ್ಯಾಯ ಬೆಳೆಪದ್ಧತಿ ಇತ್ಯಾದಿ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಆ ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ಮತ್ತು ಅವುಗಳ ಬಳಕೆಯ ಮಟ್ಟದ ಬಗ್ಗೆ ಸಮಗ್ರ ಮಾಹಿತಿ ಅವಶ್ಯ. ಭೂಗರ್ಭಶಾಸ್ತ್ರ, ಪ್ರಾಕೃತಿಕ ಭೂಗೋಳ, ಮಣ್ಣಿನ ಮೇಲ್ಮೈ ಲಕ್ಷಣಗಳು, ಅಂತರ್ಜಲ, ಭೂಬಳಕೆ / ಭೂಹೊದಿಕೆ, ಹವಮಾನ ಅಂಕಿ ಅಂಶಗಳು, ಸಾಮಾಜಿಕ, ಅರ್ಥಿಕ ಮತ್ತು ಮೂಲಭೂತ ಸೌಕರ್ಯಗಳನ್ನು ಒಟ್ಟಾಗಿ ಗಮನಕ್ಕೆ ತೆಗೆದುಕೊಂಡು ಸಮಗ್ರ ಯೋಜನೆಗೆ ಒತ್ತು ಕೊಡಬೇಕು.

ನಮ್ಮ ದೇಶವು ದೂರ ಸಂವೇದಿ ತಂತ್ತಜ್ಞಾನವನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಬಳಸಿಕೊಂಡಷ್ಟು ಯಾವ ದೇಶವೂ ಬಹುಶಃ ಬಳಸಿಲ್ಲ. 1970 ರಲ್ಲಿ ಕೇರಳದ ತೆಂಗಿನ ಗಿಡಗಳಿಗೆ ಬಂದ ಬೇರು ಬಾಡುವ (ROOT WILT) ರೋಗವನ್ನು ವಿಮಾನದಿಂದ ತೆಗೆದ ಚಿತ್ರಗಳೊಂದಿಗೆ ಅಧ್ಯಯನ ಮಾಡುವುದರ ಮೂಲಕ ಆರಂಭವಾದ ದೂರ ಸಂವೇದಿ ತಂತ್ರಜ್ಞಾನ ಬಳಕೆ ಅಮೇಲೆ ನಮ್ಮ ಬೆಳೆ, ವನಸಂಪತ್ತ, ಬಂಜರುಭೂಮಿ, ಜಲಸಂಪನ್ಮೂಲ, ಪರಿಸರ, ಕುಡಿಯುವ ನೀರಿನ ಪೂರೈಕೆ ಪಟ್ಟಣಗಳ ಬೆಳವಣಿಗೆ, ಕರಾವಳಿ ಪ್ರದೇಶ, ಖನಿಜ ಸಂಪತ್ತು ಇತ್ಯಾದಿಗಳ ವಿವರವಾದ ಅಧ್ಯಯನವನ್ನು ನಡೆಸಲು ಸಾಧ್ಯವಾಗಿತ್ತಿತ್ತು. ಈ ಉದ್ದೇಶಕ್ಕಾಗಿಯೇ ರಾಷ್ಟ್ರೀಯ ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣಾ ವ್ಯವಸ್ಥೆಯನ್ನು (NATIOANL NATURAL RESOURCES MANAGEMENT SYSTEM) ಸ್ಥಾಪಿಸಲಾಗಿದೆ. ಪ್ರತಿಯೊಂದು ರಾಜ್ಯದಲ್ಲಿ ದೂರ ಸಂವೇದಿ ತಂತ್ರಜ್ಞಾನ ಬಳಕೆಯ ಕೇಂದ್ರವನ್ನು (STATE REMOTE SENSING APPLICATION CENTRE) ಸ್ಥಾಪಿಸಲಾಗಿದೆ. ಪ್ರಾದೇಶಿಕ ದೂರ ಸಂವೇದಿ ಸೇವಾ ಕೇಂದ್ರ (REGIONAL REMOTE SENSING SERVICE CENTRE) ವನ್ನು ಬೆಂಗಳೂರು, ನಾಗಪುರ, ಜೋಧಪುರ, ಕರಗಪುರ ಮತ್ತು ಡೆಹ್ರಾಡೂನ್‌ಗಳಲ್ಲಿ ಸ್ಥಾಪಿಸಲಾಗಿದೆ ದೇಶದ ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ರಾಷ್ಟ್ರೀಯ ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ ಮಹತ್ತರವಾದ ಪಾತ್ರವಹಿಸುತ್ತಿದೆ. ಸ್ವದೇಶಿ ದೂರ ಸಂವೇದಿ ಪಗ್ರಹಗಳದ IRS – 1A, 1B, 1C, 1D, P2, P3, P6, 8, 6 ಗಳ ಛಾಯಾ ಚಿತ್ರಗಳನ್ನು ನಿರಂತರವಾಗಿ ಒದಗಿಸುತ್ತಾ ಇದೆ. ಬರುವ ವರ್ಷಗಳಲ್ಲಿ ಇನ್ನೂ ಹಲವಾರು ಉಪಗ್ರಹಗಳನ್ನು ರಕ್ಷೆಗೆ ಬಿಡುವ ಯೋಜನೆಯೂ ಇದೆ.

**ಕೃಷಿ ಕ್ಷೇತ್ರಕ್ಕೆ ದೂರಸಂವೇದಿ ಉಪಗ್ರಹಗಳ ಪಾತ್ರ:ದೂರಸಂವೇದಿ** ಉಪಗ್ರಹಗಳು ಪೂರೈಸುತ್ತಿರುವ ಮಾಹಿತಿಗಳನ್ನು ಭಾರತವು ಮುಖ್ಯ ಬೆಳೆಗಳಾದ ಗೋಧಿ, ಅಕ್ಕಿ, ಜೋಳ, ಎಣ್ಣೆಕಾಳುಗಳು ಮತ್ತು ಕಬ್ಬು ಇವುಗಳ ಎಕರೆವಾರು ಅಂದಾಜು ಮತ್ತು ಇಳುವರಿ ಮುಂತಾದವುಗಳ ವಿಶ್ಲೇಷಣೆಯಲ್ಲಿ ಬಳಸಲಾಗುತ್ತಿದೆ. ಈ ಮಾಹಿತಿ

ಕೊಯ್ಲಿಗೆ ಒಂದು ತಿಂಗಳು ಮುಂಚೆಯೇ ಲಭ್ಯವಿದ್ದು, ಬೆಳೆಗಳ ನಿಗದಿ, ಸೂಕ್ತ ಶೇಖರಣೆ ಮತ್ತು ಯೋಜನೆಗೆ ಸಹಾಯವಾಗುತ್ತದೆ. ಉಪಗ್ರಹ ಮಾಹಿತಿಗಳನ್ನು ಬಳಸಿಕೊಂಡು ದ್ವೈವಾರ್ಷಿಕ ಅರಣ್ಯ ಸಮೀಕ್ಷೆಯನ್ನು ನಡೆಸಲಾಗುತ್ತದೆ. ಕ್ಷಾಮ ತಲೆದೋರುವ ಸಂದರ್ಭಗಳಲ್ಲಿ ಮುನ್ಸೂಚನೆ ನೀಡಲು ಐಆರ್‌ಎಸ್ ಮಾಹಿತಿಯನ್ನು ಬಳಸಿಕೊಂಡು ಪ್ರವಾಹದ ಬಗೆಗೆ ನಕ್ಷೆ ರೂಪಿಸಲಾಗುವುದು ಮತ್ತು ಪ್ರವಾಹ ಪೀಡಿತವಾಗಬಹುದಾದಂಥ ಪ್ರದೇಶಗಳನ್ನು ಗುರುತಿಸಿ ಪ್ರವಾಹ ನಿಯಂತ್ರಣಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುವುದು. ಈಗ ಐಆರ್‌ಎಸ್ ಮಾಹಿತಿಯನ್ನು ಬಳಸಿಕೊಂಡು ಕೃಷಿ, ಹವಾಮಾನ ಯೋಜನೆ, ಬಂಜರು ಭೂಮಿಯ ನಕ್ಷೆ ತಯಾರಿಕೆ ಹಾಗೂ ವ್ಯರ್ಥಭೂಮಿಯ ಬಳಕೆಗೆ ರೂಪರೇಷೆ ತಯಾರಿಸುವುದು, ಕೊಳವೆ ಬಾವಿ ಕೊರೆಯಲು ನಿವೇಶನವನ್ನು ಗುರುತಿಸುವುದು, ನೀರಾವರಿ ಪ್ರದೇಶದ ನಿರ್ವಹಣೆ ಮತ್ತು ಅಭಿವೃದ್ಧಿ, ಹಿಮಾಲಯದ ತಪ್ಪಲಲ್ಲಿರುವ ಹಿಮದ ಕರಗುವಿಕೆ ಮತ್ತು ನೀರಾಗಿ ಹರಿಯುವಿಕೆ ಇವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ನೀರಾವರಿ ಅಭಿವೃದ್ಧಿಗೆ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ತೊಡಗುವುದು, ರೇಷ್ಮೆ ಕೃಷಿಯಲ್ಲಿ ಹಿಪ್ಪುನೇರಳೆಯ ಕ್ಷೇತ್ರ ಹಾಗೂ ಅಭಿವೃದ್ಧಿ, ಮಳೆಯ ಮುನ್ಸೂಚನೆ ನೀಡುವುದು ಇಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಭಾರತವು 1972 ರಲ್ಲಿ ಐಆರ್‌ಎಸ್ ಮಾಹಿತಿ ಬಳಸಿಕೊಂಡು ಇಂಟಿಗ್ರೇಟೆಡ್ ಮಿಷನ್ ಫಾರ್ ಸಸ್ಟೆನೆಬಲ್ ಡೆವಲಪ್‌ಮೆಂಟ್ (ಐಎಮ್‌ಎಸ್‌ಡಿ) ಎಂಬ ಯೋಜನೆಯನ್ನು ಪ್ರಾರಂಭಿಸುವುದರ ಮೂಲಕ ಒಂದು ಮುಖ್ಯ ಹೆಜ್ಜೆಯನ್ನಿಟ್ಟಿತು. ಈ ಯೋಜನೆಯು ಸ್ಥಳೀಯವಾಗಿ ದೊರೆಯುವ ಅಂಶಗಳನ್ನು ಬಳಸಿಕೊಂಡು ಭೂಜಲ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದೇ ಆಗಿದೆ. ಈ ಯೋಜನೆಯ ಅಂಗವಾಗಿ ಕಾರ್ಯಗತವಾದ ಪ್ರದೇಶಗಳಲ್ಲಿ ಹಲವಾರು ಉತ್ತಮ ಫಲಿತಾಂಶಗಳನ್ನು ಕಾರಣಬಹುದು. ಉದಾಹರಣೆಗೆ ದಕ್ಷಿಣ ಭಾರತದ ಅನಂತಪುರ ಜಿಲ್ಲೆಯ ವಂಜುವೂಂಕ ಜಲಾನಯನ ಪ್ರದೇಶದಲ್ಲಿ ಚೆಕ್‌ಡ್ಯಾಮ್‌ಗಳ ನಿರ್ಮಾಣ ಹಾಗೂ ಇನ್ನಿತರ ಐಎಮ್‌ಎಸ್‌ಡಿ ಯೋಜನೆಯಲ್ಲಿ ನಿರೂಪಿತವಾದ ಕಾರ್ಯಯೋಜನೆಗಳು ಉತ್ತಮ ಫಲಿತಾಂಶ ಕೊಟ್ಟಿದೆ. ಇದರಿಂದಾಗಿ ಅಂತರ್ಜಲದ ಪ್ರಮಾಣ ಹಲವು ಅಡಿಗಳಷ್ಟು ಹೆಚ್ಚಿದೆ. ಈ ಕಾರಣದಿಂದಾಗಿ ಅಲ್ಲಿನ ರೈತರು ಭಾರತದಲ್ಲೇ ಎರಡನೇ ಕಡಿಮೆ ಪ್ರಮಾಣದ ಮಳೆ ಬೀಳುವ ಪ್ರದೇಶವಾದ ಇಲ್ಲಿ, ವರ್ಷಕ್ಕೆ ಎರಡು ಬೆಳೆಗಳನ್ನು ತೆಗೆಯುವಲ್ಲಿ ಯಶಸ್ವಿಯಾಗಿ ಗಮನಾರ್ಹವಾದ ಪ್ರಗತಿಯನ್ನು ಕಂಡಿದ್ದಾರೆ.

ಭಾರತದಲ್ಲಿ ಉಡಾಯಿಸಿರುವ ದೂರ ಸಂವೇದಿ ಉಪಗ್ರಹಗಳ ತಂತ್ರಜ್ಞಾನವು ವಿವಿಧ ಬೆಳೆಗಳ ವಿಸ್ತೀರ್ಣ ಉತ್ಪಾದನೆಯ ಅಂದಾಜು, ಜಲಾನಯನ ಪ್ರದೇಶದ ಗುಣಧರ್ಮಗಳ / ಬಂಜರು / ಭೂಮಿಗಳ ಮಾಹಿತಿ–ಜಮೀನು ಅಭಿವೃದ್ಧಿ, ಅಂತರ್ಜಲ ಸಂಪನ್ಮೂಲಗಳ ಲಭ್ಯತೆ ಬಗ್ಗೆ ಮಾಹಿತಿ, ನೆರೆ ನಿರ್ವಹಣೆ, ಬರ ನಿರ್ವಹಣೆ ಇತ್ಯಾದಿ ವಿಷಯಗಳ ಅಧ್ಯಯನಗಳಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ದೂರ ಸಂವೇದಿ ತಂತ್ರಜ್ಞಾನದ ಬಳಕೆಯ ಬಗ್ಗೆ ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಹಲವು ಪ್ರಾಯೋಜಿತ ಕಾರ್ಯಕ್ರಮಗಳನ್ನು ರಾಷ್ಟ್ರೀಯ ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಪದ್ಧತಿ (ಎನ್. ಎನ್. ಆರ್. ಎಂ. ಎಸ್) ಇದರ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ನೈಸರ್ಗಿಕ ಸಂಪನ್ಮೂಲಗಳ ಸೂಕ್ತ ಹಾಗೂ ದಕ್ಷ ಬಳಕೆಯ ಬಗ್ಗೆ ವ್ಯವಸ್ಥಿತ ಅಭಿವೃದ್ಧಿಗೆ ಕ್ರೋಢೀಕೃತ ಮಿಷನ್ (ಐಎಂಎಸ್‌ಡಿ) ಎಂಬ ರಾಷ್ಟ್ರ ಮಟ್ಟದ ಪ್ರಯೋಜನೆಯು ಕಾರ್ಯರೂಪದಲ್ಲಿದೆ. ಗುಲಬರ್ಗಾ ಜಿಲ್ಲೆಯ ಸೇಡ್ಡಂ ತಾಲೂಕಿನ ಮೇಡಕನಾಲಾ ಜಲಾನಯನ ಪ್ರದೇಶದಲ್ಲಿ ಸುಸ್ಥಿರ ಅಭಿವೃದ್ಧಿಗೆ ದೂರ ಮತ್ತು ಭೌಗೋಳಿಕ ಪದ್ಧತಿ ತಂತ್ರಜ್ಞಾನ ಬಳಸಿ ಮಣ್ಣು ಮತ್ತು ಕೃಷಿ ಸಂಪನ್ಮೂಲಗಳ ನಿರ್ವಹಣೆಯ ಬಗ್ಗೆ ನಡೆಸಿದ ಸಂಶೋಧನಾ ಅಧ್ಯಯನವು ಈ ತಂತ್ರಜ್ಞಾನದ ಕಾರ್ಯ ಸಾಧುತ್ವವನ್ನು ಸಿದ್ಧಪಡೆಸಿದೆ. ಈ ಅಧ್ಯಯನ ಪ್ರದೇಶಕ್ಕೆ ಪರ್ಯಾಯ ಕೃಷಿ ಪದ್ದತಿಗಳಾದ ಕೃಷಿ – ತೋಟಗಾರಿಕೆ, ಕೃಷಿ–ಅರಣ್ಯ, ಕಾಡು ಬೆಳೆಸುವುದು, ಮೇವು ಮತ್ತು ಇಂಧನ ಗಿಡಗಳ ನಾಟಿ, ಜಲ ಸಂಪನ್ಮೂಲಗಳ ಅಭಿವೃದ್ಧಿ, ನಾಲಾ ಬದು, ಚೆಕ್ ಡಾಮ್, ಕಲ್ಲು ಗುಂಡುಗಳ ಬದು, ಕೊರಕಲು ಸುಧಾರಣೆ ಇತ್ಯಾದಿ ಅಭಿವೃದ್ಧಿ ಕ್ರಮಗಳಿಗೆ ಈ ಅಧ್ಯಯನದಲ್ಲಿ ಸಲಹೆ ನೀಡಲಾಗಿದೆ. ಸೂಕ್ತ ಅಭಿವೃದ್ಧಿಯ ಬಗೆಗಿನ ಯೋಜನೆಗಳಿಗೆ ದೂರ ಸಂವೇದಿ ತಂತ್ರಜ್ಞಾನದಿಂದಾಗಿ ಒಂದು ಹೊಸ ಆಯಾಮ ದೊರೆತಿದೆ. ಪರಿಮಿತ ಸಂಪನ್ಮೂಲಗಳ ದಕ್ಷ ಬಳಕೆಯಿಂದ ಹೆಚ್ಚುತ್ತಿರುವ ಜನರ ಅವಶ್ಯಕತೆಗಳ ಪೂರೈಕೆಯ ಜೊತೆಗೆ ದೇಶದ ಆಹಾರ ಭದ್ರತೆಯನ್ನು ಕಾಪಾಡಲೂ ಸಹ ಸಹಕಾರಿಯಾಗಿದೆ.

ಕೃಷಿ – ಹವಾಗುಣ ಯೋಜನೆ ಮತ್ತು ಮಾಹಿತಿ ಬ್ಯಾಂಕ್ (ಎಪಿಐಬಿ) ಯೋಜನೆಯು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮತ್ತು ಯೋಜನಾ ಆಯೋಗ, ಭಾರತ ಸರಕಾರ ಇವರ ಜಂಟೀ ಪ್ರಾಯೋಜನೆ. ಈ ಯೋಜನೆಯ ಮುಖ್ಯ ಉದ್ದೇಶವೇನೆಂದರೆ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಉದ್ದಿಮೆಗಳ ಎಲ್ಲ ಬಳಕೆದಾರರಿಗೂ, ಕೃಷಿ ನಿರ್ಧಾರ ಬೆಂಬಲಿಸುವ ಮಾಹಿತಿ ವ್ಯವಸ್ಥೆಯನ್ನು 'ಏಕಗವಾಕ್ಷಿ' ಜ್ಞಾನಮಾರ್ಗದ ಮೂಲಕ ತಲುಪಿಸಬಹುದೆನ್ನುವ ಸಾಧ್ಯತೆಯನ್ನು ಪ್ರಮಾಣೀಕರಿಸುವುದು. ಉಪಗ್ರಹ ತೆಗೆದ ಚಿತ್ರಗಳನು ಉಪಯೋಗಿಸಿ ಸಿಗಬಹುದಾದ ಜಾಗಗಳನ್ನು (Ground Water Potential Zones) ಪ್ರತ್ಯೇಕ್ಷಿಸಬೇಕು. ಆನಂತರ ಹಾಗೆ ಗುರುತಿಸಿದ ಜಾಗಗಳನ್ನು ವಿಮಾನದಿಮದ ತೆಗೆದ ಚಿತ್ರಗಳನ್ನು (Aerial Photographic) ಉಪಯೋಗಿಸಿ ಇನ್ನೂ ವಿವರವಾದ ಅಧ್ಯಯನ ಮಾಡಬೇಕು ತದನಂತರ ಭೂಭೌತಿಕ (Geophysical) ಮತ್ತು ಜಲ ಭೂವೈಜ್ಞಾನಿಕ (Hydrogeological) ತಂತ್ರಗಳನ್ನು ಉಪಯೋಗಿಸಿ ಎಲ್ಲಿ ಬಾವಿ ಕೊರೆಯಬಹುದೆಂದು ಹೇಳಬಹುದು. ನದಿಗಳ ಗಾತ್ರ ಉದ್ದ ಇತ್ಯಾದಿ ಸ್ವಭಾವಗಳನ್ನು ವಿವರವಾದ ಅಧ್ಯಯನವನ್ನು ದೂರಗ್ರಹಣದ ಮುಖಾಂತರ ಮಾಡಬಹುದು. ನದಿಗಳಿಗೆ ಎಲ್ಲಿ ಅಣೆಕಟ್ಟು ಕಟ್ಟಬಹುದೆಂಬುದನ್ನು ನಿರ್ಣಯಿಸುವಲ್ಲೂ ಈ ತಂತ್ರವು ಪ್ರಯೋಜನಕಾರಿಯಾಗಿದೆ. ನೆರೆ ಬಂದಾಗ ನೀರಿನಿಂದಾವೃತ ಪ್ರದೇಶದ ಚಿತ್ರಗಳು ನೆರೆಯಿಂದಾದ ಹಾನಿಯನ್ನು ಅಂದಾಜು ಮಾಡುವಲ್ಲಿ ಸಹಾಯ ಮಾಡುತ್ತದೆ. ಹಿಮಾಲಯದಂತಹ ಪರ್ವತ ಶ್ರೇಣಿಯನ್ನು ನೆಲದ ಮೇಲಿಂದ ಅಧ್ಯಯನ ಮಾಡುವುದು ಕಷ್ಟ. ಇಂತಹ ಕಷ್ಟ ಸಾಧ್ಯವಾದ ಪರ್ವತ ಶ್ರೇಣಿಗಳು, ದಟ್ಟವಾದ ಕಾಡುಗಳು, ಜವುಗು

ಭೂವಿಗಳು, ಮರುಭೂವಿಗಳು ಮತ್ತಿತರ ಪ್ರದೇಶಗಳ ಅಧ್ಯಯನವನ್ನು ದೂರಗ್ರಹಣದ ಮೂಲಕ ಮಾಡಬಹುದು. ಬೆಳೆಗಳಿಗೆ ತಗಲಿದ ರೋಗಗಳನ್ನು ಪತ್ತೆ ಹಚ್ಚುವಲ್ಲಿ, ಫಸಲಿನ ಅಂದಾಜು ಮಾಡುವಲ್ಲಿಯೂ ಈ ತಂತ್ರವು ತುಂಬಾ ಸಹಕಾರಿಯಾಗಿದೆ. ಸರೋವರಗಳಿಂದ ಜಲಾಶಯಗಳ, ಕೆರೆಗಳ ಮತ್ತಿತರ ಜಲ ಸಂಪನ್ಮೂಲಗಳ ಅಧ್ಯಯನದಲ್ಲೂ ಮಹತ್ತರ ಪಾತ್ರವಹಿಸುತ್ತವೆ. ಪಟ್ಟಣಗಳ ಬೆಳವಣಿಗೆಯನ್ನು ಕಾಡ್ಗಿಚ್ಚನಿಂದ ಸುಟ್ಟುಹೋದ ಕಾಡಿನ ಭಾಗಗಳನ್ನು ವಿವರವಾಗಿ ಅಧ್ಯಯನ ಮಾಡಬಹುದು. ಖನಿಜ ನಿಕ್ಷೇಪಗಳ ಪತ್ತೆಯಲ್ಲಿ, ಕಾಡುಗಳು, ಅಗ್ನಿಪರ್ವತಗಳು, ಬಂಜರು ಭೂವಿಯ, ಮಣ್ಣಿನ ಅಧ್ಯಯನದಲ್ಲೂ ದೂರಸಂವೇಧಿ ಪ್ರಮುಖ ಪಾತ್ರವಹಿಸುತ್ತದೆ. ಕರಾವಳಿಯ ಅಧ್ಯಯನದಲ್ಲೂ ದೂರು ಸಂವೇದಿ ಮಹತ್ತವಾದ ಪಾತ್ರವಿದೆ. ಸಾಗರಗಳ ಅಧ್ಯಯನಕ್ಕೆಂದೇ Seasat, ಎಂಬ ಉಪಗ್ರಹ ಉಡಾಹಿಸಲಾಗಿತ್ತು ಜಪಾನ್ Marine Observation Satellite (MOS) ಈ ಉದ್ದೇಶಕ್ಕಾಗಿಯೇ ಉಡಾಯಿಸಿದೆ. ನಾವು OCEANSAT ಉಪಗ್ರಹವನ್ನು ಉಡಾಯಿಸಲಿದ್ದೇನೆ. ಸಾಗರದ ಅಲೆಗಳ ಏರಿಳಿತಗಳು ಚಲನೆಗಳು ಇತ್ಯಾದಿ ಸ್ವಭಾವಗಳ ಅಧ್ಯಯನಕ್ಕೆ ದೂರಸಂವೇದಿ ತಂತ್ರವು ಸಹಕಾರಿಯಾಗಿದೆ. ದೂರಸಂವೇದಿ ತಂತ್ರವು ಈಗ ಮುಖ್ಯವಾಗಿ ಉಪಗ್ರಹಗಳು ಕಳುಹಿಸಿದ ಛಾಯಾಚಿತ್ರಗಳನ್ನು ಅವಲಂಬಿಸಿದೆ. ಈಗಲಂತೂ ತ್ರಿಮಾನ ಚಿತ್ರಗಳನ್ನು ಕೂಡಾ ಉಪಗ್ರಹದಿಂದ ಪಡೆಯಲು ಸಾಧ್ಯವಿದೆ. (Spot IRS-1ಅ 1ಆ ಉಪಗ್ರಹಗಳಿಂದ) ಉಪಗ್ರಹ ಛಾಯಾ ಚಿತ್ರಗಳ ಬಳದೆ ಜಾಸ್ತಿ ಆಗುತ್ತಿದೆ.

**ದೂರ ಸಂವೇದಿ ಉಪಗ್ರಹಗಳ ದೂರಗ್ರಹಣ ತಂತ್ರದಿಂದ ನಮಗೆ ಇನ್ನೂ ಅನೇಕ ಪ್ರಯೋಜನೆಗಳಿವೆ:** ಎಪ್ಪತ್ತರ ದಶಕದ ನಂತರ ಉಡಾವಣೆಯಾದ ಭಾರತೀಯ ದೂರ ಸಂಬೇದಿ ಉಪಗ್ರಹಗಳ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಇವುಗಳು ನಿರಂತರವಾಗಿ, ನಿಖರವಾಗಿ ಕಳುಹಿಸುವ ಭೌಗೋಳಿಕ ಛಾಯಾ ಚಿತ್ರಗಳನ್ನು ದರಿಸಿ ನೈಸರ್ಗಿಕ ಸಂಪನ್ಮೂಲಗಳ ವಿವರವಾದ ಮಾಹಿತಿ ಮತ್ತು ಉಸ್ತುವಾರಿ ಮಾಡಲು ಸಾಧ್ಯವಾಗಿದೆ. ಇದು ವೈಜ್ಞಾನಿಕವು ಹಾಗೂ ಜನಪ್ರಿಯವೂ ಆಗುತ್ತಿದೆ. ಈ ತಂತ್ರಜ್ಞಾನ ಅತಿ ಶೀಘ್ರವಾಗಿ, ಕಡಿಮೆ ಖರ್ಚಿನಲ್ಲಿ ಮತ್ತು ಸೂಕ್ತ ಸಮಯಕ್ಕೆ ಬೇಕಾದ ಮಾಹಿತಿಯನ್ನು ಲಭ್ಯವಾಗಿಸುತ್ತದೆ. ಇದರಿಂದ 2 ರಿಂದ 22 ದಿನಗಳೊಳಗೆ ಅದೇ ಪ್ರದೇಶದ ಮಾಹಿತಿಯ ಪುನರ್ ಲಭ್ಯತೆ ಇದರ ಗುಣಾತ್ಮಕ ಅಂಶಗಳು, ಭೂಪದರ, ಬಹುಕಾಲಿಕ ಮತ್ತು ಬಹುವರ್ಣೀಯ ದೂರಸಂವೇದಿ ಉಪಗ್ರಹಗಳ ಮಾಹಿತಿಯನ್ನು ಉಪಯೋಗಿಸಿಕೊಂಡು ಸಸ್ಯ, ಮಣ್ಣು, ನೀರು, ಖನಿಜ ಮತ್ತು ಸಮುದ್ರ ಸಂಪನ್ಮೂಲಗಳ ನಕಾಶೆ, ಉಸ್ತುವಾರಿ ಮತ್ತು ನಿರ್ವಹಣೆಗೆ ಮಾಹಿತಿ ಒದಗಿಸುವಲ್ಲಿ ಅತ್ಯಂತ ಮಹತ್ವದ್ದು ಹಾಗೂ ಕ್ರಾಂತಿಕಾರಿಯಾಗಿರುವುದರಲ್ಲಿ ಎರಡನೇ ಮಾತಿಲ್ಲ.

1. ನಮ್ಮ ದೃಷ್ಟಿ ಸಾಮರ್ಥ್ಯದ ಅಳವಿಗೆ ಮೀರಿದ ಹಲವಾರು ಕಾರ್ಯಗಳನ್ನು ಈ ವಿಧಾನದಿಂದ ಕೈಗೊಳ್ಳಬಹುದಾಗಿದೆ. ನೂರಾರು, ಸಾವಿರಾರು ಕಿ.ಮೀ. ಗಳಷ್ಟು ದೂರದಲ್ಲಿರುವ ವಸ್ತುಗಳನ್ನು ಇದರಿಂದ ಗುರುತಿಸಬಹುದು. ಅಂತರಿಕ್ಷದಲ್ಲಿ ಪರಿಭ್ರಮಿಸುತ್ತಿರುವ ಉಪಗ್ರಹಗಳು ಭೂಗರ್ಭದಲ್ಲಿ ಹುದುಗಿರುವ ಖನಿಜ ನಿಕ್ಷೇಪಗಳನ್ನು ಪತ್ತೆ ಹಚ್ಚಬಲ್ಲವು

2. ಬರಿಗಣ್ಣಿಗೆ ಗೋಚರಿಸದ ಸೂಕ್ಷ್ಮ ವಿವರಗಳನ್ನು ಈ ತಂತ್ರಜ್ಞಾನದಿಂದ ಕಂಡು ಹಿಡಿಯಬಹುದು. ಉದಾಹರಣೆಗೆ ಸಸ್ಯಗಳಿಂದ ಪ್ರತಿಫಲಿಸಲ್ಪಡುವ ಸೂಕ್ಷ್ಮ ತರಂಗಗಳ ವಿಶ್ಲೇಷಣೆಯಿಂದ ಅವುಗಳಿಗೆ ತಗುಲಿದ ರೋಗವನ್ನು ತುಂಬ ಪ್ರಾರಂಭಿಕ ಹಂತದಲ್ಲಿ ಅದು ಇನ್ನೂ ಹಬ್ಬುವುದಕ್ಕೆ ಮುಂಚಿತಾಗಿಯೇ ಗುರುತಿಸಬಹುದು.

3. ಈ ತಂತ್ರದಿಂದ ವಿವರಗಳನ್ನು ದಾಖಲು ಮಾಡಿಕೊಳ್ಳಬಹುದು. ಶಾಶ್ವತವಾಗಿ ಕಾದಿರಿಸಬಹುದು.

4. ಈ ವಿವರಗಳನ್ನು ಯಾವುದೇ ಸಮಯದಲ್ಲಿ ಇತರ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಗಳೊಂದಿಗೆ ಹೋಲಿಸಬಹುದು.

5. ಇದು ತಾಂತ್ರಿಕ ವಿಧಾನ ಆದ್ದರಿಂದ ವೈಯಕ್ತಿಕ ಅನಿಸಿಕೆ, ದೃಷ್ಟಿಕೋನ, ಅಭಿರುಚಿ ಮುಂತಾದವುಗಳಿಂದ ಇದು ಮುಕ್ತ, ಆದ್ದರಿಂದ ಈ ಮಾಹಿತಿ ಹೆಚ್ಚು ವಸ್ತುನಿಷ್ಠ ಮತ್ತು ನಿರ್ದಿಷ್ಟ.

6. ಅಲ್ಪ ವೆಚ್ಚದಲ್ಲಿ ಅಧಿಕ ಮಾಹಿಯನ್ನು ಸಂಗ್ರಹಿಸಲು ಈ ವಿಧಾನ ಸಹಾಯಕಾರಿ.

ಮೇಲೆ ಹೇಳಿದ ಎಲ್ಲ ಬದಲಾವಣೆಗಳನ್ನು ತೀಕ್ಷ್ಣವಾಗಿ ಗಮನಿಸಿದಾಗ ಮುಂದಿನ ದಿನಮಾನದಲ್ಲಿ ಕೃಷಿ ಕ್ಷೇತ್ರವು ಅತಂತ್ರ ಸ್ಥಿತಿಗೆ ಬಂದು ತಲುಪುವ ಸೂಚನೆ ಕಂಡು ಬರುತ್ತದೆ. ಆದ್ದರಿಂದ ಹೊಸ ಹೊಸ ತಂತ್ರಜ್ಞಾನದ ಅವಶ್ಯಕತೆ ಹೆಚ್ಚಾಗಿದೆ. ಇದರಲ್ಲಿ ದೂರಸಂವೇದಿ ಉಪಗ್ರಹಗಳ ಮಾಹಿತಿಯ ಬಳಕೆ ಹೆಚ್ಚು ಉಪಕಾರಿಯಾಗಲಿದೆ. ಒಂದು ನಿರ್ದಿಷ್ಠ ಪ್ರದೇಶದ ಸಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯು ಅಲ್ಲಿಯ ಪರಿಮಿತ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ ಮತ್ತು ಸಸ್ಯಗಳು ವೃದ್ಧಿಸುತ್ತಿರುವ ಜನರ ಅವಶ್ಯಕತೆಗಳನ್ನು ಪೂರೈಸಲು ಹೆಚ್ಚು ಪ್ರಯತ್ನಿಸುತ್ತಿವೆ. ಜೊತೆಗೆ ಸಂಪನ್ಮೂಲಗಳ ಅಸಮರ್ಪಕ ನಿರ್ವಹಣೆ ಮತ್ತು ಅತಿಯಾದ ಬಳಕೆಯಿಂದ ಪರಿಸರದ ಮೇಲೂ ದುಷ್ಪರಿಣಾಮ ಬೀರುತ್ತಿರುವದನ್ನು ಹಿಂದೆಂದಿಗಿಂತಲೂ ಇಂದು ಹೆಚ್ಚು ಕಾಣುತ್ತಿದ್ದೇವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯಗಳೆಂದರೆ ಭೂಸವಕಳಿ ತಡೆಗಟ್ಟುವುದು ಶಿಥಿಲವಾದ, ಕೃಷಿಗೆ ಯೋಗ್ಯವಲ್ಲದ ಜಮೀನುಗಳನ್ನು ಕೃಷಿಗೆ ಯೋಗ್ಯವಾಗಿಸುವುದು ಮತ್ತು ಈಗಾಗಲೇ ಕೃಷಿಯಲ್ಲಿ ಅಳವಡಿಸಿರುವ ಜಮೀನಿನಲ್ಲಿ ಕೃಷಿ ಚಟುವಟಿಕೆಗಳನ್ನು ತೀವ್ರಗೊಳಿಸುವುದು. ಇದರಿಂದ ಕೃಷಿಗೆ ಯೋಗ್ಯವಲ್ಲದ, ಗುಣಮಟ್ಟವಿಲ್ಲದ ಇತರ ಜೀವನಾವಶ್ಯಕ ಕೃಷಿಯೇತರ ಚಟುವಟಿಕೆಗಳಿಗೆ ಉಪಯೋಗಿಸಲು ಸಾಧ್ಯವಾಗುತ್ತದೆ. ಸುಸ್ಥಿರ ಅಭಿವೃದ್ಧಿಗೆ ಸೂಕ್ತ ಪದ್ಧತಿಯೊಂದನ್ನು ಅಭಿವೃದ್ಧಿಪಡಿಸಲು, ಒಂದು ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳು, ಕೈಗೊಂಡ ಸಂರಕ್ಷಣಾ ಕ್ರಮಗಳು, ಈಗಾಗಲೇ ಸತ್ವಹೀನ ಪ್ರದೇಶಗಳಿಗೆ ಬೇಕಾಗುವ ಯೋಗ್ಯ ಪರ್ಯಾಯ ಬೆಳೆಪದ್ಧತಿ ಇತ್ಯಾದಿ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಆ ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ಮತ್ತು ಅವುಗಳ ಬಳಕೆಯ ಮಟ್ಟದ ಬಗ್ಗೆ ಸಮಗ್ರ ಮಾಹಿತಿ ಅವಶ್ಯ. ಭೂಗರ್ಭಶಾಸ್ತ್ರ, ಪ್ರಾಕೃತಿಕ ಭೂಗೋಳ, ಮಣ್ಣಿನ ಮೇಲ್ಮೈ ಲಕ್ಷಣಗಳು, ಅಂತರ್ಜಲ, ಭೂಬಳಕೆ / ಭೂಹೊದಿಕೆ, ಹವಮಾನ ಅಂಕಿ ಅಂಶಗಳು, ಸಾಮಾಜಿಕ, ಅರ್ಥಿಕ ಮತ್ತು ಮೂಲಭೂತ ಸೌಕರ್ಯಗಳನ್ನು ಒಟ್ಟಾಗಿ ಗಮನಕ್ಕೆ ತೆಗೆದುಕೊಂಡು ಸಮಗ್ರ ಯೋಜನೆಗೆ ಒತ್ತು ಕೊಡಬೇಕು.

ವಿವಿಧ ವಿಷಯಗಳ ನಕಾಶೆಯಿಂದ ದೊರೆಯುವ ಮಾಹಿತಿ ಮತ್ತು ಆ ಪ್ರದೇಶದ ಸಾಮಾಜಿಕ, ಆರ್ಥಿಕ, ಬೇಡಿಕೆ–ಪೂರೈಕೆ, ಹವಾಮಾನ ಮಾಹಿತಿ ಇತ್ಯಾದಿಗಳನ್ನು ಸಂಯೋಜಿಸಲು ಭೌಗೋಳಿಕ ಮಾಹಿತಿ ಪದ್ಧತಿ (ಜಿಐಎಸ್) ಒಂದು ದಕ್ಷ ಕಾರ್ಯ ನಿರ್ವಹಣಾ ಸಾಧನೆಯೆಂದರೆ ಅತಿಶಯವಲ್ಲ. ಮಣ್ಣು ಮತ್ತು ಅದರ ಸಾಮಾರ್ಥ್ಯ, ಅಂತರ್ಜಲದ ಲಭ್ಯತೆ, ಭೂಮಿಯ ಇಳಿಜಾರು ಇತ್ಯಾದಿಗಳ ಪ್ರತೀ ಸಂಪನ್ಮೂಲಗಳ ಮಾಹಿತಿಗಳನ್ನು ಕ್ರೊಢೀಕರಿಸಿ ಪರಿಪೂರ್ಣ ಅಂದಾಜು ಮಾಡಿದರೆ ನೀರು ಮತ್ತು ಕೃಷಿ ಸಂಪನ್ಮೂಲಗಳ ಅಭಿವೃದ್ಧಿಯ ಕಾರ್ಯಯೋಜನೆಗೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಬಹಳ ಸಹಕಾರಿಯಾಗುತ್ತದೆ. ಈ ರೀತಿಯಲ್ಲಿ ಸಮಗ್ರವಾಗಿ ಕ್ರೊಢೀಕರಿಸಿದ ಅಧ್ಯಯನದಿಂದ ಅಯಾ ಪ್ರದೇಶದ ಸಂಪನ್ಮೂಲಗಳ ಎಲ್ಲಾ ವಿಷಯಗಳ ಬಗೆಗಿನ ಮಾಹಿತಿಯಿಂದ ಶೀಘ್ರ ಯೋಜನಾ ತಯಾರಿಕೆಗೆ, ಬರಪೀಡಿತ ಪ್ರದೇಶಗಳಿಗೆ ತಾತ್ಕಾಲಿಕ ಮತ್ತು ದೀರ್ಘಾವದಿ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲು, ಇತ್ಯಾದಿ ವಿಷಯಗಳಿಗೆ ಸಹಕಾರಿಯಗುವುದು. ದೀರ್ಘಾವಧಿಯಲ್ಲಿ ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು, ಮೇವು, ಮರ ಮಟ್ಟುಗಳು ಮತ್ತು ಆಹಾರ ದಾನ್ಯಗಳ ಪೂರೈಕೆಗೆ ಪರಿಹಾರ ಕಂಡು ಹಿಡಿಯಲು, ನೀರು ಕಡಿಮೆ ಇರುವಲ್ಲಿ ನೆಲ ನೀರಿನ ಸಂರಕ್ಷಣೆ, ಅಂತರ್ಜಲ ಮರುಪೂರ್ಣ, ನೀರಾವರಿ ನೀರಿನ ಸಮರ್ಪಕ ಬಳಕೆ ಸೂಕ್ತ ಬೆಳೆ ಪದ್ಧತಿಯ ಅಳವಡಿಕೆ, ಇತ್ಯಾದಿ ಆಯಾ ಪ್ರದೇಶಕ್ಕೆ ಸೂಕ್ತ ಮತ್ತು ಹೊಂದಿಕೊಳ್ಳುವ ಕ್ರಮಗಳನ್ನು ಮಣ್ಣು ಮತ್ತು ಹವಾಗುಣಕ್ಕೆ ತಕ್ಕಂತೆ ರೂಪಿಸಲು ಈ ತಂತ್ರಜ್ಞಾನ ಸಹಕಾರಿಯಾಗಿದೆ. ಅಂತರಿಕ್ಷ ವಿಜ್ಞಾನ, ಇಂದು ಅಪರಿಮಿತ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಆಧುನಿಕ ತಂತ್ರಜ್ಞಾನವಾಗಿ ಪರಿಣಮಿಸುತ್ತಿದೆ. ಆಕಾಶಗರ್ಭದಲ್ಲಿ ಅಡಗಿರುವ ಉಪಗ್ರಹಗಳು "ರವಿ ಕಾಣದ್ದನ್ನು ಕವಿ ಕಂಡ" ಎಂಬಂತೆ ಬರಿಗಣ್ಣಿಗೆ ಗೋಚರಿಸುವ ಭೂಮಿಯ ಮೇಲಿನ (ಭೌಗೋಳಿಕ) ವಿವರಗಳನ್ನೆಲ್ಲ ಕಲೆಹಾಕುವಂತೆ ಭೂಗರ್ಭದೊಳಗೆ ಇಣಕಿ ನೋಡುವ ಅಸಾಧಾರಣ ಕಾರ್ಯವನ್ನೂ ನಿರ್ವಹಿಸುತ್ತಿವೆ. ಮರಳಗಾಡು, ಅರಣ್ಯ, ಬೆಳೆ, ಖನಿಜ ಕ್ಷೇತ್ರಗಳ ವಿವರಗಳನ್ನೊದಗಿಸುತ್ತಿದೆ. ಬಿರುಗಾಳಿ, ಪ್ರವಾಹ, ಚಂಡಮಾರುತಗಳ ಬಗೆಗೆ ಮುನ್ಸೂಚನೆ ಕೊಡುತ್ತಿವೆ. ಆದರೆ ಮೈಕ್ರೋ ತರಂಗ ಗ್ರಾಹಕಗಳಿಂದ ಇನ್ನೂ ಹೆಚ್ಚಿನ ವಿವರಗಳನ್ನು ನಿಖರವಾಗಿ ಸಂಗ್ರಹಿಸಲು ಸಾಧ್ಯ. ಮುಂದಿನ ದೂರಸಂಪರ್ಕ ಉಪಗ್ರಹಗಳಲ್ಲಿ ಈ ಬಗೆಗಿನ ವ್ಯವಸ್ಥೆಯಲ್ಲಿ ಕಲ್ಪಿಸುವುದರ ಮೂಲಕ ಉದ್ದೇಶಿಸಲಾಗಿದೆ. ಹೀಗೆ ದೂರಗ್ರಹಣ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಬಳಕೆ ದೇಶದ ಕೃಷಿ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡಬಲ್ಲದು.

**ಆಕರಗಳು** :


• ರೇ. ಎಸ್. ಎಸ್. ಪಾಣಿಗ್ರಾಹಿ ಪಿ. ಹಾಗೂ ಪರಿಹಾರ ಜೆ. ಎಸ್. 2001, ನಿಖರ ಕೃಷಿಯಲ್ಲಿ ದೂರಸಂವೇದಿ ಉಪಗ್ರಗಳ ಪಾತ್ರ, ಸ್ಪೇಸ್ ಆಪ್ಲಿಕೇಶನ್ ಸೆಂಟರ್ ಅಹಮದಾಬಾದ್, ಪು. 1–21.

• ಗೌರಿಶಂಕರ ಡಿ. ಹಾಗೂ ಅಡಿಗ ಎಸ್. 2001, ಕೃಷಿಯಲ್ಲಿ ದೂರಸಂವೇದಿ ಉಪಗಹಗಳ ಪಾತ್ರ : ಒಂದು ವಿಶ್ಲೇಷಣೆ. ಪು. 9–14.

• ವೆಂಕಟರತ್ನಂ. ಎಲ್. 2001, ಕೃಷಿ ಸಂಪನ್ಮೂಲಗಳ ನಿರ್ವಹಣೆಗೆ ದೂರಸಂವೇದಿ ಹಾಗೂ ಜಾಗತಿಕ ಮಾಹಿತಿ ತಂತ್ರಜ್ಞಾನಗಳ ಪಾತ್ರ. ಪು.20–29.


**ನಿಖರ ಕೃಷಿಯಲ್ಲಿ ದೂರಸಂವೇದಿ ಉಪಗ್ರಹಗಳು ಹಾಗೂ ಜಾಗತಿಕ ಮಾಹಿತಿ ತಂತ್ರಜ್ಞಾನಗಳ ಬಳಕೆಯ ಒಂದು ಪಕ್ಷಿ ನೋಟ**



ಭಾರತದ ಸಂಪನ್ಮೂಲಗಳ ಸದ್ಬಳಕೆಯಲ್ಲಿ ಉಪಗ್ರಹಗಳ ಪಾತ್ರ



ಮೇಡಕ್‌ನಾಲ ಜಲಾನಯನ ಪ್ರದೇಶದ ಅಭಿವೃದ್ಧಿಯಲ್ಲಿ ದೂರಸಂವೇದಿ ಉಪಗ್ರಹಗಳ ಮಾಹಿತಿ ಉಪಯೋಗಿಸಿ ವಿವಿಧ ಸಂಪನ್ಮೂಲಗಳ ಛಾಯಾ ಚಿತ್ರಗಳು





*ಕಟನ್‌ಗಿಡಾನಾಲ ಜಲಾನಯನ ಪ್ರದೇಶದ ಅಭಿವೃದ್ಧಿಯಲ್ಲಿ ದೂರಸಂವೇದಿ ಉಪಗ್ರಹಗಳ ಮಾಹಿತಿ ಉಪಯೋಗಿಸಿ ಯೋಜನೆಯ ಪ್ರಯೋಜನ ಕುರಿತು ವಿಶ್ಲೇಷಿಸಿದ ಛಾಯಾ ಚಿತ್ರಗಳು*

Fig 4 : Location map of Katangidda Nala watershed study area,Chincholi Taluk,Gulbarga District



Fig. : Comparison of Satellite imageries of Katangidda Nala Watershed,Chincholi Taluk,Gulbarga District



Fig. : Comparison of landuse/landcover Maps of Katangidda Nala Watershed,Chincholi Taluk,Gulbarga District




Fig. : Comparison of NDVI imageries of Katangidda Nala Watershed, Chincholi Taluk, Gulbarga District



# ವಿವಿಧ ರೂಪದ ಗೊಬ್ಬರಗಳನ್ನು ವಿವಿಧ ಮಾದರಿಯಲ್ಲಿ ಹಾಕುವುದರಿಂದ ಮೆಕ್ಕೆಜೋಳದ ಇಳುವರಿ ಮತ್ತು ಪೋಷಕಾಂಶಗಳ ಹೀರುವಿಕೆಯ ಮೇಲಾಗುವ ಪರಿಣಾಮ

ಬಸವರಾಜ, ಪಿ. ಕೆ.*, ಸಂತೋಷ, ವಿ. ಪಿ., ಮೊಹಮ್ಮದ್ ಸಾಖೀಬ್‌ಉಲ್ಲಾ, ಹೆಚ್. ಮತ್ತು ಪ್ರದೀಪ್ ಡೆ.**
*ಮಣ್ಣು ಪರೀಕ್ಷೆ ಮತ್ತು ಬೆಳೆ ಸ್ಪಂಧನೆ ಪ್ರಾಯೋಜನೆ, ಕೃಷಿ ವಿಶ್ವವಿದ್ಯಾನಿಲಯ, ಗಾ. ಕೃ. ವಿ. ಕೇ., ಬೆಂಗಳೂರು.**ಮಣ್ಣು ಪರೀಕ್ಷೆ ಮತ್ತು ಬೆಳೆ ಸ್ಪಂಧನೆ ಪ್ರಾಯೋಜನೆ, ಐ.ಐ.ಎಸ್.ಎಸ್, ಭೂಪಾಲ್, ಮಧ್ಯಪ್ರದೇಶ.

**ಪ್ರಬಂಧಸಾರ:–** ವಿವಿಧ ರೂಪದ ಗೊಬ್ಬರಗಳನ್ನು ವಿವಿಧ ಮಾದರಿಯಲ್ಲಿ ಹಾಕುವುದರಿಂದ ಮೆಕ್ಕೆಜೋಳದ ಇಳುವರಿ ಮತ್ತು ಪೋಷಕಾಂಶಗಳ ಹೀರುವಿಕೆಯ ಮೇಲಾಗುವ ಪರಿಣಾಮವನ್ನು ಅಭ್ಯಯಿಸಲು ಒಂದು ಸಂಶೋಧನಾ ಪ್ರಯೋಗವನ್ನು ಯಾದೃಚ್ಛಿಕ ಮಾದರಿಯಲ್ಲಿ ಹತ್ತು ಉಪಚಾರಗಳೊಂದಿಗೆ ಮೂರು ಬಾರಿ ಪುನರಾವರ್ತಿಸಿ ವಲಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರಿನಲ್ಲಿ ಎರಡು ವರ್ಷಗಳ ಕಾಲ (2012 ಮತ್ತು 2013) ಕೈಗೊಳ್ಳಲಾಯಿತು. ಈ ಪ್ರಯೋಗದ ಫಲಿತಾಂಶವೇನೆಂದರೆ, ಶೇ.100 ರಷ್ಟು ಮಣ್ಣು ಪರೀಕ್ಷೆ–ಇಳುವರಿ ಗುರಿ (90 ಕ್ವಿ./ಹೇ) ಆಧಾರದ ಪೋಷಕಾಂಶಗಳನ್ನು ನೀರಿನಲ್ಲಿ ಕರಗುವ ರಸಗೊಬ್ಬರಗಳಿಂದ ಕೊಡುವುದರಿಂದ ಮೆಕ್ಕೆಜೋಳದ ಕಾಳಿನ ಇಳುವರಿ (82.66 ಕ್ವಿ./ಹೇ) ಮತ್ತು ಮೇವಿನ ಇಳುವರಿಯು(92.89 ಕ್ವಿ./ಹೇ) ವಾಡಿಕೆ (ಸಾಮಾನ್ಯ) ಗೊಬ್ಬರಗಳನ್ನು ಸಾಮಾನ್ಯ ಶಿಫಾರಸ್ಸಿನ ಮೂಲಕ ಕೊಡುವುದಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವುದು ಕಂಡು ಬಂದಿದೆ. ಇದೇ ರೀತಿ ಶೇ.50 ರಷ್ಟು ಮಣ್ಣು ಪರೀಕ್ಷೆ–ಇಳುವರಿ ಗುರಿ (90 ಕ್ವಿ./ಹೇ) ಆಧಾರದ ಪೋಷಕಾಂಶಗಳನ್ನು ನೀರಿನಲ್ಲಿ ಕರಗುವ ರಸಗೊಬ್ಬರಗಳಿಂದ ಕೊಡುವುದರಿಂದ ಮೆಕ್ಕೆಜೋಳದ ಹೆಚ್ಚಿನ ಇಳುವರಿ ಅಥವಾ ಶೇ.100 ರ ಸಾಮಾನ್ಯ ಶಿಫಾರಸ್ಸಿನ ಅಥವಾ ಕಡಿಮೆ–ಮಧ್ಯಮ–ಹೆಚ್ಚು ಶಿಫಾರಸ್ಸಿನ ಪ್ರಮಾಣದ ವಾಡಿಕೆ ಗೊಬ್ಬರಗಳಿಂದ ಬರುವ ಇಳುವರಿಯಷ್ಟೇ ಬಂದಿದೆ. ಮೆಕ್ಕೆಜೋಳದ ಕಾಳು ಮತ್ತು ಮೇವಿನಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಹೀರುವಿಕೆಯು ಮಣ್ಣು ಪರೀಕ್ಷೆ–ಇಳುವರಿ ಗುರಿ ಆಧಾರಿತದ ಶೇ.100 ರಷ್ಟು ಪೋಷಕಾಂಶಗಳನ್ನು ನೀರಿನಲ್ಲಿ ಕರಗುವ ಗೊಬ್ಬರಗಳ ಮೂಲಕ ಕೊಡುವುದರಿಂದ (ವಾಡಿಕೆ ಗೊಬ್ಬರಗಳ ಮೂಲಕ ಕೊಡುವುದಕ್ಕಿಂತ) ಗಮನಾರ್ಹವಾಗಿ ಹೆಚ್ಚಾಗಿರುವುದು ಕಂಡು ಬಂದಿದೆ.

ಆದರೆ, ವಿವಿಧ ಉಪಚಾರಗಳಲ್ಲಿನ ಮೌಲ್ಯ–ವೆಚ್ಚದ ಅನುಪಾತವನ್ನು ವಿಶ್ಲೇಷಿಸಿದರೆ, ವಾಡಿಕೆ ಗೊಬ್ಬರಗಳನ್ನು ಬಳಸಿದ ಉಪಚಾರಗಳಲ್ಲಿ ಇಳುವರಿ ಕಡಿಮೆ ಇದ್ದರೂ ಸಹ ಅತಿ ಹೆಚ್ಚಿನ ಖರ್ಚು–ಲಾಭದ ಅನುಪಾತ (8.17) ಕಂಡು ಬಂದಿದೆ. ಇದಕ್ಕೆ ಮುಖ್ಯ ಕಾರಣ ವಾಡಿಕೆ ಗೊಬ್ಬರಗಳಿಗೆ ಸರ್ಕಾರದಿಂದ ರಿಯಾಯಿತಿ ಸೌಲಭ್ಯವಿದ್ದು, ನೀರಿನಲ್ಲಿ ಕರಗುವ ರಸಗೊಬ್ಬರಗಳಿಗೆ ಈ ರಿಯಾಯಿತಿ ಇಲ್ಲದೆ ಹೆಚ್ಚು ದುಬಾರಿಯಾಗಿರುವುದು.

ಭಾರತದಲ್ಲಿ ಅಕ್ಕಿ, ಗೋಧಿ ಮತ್ತು ಜೋಳದ ಬೆಳೆಯ ನಂತರ ಮೆಕ್ಕೆಜೋಳದ ಬೆಳೆಯು ನಾಲ್ಕನೇ ಸ್ಥಾನದಲ್ಲಿದೆ. ಮೆಕ್ಕೆಜೋಳದ ಬೆಳೆಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಪೋಷಕಾಂಶಗಳು ಬೇಕಾಗಿರುವುದರಿಂದ, ಈ ಪೋಷಕಾಂಶಗಳ ಅವಶ್ಯಕತೆಯುನ್ನು ಮಣ್ಣಿನಲ್ಲಿರುವ ಪೋಷಕಾಂಶಗಳಿಂದಲೇ ಪೂರೈಸಲು ಸಾಧ್ಯವಿಲ್ಲ. ಆದ್ದರಿಂದ ಹೆಚ್ಚುವರಿ ಪೋಷಕಾಂಶಗಳನ್ನು ರಸಗೊಬ್ಬರಗಳ ಮೂಲಕ ಹಾಕಿ ಇವುಗಳ ಕೊರತೆಯನ್ನು ನೀಗಿಸಬಹುದು. ರೈತರು ಈ ರಸಗೊಬ್ಬರಗಳನ್ನು ಅಸಮತೋಲನವಾಗಿ ಬಳಸುತ್ತಿರುವುದರಿಂದ, ಕರ್ನಾಟಕದಲ್ಲಿ ಮೆಕ್ಕೆಜೋಳದ ಇಳುವರಿಯು ಕುಂಠಿತವಾಗಿದೆ. ಆದ್ದರಿಂದ ಸರಿಯಾದ ಪ್ರಮಾಣದ ರಸಗೊಬ್ಬರಗಳನ್ನು ಬೆಳೆಗಳಿಗೆ ಶಿಫಾರಸ್ಸು ಮಾಡುವುದು ವಿಜ್ಞಾನಿಗಳಿಗೆ ಒಂದು ಸವಾಲಾಗಿದೆ (ಶಂಕರ್ ಮತ್ತು ಉಮೇಶ್, 2008). ಏಕೆಂದರೆ ಬೆಳೆಗೆ ಬೇಕಾಗಿರುವ ಪೋಷಕಾಂಶಗಳನ್ನು ಪೂರೈಸಲು ಮತ್ತು ಉತ್ಪಾದನಾ ಮಟ್ಟವನ್ನು ಉಳಿಸಿಕೊಳ್ಳಲು, ಉತ್ತಮ ಇಳುವರಿ ಮತ್ತು ಆರ್ಥಿಕ ಬೆಳೆ ಉತ್ಪಾದನೆಗೆ ರಸಗೊಬ್ಬರಗಳನ್ನು ಶಿಫಾರಸ್ಸು ಮಾಡಲು ಹಲವಾರು ಮಾದರಿಯ ವಿಧಾನಗಳನ್ನು ಬಳಸಲಾಗುತ್ತದೆ. ಇವುಗಳಲ್ಲಿ ಸಾಮಾನ್ಯ ಶಿಫಾರಸ್ಸು, ಮಣ್ಣು ಪರೀಕ್ಷೆ ಆಧಾರದಲ್ಲಿ ರಸಗೊಬ್ಬರಗಳನ್ನು ಹೊಂದಾಣಿಕೆ ಮಾಡುವುದು, ಕೊರತೆ ಮತ್ತು ಶಿಫಾರಸ್ಸು ಸಂಯೋಜನೆಯ ಪದ್ದತಿ (ಡಿ.ಆರ್.ಐ.ಎಸ್.), ಮಣ್ಣು ಪರೀಕ್ಷೆ–ಇಳುವರಿ ಗುರಿ ಆಧಾರದಲ್ಲಿ ರಸಗೊಬ್ಬರದ ಶಿಫಾರಸ್ಸು ಮತ್ತು ನಿರ್ಧಿಷ್ಟ ಪ್ರದೇಶಕ್ಕನುಗುಣವಾಗಿ ಪೋಷಕಾಂಶಗಳ ಶಿಫಾರಸ್ಸು. ಪೂರ್ಣವಾಗಿ ನೀರಿನಲ್ಲಿ ಕರಗುವ ವಿವಿಧ ಶ್ರೇಣಿಯ ಸಾರಜನಕ, ರಂಜಕ, ಪೊಟ್ಯಾಷ್ ಪೋಷಕಾಂಶಗಳುಳ್ಳ ರಸಗೊಬ್ಬರಗಳನ್ನು ನೀರಿನಲ್ಲಿ ಕರಗುವ ರಸಗೊಬ್ಬರಗಳೆನ್ನುತ್ತಾರೆ. ಕೃಷಿಯಲ್ಲಿ ಕಿರು (ಸೂಕ್ಷ್ಮ) ನೀರಾವರಿ ಪದ್ದತಿಯ ಬೆಳವಣಿಗೆಯಿಂದ ಶೇ. 100 ರಷ್ಟು ನೀರಿನಲ್ಲಿ ಕರಗುವ ರಸಗೊಬ್ಬರಗಳ ಬಳಕೆಗೆ ಸಹಾಯವಾಗಿದೆ. ಇದರಿಂದಾಗಿ ಯಾವುದೇ ರೀತಿಯಲ್ಲಿ ಪೋಷಕಾಂಶಗಳು ಪೋಲಾಗವುದನ್ನು ತಡೆದು ಸಸ್ಯಗಳಿಗೆ ಅಗತ್ಯವಿರುವಷ್ಟು ಪೋಷಕಾಂಶಗಳನ್ನು ನಿಖರವಾದ ಪ್ರಮಾಣದಲ್ಲಿ ಪೂರೈಸಲು ಸುಲಭವಾಗುತ್ತದೆ. ವಿವಿಧ ಬೆಳೆಗಳಲ್ಲಿ ನೀರಿನಲ್ಲಿ ಕರಗುವ ಗೊಬ್ಬರಗಳ ಬಳಕೆಯು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅತಿ ಹೆಚ್ಚಾಗಿದ್ದು, ಭಾರತದಲ್ಲಿ ಈ ಗೊಬ್ಬರಗಳ ಬಳಕೆಯು ಅತಿ ವಿರಳವಾಗಿದೆ. ಈ ರೀತಿಯು, ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಹನಿ ರಸಾವರಿ ಅಥವಾ ಸಿಂಪರಣೆ ಮೂಲಕ ಬಳಸಬಹುದು. ಆದರೆ, ಕೆಲವು ಪ್ರದೇಶಗಳಲ್ಲಿ ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಸಾಮಾನ್ಯ ರಸಗೊಬ್ಬರಗಳನ್ನು ಹಾಕುವ ರೀತಿಯಲ್ಲೇ ಮಣ್ಣಿನಲ್ಲಿ ಹಾಕಲಾಗುತ್ತದೆ. ಆದರೆ ದೇಶದಲ್ಲಿ ಇದುವರೆವಿಗೂ, ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರ ಇಟ್ಟುಕೊಂಡು ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಬಳಕೆ ಮಾಡಿದ ಯಾವುದೇ ಸಂಶೋಧನೆ ನಡೆದಿಲ್ಲ. ಆದ್ದರಿಂದ ನೀರಿನಲ್ಲಿ ಕರಗುವ ವಿವಿಧ ಮಾದರಿಯ ರಸಗೊಬ್ಬರಗಳನ್ನು ವಿವಿಧ ರೀತಿಯಲ್ಲಿ ಹಾಕುವುದರಿಂದ ಸಂಕರಣ ಮೆಕ್ಕೆಜೋಳದ ಇಳುವರಿ ಮತ್ತು ಪೋಷಕಾಂಶಗಳ ಹೀರುವಿಕೆಯ ಮೇಲಾಗುವ ಪರಿಣಾಮಗಳನ್ನು ಪರಿಶೀಲಿಸಲು ಈ ಪ್ರಯೋಗವನ್ನು ಕೈಗೊಳ್ಳಲಾಯಿತು.

**ಸಂಶೋಧನಾ ವಿಧಾನ ಮತ್ತು ಪರಿಕರಗಳು:** ಈ ಸಂಶೋದನಾ ಪ್ರಯೋಗವನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ 2012–13 ಮತ್ತು 2013–14 ನೇ ಸಾಲಿನ ಮುಂಗಾರಿನಲ್ಲಿ ನಡೆಸಲಾಯಿತು. ಪ್ರಯೋಗ ಮಾಡಿದ ಸ್ಥಳದ ಮಣ್ಣು ವಿಜಯಪುರ ಸರಣಿಗೆ ಸೇರಿದ್ದು ಕೆಂಪು ಮರಳು ಮಿಶ್ರಿತವಾಗಿದ್ದು,

ಸಾವಯವ ಇಂಗಾಲ ಕಡಿಮೆಯಿದ್ದು (0.36 %), ಸ್ವಲ್ಪ ಆಮ್ಲೀಯ ರಸಸಾರ (6.12) ಇದೆ. ದೊರೆಯುವ ಸಾರಜನಕ ಕಡಿಮೆ (225.16 ಕೆ.ಜಿ./ ಹೆ.) ಇದ್ದು, ದೊರೆಯುವ ರಂಜಕ ಹೆಚ್ಚು (77.92 ಕೆ.ಜಿ./ ಹೆ.) ಮತ್ತು ದೊರೆಯುವ ಪೊಟ್ಯಾಷ್ ಮಧ್ಯಮ (153.73 ಕೆ.ಜಿ. / ಹೆ.) ಪ್ರಮಾಣದಲ್ಲಿ ಕಂಡು ಬಂದಿದೆ. ಈ ಪ್ರಯೋಗದಲ್ಲಿ ಹತ್ತು ಉಪಚಾರಗಳನ್ನು ಮೂರು ಬಾರಿ ಪುನರಾವರ್ತಿಸಿ ಯಾದೃಚ್ಛಿಕ ಸಂಪೂರ್ಣ ವಿಭಾಗದ ವಿನ್ಯಾಸದಲ್ಲಿ ಕೈಗೊಳ್ಳಲಾಯಿತು. ವಿವಿಧ ಉಪಚಾರದ ಸಂಯೋಜನೆಗಳೆಂದರೆ 1: ಸಂಪೂರ್ಣ ನಿಯಂತ್ರಣ, 2: ಶಿಫಾರಸ್ಸು ಮಾಡಿದ ಶೇ. 100 ರಷ್ಟು (ಸಾಮಾನ್ಯ) ವಾಡಿಕೆ ರಸಗೊಬ್ಬರ, 3: ಶಿಫಾರಸ್ಸು ಮಾಡಿದ ಶೇ. 100 ರಷ್ಟು ನೀರಿನಲ್ಲಿ ಕರಗುವ ರಸಗೊಬ್ಬರ, 4: ಶಿಫಾರಸ್ಸು ಮಾಡಿದ ಶೇ. 50 ರಷ್ಟು ನೀರಿನಲ್ಲಿ ಕರಗುವ ರಸಗೊಬ್ಬರ, 5: ಶೇ. 100 ರಷ್ಟು ಕಡಿಮೆ, ಮಧ್ಯಮ ಮತ್ತು ಹೆಚ್ಚು ಪ್ರಮಾಣ ಆಧಾರದ ವಾಡಿಕೆ ರಸಗೊಬ್ಬರ, 6: ಶೇ. 100 ರಷ್ಟು ಕಡಿಮೆ, ಮಧ್ಯಮ ಮತ್ತು ಹೆಚ್ಚು ಪ್ರಮಾಣ ಆಧಾರದ ನೀರಿನಲ್ಲಿ ಕರಗುವ ರಸಗೊಬ್ಬರ, 7: ಶೇ. 50 ರಷ್ಟು ಕಡಿಮೆ, ಮಧ್ಯಮ ಮತ್ತು ಹೆಚ್ಚು ಪ್ರಮಾಣ ಆಧಾರದ ನೀರಿನಲ್ಲಿ ಕರಗುವ ರಸಗೊಬ್ಬರ, 8: ಶೇ. 100 ರಷ್ಟು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದ ವಾಡಿಕೆ ರಸಗೊಬ್ಬರ, 9: ಶೇ. 100 ರಷ್ಟು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದ ನೀರಿನಲ್ಲಿ ಕರಗುವ ರಸಗೊಬ್ಬರ ಮತ್ತು 10: ಶೇ. 50 ರಷ್ಟು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದ ನೀರಿನಲ್ಲಿ ಕರಗುವ ರಸಗೊಬ್ಬರ. ಉಪಚಾರ ಒಂದನ್ನು (ಉ. 1) ಬಿಟ್ಟು ಎಲ್ಲಾ ಉಪಚಾರಗಳಲ್ಲೂ ಪ್ರತಿ ಹೆಕ್ಟೇರಿಗೆ 10 ಟನ್ ಕೊಟ್ಟಿಗೆ ಗೊಬ್ಬರ ಮತ್ತು 10 ಕೆ.ಜಿ. ಸತುವಿನ ಸಲ್ಫೇಟ್‌ನ್ನು ಹಾಕಲಾಯಿತು.

ಪ್ರಸ್ತುತ ಅಧ್ಯಯನದಲ್ಲಿ ಮೂರು ವಿವಿಧ ರೀತಿಯ ಪೋಷಕಾಂಶಗಳ ಶಿಫಾರಸ್ಸನ್ನು ಅಳವಡಿಸಲಾಗಿದೆ. ಅವುಗಳೆಂದರೆ ಸಾಮಾನ್ಯ ಶಿಫಾರಸ್ಸು, ಕಡಿಮೆ, ಮಧ್ಯಮ ಮತ್ತು ಹೆಚ್ಚು ವಿಧಾನ ಮತ್ತು, ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದ ರಸಗೊಬ್ಬರಗಳ ಶಿಫಾರಸ್ಸು. ಈ ಪ್ರಯೋಗದಲ್ಲಿ ಬಳಸಿದ ಸಾಮಾನ್ಯ ರಸಗೊಬ್ಬರಗಳೆಂದರೆ ಯೂರಿಯಾ, ಸೂಪರ್ ಫಾಸ್ಫೇಟ್ ಮತ್ತು ಪೊಟ್ಯಾಷ್. ಆದರೆ, ನೀರಿನಲ್ಲಿ ಕರಗುವ ರಸಗೊಬ್ಬರಗಳಲ್ಲಿ 12:61:0, 28:28:00, 00:00:50 ಶ್ರೇಣಿಗಳ ಸಾರಜನಕ, ರಂಜಕ, ಪೊಟ್ಯಾಷ್ ಮತ್ತು ಕ್ಯಾಲ್ಸಿಯಂ ನೈಟ್ರೇಟ್‌ಗಳುಳ್ಳ ರಸಗೊಬ್ಬರಗಳನ್ನು ಬಳಸಲಾಗಿದೆ.

ವಲಯ ಕೃಷಿ ಸಂಶೋಧನಾ ಕೇಂದ್ರ, ಮಂಡ್ಯದಲ್ಲಿ ಮಣ್ಣು ಪರೀಕ್ಷೆ–ಬೆಳೆ ಸ್ಪಂಧನೆ ಪ್ರಾಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸಿರುವ ಈ ಕೆಳಗಿನ ಸಮೀಕರಣದ ಆಧಾರದ ಮೇಲೆ ರಸಗೊಬ್ಬರದ ಪ್ರಮಾಣವನ್ನು ಲೆಕ್ಕಾಚಾರ ಹಾಕಲಾಗಿದೆ.

| |
|---|
| ಸಾ.ಪೊ = 3.84 ಇ. ಗುರಿ – 0.42 ದೊ.ಸಾ |
| ರಂ. ಪೊ = 1.57 ಇ. ಗುರಿ – 1.18 ದೊ. ರಂ. |
| ಪೊ. ಪೊ = 1.15 ಇ. ಗುರಿ – 0.11 ದೊ ಪೊ. |

ಮಣ್ಣು ಪರೀಕ್ಷೆ ಮತ್ತು ಬೆಳೆ ಸ್ಪಂದನೆ ವಾರ್ಷಿಕ ವರದಿ (2008)

ಅಂದರೆ: ಇ. ಗುರಿ = ಇಳುವರಿ ಗುರಿ (ಕ್ವಿಂಟಲ್ ಗಳಲ್ಲಿ) ಎಂದರೆ 90 ಕ್ವಿ./ಹೆ.; ಸಾ.ಪೋ. = ಸಾರಜನಕ ಪೋಷಕಾಂಶ (ಕೆ.ಜಿ./ಹೆ.); ರಂ.ಪೋ. = ರಂಜಕ ಪೋಷಕಾಂಶ (ಕೆ.ಜಿ./ಹೆ.); ಪೊ.ಪೋ. = ಪೊಟ್ಯಾಷ್ ಪೋಷಕಾಂಶ (ಕೆ.ಜಿ./ಹೆ.). ದೊ.ಸಾ., ದೊ.ರಂ., ದೊ.ಪೊ., ಆರಂಭದಲ್ಲಿ ಮಣ್ಣಿನಲ್ಲಿ ದೊರೆಯುವ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪೋಷಕಾಂಶ (ಕೆ.ಜಿ./ಹೆ.).

ಶಿಫಾರಸ್ಸು ಮಾಡಿದ ಬೇಸಾಯ ಕ್ರಮಗಳನ್ನು ಅನುಸರಿಸಿ ಹೈಬ್ರಿಡ್ ಮಕ್ಕೆಜೋಳ (ಎನ್.ಎ.ಹೆಚ್.–1137)ವನ್ನು ನೀರಾವರಿಯಲ್ಲಿ 2012 ಮತ್ತು 2013ರ ಮುಂಗಾರಿನ ಅವಧಿಯಲ್ಲಿ ಬೆಳೆಯಲಾಯಿತು. ಮೆಕ್ಕೆಜೋಳವು ಕಟಾವಿಗೆ ಬಂದ ನಂತರ ಪ್ರತಿ ನಿವ್ವಳ ತಾಕಿನ ಮೆಕ್ಕೆಜೋಳದ ತೆನೆಗಳನ್ನು ಕಟಾವು ಮಾಡಿ ಸಿಪ್ಪೆಯನ್ನು ತೆಗೆದು, ಕಾಳನ್ನು ಒಣಗಿಸಿ ಸ್ವಚ್ಛಗೊಳಿಸಿ ತೂಕ ಮಾಡಿಕೊಳ್ಳಲಾಯಿತು. ನಂತರ ಪ್ರತಿ ತಾಕಿನ ಇಳುವರಿಯನ್ನು ಪ್ರತಿ ಹೆ. ಗೆ. ಮಾರ್ಪಡಿಸಲಾಯಿತು. ಇದೇ ರೀತಿ ಮೇವಿನ ತೂಕವನ್ನು ನಮೂದಿಸಿ ಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಪ್ರತಿ ತಾಕಿನ 5 ಗಿಡದಿಂದ ತೆಗೆದ ಕಾಳು ಮತ್ತು ಮೇವನ್ನು ತೆಗೆದು ಒಣಗಿಸಿ ಪುಡಿ ಮಾಡಿ ಕೊಂಡು, ಮುಂದೆ ಇದರಲ್ಲಿನ ಪೋಷಕಾಂಶಗಳನ್ನು ಪ್ರಮಾಣಿತ ವಿಧಾನದಲ್ಲಿ ವಿಶ್ಲೇಷಣೆ ಮಾಡಲಾಯಿತು. ಇದೇ ರೀತಿ ಮಣ್ಣಿನಲ್ಲಿ ದೊರೆಯುವ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪೋಷಕಾಂಶಳನ್ನೂ ವಿಶ್ಲೇಷಣೆ ಮಾಡಲಾಯಿತು (ಜಾಕ್ಸನ್, 1973). ಪೋಷಕಾಂಶಗಳ ಹೀರುವಿಕೆ, ಬೆಳೆಯಲ್ಲಿ ಪೋಷಕಾಂಶ ಬಳಕೆಯ ದಕ್ಷತೆ, ಪ್ರತಿ ಕ್ರೀಯೆ ಅಳತೆಗೋಲು ಮತ್ತು ಮೌಲ್ಯ ವೈಚ್ಚ ಅನುಪಾತಗಳನ್ನು ಪ್ರಮಾಣಿತ ಸೂತ್ರಗಳನ್ನು ಬಳಸಿಕೊಂಡು ಲೆಕ್ಕಾಚಾರ ಮಾಡಲಾಯಿತು. ಇಳುವರಿಗೆ ಸಂಬಂಧಿಸಿದ ಎಲ್ಲಾ ಮಾನದಂಡಗಳನ್ನು, ಪೋಷಕಾಂಶಗಳ ಹೀರುವಿಕೆ ಮತ್ತು ಮಣ್ಣಿನಲ್ಲಿರುವ ಪೋಷಕಾಂಶದ ಸ್ಥಿತಿಯನ್ನು ಪ್ರಮಾಣಿತ ವಿಧಾನದಲ್ಲಿ ಅಂಕಿ ಅಂಶಗಳ ವಿಶ್ಲೇಷಣೆಗೆ ಒಳಪಡಿಸಿ ಪ್ರತಿಯೊಂದು ಉಪಚಾರಗಳಿಗೆ ಏನಾದರೂ ಗಮನಾರ್ಹ ವ್ಯತ್ಯಾಸವಿದೆಯೆ (ನಿ.ವ್ಯ.) ಎಂದು ತಿಳಿದುಕೊಳ್ಳಲಾಯಿತು.

**ಫಲಿತಾಂಶಗಳು ಮತ್ತು ಅದರ ಚರ್ಚೆ:** ಪ್ರಯೋಗದ ಮೆಕ್ಕೆಜೋಳದ ಕಾಳು ಮತ್ತು ಮೇವಿನ ಇಳುವರಿಯ ಎರಡು ವರ್ಷದ ಸರಾಸರಿಯಿಂದ ತಿಳಿದು ಬಂದಿರುವುದೇನೆಂದರೆ, ನೀರಿನಲ್ಲಿ ಕರಗುವ ರಸಾಯನಿಕ ಗೊಬ್ಬರಗಳನ್ನು ಬಳಸಿದಾಗ, ವಾಡಿಕೆ (ಸಂಪ್ರಾದಾಯಿಕ) ರಸಗೊಬ್ಬರಗಳಿಂದ ಬಂದ ಇಳುವರಿಗಿಂತ ಹೆಚ್ಚಿನ ಇಳುವರಿ ಕಂಡುಬಂದಿದೆ. ಶೇ. 100 ರಷ್ಟು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದಲ್ಲಿ ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಬಳಸಿದ ತಾಕಿನಲ್ಲಿ (ಉ.9) ಅತಿ ಹೆಚ್ಚಿನ ಕಾಳು (82.66 ಕ್ವಿ./ಹೆ.) ಮತ್ತು ಮೇವಿನ ಇಳುವರಿ (92.89 ಕ್ವಿ./ಹೆ.) ಕಂಡುಬಂದಿದೆ. ಇದಕ್ಕೆ ಕಾರಣವೆಂದರೆ ನೀರಿನಲ್ಲಿ ಕರಗುವ ರಸಗೊಬ್ಬರಗಳಿಂದ ಸಾಕಷ್ಟು ಪ್ರಮಾಣದಲ್ಲಿ ಪೋಷಕಾಂಶಗಳು ಬೇರಿನ ವಲಯದಲ್ಲಿ ಲಭಿಸಿದ್ದು, ಬೇರುಗಳು ಈ ಪೋಷಕಾಂಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೀರಿಕೊಂಡು, ಇಳುವರಿ ಹೆಚ್ಚಾಗಲು ಕಾರಣವಾಗಿದೆ. ತದ ನಂತರ ಹೆಚ್ಚಿನ ಇಳುವರಿಯನ್ನು (ಉ. 10) ಶೇ. 50 ರಷ್ಟು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದಲ್ಲಿ ಪಡೆದಿದ್ದು (72.54 ಮತ್ತು 82.71 ಕ್ವಿ./ಹೆ.), ಈ ಉಪಚಾರವು ಶೇ. 100 ರಷ್ಟು ಶಿಫಾರಸ್ಸು ಮಾಡಿದ ವಾಡಿಕೆ ರಸಗೊಬ್ಬರಗಳಿಗಿಂತ (65.18 ಮತ್ತು 72.50 ಕ್ವಿ./ಹೆ.) ಹೆಚ್ಚಿನ ಇಳುವರಿಯನ್ನು ನೀಡಿದೆ. ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುವುದರಿಂದ ಅತಿಹೆಚ್ಚಿನ ಇಳುವರಿ ಪಡೆಯಬಹುದು. ಏಕೆಂದರೆ ಅವು ನೀರಿನಲ್ಲಿ ಬೇಗ ಕರಗುತ್ತವೆ ಮತ್ತು ಸಮವಾಗಿ ಬೇರಿನ ವಲಯದಲ್ಲಿ ಹಂಚಿಕೆಯಾಗುತ್ತವೆ. ಇದರಿಂದ

ನೇರವಾಗಿ ಗಿಡಗಳು ಹೀರಿಕೊಂಡು ಇಳುವರಿ ಹೆಚ್ಚಲು ಕಾರಣವಾಗುತ್ತದೆ (ತುಂಬಾರೆ ಮತ್ತು ನಿಕಮ್, 2004). ನೀರಿನಲ್ಲಿ ಕರಗುವ ಈ ಗೊಬ್ಬರಗಳು ಪೋಷಕಾಂಶಗಳ ನಷ್ಟತೆಯನ್ನು ತಡೆಗಟ್ಟಿ ದಕ್ಷತೆಯನ್ನು ಹೆಚ್ಚಿಸುತ್ತದೆ, ಈ ಕಾರಣಗಳಿಂದಾಗಿ ನೀರಿನಲ್ಲಿ ಕರಗುವ ರಸಗೊಬ್ಬರಗಳ ಬಳಕೆಯಿಂದ ಇಳುವರಿಯಲ್ಲಿ ಯಾವುದೇ ರೀತಿಯ ಗಮನಾರ್ಹ ವ್ಯತ್ಯಾಸವಿಲ್ಲದೆ ಶೇ. 20 ರಿಂದ 30ರಷ್ಟು ಶಿಫಾರಸ್ಸು ಮಾಡಿದ ರಸಗೊಬ್ಬರಗಳ ಬಳಕೆಯನ್ನು ಉಳಿಸಬಹುದು. ಉಪಚಾರ 9ರಲ್ಲಿ ಮೆಕ್ಕೆಜೋಳದ ಕಾಳು ಮತ್ತು ಮೇವಿನಿಂದ ಒಟ್ಟು ಸಾರಜನಕ ಪೋಷಕಾಂಶದ ಹೀರುವಿಕೆಯು ಶೇ. 100ರಷ್ಟು ವಾಡಿಕೆ ಗೊಬ್ಬರ ಮತ್ತು ಕಡಿಮೆ, ಮಧ್ಯಮ ಮತ್ತು ಹೆಚ್ಚು ಆಧಾರದಲ್ಲಿ ನೀರಿನಲ್ಲಿ ಕರಗುವ ಗೊಬ್ಬರಗಳನ್ನು ಕೊಟ್ಟಾಗ ಹೀರಿದ ಸಾರಜನಕಕ್ಕಿಂತ (193.88 ಕೆ.ಜಿ./ಹೆ.) ಹೆಚ್ಚಾಗಿರುವುದು ಕಂಡುಬಂದಿದೆ. ಆದರೆ, ಯಾವುದೇ ವಿಧಾನದಲ್ಲಿ ರಸಗೊಬ್ಬರಗಳನ್ನು ಶೇ. 50 ರಷ್ಟು ಕಡಿಮೆಮಾಡಿ ಬಳಸಿದಾಗ ಸಸ್ಯಗಳಲ್ಲಿ ಸಾರಜನಕ ಪೋಷಕಾಂಶವನ್ನು ಹೀರಿಕೊಳ್ಳುವುದು ಕಡಿಮೆಯಾಗುತ್ತದೆ (ಕೋಷ್ಠಕ 1). ಶೇ. 100ರಷ್ಟು ನೀರಿನಲ್ಲಿ ಕರಗುವ ರಸಗೊಬ್ಬರಗಳ ಬಳಕೆಯಿಂದ, ಸಸ್ಯದಲ್ಲಿ ರಂಜಕ ಹೀರುವಿಕೆಯ ಪ್ರಮಾಣವು ವಾಡಿಕೆ (ಸಂಪ್ರಾದಾಯಿಕ) ರಸಗೊಬ್ಬರಗಳಿಗಿಂತ ಗಮನಾರ್ಹವಾಗಿ ಹೆಚ್ಚಾಗಿರುತ್ತದೆ. ಶೇ. 100 ರಷ್ಟು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದಲ್ಲಿ ನೀರಿನಲ್ಲಿ ಕರಗುವ ಗೊಬ್ಬರಗಳ ಬಳಕೆಯಿಂದ ಮೆಕ್ಕೆಜೋಳದಲ್ಲಿ (ಕಾಳು ಮತ್ತು ಮೇವಿನ) ಒಟ್ಟು ರಂಜಕ ಹೀರುವಿಕೆಯು ಹೆಚ್ಚಾಗಿರುವುದು (38.03 ಕೆ.ಜಿ./ಹೆ.) ಕಂಡು ಬಂದಿದೆ. ಇದಕ್ಕೆ ಮುಖ್ಯ ಕಾರಣ ನೀರಿನಲ್ಲಿ ಕರಗುವ ಗೊಬ್ಬರಗಳು ಸುಲಭವಾಗಿ ಕರಗಿ ಬೇರುಗಳ ಸುತ್ತ ಸಮವಾಗಿ ಹಂಚಿಕೆಯಾಗುವುದರಿಂದ, ರಂಜಕ ಪೋಲಾಗದೆ ದಕ್ಷತೆಯಿಂದ ಗಿಡಗಳಿಗೆ ಬಳಕೆಯಾಗುತ್ತದೆ (ಶ್ಯಾಮ ಮತ್ತು ಸಂಗಡಿಗರು, 2009). ಶೇ. 100 ರಷ್ಟು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದ ನೀರಿನಲ್ಲಿ ಕರಗುವ ಗೊಬ್ಬರಗಳ ಬಳಕೆಯಿಂದ ಮೆಕ್ಕೆಜೋಳದ ಕಾಳು ಮತ್ತು ಮೇವಿನಲ್ಲಿ ಒಟ್ಟು ಪೊಟ್ಯಾಷ್ ಹೀರುವಿಕೆಯ ಪ್ರಮಾಣವು ಶೇ. 100 ರಷ್ಟು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದಲ್ಲಿ ವಾಡಿಕೆ ಗೊಬ್ಬರ ಹಾಕಿದ ತಾಕು ಬಿಟ್ಟು ಉಳಿದ ಎಲ್ಲಾ ಉಪಚಾರಗಳಿಗಿಂತ ಅತಿ ಹೆಚ್ಚಿನ ಹೀರುವಿಕೆ (107.34 ಕೆ.ಜಿ./ಹೆ.) ಕಂಡು ಬಂದಿದೆ. ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ವಿಧಾನವು ಕಡಿಮೆ, ಮಧ್ಯಮ ಮತ್ತು ಹೆಚ್ಚು, ಮತ್ತು ಶಿಫಾರಸ್ಸು ಮಾಡಿದ ರಸಗೊಬ್ಬರಗಳ ವಿಧಾನಗಳಿಗಿಂತ ಹೆಚ್ಚಿನ ಪೊಟ್ಯಾಷ್ ಹೀರುವಿಕೆಯ ಸಾರ್ಮಥ್ಯವನ್ನು ಹೊಂದಿದೆ. ಏಕೆಂದರೆ, ಈ ಉಪಚಾರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪೊಟ್ಯಾಷ್ ಪೋಷಕಾಂಶ (86.67 ಕೆ.ಜಿ./ಹೆ.) ಬಳಕೆಯಿಂದ ಹೆಚ್ಚಿನ ಪೊಟ್ಯಾಷ್ ಹೀರುವಿಕೆಯು ಕಂಡುಬಂದಿದೆ, ಇದಲ್ಲದೆ ನೀರಿನಲ್ಲಿ ಸುಲಭವಾಗಿ ಕರಗುವಿಕೆ ಮತ್ತು ಸಮಾನವಾಗಿ ಹಂಚುವಿಕೆಯೂ ಕಾರಣವಾಗಿದೆ (ರೈನಾ ಮತ್ತು ಸಂಗಡಿಗರು, 2011).

**ಪೋಷಕಾಂಶ ಬಳಕೆಯ ದಕ್ಷತೆ:** ಮೆಕ್ಕೆಜೋಳದಲ್ಲಿ ಸಾರಜನಕ ಬಳಕೆಯ ದಕ್ಷತೆಯು ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದಲ್ಲಿ ಶೇ. 50 ರಷ್ಟು ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಬಳಸಿದ ತಾಕುಗಳಲ್ಲಿ ಅತಿ ಹೆಚ್ಚಾಗಿರುವುದು (42.60 ಕೆ.ಜಿ./ ಕೆ.ಜಿ.) ಕಂಡು ಬಂದಿದೆ (ಕೋಷ್ಠಕ 2). ಈ ಉಪಚಾರದ ನಂತರ ಶೇ. 50ರಷ್ಟು ಕಡಿಮೆ, ಮಧ್ಯಮ ಮತ್ತು ಹೆಚ್ಚು ಆಧಾರದ ಮೇಲೆ ನೀರಿನಲ್ಲಿ ಕರಗುವ ರಸಗೊಬ್ಬರ ಬಳಸಿದ ತಾಕಿನಲ್ಲಿ ಹೆಚ್ಚು ದಕ್ಷತೆ ಕಂಡು ಬಂದಿದೆ. ಆದರೆ ಶೇ. 100 ರಷ್ಟು ಸಾರಜನಕ ಬಳಸಿದ ತಾಕುಗಳಲ್ಲಿ ದಕ್ಷತೆ ಕಡಿಮೆಯಾಗಿದೆ. ನಮ್ಮ ಸಂಶೋಧನೆಯಲ್ಲಿ ಪತ್ತೆಯಾಗಿರುವ ಫಲಿತಾಂಶವು ಸೈಯದ್ ಹೊಕ್‌ಮಾಳಿಪುರ್ ಮತ್ತು ಸಂಗಡಿಗರ 2010 ಅಧ್ಯಯನದಲ್ಲಿನ ಫಲಿತಾಂಶಗಳಿಗೆ ಹೋಲಿಕೆಯಾಗಿತ್ತದೆ. ಶೇ. 50ರಷ್ಟು ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಮಣ್ಣು ಪರೀಕ್ಷೆ ಇಳುವರಿ ಗುರಿ ಆಧಾರದ ಮೇಲೆ (ಉ. 10) ಬಳಸಿದ ತಾಕಿನಲ್ಲಿ ಹೆಚ್ಚಿನ ರಂಜಕದ ದಕ್ಷತೆಯು (153.36 ಕೆ.ಜಿ./ಕೆ.ಜಿ.) ಕಂಡು ಬಂದಿದೆ. ಆದರೆ ಅತಿ ಕಡಿಮೆ ದಕ್ಷತೆಯು (40.59 ಕೆ.ಜಿ./ಕೆ.ಜಿ.) ಶಿಫಾರಸ್ಸು ಮಾಡಿದ ಶೇ. 100 ರಷ್ಟು ವಾಡಿಕೆ ರಸಗೊಬ್ಬರ ಹಾಕಿದಲ್ಲಿ ಕಂಡುಬಂದಿದೆ. ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಶೇ. 50 ರಷ್ಟು ಕಡಿಮೆ, ಮಧ್ಯಮ ಮತ್ತು ಹೆಚ್ಚು ಆಧಾರದ ಮೇಲೆ ಹಾಕಿರುವ ತಾಕಿನಲ್ಲಿ ಪೊಟ್ಯಾಷ್ ಪೋಷಕಾಂಶ ಬಳಕೆಯ ದಕ್ಷತೆಯು ಹೆಚ್ಚಿರುವುದು (181.44 ಕೆ.ಜಿ./ಕೆ.ಜಿ.) ಕಂಡು ಬಂದಿದೆ. ಪೋಷಕಾಂಶಗಳ ಬಳಕೆಯ ದಕ್ಷತೆ ಹೆಚ್ಚಲು ಕಾರಣ ಕಡಿಮೆ ಪ್ರಮಾಣದ ಪೋಷಕಾಂಶಗಳ ಬಳಕೆ. ಈ ಫಲಿತಾಂಶವು ರೈನಾ ಮತ್ತು ಅವರ ಸಂಗಡಿಗರು 2011ರಲ್ಲಿ ಕಂಡುಹಿಡಿದ ಫಲಿತಾಂಶದ ಅನುಗುಣವಾಗಿದೆ. ಆದರೆ ಪ್ರತಿಕ್ರೀಯೆ ಅಳತೆಗೋಲು ಪೋಷಕಾಂಶಗಳ ಹೀರುವಿಕೆ ಹೆಚ್ಚಾಗಿರುವ ತಾಕಿನಲ್ಲೇ ಹೆಚ್ಚಾಗಿರುವುದು (227.48) ಕಂಡು ಬಂದಿದೆ.

**ವಮೌಲ್ಯ ವ್ಯೆಚ್ಚ ಅನುಪಾತ:** ಮೌಲ್ಯ ವ್ಯೆಚ್ಚ ಅನುಪಾತವು ಶೇ. 100 ರಷ್ಟು ಕಡಿಮೆ, ಮಧ್ಯಮ ಮತ್ತು ಹೆಚ್ಚು ಆಧಾರದಲ್ಲಿ ವಾಡಿಕೆ ಗೊಬ್ಬರ ಹಾಕಿದಲ್ಲಿ (ಉ. 5) ಹೆಚ್ಚು ಮೌಲ್ಯ ವ್ಯೆಚ್ಚ ಅನುಪಾತ (8.17) ಇರುವುದು ಪತ್ತೆಯಾಗಿದೆ. ಆದರೆ ಅತಿ ಕಡಿಮೆ ಮೌಲ್ಯ ವ್ಯೆಚ್ಚ ಅನುಪಾತವು (1.16) ಶೇ. 100 ರಷ್ಟು ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಮಣ್ಣು ಪರೀಕ್ಷೆ ಇಳುವರಿ ಗುರಿ ವಿಧಾನದಲ್ಲಿ ಉಪಚರಿಸಿದ ತಾಕಿನಲ್ಲಿ ಕಂಡು ಬಂದಿದೆ. ಇದಕ್ಕೆ ಮುಖ್ಯ ಕಾರಣ ನೀರಿನಲ್ಲಿ ಕರಗುವ ರಸಗೊಬ್ಬರಗಳ ಬೆಲೆ ಅತಿ ಹೆಚ್ಚಾಗಿರುವುದು ಮತ್ತು ಈ ಗೊಬ್ಬರಗಳಿಗೆ ಸರ್ಕಾರದಿಂದ ಯಾವುದೇ ರೀತಿಯ ಸಹಾಯಧನವು ಸಿಗದಿರುವುದು. ಆದರೆ ವಾಡಿಕೆ ರಸಗೊಬ್ಬರಗಳು ಸಹಾಯಧನದಿಂದಾಗಿ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಸಿಗುವುದರಿಂದ ಉತ್ತಮ ಮೌಲ್ಯ ವ್ಯೆಚ್ಚ ಸಿಗುತ್ತದೆ.

**ಉಲ್ಲೇಖಗಳು:** ಅನಾನಿಮಸ್, 2008. ಆನ್ಯುಯಲ್ ಪ್ರೋಗ್ರೆಸ್ ರಿಪೋರ್ಟ್, ಎ.ಐ.ಸಿ.ಆರ್.ಪಿ. ಆನ್ ಸಾಯಿಲ್ ಟೆಸ್ಟ್ ಕ್ರಾಪ್ ರೆಸ್ಪಾನ್ಸ್ ಕೋರಿಲೇಷನ್, ಯೂನಿರ್ವಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್, ಬೆಂಗಳೂರು, ಪಿಪಿ:23.

ಜಾಕ್ಸನ್, ಎಮ್. ಎಲ್., 1973, ಸಾಯಿಲ್ ಕೆಮಿಕಲ್ ಅನಾಲಿಸಿಸ್, ಪ್ರೆಂಟೀಸ್ ಹಾಲ್ ಆಫ್ ಇಂಡಿಯಾ ಪ್ರೈ.ಲಿ., ನ್ಯೂ ದೆಹಲಿ, ಪಿಪಿ. 498.

ತುಂಬಾರೆ, ಎ.ಡಿ. ಮತ್ತು ನಿಕಮ್, ಡಿ.ಆರ್., 2004, ಎಫೆಕ್ಟ್ ಆಫ್ ಪ್ಲಾಂಟಿಂಗ್ ಅಂಡ್ ಫರ್ಟಿಗೇಷನ್ ಆನ್ ಗ್ರೋತ್ ಅಂಡ್ ಯೀಲ್ಡ್ ಆಫ್ ಗ್ರೀನ್ ಚಿಲ್ಲಿ (ಕ್ಯಾಪ್ಸಿಕಮ್ ಆನಮ್). ಇಂಡಿಯನ್ ಜ. ಅಗ್ರಿಕಲ್ಚರಲ್ ಸೈನ್ಸ್., 72(2): 109–111.

ರೈನಾ, ಜೆ.ಎನ್., ತಾರೀಕ್ ಶರ್ಮ ಮತ್ತು ಶಶಿ ಸುಮನ್., 2011, ಎಫೆಕ್ಟ್ ಆಫ್ ಡ್ರಿಪ್ ಫರ್ಟಿಗೇಷನ್ ವಿತ್ ಡಿಫರೆಂಟ್ ಫರ್ಟಿಲೈಜರ್ಸ್ ಆನ್ ನ್ಯೂಟ್ರಿಯೆಂಟ್ ಡಿಸ್ಟ್ರಿಬ್ಯೂಷನ್ ಇನ್ ಸಾಯಿಲ್, ಲೀಫ್ ನೂಟ್ರಿಯೆಂಟ್ ಕಂಟೆಂಟ್ ಅಂಡ್ ಯೀಲ್ಡ್ ಆಫ್ ಎಪ್ರಿಕೊಟ್ (ಪ್ರುನಸ್ ಇಮೇನಿಯಾಕ ಎಲ್.). ಜ. ಇಂಡಿಯನ್ ಸೊಸೈಟಿ ಆಫ್ ಸಾಯಿಲ್

ಸೈನ್ಸ್., 59(3): 268–277.

ಶಂಕರ್ ಮತ್ತು ಉಮೇಶ್, 2008, ಸೈಟ್ ಸ್ಪೆಸಿಫಿಕ್ ನ್ಯೂಟ್ರಿಯೆಂಟ್ ಮ್ಯಾನೇಜ್‌ಮೆಂಟ್ (ಎಸ್.ಎಸ್.ಎನ್.ಎಮ್): ಆ್ಯನ್ ಅಪ್‌ರೋಚ್ ಅಂಡ್ ಮೆಥಡಾಲಜಿ ಫಾರ್ ಅಚೀವಿಂಗ್ ಸಸ್ಟೈನಬಲ್ ಕ್ರಾಫ್ ಪ್ರೊಡಕ್ಷನ್ ಇನ್ ಡ್ರೈ ಲ್ಯಾಂಡ್ ಆಲ್ಫಿಸಾಲ್ ಆಫ್ ಕರ್ನಾಟಕ. ಟೆಕ್ನಿಕಲ್ ಬುಲೆಟಿನ್, ಕೃ.ವಿ.ವಿ., ಬೆಂಗಳೂರು.

ಶ್ಯಾಮ ಶೆಯೀದ್, ಐ.ಎಸ್., ಸಹರ್, ಎಮ್., ರುಫಲೌಲ್, ಎ.ಎ. ಮತ್ತು ಯಾಸೀನ್., 2009, ಎಫೆಕ್ಟ್ ಆಫ್ ಮೆಥೆಡ್ ಅಂಡ್ ರೇಟ್ ಆಫ್ ಫರ್ಟಿಲೈಜ಼್‌ರ್ ಅಪ್ಲಿಕೇಷನ್ ಅಂಡರ್ ಡ್ರಿಪ್ ಇರಿಗೇಷನ್ ಆನ್ ಯೀಲ್ಡ್ ಅಂಡ್ ನ್ಯೂಟ್ರಿಯೆಂಟ್ ಅಪ್‌ಟೇಕ್ ಬೈ ಟೊಮ್ಯಾಟೊ. ಓರ್ಯೋನ್ ಜರ್ನಲ್ ಆಫ್ ಅಪ್ಲೈಡ್ ಸೈನ್ಸಸ್., 2(2):139–147.

ಸೈಯದ್ ಹೊಕ್‌ಮಾಳಪುರ್, ಮನೊಚಹರ್ ಶೆರ್‌ಹಿ–ಐ–ಜನಗರ್ಡ್, ಮರಿಯಮ್ ಹಮೇಲ್ ದಾರ್ಬಂದಿ., 2010, ಕಂಪ್ಯಾರಿಷನ್ ಆಫ್ ಅಗ್ರೊನಾಮಿಕಲ್ ನೈಟ್ರೊಜನ್ ಯೂಜ್ ಏಫಿಷಿಯನ್ಸಿ ಇನ್ ತ್ರೀ ಕಲ್ಟಿವರ್ಸ್ ಆಫ್ ಕಾರ್ನ್ ಆ್ಯಜ್ ಅಫೆಕ್ಟೆಡ್ ಬೈ ನೈಟ್ರೊಜನ್ ಫರ್ಟಿಲೈಜರ್ ಲೆವೆಲ್ಸ್. ವರ್ಲ್ಡ್ ಅಪ್ಲೈಡ್ ಸೈನ್ಸಸ್ ಜರ್ನಲ್., 8(10): 1168–1174.

**ಕೋಷ್ಟಕ 1. ವಿವಿಧ ರೂಪದ ಗೊಬ್ಬರಗಳನ್ನು ವಿವಿಧ ಮಾದರಿಯಲ್ಲಿ ಬಳಸುವುದರಿಂದ ಮೆಕ್ಕೆಜೋಳದ ಇಳುವರಿ ಮತ್ತು ಪೋಷಕಾಂಶಗಳ ಹೀರುವಿಕೆಯ ಮೇಲಾಗುವ ಪರಿಣಾಮ**

| ಉಪಚಾರಗಳು | ಕಾಳಿನ ಇಳುವರಿ (ಕ್ವಿ./ಹೆ.) | | ಸರಾಸರಿ | ದಂಟಿನ ಇಳುವರಿ (ಕ್ವಿ./ಹೆ.) | | ಸರಾಸರಿ | ಪೋಷಕಾಂಶಗಳ ಹೀರುವಿಕೆ | | |
|---|---|---|---|---|---|---|---|---|---|
| | 2012 | 2013 | | 2012 | 2013 | | ಸಾರಜನಕ | ರಂಜಕ | ಪೊಟ್ಯಾಷ್ |
| 1. ಸಂಪೂರ್ಣ ನಿಯಂತ್ರಣ | 45.25 | 24.23 | 34.74 | 64.72 | 40.12 | 52.42 | 67.61 | 17.13 | 52.50 |
| 2. ಶಿ. ಪ್ರಾ. ಶೇ. 100 ರಷ್ಟು ಸಾ. ರ. | 73.72 | 56.64 | 65.18 | 81.09 | 63.93 | 72.51 | 141.19 | 28.49 | 76.45 |
| 3. ಶಿ. ಪ್ರಾ. ಶೇ. 100 ರಷ್ಟು ನೀ. ಕ. ರ. | 87.96 | 66.56 | 77.26 | 93.15 | 76.72 | 84.93 | 145.67 | 24.00 | 90.47 |
| 4. ಶಿ. ಪ್ರಾ. ಶೇ. 50 ರಷ್ಟು ನೀ. ಕ. ರ. | 64.28 | 49.61 | 56.94 | 68.86 | 54.01 | 61.44 | 109.15 | 26.14 | 68.50 |
| 5. ಶೇ. 100 ರಷ್ಟು ಸ. ಮಾ. ಮತ್ತು ಹೆ. ಆಧಾರದ ಸಾ. ರ. | 79.13 | 66.19 | 72.66 | 87.04 | 75.31 | 81.18 | 152.67 | 31.60 | 82.00 |
| 6. ಶೇ. 100 ರಷ್ಟು ಸ. ಮಾ. ಮತ್ತು ಹೆ. ಆಧಾರದ ನೀ. ಕ. ರ. | 92.42 | 71.81 | 82.12 | 100.42 | 80.69 | 90.55 | 162.84 | 36.34 | 89.92 |
| 7. ಶೇ. 50 ರಷ್ಟು ಸ. ಮಾ. ಮತ್ತು ಹೆ. ಆಧಾರದ ನೀ. ಕ. ರ. | 83.53 | 58.37 | 70.95 | 89.13 | 55.56 | 72.34 | 126.27 | 30.05 | 71.34 |
| 8. ಶೇ. 100 ರಷ್ಟು ಮ. ಪ. ಇ. ಗು. ಆಧಾರದ ಸಾ. ರ. | 81.12 | 66.25 | 73.68 | 89.23 | 75.40 | 82.31 | 181.13 | 31.30 | 94.91 |
| 9. ಶೇ. 100 ರಷ್ಟು ಮ. ಪ. ಇ. ಗು. ಆಧಾರದ ನೀ. ಕ. ರ. | 94.74 | 70.58 | 82.66 | 104.22 | 81.57 | 92.89 | 193.88 | 38.03 | 107.34 |
| 10. ಶೇ. 50 ರಷ್ಟು ಮ. ಪ. ಇ. ಗು. ಆಧಾರದ ನೀ. ಕ. ರ. | 84.56 | 60.52 | 72.54 | 90.56 | 72.85 | 82.71 | 153.50 | 28.32 | 85.16 |
| ಪ್ರ.ದೋ.ಸ. ± | 3.37 | 2.56 | 3.03 | 3.66 | 7.42 | 5.85 | 6.35 | 1.05 | 5.28 |
| ಕ.ವ್ಯ. (5%) | 10.02 | 7.39 | 10.87 | 10.87 | 22.05 | 16.75 | 19.65 | 3.11 | 15.15 |

ಶಿ. ಪ್ರಾ.– ಶಿಫಾರಸ್ಸು ಮಾಡಿದ; ನೀ. ಕ. ರ – ನೀರಿನಲ್ಲಿ ಕರಗುವ ರಸಗೊಬ್ಬರ; ಮ. ಪ. ಇ. ಗು. – ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ; ಸ. ಮಾ. ಹೆ. – [illegible]; ಸಾ. ರ. – ಸಾಂಪ್ರದಾಯಿಕ ರಸಗೊಬ್ಬರ; ಪ್ರ. ದೋ. ಸ.– ಪ್ರಮಾಣಿತ ದೋಷದ ಸರಾಸರಿ; ಕ. ವ್ಯ. – ಕನಿಷ್ಠ ವ್ಯತ್ಯಾಸ.

ಕೋಷ್ಠಕ 2. ವಿವಿಧ ರೂಪದ ಗೊಬ್ಬರಗಳನ್ನು ವಿವಿಧ ಮಾದರಿಯಲ್ಲಿ ಬಳಸುವುದರಿಂದ ಮೆಕ್ಕೆಜೋಳದಲ್ಲಿ ಪೋಷಕಾಂಶ ಬಳಕೆಯ ದಕ್ಷತೆ, ಪ್ರತಿಕ್ರೀಯೆ ಆಳತೆಗೋಲು ಮತ್ತು ಮೌಲ್ಯ ವ್ಯೆಚ್ಚದ ಅನುಪಾತ

| ಉಪಚಾರಗಳು | ಪೋಷಕಾಂಶ ಬಳಕೆಯ ದಕ್ಷತೆ | | | ಪ್ರತಿಕ್ರೀಯೆ ಆಳತೆಗೋಲು | ಮೌಲ್ಯ ವ್ಯೆಚ್ಚ ಅನುಪಾತ |
|---|---|---|---|---|---|
| | ಸಾರಜನಕ | ರಂಜಕ | ಪೊಟ್ಯಾಷ್ | | |
| 1. ಸಂಪೂರ್ಣ ನಿಯಂತ್ರಣ | - | - | - | - | - |
| 2. ಶಿ. ಮಾ. ಶೇ. 100 ರಷ್ಟು ವಾ. ರ. | 20.29 | 40.59 | 76.10 | 158.05 | 6.69 |
| 3. ಶಿ. ಮಾ. ಶೇ. 100 ರಷ್ಟು ನೀ. ಕ. ರ. | 28.35 | 56.69 | 106.30 | 160.00 | 3.59 |
| 4. ಶಿ. ಮಾ. ಶೇ. 50 ರಷ್ಟು ನೀ. ಕ. ರ. | 29.61 | 59.21 | 111.02 | 86.30 | 2.05 |
| 5. ಶೇ. 100 ರಷ್ಟು ಕ. ಮ. ಮತ್ತು ಹೆ. ಆಧಾರದ ವಾ. ರ. | 22.31 | 58.34 | 94.80 | 164.69 | 8.17 |
| 6. ಶೇ. 100 ರಷ್ಟು ಕ. ಮ. ಮತ್ತು ಹೆ. ಆಧಾರದ ನೀ. ಕ. ರ. | 27.87 | 72.89 | 118.44 | 166.16 | 1.91 |
| 7. ಶೇ. 50 ರಷ್ಟು ಕ. ಮ. ಮತ್ತು ಹೆ. ಆಧಾರದ ನೀ. ಕ. ರ. | 42.60 | 111.42 | 181.07 | 94.82 | 2.69 |
| 8. ಶೇ. 100 ರಷ್ಟು ಮ. ಪ. ಇ. ಗು. ಆಧಾರದ ವಾ. ರ. | 15.51 | 78.91 | 44.93 | 225.89 | 7.60 |
| 9. ಶೇ. 100 ರಷ್ಟು ಮ. ಪ. ಇ. ಗು. ಆಧಾರದ ನೀ. ಕ. ರ. | 19.09 | 97.10 | 55.29 | 227.48 | 1.16 |
| 10. ಶೇ. 50 ರಷ್ಟು ಮ. ಪ. ಇ. ಗು. ಆಧಾರದ ನೀ. ಕ. ರ. | 30.12 | 153.36 | 87.30 | 121.20 | 1.79 |

ಶಿ. ಮಾ.–.ಶಿಫಾರಸ್ಸು ಮಾಡಿದ; ನೀ. ಕ. ರ – ನೀರಿನಲ್ಲಿ ಕರಗುವ ರಸಗೊಬ್ಬರ; ಮ. ಪ. ಇ. ಗು. – ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ; ಕ. ಮ. ಹೆ. – ಕಡಿಮೆ, ಮಧ್ಯಮ ಮತ್ತು ಹೆಚ್ಚು; ವಾ. ರ. – ವಾಡಿಕೆ ರಸಗೊಬ್ಬರ.

## ಕರ್ನಾಟಕ ರಾಜ್ಯದ ಜೌಗು, ಸವಳು ಮತ್ತು ಕ್ಷಾರ ಭೂಮಿಗಳ ನಿವಾರಣೆ ಮತ್ತು ಬೆಳೆ ಉತ್ಪಾದಕತೆ ಹೆಚ್ಚಿಸುವಲ್ಲಿ ಒಳಮೈ ಬಸಿಗಾಲುವೆಗಳ ಮಹತ್ವ

ಬಸವರಾಜ, ಪಿ. ಕೆ.*, ಯೋಗೇಂದ್ರ, ಎನ್.ಡಿ., ಮೊಹಮ್ಮದ್ ಸಾಹಿಬ್‌ಉಲ್ಲಾ, ಹೆಚ್. ಮತ್ತು ನಳಿನ, ಸಿ. ಎನ್.
*ಮಣ್ಣು ಪರೀಕ್ಷೆ ಮತ್ತು ಬೆಳೆ ಸ್ಪಂಧನೆ ಪ್ರಾಯೋಜನೆ, ಕೃಷಿ ವಿಶ್ವವಿದ್ಯಾನಿಲಯ, ಗಾ. ಕೃ. ವಿ. ಕೇ., ಬೆಂಗಳೂರು.

**ಪ್ರಬಂಧಸಾರ:–** ನೀರಾವರಿ ಅಚ್ಚು ಕಟ್ಟು ಪ್ರದೇಶಗಳಲ್ಲಿ ಸಮಸ್ಯಾತ್ಮಕ ಮಣ್ಣುಗಳನ್ನು ನಿವಾರಣೆ ಮಾಡಿ ಫಲವತ್ತತೆ ಹೆಚ್ಚಿಸುವ ಉದ್ದೇಶದಿಂದ ದಾವಣಗೆರೆ ಜಿಲ್ಲೆಯ ತ್ಯಾವಣಗಿ ಗ್ರಾಮದ 72 ರೈತರ 136 ಎಕರೆಯ ಜೌಗು, ಸವಳು ಮತ್ತು ಕ್ಷಾರ ಭೂಮಿಯಿಂದ ಕೂಡಿದ ಜಮೀನಿನಲ್ಲಿ ಒಳಮೈ ಬಸಿಗಾಲುವೆಗಳನ್ನು ಅಳವಡಿಸಿ ಇದರಿಂದಾಗುವ ಪರಿಣಾಮಗಳನ್ನು ಅಭ್ಯಸಿಸಲಾಯಿತು. ಸಮೀಕ್ಷೆಗನುಗುಣವಾಗಿ 136 ಎಕರೆ ಪ್ರದೇಶದಲ್ಲಿ 30 ರಿಂದ 50 ಮೀ. ಅಂತರದಲ್ಲಿ ಮತ್ತು 1 ಮೀ. ಆಳದಲ್ಲಿ ಸಣ್ಣ ಸಣ್ಣ ರಂಧ್ರಗಳಿರುವ ಸುಕ್ಕುಗಟ್ಟಿದ ಮತ್ತು ಜಿಯೋಟೆಕ್ಸಟೈಲ್ ಪಾಲಿಯಸ್ಟರ್ ಹೊದಿಕೆ ಇರುವ ಪ್ಲಾಸ್ಟಿಕ್ ಕೊಳವೆಗಳನ್ನು ಅಳವಡಿಸಿ, ಈ ಕೊಳವೆಗಳನ್ನು ರಂಧ್ರಗಳಿಲ್ಲದ ಕೊಳವೆಗಳಿಗೆ ಜೋಡಿಸಿ ಹಳ್ಳಕ್ಕೆ ಜೋಡಿಸಲಾಯಿತು. ಕ್ಷಾರ ಭೂಮಿಯಿರುವ ಕಡೆ ಜಿಪ್ಸಮ್‌ನ್ನು ಬೆರೆಸಿ ನೀರು ನಿಲ್ಲುವಂತೆ ಮಾಡಿ, ಈ ನೀರು ಬಸಿದು ಹತ್ತು ಕೊಳವೆಗಳ ಮೂಲಕ ಹಳ್ಳಕ್ಕೆ ಹರಿಯುವಂತೆ ಮಾಡಲಾಯಿತು. ನಂತರ 15 ದಿನಗಳ ಅಂತರದಲ್ಲಿ ಎರಡು ಬೆಳೆ ಭತ್ತ ಬೆಳೆಯುವವರೆಗೂ ಈ ಹತ್ತು ಬಸಿ ಕೊಳವೆಗಳಿಂದ ಬಸಿಯುವ ನೀರಿನ ವೇಗವನ್ನು ಅಳತೆ ಮಾಡಿ, ನೀರನ್ನು ಶೇಖರಣೆ ಮಾಡಿ ಅದರಲ್ಲಿರುವ ಲವಣಗಳನ್ನು ಪರೀಕ್ಷಿಸಲಾಯಿತು. ಭತ್ತ ಕಟಾವಿಗೆ ಬಂದ ನಂತರ ಪ್ರತಿ ರೈತರ ಜಮೀನಿನಲ್ಲಿ 4 ಚದರ ಮೀ. ಅಳತೆಯ ತಾಕಿನಲ್ಲಿ ಭತ್ತ ಕಟಾವು ಮಾಡಿ ಇಳುವರಿಯನ್ನು ನಮೂದಿಸಿಕೊಳ್ಳಲಾಯಿತು.

ಈ ಪ್ರಯೋಗದಿಂದ ತಿಳಿದು ಬಂದ ಅಂಶವೇನೆಂದರೆ, 136 ಎಕರೆ ಪ್ರದೇಶದಿಂದ ಎರಡು ಬೆಳೆ ಮುಗಿಯುವವರೆಗೆ 10 ಪ್ಲಾಸ್ಟಿಕ್ ಕೊಳವೆಗಳ ಮೂಲಕ ಹಳ್ಳಕ್ಕೆ ಬಸಿದ ಒಟ್ಟು ನೀರು 12.6 ದಶಲಕ್ಷ ಲೀಟರ್. ಈ ನೀರಿನ ಮೂಲಕ ಒಟ್ಟು 19.65 ಟನ್ ನಷ್ಟು ನೀರಿನಲ್ಲಿ ಕರಗುವ ಲವಣಗಳನ್ನು ಹೊರಹಾಕಲಾಗಿದೆ. ಒಳಮೈ ಬಸಿಗಾಲುವೆ ಹಾಕಿದ ನಂತರ ಭತ್ತದ ಇಳುವರಿಯು ಶೇ. 25.13 ರಿಂದ 26.41 ರಷ್ಟು ಹೆಚ್ಚಾಗಿದ್ದು, ಜಿಪ್ಸಮ್ ಹಾಕಿದ ಕ್ಷಾರ ಮಣ್ಣಿನಲ್ಲಿ ಶೇ 27.67 ರಿಂದ 38.28 ರಷ್ಟು ಭತ್ತದ ಇಳುವರಿ ಹೆಚ್ಚಾಗಿದೆ. ಇದರಿಂದ ತಿಳಿಯುವುದೇನೆಂದರೆ ಒಳಮೈ ಬಸಿಗಾಲುವೆಗಳನ್ನು ಮಾಡಿ ಕ್ಷಾರ ಭೂಮಿಯಿರುವ ಕಡೆ ಜಿಪ್ಸಮ್ ಹಾಕುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಿಸಿ ಭತ್ತದ ಇಳುವರಿ ಹೆಚ್ಚಿಸಬಹುದು.

ನೀರಾವರಿ ಬೆಳೆಗಳ ಉತ್ತಮ ಇಳುವರಿಯಿಂದಾಗಿ ಇಂದು ಭಾರತ ಆಹಾರ ಬೆಳೆಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಿದೆ. ಆದರೆ ಇದೇ ನೀರಾವರಿಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಯಾರೂ ಹೆಚ್ಚು ಗಮನ ಹರಿಸಿಲ್ಲ. ಒಣಭೂಮಿ ಪ್ರದೇಶಗಳಲ್ಲಿನ ನೀರಾವರಿ ಅಚ್ಚು ಕಟ್ಟು ಪ್ರದೇಶಗಳಲ್ಲಿ ಸರಿಯಾಗಿ ನೀರು ಬಸಿಯದೇ ಇರುವುದರಿಂದ ಇಲ್ಲಿನ ಭೂಮಿಗಳಲ್ಲಿ ನೀರಿನ ಮಟ್ಟ (ಜಲ ಮಟ್ಟ) ಹೆಚ್ಚಾಗುವುದಲ್ಲದೆ, ಈ ಪ್ರದೇಶಗಳಲ್ಲಿನ ಅತಿ ಹೆಚ್ಚಿನ ಉಷ್ಣತೆಯಿಂದ ಮತ್ತು ಕಡಿಮೆ ಮಳೆ ಬೀಳುವುದರಿಂದ, ಈ ನೀರಿನಲ್ಲಿರುವ ಲವಣಗಳು ಹೆಚ್ಚಿನ ಬಾಷ್ಪೀಕರಣದಿಂದ ಮೇಲೆ ಬಂದು ಈ ಅಚ್ಚುಕಟ್ಟು ಪ್ರದೇಶಗಳಲ್ಲಿ ಜೌಗು, ಸವಳು ಮತ್ತು ಕ್ಷಾರ ಭೂಮಿಗಳ ಪ್ರಮಾಣ ಹೆಚ್ಚಾಗುತ್ತಿದೆ. ಇದರಿಂದ ಉತ್ತಮ ಫಲವತ್ತತೆಯುಳ್ಳ ಭೂಮಿಗಳು ಬರಡು ಭೂಮಿಗಳಾಗಿ ಇಳುವರಿ ಮಟ್ಟ ಅತಿ ಕಡೆಮೆಯಾಗಿ ರೈತರ ಆರ್ಥಿಕ ಅಭಿವೃದ್ಧಿ ಕುಂಠಿತವಾಗುತ್ತಿದೆ.

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ 2030ರ ವೇಳೆಗೆ ಸುಮಾರು 15.5 ದಶಲಕ್ಷ ಹೆಕ್ಟೇರ್‌ನಷ್ಟು ಭೂಮಿ ಜೌಗು, ಸವಳು ಮತ್ತು ಕ್ಷಾರಯುಕ್ತ ಮಣ್ಣಾಗುವ ಸಾಧ್ಯತೆಯಿದೆ (ಕೇ.ಸ.ಮ.ಸ.ಸಂ., 2011). ಕರ್ನಾಟಕ ರಾಜ್ಯದ 1,28,562 ಹೆ. ನೀರಾವರಿ ಪ್ರದೇಶದಲ್ಲಿ ಒಟ್ಟು 12,692 ಹೆ. ಪ್ರದೇಶ (ಶೇ. 9.9) ಜೌಗು, ಸವಳು ಮತ್ತು ಕ್ಷಾರ ಭೂಮಿಯಿಂದ ಕೂಡಿದೆ. ಈ ಪ್ರದೇಶಗಳಲ್ಲಿನ ಸವಳು ಭೂಮಿಯಲ್ಲಿ ಶೇ. 36 ರಷ್ಟು ಮತ್ತು ಜೌಗು ಭೂಮಿಯಲ್ಲಿ ಶೇ. 43 ರಷ್ಟು ಇಳುವರಿ ಕುಂಠಿತವಾಗಿದೆ (ಚಿನ್ನಪ್ಪ, 2005). ಕರ್ನಾಟಕ ರಾಜ್ಯದ ವಿವಿಧ ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಅತಿಯಾದ ನೀರಾವರಿಯಿಂದಾಗಿ 47,221 ಹೆ. ಪ್ರದೇಶವು ಜೌಗು ಮತ್ತು ಸವಳು ಭೂಮಿಗಳಾಗಿವೆ. ಇದು ರಾಜ್ಯದ ಶೇ. 55 ರಷ್ಟು ಲವಣಯುಕ್ತ ಮಣ್ಣನ್ನು ಬಿಂಬಿಸುತ್ತವೆ.

ನೀರಾವರಿ ಪ್ರದೇಶಗಳಲ್ಲಿನ ಜೌಗು ಮತ್ತು ಲವಣಯುಕ್ತ ಮಣ್ಣನ್ನು ಸುಧಾರಣೆ ಮಾಡಲು ಒಂದು ಉತ್ತಮ ತಾಂತ್ರಿಕ ವಿಧಾನವೆಂದರೆ ಬಸಿಗಾಲುವೆಗಳ ನಿರ್ಮಾಣ. ಈ ಬಸಿಗಾಲುವೆಗಳಲ್ಲಿನ ಅನೇಕ ವಿಧಗಳಲ್ಲಿ ತೆರೆದ ಬಸಿಗಾಲುವೆ ಮತ್ತು ಒಳ ಮೈ ಬಸಿಗಾಲುವೆಗಳು ಮುಖ್ಯವಾದವು. ಒಳಮೈ ಬಸಿಗಾಲುವೆಗಳು ನೀರಾವರಿ ಅಚ್ಚು ಕಟ್ಟು ಪ್ರದೇಶದ ಇಂತಹ ಭೂಮಿಗಳಲ್ಲಿ ಒಂದು ಅತ್ಯುತ್ತಮ ಮಾರ್ಗವಾಗಿದ್ದು ಇದರಿಂದಾಗಿ ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು ಮತ್ತು ನೀರನ್ನು ಉತ್ತಮ ಗುಣಮಟ್ಟದಲ್ಲಿಟ್ಟುಕೊಂಡು ಬೆಳೆಗಳ ಇಳುವರಿ ಹೆಚ್ಚಿಸಲು ಸಾಧ್ಯವಾಗುತ್ತದೆ. ಒಳಮೈ ಬಸಿಗಾಲುವೆಗಳಲ್ಲಿ ಸರ್ವೇ ಸಾಮಾನ್ಯವಾಗಿ ರಂಧ್ರಗಳಿರುವ ಮಣ್ಣಿನ ಕೊಳವೆಗಳನ್ನು ಬಳಸಲಾಗುತ್ತದೆ. ಆದರೆ ಈ ಕೊಳವೆಗಳು ಕೆಲವೇ ವರ್ಷಗಳಲ್ಲಿ ಪುಡಿ ಪುಡಿಯಾಗಿ ಒಡೆದು ಹೋಗಿ ನೀರು ಸಮರ್ಪಕವಾಗಿ ಬಸಿದು ಹೋಗುವುದಿಲ್ಲ. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ಸುಕ್ಕುಗಟ್ಟಿದ ರಂಧ್ರಗಳಿರುವ ಪ್ಲಾಸ್ಟಿಕ್ ಕೊಳವೆಗಳನ್ನು ಬಳಸಲಾಗುತ್ತಿದೆ. ಈ ಕೊಳವೆಗಳು ಬಹಳ ವರ್ಷಗಳವರೆಗೆ ಸಮರ್ಪಕವಾಗಿ ಕೆಲಸ ನಿರ್ವಹಿಸಿ ಜೌಗು ಮತ್ತು ಸವಳಾಗದಂತೆ ತಡೆದು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಅನುಕೂಲವಾಗುತ್ತದೆ. ಆದರೆ ಕರ್ನಾಟಕದಲ್ಲಿ ಇವುಗಳ ಬಳಕೆ ಬಹಳ ವಿರಳ.

ಆದ್ದರಿಂದ ಸಣ್ಣ ಸಣ್ಣ ರಂಧ್ರಗಳಿಂದ ಕೂಡಿರುವ ಈ ಪ್ಲಾಸ್ಟಿಕ್ ಕೊಳವೆಗಳನ್ನು ಅಳವಡಿಸುವುದರಿಂದ ಜೌಗು ಮತ್ತು ಲವಣಯುಕ್ತ ಮಣ್ಣಿನ ಗುಣಗಳಲ್ಲಾಗುವ ಬದಲಾವಣೆ, ಲವಣಯುಕ್ತ ಭೂಮಿಯಿಂದ ಪ್ಲಾಸ್ಟಿಕ್ ಕೊಳವೆಗಳ ಮೂಲಕ ಬಸಿದು ಹೋದ ನೀರು ಮತ್ತು ಲವಣಗಳ ಪ್ರಮಾಣ, ಮತ್ತು ಬಸಿಗಾಲುವೆಗಳಿಂದ ಬೆಳೆ ಇಳುವರಿಯಲ್ಲಾಗುವ ಬದಲಾವಣೆಯನ್ನು ಅಭ್ಯಸಿಸಲು ಈ ಸಂಶೋಧನೆಯನ್ನು ಕೈಗೊಳ್ಳಲಾಯಿತು.

**ಸಂಶೋಧನಾ ವಿಧಾನ ಮತ್ತು ಪರಿಕರಗಳು**: ಜೌಗು, ಸವಳು ಮತ್ತು ಕ್ಷಾರ ಮಣ್ಣುಗಳ ನಿರ್ವಹಣೆಯ ಉದ್ದೇಶದಿಂದ ದಾವಣಗೆರೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ವೈಜ್ಞಾನಿಕ ಸಮೀಕ್ಷೆ ಮಾಡಿ ತ್ಯಾವಣಗಿ ಗ್ರಾಮದ 72 ರೈತರ 136 ಎಕರೆಯ ಜೌಗು, ಸವಳು ಮತ್ತು ಕ್ಷಾರ ಭೂಮಿಯನ್ನು ಈ ಅಧ್ಯಯನದ ಉದ್ದೇಶಕ್ಕಾಗಿ ಆರಿಸಿ ಕೊಳ್ಳಲಾಯಿತು. 2010ರ ಹಿಂಗಾರು ಬೆಳೆ ಕಟಾವಿನ ನಂತರ ವೈಜ್ಞಾನಿಕ ಸಮೀಕ್ಷೆ ಮಾಡಿ ಈ ಪ್ರದೇಶದ ಇಳಿಜಾರು ಪ್ರಮಾಣ, ಇಳುಜಾರಿನ ದಿಕ್ಕನ್ನು ನಮೂದಿಸಿಕೊಂಡು ಸಮಪಾತಾಳಿ ನಕ್ಷೆಯನ್ನು ಸಿದ್ದಪಡಿಸಲಾಯಿತು. ಈ ಸಮಪಾತಾಳಿ ನಕ್ಷೆ ಜೊತೆ ಪ್ರತಿಯೊಬ್ಬರ ರೈತರ ಭೂಮಿಯಲ್ಲಿನ ಮಣ್ಣಿನ ಮಾದರಿ (0–20 ಸೆ.ಮೀ.) ತೆಗೆದು ರಸಾಯನಿಕ ಪರೀಕ್ಷೆ ಮಾಡಿ (ಜಾಕ್ಸನ್,1973), ಮಣ್ಣಿನಲ್ಲಿರುವ ಜೌಗು, ಸವಳು ಮತ್ತು ಕ್ಷಾರದ ತೀವ್ರತೆಯ ಆಧಾರದ ಮೇಲೆ 30 ಮೀ. ನಿಂದ 50 ಮೀ. ಅಂತರದಲ್ಲಿ ಬರುವಂತೆ ಬಸಿಗಾಲುವೆ ವಿನ್ಯಾಸದ ನಕ್ಷೆ ಸಿದ್ದಪಡಿಸಿಕೊಳ್ಳಲಾಯಿತು. ಇದರ ಆಧಾರದ ಮೇಲೆ 30 ಮೀ. ನಿಂದ 50 ಮೀ. ಅಂತರದಲ್ಲಿ ಮತ್ತು 1 ಮೀ. ಆಳದಲ್ಲಿ ಜಿಯೋಟೆಕ್ಸಟೈಲ್ ಪಾಲಿಯಸ್ಟರ್ ಹೊದಿಕೆಯಿರುವ, ಸುಕ್ಕುಗಟ್ಟಿದ ಮತ್ತು ಸಣ್ಣ ಸಣ್ಣ ರಂಧ್ರಗಳಿಂದ ಕೂಡಿರುವ 3 ಇಂಚಿನ ಪ್ಲಾಸ್ಟಿಕ್ ಕೊಳವೆಗಳನ್ನು ಹಾಕಲಾಯಿತು. ನಂತರ ಈ ಕೊಳವೆಗಳನ್ನು 6 ಇಂಚಿನ ಸುಕ್ಕುಗಟ್ಟಿದ ಮತ್ತು ರಂಧ್ರಗಳಿಲ್ಲದ ಪ್ಲಾಸ್ಟಿಕ್ ಕೊಳವೆಗಳಿಗೆ ಜೋಡಿಸಿ ಈ ಕೊಳವೆಗಳನ್ನು ಎರಡು ಅಡಿ ಎತ್ತರದಲ್ಲಿ ಬರುವಂತೆ ಹಳ್ಳಕ್ಕೆ ಜೋಡಿಸಲಾಯಿತು. ಈ ರೀತಿ ಈ ಪ್ರದೇಶದಿಂದ ಒಟ್ಟು 10 ಕೊಳವೆಗಳನ್ನು ಹಳ್ಳಕ್ಕೆ ಜೋಡಿಸಲಾಯಿತು.

ಕ್ಷಾರ ಭೂಮಿಯೆಂದು ಗುರುತಿಸಲಾದ 17 ರೈತರ ಜಮೀನಿಗೆ ಮಣ್ಣು ಪರೀಕ್ಷೆ ಆಧಾರದ ಮೇಲೆ ಜಿಪ್ಸಮ್ ಹಾಕಿ ಮಣ್ಣಿನಲ್ಲಿ ಸರಿಯಾಗಿ

ಬೆರೆಸಿ, ನೀರು ನಿಲ್ಲುವಂತೆ ಮಾಡಿ ಈ ನೀರು ಮಣ್ಣಿನಲ್ಲಿ ಬಸಿದು ಪ್ಲಾಸ್ಟಿಕ್ ಕೊಳವೆಗಳ (ಬಸಿಗಾಲುವೆಗಳ) ಮೂಲಕ ಹರಿದು ಹಳ್ಳ ಸೇರುವಂತೆ ಮಾಡಲಾಯಿತು. ನಂತರ ರೈತರು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸಿಕೊಂಡು 30 ದಿನದ ಭತ್ತದ ಸಸಿಗಳನ್ನು ನಾಟಿ ಮಾಡಿ ಸರಿಯಾಗಿ ನೀರು ಮತ್ತು ಬೆಳೆ ನಿರ್ವಹಣೆ ಮಾಡುವಂತೆ ಪ್ರೋತ್ಸಾಹಿಸಲಾಯಿತು. ಈ ಪ್ರಯೋಗವನ್ನು ಎರಡು ಬೆಳೆ (2014 ರ ಹಿಂಗಾರು/ಬೇಸಿಗೆ ಮತ್ತು ಮುಂಗಾರು ಬೆಳೆ) ಮುಗಿಯುವವರೆಗೂ ಕೈಗೊಂಡು, ಈ ಒಳ ಮೈ ಬಸಿಗಾಲುವೆ ಗಳಿಂದ ಮಣ್ಣು ಮತ್ತು ಭತ್ತದ ಬೆಳೆ ಇಳುವರಿ ಮೇಲಾದ ಪರಿಣಾಮ ವನ್ನು ಅಭ್ಯಸಿಸಲಾಯಿತು.

**ಬಸಿದ ನೀರಿನ ಮತ್ತು ಲವಣಗಳ ಪ್ರಮಾಣದ ಪರೀಕ್ಷೆ (ಅಧ್ಯಯನ)**: ಬಸಿಗಾಲುವೆ ಹಾಕಿದ 15 ದಿನಗಳ ನಂತರ ಹಳ್ಳಕ್ಕೆ ಜೋಡಿಸಿರುವ ಪ್ರತಿ ಪ್ಲಾಸ್ಟಿಕ್ ಕೊಳವೆಗಳಿಂದ ಬೀಳುತ್ತಿರುವ ನೀರಿನ ವೇಗವನ್ನು (ಲೀ.ಪ್ರತಿ.ಘಂ.) ಅಳತೆ ಮಾಡಿ ನೀರು ಸಂಗ್ರಹಿಸಿ ಅದರಲ್ಲಿನ ಲವಣಗಳ ಅಂಶವನ್ನು ಪರೀಕ್ಷಿಸಲಾಯಿತು (ರಿಚರ್ಡ್ಸ್, 1954). ಇದೇ ರೀತಿ 15 ದಿನಗಳ ಅಂತರದಲ್ಲಿ ಬೆಳೆ ಕಟಾವಿನವರೆಗೆ ಪ್ರತಿ ಪ್ಲಾಸ್ಟಿಕ್ ಕೊಳವೆಯಿಂದ ನೀರು ಮಾದರಿ ಸಂಗ್ರಹಿಸಿ ಅದರಲ್ಲಿನ ಲವಣಗಳ ಅಂಶವನ್ನು ಪರೀಕ್ಷಿಸಲಾಯಿತು. ಇದೇ ರೀತಿ ಎರಡನೇ ಬೆಳೆ ಕಟಾವಿನವರೆಗೂ ಪುನರಾವರ್ತಿಸಲಾಯಿತು.

**ಬೆಳೆ ಕಟಾವು ಪ್ರಯೋಗ**: ಭತ್ತದ ಬೆಳೆ ಕಟಾವಿಗೆ ಬಂದ ನಂತರ ಪ್ರತಿ ರೈತರ ಜಮೀನಿನಲ್ಲಿ (2 ಮೀ. ಘಿ 2 ಮೀ.) 4 ಚದರ ಮೀ. ಅಳತೆಯಲ್ಲಿ ಭತ್ತವನ್ನು ಕೊಯ್ಲು ಮಾಡಿ ಕಾಳಿನ ತೂಕ ಮಾಡಿ, ಪ್ರತಿ ಹೆ. ಗೆ ಬರುವ ಇಳುವರಿಗೆ ಮಾರ್ಪಡಿಸಲಾಯಿತು. ಇದೇ ರೀತಿ ಎರಡನೇ ಬೆಳೆ ಮತ್ತು ಬಸಿಗಾಲುವೆ ಹಾಕುವುದಕ್ಕೂ ಮೊದಲು ಸಹ ಬೆಳೆ ಕಟಾವು ಪ್ರಯೋಗ ಮಾಡಿ ಇಳುವರಿಯನ್ನು ನಮೂದಿಸಿ ಕೊಳ್ಳಲಾಯಿತು.

**ಮಣ್ಣು ಮಾದರಿ ಸಂಗ್ರಹಣೆ ಮತ್ತು ಮಣ್ಣು ಪರೀಕ್ಷೆ**: ಸವಳು ಮತ್ತು ಕ್ಷಾರ ಭೂಮಿಗಳು ಸುಧಾರಣೆ ಆಗಿವೆಯೇ ಎಂದು ಪರೀಕ್ಷಿಸಲು ಪ್ರತಿ ರೈತರ ಜಮೀನಿನಲ್ಲಿ ಎರಡನೇ ಬೆಳೆ ಕಟಾವಿನ ನಂತರ ಮಣ್ಣು ಮಾದರಿ ಸಂಗ್ರಹಿಸಿ, ಮಣ್ಣಿನ ರಸಸಾರದಲ್ಲಾದ ವ್ಯತ್ಯಾಸ ಮತ್ತು ವಿವಿಧ ಲವಣಗಳ ಪ್ರಮಾಣವನ್ನು ವಿಶ್ಲೇಸಿಸಿ, ಮಣ್ಣಿನ ಫಲವತ್ತತೆಯಲ್ಲಾದ ವ್ಯತ್ಯಾಸವನ್ನು ಅಭ್ಯಸಿಸಲಾಯಿತು (ಜಾಕ್ಸನ್,1973).

**ಫಲಿತಾಂಶಗಳು ಮತ್ತು ಅದರ ಚರ್ಚೆ**: ಎರಡು ವರ್ಷಗಳ ಬೆಳೆ ಅವಧಿಯಲ್ಲಿ ಒಳಮೈ ಬಸಿಗಾಲುವೆ ಹಾಕಿರುವ 136 ಎಕರೆ ಪ್ರದೇಶದಿಂದ ಹಳ್ಳಕ್ಕೆ ಜೋಡಿಸಿರುವ 10 ಪ್ಲಾಸ್ಟಿಕ್ (ಕೊಷ್ಟಕ 3) ಕೊಳವೆಗಳ ಮೂಲಕ ಒಟ್ಟು 1.26 ದಶ ಲಕ್ಷ ಲೀಟರ್ ನೀರನ್ನು ಹೊರಹಾಕಲಾಗಿದೆ. ಈ ನೀರಿನ ಮೂಲಕ ಒಟ್ಟು 19.65 ಟನ್ ನಷ್ಟು ನೀರಿನಲ್ಲಿ ಕರಗುವ ವಿವಿಧ ಲವಣಗಳನ್ನು ಹೊರಹಾಕಲಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಹೊರಹಾಕಲಾದ ಧನ ಅಯಾನುವಿನ ಲವಣವೆಂದರೆ ಸೋಡಿಯಂ (1.61 ಟನ್) ಮತ್ತು ಋಣ ಅಯಾನುವಿನ ಲವಣವೆಂದರೆ ಬೈಕಾರ್ಬೋನೇಟ್ (9.13 ಟನ್). ಇದರಿಂದ ತಿಳಿಯುವುದೇನೆಂದರೆ, ಈ 136 ಎಕರೆ ಪ್ರದೇಶದಲ್ಲಿನ ಸವಳು ಭೂಮಿಯಲ್ಲಿನ ಲವಣಗಳನ್ನು ಮತ್ತು ಕ್ಷಾರ ಭೂಮಿಯಲ್ಲಿನ ಸೋಡಿಯಂ ಮತ್ತು ಬೈಕಾರ್ಬೋನೇಟ್‌ಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೊರಹಾಕಲಾಗಿದೆ(ಕೊಷ್ಟಕ 3). ಮಣ್ಣು ಪರೀಕ್ಷೆ ಫಲಿತಾಂಶದಲ್ಲೂ ಸಹ ಮಣ್ಣಿನ ರಸಸಾರ ಮತ್ತು ಲಣಾಂಶ ಕಡಿಮೆಯಾಗಿರುವುದು ಕಂಡುಬಂದಿದೆ. ಇದರಿಂದ ಈ ಭೂಮಿ ಉತ್ತಮ ಫಲವತ್ತಾದ ಭೂಮಿಯಾಗಲು ಅನುಕೂಲವಾಗಿದೆ. ಏಕೆಂದರೆ ಎಷ್ಟು ಪ್ರಮಾಣದಲ್ಲಿ ಒಟ್ಟು ಧನ ಅಯಾನುಗಳು ಮತ್ತು ಕಾರ್ಬೋನೇಟ್ಸ್ ಅಂಶ ಮಣ್ಣಿನಲ್ಲಿರುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ಮಣ್ಣು ಕ್ಷಾರೀಯವಾಗಿದ್ದು ಇದು ಮಣ್ಣಿನ ರಸಸಾರದ ಮೇಲೆ ನೇರವಾದ ಪ್ರಭಾವವನ್ನು ಬೀರುತ್ತದೆ. (ಯೆರ್ರಿಸ್ವಾಮಿ, 1996). ಆದ್ದರಿಂದ ಲವಣಯುಕ್ತ ಮಣ್ಣನ್ನು ನಿವಾರಣೆ ಮಾಡಲು, ಮೊದಲನೆಯದಾಗಿ ಮಣ್ಣಿನಲ್ಲಿನ ಹೆಚ್ಚಿನ ಪ್ರಮಾಣದ ಲವಣಗಳನ್ನು ನೀರಿನ ಮೂಲಕ ಹೊರ ಹಾಕಬೇಕು. ಅದರಲ್ಲೂ ಮಣ್ಣಿನಲ್ಲಿರುವ ಸೋಡಿಯಂನ್ನು ಸುಧಾರಕಗಳನ್ನು ಬಳಸಿಕೊಂಡು ನೀರಿನ ಮೂಲಕ ಮಣ್ಣಿನಿಂದ ಬಸಿದು ಹೊರಹಾಕುವುದರಿಂದ ಮಣ್ಣನ್ನು ಲವಣಯುಕ್ತಗೊಳಿ ಸಬಹುದು (ಕುಳಿಗೋಡ್, 2002).

ಸವಳು ಮತ್ತು ಕ್ಷಾರ ಭೂಮಿಗಳು ಸುಧಾರಣೆ ಆಗಿವೆಯೇ ಎಂದು ಪರೀಕ್ಷಿಸಲು ಬೆಳೆ ಕಟಾವು ಪ್ರಯೋಗವನ್ನು 136 ಎಕರೆ ಪ್ರದೇಶದಲ್ಲಿನ 66 ರೈತರ ಜಮೀನಿನಲ್ಲಿ ಒಳಮೈ ಬಸಿಗಾಲುವೆ ಹಾಕುವುದಕ್ಕೂ ಮೊದಲು, ಜಿಪ್ಸಮ್ ಹಾಕುವುದಕ್ಕೂ ಮುಂಚೆ ಮತ್ತು ಜಿಪ್ಸಮ್ ಹಾಕಿದ ನಂತರ ಕೈಗೊಳ್ಳಲಾಯಿತು. ಈ ಬೆಳೆ ಕಟಾವು ಪ್ರಯೋಗದಿಂದ ತಿಳಿದು ಬಂದ ಅಂಶವೆಂದರೆ ಬರೀ ಬಸಿಗಾಲುವೆ ಹಾಕುವುದರಿಂದಲೇ ಶೇ 22.99 ರಷ್ಟು ಭತ್ತದ ಇಳುವರಿ ಹೆಚ್ಚಾಗಿದೆ (ಕೋಷ್ಟಕ 4). ಆದರೆ ಜಿಪ್ಸಮ್ ಹಾಕಿದ ರೈತರ (4 ರೈತರು) ಜಮೀನಿನಲ್ಲಿ ಶೇ. 35.68 ರಷ್ಟು ಇಳುವರಿ ಹೆಚ್ಚಾಗಿದೆ. ಅದೇ ರೀತಿ ಎರಡನೇ ಬೆಳೆಯ ಅಂಕಿ ಅಂಶಗಳನ್ನು ಗಮನಿಸಿದರೆ, ಜೌಗು ಮತ್ತು ಸವಳು ಭೂಮಿಯ ರೈತರ ಜಮೀನಿನಲ್ಲಿ ಶೇ. 25.13 ರಷ್ಟು ಮತ್ತು ಜಿಪ್ಸಮ್ ಹಾಕಿದ ರೈತರ ಜಮೀನಿನಲ್ಲಿ ಶೇ. 38.28 ರಷ್ಟು ಭತ್ತದ ಇಳುವರಿ ಹೆಚ್ಚಾಗಿರುವುದು ಕಂಡು ಬಂದಿದೆ. ಇದಕ್ಕೆ ಮುಖ್ಯ ಕಾರಣ ಬಸಿಗಾಲುವೆ ನಂತರ ಮಣ್ಣು ಹಾನಿಕಾರಕ ಲವಣಗಳಿಂದ

ಮುಕ್ತವಾಗಿ ಮಣ್ಣಿನಿಂದ ಸಾಕಷ್ಟು ಪ್ರಮಾಣದಲ್ಲಿ ಪೋಷಕಾಂಶಗಳು ದೊರೆತು ಬೆಳೆಗಳ ಬೆಳವಣಿಗೆ ಮತ್ತು ಇಳುವರಿ ಹೆಚ್ಚಾಗಿರುವುದು. ಇದೇ ರೀತಿ ಹೊಸದಾಗಿ ಸವಳು-ಕರ್ಲು ನಿವಾರಣೆ ಮಾಡಿದ ಮಣ್ಣಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾರಜನಕ ಗೊಬ್ಬರ ಹಾಕುವುದರಿಂದ ಭತ್ತದ ಬೆಳವಣಿಗೆ ಉತ್ತಮಪಡಿಸಿ ಇಳುವರಿಯನ್ನು ಹೆಚ್ಚಿಸಬಹುದು (ಮಂಜೂರ್ ಮತ್ತು ಸಂಗಡಿಗರು, 2006).

ಕಾವೇರಿ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿನ ಜಿಪ್ಸಮ್ ಸುಧಾರಕ ಬಳಸಿದ ತಾಕುಗಳಲ್ಲಿ, ವಿವಿಧ ಪ್ರಮಾಣ ಮತ್ತು ಅನುಪಾತದಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪೋಷಕಾಂಶಗಳನ್ನು ಹಾಕುವುದರಿಂದ ಭತ್ತದ ಕಾಳು ಮತ್ತು ಮೇವಿನ ಇಳುವರಿ ಗಣನೀಯವಾಗಿ ಏರಿಕೆಯಾಗಿರುವುದು ಕಂಡುಬಂದಿದೆ (ವಿಜಯಕುಮಾರ, 2014). ಇದಕ್ಕೆ ಮುಖ್ಯ ಕಾರಣವೇನೆಂದರೆ ಕ್ಷಾರೀಯ ಮಣ್ಣಿನಲ್ಲಿ ಜಿಪ್ಸಮ್ ಹಾಕುವುದರಿಂದ, ಹಾನಿಕಾರಕವಾದ ಸೋಡಿಯಂ ಮಣ್ಣಿನಿಂದ ಬಸಿದು ಹೋಗುವಂತೆ ಮಾಡುವುದರಿಂದ ಬೆಳೆಗಳು ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪೋಷಕಾಂಶಗಳನ್ನು ಸಮರ್ಥವಾಗಿ ಬಳಸಿಕೊಂಡು ಭತ್ತದ ಇಳುವರಿ ಹೆಚ್ಚಿಸಲು ಅನುಕೂಲವಾಗುತ್ತದೆ.

ಇಳುವರಿ ಹೆಚ್ಚಾಗಲು ಇನ್ನೊಂದು ಕಾರಣವೆಂದರೆ, ಒಳಮೈ ಬಸಿಗಾಲುವೆಗಳು ಜೌಗು ಮತ್ತು ಸವಳು ಸುಧಾರಣೆ ಮಾಡುವಲ್ಲಿ ನೇರವಾಗಿ ಅನುಕೂಲ ಮಾಡುವುದು. ಇದರಿಂದಾಗಿ ನೀರಿನಲ್ಲಿ ಕರಗುವ ಅತಿಯಾದ ಲವಣಗಳು ಬಸಿದು ಹೋಗಿ ಪೋಷಕಾಂಶಗಳನ್ನು ಹೀರಿಕೊಳ್ಳಲು ಬೇರಿನ ಸುತ್ತ ಉತ್ತಮ ವಾತಾವರಣ ಸೃಷ್ಟಿಯಾಗಿ ಭತ್ತದ ಬೆಳವಣಿಗೆ ಮತ್ತು ಇಳುವರಿ ಹೆಚ್ಚಿಸಲು ಅನುಕೂಲವಾಗುತ್ತದೆ (ವಿಜಯ ಕುಮಾರ, 2014).

ಒಟ್ಟಾರೆ ಈ ಪ್ರಯೋಗದ ಸಂಕ್ಷಿಪ್ತ ಫಲಿತಾಂಶವೇನೆಂದರೆ ಜೌಗು, ಸವಳು ಮತ್ತು ಕ್ಷಾರ ಭೂಮಿ ಇರುವ ರೈತರು ಒಳಮೈ ಬಸಿಗಾಲುವೆಗಳನ್ನು ಹಾಕಿ ಕೊಂಡು, ಕ್ಷಾರ(ಕರ್ಲು) ಭೂಮಿ ಇರುವ ಕಡೆ ಮಣ್ಣು ಪರೀಕ್ಷೆ ಆಧಾರದ ಮೇಲೆ ಜಿಪ್ಸಮ್ ಹಾಕಿ ಉತ್ತಮ ಗುಣಮಟ್ಟದ ನೀರಿನಿಂದ ಬಸಿದ ನಂತರ ಸಾಕಷ್ಟು ಪ್ರಮಾಣದಲ್ಲಿ ಸಾವಯವ ಗೊಬ್ಬರಗಳನ್ನು ಬಳಸಿ ಬೆಳೆ ಬೆಳೆದರೆ ಭೂಮಿಯನ್ನು ಸುಧಾರಣೆ ಮಾಡಿ ಉತ್ತಮ ಇಳುವರಿ ಪಡೆಯಲು ಸಾಧ್ಯ.

ಇದರಲ್ಲಿ ಒಂದೇ ಒಂದು ನ್ಯೂನ್ಯತೆಯೆಂದರೆ, ಈ ಒಳಮೈ ಬಸಿಗಾಲುವೆಗೆ ಬಳಸುವ ಪ್ಲಾಸ್ಟಿಕ್ ಕೊಳವೆಗಳು ಅತಿ ದುಬಾರಿಯಾಗಿದ್ದು ಒಂದು ಎಕರೆಗೆ 35,000 ರಿಂದ 40,000 ಖರ್ಚು ಬರುತ್ತದೆ. ಆದ್ದರಿಂದ ಸರ್ಕಾರದಿಂದ ಈ ಪ್ಲಾಸ್ಟಿಕ್ ಕೊಳವೆಗಳನ್ನು ಖರಿದಿಸಲು ರೈತರಿಗೆ ರಿಯಾಯತಿ (ಸಬ್ಸಿಡಿ) ದೊರಕಿಸಿದರೆ ನೀರಾವರಿ ಅಚ್ಚು ಕಟ್ಟು ಪ್ರದೇಶಗಳಲ್ಲಿನ ಈ ಎಲ್ಲಾ ಭೂಮಿಗಳನ್ನು ಸುಧಾರಣೆ ಮಾಡಿ ಉತ್ತಮ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ.

**ಉಲ್ಲೇಖಗಳು**

ಕುಳಗೋಡ್, ವಿ.ಬಿ., ಸಾಲಿಮಠ, ಎಸ್.ಬಿ., ವಿಜಯ್ ಶೇಖರ್, ಕೆ., ಮತ್ತು ಬಾಲಕೃಷ್ಣನ್, ಪಿ. 2002, ಕ್ಯಾರೆಕ್ಟರೈಜೇಷನ್ ಅಂಡ್ ಸ್ಪೇಷಿಯಲ್ ಅಂಡ್ ಟೆಂಪೋರಲ್ ವೇರಿಯಾಬಿಲಿಟಿ ಆಫ್ ಸಾಯಲ್ ಸಲೈನಿಟಿ ಇನ್ ಅಪ್ಪರ್ ಕೃಷ್ಣ ಪ್ರಾಜೆಕ್ಟ ಕಮಾಂಡ್ ಏರಿಯಾ, ಕರ್ನಾಟಕ. ಜ. ಇಂಡಿಯನ್ ಸೊಸೈ. ಸಾಯಿಲ್. ಸೈನ್ಸ್., 50(2): 226-229.

ಕೇ.ಸ.ಮ.ಸ.ಸಂ., (ಸಿ.ಎಸ್.ಎಸ್.ಅರ್.ಐ.) 2011, ವಿಷನ್-2030, ಸೆಂಟ್ರಲ್ ಸಾಯಿಲ್ ಸಲೈನಿಟಿ ರಿಸರ್ಚ್ ಇನ್ಸ್ಟಿಟ್ಯೂಟ್(ಐಸಿಎಅರ್), ಕರ್ನಾಲ್-132001, ಇಂಡಿಯಾ.

ಚಿನ್ನಪ್ಪ, ಬಿ., 2002. ಆ್ಯನ್ ಎಕನೊಮಿಕ್ ಅನಾಲಿಸಿಸ್ ಆಫ್ ಲ್ಯಾಂಡ್ ರೆಕ್ಲಮೇಷನ್ ಟೆಕ್ನೊಲಾಜೀಸ್ ಫಾರ್ ಅಮಿಲಿಯೋರೇಷನ್ ಆಫ್ ಇರಿಗೇಷನ್ ಇಂಡ್ಯೂಜ್ಡ್ ಸಾಯಿಲ್ ಡಿಗ್ರೆಡೇಷನ್. ಅಗ್ರಿಕಲ್ಚರ್ ಎಕನೊಮಿಕ್ಸ್ ರಿಸರ್ಚ್ ರಿವೀವ್, 18(1):103-116.

ಜಾಕ್ಸನ್, ಎಮ್. ಎಲ್., 1973, ಸಾಯಿಲ್ ಕೆಮಿಕಲ್ ಅನಾಲಿಸಿಸ್, ಪ್ರೆಂಟೀಸ್ ಹಾಲ್ ಆಫ್ ಇಂಡಿಯಾ ಪ್ರೈ. ಲಿ., ನ್ಯೂ ದೆಹಲಿ, ಪಿಪಿ. 498.

ಮಂಜೂರ್, ಝೆಡ್., ಅವಾನ್, ಟಿ. ಹೆಚ್., ಝಹೀದ್, ಎಮ್. ಎ. ಮತ್ತು ಫೈಯಾಜ್, ಎಫ್.ಎ., 2006, ರೆಸ್ಪಾನ್ಸ್ ಆಫ್ ರೈಸ್ ಕ್ರಾಪ್ (ಸೂಪರ್ ಬಾಸುಮತಿ) ಟು ಡಿಫರೆಂಟ್ ನೈಟ್ರೋಜನ್ ಲೆವೆಲ್ಸ್, ಜ. ಅನಿ. ಪ್ಲಾ. ಸೈ. 16 (1-2): 52-55.

ಯರ್ರಿಸ್ವಾಮಿ,ಎ.ಎನ್.,1996, ಸ್ಟಡೀಸ್ ಆನ್ ಸಾಲ್ಟ್ ಅಫೆಕ್ಟೆಡ್ ಸಾಯಿಲ್ಸ್ ಆಫ್ ಅಪ್ಪರ್ ಕೃಷ್ಣ ಪ್ರಾಜೆಕ್ಟ ಕಮಾಂಡ್ ಏರಿಯಾ, ಎಮ್.ಎಸ್.ಸಿ.(ಅಗ್ರಿ.) ಥೀಸಿಸ್, ಕೃ.ವಿ.ವಿ., ಜಿ.ಕೆ.ವಿ.ಕೆ. ಬೆಂಗಳೂರು.

ರಿಚರ್ಡ್ಸ್, ಎಲ್.ಎ., 1954, ಡೈಯೋಗ್ನೋಸಿಸ್ ಅಂಡ್ ಇಂಪ್ರೂವ್‌ಮೆಂಟ್ ಆಫ್ ಸಲೈನ್ ಅಂಡ್ ಆಲ್ಕಲೈನ್ ಸಾಯಿಲ್ಸ್. ಅಗ್ರಿಕಲ್ತರ್ ಹ್ಯಾಂಡ್ ಬುಕ್. ನಂ.60, ಯು.ಎಸ್.ಡಿ.ಏ.

ವಿಜಯಕುಮಾರ, ಸಿ., 2014, ಕ್ಯಾರೆಕ್ಟರೈಜೆಷನ್ ಆಫ್ ಸಾಲ್ಟ್ ಅಫೆಕ್ಟೆಡ್ ಸಾಯಿಲ್ಸ್ ಇನ್ ಸೆಲೆಕ್ಟೆಡ್ ಲೊಕೇಷನ್ಸ್ ಆಫ್ ಕಾವೇರಿ ಕಮಾಂಡ್ ಏರಿಯಾ ಅಂಡ್ ಸ್ಟಡೀಸ್ ಆನ್ ಎಫೆಕ್ಟ ಆಫ್ ನ್ಯೂಟ್ರಿಯೆಂಟ್ಸ್ ಲೆವೆಲ್ಸ್ ಅಂಡ್ ರೇಷಿಯೋಸ್ ಆನ್ ಗ್ರೋತ್ ಅಂಡ್ ಯೀಲ್ಡ್ ಆಫ್ ರೈಸ್ ಇನ್ ಜಿಪ್ಸಮ್ ಅಮೆಂಡೆಡ್ ಸೋಡಿಕ್ ಸಾಯಿಲ್ಸ್. ಪಿ.ಹೆಚ್.ಡಿ. ಥೀಸಿಸ್, ಕೃ.ವಿ.ವಿ., ಜಿ.ಕೆ.ವಿ.ಕೆ. ಬೆಂಗಳೂರು.

ಕೋಷ್ಟಕ 1. ಪ್ರತಿ ದಿನ ಪ್ರತಿ ಬಗಾಲುವೆ ಕೊಳವೆಗಳಿಂದ ಮತ್ತು ಒಟ್ಟು ಪ್ರದೇಶದಿಂದ (136 ಎಕರೆ) ಬಸಿದು ಹೋದ ನೀರಿನ ಪ್ರಮಾಣ

| ದಿನಾಂಕ/ಕೊಳವೆಗಳು | 1 | 2 | 3 | 4 | 5 | 6 | 7 | 8 | 9 | 10 | ಒಟ್ಟು ಬಸಿದ ನೀರಿನ ಪ್ರಮಾಣ |
|---|---|---|---|---|---|---|---|---|---|---|---|
| 10-01-14 | | | | | | 5040.00 | | | | | 5040.00 |
| 17-01-14 | | | | | | 216000.00 | 144000.00 | 216000.00 | | | 576000.00 |
| 22-01-14 | | | | 48000.00 | 43200.00 | | | | | | 91200.00 |
| 23-01-14 | | 7200.00 | | | | | | | | | 7200.00 |
| 24-01-14 | 1584000.00 | | | | | 1425600.00 | 1584000.00 | 1425600.00 | | | 6019200.00 |
| 26-01-14 | | | 4500.00 | 3085.71 | | | | | | | 7585.71 |
| 27-01-14 | 15428.57 | | | | 43200.00 | 18000.00 | 13090.91 | | | 11368.42 | 101087.90 |
| 05-03-14 | | | | 40500.00 | 36000.00 | | | | | | 76500.00 |
| 20-03-14 | | | | 2400.00 | 2160.00 | | | | | | 4560.00 |
| 21-03-14 | | 2400.00 | 2160.00 | | | | | | 1800.00 | | 6360.00 |
| 22-03-14 | 34560 | | | | | 43200.00 | 51840.00 | 43200.00 | | 23563.64 | 196363.64 |
| 03-04-14 | | | | 4320.00 | 2541.18 | | | | | | 6861.18 |
| 04-04-14 | | 4320.00 | 1878.26 | 2400.00 | | | | | | | 8598.26 |
| 05-04-14 | 23563.64 | | | | | 32400.00 | 28800.00 | 19938.46 | | 15514.29 | 123216.38 |
| 17-04-14 | 1878.26 | 1661.54 | | | | | | | | | 3539.80 |
| 18-04-14 | | 1800.00 | 2273.68 | | | | | | 1728.00 | | 5801.68 |
| 19-04-14 | 19365.52 | 26742.86 | | | | 26742.86 | 26742.86 | 18720.00 | | 20800.00 | 139114.09 |
| 02-05-14 | 24685.71 | 22539.13 | 21600.00 | 25287.80 | 23563.64 | 17875.86 | 25920.00 | 19200.00 | 17875.86 | 19935.46 | 218486.47 |
| 14-05-14 | 30857.14 | 33230.77 | 29793.10 | 43200.00 | 29793.10 | 25411.76 | 43200.00 | 30857.14 | 30857.14 | 27000.00 | 324200.17 |
| 03-06-14 | 19938.46 | 19200.00 | 15514.29 | 19200.00 | 19938.46 | 16722.58 | 19938.46 | 19938.46 | 23563.64 | 19938.46 | 196892.81 |
| 15-06-14 | 1270.59 | 929.03 | 1107.69 | 1350.00 | 1270.59 | 1350.00 | 1152.00 | 1270.59 | 1350.00 | 1309.09 | 12359.58 |
| 03-08-14 | 75600.00 | 46523.08 | 85400.00 | 75600.00 | 75600.00 | 40320.00 | 100800.00 | 46523.08 | 31831.58 | 37800.00 | 616997.73 |
| 17-08-14 | 86400.00 | 55542.86 | 77760.00 | 86400.00 | 59815.38 | 48600.00 | 97200.00 | 59815.38 | 38880.00 | 45741.18 | 656154.80 |
| 04-09-14 | 70200.00 | 33035.29 | 56160.00 | 56160.00 | 40114.29 | 37440.00 | 51054.55 | 37440.00 | 29557.89 | 35100.00 | 446262.02 |
| 17-09-14 | 98742.86 | 49371.43 | 98742.86 | 76800.00 | 69120.00 | 43200.00 | 86400.00 | 49371.43 | 40658.82 | 49371.43 | 661778.82 |
| 03-10-14 | 70200.00 | 0.00 | 62400.00 | 74880.00 | 80228.57 | 53485.71 | 93600.00 | 80228.57 | 56160.00 | 51054.55 | 622237.40 |
| 16-10-14 | 92160.00 | 0.00 | 81317.65 | 76800.00 | 76800.00 | 86400.00 | 62836.36 | 76800.00 | 69120.00 | 72757.89 | 694991.91 |
| 02-11-14 | 64800.00 | 81000.00 | 61714.29 | 72000.00 | 81000.00 | 72000.00 | 92571.43 | 72000.00 | 53890.09 | 64800.00 | 720794.81 |
| 17-11-14 | 3756.52 | 3085.71 | 3927.27 | 3756.52 | 4547.37 | 4320.00 | 3927.27 | 4320.00 | 3927.27 | 3927.27 | 39495.22 |
| ಒಟ್ಟು ಬಸಿದ ನೀರಿನ ಪ್ರಮಾಣ | 2317407.27 | 388531.70 | 610549.09 | 712140.04 | 688892.58 | 2214108.78 | 2527073.84 | 2221223.12 | 406219.30 | 502984.68 | 12589180.39 |

ಕೋಷ್ಟಕ 2. ವಿವಿಧ ದಿನಗಳ ಅಂತರದಲ್ಲಿ 10 ಬಸಿಗಾಲುವೆ ಕೊಳವೆಗಳಿಂದ ಬಸಿದುಹೋದ ಒಟ್ಟು ಲವಣಗಳ ಪ್ರಮಾಣ

| | ಲವಣಗಳ ವಿವರ → | ಪೊಟ್ಯಾಶಿಯಂ | ಸೋಡಿಯಂ | ಸುಣ್ಣ | ಮೆಗ್ನೀಶಿಯಂ | ಕಾರ್ಬೋನೇಟ್ | ಬೈಕಾರ್ಬೋನೇಟ್ | ಕ್ಲೋರೈಡ್ | ಸಲ್ಫೇಟ್ | ಒಟ್ಟು ಲವಣಗಳ ಪ್ರಮಾಣ |
|---|---|---|---|---|---|---|---|---|---|---|
| | ದಿನಗಳ ಅವಧಿ | ವಿವಿಧ ದಿನಗಳ ಅಂತರದಲ್ಲಿ ಬಸಿದುಹೋದ ಲವಣಗಳ ಪ್ರಮಾಣ (ಕೆ.ಜಿ.) | | | | | | | | |
| 1 | 10-01-14 to 17-1-14 | 0.01 | 2.68 | 0.04 | 0.03 | 0.60 | 1.23 | 3.22 | 1.44 | 9.25 |
| 2 | 17-01-14 to 26-01-14 | 2.30 | 144.45 | 2.81 | 1.16 | 60.55 | 123.12 | 184.20 | 156.51 | 685.63 |
| 3 | 26-01-14 to 5-03-14 | 1.01 | 113.59 | 63.36 | 26.28 | 31.23 | 123.54 | 151.83 | 54.25 | 565.08 |
| 4 | 5-03-14 to 20-03-14 | 0.23 | 19.95 | 15.47 | 18.59 | 9.45 | 35.43 | 29.81 | 8.15 | 137.07 |
| 5 | 20-3-14 to 3-04-14 | 0.60 | 72.81 | 30.25 | 71.56 | 44.80 | 229.16 | 119.10 | 6.30 | 574.57 |
| 6 | 3-04-14 to 17-04-14 | 0.45 | 54.91 | 37.53 | 41.89 | 26.79 | 152.20 | 78.06 | 8.38 | 400.21 |
| 7 | 17-04-14 to 2-05-14 | 0.42 | 33.67 | 23.18 | 29.40 | 22.22 | 126.97 | 49.38 | 7.57 | 292.82 |
| 8 | 2-05-2014 to 14-05-14 | 0.64 | 57.95 | 66.42 | 91.91 | 42.61 | 251.13 | 94.89 | 15.15 | 620.71 |
| 9 | 14-05-14 to 3-06-14 | 2.29 | 118.30 | 92.94 | 140.59 | 70.12 | 453.09 | 166.15 | 9.19 | 1052.67 |
| 10 | 3-06-14 to 15-06-14 | 0.55 | 62.61 | 16.19 | 17.77 | 32.20 | 210.81 | 101.48 | 9.63 | 451.24 |
| 11 | 15-06-14 to 3-08-14 | 0.06 | 3.07 | 3.08 | 4.59 | 2.15 | 18.51 | 9.19 | 2.68 | 43.34 |
| 12 | 3-08-15 to 17-08-14 | 3.04 | 135.85 | 144.31 | 234.67 | 96.68 | 352.55 | 654.69 | 164.38 | 1786.18 |
| 13 | 17-08-15 to 4-09-14 | 3.13 | 114.11 | 283.83 | 1.01 | 208.00 | 669.90 | 449.79 | 140.34 | 1870.11 |
| 14 | 4-09-14 to 17-09-14 | 1.81 | 64.68 | 45.37 | 85.02 | 0.00 | 730.02 | 205.55 | 56.64 | 1189.07 |
| 15 | 17-09-14 to 3-10-14 | 2.30 | 88.44 | 71.60 | 113.72 | 0.00 | 1338.74 | 343.38 | 94.83 | 2054.02 |
| 16 | 3-10-14 to 16-10-14 | 135.16 | 154.96 | 79.33 | 163.19 | 0.00 | 1613.50 | 324.75 | 175.02 | 2645.90 |
| 17 | 16-10-14 to 2-11-14 | 170.91 | 251.38 | 62.23 | 92.26 | 0.00 | 1221.07 | 392.02 | 71.30 | 2261.17 |
| 18 | 2-11-15 to 17-11-14 | 1.39 | 105.24 | 416.28 | 156.22 | 0.00 | 1401.68 | 567.03 | 145.66 | 2794.01 |
| 19 | 17-11-14 | 0.118 | 11.523 | 12.553 | 22.044 | 0.000 | 76.533 | 79.996 | 15.103 | 217.87 |
| | ಒಟ್ಟು ಲವಣಗಳ ಪ್ರಮಾಣ | 327.92 | 1610.17 | 1466.77 | 1311.91 | 647.41 | 9129.20 | 4005.01 | 1152.53 | 19650.92 |

## ಕೋಷ್ಟಕ 3. ಭದ್ರಾ ಅಚ್ಚುಕಟ್ಟು ಪ್ರದೇಶದ ಕ್ಯಾವಣ್ಣಿ ಹಳ್ಳಿಯಲ್ಲಿನ ಜೌಗು ಮತ್ತು ಲವಣಯುಕ್ತ ಮಣ್ಣಿನ ನಿವಾರಣೆಗೆ ಆಯ್ಕೆ ಮಾಡಲಾದ ರೈತರ ಭತ್ತ ಕಟಾವು ಪ್ರಯೋಗದ ವಿವರ

| ಕ್ರಮ ಸಂಖ್ಯೆ | ರೈತರ ವಿವರ | ಸರ್ವೆ ನಂ. | ಎಕರೆ | ಭತ್ತ ಕಟಾವು ಇಳುವರಿ ವಿವರ 2013 (ಒ. ಬೆಳೆಗಾಲದ ನಂತರ) ದಿನಾಂಕ 20–30.11.13 | | ಭತ್ತ ಕಟಾವು ಇಳುವರಿ ವಿವರ 2014 (ಒ. ಬೆಳೆಗಾಲದ ನಂತರ) ದಿನಾಂಕ 30.05.14 | | | ಭತ್ತ ಕಟಾವು ಇಳುವರಿ ವಿವರ 2013 (ಒ. ಬೆಳೆಗಾಲದ ನಂತರ) ದಿನಾಂಕ 26.11.14 | | |
|---|---|---|---|---|---|---|---|---|---|---|---|
| | | | | ಕೆಜಿ/25 ಚಮೀ | ಕ್ವಿ/ಎ | ಕೆಜಿ/25 ಚಮೀ | ಕ್ವಿ/ಎ | ಶೇ. ಹೆಚ್ಚಾದ ಇಳುವರಿ /ಎ | ಕೆಜಿ/25 ಚಮೀ | ಕ್ವಿ/ಎ | ಶೇ. ಹೆಚ್ಚಾದ ಇಳುವರಿ /ಎ |
| 1. | ರಾಜಪ್ಪ ಬಿನ್. ಬಸವರಾಜಪ್ಪ, ಟಿ.ಕೆ. | 82/1 | 5.00 | 13.50 | 21.60 | 18.06 | 28.89 | 33.74 | 18.27 | 29.23 | 35.33 (ಜಿ) |
| 2. | ಕುಮಾರಪ್ಪ ಬಿನ್. ಬಸವರಾಜಪ್ಪ, ಟಿ.ಕೆ. | 82/1 | 5.00 | 13.00 | 20.80 | 16.67 | 26.67 | 28.21 | 17.48 | 27.97 | 34.47 (ಜಿ) |
| 3. | ದಾನಮ್ಮ ಕೋ. ಬೆಲ್ಲೂಡಿ ಹನುಮಂತಪ್ಪ | 95 | 10.00 | 13.50 | 21.60 | 16.11 | 25.78 | 19.34 | 18.86 | 30.18 | 39.70 (ಜಿ) |
| 4. | ನಾಗರಾಜಪ್ಪ ಬಿನ್. ಹನುಮಂತಪ್ಪ | 96/1 | 1.00 | 13.50 | 21.60 | 16.67 | 26.67 | 23.46 | 17.85 | 28.56 | 32.22 |
| 5. | ಸಣ್ಣಮ್ಮ ಕೋ. ದೊಡ್ಡಪ್ಪ | 96/2$P_1$ | 3.32 | 13.00 | 20.80 | 17.06 | 27.30 | 31.23 | 18.25 | 29.20 | 40.38 (ಜಿ) |
| 6. | ಕಟ್ಟೆ ನಾಗಪ್ಪ ಬಿನ್. ಮುರಡಪ್ಪ | 98/2 | 0.30 | 13.00 | 20.80 | 17.50 | 28.00 | 34.62 | 17.90 | 28.63 | 37.64 (ಜಿ) |
| 7. | ನಿಂಗಮ್ಮ ಕೋ. ಸಿದ್ದಪ್ಪ | 98/3 | 0.20 | 14.00 | 22.40 | 16.67 | 26.67 | 19.05 | 16.80 | 26.88 | 20.00 |
| 8. | ಹೊನ್ನಮ್ಮ ಕೋ. ಹೊನ್ನತ್ತಪ್ಪ | 99/1 | 3.32 | 13.00 | 20.80 | 16.11 | 25.78 | 23.93 | 17.81 | 28.50 | 37.00 (ಜಿ) |
| 9. | ಜನುಮಕ್ಕ ಕೋ. ನಾಗಪ್ಪ | 99/2A$P_2$ | 0.22 | 13.00 | 20.80 | 16.67 | 26.67 | 28.21 | 17.53 | 28.05 | 34.85 (ಜಿ) |
| 10. | ರುದ್ರೇಶ್ ಬಿನ್. ಚಂದ್ರಪ್ಪ ವಡಿ | 112/1A$P_1$ | 2.08 | 13.50 | 21.60 | 16.11 | 25.78 | 19.34 | 19.00 | 30.40 | 40.74 (ಜಿ) |
| 11. | ಶೇಖರಪ್ಪ ಬಿನ್. ದೊಡ್ಡಪ್ಪ | 112/1C | 1.30 | 12.50 | 20.00 | 17.28 | 27.65 | 38.24 | 18.50 | 29.60 | 42.31 (ಜಿ) |
| 12. | ರಾಯಣ್ಣ ಬಿನ್ ಚಿಕ್ಕಪ್ಪ | 112/2$P_4$ | 0.37 | 12.50 | 20.00 | 17.75 | 28.40 | 42.00 (ಜಿ) | 17.43 | 27.89 | 39.44 (ಜಿ) |
| 13. | ರಾಮಚಂದ್ರಪ್ಪ ಬಿನ್. ಚಿಕ್ಕಪ್ಪ | 112/3$P_2$ | 0.37 | 13.50 | 21.60 | 14.89 | 23.82 | 10.30 | 18..44 | 29.50 | 36.59 (ಜಿ) |
| 14. | ಶ್ರೀ ಆಂಜನೇಯ ದೇವಾಲಯ | 11.3 | 6.29 | 13.00 | 20.80 | 17.47 | 34.40 | 16.48 (ಜಿ) | 0.00 | 0.00 | 0.00 |
| 15. | ಶಿವಣ್ಣ ಬಿನ್. ಕರಿಯಪ್ಪ | 114/1 | 5.20 | 13.50 | 21.60 | 0.00 | 0.00 | 0.00 | 17.90 | 28.64 | 37.69 (ಜಿ) |
| | | | | 66 ರೈತರ ಸರಾಸರಿ ಅಂಕಿ ಅಂಶಗಳು | | | | | | | |
| | ಸರಾಸರಿ % ಇಳುವರಿಯಲ್ಲಿನ ಹೆಚ್ಚಳ | | | 13.38 (65) | 21.42 (65) | 16.55 (63) | 26.49 (63) | 23.80 (63) | 17.11 | 27.38 | 27.89 (62) |
| | ಸರಾಸರಿ % ಇಳುವರಿಯಲ್ಲಿನ ಹೆಚ್ಚಳ | | | | | 16.50 (59) | 26.41 (59) | 22.99 (59) | 16.85 | 26.97 | 25.13 (49) |
| | ಜಿಪ್ಸಮ್ ಬಳಸಿರುವ ರೈತರ ಸರಾಸರಿ | | | | | 17.29 (4) | 27.67 (4) | 35.68 (4) | 18.08 | 28.93 | 38.28 (13) |

ISSN 2249 - 5754 VIJNANA KANNADA (PRINT)


# (ಆ) ತೋಟಗಾರಿಕೆ, ಅರಣ್ಯ

## ಪಶ್ಚಿಮಘಟ್ಟದ ಮಿರಿಸ್ಟಿಕ ಜೌಗು ಪ್ರದೇಶಗಳ ಸ್ಥಿತಿಗತಿ

ಅಶ್ವತ್, ಎಮ್.ಎನ್*[1]., ಚರಣ ಕುಮಾರ್[2], ಮನು, ಟಿ.ಎನ್[2]., ಬಸವರಾಜು, ಎಸ್[1]. ಮತ್ತು ಕುಶಾಲಪ್ಪ, ಸಿ.ಜಿ[3].
1. ಅರಣ್ಯ ಶಾಸ್ತ್ರ ವಿದ್ಯಾರ್ಥಿಗಳು, 2. ಅರಣ್ಯ ಶಾಸ್ತ್ರ ಪದವೀಧರರು 3. ಅರಣ್ಯಜೀವ ಮತ್ತು ವೃಕ್ಷಾಭಿವೃದ್ಧಿ ವಿಭಾಗ, ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ (www.ashumangalapare@gmail.com)

**ಪ್ರಬಂಧಸಾರ:–** ವಿಶ್ವ ಪ್ರಸಿದ್ಧಿ ಹೊಂದಿರುವ ಪಶ್ಚಿಮಘಟ್ಟಗಳು ವಿಶಿಷ್ಟವಾದ ಸಸ್ಯವರ್ಗಗಳನ್ನು ತನ್ನ ಮಡಿಲಿನಲ್ಲಿಟ್ಟುಕೊಂಡು ವರ್ಷವಿಡೀ ಸದಾ ಹರಿಯುವಿಕೆಯಿಂದ ಕೂಡಿರುವ ಜೌಗುಗಳನ್ನು ಮಿರಿಸ್ಟಿಕ ಜೌಗು ಪ್ರದೇಶಗಳು ಎಂದು ಕರೆಯಲಾಗುತ್ತದೆ. ಈ ಜೌಗುಗಳು ಕರ್ನಾಟಕದ ಮಲೆನಾಡು ಪ್ರದೇಶಗಳಲ್ಲಿ ಎಂದರೆ ಮಧ್ಯಮ ಪಶ್ಚಿಮ ಘಟ್ಟದ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಅತಿ ಹೆಚ್ಚಾಗಿ ಕಂಡು ಬರುತ್ತವೆ. ಮಿರಿಸ್ಟಿಕ ಜೌಗು ಪ್ರದೇಶಗಳು ನಮಗೆ ಪ್ರಕೃತಿ ಮಾತೆಯ ಬಹೂಪಯೋಗಿ ವರದಾನವಾಗಿದೆ. ವನ್ಯ ಪ್ರಾಣಿಗಳಿಗೆ ಬೇಸಿಗೆಯಲ್ಲಿ ದಾಹ ನೀಗಿಸಿಕೊಳ್ಳಲು ಮೂಲಾಧಾರವಾಗಿವೆ. ವಿರಳ & ಅತಿವಿರಳ ಸಂಖ್ಯೆಯಲ್ಲಿ ಪ್ರಪಂಚದಲ್ಲಿ ಎಲ್ಲೂ ಬೆಳೆಯದ & ಅಳಿವಿನಂಚಿನಲ್ಲಿರುವ ಸಸ್ಯವರ್ಗವು ಕಂಡು ಬರುತ್ತವೆ ಮತ್ತು ಅವುಗಳ ಜೀವನ ಚಕ್ರಕ್ಕೆ ಜೌಗು ಪ್ರದೇಶಗಳು ಮೂಲಾಧಾರವಾಗಿವೆ. ಈ ನೆಲದಲ್ಲಿ ಬೆಳೆಯುವ ಸಸ್ಯವರ್ಗವು ಔಷಧೀಯ ಗುಣಗಳನ್ನು ಹೊಂದಿ ವಿಶ್ವ ಪ್ರಸಿದ್ಧಿ ಹೊಂದಿವೆ. ಮಾನವನ ಆಧುನಿಕ ಜೀವನದ ಅನೇಕ ಚಟುವಟಿಕೆಗಳಿಂದ ಮಿರಿಸ್ಟಿಕ ಜೌಗುಪ್ರದೇಶಗಳು ಇತ್ತೀಚೆಗೆ ವಿರಳವಾಗುತ್ತಿವೆ. ಜೌಗುಗಳಿಗೆ ಅತಿ ಹತ್ತಿರವಾಗಿ ಹೆಚ್ಚು ಕೊಳವೆ ಬಾವಿಗಳನ್ನು ತೆಗೆಸುತ್ತಿರುವುದರಿಂದ ಈ ಪ್ರದೇಗಳಲ್ಲಿ ಬಹು ಬೇಗ ನೀರು ಇಂಗಿ ಹೋಗಿ ಬೇಸಿಗೆಯಲ್ಲಿ ವನ್ಯ ಜೀವಿಗಳಿಗೆ ತೊಂದರೆಯಾಗುತ್ತಿದೆ. ಹಾಗು ಈ ಪ್ರದೇಶಗಳಿಗೆ ಹೊಂದಿಕೊಂಡಿರುವ ಸಸ್ಯ ವರ್ಗಗಳ ಚಯಾಪಚಯ ಕ್ರಿಯೆಗಳಲ್ಲಿ ಅಸಮತೋಲನ ಉಂಟಾಗುವುದು. ಮಿರಿಸ್ಟಿಕ ಜೌಗು ಪ್ರದೇಶಗಳು ಪಶ್ಚಿಮ ಘಟ್ಟದ ಅನೇಕ ಭಾಗಗಳಲ್ಲಿ ರಾಜ್ಯ & ರಾಷ್ಟ್ರೀಯ ಹೆದ್ದಾರಿಗಳನ್ನು ಹಾದು ಹೋಗುವುದು ಅವುಗಳು ಕಣ್ಮರೆಯಾಗಲು ನಾಂದಿಯಾಗಿವೆ. ವಿಶಿಷ್ಟವಾದ ಉಷ್ಣವಲಯದ ಪ್ರಾಥಮಿಕ ಕಾಡುಗಳನ್ನು ಹೊಂದಿರುವ ಮಿರಿಸ್ಟಿಕ ಜೌಗು ಪ್ರದೇಶಗಳನ್ನು ಉಳಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ.

ಸಿಹಿನೀರಿನ ಜೌಗು ಪ್ರದೇಶಗಳು ವಿಶ್ವದ ಅನೇಕ ಭಾಗಗಳಲ್ಲಿ ಅಂದರೆ ಸ್ವೀಡನ್ ಮಿಸ್ಸಿಸ್ಸಿಪ್ಪಿ ಮತ್ತು ಅದರ ಉಪನದಿಗಳ ತೀರದಲ್ಲಿ, ಮಲೇಶಿಯಾದಲ್ಲಿ, ಅಮೆಜಾನ್ ಅಂಚಿನಲ್ಲಿರುವ ಸ್ವಾಂಪ್ ಕಾಡುಗಳಲ್ಲಿ ಕಂಡುಬರುತ್ತವೆ. ಭಾರತದಲ್ಲಿ ಸಿಹಿನೀರಿನ ಜೌಗು ಪ್ರದೇಶಗಳು ಶಿವಾಲಿಕ್ ಕಣಿವೆ, ಬ್ರಹ್ಮಪುತ್ರ ಕಣಿವೆ, ತಿರುವಾಂಕೂರು ಕಣಿವೆ ಹಾಗೂ ದಕ್ಷಿಣ ಮತ್ತು ಮಧ್ಯಮ ಪಶ್ಚಿಮ ಘಟ್ಟಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ವಿಶ್ವ ಪ್ರಸಿದ್ಧಿ ಹೊಂದಿರುವ ಪಶ್ಚಿಮಘಟ್ಟಗಳು ವಿಶಿಷ್ಟವಾದ ಸಸ್ಯವರ್ಗಗಳನ್ನು ತನ್ನ ಮಡಿಲಿನಲ್ಲಿಟ್ಟುಕೊಂಡು ವರ್ಷವಿಡೀ ಸದಾ ಹರಿಯುವಿಕೆಯಿಂದ ಕೂಡಿರುವ ಜೌಗುಗಳನ್ನು ಮಿರಿಸ್ಟಿಕ ಜೌಗು ಪ್ರದೇಶಗಳು ಎಂದು ಕರೆಯಲಾಗುತ್ತದೆ. ಈ ಜೌಗುಗಳು ಕರ್ನಾಟಕದ ಮಲೆನಾಡು ಪ್ರದೇಶಗಳಲ್ಲಿ ಎಂದರೆ ಮಧ್ಯಮ ಪಶ್ಚಿಮ ಘಟ್ಟದ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಅತಿ ಹೆಚ್ಚಾಗಿ ಕಂಡು ಬರುತ್ತವೆ. ಮಿರಿಸ್ಟಿಕ ಜೌಗು ಪ್ರದೇಶಗಳು ನಮಗೆ ಪ್ರಕೃತಿ ಮಾತೆಯ ಬಹೂಪಯೋಗಿ ವರದಾನವಾಗಿದೆ. ಮಿರಿಸ್ಟಿಕ ಜೌಗು ಪ್ರದೇಶಗಳ ಪರಿಸರದಲ್ಲಿ ಮಣ್ಣು ದಪ್ಪನಾದ ಕಂದುಬಣ್ಣದ ಪದರದ ರೀತಿಯಲ್ಲಿರುತ್ತದೆ ಮತ್ತು ಹೆಚ್ಚು ಪೋಷಕಾಂಶಗಳನ್ನು ಹೊಂದಿರುತ್ತದೆ. ಮಿರಿಸ್ಟಿಕ ಜೌಗು ಪ್ರದೇಶಗಳು ವಿಶಿಷ್ಟವಾದ ಹುಲ್ಲಿನ ಜಾತಿಗಳು ಬೆಳೆಯುತ್ತವೆ. ಈ ಪ್ರದೇಶದಲ್ಲಿ ಮಿರಿಸ್ಟಿಕೇಸಿ ಕುಟುಂಬಕ್ಕೆ ಸೇರಿದ ಮರಗಳು ಹೆಚ್ಚಗಿ ಬೆಳೆಯತ್ತವೆ. ವಿರಳ ಮತ್ತು ಅತಿವಿರಳ ಸಂಖ್ಯೆಯ ಪ್ರಪಂಚದಲ್ಲಿ ಎಲ್ಲೂ ಬೆಳೆಯದ ಮತ್ತು ಅಳಿವಿನಂಚಿನಲ್ಲಿರುವ ಸಸ್ಯವರ್ಗವು ಕಂಡು ಬರುತ್ತವೆ ಮತ್ತು ಅವುಗಳ ಜೀವನ ಚಕ್ರಕ್ಕೆ ಜೌಗು ಪ್ರದೇಶಗಳು ಮೂಲಾಧಾರವಾಗಿವೆ. ಈ ನೆಲದಲ್ಲಿ ಬೆಳೆಯುವ ಸಸ್ಯವರ್ಗವು ಔಷಧೀಯ ಗುಣಗಳನ್ನು ಹೊಂದಿ ವಿಶ್ವ ಪ್ರಸಿದ್ಧಿ ಹೊಂದಿವೆ. ಇಂತಹ ಜಾಗದಲ್ಲಿ ಬೆಳೆಯುವ ಸಸ್ಯವರ್ಗಕ್ಕೆ ಪ್ರವಾಹದ ರಭಸವನ್ನು ಮತ್ತು ಅದರಿಂದಾಗುವ ಪರಿಣಾಮವನ್ನು ಸಹಿಸಿಕೊಳ್ಳುವ ಶಕ್ತಿ ಇರುತ್ತದೆ. ಚಾಂಪಿಯನ್ ಮತ್ತು ಸೆತ್ (1968) ರವರ ಪ್ರಕಾರ ಇಂತಹ ಸಸ್ಯವರ್ಗವನ್ನು "ಸ್ವಾಂಪ್ ಅರಣ್ಯ ಪ್ರದೇಶ" ಎಂದು ಕರೆಯಲಾಗಿದೆ ಹಾಗು ಇವುಗಳನ್ನು ಗ್ರೂಪ್ 4 ಸಿ ಅರಣ್ಯ ಎಂದು ವರ್ಗೀಕರಿಸಲಾಗಿದೆ. ಈ ಮಿರಿಸ್ಟಿಕ ಜೌಗು ಪ್ರದೇಶಗಳು ದಕ್ಷಿಣ ಮತ್ತು ಮದ್ಯಮ ಪಶ್ಚಿಮ ಘಟ್ಟಗಳಲ್ಲಿ ಹೆಚ್ಚಾಗಿ ಕಾಣಸಿಗಿತ್ತವೆ.

ಮಿರಿಸ್ಟಿಕ ಮರಗಳು ಸಂಧರ್ಭಕ್ಕನುಗುಣವಾಗಿ ಹಲವಾರು ರೀತಿಯ ಮಾರ್ಪಾಡುಗಳನ್ನು ಮತ್ತು ವಿಶೇಷ ಗುಣಲಕ್ಷಣಗಳನ್ನು ಹೊಂದಿವೆ. ಅವುಗಳಲ್ಲಿ ಪ್ರಮುಖವೆಂದರೆ ಬಿಳಲು ಬೇರು, ಮಂಡಿ ಆಕಾರದ ಬೇರು, ಕಾಂಡರಂದ್ರ ಇತ್ಯಾದಿ. ಇಲ್ಲಿ ಹೆಚ್ಚಾಗಿ ಕಂಡುಬರುವ ಮರಗಳೆಂದರೆ ಮಸ್ತಿಕ್ಸಿಯ ಆರ್ಬೋರಿಯ, ಕ್ಯಾಲೊಫಿಲ್ಲಂ ಎಪೆಟಲಂ, ಈಲಿಯೊಕಾರ್ಪಸ್ ಟ್ಯುಬರ್ಕಿಲೋಟಸ್, ಲೊಪೊಪೆಟಲಂ ವೈಟಿಯಾನಂ, ಸೈಜಿಜಿಯಂ ಟ್ರಾವೆಂಕೋರಿಕಂ, ಡಿಪ್ಟೀರೋಕಾರ್ಪಸ್ ಇಂಡಿಕಸ್, ಹೋಪಿಯಾ ಪೊಂಗ, ಓಲಿಯಾ ಡಯೋಕಾ, ಪೈಕಸ್ ಝುಹಾಲ, ಮೆಲ್ಲೋಟಸ್ ಟೆಟ್ರೋಕಾಕಸ್, ಮೆಕಾರಾಂಗ ಪೆಲ್ಟೇಟ ಹಾಗೂ ಮಿರಿಸ್ಟಿಕ ಸ್ಪೀಶೀಸ್ ಇತ್ಯಾದಿ. ಇತ್ತೀಚೆಗೆ ಮಿರಿಸ್ಟಿಕ ಜೌಗು ಪ್ರದೇಶಗಳಲ್ಲಿ ಒಂದು ಹೊಸ ಸಸ್ಯಪ್ರಭೇದವನ್ನು ಕಂಡು ಹಿಡಿಯಲಾಗಿದೆ. ಅದರ ಹೆಸರು "ಸೆಮಿಕಾರ್ಪಸ್ ಕತ್ತಲೆಕಾನೆನ್ಸಿಸ್" (ಸ್ವಾಮಿನಾತ್ 2000). ಸಾಮಾನ್ಯವಾಗಿ ರುಬಿಯಾ ಕಾರ್ಡಿ ಪೋಲಿಯಾ, ಸೈಕ್ಲಿಯಾ ಪೆಲ್ಟೇಟ, ಪೈಪರ್ ಲೋಂಗಮ್, ಇಗ್ನೊರ ಕಾನ್ಸೈನ್ಸ್ ದಂತಹ ಅಂಬುಗಳು, ಪೊದೆಗಳು ಕಂಡುಬರುತ್ತವೆ.

ವನ್ಯ ಪ್ರಾಣಿಗಳಿಗೆ ಬೇಸಿಗೆಯಲ್ಲಿ ದಾಹ ನೀಗಿಸಿಕೊಳ್ಳಲು ಮೂಲಾಧಾರ ವಾಗಿವೆ. ಮಾನವನ ಆಧುನಿಕ ಜೀವನದ ಅನೇಕ ಚಟುವಟಿಕೆಗಳಿಂದ ಮಿರಿಸ್ಟಿಕ ಜೌಗುಪ್ರದೇಶಗಳು ಇತ್ತೀಚೆಗೆ ವಿರಳವಾಗುತ್ತಿವೆ. ಜೌಗುಗಳಿಗೆ ಅತಿ ಹತ್ತಿರವಾಗಿ ಹೆಚ್ಚು ಕೊಳವೆ ಬಾವಿಗಳನ್ನು ತೆಗೆಸುತ್ತಿರುವುದರಿಂದ ಈ ಪ್ರದೇಗಳಲ್ಲಿ ಬಹು ಬೇಗ ನೀರು ಇಂಗಿ ಹೋಗಿ ಬೇಸಿಗೆಯಲ್ಲಿ

ವನ್ಯ ಜೀವಿಗಳಿಗೆ ತೊಂದರೆಯಾಗುತ್ತಿದೆ. ಹಾಗು ಈ ಪ್ರದೇಶಗಳಿಗೆ ಹೊಂದಿಕೊಂಡಿರುವ ಸಸ್ಯ ವರ್ಗಗಳ ಚಯಾಪಚಯ ಕ್ರಿಯೆಗಳಲ್ಲಿ ಅಸಮತೋಲನ ಉಂಟಾಗುವುದು. ಮಿರಿಸ್ಟಿಕ ಜೌಗು ಪ್ರದೇಶಗಳು ಪಶ್ಚಿಮ ಘಟ್ಟದ ಅನೇಕ ಭಾಗಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಹಾದು ಹೋಗುವುದು ಅವುಗಳು ಕಣ್ಮರೆಯಾಗಲು ನಾಂದಿಯಾಗಿವೆ. ಇಂದು ದೇವರ ಕಾಡುಗಳು ವಿನಾಶದತ್ತ ಮುಖಮಾಡಿವೆ. ಯುಗ ಯುಗಾಂತರಗಳಿಂದ ಕಾಪಾಡಿಕೊಂಡು ಬಂದಂತಹ ಸಾಂಪ್ರಾದಾಯಿಕ ಸಂರಕ್ಷಣಾ ಪದ್ದತಿಗಳಿಗೆ ಆಧುನಿಕತೆಯ ಮೆರಗನ್ನು ನೀಡಿ ತಿಲಾಂಜಲಿಯಿಡಲಾಗುತ್ತಿರುವುದು ವಿಷಾದನಿಯ. ವಿಶಿಷ್ಟವಾದ ಉಷ್ಣವಲಯದ ಪ್ರಾಥಮಿಕ ಕಾಡುಗಳನ್ನು ಹೊಂದಿರುವ ಮಿರಿಸ್ಟಿಕ ಜೌಗು ಪ್ರದೇಶಗಳನ್ನು ಉಳಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ.







ಮಿರಿಸ್ಟಿಕ ಜೌಗು ಪ್ರದೇಶಗಳಲ್ಲಿ ಕಂಡುಬರುವ ರಾಮಪತ್ರೆ ಮತ್ತು ಅದರ ಹಣ್ಣುಗಳು

**ಮೂಲ ಆದಾರ :**

ಸಮೀರ್ ಅಲಿ, ಎಂ.ಡಿ ಸುಬಾಶ್ ಚಂದ್ರನ್ ಮತ್ತು ಟಿ.ವಿ. ರಾಮಚಂದ್ರ. ಪಾನಲ್ ಅಸಂಬ್ಲೇಜಸ್ ಇನ್ ಮಿರಿಸ್ಟಿಕ ಸ್ವಾಂಪ್ಸ್ ಆಪ್ ಸೆಂಟ್ರಲ್ ವೆಸ್ಟ್ರನ್ ಗಾಟ್ಸ್, ಕರ್ನಾಟಕ, ಇಂಡಿಯ. ಎನರ್ಜಿ ಅಂಡ್ ವೆಟ್ಲ್ಯಾಂಡ್ಸ್ ರೀಸರ್ಚ ಗ್ರೂಪ್, ಸೆಂಟರ್ ಪಾರ್ ಎಕಾಲಾಜಿಕಲ್ ಸೈನ್ಸಸ್, EAr AiÃ£ï E¤ì-ÖÆämï D¥ï ¸ÊÈÀ ಬೆಂಗಳೂರು 560 012.

ಚಂದ್ರನ್ ಎಂ.ಡಿ.ಸ್., ಜಿ.ಆರ್.ರಾವ್., ಕೆ.ವಿ. ಗುರುರಾಜ., ಟಿ.ವಿ. ರಾಮಚಂದ್ರ. ಎಕಾಲಾಜಿ ಆಪ್ ದಿ ಸ್ವಾಂಪಿ ರೆಲಿಕ್ ಪಾರೆಸ್ಟ್ಸ ಆಪ್ ಕತ್ತಲೆಕಾನ್ ಪ್ರವ್ ಸೆಂಟ್ರಲ್ ವೆಸ್ಟ್ರನ್ ಗಾಟ್ಸ್ (2010). ಬಯೋರೆಮಿಡಿಯೇಶನ್, ಬಯೋಡೈವರ್ಸಿಟಿ ಅಂಡ್ ಬಯೋಅವೈಲೆಬಿಲಿಟಿ. ಗ್ಲೋಬಲ್ ಸೈನ್ಸ ಬುಕ್.

## ಕೊಡಗಿನ ದೇವರ ಕಾಡುಗಳು ಅರಣ್ಯ ಸಂರಕ್ಷಣೆಯಲ್ಲಿ ಪಾತ್ರವಹಿಸುತ್ತವೆಯೇ..?

ಬಸವರಾಜು, ಎಸ್[1*]., ಚರಣ ಕುಮಾರ್[2], ಮನು, ಟಿ.ಎನ್[2]., ಅಶ್ವತ್, ಎಮ್.ಎನ್[1]., ಜಡೇಗೌಡ, ಎಮ್[3]. ಮತ್ತು ಕುಶಾಲಪ್ಪ, ಸಿ.ಜಿ[4].
1. ಅರಣ್ಯ ಶಾಸ್ತ್ರ ವಿದ್ಯಾರ್ಥಿಗಳು, 2. ಅರಣ್ಯ ಶಾಸ್ತ್ರ ಪದವೀಧರರು, 3. ನೈಸರ್ಗಿಕ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ,
4.ಅರಣ್ಯಜೀವ ಮತ್ತು ವೃಕ್ಷಾಭಿವೃದ್ಧಿ ವಿಭಾಗ ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ (www.basavarajusampath@gmail.com)

**ಪ್ರಬಂಧಸಾರ:–** ದೇವರ ಕಾಡುಗಳು ಅನಾದಿಕಾಲದಿಂದಲೂ ಕಾಪಾಡಿಕೊಂಡು ಬಂದಂತಹ ಶ್ರೀಮಂತ ಜೀವ ವೈವಿಧ್ಯತೆಯನ್ನು ಒಳಗೊಂಡ ವಿಶಿಷ್ಟವಾದ ಕಾಡುಗಳು. ಕೊಡಗು ಜಿಲ್ಲೆ ವಿಶ್ವದ ಜೀವವೈವಿಧ್ಯ ತಾಣಗಳಲ್ಲಿ ಒಂದಾದ ಮಧ್ಯಮ ಪಶ್ಚಿಮಘಟ್ಟದ ಭಾಗದಲ್ಲಿ ಬರುತ್ತದೆ. ಈ ಜಿಲ್ಲೆಯ ಶೇ. 80% ರಷ್ಟು ಭೂಭಾಗ ಹಸಿರು ಮರಗಳಿಂದ ಆವೃತವಾಗಿದೆ. ಈ ಜಿಲ್ಲೆಯ ಜೀವವೈವಿಧ್ಯತೆ & ಸ್ಥಳೀಯ ಜನರ ಜೀವನ ವ್ಯವಸ್ಥೆ ಸಹಬಾಳ್ವೆಗೆ ಒಂದು ಉತ್ತಮ ಮಾದರಿ. ಕೊಡಗಿನಾದ್ಯಂತ ನಮಗೆ 1214 ದೇವರ ಕಾಡುಗಳು ಕಾಣಸಿಗುತ್ತವೆ. ಈ ಕಾಡುಗಳು 2550 ಹೆಕ್ಟೇರ್ ಜಾಗವನ್ನು ಹೊಂದಿವೆ & ಶೇ 50% ರಷ್ಟು ಜಾಗ 2 ಎಕರೆಗಿಂತ ಕಡಿಮೆ ಜಾಗದಲ್ಲಿದೆ. ಪ್ರತಿ ಹಳ್ಳಿಯಲ್ಲಿ ಕನಿಷ್ಠ ಒಂದಾದರೂ ದೇವರ ಕಾಡು ಇರುತ್ತವೆ. & 29 ಹಳ್ಳಿಗಳಲ್ಲಿ 7 ಕ್ಕಿಂತ ಹೆಚ್ಚು ದೇವರ ಕಾಡುಗಳಿವೆ. ಸೋಮವಾರಪೇಟೆ ತಾಲ್ಲೂಕಿನ ತಾಕೇರಿ ಗ್ರಾಮದಲ್ಲಿ 17 ದೇವರ ಕಾಡುಗಳಿವೆ. ಈ ಕಾಡುಗಳು ಸ್ಥಳೀಯ, ವಿರಳ, ವಿನಾಶದಂಚಿನಲ್ಲಿರುವ & ವಿನಾಶ ಹೊಂದುತ್ತಿರುವ ಸಸ್ಯರಾಶಿಗಳನ್ನು ಹೊಂದಿವೆ. ಕೊಡಗಿನಲ್ಲಿರುವ ದೇವರ ಕಾಡುಗಳನ್ನು ಸಂಸ್ಕೃತಿಯನ್ನು ಒಳಗೊಂಡ ಮುಖ್ಯತಾಣವೆಂದು ಕರೆಯಬಹುದು. ಜೀವವೈವಿಧ್ಯತೆಯನ್ನು ಕಾಪಾಡುವಲ್ಲಿ ಹಲವಾರು ಕ್ರಮಗಳನ್ನು ಸಾಮಾಜಿಕ ಅರಣ್ಯಗಳ ಮುಖಾಂತರ ಕೈಗೊಳ್ಳುತ್ತಿದ್ದು, ದೇವರ ಕಾಡುಗಳನ್ನು ಸಂರಕ್ಷಿಸುವಲ್ಲಿ ಕೊಡಗಿನ ಜನತೆ ಅನೌಪಚಾರಿಕವಾಗಿ ಯಶಸ್ವಿಯತ್ತ ಸಾಗುತ್ತಿದ್ದಾರೆ.

ದೇವರ ಕಾಡುಗಳು ಅನಾದಿಕಾಲದಿಂದಲೂ ಕಾಪಾಡಿಕೊಂಡು ಬಂದಂತಹ ಶ್ರೀಮಂತ ಜೀವ ವೈವಿಧ್ಯತೆಯನ್ನು ಒಳಗೊಂಡ ವಿಶಿಷ್ಟವಾದ ಕಾಡುಗಳು. ನಮ್ಮ ಪೂರ್ವಜರ ಸಂರಕ್ಷಣೆಯ ಪ್ರತೀಕವೆಂಬಂತೆ ಈ ಕಾಡುಗಳು ತನ್ನ ಗತಕಾಲದ ವೈಭವವನ್ನು ಜಗತ್ತಿಗೆ ಸಾರುತ್ತಿರುವಂತಿವೆ. ದೇವರ ಕಾಡುಗಳು ನಮ್ಮ ಪೂರ್ವಜರಲ್ಲಿದ್ದ ಪರಿಸರದ ಕಾಳಜಿ ಹಾಗೂ ಅವುಗಳ ಸಂರಕ್ಷಣೆಯ ಮಹತ್ವವನ್ನು ಸೂಚಿಸುತ್ತದೆ. ಗ್ರಾಮದ ಜನರು ದೇವರ ಕಾಡುಗಳ ರಕ್ಷಣೆಗೆ ತಮ್ಮದೇ ಆದ ಸಾಂಪ್ರದಾಯಿಕ ಕಾನೂನುಗಳನ್ನು ಒಳಪಡಿಸಿಕೊಂಡಿದ್ದರು. ಮರಗಳನ್ನು ಕಡಿಯುವುದು, ಹಸಿ ಸೊಪ್ಪು, ಕಟ್ಟಿಗೆ ತೆಗೆಯುವುದು ನಿಷೇದಿಸಲಾಗಿತ್ತು. ನಿರ್ದಿಷ್ಟ ಕಾಲದಲ್ಲಿ ಮಾತ್ರ ಒಣ ದರಕನ್ನು ತೆಗೆಯುವ ಪರಿಪಾಠ ಜಾರಿಯಲ್ಲಿತ್ತು. ಅವಶ್ಯವಿದ್ದಲ್ಲಿ ಮಾತ್ರ ಮನೆ ಕಟ್ಟಲು ಒಣ ಮರಗಳನ್ನು ತೆಗೆಯುತ್ತಿದ್ದರು.

ಕೊಡಗು ಜಿಲ್ಲೆ ವಿಶ್ವದ ಜೀವವೈವಿಧ್ಯ ತಾಣಗಳಲ್ಲಿ ಒಂದಾದ ಮಧ್ಯಮ ಪಶ್ಚಿಮಘಟ್ಟದ ಭಾಗದಲ್ಲಿ ಬರುತ್ತದೆ. ಈ ಜಿಲ್ಲೆಯ ಶೇ. 80%ರಷ್ಟು ಭೂಭಾಗ ಹಸಿರು ಮರಗಳಿಂದ ಆವೃತವಾಗಿದೆ. ದೇವರ ಕಾಡುಗಳಿಗೆ ವಿಶಿಷ್ಟವಾದ ಹೆಸರುಗಳಿವೆ. ವನಭದ್ರಕಾಳಿ ದೇವರ ಕಾಡು, ಅಯ್ಯಪ್ಪ ದೇವರ ಕಾಡು, ಸುಗ್ಗಿ ದೇವರ ಕಾಡು, ಹುಲಿದೇವರ ದೇವರ

ISSN 2249 - 5754 VIJNANA KANNADA (PRINT)


ಕಾಡು. ಹೀಗೆ ಹಲವಾರು ದೇವರ ಕಾಡುಗಳ ಹೆಸರೇ ಸೂಚಿಸುವಂತೆ, ದೇವರ ಕಾಡುಗಳು ಒಂದರ್ಥದಲ್ಲಿ ದೇವರ ಬನಗಳೆಂದರೆ ತಪ್ಪಾಗಲಾರದು. ದೇವರ ಕಾಡುಗಳನ್ನು ದೈವೀ ಭಾವನೆಗಳಿಂದ ಪೂಜಿಸುತ್ತಿದ್ದರೆ ಅವುಗಳಿಗೆ ಯಾವುದೇ ಅಪಾಯವಿಲ್ಲವೆಂಬ ಭಾವನೆ ನಮ್ಮ ಪೂರ್ವಜರಲ್ಲಿರುವುದಕ್ಕೆ ಹಾಗೂ ಪ್ರಾಣಿ ಪಕ್ಷಿಗಳನ್ನು ಆಗಿನ ಜನರು ದೈವೀ ಭಾವನೆಯಿಂದ ಪ್ರೀತಿಸುತ್ತಿರುವುದ್ದಕ್ಕೆ ಇದು ಸಾಕ್ಷಿಯಾಗುತ್ತದೆ. ಕೊಡಗಿನಾದ್ಯಂತ ನಮಗೆ 1214 ದೇವರ ಕಾಡುಗಳು ಕಾಣಸಿಗುತ್ತವೆ. ಈ ಕಾಡುಗಳು 2550 ಹೆಕ್ಟೇರ್ ಜಾಗವನ್ನು ಹೊಂದಿವೆ ಮತ್ತು ಶೇ 50%ರಷ್ಟು ದೇವರ ಕಾಡುಗಳು 2 ಎಕರೆಗಿಂತ ಕಡಿಮೆ ಜಾಗದಲ್ಲಿವೆ. ಈ ಕಾಡುಗಳು ಸ್ಥಳೀಯ, ವಿರಳ, ವಿನಾಶದಂಚಿನಲ್ಲಿರುವ ಮತ್ತು ವಿನಾಶ ಹೊಂದುತ್ತಿರುವ ಸಸ್ಯರಾಶಿಗಳನ್ನು ಹೊಂದಿವೆ. ಕೊಡಗಿನಲ್ಲಿರುವ ದೇವರ ಕಾಡುಗಳನ್ನು ಸಂಸ್ಕೃತಿಯನ್ನು ಒಳಗೊಂಡ ಮುಖ್ಯತಾಣವೆಂದು ಕರೆಯಬಹುದು. ಜೀವವೈವಿಧ್ಯತೆಯನ್ನು ಕಾಪಾಡುವಲ್ಲಿ ಹಲವಾರು ಕ್ರಮಗಳನ್ನು ಸಾಮಾಜಿಕ ಅರಣ್ಯಗಳ ಮುಖಾಂತರ ಕೈಗೊಳ್ಳುತ್ತಿದ್ದು, ದೇವರ ಕಾಡುಗಳನ್ನು ಸಂರಕ್ಷಿಸುವಲ್ಲಿ ಕೊಡಗಿನ ಜನತೆ ಅನೌಪಚಾರಿಕವಾಗಿ ಯಶಸ್ವಿಯತ್ತ ಸಾಗುತ್ತಿದ್ದಾರೆ. ಈ ಜಿಲ್ಲೆಯ ಜೀವವೈವಿಧ್ಯತೆ ಮತ್ತು ಸ್ಥಳೀಯ ಜನರ ಜೀವನ ವ್ಯವಸ್ಥೆ ಸಹಬಾಳ್ವೆಗೆ ಒಂದು ಉತ್ತಮ ಮಾದರಿ. ಪ್ರತಿ ಹಳ್ಳಿಯಲ್ಲಿ ಕನಿಷ್ಠ ಒಂದಾದರೂ ದೇವರ ಕಾಡು ಇರುತ್ತವೆ ಮತ್ತು 29 ಹಳ್ಳಿಗಳಲ್ಲಿ 7 ಕ್ಕಿಂತ ಹೆಚ್ಚು ದೇವರ ಕಾಡುಗಳಿವೆ. ಸೋಮವಾರಪೇಟೆ ತಾಲ್ಲೂಕಿನ ತಾಕೇರಿ ಗ್ರಾಮದಲ್ಲಿ 17 ದೇವರ ಕಾಡುಗಳಿವೆ.

ಪ್ರಪಂಚದಾದ್ಯಂತ ಆದಿಕಾಲದಿಂದಲೂ ದೇವರನ್ನು ವಿವಿಧ ರೀತಿಯಲ್ಲಿ ಪೂಜಿಸುತ್ತಾರೆ. ಮನುಷ್ಯನು ಆರಾಧಿಸುವ ದೇವರು ಹಾಗು ಅಲ್ಲಿನ ಸುತ್ತಮುತ್ತಲಿನ ಪ್ರಕೃತಿಗೆ ನಿಖರವಾದ ಸಂಬಂಧವಿರುತ್ತದೆ. ಹಾಗೆಯೇ ಮನುಷ್ಯನು ತನ್ನ ಆಸುಪಾಸಿನ ನಿಸರ್ಗಕ್ಕೆ ಹೊಂದಿಕೊಂಡಿರುತ್ತಾನೆ. ಮಾನವನು ಪುರಾತನ ಕಾಲದಿಂದಲೂ ತನ್ನ ಆಹಾರಕ್ಕೆ, ವಸತಿಗೆ ಮತ್ತು ಮುಂತಾದ ನಿತ್ಯ ಸೌಕರ್ಯಗಳಿಗೆ ಕಾನನವನ್ನು ಅವಲಂಬಿಸಿದ್ದಾನೆ. ಹಾಗೆಯೆ ವನವನ್ನು ದೇವರಿಗೆ ಸಮನಾಗಿ ಪೂಜಿಸುತ್ತಿದ್ದಾನೆ. ಭಾರತೀಯ ಸಂಸ್ಕೃತಿ ಮತ್ತು ನಿಸರ್ಗಕ್ಕಿರುವ ಸಂಬಂಧಕ್ಕೆ ಇಡೀ ಪ್ರಪಂಚದಲ್ಲೇ ವಿಶೇಷತೆಯಿದೆ. ಭಾರತ ದೇಶದಲ್ಲಿ ಸಾವಿರಾರು ದೇಶೀಯ ಸಮುದಾಯಗಳಿದ್ದು, ಉತ್ತರ ಹಿಮಾಲಯ ದಿಂದ ಹಿಡಿದು ದಕ್ಷಿಣ ಕನ್ಯಾಕುಮಾರಿಯ ವರೆಗೆ ಹಾಗೂ ಪೂರ್ವದ ಸೌರಾಷ್ಟ್ರದಿಂದ ಹಿಡಿದು ಪಶ್ಚಿಮದ ಬಂಗಾಳದ ವರೆಗೆ ಪ್ರಕೃತಿಯನ್ನು ವಿಶೇಷ ರೀತಿಯಲ್ಲಿ ಪೂಜಿಸುತ್ತಾರೆ. ಅಂತೆಯೇ ಕೆಲವು ಸಮುದಾಯ ಗಳು ಸಣ್ಣ ಅರಣ್ಯದ ತುಣುಕುಗಳನ್ನು ದೇವರ ರೀತಿಯಲ್ಲಿ ಪೂಜಿಸು ತ್ತಾರೆ. ಅಂತಹ ಅರಣ್ಯದ ತುಣುಕುಗಳನ್ನು ದೇವರ ಕಾಡುಗಳು ಎನ್ನಲಾಗುವುದು. ಕೇರಳ ರಾಜ್ಯದಲ್ಲಿ ಅತಿ ಹೆಚ್ಚು ದೇವರ ಕಾಡುಗಳನ್ನು ಕಾಣಬಹುದು. ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ 1214 ದೇವರ ಕಾಡುಗಳಿವೆ. ಸಾಮಾನ್ಯವಾಗಿ ಇತರೆ ಅರಣ್ಯಗಳಿಗೆ ಹೋಲಿಸಿದರೆ ಸಂಶೋಧನ ವರದಿಯ ಪ್ರಕಾರ ದೇವರ ಕಾಡುಗಳಲ್ಲಿ ಜೀವೈವಿದ್ಯತೆ ಹೆಚ್ಚಾಗಿಯೇ ಇದೆ. ಇಂತಹ ದೇವರ ಕಾಡುಗಳಲ್ಲಿ ವಿನಾಶ ಹೊಂದುತ್ತಿರುವ, ವಿನಾಶದ ಅಂಚಿನಲ್ಲಿರುವ, ವಿರಳ ಮತ್ತು ಅತಿ ವಿರಳ ಸಂಖ್ಯೆಯ ಸಸ್ಯಸಂಪತ್ತನ್ನು ಕಾಣಬಹುದು. ಇಲ್ಲಿ ವಿಶೇಷವಾದ ಔಷದೀಯ ಸಸ್ಯವರ್ಗವು ಕಂಡುಬರುತ್ತದೆ. ದೇವರ ಕಾಡುಗಳ ಒಡಲಿನಲ್ಲಿರುವ ಸಸ್ಯವರ್ಗಕ್ಕೂ ಮತ್ತು ಸುತ್ತಮುತ್ತಲಿನ ವನ್ಯಜೀವಿಗಳಿಗೂ ಉತ್ತಮವಾದ ಸಂಬಂಧವಿದೆ. ಹೇಗೆಂದರೆ ವನ್ಯಜೀವಿಗಳಿಗೆ ಈ ದೇವರ ಕಾಡುಗಳು ಆಹಾರ, ವಸತಿ ಮತ್ತು ನೆರಳಿಗೆ ಆಧಾರವಾಗಿವೆ. ದೇವರ ಕಾಡುಗಳಲ್ಲಿ ಮಾನವನ ಚಟುವಟಿಕೆಗಳಿಗೆ ನಿಷೇಧವಿರುದರಿಂದ ಕೆಲವು ವನ್ಯಜೀವಿಗಳಿಗೆ ಸಂತಾನೋತ್ಪತ್ತಿಯ ಸಮಯದಲ್ಲಿ ಹೇಳಿ ಮಾಡಿಸಿದಂತಹ ಜಾಗ. ಹಾಗೆಯೇ ಸುತ್ತಮುತ್ತಲಿನ ವನ್ಯಜೀವಿಗಳು ಕಾಡಿನ ಹಣ್ಣುಗಳನ್ನು ತಿಂದು ಬೀಜದ ಚದುರುವಿಕೆ ಮತ್ತು ಪುನರುತ್ಪಾದನೆಗೆ ಸಹಾಯ ಮಾಡುತ್ತವೆ.

**ಕೊಡಗಿನ ದೇವರಕಾಡುಗಳ ಸ್ಥಿತಿಗತಿ**

| ಕ್ರ. ಸಂ. | ತಾಲ್ಲೂಕು | ದೇವರಕಾಡು ಗಳ ಸಂಖ್ಯೆ | ಒಟ್ಟು ಜಾಗ (ಹೆಕ್ಟೇರ್) | ಶೇಕಡಾ (%) |
|---|---|---|---|---|
| 01 | ವಿರಾಜಪೇಟೆ | 508 | 872.13 | 41.85 |
| 02 | ಸೋಮವಾರಪೇಟೆ | 206 | 534.23 | 20.95 |
| 03 | ಮಡಿಕೇರಿ | 400 | 1144.09 | 44.85 |
| | ಒಟ್ಟು | 1,214 | 2550.45 | |

(ರಾಘವೇಂದ್ರ ಮತ್ತು ಕುಶಾಲಪ್ಪ 2011)



ವನಭದ್ರಕಾಳಿ ದೇವರಕಾಡು



ನೂರಾರು ಜೇನು ಕುಟುಂಬಗಳಿಗೆ ಆಶ್ರಯವಾಗಿರುವ ದೇವರಕಾಡು



ಸುಗ್ಗಿ
ದೇವರಕಾಡು

ಇಂದು ದೇವರ ಕಾಡುಗಳು ವಿನಾಶದತ್ತ ಮುಖಮಾಡಿವೆ. ಯುಗ ಯುಗಾಂತರಗಳಿಂದ ಕಾಪಾಡಿಕೊಂಡು ಬಂದಂತಹ ಸಾಂಪ್ರಾದಾಯಿಕ ಸಂರಕ್ಷಣಾ ಪದ್ಧತಿಗಳಿಗೆ ಆಧುನಿಕತೆಯ ಮೆರಗನ್ನು ನೀಡಿ ತಿಲಾಂಜಲಿಯಿಡಲಾಗುತ್ತಿರುವುದು ವಿಷಾದನಿಯ. ದೇವರ ಕಾಡುಗಳಂತ ಅನೇಕ ಸಾಂಪ್ರಾದಾಯಿಕ ಪದ್ಧತಿಗಳು ಮುಂದಿನ ದಿನಗಳಲ್ಲಿ ರಕ್ಷಣೆಗೊಳಪಡದಿದ್ದರೆ ನಾವು ಇಂಥ ಅಮೂಲ್ಯ ಜೀವವೈವಿಧ್ಯತೆಯ ಭಂಡಾರವನ್ನು ಕಳೆದುಕೊಳ್ಳುವುದು ನಿಶ್ಚಿತ.

***ಮೂಲ ಆಧಾರ :***

*ಕುಶಾಲಪ್ಪ (2011) ಕನ್‌ಸರ್ವೇಷನ್ ಅಂಡ್ ಮ್ಯಾನೇಜ್ಮೆಂಟ್ ಆಫ್ ಸ್ಯಾಕ್ರಡ್ ಗ್ರೂವ್ಸ್ ಆಫ್ ಕೊಡಗು, ಕರ್ನಾಟಕ, ಸೌತ್ ಇಂಡಿಯಾ.*

*ಗಾರ್ಸಿಯ ಸಿ.ಎ. (2003) ಸ್ಯಾಕ್ರಡ್ ಪಾರೆಸ್ಟ್ ಆಫ್ ಕೊಡಗು, ಎಕಲಾಜಿಕಲ್ ವ್ಯಾಲ್ಯು, ಸೋಸಿಯಲ್ ವ್ಯಾಲ್ಯು ಅಂಡ್ ಇಂಪ್ಲಿಕೇಶನ್ಸ್ ಪಾರ್ ಬಯೋಡೈವರ್ಸಿಟಿ ಕನ್‌ಸರ್ವೇಷನ್.*

## ಕೊಡಗಿನ ಕಾಫಿ, ಕೃಷಿ ಅರಣ್ಯ ಪದ್ಧತಿಯಲ್ಲಿ ಪುನರ್ಪುಳಿ ಮರದ ಜಾತಿಯ ಸ್ಥಿತಿಗತಿ

ಚರಣ ಕುಮಾರ್, ಮನು, ಟಿ.ಎನ್., ಕ್ಲಾರಾ ಮಾನಸ, ರಶ್ಮಿ ದೇಸಾಯಿ, ಮತ್ತು ವರ್ಷ, ಕೆ.ಜೆ.
ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ
(www.charannature@gmail.com)

**ಪ್ರಬಂಧಸಾರ:–** ಉಷ್ಣವಲಯದ ಕಾಡಿನ ಮರಗಳು ದೇಶದ ಸುಸ್ಥಿರ ಪರಿಸ್ಥಿತಿಯನ್ನು ಕಾಪಾಡುವಲ್ಲಿ ಮತ್ತು ಸ್ಥಳೀಯ ಜನರ ಉಪಯುಕ್ತತೆಗಳಾದ ಆಹಾರ, ಔಷಧಿ, ವಸತಿ, ನಾರು, ಎಣ್ಣೆ, ಮೇವು ಇತ್ಯಾದಿ ಪದಾರ್ಥಗಳನ್ನು ಪೂರೈಸುವಲ್ಲಿ ಸಹಕಾರಿಯಾಗಿವೆ. ಕೊಡಗಿನ ಕೃಷಿ ಅರಣ್ಯ ಕಾಡುಗಳಲ್ಲಿ ಮತ್ತು ಕೈತೋಟಗಳಲ್ಲಿ ಹಲವಾರು ಉಷ್ಣವಲಯದ ಕಾಡಿನ ಮರಗಳು ಕಂಡು ಬಂದಿದ್ದು, ಅವುಗಳಲ್ಲಿ ಪುನರ್ಪುಳಿ ಜಾತಿಯ ಮಾರಗಳು ಹೇರಳವಾಗಿ ದೊರೆಯುತ್ತವೆ. ಕೊದಗಿನ ಹವಾಮಾನ, ಮಳೆಮಟ್ಟ, ಸಮುದ್ರ ಮಟ್ಟ ಮತ್ತು ಹೊಂದಿಕೊಂಡಿರುವ ಅರಣ್ಯದಂಚಿಗನುಗುಣವಾಗಿ 9 ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡಿದ್ದು, ಪ್ರತಿಯೊಂದು ಹಳ್ಳಿಯಲ್ಲಿ 15 –25 ಕುಟುಂಬಗಳ ಕೈತೋಟಗಳನ್ನು ಮತ್ತು ಕಾಫಿ ಕೃಷಿ ಅರಣ್ಯ ತಾಕುಗಳ್ನು ವೀಕ್ಷಣೆಗೊಳಪಟ್ಟಿದ್ದು, ಉಷ್ಣವಲಯದ 39 ರೀತಿಯ ಮರಗಳು ಗುರ್ತಿಸಲ್ಪಟ್ಟಿವೆ. ಅವುಗಳಲ್ಲಿ 6 ರೀತಿಯ ಮರಗಳು ಪುನರ್ಪುಳಿ ಜಾತಿಗೆ ಸೇರಿದ್ದು, ಕಾಫಿ ಗಿಡದ ನೆರಳಿಗಾಗಿ ಮತ್ತು ಪಾರಂಪರಿಕವಾಗಿ ಬೆಳೆಸಿರುವುದು ಸ್ಥಳೀಯ ಮರಗಳ ಕಾಪಾಡುವಿಕೆಗೆ ಸಾಕ್ಷಿಯಾಗಿದೆ. ಪುನರ್ಪುಳಿ ಜಾತಿಯ ಮರಗಳು ಪ್ರತಿಯೊಂದು ಮನೆಯ ಕೈತೋಟಗಳಲ್ಲಿ ಯತೇಚ್ಚವಾಗಿ ಕಂಡುಬಂದಿವೆ. ವಿವಿಧ ರೀತಿಯ ಪುನರ್ಪುಳಿ ಜಾತಿಯ ಮರಗಳು ಕೃಷಿ ಅರಣ್ಯ ಪದ್ಧತಿಯಲ್ಲಿ ಕಂಡು ಬಂದರೂ ಸಹ ಇತ್ತೀಚಿನ ದಿನಗಳಲ್ಲಿ ಲಾಭದ ಮೊರೆಹೋಗುತ್ತಿರುವ ಕೃಷಿಕರು ಸಿಲ್ವರ್ ಮರದಂತಹ ಅನ್ಯ ದೇಶೀಯ ಮರಗಳನ್ನು ಬೆಳೆಯುವಲ್ಲಿ ಮುಂದಾಗುತ್ತಿದ್ದಾರೆ.

ಉಷ್ಣವಲಯದ ಕಾಡಿನ ಮರಗಳು ದೇಶದ ಸುಸ್ಥಿರ ಪರಿಸ್ಥಿತಿಯನ್ನು ಕಾಪಾಡುವಲ್ಲಿ ಮತ್ತು ಸ್ಥಳೀಯ ಜನರ ಉಪಯುಕ್ತತೆಗಳಾದ ಆಹಾರ, ಔಷಧಿ, ವಸತಿ, ನಾರು, ಎಣ್ಣೆ, ಮೇವು ಇತ್ಯಾದಿ ಪದಾರ್ಥಗಳನ್ನು ಪೂರೈಸುವಲ್ಲಿ ಸಹಕಾರಿಯಾಗಿವೆ. ಕೊಡಗಿನ ಕೃಷಿ ಅರಣ್ಯ ಕಾಡುಗಳಲ್ಲಿ ಮತ್ತು ಕೈತೋಟಗಳಲ್ಲಿ ಹಲವಾರು ಉಷ್ಣವಲಯದ ಕಾಡಿನ ಮರಗಳು ಕಂಡು ಬಂದಿದ್ದು, ಅವುಗಳಲ್ಲಿ ಪುನರ್ಪುಳಿ ಜಾತಿಯ ಮಾರಗಳು ಹೇರಳವಾಗಿ ದೊರೆಯುತ್ತವೆ. ಕೊಡಗಿನ ಹವಾಮಾನ, ಮಳೆಮಟ್ಟ, ಸಮುದ್ರ ಮಟ್ಟ ಮತ್ತು ಹೊಂದಿಕೊಂಡಿರುವ ಅರಣ್ಯದಂಚಿಗನುಗುಣವಾಗಿ 9 ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡಿದ್ದು, ಪ್ರತಿಯೊಂದು ಹಳ್ಳಿಯಲ್ಲಿ 15 –25 ಕುಟುಂಬಗಳ ಕೈತೋಟಗಳನ್ನು ಮತ್ತು ಕಾಫಿ ಕೃಷಿ ಅರಣ್ಯ ತಾಕುಗಳ್ನು ವೀಕ್ಷಣೆಗೊಳಪಟ್ಟಿದ್ದು, ಉಷ್ಣವಲಯದ 39 ರೀತಿಯ ಮರಗಳು ಗುರ್ತಿಸಲ್ಪಟ್ಟಿವೆ. ಅವುಗಳಲ್ಲಿ 6 ರೀತಿಯ ಮರಗಳು ಪುನರ್ಪುಳಿ ಜಾತಿಗೆ ಸೇರಿದ್ದು, ಕಾಫಿ ಗಿಡದ ನೆರಳಿಗಾಗಿ ಮತ್ತು ಪಾರಂಪರಿಕವಾಗಿ ಬೆಳೆಸಿರುವುದು ಸ್ಥಳೀಯ ಮರಗಳ ಕಾಪಾಡುವಿಕೆಗೆ ಸಾಕ್ಷಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಲಾಭದ ಮೊರೆಹೋಗುತ್ತಿರುವ ಕೃಷಿಕರು ಸಿಲ್ವರ್ ಮರದಂತಹ ಅನ್ಯ ದೇಶೀಯ ಮರಗಳನ್ನು ಬೆಳೆಯುವಲ್ಲಿ ಮುಂದಾಗುತ್ತಿದ್ದಾರೆ.

ಕೃಷಿ ಅರಣ್ಯ ಪದ್ಧತಿಯ ಬಳಕೆಯಿಂದ ರೈತರ ಆರ್ಥಿಕತೆ ಸುದಾರಿಸುವಲ್ಲಿ ಮಹತ್ತರವಾಗಿದೆ.ಭಾರತದಂತಹ ದೇಶದಲ್ಲಿ ಹೆಚ್ಚಿನ ಜನಸಂಖ್ಯೆಯು ಕೃಷಿಯನ್ನೇ ಅವಲಂಬಿಸಿದ್ದು, ರೈತರು ಕೃಷಿ ಉತ್ಪಾದನೆಯ ಜೊತೆಗೆ ಹೆಚ್ಚಿನ ಲಾಭಾಂಶವನ್ನು ಗಳಿಸಲು ಕೃಷಿ ಅರಣ್ಯ ಚಟುವಟಿಕೆಯು ಪೂರಕವಾಗಿದೆ.ಈ ಚಟುವಟಿಕೆಯು ರೈತನ ಆರ್ಥಿಕತೆಯ ಜೊತೆಗೆ ಪರಿಸರದ ಸಮತೋಲನವನ್ನು ಕಾಪಾಡುವಲ್ಲಿ ಮಹತ್ತರ ಸ್ಥಾನವಹಿಸಿದೆ ಹಾಗೂ ಇತರೆ ಪ್ರಾಣಿ ಪಕ್ಷಿಗಳಿಗೆ ಆಹಾರ ಮತ್ತು ವಸತಿ ನೀಡುವಲ್ಲಿ ಸಕ್ರಿಯವಾಗಿದೆ.ರೈತರು ಕೃಷಿ ಅರಣ್ಯವನ್ನು ಮಾಡಲು ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸುವ ಅವಶ್ಯಕತೆಯಿದೆ.ಇದರಿಂದ ರೈತರ ನಿವ್ವಳ ಆದಾಯದ ಜೊತೆಗೆ ದೇಶವನ್ನು ಉತ್ತುಂಗಮಟ್ಟಕ್ಕೇರುವ ಅವಕಾಶವಿದೆ.

ಪಶ್ಚಿಮಘಟ್ಟದ ಹೊದಿಕೆಯಲ್ಲಿ ಸಿಲುಕಿರಲು,ಕೊಡಗು ತನ್ನ ನೈಜ

ಸಿರಿವಂತಯಿಂದ ಕಂಗೊಳಿಸುತ್ತಿದೆ.ಕೊಡಗು ತನ್ನಲ್ಲಿ ಹೇರಳವಾಗಿ ಅರಣ್ಯಸಂಪತ್ತನ್ನು ರಕ್ಷಿಸಲು ಪ್ರೇರೇಪಿಸಿದೆ.ಹೀಗಾಗಿ ಹಿಂದಿನಿಂದಲೂ ಕೊಡಗಿನಲ್ಲಿ ಕೃಷಿ ಅರಣ್ಯವು ಜೀವಂತವಾಗಿದೆ.

ಕೊಡಗಿನ ಹವಾಮಾನ, ಮಳೆಮಟ್ಟ, ಸಮುದ್ರ ಮಟ್ಟ ಮತ್ತು ಹೊಂದಿಕೊಂಡಿರುವ ಅರಣ್ಯದಂಚಿಗನುಗುಣವಾಗಿ 9 ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡಿದ್ದು, ಪ್ರತಿಯೊಂದು ಹಳ್ಳಿಯಲ್ಲಿ 15 –25 ಕುಟುಂಬಗಳ ಕೈತೋಟಗಳನ್ನು ಮತ್ತು ಕಾಫಿ ಕೃಷಿ ಅರಣ್ಯ ತಾಕುಗಳ್ನು ವೀಕ್ಷಣೆಗೊಳಪಟ್ಟಿದ್ದು, ಉಷ್ಣವಲಯದ 39 ರೀತಿಯ ಮರಗಳು ಗುರ್ತಿಸಲ್ಪಟ್ಟಿವೆ. ಅವುಗಳಲ್ಲಿ 6 ರೀತಿಯ ಮರಗಳು ಪುನರ್ಪುಳಿ ಜಾತಿಗೆ ಸೇರಿದ್ದು, ಕಾಫಿ ಗಿಡದ ನೆರಳಿಗಾಗಿ ಮತ್ತು ಪಾರಂಪರಿಕವಾಗಿ ಬೆಳೆಸಿರುವುದು ಸ್ಥಳೀಯ ಮರಗಳ ಕಾಪಾಡುವಿಕೆಗೆ ಸಾಕ್ಷಿಯಾಗಿದೆ. ಪುನರ್ಪುಳಿ ಜಾತಿಯ ಮರಗಳು ಪ್ರತಿಯೊಂದು ಮನೆಯ ಕೈತೋಟಗಳಲ್ಲಿ ಯತೇಚ್ಚವಾಗಿ ಕಂಡುಬಂದಿವೆ. ಕೊಡಗಿನ ರೈತರು ಜೀವನಾದಾರಕ್ಕಾಗಿ ಕಾಫಿಯನ್ನು ಅವಲಂಬಿನಿದ್ದು ಕಾಫಿಗೆ ಸಮತೋಲನದ ನೆರಳಿನ ಅವಶ್ಯಕತೆ ಅನುಗುಣವಾಗಿ ಮರಗಳನ್ನು ಬೆಳೆಸುವುದರಲ್ಲಿ ಉತ್ತೇಜಿತರಾಗಿದ್ದಾರೆ.

ಈ ರೀತಿಯ ಉಪಯುಕ್ತತೆಯ ಮರಗಳಲ್ಲಿ ಪುನರ್ಪುಳಿಯು ಒಂದಾಗಿದ್ದು ಕೊಡಗಿನ ಬಹುತೇಕ ಕಾಫಿಯ ತೋಟಗಳಲ್ಲಿ ಕಂಡುಬರುತ್ತಿದೆ.ಈ ಜಾತಿಯ ಮರಗಳನ್ನು ತೋಟದ ಬೇಲಿಗಳಲ್ಲಿ, ಬದುಗಳಲ್ಲಿ ಕೆರೆಯ ಸುತ್ತಮುತ್ತ ಹಾಗೆಯೇ ಕೈ ತೋಟಗಳಲ್ಲಿ ಹೆಚ್ಚಾಗಿ ಬೆಳೆಸುತ್ತಿದ್ದಾರೆ.

ಕೊಡಗಿನ ಕಾಫಿ ತೋಟಗಳಲ್ಲಿ 5 ಬಗೆಯ ಪುನರ್ಪುಳಿ ಜಾತಿಯ ಮರಗಳನ್ನು ಕಾಣಬಹುದು.ಅವುಗಳೆಂದರೆ ಗಾರ್ಸಿನಿಯ ಇಂಡಿಕಾ, ಗಾರ್ಸಿನಿಯ ಗಮ್ಮಿಗಟ್ಟ, ಗಾರ್ಸಿನಿಯ ತೊರೈಮಸ್, ಗಾರ್ಸಿನಿಯ ಮೊರೆಲ್ಲ ಮತ್ತು ಗಾರ್ಸಿನಿಯ ಮ್ಯಾಂಗೋಸ್ಟೈನ.ಪುನರ್ಪುಳಿ ಜಾತಿಯ ಮರಗಳ ಇರುವಿಕೆಯು ಆಯಾ ಪ್ರದೇಶದ ಮಳೆ ಮತ್ತು ತೇವಾಂಶದ ಮೇಲೆ ಅವಲಂಬಿತವಾಗಿರುತ್ತದೆ. ಗಾರ್ಸಿನಿಯ ಗಮ್ಮಿಗಟ್ಟ ಒಂದು ಹೆಚ್ಚಾಗಿ ಕಂಡುಬರುವ ಮರವಾಗಿದ್ದು ಇದನ್ನು ಸ್ಥಳಿಯವಾಗಿ ಕಾಚಂಪುಳಿ ಮರ ಎಂದು ಕರೆಯುತ್ತಾರೆ.ಎಲ್ಲಾ ಸಾಮಾನ್ಯ ಅಂಗಡಿಗಳಲ್ಲಿ ಈ ಮರದ ಒಣಗಿಸಿದ ಹಣ್ಣುಗಳು ದೊರೆಯುತ್ತವೆ. ಕೊಡಗು ಜಿಲ್ಲೆ ಚಿಕ್ಕಾದಾದರೂ ಕಾಚಂಪುಳಿಯ ಇರುವಿಕೆ ಹೆಚ್ಚಾಗಿದೆ. ಏಕೆಂದರೆ ಇಲ್ಲಿನ ಮಳೆಗಾಲ ಮತ್ತು ತೇವಾಂಶದ ಸಹಾಯದಿಂದ. ಕೊಡಗಿನ ಕಾಫಿತೋಟಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಮರ ಪುನರ್ಪುಳಿ( ಗಾರ್ಸಿನಿಯ ಇಂಡಿಕಾ)ಚೆನ್ನಾಗಿ ಬೆಳೆದು ನಿಂತ ಮರಗಳು ತ್ರಿಭುಜಾಕಾರವಾಗಿ ಕಾಣುತ್ತವೆ. ಇದರ ಎಲೆಗಳು ತಿನ್ನಲು ಯೋಗ್ಯ. ತಿನ್ನುವಾಗ ಹುಳಿ ರುಚಿ ಹೊಂದಿರುತ್ತದೆ. ಈ ಮರವು ತನ್ನಲ್ಲಿ ಬಹುಪಯೋಗಿ ಗುಣಗಳನ್ನು ಅಡಗಿಸಿಕೊಂಡಿದೆ.

ವಿವಿಧ ರೀತಿಯ ಪುನರ್ಪುಳಿ ಜಾತಿಯ ಮರಗಳು ಕೃಷಿ ಅರಣ್ಯ ಪದ್ಧತಿಯಲ್ಲಿ ಕಂಡು ಬಂದರೂ ಸಹ ಇತ್ತೀಚಿನ ದಿನಗಳಲ್ಲಿ ಲಾಭದ ಮೊರೆಹೋಗುತ್ತಿರುವ ಕೃಷಿಕರು ಸಿಲ್ವರ್ ಮರದಂತಹ ಅನ್ಯ ದೇಶೀಯ ಮರಗಳನ್ನು ಬೆಳೆಯುವಲ್ಲಿ ಮುಂದಾಗುತ್ತಿದ್ದಾರೆ. ಕಾಫಿ ತೋಟಗಳಲ್ಲಿ ಮರ ಕಪಾತು ಮಡುತ್ತಿರುವುದು ಸಹ ಈ ಮರಗಳು ನಶಿಸಲು ಕಾರಣವಾಗುತ್ತಿದೆ. ಇತ್ತೀಚಿನ ದಿನಗಳಿಲ್ಲಿ ನೈಸರ್ಗಿಕವಾಗಿ ಪುನರ್ಪುಳಿ ಮರದ ಸಂಖ್ಯೆ ಕಡಿಮೆಯಾಗುತ್ತಿದ್ದು, ಇದನ್ನು ಬೆಳೆಸಿ ಉಳಿಸುವಲ್ಲಿ ಕೃಷಿಕರು ಹೆಚ್ಚು ಆಸಕ್ತಿಯನ್ನು ತಾಳಬೇಕಾಗಿದೆ.



ಕಾಚಂಪುಳಿ (ಗಾರ್ಸಿನಿಯ ಗಮ್ಮಿಗಟ್ಟ)



ಪುನರ್ಪುಳಿ (ಗಾರ್ಸಿನಿಯ ಇಂಡಿಕ)

ಮೂಲ ಆಧಾರ:

1. ಚರಣ ಕುಮಾರ್, ಜಡೇಗೌಡ, ಎಮ್., ವಾಸುದೇವ. ಆರ್. ಮತ್ತು ಕ್ಲಾರ ಮಾನಸ. 2015, ಯುಸಸ್ ಆಫ್ ಗಾರ್ಸಿನಿಯ ಇಂಡಿಕ– ಯನ್ ಅಂಡರ್ ಯುಡಿಲೈಸ್ಡ್ ಟ್ರೋಫಿಕಲ್ ಪ್ರೂಟ್ ಟ್ರೀ ಇನ್ ವೆಸ್ಟ್ರನ್ ಘಾಟ್ಸ್. ಸೊವೇನೀರ್ ಆಫ್ ವರ್ಕ್‌ಶೋಪ್ ಆನ್ ಗಾರ್ಸಿನಿಯಾ ಸ್ಪೀಶೀಸ್. ಪುಟ–118

2. ಆರ್. ವಾಸುದೇವ, ದೀಪ, ಜಿ.ಎಸ್. ಮತ್ತು ನರಸಿಂಹ ಹೆಗ್ಗಡೆ. (2011), ಮುರುಗಲು– ಪರಿಚಯ, ಸುಸ್ಥಿರ ಬಳಕೆ ಮತ್ತು ಸಂರಕ್ಷಣೆ, ಅರಣ್ಯ ಮಹಾವಿದ್ಯಾಲಯ ಶಿರಸಿ, 581 401, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ. ಪುಟ. 1–14.

3. ಆರ್. ವಾಸುದೇವ, ಶ್ರೀಕಾಂತ್ ಗುಣಗ. ಮತ್ತು ದೀಪ, ಜಿ.ಎಸ್. (2013), ಉಪ್ಪಾಗೆ–ಪರಿಚಯ, ಸುಸ್ಥಿರ ಬಳಕೆ ಮತ್ತು ಸಂರಕ್ಷಣೆ, ಅರಣ್ಯ ಮಹಾವಿದ್ಯಾಲಯ ಶಿರಸಿ, 581 401, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ. ಪುಟ. 1–16.

4. ಎಮ್. ಲತ, ಎಮ್. ಅಬ್ದುಲ್ ನಿಜಾರ್, ಜೆಡ್. ಅಬ್ರಹಾಮ್, ಮತ್ತು ಕೆ. ಜೋಸೆಫ್ ಜೋನ್. (2015) ಗಾರ್ಸಿನಿಯಾ ತಳಿ ಸಂಪನ್ಮೂಲಗಳ ನಿರ್ವಹಣೆ. ಸೊವೇನೀರ್ ಆಫ್ ವರ್ಕ್‌ಶೋಪ್ ಆನ್ ಗಾರ್ಸಿನಿಯಾ ಸ್ಪೀಶೀಸ್. ಪುಟ–21

5. ಆರ್. ವಾಸುದೇವ, ಬಿ.ಎಸ್. ಜನಗೌಡರ್., ಬಿ.ಎಮ್.ಸಿ. ರೆಡ್ಡಿ., ಭುವನ್ ಸಾಪಿತ್. ಮತ್ತು ಹೆಚ್.ಪಿ. ಸಿಂಗ್.(2010) ಗಾರ್ಸಿನಿಯಾ ತಳಿ ಸಂಪನ್ಮೂಲಗಳು ಅರಣ್ಯ ಮಹಾವಿದ್ಯಾಲಯ ಶಿರಸಿ, 581 401, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ.

ISSN 2249 - 5754 VIJNANA KANNADA (PRINT)


# ಅರಣ್ಯ ಸಂರಕ್ಷಣೆ ಮತ್ತು ಜೀವ ವೈವಿಧ್ಯತೆ ಕಾಪಾಡುವಲ್ಲಿ ಗಿರಿಜನರ ತಿಳುವಳಿಕೆ

ಮಂಜುನಾಥ್, ಎಸ್.ಪಿ[1]., ಚರಣ ಕುಮಾರ್[2], ಮನು, ಟಿ.ಎನ್[2]., ಜಡೇಗೌಡ, ಎಮ್[3]., ಮತ್ತು ಅಶ್ವತ್, ಎಮ್.ಎನ್[1].,
1. ಅರಣ್ಯ ಶಾಸ್ತ್ರ ವಿದ್ಯಾರ್ಥಿಗಳು, 2. ಅರಣ್ಯ ಶಾಸ್ತ್ರ ಪದವೀಧರರು, 3. ನೈಸರ್ಗಿಕ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ, ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ (www.majumathsp1994@gmail.com)

**ಪ್ರಬಂಧಸಾರ:–** ಗಿರಿಜನರ ಸಾಂಪ್ರದಾಯಿಕ ತಿಳುವಳಿಕೆ ಪೀಳಿಗೆಯಿಂದ ಪೀಳಿಗೆಗೆ ಮಾತಿನ ಸಂವಹನದ ಮೂಲಕ ಹರಿದು ಬರುತ್ತಿದೆ. ತಮ್ಮ ಜ್ಞಾನವನ್ನು ಹಾಡುಗಳ ಮೂಲಕ, ಹಬ್ಬಗಳ ಮೂಲಕ, ಸ್ಮರಣಿಕೆಯ ಮೂಲಕ ಸಂವಹನಗೊಳಿಸುತ್ತಾರೆ. ಹಲವಾರು ನಾಟ್ಯ ವೈವಿಧ್ಯವಿದ್ದು ಔಷಧೀಯ ಗಿಡ ಮೂಲಿಕೆಗಳನ್ನು ಸಂಗ್ರಹಿಸಿ ಔಷಧಿಯನ್ನು ತಯಾರಿಸುವಲ್ಲಿ ಪರಿಣಿತಿ ಹೊಂದಿರುತ್ತಾರೆ. ಅರಣ್ಯ ವಾಸಿಗಳು ಔಷಧಿ ನೀಡುವುದರ ಜೊತೆಗೆ ಔಷಧೀಯ ಸಸ್ಯಗಳ ಸಂರಕ್ಷಣೆಯಲ್ಲಿ ನಿಪುಣರು. ತಮ್ಮ ವಾಸಸ್ಥಳದ ಇಕ್ಕೆಲಗಳಲ್ಲಿ ಔಷಧೀಯ ಸಸ್ಯಗಳನ್ನು ಬೆಳೆಸಿ ಪೋಷಿಸುತ್ತಾರೆ. ಇದರ ಮುಖಾಂತರ ಅರಣ್ಯ ಸಂಪತ್ತಿನ ಸುಸ್ಥಿರತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಕಿರು ಅರಣ್ಯ ಪದಾರ್ಥಗಳಾದ ಜೇನು, ಸೀಗೆ, ನೆಲ್ಲಿಕಾಯಿ, ಅಳಲೆ ಇತ್ಯಾದಿ ಸಂಗ್ರಹಿಸುವುದು ಇತ್ತೀಚಿನ ಉದ್ದಿಮೆಯಾಗಿದೆ. ಗಿರಿಜನರು, ಸಾಂಪ್ರದಾಯಿಕ ಜ್ಞಾನದ ಜೊತೆಗೆ ಜೀವನವನ್ನು ನಿಸರ್ಗದ ಜೊತೆ ಸಹಬಾಳ್ವೆಯನ್ನು ನಡೆಸುವ ಮೂಲಕ ಜೀವವೈವಿಧ್ಯತೆ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಪರಿಸರ ವ್ಯವಸ್ಥೆಯು ಎಲ್ಲಾ ಜೀವಿಗಳಿಗೆ ಉತ್ತಮ ಆಸರೆಯನ್ನು ನೀಡಿದೆ. ಪ್ರತಿಯೊಂದು ಜೀವಿಯೂ ತನ್ನದೇ ಆದ ಜೀವನ ಶೈಲಿಯನ್ನು ಹೊಂದಿದೆ ಮತ್ತು ಈ ಪರಿಸರ ವ್ಯವಸ್ಥೆಯಲ್ಲಿ ಜಜೀವ ಕಣಕಣಗಳಿಗೂ ನಿರ್ದಿಷ್ಟವಾದ ಪಾತ್ರಗಳಿವೆ. ಅಂತೆಯೇ ಅರಣ್ಯವು ನಮ್ಮ ಸುತ್ತಮುತ್ತಲಿನ ಪ್ರಕೃತಿಯ ಒಂದು ಭಾಗ. ಅರಣ್ಯವು ಸಕಲ ಜೀವರಾಶಿಗಳಿಗೆ ಒಡಲಾಗಿದೆ. ವಿಶ್ವ ಪ್ರಸಿದ್ದಿ ಹೊಂದಿರುವ ಭಾರತದ ಪಶ್ಚಿಮಘಟ್ಟಗಳಲ್ಲಿ ವಿಶಿಷ್ಟವಾದ ಜೀವಸಂಕುಲಗಳಿವೆ. ಈ ಜೀವಸಂಕುಲಗಳ ಸಾಲಿನಲ್ಲಿ ಬಳ್ಳಿಗಳು ಮತ್ತು ಹಂಬುಗಳೂ ಸಹ ಸೇರಿವೆ. ಉಷ್ಣವಲಯದ ಕಾಡುಗಳಲ್ಲಿ ವಿವಿಧ ಸಂಪತ್ತುಗಳಲ್ಲೊಂದಾದ ಜೀವ ಸಂಪತ್ತೇ ಹೇರಳವಾಗಿ ದೊರಕುವ ಜೀವಿಗಳು ಬಳ್ಳಿಗಳು ಮತ್ತು ಹಂಬುಗಳಾಗಿವೆ. ವೃಕ್ಷಶಾಸ್ತ್ರದ ತತ್ವಗಳಿಗನುಗುಣವಾಗಿ ನಿರ್ವಹಣೆ ಮಾಡಿದ ಅರಣ್ಯ ಪ್ರದೇಶಗಳಲ್ಲಿ ಬಳ್ಳಿಗಳು ಮತ್ತು ಹಂಬುಗಳು ವಿನಾಶ ಹೊಂದುತ್ತಿರುವ ಸಸ್ಯ ಪ್ರಭೇದಗಳಾಗಿವೆ ಮತ್ತು ಹಲವಾರು ರೀತಿಯಲ್ಲಿ ವೃಕ್ಷ ಮತ್ತು ಗಿಡಗಳಿಗಿಂತ ವಿಭಿನ್ನವಾಗಿವೆ. ಪರಿಸರದ ಸುವ್ಯವಸ್ಥೆಯನ್ನು ಕಾಪಾಡಲು ಹಲವಾರು ಸಕರಾತ್ಮಕ ನೈಸರ್ಗಿಕ ಕ್ರಿಯೆಗಳಾದ ಮಣ್ಣು ಸವಕಳಿ ತಡೆಯುವುದು ಅರಣ್ಯ ರಚನೆ ಸಂರಕ್ಷಿಸುವುದು, ಇಂಗಾಲವನ್ನು ಹಿಡಿದಿಡುವುದು, ಮಣ್ಣಿನ ಫಲವತ್ತತೆ ಕಾಪಾಡುವುದು ಇತ್ಯಾದಿಗಳಲ್ಲಿ ಸಹಕಾರಿಯಾಗಿದೆ. ಇನ್ನು ಉಷ್ಣವಲಯದ ಕಾಡುಗಳಲ್ಲಿ ಅನೇಕ ಪ್ರಾಣಿಗಳಿಗೆ ಆಹಾರವನ್ನೊದಗಿಸುವಲ್ಲಿ ಸಹಕಾರಿಯಾಗಿವೆ. ಹಂಬುಗಳು ಕಾಡಿನ ಮರಗಳನ್ನು ದೊಡ್ಡ ಬಿರುಗಾಳಿಯಿಂದ ರಕ್ಷಿಸುತ್ತವೆ. ಕಾಡಿನೊಳಗೆ ಪೊದೆಯಾಕಾರದಲ್ಲಿ ಕಂಡುಬರುವ ಇವು ಅನೇಕ ಪ್ರಾಣಿಗಳಿಗೆ ಸಂತಾನೋತ್ಪತ್ತಿ ವೃದ್ಧಿಸಿಕೊಳ್ಳಲು ಅಣಿಮಾಡಿಕೊಡುತ್ತವೆ. ಬಳ್ಳಿಗಳು ಮತ್ತು ಹಂಬುಗಳ ವೈವಿಧ್ಯತೆಯ ಮೇಲಿನ ಪ್ರಮುಖ ಸಂಶೋಧನೆಗಳನ್ನು ಪಶ್ಚಿಮಘಟ್ಟಗಳಲ್ಲಿನ ವಿವಿಧ ತಾಕುಗಳಲ್ಲಿ ಆಯೋಜಿಸಲಾಗಿದೆ. ಬಳ್ಳಿಗಳು ಮತ್ತು ಹಂಬುಗಳು ನಿಸರ್ಗದ ಸುಂದರತೆಯನ್ನು ತಮ್ಮ ಅಂಕುಡೊಂಕಿನ ಕಾಂಡಗಳ ಮೂಲಕ ಬಳುಕಿದ ದೇಹದಂತೆ ಬಿಂಬಿಸುತ್ತವೆ. ಕೆಲವೊಂದು ಬಳ್ಳಿಗಳು ಮತ್ತು ಹಂಬುಗಳು ಮಳೆ ಕಾಡುಗಳಲ್ಲಿ ಕಿರು ಅರಣ್ಯ ಉತ್ಪನ್ನಗಳಾಗಿವೆ (ಉದಾ: ಮರದ ಅರಿಶಿಣ, ಉಗನಿ, ಸೀಗೆ, ಅಮೃತಬಳ್ಳಿ,) ಮತ್ತು ಪರಾಗಸ್ಪರ್ಶ ಕ್ರಿಯೆಯ ಸೂಚಿಗಳಾಗಿವೆ. ಸುಮಾರು ಬಳ್ಳಿಗಳು ಮತ್ತು ಹಂಬುಗಳು ತಮ್ಮಲ್ಲಿ ಅದ್ಭುತವಾದ ಔಷದೀಯ ಗುಣಗಳನ್ನು ಹೊಂದಿವೆ. ಅಂತಹವುಗಳಲ್ಲಿ ಮರದ ಅರಿಶಿಣವೂ ಸಹ ಒಂದು. ಈ ಹಂಬಿಗೆ ವೈಜ್ಞಾನಿಕವಾಗಿ ಕೊಸ್ಸಿನಿಯಂ ಫೆನುಸ್ಟ್ರೇಟಂ ಎಂದು ಹೆಸರು. ಈ ಹಂಬು ಪಶ್ಚಿಮಘಟ್ಟದ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸ್ಥಳೀಯ ಜನರು ಸಾಂಪ್ರದಾಯಕವಾಗಿ ಔಷಧಿಯಾಗಿ ದಕ್ಷಿಣ ಭಾರತದಲ್ಲಿ ಮತ್ತು ಉತ್ತರ ಥಾಯ್ಲೆಂಡಿನಲ್ಲಿ ಈ ಹಂಬನ್ನು ಹೆಚ್ಚಾಗಿ ಬಳಸುತ್ತಾರೆ. ಈ ಹಂಬು ಕೋತಿಗಳು ಕಚ್ಚಿದರೆ, ಹಾವು ಕಚ್ಚಿದರೆ, ಹಲ್ಲಿ ಕಚ್ಚಿದರೆ ವಾಸಿಪಡಿಸಲು ರಾಮಬಾಣ. ಇತ್ತೀಚಿನ ದಿನಗಳಲ್ಲಿ ಅರಣ್ಯ ನಾಶ ಹೆಚ್ಚಾಗುತ್ತಿರುವುದರಿಂದ ಇಂತಹ ಬಳ್ಳಿಗಳು ಮತ್ತು ಹಂಬುಗಳಿಗೆ ವಿನಾಶ ಹೊಂದುವ ದುರ್ಗತಿ ಒದಗುತ್ತಿದೆ. ಕೆಲವು ಬಳ್ಳಿಗಳು ಮತ್ತು ಹಂಬುಗಳು ಆರ್ಥಿಕತೆಯ ವಿಚಾರದಲ್ಲಿ ಕಡಿಮೆ ಆದಾಯ ಅಥವಾ ಯಾವುದೇ ಉಪಯೋಗ ಇಲ್ಲದಿರಬಹುದು. ಮನುಷ್ಯನು ಇಂತಹ ಬಳ್ಳಿಗಳು ಮತ್ತು ಹಂಬುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ನಮ್ಮ ಪರಿಸರ ವ್ಯವಸ್ಥೆಯಲ್ಲಿ ಈ ಬಳ್ಳಿಗಳು ಮತ್ತು ಹಂಬುಗಳು ಉಳಿಯ ಬೇಕಾದರೆ, ಇವುಗಳನ್ನು ಸಂರಕ್ಷಿಸುವ ಕಾರ್ಯ ನಡೆಯಬೇಕಿದೆ.



*ಪಶ್ಚಿಮ ಘಟ್ಟಗಳಲ್ಲಿ ಒಂದಕ್ಕೊಂದು ಸುರುಳಿ ಸುತ್ತಿಕೊಂಡಂತೆ ಕಾಣುವ ಬಳ್ಳಿಗಳು ಮತ್ತು ಹಂಬುಗಳು*

1. **ಡಿ.ಕೆ ಪಾಟೀಲ್** (2014), ಡೈವರ್ಸಿಟಿ ಆಫ್ ಕ್ಲೈಂಬರ್ ಅಂಡ್ ಕ್ರೀಪರ್ ಮೆಡಿಸಿನಲ್ ಅಂಡ್ ಆರೋಮೆಟಿಕ್ ಪ್ಲಾಂಟ್ಸ್ ವಿತ್ ಸ್ಪೆಷಲ್ ರೆಫರೆನ್ಸ್ ಟು ದೇರ್ ರೀಜನರೇಷನ್ ಇನ್ ಹರ್ಬಲ್ ಗಾರ್ಡನ್ ಪಾರ್ ಎಕ್ಸಿಟು ಕನ್ಸರ್ವೇಶನ್. **International Journel Current Research Bioscience and Plant Biology.**

2. ತ್ರಿವೇಣಿ ಎಚ್.ಎನ್, ಶ್ರೀಕಾಂತ್ ವಿ. ಗುನಗ, ಎಚ್.ಎನ್, ರಮೇಶ್ ಬಾಬು & ಆರ್. ವಾಸುದೇವ್. ಎಕಾಲಾಜಿಕಲ್ ನಿಷ್ ಮಾಡೆಲ್ಲಿಂಗ್, ಪಾಪುಲೆಶನ್ ಸ್ಟೇಟಸ್ ಅಂಡ್ ರೀಜನರೇಷನ್ ಆಫ್ ಕಾಸ್ಸಿನಿಯಮ್ ಪೆನಸ್ಟ್ರೇಟಮ್ colebr. (ಮೆನಿಸ್ಪರ್ಮೇಸಿ): ಎ ಮೆಡಿಸ್ಸಿನಲ್ಲಿ ಇಂಪಾರ್ಟೆಂಟ್ ಲಯನ್ನ ಆಫ್ ಸೆಂಟ್ರಲ್ ವೆಸ್ಟ್ರನ್ ಗಾಟ್ಸ್. Tropical Ecology **56**(1): 101-110, 2015

## ಮೂಲೆಯಲ್ಲಿದ್ದ ಮುಜಂಟಿ ಜೇನಿಗೆ ಇಂದು ಅತಿ ಹೆಚ್ಚು ಬೇಡಿಕೆ.

ಮನು, ಟಿ.ಎನ್[1]., ಚರಣ ಕುಮಾರ್[1], ಕೆಂಚರಡ್ಡಿ, ಆರ್.ಎನ್[3]. ಮತ್ತು ಅಶ್ವತ್, ಎಮ್.ಎನ್[2].
1. ಅರಣ್ಯ ಶಾಸ್ತ್ರ ವಿದ್ಯಾರ್ಥಿ, 2. ಅರಣ್ಯ ಶಾಸ್ತ್ರ ಪದವೀಧರರು, 3. ಅರಣ್ಯಜೀವ ಮತ್ತು ವೃಕ್ಷಾಭಿವೃದ್ಧಿ ವಿಭಾಗ, ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ * (www.manutn6@gmail.com)

**ಪ್ರಬಂಧಸಾರ:–** ಸಾಮಾನ್ಯವಾಗಿ ಹಳೆ ಮನೆಯ ಗೋಡೆಗಳಲ್ಲಿ, ಎಂಚುಗಳ ಸಂದಿಗಳಲ್ಲಿ, ವಿದ್ಯುತ್ ಪೆಟ್ಟಿಗೆಗಳಲ್ಲಿ, ದೊಡ್ಡ ಮರಗಳ ಕೊಳವೆಗಳಲ್ಲಿ ಮುಜಂಟಿ ಜೇನುಗೂಡು ಕಂಡು ಬರುತ್ತದೆ. ಮೂಲೆಯಲ್ಲಿದ್ದ ಮುಜಂಟಿ ಜೇನಿಗೆ ಇಂದು ಅತಿ ಹೆಚ್ಚು ಬೇಡಿಕೆ. ವಿವಿಧ ರಾಜ್ಯಗಳಲ್ಲಿ, ಅದರಲ್ಲಿಯೂ ಕೇರಳ ರಾಜ್ಯದಲ್ಲಿ ಮುಜಂಟಿ ಜೇನುತುಪ್ಪವನ್ನು ಆಯುರ್ವೇದ ಔಷಧಿ ಪದ್ದತಿಯಲ್ಲಿ ಯತೇಚ್ಚವಾಗಿ ಬಳಸುತ್ತಾರೆ. ಇತ್ತೀಚಿನ ದಿನಗಳಲ್ಲಿ 1 ಕೆ.ಜಿ ಮುಂಜಂಟಿ ಜೇನುತುಪ್ಪ 1000–1500 ರೂ ಬೆಲೆ ಇದೆ. ಮುಜಂಟಿ ಜೇನನ್ನು ಸಾಕುವುದು ಬಲು ಸುಲಭ. ಈ ಜಾತಿಯ ಜೇನು ಹುಳಗಳು ಒಮ್ಮೆ ಬಂದು ಸೇರಿದರೆ ಸ್ಥಳ ಬದಲಾಯಿಸುವುದು ಕಡಿಮೆ. ಹಳೆ ಜೇನು ಪೆಟ್ಟಿಗೆಗಳಲ್ಲಿ, ಮರದ ಕೊಳವೆಗಳಲ್ಲಿ, ಬಿದಿರಿನ ಬಂಬುಗಳಲ್ಲಿ, ಮಡಿಕೆಗಳಲ್ಲಿ ಇವುಗಳನ್ನು ಸಾಕಬಹುದು. ಮುಜಂಟಿ ಜೇನನ್ನು ಸಾಕುವುದೇನೋ ಬಲು ಸುಲಭ, ಆದರೆ ವರ್ಷದಲ್ಲಿ ಇದರ ಜೇನು ಇಳುವರಿ ತುಂಬಾ ಕಡಿಮೆ ವರ್ಷಕ್ಕೆ ಸರಾಸರಿ 250–700 ಗ್ರಾಂ ಜೇನುತುಪ್ಪ ದೊರೆಯುತ್ತದೆ. ಆದ್ದರಿಂದಲೇ ಜನರು ಇದನ್ನು ಸಾಕಲು ಮುಂದೆ ಬರುವುದಿಲ್ಲ. ಬೇರೆ ಜೇನುಹುಳುಗಳ ಹಾಗೆ ಮುಜಂಟಿ ಜೇನುಹುಳುಗಳೂ ಸಹ ಪರಾಗಸ್ಪರ್ಶದಲ್ಲಿ ಸಹಕಾರಿಯಾಗುತ್ತವೆ. ತುಡುವೆ ಜೇನು ಮತ್ತು ಹೆಜ್ಜೇನು ಹುಳುಗಳಿಗಿರುವಂತೆ ಮುಜಂಟಿ ಜೇನುಹುಳುಗಳಿಗೆ ಮುಳ್ಳುಗಳಿರುವುದಿಲ್ಲ. ಆದ್ದರಿಂದಲೇ ಇವುಗಳನ್ನು 'ಸ್ಟಿಂಗ್‌ಲೆಸ್ ಜೇನುನೊಣ' (ಟ್ರೈಗೋನಾ ಇರಿಡಿಪೆನಿಸ್) ಎಂದು ಕರೆಯಲಾಗುವುದು. ಬೇರೆ ಜೇನು ನೊಣಗಳಿಗೆ ಹೋಲಿಸಿ ನೋಡಿದರೆ ಮುಜಂಟಿ ಜೇನಿನ ಮೇಲೆ ಸಂಶೋಧನೆ ಕಡಿಮೆ. ಮುಜಂಟಿ ಜೇನಿನ ಜೇನುತುಪ್ಪದ ಉತ್ಪಾದನೆಯನ್ನು ಹೆಚ್ಚಿಸಲು ಸಂಶೋಧನೆಗಳನ್ನು ನಡೆಸಿದಲ್ಲಿ, ಮುಂದಿನ ದಿನಗಳಲ್ಲಿ ನಾವು ಮುಜಂಟಿ ಜೇನು ಕೃಷಿ ತೋಟಗಳನ್ನು ಕಾಣುವುದರಲ್ಲಿ ಸಂದೇಹವಿಲ್ಲ.

**ಪರಿಚಯ:** ಜೇನನ್ನು ಉತ್ಪಾದಿಸುವ ಜೇನು ನೊಣಗಳಲ್ಲಿ ಹಲವಾರು ವಿಧಗಳಿದ್ದು ಮುಖ್ಯವಾಗಿ ಭಾರತದಲ್ಲಿ ಹೆಜ್ಜೇನು, ಯುರೋಪಿಯನ್ ಜೇನು, ತುಡುವೆ ಜೇನು, ಕಡ್ಡಿ ಜೇನು ಮತ್ತು ಮುಳ್ಳುರಹಿತ ಜೇನು (ಮುಜಂಟಿ) ಕಂಡುಬರುತ್ತವೆ. ಯುರೋಪಿಯನ್ ಜೇನು ಮತ್ತು ತುಡುವೆ ಜೇನು ನೊಣಗಳನ್ನು ಮಾತ್ರ ಸಾಕಾಣಿಕೆಗೆ ಯೋಗ್ಯವೆಂದು ಪರಿಗಣಿಸಲಾಗಿತ್ತು. ಮುಜಂಟಿ ಜೇನಿನ ಕಡಿಮೆ ಇಳುವರಿಯಿಂದಾಗಿ ಇವುಗಳನ್ನು ಇದುವರೆಗೆ ಪೆಟ್ಟಿಗೆಗಳಲ್ಲಿಟ್ಟು ಸಾಕುವ ಪ್ರಯತ್ನ ಅಷ್ಟಾಗಿ ನಡೆದಿರಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಜೇನಿನ ತುಪ್ಪಕ್ಕಿರುವ ಬೇಡಿಕೆಯಿಂದಾಗಿ ಹಲವಾರು ಕಡೆ ಇವುಗಳನ್ನು ಸಾಕುವ ಪ್ರಯತ್ನ ನಡೆಯುತ್ತಿವೆ. ಮುಳ್ಳುರಹಿತ ಜೇನುನೊಣಗಳಲ್ಲಿ ಸುಮಾರು 500 ಪ್ರಬೇದಗಳಿದ್ದು ಭಾರತದಲ್ಲಿ 6 ಪ್ರಬೇದಗಳು ಸಿಕ್ಕಿವೆ. ಇವುಗಳು ಇತರೆ ಜೇನುಗಳಂತೆ ವರ್ಷವಿಡೀ ಕಾರ್ಯನಿರ್ವಹಿಸುತ್ತವೆ. ತಮ್ಮ ರಕ್ಷಣೆಗಾಗಿ ಚುಚ್ಚುವುದರ ಬದಲು ಕಣ್ಣಿನ ರೆಪ್ಪೆ, ಕೂದಲುಗಳನ್ನು ಎಳೆದು ಕಿರಿಕಿರಿ ಉಂಟು ಮಾಡುತ್ತವೆ. ಮರದ ಪೊಟರೆಗಳಲ್ಲಿ, ಕೊಂಬೆಗಳಲ್ಲಿ, ಬಂಡೆಗಳ ಸಂದಿಗಳಲ್ಲಿ, ಹಳೆಯ ಗೋಡೆಗಳಲ್ಲಿ, ಪೈಪುಗಳಲ್ಲಿ ಕಂಡುಬರುತ್ತವೆ. ಪರಾಗಸ್ಪರ್ಶ ಕ್ರಿಯೆಯಲ್ಲಿ ಗಣನೀಯ ವಾದ ಪಾತ್ರವನ್ನು ಕೂಡ ಇವು ಹೊಂದಿವೆ. ಈ ಜೇನಿಗೆ ಸ್ಥಳೀಯವಾಗಿ ಮುಜಂಟಿ, ನಸುರು, ಸೊಳ್ಳೆ ಜೇನು, ಮೇಸರಿ ಕುಳ, ಮೂಲಿ ಜೇನು ಇತ್ಯಾದಿಗಳಿಂದ ಕರೆಯಲ್ಪಡುತ್ತಿದೆ.

**ವಿಭಿನ್ನತೆ:** ಇದು ಎಪಿಸ್ ಪ್ರಬೇದಕ್ಕೆ ಸೇರದಿರುವ ಹಾಗೂ ಅತಿ ಚಿಕ್ಕ ಜೇನುನೊಣ. ಇವುಗಳಲ್ಲಿ ಮುಳ್ಳು ಬೆಳವಣಿಗೆ ಹೊಂದಿರದ ಕಾರಣ ಇವುಗಳನ್ನು ಮುಳ್ಳುರಹಿತ ಜೇನುನೊಣಗಳೆಂದು ಕರೆಯುತ್ತಾರೆ. ಆಹಾರ ಸಿಗದಿದ್ದ ಪಕ್ಷದಲ್ಲೂ ಇತರೆ ಜೇನುಗಳಂತೆ ಪಲಾಯನ ಮಾಡುವ ಸಾಧ್ಯತೆ ಕಡಿಮೆ ಮತ್ತು ಸಂದಿಗ್ದ ಪರಿಸ್ಥಿತಿಯಲ್ಲೂ ತಮ್ಮ ಕುಟುಂಬ ನಿರ್ವಹಣೆಯನ್ನು ಮಾಡುವುದರ ಜೊತೆಗೆ ಅದೇ ಸ್ಥಳದಲ್ಲಿ ಉಳಿಯುತ್ತವೆ. ಈ ಗುಣ ಬೇರೆ ಜೇನುನೊಣಗಳಲ್ಲಿ ಕಂಡುಬರುವುದಿಲ್ಲ. ಎಪಿಸ್ ಜಾತಿಗೆ ಸೇರಿದ ಜೇನುನೊಣಗಳು ತಮ್ಮ ದೇಹದಿಂದ ಸ್ರವಿಸುವ ಜೇನುಮೇಣದಿಂದ ಕೋಶಗಳನ್ನು ಷಡ್ಬುಜಾಕೃತಿಯಲ್ಲಿ ರಚಿಸಿದರೆ, ಮುಜಂಟಿ ಜೇನು ತಾವು ಸ್ರವಿಸುವ ಜೇನುಮೇಣಕ್ಕೆ ವಿವಿಧ ಸಸ್ಯಜನ್ಯ ಅಂಟನ್ನು ಸೇರಿಸಿ ಅದಕ್ಕೆ ಮಣ್ಣನ್ನು ಮಿಶ್ರಣ ಮಾಡಿ ಕಡಲೆಕಾಳು ಮತ್ತು ಜೋಳದ ಕಾಳುಗಳ ಗಾತ್ರದಲ್ಲಿ ಕೋಶಗಳನ್ನು ರಚಿಸಿಕೊಳ್ಳುತ್ತವೆ. ಕಡಲೆ ಕಾಳು ಗಾತ್ರದ ಕೋಶಗಳಲ್ಲಿ ಜೇನನ್ನು ಮತ್ತು ಪರಾಗವನ್ನು ಶೇಖರಿಸಿದರೆ, ಜೋಳದ ಕಾಳು ಗಾತ್ರದ ಕೋಶಗಳಲ್ಲಿ ಮೊಟ್ಟೆ ಹಾಗು ಮರಿಗಳನ್ನು ಬೆಳೆಸಲು ಉಪಯೋಗಿಸುತ್ತವೆ. ಗೂಡಿನ ರಚನೆಯಲ್ಲಿ ವಿಶೇಷತೆ ಇದ್ದು ಜೇನು, ಪರಾಗ ಮತ್ತು ಮೊಟ್ಟೆ ಅಥವಾ ಮರಿಗಳ ಪ್ರತ್ಯೇಕ ಕೋಶಗಳ ವಿಂಗಡಣೆ ಇರುವುದಿಲ್ಲ. ಮರಿಗಳನ್ನು ಬೆಳೆಸುವ ವಿಧಾನದಲ್ಲೂ ವಿಶೇಷತೆಯಿದ್ದು ಇತರೆ ಜೇನುಗಳಿಗಿಂತ ವಿಭಿನ್ನವಾಗಿದೆ. ಇತರೆ ಜೇನುಗಳು ಮರಿಗಳಿಗೆ ರಾಜಶಾಹಿರಸ ಹಾಗು ಜೇನಿನ ಮಿಶ್ರಣವನ್ನು ಪ್ರತಿನಿತ್ಯವು ಉಣಬಡಿಸಿದರೆ, ಮುಜಂಟಿಗಳು ಜೋಳದ ಕಾಳುಗಳ

ಗಾತ್ರದ ಕೋಶಗಳಲ್ಲಿ ಒಂದೇ ಬಾರಿ ಜೇನು, ಪರಾಗ ಹಾಗು ಜೇನನ್ನು ತುಂಬಿಸಿ ರಾಣಿ ಮೊಟ್ಟೆ ಇಟ್ಟ ನಂತರ ಆ ಕೋಶಗಳನ್ನು ಮುಚ್ಚುತ್ತವೆ. ನಂತರ ಬೆಳೆದ ಪ್ರೌಢ ನೊಣಗಳು ಹೊರಬರುತ್ತವೆ. ಮುಜಂಟಿಗಳಲ್ಲಿ ಕುಟುಂಬ ವಿಭಜನೆಯ ಕ್ರಮವೂ ಸಹ ವಿಭಿನ್ನವಾಗಿದ್ದು ಗೂಡಿನಲ್ಲಿ ನೊಣಗಳ ಸಂಖ್ಯೆ ಹೆಚ್ಚಾದಾಗ ಕೆಲವು ಕೆಲಸಗಾರ ನೊಣಗಳು ಸಮೀಪದಲ್ಲಿರುವ ಇನ್ನೊಂದು ಜಾಗವನ್ನು ಆಯ್ಕೆಮಾಡಿಕೊಂಡು ಕೋಶಗಳ ರಚನೆಯಲ್ಲಿ ಪಾಲ್ಗೊಳ್ಳುತ್ತವೆ. ಕೋಶಗಳು ಸಿದ್ಧವಾದ ನಂತರ ಜೇನು ಹಾಗು ಪರಾಗವನ್ನು ಸಂಗ್ರಹಿಸಿ, ಶೇಖರಿಸಿ ಮುಂಬರುವ ಹೊಸರಾಣಿಗೆ ಕಾಯುತ್ತವೆ. ಅಲ್ಲಿಯವರೆಗೆ ತಾಯಿ ಕುಟುಂಬದ ಸಂಬಂದ ಮುಂದುವರೆದೇ ಇರುತ್ತದೆ. ಈ ಅವಧಿಯಲ್ಲಿ ತಾಯಿ ಕುಟುಂಬದಲ್ಲಿ ಹೊಸ ರಾಣಿ ಹುಳುಗಳನ್ನ ತಯಾರಿಸಿ ಬೆಳೆಸುತ್ತವೆ. ಹೊಸ ರಾಣಿಹುಳು ಸಂಬೋಗಿಸಿದ ನಂತರ ಸಿದ್ಧವಾಗಿರುವ ಹೊಸ ಜಾಗಕ್ಕೆ ಕೆಲವು ಕೆಲಸಗಾರರ ಸಮೇತ ಹೋಗಿ ನೆಲೆಸುತ್ತವೆ. ಎಪಿಸ್ ಜಾತಿಗೆ ಸೇರಿದ ಜೇನುಗಳಲ್ಲಿ ತಾಯಿರಾಣಿಯು, ಹೊಸ ರಾಣಿ ಜನಿಸುವ 2–3 ದಿನ ಮೊದಲೇ ಕೆಲ ಕೆಲಸಗಾರ ನೊಣಗಳೊಂದಿಗೆ ಬೇರೆ ಜಾಗಕ್ಕೆ ಹೋಗುತ್ತವೆ. ಇನ್ನು ಮುಜಂಟಿ ಜೇನಿನ ಗೂಡಿನ ಮುಖ್ಯ ದ್ವಾರದ ರಚನೆಯಲ್ಲೂ ವಿಭಿನ್ನತೆ ಕಂಡುಬಂದಿದ್ದು ಕೆಲವು ಕೊಳವೆಯಾಕಾರದಲ್ಲಿ ಮಾಡಿದರೆ ಇನ್ನು ಕೆಲವು ಕೊಳವೆಯನ್ನು ಮಾಡುವುದಿಲ್ಲ. ಎಪಿಸ್ ಜಾತಿಗೆ ಸೇರಿದ ಜೇನುಗಳು ಜೇನನ್ನು ಗೂಡಿನ ಮೇಲ್ಭದರದಲ್ಲಿರಿಸಿದರೆ ಮುಜಂಟಿಯು ದ್ವಾರದ ಸಮೀಪದಲ್ಲಿರಿಸುತ್ತವೆ. ಮುಜಂಟಿ ಜೇನುತುಪ್ಪವು ಕೆಂಪು ಮಿಶ್ರಿತ ಕಪ್ಪು ಬಣ್ಣದ್ದಾಗಿದ್ದು ಸುವಾಸನೆಯಿಂದಲೂ, ಸ್ವಲ್ಪ ಹುಳಿಯಾಗಿಯೂ ಇರುತ್ತದೆ. ಈ ಜೇನುತುಪ್ಪದ ವಿಶೇಷ ಗುಣ ಗಳಿಂದಾಗಿ, ಇದನ್ನು ಅನೇಕ ಆಯುರ್ವೇದೀಯ ಔಷದಿಗಳಲ್ಲಿ ಬಳಸುವುದು ಹಿಂದಿನಿಂದಲೂ ಜಾರಿಯಲ್ಲಿದೆ. ಇದರಿಂದ ಪಡೆಯುವ ಜೇನು ಅಂಟು ಅತಿ ಬೇಡಿಕೆಯ ವಸ್ತುವಾಗಿದ್ದು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತಿದೆ. ಜೇನು ತುಪ್ಪವು ತನ್ನ ಆಯುರ್ವೇದ ಔಷದೀಯ ಗುಣಧರ್ಮದಿಂದಾಗಿ ಕೇರಳ, ತಮಿಳುನಾಡು ಮತ್ತು ಕರ್ನಾಟಕದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆದಿದೆ. ಕಣಿ ಎಂಬ ಗಿರಿಜನರಿಗೆ ಇದರ ಜೇನು ತೆಗೆಯುವಿಕೆ ಮುಖ್ಯ ಕಸುಬಾಗಿದೆ.

**ಇಳುವರಿ:** ಸರಾಸರಿ ಸುಮಾರು 150– 250 ಗ್ರಾಂ ಪ್ರತೀ ವರ್ಷ, ಪ್ರತಿ ಕುಟುಂಬದಿಂದ.


ಆಹಾರ ತುಂಬಿಸಿ, ಮೊಟ್ಟೆ ಇದ್ದ ಕೋಶಗಳನ್ನ ಮುಚ್ಚಿರುವುದು


ಜೇನು ಅಂಟಿನಿಂದ ತಯಾರಿಸಿದ ರಚನೆಗಳು


ಜೇನು ತುಂಬಿದ ಕೋಶಗಳು


ರಾಣಿ ಜೇನು ಕಣಗಳು


ವಿವಿಧ ರೀತಿಯ ಹಾಗು ವಿನ್ಯಾಸದ ದ್ವಾರಗಳು

**ಭಾರತದಲ್ಲಿ ಮುಳ್ಳುರಹಿತ ಜೇನುನೊಣದ ಸಾಕಾಣಿಕೆಯ ಪ್ರಸ್ತುತ ಸ್ಥಿತಿ:** ಮುಜಂಟಿ ಜೇನಿನ ಸಾಕಾಣಿಕೆಯು ಬಲು ಸುಲಭವಾಗಿದ್ದು ಮರದ ಪೊಟರೆಗಳಲ್ಲಿ, ಕೊಂಬೆಗಳಲ್ಲಿ, ಬಂಡೆಗಳ ಸಂದಿಗಳಲ್ಲಿ, ಹಳೆಯ ಗೋಡೆಗಳಲ್ಲಿ, ಪೈಪುಗಳಲ್ಲಿ ಕಂಡುಬರುವ ಇವುಗಳನ್ನು ಮಡಕೆಗಳಲ್ಲಿ, ಬಿದಿರಿನ ದಬ್ಬೆಗಳಲ್ಲಿ, ತೆಂಗಿನ ಚಿಪ್ಪುಗಳಲ್ಲಿ ಮತ್ತು ಆಯತಾಕಾರದ ಪೆಟ್ಟಿಗೆಗಳಲ್ಲಿ ಸಾಕಾಣಿಕೆ ಮಾಡಲಾಗುತ್ತಿದೆ. ಆದರೆ ಇವುಗಳಿಂದ ದೊರೆಯುವ ಅತಿ ಕಡಿಮೆ ಇಳುವರಿ ಕಷ್ಟಕರವಾದ ಜೇನು ಕೊಯ್ಲು ರೈತರನ್ನು ಸಾಕಾಣಿಕೆಯಿಂದ ಹಿಂದುಳಿಯುವಂತೆ ಮಾಡಿದೆ. ಜೇನು ಕುಟುಂಬವನ್ನು ಪದೆಯಲು ಹಾಗು ಜೇನಿನ ಕೊಯ್ಲಿನ ಬಗೆಗೆ ಹಲವು ವಿದಾನಗಳ ಆವಿಷ್ಕಾರವಾಗಿದ್ದರೂ ಸಹ ಅವುಗಳು ಪ್ರಾಯೋಗಿಕವಾಗಿ ಸೂಕ್ತವಾಗಿರದ ಕಾರಣ ಹೆಚ್ಚು ಬಳಕೆಯಲ್ಲಿ ಬಂದಿರುವುದಿಲ್ಲ.

**ಸಾಕಾಣಿಕೆಯಲ್ಲಿ ಪ್ರಸ್ತುತ ಬಳಕೆಯಲ್ಲಿರುವ ಪದ್ಧತಿಗಳು:** ಸ್ವಾಭಾವಿಕ ವಾಸಸ್ಥಾನಗಳಲ್ಲಿ ಕಂಡುಬರುವ ಈ ಜೇನುಕುಟುಂಬಗಳನ್ನು ಮೊಟ್ಟೆ, ಮರಿಗಳು, ಜೇನಿನ ಹಾಗು ಪರಾಗದ ಕಣಗಳಿಗೆ ಹಾನಿಯಾಗದಂತೆ ಪೆಟ್ಟಿಗೆಗಳಿಗೆ ವರ್ಗಾಯಿಸಿಕೊಳ್ಳುವುದು. ಆಯತಾಕಾರದ ಪೆಟ್ಟಿಗೆಗಳು, ಮಣ್ಣಿನ ಮಡಕೆಗಳು, ಬಿದಿರಿನ ದಬ್ಬೆಗಳು, ಪ್ಲಾಸ್ಟಿಕ್ ಅಥವ ಪಿ.ವಿ.ಸಿ. ಕೊಳವೆ ಹಾಗು ತೆಂಗಿನ ಚಿಪ್ಪುಗಳನ್ನ ಪ್ರಸ್ತುತ ಬಳಸಲಾಗುತ್ತಿದೆ.


ಆಯತಾಕಾರದ ಪೆಟ್ಟಿಗೆ


ಮಣ್ಣಿನ ಮಡಕೆ



ಬಿದಿರಿನ ದಬ್ಬೆ

ಕೆಲವೊಮ್ಮೆ, ಕತ್ತರಿಸಿ ತೆಗೆಯಲು ಸಾಧ್ಯವಿರದ ಮರದ ಪೊಟರೆಗಳಲ್ಲಿ ಅಥವ ಗೋಡೆಗಳಲ್ಲಿ ಕುಟುಂಬಗಳು ಕಂಡುಬಂದಾಗ ಅವುಗಳನ್ನು ಪಡೆಯುವ (ಇಡಕ್ಷನ್ ಪದ್ಧತಿ), ವಿಧಾನವೊಂದನ್ನು (ಕುಮಾರ್ ಮತ್ತಿತರರು ತಮಿಳುನಾಡು) ತಿಳಿಸಿದ್ದಾರೆ. ಅದರ ಪ್ರಕಾರ ಕುಟುಂಬದ ಪ್ರವೇಶ ದ್ವಾರಕ್ಕೆ ಅಂಟಿದಂತೆ, ಮಡಕೆ ಅಥವ ಬಿದಿರಿನ ದಬ್ಬೆಯನ್ನು ಜೋಡಿಸಿ, ಜೇನುನೊಣಗಳು ಅದರ ಮುಖಾಂತರ ಓಡಾಡುವಂತೆ ಮಾಡಬೇಕು. ಕೆಲ ಸಮಯದ ನಂತರ ಅವು ಗೂಡನ್ನು ಈ ಹೊಸ ಭಾಗಕ್ಕೂ ವಿಸ್ತರಿಸುತ್ತವೆ. ಹಾಗೆ ವಿಸ್ತಾರಗೊಂಡ ಕುಟುಂಬವನ್ನು ಬೇಕಾದ ಸ್ಥಳಕ್ಕೆ ವರ್ಗಾಯಿಸಿಕೊಳ್ಳಬೇಕು.

ಮಡಕೆಗಳಿಗೆ, ಬಿದಿರಿನ ದಬ್ಬೆಗಳಿಗೆ, ಈ ಜೇನಿನ ಅಂಟನ್ನು ಸವರಿ ಪಾಲಾಗಿ ಬರುವ ಕುಟುಂಬಗಳನ್ನು ಆಕರ್ಷಿಸುವ ವಿಧಾನಗಳೂ ಸಹ ಜಾರಿಯಲ್ಲಿವೆ.

ಜೇನಿನ ಸಂಗ್ರಹವಾದಾಗ, ಪಟ್ಟಿಗೆಗಳನ್ನು ತೆರೆದು, ಜೇನು ಕಂಡುಬರುವ ಕಣಗಳನ್ನು ಕತ್ತರಿಸಿ ತೆಗೆದು, ಬಟ್ಟೆಯಲ್ಲಿ ಹಾಕಿ ಹಿಂಡುವುದರ ಮುಖಾಂತರ ಜೇನನ್ನು ಕೊಯ್ಲು ಮಾಡಲಾಗುತ್ತದೆ.

ಜೇನಿನ ಕಣಗಳನ್ನು ಗೂಡಿನಿಂದ ತೆಗೆಯುವಾಗ, ಮುತ್ತಿಕೊಳ್ಳುವ ಮುಜಂಟಿ ನೊಣಗಳಿಂದಾಗುವ ಕಿರಿಕಿರಿಯನ್ನು ತಪ್ಪಿಸಿಕೊಳ್ಳಲು, ಕುಟುಂಬವನ್ನು ತೆಗೆಯುವ ಮೊದಲು, ಪ್ಲಾಸ್ಟಿಕ್ ಬಾಟಲುಗಳಲ್ಲಿ ಅಥವ ಪಾಲಿಥೀನ್ ಚೀಲಗಳಲ್ಲಿ ನೊಣಗಳೆಲ್ಲವೂ ಬರುವಂತೆ ಮಾಡಿ, ಕೆಲಸ ಮುಗಿದ ನಂತರ ಪುನಃ ಅವುಗಳನ್ನ ಗೂಡಿಗೆ ಬಿಡುವ ಪದ್ಧತಿ ಪಾಲಿಸಲಾಗುತ್ತಿದೆ.

**ಜೇನು ತೆಗೆಯುವ ಮೊದಲು ಪಾಲಿಸಬೇಕಾದ ಅಂಶ**



ನೊಣಗಳನ್ನು ಹೊರ ಬರುವಂತೆ ಮಾಡುತಿರುವುದು





ಜೇನು ಕಂಡುಬರುವ ಕಣಗಳನ್ನು ಕತ್ತರಿಸಿ ತೆಗೆಯುತ್ತಿರುವುದು

**ಮುಜಂಟಿ ಜೇನಿನ ಬಗೆಗಿನ ಪ್ರಸ್ತುತ ಸಂಶೋಧನಾ ಆದ್ಯತೆಗಳು:**

• ಜೀವನ ಚಕ್ರದ ಬಗ್ಗೆ ಮಾಹಿತಿ: ಕೆಲಸಗಾರ ನೊಣ, ರಾಣಿ ಹಾಗು ಗಂಡು ನೊಣಗಳ ಕೆಲಸದ ಅವಧಿ, ಮೊಟ್ಟೆ ಮರಿಯಾಗಲು ತೆಗೆದುಕೊಳ್ಳುವ ಅವಧಿ ಮತ್ತು ಇವುಗಳ ಜೀವಿತಾವಧಿ ಇತ್ಯಾದಿಗಳ ಬಗ್ಗೆ ಸಂಪೂರ್ಣ ಮಾಹಿತಿ ಬೇಕಾಗಿದೆ.

• ವಿಶೇಷ ಪೆಟ್ಟಿಗೆಗಳು: ಜೇನುತುಪ್ಪ ತೆಗೆಯುವಾಗ ಮೊಟ್ಟೆಮರಿಗಳಿಗೆ ತೊಂದರೆಯಾಗದಂತೆ, ವೈಜ್ಞಾನಿಕ ವಿಧಾನದಲ್ಲಿ, ಜೇನಿನ ಕಣಗಳನ್ನು ನಾಶಪಡಿಸದೆ, ಜೇನನ್ನು ತೆಗೆಯಲು ಸಾಧ್ಯವಿರುವ ಪೆಟ್ಟಿಗೆಗಳನ್ನು ಅಭಿವೃದ್ಧಿ ಪಡಿಸುವುದು.

• ಪಾಲಾಗಿ ಬರುವ ಜೇನುಕುಟುಂಬಗಳನ್ನು ಸುಲಭವಾಗಿ ಪಡೆಯುವ ವಿಧಾನಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಪಾಲಾಗಿ ಬರುವ ಜೇನುಕುಟುಂಬಗಳನ್ನು ಆಕರ್ಷಿಸುವಂತಹ ಪೆಟ್ಟಿಗೆಗಳನ್ನು ಅಭಿವೃದ್ಧಿಪಡಿಸುವುದು.

ಈ ಎಲ್ಲಾ ಅಂಶಗಳ ಬಗ್ಗೆ, ಈಗಾಗಲೇ ಕೆಲ ಸಂಶೋಧನೆಗಳು ಬೇರೆ ರಾಷ್ಟ್ರಗಳಲ್ಲಿ ನಡೆದಿದ್ದು, ಭಾರತದಲ್ಲಿರುವ ಮುಳ್ಳುರಹಿತ ಜೇನುನೊಣ ಪ್ರಭೇದಗಳಲ್ಲಿ ಅಂತಹ ಸಂಶೋಧನೆ ನಡೆಯಬೇಕಾಗಿದೆ. ಅಲ್ಲದೆ ಹಲವಾರು ಬೆಳಗಳಲ್ಲಿ ಪರಾಗಸ್ಪರ್ಶಕ್ಕಾಗಿ ಈ ಜೇನುನೊಣ ಗಳನ್ನು ಬಳಸಿಕೊಳ್ಳುವ ಬಗ್ಗೆ ಅದರಲ್ಲೂ ಸ್ವಾಭಾವಿಕ ಪರಾಗಸ್ಪರ್ಶಕಗಳ ಸಂಖ್ಯೆ ಕಡಿಮೆ ಇರುವ ಪ್ರದೇಶಗಳಲ್ಲಿ ಇವುಗಳ ಬಳಕೆಯ ಬಗ್ಗೆ ಹಾಗೂ ಸುಲಭಸಾಧ್ಯವಾದ ನಿರ್ವಹಣಾಕ್ರಮಗಳು, ಜೇನಿನ ಔಷಧೀಯ ಗುಣಗಳ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳೂ ಸಹ ನಡೆಯಬೇಕಾಗಿದೆ.

**ಮೂಲ ಆದಾರ:**

1. ಅಮಾನೋ ಕೆ.( 2014) ಅಟೆಂಪ್ಟ್ಸ್ ಟು ಇಂಟ್ರಡ್ಯೂಸ್ ಸ್ಟಿಂಗ್ಲೆಸ್ ಬೀಸ್ ಪಾರ್ ದ ಪಾಲಿನೇಷನ್ ಆಪ್ ಕ್ರಾಪ್ಸ ಅಂಡರ್ ಗ್ರೀನ್ ಹೌಸ್ ಕಂಡೀಷನ್ಸ್ ಇನ್ ಜಪಾನ್, ಪುಡ್ ಅಂಡ್ ಪರ್ಟಿಲೈಸರ್ ಟೆಕ್ನಾಲಜಿ ಸೆಂಟರ್, [online] http://www.fftc.agnet.org/library/article/tb167.html (accessed on 6 March 2006).

2. ಅಮಾನೋ ಕೆ. ನೆಮೋಟೋ ಟಿ., ಹೆರಡ್ ಟಿ.ಎ.(2000) ವಾಟ್ ಆರ್ ಸ್ಟಿಂಗ್ಲೆಸ್ ಬೀಸ್, ಅಂಡ್ ವೈ ಅಂಡ್ ಹೌ ಟು ಯೂಸ್ ದೆಮ್ ಆಸ್ ಪಾಲಿನೇಟರ್ಸ್? – ಅ ರೀವಿವ್ಯ್, JARQ 34, 183–190. [online] http://ss.jircas.affrc.go.jp/engpage/jarq/34-3/amano/amano.htm (accessed on 6 March 2006).

3. ರೌಬಿಕ್ ಡಿಡಬ್ಲ್ಯೂ(2006) ಸ್ಟಿಂಗ್ಲೆಸ್ ಬೀಸ್ ನೆಸ್ಟಿಂಗ್ ಬಯೋಲಜಿ.

4. ವಿಲ್ಲೆ ಎ, ಮಿಕೆನೆರ್ ಸಿಡಿ (1973) "ಈ ನೆಸ್ಟ್ ಆರ್ಕಿಟೆಕ್ಚರ್ ಆಪ್ ಸ್ಟಿಂಗ್ಲೆಸ್ ಬೀಸ್ ವಿತ್ ಸ್ಪೆಷಲ್ ರೆಪರೆನ್ಸ್ ಟು ದೋಸ್ ಆಪ್ ಕೋಸ್ಟಾರಿಕ(ಹೈಮಿನಾಪ್ಟೆರ, ಎಪಿಡೆ)". ರೆವಿಸ್ಟ ದಿ ಬಯೊಲಜಿಯಾ ಟ್ರಾಪಿಕಲ್ 21(Suplemento 1): 1–278.

5. ಮಿಕೆನೆರ್ ಸಿಡಿ (2007) "ಈ ಬೀಸ್ ಆಪ್ ದ ವರ್ಲ್ಡ್[2nd Edition]. ಜಾನ್ಸ್ ಹಾಪ್ಕಿನ್ಸ್ ಯೂನಿವರ್ಸಿಟಿ ಪ್ರೆಸ್, ಬಾಲ್ಟಿಮೋರ್, xvi+[i]+953 pp., +20 pls.

6. ಮಿಕೆನೆರ್ ಸಿಡಿ(1990) ಕ್ಲಾಸಿಪಿಕೇಷನ್ ಆಪ್ ದ ಎಪಿಡೆ (ಹೈಮಿನಾಪ್ಟೆರ). ಯೂನಿವರ್ಸಿಟಿ ಆಪ್ ಕನ್ಸಾಸ್ ಸೈನ್ಸ್ ಬುಲ್ಲೆಟಿನ್ 54(4): 75–163.

7. ಕ್ರೇನ್ ಈ. (1992) ದ ಪಾಸ್ಟ್ ಅಂಡ್ ಪ್ರೆಸೆಂಟ್ ಸ್ಟೆಟಸ್ ಆಪ್ ಬೀ ಕೀಪಿಂಗ್ ವಿತ್ ಸ್ಟಿಂಗ್ಲೆಸ್ ಬೀಸ್, ಬೀ ವರ್ಲ್ಡ್ 73, 29–42.

# (ಇ) ಪಶುಸಂಗೋಪನೆ ಮತ್ತು ಮೀನುಗಾರಿಕೆ

## ಅಂದಿನ ಭಾರತದ ನಾಟಿಕೋಳಿಗಳೇ ಇಂದಿನ ವಿಶ್ವದ ಬಹುರೂಪಿ ಕೋಳಿತಳಿಗಳು

ಡಾ. ಸಿ.ಆರ್. ಗೋಪಿನಾಥ್[೧], ಡಾ. ಮಹದೇವಪ್ಪ. ಡಿ. ಗೌರಿ[೨], ಡಾ. ಎಚ್.ಎನ್.ನರಸಿಂಹಮೂರ್ತಿ[೩],ಮತ್ತು ಡಾ.ರಾಜಕುಮಾರ್ ನಾಗರಹಳ್ಳಿ[೪]

೧.ಸಹಾಯಕ ಪ್ರಾಧ್ಯಾಪಕರು ಹಾಗು ವ್ಯವಹರಿಸಬೇಕಾದ ಲೇಖಕರು, ಕುಕ್ಕುಟ ಶಾಸ್ತ್ರ ವಿಬಾಗ, ೨. ಸಹಾಯಕ ಪ್ರಾಧ್ಯಾಪಕರು, ಜಾನುವಾರು ಉತ್ಪಾದನೆ ಹಾಗು ನಿರ್ವಹಣೆ ವಿಬಾಗ, ೩. ಪ್ರಾಧ್ಯಾಪಕರು ಹಾಗು ಮುಖ್ಯಸ್ತರು, ಜಾನುವಾರು ಉತ್ಪಾದನೆ ಹಾಗು ನಿರ್ವಹಣೆ ವಿಬಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, ಕೆ.ವಿ.ಎ.ಎಫ್.ಎಸ್.ಯು (ಬಿ), ಕರ್ನಾಟಕ

೪. ಪಶುವೈಧ್ಯಾಧಿಕಾರಿ, ಪ.ಚಿ. ಮಂಟೂರ, ಮುದೋಳ (ತಾ), ಬಾಗಲಕೊಟ(ಜಿ),ಕರ್ನಾಟಕ. gopinathcr72@gmail.com

**ಪ್ರಬಂಧ ಸಾರ:** ಅಂದಿನ ಭಾರತದ ನಾಟಿಕೋಳಿಗಳೇ ಇಂದಿನ ವಿಶ್ವದ ಬಹುರೂಪಿ ಕೋಳಿತಳಿಗಳು ಎಂಬುದರಲ್ಲಿ ಯಾವುದೇ ಆಶ್ಚರ್ಯವಿಲ್ಲ ಏಕೆಂದರೆ, ಇಂದಿಗೂ ಸಹ ನಮ್ಮ ದೇಶದ ವಿವಿದ ಕಾಡುಗಳಲ್ಲಿ, ಕಾಡಿನಂಚಿನ ಊರುಗಳಲ್ಲಿ ಕೆಂಪು ಕಾಡುಕೋಳಿಗಳನ್ನು ಕಾಣುತ್ತೇವೆ ಆದರೆ ಪ್ರಪಂಚದ ಬೇರೆ ಎಲ್ಲಿಯೂ ಈ ಕಾಡುಕೋಳಿಗಳು ಕಾಣುವುದಿಲ್ಲ, ಕ್ರಫೋರ್ಡ್ ೧೯೯೦, ರ ಪ್ರಕಾರ, ಭಾರತ ದೇಶದ ವಿವಿದ ಕಾಡುಗಳಲ್ಲಿ ಕಾಣಸಿಗುವ ಕೆಂಪುಕಾಡುಕೋಳಿಯ ಬಣ್ಣವು ಪ್ರಪಂಚದ ಎಲ್ಲಾ ಕೋಳಿತಳಿಗಳಲ್ಲಿ ಕಾಣಿಸಿಕೊಳ್ಳಲು ಕಾರಣವೇನೆಂದರೆ, ವಿಶ್ವದ ವಿವಿದ ಬಾಗಗಳಿಗೆ ಈ ಕೆಂಪು ಕಾಡುಕೋಳಿಯು ಸುಮಾರು ೨೦೦೦ ವರ್ಷಗಳ ಹಿಂದೆಯೇ ಹರಡಿರುತ್ತದೆ ಎಂದು ವ್ಯಾಖ್ಯಾನಿಸುತ್ತಾರೆ. (ರಾಂಧವಾ, ಎಂ. ಎಸ್. ೧೯೮೨), ಪ್ರಕಾರ, ಈ ಕೆಂಪು ಕಾಡುಕೋಳಿಗಳು ಭಾರತದಿಂದ ಪ್ರಪಂಚದ ಬೇರೆ ಬೇರೆ ಕಡೆಗೆ ಹೊಲಸೆ ಹೋಗಲು ಮುಖ್ಯ ಕಾರಣ ನಮ್ಮ ದೇಶಕ್ಕೆ ವ್ಯಾಪಾರಕ್ಕೆಂದು ಬಂದ ಬ್ರಿಟೀಷರು, ಫ್ರೆಂಚರು, ಡಚ್ಚರು, ಪೋರ್ಚುಗೀಸರು, ಪಾದ್ರಿಗಳು ಹಾಗು ಇತರೆ ವ್ಯಾಪಾರಿ ವರ್ಗದವರು. ಈ ಕೆಂಪು ಕಾಡುಕೋಳಿಗಳು ಭಾರತದಿಂದ ಪ್ರಪಂಚದ ಬೇರೆ ಬೇರೆ ಕಡೆಗೆ ಸೇರಿದಮೇಲೆ, ಅಯಾ ಜಾಗದ ಜನರ ಆಸೆ ಆಕಾಂಕ್ಷೆಗಳಿಗನುಸಾರವಾಗಿ ತಳಿಅಭಿವೃದ್ದಿ ಹೊಂದಿ ತ್ವರಿತಗತಿಯಲ್ಲಿ ವಿವಿದ ಹೆಸರಿನಲ್ಲಿ ಕರೆಯಲ್ಪಟ್ಟವು, ಅವುಗಳೆಂದರೆ ಮಾಂಸದ ತಳಿ, ಮೊಟ್ಟೆ ತಳಿ, ಮಾಂಸ ಹಾಗು ಮೊಟ್ಟೆ ಎರಡಕ್ಕೂ ಉಪಯೋಗಿಸಬಹುದಾದ ತಳಿ, ಹೀಗೆ ಅಭಿವೃದ್ದಿ ಹೊಂದಿದ ತಳಿಗಳನ್ನು ಆಯಾ ದೇಶದ ವಿಜ್ಞಾನಿಗಳು ಹಾಗು ಜನರು ಇವು ನಮ್ಮವೇ ಕೋಳಿತಳಿಗಳೆಂದು ಪ್ರತಿಪಾದಿಸ ತೋಡಗಿದರು. ವಿಶ್ವದಾದ್ಯಂತ ಅಭಿವೃದ್ದಿ ಹೊಂದಿದ ಈ ಕೋಳಿತಳಿಗಳನ್ನು ಭೂಗೋಳ ಸ್ಥಳಕ್ಕನುಗುಣವಾಗಿ ಈ ಕೆಳಕಂಡ ಹೆಸರುಗಳಿಂದ ಕರೆಯುತ್ತೇವೆ, ಇಂಗ್ಲಿಷ್ ಕ್ಲಾಸ್–ಮಾಂಸದ ಕೋಳಿ ತಳಿಗಳು, ಮೆಡಿಟರೇನಿಯನ್ ಕ್ಲಾಸ್– ಮೊಟ್ಟೆ ಕೋಳಿ ತಳಿಗಳು, ಅಮೇರಿಕನ್ ಕ್ಲಾಸ್ – ಮಾಂಸ ಹಾಗು ಮೊಟ್ಟೆ ಎರಡಕ್ಕೂ ಉಪಯೋಗಿಸ ಬಹುದಾದ ಕೋಳಿತಳಿಗಳು ಮತ್ತು ಏಷ್ಯನ್ ಕ್ಲಾಸ್–ಭಾರತೀಯ ನಾಟೀತಳಿಗಳನ್ನೊಳಗೊಂಡ ಕೋಳಿತಳಿಗಳು. ತ್ವರಿತಗತಿಯ ತಳಿ ಅಭಿವೃದ್ದಿಯ ಪಲವಾಗಿ, ಭಾರತೀಯ ನಾಟಿಕೋಳಿಗಳನ್ನು ಹೋರತುಪಡಿಸಿ ಮೇಲೆ ತಿಳಿಸಿರುವ ಕೋಳಿವರ್ಗಗಳಲ್ಲಿ, ಮಾತ್ರುತ್ವ ಶಕ್ತಿ ಕಂಡು ಬರುವುದಿಲ್ಲ, ಅಂದರೆ ಈ ವಿದೇಶಿ ತಳಿಗಳಲ್ಲಿ ತಮ್ಮಿಂದ ತಾವೇ ಸಂತಾನೋತ್ಪತ್ತಿ ಮಾಡುವ ಶಕ್ತಿ ಹಾಗು ಮಾತ್ರುತ್ವ ಇರುವುದಿಲ್ಲ, ಮತ್ತು ಕೃತಕವಾಗಿ ಇವುಗಳ ಸಂತತಿಯನ್ನು ಅಭಿವೃದ್ದಿ ಗೋಳಿಸದೆ ಹೋದರೆ ಇವುಗಳು ನಶಿಸಿಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಆದರೆ ನಮ್ಮ ನಾಟಿ ಕೋಳಿಗಳಲ್ಲಿ ಈಗಲೂ ಸಹ ಮಾತ್ರುತ್ವ ಗುಣ ಬಹಳ ಗಟ್ಟಿಯಾಗಿದ್ದು, ಮೊಟ್ಟೆ ಮೇಲೆ ಕುಳಿತು, ಮರಿ ಮಾಡಿ, ಆ ಮರಿ ಗಳನ್ನು ರೆಕ್ಕೆ ಪುಕ್ಕ ಗಟ್ಟಿಯಾಗುವವರೆಗೆ ಬೆಳೆಸುವ ಸಾಮರ್ಥ್ಯ ಹೊಂದಿವೆ. ನಮ್ಮ ನಾಟಿ ಕೋಳಿಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ, ಮೈಸೂರು ಹಾಗು ಬೆಂಗಳೂರು ವಿಬಾಗದ ಹಲವು ಜಿಲ್ಲೆಗಳಲ್ಲಿ ನಶಿಸಿ ಹೋಗುತ್ತಿರುವ ನಾಟಿಕೋಳಿ ಸಂತತಿಯ ಸುಮಾರು ೩೦೦೦ ಸಾವಿರ ಮೊಟ್ಟೆ ಗಳನ್ನು ತಂದು ಮರಿಮಾಡಿಸಿ, ಅವುಗಳನ್ನ ೦–೫೨ ವಾರಗಳ ವರೆಗೆ ಸಾಕಿ ವಿವಿದ ಹಂತದಲ್ಲಿ ಪರೀಕ್ಷಿಸಲಾಯ್ತು, ಈ ಕೋಳಿಗಳು ವರ್ಷದಲ್ಲಿ ಸುಮಾರು ೬೦ ರಿಂದ ೭೦ ಮೊಟ್ಟೆ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ, ಗಾತ್ರದಲ್ಲಿ ವಯಸ್ಕ ಗಂಡು ಕೋಳಿ ೧.೯ ರಿಂದ ೨.೨ ಕೆ ಜಿ ವರೆಗೆ ಹಾಗು ವಯಸ್ಕ ಹೆಣ್ಣು ಕೋಳಿ ೧.೫ ರಿಂದ ೧.೬ ಕೆಜಿ ವರೆಗೆ ತೂಗಬಲ್ಲವು, ಜೊತೆಗೆ ಇವುಗಳಲ್ಲಿ ಮಾತ್ರು ಶಕ್ತಿ ಬಹಳ ಅದಿಕವಾಗಿದೆ ಎಂದು ಸಾಬೀತಾಗಿದೆ, ಇಂದಿಗೂ ನಮ್ಮ ಕುಕ್ಕುಟ ವಿಬಾಗದಲ್ಲಿ ಇವುಗಳ ೪ನೇ ಪೀಳಿಗೆಯನ್ನು ಸಂರಕ್ಷಿಸಿ ರೈತರಿಗೆ ವಿತರಿಸಲಾಗುತ್ತಿದೆ ಹಾಗು ಇತರೆ ಸಂಶೋದನೆ ಮುಂದುವರಿದಿದೆ.

**ಪೀಠಿಕೆ :** ಅಂದಿನ ಭಾರತದ ನಾಟಿಕೋಳಿಗಳೇ ಇಂದಿನ ವಿಶ್ವದ ಬಹುರೂಪಿ ಕೋಳಿತಳಿಗಳು ಎಂಬುದರಲ್ಲಿ ಯಾವುದೇ ಆಶ್ಚರ್ಯವಿಲ್ಲ ಏಕೆಂದರೆ, ಇಂದಿಗೂ ಸಹ ನಮ್ಮ ದೇಶದ ವಿವಿದ ಕಾಡುಗಳಲ್ಲಿ, ಕಾಡಿನಂಚಿನ ಊರುಗಳಲ್ಲಿ ಕೆಂಪು ಕಾಡುಕೋಳಿಗಳನ್ನು ಕಾಣುತ್ತೇವೆ ಆದರೆ ಪ್ರಪಂಚದ ಬೇರೆ ಎಲ್ಲಿಯೂ ಈ ಕಾಡುಕೋಳಿಗಳು ಕಾಣುವುದಿಲ್ಲಾ, ಆದ್ದರಿಂದ ನಮ್ಮ ತರ್ಕಕ್ಕೆ ಒಂದು ಅರ್ಥವಿದೆಯೆಂದೇ ಹೇಳಬಹುದು.

**ಕಾಡುಕೋಳಿಗಳ ಇತಿಹಾಸ:** ಇಂದಿಗೂ ಸಹ ನಮ್ಮ ದೇಶದ ವಿವಿದ ಕಾಡುಗಳಲ್ಲಿ, ಕಾಡಿನಂಚಿನ ಊರುಗಳಲ್ಲಿ ಕೆಂಪು ಕಾಡುಕೋಳಿಗಳನ್ನು ಕಾಣುತ್ತೇವೆ ಆದರೆ ಪ್ರಪಂಚದ ಬೇರೆ ಎಲ್ಲಿಯೂ ಈ ಕಾಡುಕೋಳಿಗಳು ಕಾಣುವುದಿಲ್ಲಾ, ಕ್ರಫೋರ್ಡ್ ೧೯೯೦, ರ ಪ್ರಕಾರ, ಭಾರತ ದೇಶದ ವಿವಿದ ಕಾಡುಗಳಲ್ಲಿ ಕಾಣಸಿಗುವ ಕೆಂಪುಕಾಡುಕೋಳಿಯ ಬಣ್ಣವು ಪ್ರಪಂಚದ ಎಲ್ಲಾ ಕೋಳಿತಳಿಗಳಲ್ಲಿ ಕಾಣಿಸಿಕೊಳ್ಳಲು ಕಾರಣವೇನೆಂದರೆ, ವಿಶ್ವದ ವಿವಿದ ಬಾಗಗಳಿಗೆ ಈ ಕೆಂಪುಕಾಡುಕೋಳಿಯು ಸುಮಾರು ೨೦೦೦ ವರ್ಷಗಳ ಹಿಂದೆಯೇ ಹರಡಿರುತ್ತದೆ ಎಂದು ವ್ಯಾಖ್ಯಾನಿಸುತ್ತಾರೆ. ಇವರ ವ್ಯಾಖ್ಯಾನವು ಸಹ ಸತ್ಯವೇ ಆಗಿರುತ್ತದೆ ಏಕೆಂದರೆ ಕಾಡುಕೋಳಿಗಳನ್ನು ಏಷ್ಯಾ ಖಂಡದ ಬಹುತೇಕ ಕಾಡುಗಳಲ್ಲಿ, ಮುಖ್ಯವಾಗಿ ಭಾರತದ ಅನೇಕ ಕಾಡುಗಳಲ್ಲಿ ಇಂದಿಗೂ ಕೆಂಪು

ಕಾಡುಕೋಳಿಗಳನ್ನು ಕಾಣುತ್ತೇವೆ.

ರಾಂಧವಾ, ಎಂ. ಎಸ್. ೧೯೮೨, ರ ಪ್ರಕಾರ, ಈ ಕೆಂಪು ಕಾಡುಕೋಳಿಗಳು ಭಾರತದಿಂದ ಪ್ರಪಂಚದ ಬೇರೆ ಬೇರೆ ಕಡೆಗೆ ಹೊಲಸೆ ಹೋಗಲು ಮುಖ್ಯಕಾರಣ ನಮ್ಮ ದೇಶಕ್ಕೆ ವ್ಯಾಪಾರಕ್ಕೆಂದು ಬಂದ ವ್ಯಾಪಾರಿಗಳಾದ ಬ್ರಿಟೀಷರು, ಫ್ರೆಂಚರು, ಡಚ್ಚರು, ಪೋರ್ಚುಗೀಸರು, ಪಾದ್ರಿಗಳು ಹಾಗು ಇತರೆ ವ್ಯಾಪಾರಿ ವರ್ಗದವರು.

ಈ ಕೆಂಪು ಕಾಡುಕೋಳಿಗಳು ಭಾರತದಿಂದ ಪ್ರಪಂಚದ ಬೇರೆ ಬೇರೆ ಕಡೆಗೆ ಸೇರಿದಮೇಲೆ, ಅಯಾ ಜಾಗದ ಜನರ ಆಸೆ ಆಕಾಂಕ್ಷೆಗಳಿಗನು ಸಾರವಾಗಿ ತಳಿಅಭಿವೃದ್ಧಿ ಹೊಂದಿ ತ್ವರಿತಗತಿಯಲ್ಲಿ ಬೇರೆ ಬೇರೆ ಹೆಸರಿನಲ್ಲಿ ಕರೆಯಲ್ಪಟ್ಟವು ಇದರ ಮುಂದುವರಿದ ಬಾಗವೇ, ಈ ಕೋಳಿಗಳನ್ನು ವಿಂಗಡಿಸಿ ಮಾಂಸದ ತಳಿ, ಮೊಟ್ಟೆ ತಳಿ, ಮಾಂಸ ಹಾಗು ಮೊಟ್ಟೆ ಎರಡಕ್ಕೂ ಊಪಯೋಗಿಸಬಹುದಾದ ತಳಿ ಎಂದು ಕರೆಯಲ್ಪಟ್ಟವು, ಹೀಗೆ ಅಭಿವೃದ್ಧಿ ಹೊಂದಿದ ತಳಿಗಳನ್ನು ಆಯಾ ದೇಶದ ವಿಜ್ಞಾನಿಗಳು ಹಾಗು ಜನರು ಇವು ನಮ್ಮವೇ ಕೋಳಿತಳಿಗಳೆಂದು ಪ್ರತಿಪಾದಿಸ ತೋಡಗಿದರು (ಮಹಾಪತ್ರ, ಎಸ್.ಸಿ ಅನ್ಡ್ ಪಾಂಡಾ.ಬಿ ೧೯೮೧).

ಇಂದು ವಿಶ್ವದಾದ್ಯಂತ ಅಭಿವೃದ್ಧಿ ಹೊಂದಿದ ಈ ಕೋಳಿತಳಿಗಳನ್ನು ಭೂಗೋಳ ಸ್ಥಳಕ್ಕನುಗುಣವಾಗಿ ಈ ಕೆಳಕಂಡ ಹೆಸರುಗಳಿಂದ ಕರೆಯುತ್ತೇವೆ ಹಾಗು ಅವುಗಳ ವಿವರ ಇಲ್ಲಿದೆ.

ಇಂಗ್ಲಿಷ್ ಕ್ಲಾಸ್--------- ಮಾಂಸದ ಕೋಳಿ ತಳಿಗಳು

ಮೆಡಿಟರೇನಿಯನ್ ಕ್ಲಾಸ್------- ಮೋಟ್ಟೆ ಕೋಳಿ ತಳಿಗಳು

ಅಮೇರಿಕನ್ ಕ್ಲಾಸ್------- ಮಾಂಸ ಹಾಗು ಮೊಟ್ಟೆ ಎರಡಕ್ಕೂ ಊಪಯೋಗಿಸಬಹುದಾದ ಕೋಳಿತಳಿಗಳು

ಏಷ್ಯನ್ ಕ್ಲಾಸ್------ಭಾರತೀಯ ನಾಟೀತಳಿಗಳನ್ನೊಳಗೊಂಡ ಕೋಳಿತಳಿಗಳು

**ಇಂಗ್ಲಿಷ್ ಕ್ಲಾಸ್**: ಇವು ಮಾಂಸದ ಕೋಳಿ ತಳಿಗಳು, ಅತಿಹೆಚ್ಚು ಮಾಂಸ ಉತ್ಪಾದನಾ ಸಾಮರ್ಥ್ಯ ಹೊಂದಿವೆ, ನಾವು ದಿನನಿತ್ಯ ಉಪಯೋಗಿಸುವ ಬ್ರಾಯ್ಲರ್ ಕೋಳಿಗಳನ್ನು ಈ ಕೊಳಿಗಳಿಂದ ಸಂವರ್ಧನೆ–ಸಂಕರಣ ಮಾಡಿ ಅಭಿವೃದ್ಧಿ ಪಡಿಸಲಾಗಿದೆ, ಈ ಸಂಕರಣ ಕ್ರಿಯಯಲ್ಲಿ ನಮ್ಮ ದೇಶದ ಹೆಮ್ಮೆಯ ಕೋಳಿತಳಿ ಅಸೀಲ್ ಪಾತ್ರ ಬಹಳಷ್ಟು ಇದೆ ಎಂಬುದು ವಿಜ್ಞಾನಿಗಳ ಅಭಿಪ್ರಾಯ, ಈ ಬ್ರಾಯ್ಲರ್ ಕೋಳಿಗಳು ಆರು ವಾರಗಳಲ್ಲಿ ಸುಮಾರು ಸರಾಸರಿ ೨.೦೦ ಕೆಜಿ ತೂಗುವ ಸಾಮರ್ಥ್ಯ ಹೊಂದಿವೆ ಹಾಗು ಬ್ರಾಯ್ಲ್ಲರ್‌ಕೋಳಿಗಳ ವಯಸ್ಕ ಮಾತೃ ಕೋಳಿಗಳು ಸರಾಸರಿ ೪.೦೦ ರಿಂದ ೫.೦೦ ಕೆಜಿ ತೂಗುತ್ತವೆ ಇದಕ್ಕೆ ಸಮಾನಾಂತರವಾಗಿ ನಮ್ಮ ವಯಸ್ಕ ಅಸೀಲ್‌ನಾಟಿಕೋಳಿ ಸಹ ತೂಗುತ್ತದೆ ಎಂಬುದೇ ನಾವು ತಿಳಿಯಬೇಕಾಗಿರುವ ಹಾಗು ವಿಶ್ವಕ್ಕೆ ಮನದಟ್ಟು ಮಾಡಬೇಕಾಗಿರುವ ಸಂಗತಿ ಎಂದರೆ ತಪ್ಪಾಗಲಾರದು.

ಬಹುಮುಖ್ಯವಾದ ಇಂಗ್ಲಿಷ್ ತಳಿಗಳ ಗುಣಗಳೆಂದರೆ, ಕಾಲಿನ ಬಾಗದಲ್ಲಿ ಪುಕ್ಕ ಹೊದಿರುವುದಿಲ್ಲ, ಕಿವಿಗಳು ಕೆಂಪು ಮಣಿಗಳನ್ನು ಹೊದಿರುತ್ತವೆ, ಏಕದಳ ಜುಟ್ಟನ್ನು ಕಾಣಬಹುದು, ಬಿಳಿಚರ್ಮ, ಹಾಗು ಹಳದಿ ಕಾಲಿನ ಬಣ್ಣ, ಜೊತೆಗೆ ಬೂದುಬಣ್ಣದ ಚಿಪ್ಪು ಹೊಂದಿರುವ ಮೊಟ್ಟೆ ಉತ್ಪಾದಿಸುತ್ತವೆ. ಈ ಗುಂಪಿನಲ್ಲಿನ ಮುಖ್ಯ ತಳಿಗಳೆಂದರೆ, ಕಾರ್ನಿಶ್, ಅಸ್ಟ್ರಾಲಾಪ್, ಡೊರ್ ಕಿಂಗ್, ಸುಸೆಕ್ಸ್ ಹಾಗು ಒರ್ಪಿಂಗ್‌ಟ್‌ನ್.

**ಮೆಡಿಟರೇನಿಯನ್ ಕ್ಲಾಸ್** : ಇವು ಮುಖ್ಯವಾಗಿ ಮೊಟ್ಟೆ ಉತ್ಪಾದಿಸುವ ತಳಿಗಳು, ಅತಿ ಹೆಚ್ಚು ಮೊಟ್ಟೆ ಉತ್ಪಾದನಾ ಸಾಮರ್ಥ್ಯ ಹೊಂದಿವೆ, ಒಂದು ವರ್ಷದಲ್ಲಿ ಸುಮಾರು ೩೦೦ ರಿಂದ ೩೨೦ ಮೊಟ್ಟೆ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ ಆದರೆ ಸಮತೋಲನ ಆಹಾರ ಕೋಡುವುದು ಅತ್ಯವಶ್ಯಕ, ಇವುಗಳಿಗೆ ಹೋಲಿಸಿದರೆ ನಮ್ಮ ನಾಟಿ ಕೋಳಿಗಳಾದ ನಿಕೋಬಾರಿ ಹಾಗು ಅಂಕಲೇಶ್ವರ್ ತಳಿಗಳು ಸಾಮಾನ್ಯ ಅಹಾರದಲ್ಲಿ ೧೨೦ ರಿಂದ ೧೫೦ ಮೋಟ್ಟೆ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ.

ಬಹುಮುಖ್ಯ ಮೆಡಿಟರೇನಿಯನ್ ತಳಿಗಳ ಗುಣ ವಿವರಗಳೆಂದರೆ, ಇವು ಸಹ ಕಾಲಿನ ಬಾಗದಲ್ಲಿ ಪುಕ್ಕ ಹೊದಿರುವುದಿಲ್ಲ, ಕಿವಿಗಳು ಬಿಳಿ ಮಣಿಗಳನ್ನು ಹೊದಿದ್ದು, ಬಿಳಿಬಣ್ಣದ ಚಿಪ್ಪು ಹೊಂದಿರುವ ಮೊಟ್ಟೆ ಉತ್ಪಾದಿಸುತ್ತವೆ, ಏಕದಳ ಜುಟ್ಟನ್ನು ಕಾಣಬಹುದರ ಜೊತೆಗೆ ಹಳದಿ ಚರ್ಮ ಹಾಗು ಹಳದಿ ಕಾಲಿನ ಬಣ್ಣ ಹೊಂದಿರುತ್ತವೆ. ಈ ಗುಂಪಿನಲ್ಲಿನ ಮುಖ್ಯ ತಳಿಗಳೆಂದರೆ, ವೈಟ್ ಲೆಗ್ ಹಾರ್ನ್, ಮೈನಾರ್ಕಾ, ಅನಕೋನಾ ಹಾಗು ಆನ್ಡಲೂಶೀಯನ್ ಬ್ಲೂ.

**ಆಮೇರಿಕನ್ ಕ್ಲಾಸ್:** ಇವು ಮುಖ್ಯವಾಗಿ ಮಾಂಸ ಹಾಗು ಮೊಟ್ಟೆ ಎರಡನ್ನೂ ಉತ್ಪಾದಿಸುವ ಬಹು ಉಪಯೋಗಿ ಕೋಳಿತಳಿಗಳು ವಿಶ್ವದ ಬೇರೆ ಬೇರೆ ಕೊಳಿಗಳಿಂದ ಸಂವರ್ಧನೆ–ಸಂಕರಣ ಮಾಡಿ ಅಭಿವೃದ್ಧಿ ಪಡಿಸಲಾಗಿದೆ, ಈ ಸಂಕರಣ ಕ್ರಿಯಯಲ್ಲಿ ನಮ್ಮ ದೇಶದ ಕೋಳಿತಳಿ ಅಸೀಲ್, ಗಾಗಸ್ ಮತ್ತು ನಿಕೋಬಾರಿತಳಿಗಳ ಪಾತ್ರ ಬಹಳಷ್ಟು ಇದೆ ಎಂಬುದರಲ್ಲಿ ಸಂದೇಹವಿಲ್ಲ. ಈ ಗುಂಪಿನಲ್ಲಿ ಬರುವ ವಯಸ್ಕ ಕೋಳಿಗಳ ತೂಕ ಸುಮಾರು ೩.೦೦ ರಿಂದ ೪.೦೦ ಕೆ ಜಿ ಇದ್ದು, ಸರಿಸುಮಾರು ೧೫೦ ರಿಂದ೨೦೦ ಮೊಟ್ಟೆಗಳನ್ನು ಒಂದು ವರ್ಷದಲ್ಲಿ ಸಮತೋಲನ ಅಹಾರ ಕೊಟ್ಟಾರೆ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ, ಈ ಹೊಲಿಕೆಗೆ ನಮ್ಮ ದೇಶದ ಕೋಳಿತಳಿ ಅಸೀಲ್ ದೇಹ ತೂಕದಲ್ಲಿ ಹಾಗು ಗಾಗಸ್ ಮತ್ತು ನಿಕೋಬಾರಿತಳಿಗಳು ಮೊಟ್ಟೆ ಉತ್ಪಾದನೆಯಲ್ಲಿ ಮಾಮೂಲಿ ಅಹಾರ ಸೇವಿಸಿ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ ಎಂಬುದೇ ಗಮನಾರ್ಹ ಸಂಗತಿ.

ಅಮೇರಿಕನ್ ತಳಿಗಳ ಗುಣಗಳೆಂದರೆ, ಇವು ಸಹ ಕಾಲಿನ ಬಾಗದಲ್ಲಿ ಪುಕ್ಕ ಹೊದಿರುವುದಿಲ್ಲ, ಕಿವಿಗಳು ಕೆಂಪು ಮಣಿಗಳನ್ನು ಹೊದಿದ್ದು, ಬೂದು ಬಣ್ಣದ ಚಿಪ್ಪು ಹೊಂದಿರುವ ಮೊಟ್ಟೆ ಉತ್ಪಾದಿಸುತ್ತವೆ, ಏಕದಳ ಜುಟ್ಟನ್ನು ಕಾಣವುದರ ಜೊತೆಗೆ ಹಳದಿ ಚರ್ಮ ಹಾಗು ಹಳದಿ ಕಾಲಿನ ಬಣ್ಣ ಹೊಂದಿರುತ್ತವೆ. ಈ ಗುಂಪಿನಲ್ಲಿನ ಮುಖ್ಯ ತಳಿಗಳೆಂದರೆ ಪ್ಲೈಮಾತ್ ರಾಕ್, ನ್ಯೂ ಹ್ಯಾಂಪ್ ಶೈರ್, ರೋಡ್ ಐಲ್‌ಂಡ್ ರೆಡ್, ವ್ಯಾನ್‌ಡ್‌ಟ್ ಹಾಗು ಜೆರ್ಸಿಬ್ಲಾಕ್‌ಗೈಂಟ್.

**ಏಷಿಯಾಟಿಕ್ ಕ್ಲಾಸ್** : ಇವು ಸಾಮಾನ್ಯ ಗಾತ್ರ ಹೊಂದಿದ್ದು ಮಾಂಸ ಹಾಗು ಮೊಟ್ಟೆ ಎರಡನ್ನೂ ಉತ್ಪಾದಿಸುವ ಬಹು ಉಪಯೋಗಿ ಕೋಳಿತಳಿಗಳು ಹಾಗು ಭಾರತೀಯ ನಾಟೀತಳಿಗಳನ್ನೊಳಗೊಂಡ ಕೋಳಿತಳಿಗಳು, ಮಾತ್ರ ಶಕ್ತಿ ಹೊಂದಿದ್ದು ಈ ತಳಿಗಳ ಬಹುಮುಖ್ಯವಾದ ಗಣಗಳೆಂದರೆ, ಇವು ಕಾಲಿನ ಬಾಗದಲ್ಲಿ ಪುಕ್ಕ ಹೊದಿರುತ್ತವೆ, ಕಿವಿಗಳು ಕೆಂಪು ಮಣಿಗಳನ್ನು ಹೊದಿರುತ್ತವೆ, ಏಕದಳ

ಜುಟ್ಟನ್ನು ಕಾಣಬಹುದು, ಹಳದಿ ಚರ್ಮ ಹಾಗು ಹಳದಿ ಕಾಲಿನ ಬಣ್ಣದ ಜೊತೆಗೆ ಬೂದುಬಣ್ಣದ ಚಿಪ್ಪು ಹೊಂದಿರುವ ಮೊಟ್ಟೆ ಉತ್ಪಾದಿಸುತ್ತವೆ. ಈ ಗುಂಪಿನಲ್ಲಿನ ಮುಖ್ಯ ತಳಿಗಳೆಂದರೆ, ಬ್ರಹ್ಮಾ, ಕೊಚಿನ್, ಅಸಿಲ್ ಹಾಗು ಕಡಕ್ ನಾಥ್ ಕೋಳಿಗಳು ಇವುಗಳ ವಯಸ್ಕ್ ಕೊಳಿಗಳ ತೂಕ ಸುಮಾರು ೨.೦೦ ರಿಂದ ೩.೦೦ ಕೆಜಿ, ಹಾಗು ೧೨೦ ರಿಂದ ೧೫೦ ಮೊಟ್ಟೆ ಉತ್ಪಾದನಾ ಸಾಮರ್ಥ್ಯ ಹೊಂದಿವೆ.

ಮೇಲೆ ವಿವರಿಸಿದ ತ್ವರಿತಗತಿಯ ತಳಿ ಅಭಿವೃದ್ದಿಯ ಪಲವಾಗಿ, ಭಾರತೀಯ ನಾಟಿಕೋಳಿಗಳನ್ನು ಹೋರತುಪಡಿಸಿ ಮೇಲೆ ತಿಳಿಸಿರುವ ಕೋಳಿವರ್ಗಗಳಲ್ಲಿ, ಮಾತ್ರುತ್ವ ಶಕ್ತಿ ಕಂಡು ಬರುವುದಿಲ್ಲ, ಇದರಿಂದ ಈ ಕೋಳಿಗಳಲ್ಲಿ ತಳಿ ಅಭಿವೃದ್ಧಿ ಮಾಡಲು ಮರಿಗಳನ್ನು ಪಡೆಯ ಬೇಕಾದರೆ ಅನಿವಾರ್ಯವಾಗಿ ಕೃತಕ ವಿದಾನದ ಇನ್‌ಕ್ಯುಬೇಟರ್ ಹಾಗು ಹ್ಯಾಚರ್‌ಗಳನ್ನು ಬಳಸುವುದು ಅನಿವಾರ್ಯ ವಾಯಿತು. ಅಂದರೆ ಈ ವಿದೇಶಿ ತಳಿಗಳಲ್ಲಿ ತಮ್ಮಿಂದ ತಾವೇ ಸಂತಾನೋತ್ಪತ್ತಿ ಮಾಡುವ ಶಕ್ತಿ ಹಾಗು ಮಾತ್ರುತ್ವ ಇರುವುದಿಲ್ಲವೆಂದೇ ಅರ್ಥ, ಮತ್ತು ಕೃತಕವಾಗಿ ಇವುಗಳ ಸಂತತಿಯನ್ನು ಅಭಿವೃದ್ಧಿ ಗೋಳಿಸದೆ ಹೋದರೆ ಇವುಗಳು ನಶಿಸಿಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ನಮ್ಮ ನಾಟಿ ಕೋಳಿಗಳಲ್ಲಿ ಈಗಲೂ ಸಹ ಮಾತ್ರುತ್ವ ಗುಣ ಬಹಳ ಗಟ್ಟಿಯಾಗಿದ್ದು, ಮೊಟ್ಟೆ ಮೇಲೆ ಕುಳಿತು, ಮರಿ ಮಾಡಿ, ಆ ಮರಿಗಳನ್ನು ರೆಕ್ಕೆ ಪುಕ್ಕ ಗಟ್ಟಿಯಾಗುವವರೆಗೆ ಬೆಳೆಸುವ ಸಾಮರ್ಥ್ಯ ಹೊಂದಿವೆ, ಈ ಮಹಾನ್ ಮಾತ್ರು ಶಕ್ತಿಯಿಂದಲೇ ಇಂದಿಗೂ ಸಹ ಬಿಳಿ ಬಣ್ಣದ ವಾಣಿಜ್ಯ ಕೋಳಿ ತಳಿಗಳ ಮದ್ಯೆ ನಾಟಿ ಕೋಳಿತಳಿಗಳು ಅಳಿಯದೇ ಉಳಿದಿವೆ. ನಮ್ಮ ನಾಟಿಕೋಳಿಗಳ ಉತ್ಪಾದನೆಗೆ ಅತ್ಯಾಧುನಿಕ ಮನೆಯ ಹಾಗು ಪರಿಕರಗಳ ಅವಶ್ಯಕತೆ ಇಲ್ಲದೆ, ಅತಿ ಕಡಿಮೆ ವೆಚ್ಚದಲ್ಲಿ ಸಾಕಬಹುದು, ವ್ಯವಸಾಯದ ಉಪ ಉತ್ಪನ್ನಗಳಿಂದ ಸಿಗುವ ಕಾಳುಗಳು, ಎರೆಹುಳು, ಕೀಟಗಳು ಇತ್ಯಾದಿಗಳನ್ನು ತಿಂದು, ಮನುಷ್ಯನಿಗೆ ಬೇಕಾದ ಉತ್ಕೃಷ್ಟ, ಸ್ವಾಭಾವಿಕ, ನೈಸರ್ಗಿಕ ಹಾಗು ಸಾವಯವ ಪ್ರಾಣಿಜನ್ಯ ಸಸಾರಜನಕವನ್ನು ಉತ್ಪಾದಿಸುವಲ್ಲಿ ಎರಡುಮಾತಿಲ್ಲ.

ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಮೈಸೂರು ಹಾಗು ಬೆಂಗಳೂರು ವಿಬಾಗದ ಹಲವು ಜಿಲ್ಲೆಗಳಲ್ಲಿ ನಶಿಸಿ ಹೋಗುತ್ತಿರುವ ನಾಟಿಕೋಳಿ ಸಂತತಿಯ ಸುಮಾರು ೩೦೦೦ ಸಾವಿರ ಮೊಟ್ಟೆಗಳನ್ನು ತಂದು ಮರಿಮಾಡಿಸಿ, ಅವುಗಳನ್ನ ೦–೫೨ ವಾರಗಳ ವರೆಗೆ ಸಾಕಿ ವಿವಿದ ಹಂತದಲ್ಲಿ ಪರೀಕ್ಷಿಸಲಾಯ್ತು, ಈ ಕೋಳಿಗಳು ವರ್ಷದಲ್ಲಿ ಸುಮಾರು ೬೦ ರಿಂದ ೭೦ ಮೊಟ್ಟೆ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ, ಗಾತ್ರದಲ್ಲಿ ವಯಸ್ಕ ಗಂಡು ಕೋಳಿ ೧.೯ ರಿಂದ ೨.೨ ಕೆ ಜಿ ವರೆಗೆ ಹಾಗು ವಯಸ್ಕ ಹೆಣ್ಣು ಕೋಳಿ ೧.೫ ರಿಂದ ೧.೬ ಕೆಜಿ ವರೆಗೆ ತೂಗಬಲ್ಲವು ಜೊತೆಗೆ ಇವುಗಳಲ್ಲಿ ಮಾತ್ರು ಶಕ್ತಿ ಬಹಳ ಅದಿಕವಾಗಿದೆ ಎಂದು ಸಾಬೀತಾಗಿದೆ, ಇಂದಿಗೂ ನಮ್ಮ ಕುಕ್ಕುಟ ವಿಬಾಗದಲ್ಲಿ ಇವುಗಳ ೪ನೇ ಪೀಳಿಗೆಯನ್ನು ಸಂರಕ್ಷಿಸಿ ರೈತರಿಗೆ ವಿತರಿಸಲಾಗುತ್ತಿದೆ ಹಾಗು ಇತರೆ ಸಂಶೋದನೆ ಮುಂದುವರಿದಿದೆ. ಆದ್ದರಿಂದ, ಇನ್ನಾದರು ಸರ್ಕಾರ ಹಾಗು ಸಂಸ್ಥೆಗಳು ಹೆಚ್ಚೆತ್ತು ನಮ್ಮದೇ ನಾಟಿಕೋಳಿಗಳ ಅಭಿವೃದ್ಧಿ, ಸಂರಕ್ಷಣೆ ಹಾಗು ಸಂವರ್ದನೆ ಮಾಡಿ ಪೇಟೆನ್ಸಿ ಪಡೆಯಲು ಯತ್ನಿಸಬೇಕು ಇಲ್ಲವಾದರೆ ಕಾಲಾಂತರದಲ್ಲಿ ಈಗ ನಮ್ಮಲ್ಲಿರುವ ಅನೇಕ ನಾಟಿಕೋಳಿಗಳನ್ನೂ ಸಹ ಬೇರೆ ಬೇರೆ ದೇಶದವರು ತಮ್ಮದೇ ಕೋಳಿತಳಿಗಳೆಂದು ಪ್ರತಿಪಾದಿಸಿ ಪೇಟೆನ್ಸಿ ಪಡೆದರೆ ಆಶ್ಚರ್ಯವಿಲ್ಲ.

**ಸಾರಾಂಶ ಮತ್ತು ನಿರ್ಧಾರ :** ನಮ್ಮ ನಾಟಿಕೋಳಿಗಳ ಉತ್ಪಾದನೆಗೆ ಅತ್ಯಾಧುನಿಕ ಮನೆಯ ಹಾಗು ಪರಿಕರಗಳ ಅವಶ್ಯಕತೆ ಇಲ್ಲದೆ, ಅತಿ ಕಡಿಮೆ ವೆಚ್ಚದಲ್ಲಿ ಸಾಕಬಹುದು, ವ್ಯವಸಾಯದ ಉಪ ಉತ್ಪನ್ನಗಳಿಂದ ಸಿಗುವ ಕಾಳುಗಳು, ಎರೆಹುಳು, ಕೀಟಗಳು ಇತ್ಯಾದಿಗಳನ್ನು ತಿಂದು ಮನುಷ್ಯನಿಗೆ ಬೇಕಾದ ಉತ್ಕೃಷ್ಟ, ಸ್ವಾಭಾವಿಕ, ನೈಸರ್ಗಿಕ ಹಾಗು ಸಾವಯವ ಪ್ರಾಣಿಜನ್ಯ ಸಸಾರಜನಕವನ್ನು ಉತ್ಪಾದಿಸುವಲ್ಲಿ ಎರಡುಮಾತಿಲ್ಲ. ಇನ್ನಾದರು ಸರ್ಕಾರ ಹಾಗು ಸಂಸ್ಥೆಗಳು ಹೆಚ್ಚೆತ್ತು ನಮ್ಮದೇ ನಾಟಿಕೋಳಿಗಳ ಅಭಿವೃದ್ಧಿ, ಸಂರಕ್ಷಣೆ ಹಾಗು ಸಂವರ್ದನೆ ಮಾಡಿ ಪೇಟೆನ್ಸಿ ಪಡೆಯಲು ಯತ್ನಿಸಬೇಕು ಇಲ್ಲವಾದರೆ ಕಾಲಾಂತರದಲ್ಲಿ ಈಗ ನಮ್ಮಲ್ಲಿರುವ ಅನೇಕ ನಾಟಿಕೋಳಿಗಳನ್ನೂ ಸಹ ಬೇರೆ ಬೇರೆ ದೇಶದವರು ತಮ್ಮದೇ ಕೋಳಿತಳಿಗಳೆಂದು ಪ್ರತಿಪಾದಿಸಿ ಪೇಟೆನ್ಸಿ ಪಡೆದರೆ ಆಶ್ಚರ್ಯವಿಲ್ಲ.

**ಆದಾರ ಗ್ರಂಥಗಳು**

೧. ಕ್ರಫೋರ್ಡ್.ಡಿ.೧೯೯೦. ಒರಿಜಿನ್ ಅನ್ಡ್ ಹಿಸ್ಟ್ರಿ ಆಫ್ ಪೌಲ್ಟ್ರಿ ಸ್ಪೀಶೀಸ್ ಆನ್ಡ್ ಪೌಲ್ಟ್ರಿಜೆನಿಟಿಕ್ ರಿಸೋರ್ಸ್.ಪು.ಸಂ ೧–೪೯ ಆಮ್ಸ್ಟರ್‌ಡಾಮ್, ಎಲ್ಸಿವಿಯರ್ ಸೈನ್ಸ್ ಪಬ್ಲಿಕೇಶ್ನ್.
೨. ಮಹಾಪತ್ರ, ಎಸ್.ಸಿ ಅನ್ಡ್ ಪಾಂಡಾ.ಬಿ ೧೯೮೧. ಪೌಲ್ಟ್ರಿ ಜೆನಿಟಿಕ್ ರಿಸೋರ್ಸ್ ಇನ್ ಇಡಿಡಿಯಾ, ಇಂಡಿಯನ್ ಪೌಲ್ಟ್ರಿ ಇಂಡಸ್ಟ್ರೀ ಇಯರ್ ಬುಕ್ ಪು.ಸೆ.೫೦–೫೮.
೩. ರಾಂಧವಾ, ಎಂ. ಎಸ್. ೧೯೮೨, ಭಾರತದ ಕೃಷಿ ಇತಿಹಾಸ ಸಂಚಿಕೆ ೦೧ ಐ ಸಿ ಎ ಆರ್ ನವದೆಹಲಿ.

## ನಾಟಿ ಕೋಳಿ ಮೊಟ್ಟೆ ; ಸ್ವಾಬಾವಿಕ, ಉತ್ಕ್ರೂಷ್ಟ ಹಾಗು ರಕ್ಷಣಾತ್ಮಕ ಆಹಾರ – ಒಂದು ವಿಶ್ಲೇಷಣೆ

ಡಾ. ಸಿ.ಆರ್. ಗೋಪಿನಾಥ್[೧], ಡಾ. ಮಹದೇವಪ್ಪ. ಡಿ. ಗೌರಿ[೨] ಡಾ. ಎಚ್.ಎನ್. ನರಸಿಂಹಮೂರ್ತಿ[೩], ಮತ್ತು ಡಾ.ರಾಜಕುಮಾರ ನಾಗರಹಳ್ಳಿ[೪]
೧.ಸಹಾಯಕ ಪ್ರಾಧ್ಯಾಪಕರು ಹಾಗು ವ್ಯವಹರಿಸಬೇಕಾದ ಲೇಖಕರು, ಕುಕ್ಕುಟ ಶಾಸ್ತ್ರ ವಿಭಾಗ, ೨. ಸಹಾಯಕ ಪ್ರಾಧ್ಯಾಪಕರು, ಜಾನುವಾರು ಉತ್ಪಾದನೆ ಹಾಗು ನಿರ್ವಹಣೆ ವಿಭಾಗ, ೩. ಪ್ರಾಧ್ಯಾಪಕರು ಹಾಗು ಮುಖ್ಯಸ್ತರು, ಜಾನುವಾರು ಉತ್ಪಾದನೆ ಹಾಗು ನಿರ್ವಹಣೆ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು–೨೪, ಕೆ.ವಿ.ಎ.ಎಫ್.ಎಸ್.ಯು (ಬಿ), ೪. ಪಶುವೈಧ್ಯಾಧಿಕಾರಿ, ಪ.ಚಿ. ಮಂಟೂರ, ಮುದೋಳ (ತಾ), ಬಾಗಲಕೊಟ(ಜಿ), gopinathcr72@gmail.com

**ಪ್ರಬಂದ ಸಾರ :** ಇಂದಿನ ಸ್ಪರ್ಧಾಯುಗಕ್ಕೆ ಅತಿ ಕಡಿಮೆ ಸಮಯದಲ್ಲಿ ತಯಾರಿಸಬಹುದಾದ ಖಾದ್ಯಗಳಲ್ಲಿ, ಮೊಟ್ಟೆ ಖಾದ್ಯಗಳಿಗೆ ಬಹು ಬೇಡಿಕೆ ಜೊತೆಗೆ ಪೌಷ್ಟಿಕತೆ ದೃಷ್ಟಿಯಿಂದ ಸಮಂಜಸವೂ ಹಾಗಿದೆ, ಇದರ ಜೊತೆಗೆ ಮಾರುಕಟ್ಟೆಯಲ್ಲಿ ಸಿಗುವ ಬೇರೆ ಉತ್ಪನ್ನಗಳಿಗಿಂತ ಉತ್ಕ್ರೂಷ್ಟತೆ ಹಾಗು ಪೌಷ್ಟಿಕತೆ ಕಾರಣದಿಂದ ಮೊಟ್ಟೆ ಬಹಳ ಎತ್ತರದ ಸ್ತಾನದಲ್ಲಿ ನಿಲ್ಲುತ್ತದೆ. ಮೊಟ್ಟೆಯಲ್ಲಿ ಮುಖ್ಯವಾಗಿ ಮೊಟ್ಟೆ ಚಿಪ್ಪು ಶೇ

ISSN 2249 - 5754 VIJNANA KANNADA (PRINT)


೦.೯೪, ಬಿಳಿಲೋಳೆಬಾಗ (ಆಲ್ಬುಮೆನ್/ ಸಸಾರಜನಕ) ಶೇ ೧೨.೧೪, ಹಳದಿ ಬಂಡಾರದ ಬಾಗ (ಯೋಕ್/ ಕೊಬ್ಬಿನ ಅಂಶ) ಶೇ ೧೧.೧೫, ಸಕ್ಕರೆ ಅಂಶ ಶೇ ೧.೨೦, ಮತ್ತು ನೀರು ಹಾಗು ಇತರೆ ಅಂಶಗಳು ಶೇ ೭೪.೫೭ ರಷ್ಟಿರುತ್ತವೆ. ಇನ್ನೂ ಆಳಕ್ಕೆ ಅದ್ಯಯನ ಮಾಡಿದರೆ ಮೊಟ್ಟೆಯಲ್ಲಿರುವ ಸ್ವಾಭಾವಿಕ ರಕ್ಷಣಾತ್ಮಕ ಗುಣಗಳು ಗೋಚರಿಸುತ್ತವೆ, ಮೊಟ್ಟೆಯು ಎರಡು ಪ್ರಮುಖ ರಕ್ಷಣಾತ್ಮಕ ಬಾಗಗಳನ್ನು ಹೊಂದಿದ್ದು, ಬೌತಿಕವಾಗಿ ಚಿಪ್ಪಿನ ಮತ್ತು ಚಿಪ್ಪಿನ ಒಳಗಿರುವ ತೆಳುವಾದ ಒಳ ಮತ್ತು ಹೊರ ಹೊದಿಕೆಗಳು ಹಾಗು ರಾಸಾಯನಿಕವಾಗಿ ಬಿಳಿಲೋಳೆ (ಆಲ್ಬು ಮೆನ್) ಅಂಶದಿಂದ. ಚಿಪ್ಪಿನ ಒಳಗಿರುವ ತೆಳುವಾದ ಒಳ ಮತ್ತು ಹೊರ ಹೊದಿಕೆ ನೂಲಿನ ಬಲೆಯಂತೆ ಇದ್ದು, ಸೂಕ್ಷ್ಮಜೀವಿಗಳನ್ನು ಬೇರ್ಪಡಿಸುವ ಕ್ರಿಯೆಯಲ್ಲಿ ತೋಡಗಿ, ಸೂಕ್ಷ್ಮಜೀವಿಗಳು ಮೊಟ್ಟೆಯ ಒಳಬಾಗ ಸೇರುವುದನ್ನು ಬೌತಿಕವಾಗಿ ನಿಯಂತ್ರಿಸುತ್ತವೆ. ಮೊಟ್ಟೆಯಲ್ಲಿನ ಬಿಳಿಲೋಳೆಬಾಗ (ಆಲ್ಬುಮೆನ್) ತನ್ನುಲ್ಲಿರುವ ವಿವಿದ ಪ್ರೊಟೀನ್ ಅಂಶಗಳಿಂದ ರಾಸಾಯನಿಕ ರಕ್ಷಣೆ ಒದಗಿಸಲು ಮುಂದಾಗುತ್ತದೆ ಮತ್ತು ಸೂಕ್ಷ್ಮಜೀವಿಗಳಿಗೆ ತಡೆಯೊಡ್ಡುತ್ತದೆ, ಈ ಮುಖಾಂತರ ಸೂಕ್ಷ್ಮಜೀವಿಗಳು ಮೊಟ್ಟೆಯ ಹಳದಿ ಬಾಗಕ್ಕೆ ಪ್ರವೇಶಿಸುವುದನ್ನು ತಡೆಯುತ್ತದೆ, ಏಕೆಂದರೆ ಸಜೀವ ಮೊಟ್ಟೆಗಳ ಹಳದಿ ಮೇಲ್ಬಾಗದ ವೆಟಲಿನ್ ಹೋದಿಕೆ ಮೇಲೆ ಬೆಳೆಯುತ್ತಿರುವ ಭ್ರೂಣವಿರುತ್ತದೆ, ಈ ಭ್ರೂಣವನ್ನು ರಕ್ಷಿಸಿ, ಪೋಶಿಸಿ ಬೆಳೆಸುವುದಕ್ಕೋಸ್ಕರವೇ ಮೊಟ್ಟೆಯಲ್ಲಿ ರಕ್ಷಣಾತ್ಮಕ ವ್ಯವಸ್ತೆಗಳನ್ನು ಪ್ರಕ್ರುತಿಯು ಒದಗಿಸಿರುತ್ತದೆ. ಈ ರಕ್ಷಣಾತ್ಮಕ ವ್ಯವಸ್ತೆಯಲ್ಲಿ ಬಿಳಿಲೋಳೆಬಾಗದಲ್ಲಿನ ಬಹಳಷ್ಟು ಪ್ರೋಟೀನ್‌ಗಳು ಕೆಲಸನಿರ್ವಹಿಸುತ್ತವೆ ಅವುಗಳೆಂದರೆ, ಒವಾಲ್ಬುಮಿನ್ ೫೪%, ಒವಾಟ್ರಾನ್ಸ್‌ಫೆರಿನ್ ೧೨%, ಒವಾಮ್ಯೂಕಾಯ್ಡ್ ೧೧%, ಒವಾಗ್ಲಾಬುಲಿನ್ ಜಿ೨ ೪%, ಒವಾಗ್ಲಾಬುಲಿನ್ ಜಿ೩ ೪%, ಒವಾಮ್ಯೂಸಿನ್ ೩.೫%, ಲೈಸೊಝ್ಯಮ್ ೩.೪%, ಒವಾಇನಿಬಿಟರ್೧.೫%, ಒವಾಗ್ಲೈಕಾಪ್ರೊಟೀನ್ ೧%, ಫ್ಲೇವಪ್ರೋಟೀನ್ ೦.೮%, ಒವಾಮ್ಯಾಕ್ರೋಗ್ಲಾಬುಲಿನ್ ೦.೫%, ಅವಿಡಿನ್ ೦.೫% ಮತ್ತು ಸಿಸ್‌ಟಾಟಿನ್ ೦.೦೫%.

ಮೇಲೆ ವಿವರಿಸಿದ ಎಲ್ಲಾ ಅಂಶಗಳೂ ಸಹ ನಾಟಿಮೊಟ್ಟೆ ಹಾಗು ವಾಣಿಜ್ಯ ಮೊಟ್ಟೆ ಎರಡರಲ್ಲೂ ಇರುವುದು ಸಹಜ, ಆದರೆ ಸಾಂಪ್ರದಾಯಕ ನಾಟಿಮೊಟ್ಟೆಯನ್ನು ಉತ್ಪಾದಿಸುವ ಕೋಳಿಗಳು ಸ್ವಾಬಾವಿಕವಾಗಿ ವಾಸಿಸುವ ನಾಟಿಕೋಳಿಗಳು, ನೈಸರ್ಗಿಕವಾಗಿ ಸಿಗುವ ಸಸ್ಯಗಳು, ಎರೆಹುಳು ಹಾಗು ಇತರೆ ಕೀಟಗಳನ್ನು ಹೆಚ್ಚಾಗಿ ಸೇವಿಸುವುದರಿಂದ ಇವುಗಳ ಮೊಟ್ಟೆಯಲ್ಲಿ ಮೇಲೆ ವಿವರಿಸಿದ ಎಲ್ಲಾ ರಕ್ಷಣಾತ್ಮಕ ಅಂಶಗಳು ಉತ್ಕ್ರಷ್ಟ ಪ್ರಮಾಣದಲ್ಲಿರುತ್ತವೆ. ಇನ್ನು ವಾಣಿಜ್ಯವಾಗಿ ಉತ್ಪಾದಿಸುವ ಕೋಳಿಗಳಿಗೆ ಹೊಲಿಸಿದರೆ ನಾಟಿಕೋಳಿಗಳು ಮಾನವ ಸಿದ್ದಪಡಿಸಿದ ಅಹಾರ ಸೇವಿಸುವುದು ಬಹಳ ವಿರಳ ಆದ್ದರಿಂದ ವಿವಿದ ಔಷದಿಗಳು ಹಾಗು ಇತರೆ ವ್ಯತರಿಕ್ತ ರಾಸಾಯನಿಕಗಳಿಂದ ಮುಕ್ತವಾಗಿರುತ್ತವೆ ಎಂದೇ ಹೇಳಬಹುದು. ಇಷ್ಟೆಲ್ಲಾ ರಕ್ಷಣಾತ್ಮಕ ಗುಣಗಳನ್ನು ಹೊಂದಿರುವ ಮೊಟ್ಟೆಯನ್ನು ಮಾನವ ಸೇವಿಸುವುದರಿಂದ ಅವನ ದೇಹಕ್ಕೆ ಪೌಶ್ಟಿಕಾಂಶಗಳು ಹಾಗು ಆರೋಗ್ಯದಾಯಕ ಅಂಶಗಳು ದೊರೆಯುವುದರಲ್ಲಿ ಯಾವುದೇ ಸಂಶಯವಿಲ್ಲ.

**ಪೀಠಿಕೆ :** ಇಂದು ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಬಿಳಿಕೋಳಿ ಮೊಟ್ಟೆಯನ್ನು ನೊಡುತ್ತೇವೆ, ಗಾತ್ರದಲ್ಲಿ ಇವಕ್ಕಿಂತ ಸ್ವಲ್ಪ ಚಿಕ್ಕದಾಗಿ, ತಿಳಿಕಂದು ಬಣ್ಣದ ನಾಟಿಕೋಳಿಮೊಟ್ಟೆಗೆ ಎಲ್ಲಿಲ್ಲದ ಬೇಡಿಕೆ, ಕಾರಣ, ಈ ನಾಟಿಕೋಳಿಗಳ ಸ್ವಾಬಾವಿಕ ಅಹಾರ ಸೇವನೆ, ಹಾಗು ಸಾಕುವ ಪದ್ದತಿ, ಇದರಿಂದಾಗಿ ನಾಟಿ ಮೊಟ್ಟೆಯಲ್ಲಿ ಸಾಕಷ್ಟು ಔಷದಿ ಗುಣ ಹಾಗು ಗ್ರಾಹಕರು ಮೆಚ್ಚುವಂತಹ ವಾಸನೆ ಜೊತೆಗೆ ಅತಿ ಬಂಗಾರದ ಹಳದಿ ಬಣ್ಣದ ಬಂಡಾರವನ್ನು ನಾಟಿಕೊಳಿಮೊಟ್ಟೆ ಹೊಂದಿದೆ. ಇಂದಿನ ಸ್ಪರ್ಧಾಯುಗಕ್ಕೆ ಅತಿ ಕಡಿಮೆ ಸಮಯದಲ್ಲಿ ತಯಾರಿಸಬಹುದಾದ ಖಾದ್ಯಗಳಲ್ಲಿ, ಮೊಟ್ಟೆ ಖಾದ್ಯಗಳಿಗೆ ಬಹು ಬೇಡಿಕೆ ಜೊತೆಗೆ ಪೌಷ್ಟಿಕತೆ ದ್ರುಷ್ಟಿಯಿಂದ ಸಮಂಜಸವೂ ಹಾಗಿದೆ, ಇದರ ಜೊತೆಗೆ ಮಾರುಕಟ್ಟೆ ಯಲ್ಲಿ ಸಿಗುವ ಬೇರೆ ಉತ್ಪನ್ನಗಳಿಗಿಂತ ಉತ್ಕ್ರೂಷ್ಟತೆ ಹಾಗು ಪೌಷ್ಟಿಕತೆ ಕಾರಣದಿಂದ ಮೊಟ್ಟೆ ಬಹಳ ಎತ್ತರದ ಸ್ತಾನದಲ್ಲಿ ನಿಲ್ಲಲು ಕಾರಣ ಇದರಲ್ಲಿರುವ ಧನಾತ್ಮಕ ಅಂಶಗಳು ಹಾಗು ಇವುಗಳು ಮನುಷ್ಯನ ಆರೊಗ್ಯಕ್ಕೆ ಎಲ್ಲಾ ರೀತಿಯಿಂದಲೂ ಪೂರಕವಾಗಿರುವುದು.

**ಮೊಟ್ಟೆಯಲ್ಲಿರುವ ಧನಾತ್ಮಕ ಅಂಶಗಳು:** ಮೇಲ್ನೋಟಕ್ಕೆ ನೋಡಿದಾಗ ನಾಟಿ ಮೊಟ್ಟೆ ಹಾಗು ವಾಣಿಜ್ಯ ಮೊಟ್ಟೆ ಎರಡರಲ್ಲೂ ಈ ಕೆಳಗಿನ ಅಂಶಗಳು ಕಂಡುಬರುತ್ತವೆ

ಮೊಟ್ಟೆ ಚಿಪ್ಪು (ಖನಿಜಾಂಶದ ಬಾಗ)--------ಶೇ ೦.೯೪
ಬಿಳಿಲೋಳೆಬಾಗ (ಆಲ್ಬುಮೆನ್/ ಸಸಾರಜನಕ)------ಶೇ ೧೨.೧೪
ಹಳದಿ ಬಂಡಾರದ ಬಾಗ (ಯೋಕ್/ ಕೊಬ್ಬಿನ ಅಂಶ)--ಶೇ ೧೧.೧೫
ಸಕ್ಕರೆ ಅಂಶ -------ಶೇ ೧.೨೦
ನೀರು ಹಾಗು ಇತರೆ ಅಂಶಗಳು ------ಶೇ ೭೪.೫೭

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳ ಜೊತೆಗೆ, ಇನ್ನೂ ಆಳಕ್ಕೆ ಅದ್ಯಯನ ಮಾಡಿದರೆ ಮೋಟ್ಟೆಯಲ್ಲಿರುವ ಸ್ವಾಭಾವಿಕ ರಕ್ಷಣಾತ್ಮಕ ಗುಣಗಳು ನಮಗೆ ಗೋಚರಿಸುತ್ತವೆ ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಯುವ ಪ್ರಯತ್ನ ಮಾಡೊಣ. ಮೊಟ್ಟೆಯು ಎರಡು ಪ್ರಮುಖ ರಕ್ಷಣಾತ್ಮಕ ಬಾಗಗಳನ್ನು ಹೊಂದಿದ್ದು, ಬೌತಿಕವಾಗಿ ಚಿಪ್ಪಿನ ಮತ್ತು ಚಿಪ್ಪಿನ ಒಳಗಿರುವ ತೆಳುವಾದ ಒಳ ಮತ್ತು ಹೊರ ಹೊದಿಕೆಗಳ ಮುಖಾಂತರ ಹಾಗು ರಾಸಾಯನಿಕವಾಗಿ ಬಿಳಿಲೋಳೆ (ಆಲ್ಬು ಮೆನ್) ಅಂಶದಿಂದ.

**ಚಿಪ್ಪು :** ಮೊಟ್ಟೆಯಚಿಪ್ಪಿನ ಮೇಲ್ಬಾಗದಲ್ಲಿ ಕಂಡುಬರುವ ಕ್ಯೂಟಿಕಲ್ ಎಂಬ ವಸ್ತುವು ನಿರು ಹಾಗು ಬ್ಯಾಕ್ಟೀರಿಯಾಗಳು ಮೊಟ್ಟೆಯ ಒಳಗೆ ಹೊಗುವುದನ್ನು ತಡೆಯುತ್ತದೆ ಆದರೆ ಇದು ಬಹುಬೇಗನೆ ನಾಶವಾಗುವ ಸಾದ್ಯತೆ ಹೆಚ್ಚು. ಕೊಳಿಮೊಟ್ಟೆಯು ಚಿಪ್ಪು ಕ್ಯಾಲ್ಸಿಯಂ ಕಾರ್ಬೋನೇಟ್‌ನಿಂದ ಮಾಡಲ್ಪಟ್ಟು, ಸುಮಾರು ೨೦೦೦-೨೦೦೦೦ ರದಷ್ಟು ಸೂಕ್ಷ್ಮ ರಂದ್ರ ಗಳನ್ನು ಹೊಂದಿದೆ ಇವುಗಳಲ್ಲಿ ೮೦೦೦ ರದಷ್ಟು ಸೂಕ್ಷ್ಮ ರಂದ್ರ ಗಳು ಮಾತ್ರ ಕ್ರಿಯಾಶೀಲವಾಗಿರುತ್ತವೆ ಹಾಗು ಇವುಗಳ ವ್ಯಾಸ ಸುಮಾರು ೯-೩೫ ಮೈಕ್ರಾನ್‌ಗಳು, ಈ ರಂದ್ರಗಳ ಮುಖಾಂತರ ಸೂಕ್ಷ್ಮಜೀವಿಗಳು ಸೇರುವ ಸಾದ್ಯತೆ ಹೆಚ್ಚು.

**ಚಿಪ್ಪಿನ ಒಳಗಿರುವ ತೆಳುವಾದ ಒಳ ಮತ್ತು ಹೊರ ಹೊದಿಕೆ:** ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದ ಈ ಚಿಪ್ಪಿನ ಒಳಗಿರುವ ತೆಳುವಾದ ಒಳ ಮತ್ತು ಹೊರ ಹೊದಿಕೆ ಯನ್ನು ನೋಡಿದರೆ ನೂಲಿನ ಬಲೆಯಂತೆ ಕಾಣುತ್ತದೆ ಹಾಗುಸೂಕ್ಷ್ಮಜೀವಿಗಳನ್ನು ಫಿಲ್ಟರ್/ ಬೇರ್ಪಡಿಸುವ ಕ್ರಿಯೆಯಲ್ಲಿತೋಡಗಿರುತ್ತದೆ, ಒಟ್ಟಾರೆ ಚಿಪ್ಪು ಹಾಗು ಚಿಪ್ಪಿನ ಒಳಗಿರುವ ತೆಳುವಾದ ಒಳ ಮತ್ತು ಹೊರ ಹೊದಿಕೆಗಳು ಸೂಕ್ಷ್ಮಜೀವಿಗಳು

ಮೊಟ್ಟೆಯ ಒಳಬಾಗ ಸೇರುವುದನ್ನು ಬೌತಿಕವಾಗಿ ಕಟ್ಟುನಿಟ್ಟಾಗಿ ನಿಯಂತ್ರಿಸುತ್ತವೆ (ಸ್ಟಾಡಲ್ ಮ್ಯಾನ್ ಮತ್ತು ಕಾಟರಿಲ್, ೧೯೭೭) ಈ ಮೇಲಿನ ತಡೆಗೋಡೆಯನ್ನು ಭೇದಿಸಿ ಸೂಕ್ಷ್ಮಜೀವಿಗಳು ಮೊಟ್ಟೆಯ ಒಳಗೆ ಪ್ರವೇಶಿಸಿದರೆ ನಂತರ ಮೊಟ್ಟೆಯಲ್ಲಿನ ಬಿಳಿ ಲೋಳೆಬಾಗ (ಆಲ್ಬುಮೆನ್) ತನ್ನುಲ್ಲಿರುವ ವಿವಿದ ಪ್ರೊಟೀನ್ ಅಂಶಗಳಿಂದ ರಾಸಾಯನಿಕ ರಕ್ಷಣೆ ಒದಗಿಸಲು ಮುಂದಾಗುತ್ತದೆ.

**ರಾಸಾಯನಿಕ ರಕ್ಷಣೆ :** ಮೊಟ್ಟೆಯಲ್ಲಿನ ಬಿಳಿಲೋಳೆಬಾಗ (ಆಲ್ಬುಮೆನ್) ತನ್ನುಲ್ಲಿರುವ ವಿವಿದ ಪ್ರೊಟೀನ್ ಅಂಶಗಳಿಂದ ರಾಸಾಯನಿಕ ರಕ್ಷಣೆ ಒದಗಿಸಲು ಮುಂದಾಗುತ್ತದೆ ಮತ್ತು ಸೂಕ್ಷ್ಮಜೀವಿಗಳಿಗೆ ತಡೆಗೋಡೆಯೊಡ್ಡುತ್ತದೆ, ಈ ಮುಖಾಂತರ ಸೂಕ್ಷ್ಮಜೀವಿಗಳು ಮೊಟ್ಟೆಯ ಹಳದಿ ಬಾಗಕ್ಕೆ ಪ್ರವೇಶಿಸುವುದನ್ನು ತಡೆಯುತ್ತದೆ ಏಕೆಂದರೆ ಸಜೀವ ಮೊಟ್ಟೆಗಳ ಹಳದಿ ಮೇಲ್ಬಾಗದ ಮೇಲ್ಪದರವಾದ ವೆಟಲಿನ್ ಹೋದಿಕೆ ಮೇಲೆ ಬೆಳೆಯುತ್ತಿರುವ ಭ್ರೂಣವಿರುತ್ತದೆ, ಈ ಭ್ರೂಣವನ್ನು ರಕ್ಷಿಸಿ, ಪೋಶಿಸಿ ಬೆಳೆಸುವುದಕ್ಕೋಸ್ಕರವೇ ಮೊಟ್ಟೆಯಲ್ಲಿ ಅಗಾದವಾದ ರಕ್ಷಣಾತ್ಮಕ ವ್ಯವಸ್ತೆಗಳನ್ನು ಪ್ರಕ್ರುತಿಯು ಒದಗಿಸಿರುತ್ತದೆ.

ಈ ರಕ್ಷಣಾತ್ಮಕ ವ್ಯವಸ್ತೆಯಲ್ಲಿ ಬಿಳಿಲೋಳೆಬಾಗ ಹಾಗು ಹಳದಿಬಾಗ ದಲ್ಲಿನ ಪ್ರೋಟೀನ್‌ಗಳು ಕಾರ್ಯನಿರ್ವಹಿಸುತ್ತವೆ, ಹಳದಿ ಬಾಗವು ಬಹು ಮುಖ್ಯವಾದ ಅಹಾರ ಕಣಜವಾಗಿದೆ ಇದರಲ್ಲಿ ಬಹುತೇಕ ಕೊಬ್ಬಿನ ಅಂಶವಿದ್ದು ಇದರ ಜೊತೆಗೆ ಕೊಬ್ಬಿನಲ್ಲಿ ಕರಗುವ ಅಮೈನೋ ಆಮ್ಲಗಳಿರುತ್ತವೆ (ಎ ಡಿ ಇ ಕೆ), ಮೊಟ್ಟೆಯಲ್ಲಿ ಮನುಷ್ಯನ ಬೆಳವಣಿಗೆಗೆ ಬೇಕಾಗುವ ಎಲ್ಲಾ ವಿಟಮಿನ್‌ಗಳಿರುತ್ತವೆ ವಿಟಮಿನ್ 'ಸಿ' ಹೊರತು ಪಡಿಸಿ, ಏಕೆಂದರೆ, ವಿಟಮಿನ್ 'ಸಿ' ಯನ್ನು ಎಲ್ಲಾ ಪಕ್ಷಿಗಳು ಹಾಗು ಮೊಟ್ಟೆಯಲ್ಲಿ ಬೆಳೆಯುತ್ತಿರುವ ಭ್ರೂಣವು ತಮ್ಮ ಕಿಡ್ನೀ ಸಹಾಯದಿಂದ ಉತ್ಪಾದಿಸಬಲ್ಲವು.

ರಕ್ಷಣಾತ್ಮಕ ವ್ಯವಸ್ತೆಯಲ್ಲಿ ಬಿಳಿಲೋಳೆಬಾಗದಲ್ಲಿನ ಬಹಳಷ್ಟು ವಿದದ ಪ್ರೋಟೀನ್‌ಗಳು ಕೆಲಸನಿರ್ವಹಿಸುತ್ತವೆ ಅವುಗಳೆಂದರೆ, ಒವಾಲ್ಬುಮಿನ್ ೫೪%, ಒವಾಟ್ರಾನ್ಸ್‌ಫೆರಿನ್ ೧೨%, ಒವಾಮ್ಯೂಕಾಯ್ಡ್ ೧೧%, ಒವಾಗ್ಲಾಬುಲಿನ್ ಜಿ೨ ೪%, ಒವಾಗ್ಲಾಬುಲಿನ್ ಜಿ೩ ೪%, ಒವಾಮ್ಯೂಸಿನ್ ೩.೫%, ಲೈಸೊಜ್ಮ್ಯಮ್ ೩.೪%, ಒವಾಇನಿ ಬಿಟರ್೧.೫%, ಒವಾಗ್ಲೈಕಾಪ್ರೊಟೀನ್ ೧%, ಫ್ಲೇವಪ್ರೋಟೀನ್ ೦.೮%, ಒವಾಮ್ಯಾಕ್ರೋಗ್ಲಾಬುಲಿನ್ ೦.೫%, ಅವಿಡಿನ್ ೦.೫% ಮತ್ತು ಸಿಸ್‌ಟಾಟಿನ್ ೦.೦೫%.

**ರಕ್ಷಣಾತ್ಮಕ ವ್ಯವಸ್ತೆಯಲ್ಲಿ ಬಾಗವಹಿಸುವ ಬಿಳಿಲೋಳೆಬಾಗದಲ್ಲಿನ ಪ್ರೋಟೀನ್‌ಗಳ ವಿವವರಣೆ**

**ಒವಾಲ್ಬುಮಿನ್:** ಸುಮಾರು ಶೇ ೫೪ ರಷ್ಟಿದ್ದು ಸಂಪದ್ಭರಿತ ಆಹಾರವಾಗಿ ಕಾರ್ಯನಿರ್ವಹಿಸುವ ಜೊತೆಗೆ ಸೂಕ್ಷ್ಮಜೀವಿಗಳನ್ನು ಕೊಲ್ಲುವ ಹಾಗು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಕೆಲಸಮಾಡುತ್ತದೆ.

**ಒವಾಟ್ರಾನ್ಸ್‌ಫೆರಿನ್:** ಶೇ ೧೨ ರಷ್ಟಿದ್ದು ಇದನ್ನು ಕೋನಾಲ್ಬುಮಿನ್ ಎಂದೂ ಕರೆಯಲಾಗುತ್ತದೆ, ಖನಿಜಗಳಾದ ಕಬ್ಬಿಣ ಹಾಗು ತಾಮ್ರಗಳಿಗೆ ಅಂಟಿಕೊಂಡು ಬ್ಯಾಕ್ಟೀರಿಯಾಗಳಿಂದ ಮೊಟ್ಟೆಯ ಹಳದಿಬಾಗಕ್ಕೆ ಆಗಬಹುದಾದ ಅನಾಹುತವನ್ನು ತಡೆಯುತ್ತದೆ.

**ಒವಾಮ್ಯೂಕಾಯ್ಡ್:** ಇದು ಮೊಟ್ಟೆಯ ಸಸಾರಜನಕ ಬಾಗದ ಶೇ ೧೧ ರಷ್ಟಿದ್ದು ವಿಜ್ಞಾನಿಗಳ ಪ್ರಕಾರ ಇದು ಟ್ರಿಪ್ಸಿನ್ ನಿಯಂತ್ರಣ ಗುಣಹೊಂದಿದ್ದು ಮೊಟ್ಟೆಯಬಿಳಿಬಾಗವನ್ನು ನಾಶ ಮಾಡುವ ಎನ್‌ಜೈಮ್‌ಗಳನ್ನು ತಡೆಯುವ ಶಕ್ತಿಹೊಂದಿದೆ.

**ಒವಾಗ್ಲಾಬುಲಿನ್‌ಗಳು:** ಇವು ಒವಾಗ್ಲಾಬುಲಿನ್ ಜಿ೨ ಮತ್ತು ಒವಾಗ್ಲಾಬುಲಿನ್ ಜಿ೩ ಎಂಬ ಎರಡು ವಿದದಲ್ಲಿದ್ದು ಒಟ್ಟಿಗೆ ಸುಮಾರು ಶೇ ೭–೯ ಬಾಗ ಮೊಟ್ಟೆಯ ಬಿಳಿ ಪ್ರೋಟೀನ್‌ನ್ನು ಒಳಗೊಂಡಿರುತ್ತವೆ ಈ ಪ್ರೊಟೀನ್‌ಗಳು ಮುಖ್ಯವಾಗಿ ಬಿಳಿಲೋಳೆಬಾಗದ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ರೊಗನಿರೋದಕ ಶಕ್ತಿಯುನ್ನು ಹಿಮ್ಮಡಿಗೊಳಿಸುತ್ತವೆ.

**ಲೈಸೊಜ್ಮ್ಯಮ್‌ಗಳು:** ಸುಮಾರು ಶೇ ೩.೪ ರಷ್ಟಿರುವ ಇವು ಸೂಕ್ಷ್ಮಜೀವಿಗಳನ್ನು ಕೊಲ್ಲಲು ಅನುವಾಗುವ ಮುಖಾಂತರ ಬ್ಯಾಕ್ಟೀರಿಯಾದಿಂದ ಮೊಟ್ಟೆಯ ಗುಣಮಟ್ಟ ಕುಸಿಯುವುದನ್ನು ತಡೆಗಟ್ಟುತ್ತವೆ, ವಾಣಿಜ್ಯ ಉದ್ದೇಶಕ್ಕಾಗಿಯೂ ಈ ಲೈಝೋಜೈಮ್‌ಗಳನ್ನು ದೊಡ್ಡಮಟ್ಟದಲ್ಲಿ ಉಪಯೋಗಿಸುತ್ತಾರೆ.

**ಒವಮ್ಯೂಸಿನ್:** ಇದು ಜೆಲ್ಲಿ ದ್ರವ ರೂಪದ ಪ್ರೋಟೀನ್ ಆಗಿದ್ದು, ಶೇ ೩.೫ ರ ಪ್ರಮಾಣದಲ್ಲಿ ಕಂಡುಬರುತ್ತದೆ, ಇದರಲ್ಲಿ ಕರಗುವ ಹಾಗು ಕರಗದಿರುವ ಎರಡು ಅಂಶಗಳಿದ್ದು, ಕರಗುವ ಅಂಶವು ಹೊರಬಾಗದ ಲೋಳೆಬಾಗದಲ್ಲಿರುತ್ತದೆ ಮತ್ತು ಕರಗದಿರುವ ಅಂಶವು ಮದ್ಯ ಬಿಳಿಲೋಳೆ ಬಾಗದಲ್ಲಿದ್ದು ಮೊಟ್ಟೆಗಳನ್ನು ಬಹಳಷ್ಟು ದಿವಸ ದಾಸ್ತಾನು ಮಾಡಿದಾಗ ಬಿಳಿಲೋಳೆಬಾಗಗಳು ಕರಗಿ ನೀರಾಗುವುದನ್ನು ತಡೆದು ಮೊಟ್ಟೆಯ ಗುಣಮಟ್ಟ ಹಾಳಾಗುವುದನ್ನು ಈ ಒವಾಮ್ಯೂಸಿನ್ ನಿಯಂತ್ರಿಸುತ್ತದೆ.

**ಅವಿಡಿನ್ :** ಇದು ಶೇ ೦.೫ ರ ಪ್ರಮಾಣದಲ್ಲಿ ಇದ್ದು ಬಯೋಟಿನ್ ವಿಟಮಿನ್ ಜೊತೆಗೆ ಬೆಸೆದುಕೊಂಡು ದೇಹಕ್ಕೆ ಬಯೋಟಿನ್ ಕೊರತೆ ಉಂಟುಮಾಡುತ್ತದೆ ಆದ್ದರಿಂದ ಮೊಟ್ಟೆಯನ್ನು ಬೇಯಿಸಿ ತಿಂದಾಗ ಅವಿಡಿನ್ ನಾಶವಾಗುತ್ತದೆ.

**ಇತರೆ ಪ್ರೋಟೀನ್‌ಗಳು:** ಮೇಲೆ ವಿವರಿಸಿದ ಪ್ರೊಟೀನ್‌ಗಳ ಜೊತೆಗೆ, ಒವೊಮ್ಯಾಕ್ರೋಗ್ಲಾಬುಲಿನ್, ಒವೋಗ್ಲೈಕೊಪ್ರೊಟೀನ್, ಫ್ಲೇವೋ ಪ್ರೊಟೀನ್, ಒವೋಹಿನಿಬಿಟರ್ ಹಾಗು ಸಿಸ್‌ಟೇಟಿನ್ ಪ್ರೊಟೀನ್‌ಗಳು ಅಲ್ಪ ಪ್ರಾಮಾಣದಲ್ಲಿದ್ದು ಒಂದಲ್ಲಾ ಒಂದು ರೀತಿಯ ರಕ್ಷಣಾತ್ಮಕ ಕ್ರಿಯಯಲ್ಲಿ ಬಾಗವಹಿಸಿ ಮೊಟ್ಟೆಯ ಗುಣಮಟ್ಟವು ಹಾಳಾಗದಂತೆ ಎಚ್ಚರವಹಿಸುತ್ತವೆ ಇದರ ಜೊತೆಗೆ ಮನುಷ್ಯರು ಸೇವಿಸಿದಾಗ ಈ ಅಂಶಗಳು ದೇಹದ ಬೆಳವಣಿಗೆಗೆ ಹಾಗು ರೊಗನಿರೋದಕ ಶಕ್ತಿ ಹೆಚ್ಚಾಗಲು ಸಹಕಾರಿಯಾಗುತ್ತವೆ.

**ಸಾರಾಂಶ ಮತ್ತು ನಿರ್ಣಯ:** ಆದ್ದರಿಂದಲೇ, ಐ ಸಿ ಎಂ ಆರ್ ಸಹ ಒಂದು ವರ್ಷಕ್ಕೆ ಒಬ್ಬ ವಯಸ್ಕ ಸರಾಸರಿ ೧೮೦ ಮೊಟ್ಟೆ ಸೇವಿಸಿದರೆ ಆರೋಗ್ಯವಾಗಿರಬಹುದೆಂದು ಪ್ರದಿಪಾದಿಸಿದೆ, ಇಂದಿನ ನಮ್ಮ ದೇಶದ ಸರಾಸರಿ ಮೊಟ್ಟೆ ಸೇವನೆ ಸುಮಾರು ೫೮ ಆಗಿದೆ ಇನ್ನೂ ಬಹಳಷ್ಟು ಹೆಚ್ಚಿಸುವ ಅಗತ್ಯತೆ ಇದೆ ಎಂದರೆ ತಪ್ಪಾಗಲಾರದು.

ಇನ್ನು ಕೊನೆಯದಾಗಿ ಹೇಳಬೇಕೆಂದರೆ, ಮೇಲೆ ವಿವರಿಸಿದ ಎಲ್ಲಾ ಅಂಶಗಳೂ ಸಹ ನಾಟಿಮೊಟ್ಟೆ ಹಾಗು ವಾಣಿಜ್ಯ ಮೊಟ್ಟೆ ಎರಡರಲ್ಲೂ ಇರುವುದು ಸಹಜ, ಆದರೆ ಸಾಂಪ್ರದಾಯಕ ನಾಟಿಮೊಟ್ಟೆಯನ್ನು ಉತ್ಪಾದಿಸುವ ಕೋಳಿಗಳು ನೈಸರ್ಗಿಕವಾಗಿ ವಾಸಿಸುವ ನಾಟಿಕೋಳಿ

ಗಳು, ಇವನ್ನು ಸಾವಯವ ಕೋಳಿಗಳು (ನಾರಾಯಣ್,೨೦೦೫) ಎಂದರೂ ಯಾವುದೇ ಅತಿಶಯವಿಲ್ಲ, ಈ ಕೋಳಿಗಳು ನೈಸರ್ಗಿಕವಾಗಿ ಸಿಗುವ ಸಸ್ಯಗಳು, ಎರೆಹುಳು, ಕೀಟಗಳು ಹಾಗು ಇತರೆ ವಸ್ತುಗಳನ್ನು ಹೆಚ್ಚಾಗಿ ಸೇವಿಸುವುದರಿಂದ ಇವುಗಳ ಮೊಟ್ಟೆಯಲ್ಲಿ ಮೇಲೆ ವಿವರಿಸಿದ ಎಲ್ಲಾ ರಕ್ಷಣಾತ್ಮಕ ಅಂಶಗಳು ಉತ್ಕ್ರಷ್ಟ ಪ್ರಮಾಣದಲ್ಲಿರುತ್ತವೆ ಹಾಗು ಇದರ ಬಗ್ಗೆ ಇನ್ನೂ ಹೆಚ್ಚಿನ ಸಂಶೊದನೆಯ ಅವಶ್ಯಕತೆ ಇದೆ. ಇನ್ನು ವಾಣಿಜ್ಯವಾಗಿ ಉತ್ಪಾದಿಸುವ ಕೋಳಿಗಳಿಗೆ ಹೊಲಿಸಿದರೆ ನಾಟಿಕೋಳಿಗಳು ಮಾನವ ಸಿದ್ದಪಡಿಸಿದ ಅಹಾರ ಸೇವಿಸುವುದು ಬಹಳ ವಿರಳ ಆದ್ದರಿಂದ ವಿವಿದ ಔಷದಿಗಳು ಹಾಗು ಇತರೆ ವ್ಯತರಿಕ್ತ ರಾಸಾಯನಿಕಗಳಿಂದ ಮುಕ್ತವಾಗಿರುತ್ತವೆ ಎಂದೇ ಹೇಳಬಹುದು.

| **ಹೋಲಿಕೆ ಕೋಷ್ಟಕ** | | |
|---|---|---|
| **ಗುಣಗಳು** | **ನಾಟಿ ಕೋಳಿ ಮೊಟ್ಟೆ** | **ವಾಣಿಜ್ಯ ಕೋಳಿ ಮೊಟ್ಟೆ** |
| ಬಣ್ಣ | ತಿಳಿಕಂದು | ಬಿಳಿ / ಕಂದು |
| ಸಾವಯವ ಅಂಶ | ಹೆಚ್ಚು | ಕಡಿಮೆ |
| ಗಾತ್ರ | ೩೮–೪೨ ಗ್ರಾ. | ೫೦–೬೦ಗ್ರಾ. |
| ಚಿಪ್ಪಿನ ಗಟ್ಟಿತನ | ಹೆಚ್ಚು | ಕಡಿಮೆ |
| ಬಂಡಾರದ ಬಣ್ಣ | ಹೆಚ್ಚು ಹಳದಿ ಹಾಗು ಆಕರ್ಷಕ | ಕಡಿಮೆ ಹಳದಿ ಹಾಗು ಆಕರ್ಷಕ |
| ನೈಸರ್ಗಿಕ ಅಂಶಗಳು | ಹೆಚ್ಚು ಇರುವುದರಿಂದ ಮನುಷ್ಯನ ಆರೊಗ್ಯಕ್ಕೆ ಹೆಚ್ಚು ಪೂರಕ | ವಾಣಿಜ್ಯ ಆಹಾರ ಹೆಚ್ಚು ಸೇವಿಸುವುದರಿಂದ ಕೀಟನಾಶಕಗಳು ಹಾಗು ಇತರೆ ಔಷದಿಗಳ ಸೇರ್ಪಡೆ ಹೆಚ್ಚು ಆದ್ದರಿಂದ ಮನುಷ್ಯನ ಆರೊಗ್ಯಕ್ಕೆ ಕಡಿಮೆ ಪೂರಕ. |

ಇಷ್ಟೆಲ್ಲಾ ರಕ್ಷಣಾತ್ಮಕ ಗುಣಗಳನ್ನು ಹೊಂದಿರುವ ಮೊಟ್ಟೆಯನ್ನು ಮಾನವ ಸೇವಿಸುವುದರಿಂದ ಅವನ ದೇಹಕ್ಕೆ ಪೌಷ್ಟಿಕಾಂಶಗಳು ಹಾಗು ಆರೋಗ್ಯದಾಯಕ ಅಂಶಗಳು ದೊರೆಯುವುದರಲ್ಲಿ ಯಾವುದೇ ಸಂಶಯವಿಲ್ಲ ಜೊತೆಗೆ, ನಾಟಿ ಕೋಳಿಗಳ ಉತ್ಪಾದನಾ ಸಾಮರ್ಥ್ಯ, ಆರೋಗ್ಯದಾಯಕ ಹಾಗು ವಿವಿದ ಔಷದಿ ಗುಣಗಳ ಬಗ್ಗೆ ಸಂಶೊದನೆ ಅತ್ಯಗತ್ಯ ಮತ್ತು ಕುಟುಂಬ ನಾಟಿಕೋಳಿಸಾಕಣೆ ವಿಸ್ತರಣೆಯಿಂದ ಅತಿ ಹೆಚ್ಚು ನಾಟಿಕೋಳಿ ಮೊಟ್ಟೆ ಉತ್ಪಾದನೆಯ ಸಾದ್ಯತೆ ಹೆಚ್ಚು.

**ಆದಾರ ಗ್ರಂಥಗಳು**

೧ ಸ್ಟಾಡ್ಯಲ್ ಮ್ಯಾನ್ ಡಬ್ಲ್ಯು. ಜೆ ಮತ್ತು ಕಾಟೆರಿಲ್ ಸಿ ಜೆ. ೧೯೭೭ ಎಗ್ಗ್ ಸೈನ್ಸ್ ಮತ್ತು ತಾಂತ್ರಿಕತೆ ಏ ವಿ ಐ ಪಬ್ಲಿಷಿಂಗ್ ಕಂ, ವೆಸ್ಟ್ ಪೋಸ್ಟ್ ಕನೆಕ್ಟಿಕಟ್.

೨ ನಾರಾಯಣ್.೨೦೦೫. ಭಾರತದಲ್ಲಿ ಸಾವಯುವ ಕೃಷಿ, ತೊಂದರೆಗಳು ಹಾಗು ಅವಶ್ಯಕತೆ. ಒಕೇಶನಲ್ ಪೇಪರ್–೩೮.

## ಅಝೋಲ್ಲಾ : ಸುಸ್ಥಿರ ಪಶುಪಾಲನೆಯಲ್ಲಿ ಪೌಷ್ಟಿಕಾಂಶಭರಿತ ಹಾಗೂ ಕಡಿಮೆ ಖರ್ಚಿನ ಪೂರಕ ಪಶು ಆಹಾರ

[1]ಎ. ಹೆಬ್ಬಾರ್., *[2]ಎಮ್.ಟಿ. ಮಹಂತೇಶ್., [3]ಜಿ. ಚಂದ್ರಶೇಖರ್
[1]ಪಶು ಶರೀರಶಾಸ್ತ್ರ ಮತ್ತು ಜೀವ ರಸಾಯನಶಾಸ್ತ್ರ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ–573 201, [2]ಕೃಷಿ ವಿಜ್ಞಾನ ಕೇಂದ್ರ, ಗಂಗಾವತಿ, ಕೊಪ್ಪಳ, ಕರ್ನಾಟಕ–583 227, [3]ಪಶು ಚಿಕಿತ್ಸಾ ಭೋಧನಾ ಸಂಕೀರ್ಣ ವಿಭಾಗ, ಪಶು ವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ–577 201 *corresponding Author: drmahan001@gmail.com

**ಪ್ರಬಂಧಸಾರ:–** ಇತೀಚಿನ ದಿನಗಳಲ್ಲಿ ಅಝೋಲ್ಲಾವು ಪಶು ಆಹಾರದ ಘಟಕಾಂಶವಾಗಿ ತುಂಬಾ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಅದಲ್ಲದೇ ಇದನ್ನು ಜೈವಿಕ ಗೊಬ್ಬರ, ಹಸಿರೆಲೆ ಗೊಬ್ಬರ ಹಾಗೂ ಇತರ ಪಶು ಆಹಾರದ ಘಟಕಾಂಶವಾಗಿ ಕೂಡಾ ಬಳಸಬಹುದೆಂದು ಸಂಶೋಧನೆಯಿಂದ ದೃಢಪಟ್ಟಿದೆ (ಸಿಂಗ್ ಮತ್ತು ಸುಬುದಿ, 1978). ಇದು ಫರ್ನ್ ಜಾತಿಗೆ ಸೇರಿದ, ನೀರಿನ ಮೇಲೆ ತೇಲಾಡಿಕೊಂಡು ಬೆಳೆಯಬಲ್ಲ ಝರಿ ಸಸ್ಯ. ಅನಬೇನಾ ಅಝೋಲ್ಲಾ ಎಂಬ ನೀಲಿ ಹಸಿರು ಪಾಚಿ ಅಝೋಲ್ಲಾಗೆ ಸಹಜೀವಿ. ಅಝೋಲ್ಲಾ ಸಸ್ಯದ ಎಲೆಯ ಕೆಳಭಾಗದಲ್ಲಿ ಸಣ್ಣ ರಂಧ್ರಗಳಿದ್ದು (ಅವುಗಳಲ್ಲಿ ಅನಬೀನಾ ಎಂಬ ನೀಲಿ ಹಸಿರು ಪಾಚಿಯು ಅಡಕವಾಗಿದ್ದು ಇವು ವಾಯುಮಂಡಲದಲ್ಲಿ ಮುಕ್ತವಾಗಿ ಸಿಗುವಂತೆ ಸಾರಜನಕವನ್ನು ಹೀರಿ ಹಿಡಿದಿಟ್ಟುಕೊಳ್ಳುವ ಶಕ್ತಿಯನ್ನು ಪಡೆದಿರುತ್ತದೆ), ಈ ಪಾಚಿಗೆ ವಾಸಿಸಲು ಸ್ಥಳ ಒದಗಿಸುತ್ತದೆ, ಇದಕ್ಕೆ ಪ್ರತ್ಯುಪಕಾರವಾಗಿ ಅನಬೇನಾ ಅಝೋಲ್ಲಾವು ಗಾಳಿಯಲ್ಲಿರುವ ಮುಕ್ತವಾಗಿ ಸಿಗುವ ಸಾರಜನಕವನ್ನು ಸ್ಥಿರೀಕರಿಸಿ ಬೆಳವಣಿಗೆಗೆ ಚೇತರಿಸುವ ಪದಾರ್ಥಗಳನ್ನು ಕೊಡುತ್ತದೆ, ಇದನ್ನು ಹಸಿರೆಲೆ ಗೊಬ್ಬರವಾಗಿ ಉಪಯೋಗಿಸುವುದಕ್ಕಿಂತ ಮುಂಚೆಯೆ ಸಾರಜನಕವನ್ನು ಸ್ಥಿರೀಕರಿಸುವ ಮೂಲಕ ಅಝೋಲ್ಲಾ ಒಂದು ಪ್ರಮುಖವಾದ ಸಾವಯವ ಗೊಬ್ಬರವಾಗಿ ಪ್ರಚಲಿತವಾಗಿದೆ, ಇತ್ತೀಚಿನ ದಿನಗಳಲ್ಲಿ ಸಾಕು ಜಾನುವಾರಗಳಾದ ಆಕಳು, ಎಮ್ಮೆ, ಕೋಳಿ, ಆಡು, ಮೇಕೆ, ಮೊಲ, ಹಂದಿ, ಬಾತುಕೋಳಿ ಮತ್ತು ಮೀನುಗಳಿಗೆ ಕೂಡಾ ಒಂದು ಉತ್ತಮ ಪೂರಕ ಆಹಾರವಾಗಿ ಹೊರಹೊಮ್ಮಿದೆ. ಅಝೋಲ್ಲಾ ಪೋಷಕಾಂಶಗಳ ಕಣಜವಾಗಿದ್ದು, ಶೇ. 4 ರಿಂದ 6 ಸಾರಜನಕ ಹಾಗೂ ಶೇ. 24–26 ರಷ್ಟು ಸಸಾರಜನಕ ಹೊಂದಿದ್ದು, ಸಾರಜನಕ ಮತ್ತು ಕೊಬ್ಬಿನ ಪ್ರಮಾಣ ಇತರ ಮೇವುಗಳಿಗಿಂತ ಅಧಿಕವಾಗಿದ್ದು, ಸೆಲುಲ್ಲೋಸ್ ಎಂಬ

ಜೀರ್ಣವಾಗದ ಅಂಶ ಕಡಿಮೆ ಪ್ರಮಾಣದಲ್ಲಿರುವುದು. ಅಝೋಲ್ಲಾದ ಹೆಚ್ಚುಗಾರಿಕೆ ಜೀವಸತ್ವಗಳಾದ ಎ ಮತ್ತು ಬಿ ಕಾಂಪ್ಲೆಕ್ಸ್, ಸುಣ್ಣ, ಕಬ್ಬಿಣ ಸೇರಿದಂತೆ ಇತರ ಖನಿಜಾಂಶಗಳು ಅಝೋಲ್ಲಾದಲ್ಲಿ ಅಡಕಗೊಂಡಿವೆ. ಅಝೋಲ್ಲಾವನ್ನು ಪಶು ಆಹಾರದಲ್ಲಿ ಮಿಶ್ರಣಮಾಡಿಯೂ ಅಥವಾ ನೇರವಾಗಿ ನೀಡಬಹುದಾಗಿದೆ. ಇದನ್ನು ತಿನ್ನುವ ಹೈನುರಾಸುಗಳಲ್ಲಿ ಹಾಲಿನ ಇಳುವರಿ ಹೆಚ್ಚುವುದಲ್ಲದೇ, ಖನಿಜಗಳ ಕೊರತೆಯಿಂದ ಕಂಡುಬರುವ ಸಂತಾನೋತ್ಪತ್ತಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ನಿವಾರಣೆಯಾಗುತ್ತದೆ.

**1. ಪೀಠಿಕೆ :** ಜಾನುವಾರು ಸಾಕಾಣಿಕೆಯಲ್ಲಿ ಪಶುಪಾಲಕರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಯೆಂದರೆ ಮೇವಿನ ಬೆಳೆ ಮತ್ತು ಪಶು ಆಹಾರದ ಕೊರತೆ, ಕೇವಲ ಸಾಂಪ್ರದಾಯಿಕ ಮೇವಿನ ಸಂಪನ್ಮೂಲಗಳಿಂದ ಮೇವಿನ ಕೊರತೆಯನ್ನು ನೀಗಿಸಲು, ಪ್ರಾಣಿಗಳ ಉತ್ಪನ್ನ ಹೆಚ್ಚಿಸಿ ಮತ್ತು ಲಾಭದಾಯಕವಾಗಿಸಲು ಅಸಾಧ್ಯ. ಆದ್ದರಿಂದ ಸಂಪ್ರದಾಯಿಕ ಆಹಾರ ಪದ್ಧತಿ ಜೊತೆಗೆ ಅಥವಾ ಬದಲಿಗೆ ಅಸಂಪ್ರದಾಯಿಕ ಮೇವಿನ ಸಂಪನ್ಮೂಲಗಳನ್ನು ಬಳಸುವ ಅಗತ್ಯವಿದೆ. ಅಝೋಲ್ಲಾ ಎಂಬುದು ಪೋಷಕಾಂಶಭರಿತ ಅಸಂಪ್ರದಾಯಿಕ ಪೂರಕ ಪಶು ಆಹಾರವಾಗಿ ಹೊರಹೊಮ್ಮಿದೆ, ಇದು ಕಲುಷಿತ ನೀರಿನಿಂದಲೂ ಕೂಡಾ ಲವಣಾಂಶಗಳನ್ನು ಭಟ್ಟಿ ಇಳಿಸುವ ಗುಣ ಹೊಂದಿದೆ. ಮಾತ್ರವಲ್ಲದೇ ತನ್ನ ಉತ್ತಮ ಪೋಷಕಾಂಶ ಹಾಗೂ ಅತೀ ಶೀಘ್ರ ಬೆಳವಣಿಗೆಯಿಂದಾಗಿ ವಿಜ್ಞಾನಿಗಳ ಗಮನ ಸೆಳೆದಿದೆ, ಆದ್ದರಿಂದ ಇದಕ್ಕೆ ವ್ಯಾಗ್ನರ್ (1977) ರವರು ಇದನ್ನು ಹಸಿರು ಚಿನ್ನದ ಗಣಿ ಎಂದು ಕರೆದಿದ್ದಾರೆ. ಇದರಲ್ಲಿ ಸಸಾರಜನಕ, ಜೀವಸತ್ವಗಳು (ಎ, ಬಿ 12 & ಕೆರೋಟಿನ್), (ಕಮಲಾಸನನ್ 2002). ಲವಣಾಂಶಗಳಾದ ರಂಜಕ, ಸುಣ್ಣ, ಫಾಸ್ಫರಸ್, ಕಬ್ಬಿಣ, ಮೆಗ್ನೆಷಿಯಂ ಅಂಶಗಳು ಹೇರಳವಾಗಿದ್ದು, 4.8 ರಿಂದ 6.7 ಪ್ರತಿಶತದಷ್ಟು ಕೊಬ್ಬಿನಾಂಶ, 12.8 ರಿಂದ 26.4 ರವರೆಗೂ ಕೊಬ್ಬಿನಾಂಶ ಮತ್ತು ಒಮೆಗಾ–3 ಮತ್ತು ಒಮೆಗಾ–6 ಕೊಬ್ಬಿನಾಂಶದಿಂದಲೂ ಕೂಡಿದೆ ಪಾಲೇಟ್ಟಿ 1987, ಅಲ್ಲದೇ ಇದರಲ್ಲಿ ಕಚ್ಚಾ ಸಸಾರಜನಕ 26.4 %, ಕಚ್ಚಾ ನಾರು 15.56 %, ಈಥರ್‌ಎಕ್ಸಟ್ರಾಕ್ಟ್ 3.42%, ಸಾರಜನಕರಹಿತಸಾರ 41.06%, ಬೂದಿ 14.86 %, ಇರುತ್ತದೆಂದು ತಿಳಿದುಬಂದಿದೆ. ಪಿಷ್ಠ ಹಾಗೂ ಕೊಬ್ಬಿನಾಂಶ ಕಡಿಮೆ ಇದ್ದು, ಇದರ ಪೂರಕ ಪೋಷಕಾಂಶಗಳಿಂದ ಉತ್ತಮ ಪಶು Dº ÁgÀÁVz É Az ÀNRDP, VK-2010 ಅಭಿಪ್ರಾಯಪಟ್ಟಿದೆ.

ಪ್ರಭು ಮತ್ತು ಕುಮಾರ (2010) ರವರ ಪ್ರಕಾರ ಅಝೋಲ್ಲಾ ಕೃಷಿ ಸರಳ ಹಾಗೂ ಕಡಿಮೆ ಸಮಯದಲ್ಲಿ ಹೆಚ್ಚು ಉತ್ಪಾದನೆ ಪಡೆಯಬಹುದು. ಅಝೋಲ್ಲಾದಲ್ಲಿರುವ ಸಸಾರಜನಕ 25–35 % ರಷ್ಟು ಕೂಡಿದ್ದು, ಅದನ್ನು ಸುಲಭವಾಗಿ ಕೋಳಿಗಳು ಜೀರ್ಣಿಸಿಕೊಳ್ಳುತ್ತವೆಂದು ಪರಶುರಾಮಲು, (2013) ರವರು ಕಂಡುಕೊಂಡಿದ್ದಾರೆ. ಅಝೋಲ್ಲಾವನ್ನು ಪಶು ಆಹಾರವಾಗಿ ಕೋಳಿ (ಬಸಕ್, 2002), ಬಾತುಕೋಳಿ (ಬಸೆರಾ, 1995), ಮೀನು (ನ್ವಾನ್ನ ಮತ್ತು ಫಲಯೆ, 1997), ಹಂದಿ (ಬೆಸೆರಾ, 1919), ಮೊಲಗಳು (ಶ್ರೀಮನ್ ನಾರಾಯನ್, 1993), ಮೆಲುಕು ಹಾಕುವ ದೊಡ್ಡ ಪ್ರಾಣಿಗಳು (ನಿಖ್–ತಲಾಬ್, 1997) ಮತ್ತು ಮೆಲುಕು ಹಾಕುವ ಸಣ್ಣ ಪ್ರಾಣಿಗಳು (ತಮಂಗ್ ಮತ್ತು ಸಮಂತಾ, 1993). ಮಾರುಕಟ್ಟೆಯಲ್ಲಿ ಸಿಗುವ ಕೋಳಿ/ಪಶು ಆಹಾರದಲ್ಲಿ ಇರುವಷ್ಟೇ ಪೋಷಕಾಂಶಗಳು ಅಝೋಲ್ಲಾದಲ್ಲಿ ಅಡಕಗೊಂಡಿವೆ.

**2. ಅಝೋಲ್ಲಾ ಬೆಳೆಯುವ ವಿಧಾನ :** ಅಝೋಲ್ಲಾ ಕೃಷಿ ಸರಳ ಮತ್ತು ಕಡಿಮೆ ಖರ್ಚಿನಲ್ಲಿ ಮಾಡಬಹುದು, ಸಿಮೆಂಟ್ ತೊಟ್ಟಿ ಅಥವಾ ಕಲ್ಲಿನ ದೋಣಿ ಅಥವಾ ಟ್ಯಾಂಕ್‌ಗಳನ್ನು ಅಝೋಲ್ಲಾ ಬೆಳೆಯಲು ಉಪಯೋಗಿಸಬಹುದು. ಸ್ವಲ್ಪ ನೇರಳಿರುವ ಜಾಗದಲ್ಲಿ 2 ಮೀ. ಉದ್ದ X2 ಮೀ ಅಗಲ X0.2 ಮೀ. ಆಳ ಗುಂಡಿಯನ್ನು ತೆಗೆದು ಕಲ್ಲುಗಳನ್ನು ಆರಿಸಿ ತೆಗೆಯಬೇಕು. ಏಕರೂಪ ನೀರಿನ ಮಟ್ಟ ಕಾಯ್ದುಕೊಳ್ಳಲು ಎಲ್ಲಾ ಮೂಲೆಗಳು ಸಮತಟ್ಟಾಗಿರಬೇಕು. ನಂತರ ದಪ್ಪವಿರುವ ಪ್ಲಾಸ್ಟಿಕ್ ಹಾಳೆಯನ್ನು ಗುಂಡಿಯಾಕಾರದಲ್ಲಿ ಮುದುಡದಂತೆ ಹಾಕಬೇಕು. 10–15 ಕಿ.ಗ್ರಾಂ. ಶೋಷಿದ ಫಲವತ್ತಾದ ಮಣ್ಣು, 2 ಕೆ.ಜಿ. ಸೆಗಣಿ ರಾಡಿ ಹಾಗೂ 30 ಗ್ರಾಂ. ನಷ್ಟು ಸುಫರ್‌ಫಾಸ್ಫೇಟ್‌ನ್ನು 10 ಲೀ. ನೀರಿನಲ್ಲಿ ಕಲಸಿ ಗುಂಡಿಯಲ್ಲಿ ಹಾಕಬೇಕು. ಗುಂಡಿಯಲ್ಲಿ 10 ಸೆಂ.ಮೀ. ನೀರು ತುಂಬಬೇಕು. ನೀರು ತಿಳಿಯಾದ ನಂತರ (1 ದಿನ ಬಿಟ್ಟು) 0.5 ರಿಂದ 1 ಕೆ.ಜಿ. ಅಝೋಲ್ಲಾವನ್ನು ಹಾಕಬೇಕು. ಸುಮಾರು 10–15 ದಿನಗಳಲ್ಲಿ ಅಝೋಲ್ಲಾ ತೊಟ್ಟಿ ಯಥೇಚ್ಛವಾಗಿ ಬೆಳೆಯುತ್ತದೆ. ಇದರಿಂದ ಪ್ರತಿದಿನ 500–600 ನಷ್ಟು ಅಝೋಲ್ಲಾವನ್ನು ಪಡೆಯಬಹುದು. ದೈನಂದಿನ ಇಳುವರಿಯನ್ನು ಕಾಯ್ದುಕೊಳ್ಳಲು 20 ಗ್ರಾಂ. ಸುಫರ್‌ಫಾಸ್ಫೇಟ್+ 1 ಕೆ.ಜಿ. ಸಗಣಿರಾಡಿಯನ್ನು ವಾರಕ್ಕೊಮ್ಮೆ ಹಾಕಬೇಕು.

**3.ಅಝೋಲ್ಲಾ ಬೆಳೆಯಲು ಬೇಕಾಗುವ ಅವಶ್ಯಕ ಅಂಶಗಳು :** ಅಝೋಲ್ಲಾವು ಸ್ವಾಭಾವಿಕವಾಗಿ ಕೆರೆ, ಕೊಳ್ಳ, ಹಳ್ಳ, ಬೆಚ್ಚಗಿನ ಸಮಶೀತೋಷ್ಣ ಹಾಗೂ ಉಷ್ಣವಲಯದಲ್ಲಿ ಕಂಡುಬರುತ್ತದೆ. ಇದರ ಬೆಳವಣಿಗೆಗೆ $25^0$ C ಉಷ್ಣತೆ ಮತ್ತು ನೀರು ತುಂಬಾ ಅವಶ್ಯಕವಾಗಿರುವುದರಿಂದ ಸೂಕ್ತ ಪ್ರಮಾಣದಷ್ಟು ನೀರನ್ನು ಕನಿಷ್ಠ ಪಕ್ಷ 4 ಅಂಗುಲದಷ್ಟು ನೀರು ಗುಂಡಿಯಲ್ಲಿರುವಂತೆ ನೋಡಿಕೊಳ್ಳುವುದು ತುಂಬಾ ಅಗತ್ಯ. ಸುಮಾರು 25–30 ಭಾಗದಷ್ಟು ನೀರನ್ನು ಪ್ರತಿ 10 ದಿನಕ್ಕೊಮ್ಮೆ ಬರಿಸುವುದು ಉತ್ತಮ. ಗರಿಷ್ಠ ಸಾಪೇಕ್ಷ ಆರ್ದ್ರತೆ 85 ರಿಂದ 95 ರಷ್ಟು ರಸಸಾರ 5.5–7 ರಷ್ಟು ಇರಬೇಕು. ಪ್ರತಿ 6 ತಿಂಗಳಿಗೊಮ್ಮೆ ನೀರು, ಮಣ್ಣನ್ನು ಸ್ವಚ್ಛಗೊಳಿಸಬೇಕು ಅಥವಾ ಬದಲಿಸಿದರೆ ಒಳ್ಳೆಯದು. ಅಝೋಲ್ಲಾವನ್ನು ಜಾನುವಾರುಗಳಿಗೆ ನೀಡುವ ಮೊದಲು ಸೆಗಣಿ ವಾಸನೆ ನೀವಾರಿಸಲು ನೀರಿನಲ್ಲಿ ಸ್ವಚ್ಛವಾಗಿ ತೊಳೆಯಬೇಕು.

**4. ಅಝೋಲ್ಲಾ ಕಟಾವು ಮಾಡಿ ಪಶುಗಳಿಗೆ ನೀಡುವುದು :** ಅಝೋಲ್ಲಾವು ಸಂಪೂರ್ಣವಾಗಿ 2–3 ವಾರದೊಳಗೆ ತೊಟ್ಟಿ ತುಂಬಾ ಬೆಳೆಯುತ್ತದೆ. 6 X 4 ಅಡಿ ತೊಟ್ಟಿಯಲ್ಲಿ ಸುಮಾರು 800–900 ಗ್ರಾಂ. ನಷ್ಟು ಅಝೋಲ್ಲಾವನ್ನು ಪಡೆಯಬಹುದು. ಇದನ್ನು ಒಣಗಿಸಿ ಅಥವಾ ತಾಜಾ ರೂಪದಲ್ಲಿ ಪಶುಆಹಾರವಾಗಿ ಬೆಳೆಸಬಹುದು.

**ಉಪಯೋಗಿಸುವ ಪ್ರಮಾಣ :**

| ಜಾನುವಾರು | ಪ್ರಮಾಣ ಪ್ರ. ದಿನಕ್ಕೆ | ಜಾನುವಾರು | ಪ್ರಮಾಣ ಪ್ರ. ದಿನಕ್ಕೆ |
|---|---|---|---|
| ಆಕಳು, ಎಮ್ಮೆ ಮತ್ತು ಎತ್ತು | 1.5–2 ಕಿ.ಗ್ರಾಂ | ಆಡು ಮತ್ತು ಮೇಕೆ | 300–500 ಗ್ರಾಂ. |
| ಕೋಳಿ | 20–30 ಗ್ರಾಂ | ಹಂದಿ | 1.5–2.0 ಕಿ.ಗ್ರಾಂ |
| ಮೊಲ | 100 ಗ್ರಾಂ | | |

**5. ಅಝೋಲ್ಲಾ ಘಟಕದ ನಿರ್ಮಾಣ ವೆಚ್ಚ :** ನಿರ್ಮಾಣದ ವೆಚ್ಚ ಪ್ರತಿ ಘಟಕಕ್ಕೆ ರೂ. 1500–2000 ತಗಲುತ್ತದೆ. ಜಾನುವಾರುಗಳ ಸಂಖ್ಯೆ ಮತ್ತು ಮೇವಿನ ಅವಶ್ಯಕತೆಗನುಸಾರವಾಗಿ ಅಝೋಲ್ಲಾ ಘಟಕಗಳನ್ನು ನಿರ್ಮಾಣ ಮಾಡಿಕೊಳ್ಳಬೇಕು.

| ಕ್ರ.ಸಂ | ವಿವರ | ಪ್ರಮಾಣ | ದರ (ರೂ.) | ಮೊತ್ತ (ರೂ.) |
|---|---|---|---|---|
| 1 | ಗುಂಡಿ ತೆಗೆಯುವ ಖರ್ಚು (2.25 ಮೀ x 1.5 ಮೀ x 0.2 ಮೀ ) | 1 | 80.00 (one manday) | 80.00 |
| 2 | ಪ್ಲಾಸ್ಟಿಕ್ ಹೊದಿಕೆ (3 m x 2 m) | 1 | 300 | 600.00 |
| 3 | ಫಲವತ್ತಾದ ಮಣ್ಣು | 15 ಕೆ.ಜಿ | 80.00 (one manday) | 80.00 |
| 4 | ಸಗಣಿ ರಾಡಿ | 5 ಕೆ.ಜಿ | 3 | 30.00 |
| 5 | ಸುಫರ್‌ಫಾಸ್ಫೇಟ್ 5 ಕೆ.ಜಿ<br>ಖನಿಜ ಮಿಶ್ರಣ 2 ಕೆ.ಜಿ | 10 ಕೆ.ಜಿ<br>4 ಕೆ.ಜಿ | 10<br>100.00 | 100<br>400.00 |
| 6 | ಅಝೋಲ್ಲಾ ಬೀಜ | 0.5-01 ಕೆ.ಜಿ | 100.00 | 100.00 |
| 7 | ನೆರಳು ಹೊದಿಕೆ | 01 | 400.00 | 400.00 |
| 8 | ಇತರೆ | | | 10.00 |
| | | | **ಒಟ್ಟು** | **1800.00** |

**7. ಜಾನುವಾರುಗಳಿಗೆ ಪಶು ಆಹಾರವಾಗಿ ಅಝೋಲ್ಲಾ ಬಳಕೆ :** ಚಟರ್ಜಿ (2013), ಇವರು ಮಿಶ್ರತಳಿ ಹಸುವಿನಲ್ಲಿ 2 ಕೆ.ಜಿ. ತಾಜಾ ಅಝೋಲ್ಲಾವನ್ನು 90 ದಿನಗಳವರೆಗೆ ಬಳಸಿದಾಗ 11.2 ರಷ್ಟು ಹಾಲಿನ ಇಳುವರಿ ಹೆಚ್ಚಾಗಿರುವುದನ್ನು ಕಂಡುಕೊಂಡರು ಹಾಗೂ ಅವರು ಹಸಿರು ಹುಲ್ಲಿನ ಕೊರತೆ ಸಮಯದಲ್ಲಿ ಇದನ್ನು ಪೂರಕ ಪಶು ಆಹಾರವಾಗಿಯೂ ಬಳಸಬಹುದೆಂದರು. ಕಮಲಾಸನನ್ (2002) ರವರು 20 % ಅಝೋಲ್ಲಾವನ್ನು ವಾಣಿಜ್ಯ ಪಶು ಆಹಾರದಲ್ಲಿ ಬಳಸುವುದರಿಂದ ಶೇ. 15–20 ರಷ್ಟು ವಾಣಿಜ್ಯ ಪಶು ಆಹಾರದ ಖರ್ಚನ್ನು ಉಳಿಸಬಹುದೆಂದು ತೋರಿಸಿಕೊಟ್ಟಿದ್ದಾರೆ.

ಭಾರತ ದೇಶದಲ್ಲಿ ಕುಕ್ಕುಟ ಮಾಧ್ಯಮವು ತ್ವರಿತಗತಿಯಲ್ಲಿ ಸಾಗುತ್ತಿದ್ದು, ಅನೇಕ ಸಣ್ಣ ರೈತರು, ಮಧ್ಯಮ ರೈತರು ಹಾಗೂ ಅತೀ ಸಣ್ಣ ರೈತರು ಈ ಉಧ್ಯಮದಲ್ಲಿ ತೊಡಗಿಕೊಂಡಿದ್ದಾರೆ. ಮಾಂಸ ಕೋಳಿ ಸಾಕಾಣಿಕೆಯ ಖರ್ಚಿನಲ್ಲಿ ಶೇ. 70 ರಷ್ಟು ಕೋಳಿ ಆಹಾರದ ಖರ್ಚು ಇರುತ್ತದೆ, ಪಾರ್ಥ ಸಾರಥಿ(2002) ಹಾಗೂ ಮಾರುಕಟ್ಟೆ ಬೆಲೆಯಲ್ಲಿ ವ್ಯತ್ಯಯಗೊಳ್ಳುವುದು ಲಾಭದಲ್ಲಿ ಇನೂ ಕಡಿತವನ್ನುಂಟು ಮಾಡುತ್ತದೆ. ಭಾರತದಲ್ಲಿ ಸುಬುದಿ ಮತ್ತು ಸಿಂಗ್ (1998) ಶೇ. 20 ರಷ್ಟು ಅಝೋಲ್ಲಾವನ್ನು ವಾಣಿಜ್ಯ ಕೋಳಿ ಆಹಾರದಲ್ಲಿ ಬೆರೆಸಬಹುದೆಂದು ತೋರಿಸಿಕೊಟ್ಟಿದೆ. ಇದರಿಂದ ಶೇ. 20 ರಷ್ಟು ಕೋಳಿ ಆಹಾರದ ವೆಚ್ಚವನ್ನು ಕಡಿಮೆಗೊಳಿಸಬಹುದು.

ಅಲ್ಕಂತರಾ ಮತ್ತು ಕೈರುಬಿನ್ (1985, 1986) ರ ಪ್ರಕಾರ ಅಝೋಲ್ಲಾದಲ್ಲಿರುವ ಸಸಾರಜನಕ, ನಾರಿನಾಂಶ, ಕೊಬ್ಬು ಮಾಂಸಕೋಳಿಗಳಲ್ಲಿ ಸುಲಭವಾಗಿ ಜೀರ್ಣವಾಗುತ್ತದೆ ಹಾಗೂ ಪ್ರಭು (2007) ಅಝೋಲ್ಲಾದಲ್ಲಿರುವ ಪೋಷಕಾಂಶಗಳು ಮಾರುಕಟ್ಟೆಯಲ್ಲಿ ದೊರೆಯುವ ವಾಣಿಜ್ಯ ಪಶು ಆಹಾರಕ್ಕೆ ಸಮವಾಗಿದೆಂದು ಕಂಡುಕೊಂಡರು. ಬಸಕ್ (2002) ಶೇ. 5 ರಷ್ಟು ಅಝೋಲ್ಲಾ ಬಳಕೆಯಿಂದ ಮಾಂಸದ ಕೋಳಿಮರಿಗಳಲ್ಲಿ ದೇಹದ ತೂಕದ ಏರಿಕೆಯನ್ನು ಕಂಡುಕೊಂಡರು. ಶೇ. 10 ರಷ್ಟು ಬಳಕೆಯಿಂದ ಮೊಟ್ಟೆ ಕೋಳಿ ಮರಿಗಳಲ್ಲಿಯೂ ಕೂಡಾ ಬೆಳವಣಿಗೆ ಕಂಡುಬಂದಿತು. ಹಾಗೆಯೇ ಬೆಸೆರ್ರಾ (1995) ಶೇ. 20 ರಷ್ಟು ತಾಜಾ ಅಝೋಲ್ಲಾ ಬಳಸುವುದರಿಂದ ಸೋಯಾಬೀನ್‌ನ್ನು ಬದಲಿಸುವುದರಿಂದ ಮಾಂಸದ ಬಾತುಕೋಳಿಗಳಲ್ಲಿ ಯಾವುದೇ ವ್ಯತಿರಿಕ್ತ ಪರಿಣಾಮ ಉಂಟಾಗದು.

ಅಝೋಲ್ಲಾವನ್ನು ಮೀನು ಸಾಕಾಣಿಕೆಯಲ್ಲಿ ಆಹಾರವಾಗಿ ಬಳಸಬಹುದೆಂದು ಕಮಲಾಸನನ್ (2002) ರವರು ಹೇಳಿದ್ದಾರೆ. ಪಿಯೋಜಿ (2004) ರವರು ಅಝೋಲ್ಲಾ ಬಳಕೆಯಿಂದ ಮೀನಿನ ತೂಕದ ಏರಿಕೆಯನ್ನು ಕಂಡುಕೊಂಡರು. ಶೇ. 45 ರಷ್ಟು ಅಝೋಲ್ಲಾ ಬಳಕೆಯನ್ನು ತಿಲಾಪಿಯಾ ಎಂಬ ಮೀನಿನ ಆಹಾರಕ್ಕೆ ಬಳಸಬಹುದು. ಅಂತೆಯೇ ಇತ್ತೀಚಿನ ಸಂಶೋಧನೆ ಪ್ರಕಾರ ಗ್ರಾಸ್‌ಕಾರ್ಪ ctenopharyngodon idelli ಅಝೋಲ್ಲಾವನ್ನು ಆಹಾರವಾಗಿ ಬಳಸುತ್ತದೆಂದು ತಿಳಿದಿದೆ. ಅಝೋಲ್ಲಾದಲ್ಲಿ ಸಸಾರಜನಕ, ಕೆರೊಟಿನಾಯ್ಡ ಜಾಸ್ತಿಯಿದ್ದು, ಇದನ್ನು ಮೀನು ಆಹಾರದಲ್ಲಿ ಬಳಸಬಹುದೆಂದು ಸ್ವಾನ್ನ ಮತ್ತು ಫಲಯೆ (1997) ಹೇಳುತ್ತಾರೆ.

ಗ್ರಾವಿನಾ (1992) ಅವರು ಶೇ. 40 ರಷ್ಟು ಅಝೋಲ್ಲಾವನ್ನು

ಹಂದಿಯ ಆಹಾರದಲ್ಲಿ ಬಳಸುವುದರಿಂದ ಹಂದಿಯ ತೂಕದಲ್ಲಿ ಏರಿಕೆ ಹಾಗೂ ಆಹಾರ ಬಳಕೆಯ ರೀತಿ (FCR) ಕಂಡು ಕೊಂಡರು. ದೇಶಿಯ ಹಂದಿ ತಳಿಗಳಲ್ಲಿ ಒಣ ಅರ್ಝೋಲ್ಲಾವನ್ನು ಶೇ. 30 ರಷ್ಟು ಬಳಸಬಹುದೆಂದು ಪಾರ್ಥಸಾರಥಿ (2003) ಕಂಡು ಕೊಂಡರು.

ಶ್ರೀಮನ್‌ನಾರಾಯಣ (1993) ರವರು ಶೇ. 10, 15, 20 ರಷ್ಟು ಅರ್ಝೋಲ್ಲಾವನ್ನು ಆಹಾರದಲ್ಲಿ ಬೆರೆಸುವುದರಿಂದ ನ್ಯೂಜಿಲ್ಯಾಂಡ್ ಮತ್ತು ರಷೇಯನ್ ಗ್ರೇ ಗೇಂಟ್ ಮೊಲಗಳಲ್ಲಿ 27.3 ಗ್ರಾಂ. ನಷ್ಟು ಹೆಚ್ಚಿನ ದಿನದ ತೂಕವನ್ನು ದಿನವೊಂದರಲ್ಲಿ 20 % ರಷ್ಟು ಬಳಕೆಯಿಂದ ಕಂಡುಕೊಂಡರು. ದೂರನ್ (1994) ರವರು 20% ಸೋಯಾ ಬೀನ್‌ನ್ನು ಬದಲಿಗೆ ಆಹಾರದಲ್ಲಿ ಅರ್ಝೋಲ್ಲಾವನ್ನು ಬಳಸಬಹುದೆಂದು ತೋರಿಸಿದ್ದಾರೆ.

**ಉಪಸಂಹಾರ :** ಅರ್ಝೋಲ್ಲಾ ಉತ್ಪಾದನೆಯು ಕಡಿಮೆ ಖರ್ಚಿನ ಸರಳ ತಾಂತ್ರಿಕತೆಯಾಗಿದ್ದು, ಇದನ್ನು ಪೂರಕ ಪಶುಆಹಾರವಾಗಿ ಹಸು, ಎಮ್ಮೆ, ಕುರಿ, ಕೋಳಿ, ಮೀನು, ಹಂದಿ ಹಾಗೂ ಜೈವಿಕ ಗೊಬ್ಬರವಾಗಿಯೂ ಕೂಡಾ ಬಳಸಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಅರ್ಝೋಲ್ಲಾ ಉತ್ಪಾದನೆ ತಾಂತ್ರಿಕತೆಯನ್ನು ಸಣ್ಣ, ಮಧ್ಯಮ, ಅತೀಸಣ್ಣ ಜಮೀನು ಹಿಡುವಳಿದಾರರು ಇದರ ಸದ್ಬಳಕೆ ಮಾಡುವುದರಲ್ಲಿ ಯುಶಸ್ವಿಯಾಗಿದ್ದಾರೆ. ಕೊನೆಯದಾಗಿ ಅರ್ಝೋಲ್ಲಾವನ್ನು ಅಸಂಪ್ರದಾಯಿಕ ಪಶು ಆಹಾರವಾಗಿ ಜಾನುವಾರುಗಳಿಗೆ ನೀಡಬಹುದೆಂದು ಸಂಶೋಧನೆಯಿಂದ ದೃಢಪಟ್ಟಿರುತ್ತದೆ.

**ಉಲ್ಲೇಖಗಳು :**

A. Chatterjee et al, International Journal of Agriculture and Food Science Technology. ISSN 2249-3050, Volume 4, Number 3 (2013), pp. 207-214.

Alalade, O. A. & Iyayi, E. E. 2006. Chemical composition and the feeding value of Azolla(Azolla pinnata) Meal for egg-type chicks. International Journal of Poultry Science,vol. 5, no. 2. pp.137-141.

Alcantara, P. F. & Querubin, L. J. 1985. Feeding value of Azolla meal for broilers. Philippine Journal of Veterinary and Animal Sciences, vol. 11, pp. 1-8.

Basak, B., Pramanik, A. H., Rahmnan, M. S., Taradar, S. U. & Roy. B.C. 2002. Azolla (Azolla pinnata) as a feed ingredient in broiler ration. Int. J. Poult. Sci., vol. 1, pp. 29-24.

Becerra, M. , Preston, T. R. & Ogle, B. 1995. Effect of replacing whole boiled soya beans with Azolla in the diets of growing ducks. Livestock Research and Rural Development, vol. 7, no. 3, pp. 1-10.

Edwards, D.J. 1975. Taking a bite at the waterweed problem. New Zealand J. Agric., vol. 130, pp. 33-36.

Fiogbe, E. D., Micha, J.-C. & Van Hove, C. 2004. Use of a natural aquatic fern, Azolla microphylla, as a main component in food for the omnivorous–phytoplanktonophagous tilapia, Oreochromis niloticus L. J. Appl. Ichthyol., vol. 20, pp. 517–520.

Gavina, L.D., 1993. Swine-duck-fish-azolla integration in sky ponds of La Union, Philippines. Philippine-Technology-Journal (Philippines)., 18 (4): 23-30

Kamalasanana Pillai, Premalatha, S. & Rajamony, S. 2002. Azolla – A sustainable feed substitute for livestock. Leisa India, March, 2002, pp. 15-17.

Kamalasanana Pillai, Premalatha, S. & Rajamony, S. 2002. Azolla – A sustainable feed substitute for livestock. Leisa India, March, 2002, pp. 15-17.

Lumpkin, T. A. & Plucknett, D. L. 1982. Azolla as a green manure: Use and management in crop production. Westview Press, Boulder, Colorado.

Nik-Khah, A. and Motaghi-Talab, M., 1992. The use of Azolla in lactating cows. Iranian Journa of Agricultural Sciences, 23 (1):47-56.

Nwanna,.L.C. and A.E. Falaye. (1997). Substitution of Azolla meal for groundnut cake in diets for Nile tilapia, Oreochromis niloticus (L). Appliedl Tropical Agriculture. **2:** 139-143.

Paoletti, C. Bocci, F. Lercker, G. Capella, P. & Materassi, R., 1987. Lipid composition ofAzolla caroliniana biomass and its seasonal variation. Phytochemistry 26, pp. 1045–1047.

Prabu, M. J. 2007. Amazing Azolla acquires an alternative 'avatar'. The Hindu, September 20, 2007.

Querubin, L. J., Alcantara, P. F. & Princesa, A. O. 1986. Chemical composition of threeAzolla species (A. caroliniana, A.microphylla and A. pinnata) and feeding value of Azollameal (A. microphylla) in broiler rations II. Philippine Agriculture, vol. 69, pp. 479-490. Review**. 63**: 1-26.

Sreemannaryana, O., Ramachandraiah, K., Sudarshan-Kumar, K.M., Ramanaiah, N.V. and Ramaprasad, J., 1993. Utilization of azolla as rabbit feed. Indian Veterinary Journal., 70 (3): 285-286.

Subudhi, B & Singh, P. 1978. Nutritive value of the water fern Azolla pinnata for chicks. Poultry Science, vol. 57, pp. 123-124.

Tamang, Y. and Samanta,G., 1993. Feeding value of azolla (Azolla pinnata) an aquatic fern in Black Bengal goats. Indian-Journal-of-Animal-Sciences., 63(2): 188-191.

Van Hove C and Lopez Y (1983) Fisiologia de Azolla. In: Boletín técnico,Universidad Nacional de Colombia, Facultad de Ciencias Agropecuarias,Palmira. Volumen 1, Number 1. P 43-58.

Van Hove, C. & Lopez, Y. 1982. Fisiologia de Azolla. In: Workshop on the assessment of Azolla use in tropical Latin America. Chicklayo: Peru.

Varghese, T. J., Devaraj. K. V. & Shantharam, B. 1976. Relative growth of the grass carp,Ctenophaogodon idella (Val.) fed on Utriclaria and a mixture of Azolla and Lemna. Journal of Inland Fisheries. Society of India, vol. 8, pp. 206-211.

Wagner G M (1997) Azolla: a review of its biology and utilization. Bot Rev **63** 1-21

ISSN 2249 - 5754 VIJNANA KANNADA (PRINT)


# ಮಾಂಸದ ಕೋಳಿ ಸಾಕಾಣಿಕೆಯಲ್ಲಿ ಪೂರಕ ಕೋಳಿ ಆಹಾರವಾಗಿ ಅಝೋಲ್ಲಾ ಬಳಕೆ

*1ಎಮ್.ಟಿ. ಮಹಂತೇಶ್., [2]ಎಸ್.ಬಿ. ಗೌಡರ., [3] ಎ. ಹೆಬ್ಬಾರ್., [4]ಜಿ. ಚಂದ್ರಶೇಖರ್
[1]ಕೃಷಿ ವಿಜ್ಞಾನ ಕೇಂದ್ರ, ಗಂಗಾವತಿ, ಕೊಪ್ಪಳ, ಕರ್ನಾಟಕ–583 227, [2]ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ, ಕೊಪ್ಪಳ, ಕರ್ನಾಟಕ–583 227 [3]ಪಶು ಶರೀರಶಾಸ್ತ್ರ ಮತ್ತು ಜೀವ ರಸಾಯನಶಾಸ್ತ್ರ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ–573 201 [4]ಪಶು ಚಿಕಿತ್ಸಾ ಭೋಧನಾ ಸಂಕೀರ್ಣ ವಿಭಾಗ, ಪಶು ವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ–577 201 -*drmahan001@gmail.com

ಕೋಳಿ ಸಾಕಾಣಿಕೆಯು ಇತ್ತೀಚಿನ ದಿನಗಳಲ್ಲಿ ಸಣ್ಣ, ಮಧ್ಯಮ ಹಾಗೂ ಜಮೀನು ರಹಿತ ರೈತರಿಗೆ ಲಾಭದಾಯಕ ಉದ್ದಿಮೆಯಾಗಿ ಪರಿಣಮಿಸಿದೆ. ಕೋಳಿ ಸಾಕಾಣಿಕೆ ಉಧ್ಯಮವು ಯುವರೈತ ಮತ್ತು ರೈತ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುತ್ತದೆ. ಈ ಉಧ್ಯಮದಲ್ಲಿ ತೊಡಗಿಕೊಂಡಿರುವ ರೈತರಿಗೆ ಮುಖ್ಯವಾಗಿ ಕಂಡು ಬರುವ ಸಮಸ್ಯೆಯೆಂದರೆ ದುಬಾರಿಯಾದ ಕೋಳಿ ಆಹಾರ, (ಶೇ. 70 ರಷ್ಟು ಖರ್ಚು ಕೋಳಿ ಆಹಾರ ನಿರ್ವಹಣೆಗೆ ತಗಲುತ್ತದೆ). ಅದಲ್ಲದೆ ಮಾಂಸದ ಕೋಳಿ ಧರ ಹಾಗೂ ಮೊಟ್ಟೆ ಧರಗಳಲ್ಲಿ ಸ್ಥಿರತೆ ಇರುವುದಿಲ್ಲ. ಇದರಿಂದಾಗಿ ರೈತರು ಆರ್ಥಿಕ ಸಂಕಷ್ಟಕ್ಕಿಡಾಗುತ್ತಾರೆ. ಆದ್ದರಿಂದ ಕೋಳಿ ಆಹಾರವನ್ನು ಕಡಿಮೆ ಖರ್ಚಿನಲ್ಲಿ ತಯಾರಿಸಲು ಅಸಂಪ್ರದಾಯಿಕ ಮೇವುಗಳನ್ನು ಕೋಳಿ ಆಹಾರ ತಯಾರಿಕೆಯಲ್ಲಿ ಬಳಸಿಕೊಂಡು ಕೋಳಿ ಮಾಧ್ಯಮವನ್ನು ಇನ್ನಷ್ಟು ಲಾಭದಾಯಕವನ್ನಾಗಿಸಬಹುದು. ಅಝೋಲ್ಲಾವನ್ನು ಕೋಳಿ ಆಹಾರದಲ್ಲಿ ಅಸಂಪ್ರದಾಯಕ ಪಶು ಆಹಾರವಾಗಿ ಬಳಕೆ ಮಾಡಿದ್ದಲ್ಲಿ ಕೋಳಿ ಆಹಾರಕ್ಕೆ ತಗಲುವ ದುಬಾರಿ ವೆಚ್ಚವನ್ನು ಕಡಿಮೆಗೊಳಿಸಬಹುದೆಂದು ಸಂಶೋಧನೆಯಿಂದ ಧೃಡಪಟ್ಟಿದೆ. ಅಝೋಲ್ಲಾವು ಪೋಷಕಾಂಶಗಳ ಕಣಜವಾಗಿದ್ದು, ಸಾರಜನಕ, ಸಸಾರಜನಕ, ಕಬ್ಬಿಣ, ಕ್ಯಾಲ್ಸಿಯಂ, ಪೊಟ್ಯಾಸಿಯಂ, ಜೀವಸತ್ವಗಳಾದ ಎ ಮತ್ತು ಬಿ ಕಾಂಪ್ಲೆಕ್ಸ್, ಹಾಗೂ ಸುಣ್ಣ ಸೇರಿದಂತೆ ಇತರ ಖನಿಜಾಂಶಗಳು ಅಡಕಗೊಂಡಿವೆ. ಅಝೋಲ್ಲಾವನ್ನು ಮಾಂಸದ ಕೋಳಿಗಳಿಗೆ ನೀಡುವುದರಿಂದ ದೇಹದ ತೂಕ ಹೆಚ್ಚಿ, ಮೇವು ಪರಿವರ್ತನಾ ಸಾಮರ್ಥ್ಯ ಜಾಸ್ತಿಯಾಗಿ, ತೀವ್ರ ಉಷ್ಣತೆಯಿಂದ ಸಾಯುವ ಪ್ರಮಾಣ ಕಡಿಮೆಯಾಗುತ್ತದೆಯಲ್ಲದೆ, ರೋಗ ನಿರೋಧಕ ಶಕ್ತಿಯು ಹೆಚ್ಚಾಗುವುದರಿಂದ ರೋಗರುಜಿನಗಳು ಕಡಿಮೆಯಾಗುತ್ತವೆ ಮತ್ತು ಕೋಳಿ ಸಾಕಾಣಿಕ ಘಟಕಗಳ ಸುತ್ತಮುತ್ತಲಿನಲ್ಲಿ ಸೊಳ್ಳೆಗಳ ಸಂಖ್ಯೆ ಕಡಿಮೆಯಾಗುತ್ತದೆ.

**ಪೀಠಿಕೆ :** ಭಾರದ ದೇಶದಲ್ಲಿ ಮಧ್ಯಮ, ಸಣ್ಣ, ಅತೀಸಣ್ಣ, ರೈತರು ಸಣ್ಣ ಪ್ರಮಾಣದಲ್ಲಿ ಕೋಳಿ ಉದ್ಯಮವನ್ನು ಕೈಗೊಂಡಿದ್ದಾರೆ. ಕೋಳಿ ಸಾಕಾಣಿಕೆಯಲ್ಲಿ ಶೇ. 70 ರಷ್ಟು ಖರ್ಚು ಕೋಳಿ ಆಹಾರಕ್ಕೆ ಖರ್ಚಾಗುತ್ತದೆ. ಪಾರ್ಥಸಾರಥಿ (2002) ತಿಳಿಸಿದ್ದಾರೆ. ಹಾಗೆಯೇ ಮಾರುಕಟ್ಟೆಯ ವ್ಯತ್ಯಯಗಳಿಂದ ರೈತರು ಇನ್ನು ಜಾಸ್ತಿ ಕಂಗಾಲಾಗಿದ್ದಾರೆ. ಮಾಂಸ ಕೋಳಿ ಸಾಕಾಣಿಕೆಯಲ್ಲಿ ಸುಮಾರು 2 ಕೆ.ಜಿ. ತೂಕ ಪಡೆಯಲು 4 ಕೆ.ಜಿ. ಯಷ್ಟು ಕೋಳಿ ಆಹಾರವು ಬೇಕಾಗುತ್ತದೆ. ಆದ್ದರಿಂದ ಕುಕ್ಕೂಟ ಉದ್ಯಮವು ಲಾಭದಾಯಕ ಹಾಗು ಸುಸ್ಥಿರವನ್ನಾಗಿಸಲು ಕೋಳಿ ಆಹಾರದ ತಯಾರಿಕೆ ವೆಚ್ಚದ ಬಗ್ಗೆ ಗಮನ ಹರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಅಸಂಪ್ರದಾಯಕ ಪೂರಕ ಪಶು ಆಹಾರವಾಗಿ ಅಝೋಲ್ಲಾ ಹೊರಹೊಮ್ಮಿದೆ. ಅಝೋಲ್ಲಾವು ಫರ್ನ್ ಜಾತಿಗೆ ಸೇರಿದ ಝುರಿ ಸಸ್ಯ ಇದನ್ನು **"ಹಸಿರು ಬಂಗಾರದ ಗಣಿ"** ಎಂದು ಕರೆಯುತ್ತಾರೆ. ವ್ಯಾಗ್ನರ್ (1997) ಆದ್ದರಿಂದ ಕೋಳಿ ಆಹಾರದ ಖರ್ಚು ತಗ್ಗಿಸಲು ಅಝೋಲ್ಲಾವನ್ನು ಬಳಸಬಹುದು. ತಾಜಾ ಅಝೋಲ್ಲಾವನ್ನು ಕೋಳಿ ಆಹಾರ ಪದ್ಧತಿಯಲ್ಲಿ ಬಳಸುವುದರಿಂದ ಯಾವುದೇ ಅಡ್ಡ ಪರಿಣಾಮಗಳು ಕಂಡುಬಂದಿರುವುದಿಲ್ಲ. (ಸಿಂಗ್ ಮತ್ತು ಸುಬುಧಿ, 1978) ಹಾಗೆಯೇ ಶೇ. 20–25 ರಷ್ಟು ವಾಣಿಜ್ಯ ಕೋಳಿ ಆಹಾರದ ಬದಲಿಗೆ ಅಝೋಲ್ಲಾವನ್ನು ತಾಜಾ ಅಥವಾ ಒಣಗಿಸಿ ಕೋಳಿ ಆಹಾರದಲ್ಲಿ ಬೆರೆಸಿ ಬಳಸಬಹುದೆಂದು ಜೆ. ಜೆಬರ್‌ಲಿನ್, ಪ್ರತಿಭಾ (2010) ಅಭಿಪ್ರಾಯಪಟ್ಟಿದ್ದಾರೆ.

ಅಝೋಲ್ಲಾದಲ್ಲಿ ಶೇ. 89.73 ರಷ್ಟು ಒಣಗಿದ ಅಂಶವಿರುತ್ತದೆ. ಇದರಲ್ಲಿ 75.73% ಸಾವಯವ ಅಂಶ, 23.49 % ಕಚ್ಚಾ ಪ್ರೋಟೀನ್ 14.7% ಕಚ್ಚಾ ನಾರಿನಂಶ, 3.7% ರಷ್ಟು ಈಥರ್ ಸಾರ, 24.26%, ಬೂದಿ 2.58% ಸುಣ್ಣ ಮತ್ತು 0.26% ರಂಜಕ ಇದೆ ಎಂದು ಚೆರಿಲ್ ಡಿ.ಎಮ್. (2014) ತೋರಿಸಿಕೊಟ್ಟಿದ್ದಾರೆ. ಅಝೋಲ್ಲಾ ಕೃಷಿ ಸರಳ ಹಾಗು ಉತ್ಪಾದನೆ ಹೆಚ್ಚು ಎಂದು ಪ್ರಭು & ಕುಮಾರ (2010) ಅಭಿಪ್ರಾಯಪಟ್ಟಿದ್ದಾರೆ. ಸಾರಜನಕದ ಪ್ರಮಾಣ 25.35% ರಷ್ಟಿದ್ದು ಕೋಳಿಗಳಲ್ಲಿ ಸುಲಭವಾಗಿ ಜೀರ್ಣವಾಗುತ್ತದೆ (ಪರಶುರಾಮಲು, 2013) ಇದನ್ನು ಮಾಂಸ ಕೋಳಿಗಳ ಆಹಾರದಲ್ಲಿ, ಮೀನು (ನ್ಯಾನ್ನು ಮತ್ತು ಫೆಲಾಯ್) ಹಂದಿ ಆಹಾರ (ಬಸೇರಾ, 1970), ಮೊಲ (ಶ್ರೀಮನ್ ನಾರಾಯಣ್ 1993) ಮತ್ತು ಮೆಲುಕಾಡುವ ದೊಡ್ಡ ಪ್ರಾಣಿಗಳು (ನಿಖ್ ಮತ್ತು ತಲಾಬ್, 1992) ಅಝೋಲ್ಲಾವನ್ನು ಎಲ್ಲಾ ಜಾನುವಾರಿಗಳಿಗೂ ಬಳಸಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಅಝೋಲ್ಲಾದಲ್ಲಿ ಪ್ರೋಟೀನ್ ಅಂಶ ಜಾಸ್ತಿಯಿದ್ದು ಸುಣ್ಣದ ಅಂಶ ಕಡಿಮೆಯಿರುತ್ತದೆ (ಕಮಲಾಸನ್ (2002) ಪ್ರಭು 2007).

**ಅಝೋಲ್ಲಾ ಬೆಳೆಯುವ ವಿಧಾನ :** 5 ಮೀ. ಉದ್ದ X 5 ಮೀ ಅಗಲ X 0.3 ಮೀ ಆಳದ ಗುಂಡಿಯನ್ನು ತೆಗೆಯಬೇಕು. ಏಕರೂಪದ ನೀರಿನ ಮಟ್ಟ ಕಾಯ್ದುಕೊಳ್ಳಲು ಎಲ್ಲಾ ಮೂಲೆಗಳು ಸಮತಟ್ಟಾಗಿರಬೇಕು. 5 ಅಡಿ X 6 ಅಡಿ ಅಳತೆಯ ದಪ್ಪನೆಯ ಪ್ಲಾಸ್ಟಿಕ್ ಹಾಳೆಯನ್ನು ಗುಂಡಿಯಾಕಾರದಲ್ಲಿ ಮುದುಡದಂತೆ ಹಾಕಬೇಕು. 10–15 ಕೆ.ಜಿ.ಯಷ್ಟು ಶೋಷಿತ ಫಲವತ್ತಾದ ಮಣ್ಣನ್ನು ಸಮಾನವಾಗಿ ಗುಂಡಿಯಲ್ಲಿ ಹರಡಬೇಕು. 3–5 ಕೆ.ಜಿ. ಸಗಣಿರಾಡಿ ಹಾಗೂ 30 ಗ್ರಾಂ. ನಷ್ಟು ಸೂಪರ್‌ಫಾಸ್ಫೇಟ್ ಹಾಗು 30 ಗ್ರಾಂ. ಖನಿಜ ಮಿಶ್ರಣ ಹಾಕುವುದರಿಂದ ನಿರಂತರವಾಗಿ ಅಝೋಲ್ಲಾ ಉತ್ಪಾದನೆ ಮಾಡಬಹುದು (ಚೇರಿಲ್ ಡಿ.ಎಮ್. 2014)

**ಮಾಂಸದ ಕೋಳಿಮರಿಗಳಲ್ಲಿ ದೇಹದ ತೂಕ ಏರಿಕೆ :** (ಬಸಾಕ್, 2002) ರವರು ಮಾಂಸಕೋಳಿಗಳಿಗೆ ಶೇ. 5 ರಷ್ಟು ಅಝೋಲ್ಲಾವನ್ನು ನೀಡುವುದರಿಂದ ಆರು ವಾರಗಳಲ್ಲಿ ದೇಹದ ತೂಕ ಏರಿಕೆಯಾಗಿದ್ದನ್ನು ಕಂಡುಕೊಂಡರು. ಸೆಸಮ್ ಆಹಾರ ಪದಾರ್ಥದ ಬದಲಿಗೆ 5% ಅಝೋಲ್ಲಾವನ್ನು ಕೂಡ ಉಪಯೋಗಿಸಬಹುದು. ಈ ಸಂಶೋಧನೆಯು ಸುಬುಧಿ ಮತ್ತು ಸಿಂಗ್ 1977 ರವರ ಸಂಶೋಧನೆಯ ಒಂದೆ ತರಹದ ಮಾಹಿತಿಯನ್ನು ನೀಡಿವೆ. ದುಮಾಲ್, (2009)

ಕೋಳಿ ಆಹಾರದಲ್ಲಿ 2.5 % – 5 % ರಷ್ಟು ಸೋಯಾಬೀನ್ ಬದಲಿಗೆ ಅಝೋಲ್ಲಾವನ್ನು ಉಪಯೋಗಿಸುವುದರಿಂದ ದೇಹ ತೂಕ ಹೆಚ್ಚಳದಲ್ಲಾಗಲಿ ಆರೋಗ್ಯದಲ್ಲಾಗಲಿ ಯಾವುದೇ ವ್ಯತಿರಿಕ್ತ ಪರಿಣಾಮಗಳು ಕಂಡುಬಂದಿಲ್ಲವೆಂದು ಮನಗಂಡಿದ್ದಾರೆ.

**ಆಹಾರ ಸೇವನೆ :** ಮಾಂಸದ ಕೋಳಿಗಳಲ್ಲಿ ಆಹಾರ ಸೇವನೆ ಬಹಳ ಮುಖ್ಯ ಯಾಕೆಂದರೆ 6 ವಾರಗಳಲ್ಲಿ ಮಾಂಸಕೋಳಿಗಳ ತೂಕ ಕನಿಷ್ಠಪಕ್ಷ 1.8–2.0 ತೂಕ ಇರಬೇಕಾಗುತ್ತದೆ. ಕ್ಯಾಸ್ಟಿಲ್ಲೊ (1981), ಕ್ಯೂರುಬಿನ್ (1986) ಶ್ರೀಮನ್‌ನಾರಾಯಣ (1993), ಬುಯಾನ್ 1998 ರವರ ಪ್ರಕಾರ ಶೇ. 15 ರಷ್ಟು ಅಝೋಲ್ಲಾವನ್ನು ಕೋಳಿ ಆಹಾರವಾಗಿ ಉಪಯೋಗಿಸಿದಾಗ ಆಹಾರ ಸೇವನೆಯಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಬೆಸ್ಸೆಡ್ ಮತ್ತು ಮೊರೆಂಟೊ (1985) ಪ್ರಕಾರ ಅಝೋಲ್ಲಾ ಬಳಕೆಯಿಂದ ಆಹಾರದ ಸ್ವಾದ ಹಾಗೂ ಆಹಾರದ ಬಳಕೆ ಕಡಿಮೆಯಾಗುತ್ತದೆ. ಬಸಕ್ (2002) ಆಹಾರದ ಬಳಕೆಯಲ್ಲಿ ಯಾವುದೇ ವ್ಯತ್ಯಾಸವನ್ನು 0, 5, 10, 15 % ಇರುವುದಿಲ್ಲ ಎಂದು ಕಂಡುಕೊಂಡರು, ಪಾರ್ಥಸಾರಧಿ (2009) ದೂಮಲ್‌ನ್ (2009) ರವರು ಕೂಡ ಬಸಕ್‌ರವರಂತೆಯೆ ಅಭಿಪ್ರಾಯಪಟ್ಟಿದ್ದಾರೆ.

**ಮೇವು ಪರಿವರ್ತನೆ ಸಾಮರ್ಥ್ಯ :** ಬಸಕ್ (2002) ರವರು ಆಹಾರ ಪರಿವರ್ತನೆ ಸಾಮರ್ಥ್ಯದಲ್ಲಿ ಇಳಿಕೆಯನ್ನು ಶೇ. 10 – ಶೇ. 15 ರಷ್ಟು ಅಝೋಲ್ಲಾ ಬಳಸಿದಾಗ ಕಂಡುಕೊಂಡರು. ಕೈರುಬಿನ್ (1986 ಬಿ), ಮುಜ್ತಾರ್ (1978) ಹೆಚ್ಚಿನ ನಾರು ಹಾಗೂ ಟ್ಯಾನಿನ್ ಅಂಶ ಆಹಾರ ಪರಿವರ್ತನೆಯಲ್ಲಿ ಇಳಿಕೆಗೆ ಕಾರಣವೆಂದು ತೋರಿಸಿಕೊಟ್ಟರು. ಪಾರ್ಥಸಾರಥಿ (2002) ಅವರು 5 % ದಷ್ಟು ಅಝೋಲ್ಲಾ ಬಳಕೆಯಿಂದ ಪ್ರೋಟೀನ್ ಹಾಗೂ ಆಹಾರ ಸಾಮರ್ಥ್ಯ ಅನುಪಾತದಲ್ಲಿ ಇಳಿಕೆ ಕಂಡುಕೊಂಡರು.

**ಮಾಂಸದ ಗುಣಧರ್ಮ :** ಬಸಕ್ (2002), ಶೇ. 5 ರಷ್ಟು ಅಝೋಲ್ಲಾ ಬಳಕೆಯಿಂದ ಡ್ರೆಸಿಂಗ್ % ಹೆಚ್ಚಳ ಕಂಡರು, ಶೇ. 15 ರಷ್ಟು ಅಝೋಲ್ಲಾ ನೀಡುವುದರಿಂದ ಗಿಬಲೆಟ್ % ಜಾಸ್ತಿಯಾಗಿದೆ. ಪಾರ್ಥಸಾರಥಿ (2002) ಹೆಚ್ಚಿನ ಡ್ರೆಸಿಂಗ್ % ನ್ನು 8 ವಾರಗಳಲ್ಲಿ ಮಾಂಸದ ಕೋಳಿಗಳಲ್ಲಿ ಶೆ. 5 ರಷ್ಟು ಅಝೋಲ್ಲಾ ಬಳಕೆಯಿಂದ ಕಂಡುಕೊಂಡರು.

**ನೊಣ ಹಾಗು** ಸೊಳ್ಳೆಗಳ **ಸಂಖ್ಯೆಯಲ್ಲಿ ನಿಯಂತ್ರಣ :** ನೊಣ ಮತ್ತು ಸೊಳ್ಳೆ ಕಾಟ ಕುಕ್ಕುಟ ಉದ್ಯಮದಲ್ಲಿರುವ ಒಂದು ಸಮಸ್ಯೆ ರಾಸಾಯನಿಕ ಪದಾರ್ಥಗಳನ್ನು ಬಳಸಿ ಇವುಗಳನ್ನು ನಿಯಂತ್ರಿಸಬಹುದಾದರು, ಅಝೋಲ್ಲಾ ಸಂಪೂರ್ಣವಾಗಿ ನೀರಿನ ಮೇಲೆ ತುಂಬಿಕೊಳ್ಳುವುದರಿಂದ ಸೊಳ್ಳೆ ಹಾಗೂ ನೊಣಗಳ ವಂಶಾಭಿವೃದ್ಧಿಯನ್ನು ತಪ್ಪಿಸುತ್ತದೆ. (ಆರ್. ರಾಜೇಂದ್ರನ್, ಆರ್, ರೂಬೆನ್, 1998).

**ಉತ್ಪಾದನಾ ವೆಚ್ಚ :** ಬಸಕ್ (2002), ದೂಮಲ್ (2009) ರವರ ಪ್ರಕಾರ ಶೇ. 5 ರಷ್ಟು ಅಝೋಲ್ಲಾವನ್ನು ಕೋಳಿ ಆಹಾರದಲ್ಲಿ ಬಳಸುವುದರಿಂದ ಒಟ್ಟು ಲಾಭದಲ್ಲಿ ಏರಿಕೆಯನ್ನು ಕಂಡಿದ್ದಾರೆ. ಅಲ್ಲದೆ ಇನ್ನು ಹೆಚ್ಚಿನ ಲಾಭ ಪಡೆಯಲು ಸೋಯಾಬಿನ್ ಆಹಾರ ಪದಾರ್ಥದ ಬದಲಿಗೆ ಅಝೋಲ್ಲಾವನ್ನು ನೀಡಬಹುದೆಂದು ಮನಗಂಡಿದ್ದಾರೆ.

**ಉಪಸಂಹಾರ :** ಅಝೋಲ್ಲಾವು ಕಡಿಮೆ ಖರ್ಚಿನಲ್ಲಿ ಉತ್ಪಾದಿಸುವ ಪ್ರೋಟೀನ್‌ಭರಿತ ಆಹಾರವಾಗಿದ್ದು ಇದನ್ನು ಮಾಂಸಕೋಳಿಗಳಲ್ಲಿ ದೇಹ ತೂಕ ಹೆಚ್ಚಿಸಲು, ಮೇವು ಪರಿವರ್ತನಾ ಸಾಮರ್ಥ್ಯವನ್ನು ಕಡಿಮೆಗೊಳಿಸಲು ಬೇಸಿಗೆಯಲ್ಲಿ ಉಷ್ಣತೆಯ ಪರಿಣಾಮಗಳನ್ನು ತಡೆಯಲು ಅಝೋಲ್ಲಾವನ್ನು ಕೋಳಿ ಆಹಾರದಲ್ಲಿ ಬೆರೆಸಿಕೊಡುವುದರಿಂದ ಹೆಚ್ಚಿನ ಲಾಭವನ್ನು ಪಡೆಯಬಹುದಾಗಿದೆ.

**ಉಲ್ಲೇಖಗಳು :**


B. Jeberlin Prabina And K. Kumar, Dried Azolla as a nutritionally rich cost effective and immuno-modulatory feed supplement for broilers, The Asian Journal of Animal Science (June, 2010), Vol. 5 Issue 1 : (20-22).

Balaji K, Jalaludeen A, Churchil RR, Peethambaran PA and Sethilkumar S (2009). Effect azolla (Azolla pinnata) on production performance of broiler chicken.Indian Journal of Poultry Science, 44: 195-198.

Basak, B. ; Pramanik, A. H. ; Rahman, M. S. ; Tarafdar, S. U. ; Roy, B. C., 2002. Azolla (Azolla pinnata) as a feed ingredient in broiler ration. Int. J. Poult. Sci., 1 (1/3): 29-34

Basak, B., Pramanik, A. H., Rahmnan, M. S., Taradar, S. U. & Roy. B.C. 2002. Azolla (Azolla pinnata) as a feed ingredient in broiler ration. Int. J. Poult. Sci., vol. 1, pp. 29-24.

Becera.,M (1990). Azolla filiculoides as partial replacement for traditional protein supplements in pig diets based on sugar cane juice. Livestock Research for Rural Development , **2**(2).

Becerra, M. , Preston, T. R. & Ogle, B. 1995. Effect of replacing whole boiled soya beans with Azolla in the diets of growing ducks. Livestock Research and Rural Development, vol. 7, no. 3, pp. 1-10.

Cherryl DM*, RMV Prasad, S JagadeeswaraRao, P Jayalaxmi and D Srinivas Kumar. A study on the nutritive value of Azolla pinnata, Livestock Research International | January-March, 2014 | Vol 2 | Issue 1 | Pages 13-15.

Dhumal, M. V. ; Siddiqui, M. F. ; Siddiqui, M. B. A. ; Avari, P. E., 2009. Performance of broilers fed on different levels of Azolla meal. Indian J. Poult. Sci., 44 (1): 65-68.

Kamalasanana Pillai, Premalatha, S. & Rajamony, S. 2002. Azolla – A sustainable feed substitute for livestock. Leisa India, March, 2002, pp. 15-17.

Muztar, A. J. ; Likuski, H. J. ; Slinger, S. J., 1978. Metabolizable energy content of Tower and Candle rapeseeds and rapeseed meals determined in two laboratories. Can. J. Anim. Sci., 58: 485-492.

Nik-Khah, A. and Motaghi-Talab, M., 1992. The use of Azolla in lactating cows. Iranian Journa of Agricultural Sciences, 23 (1):47-56.

Nwanna,.L.C. and A.E. Falaye. (1997). Substitution of Azolla meal for groundnut cake in diets for Nile tilapia, Oreochromis

niloticus (L). Appliedl Tropical Agriculture. **2:** 139-143.

Parashuramulu,.S, Swain P S and Nagalakshmi D (2013). Protein fractionation and in vitro digestibility of Azolla in ruminants. Journal of Animal Feed Research. **3(3)** 129-132.

Parthasarathy, R. ; Kadirvel, R. ; Kathaperumal, V., 2002. Azolla as a partial replacement for fish meal in broiler rations. Indian Vet. J., 79 (2): 144-146.

Prabha,. B J and Kumar K. (2010). Dried Azolla as a nutritionally rich cost effective and immuno-modulatory feed supplement for broilers. Asian Journal of Animal Science. **5(1)** 20-22

Prabu, M. J. 2007. Amazing Azolla acquires an alternative 'avatar'. The Hindu, September 20, 2007.

Querubin, L. J., P. F. Aloantara, E. S. Luis, and A. O. Princesa, 1986a. chemical composition and feeding value of Azolla in broiler ration. Philippines J. Vet. and Anim. Sci.,12:65.

R. Rajendaran,. R. Reuben.(1988). Laboratory evaluation of the water fern, Azolla pinnata for mosquito control. Journal of Biological Control, **2:** 114-116.

Singh PK and Subudhi BPR (1978). Utilization of azolla in poultry feed. Indian Farming, 27: 37-39.

Singh,.P. ( 1977). Azolla plants as fertilizer and feed. Indian Farming**, 27:**19.

Tamang, Y. and Samanta,G., 1993. Feeding value of azolla (Azolla pinnata) an aquatic fern in Black Bengal goats. Indian-Journal-of-Animal-Sciences., 63(2): 188-191.

Wagner G M (1997) Azolla: a review of its biology and utilization. Bot Rev **63** 1-21

## ಜಾನುವಾರುಗಳಲ್ಲಿ ಉಣ್ಣೆಯ ನಿಯಂತ್ರಣ

ಅಶ್ವಿನಿ, ಎಂ.ಎಸ್.[೧], ಸಂತೋಷ್ ಕುಮ್ಹಾರ್, ಸಿ.ಎಸ್.[೨], ಪುಟ್ಟಲಕ್ಷ್ಮಮ್ಮ, ಜಿ.ಸಿ[೩]. ಮತ್ತು ಮಮತಾ, ಜಿ.ಎಸ್.[೪]
[೧]ಎಂ.ವಿ.ಎಸ್ಸಿ ವಿದ್ಯಾರ್ಥಿ, [೨]ಪಶುವೈದ್ಯಾಧಿಕಾರಿ, [೩]ಸಹಪ್ರಾಧ್ಯಾಪಕರು, [೪]ಸಹಾಯಕ ಪ್ರಾಧ್ಯಾಪಕರು, ಪಶುವೈದ್ಯಕೀಯ ಪರೋಪಜೀವಿ ಶಾಸ್ತ್ರ ವಿಭಾಗ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೀದರ
¥ÀÄ¶ ÊzÀåQÃAiÀÄ ªÀÄ»zÁ«zÁå®AiÀÄ, ºÉ¨ÁâÀ¼À, ¨ÉAUÀ¼ÀÆgÀÄ 560024 «ÄAZÀAZÉ mirle.ashwinigowda@gmail.com, santhosh.cn58@gmail.com, puttalakshmamma @gmail.com, mamathags@gmail.com

**ಪ್ರಬಂಧಸಾರ:–** ಹಲವಾರು ರೋಗ (ಸೋಂಕು) ಗಳ ಸೋಂಕುವಾಹಕವಾಗಿ ಉಣ್ಣೆಗಳು ಸೊಳ್ಳೆಯ ನಂತರದ ೨ನೇ ಸ್ಥಾನದಲ್ಲಿವೆ. ಉಣ್ಣೆಗಳಿಂದ ಹರಡುವ ರೋಗಗಳು (ಸೋಂಕುಗಳು) ಜಾನುವಾರುಗಳ ಉತ್ಪಾದಕತೆಗೆ ಅಡಚಣೆ. ಉಣ್ಣೆಗಳಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಪ್ರತಿ ವರ್ಷ ಒಟ್ಟು ಮೊತ್ತ ಲಕ್ಷಕೋಟಿ ಆರ್ಥಿಕವಾಗಿ ನಷ್ಟವಾಗುತ್ತಿದೆ. ದಶಮಾನಗಳಿಂದ ಉಣ್ಣೆ ಹಾಗೂ ಉಣ್ಣೆಯಿಂದ ತಗಲುವ ಸೋಂಕುಗಳ ನಿರ್ಮೂಲನ ಕಾರ್ಯ ನುಶಿನಾಶಕಗಳ ಬಳಕೆಯಿಂದ ಜಾರಿಯಲ್ಲಿದೆ. ಈ ನುಶಿನಾಶಕಗಳು ದುಬಾರಿಯೂ ಹೌದು. ನುಶಿನಾಶಕಕ್ಕೆ ಉಣ್ಣೆಗಳಲ್ಲಿ ಪ್ರತಿರೋಧ ಶಕ್ತಿ ವೃದ್ಧಿಯಾಗುವ ಅವಕಾಶದಿಂದಾಗಿ, ಹಾಲಿನಲ್ಲಿ ನುಶಿನಾಶಕದ ಉಳಿಕೆಯಿಂದಾಗಿ ಹಾಗೂ ಪರಿಸರದ ಸುರಕ್ಷತೆಗಾಗಿ ಬೇರೆ ರೀತಿಯಾದ, ಕಡಿಮೆ ದುಷ್ಪರಿಣಾಮಗಳಿದ್ದು, ಆದರೆ ಸಮಾನದ ಕಾರ್ಯ ಸಮರ್ಥತೆ ಹೊಂದಿರುವ ವಿಧಾನದ ಅವಶ್ಯಕತೆಯಿದೆ. ಈ ಪುನರ್ ಅವಲೋಕನ, ವಿವಿಧ ಪರ್ಯಾಯ ವಿಧಾನಗಳನ್ನು ಬಳಸಿ ಉಣ್ಣೆ ನಿಯಂತ್ರಣ ಮಾಡುವುದು ಮತ್ತು ಸಮಗ್ರ ಪೀಡೆ ನಿಯಂತ್ರಣದಲ್ಲಿ ಅವುಗಳನ್ನು ಅಳವಡಿಸಿಕೊಳ್ಳುವುದರ ಬಗ್ಗೆ ನಿರ್ದೇಶಿಸುತ್ತದೆ.

**ಪೀಠಿಕೆ :** ವಿಶ್ವದಾದ್ಯಂತ ಪ್ರಾಣಿಜನ್ಯ (ಪ್ರೊಟೀನ್) ಸಸಾರಜನಕಕ್ಕೆ ಅತಿ ಹೆಚ್ಚು ಬೇಡಿಕೆಯಿದೆ. ಈ ಕಾರಣ ಹಾಲಿನ ಉತ್ಪನ್ನಗಳ ಮೌಲ್ಯ ಹೆಚ್ಚಿಸಿದ್ದು, ಹೈನುಗಾರಿಕೆಯ ವಿಸ್ತರಣೆ ಅನಿವಾರ್ಯವಾಗಿಸಿದೆ. ಭಾರತವು ೧೯೯ ಮಿಲಿಯನ್ ದನಗಳು ಹಾಗೂ ೧೦೫ ಮಿಲಿಯನ್ ಎಮ್ಮೆಗಳನ್ನು ಹೊಂದಿರುವುದು. ಹೆಚ್ಚುತ್ತಿರುವ ಹೈನುಗಾರಿಕೆಯಲ್ಲಿ ೧.೪ ಬಿಲಿಯನ್ ಜಾನುವಾರುಗಳ ಪಾಲಿಗೆ ಉಣ್ಣೆಗಳು ಅತಿ ದೊಡ್ಡ ಸವಾಲಾಗಿ ನಿಂತಿದೆ. ಪ್ರಪಂಚದಲ್ಲೇ ಸೋಂಕು ಹರಡುವಿಕೆಯಲ್ಲಿ, ಉಣ್ಣೆಗಳದು ಪ್ರಮುಖ ಪಾತ್ರ. ಉಣ್ಣೆಗಳಿಂದ ತಗಲುವ ಸೋಂಕು ಗಳಿಂದಾಗಿ ಹೈನುಗಾರಿಕೆಯಲ್ಲಿ ಆರ್ಥಿಕ ನಷ್ಟವಾಗುತ್ತಿದೆ. ಉಣ್ಣೆಗಳು ಜಾನುವಾರುಗಳ ರಕ್ತ ಹೀರುವುದರಿಂದಾಗಿ ರಕ್ತಹೀನತೆ, ಚರ್ಮಕ್ಕೆ ಗಾಸಿ ಉಂಟಾಗುವುದು. ಕಾಲಕ್ರಮೇಣ ಫಲವತ್ತತೆ, ದೇಹದ ತೂಕ, ಹಾಲಿನ ಉತ್ಪಾದನೆಯಲ್ಲಿ ಇಳಿಕೆ, ವಿಷಭಾದೆ, ಪಾರ್ಶ್ವವಾಯು (ನಿಸ್ಸತ್ವ) ಹಾಗೂ ಸಾವು ಸಂಭವಿಸಬಹುದು. ಉಣ್ಣೆಗಳು ಮನುಷ್ಯನಿಗೂ ಅಪಾಯಕಾರಿ. ಉದಾ: ಕಾಸನೂರು ಅರಣ್ಯ ಕಾಯಿಲೆ ೫ ಜಿಲ್ಲೆ (ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ) ಯಲ್ಲಿ ಡಿಸೆಂಬರ್ ಹಾಗೂ ಮೇ ತಿಂಗಳಲ್ಲಿ ಮರಿ ಉಣ್ಣೆಗಳ ಚಟುವಟಿಕೆ ಕಾಡಿನಲ್ಲಿ ಅತಿ ಹೆಚ್ಚಿದ್ದು, ಒಮ್ಮೆಲೇ ರೋಗ ಕಾಣಿಸಿಕೊಳ್ಳುತ್ತದೆ. ಈ ಪುನರ್ ಅವಲೋಕನದಲ್ಲಿ ಉಣ್ಣೆಗಳು ಹೈನುಗಾರಿಕೆಯ ಮೇಲೆ ಬೀರುವ ಆರ್ಥಿಕ ಪರಿಣಾಮ ಹಾಗೂ ವಿವಿಧ ಪರ್ಯಾಯ ವಿಧಾನಗಳನ್ನು ಬಳಸಿ ಉಣ್ಣೆ ನಿಯಂತ್ರಿಸುವ ಬಗ್ಗೆ ವಿವರಿಸಲಾಗಿದೆ.



**ಉಣ್ಣೆ ಪೀಡನೆಯಿಂದಾಗುವ ಆರ್ಥಿಕ ವರ್ಷ:** ಉಣ್ಣೆ ಪೀಡನೆಯಿಂದಾಗಿ ಜಾನುವಾರುಗಳ ಉತ್ಪಾದಕತೆ ಹಾಗೂ ಫಲವತ್ತತೆ ಕಡಿಮೆಯಾಗುವುದು. ಹಲವು ಬಾರಿ ಸಾವು ಸಂಭವಿಸಬಹುದು. ಆರ್ಥಿಕ ದೃಷ್ಟಿಯಲ್ಲಿ ಉಣ್ಣೆ ಜಾನುವಾರುಗಳ ಮುಖ್ಯ ಬಾಹ್ಯ ಪರೋಪಜೀವಿ. ಭಾರತದಲ್ಲಿ ಉಣ್ಣೆ ಹಾಗೂ ಉಣ್ಣೆಯಿಂದ ತಗಲುವ ಸೋಂಕಿನಿಂದಾಗಿ ವರ್ಷಕ್ಕೆ ೪೯೮.೭ ಬಿಲಿಯನ್ ಹಣ ನಷ್ಟವಾಗುತ್ತಿದೆ.

ಪ್ರತಿ ಉಣ್ಣೆಯ ಕಡಿತ, ಜಾನುವಾರುಗಳಲ್ಲಿ ಒತ್ತಡ ಹಾಗೂ ರೋಗ ಪ್ರತಿರೋಧ ಶಕ್ತಿಯನ್ನು ದುರ್ಬಲಗೊಳಿಸುತ್ತದೆ. ಉಣ್ಣೆಯಿಂದಾಗುವ ಆರ್ಥಿಕ ನಷ್ಟವನ್ನು ಪ್ರತಿ ರಕ್ತ ನುಂಗಿದ ಉಣ್ಣೆಯಿಂದ ಕಡಿಮೆಯಾದ ದೇಹದ ತೂಕ, ಇಳಿದ ಹಾಲಿನ ಉತ್ಪಾದನೆ ಅಥವಾ ಪ್ರತಿ ವರ್ಷಕ್ಕೆ ಉಂಟಾದ ಹಣಕಾಸಿನ ನಷ್ಟದ ರೀತಿ ವ್ಯಕ್ತಪಡಿಸಲಾಗುವುದು. ಒಂದು ಪೂರ್ಣ ರಕ್ತನುಂಗಿದ ಉಣ್ಣೆಯೂ ಪ್ರತಿದಿನವೂ ೮.೯ ಮಿ.ಲೀ. ನಂತೆ ಹಾಲಿನ ಉತ್ಪಾಡನೆ ಹಾಗೂ ಒಂದು ಗ್ರಾಂ ನಂತೆ ದೇಹದ ತೂಕವನ್ನು ಕಡಿಮೆಗೊಳಿಸುವುದು. ಶೇ. ೧೪ರಷ್ಟು ಹಾಲಿನ ಉತ್ಪಾದನೆಯಲ್ಲಿ ಇಳಿಕೆ ಉಂಟಾದರೆ, ಆದಾಯದ ಮೇಲೆ ಮಹತ್ವಪೂರ್ಣ ಪರಿಣಾಮ ಬೀರುವುದು, ವಿಶೇಷವಾಗಿ ಜಾನುವಾರುಗಳನ್ನೇ ಅವಲಂಬಿಸಿದ ಕುಟುಂಬಗಳಿಗೆ ಇದು ಗಂಭೀರ ನಷ್ಟ. ಉಣ್ಣೆ ಪೀಡನೆ ಜಾನುವಾರುಗಳ ತಳಿಗಳನ್ನು ಪರಾವಲಂಭಿಸಿದೆ. ನಾಟಿ ತಳಿಗಳು ಅತಿ ಕಡಿಮೆ ಹಾಗೂ ಸೀಮೆ ತಳಿಗಳು ಅತಿ ಹೆಚ್ಚು ಪೀಡನೆಯಿಂದ ಬಳಲುತ್ತದೆ.

**ಉಣ್ಣೆಯಿಂದ ತಗಲುವ ಸೋಂಕುನಿಂದಾಗುವ ನಷ್ಟ :** ಉಣ್ಣೆಗಳು ನೇರ ಉಂಟು ಮಾಡುವ ತೊಂದರೆಗಳ ಜತೆಗೆ ಹಲವಾರು ಸೋಂಕುಗಳನ್ನು ಉದಾ: ಬೆಬೀಸಿಯೋಸಿಸ್, ತೈಲೇರಿಯಾಸಿಸ್ (ದನಗಳ ಮಲೇರಿಯಾ), ದನಗಳ ನುಸಿಜ್ವರ ಹಾಗೂ ಅನಪ್ಲಾಸ್ಮೋಸಿಸ್‌ನಂತ ಗಂಭೀರ ರಕ್ತ ರೋಗಗಳನ್ನು ಜಾನುವಾರುಗಳಿಂದ ಜಾನುವಾರುಗಳಿಗೆ ರವಾನಿಸುತ್ತವೆ. ಸೋಂಕಿಗೆ ತುತ್ತಾಗುವ ಜಾನುವಾರುಗಳಲ್ಲಿ ಒಮ್ಮೆಲೇ ರೋಗ ಕಾಣಿಸಿಕೊಂಡಾಗ ಗಣನೀಯ ಆರ್ಥಿಕ ನಷ್ಟ ಸಂಭವಿಸುವುದು. ಉಣ್ಣೆಯಿಂದ ತಗಲುವ ಸೋಂಕಿನಿಂದಾಗಿ, ಜಾನುವಾರುಗಳಲ್ಲಿ ಸಂಭವಿಸುವ ಸಾವು, ದೀರ್ಘಕಾಲಿಕ ಅಸ್ವಸ್ಥತೆ, ಪಶುವೈದ್ಯರ ವೆಚ್ಚ ಹಾಗೂ ನಿರ್ಬಂಧಿತ ಚಲನೆಯಿಂದ ಆರ್ಥಿಕ ನಷ್ಟವಾಗುವುದು.

**ಉಣ್ಣೆ ಹಾಗೂ ಉಣ್ಣೆಯಿಂದ ತಗಲುವ ರೋಗಗಳ ಚಿಕಿತ್ಸೆಯಿಂದಾಗುವ ಆರ್ಥಿಕ ನಷ್ಟ :** ಮುಖ್ಯವಾಗಿ ಉಣ್ಣೆಯನ್ನು ನಿಯಂತ್ರಿಸಲು ಉಪಯೋಗಿಸುವ ವಿಧಾನಗಳಿಂದ ಅತಿ ಹೆಚ್ಚು ಆರ್ಥಿಕ ನಷ್ಟ ಉಂಟಾಗುವುದು. ಸಾಂಪ್ರದಾಯಕವಾಗಿ ನುಶಿನಾಶಕ ಬಳಸಿ ಉಣ್ಣೆ ನಿಯಂತ್ರಣ ಮಾಡಲಾಗುವುದು. ಪ್ರತಿ ಜಾನುವಾರಕ್ಕೆ ಪ್ರತಿ ವರ್ಷಕ್ಕೆ ನುಶಿನಾಶಕ ದ್ರವ್ಯದಲ್ಲಿ ಜಾನುವಾರುಗಳನ್ನು ಆದ್ದುವುದಕ್ಕಾಗಿ ರೂ. ೫೫೨.೨೪೯ ನುಶಿನಾಶಕವನ್ನು ಸಿಂಪಡಿಸುವಿಕೆಗೆ ರೂ. ೮೯೨.೮ ಹಾಗೂ ದೇಹದ ಮೇಲೆ ಸುರಿಯಲು ರೂ. ೧೩೮೨.೪೫ ವೆಚ್ಚವಾಗುತ್ತಿದೆ.

**ಉಣ್ಣೆ ನಿಯಂತ್ರಿಸಲು ವಿವಿಧ ವಿಧಾನಗಳು**

**ನುಶಿನಾಶಕ ಬಳಸಿ ಉಣ್ಣೆ ನಿಯಂತ್ರಣ:** ನುಶಿನಾಶಕ ಬಳಸಿ ಉಣ್ಣೆ ಪೀಡನೆಯಿಂದ ಪಾರಾಗುವುದು ಜಗತ್ತಿನಾದ್ಯಂತ ಪ್ರಸಿದ್ಧ. ಆದರೆ, ನಿಯಮಿತವಾಗಿ ನುಶಿನಾಶಕಗಳ ಬಳಕೆ ರೈತರ ಪಾಲಿಗೆ ದುಬಾರಿ ಅಭ್ಯಾಸ. ಜತೆಗೆ ಪಶುವೈದ್ಯರ ವೆಚ್ಚ, ಕೆಲಸಗಾರರ ಖರ್ಚು, ನುಶಿನಾಶಕಗಳಿಗೆ ಉಣ್ಣೆಗಳಲ್ಲಿ ಪ್ರತಿರೋಧ ಶಕ್ತಿ ಸಂಭವಿಸಬಹುದು ಹಾಗೂ ಅನಾವಶ್ಯಕವಾಗಿ ಜಾನುವಾರುಗಳ ನಿರ್ಬಂಧಿತ ಚಲನೆಗೆ ದಾರಿಯಾಗುವುದು. ಕೈಯಿಂದ ಉಣ್ಣೆಗಳನ್ನು ಆರಿಸುವುದು ಅಥವಾ ಉಪಯೋಗಿಸಿದ ಕಾರಿನ ಎಣ್ಣೆಯನ್ನು ಬಳಸುವುದು. ಸಣ್ಣ ರೈತಾಪಿಗಳಲ್ಲಿ ವಾಡಿಕೆಯಲ್ಲಿದೆ. ಆದರೆ ಈ ವಾಡಿಕೆ ಜಾನುವಾರುಗಳ ಮತ್ತು ಮನುಷ್ಯನ ಆರೋಗ್ಯ ದೃಷ್ಟಿಯಿಂದ ಸರಿಯಲ್ಲ.

**ನುಶಿನಾಶಕಗಳಿಗೆ ಉಣ್ಣೆಗಳಿಂದ ಉಂಟಾಗುವ ಪ್ರತಿರೋಧ ಶಕ್ತಿಯ ನಿರ್ವಹಣೆ :** ನುಶಿನಾಶಕದ ಬಗ್ಗೆ ಎಚ್ಚರಿಕೆ ವಹಿಸುವುದು, ಸರದಿಯಲ್ಲಿ ಹಾಗೂ ಸಂಯೋಜನೆಯಲ್ಲಿ ವಿವಿಧ ನುಶಿನಾಶಕಗಳನ್ನು ಉಪಯೋಗಿಸುವುದರಿಂದ, ಉಣ್ಣೆಗಳಲ್ಲಿ ಉಂಟಾಗುವ ಪ್ರತಿರೋಧ ಶಕ್ತಿಯನ್ನು ನಿಯಂತ್ರಿಸಬಹುದು.

**ನಿಯಮಿತವಾಗಿ ನುಶಿನಾಶಕದ ಬಗ್ಗೆ ಎಚ್ಚರಿಕೆ ವಹಿಸುವುದು:** ಉಣ್ಣೆಗಳ ಋತುಮಾನದಲ್ಲಿ ನುಶಿನಾಶಕವನ್ನು ಪ್ರತಿ ೩ ವಾರಗಳಿಗೊಮ್ಮೆ ಸಿಂಪಡಿಸಲು ಸೂಚಿಸಲಾಗುವುದು. ಪದೇ ಪದೇ ನುಶಿನಾಶಕವನ್ನು ಬಳಸುವುದರಿಂದ ಉಣ್ಣೆಗಳಲ್ಲಿ ನುಶಿನಾಶಕಕ್ಕೆ ಪ್ರತಿರೋಧ ಶಕ್ತಿ ಉಂಟಾಗುವ ಸಾಧ್ಯತೆಗಳು ಹೆಚ್ಚಿರುತ್ತದೆ. ಆದ್ದರಿಂದ ನುಶಿನಾಶಕವನ್ನು ಉಣ್ಣೆಗಳ ಋತುಮಾನದಲ್ಲಿ ೫ ಬಾರಿಗಿಂತ ಹೆಚ್ಚು ಬಳಸಬಾರದು.

**ಸರದಿಯಲ್ಲಿ ನುಶಿನಾಶಕಗಳ ಬಳಕೆ:** ವಿವಿಧ ರೀತಿಯಲ್ಲಿ ಕೆಲಸ ಮಾಡುವ ನುಶಿನಾಶಕಗಳನ್ನು ಸರದಿಯಲ್ಲಿ ಬಳಸುವುದರಿಂದ, ನುಶಿನಾಶಕಗಳಿಗೆ ಉಣ್ಣೆಗಳಲ್ಲಿ ಉಂಟಾಗುವ ಪ್ರತಿರೋಧ ಶಕ್ತಿಯನ್ನು ನಿಯಂತ್ರಿಸಬಹುದು. ಆದರೆ ಸರದಿಯಲ್ಲಿ ನುಶಿನಾಶಕಗಳನ್ನು ಬಳಸುವುದು ದುಬಾರಿ ಹಾಗೂ ಕಷ್ಟದ ಅಭ್ಯಾಸ. ಉಣ್ಣೆಗಳು ಪ್ರತಿರೋಧ ವ್ಯಕ್ತಪಡಿಸುವ ನುಶಿನಾಶಕವನ್ನು ಸ್ವಲ್ಪ ಕಾಲದ ನಂತರ ಬಳಸುವುದರಿಂದ ನುಶಿನಾಶಕಕ್ಕೆ ಉಣ್ಣೆಯ ಸೂಕ್ಷ್ಮತೆ ತಿರುಗಿಬರುವುದು (ಮರಳಿ ಬರುವುದು) .

**ಸಂಯೋಜನೆಯಲ್ಲಿ ನುಶಿನಾಶಕಗಳ ಬಳಕೆ:** ಹಲವಾರು ನುಶಿನಾಶಕವನ್ನು ಸಂಯೋಜನೆಯಲ್ಲಿ ಬಳಸುವುದು ಒಂದು ಆಕರ್ಷಕ ಮಾರ್ಗ. ಇದರ ಮೂಲ ತತ್ವ ಏನೆಂದರೆ, ಉಣ್ಣೆಗಳು ವಿಭಿನ್ನ ರೀತಿಯಲ್ಲಿ ಕೆಲಸ ಮಾಡುವ ವಿವಿಧ ನುಶಿನಾಶಕಗಳಿಗೆ ಪ್ರತಿರೋಧ ಶಕ್ತಿ ವ್ಯಕ್ತಪಡಿಸುವಲ್ಲಿ ವಿಫಲವಾಗುತ್ತವೆ.

ನುಶಿನಾಶಕ ಬಳಸುವುದರಿಂದ ಪರಿಸರ ಮಲಿನಗೊಳ್ಳುವುದು ಹಾಗೂ ಹಾಲಿನಲ್ಲಿ ನುಶಿನಾಶಕದ ಉಳಿಕೆಯಾಗುವುದು. ಸಾರ್ವಜನಿಕರಲ್ಲಿ ನುಶಿನಾಶಕ ಮುಕ್ತ ಹಾಲೂ ಹಾಗೂ ಹಾಲಿನ ಉತ್ಪನ್ನಗಳಿಗೆ ಬಹು ಬೇಡಿಕೆಯಿದೆ. ನುಶಿನಾಶಕಗಳ ಮೇಲಿನ ಅತಿಯಾದ ಅವಲಂಬನೆ ಹಾಗೂ ಹಾಲಿನಲ್ಲಿನ ನುಶಿನಾಶಕದ ಉಳಿಕೆಯನ್ನು ತಪ್ಪಿಸಲು ವಿವಿಧ ಪರ್ಯಾಯ ವಿಧಾನಗಳನ್ನು ಬಳಸಿ ಸಮಗ್ರ ಉಣ್ಣೆ ಹತೋಟಿಯ ಅವಶ್ಯಕತೆಯಿದೆ.

**ಪೌಷ್ಟಿಕಾಂಶದ ನಿರ್ವಹಣೆ:** ಪ್ರೋಟೀನ್ ಹಾಗೂ ಶಕ್ತಿಯ ಕೊರತೆಯಿಂದಾಗಿ ಜಾನುವಾರುಗಳಲ್ಲಿ ನಿರೋಧ ಶಕ್ತಿಯ ಮಟ್ಟ ಕುಗ್ಗುವುದು. ಒಂದು ಪ್ರಯೋಗದಲ್ಲಿ, ಮೊಲ ಮತ್ತು ಕುರಿಗಳಿಗೆ ಕಡಿಮೆ ಹಾಗೂ

ಹೆಚ್ಚು ಪ್ರೋಟೀನ್ ಆಹಾರ ನೀಡಲಾಯಿತು. ನಂತರ ಉಣ್ಣೆಗಳನ್ನು ದೇಹದ ಮೇಲೆ ಬಿಡಲಾಯಿತು. ಕಡಿಮೆ ಪ್ರೋಟೀನ್ ಆಹಾರ ನೀಡಿದ ಪ್ರಾಣಿಗಳು ಉಣ್ಣೆಗಳಿಗೆ ನಿರೋಧ ಶಕ್ತಿ ಗಳಿಸುವಲ್ಲಿ ವಿಫಲವಾದವು, ದೇಹದ ತೂಕವು ಕಡಿಮೆಯಾಯಿತು ಹಾಗೂ ರಕ್ತಹೀನತೆ ಕಾಣಿಸಿ ಕೊಂಡಿತು. ಆದರೆ ಹೆಚ್ಚು ಪ್ರೋಟೀನ್ ಆಹಾರ ನೀಡಿದ ಪ್ರಾಣಿಗಳಲ್ಲಿ ಉಣ್ಣೆಗಳಿಗೆ ಉತ್ತಮವಾದ ನಿರೋಧ ಶಕ್ತಿ ಉಂಟಾಗಿ, ದೇಹದ ತೂಕವು ಪರಿಪಾಲಿಸಿ ರಕ್ತಹೀನತೆಯಿಂದ ಪಾರಾದವು. ನಾಟಿ ತಳಿಗಳಲ್ಲಿನ ಪ್ರಕೃತಿದತ್ತ ಉಣ್ಣೆಗಳಿಗೆ ಪ್ರತಿರೋಧ ಶಕ್ತಿಯು, ಅವುಗಳಲ್ಲಿನ ನಿರೋಧ ಶಕ್ತಿಯೇ ಮೂಲ ಕಾರಣ. ಕೆಳಗುಣಮಟ್ಟದ ಪೌಷ್ಟಿಕಾಂಶ ಆಹಾರದಲ್ಲಿ ಸಲಹಿದ ದನಗಳಲ್ಲಿ ನಿರೋಧಕಶಕ್ತಿ ಗೆ ಹಾನಿ ಉಂಟಾಗುವುದು. ಆದ್ದರಿಂದ ಉಣ್ಣೆ ಪೀಡನೆಗೆ ಜಾನುವಾರುಗಳಲ್ಲಿ ಪ್ರತಿರೋಧ ಶಕ್ತಿ ಉಂಟು ಮಾಡುವಲ್ಲಿ, ಪೌಷ್ಟಿಕಾಂಶದ ಪಾತ್ರ ಮುಖ್ಯವಾದದ್ದು. ಉಣ್ಣೆ ನಿರ್ವಹಣೆಯಲ್ಲಿ ಈ ಅಂಶಕ್ಕೆ ಹೆಚ್ಚು ಒತ್ತು ನೀಡಬೇಕಾಗಿದೆ.

**ಗಿಡಮೂಲಿಕೆಗಳ ಬಳಕೆ:** ಹಲವಾರು ಗಿಡಮೂಲಿಕೆಗಳು ಉಣ್ಣೆಯನ್ನು ನಾಶಗೊಳಿಸಿ ಅಥವಾ ಅದರ ಮೊಟ್ಟೆಯಿಡುವಿಕೆಯನ್ನು ತಡೆಯುತ್ತವೆ. ತುಂಬೆಸೊಪ್ಪು ಮತ್ತು ಬೇವಿನ ಸೊಪ್ಪನ್ನು ತಲ ೧ ಕೆ.ಜಿ.ಯಷ್ಟು ನುಣ್ಣಗೆ ಅರೆದು ಬೆಳಿಗ್ಗೆ ಮತ್ತು ಸಾಯಂಕಾಲ ದೇಹಕ್ಕೆ ೩–೪ ದಿವಸ ಹಚ್ಚುವುದು ಅಥವಾ ಬೇವು, ತುಂಬೆ, ಚೆಂಡು ಹೂಗಳನ್ನು ತಲ ೧/೪ ಕೆ.ಜಿ. ಯಂತೆ ೧/೪ಲೀ. ಹರಳೆಣ್ಣೆಯಲ್ಲಿ ಅರೆದು ಜಾನುವಾರುಗಳಿಗೆ ಪ್ರತಿದಿನ ಉಣ್ಣೆ ಕಡಿಮೆಯಾಗುವವರೆಗೆ ಹಚ್ಚುವುದು. ೧/೪ ಕೆ.ಜಿ. ಹೊಗೆಸೊಪ್ಪನ್ನು ೨ ಲೀ. ನೀರಿನಲ್ಲಿ ಕುದಿಸಿ ಸೋಸಿ ಪ್ರಾಣಿಯ ದೇಹಕ್ಕೆ ಸಿಂಪಡಿಸಿ ಮರುದಿನ ಸ್ನಾನ ಮಾಡಿಸುವುದು ಅಥವಾ ೧೦೦ ಮಿ.ಲೀ. ತೆಂಗಿನ ಎಣ್ಣೆಗೆ ೧೦ ಗ್ರಾಂ ಪಚ್ಚದ ಕರ್ಪೂರ ಹಾಕಿ ಸ್ವಲ್ಪ ಬೆಚ್ಚಗೆ ಮಾಡಿ ದೇಹಕ್ಕೆ ತಿಂಗಳಲ್ಲಿ ೨–೪ ಸಲ ಹಚ್ಚುವುದು. ಸೀತಾಫಲದ ಬೀಜ ಮತ್ತು ಬೇವಿನ ಎಲೆಯನ್ನು ನುಣ್ಣಗೆ ಅರೆದು ೪–೫ ದಿನದವರೆಗೆ ಮುಂಜಾನೆ ಹಚ್ಚಿ ಸಂಜೆ ಮೈತೊಳೆಯುವುದು ಮತ್ತು ಹೊಂಗೆ ಸೊಪ್ಪನ್ನು ದನಗಳ ಕಾಲಿನಡಿಯಲ್ಲಿ ಹಾಕಬಹುದು.

**ಜಾನುವಾರುಗಳ ಅನುವಂಶೀಯ ಪ್ರತಿರೋಧ ಶಕ್ತಿಯ ಸುಧಾರಣೆ:** ಒಂದೇ ರೀತಿಯಾದ ಪರಿಸರದಲ್ಲಿ ಕೆಲವು ತಳಿಯಲ್ಲಿ ಮಾತ್ರ ಅಲ್ಪಸಂಖ್ಯೆ ಉಣ್ಣೆಗಳು ಕಾಣಸಿಗುತ್ತವೆ. ನಾಟಿ ತಳಿಯಲ್ಲಿ ಉಣ್ಣೆಗಳಿಗೆ ಪ್ರತಿರೋಧ ಶಕ್ತಿಯು ಅತಿ ಹೆಚ್ಚಿದ್ದು, ಅವುಗಳ ಅಭಿವೃದ್ಧಿ ಜೊತೆಗೆ ಹುಲ್ಲುಗಾವಲಿನ ನಿರ್ವಹಣೆಯಿಂದ ನುಶಿನಾಶಕದ ಬಳಕೆಯನ್ನು ತಡೆಯಬಹುದು.

**ಪರಿಸರ ನಿರ್ವಹಣೆ**

**೧. ಹುಲ್ಲುಗಾವಲು ಸುಡುವಿಕೆ :** ಬಹಳ ಸಸ್ಯರಾಶಿ ಇರುವ ಮತ್ತು ಅಧಿಕ ಮಳೆ ಬೀಳುವ ಜಾಗದಲ್ಲಿ ಅತಿ ಹೆಚ್ಚು ಉಣ್ಣೆಗಳು ಕಾಣ ಸಿಗುತ್ತವೆ. ಹುಲ್ಲುಗಾವಲನ್ನು ಸುಡುವುದರಿಂದ, ಹುಲ್ಲುಗಾವಲಿನಲ್ಲಿರುವ ಉಣ್ಣೆಗಳನ್ನು ನಾಶಮಾಡಬಹುದು. ಪ್ರತಿವರ್ಷ ಹುಲ್ಲುಗಾವಲನ್ನು ಸುಡುವುದರ ಮೂಲಕ ಜಾನುವಾರುಗಳ ಮೇಲಿನ ಉಣ್ಣೆ ಸಂಖ್ಯೆ ನಿಯಂತ್ರಣಕ್ಕೆ ಬರುವುದು.

ಕೆಲವು ಬಾರಿ ಉಣ್ಣೆಯ ಮೊಟ್ಟೆಗಳು ಮಣ್ಣಿನಲ್ಲಿ ಅಡಗಿಕೊಳ್ಳುವ ಸಾಧ್ಯತೆಯಿಂದಾಗಿ ಕೇವಲ ಹುಲ್ಲುಗಾವಲನ್ನು ಸುಡುವುದರಿಂದ ಉಣ್ಣೆ ನಿಯಂತ್ರಣ ಸಾಧ್ಯವಿಲ್ಲ. ಜತೆಗೆ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿನ ಸಣ್ಣ ರೈತಾಪಿಗಳಿಗೆ ಹಲವು ಬಾರಿ ಹುಲ್ಲುಗಾವಲನ್ನು ಸುಡುವುದು ಕಷ್ಟ.

**೨. ಸರದಿಯಲ್ಲಿ ಹುಲ್ಲುಗಾವಲುಗಳ ಬಳಕೆ :** ಕೆಳ ಸಮಯ ಹುಲ್ಲುಗಾವಲಿನಲ್ಲಿ ಜಾನುವಾರುಗಳನ್ನು ಮೇಯಿಸದೆ ಬಿಡುವುದರಿಂದ ಮರಿ ಉಣ್ಣೆಗಳು ಸಾವನ್ನಪ್ಪುತ್ತವೆ. ಈ ರೀತಿ ಸರದಿಯಲ್ಲಿ ಹುಲ್ಲುಗಾವಲುಗಳ ಬಳಕೆಯ ಜತೆಗೆ ಬೇರೆ ವಿಧಾನಗಳನ್ನು ರೂಡಿಸಿಕೊಂಡರೆ ೭೭–೮೯% ಉಣ್ಣೆಗಳ ನಿಯಂತ್ರಣ ಸಾಧ್ಯ. ಬಡ ರೈತರು ಹುಲ್ಲುಗಾವಲನ್ನು ಸುಡುವ ಬದಲು ಈ ಮಾರ್ಗವನ್ನು ಸುಲಭವಾಗಿ ಅನುಸರಿಸಬಹುದು.

**೩. ಕೊಟ್ಟಿಗೆ ನಿರ್ವಹಣೆ:** ಪ್ರತಿನಿತ್ಯ ಕೊಟ್ಟಿಗೆಯನ್ನು ಸ್ವಚ್ಛಗೊಳಿಸಿ, ಹಿತವಾದ ವಾಯುಸಂಚಾರಕ್ಕೆ ದಾರಿಮಾಡಬೇಕು. ಅನುಕೂಲ ಸ್ಥಿತಿಯಲ್ಲಿ ಪ್ರಾಣಿಸಾಂದ್ರತೆಯನ್ನು ಕಾಪಾಡುವುದರೊಂದಿಗೆ, ಜಾನುವಾರುಗಳಲ್ಲಿ ಒತ್ತಡವನ್ನು ಕಡಿಮೆ ಮಾಡಬೇಕು.

**ಉಣ್ಣೆ ಲಸಿಕೆ:** ಉಣ್ಣೆ ನಿಯಂತ್ರಿಸಲು ನುಶಿನಾಶಕಗಳಿಗೆ ಅತ್ಯುತ್ತಮ ಪರ್ಯಾಯ ವಿಧಾನವೆಂದರೆ ಲಸಿಕೆ. ಜಾನುವಾರುಗಳಿಗೆ ಉತ್ತಮ ಉಣ್ಣೆ ಲಸಿಕೆಯ ಉತ್ಪಾದನೆ, ಸಂಶೋಧನೆಯ ವಿಷಯವಾಗಿದೆ.

**ಉಪಸಂಹಾರ :** ಉಣ್ಣೆ ನಿಯಂತ್ರಿಸಲು ವಿವಿಧ ವಿಧಾನಗಳು ಲಭ್ಯವಿದೆ. ಆದರೆ ರೈತರಲ್ಲಿ ಎಲ್ಲಾ ವಿಧಾನಗಳ ಬಗ್ಗೆ ಅರಿವು ಮೂಡಿಸದೆ, ಸಂಪೂರ್ಣವಾಗಿ ಉಣ್ಣೆ ನಿಯಂತ್ರಿಸಲು ಸಾಧ್ಯವಿಲ್ಲ. ನಿಯಮಿತವಾಗಿ ನುಶಿನಾಶಕದ ಬಗ್ಗೆ ಎಚ್ಚರಿಕೆ ವಹಿಸಿದರೆ. ಉಣ್ಣೆಗಳಿಂದ ಉಂಟಾಗುವ ಪ್ರತಿರೋಧ ಶಕ್ತಿಯನ್ನು ತಡೆಯಬಹುದು. ಪೌಷ್ಟಿಕ ಆಹಾರ, ಅನುವಂಶೀಯವಾಗಿ ಉಣ್ಣೆಗಳಿಗೆ ಪ್ರತಿರೋಧ ಶಕ್ತಿಹೊಂದಿರುವ ತಳಿಗಳು, ಪರಿಸರ ನಿರ್ವಹಣೆ, ಗಿಡಮೂಲಿಕೆಗಳ ಬಳಕೆ, ಉಣ್ಣೆ ಲಸಿಕೆ ಹಾಗೂ ವಿಸ್ತರಣಾ ಕಾರ್ಯಕ್ರಮಗಳಿಂದ ರೈತಾಪಿಗಳಲ್ಲಿ ಅರಿವು ಮೂಡಿಸುವುದರಿಂದ ಜಾನುವಾರುಗಳಲ್ಲಿ ಉಣ್ಣೆ ಪೀಡನೆಯನ್ನು ಸಂಪೂರ್ಣ ನಿರ್ಮೂಲ ಮಾಡಬಹುದು.

**ಉಲ್ಲೇಖನಗಳು**

Ntanganedzeni,O.,Mapholia,e.,Munyaradzi,C.,Marufub., Azwihangwisi., Cuthbert,B.,Bangaa., Voster,M., Michael,D.,MacNeila,d., Michael,C. and Kennedy,D.2014. Towards a genomics approach to tick (Acari: Ixodidae) control in cattle: A review. Ticks and Tick-borne Diseases.,**5**: 475–483.

Timea,K., Daniel,C. and Marina,S. 2012.Tick prevention at a crossroad: New and renewed solutions. Vet. Parasitol.,**187:** 357–366.

Rao,Z., Abbasa., Muhammad,c., Douglas,D,C., John,G. andZafar, I. 2014.Acaricide resistance in cattle ticks and approaches to its management: The state of play.Vet. Parasitol.,**203:** 6–20.

ISSN 2249 - 5754 VIJNANA KANNADA (PRINT)



# ಅಸಂಪ್ರದಾಯಿಕ ಪಶು ಆಹಾರ ಕತ್ತಾಳೆ

ಡಾ. ಮಹದೇವಪ್ಪ. ಡಿ. ಗೌರಿ[1*]., ಡಾ. ಗೋಪಿನಾಥ್, ಸಿ. ಆರ್[2]., ಡಾ. ಹೆಚ್. ಎನ್. ಎನ್. ಮೂರ್ತಿ[3] ಮತ್ತು ಡಾ. ಪ್ರಸನ್ನ ಎಸ್. ಬಿ[4].

[1*] ಸಹಾಯಕ ಪ್ರಾಧ್ಯಾಪಕರು, [2]ಸಹಾಯಕ ಪ್ರಾಧ್ಯಾಪಕರು, [3]ಪ್ರಾಧ್ಯಾಪಕರು, [4]ಸಹ ಪ್ರಾಧ್ಯಾಪಕರು,ಜಾನುವಾರು ಉತ್ಪಾದನಾ ಮತ್ತು ನಿರ್ವಹಣಾ ವಿಭಾಗ, ಪಶು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು - 24 ಮಿಂಚಂಚೆ:– mdgouri@gmail.com

**ಪ್ರಬಂಧಸಾರ:–** ಭಾರತ ವಿಶ್ವದಲ್ಲಿಯೇ ಅತ್ಯಧಿಕ ಜನಸಂಖ್ಯೆಯುಳ್ಳ ರಾಷ್ಟ್ರವಾಗಿದೆ. ದಿನೇ ದಿನೇ ಬೆಳೆಯಿತ್ತಿರುವ ಜನಸಂಖ್ಯೆ ಮತ್ತು ಅದರ ಕೊಳ್ಳುವಿಕೆಯ ಸಾಮರ್ಥ್ಯ ಹೆಚ್ಚುತ್ತಿರುವ ಕಾರಣ ಪ್ರಾಣಿಜನ್ಯ ಆಹಾರ ಪದಾರ್ಥಗಳ ಬೇಡಿಕೆಯೂ ಹೆಚ್ಚುತ್ತಿದೆ. ಇದೇ ಕಾರಣಕ್ಕೆ ಜಾನುವಾರು ಸಾಕಣೆ ಮತ್ತು ಜಾನುವಾರು ಉತ್ಪನ್ನಗಳ ತಯಾರಿಕೆಗೆ ಬೇಕಾಗಿರುವ ಒಳಸುರುವಿಕೆಗಳ ಬೇಡಿಕಯೂ ಹೆಚ್ಚುತ್ತಿದೆ. ಜಾನುವಾರು ಒಟ್ಟು ಸಂಖ್ಯೆಯಲ್ಲಿ ಮತ್ತು ಹಾಲು ಉತ್ಪಾದನೆಯಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದ್ದರೂ ತಲಾ ಪಶುವಿನ ಸರಾಸರಿ ಉತ್ಪಾದನೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಬೇಕಾಗಿದೆ. ಇದು ಮುಖ್ಯವಾಗಿ ಉತ್ತಮ ಗುಣಮಟ್ಟದ ಮೇವು/ಪಶು ಆಹಾರದ ಕೊರತೆಯಿಂದಾಗಿ ಉಂಟಾಗಿರುವ ಸಮಸ್ಯೆ. ಇದನ್ನು ಮನಗೊಂಡು ಪರ್ಯಾಯ ಅಸಂಪ್ರದಾಯಿಕ ಮೂಲದ, ಗುಣಮಟ್ಟದ ಪಶು ಆಹಾರ/ಮೇವುಗಳತ್ತ ಗಮನವರಿಸಲಾಗಿದೆ. ಈ ಹುಡುಕಾಟದಲ್ಲಿ ಅಭ್ಯವಾಗಿರುವುದೇ ಕತ್ತಾಳೆ. ವಿಶೇಷ ಗುಣಗಳನ್ನು ಹೊಂದಿರುವ ಈ ಸಸ್ಯ ಸುಸ್ಥಿರ ಜಾನುವಾರು ಉತ್ಪಾದನೆಯಲ್ಲಿ ಆಶಾದಾಯಕ ಭರವಸೆಯನ್ನು ನೀಡುವಂತಿದೆ. ಕುಕ್ಕಟ ಮತ್ತು ಮತ್ಸಗಳನ್ನೊಳಗೊಂಡು ಎಲ್ಲಾ ತರಹದ ಜಾನುವಾರುಗಳಿಗೆ ಬೇಕಾಗಿರುವ ಹೆಚ್ಚಿನ ಪೌಷ್ಠಿಕಾಂಶಗಳು ಕತ್ತಾಳೆಯಲ್ಲಿ ಲಭ್ಯವಿವೆ. ಪ್ರಾಣಿಗಳಿಗೆ ಯಾವುದೇ ಅಡ್ಡ ಪರಿಣಾಮಗಳಿಲ್ಲದೆ ಈ ಸಸ್ಯವನ್ನು ತಿನ್ನುಸಬಹುದು. ಹೈನು ರಾಸುಗಳಿಗೆ ಕತ್ತಾಳೆ ತಿನ್ನಿಸುವುದರಿಂದ ಹಾಲಿನ ಇಳುವರಿ ಶೇಕಡಾ 15 ರಿಂದ 20 ವರೆಗೆ ಹೆಚ್ಚಾಗುವುದೆಂದು ವಿವಿಧ ಸಂಶೋಧನೆಗಳಿಂದ ದೃಢಪಟ್ಟಿದೆ. ಹಾಗೆಯೇ ಕತ್ತಾಳೆ ತಿನ್ನಿಸುವುದರಿಂದ ಮಾಂಸದ ಕೋಳಿಗಳಲ್ಲಿ ತೂಕ ಹೆಚ್ಚಳ ಮತ್ತು ಮೊಟ್ಟೆ ಕೋಳಿಗಳಲ್ಲಿ ಮೊಟ್ಟೆಯ ಉತ್ಪಾದನೆ ಹೆಚ್ಚಳ ಕಂಡು ಬಂದಿದೆ. ಬೆಳೆಯುವ ಕೋಳಿಗಲ್ಲಿ ಅತ್ಯತ್ತಮ ಆಹಾರವನ್ನು ಸಿದ್ಧಪಡಿಸಬಹುದಾಗಿದೆ. ಕತ್ತಾಳೆ ಮತ್ತು ಬಾಯಿಯಲ್ಲಿ ಉತ್ಪತ್ತಿಯಾಗುವ ಜೊಲ್ಲು, ಖನಿಜ ಮತ್ತು ಅವಶ್ಯ ಅಮೈನೋ ಆಮ್ಲಗಳ ಮೂಲವಾಗಿದೆ. ಹಾಗೆಯೇ ಕುರಿ ಮತ್ತು ಮೇಕೆಗಳಿಗೆ ಕತ್ತಾಳೆಯ ಸೇವನೆ ಚೆನ್ನಾಗಿಯೇ ಇದೆಯೆಂದು ವಿವಿಧ ಅಧ್ಯಯಗಳ ಮೂಲಕ ತಿಳಿಯಪಟ್ಟಿದೆ.

PÀAÉÄi Ã è(%) ¸ÀÁgÀ£ÀPÀ£Áj £À±ÀM Ö ¦ qï, ®ª ÀÁA±Àª ÃvÃÛM ÖÀPÀgÙÀÃ PÀæÃª ÁV 7.52, 2.30, 6.15, 20.78 and 68.23 ಇದೆ. ಅಲ್ಲದೆ ಕತ್ತಾಳೆಯಲ್ಲಿ ಅಮೈನೋ ಆಮ್ಲಗಳು ಮತ್ತು ಕೊಬ್ಬಿನಾಮ್ಲಗಳೂ ಕೂಡ ಹೇರಳವಾಗಿ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತವೆ. ಆದರೆ ಕಡಿಮೆ ಪಚನಯುಕ್ತ ಶಕಿಯ ಲಭ್ಯತೆಯಿಂದ ಹಂದಿಗಳಲ್ಲಿ ಇದರ ಬಳಕೆ ಕಡಿಮೆ. ಒಟ್ಟಾರೆ ಮೆಲಕು ಮತ್ತು ಮೆಲಕು ಹಾಕದ ಪ್ರಾಣಿಗಳಲ್ಲಿಯೂ ಕತ್ತಾಳೆಯನ್ನು ಉತ್ತಮ ಅಸಂಪ್ರದಾಯಿಕ ಪಶು ಆಹಾರವಾಗಿ ಬಳಸಬಹುದಾಗಿದೆ.

ಸಾಮಾನ್ಯವಾಗಿ ಕತ್ತಾಳೆಯನ್ನು ದೇಶಿ ಮುಳ್ಳು ಹಣ್ಣು (Prickly pear, Indian fig) ಮುಳ್ಳಿನ ಕತ್ತಾಳೆ, ಗೊಳಗೊಳಕೆ ಮುಳ್ಳು, ಬೆಟ್ಟದ ಮುಳ್ಳು ಗಿಡ ಅಥವಾ ಬೇರುಗಳುಳ್ಳ ಮುಳ್ಳು ಕತ್ತಾಳೆ ಗಿಡ ಎಂದು ನಮ್ಮ ದೇಶದಲ್ಲಿ ಕರೆಯುತ್ತಾರೆ. ಯುರೋಪ್ ದೇಶದಲ್ಲಿ ಇದನ್ನು ''ತುನಾ ಕತ್ತಾಳೆ'' (tuna cactus /nopal) ಎಂದು ಹೆಸರಿಸಿದ್ದಾರೆ. ಅಂಧ್ರ ಪ್ರದೇಶದಲ್ಲಿ ಇದನ್ನು ''ಭಾರತೀಯ ನಾಗ ಜಮುಡು'' ಎಂದು ಕರೆಯುತ್ತಾರೆ. ಓಪುನ್ಸಿಯಾ ತಳಿ ಜಾತಿಯ ಕತ್ತಾಳೆಯಲ್ಲಿ 14 ತರದ ಹಲವಾರು ಪ್ರಭೇದ ಅಥವಾ ಕುಲಗಳು ಇವೆ ಅಚವುಗಳಲ್ಲಿ ಮುಖ್ಯವಾಗಿ ಕ್ಯಾಕ್ಟಸ್ ಡೆಕುಮನ್ಸ/ಫೈಕಸ್ ಇಂಡಿಕಾ, ಓಪುನ್ಸಿಯಾ ಡೆಕುಮನ್ಸ/ ಫೈಕಸ್ ಇಂಡಿಕಾ/ಮ್ಯಾಕ್ಸಿಮಾ/ಪ್ಯಾರಾಗುವನ್ಸಿಸ್ ಗಳ ಉಪಯೋಗ ಹೆಚ್ಚು (USDA, 2009).

ಅಜೊಲಾವನ್ನು ಬಹುವಾರ್ಷಿಕ ಬೆಳೆಯನ್ನಾಗಿ ಬೆಳೆಸಬಹುದು. ಆದು ಸಾಮಾನ್ಯವಾಗಿ 3 ರಿಂದ 5 ಮೀ ಎತ್ತರವಾಗಿದ್ದು, ಬೇರುಗಳು ಅಡ್ಡನಾಗಿ ಬರುತ್ತವೆ ಮತ್ತು ತುಂಬಾ ನಿಧಾನವಾಗಿ ಬೆಳೆಯುವ ಗಿಡ ಕತ್ತಾಳೆ. ಕತ್ತಾಳೆ ಗಿಡದ ವಿಶಿಷ್ಟವೇನೆಂದರೆ, ಇದರಕ್ಕೆ ಪ್ರತ್ಯೇಕ ಕಾಂಡ ಇರುವುದಿಲ್ಲ, ಎಲೆಗಳೇ (ಕ್ಲ್ಯಾಡೋಡ್) ಇದಕ್ಕೆ ಕಾಂಡವಾಗಿ ಮಾರ್ಪಾಡಾಗುತ್ತದೆ. ಸಾಮಾನ್ನಯವಾಗಿ ಈ ಎಲೆಗಳು 30 ರಿಂದ 40 ಸೇ. ಮಿ. (70–80 ಸೇ. ಮಿ.) ಉದ್ದ ಮತ್ತು 20 ರಿಂದ 25 ಸೇ. ಮಿ. ಅಗಲವಾಗಿದ್ದು, ದಪ್ಪನಾಗಿ ಇರುತ್ತವೆ. ಕತ್ತಾಳೆಯ ಎಲೆಯ ಚರ್ಮ ದಪ್ಪನಾಗಿ ಮತ್ತು ಹೆಚ್ಚು ಲೋಳೆ ರಸದಿಂದ ಕೂಡಿದ್ದು, ನೀರು ಜಾರಿ ಹೋಗುವಂತೆ ಮತ್ತು ಸೂರ್ಯ ಕಿರಣಗಳು ನೇರವಾಗಿ ಬಿದ್ದರೂ ತಾಗದಂತೆ ರುಪಿತಗೊಂಡಿದೆ. ಸಣ್ಣ ಸಣ್ಣ ಎಲೆಗಳು ಬಂದು ಅವು ಸಾಮಾನ್ಯವಾಗಿ ಮುಳ್ಳಾಗಿ ಪರಿವರ್ತನೆಗೊಂಡು ನಂತರ ದೊಡ್ಡ ಎಲೆಗಳಲ್ಲಿ (ಕ್ಲ್ಯಾಡೋಡ್‌ಗಲ್ಲಿ) ಈ ಮುಳ್ಳುಗಳು ಬಿದ್ದು ಹೋಗುತ್ತವೆ. ಹಾಗೆ ಕೆಲವೊಂದು ಬಗೆಯ ಕತ್ತಾಳೆ ಜಾತಿಯ ಗಿಡಗಳಲ್ಲಿ ಮುಳ್ಳು ಬರುವುದಿಲ್ಲ, ಅವುಗಳಿಗೆ ಮುಳ್ಳುರಹಿತ ಕತ್ತಾಳೆ ಎಂದು ಕರೆಯುತ್ತೇವ. ಕತ್ತಾಳೆ ಹಾಕಿ ಸುಮಾರು 1 ರಿಂದ 2 ವರ್ಷಗಳಲ್ಲಿ ಅದು ಹೂವುಗಳನ್ನು ಬಿಡುತ್ತದೆ. ಬೆಳಗಿನ ಜಾವದಲ್ಲಿ ಹೂಗಳು ತೆರೆದಿರುತ್ತವೆ. ಕತ್ತಾಳೆಯು ಹಣ್ಣು ಕೂಡ ನೋಡಲು ಕೆಂಪು, ಮೊಟ್ಟೆ ಆಕರಾವಾಗಿ ತುಂಬ ಚೆನ್ನಾಗಿದ್ದು, ಅದನ್ನು ತಿನ್ನಲು ಮತ್ತು ಬೇಕರಿ ಪದಾರ್ಥಗಳ ತಯಾರಿಕೆಯಲ್ಲಿ ಕೂಡ ಉಪಯೋಗಿಸತ್ತಾರೆ (ಎಕೊಪೋರ್ಟ್, 2009).

**ಕತ್ತಾಳೆಯ ಉಪಯೋಗ:** ಕತ್ತಾಳೆ ಗಿಡ ಸಾಮಾನ್ಯವಾಗಿ 30 ಕ್ಕಿಂತಲೂ ಹೆಚ್ಚು ರಾಷ್ಟ್ರಗಳಲ್ಲಿ ಕಂಡುಬರುವ ಹಣ್ಣಿಗಾಗಿ ಮತ್ತು ಕ್ಲ್ಯಾಡೋಡ್ (ಎಲೆ) ಗಾಗಿ ಬೆಳೆಯುತ್ತಾರೆ. ಇದು ಬರಗಾಲ ಅಥವಾ ಕಡಿಮೆ ಪ್ರಮಾಣದಲ್ಲಿ ಮಳೆ ಬೀಳುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಬಹುದಾದ ಸಸ್ಯ (ದುಬೆಅಕ್ಸ, 2011). ಕತ್ತಾಳೆಯು ಮರಭೂಮಿ ಮತ್ತು ಮಳೆಯಾಗದ ಪ್ರದೇಶಗಳಲ್ಲಿ ಬರಗಾಲದ ಆಹಾರವಾಗಿ ಮನುಷ್ಯ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಇದರ ಎಳಸಾದ ಕ್ಲ್ಯಾಡೋಡ್/ಎಲೆಗಳನ್ನು ಅಹಾರವಾಗಿ ಮತ್ತು ಬಲತಿರುವ ಕ್ಲ್ಯಾಡೋಡ್‌ಗಳನ್ನು ದನಗಳಿಗೆ ಮೇವಾಗಿ ಉಪಯೋಗಿಸುತ್ತಾರೆ (ಎಕೊಪೋರ್ಟ್, 2009). ಮುಖ್ಯವಾಗಿ ಬರಪೀಡಿತ ಪ್ರದೇಶಗಳಲ್ಲಿ ಸ್ವಾವಲಂಭಿತ ಕೃಷಿಗೆ ಒಂದು ಪ್ರಮುಖ ಬೆಳೆಯಾಗಿದೆ ಎಂಬುದರಲ್ಲಿ ಯಾವ ಸಂದೇಹವಿಲ್ಲ (ರೆಯನೊಲ್ಡ್ಸ್ ಮತ್ತು ಇತರರು, 2001). ಕತ್ತಾಳೆಯಲ್ಲಿನ ಇತರೆ ಪೋಷಕಾಂಶಗಳಿರುವುದರ ಜೊತೆಗೆ, ಇದು ಹೆಚ್ಚು ಚಳಿ, ಬಿಸಿಲು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ. ಹಲವಾರು ಜಾತಿಯ ಕತ್ತಾಳೆ ಗಿಡಗಳು ಹೆಚ್ಚು ಇಳುವರಿ ಕೊಡುವಂಥಹ ತಳಗಳಿದ್ದು,

ಬೇಗನೆ ಬೆಳೆಯುವ ಗುಣಗಳನ್ನೊಳಗೊಂಡಿವೆ. ಅಲ್ಲದೆ ಕೆಲವು ತಳಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಸಾರಜನಕವನ್ನೊಳಗೊಂಡು, ಅಮೈನೊ ಆಮ್ಲಗಳು ಮತ್ತು ಇತರೆ ಪೋಷಕಾಂಶಗಳನ್ನೂ ಕೊಟ್ಟು ಹೆಚ್ಚಿನ ಇಳಿವರಿ ಮುಳ್ಳು ರಹಿತ ಕತ್ತಾಳೆ ಪ್ರಭೇದಗಳು ಇವೆ (ಮಾಂಡ್ರಾಗೊನ್–ಜಾಕೊಬ್., ಮತ್ತು ಇತರರು, 2001). ಆದ್ದರಿಂದ ಕತ್ತಾಳೆಯು ಬರಗಾದ ದಿನಗಳಲ್ಲಿ ಜಾನುವಾರುಗಳಿಗೆ ಒಂದು ಅಮೃತ ಪೂರೈಸುವ ಸಸ್ಯವೆಂದು ನಿಸ್ಸಂದೇಹವಗಿ ಹೇಳಬಹುದು (ಡೊಸ್ಸ ಸಾಂಟೋಸ್ ಮತ್ತು ಇತರರು., 2001).

**ಕತ್ತಾಳೆಯ ಬೆಳೆಯು ಅಥವಾ ಕಂಡು ಬರುವ ಪ್ರದೇಶಗಳು:** ಒಪನ್ಸಿಯಾ ಜಾತಿಯ ಫೈಕಸ್ ಇಂಡಿಕಸ್ ತಳಿಯು ಮೆಕ್ಸಿಕೊ ದೇಶದಲ್ಲಿ ಮೂಲವಾಗಿ ಕಂಡು ಬಂದಿದೆಯದರೂ, ಇತರೆ ದೇಶಗಳಾದ ಮಧ್ಯ ಅಮೇರಿಕಾ, ದಕ್ಷಿಣ ಅಮೇರಿಕಾ, ಆಫ್ರಿಕ, ಏಷಿಯಾ ಮತ್ತು ದಕ್ಷಿಣ ಯುರೋಪ್ ಗಳಲ್ಲಿ ಹೆಚ್ಚು ಕಂಡು ಬರುತ್ತದೆ (ಯು.ಎಸ್.ಡಿ. ಎ., 2009). ದಕ್ಷಿಣ ಆಫ್ರಿಕ ಮತ್ತು ಆಷ್ಟ್ರೇಲಿಯಾಗಳಲ್ಲಿ ಇದನ್ನು ವಿಷಕಾರಕ, ತೊಂದರೆಯೊಡ್ಡುವ ಒಂದು ಕಳೆ ಎಂದು ಬಿಂಬಿಸುತ್ತಾರೆ.

ಒಪುನ್ಸಿಯಾ ಜಾತಿಯ ಕತ್ತಾಳೆಯು ಎಂಥಹ ವಾತಾವರಣದಲ್ಲಾದರೂ, ಅತೀ ಕಡಿಮೆ ಅಥವಾ ಅತೀ ಮಳೆಯಾಗು ಪ್ರದೇಶಗಳಾಗಲಿ, ಕಳಪೆ ಗುಣಮಟ್ಟದ ಮಣ್ಣಲ್ಲೂ ಚನ್ನಾಗಿ ಬರುತ್ತದೆ. ಆದರೆ, ಹೆಚ್ಚು ನೀರು ನಿಂತ ಪ್ರದೇಶ, ಉಪ್ಪು ಮಿಶ್ರಿತ ಮಣ್ಣು ಮತ್ತು ಕೊಚ್ಚಿ ಹೋಗುವಂಥಹ ನೆಲಗಳಲ್ಲಿ ಕತ್ತಾಳೆಯನ್ನು ಬೆಳೆಯುವುದು ಕಷ್ಟಸಾಧ್ಯ (ಓರ್ವಾ ಮತ್ತು ಇತರರು, 2009). ಅಷ್ಟೇ ಅಲ್ಲದೆ ಒಪುನ್ಸಿಯಾ ತಳಿಯು ಅತೀ ಕಡಿಮೆ ಚಳಿ ತಡೆಯುತ್ತದೆ ಅದರೆ ಶ್ಯೂನ್ಯ ಡಿಗ್ರಿ ತಾಪಮಾನದಲ್ಲಿ ಬರುವುದಿಲ್ಲ ಮತ್ತು ಇದು ಕರಗಬಹುದು, ಆದರೆ ಅತೀ ಹೆಚ್ಚು ಉಷ್ಣಾಂಶವನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ (ರೆಯನೊಲ್ಡ್ಸ್ ಮತ್ತು ಇತರರು, 2001).

**ಕತ್ತಾಳೆಯನ್ನು ಜಾನುವಾರುಗಳಲ್ಲಿ ಉಪಯೋಗಿಸುವ ವಿಧಾನ:** ಮುಳ್ಳು ರಹಿತ ಕತ್ತಾಳೆ ಅಥವ ಇತರೆ ಕತ್ತಾಳೆ ತಳಿಗಳನ್ನು ಬೆಳೆದ ನಂತರ ಅವುಗಳ ಎಲೆಗಳನ್ನು (ಕ್ಲ್ಯಾಡೋಡ) ಈ ಕೆಳಗಿನಂತೆ ಉಪಯೊಗಿಸಬೇಕು (ಲೊಪೆಜ್– ಗರ್ಸಿಯ ಮತ್ತು ಇತರರು., 2001).

1. ದನ, ಕುರಿ ಮತ್ತು ಮೇಕೆಗಳಿಗೆ ಕತ್ತಾಳೆಯನ್ನು ಹಾಗೆ ಮೇಯಿಸಲು ಬಿಡಬಹುದು. ಸ್ವಲ್ಪ ಪ್ರಮಾಣದಲ್ಲಿ ಮುಳ್ಳು ಇದ್ದರೂ ಕೂಡ ಮೇಯಿತ್ತವೆ. ಆದರೆ ಹೀಗೆ ಮಾಡುವುದರಿಂದ ಜಾನುವಾರುಗಳಿಗೆ ಅಪಾಯವಾಗಬಹುದು.
2. ಕತ್ತಾಳೆಯ ಕ್ಲ್ಯಡೊಡಗಳನ್ನು ಬೇರ್ಪಡಿಸಿ ಅದರ ಮೇಲಿನ ಮುಳುಗಳನ್ನು ತಗೆದು, ನಂತರ 2 ರಿಂದ 3 ಅಂಗುಲದಷ್ಟು ತುಂಡರಿಸಿ ಕೊಡಬೇಕು.
3. ಕತ್ತಾಳೆ ಗಿಡವನ್ನು ಸೀಮೆ ಎಣ್ಣೆಯ ಬೆಂಕಿಯಲ್ಲು ಸುಟ್ಟಾಗ ಅದರಲ್ಲಿರುವ ಮುಳ್ಳು ಹೊಗುತ್ತವೆ ನಂತರ ಕಟಾವು ಮಾಡಿ ಇತರೆ ಮೇವುಗಳೊಂದಿಗೆ ಕುರಿ ಮತ್ತು ಮೇಕೆಗಳಿಗೆ ಮೇಯಿಸಲು ಬಿಡಬಹುದು.
4. ಕತ್ತಾಳೆ ಗಿಡದ ಎಲೆಗಳನ್ನು/ಕ್ಲ್ಯಾಡೋಡ್‌ಗಳನ್ನು ಬೇರ್ಪಡಿಸಿ ಅದರಲ್ಲರುವ ಮುಳ್ಳುಗಳನ್ನು ಸುಟ್ಟು ನಂತರ ತುಂಡರಿಸಿ ಮೇವಾಗಿ ಜಾನುವಾರುಗಳಿಗೆ ಕೊಡಬಹುದು.

ಈ ರೀತಿ ಎಲೆಗಳನ್ನು/ಕ್ಲ್ಯಾಡೋಡ್‌ಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಕತ್ತರಿಸುವುದರಿಂದ ಜಾನುವಾರುಗಳಲ್ಲು ಇದರ ಸೇವನೆ ಪ್ರಮಾಣ ಹಚ್ಚುತ್ತದೆ. ಹೀಗೆ ಕತ್ತಾಳೆಯನ್ನು ಮಿಶ್ರಣ ಆಹಾರ ತಯಾರಿಕೆಯಲ್ಲಿ ಯೂರಿಯಾ ಮತ್ತು ತಿಂಡಿ ಮಿಶ್ರಣಗಳೊಂದಿಗೆ ಸೇರಿಸಿದಾಗ ಜಾನುವಾರುಗಳು ಚೆನ್ನಾಗಿ ತಿನ್ನುತ್ತವೆ (ದುಬೆಲಕ್ಸ, 2011). ಕತ್ತಾಳೆಯ ಎಲೆಗಳನ್ನು/ಕ್ಲ್ಯಡೋಡ್‌ಗಳನ್ನು ಕೈಯಿಂದ ಅಥವಾ ಯಂತ್ರದ ಉಪಯೋಗದಿಂದ ತುಂಡರಿಸಬಹುದು.

ಒಪುನ್ಸಿಯಾ ಜಾತಿಯ ಕತ್ತಾಳೆಯನ್ನು 3 ವರ್ಷಗಳಿಗೊಮ್ಮೆ ಖಟಾವಣೆ ಮಾಡಬಹುದು. ಕತ್ತಾಳೆಯನ್ನು ಕಡಿಮೆ ನೀರು ಮತ್ತು ಸಾಧಾರಣ ಮಣ್ಣಿನಲ್ಲಿ ಬೆಳೆದಾಗ, ಇದರ ಇಳುವರಿಯು ಪ್ರತಿ ಹೆಕ್ಟೇರಿಗೆ ವರ್ಷಕ್ಕೆ 5 ರಿಂದ 6 ಟನ್ನಳಷ್ಟು ಬರುತ್ತದೆ. ಆದರೆ ಉತ್ತಮ ಗುಣಮಟ್ಟದ ನೆಲದಲ್ಲಿ ಕತ್ತಾಳೆಯ ಇಳುವರಿಯು ಪ್ರತಿ ಹೆಕ್ಟೇರನಲ್ಲಿ 40 ಟನ್ನಳಷ್ಟು ಘನ ರೂಪದಲ್ಲಿ ವರ್ಷಕ್ಕೆ ಪಡೆಯಬಹುದು. ಅಲ್ಲದೆ, ಪ್ರತಿ ಹೆಕ್ಟೇರಿಗೆ ವರ್ಷದಲ್ಲಿ ಸುಮಾರು 20 ಟನ್ನಳಷ್ಟು ಇದರ ಹಣ್ಣುಗಳನ್ನು ಪಡೆಯಬಹುದು ಎಕೊಕ್ರೊಪ್ (2009). ದುಬೆಅಕ್ಸ (2011) ಅವರ ಸಂಶೋಧನೆಯ ಪ್ರಕಾರ ಬ್ರೆಜಿಲ್ ದೇಶದಲ್ಲಿ ಒಂದು ಹೆಕ್ಟೇರ್ ಪ್ರದೇಶದಲ್ಲಿ ವರ್ಷದಲ್ಲಿ ಬೆಳೆದ ಕತ್ತಾಳೆಯಿಂದ ಸುಮಾರು 5 ಜಾನುವಾರುಗಳನ್ನು ಸಾಕಬಹುದು, ಇದು ಸುಮಾರು 50 ಪಟ್ಟು ಇತರೆ ದೇಶಿ ಭೂಮಿಯಲ್ಲಿ ಬೆಳೆಯುವುದಕ್ಕಿಂತಲೂ ಹೆಚ್ಚು, ಇಂಥಹ ಪ್ರದೇಶದಲ್ಲಿ ಬರಿ ಒಂದು ಅಥವಾಅದಕ್ಕಿಂತಲೂ ಕಡಿಮೆ ಜಾನುವಾರುಗಳನ್ನು ಮಾತ್ರ ಸಾಕಾಣಿ ಮಾಡಬಹುದಾಗಿದೆ.

ಮೆಕ್ಸಿಕೊ, ಅಮೇರಿಕಾ, ಸ್ಪೇನ್, ಇಟಲಿ ಮತ್ತು ಉತ್ತರ ಅಮೇರಿಕಾ ದೇಶಗಳಲ್ಲಿ ಕತ್ತಾಳೆಯನ್ನು ಹೆಚ್ಚಾಗಿ ಬೆಳಯುತ್ತಾರೆ, ಮತ್ತು ಇಲ್ಲಿನ ಜನರು ಯಥೇಚ್ಛವಾಗಿ ತಮ್ಮ ದಿನನಿತ್ಯದ ಆಹಾರದಲ್ಲಿ ಬಳಕೆ ಮಾಡುತ್ತಾರೆ. ಜೊತೆಗೆ ಕತ್ತಾಳೆ ಹಣ್ಣಿನಲ್ಲಿನ ಗುಣಮಟ್ಟದ ಸುವಾಸನೆ ಮತ್ತು ರುಚಿ ತುಂಬ ಅಹಲ್ಲಾದಕರ, ಅಲ್ಲದೆ ಇದರ ಯಳಸಾದ ಎಲೆಗಳನ್ನು ಸಸ್ಯ ಆಹಾರದ ಪಚಡಿಯನ್ನು ಮಾಡಲು ಉಪಯೋಗಿಸುತ್ತಾರೆ. ಕತ್ತಾಳೆಯ ಕಾಯಿಗಳನ್ನು (ಯಳಸಾದ ಹಣ್ಣು/ಫೊರೆ ಹಣ್ಣು) ಅಂದರೆ ಹಣ್ಣಾಗುವುದಕ್ಕೂ ಮುನ್ನ ಇದನ್ನು ಮೊಕ್ ಘರ್ಕಿನ್ಸನ್ನು ತಯಾರು ಮಾಡುತ್ತಾರೆ (ಸಿಂಗ್, 2003).

**ಕತ್ತಾಳೆಯನ್ನು ಬೆಳೆಸುವ ವಿಧಾನ:** ಕತ್ತಾಳೆಯನ್ನು ಹಲವಾರು ರಿತಿಯಲ್ಲಿ ಬೆಯಬಹುದು, ಆದರೆ ಇದು ಭೂಮಿಯ ಬೆಳೆಯ ಪದ್ಧತಿಗಳು, ಬೆಳೆಯಲು ಸಿಗಬಹುದಾದ ಭೂಮಿ ಮತ್ತು ಕೃಷಿ ಜಮೀನಿನ ಗುಣಮಟ್ಟದ ಮೇಲೆ ಅವಲಂಭಿತವಾಗಿರುತ್ತದೆ. ಒಂದು ಹೆಕ್ಟೇರ ಜಾಗದಲ್ಲಿ ಸುಮಾರು 300 ರಿಂದ 8000 ಒಂದು ಮೀಟರ್ ಅಂತರದ ಸಾಲುಗಳಲ್ಲಿ ನಾಟಿಗಳನ್ನು ಮಾಡಬಹುದು. ಹೀಗೆ ನಾಟಿಗಳನ್ನು ಎಲೆಗಳನ್ನು/ಕ್ಲ್ಯಾಡೋಡ್‌ಗಳನ್ನು 2 ಆಥವಾ 3 ಭಾಗಗಳಾಗಿ (ಚಿತ್ರದಲ್ಲಿ ತೋರಿಸಿದಂತೆ) ತುಂಡರಿಸಬೇಕು ನಂತರ ಈ ತುಂಡುಗಳನ್ನು ನಾಟಿಗಳನ್ನಾಗಿ ಕತ್ತಾಳೆ ಬೆಳೆಯಲು ಉಪಯೋಗಿಸುತ್ತಾರೆ, ಈ ನಾಟಿಗಳ ಚನ್ನಾಗೆ ಚಿಗುರಬೇಕಾದರೆ, ಅವುಗಳ 2/3 ಭಾಗದಷ್ಟು ಭೂಮಿಯಲ್ಲಿ ಮುಚ್ಚಬೇಕು. ಹೀಗೆ ತುಂಡರಿಸಿದ ಕತ್ತಾಳೆ ನಾಟಿಗಳನ್ನು ಮನೆಯ ಹತ್ತಿರ ಅಥವಾ ಹಿತ್ತಲ್ಲಿ ನಾಟಿ ಮಾಡಬಹುದು, ಅಲ್ಲದೆ ಅವುಗಳ ಸಂಪೂರ್ಣ ಚಾಕರಿಯನ್ನು ಅಚ್ಚುಕಟ್ಟಾಗಿ ಮಾಡಬೇಕು. ನಾಟಿ ಮಾಡಲು ಹೊಲಗಳಲ್ಲಿಯೂ ಕೂಡ ಮಾಡಬಹುದು, ಅದರೆ ಅಂಥಹ ಜಮೀನುಗಳು ಆದಷ್ಟು ರಸ್ತೆಗಳ ಬದಿಯಲ್ಲಿದ್ದರೆ ತುಂಬ ಒಳ್ಳೆಯದು. ಅಲ್ಲದೆ ಕತ್ತಾಳೆಯನ್ನು ನಾಟಿ ಮಾಡಲು ಉಪಯೋಗಿಸುವ ಪ್ರದೇಶವು ಸಮತಟ್ಟಾಗಿ ಶೇ. 3 ರಷ್ಟು ಇಳಿಜಾರಾಗಿರಬೇಕು.

ಕತ್ತಾಳೆ ನಾಟಿ ಮಾಡಿದ ಜಮೀನಿನಲ್ಲಿ ಯಾವುದೆ ತರೆನಾದ ಬಹು ವಾರ್ಷಿಕ ಕಳೆಯಾಗಲಿ ಅಥವಾ ಇತರೆ ಬಳ್ಳಿಗಳಾಗಲಿ ಬರದಂತೆ ನೋಡಿಕೊಳ್ಳಬೇಕು. ಸಮಾನಾಗಿ ಕಡಿಮೆ ಪ್ರಮಾಣದಲ್ಲಿ ನೀರನ್ನು ಆಗಾಗ ಒದಗಿಸಿದರೆ ಉತ್ತಮ ಇಳುವರಿಯನ್ನು ಪಡೆಯಬಹುದು. ಕಡಿಮೆ ಮಳೆಯಾಶ್ರಿತ ಪ್ರದೇಶಗಳಲ್ಲಿ ನೀರನ್ನು ಸಂಗ್ರಹಿಸಲು ಬೇಕಾದ ಕ್ರಮಗಳನ್ನು ಅನುಸರಿಸಬೇಕು ಮತ್ತು ಅತೀ ಹೆಚ್ಚು ಮಳೆಯಾಶ್ರಿತ ಪ್ರದೇಶಗಳಲ್ಲಿ ಹಚ್ಚು ನೀರು ನಿಲ್ಲದಂತೆ ನೊಡಿಕೊಳ್ಳಬೇಕು.

ISSN 2249 - 5754 VIJNANA KANNADA (PRINT)




ಕತ್ತಾಳೆ ಗಿಡ



ಕತ್ತಾಳೆ ಹಣ್ಣು



ಕತ್ತಾಳೆಯನ್ನು ಕಟಾವು ಮಾಡುವುದು



ಕತ್ತಾಳೆಯನ್ನು ತುಂಡರಿಸುತ್ತಿರುವುದು



ಹಸುಗಳಿಗೆ ತಿನ್ನಿಸುತ್ತಿರುವುದು



ಮೇಕೆಗಳಲ್ಲಿ ಕತ್ತಾಳೆ ಬಳಕೆ

ಕೋಷ್ಟಕ 1. ಕತ್ತಾಳೆಯಲ್ಲಿನ ಪೋಷಕಾಂಶಗಳ ವಿವರ

| *Main analysis* | *Unit* | *Avg* | *SD* | *Min* | *Max* |
|---|---|---|---|---|---|
| **Dry matter** | % as fed | 9.1 | 2.5 | 6.2 | 14.0 |
| **Crude protein** | % DM | 6.9 | 2.7 | 2.6 | 11.4 |
| **Crude fibre** | % DM | 14.6 | 3.5 | 10.9 | 21.1 |
| **NDF** | % DM | 25.5 | 6.1 | 21.4 | 37.7 |
| **ADF** | % DM | 14.5 | 2.4 | 10.8 | 18.5 |
| **Lignin** | % DM | 2.6 | 0.9 | 1.1 | 3.9 |
| **Ether extract** | % DM | 1.9 | 0.4 | 1.2 | 2.5 |
| **Ash** | % DM | 19.5 | 4.9 | 8.3 | 25.9 |
| **Gross energy** | MJ/kg DM | 14.3 | | | |
| | ***Minerals*** | | | | |
| **Calcium** | g/kg DM | 38.8 | 12.9 | 16.5 | 52.3 |
| **Phosphorus** | g/kg DM | 2.0 | 1.3 | 0.5 | 4.2 |
| **Potassium** | g/kg DM | 48.0 | | 43.0 | 53.0 |
| **Magnesium** | g/kg DM | 10.4 | 4.4 | 5.0 | 14.2 |
| | ***Ruminant nutritive values*** | | | | |
| **OM digestibility, Ruminant** | % | 62.9 | 10.6 | 48.0 | 72.0 |
| **Energy digestibility, ruminants** | % | 55.8 | | | |
| **DE ruminants** | MJ/kg DM | 8.0 | | | |
| **ME ruminants** | MJ/kg DM | 6.6 | | | |
| **Nitrogen digestibility, ruminants** | % | 41.3 | 29.5 | 0.0 | 68.1 |
| | ***Pig nutritive values*** | | | | |
| **Energy digestibility, growing pig** | % | 67.2 | | | |
| **DE growing pig** | MJ/kg DM | 9.6 | | | |

***The asterisk * indicates that the average value was obtained by an equation.***

ಕೋಷ್ಟಕ 2. ಕತ್ತಾಳೆಯ ಹಣ್ಣುಗಳಲ್ಲಿನ ಪೋಷಕಾಂಶಗಳ ವಿವರ

| Main analysis | Unit | Avg | SD | Min | Max |
|---|---|---|---|---|---|
| Dry matter | % as fed | 84.7 | | | |
| Crude protein | % DM | 4.5 | | | |
| Crude fibre | % DM | 19.8 | | | |
| Ash | % DM | 18.1 | | | |
| Pig nutritive values | | | | | |
| Energy digestibility, growing pig | % | 59.0 | | | |

***References:***

*Ben Salem, H., A. Nefzaoui, H. Abdouli and E.R. Orskov. 1996. Effect of increasing level of spineless cactus (Opuntia ficus indica var. inermis) on intake and digestion by sheep given straw-based diets. Anim. Sci., 62 : 293-299.*

*Ben Salem, H., A. Nefzaoui, L. Ben Salem, . 2000. Supplementing range goats in central Tunisia with feed blocks or a mixture of Opuntia ficus indica var. inermis and Atriplex nummularia. Effects on behavioural activities and growth. 7th International Conference on Goats, Tours (France).*

*Bispo, S. V. ; Ferreira, M. de A. ; Veras, A. S. C. ; Batista, A. M. V. ; Pessoa, R. A. S. ; Bleuel, M. P., 2007. Spineless cactus in replacement of elephant grass hay. Effect on intake, apparent digestibility and ruminal fermentation characteristics in sheep. Rev. Bras. Zootec., 36 (6): 1902-1909*

*De Cock, G. C., 2001. The use of Opuntia as a fodder source in arid areas of Southern Africa. In: Cactus (Opuntia spp.) as Forage. Mondragon-Jacobo and Perez-Gonzalez Ed., FAO Plant production and protection papers N°169: 161p. FAO, RomeDubeux, J. C., 2011. Use of cactus for livestock feeding. Universidade Federal Rural de Pernambuco (UFRPE)*

*Dos Santos, D. C. ; Albuquerque, S. G. de, 2001. Opuntia as fodder in the semi-arid northeast of Brazil. In: Cactus (Opuntia spp.) as Forage. Mondragon-Jacobo and Perez-Gonzalez Ed., FAO Plant production and protection papers N°169: 161p. FAO, Rome*

*Dubeux Jr., J. C. B. ; Santos, M. V. F. ; Lira, M. A. ; Santos, D. C. ; Farias, I. ; Lima, L. E. ; Ferreira, R. L. C., 2006. Productivity of Opuntia ficus-indica (L.) Miller under different N and P fertilization and plant population in north-east Brazil. J. Arid*

*Ecocrop, 2009. Ecocrop database. FAO*

*Gurbachan Singh 2003. General Review of Opuntias in India.* J. PACID. *Indian Council of Agricultural Research. Krishi Bhavan, New Delhi-110001*

*Nefzaoui, A. and H. Ben Salem. 1996. Nutritive value of diets based on spineless cactus (Opuntia ficus indica var. inermis) and Atriplex (Atriplex nummularia). In: Native and Exotic Fodder Shrubs in Arid and Semi-Arid Zones, Regional Training Workshop, Tunisia, 27 October - 2 November 1996*

*Nefzaoui, A., H. Ben Salem, and L. Ben Salem. 1995. Ewe-lambs feeding with cactus-based diets. Effect of the type of nitrogen supplement. IVth International Symposium on the Nutrition of Herbivores – Satellite "Ruminant use of fodder resources in warm climate countries", Montpellier (France), 7-9 September 1995.*

*Nefzaoui, A., H. Ben Salem, and L. Ben Salem. 1996. Nitrogen supplementation of cactus-based diets fed to Barbarine yearlings. In: Native and Exotic Fodder Shrubs in Arid and Semi-Arid Zones, Regional Training Workshop, Tunisia, 27 October - 2 November 1996*

*Orwa, C. ; Mutua, A. ; Kindt, R. ; Jamnadass, R. ; Anthony, S., 2009. Agroforestree Database: a tree reference and selection guide version 4.0. World Agroforestry Centre, Kenya*

*USDA, 2009. GRIN - Germplasm Resources Information Network. National Germplasm Resources Laboratory, Beltsville, Maryland*

# ಜಾನುವಾರುಗಳಲ್ಲಿ ಹೈಡ್ರೋಪೋನಿಕ್ ಮೇವು – ಉತ್ಪಾದನೆ ಹಾಗೂ ಅದರ ಪ್ರಾಮುಖ್ಯತೆ – ಒಂದು ಪರಾಮರ್ಶೆ

ಡಾ. ಮಹದೇವಪ್ಪ. ಡಿ. ಗೌರಿ[1]., ಡಾ. ಗೋಪಿನಾಥ್, ಸಿ. ಆರ್[2]., ಡಾ. ಹೆಚ್. ಎನ್. ಎನ್. ಮೂರ್ತಿ[3] ಮತ್ತು ಡಾ. ಪ್ರಸನ್ನ ಎಸ್. ಬಿ[4].
[1*] ಸಹಾಯಕ ಪ್ರಾಧ್ಯಾಪಕರು, [2]ಸಹಾಯಕ ಪ್ರಾಧ್ಯಾಪಕರು, [3]ಪ್ರಾಧ್ಯಾಪಕರು, [4]ಸಹ ಪ್ರಾಧ್ಯಾಪಕರು, ಜಾನುವಾರು ಉತ್ಪಾದನಾ ಮತ್ತು ನಿರ್ವಹಣಾ ವಿಭಾಗ, ಪಶು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು – 24 ಮಿಂಚಂಚೆ:– mdgouri@gmail.com

**ಪ್ರಬಂಧಸಾರ:–** ಹೈಡ್ರೋಪೋನಿಕ್ ಮೇವನ್ನು ಭೂಮಿ ಅಥವಾ ಮಣ್ಣಿನ ಅವಶ್ಯಕತೆ ಇಲ್ಲದೆ ಬರಿ ನೀರನ್ನು ಉಪಯೋಗಿಸಿ ನಿರ್ಬಂದಿತ ಹಸಿರು

ವರ್ಣದ ಮನೆಯಲ್ಲಿ ಯಥೇಚ್ಛವಾಗಿ ಬೆಳೆಯಬಹುದು. ಹೈಡ್ರೊಪೋನಿಕ್ ಮೇವು ಬೆಳೆಯಲು ವಿಶೇಷ ಲವಣಮಿಶ್ರಿತ ನೀರಿನಲ್ಲಿಯೇ ಬೆಳಯಬೇಕಂತಿಲ್ಲ. ಸಾಧಾರಣ ನಲ್ಲಿಯ ನೀರಿದ್ದರೆ ಸಾಕು. ಹೈಡ್ರೊಪೋನಿಕ್ ಮೇವನ್ನು ಬೆಳೆಯಲು ಮುಸುಕಿನ ಜೋಳ ಮತ್ತು ಬಾರ್ಲಿ ಬೀಜಗಳನ್ನು ಉಪಯೋಗಿಸುವುದು ಸೂಕ್ತ. ಪ್ರತಿ ಒಂದು ಕಿ. ಗ್ರಾಂ. ಮುಸುಕಿನ ಜೋಳದಿಂದ 8 ರಿಂದ 10 ಕಿ. ಗ್ರಾಂ. ನಷ್ಟು ತಾಜಾ 30 ಸೆ. ಮಿ. ಗಿಂತಲೂ ಎತ್ತರವಾಗಿ, ದಪ್ಪನಾದ ನೆಲಹಾಸಿಗೆಯಂತೆ, ಉತ್ಕೃಷ್ಟವಾದ ಮೇವು ದೊರೆಯುತ್ತದೆ. ಈ ರೀತಿ ಬೆಳೆಸಿದ ಮೇವಿನಲ್ಲಿ ತೇವಾಂಶ ಶೇ. ೮೫ ರಷ್ಟು ಇರುತ್ತದೆ, ಮತ್ತು ಘನ ಪದಾರ್ಥ ಶೇ ೧೧ ರಿಂದ ೧೮ ರಷ್ಟು ಇರುವಂಥಹ ಮೇವನ್ನು ಬೆಳೆಸಬಹುದು. **ಹೈಡ್ರೊಪೋನಿಕ್ ಮೇವಿನಲ್ಲಿ ಘನ ಪದಾರ್ಥ ಆಧಾರದ ಮೇಲೆ ಪೋಷಕಾಂಶಗಳ ಶೆಕಡಾವಾರು ಪ್ರಮಾಣ ನೊಡಿದಾಗ ಅದರಲ್ಲಿ** ಸಸಾರಜನಕ (CP), ಈಥರ್ ಉಳಿಕೆ (EE), ನಾರಿನಂಶ (CF), ಲವಣಾಂಶ (TA), ಒಟ್ಟು ಪಚನ ಹೊಂದುವಂಥಹ ಪೋಷಕಾಂಶ (TDN), ಎನ್. ಡಿ. ಎಫ್. (NDF), ಬಿ ಮತ್ತು ಈ ಕಿನ್ವಗಳು (Vitamin B & E), ಬಯೋಟಿನ್ (Biotin), ಫ್ರೀ ಫೋಲಿಕ್ ಆಮ್ಲ (Free folic acid), ಮತ್ತು ಬೀಟಾ ಕೆರೋಟಿನ್ (β–carotene) ಕ್ರಮವಾಗಿ, 11–25, 3–5, 10–15, 4, 75–80, 66, 62.4, 1.15, 1.05, ಮತ್ತು 42.7. ಜೀರ್ಣ ಹೊಂದಬಹುದಾದ ಶಕ್ತಿ (ME-MJ/kg) 8–12 ಶೇ. ರಷ್ಟು ಇರುವುದು ಸಂಶೋಧನೆಯಿಂದ ತಿಳಿದುಬಂದಿದೆ.

ರಾಸುಗಳಿಗೆ ಹೈಡ್ರೊಪೋನಿಕ್ ಮೇವು ತುಂಬಾ ರುಚಿಯಾಗಿದ್ದು, ಹೆಚ್ಚು ಪೌಷ್ಟಿಕ ಮತ್ತು ಬೇಗನೆ ಪಚನ ಹೊಂದುವಂಥಹ ಉತ್ತಮ ಗುಣಮಟ್ಟದ ಮೇವಾಗಿದೆ. ಹೈಡ್ರೊಪೋನಿಕ್ ಮೇವು ಸಾಮಾನ್ಯವಾಗಿ ಜಾನುವಾರುಗಳ ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಬಲ್ಲದು. ಹೈಡ್ರೊಪೋನಿಕ್ ಮೇವನ್ನು ಬೆಳೆಯಲು ಅಗುವ ಒಟ್ಟು ಖರ್ಚಿನಲ್ಲಿ ಶೇ 90 ರಷ್ಟು ಬೀಜದ್ದೇ ಅಗುತ್ತದೆ. ಹೈಡ್ರೊಪೋನಿಕ್ ಮೇವನ್ನು ದಿನಕ್ಕೆ 10 ರಿಂದ 15 ಕಿ. ಗ್ರಾಂ. ನಷ್ಟು ರಾಸುಗಳಿಗೆ ಕೊಡಬಹುದು. ಹಲವಾರು ಸಂಶೋಧನೆಗಳ ಪ್ರಕಾರ ಹೈಡ್ರೊಪೋನಿಕ್ ಮೇವನ್ನು ರಾಸುಗಳಿಗೆ ಕೊಡುವಿದರಿಂದ ಅವುಗಳಲ್ಲಿ ಪಚನಶಕ್ತಿ ಹೆಚ್ಚುವುದಲ್ಲದೆ, ಹೈನುರಾಸುಗಳಲ್ಲಿ ಶೇ 10 ರಿಂದ 15 ರಷ್ಟು ಹಾಲಿನ ಇಳುವರಿ ಹೆಚ್ಚಾಗಿದ್ದು ಕಂಡುಬಂದಿದೆ.

**Facts :** The digestive system of **ruminating mammals**, like as cattle, goats, sheep, camels, giraffes, deer, alpacas, water buffalo … does **not fit to grain-fed**. Up to 25% of indigestion and lactic acidosis from rapid fermentation of grain in the rumen **lead to** dehydration, heart failure, kidney failure, infertility and even death.

**Solution :** Feeding with **fresh green fodder** allows their digestive system to function to maximum efficiency for healthier animals **as genetically established**. **Hydroponic Fodder** provides, year round, **clean & fresh** green fodder, increasing red blood cell count to more oxygen in blood system, more & high quality protein, enzymes and vitamins **at highest digestibility**.

**ಹೈಡ್ರೋಫೋನಿಕ್‌ನ ಸಾಮಥ್ಯ:** ಮೇವಿನ ಇಳುವರಿ ಅಧಿಕವಾಗಿರುತ್ತದೆ. ಪ್ರತಿ 1 ಕೆ.ಜಿ. ಬೀಜದಿಂದ 6–10 ಕೆ.ಜಿ. ಹಸಿರು ಮೇವನ್ನು ಪಡಯುಬಹುದು. ಈ ಮೇವು ರುಚಿಕರವಾಗಿರುವುದಲ್ಲದೆ ಅಧಿಕ ಪೋಷಾಕಾಂಶಗಳನ್ನು ಹೊಂದಿರುತ್ತದೆ.

- ಕಡಿಮೆ ಜಾಗದಲ್ಲಿ ಹೆಚ್ಚು ಮೇವನ್ನು ಪಡೆಯಬಹುದು. 300 ಚ.ಅ. ವಿಸ್ತೀರ್ಣದ ಹೈಡ್ರೋಫೋನಿಕ್‌ನಲ್ಲಿ 365 ಟನ್ ಹಸಿರು ಮೇವು ಬೆಳೆಯಬಹುದು. ಇದು 25 ಎಕರೆ ಹುಲ್ಲುಗಾವಲಿಗೆ ಸಮ.
- ಮೇವು ಉತ್ಪಾದನೆ ಮಾಡಲು ನೀರಿನ ಅವಶ್ಯಕತೆ ಕಡಿಮೆ ಇರುತ್ತದೆ. ಈ ಯಂತ್ರದಲ್ಲಿ ಪ್ರತಿ 1. ಕೆ.ಜಿ. ಹಸಿರು ಮೇವು ಬೆಳೆಯಲು 2–3 ಲೀ ನೀರಿನ ಅವಶ್ಯಕತೆ ಇರುತ್ತದೆ. ಆದರೆ ಸಾಂಪ್ರಾದಾಯಕ ಪದ್ಧತಿಯಲ್ಲಿ ಅದೇ ಪ್ರಮಾಣದ ಹಸಿರು ಮೇವು ಬೆಳೆಯಲು 80 ಲೀ. ನೀರು ಬೇಕಾಗುತ್ತದೆ. ಈ ಯಂತ್ರದಲ್ಲಿ ಉಳಿಯುವ ನೀರನ್ನು ಪುನಃ ಉಪಯೋಗಿಸಬಹುದು.
- ಹೈಡ್ರೋಪೋನಿಕ್ ಹಸಿರು ಮೇವಲ್ಲಿ ನೀರಿನಾಂಶ ಹೆಚ್ಚಿರುತ್ತದೆ. ಆದ್ದರಿಂದ ಜಾನುವಾರುಗಳಿಗೆ ಕುಡಿಯುವ ನೀರಿನ ಬೇಡಿಕೆ ಕಡಿಮೆಯಿರುತ್ತದೆ.
- ಈ ಪದ್ಧತಿಯಲ್ಲಿ ಮಣ್ಣಿನ ಅವಶ್ಯಕತೆಯಿರುವುದಿಲ್ಲ. ಬದಲಾಗಿ ಸಸ್ಯಗಳು ಬೇಕಾದ ಖನಿಜಗಳನ್ನು ನೀರಿನ ಮೂಲಕ ಪೂರೈಸಲಾಗತ್ತದೆ.
- ಹಚ್ಚು ಕೆಲಸಗಾರರ ಅವಶ್ಯಕತೆಯಿರುವುದಿಲ್ಲ ಹಾಗೂ ಮೇವನ್ನು ಸುಲಭವಾಗಿ ಕಟಾವು ಮಾಡಬಹುದು.

**ಜಲಕೃಷಿ ಮೇವು ಅಥವಾ ಹೈಡ್ರೋಫೋನಿಕ್ ಹಸಿರು ಮೇವಿನ ಮಹತ್ವ**

- ಈ ಮೇವಿನಲ್ಲಿ ಸಸಾರಜನಕ (ಪ್ರೋಟೀನ್), ಖನಿಜಾಂಶಗಳು ಮತ್ತು ಅನ್ನಾಂಗಗಳು ಅಧಿಕ ಪ್ರಮಾಣದಲ್ಲಿರುತ್ತವೆ. ಇದರಿಂದ ಗರಿಷ್ಟಮಟ್ಟದ ಹಾಲು ಉತ್ಪಾದನೆ ಸಾಧ್ಯವಾಗುತ್ತದೆ.
- ಮೇವು ತಿನ್ನಲು ರುಚಿಕರವಾಗಿರುವುದಲ್ಲದೆ ಸುಲಭವಾಗಿ ಜೀರ್ಣವಾಗುತ್ತದೆ.
- ಈ ಮೇವನ್ನು ನೀಡುವುದರಿಂದ ಸಮತೋಲನ ಪಶು ಆಹಾರದ ಪ್ರಮಾಣವನ್ನು ಕಡಿಮೆ ಮಾಡಬಹುದು.
- ಜೀವಸತ್ವ ಎ (ಕೆರೊಟಿನ್) ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಜಾನುವಾರುಗಳಲ್ಲಿ ಸಂತಾನೋತ್ಪತ್ತಿ ಮತ್ತು ರೋಗ ನಿರೋಧಕ ಶಕ್ತಿ ಹೆಚ್ಚುವುದು. ಸ್ವಲ್ಪ ಮಟ್ಟಿಗೆ ಬಂಜೆತನವನ್ನು ತಡೆಯಬಹುದು.
- ಹೆಚ್ಚಿನ ಪ್ರಮಾಣದಲ್ಲಿ ಪೋಷಕಾಂಶಗಳು ಇರುವುದರಿಂದ ಗುಣಮಟ್ಟದ ಹಾಲು ಉತ್ಪಾದನೆ ಸಾಧ್ಯ.

**ಹೈಡ್ರೋಫೋನಿಕ್ ಮೇವು ಉತ್ಪಾದನೆ ವಿಧಾನ**

ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಜಲಕೃಷಿ ಮೇವು ಅಥವಾ ಹೈಡ್ರೋಪೋನಿಕ್ಸ್ ಪ್ರಚಲಿತಕ್ಕೆ ಬರುತ್ತಿದೆ. ಹೈಡ್ರೋ ಎಂದರೆ ನೀರು ಹಾಗೂ ಪೋನಿಕ್ ಎಂದರೆ ಕೆಲಸ ಮಾಡುವುದು.

ಹೈಡ್ರೋಪೋನಿಕ್ಸ್ ಎಂದರೆ ವಾತವರಣ ನಿಯಂತ್ರಿತ ಕೊಠಡಿಯಲ್ಲಿ ಬೀಜ ಮತ್ತು ನೀರುನ್ನು ಬಳಸಿ ಮೇವನ್ನು ಉತ್ಪಾದಿಸುವುದು. ಈ ತಂತ್ರಜ್ಞಾನವು ಅಮೇರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳಲ್ಲಿ ಕಳೆದ ಅನೇಕ ವರ್ಷಗಳಿಂದ ಬಳಕೆಯಲ್ಲಿದೆ. ಭಾರತದಲ್ಲೂ ಸಹ ಈ ದಿನಗಳಲ್ಲಿ ಅನೇಕ ಪ್ರಗತಿಪರ ಹೈನು ಉದ್ದಿಮೆದಾರರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ. ಇದು ಕಡಿಮೆ ನೀರು ದೊರೆಯುವ ಹಾಗೂ ಬರಗಾಲ ಬಾದಿತ ಪ್ರದೇಶದಲ್ಲಿ ಹೆಚ್ಚು ಉಪಯೋಗಕ್ಕೆ ಬರುತ್ತದೆ. ಈ ತಾಂತ್ರಿಕತಯಲ್ಲಿ ಕೇವಲ 8–12 ದಿನಗಳಲ್ಲಿ ಧಾನ್ಯದ ಬೀಜಗಳು ಒಂದು ಉತ್ತಮವಾದ ಹಸಿರುಮೇವಾಗಿ ಪರಿವರ್ತನೆಗೊಳ್ಳುತ್ತದೆ. ಈ ಯಂತ್ರದಲ್ಲಿ ಮೇವು ಬೆಳೆಯಲು ಮಣ್ಣಿನ ಅವಶ್ಯಕತೆಯಿರುವುದಿಲ್ಲ.

ಜಲಕೃಷಿ ಎಂದರೆ ಪೂರ್ಣವಾಗಿ ನೀರಿನಲ್ಲೇ ಬೆಳೆ0ಯಬಲ್ಲ ಸಸ್ಯಗಳು ಮಾತ್ರ ಎಂಬ ಕಲ್ಪನೆ ಬೇಡ. ಇಲ್ಲೇ ಅತಿ ಅಲ್ಪ ಪ್ರಮಾಣದಲ್ಲಿ ನೀರನ್ನು ಬಳಕೆ ಮಾಡಿ, ನೀರನ್ನು ಉಳಿಸಲಾಗುತ್ತದೆ. ರಾಸಾ0ಯನಿಕ ಮುಕ್ತ ಅಹಾರ, ಖನಿಜ0ಯುಕ್ತ, ಪೌಷ್ಟಿಕ ಆಹಾರ ಪೂರೈಸಿ, ಜನರ ಆರೋಗ್ಯ ಸುಧಾರಣೆ, ಜೀವಿತಾವಧಿ ಹೆಚ್ಚಳ, ದೃಢಕಾ0ಯರನ್ನಾಗಿಸಲು ಮನೆ0ಯಂಗಳದಲ್ಲಿ ಬೆಳೆದ ಬೆಳೆ0ಯೇ ಸಾಕು ಎಂಬುದರ್ ಮನವರಿಕೆ ಮಾಡುವುದು. ಗ್ರಾಮೀಣ ಭಾಗದ ಜನರು ಆರ್ಥಿಕವಾಗಿ ಸಬಲರಾದರೆ, ನಗರಕ್ಕೆ ವಲಸೆ ಬರುವುದು ತಪ್ಪುತ್ತದೆ. ಸ್ವಾವಲಂಬಿ ಬದುಕನ್ನು ಕಲಿಸಿ, ಜನರಿಗೆ ದೊರೆ0ಯುವಂತೆ ಮಾಡುವುದು ಜಲಕೃಷಿ0ಯ ಉದ್ದೇಶ, ದೈನಂದಿನ ಆಹಾರಕ್ಕಾಗಿ ಇನ್ನೊಬ್ಬರ ಮುಂದೆ ಕೈ ಚಾಚುವಂಥ ದೃಶ್ಯ ಕಣ್ಮರೆ0ಯಾಗಿರುಸುವುದು. ಹೊರ ಪ್ರದೇಶದಿಂದ ಅಮದಾಗುವ ಪ್ರಮಾಣವನ್ನು ತಕ್ಕಿಸಿ, ರಫ್ತು ಪ್ರಮಾಣವನ್ನು ಹೆಚ್ಚಿಸುವುದು. ಇದರಿಂದ ಆಹಾರ ಕೊರತೆ ಅಥವಾ ಹೆಚ್ಚಳದಿಂದ ಉಂಟಾಗುವ ಧರಣಿ, ಪ್ರತಿಭಟನೆಗಳು ಇಲ್ಲವಾದಂತಾಗುತ್ತದೆ. ಜಲಕೃಷಿಯಿಂದ ಬೆಳೆ0ಯುವ ಬೆಳೆ0ಯು ಖನಿಜ0ಯುಕ್ತವಾಗಿದ್ದು, ಸಣ್ಣ ಪ್ರಮಾಣದ ವೈರಾಣುಗಳಿಂದನೂ ಮುಕ್ತವಾಗಿರುತ್ತದೆ. ನೀವು ಬೆಳೆದ ಬೆಳೆ0ಯನ್ನು ಮಧ್ಯವರ್ತಿಗಳ ಸಹಾ0ಯವಿಲ್ಲದೆ ಇತರೆ ತರಕಾರಿ, ಸೊಪ್ಪು ಮಾರುವಂತೆ ಮಾರಾಟ ಮಾಡಬಹುದು. ರಫ್ತು ಪ್ರಮಾಣ ದಕ್ಕಿರದೆ ಆಹಾರ ಧಾನ್ಯಗಳ ಸಾಗಾಣಿಕೆಗಾಗಿ ಓಡಾಡುವ ವಾಹನಗಳ ದಟ್ಟಣೆ ಕಮ್ಮಿ0ಯಾಗುತ್ತದೆ. ಇದರಿಂದ ವಾತಾವರಣ ಕಲುಷಿತಗೊಳ್ಳುವುದು ನಿಲ್ಲುತ್ತದೆ. ನೋಬೆಲ್ ಪ್ರಶಸ್ತಿ ವಿಜೇತ ಮಹಮ್ಮದ್ 0ಯೂನಸ್ ಅವರ ಮೈಕ್ರೋ ಬ್ಯಾಕಿಂಗ್ ತತ್ವದಡಿ0ಯಲ್ಲಿ ಅಗತ್ಯವಿರುವವರಿಗೆ ಸಹಾ0ಯ ಧನದ ಸಹಕಾರ ನೀಡಿ, ಸ್ವಾವಲಂಬಿಗಳಾಗುವಂತೆ ಉತ್ತೇಜಿಸಬಹುದು. ಸರಳೀಕೃತ ಹೈಡ್ರೋಪೋನಿಕ್ಸ್ ಇದು ಮೊದಲಿಗೆ ಪ್ರಾರಂಭವಾಗಿದ್ದು, ಲ್ಯಾಟಿನ್ ಅಮೇರಿಕ ದೇಶಗಳಲ್ಲಿ ನಂತರ 0ಯುರೋಪ್, ಮಧ್ಯಪ್ರಾಚ್ಯಗಳಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿ ಬಳಸಲ್ಪಡುತ್ತಿರುವ ಕೃಷಿ ತಂತ್ರಜ್ಞಾನ. ನಗರ ಪ್ರದೇಶಗಳಲ್ಲಿ ಹೆಚ್ಚು ಹೊಂದುತ್ತದೆ. ಮಣ್ಣು, ಭೂಮಿ0ಯ ನೆರವಿಲ್ಲದೆ ಸಸಿಗಳನ್ನು ಬೆಳೆಸುವುದು. ಆ ಮೂಲಕ ಮಣ್ಣಿನಿಂದ ಅಂಟಬಹುದಾದ ಸಣ್ಣ ಪ್ರಮಾಣದ ಕಲ್ಮಶವನ್ನೂ ಸಸಿಗೆ ತಗುಲದಂತೆ ಮಾಡಲಾಗುವುದು. ಕಡಿಮೆ ಪ್ರಮಾಣದ ಜಾಗದ ಅವಶ್ಯಕತೆ. ಜಲ ಶೇಖರಿತ ಸಣ್ಣ ಕುಂಡಗಳು, ಒಡೆದ ತಂಪು ಪಾನೀ0ಯಗಳ ಬಾಟಲ್. ಇತ್ಯಾದಿ ಬಳಕೆ. ಜಲಕೃಷಿ ಮೂಲಕ ಟೊಮೋಟೊ, ಕ್ಯಾರೆಟ್, ಹುರುಳಿಕಾಯಿ, ಮೂಲಂಗಿ, ತರಾತರದ ಸೊಪ್ಪುಗಳು, ಸುಗಂಧಭರಿತ ಸಸ್ಯಗಳು, ಔಷಧಿ ಸಸ್ಯಗಳು, ಲೇಟ್ಯೂಸ್, ಧಾನ್ಯಗಳು, ಹೂ ಗಿಡಗಳು ಬದನೆ. ಹೀಗೆ ಪಟ್ಟಿ ಬೆಳೆ0ಯುತ್ತದೆ. ನಗರಗಳಲ್ಲಿ ರೂಫ್ ಟಾಫ್ ಗಾರ್ಡನ್ ಗಳು ಸಾಮಾನ್ಯ. ಮೇಲ್ಛಾವಣಿ ಇರಲಿ, ವರಾಂಡ, ಪೋರ್ಟಿಕೋ ಇರಲಿ ಜಾಗ ಎಲ್ಲೇ ಇರಲಿ ಸಣ್ಣ ಜಾಗದಲ್ಲೇ ಕೃಷಿಗೆ ಕೈ ಹಾಗಬಹುದು. ಅಲಂಕಾರಿಕ ಕೈತೋಟಗಳನ್ನು ಹಣ ತರುವ ಕೃಷಿ ತೋಟದಂತೆ ಮಾರ್ಪಾಡಿಸಬಹುದು. ಜಲಕೃಷಿ0ಯಲ್ಲಿ ನೀರು ಅಲ್ಪಪ್ರಮಾಣದಲ್ಲಿ ಬಳಸಲಾಗುತ್ತದೆ ಹಾಗೂ ಬಳಸಿದ ನೀರನ್ನು ಮತ್ತೆ ಬಳಸಲ್ಪಡುವುದರಿಂದ ಪರಿಸರ ಸ್ನೇಹಿ, ಕಲುಷಿತ ಮುಕ್ತ ಎನ್ನಬಹುದು. ಸಾಮಾನ್ಯ ಕೃಷಿ0ಯಲ್ಲಿ ಆಗುವ ನೀರಿನ ಕೊರತೆ, ವಿದ್ಯುತ್ ಕೊರತೆ ಬಾಧೆ ಇಲ್ಲಿ ಆಗುವುದಿಲ್ಲ. ಸಹಜವಾಗಿ ಬೆಳೆವ ಸಸಿಗಳಿಗೆ ಕಾಯಿಲೆ ಕಸಾಲೆ ತಗುಲುವುದು ಅಪರೂಪ, ಕಳೆ ಅಂತೂ ಬಾಧಿಸುವುದಿಲ್ಲ. ಎಲ್ಲಕ್ಕೂ ನೈಸರ್ಗಿಕವಾಗಿ ಪರಿಹಾರ ಪಡೆ0ಯಲಾಗುತ್ತದೆ. ಗೃಹಿಣೀ0ಯರು, ಮನೆಗೆಲಸದವರು, ಮಕ್ಕಳು, ನಿವೃತ್ತರು, ಹೀಗೆ 0ಯಾಗು ಬೇಕಾದರೂ ಇದನ್ನು ಪ್ರಾರಂಬಿಸಬಹುದು. ತಂತ್ರಜ್ಞಾನದ ನೆರವು ಸ್ವಾವಲಂಬನೆ0ಯ ಮಂತ್ರ ಜಪಿಸಿದರೆ ಸಾಕು. ತೇವದ ವಾತಾವರಣದಲ್ಲಿ ಹೆಚ್ಚಾಗಿ ಬೆಳೆವ ಲೆಟ್ಯೂಸ್ ಸೊಪ್ಪನ್ನು ಬೆಂಗಳೂರಿನ ಹವಾಮಾನ (ಎಲ್ಲಾ ಋತುಗಳಲ್ಲಿ) ದಲ್ಲಿ ಈ ವಿಧಾನ ಬಳಸಿ ಬೆಳೆಸಿ ಸವಾಲೆಸೆದಿದ್ದಾರೆ ಪ್ರಕಾಶ್. ಜಲಕೃಷಿಗೆ ಖರ್ಚು ವೆಚ್ಚ 20 ಚ. ಅ ಕೈ ತೋಟದಲ್ಲಿ 2 ಕೆ. ಜಿ 0ಯಷ್ಟು ರಾಸಾ0ಯನಿಕ ಮುಕ್ತ ಆಹಾರ ಪಡೆ0ಯಲು ಸುಮಾರು 110–120 ಡಾಲರ್ ಸಾಕು. ಭಾರದಲ್ಲಾದರೆ 10 ಸಾವಿರ ದಿಂದ 20 ಸಾವಿರದಷ್ಟು ಹಣವಿದ್ದರೆ ಕೈತೋಟ ನಿರ್ಮಿಸಿ, ನಿರ್ವಾಹಣೆ ಮಾಡಿ ಫಲ ಅಧಿಕವಾಗಿ ಸೂರ್ಯನ ಬಿಸಿಲು ತಾಗದಂತೆ ಎಳೆ ಸಸಿಗಳನ್ನು ರಕ್ಷಿಸಬೇಕು. ಅದಕ್ಕೆ ನೆರಳಾಗಲು ಬಲೆ ಇದ್ದರೆ ಆ0ಯ್ತು. ಮಳೆಯಿಂದ ರಕ್ಷಿಸಲು ಪಾಲಿಥಿನ್ ಶೀಟ್ ಬಳಸಬಹುದು.

ಜಲಕ್ಕೃಷಿ ಮೇವು ಅಥವಾ ಹೈಡ್ರೋಪೋನಿಕ್ ಮೇವನ್ನು ಹಸಿರು ಮನೆಯಲ್ಲಿ ಬೆಳೆಯಲಾಗುತ್ತಿದೆ. ಈ ಮನೆಯಲ್ಲಿ ಬೆಳಕು, ಉಷ್ಣಾಂಶ, ತೇವಾಂಶ ಮತ್ತು ಗಾಳಿ (ಆಮ್ಲಜನಕ ಮತ್ತು ಇಂಗಾಲ) ಯ ಪ್ರಮಾಣವನ್ನು ನಿಯಂತ್ರಿಸಲಾಗುತ್ತದೆ. ಇದರ ಜೊತಗೆ ನೀರು ಮತ್ತು ಖನಿಜಗಳನ್ನು ಒದಗಿಸಿದಾಗ ಧಾನ್ಯದ ಬೀಜಗಳು ಮೊಳಕೆ ಒಡೆದು ಬೆಳೆಯಲು ಪ್ರಾರಂಭಿಸುತ್ತವೆ. ಸಾಮಾನ್ಯವಾಗಿ ಮಕ್ಕೆ ಜೋಳ, ಗೋಧಿ, ಓಟ್ಸ್, ಬಾರ್ಲಿ ಬೀಜಗಳನ್ನು ಬಳಸುತ್ತಾರೆ. ಹವಾಗುಣಕ್ಕೆ ತಕ್ಕಂತೆ 8–12 ದಿನಗಳಲ್ಲಿ ಸುಮಾರು 5 ಸೆಂ. ಎತ್ತರಕ್ಕೆ ಬೆಳೆಯುತ್ತದೆ. ಈ ರೀತಿ ಬೆಳೆದು ಮಾಟ್ ನಂತಿರುವ ಸಸಿಗಳನ್ನು ಜಾನುವಾರುಗಳಿಗೆ ನೀಡಬಹುದು.

**4-stack model:** 1.7m wide x 12m long x 1.5m high, 1 hp motor, speed control by inverter, controlled by sliding speed and time. Number of trays 260 area (30cm x 60cm each) Net growing area: 46.8 sq.m.

**Production (Barley):** 1,040 kg in 7 days => 150 kg per day, from 15kg/day of dry barley grains, this can supports 14 adult cows.

**In the future:** As competition for land and water increases and feed prices continue to rise, hydroponic fodder could become a viable option for more livestock producers.

ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಹೈಡ್ರೋಪೋನಿಕ್ಸ್ (Hydrophonics) ಪ್ರಚಲಿತಕ್ಕೆ ಬರುತ್ತಿದೆ. ಹೈಡ್ರೋ ಎಂದರೆ ನೀರು ಹಾಗೂ ಪೋನಿಕ್ ಎಂದರೆ ಕೆಲಸ ಮಾಡುವುದು. ಹೈಡ್ರೋಪೋನಿಕ್ಸ್ ಎಂದರೆ ವಾತವರಣ ನಿಯಂತ್ರಿತ ಕೊಠಡಿಯಲ್ಲಿ ಬೀಜ ಮತ್ತು ನೀರನ್ನು ಬಳಸಿ ಮೇವನ್ನು ಉತ್ಪಾದಿಸುವುದು. ಈ ತಂತ್ರಜ್ಞಾನವು ಅಮೇರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳಲ್ಲಿ ಕಳೆದ ಅನೇಕ ವರ್ಷಗಳಿಂದ ಬಳಕೆಯಲ್ಲಿದೆ. ಭಾರತದಲ್ಲೂ ಸಹ ಈ ದಿನಗಳಲ್ಲಿ ಅನೇಕ ಪ್ರಗತಿಪರ ಹೈನು ಉದ್ದಿಮೆದಾರರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ. ಇದು ಕಡಿಮೆ ನೀರು ದೊರೆಯುವ ಹಾಗೂ ಬರಗಾಲ ಬಾದಿತ ಪ್ರದೇಶದಲ್ಲಿ ಹೆಚ್ಚು ಉಪಯೋಗಕ್ಕೆ ಬರುತ್ತದೆ. ಈ ತಾಂತ್ರಿಕತಯಲ್ಲಿ ಕೇವಲ 8–12 ದಿನಗಳಲ್ಲಿ ಧಾನ್ಯದ ಬೀಜಗಳು ಒಂದು ಉತ್ತಮವಾದ ಹಸಿರುಮೇವಾಗಿ ಪರಿವರ್ತನೆಗೊಳ್ಳುತ್ತದೆ. ಈ ಯಂತ್ರದಲ್ಲಿ ಮೇವು ಬೆಳೆಯಲು ಮಣ್ಣಿನ ಅವಶ್ಯಕತೆಯಿರುವುದಿಲ್ಲ.




***Hydroponic fodder systems make very efficient use of water and land.***

ಹೈಡ್ರೋಪೋನಿಕ್ ಮೇವನ್ನು ಹಸಿರು ಮನೆಯಲ್ಲಿ ಬೆಳೆಯಲಾಗುತ್ತಿದೆ. ಈ ಮನೆಯಲ್ಲಿ ಬೆಳಕು, ಉಷ್ಣಾಂಶ, ತೇವಾಂಶ ಮತ್ತು ಗಾಳಿ (ಆಮ್ಲಜನಕ ಮತ್ತು ಇಂಗಾಲ)ಯ ಪ್ರಮಾಣವನ್ನು ನಿಯಂತ್ರಿಸಲತಾಗುತ್ತದೆ. ಇದರ ಜೊತಗೆ ನೀರು ಮತ್ತು ಖನಿಜಗಳನ್ನು ಒದಗಿಸಿದಾಗ ಧಾನ್ಯದ ಬೀಜಗಳು ಮೊಳಕೆ ಒಡೆದು ಬೆಳೆಯಲು ಪ್ರಾರಂಭಿಸುತ್ತವೆ. ಸಾಮಾನ್ಯವಾಗಿ ಮಕ್ಕೆ ಜೋಳ, ಗೋಧಿ, ಓಟ್ಸ್, ಬಾರ್ಲಿ ಬೀಜಗಳನ್ನು ಬಳಸುತ್ತಾರೆ. ಹವಾಗುಣಕ್ಕೆ ತಕ್ಕಂತೆ 8–12 ದಿನಗಳಲ್ಲಿ ಸುಮಾರು 5 ಸೆಂ. ಎತ್ತರಕ್ಕೆ ಬೆಳೆಯುತ್ತದೆ. ಈ ರೀತಿ ಬೆಳೆದು ಮಾಟ್ ನಂತಿರುವ ಸಸಿಗಳನ್ನು ಜಾನುವಾರುಗಳಿಗೆ ನೀಡಬಹುದು.

**Seed Selection:** The grain to be used (mainly cereals and some leguminous seeds) is the main point of this technology. Grain is not important only as a productive raw material but also its cost is the main controlling factor on the final production cost.

Essentially grains used to produce green fodder are: wheat, barley, sorghum and maize. Fundamentally the selected type shall be a good quality grain. A good quality grain for green fodder production follows the next pattern of conditions:

1. Not to be impaired during its handling. Broken grains allow starch freedom and illness possibilities increases.
2. To be dust clean. Dusts are yeast, bacteria, micro-fungus and other microorganism bearers.

These are two main conditions that a good grain for green fodder should comply. They are very important by themselves and they could be the cause of success or failure in producing green fodder.

The first points mentioned on the grain selection criterion can be searched by visual observation on grains. Besides careful observation, counting should be used to know the percentage on broken and bad grains. Of course, a third condition is also highly important: A grain having at least 90% of terminative power should be selected. Being easy to do, it is highly advisable to make a grain germination power test before buying it.

The second point, clean grains as much as possible without dust & broken, should deserve a major discussion. Presence of dust, many times slanted, is a clue matter when somebody wants to obtain a healthy green fodder. Contaminations affecting green fodder production are sometimes light but larger on occasions. According to important research, grain dusts are the main contamination factor. On dust can be found a very wide series of microorganisms, being these microorganisms the cause of green fodder problems. It is very well known that if these microorganisms find appropriate conditions to develop their strength themselves, their colonies will prosper very quickly. If they are able to colonize during grain germination period it will produce acid zones, incipient spoiled sectors and unpleasant moulds. Any of these will cause a poor forage quality and a reduction of yield.

Another very important point to consider by the producer when he is ready to select a grain is its local availability. Since cost of grain is the main factor on green fodder production, it is necessary to avoid long transportation distances. As it was expressed it is highly important to give special attention to seed selection. Also, a good treatment of grains previous to germination is essential.

**Building A Growing Structure**

**1. Housing Structure (Outer Structure) :** Housing structure can be made from many materials like, RCC, PUF panel, Roofing Sheets, Polycarbonate Sheets, Green Net etc. having light slope cemented flooring to drain out water from the housing structure.

Environmental conditions inside the room should be controlled by use of evaporation cooler, air conditioner or heater. To do that the equipment needs to be considered according to room insulation, local conditions, and type of grain to germinate in it. A good heat balance will help in designing the needed equipment.

In general, lighting inside the room should be necessary either kept by lamps or natural lights. The level of luminescence required by the green fodder growing trays isn't too high but tubes should be distributed in such a way that lighting reaches the green fodder in trays as homogeneously as possible.

Besides the growing room, it is advisable, but not indispensable when small cabinets are needed, to have a second room to be used in previous tasks. Of course, if somebody is planning a big production unit, this room is a necessity. Cleaning and soaking of seeds should be done in it.

**2. Tray Holding Shelves structure :** It will be necessary to build a special shelves structure that allows to keep the plastic trays with grains are stacked, such frame can be made with Mild Steel, GI Steel, aluminum etc, may having layer of powder coat, color to give long life. These shelves will have a light slope needed in order to have a good running off excess water. Besides, the shelves should be spaced enough to allow building the irrigation system in it.

Irrigation could be done by aspersion (the most popularized and simple) or by ebb and flow method. The last one was used during ancient times in green fodder production.

**Benefits to the Animals – Dairy**

• Trials over an 8 week period : when fed 12kg per day of fresh hydroponic fodder the average difference between the 5test and control groups was +11% milk yield, and +23% milk quality.

• Extended trials over 29 years by Ohio State University indicate that dairy cows fed with freshly mown grass outperformed cattle fed grass that was allowed to dry with an increased milk yield of 28%. hydroponic fodder from our system is the equivalent of freshly mown grass every day of the year.

• The fodder is digested more easily in the rumen, being over 80D, enabling the digestive system to conserve energy during digestion, and using the "saved" energy to both maintain condition and fertility, and improve milk yield.

**Benefits to beef animals**

• Trials conducted in NZ demonstrated improved weight gain in fodder-fed cattle: • Cattle in fed 15kg of fodder per day, over 84 days, had a total live weight gain over the testing period of 41% more than group 2 (normal feed) .

• In addition the cost of feeding the treated group was SIGNIFICANTLY LOWER than the control group due to the lower cost of fodder production.

• The cost would be even lower when compared to feeding conserved forages such a silage.

**Benefits to goats**

· Improved conception rates
· Hoof health was much better
· Weight gain was markedly increased

**Benefits to pigs**

• Free range pigs being fed 3kg of grain per day were changed to a diet of 1kg grain and 2kg of fresh fodder.

• The principle conclusion was that growth rates accelerated, finishing 2 weeks sooner than the pigs not on the fodder.

• The sows came into heat much quicker and had a longer milking period, enabling the piglets early growth rates.

• Feeding costs were reduced by nearly 50%, With concentrate costs rising, fodder makes sound sense.

**References**

ಡಾ. ಮಹದೇವಪ್ಪ. ಖ. ಗೌರಿ, ಡಾ. ಬಿ. ಎನ್. ಸುರೇಶ ಮತ್ತು ಟಿ. ಕೆ. ರೂಪ,. 2013. ಹೈಡ್ರೋಪೋನಿಕ್ ಮೇವು ಉತ್ಪಾದನೆ ಮತ್ತು ಅದರ ಪ್ರಾಮುಖ್ಯತೆ. ತರಬೇತುದಾರರ ತರಬೇತಿ ಕಾರ್ಯಕ್ರಮ – 2013. "ಜಾನುವಾರುಗಳಲ್ಲಿ ಉತ್ಪಾದಕತೆ ಹೆಚ್ಚಿಸಲು ಅನುಸರಿಸಬೇಕಾದ ನಿರ್ವಹಣಾ ಕ್ರಮಗಳು" – ಮಾಹಿತಿ ಕೈಪಿಡಿ. ಜಿಲ್ಲಾ ಪಂಚಾಯತ್, ಜಲಾನಯ ಅಭಿವೃದ್ಧಿ

ಇಲಾಖೆ, ಹಾಗೂ ಕ. ಪ. ಮೀ. ವಿ. ವಿ. ಬೀದರ್, ಪಶುವೈದ್ಯಕೀಯ ಮಾಹಾವಿದ್ಯಾಲಯ, ಹಾಸನ. ಇವರ ಆಯಜಕತ್ವದಲ್ಲಿ. ಪು. ಸಂ. 24.

*1 Published: Monday, September 7, 2009, (**Error! Hyperlink reference not valid.** -Accessed on 31-03-2016)*

Kumar, Ramasamy Rajesh; Cho, Jae Young (2014). "Reuse of hydroponic waste solution". *Environmental Science and Pollution Research* **21** (16): 9569–9577.doi:10.1007/s11356-014-3024-3.

Manoj, E. M. 2015. Hydroponic fodder to revitalise dairy sector. **The Hindu -** BUSINESS Edn. (20-09-2015)

http://www.icar.org.in/en/node/6737 (Accessed on 31-03-2016)

https://en.wikipedia.org/wiki/Hydroponics (Accessed on 31-03-2016)

https://ezgrogarden.com/hydroponics/an-overview-of-hydroponics/ (Accessed on 31-03-2016)

Thiyagarajan, G., Umadevi R. and Ramesh, K. (2007). "**Hydroponics**," Science Tech Entrepreneur, Water Technology Centre, Tamil Nadu Agricultural University, Coimbatore, Tamil Nadu 641 003, India.

# ಹಳ್ಳಿ ವ್ಯವಸ್ಥೆಯಲ್ಲಿ ಹಸುಗಳಲ್ಲಿ ಕತ್ತಿನ ಅನ್ನನಾಳದ ತಡೆಯನ್ನು ಶಸ್ತ್ರಚಿಕಿತ್ಸೆ ನಡೆಸದೇ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳಿಂದ ಗುಣಪಡಿಸುವ ಮಾರ್ಗ

ಮಂಜುನಾಥ್ ಎಸ್. ಪಿ.[1] ಮತ್ತು ಚಂದ್ರೇಗೌಡ ಸಿ.ಟಿ[2].

[1]ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಅಣತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ [2]ಸಹಾಯಕ ಪ್ರಾಧ್ಯಾಪಕರು, ಪಶುವೈದ್ಯಕೀಯ ಕಾಲೇಜು, ಹಾಸನ Mail ID: drmanjvet@gmail.com

**ಪ್ರಬಂಧಸಾರ:–** ಹಸುಗಳಲ್ಲಿ ಅನ್ನನಾಳದ ತಡೆ ಉಂಟಾಗುವುದು ಸಾಮಾನ್ಯ. ಅವು ಮೇಯುವಾಗ ಮಾವಿನಹಣ್ಣು, ಬೀಟ್ರೂಟ್, ಜೋಳದ ತೆನೆ, ರೆಕ್ಸಿನ್ ವಸ್ತುಗಳು, ಕಾಯಿ ಮುಂತಾದವುಗಳಿಂದ ಅನ್ನನಾಳದ ತಡೆ ಉಂಟಾಗುತ್ತದೆ. ಸಂಪೂರ್ಣ ತಡೆ ಉಂಟಾದಾಗ ದಿಢೀರನೆ ಹೊಟ್ಟೆಉಬ್ಬರ ಉಂಟಾಗಿ ಉಸಿರಾಟಕ್ಕೆ ತೀವ್ರ ತೊಂದರೆಯಾಗಿ ರಾಸು ಸಾವಿಗೀಡಾಗುತ್ತದೆ. ಅನ್ನನಾಳದ ತಡೆಯು ಅತೀ ಬೇಗನೆ ಸಾವಿಗೀಡುಮಾಡಬಲ್ಲ ಸ್ಥಿತಿಯಾದ್ದರಿಂದ, ಶೀಘ್ರ ಚಿಕಿತ್ಸೆಯ ಅವಶ್ಯಕತೆಯಿರುತ್ತದೆ. ಅನ್ನನಾಳದ ಶಸ್ತ್ರಚಿಕಿತ್ಸೆಯು ಈ ಸ್ಥಿತಿಯನ್ನು ಗುಣಪಡಿಸಲು ಇರುವ ಮುಖ್ಯ ಮಾರ್ಗವಾಗಿದ್ದರೂ, ಹಳ್ಳಿಯ ವ್ಯವಸ್ಥೆಯಲ್ಲಿ ನುರಿತ ಶಸ್ತ್ರಚಿಕಿತ್ಸಕರ ಶೀಘ್ರ ಲಭ್ಯತೆಯು ತುಂಬಾ ಕಡಿಮೆ ಇರುವುದು, ಅತಿಯಾದ ಖರ್ಚು ಮತ್ತು ಶಸ್ತ್ರಚಿಕಿತ್ಸೆಯ ನಂತರ ಇಳಿಯುವ ಹಾಲಿನ ಇಳುವರಿಯಿಂದ ರೈತನು ಪರಿತಪಿಸಬೇಕಾಗುತ್ತದೆ. ಪ್ರಸಕ್ತವಾಗಿ ಪಶುಚಿಕಿತ್ಸಾಲಯ ಅಣತಿಯಲ್ಲಿ ಅನ್ನನಾಳದ ತಡೆಯಿಂದ ನರಳುತ್ತಿದ್ದ 3 ಹಸುಗಳನ್ನು ಸ್ಥಳೀಯವಾಗಿ ಲಭ್ಯವಿರುವ ಹಲಗೆಯನ್ನು ಬೇಕಾದಂತೆ ಮಾರ್ಪಾಟು ಮಾಡಿಕೊಂಡು, ತಡೆ ಉಂಟು ಮಾಡಿದ್ದ ಜೋಳದ ತೆನೆ, ಬೀಟ್ ರೂಟ್ ಹಾಗೂ ಮಾವಿನಹಣ್ಣುಗಳನ್ನು ಹೊರತೆಗೆಯಲಾಯಿತು. ಪ್ರಸಕ್ತ ಮಾರ್ಗದಿಂದ ಮೇಲೆ ನೀಡಲಾದ ಸಮಸ್ಯೆಗಳು ದೂರವಾಗಿವೆ. ಈ ಲೇಖನದಿಂದ ತಿಳಿಯುವುದೇನೆಂದರೆ ಅನ್ನನಾಳದ ತಡೆ ಉಂಟುಮಾಡಿರುವ ವಸ್ತುವು ನುಣುಪಾದ ಹೊರಕವಚವನ್ನು ಹೊಂದಿದ್ದಾಗ ಸ್ಥಳೀಯವಾಗಿ ಲಭ್ಯವಿರುವ ಹಲಗೆಯನ್ನು ಉಪಯೋಗಿಸಿಕೊಂಡು ದೀರ್ಘವಾದ ಶಸ್ತ್ರ ಚಿಕಿತ್ಸೆಯನ್ನು ತಡೆಯಬಹುದಾಗಿದೆ.

ಹಸುಗಳಲ್ಲಿ ಅವುಗಳ ಹೊರಗಡೆ ಮೇಯುವ ಪ್ರವೃತ್ತಿಯಿಂದ ಅನ್ನನಾಳದ ತಡೆ ಉಂಟಾಗುವುದು ಸಾಮಾನ್ಯ. ಅವು ಮೇಯುವಾಗ ಮಾವಿನಹಣ್ಣು, ಬೀಟ್ರೂಟ್, ಜೋಳದ ತೆನೆ, ರೆಕ್ಸಿನ್ ವಸ್ತುಗಳು (ಶಿವಪ್ರಕಾಶ್, 2011), ಟ್ರೈಕೋಬೆಜಾರ್ಗ್ಗಳು, ಫೈಟೋಬೆಜಾರ್ಗ್ಗಳು (ತ್ಯಾಗಿ ಮತ್ತು ಸಿಂಗ್, 1993), ಕಾಯಿ ಮುಂತಾದ ವಸ್ತುಗಳಿಂದ ಅನ್ನನಾಳದ ತಡೆಉಂಟಾಗುತ್ತದೆ. ಈ ವಸ್ತುಗಳಿಂದ ಸಂಪೂರ್ಣವಾದ ಅನ್ನನಾಳದ ತಡೆ ಉಂಟಾದಾಗ ದಿಢೀರನೆ ಹೊಟ್ಟೆಉಬ್ಬರ ಉಂಟಾಗಿ ಉಸಿರಾಟಕ್ಕೆ ತೀವ್ರ ತೊಂದರೆಯಾಗಿ ಹಸುವು ಸಾವಿಗೀಡಾಗುತ್ತದೆ. ಅನ್ನನಾಳದ ತಡೆಯು ಅತೀ ಬೇಗನೆ ಸಾವಿಗೀಡು ಮಾಡಬಲ್ಲ ಸ್ಥಿತಿಯಾದುದ್ದರಿಂದ ಶೀಘ್ರ ಚಿಕಿತ್ಸೆಯ ಅವಶ್ಯಕತೆಯಿರುತ್ತದೆ (ಶಿವಪ್ರಕಾಶ್, 2011).ಕತ್ತಿನ ಜಾಗದ ಅನ್ನನಾಳದಲ್ಲಿ ತಡೆ ಉಂಟಾದಾಗ ಅನ್ನನಾಳದ ಶಸ್ತ್ರಚಿಕಿತ್ಸೆಯು ಹಸುವನ್ನು ಗುಣಪಡಿಸಲು ಇರುವ ಮುಖ್ಯ ಮಾರ್ಗವಾಗಿದೆ. ಆದರೆ ಹಳ್ಳಿಯ ವ್ಯವಸ್ಥೆಯಲ್ಲಿ ತುರ್ತು ಪರಿಸ್ಥಿತಿಯಲ್ಲಿ ನುರಿತ ಶಸ್ತ್ರಚಿಕಿತ್ಸಕರ ಲಭ್ಯತೆಯು ಅತೀ ವಿರಳ. ಶಸ್ತ್ರಚಿಕಿತ್ಸೆಗೆ ಹಾಗೂ ಶಸ್ತ್ರಚಿಕಿತ್ಸೆಯ ನಂತರದ ಚಿಕಿತ್ಸೆಗೆ ತುಂಬಾ ಖರ್ಚು ಆಗುವುದಲ್ಲದೆ, ಶಸ್ತ್ರಚಿಕಿತ್ಸೆಯ ನಂತರ ರೈತರು ಹಸುವಿನ ಬಗ್ಗೆ ತೀವ್ರ ಕಾಳಜಿಯನ್ನು ವಹಿಸಬೇಕಾಗುತ್ತದೆ. ಅಲ್ಲದೆ ಶಸ್ತ್ರಚಿಕಿತ್ಸೆಯು ನಂತರ ಕಾಲಿನ ಇಳುವರಿ ಕಡಿಮೆಯಾಗುವುದರಿಂದ ರೈತನು ಪರಿತಪಿಸಬೇಕಾಗುತ್ತದೆ. ಬಾಯಿಗೆ ಹಾಕುವ ಗ್ಯಾಗ್ ಗಳನ್ನು ಕೂಡ ಈ ಸ್ಥಿತಿಯಲ್ಲಿ ಬಳಸಬಹುದಾಗಿದೆ. ಆದರೆ ಹಳ್ಳಿಯ ಸ್ಥಿತಿಯಲ್ಲಿ ಬೇಕಾದ ಸಮಯದಲ್ಲಿ ಇವುಗಳ ಲಭ್ಯತೆಯು ತುಂಬಾ ಕಡಿಮೆ. ಪ್ರಸ್ತುತ ಲೇಖನದಲ್ಲಿ, 2013– 2014 ಮತ್ತು 2014–2015 ನೇ ಸಾಲಿನಲ್ಲಿ ಪಶು ಚಿಕಿತ್ಸಾಲಯ, ಅಣತಿಯ ವ್ಯಾಪ್ತಿಯಲ್ಲಿ ಅನ್ನನಾಳದ ತಡೆಯ ತುರ್ತು ಪರಿಸ್ಥಿತಿಯಿಂದ ನರಳುತ್ತಿದ್ದ 3 ಹಸುಗಳನ್ನು ಹಳ್ಳಿಯ ಪರಿಸ್ಥಿತಿಯಲ್ಲಿ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿಕೊಂಡು ಶಸ್ತ್ರಚಿಕಿತ್ಸೆ ನಡೆಸದೇ ಗುಣಪಡಿಸಿದ ಮಾರ್ಗವನ್ನು ವಿವರಿಸಲಾಗಿದೆ.

**ಇತಿಹಾಸ ಮತ್ತು ಚಿಕಿತ್ಸೆಗಿಂತ ಮುಂಚೆ ಗಮನಿಸಲಾದ ಅಂಶಗಳು:**

2013–2014 ಮತ್ತು 2014–2015ನೇ ಸಾಲಿನಲ್ಲಿ ಪಶುಚಿಕಿತ್ಸಾಲಯ, ಅಣತಿಯ ವ್ಯಾಪ್ತಿಯಲ್ಲಿ ಅನ್ನನಾಳದ ತಡೆಯ ತುರ್ತು ಪರಿಸ್ಥಿತಿಯಿಂದ ನರಳುತ್ತಿದ್ದ 3 ಹಸುಗಳ ಚಿಕಿತ್ಸೆಗಾಗಿ ಕರೆ ನೀಡಲಾಗಿತ್ತು. ಜೋಳದತೆನೆ, ಮಾವಿನ ಹಣ್ಣು, ಬೀಟ್‌ರೂಟ್‌ಗಳನ್ನು ತಿಂದ ತಕ್ಷಣ ಬಾಯಿಯಿಂದ ವಿಪರೀತ ಜೊಲ್ಲು ಸುರಿಯುವುದು, ಎಡ ಬಾಗದ ಕತ್ತಿನ ಅನ್ನನಾಳವಿರುವ ಜಾಗದಲ್ಲಿ ಊತ (ಚಿತ್ರ–1), ಹೊಟ್ಟೆಉಬ್ಬರ, ಉಸಿರಾಟಕ್ಕೆ ವಿಪರೀತ ಕಷ್ಟಪಡುತ್ತಿರುವ ಹಸುಗಳು, ಈ ಇತಿಹಾಸವನ್ನು ಹಸುಗಳು ಹೊಂದಿದ್ದವು. ಬೀಟ್‌ರೂಟ್ ತಿಂದಿದ್ದ ಹಸುವಿನ ಜೊಲ್ಲು

ವೆಲ್ವೆಟ್ ಬಣ್ಣದ ಮಿಶ್ರಣದಿಂದ ಕೂಡಿತ್ತು. ಹಸುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಎಡಬಾಗದ ಅನ್ನನಾಳದಲ್ಲಿ ಮುಂದೆ ಹಿಂದೆ ತಳ್ಳಬಹುದಾದ ಮೆತ್ತನೆ ವಸ್ತುವು ಸಿಕ್ಕಿಹಾಕಿಕೊಂಡಿರುವುದು ಕಂಡುಬಂದಿತ್ತು. ನೀರನ್ನು ಕುಡಿಯಲು ಈ ಹಸುಗಳಿಗೆ ನೀಡಿದಾಗ ಕುಡಿದ ಸ್ವಲ್ಪ ಸಮಯದಲ್ಲೇ ಕುಡಿದ ಪೂರ್ತಿ ನೀರು ವಾಪಾಸು ಬಂದಿತು. ಈ ಎಲ್ಲಾ ಗುಣಲಕ್ಷಣಗಳಿಂದ ಹಸುಗಳು ಅನ್ನನಾಳದ ತಡೆಯಿಂದ ನರಳುತ್ತಿರುವುದು ನಿಶ್ಚಯವಾಯಿತು.

**ಚಿಕಿತ್ಸೆ ನೀಡಲು ಉಪಯೋಗಿಸಿದ ಸಾದನಗಳು ಮತ್ತು ವಿದಾನ:** ರೈತರು ನೀಡಿದ ಮಾಹಿತಿಯಿಂದ ಹಸುಗಳು ತಿಂದಿರುವ ಪದಾರ್ಥಗಳು ಮೆತ್ತನೆಯವು ಎಂಬುದನ್ನು ತಿಳಿಯಲಾಯಿತು. ಹಳ್ಳಿಯ ಪರಿಸ್ಥಿತಿಯಲ್ಲಿ ಬಾಯಿಗೆ ಹಾಕುವ ಗ್ಯಾಗ್‌ಗಳು ಲಭ್ಯವಿರಲಿಲ್ಲ. ಹಸುಗಳು ತೀವ್ರವಾದ ಉಸಿರಾಟದ ತೊಂದರೆಯಿಂದ ನರಳುತ್ತಿದ್ದರಿಂದ ತಕ್ಷಣದಚಿಕಿತ್ಸೆಯ ಅವಶ್ಯಕತೆಇರುವುದನ್ನು ಮನಗಾಣಲಾಯಿತು. ಶಸ್ತ್ರಚಿಕಿತ್ಸಾ ಉಪಕರಣಗಳ ಕಿಟ್‌ನ್ನುತರಲು 40 ಕಿ. ಮೀ. ಹೋಗಬೇಕಿತ್ತು. ಆ ತುರ್ತು ಸಂದರ್ಭದಲ್ಲಿ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿಕೊಂಡು ಚಿಕಿತ್ಸೆ ನೀಡಲು ತೀರ್ಮಾನಿಸಲಾಯಿತು.

ಸ್ಥಳೀಯವಾಗಿ ಲಭ್ಯವಿದ್ದ ಹಲಗೆಯೊಂದನ್ನು ಎರಡೂ ಬದಿಗಳಲ್ಲಿ ಅಗಲ ಕಡಿಮೆ ಇರುವಂತೆ ಕತ್ತರಿಸಲಾಯಿತು. ಮಧ್ಯದಲ್ಲಿ ಕೈಯನ್ನು ತೂರಿಸಬಹುದಾದಷ್ಟು ವೃತ್ತಾಕಾರದ ರಂದ್ರವನ್ನು ಮಾಡಲಾಯಿತು. ಹಲಗೆಯ ಬದಿಗಳು ಒರಟಾಗಿರದಂತೆ ಉಜ್ಜಿ ನುಣುಪಾಗುವಂತೆ ಮಾಡಲಾಯಿತು (ಚಿತ್ರ–2). ಹಸುವನ್ನು ಒಂದೆಡೆ ಸ್ಥಿರವಾಗಿರುವಂತೆ ನಿಯಂತ್ರಿಸಿ, ಬಾಯಿಯೊಳಗೆ ಹಲಗೆಯನ್ನು ಇಡಲಾಯಿತು. ಒಂದು ಬದಿಗೆ ನಾಲಗೆಯನ್ನು ಎಳೆದು ನಿಯಂತ್ರಿಸಲಾಯಿತು. ಎಡಬಾಗದ ಅನ್ನನಾಳವಿರುವ ಪ್ರದೇಶವನ್ನು ಹೊರಗಡೆಯಿಂದ, ಎರಡೂ ಬದಿಯಿಂದ ಹೆಬ್ಬೆಟ್ಟಿನ ಸಹಾಯದಿಂದ ಬಾಯಿಯ ಕಡೆಗೆ ತಳ್ಳಲಾಯಿತು. ಅದೇ ಸಮಯದಲ್ಲಿ ಇನ್ನೊಬ್ಬರು ಹಲಗೆಯ ರಂದ್ರದೊಳಗೆ ಕೈ ಹಾಕಿ ಗಂಟಲ ಬಳಿಗೆ ತಳ್ಳಲಾಗಿದ್ದ ತಡೆಉಂಟು ಮಾಡಿದ್ದ ವಸ್ತುಗಳನ್ನು ಹೊರತೆಗೆಯಲಾಯಿತು. ಒಂದು ಹಸುವಿನಲ್ಲಿ ಜೋಳದ ತೆನೆ (ಚಿತ್ರ–3 ಮತ್ತು ಚಿತ್ರ–4).ಇನ್ನೊಂದರಲ್ಲಿ ಬೀಟ್ರೂಟ್, ಮತ್ತೊಂದರಲ್ಲಿ ಮಾವಿನ ಹಣ್ಣುಗಳು ತಡೆಉಂಟು ಮಾಡಿದ ವಸ್ತುಗಳಾಗಿದ್ದು ಅವುಗಳನ್ನು ತೆಗೆಯಲಾಯಿತು. ತಡೆಯನ್ನು ತೆಗೆದ ತಕ್ಷಣ ಹೊಟ್ಟೆಉಬ್ಬರ ಇಳಿಯಿತು. ಹಸುಗಳು ಸಹಜ ಸ್ಥಿತಿಗೆ ಮರಳಿದವು (ಚಿತ್ರ–5). ನೀರನ್ನು ಕೊಟ್ಟಾಗ ಸಲೀಸಾಗಿ ಕುಡಿದವು. ಮೇವನ್ನು ತಿಂದವು.

**ಫಲಿತಾಂಶ, ನಿರ್ಣಯಗಳು ಮತ್ತು ಚರ್ಚೆ:** ಕತ್ತಿನ ಅನ್ನನಾಳದ ತಡೆಯಿಂದ ನರಳುತ್ತಿದ್ದ 3 ಹಸುಗಳನ್ನು ಸ್ಥಳೀಯವಾಗಿ ಲಭ್ಯವಿರುವ ಹಲಗೆಯನ್ನು ಉಪಯೋಗಿಸಿಕೊಂಡು ಕಡಿಮೆ ಸಮಯದಲ್ಲಿ ಯಶಸ್ವಿಯಾಗಿ ಗುಣಪಡಿಸಲಾಯಿತು.

ಅನ್ನನಾಳದ ತಡೆಯು ಅತೀ ತುರ್ತು ಸ್ಥಿತಿಯಾಗಿದ್ದು, ಸಂಪೂರ್ಣ ತಡೆಯು ಹಸುಗಳಿಗೆ ಅತ್ಯಂತ ಮಾರಕವಾದುದಾಗಿದೆ. ಮಾವಿನಹಣ್ಣು, ಬೀಟ್ರೂಟ್, ಜೋಳದತೆನೆ, ಟ್ರೈಕೋಬೆಜಾರ್‌ಗಳು ಮತ್ತು ಫೈಟೋಬೆಜಾರ್‌ಗಳು ಸಾಮಾನ್ಯವಾಗಿ ತಡೆಉಂಟು ಮಾಡುವ ವಸ್ತುಗಳಾಗಿದ್ದರೂ, ರೆಕ್ಸಿನ್ ವಸ್ತುಗಳು, ಕಾಯಿ, ಗಾಜಿನ ಬಾಟಲಿಗಳು ಮುಂತಾದವುಗಳೂ ಕೂಡ ತಡೆಉಂಟು ಮಾಡಿರುವ ಉಲ್ಲೇಖಗಳಿವೆ. ರೆಕ್ಸಿನ್ ನಿಂದ ಮಾಡಲಾದ ಚಪ್ಪಲಿಗಳು, ಬ್ಯಾಗ್ ಗಳು ಹಸುಗಳು ಮೇಯುವಾಗ ಸಿಕ್ಕಿದರೆ, ಅವುಗಳು ಹಸುಗಳ ಬಾಯಿಯಲ್ಲಿ ಜಗಿದಾಗ ಉಂಡೆಯಂತಾಗಿ ಅತ್ಯಂತಗಟ್ಟಿ ವಸ್ತುವಾಗಿ ಮಾರ್ಪಾಟಾಗುತ್ತದೆ. ಅಲ್ಲದೆಇದು ನುಣುಪಾದ ಹೊರ ಪದರವನ್ನು ಹೊಂದಿರುವುದಿಲ್ಲ. ಪ್ರಸಕ್ತ ಲೇಖನದಲ್ಲಿ ಪ್ರಸ್ತುತಪಡಿಸಿರುವ ಹೊಸ ಮಾರ್ಗವು ಹಳ್ಳಿ ವ್ಯವಸ್ಥೆಯಲ್ಲಿ ತುರ್ತುಚಿಕಿತ್ಸೆಗಾಗಿ ರೂಪಿಸಲಾಗಿದ್ದು, ತಡೆಉಂಟು ಮಾಡಿರುವ ವಸ್ತುಗಳು ನುಣುಪಾದ ಹೊರಕವಚವನ್ನು ಹೊಂದಿದ್ದಾಗ ಮಾತ್ರ ಉಪಯೋಗಿಸಬಹುದಾಗಿದೆ. ಅಲ್ಲದೆ ತಡೆಉಂಟುಮಾಡಿರುವ ವಸ್ತುಗಳು ಅನ್ನನಾಳದಲ್ಲಿ ಹಿಂದೆ ಮುಂದೆ ಸರಿಯಬಹುದಾದ ಸ್ಥಿತಿಯಲ್ಲಿ ಮಾತ್ರ ಉಪಯೋಗಿಸಬಹುದಾಗಿದೆ. ರೆಕ್ಸಿನ್ ಮತ್ತು ಕಾಯಿಯಂತ ವಸ್ತುಗಳು ಚೂಪಾದ ಹೊರಕವಚವನ್ನು ಹೊಂದಿದ್ದು, ಅನ್ನನಾಳದ ಒಳಪದರಕ್ಕೆ ಅಂಟಿಕೊಂಡಿರುತ್ತವೆ. ಈ ಪರಿಸ್ಥಿತಿಯಲ್ಲಿ ಪ್ರಸಕ್ತ ಮಾರ್ಗವನ್ನು ಅನುಸರಿಸಲು ಸಾದ್ಯವಾಗುವುದಿಲ್ಲ. ಪ್ರಸಕ್ತ ಲೇಖನದಲ್ಲಿ ಚಿಕಿತ್ಸೆ ನೀಡಲಾದ ಹಸುಗಳು ಜೋಳದ ತೆನೆ, ಬೀಟ್ರೂಟ್ ಹಾಗೂ ಮಾವಿನಹಣ್ಣುಗಳನ್ನು ತಿಂದಿದ್ದ ಇತಿಹಾಸವನ್ನು ಹೊಂದಿದ್ದರಿಂದ ಹಾಗೂ ಆ ಹಸುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹಿಂದೆ ಮುಂದೆ ಸರಿಸಬಹುದಾದ ಮೆತ್ತನೆಯ ವಸ್ತು ಇರುವುದು ಖಚಿತವಾದ್ದರಿಂದ ಹಲಗೆಯನ್ನು ಉಪಯೋಗಿಸಿ ಹಸುಗಳನ್ನು ಗುಣಪಡಿಸಲು ತೀರ್ಮಾನಿಸಲಾಯಿತು.

ಬಾಯಿಗೆ ಹಾಕುವ ಗ್ಯಾಗ್‌ಗಳನ್ನು ಸಾಮಾನ್ಯವಾಗಿ ಬಾಯಿಯ ಪರೀಕ್ಷೆಗಾಗಿ ಬಳಸಲಾಗುತ್ತದೆ. ಆದರೆ ಪ್ರಸಕ್ತ ಸನ್ನಿವೇಶದಲ್ಲಿ ಹಳ್ಳಿಯಲ್ಲಿ ತುರ್ತು ಪರಿಸ್ಥಿತಿ ಉಂಟಾದಾಗ ಗ್ಯಾಗ್ ಗಳು ಲಭ್ಯವಿರಲಿಲ್ಲ. ಆದ್ದರಿಂದ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿ ಚಿಕಿತ್ಸೆ ನೀಡಲು ತೀರ್ಮಾನಿಸಲಾಯಿತು.

ಅನ್ನನಾಳದಲ್ಲಿ ಕತ್ತಿನಜಾಗದ ಅನ್ನನಾಳ, ಹೃದಯದ (ತೊರಾಸಿಕ್) ಅನ್ನನಾಳ ಎಂಬ ಎರಡು ಬಾಗಗಳಿದ್ದು, ಪ್ರಸ್ತುತ ಹೊಸ ವಿದಾನದ ಚಿಕಿತ್ಸೆಯನ್ನು ತಡೆಯು ಕತ್ತಿನ ಜಾಗದ ಅನ್ನನಾಳದಲ್ಲಿ ಉಂಟಾದಾಗ ಮಾತ್ರ ಉಪಯೋಗಿಸಬಹುದಾಗಿದೆ. ಪಶುವೈದ್ಯಕೀಯ ಕಾಲೇಜುಗಳಲ್ಲಿ ಎಕ್ಸರೇ ತೆಗೆಯುವ ಅವಕಾಶವಿದ್ದು, ಎಂಡೋಸ್ಕೋಪಿ ಮುಖಾಂತರ ತಡೆವೊಡ್ಡಿರುವ ವಸ್ತುವನ್ನು ಶಸ್ತ್ರಚಿಕಿತ್ಸೆ ಇಲ್ಲದೇ ತೆಗೆಯಬಹುದಾಗಿದೆ. ಆದರೆ ಹಳ್ಳಿ ಪರಿಸ್ಥಿತಿಯಲ್ಲಿ ಎಂಡೋಸ್ಕೋಪಿ ಹಾಗೂ ಎಕ್ಸರೇ ಗಳ ಲಭ್ಯತೆ ಇಲ್ಲದೆ ಇರುವುದರಿಂದ ಮತ್ತು ತುರ್ತು ಪರಿಸ್ಥಿತಿಯಲ್ಲಿ ಹಸುವನ್ನು ಕಾಲೇಜಿಗೆ ಕಳುಹಿಸುವಷ್ಟು ಸಮಯವಿಲ್ಲದಿದ್ದರಿಂದ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿ ಚಿಕಿತ್ಸೆ ನೀಡಲು ತೀರ್ಮಾನಿಸಲಾಯಿತು.

ಅನ್ನನಾಳದ ಶಸ್ತ್ರಚಿಕಿತ್ಸೆಯು ಅನ್ನನಾಳದ ತಡೆಉಂಟಾದಾಗ ಅನುಸರಿಸುವ ಮುಖ್ಯಚಿಕಿತ್ಸೆಯಾಗಿದ್ದು, ಇದನ್ನು ನಡೆಸಲು ಶಸ್ತ್ರಚಿಕಿತ್ಸಾ ಉಪಕರಣಗಳು ಹಾಗೂ ಅವುಗಳ ಸ್ಟೆರಿಲೈಸೇಶನ್ ತುಂಬಾ ಅವಶ್ಯವಾಗಿದ್ದು, ಹಳ್ಳಿಯ ತುರ್ತು ಪರಿಸ್ಥಿತಿಯಲ್ಲಿ ಅವುಗಳ ಲಭ್ಯತೆಯು ಇಲ್ಲದಿದ್ದರಿಂದ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿ ಚಿಕಿತ್ಸೆ ನೀಡಲು ತೀರ್ಮಾನಿಸಲಾಯಿತು.

ಅನ್ನನಾಳದ ಶಸ್ತ್ರಚಿಕಿತ್ಸೆಯು ದೀರ್ಘವಾದ ಶಸ್ತ್ರಚಿಕಿತ್ಸೆಯಾಗಿದ್ದು, ಜುಗುಲಾರ್ ರಕ್ತನಾಳ, ಕೆರೋಟಿಡ್ ರಕ್ತನಾಳಗಳು ಶಸ್ತ್ರಚಿಕಿತ್ಸೆ ನಡೆಸುವ ಜಾಗದಲ್ಲಿ ಬರುವುದರಿಂದ ಅತ್ಯಂತ ಸೂಕ್ಷ್ಮವಾಗಿ ಚಿಕಿತ್ಸೆ ನಡೆಸಬೇಕಾಗಿದ್ದು ತುರ್ತು ಪರಿಸ್ಥಿತಿಯಲ್ಲಿ ಶೀಘ್ರವಾಗಿ ನಡೆಸಲು ಕಷ್ಟಕರವಾಗಿರುತ್ತದೆ.

ಅಲ್ಲದೆ ಈ ಶಸ್ತ್ರಚಿಕಿತ್ಸೆಗೆ ಮತ್ತು ನಂತರ ತುಂಬಾ ಖರ್ಚಾಗುತ್ತದೆ. ಅಲ್ಲದೆ ಶಸ್ತ್ರಚಿಕಿತ್ಸೆಯ ನಂತರ ಹಾಲು ಇಳುವರಿ ಕಡಿಮೆಯಾಗಿ ರೈತನು ಪರಿತಪಿಸುವಂತಾಗುತ್ತದೆ. ಪ್ರಸ್ತುತ ಹೊಸ ಮಾರ್ಗದಿಂದ ರೈತರಿಗೆ ಅನುಕೂಲವಾಗುತ್ತದೆ.

**ಉಲ್ಲೇಖಗಳು:**

ಶಿವಪ್ರಕಾಶ್, ಬಿ. ವಿ. 2011. ಎ ಕ್ಲಿನಿಕಲ್ಇನ್ ಸೈಟ್ಇನ್ಟುಎಮೆರಜೆನ್ಸಿ ಸರ್ಜರೀಸ್ಇನ್ರುಮಿನೆಂಟ್ಸ, ಇಂಟಾಸ್ ಪಾಲಿವೆಟ್, ವಾಲ್ಯೂಮ್ 12 (2), ಪು.ಸಂ. 129.

ತ್ಯಾಗಿ, ಆರ್. ಪಿ. ಎಸ್. ಮತ್ತುಜಿತ್ ಸಿಂಗ್, 1993.ದ ಡೈಜೆಸ್ಟೀವ್ ಸಿಸ್ಟಮ್: ರುಮಿನೆಂಟ್ ಸರ್ಜರಿ, 1ನೇ ಎಡೀಶನ್, ಸಿ.ಬಿ.ಎಸ್. ಪಬ್ಲಿಶರ್ಸ್, ದೆಹಲಿ, ಪು.ಸಂ. 192–193.

**ಚಿತ್ರಗಳು:**



ಚಿತ್ರ–1



ಚಿತ್ರ–2



ಚಿತ್ರ–3



ಚಿತ್ರ–4



ಚಿತ್ರ–5

## ದನಗಳಲ್ಲಿ ಮೂರನೇ ಕಣ್ಣಿನ ರೆಪ್ಪೆಯ ಕ್ಯಾನ್ಸರ್–ಚಿಕಿತ್ಸೆ ನೀಡಲಾದ 36 ರೋಗಿಗಳ ಪುನರಾವಲೋಕನ

ಮಂಜುನಾಥ್ ಎಸ್. ಪಿ.
ಪಶು ವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಅಣತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ Mail Id: drmanjvet@gmail.com

**ಪ್ರಬಂಧಸಾರ:–** ಪ್ರತಿದಿನ ಹಳ್ಳಿಗಳಲ್ಲಿ ಚಿಕಿತ್ಸೆ ನಡೆಸುವಾಗ, ದನಗಳಲ್ಲಿ ಮೂರನೇ ಕಣ್ಣಿನ ರೆಪ್ಪೆಯ ಕ್ಯಾನ್ಸರ್ ಸಾಮಾನ್ಯವಾಗಿ ಕಂಡುಬರುವ ಒಂದು ಸ್ಥಿತಿ. ಕಂಡ ತಕ್ಷಣವೇ ಶಸ್ತ್ರಚಿಕಿತ್ಸೆ ಮಾಡಿಸಬೇಕಾದ ಸ್ಥಿತಿಯು ಇದಾಗಿದ್ದು, ಉದಾಸೀನ ಮಾಡಿದಾಗ ಕ್ಯಾನ್ಸರ್ ಕ್ರಮೇಣ ಕೆಳಗಿನ ಮತ್ತು ಮೇಲಿನ ರೆಪ್ಪೆಗಳಿಗೆ ಹರಡುತ್ತದೆ. ನಂತರ ಕಣ್ಣು ಗುಡ್ಡೆಗಳಿಗೆ ಹರಡಿ ಬೃಹತ್ ಕ್ಯಾನ್ಸರ್ ಗಡ್ಡೆಯಾಗಿ ಬೆಳೆಯುತ್ತದೆ. ಈ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆ ನಡೆಸಿದರೂ ಹಸುವು ಕುರುಡಾಗುತ್ತದೆ ಅಲ್ಲದೆ ಇಡೀ ಕಣ್ಣನ್ನೇ ತೆಗೆದು ಹಾಕಬೇಕಾಗುತ್ತದೆ. ಪ್ರಸಕ್ತ ಲೇಖನದಲ್ಲಿ 2012–2013, 2013–2014 ಮತ್ತು 2014–2015ನೇ ಸಾಲಿನಲ್ಲಿ ಪಶು ಚಿಕಿತ್ಸಾಲಯ, ಅಣತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆಯಲ್ಲಿ ಚಿಕಿತ್ಸೆ ನೀಡಲಾದ ಒಟ್ಟು ರೋಗಿಗಳ ಬಗ್ಗೆ ನಡೆಸಿದ ಪುನರಾವಲೋಕನವನ್ನು ಪ್ರಸ್ತುತ ಪಡಿಸಲಾಗಿದೆ. ಪಶುಚಿಕಿತ್ಸಾಲಯ, ಅಣತಿಯಲ್ಲಿ 3 ವರ್ಷಗಳ ಅವಧಿಯಲ್ಲಿ ಕಣ್ಣಿನ ರೆಪ್ಪೆಯ ಕ್ಯಾನ್ಸರ್‌ನಿಂದ ಬಳಲುತ್ತಿರುವ 36 ಹಸುಗಳಿಗೆ ಚಿಕಿತ್ಸೆ ನೀಡಲಾಗಿದೆ. ಅವುಗಳ ಪೈಕಿ 21 ಎತ್ತುಗಳಾಗಿದ್ದು, 15 ಹಸುಗಳಲ್ಲಿ ಕಂಡುಬಂದಿದೆ. 10 ರಾಸುಗಳಲ್ಲಿ ಎರಡೂ ಕಣ್ಣುಗಳಲ್ಲೂ ಕ್ಯಾನ್ಸರ್ ಕಂಡುಬಂದಿದ್ದು, 26 ರಲ್ಲಿ ಒಂದು ಕಣ್ಣಿನಲ್ಲಿ ಕ್ಯಾನ್ಸರ್ ಕಂಡುಬಂದಿದೆ. ಒಟ್ಟು 36 ರಲ್ಲಿ, 16 ರಲ್ಲಿ ಕ್ಯಾನ್ಸರ್ ಗಡ್ಡೆಯು ಸಣ್ಣದಿದ್ದು, 20 ರಲ್ಲಿ ದೊಡ್ಡ ಗಾತ್ರವನ್ನು ಹೊಂದಿದ್ದು, ಕಣ್ಣಿನ 1/4 ನೇ ಭಾಗವನ್ನು ವ್ಯಾಪಿಸಿಕೊಂಡಿತ್ತು. ಅವುಗಳಲ್ಲಿ 9 ರಲ್ಲಿ ಕ್ಯಾನ್ಸರ್ ಮೇಲಿನ ಹಾಗೂ ಕೆಳಗಿನ ರೆಪ್ಪೆಗಳನ್ನು ಆವರಿಸಿಕೊಂಡಿದ್ದು, ಅವುಗಳಲ್ಲಿ 5 ರಾಸುಗಳು ಕಣ್ಣು ಕಾಣಿಸದ ಸ್ಥಿತಿಯನ್ನು ತಲುಪಿದ್ದವು. 2 ರಾಸುಗಳಲ್ಲಿ ಮ್ಯಾಗಟ್‌ಗಳು ಇರುವುದು ಕಂಡುಬಂದಿತು. ಈ ಎಲ್ಲಾ ರಾಸುಗಳನ್ನು ಮೂರನೇ ಕಣ್ಣಿನ ರೆಪ್ಪೆಯ ಕ್ಯಾನ್ಸರನ್ನು ಬುಡಸಮೇತ ತೆಗೆದು ಹಾಕುವ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. 36 ರಾಸುಗಳಲ್ಲಿ ಕೇವಲ ಮೂರನೇ ರೆಪ್ಪೆಯನ್ನು ಒಳಗೊಂಡಿದ್ದ ಕ್ಯಾನ್ಸರ್ ಗಳನ್ನು ಹೊಂದಿದ್ದ ರಾಸುಗಳೆಲ್ಲವೂ ಸಂಪೂರ್ಣವಾಗಿ ಗುಣಮುಖ ಹೊಂದಿದವು. ಮೇಲಿನ ಹಾಗೂ ಕೆಳಗಿನ ರೆಪ್ಪೆಗಳನ್ನು ಆವರಿಸಿಕೊಂಡಿದ್ದ 9 ರಾಸುಗಳಲ್ಲಿ 2 ರಾಸುಗಳು ಗುಣಮುಖವಾದವು. ಆದರೆ ಉಳಿದ 7 ರಾಸುಗಳಲ್ಲಿ ಸಂಪೂರ್ಣ ಕಣ್ಣನ್ನೇ ತೆಗೆದುಹಾಕಬೇಕಾಯಿತು. ಅದ್ದರಿಂದ ರೈತರಲ್ಲಿ ಈ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಅವಶ್ಯಕತೆಯು ತಂಬಾ ಇದೆ.

**ಪೀಠಿಕೆ:** ಹಸುಗಳು ಮೂರನೇ ರೆಪ್ಪೆಯನ್ನು ಹೊಂದಿದ್ದು, ಇದು ಕಣ್ಣಿನ ಮೂಗಿನ ಕಡೆಯ ಬದಿಯಲ್ಲಿರುತ್ತದೆ. ಇದು ಕಣ್ಣನ್ನು ದೂಳು ಮತ್ತು ಇತರ ಉಪಟಳಗಳಿಂದ ಕಣ್ಣನ್ನು ರಕ್ಷಿಸುತ್ತದೆ. ಇದನ್ನು ನಿಕ್ಟಿಟೇಟಿಂಗ್ ಪರದೆ ಎಂದೂ ಕರೆಯುತ್ತಾರೆ. ಪ್ರತಿದಿನ ಹಳ್ಳಿಗಳಲ್ಲಿ

ಚಿಕಿತ್ಸೆ ನಡೆಸುವಾಗ, ದನಗಳಲ್ಲಿ ಮೂರನೇ ಕಣ್ಣಿನ ರೆಪ್ಪೆಯ ಕ್ಯಾನ್ಸರ್ ಸಾಮಾನ್ಯವಾಗಿ ಕಂಡುಬರುವ ಒಂದು ಸ್ಥಿತಿ. ಇದರಿಂದ ಎತ್ತುಗಳಲ್ಲಿ ತೆಲಸ ಮಾಡುವ ಸಾಮರ್ಥ್ಯ ಕಡಿಮೆಯಾಗುತ್ತದೆ ಮತ್ತು ಹಸುಗಳಲ್ಲಿ ಇದರ ಉಪಟಳದಿಂದ ಹಾಲಿನ ಇಳುವರಿ ಕಡಿಮೆಯಾಗುತ್ತದೆ. ಕಂಡ ತಕ್ಷಣವೇ ಶಸ್ತ್ರಚಿಕಿತ್ಸೆ ಮಾಡಿಸಬೇಕಾದ ಸ್ಥಿತಿಯು ಇದಾಗಿದ್ದು, ಉದಾಸೀನ ಮಾಡಿದಾಗ ಕ್ಯಾನ್ಸರ್ ಕ್ರಮೇಣ ಕೆಳಗಿನ ಮತ್ತು ಮೇಲಿನ ರೆಪ್ಪೆಗಳಿಗೆ ಹರಡುತ್ತದೆ. ನಂತರ ಕಣ್ಣು ಗುಡ್ಡೆಗಳಿಗೆ ಹರಡಿ ಬೃಹತ್ ಕ್ಯಾನ್ಸರ್ ಗಡ್ಡೆಯಾಗಿ ಬೆಳೆಯುತ್ತದೆ. ಈ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆ ನಡೆಸಿದರೂ ಹಸುವು ಕುರುಡಾಗುತ್ತದೆ ಅಲ್ಲದೆ ಇಡೀ ಕಣ್ಣನ್ನೇ ತೆಗೆದು ಹಾಕಬೇಕಾಗುತ್ತದೆ. ಜನರಲ್ಲಿ ಈ ಕ್ಯಾನ್ಸರ್‌ನ ಬಗ್ಗೆ ಅರಿವು ಮೂಡಿಸಬೇಕಾದ ಅವಶ್ಯಕತೆಯು ತುಂಬಾ ಇದೆ. ಪ್ರಸಕ್ತ ಲೇಖನದಲ್ಲಿ ಪಶು ಚಿಕಿತ್ಸಾಲಯ, ಅಣತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆಯಲ್ಲಿ ಚಿಕಿತ್ಸೆ ನೀಡಲಾದ ಮೂರನೇ ಕಣ್ಣಿನ ರೆಪ್ಪೆಯ ಕ್ಯಾನ್ಸರ್ ಹೊಂದಿದ್ದ ದನಗಳ ಬಗ್ಗೆ ನಡೆಸಿದ ಪುನರಾವಲೋಕನವನ್ನು ಪ್ರಸ್ತುತ ಪಡಿಸಲಾಗಿದೆ.

**ಇತಿಹಾಸ ಮತ್ತು ಚಿಕಿತ್ಸೆಗೆ ಮುಂಚೆ ಗಮನಿಸಿದ ಅಂಶಗಳು:** 2012–2013, 2013–2014 ಮತ್ತು 2014–2015ನೇ ಸಾಲಿನಲ್ಲಿ ಪಶು ಚಿಕಿತ್ಸಾಲಯ, ಅಣತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆಯಲ್ಲಿ ಚಿಕಿತ್ಸೆ ನೀಡಲಾದ ಒಟ್ಟು ರೋಗಿಗಳಲ್ಲಿ ಕಣ್ಣಿನ ರೆಪ್ಪೆಯ ಕ್ಯಾನ್ಸರ್‌ನಿಂದ ಬಳಲುತ್ತಿರುವ 53 ಹಸುಗಳಿಗೆ ಚಿಕಿತ್ಸೆ ನೀಡಲಾಗಿದೆ. ಅವುಗಳ ಪೈಕಿ 21 ಎತ್ತುಗಳಾಗಿದ್ದು, 15 ಹಸುಗಳಲ್ಲಿ ಕಂಡುಬಂದಿದೆ. 10 ರಾಸುಗಳಲ್ಲಿ ಎರಡೂ ಕಣ್ಣುಗಳಲ್ಲೂ ಕ್ಯಾನ್ಸರ್ ಕಂಡುಬಂದಿದ್ದು, 26 ರಲ್ಲಿ ಒಂದು ಕಣ್ಣಿನಲ್ಲಿ ಕ್ಯಾನ್ಸರ್ ಕಂಡುಬಂದಿದೆ. ಒಟ್ಟು 36 ರಲ್ಲಿ, 16 ರಲ್ಲಿ ಕ್ಯಾನ್ಸರ್ ಗಡ್ಡೆಯು ಸಣ್ಣದಿದ್ದು, 20 ರಲ್ಲಿ ದೊಡ್ಡ ಗಾತ್ರವನ್ನು ಹೊಂದಿದ್ದು, ಕಣ್ಣಿನ 1/4 ನೇ ಭಾಗವನ್ನು ವ್ಯಾಪಿಸಿಕೊಂಡಿತ್ತು (ಚಿತ್ರ–1). ಅವುಗಳಲ್ಲಿ 9 ರಲ್ಲಿ ಕ್ಯಾನ್ಸರ್ ಮೇಲಿನ ಹಾಗೂ ಕೆಳಗಿನ ರೆಪ್ಪೆಗಳನ್ನು ಆವರಿಸಿಕೊಂಡಿದ್ದು, ಅವುಗಳಲ್ಲಿ 5 ರಾಸುಗಳು ಕಣ್ಣು ಕಾಣಿಸದ ಸ್ಥಿತಿಯನ್ನು ತಲುಪಿದ್ದವು. 2 ರಾಸುಗಳಲ್ಲಿ ಮ್ಯಾಗಟ್‌ಗಳು ಇರುವುದು ಕಂಡುಬಂದಿತು. ಎಲ್ಲಾ ರಾಸುಗಳು 6 ವರ್ಷಗಳ ಮೇಲಿನವಾಗಿದ್ದವು. ಸೂಕ್ಷ್ಮವಾಗಿ ಗಮನಿಸಿದಾಗ ಕೆಲವು ರಾಸುಗಳಲ್ಲಿ ಕ್ಯಾನ್ಸರ್ ಗಡ್ಡೆಯು ಸಣ್ಣ ಗುಳ್ಳೆಯಂತಿತ್ತು, ಇನ್ನು ಕೆಲವುಗಳಲ್ಲಿ ಕ್ಯಾನ್ಸರ್ ಗಡ್ಡೆಯಲ್ಲಿ ಅಲ್ಸರ್ ಗಳಾಗಿದ್ದವು. ಇತಿಹಾಸ ಮತ್ತು ಪರೀಕ್ಷೆಯಿಂದ ಈ ಸ್ಥಿತಿಯನ್ನು ದನಗಳ ಕಣ್ಣಿನ ಮೂರನೇ ರೆಪ್ಪೆಯ ಕ್ಯಾನ್ಸರ್ ಎಂದು ಮನಗಾಣಲಾಯಿತು.

**ನೀಡಲಾದ ಚಿಕಿತ್ಸೆ ಮತ್ತು ಫಲಿತಾಂಶ :** ಎಲ್ಲಾ ದನಗಳನ್ನು ಕಣ್ಣಿನ ಮೂರನೇ ರೆಪ್ಪೆಯ ಕ್ಯಾನ್ಸರ್ ನ್ನು ತೆಗೆದುಹಾಕುವ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಆರಿಕುಲೋಪ್ಯಾಲ್ಪೆಬ್ರಲ್, ಪೀಟರ್‌ಸನ್ಸ ನರ್ವ್ ಬ್ಲೋಕ್ ಮತ್ತು ಸುಪ್ರಾ ಆರ್ಬೈಟಲ್ ನರ್ವ್ ಬ್ಲೋಕ್ ಅರವಳಿಕೆಯನ್ನು ಮಾಡಲಾಯಿತು. ಕ್ಯಾನ್ಸರ್ ಗಡ್ಡೆಯನ್ನು ಹೊರಗೆಳೆದು ಆರೋಗ್ಯಕರ ಬಾಗವನ್ನು ಕ್ಯಾನ್ಸರ್ ಭಾಗ ದಿಂದ ಗುರುತಿಸಲಾಯಿತು. ನಂತರ ಗಡ್ಡೆಯ ಕೆಳಗೆ ಆರ್ಟರೀ ಫೋರ್ಸೆಪ್ಸನ್ನು ಹಾಕಿ ಗಡ್ಡೆಯನ್ನು ಕತ್ತರಿಸಲಾಯಿತು (ಚಿತ್ರ– 2). ನಂತರ ನಾರ್ಮಲ್ ಸಲೈನ್ನಿಂದ ಜಾಗವನ್ನು ತೋಯಿಸಲಾಯಿತು. ಸ್ವಲ್ಪ ಸಮಯದ ನಂತರ ಆರ್ಟರೀ ಫೋರ್ಸೆಪ್ಸನ್ನು ತೆಗೆಯಲಾಯಿತು. 36 ದನಗಳಲ್ಲಿ, 7 ದನಗಳಲ್ಲಿ ಕ್ಯಾನ್ಸರ್ ಗಟ್ಟಿಯು ಮೇಲಿನ ಹಾಗೂ ಕೆಳಗಿನ ರೆಪ್ಪೆ ಮತ್ತು ಕಣ್ಣಿನ ಗುಡ್ಡೆಯನ್ನು ಆವರಿಸಿಕೊಂಡಿದ್ದರಿಂದ ಅವುಗಳಲ್ಲಿ ಸಂಪೂರ್ಣ ಕಣ್ಣನ್ನೇ ತೆಗೆದು ಹಾಕಲಾಯಿತು. ಕೆಲವು ಸ್ಯಾಂಪಲ್ಗಳನ್ನು ಹಿಸ್ಟೋಪೆತಾಲಜಿಗೆ ಗುರಿಪಡಿಸಿದಾಗ ಸ್ಕ್ವಾಮಸ್ಸೆಲ್ ಕಾರ್ಸಿನೋಮ ಇರುವುದು ಕಂಡುಬಂದಿತು.

36 ರಾಸುಗಳಲ್ಲಿ ಕೇವಲ ಮೂರನೇ ರೆಪ್ಪೆಯನ್ನು ಒಳಗೊಂಡಿದ್ದ ಕ್ಯಾನ್ಸರ್ ಗಳನ್ನು ಹೊಂದಿದ್ದ ರಾಸುಗಳೆಲ್ಲವೂ ಸಂಪೂರ್ಣವಾಗಿ ಗುಣಮುಖ ಹೊಂದಿದವು (ಚಿತ್ರ– 3). ಮೇಲಿನ ಹಾಗೂ ಕೆಳಗಿನ ರೆಪ್ಪೆಗಳನ್ನು ಆವರಿಸಿಕೊಂಡಿದ್ದ 9 ರಾಸುಗಳಲ್ಲಿ 2 ರಾಸುಗಳು ಗುಣಮುಖವಾದವು. ಆದರೆ ಉಳಿದ 7 ರಾಸುಗಳಲ್ಲಿ ಸಂಪೂರ್ಣ ಕಣ್ಣನ್ನೇ ತೆಗೆದುಹಾಕಬೇಕಾಯಿತು.

**ನಿರ್ಣಯಗಳು ಮತ್ತು ಸಮಾಲೋಚನೆ:** ಚಿಕಿತ್ಸೆ ನೀಡಲಾದ ಒಟ್ಟು 36 ದನಗಳ ಪೈಕಿ ಕಣ್ಣಿನ ಮೂರನೇ ರೆಪ್ಪೆಯ ಕ್ಯಾನ್ಸರ್ 21 ಎತ್ತುಗಳಲ್ಲಿ ಹಾಗೂ 15 ಹಸುಗಳಲ್ಲಿ ಕಂಡುಬಂದಿದೆ. ಎತ್ತುಗಳಲ್ಲಿ ಹೆಚ್ಚಾಗಿ ಬಿಸಿಲಲ್ಲಿ ಕೆಲಸ ನಿರ್ವಹಿಸುವುದರಿಂದ, ಅವುಗಳು ಸೂರ್ಯನ ಅಲ್ಟ್ರಾವೈಲೆಟ್ ಕಿರಣಗಳಿಗೆ ಹೆಚ್ಚು ಗುರಿಯಾಗುತ್ತವೆ. ಇದರಿಂದ ಎತ್ತುಗಳಲ್ಲಿ ಹೆಚ್ಚಿನ ಕಣ್ಣಿನ ಕ್ಯಾನ್ಸರ್ ಕಂಡುಬಂದಿರುವ ಸಾದ್ಯತೆ ಇದೆ.

10 ರಾಸುಗಳಲ್ಲಿ ಎರಡೂ ಕಣ್ಣುಗಳಲ್ಲೂ ಕ್ಯಾನ್ಸರ್ ಕಂಡುಬಂದಿದ್ದು, 26 ರಲ್ಲಿ ಒಂದು ಕಣ್ಣಿನಲ್ಲಿ ಕ್ಯಾನ್ಸರ್ ಕಂಡುಬಂದಿದೆ. ಹಿಸ್ಟೋಪೆತಾಲಜಿಯು ಸ್ಕ್ವಾಮಸ್ಸೆಲ್ ಕಾರ್ಸಿನೋಮ ಇರುವುದನ್ನು ದೃಢಪಡಿಸಿದೆ. ಇದು ಒಂದು ಬಿನೈನ್ ಕ್ಯಾನ್ಸರ್ ಆಗಿದ್ದು, ಎರಡೂ ಕಣ್ಣುಗಳಲ್ಲಿ ಕಂಡು ಬರುವ ಸಾದ್ಯತೆಗಳು ಹೆಚ್ಚಿವೆ.

ಚಿಕ್ಕದಿದ್ದಾಗಲೇ ಚಿಕಿತ್ಸೆ ನೀಡದಿದ್ದ ಸಮಯದಲ್ಲಿ ಕ್ಯಾನ್ಸರ್ ವ್ಯಾಪಕವಾಗಿ ಹರಡುತ್ತದೆ. ಪ್ರಸಕ್ತವಾಗಿ 9 ದನಗಳಲ್ಲಿ ಕ್ಯಾನ್ಸರ್ ಮೇಲಿನ ಹಾಗೂ ಕೆಳಗಿನ ರೆಪ್ಪೆಗಳನ್ನು ಆವರಿಸಿಕೊಂಡಿದ್ದು, ಅವುಗಳಲ್ಲಿ 5 ರಾಸುಗಳು ಕಣ್ಣು ಕಾಣಿಸದ ಸ್ಥಿತಿಯನ್ನು ತಲುಪಿದ್ದವು. 2 ರಾಸುಗಳಲ್ಲಿ ಮ್ಯಾಗಟ್‌ಗಳು ಇರುವುದು ಕಂಡುಬಂದಿತು. ಆದ್ದರಿಂದ ಕ್ಯಾನ್ಸರ್ ಶುರುವಾದಾಗ, ಚಿಕ್ಕದಿರುವಾಗಲೇ ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕಾಗುತ್ತದೆ ಇಲ್ಲವಾದರೆ ರೈತರು ತಮ್ಮ ದನಗಳ ಕಣ್ಣನ್ನು ಕಳೆದುಕೊಳ್ಳಬೇಕಾಗುತ್ತದೆ. ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಉಂಟಾಗುತ್ತದೆ.


ಚಿತ್ರ –1


ಚಿತ್ರ –2


ಚಿತ್ರ –3

# ವಿಷಯ:–07

# ವಸುಂಧರೀಯಮ್

## ಭೂಶಾಸ್ತ್ರ, ಪರಿಸರ ವಿಜ್ಞಾನ, ಜೀವಜಾಲಶಾಸ್ತ್ರ ಮತ್ತು ವಿಶ್ವಶಾಸ್ತ್ರ

**THEME:-07**

# VASUNDAREEYAM

## EARTH SCIENCES, ENVIRONMENTAL SCIENCES, ECOLOGY AND COSMOLOGY

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಯಕೃತ್‌ನಲ್ಲಿರುವರೆಟಿನಾಲನ್ನು ಬಳಸಿಕೊಂಡು ಕಪ್ಪೆಗಳ ಮೇಲೆ ಕೃಷಿರಾಸಾಯನಿಕಗಳಿಂದಾಗುವ ದುಷ್ಪರಿಣಾಮಗಳ ಒಂದುಅಧ್ಯಯನ. | ಕೃಷ್ಣ ಕುಲಕರ್ಣಿ, ಶ್ರೇಯಸ್ಆರ್., ಚೇತನಕುಮಾರ ಎಂ. ವಿ. ಎ್. ವಿ. ಕೃಷ್ಣಮೂರ್ತಿ | 244 – 247 |

# ಯಕೃತ್‌ನಲ್ಲಿರುವರೆಟಿನಾಲನ್ನು ಬಳಸಿಕೊಂಡು ಕಪ್ಪೆಗಳ ಮೇಲೆ ಕೃಷಿರಾಸಾಯನಿಕಗಳಿಂದಾಗುವ ದುಷ್ಪರಿಣಾಮಗಳ ಒಂದುಅಧ್ಯಯನ.

ಕೃಷ್ಣ ಕುಲಕರ್ಣಿ, ಶ್ರೇಯಸ್‌ಆರ್.,ಚೇತನಕುಮಾರ ಎಂ. ವಿ.,ಎಸ್. ವಿ. ಕೃಷ್ಣಮೂರ್ತಿ
ಪರಿಸರ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ–೫೭೭೪೫೧, ಶಿವಮೊಗ್ಗ ಜಿಲ್ಲೆ, ಕರ್ನಾಟಕ.

ಪಶ್ಚಿಮ ಘಟ್ಟಗಳ ಜೌವುಗು ಪ್ರದೇಶಗಳಾದ ಗದ್ದೆ, ಕೆರೆಕುಂಟೆ, ಕೊಳಗಳಲ್ಲಿ ವಾಸ ಮಾಡುತ್ತಿರುವ*ಯುಫ್ಲಿಕ್ಟಿಸ್ ಸಯಾನೊಫ್ಲಿಕ್ಟಿಸ್*ಕಪ್ಪೆಯನ್ನು ಬಳಸಿಕೊಂಡು ಕೃಷಿರಾಸಾಯನಿಕಗಳ ಪರಿಣಾಮಗಳನ್ನು, ಕಪ್ಪೆಗಳ ಯಕೃತ್‌ನಲ್ಲಿರುವರೆಟಿನಾಲ್‌ನ ಅಂಶಗಳ ಬದಲಾವಣೆಯಆಧಾರವನ್ನು ಹಿನ್ನೆಲೆಯಲ್ಲಿಟ್ಟುಕೊಂಡುಅಧ್ಯಯನ ನಡೆಸಲಾಗಿದೆ. ಈ ರೆಟಿನಾಲ್ಗಳು ಕಪ್ಪೆಗಳ ಬೆಳವಣಿಗೆ, ಅವುಗಳ ಸಂತಾನೋತ್ಪತ್ತಿಗೆ, ಒಟ್ಟಾರೆಯಾಗಿ ಕಪ್ಪೆಗಳ ಉತ್ತಮಆರೋಗ್ಯ ಸ್ಥಿತಿಯುನ್ನು ಕಾಯ್ದುಕೊಳ್ಳಲು ಅವಶ್ಯಕವಾಗಿವೆ. ಕಪ್ಪೆಗಳ ಶರೀರದಲ್ಲಿ ರಾಸಾಯುನಿಕಗಳಿಂದ ಅತಿಹೆಚ್ಚಿನಒತ್ತಡಉಂಟಾದಾಗರೆಟಿನಾಲ್ ಪ್ರಮಾಣದಲ್ಲಿಏರುಪೇರಾಗುತ್ತದೆಅದನ್ನುಒಂದುಜೈವಿಕ ಸೂಚಕ ಎಂದು ಪರಿಗಣಿಸಲಾಗಿದೆ. ಪ್ರಸ್ತುತಅಧ್ಯಯನದಲ್ಲಿ ನಾಲ್ಕು ಬೇರೆಬೇರೆ ಸ್ಥಳಗಳಲ್ಲಿ ವಾಸಿಸುವ ಕಪ್ಪೆಗಳ ಯಕೃತ್‌ನರೆಟಿನಾಲ್‌ನ ಪ್ರಮಾಣವನ್ನು ಗಮನಿಸಿದಾಗ ಅವುಗಳು ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗಿರುವುದುಕಂಡುಬರುತ್ತಿದೆ, ಅಲ್ಲದೆ ಅವುಗಳ ಪ್ರಮಾಣದ ಬದಲಾವಣೆ ಈ ಹಿಂದೆ ಭೌಗೋಳಿಕವಾಗಿ ಬೇರೆ ಭಾಗಗಳಲ್ಲಿ ನಡೆಸಿರುವ ಸಂಶೋಧನೆಗೆ ತಾಳೆಯಾಗುತ್ತಿದೆ. ಆದುದರಿಂದ ಕಪ್ಪೆಗಳಲ್ಲಿ ಕೃಷಿರಾಸಾಯನಿಕಗಳಿಂದಾಗುವ ದುಷ್ಪರಿಣಾಮಗಳ ಸಂಪೂರ್ಣತಖ್ತೆಗಾಗಿಇನ್ನಿತರ ಜೀವಸೂಚಕಗಳ ಅಧ್ಯಯನ ಸಹ ಅವಶ್ಯವಾಗಿದೆ.

ಮುನ್ನುಡಿ:– ಕಳೆದ ಮೂರು ದಶಕಗಳಲ್ಲಿ ಉಭಯವಾಸಿಗಳಾದ ಕಪ್ಪೆಗಳ ಪ್ರಬೇಧಗಳ ಸಂಖ್ಯೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇಳಿಮುಖ ಕಂಡು ಬರುತ್ತಿದೆ, ಕೆಲ ಪ್ರಬೇಧಗಳು ಕಾಣೆಯಾಗಿವೆ, ಇನ್ನೂ ಕೆಲ ಪ್ರಬೇಧಗಳು ಅಪಾಯಕಾರಿ ಮಟ್ಟದಲ್ಲಿ ವಿರೂಪತೆಗಳನ್ನು ತೋರುತ್ತಿವೆ (ರಾಯ್ 2002). ಇದಕ್ಕೆಲ್ಲಾ ಪರಿಸರ ಮಾಲಿನ್ಯ ಮತ್ತು ಮಾನವಜನ್ಯ ಚಟುವಟಿಗಳು ಮೂಲ ಕಾರಣವೆಂದು ಕಂಡುಹಿಡಿಯಲಾಗಿದೆ (ಲೀವಾ–ಪ್ರೆಸಾ ಮ. ಇ. 2006). ಪಶ್ಚಿಮ ಘಟ್ಟಗಳಲ್ಲಿ ಕೃಷಿಭೂಮಿಗಳು ವಿವಿಧ ಬೆಳೆಗಳ ಸಂಕೀರ್ಣ ಮಿಶ್ರನವಾಗಿವೆ ಮತ್ತು ಕೃಷಿಭೂಮಿಯ ಪ್ರತಿಯೊಂದು ತುಣುಕುಗಳು ವಿವಿಧ ಸಾಗುವಳಿ ಪದ್ಧತಿಗಳಿಗೆ ಒಳಪಡುತ್ತವೆ. ಹೀಗಾಗಿ ಕಪ್ಪೆಗಳ ಒಟ್ಟು ಅವಾಸಸ್ಥಾನ ಕೃಷಿ–ರಾಸಾಯನಿಕ ಪದಾರ್ಥಗಳ ಮಿಶ್ರಣದೊಂದಿಗೆ ಕಲುಷಿತಗೊಳ್ಳುತ್ತದೆ (ಹೆಗ್ಡೆ ಮತ್ತು ಕೃಷ್ಣ ಮೂರ್ತಿ, 2004). ಕೀಟನಾಶಕ ಮತ್ತು ಕೃಷಿರಾಸಾಯನಿಕಗಳ ಬಳಕೆ ಮತ್ತು ಕಪ್ಪೆಗಳ ಜಲಾವಾಸದ ವಿವಿಧ ಹಂತ ಹಾಗೂ ಅಭಿವೃದ್ಧಿ ಏಕಕಾಲಕ್ಕೆ ನಡೆಯುವುದರಿಂದ ಅವುಗಳ ಈ ರಾಸಾಯನಿಕ ವಸ್ತುಗಳಿಗೆ ಒಡ್ಡಿಕೊಳ್ಳುತ್ತವೆ (ಪಿಹಾ, 2006).

ಪರಿಸರ ಮಾಲಿನ್ಯ ಮತ್ತು ಅದರ ಜೈವಿಕ ಪರಿಣಾಮಗಳ ಪ್ರಸ್ತುತ ಸನ್ನಿವೇಶವು ಸಂವೇದಕ ಜೀವಿಗಳ (ಸೆನ್ಸಾರ್ ಆರ್ಗ್ಯಾನಿಸಮ್) ಬಳಕೆಯಿಂದ ತಿಳಿಯುತ್ತದೆ (ವೆಂಚುರಿನೊ ಮ.ಇ. 2003) ಕಪ್ಪೆಗಳನ್ನು ಪರಿಸರ ಮಾಲಿನ್ಯದ ವಿವಿಧ ಪರಿಣಾಮಗಳ ಜೀವಸೂಚಕ (ಬಯೋಮಾರ್ಕರ್ಸ್ ಆಫ್ ಎಫೆಕ್ಟ್) ಅಧ್ಯಯನ ಗಳೀಗೆ ಒಳಪಡಿಸಲಾಗಿದೆ (ವೆಂಚುರಿನೊ ಮ.ಇ., 2003;2005). ಈ ಸಂದರ್ಭದಲ್ಲಿ ನಮ್ಮ ಅಧ್ಯಯನದಲ್ಲಿ ಕೃಷಿ ರಾಸಾಯನಿಕ ಗಳಿಂದಾದ ಪರಿಣಾಮವನ್ನು ಪರಿಸರದ ಒತ್ತಡಕ (ಎನ್‌ವೈರಾನ್ ಮೆಂಟಲ್ ಸ್ಟ್ರೆಸ್ಸರ್) ಎಂದು ಪರಿಗಣೀಸಿ, ಯುಫ್ಲಿಕ್ಟಿಸ್ ಸಯಾನೊಫ್ಲಿಕ್ಟಿಸ್ ಎನ್ನುವ ಕಪ್ಪೆಯ ಯಕೃತ್‌ನ ರೆಟಿನಾಲ್‌ನ್ನು (ಜೀವಸತ್ವ–"ಎ") ಒಂದು ಸಾಧನವನ್ನಾಗಿಸಿಕೊಂಡು ಅಳೆಯಲಾ ಗಿದೆ. ರೆಟಿನೋಯಿಕ್ ಆಮ್ಲ, ಉಭಯಚರಗಳನ್ನೊಳ ಗೊಂಡು ಎಲ್ಲಾ ಕಶೇರುಕಗಳಲ್ಲಿ ಹಲವಾರು ಪ್ರಮುಖ ಬೆಳವಣಿಗೆಯ ಅಂಶಗಳನ್ನು ನಿಯಂತ್ರಿಸುವ ಕಾರಣ, ಪರಿಸರದ ಒತ್ತಡಕಗಳಿಂದ ಏರುಪೇರಾದ ರೆಟಿನಾಲ್ ಪ್ರಮಾಣ ಜನನ ದೋಷಗಳನ್ನುಂಟು ಮಾಡುತ್ತದೆ ಎಂದು ನಂಬಲಾಗಿದೆ. ರೆಟಿನಾಲ್ ಒಂದು ಪ್ರಾಣಿಜನ್ಯ "ಎ" ಜೀವಸತ್ವ ಇದು ಡೈಟೆರ್ಪಿನಾಯ್ಡ್ ಮತ್ತು ಆಲ್ಕೋಹಾಲ್ ಜನ್ಯ ಜೀವಸತ್ವ ಮತ್ತು ಆಲ್ಕೋಹಾಲಿನ ಉತ್ಪನ್ನವಾದ ರೆಟಿನೈಲೆಸ್ಟರ್, ಪ್ರಾಣೀಗಳಲ್ಲಿ ಜೀವಸತ್ವ ಸಂಗ್ರಹಕದ ರೂಪದಲ್ಲಿ ಕಾರ್ಯನಿರ್ವಹಿಸುತ್ತದೆ. "ಎ" ಜೀವಸತ್ವವು ಶಾರೀರಿಕ ಚಟುವಟಿಕೆ ಗಳಾದ ದೃಷ್ಟಿ, ನಿರೋಧಕತೆ, ಬೆಳವಣಿಗೆ, ಅಭಿವೃದ್ಧಿ ಮತ್ತು ಕೆಂಪು ರಕ್ತಕಣಗಳ ಉತ್ಪಾದನೆಯಲ್ಲಿ ಸಹಾಯಮಾಡುತ್ತದೆ. "ಎ" ಜೀವಸತ್ವದ ಅವಶ್ಯಕತೆ ಉಭ್ಯವಾಸಿಗಳ ಜೀವನದ ಯಾವ ಘಟ್ಟದಲ್ಲಿಯೂ ಸಂಪೂರ್ಣವಾಗಿ ತಿಳಿದು ಬಂದಿಲ್ಲ. ಕಪ್ಪೆಗಳ ಯಕೃತ್ತಿನ "ಎ" ಜೀವಸತ್ವದ ಪ್ರಮಾಣದ ಬಗ್ಗೆ ಮಾಹಿತಿಗಳು ತುಂಬಾ ಕಡಿಮೆ (ಮೊರ್ಟನ್ ಮತ್ತು ರೊಸನ್ 1949; ಬೊಯ್ಲಿ ಮ.ಇ. 2004; ಪೆಸ್ಸಿಯ 2007). ಕಪ್ಪೆಯಲ್ಲಿ ಪ್ಲಾಸ್ಮಾ ರೆಟಿನಾಲ್‌ನ ಪ್ರಮಾಣ ಮತ್ತು ದೇಹತೂಕದ ಸಮಾಶ್ರಯಣಕ್ಕೆ (ರಿಗ್ರೆಶನ್) ಸಂಬಂಧಿಸಿದಂತೆ ಪ್ರಕಟವಾದ ವರದಿಯ ಒಂದು ಮಾದರಿಯಲ್ಲಿ 76 ಗ್ರಾಂ ತೂಕದ ಕೆನೇಡಿಯನ್ ಗೋಂಕರು ಕಪ್ಪೆಯು (ರಾನಾ ಕ್ಯಾಟಸ್‌ಬಿಯಾನ) 585 ನ್ಯಾನೋ ಗ್ರಾಂ/ಮಿ.ಲೀ. ಪ್ರಮಾಣದ "ಎ" ಜೀವಸತ್ವವನ್ನು ಹೊಂದಿತ್ತು (ಬೆರುಬೆ ಮ.ಇ. 2005). ಕೃಷಿಭೂಮಿಯಲ್ಲಿ ಬಳಸುವ ರಾಸಾಯನಿಕಗಳು ಮತ್ತು ಕ್ರಿಮಿನಾಶಕಗಳಿಂದುಟಾಗುವ ದುಷ್ಪರಿ ಣಾಮಗಳು, ಕ್ರಿಮಿನಾಶಕಗಳಿಂದ ಉಂಟಾಗಬಹುದಾದ ಅಂಗ ವೈಫಲ್ಯತೆ, ಸಂತಾನೋತ್ಪತ್ತಿ ವೈಫಲ್ಯಗಳನ್ನು ಈ ಪ್ರಸ್ತುತ ಅಧ್ಯಯನ ದಲ್ಲಿ ಕೈಗೊಳ್ಳಲಾಯಿತು. ಅತಿಯಾದ ಮತ್ತು ಸಾಕಷ್ಟಿಲ್ಲದ ಪ್ರಮಾಣ ದಲ್ಲಿ ಪೂರೈಕೆಯಾದ "ಎ" ಜೀವಸತ್ವದ ಕೊರತೆಯಿಂದ ಮನುಷ್ಯರ ಆರೋಗ್ಯದ ಜೊತೆ, ಕಪ್ಪೆಗಳನ್ನು ಒಳಗೊಂಡಂತೆ ಉಳಿದ ಪ್ರಾಣಿಗಳಲ್ಲೂ ಉಂಟಾಗಬಹುದಾದ ದೇಹ ಸಂಬಂಧಿ ಹಾಗೂ ಆರೋಗ್ಯಸಂಬಂಧಿ ದುಷ್ಪರಿಣಾಮಗಳು ಅಧ್ಯಯನಗಳಿಂದ ತಿಳಿದು ಬಂದಿವೆ.

ಯುಫ್ಲಿಕ್ಟಿಸ್ ಸಯಾನೊಫ್ಲಿಕ್ಟಿಸ್ ಕಪ್ಪೆಯು ಪಶ್ಚಿಮ ಘಟ್ಟಗಳ ಕೃಷಿಭೂಮಿ (ಗದ್ದೆ) ಗಳಲ್ಲಿ, ನಿಂತ ನೀರಿನಲ್ಲಿ ಹಾಗೂ ಸಣ್ಣಪುಟ್ಟ ಕೆರೆ ಕುಂಟೆಗಳಲ್ಲಿ ಸಾಮಾನ್ಯವಾಗಿ ವಾಸಿಸುತ್ತವೆ. ಐ.ಯು.ಸಿ.ಎನ್.

ರೆಡ್‌ಲಿಸ್ಟ್‌ನಲ್ಲಿ "ಕನಿಷ್ಠ ಕಾಳಜಿ (ಲೀಸ್ಟ್ ಕನ್ಸರ್ನಡ್)" ಎಂದು ಗುರುತಿಸಿಕೊಂಡರೂ, ಈ ಕಪ್ಪೆ ಕೃಷಿ ರಾಸಾ0ಯನಿಕಗಳ ಕಲ್ಮಶದಿಂದ ತೊಂದರೆಗೀಡಾಗಿದೆ ಎಂದು ವರದಿಸಲಾಗಿದು (http://amphibiaweb.org/) ಎಷ್ಟೋ ಕೊಳೆ, ಗುಂಡಿ, ಜೌವುಗು ಪ್ರದೇಶಗಳು ಕೃಷಿಭೂಮಿಗಳ ಮಧ್ಯ ಇರುವುದರಿಂದ, ಅವುಗಳಿಗೂ ಸುತ್ತಮುತ್ತಲಿನ ಕೃಷಿಭೂಮಿಯಲ್ಲಿನ ನೀರಿನ ಹರಿವು (ರನ್ ಆಫ್) ಬಂದು ಸೇರುತ್ತದೆ. ಇದರಿಂದ ಈ ಕಪ್ಪೆಗಳಿಗೂ ವಿವಿಧ ಪ್ರಮಾಣದ ಕೃಷಿರಾಸಾಯನಿಕಗಳು ತಗಲುತ್ತವೆ. ಯಕೃತ್ ರೆಟಿನಾಲ್ ಪ್ರಮಾಣ ಅಂದಾಜಿಸಲು ಮತ್ತು ಕಳೆದ ಕೆಲ ವರ್ಷಗಳಲ್ಲಿ ಅದು ಅನುಭೈವಿಸಿರುವ ಒತ್ತಡವನ್ನು ತಿಳಿಯಲು ಈ ಕಪ್ಪೆಯನ್ನು ಮಾದರಿಯನಾಗಿಸಿ ಕೊಳ್ಳಲಾಗಿದೆ. ನಾವು ಕೈಗೊಂಡ ಅಧ್ಯಯನ ಪ್ರದೇಶಗಳಲ್ಲಿ ರೈತರು ಕ್ಲೋರ್‌ಪೈರಿಫಾಸ್, ಕ್ವಿನಾಲ್‌ಫಾಸ್, ಮತ್ತು ಮೊನೊಕ್ರೊಟೊಫಾಸ್ (ಆಗ್ರ್ಯಾನೊಫಾಸ್ಫೇಟ್ ಕೀಟನಾಶಕಗಳು), ಕಾಪರ್ ಆಕ್ಸಿಕ್ಲೋರೈಡ್, ಕಾರ್ಬೆಂಡಾಝಿಮ್, ಮತ್ತು ಬೋರ್ಡಾಕ್ಸ್ ಮಿಶ್ರಣ (ಶಿಲೀಂದ್ರನಾಶಕಗಳು), ಮತ್ತು ಎನ್. ಪಿ.ಕೆ ಮುಂತಾದ ಗೊಬ್ಬರಗಳನ್ನು ತಮ್ಮ ಬೆಳೆಗಳಿಗೆ ಬಳಸುತಾರೆ.

**ವಸ್ತುಗಳು ಮತ್ತು ವಿಧಾನಗಳು**

**2.1 ಅಧ್ಯಯನದ ಪ್ರದೇಶ ಮತ್ತು ಕಪ್ಪೆಗಳ ಆಯ್ಕೆ**:– ಕಪ್ಪೆಗಳನ್ನು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿರುವ ವ್ಯಾಪಕವಾಗಿರುವ ಭತ್ತದ ಗದ್ದೆಗಳು ಮತ್ತು ಅಲ್ಲಲ್ಲಿ ಇರುವ ನೀರು ನಿಂತ ಗುಂಡಿಗಳಿಂದ ಆರಿಸಲಾಯಿತು, ಕಪ್ಪೆಗಳನ್ನು ನಾಲ್ಕು ಅಧ್ಯಯನ ಪ್ರದೇಶಗಳಿಂದ ಆರಿಸಲಾಯಿತು.

1. ಬಿದರಕಟ್ಟೆ ಕೆರೆ, ಶಂಕರಘಟ್ಟ (ಉ 13, 24, 48; ಪೂ 25, 27, 55).

2. ಶಿವಾಜಿ ಕೆರೆ, ಸಿಂಗನಮನೆ (ಉ 13, 43, 38.8; ಪೂ 75, 37, 55.8)

3. ರಾಜ್ಯ ಮೀನುಗಾರಿಕಾ ಇಲಾಖೆ ಆವರಣ, ಭದ್ರಾ ಜಲಾಶಯ ಯೋಜನೆ (ಉ 13, 42, 33.3; ಪೂ 75, 38, 17.9) ಮತ್ತು

4. ಸಣ್ಣ ಕೃತಕ ಗುಂಡಿ, ಕುವೆಂಪು ವಿ. ವಿ. ಆರವಣ (ಉ 13, 44, 04.5 ಪೂ 75, 38, 01)

ಪ್ರದೇಶ 1 ಮತ್ತು 2, ಶಾಶ್ವತ ಕೆರೆಗಳಾಗಿದ್ದು, ಮೊದಲನೇ ಪ್ರದೇಶದಲ್ಲಿ 1.55 ಹೆಕ್ಟೇರ್ ಕೆರೆಯನ್ನೊಳಗೊಂಡು ಒಟ್ಟು ಸುಮಾರು 27.35 ಹೆಕ್ಟೇರ್ ಜಲಾನಯನ ಪ್ರದೇಶವಾಗಿದೆ. ಕೆರೆಯ ಜಲಾನಯನ ಪ್ರದೇಶವು 3.30 ಹೆಕ್ಟೇರ್ ಅಡಿಕೆ ತೋಟಗಳು, 22.734 ಹೆಕ್ಟೇರ್ ಭತ್ತದ ಗದ್ದೆಗಳು, ಮತ್ತು ಸ್ವಲ್ಪ ಬಂಜರು ಭೂಮಿಯನೊಳಗೊಂಡಿದೆ. ರೈತರು ರಾಸಾಯನಿಕ ಗೊಬ್ಬರಗಳು (ಎನ್.ಪಿ.ಕೆ, ಮ್ಯುರೆಟ್ ಪೊಟ್ಯಾಶ್ ಮತ್ತು ಯೂರಿಯ) ಮತ್ತು ಕೀಟನಾಶಕಗಳು (ಕ್ವಿನಾಲ್‌ಫಾಸ್, ಮೆಲಾಥಿಯನ್) ಸುತ್ತಲಿನ ಕೃಷಿ ಭೂಮಿಗಳಲ್ಲಿ ಬಳಸುತ್ತಾರೆ. ಎರಡನೇ ಪ್ರದೇಶದಲ್ಲಿ 1.3.7 ಹೆಕ್ಟೇರ್ ಕೆರೆಯನ್ನೊಳಗೊಂಡು ಒಟ್ಟು ಸುಮಾರು 14.898 ಹೆಕ್ಟೇರ್ ಜಲಾಯನ ಪ್ರದೇಶವಾಗಿದೆ, ಇದರಲ್ಲಿ 1.7 ಹೆಕ್ಟೇರ್ ಅಡಿಕೆ ತೋಟಗಳು, 11.98 ಹೆಕ್ಟೇರ್ ಭತ್ತದ ಗದ್ದೆಗಳು ಸೇರಿವೆ. ಭತ್ತದ ಗದ್ದೆಗಳಿಗೆ ರೈತರು ಮನೋಕ್ರೊಟೊಫಾಸ್, ಡೆಮಾಕ್ರಾನ್ ಕೀಟನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಾರೆ. ಮೂರನೇ ಪ್ರದೇಶವು ಮೀನು ಸಾಕಾಣೆಯ ತೊಟ್ಟಿಯ ಸುತ್ತಲಿನ ಜೌವುಗು ಪ್ರದೇಶವಾಗಿದ್ದು, ಇಲ್ಲಿನ ಒಟ್ಟು ಜಲಾಯನ ವಿಸ್ತೀರ್ಣ 48.952 ಹೆಕ್ಟೇರ್ ಆಗುತ್ತದೆ. ಮತ್ತು ಇಲ್ಲಿ ಯಾವುದೇ ಕೃಷಿ ಚಟುವಟಿಕೆಗಳಿಲ್ಲ. ನಾಲ್ಕನೇಯ ಪ್ರದೇಶವು ವಿ.ವಿಯಲ್ಲಿನ ಸಂಪೂರ್ಣವಾಗಿ ಮಾಲಿನ್ಯರಹಿತ ಉದ್ಯಾನ.

ಜನವರಿ 30 ರಿಂದ, ಮಾರ್ಚ 15 ವರೆಗೆ, ಒಟ್ಟು 31 ವಯಸ್ಕ (12 ಗಂಡು ಮತ್ತು 19 ಹೆಣ್ಣು) ಯುಫ್ಲಿಕ್ಟಿಸ್ ಸಯಾನೊಫ್ಲಿಕ್ಟಿಸ್ ಕಪ್ಪೆಗಳನ್ನು ಮೇಲಿನ ಸ್ಥಳಗಳಿಂದ ಆರಿಸಲಾಯಿತು. ಕಪ್ಪೆಗಳು ಉದ್ದವನ್ನು ಡಿಜಿಟಲ್ (ಟ್ರೆಸ್ನಾ) ಕ್ಯಾಪಿಪರ್‌ಗಳಿಂದ ಅಳೆಯಲಾಯಿತು, ಕಪ್ಪೆಗಳ ತೂಕವನ್ನು ಡಿಜಿಟಲ್ ತಕ್ಕಡಿಯ (ಮಾದರಿ: ಎ.ಎಮ್. ಡಬ್ಲೂ–100, ವಿ 2.0) ಸಹಾಯದಿಂದ ಅಳೆದು, ನಂತರ ಲಿಂಗವನ್ನು ಗುರುತಿಸಲಾಯಿತು. ಕಪ್ಪೆಗಳ ಸರಾಸರಿ ಮೂತಿ–ಗುದ್ದ (ಸ್ನಾಟ್–ವೆಂಟ್) ಉದ್ದವು 31.12+_ 5.462 ಮಿ.ಮಿ. ಮತ್ತು ಸರಾಸರಿ ತೂಕ 3.1+_1.83 ಗ್ರಾಂ ಆಗಿತ್ತು.

**2.2 ರೆಟಿನಾಲ್ ಪ್ರಮಾಣ**:– ಕಪ್ಪೆಗಳಿಗೆ ಅರವಳಿಕೆ ಬರಿಸಿದ ನಂತರ, ಅವುಗಳ ಯಕೃತವನ್ನು ತಗೆದು ಅದರ ಸರಿಯಾದ ತೂಕವನ್ನು ಒಹಾಸ್ ತಕ್ಕಡಿಯ ಸಹಾಯದಿಂದ ದಾಖಲಿಸಲಾಯಿತು. ನಂತರ ಯಕೃತನ್ನು ಹೊಮೊಜಿನೈಸರ್‌ಗೆ 1 ಎಂ.ಎಲ್. ಪೊಟ್ಯಾಶಿಯಮ್ ಹೈಡ್ರಾಕ್ಸೈಡ್ ಸೇರಿಸಿ ವರ್ಗಾಯಿಸಲಾಯಿತು. ಪೊಶ್ಯಾಶಿಯಮ್ ಹೈಡ್ರಾಕ್ಸೈಡ್‌ನಲ್ಲಿರುವ ಯಕೃತನ್ನು ಹೊಮೊಜಿನೈಸ್ ಮಾಡಿ 60 ಸೆಲ್ಸಿಯಸ್ ಬಿಸಿನೀರಿನಲ್ಲಿ 20 ನಿಮಿಷ ಇಟ್ಟು, ನಂತರ ತಣ್ಣಗೆ ಮಾಡಿ 5–10 ನಿಮಿಷಗಳ ಕಾಲ 1500 ಆರ್.ಪಿ.ಎಂ ಗಳಲ್ಲಿ ಸೆಂಟ್ರಿಫ್ಯೂಗೇಟ್ ಮಾಡಲಾಯಿತು. ಸೂಪರ್ನೇಟೆಂಟ್ ದ್ರಾವಣವನ್ನು ಝೈಲಿನ್ ನೊಂದಿಗೆ ಬೆರೆಸಿ ಸ್ಪೆಕ್ಟ್ರೋಫೋಟೋಮೀಟರ್‌ನಲ್ಲಿ ಆಪ್ಟಿಕಲ್ ಸಾಂದ್ರತೆಯನ್ನು 335 ನ್ಯಾ.ಮಿ. ತರಂಗಾಂತರದಲ್ಲಿ ಅಳೆಯಲಾಯಿತು. ನಂತರ ಅದನ್ನು ಅತಿನೇರಳೆ ವಿಕಿರಣಗಳಿಗೆ 30 ನಿಮಿಷಗಳ ಕಾಲ ಒಡ್ಡಿ ಮತ್ತೆ ಅದರ ಆಪ್ಟಿಕಲ್ ಸಾಂದ್ರತೆಯನ್ನು ಅಳೆಯುಲಾಯಿತು. ರೆಟಿನಾಲ್‌ನ ಸಂಪೂರ್ಣ ಹೊರತೆಗೆಯುವಿಕೆಯನ್ನು ರುಬ್‌ಕೋವಸ್ಕಿ ಮ.ಇ. (2006) ಸೂಚಿಸಿದ ಪದ್ಧತಿಯಂತೆ ಮಾಡಲಾಯಿತು. ರೆಟಿನಾಲನ್ನು ಈ ಕೆಳಗಿನ ಸೂತ್ರದಿಂದ ಅಳೆಯಲಾಯಿತು.

Cx-(A1-A2)22.23

ಇಲ್ಲಿ A1 ಎಂದರೆ ಅತಿನೇರಳೆ ವಿಕಿರಣಕ್ಕೆ ಒಡ್ಡುವ ಮುಂಚಿನ ಆಪ್ಟಿಕಲ್ ಸಾಂದ್ರತೆ

A2 ಎಂದರೆ ಅತಿನೇರಳೆ ವಿಕಿರಣಕ್ಕೆ ಒಡ್ಡಿದ ನಂತರದ ಆಪ್ಟಿಕಲ್ ಸಾಂದ್ರತೆ

**2.3 ಅಂಕಿ ಅಂಶಗಳ ವಿಶ್ಲೇಷಣೆ**:– ಅಂಕಿ ಅಂಶಗಳ ವಿಶ್ಲೇಷಣೆಗೆ ನಾವು ಎಸ್.ಪಿ.ಎಸ್.ಎಸ್. (ಆ.16) ತಂತ್ರಾಂಶಗಳನ್ನು ಬಳಸಿದೆವು. ಫಲಪರಿಮಾಣಗಳನ್ನು ಅಳೆಯುವ ಸಂಧರ್ಭಗಳಲ್ಲಿ ಸರಾಸರಿ ಬೆಲೆಗಳನ್ನು ಅಂಕಿಅಂಶಗಳ ವಿಶ್ಲೇಷಣೆಗೆ ಬಳಸಿದೆವು. ರೆಟಿನಾಲ್ ಪ್ರಮಾಣದ ಬೇರೆ ಬೇರೆ ಅಧ್ಯಯನ ಪ್ರದೇಶಗಳ ನಡುವಿನ ವ್ಯತ್ಯಾಸವನ್ನು ಅರಿಯಲು ಟೂ–ಟೇಲ್ಡ್ ಅನೋವಾ ಬಳಸಿದೆವು. ಎಲ್ಲಾ ಸಂದರ್ಭಗಳಲ್ಲಿ $P<0.05$ ಪರಿಗಣಿಸಿದೆವು.

**ಫಲಿತಾಂಶ ಮತ್ತು ಚರ್ಚೆ**:– ಪ್ರಸ್ತುತ ಅಧ್ಯಯನದಲ್ಲಿ ನಮ್ಮ ಗ್ರಹಿಕೆಗೆ

ಬಂದಂತಹ ಯು. ಸಯನೋಪ್ಲಿಕ್ಟಿಸ್‌ನ ಯಕೃತ್ತಿನಲ್ಲಿ ದೊರೆತ ರೆಟಿನಾಲಿನ ಪ್ರಮಾಣವನ್ನು ಚಿತ್ರ 1 ರಲ್ಲಿ ಮತ್ತು ಅಂಕಿ ಅಂಶಗಳ ವಿಶ್ಲೇಷಣೆಗಳನ್ನು ಕೋಷ್ಟಕ 1 ರಲ್ಲಿ ತೋರಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ರೆಟಿನಾಲ್‌ನ ಪ್ರಮಾಣ ಪ್ರದೇಶ 3 ದಲ್ಲಿ ಅಧಿಕವಾಗಿ ದೊರೆತಿದ್ದು ನಂತರದ ಸ್ಥಾನವನ್ನು ಪ್ರದೇಶ 2, 1, ಮತ್ತು 4 ಗಳು ಕ್ರಮವಾಗಿ ಹೊಂದಿವೆ. ಅನೂವ (ANOVA) ಪರೀಕ್ಷೆಯಿಂದ ಈ ನಾಲ್ಕು ಆಯ್ದ ಪ್ರದೇಶಗಳಲ್ಲಿ ಗಮನಾರ್ಹ ವ್ಯತ್ಯಾಸಗಳು ಕಪ್ಪೆಗಳ ರೆಟಿನಾಲ್ ಪ್ರಮಾಣದಲ್ಲಿ ಇಲದಿದ್ದರೂ ಪ್ರದೇಶ 3ರ (ಮೀನು ಸಾಕಣೆ ತೊಟ್ಟಿಗಳನ್ನೊಳಗೊಂಡಿರುವ ಜವುಗು ಪ್ರದೇಶ) ಜಾಗದಲ್ಲಿ ದೊರೆತ ಕಪ್ಪೆಗಳಲ್ಲಿ ಅತಿಹೆಚ್ಚು ರೆಟಿನಾಲ್ ಪ್ರಮಾಣವು ಕಂಡುಬಂದಿದೆ. ಇಲ್ಲಿನ ಪ್ರಸ್ತುತ ಅಧ್ಯಯನದಲ್ಲಿ ನಾವು ದಾಖಲಿಸಿರುವ ಯಕೃತ್ ಅಂಗಾಂಶದ ರೆಟಿನಾಲ್ ಪ್ರಮಾಣವು ಮೊರೈನ್ ಮತ್ತು ಟ್ರೂಶನ್ (1949); ಬೊಯ್ಲಿ ಮ.ಇ. (2004); ಪೆಸ್ಸಿಯರ್ (2007). ರ ಅಧ್ಯಯನಗಳಿಗೆ ಹೋಲಿಸಿದರೆ ಅತೀ ಕಡಿಮೆ ಪ್ರಮಾಣದ್ದಾಗಿದೆ. ಅತ್ಯಲ್ಪ ರೆಟಿನಾಲ್ ಪ್ರಮಾಣವು ಬೆಳವಣಿಗೆ ಸಂಬಂಧಿ ತೊಂದರೆಗಳು ಮತ್ತು ಆಕೃತಿ ವೈಫಲ್ಯಗಳಿಗೆ ಕಾರಣವಾಗಬಹುದೆಂದು ಹಲವಾರು ಅಧ್ಯಯನಗಳಿಂದ ಊಹಿಸಲಾಗಿದೆ. ಪಟೇಲ್ ಮ.ಇ. (2008) ರ ಈ ಮೊದಲಿನ ಅಧ್ಯಯನಗಳು ಇದೇ ಜಾಗಗಳಲ್ಲಿನ ಫಿಜರ್ವಾರ್ಯ ಲಿಮ್ನೋಚಾರೀಸ್ ಕಪ್ಪೆಗಳು ಅಕೃತಿ ವೈಫಲ್ಯಗಳನ್ನು ಹೊಂದಿರುವುದಾಗಿ ವರದಿಯಾಗಿದೆ. ಆದರೆ ಇದೇ ಜಾಗಗಳಲ್ಲಿ ಈ ಸಯನೋಪ್ಲಿಕ್ಟಿಸ್ ಕಪ್ಪೆಗಳ ದೈಹಿಕ ವೈಫಲ್ಯಗಳು ವರದಿಯಾಗಿಲ್ಲ. ರೆಟಿನಾಲ್ ಮತ್ತು ಅವುಗಳ ದೈಹಿಕ ಚಟುವಟಿಕೆಗಳ ಅಧಾರದಂತೆ ಈ ಭಾಗಗಳಲ್ಲಿನ ಕಪ್ಪೆಗಳ ಮೇಲೆ ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿರುವುದು ಸ್ಪಷ್ಟವಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಪ್ರದೇಶ 1,2,3 ರಲ್ಲಿ ದೊರೆತ ಯಕೃತ್ತಿನ ರೆಟಿನಾಲ್ ಅಂಗಾಂಶದ ಅಲ್ಪಪ್ರಮಾಣಕ್ಕೆ ಹಲವಾರು ರಾಸಾಯನಿಕಗಳಿಂದುಂಟಾದ ಒತ್ತಡಗಳು ಕಾರಣವಾಗಿರಬಹುದೆಂದು ಭಾವಿಸಬಹುದು. ಪ್ರಸ್ತುತ ಅಧ್ಯಯನದಲ್ಲಿ ನಾವು ರೆಟಿನಾಲ್ ಬಳಸಿ ಕಪ್ಪೆಗಳ ಆರೋಗ್ಯದ ಪ್ರಸ್ತುತ ಸ್ಥಿತಿ ತಿಳಿದುಕೊಳ್ಳಲು ಪ್ರಯತ್ನಿಸಿದ್ದೇವೆ. ಹಾಗೂ ರೆಟಿನಾಲ್ ಅಂಶ ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿದ್ದರೂ ಸಹ ಕಪ್ಪೆಗಳ ಫಿಸಿಯಾಲಜಿಯ ಬೇರೆ ಬೇರೆ ಅಂಶಗಳ ಸಂದೀರ್ಘ ಸಂಶೋಧನೆಯ ಫಲಿತಾಂಶವೂ ಸಹ ಕಪ್ಪೆಗಳ ಆರೋಗ್ಯದ ಏರುಪೇರನ್ನು ಖಾತರಿಯಾಗಿ ತಿಳಿಸಲು ಅಗತ್ಯವಿರುತ್ತದೆ.

**ಮನ್ನಣೆಗಳು**: ಈ ಅಧ್ಯಯನವನ್ನು ನಡೆಸಲು ಅನುಮತಿ ಹಾಗೂ ಸೌಲಭ್ಯ ಕಲ್ಪಿಸಿದ ಪರಿಸರ ವಿಜ್ಞಾನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ ಇವರಿಗೆ ಹಾಗೂ ಅಧ್ಯಯನ ನಡೆಸಲು ಸಹಕಾರ ನೀಡಿದ, ಅಧ್ಯಯನ ಜಾಗ 1,2, ರ ರೈತರಿಗೆ ಮತ್ತು ಸ್ಥಳೀಯ ರಾಜ್ಯ ಮೀನುಗಾರಿಕಾ ಅಧಿಕಾರಿಗಳಿಗೆ ಲೇಖಕರು ಕೃತಜ್ಞರು.

**ಉಲ್ಲೇಖಗಳು**

Amphibia Web: ಉಭಯಚರಶಾಸ್ತ್ರ ಮತ್ತು ಸಂರಕ್ಷಣೆ ಮಾಹಿತಿ, 2005. ಬರ್ಕಲಿ, ಕ್ಯಾಲಿಫೋರ್ನಿಯ: ಉಭಯವಾಸಿ ಜಾಲ:

ಬೆರುಬೆ ಸಿ., ಬೋಚರ್. ಎಲ್. ಎಂ. ಮಾ. ಡಬ್ಲ್ಯೂ ವೇಕ್‌ಹ್ಯಾಮ್, ಎ., ಸಾಲ್ಮನ್, ಎಲ್., ಹಕೇಮ್, ಆರ್., ಎಹ್, ಡಬ್ಲ್ಯೂ. ಸಿ., ಮ್ಯಾಕ್, ಟಿ. ಡಬ್ಲ್ಯೂ., ಬೆಂಚಿಮೋಲ್, ಎಸ್., 2005. ಅಪಾಪ್ಟೋಸಿಸ್ ಕಾಸ್ಡ್ ಬೈ ಪಿ 53– ಇಂಡ್ಯೂಸ್ಡ್ ಪ್ರೋಟೀನ್ ವಿತ್ ಡೆತ್ ಡೊಮೈನ್ (ಪಿ/ಡಿಡಿ) ಡಿಪೆಂಡ್ಸ್ ಆನ್ ದ ಡೆತ್ ಅಡಾಪ್ಟೆಡ್ ಪ್ರೋಟೀನ್ ಆರ್ ಎ. ಡಿ.ಡಿ. ಪಿ.ಎನ್.ಎ.ಸ್ 102:14314–14316

ಬೋಯ್ಲಿ, ಎಮ್. ಹೆಚ್. ಬ್ರುಬ್, ವಿ. ಈ., ಸ್ಪಿಯರ್ ಪಿ. ಎ., ಡೆಬ್ಲಾಯಿ, ಸಿ., ಡ'ಸಿಲ್ವ. ಎನ್., 2005. ಹೆಪಾಟಿಕ್ ರೆಟಿನಾಯಿಡ್ ಆಫ್ ಬುಲ್ ಫ್ರಾಗ್ ಇನ್ ರಿಲೇಶನ್ ಟು ಅಗ್ರಿಕಲ್ಚರಲ್ ಪೆಸ್ಟಿಸೈಡ್ಸ್. ಎನ್ವಿರಾನ್. ಟಾಕ್ಸಿಕಾಲ್. ಕೆಮ್., 24:1099–1106.

ಹೆಗ್ಡೆ, ಜಿ., ಕೃಷ್ಣಮೂರ್ತಿ, ಎಸ್. ವಿ., 2014. ಹೆಲ್ತ್ ಸ್ಟೇಟಸ್ ಆಫ್ ಕಾಮನ್ ಫ್ರಾಗ್ ಫಿಜರ್ವಾರ್ಯ ಲಿಮ್ನೋಚಾರೀಸ್ (ಅನೂರ: ರಾನಿಡೆ) ಇನ್ ರೈಸ್ ಪ್ಯಾಡಿ ಅಗ್ರೋ ಇಕೋಸಿಸ್ಟಮ್ ಆಫ್ ವೆಸ್ಟರ್ನ್ ಘಾಟ್ಸ್, ಇಚಿಡಿಯಾ, ಅಮೇರಿಕನ್–ಯುರೇಶಿಯನ್ ಜೆ. ಅಗ್ರಿಕ್ ಅಂಡ್ ಎನ್ವಿರಾನ್. ಸೈ., 14(12): 1492–1497.

ಲೀವಾ–ಪ್ರೆಸಾ, ಎ., ಮಾರ್ಟೆನ್‌ಸನ್, ಎ. ಎಸ್., ಅರುಕ್ವೆ, ಎ., ಜೆನ್ಸನ್, ಬಿ. ಎಮ್., 2006. ಅಲ್ಟರ್ಡ ಹೆಪಾಟಿಕ್ ರೆಟಿನಾಲ್ ಅಂಡ್ ಸಿವೈಪಿ 26 ಲೆವೆಲ್ಸ್ ಇನ್ ಅಡಲ್ಟ್ ಯೂರೋಪಿಯನ್ ಕಾಮನ್ ಫ್ರಾಗ್. (ರಾನ ಟೆಂಪೊರರಿಯ) ಎಕ್ಸಪೋಸ್ಡ್ ಟು ಪಿ.ಪಿ'–ಡಿಡಿಇ. ಮರ್. ಎನ್ವೈರಾನ್. ರಿಸ್. 62, 510–515.

ಮೊರ್ಟನ್, ಅರ್. ಎ., ರೋಸೆನ್, ಡಿ. ಜಿ., 1949. ಕ್ಯಾರೋಟಿನಾಯಿಡ್ಸ್, ವೈಟಾಮಿನ್ ಎ, ಅಂಡ್ 7–ಡಿಹೈಡ್ರೋಸ್ಟಿರಾಯಿಡ್ ಇನ್ ದ ಫ್ರಾಗ್ (ರಾನ ಟೆಂಪೊರರಿಯ) ಬಯೋಕೆಮ್. ಆ.: 45:612–627.

ಪಟೇಲ್, ಎ. ಎಮ್., ಕುಲಕರ್ಣಿ, ಪಿ. ಎ., ಗಿರೀಶ, ಕೆ. ಜಿ., ಗುರುಶಂಕರ, ಎಚ್. ಪಿ., ಕೃಷ್ಣಮೂರ್ತಿ, ಎಸ್. ವಿ., 2008. ಫಿಜರ್ವಾರ್ಯ ಲಿಮ್ನೋಚಾರಿಸ್ ಮಾರ್ಫಾಲಜಿ. ಹರ್ಪೆಟಾಲ್. ರಿವೀವ್. 39(1): 77.

ಪೆಸ್ಸಿಯರ್, ಎ.ಪಿ., 2007. ಸೈಟಾಲಾಜಿಕ್ ಡಯಾಗ್ನಿಸಿಸ್ ಆಫ್ ಡಿಸೀಸ್ ಇನ್ ಆಂಫಿಬಿಯನ್ಸ್, ಎಕ್ಸೊ. ಅನಿಮ್. ಪ್ರಾಕ್. 10(1): 187–206.

ಪಿಹಾ, ಎಚ್., 2006. ಇಂಪ್ಯಾಕ್ಟ್ಸ್ ಆಫ್ ಅಗ್ರಿಕಲ್ಚರ್ ಆನ್ ಆಂಫಿಬಿಯನ್ಸ್ ಎಟ್ ಮಲ್ಟಿಪಲ್ ಸ್ಕೇಲ್ಸ್ [ಅಕ್ಯಾಡಮಿಕ್ ಡಿಸ್ಸರ್ಟೇಷನ್], ಫಿನ್‌ಲಂಡ್: ಹುನಿವರ್ಸಿಟಿ ಆಫ್ ಹೆಲ್ಸಿಂಕ್, ಫ್ಯಾಕಲ್ಟಿ ಆಫ್ ಬಯೋಸೈನ್ಸ್.

ರಾಯ್. ಡಿ., 2002. ಆಂಫಿಬಿಯನ್ಸ್ ಆಸ್ ಎನ್ವೈರ್ನ್ಮೆಂಟಲ್ ಸೆಂಟಿನೆಲ್ಸ್. ಆ. ಬಯೊಸೈ. 27, 187–188.

ರುಟ್ಕೋವಸ್ಕಿ, ಎಮ್., ಗ್ರೆಗಾರ್ಸ್ಕಿಕ್, ಕೆ., ಗೆಂಜೆಕ್, ಇ., ಕೆಗ್ಲಿಯೋರ, ಜೆ., 2006. ಲ್ಯಾಬೋರೇಟರಿ ಕನ್ವಿನಿಯಂಟ್ ಮಾಡಿಫಿಕೇಶನ್ ಆಫ್ ಬೆಸ್ಸೆ ಮೆಥಡ್ ಫಾರ್ ವೈಟಾಮಿನ್–ಎ ಡಿಟರ್ಮಿನೇಷನ್ ಇನ್ ಬ್ಲಡ್ ಪ್ಲಾಸ್ಮ. ಆ. ಫಿಸಿಯೋಲ್. ಫಾರ್ಮ. 57(ಸಪ್. 2), 221.

ವೆಂಚುರಿನೊ, ಎ., ರೋಸೆನ್ಬಾಮ್, ಇ., ಡಿಕ್ಯಾಸ್ಟ್ರೊ, ಎ.ಸಿ., ಅಂಗುಯಾನೊ, ಒ. ಎಲ್., ಗೌನ, ಎಲ್., ಡೀ ಷ್ರೂಡರ್, ಟಿ. ಎಫ್., ಡೀ ಡಿ'ಏಂಜೆಲೊ, ಎ. ಎಂ. ಪಿ. 2003.

ಬಯೋಮಾರ್ಕರ್ಸ್ ಆಫ್ ಎಫೆಕ್ಟ್ಸ ಇನ್ ಟೋಡ್ಸ್ ಅಂಡ್ ಫ್ರಾಗ್ಸ್. ಬಯೋಮಾರ್ಕ. 8, 167–186.

ವೆಂಚುರಿನೊ, ಎ., ಪೆಂಚೆನ್ ಡೀ ಡಿ'ಏಂಜೆಲೊ, ಎ. ಎಂ., 2005. ಬಯೊಕೆಮಿಕಲ್ ಟಾರ್ಗೆಟ್ಸ್ ಆಫ್ ಝೆನೊಬಯೊಟಿಕ್ಸ್: ಬಯೋಮಾರ್ಕರ್ಸ್ ಇನ್ ಆಂಫೀಬಿಯನ್ ಎಕೊಟಾಕ್ಸಿಕಾಲಜಿ. 2:335–353.

**ಚಿತ್ರಗಳು ಮತ್ತು ಕೋಷ್ಠಗಳು:**




ಚಿತ್ರ1: ಯು. ಸಯಾನೊಫ್ಲಿಕ್ಟಿಸ್ ಕಪ್ಪೆಯ ಯಕೃತ್‌ನಲ್ಲಿರುವ ರೆಟಿನಾಲ್ ಪ್ರಮಾಣದ (ಮೈ. ಮೊ. ) ಸರಾಸರಿ (+_ ಪ್ರಮಾಣಿತ ವಿಚಲನ)

ಕೋಷ್ಟಕ1: ವಿವಿಧ ಸ್ಥಳಗಳಿಂದ ಆಯ್ಕೆ ಮಾಡಲಾದ ಯು. ಸಯಾನೊಫ್ಲಿಕ್ಟಿಸ್ ಕಪ್ಪೆಗಳ ಯಕೃತ್‌ನ ರೆಟಿನಾಲ್ ಅಂಶಗಳ ಅನೋವ (ANOVA)

| ಮೂಲ | ವರ್ಗಗಳ ಮೊತ್ತ | ಡಿಗ್ರೀಸ್ ಆಫ್ ಫ್ರೀಡಮ್ | ಸರಾಸರಿ ವರ್ಗ | ಎಫ್ | ಪಿ |
|---|---|---|---|---|---|
| ಉಪಚಾರ [ಗುಂಪುಗಳ ಮಧ್ಯೆ] | 0.006536 | 3 | 0.002179 | 0.71 | 0.586375 |
| ದೋಷ | 0.015318 | 5 | 0.003064 | | |

# ವಿಷಯ:–08

# ನಾಗಾರ್ಜುನೀಯಮ್

## ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಪದಾರ್ಥಶಾಸ್ತ್ರಗಳು

**THEME:-08**

# NAGARJUNEEYAM

## CHEMICAL, BIOLOGICAL AND MATERIALS SCIENCES

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಬ್ಯಾಕ್ಟೀರಿಯೋಸಿನ್ ಅನ್ನು ತಯಾರಿಸುವ ಒಂದು ಬ್ಯಾಕ್ಟೀರಿಯಾದ ಪ್ರತ್ಯೇಕತೆ ಹಾಗೂ ಗುರುತಿಸುವಿಕೆ | ಎಸ್. ಬಿ. ರಂಗನಾಥ್<br>ಡಾ.ಶರ್ಮಿಳಾ. ಟಿ | 250 – 253 |
| 2 | ಪಾರ್ಮೋಟ್ರಿಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಕಲ್ಲು ಹೂಗಳ ವಿವಿಧ ದ್ರಾವಕ ಸಾರಗಳ ಜೀವ ವಿರೋಧಿ ಅಧ್ಯಯನ | ಸ್ವಾಮಿ ಸಿ.ಟಿ.<br>ದೇವರಾಜ ಗಾಯತ್ರಿ | 253 – 257 |

ISSN 2249 - 5754 VIJNANA KANNADA (PRINT)



# ಬ್ಯಾಕ್ಟೀರಿಯೋಸಿನ್ ಅನ್ನು ತಯಾರಿಸುವ ಒಂದು ಬ್ಯಾಕ್ಟೀರಿಯಾದ ಪ್ರತ್ಯೇಕತೆ ಹಾಗೂ ಗುರುತಿಸುವಿಕೆ

ಎಸ್. ಬಿ. ರಂಗನಾಥ್ ಮತ್ತು ಡಾ. ಶರ್ಮಿಳಾ. ಟಿ
ಸೂಕ್ಷ್ಮಜೀವಾಣುಶಾಸ್ತ್ರ ಹಾಗೂ ಜೈವಿಕ ತಂತ್ರಜ್ಞಾನ ಶಾಸ್ತ್ರ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056.

ಬ್ಯಾಕ್ಟೀರಿಯಾದಿಂದ ತಯಾರಿಸಲ್ಪಡುವ ಬ್ಯಾಕ್ಟೀರಿಯೋಸಿನ್‌ಗಳು ಪ್ರೋಟಿನ್‌ಯುಕ್ತ ಸಂಯುಕ್ತಗಳಾಗಿದ್ದು, ಅವು ನಿಕಟ ಸಂಬಂಧಿತ ಇತರ ಬ್ಯಾಕ್ಟೀರಿಯಾಗಳನ್ನು ಪ್ರತಿಬಂಧಿಸುವ ಸಸಾರಜನಕ ಸಂಯುಕ್ತಗಳಾಗಿವೆ. ಇವು ಆಹಾರ, ಔಷದ ಹಾಗೂ ಇನ್ನೂ ಅನೇಕ ಉದ್ಯಮಗಳಲ್ಲಿ ವ್ಯಾಪಕವಾಗಿ ಅನ್ವಯವಾಗುತ್ತವೆ. ಅವು ಸಾಮಾನ್ಯವಾಗಿ ರೈಬೋಸೋಮುಗಳಿಂದ ತಯಾರಿಸಲ್ಪಡುವ ಸಂಯುಕ್ತಗಳಾಗಿವೆ. ಬಹಳ ಹೆಚ್ಚು ಅಧ್ಯಯನ ನಡೆದಿರುವ ಬ್ಯಾಕ್ಟೀರಿಯೋಸಿನ್‌ಗಳು ಲ್ಯಾಕ್ಟೋಬ್ಯಾಸಿಲಸ್ ಜಾತಿಯ ಬ್ಯಾಕ್ಟೀರಿಯಾಗಳಿಂದ ಉತ್ಪಾದಿಸಲ್ಪಡುವವತ್ತವೆ. ಆದರೆ ಸ್ಟಫೈಲೋಕಾಕಸ್ ಜಾತಿಯ ಬ್ಯಾಕ್ಟೀರಿಯೋಸಿನ್‌ಗಳು ಒಂದು ವ್ಯಾಪಕವಾದ ಕ್ಷಿತಿಜವನ್ನು ತೆರೆದಿದೆ. ನಮ್ಮ ಪ್ರಸ್ತುತ ಸಂಶೋಧನೆಯಲ್ಲಿ ಸ್ಫಟಿಕ ಕಲ್ಲಿನಿಂದ ಒಂದು ಬ್ಯಾಕ್ಟೀರಿಯಾವನ್ನು ಪ್ರತ್ಯೇಕಿಸಲಾಗಿದ್ದು, ಅದು ಸ್ಟಫೈಲೋಕಾಕಸ್ ಜಾತಿಯದೆಂದು ಗುರುತಿಸಲ್ಪಟ್ಟಿದೆ. ಇದನ್ನು ಆಕೃತಿ, ಸೂಕ್ಷ್ಮದರ್ಶಕ ಹಾಗೂ ಜೀವರಾಸಯನಶಾಸ್ತ್ರ ಪರೀಕ್ಷೆಗಳಿಂದ ಮತ್ತು 16s RNA ಸೀಕ್ವೆನ್ಸಿಂಗ್‌ಗಳಿಂದ ಗುರುತಿಸಲಾಗಿದೆ. ಪೌಷ್ಠಿಕಾಂಶದ ನಿಯತಾಂಕಗಳ ಉತ್ತಮಗೊಳಿಸುವಿಕೆಯನ್ನು ಬ್ಯಾಕ್ಟೀರಿಯೋಸಿನ್‌ನಂಥಹ ವಸ್ತುವನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಪ್ರಯತ್ನ ಮಾಡಲಾಗಿದೆ. ಈ ವಸ್ತುವನ್ನು ಭಾಗಶಃ ಶುದ್ದಗೊಳಿಸಿ ನಿರೂಪಿಸಲು 2D SDS PAGE ತಂತ್ರವನ್ನು ಬಳಸಲಾಗಿದೆ. ಈ ವಸ್ತುವಿನ ವಿರೋಧದ ಚಟುವಟಿಕೆಯನ್ನು ಧೃಡಪಡಿಸಿಕೊಳ್ಳಲು ಪ್ರತಿಸೂಕ್ಷ್ಮಜೀವಿಯ ಚಟುವಟಿಕೆಯನ್ನು, ಕೆಲವು ಸಾಮಾನ್ಯ ಆಹಾರ ಮಲಿನತೆಯನ್ನುಂಟುಮಾಡುವ ಸೂಕ್ಷ್ಮಜೀವಿಗಳ ವಿರುದ್ದ ನಡೆಸಲಾಗಿದೆ. ಭವಿಷ್ಯದಲ್ಲಿ ನಿರೀಕ್ಷಿತ ಗುರಿ ಏನೆಂದರೆ ಈ ಬ್ಯಾಕ್ಟೀರಿಯೋಸಿನ್‌ನ ಪೂರ್ಣಪ್ರಮಾಣದ ಶುದ್ದಗೊಳಿಸುವಿಕೆ ಮತ್ತು ನಿರೂಪಿಸುವಿಕೆ ಹಾಗೂ ಕೆಲವು ಆಹಾರ ಮಾದರಿಗಳ ಮೇಲೆ ಇವು ಸಂರಕ್ಷಕಗಳಾಗಿ ಕೆಲಸ ಮಾಡುತ್ತವೆಯೇ ಎಂದು ಪರೀಕ್ಷಿಸುವುದು. ಇದಕ್ಕೆ ಹೆಚ್ಚು ಪ್ರಾಯೋಗಿಕವಾಗಿ ಆಹಾರ ಸಂರಕ್ಷವಾಗಿ ಉಪಯೋಗಿಸಲು ಮತ್ತಷ್ಟು ವ್ಯಾಪಕವಾದ ಕೆಲಸವು ಅಗತ್ಯವಿದೆ.

**ಪರಿಚಯ :** ಬ್ಯಾಕ್ಟೀರಿಯೋಸಿನ್‌ನಿಂದ ಆಹಾರ ಸಂರಕ್ಷಣೆ ಮಾಡುವುದು (1) , ಆಹಾರದ ಬಡು ಅವಧಿಯನ್ನು ಹೆಚ್ಚಿಸುವುದು (2)(3) ಹಾಗೂ ರೋಗದ ಹಲ್ಲೆಯನ್ನು ಆದಷ್ಟೂ ಕಡಿಮೆಗೊಳಿಸುವುದೇ ಪ್ರಸ್ತುತ ಆಶಯ,

**ಸಾಮಗ್ರಿಗಳು ಮತ್ತು ವಿಧಾನಗಳು :** ಭಾರತದ ಅನೇಕ ಬೇರೆ ಬೇರೆ ಸ್ಥಳಗಳಿಂದ ಒಟ್ಟು 32 ಮಾದರಿಗಳನ್ನು ಬರಡಾದ ಧಾರಕಗಳಲ್ಲಿ ಸಂಗ್ರಹಿಸಲಾಯಿತು. ಎಲ್ಲ ಮಾದರಿಗಳನ್ನು ಪ್ರಯೋಗಾಲಯಕ್ಕೆ ಸಾಗಿಸಿ, 4°ಸಿ. ನಲ್ಲಿ ಮುಂದಿನ ಪ್ರಯೋಗಗಳಿಗಾಗಿ ಸಂಗ್ರಹಿಸಿ ಇಡಲಾಯಿತು. ಪ್ರಸ್ತುತ ಸೂಕ್ಷ್ಮಾಣು ಜೀವಿಯನ್ನು ಸ್ಫಟಿಕ ಕಲ್ಲಿನಿಂದ ಪ್ರತ್ಯೇಕಿಸಲಾಯಿತು.

**ಬ್ಯಾಕ್ಟೀರಿಯೋಸಿನ್‌ನನ್ನು ಉತ್ಪತ್ತಿ ಮಾಡುವ ಸೂಕ್ಷ್ಮಾಣುಜೀವಿಗಳ ಪ್ರತ್ಯೇಕಿಸುವಿಕೆ :** ಸ್ಫಟಿಕ ಕಲ್ಲಿನಲ್ಲಿ ಅಂಟಿಕೊಂಡಿರುವ ಮಣ್ಣು ಮತ್ತು ಸ್ಫಟಿಕ ಕಣಗಳ ಮಾದರಿಯ ಸೀರಿಯಲ್ ಡೈಲ್ಯೂಷನ್ಸ್ ಮಾಡಿ, ಪ್ರತ್ಯೇಕ ಡೈಲ್ಯೂಷನ್ಸ್‌ನ ($10^{-2}$, $10^{-3}$, $10^{-4}$), 0.1 ಮೀ.ಲಿ ಡೈಲ್ಯೂಷನ್ಸ್‌ನ್ನು ನ್ಯೂಟ್ರಿಯಂಟ್ ಅಗಾರ್ ಮೇಲೆ ಹರಡಿ, 37°ಸಿ. ಕಾವಿನಲ್ಲಿ 24 ಗಂಟೆಗಳ ಕಾಲ ಇರಿಸಲಾಯಿತು ಹಾಗೂ ಆಕೃತಿ ವಿಜ್ಞಾನದ ಮೂಲಕ ವೀಕ್ಷಿಸಿ, ವಿಶಿಷ್ಠ ಕಾಲೋನಿಗಳನ್ನು ಶುದ್ಧಪ್ರತ್ಯೇಕಗಳನ್ನು ಪಡೆಯಲು ನ್ಯೂಟ್ರಿಯಂಟ್ ಅಗಾರ್ ಮೇಲೆ ಸಬ್–ಕಲ್ಚರ್ ಮಾಡಲಾಯಿತು.

ಪರಿಶುದ್ಧವಾದ ಸೂಕ್ಷ್ಮಾಣುಜೀವಿಗಳನ್ನು ಸೂಕ್ಷ್ಮದರ್ಶಕದ ಮೂಲಕ ಗ್ರಾಮ್‌ಸ್ಟೈನ್ ಆದ ನಂತರ ಪರೀಕ್ಷಿಸಲಾಯಿತು. ಗ್ರಾಮ್ ಪಾಸಿಟೀವ್ ಕಾಲೋನಿಗಳನ್ನು ಮುಂದಿನ ಪ್ರಯೋಗಕ್ಕಾಗಿ, ನ್ಯೂಟ್ರಿಯಂಟ್ ಅಗಾರ್ ಮೇಲೆ ಸಬ್–ಕಲ್ಚರ್ ಮಾಡಲಾಯಿತು. ಈ ಪ್ರತ್ಯೇಕಿಸಿದ ಸೂಕ್ಷ್ಮಜೀವಾಣುವಿನ ಬ್ಯಾಕ್ಟೀರಿಯೋಸಿನ್ ಕ್ರಿಯಾಶೀಲತೆಯನ್ನು ಪರೀಕ್ಷಿಸಲು ಸಿಂಗಲ್ ಸ್ಟ್ರೀಕ್ ವಿಧಾನವನ್ನು 4 ರೋಗಕಾರಕ ಹಾಗೂ ಸೂಚಕ ಪ್ರತಿ ಸೂಕ್ಷ್ಮ ಜೀವಿಗಳ ಮೇಲೆ ಪ್ರಯೋಗಿಸಲಾಯಿತು. ಪ್ರತಿಬಂಧದ ಕ್ರಿಯಾಶೀಲತೆ ತೋರಿಸುವ ಸೂಕ್ಷ್ಮಜೀವಾಣುಗಳ ಕಾಲೋನಿ ಆಕೃತಿ ವಿಜ್ಞಾನ ಹಾಗೂ ಪ್ರತ್ಯೇಕ ಸೂಕ್ಷ್ಮಜೀವಿಗಳ ವಿನ್ಯಾಸವನ್ನು ಅಧ್ಯಯನ ಮಾಡಲಾಯಿತು. ಅನೇಕ ಮಧ್ಯಂತರ ಸಮಯಗಳಲ್ಲಿ ಪ್ರತ್ಯೇಕಿಸಿರುವ ಸೂಕ್ಷ್ಮಜೀವಾಣು ಹಾಗೂ ಸೂಚಕ ಸೂಕ್ಷ್ಮಜೀವಾಣುಗಳ ಪರಿಶುದ್ಧತೆಗಾಗಿ ಗ್ರಾಮ್ ಸ್ಟೈನ್ ಮತ್ತು ಆಕೃತಿ ವಿಜ್ಞಾನದ ಮೂಲಕ ದೃಢಪಡಿಸಲಾಯಿತು.

**ಸೂಕ್ಷ್ಮಾಣುಜೀವಿಗಳ ನಿರ್ವಹಣೆ ಮತ್ತು ವೃದ್ಧಿಪಡಿಸುವಿಕೆ :** ಸೂಕ್ಷ್ಮಾಣುಜೀವಿ ಹಾಗೂ ಸೂಚಕ ಸೂಕ್ಷ್ಮಾಣುಜೀವಿಗಳನ್ನು ಪರಿಶುದ್ಧತೆಯ ನಿರ್ವಹಣೆಗಾಗಿ TSA (ಟ್ರಿಪ್ಟಿಕೇಸ್‌ಸೊಯ್ ಅಗರ್) ಹಾಗೂ NA (ನ್ಯೂಟ್ರಿಯಂಟ್ ಅಗರ್) ಮೇಲೆ ಕ್ರಮವಾಗಿ ಸೀರಿಯಲ್ ಡೈಲ್ಯೂಷನ್ ಮಾಡಿದ ನಂತರ ಆಗಾಗ್ಗೆ ಮಧ್ಯಂತರ ಸಮಯದಲ್ಲಿ ಸ್ಟ್ರೀಕ್ ಮಾಡಲಾಯಿತು.

**ಪ್ರತಿರೋಧಕ ಕ್ರಿಯಾಶೀಲತೆಯ ಪ್ರಾಥಮಿಕ ಪರೀಕ್ಷೆ :** ಸ್ಟೆಫೈಲೋಕಾಕಸ್ ಆರಿಯಸ್ (ಎಸ್.ಆರಿಯಸ್), ಸಾಲ್ಮೋನೆಲ್ಲಾ ಟೈಫಿ (ಎಸ್.ಟೈಫಿ), ಸೂಡೋಮೋನಸ್ ಏರುಜೀನೋಸಾ (ಸು.ಏರುಜೀನೋಸಾ), ಎಸ್ಚರೀಶಿಯಾಕೋಲೈ (ಈ.ಕೋಲೈ) ರೋಗಕಾರಕ ಸೂಕ್ಷ್ಮಜೀವಾಣು ಗಳನ್ನು M.T.C.C. (ಮೈಕ್ರೋಬಿಯಲ್ ಟೈಪ್ ಕಲ್ಚರ್ ಕಲೆಕ್ಷನ್ ಸೆಂಟರ್), ಚಂಡೀಗಢದಿಂದ ತರಿಸಿ, MHA (ಮ್ಯೂಲರ್ ಹಿಂಟನ್ ಅಗರ್) ಗಳಲ್ಲಿ ಲಾನ್ ಕಲ್ಚರ್ ಮಾಡಲಾಯಿತು. ನಂತರ ಪ್ರತ್ಯೇಕಿಸಿರುವ ಸೂಕ್ಷ್ಮಾಣುಜೀವಿಗಳನ್ನು ಸಿಂಗಲ್ ಸ್ಟ್ರೀಕ್ ಮಾಡಿ 37° ಸಿ. ಕಾವಿನಲ್ಲಿ, 24 ಘಂಟೆಗಳ ಕಾಲ ಇರಿಸಿ, ಸ್ಪಷ್ಟವಾದ ಪ್ರತಿರೋಧಕ ವಲಯವನ್ನು ದಾಖಲಿಸಲಾಯಿತು.

**ಮಧ್ಯಂತರ ಪರೀಕ್ಷೆಗಳು :** 14 ಪ್ರತಿಬಂಧಕ ಸಕ್ರಿಯವಾದ ಸೂಕ್ಷ್ಮಜೀವಾಣುಗಳ ಕಣಸಾಂದ್ರತೆಯನ್ನು 0.5 ಮೆಕ್‌ಫರ್‌ಲ್ಯಾಂಡ್ ಸ್ಟ್ಯಾಂಡರ್ಡ್ ಪಟ್ಟಿ ಪ್ರಕಾರ ಮೂರು ಬಾರಿ ಪುನರಾವರ್ತಿಸಲಾಯಿತು.

ರೋಗಕಾರಕ ಸಕ್ರಿಯತೆಯನ್ನು ಪರೀಕ್ಷಿಸಲು ಬ್ಲಡ್ ಅಗರ್ ಮೇಲೆ 14 ಪ್ರತಿಬಂಧಕ ಸೂಕ್ಷ್ಮಾಣುಜೀವಿಗಳನ್ನು ಸ್ಟ್ರೀಕ್ ಮಾಡಿ 37° ಸಿ. ಕಾವಿನಲ್ಲಿ 24 ಘಂಟೆಗಳ ಕಾಲ ಇರಿಸಲಾಯಿತು.

**ಜೀವರಾಸಾಯನಿಕ ಪರೀಕ್ಷೆಗಳು :** ಪ್ರತ್ಯೇಕಿಸಿರುವ ಸೂಕ್ಷ್ಮಾಣು ಜೀವಿಯ ಕುಲ(ಜೀನಸ್) ಮತ್ತು ಜಾತಿಯನ್ನು (ಸ್ಪೀಷೀಸ್) ಬರ್ಗಿಸ್ ಮ್ಯಾನುಯಲ್ ಆಫ್ ಬ್ಯಾಕ್ಟೀರಿಯಾಲಜಿ ಆಧಾರದ ಮೇಲೆ ಇಂಡೋಲ್ ಪ್ರೊಡಕ್ಷನ್, ಮೀಥೈಲ್ ರೆಡ್ ರಿಡಕ್ಷನ್, ಓಗ್ಸ್ ಪ್ರಾಸ್ಕರ್ ಪರೀಕ್ಷೆ, ಸಿಟ್ರೇಟ್ ಯುಟಿಲೈಶೇಷನ್, ಕೆಟಲೇಸ್ ಪ್ರೊಡಕ್ಷನ್, ಸ್ಟಾರ್ಚ್ ಹೈಡ್ರಾಲಿಸಿಸ್, ಯೂರಿಯೇಸ್ ಪ್ರೊಡಕ್ಷನ್, ಆಕ್ಸಿಡೇಸ್ ರಿಡಕ್ಷನ್, ಜೆಲೆಟಿನ್ ಹೈಡ್ರಾಲಿಸಿಸ್, ಹೈಡ್ರೋಜನ್ ಸಲ್ಫೈಡ್ ಪ್ರೊಡಕ್ಷನ್, ಕೆಸಿನ್ ಹೈಡ್ರಾಲಿಸಿಸ್ ಪರೀಕ್ಷೆಗಳು ಹಾಗೂ ಗ್ಲೂಕೋಸ್ ಹುದುಗುವಿಕೆ, ಫ್ರಕ್ಟೋಸ್ ಹುದುಗುವಿಕೆ, ಮ್ಯಾನೋಸ್ ಹುದುಗುವಿಕೆ, ಗ್ಯಾಲ್ಕಟೋಸ್ ಹುದುಗುವಿಕೆ, ಲ್ಯಾಕ್ಟೋಸ್ ಹುದುಗುವಿಕೆಗಳನ್ನು ಪರೀಕ್ಷಿಸಲಾಯಿತು.

**16s rRNA ಸೀಕ್ವೆನ್ಸಿಂಗ್:** ಪ್ರತ್ಯೇಕಿಸಿದ ಸ್ಟ್ರೈನ್‌ನನ್ನು ಪತ್ತೆ ಹಚ್ಚಲು ಜೀನೋಮ್ ಬಯ್ಯೋಸ್, ಪೂನಾದಲ್ಲಿ 16s rRNA ಕನ್ಸರ್ವ್ಡ್ ಜೀನೋಮ್ ಸೀಕ್ವೆನ್ಸಿಂಗ್ ಮಾಡಲಾಯಿತು. ಈ ವಿಧಾನವು ಸೂಕ್ಷ್ಮಾಣುಜೀವಿಗಳ ಸ್ಟ್ರೈನ್ ಕಂಡು ಹಿಡಿಯಲು ಅತ್ಯಂತ ವಿಶ್ವಾಸಾರ್ಹ ಹಾಗೂ ನಿಖರ ವಿಧಾನವಾಗಿದೆ.

**ಫಲಿತಾಂಶಗಳು**

ಸುಮಾರು 32 ವಿಧವಾದ ಮಾದರಿಗಳಿಂದ 347 ಸೂಕ್ಷ್ಮಜೀವಾಣುಗಳ ಜೀವಿ ಪ್ರಭೇಧಗಳನ್ನು ಗಳಿಸಲಾಯಿತು. ಈ ಕೆಳಕಂಡ ಪಟ್ಟಿ ನಂ1 ರಲ್ಲಿ ಇದನ್ನು ತೋರಿಸಲಾಗಿದೆ.

| ಕ್ರ.ಸಂ | ಮಾದರಿಗಳು | ಸೂಕ್ಷ್ಮ ಜೀವಾಣುಗಳ ಸಂಖ್ಯೆ |
|---|---|---|
| 1 | ಮೊಸರು | 11 |
| 2 | ಇಡ್ಲಿ ಹಿಟ್ಟು | 14 |
| 3 | ದ್ರಾಕ್ಷಾರಸ | 11 |
| 4 | ಸಗಣಿ | 7 |
| 5 | ಇರುವೆ ಗೂಡಿನ ಮಣ್ಣು | 8 |
| 6 | ಕಸದ ತೊಟ್ಟಿ ಮಣ್ಣು | 9 |
| 7 | ಮೈಸೂರಿನ ಮಣ್ಣು | 15 |
| 8 | ಯೂನಿವರ್ಸಿಟಿಯ ಮಣ್ಣು | 13 |
| 9 | ಹಸಿಹಾಲು | 7 |
| 10 | ಮಿಶ್ರಿತ ಹಣ್ಣಿನ ರಸ | 8 |
| 11 | ಲಸ್ಸಿ | 11 |
| 12 | ತಾಯಿಯ ಎದೆ ಹಾಲು | 5 |
| 13 | ಮಗುವಿನ ಮಲ | 13 |
| 14 | ಮಜ್ಜಿಗೆ | 17 |
| 15 | ಚೀಸ್ | 6 |
| 16 | ಕಾವೇರಿ ನೀರು | 11 |
| 17 | ಮಿಶ್ರಿತ ಮಣ್ಣಿನ ನೀರು | 32 |
| 18 | ಹಸುವಿನ ಗಂಜಲ | 8 |
| 19 | ಸೀಬೆ ಮರದ ಮಣ್ಣು | 24 |
| 20 | ಬೆಲ್ಲ | 0 |
| 21 | ಮಸಾಲೆ ಪುರಿ | 9 |
| 22 | ಚಪಾತಿ ಹಿಟ್ಟು | 6 |
| 23 | ಪೈನಾಪಲ್ ರಸ | 12 |
| 24 | ವೈನ್ | 11 |
| 25 | ದೋಸೆ ಹಿಟ್ಟು | 15 |
| 26 | ಕೋಳಿಯ ಕರುಳು | 11 |
| 27 | ಆ್ಯಂಬರ್ ಕಲ್ಲು | 10 |
| 28 | ಮುತ್ತು | 15 |
| 29 | ಸ್ಪಟಿಕ ಕಲ್ಲು | 3 |
| 30 | ಗೋಮತಿ ಚಕ್ರ ಕಲ್ಲು | 12 |
| 31 | ನೀಲಿ ಕಯನೈಟ್ ಕಲ್ಲು | 4 |
| 32 | ಲಾಪಿಸ್ ಲಝೂಲಿ ಕಲ್ಲು | 6 |

**ವಿವಿಧ ಜಾಗಗಳಿಂದ ವಿಧ ವಿಧವಾದ ಮಾದರಿಗಳನ್ನು ಪ್ರತ್ಯೇಕಿಸಿದ ಪಟ್ಟಿ**

14 ಪ್ರತ್ಯೇಕಿಸಿರುವ ಸೂಕ್ಷ್ಮಜೀವಾಣುಗಳು ಪ್ರತಿರೋಧಕ ಕ್ರಿಯಾಶೀಲತೆಗಳನ್ನು ಪ್ರದರ್ಶಿಸಿದವು. ಈ ಅಧ್ಯಯನದಲ್ಲಿ ಬಳಸಿರುವ ಸೂಕ್ಷ್ಮಜೀವಿಯನ್ನು ಸ್ಪಟಿಕ ಕಲ್ಲಿನಿಂದ ಪ್ರತ್ಯೇಕಿಸಲಾಗಿದೆ. ಕಾಲೋನಿ ಸೂಕ್ಷ್ಮಾಣು ಜೀವಿಗಳ ಗುಣ ಲಕ್ಷಣಗಳನ್ನು ಚಿತ್ರ 1 ರಲ್ಲಿ ತೋರಿಸಲಾಗಿದೆ.



**ಚಿತ್ರ 1 : ಮಾದರಿಯ ಗುಂಪುಲಕ್ಷಣಗಳು**



**ಪ್ರತಿಬಂಧಿತ ಕ್ರಿಯಾಶೀಲತೆಯನ್ನು ವಿವಿಧ ರೋಗಕಾರಕ ಸೂಕ್ಷ್ಮಾಣು ಜೀವಿಗಳ ವಿರುದ್ಧ ಪ್ರತ್ಯೇಕಿಸಿದ ಸೂಕ್ಷ್ಮಜೀವಾಣು 1ರ ಪರೀಕ್ಷಿಸಿರುವ ಚಿತ್ರ 2.**

ಗಮನಿಸಿರುವ ಕುತೂಹಲಕಾರಿ ವಿಚಾರವೇನೆಂದರೆ, ಪ್ರತ್ಯೇಕಿಸಲ್ಪಟ್ಟ ಸೂಕ್ಷ್ಮಾಣು ಜೀವಿ ನಂ.1 ರೋಗಕಾರಕವಾದ 8 ಸೂಕ್ಷ್ಮಾಜೀವಾಣುಗಳ ವಿರುದ್ಧ ಪ್ರತಿರೋಧಕ ಕ್ರಿಯಾಶೀಲತೆಯನ್ನು ಪ್ರದರ್ಶಿಸುತ್ತದೆ. ಇದರಿಂದ ಅದರ ಸಾಮರ್ಥ್ಯ ಹಾಗೂ ಪ್ರಾಮುಖ್ಯತೆಯು ಪ್ರದರ್ಶಿಸಲ್ಪಟ್ಟಿದೆ. ಚಿತ್ರ 3

| ಸೂಕ್ಷ್ಮ ಜೀವಾಣು | ಪ್ರತಿಬಂಧಕ ವಲಯ (ಮೀ.ಮೀ)ನಲ್ಲಿ |
|---|---|
| ಈ.ಕೋಲೈ | 14 |
| ಬಿ.ಸೆಬ್‌ಟಿಲಿಸ್ | 15 |
| ಎಸ್.ಆರಿಯಸ್ | 14 |
| ಎಸ್.ಮ್ಯುಟನ್ಸ್ | 10 |
| ಲಿ.ಮೋನೋಸೈಟೋಜೀನ್ಸ್ | 12 |
| ಎಸ್.ಟೈಫಿ | 8 |
| ಕೆ.ನಿಮೊನಿಯ | 11 |
| ಎಸ್. ಮಾರಿಷಿಸನ್ಸ್ | 12 |
| ಸು. ಏರುಜಿನೋಸಾ | 13 |
| ಸಿ.ಪರ್‌ಫ್ರಿನ್‌ಜೀನ್ಸ್ | 0 |

**ಚಿತ್ರ 3 ರೋಗಕಾರಕ ಸೂಕ್ಷ್ಮ ಜೀವಾಣುವಿನ ಮೇಲೆ ಪ್ರತ್ಯೇಕಿಸಲ್ಪಟ್ಟ ಸೂಕ್ಷ್ಮ ಜೀವಾಣು 1ರ ಪ್ರತಿಬಂಧಕ ವಲಯದ ಕ್ರಿಯಾಶೀಲತೆ – ಪಟ್ಟಿ 3**





**ಪ್ರತ್ಯೇಕಿಸಲ್ಪಟ್ಟ ಸೂಕ್ಷ್ಮ ಜೀವಾಣು 1 ರ ಗ್ರಾಮ್‌ಸ್ಟೈನಿಂಗ್ (ಗ್ರಾಮ್ ಪಾಸಿಟಿವ್ ಕಾಕೈ ಗುಂಪಿನಲ್ಲಿ) ಮತ್ತು ಸ್ಫಟಿಕ ಕಲ್ಲು ಚಿತ್ರ 4.**

**ಜೀವರಾಸಾಯನಿಕ ಫಲಿತಾಂಶ**

| ಪರೀಕ್ಷೆ | ಫಲಿತಾಂಶ |
|---|---|
| ಇಂಡೋಲ್ ಪ್ರೊಡಕ್ಷನ್ | – |
| ಓಗ್ಸ್ ಪ್ರಾಸ್ಕರ್ಸ್ ಪರೀಕ್ಷೆ | – |
| ಕ್ಯಾಟಲೇಸ್ ಪ್ರೊಡಕ್ಷನ್ | + |
| ಯುರಿಯಸ್ ಪ್ರೊಡಕ್ಷನ್ | – |
| ಕೆಸಿನ್ ಹೈಡ್ರಾಲಿಸಿಸ್ | – |
| ಫ್ರಕ್ಟೋಸ್ ಫರ್ಮೆಂಟೇಷನ್ | + |
| ಗ್ಯಾಲ್ಕಟೋಸ್ ಫರ್ಮೆಂಟೇಷನ್ | + |
| ಲ್ಯಾಕ್ಟೋಸ್ ಫರ್ಮೆಂಟೇಷನ್ | – |
| ಹಿಮೋಲಿಸಿಸ್ | – |
| ಮೀಥೈಲ್ ರಿಡಕ್ಷನ್ | – |
| ಸಿಟ್ರೇಟ್ ಯುಟಿಲೈಸೇಷನ್ | + |
| ಸ್ಟಾರ್ಚ್ ಹೈಡ್ರಾಲಿಸಿಸ್ | – |
| ನೈಟ್ರೇಟ್ ರಿಡಕ್ಷನ್ | – |
| ಗ್ಲೂಕೋಸ್ ಫರ್ಮೆಂಟೇಷನ್ | + |
| ಮ್ಯಾನೋಸ್ ಫರ್ಮೆಂಟೇಷನ್ | + |
| ಆಕ್ಸಿಡೈಸ್ ಪ್ರೊಡಕ್ಷನ್ | + |
| ಜೆಲೆಟಿನ್ ಹೈಡ್ರಾಲಿಸಿಸ್ | – |

**ಸೂಕ್ಷ್ಮ ಜೀವಾಣು 1ರ ಜೀವರಾಸಾಯನಿಕ ಫಲಿತಾಂಶ – ಪಟ್ಟಿ 3**

ಈ ಎಲ್ಲಾ ಜೀವರಾಸಾಯನಿಕ ಪರೀಕ್ಷೆಯ ಫಲಿತಾಂಶಗಳಿಂದ ಪ್ರತ್ಯೇಕಿಸಲ್ಪಟ್ಟ ಸೂಕ್ಷ್ಮ ಜೀವಾಣು 1 ಸ್ಟಫೈಲೋಕಾಕಸ್ ಆರಿಯಸ್ ಎಂದು ಊಹಿಸಲಾಗಿದೆ.

**16s rRNA ಸೀಕ್ವೆನ್ಸಿಂಗ್ :** ಜೀನೋಮ್ ಬಯೋಸ್, ಪೂನಾದಲ್ಲಿ ನಡೆಸಿದ 16s rRNA ಕನ್ಸರ್ವ್ಡ್ ಜೀನೋಮ್ ಸೀಕ್ವೆನ್ಸಿಂಗ್ ಪ್ರಕಾರ ಇದು ಪ್ರತ್ಯೇಕಿಸಲ್ಪಟ್ಟ ಸೂಕ್ಷ್ಮಜೀವಾಣು 1 ಸ್ಟಫೈಲೋಕಾಕಸ್ ಆರಿಯಸ್ ಸ್ಟ್ರೈನ್ YT-2 ಎಂದು ನಿಖರವಾಗಿ ಫಾಸ್ಟಾ ಫಾರ್ಮಾಟ್ ಡೇಟಾಮೂಲದ ಮೂಲಕ ಶತಪ್ರತಿಶತ ದೃಢೀಕರಿಸಲಾಯಿತು. ಅದರ **rRNA ಸೀಕ್ವೆನ್ಸ್** ಈ ಕೆಳಕಂಡಂತಿದೆ.

>3175
GCGTGCTAATACATGCAAGTCGAGCGAACGGACGAG
AAGCTTGCTTCTCTGATGTTAGCGGCGGACGGGTGAGTAAC
ACGTGGATAACCTACCTATAAGACTGGGATAACTTCGGGA
AACCGGAGCTAATACCGGATAATATTTTGAACCGCATGGT
TCAAAAGTGAAAGACGGTCTTGCTGTCACTTATAG
ATGGATCCGCGCTGCATTAGCTAGTTGGTAAGGTAACGGCTTA
CCAAGGCAACGATGCATAGCCGACCTGAGAGGGTGA
TCGGCCACACTGGAACTGAGACACGGTCCA
GACTCCTACGGGAGGCAGCAGTAGGGAATCTTCCGCAA
TGGGCGAAAGCCTGACGGAGCAACGCCGCGTGA
GTGATGAAGGTCTTCGGATCGTAAAACTCTGTTATTA
GGGAAGAACATATGTGTAAGTAACTGTGCACATCTTGACG
GTACCTAATCAGAAAGCCACGGCTAACTACGTGCCAGCA
GCCGCGGTAATACGTAGGTGGCAAGCGTTATCCGGA
ATTATTGGGCGTAAAGCGCGCGTAGGCGGTTTTT
TAAGTCTGATGTGAAAGCCCACG
GCTCAACCGTGGAGGGTCATTGGAAACTGGAAAACT
TGAGTGCAGAAGAGGAAAGTGGAATTCCATGTGTA
GCGGTGAAATGCGCAGA
GATATGGAGGAACACCAGTGGCGAAGGCGAC.

**ಚರ್ಚೆ :** ನೈಸರ್ಗಿಕ, ಪರಿಣಾಮಕಾರಿ ಆಹಾರ ಸಂರಕ್ಷಣೆಗಾಗಿ ಹಾಗೂ ಇಂದಿನ ಬೆಳೆಯುತ್ತಿರುವ ಗ್ರಾಹಕ ಬೇಡಿಕೆಗಳಿಗಾಗಿ, ರಾಸಾಯನಿಕ

ಸಂರಕ್ಷಣೆಗಳ ಪರ್ಯಾಯ ಮಾರ್ಗವನ್ನು ಉತ್ತೇಜಿಸಲಾಗಿದೆ. ಜೈವಸಂರಕ್ಷಕಗಳಲ್ಲಿ ಬ್ಯಾಕ್ಟೀರಿಯೋಸಿನ್ ಒಂದು ಕಡಿಮೆ ಅಣುತೂಕದ ಸಸಾರಜನಕ ಪದಾರ್ಥವಾಗಿದ್ದು ಸೂಕ್ಷ್ಮಾಣುಜೀವಿ ಮೂಲಕ ಸ್ರವಿಸಲ್ಪಟ್ಟಿರುವ ಪದಾರ್ಥವು. ಇದು ಅತ್ಯಂತ ಗಮನಾರ್ಹ ವಿಷಯವಾಗಿದೆ. ಏಕೆಂದರೆ, ಅದು ಗ್ರಾಸ್ (ಜನರಲಿ ರಿಗಾರ್ಡೆಡ್ ಆ್ಯಸ್ ಸೇಫ್) ಸರದಿಯಲ್ಲಿ ಒಳಗೊಂಡಿದೆ (4).

ಹೊಟ್ಟೆಯಲ್ಲಿನ ಜೀರ್ಣಕಾರಿ ಕಿಣ್ವಗಳಿಂದ ನಿಷ್ಕ್ರಿಯಗೊಳ್ಳುವುದರಿಂದ ಬ್ಯಾಕ್ಟ್ರೀರಿಯೋಸಿನ್‌ನ ಸೇವನೆ ಯೋಗ್ಯವೇ ಆಗಿದೆ. (5) ನೈಸರ್ಗಿಕವಾಗಿ ಪ್ರತಿಯೊಂದು ಸೂಕ್ಷ್ಮಜೀವಾಣುವು ಬ್ಯಾಕ್ಟ್ರೀರಿಯೋಸಿನ್ ಅನ್ನು ಸ್ರವಿಸುವ ಸಾಮರ್ಥ್ಯ ಹೊಂದಿದೆ. (6) ಆದರೆ ಇದು ಇನ್ನೂ ವೈಜ್ಞಾನಿಕ ದೃಷ್ಟಿಕೋನದಲ್ಲಿ ಬಾಲ್ಯದ ಹಂತದಲ್ಲೇ ಇದೆ. ಇದುವರೆವಿಗೂ ನಿಸಿನ್ ಎಂಬುವ ಒಂದೇ ಒಂದು ಬ್ಯಾಕ್ಟ್ರೀರಿಯೋಸಿನ್‌ಅನ್ನು ಎಫ್.ಡಿ.ಎ. ಮೂಲಕ ಆಹಾರ ಸಂರಕ್ಷಕವೆಂದು ಪರಿಗಣಿಸಿ, ಜಗತ್ತಿನಾದ್ಯಂತ ವಾಣಿಜ್ಯ ಮಟ್ಟದಲ್ಲಿ ಆಹಾರ ಉದ್ಯಮದ ಮೂಲಕ ಬಿಡುಗಡೆಗೊಳಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಪ್ರತ್ಯೇಕಿಸಲ್ಪಟ್ಟ ಸೂಕ್ಷ್ಮಜೀವಾಣು 1, ಸ್ಟಫೈಲೋಕಾಕಸ್ ಆರಿಯಸ್ ಸ್ಟ್ರೈನ್ YT-2 ಆಗಿದ್ದು ಅದು ರೋಗಕಾರಕವಲ್ಲದ ಸೂಕ್ಷ್ಮಜೀವಾಣು. ಏಕೆಂದರೆ ಬ್ಲಡ್ ಅಗರ್ ನಲ್ಲಿ ಯಾವುದೇ ತರಹದ ಹೀಮೋಲಿಸಿಸ್ ಇಲ್ಲದಿರುವುದು. ಆದುದರಿಂದ ಆಹಾರ ಮತ್ತು ಔಷಧಿ ಉದ್ಯಮಗಳಲ್ಲಿ ಇದು ಹೊಸದಾದ ದೃಷ್ಠಿಕೋನವನ್ನು ಸೃಷ್ಠಿಸಿದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರತಿಜೀವಕ ಔಷಧಿಗಳನ್ನು ಉಪಯೋಗಿಸುವುದರಿಂದ ರೋಗಕಾರಕ ಸೂಕ್ಷ್ಮಜೀವಾಣುಗಳು ಹಲವು ಔಷಧಗಳ ಪ್ರತಿರೋಧಕ ಶಕ್ತಿಯನ್ನು ಹೊಂದಿದ್ದು ರೋಗದ ಸೋಂಕನ್ನು ತಡೆಗಟ್ಟಲಾಗುತ್ತಿಲ್ಲ (7). ಹಾಗಾಗಿ ಬ್ಯಾಕ್ಟ್ರೀರಿಯೋಸಿನ್‌ನ್ನು ಪ್ರತಿರೋಧಕ ಔಷಧಿಗಳೊಂದಿಗೆ ಅಳವಡಿಸುವ ಪ್ರಯತ್ನವನ್ನು ಮಾಡಬಹುದಾಗಿದೆ.

**ಭವಿಷ್ಯದ ದೃಷ್ಟಿಕೋನ :** ಸ್ಟಫೈಲೋಕಾಕಸ್ ಆರಿಯಸ್ ನಿಂದ ಬ್ಯಾಕ್ಟ್ರೀರಿಯೋಸಿನ್ ಅಂತಹ ಆಹಾರ ಸಂರಕ್ಷಕದ ಗರಿಷ್ಠ ಉತ್ಪಾದನೆಗಾಗಿ, ಪೌಷ್ಟಿಕಾಂಶದ ಉತ್ತಮಗೊಳಿಸುವಿಕೆ, ಪ್ರೇರಕವಸ್ತುಗಳು, ಲೋಹದ ಅಯಾನ್ಸ್‌ಗಳ ಬಳಸುವಿಕೆ ಹಾಗೂ ಬ್ಯಾಕ್ಟ್ರೀರಿಯೋಸಿನ್‌ನ ಸ್ಥಿರತೆ/ಬಡು.ಅವಧಿ ಯನ್ನು ಹೆಚ್ಚಿಸುವಿಕೆ ಮುಂತಾದವುಗಳನ್ನು ಮುಂದಿನ ಅಧ್ಯಯನದಲ್ಲಿ ಕೈಗೊಳ್ಳಬೇಕಾಗಿದೆ.

**ಉಲ್ಲೇಖಗಳು :**

1. ಗ್ರೇಷಿಯಾ ಎ (1925) " ಸರ್ ಅನ್ ರಿರ್ಮಾಕ್ಯುಬಲ್ ಎಕ್ಸಾಮ್ಪಲ್ ಡಿ ಆನ್ಟೋಗಾನಿಸಮ್ ಎನ್ಟ್ರೇ ಡೆಕ್ಸ್ ಶೌಚಸ್ಸ ಡೆ ಕೊಲಿಬೆಸಿಲೆ" ಕಾಂಪ್ಯಾಕ್ಟ್.ರೆಂಡ್. ಸೋ.ಬಯೋಲ್.93: 1040–2
2. ಗ್ರೇಷಿಯಾ ಜೆಪಿ (ಅಕ್ಟೋಬರ್ 2000) " ಅಂಡ್ರೆ ಗ್ರೇಷಿಯ : ಎ ಫೋರ್ ರನ್ನರ್ ಇನ್ ಮೈಕ್ರೋಬಿಯಲ್ ಎಂಡ್ ವೈರಲ್ ಜೆನೆಟಿಕ್ಸ್" ಜೆನೆಟಿಕ್ಸ್ 156 (2) ; 471–6 ಪಿಎಂಸಿ 1461273. ಪಿಎಂಐಡಿ 11014798
3. ಕ್ಯಾಸ್‌ಸ್ಕೇಲ್ಸ್ ಇ. ಬುಚನನ್ ಎಸ್‌ಕೆ. ಡಚೆ ಡಿ ಈಟಿ ಎಲ್ (ಮಾರ್ಚ 2007). "ಕಾಲಿಸಿನ್ ಬಯಾಲಜಿ" ಮೈಕ್ರೋಬಿಯಲ್. ಮಾಲ್ ಬಿಯಲ್ ರೆವ. 71 (1) : 158–229. ಡಿಓಐ: 10.1128/ ಎಂ.ಎಂ.ಬಿಆರ್.00036–06.ಪಿಎಂಸಿ 1847374 ಪಿಎಂಐಡಿ 17347522.
4. ಎಂ.ಆಹೆರನ್, ಎಸ್ ವರ್ಸಚುಯರನ್ ಡಿ. ವ್ಯಾನ್ ಸಿನ್‌ಡೆರನ್ ಐಸೋಲೇಷನ್ ಅಂಡ್ ಕ್ಯಾರ್ಕ್ಟರೈಸೇಷನ್ ಆಫ್ ಎ ನಾವೆಲ್ ಬ್ಯಾಕ್ಟ್ರಿರಿಯೋಸಿನ್ ಪ್ರಡ್ಯೂಸ್ಡ್ ಬೈ ಬ್ಯಾಸಿಲಸ್ ಥುರಿಂಜಿಯನ್ಸಿಸ್. ಥರೋನಿಜಿನಿಸಿಸ್ ಸ್ಟ್ರೈನ್ ಬಿ439, ಫಿಯಿಎಂಎಸ್ ಮೈಕ್ರೋಬಿಯಲ್. ಲೆಟಿಟ್. 220 (2000) 127–131.
5. ಜೆ. ಕ್ಲೇವ್ ಲ್ಯಾಂಡ್ ಟಿ.ಜೆ. ಮಾಂಟಿವಿಲ್ಲೆ, ಐ.ಎಫ್. ಎನ್‌ಇಎಸ್, ಎಂ.ಎಲ್ ಚಿಕಿನಿದಾಸ್ ಬ್ಯಾಕ್ಟ್ರೀರಿಯೋಸಿನ್ ಸೇಫ್, ನ್ಯಾಚುರಲ್ ಆ್ಯಂಟಿಮೈಕ್ರೋಬಿಯಲ್ಸ್ ಫಾರ್ ಫುಡ್ ಪ್ರಿಸರ್ವೇಶನ್, ಇಂಟ್. ಜೆ. ಫುಡ್ ಮೈಕ್ರೋಬಿಯಲ್ 71 (2001) 1–20
6. ಎನ್. ಶರ್ಮ, ಜಿ. ಕಪೂರ್, ಬಿ. ನಿಯೋಪಾನೆ, ಕ್ಯಾರ್ಕ್ಟರೈಸೇಷನ್ ಆಫ್ ಎ ನ್ಯೂ ಬ್ಯಾಕ್ಟ್ರೀರಿಯೋಸಿನ್ ಪ್ರಡ್ಯೂಸ್ಡ್ ಫ್ರಮ್ ಎ ನಾವೆಲ್ ಐಸೋಲೇಟೆಡ್ ಸ್ಟ್ರೈನ್ ಆಫ್ ಬ್ಯಾಸಿಲಸ್ ಲೆನ್‌ಟಸ್ ಎನ್‌ಜಿ121, ಅಂಟೋನಿ ವ್ಯಾನ್ ಲ್ಯುವನ್‌ಹುಕ್, 89 (2006) 337–343
7. ಸ್ನೈಡರ್, ಜೆಡಬ್ಲ್ಯು, ಮೆಕ್ ಡೋನಾಲ್ಡ್ ಎಲ್‌ಸಿ, ವ್ಯಾನ್ ಎನ್‌ಕ್ ಆರ್. 2000 ಕಾಮನ್ ಬ್ಯಾಕ್ಟೀರಿಯ ಹೂಸ್ ಸಸ್ಟಬಿಲಿಟಿ ಟು ಆಂಟಿಮೈಕ್ರೋಬಿಯಲ್ಸ ಈಸ್ ನೋಲಾಂಗರ್ ಪ್ರಿಡಕ್ಟಬಿಲ್. ಲೆಬಾನ್ ಮೆಡ್ ಜೆ., 48; 208–214.

## ಪಾರ್ಮೋಟ್ರಿಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಕಲ್ಲು ಹೂಗಳ ವಿವಿಧ ದ್ರಾವಕ ಸಾರಗಳ ಜೀವ ವಿರೋಧಿ ಅಧ್ಯಯನ

ಸ್ವಾಮಿ ಸಿ.ಟಿ. ಮತ್ತು ದೇವರಾಜ ಗಾಯತ್ರಿ*
ಸೂಕ್ಷ್ಮಜೀವಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ–577002 *gayathridevaraja@gmail.com,

ಕಲ್ಲು ಹೂಗಳು ಶಿಲೀಂದ್ರ ಪಾಚಿ/ನೀಲಿ ಹಸಿರು ಬ್ಯಾಕ್ಟೀರಿಯಾ, ಬ್ಯಾಕ್ಟೀರಿಯಾ, ಆರ್ಕಿಬ್ಯಾಕ್ಟೀರಿಯಾ ಮತ್ತು ವೈರಸ್‌ಗಳನ್ನು ಹೊಂದಿರುವ ಸಂಯೋಗ ಜೀವಿ. ಜೈವಿಕವಾಗಿ ಅನನ್ಯ ಮತ್ತು ಕ್ರಿಯಾಶೀಲವಾದ ಹಲವಾರು ದ್ರವ್ಯಗಳು ಕಲ್ಲು ಹೂವಿನಲ್ಲಿರುವುದರಿಂದ ವೈದ್ಯಕೀಯ ವಲಯದಲ್ಲೂ ಸಹ ಕಲ್ಲು ಹೂಗಳನ್ನು ಬಳಸುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಕಲ್ಲು ಹೂಗಳನ್ನು ಚಿತ್ರದುರ್ಗದ ಕೋಟೆ ಆವರಣದಲ್ಲಿರುವ ಬಂಡೆಗಳ ಮೇಲಿನಂದ ಸಂಗ್ರಹಿಸಿ ಸೂರ್ಯನ ಶಾಖದಲ್ಲಿ ಒಣಗಿಸಿ ತದನಂತರ ಶುಷ್ಕವಾಗಿ ಸಂರಕ್ಷಿಸಲಾಯಿತು. ಸಂರಕ್ಷಿಸಿದ ಕಲ್ಲು ಹೂಗಳಲ್ಲಿ ಪಾರ್ಮೋಟ್ರಿಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಗಳನ್ನು ಜೀವವಿರೋಧಿ ಅಧ್ಯಯನಕ್ಕೆ ಬಳಸಲಾಯಿತು. ಪಾರ್ಮೋಟ್ರಿಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಗಳನ್ನು ಶುಭ್ರಗೊಳಿಸಿ, ಒಣಗಿಸಿ, ಪುಡಿಮಾಡಿ ವಿವಿಧ ದ್ರಾವಕಗಳಾದ

ಮೆಥನಾಲ್, ಎಥನಾಲ್, ಕ್ಲೋರೋಫಾರ್ಮ್, ಅಸಿಟೋನ್ ಮತ್ತು ಜಲೀಯ ದ್ರಾವಕಗಳಲ್ಲಿ ಚೆನ್ನಾಗಿ ಕಲಕಿ ಸಾರವನ್ನು ತೆಗೆಯಲಾಯಿತು. ನಂತರ ಅಗಾರ್ ಗುಂಡಿ ವಿಧಾನ ಮತ್ತು ಡಿಸ್ಕ್ ಪ್ರಸರಣ ವಿಧಾನಗಳನ್ನು ಬಳಸಿ ಕಲ್ಲು ಹೂಗಳ ದ್ರಾವಕ ಸಾರಗಳು ಏಳು ಮಾನವ ರೋಗಕಾರಕ ಬ್ಯಾಕ್ಟೀರಿಯಾಗಳ (MTCC Cultures, IMTECH Chandigarh) ಬೆಳವಣಿಗೆಯನ್ನು ತಡೆಗಟ್ಟುವ ಅಧ್ಯಯನ ನಡೆಸಿ, ದ್ರಾವಕ ಸಾರಗಳ ಜೀವವಿರೋಧಿ ಗುಣಗಳನ್ನು ದಾಖಲಿಸಲಾಯಿತು. ಜಲೀಯ ಸಾರವನ್ನು ಹೊರತುಪಡಿಸಿ ಉಳಿದ ಎಲ್ಲಾ ಸಾರಗಳು ಪ್ರತಿಬಂಧ ವಲಯವನ್ನು ತೋರಿಸಿದವು. ಪ್ರಮುಖವಾಗಿ ಪಿಕ್ಸಿನ್ ಸೊರೆಡಿಯಾಟದ ಎಥನಾಲ್ ಸಾರ ಅತೀ ಹೆಚ್ಚು ಮತ್ತು ಕ್ಲೋರೋಫಾರ್ಮ್ ಸಾರ ಅತೀ ಕಡಿಮೆ ಪ್ರತಿಬಂಧ ವಲಯವನ್ನು ತೋರ್ಪಡಿಸಿದ್ದವು, ಹಾಗೆಂಯೇ ಪಾರ್ಮೋಟ್ರೆಮಾ ಟಿಂಕ್ಟೋರಮ್‌ನ ಅಸಿಟೋನ್ ಸಾರ ಅತೀ ಹೆಚ್ಚು ಮತ್ತು ಮೆಥೆನಾಲ್‌ನ ಸಾರವು ಕಡಿಮೆ ಪ್ರತಿಬಂಧ ವಲಯವನ್ನು ತೋರ್ಪಡಿಸಿದ್ದವು. ಜೀವ ವಿರೋಧಿ ಗುಣವು ಪ್ರಮುಖವಾಗಿ ಕಲ್ಲು ಹೂಗಳಲ್ಲಿರುವ ದ್ವಿತೀಯ ಚಯಾಪಚಯ (Secondary metabolites) ಗಳಿಂದಲೇ ಆಗುತ್ತದೆ, ಹಾಗಾಗಿ ಈ ದ್ವಿತೀಯ ಚಯಾಪಚಯಗಳನ್ನು ತೆಳು ಪದರ ವರ್ಣರೇಖನ (Thin Layer Chromatography) ವಿಧಾನದಿಂದ ವಿಭಾಗಿಸಿ ಗುರುತಿಸಲಾಯಿತು. ಪಾರ್ಮೋಟ್ರೆಮಾ ಟಿಂಕ್ಟೋರಮ್‌ನಲ್ಲಿ ಪ್ರಮುಖವಾಗಿ ಅಟ್ರನಾರಿನ್ ಮತ್ತು ಲೆಕನೋರಿಕ್ ಆಸಿಡ್‌ಗಳಿದ್ದರೆ, ಪಿಕ್ಸಿನ್ ಸೊರೆಡಿಯಾಟದಲ್ಲಿ ನಾರಸ್ಟಿಕ್ಟಿಕ್ ಆಸಿಡ್ ಮತ್ತು ಟ್ರೈಟರ್ಪೀನ್‌ಗಳು ಕಂಡುಬಂದವು.

**ಪ್ರಸ್ತಾವನೆ**: ಕಲ್ಲು ಹೂಗಳು ಶಿಲೀಂಧ್ರ ಮತ್ತು ಪಾಚಿ/ನೀಲಿ ಹಸಿರು ಬ್ಯಾಕ್ಟೀರಿಯಾ ಹಾಗೂ ಇತರೆ ಬ್ಯಾಕ್ಟೀರಿಯಾಗಳ ಸಂಯೋಗ ಜೀವಿಯಾಗಿದೆ. ಕಲ್ಲು ಹೂಗಳನ್ನು ಜೀವ ವಿರೋಧಿ, ಗಡ್ಡೆ ವಿರೋಧಿ (anti-tumor), ಕಳೆ ನಾಶಕ ಮತ್ತು ಕ್ಯಾನ್ಸರ್ ವಿರೋಧಿಯಾಗಿ ಬಳಸುತ್ತಾರೆ. ಕಲ್ಲು ಹೂಗಳಲ್ಲಿರುವ ಎರಡನೆ ಚಯಾಪಚಯಗಳು ಉತ್ತಮವಾದ ಬ್ಯಾಕ್ಟೀರಿಯಾಗಳ ಜೀವವಿರೋಧಿಗಳಾಗಿವೆ. ಕಲ್ಲು ಹೂಗಳಲ್ಲಿ ಈವರೆಗೂ 600 ಕ್ಕೂ ಹೆಚ್ಚು ಎರಡನೇ ಚಯಾಪಚಯಗಳನ್ನು ಗುರುತಿಸಿದ್ದು ಅವುಗಳಲ್ಲಿ 300 ಕ್ಕೂ ಹೆಚ್ಚಿನ ಚಯಾಪಚಯಗಳ ರಾಸಾಯನಿಕ ರಚನೆಗಳನ್ನು ವಿಜ್ಞಾನಿಗಳು ತಯಾರಿಸಿದ್ದಾರೆ. ಕಲ್ಲು ಹೂಗಳು ಉತ್ಪಾದಿಸುವ ಕಡಿಮೆ ಅಣುತೂಕದ ಉತ್ಪನ್ನಗಳು ಶಿಲೀಂಧ್ರದ ಕೋಶಭಿತ್ತಿಯಲ್ಲಿ ಶೇಖರವಾಗುತ್ತವೆ, ಈ ರಾಸಾಯನಿಕಗಳು ಸಾವಯವ ದ್ರಾವಕಗಳಲ್ಲಿ ಮಾತ್ರ ಕರಗುತ್ತವೆ ಆದರೆ ನೀರಿನಲ್ಲಿ ಕರಗುವುದಿಲ್ಲ. ಸಾಮಾನ್ಯವಾಗಿ ಕಲ್ಲು ಹೂಗಳ ಒಣತೂಕದ ಶೇಖಡ 0.1–10 ವರೆಗೂ ಈ ರಾಸಾಯನಿಕಗಳಿರುತ್ತವೆ. ಕೆಲವೊಮ್ಮೆ ಈ ರಾಸಾಯನಿಕಗಳ ಪ್ರಮಾಣ ಶೇಖಡ 3 ರಷ್ಟಿರುತ್ತದೆ.

ಕಲ್ಲು ಹೂಗಳಲ್ಲಿನ ರಾಸಾಯನಿಕಗಳನ್ನು ಅವುಗಳ ರಾಸಾಯನಿಕ ರಚನೆಗಳ ಆಧಾರದಲ್ಲಿ 10 ವಿವಿಧ ಗುಂಪುಗಳಲ್ಲಿ ವಿಂಗಡಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಮೇದಸ್ಸಿನ ರೀತಿಯ ರಾಸಾಯನಿಕಗಳು, ತಟಸ್ಥ ರಾಸಾಯನಿಕಗಳು ಮತ್ತು ಪಾಲಿ ಆಲ್ಕೋಹಾಲ್‌ಗಳು ಆರೋಮ್ಯಾಟಿಕ್ ರಾಸಾಯನಿಕಗಳಾದ ಪಲ್ವಿಕ್ ಆಸಿಡ್, ಡೆಪ್ಸೈಡ್, ಡೆಪ್ಸಿಡೋನ್, ಕ್ವಿನಾನ್, ಕ್ಸ್ಯಾಂತೋನ್ ಉತ್ಪನ್ನಗಳು, ಡೈಬೆಂಜೋ ಫ್ಯುರಾನ್ ಉತ್ಪನ್ನಗಳು ಮತ್ತು ಡೈಕೀಟೋಪೈಪರ್ ಜೀನ್‌ಗಳು ಇನ್ನೂ ಮುಂತಾದ ಪ್ರಮುಖ ಎರಡನೆ ಚಯಾಪಚಯಗಳು ಕಲ್ಲು ಹೂವಿನಲ್ಲಿರುವುದು ದಾಖಲಾಗಿದೆ. ಸಿಟ್ರಾರಿಯಾ ಐಲಾಂಡಿಕಾ ಎಂಬ ಕಲ್ಲು ಹೂವಿನ ವಿವಿಧ ದ್ರಾವಕ ಸಾರಗಳು ಉತ್ತಮವಾದ ಜೀವವಿರೋಧಿ ಗುಣವನ್ನು ಪ್ರದರ್ಶಿಸಿದೆ, ಅಲ್ಲದೇ ಗ್ಯಾಸ್ಟ್ರಿಕ್ ಮತ್ತು ಡ್ಯುವೋಡಿನಮ್ ನ ಹುಣ್ಣನ್ನುಂಟುಮಾಡುವ ಹೆಲಿಕೋಬ್ಯಾಕ್ಟರ್ ಪೈಲೋರಿ ಎಂಬ ಹಾನಿಕಾರಕ ಬ್ಯಾಕ್ಟೀರಿಯಾದ ಮೇಲೆ ಅತ್ಯಂತ ಪರಿಣಾಮಕಾರಿಯಾಗಿದೆ. ಕ್ಷಯ ರೋಗಕಾರಕವಾದ ಮೈಕೋಬ್ಯಾಕ್ಟೀರಿಯಮ್ ಟ್ಯುಬರ್‌ಕ್ಯು ಲೋಸಿಸ್ H37RV ಮತ್ತು H37RA ಬ್ಯಾಕ್ಟೀರಿಯಾಗಳ ಮೇಲೆ 9 ಕಲ್ಲು ಹೂಗಳ ಎಥನಾಲ್ ದ್ರಾವಕ ಸಾರಗಳು ಅತ್ಯಂತ ಪರಿಣಾಮಕಾರಿಯಾಗಿ ಪ್ರಭಾವ ಬೀರಿ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ಪ್ರತಿಬಂಧಿಸಿದೆ.

ಪ್ರಸ್ತುತ ಅಧ್ಯಯನದಲ್ಲಿ ಇದೇ ಪ್ರಥಮ ಬಾರಿಗೆ ಚಿತ್ರದುರ್ಗ ಪ್ರದೇಶದಿಂದ ಎರಡು ಕಲ್ಲು ಹೂಗಳನ್ನು ವರದಿ ಮಾಡಿದ್ದು, ಅಲ್ಲದೇ ಈ ಕಲ್ಲು ಹೂಗಳ ದ್ರಾವಕ ಸಾರಗಳ ಜೀವವಿರೋಧಿ ಅಧ್ಯಯನ ಹಾಗೂ ಕಲ್ಲು ಹೂಗಳಲ್ಲಿನ ವಿವಿಧ ಎರಡನೇ ಚಯಾಪಚಯಗಳನ್ನು ವರದಿಮಾಡಲಾಗಿದೆ.

**ಪ್ರಯೋಗ ಪದ್ಧತಿ ಮತ್ತು ಪರಿಕರಗಳು:**

ಕಲ್ಲು ಹೂ ಮಾದರಿ: ಕಲ್ಲು ಹೂವಿನ ಮಾದರಿಗಳನ್ನು ಚಿತ್ರದುರ್ಗದ ಕೋಟೆ ಆವರಣದಲ್ಲಿರುವ ಕಲ್ಲು ಬಂಡೆಗಳ ಮೇಲಿನಿಂದ ಸಂಗ್ರಹಿಸಿ, ಪಾಲಿಥಿನ್ ಚೀಲದಲ್ಲಿಟ್ಟು ಪ್ರಯೋಗಾಲಯಕ್ಕೆ ತರಲಾಯಿತು. ತದನಂತರ, ಕಲ್ಲು ಹೂಗಳನ್ನು ಚೆನ್ನಾಗಿ ಒಣಗಿಸಿ ಶುಷ್ಕವಾಗಿ ಸಂಗ್ರಹಿಸಿ ರೂಪವಿಜ್ಞಾನ, ರಚನಾಶಾಸ್ತ್ರ ಮತ್ತು ಎರಡನೇ ಚಯಾಪಚಯಗಳನ್ನು ಅಭ್ಯಸಿಸಿ ಕಲ್ಲು ಹೂಗಳನ್ನು ಪಾರ್ಮೋಟ್ರೆಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಎಂದು ಗುರುತಿಸಲಾಯಿತು.

**ಬ್ಯಾಕ್ಟೀರಿಯಾ ಮಾದರಿಗಳು**: ಕ್ಲೆಬ್ಸಿಯೆಲ್ಲಾ ನ್ಯುಮೋನಿಯಾ 3384, ಸ್ಟಫೈಲೋಕಾಕಸ್ ಆರಿಯಸ್ 3160, ಪ್ರೋಟಿಯಸ್ ವಲ್ಗಾರಿಕಸ್ 426, ಸುಡೋಮನಾಸ್ ಏರೋಜಿನೋಸಾ 424, ಸಾಲ್ಮೋನೆಲ್ಲಾ ಎಂಟರಿಕಾ ಟೈಫಿ 8767, ಎಸ್ಚರೀಕಿಯಾ ಕೋಲಿ 4296 ಮತ್ತು ಶಿಗೆಲ್ಲಾ ಬೋಯ್ಡಿ 11947 ಈ ಮಾನವ ರೋಗಕಾರಕ ಬ್ಯಾಕ್ಟೀರಿಯಾಗಳನ್ನು ಮೈಕೋಬಿಯಲ್ ಟೈಪ್ ಕಲ್ಚರ್ ಕಲೆಕ್ಷನ್ ಅಂಡ್ ಜೀನ್ ಬ್ಯಾಂಕ್ (MTCC, IMTECH Chandigarh) ಚಂಡಿಗಢ ಇವರಿಂದ ತರಿಸಲಾಯಿತು.

**ಕಲ್ಲು ಹೂವಿನ ಸಾರ ಪಡೆಯುವಿಕೆ**: ಪಾರ್ಮೋಟ್ರೆಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಕಲ್ಲು ಹೂಗಳನ್ನು ಶುದ್ಧವಾದ ನೀರಿನಲ್ಲಿ ತೊಳೆದು, ಕಲ್ಲು ಹೂವಿನ ಕೆಳಭಾಗದಲ್ಲಿರುವ ಮಣ್ಣು, ಧೂಳು ಮತ್ತು ಇತರೆ ಕಲ್ಮಶಗಳನ್ನು ತೆಗೆದು ಕೋಣೆಯ

ವಾತಾವರಣದಲ್ಲಿ 2 ಗಂಟೆಗಳವರೆಗೆ ಒಣಗಿಸಿ ಪುಡಿಮಾಡಲಾಯಿತು. 15 ಗ್ರಾಂ ಕಲ್ಲು ಹೂವಿನ ಪುಡಿಯನ್ನು 100 ಮಿಲಿ ಅಸಿಟೋನ್, ಕ್ಲೋರೋಫಾರ್ಮ್, ಎಥನಾಲ್ ಮತ್ತು ಜಲೀಯ ದ್ರಾವಕದಲ್ಲಿ ಬೆರೆಸಿ ಚೆನ್ನಾಗಿ ಕಲಕಲಾಯಿತು ವಾಟ್ಮನ್ ಫಿಲ್ಟರ್ ಪೇಪರ್ ನಂ.1 ರ ಮೂಲಕ ಶೋಧಿಸಿ ಸಾರವನ್ನು ತಗೆದು ಶೀತಪೆಟ್ಟಿಗೆ ವಾತಾವರಣದಲ್ಲಿ ಬಳಸುವವರೆಗೂ ಇಡಲಾಯಿತು.

**ಜೀವವಿರೋಧಿ ಅಧ್ಯಯನ**: ಡಿಸ್ಕ್ ಪ್ರಸರಣ ಮತ್ತು ಅಗಾರ್ ಗುಂಡಿ ವಿಧಾನಗಳನ್ನು ಬಳಸಿ ಕಲ್ಲು ಹೂವಿನ ದ್ರಾವಕ ಸಾರಗಳ ಅಧ್ಯಯನ ನಡೆಸಲಾಯಿತು. ಡಿಸ್ಕ್ ಪ್ರಸರಣ ವಿಧಾನದಲ್ಲಿ 24 ಗಂಟೆಗಳ ತಾಜಾ ಬ್ಯಾಕ್ಟೀರಿಯಾವನ್ನು 0.1 ಮಿಲಿ ಯಷ್ಟನ್ನು ಅಗಾರ್ ಮಾಧ್ಯಮ ಒಳಗೊಂಡಿರು ಪ್ಲೇಟ್ ನ ಮೇಲೆ ಪಸರಿಸಿ 15 ನಿಮಿಷಗಳ ಕಾಲ ಲ್ಯಾಮಿನಾರ್ ಏರ್ ಫ್ಲೋ ನಲ್ಲಿ ಬಿಡಲಾಯಿತು, ನಂತರ ಪೇಪರ್ ಡಿಸ್ಕ್‌ಗೆ 10 ಮೈಕ್ರೋಲೀಟರ್‌ನಷ್ಟು ಕಲ್ಲು ಹೂವಿನ ಸಾರವನ್ನು ಸೇರಿಸಿ ಒಣಗಿಸಿ, ಈ ಮೊದಲೆ ಬ್ಯಾಕ್ಟೀರಿಯಾ ಪಸರಿಸಿದ ಅಗಾರ್ ಮಾಧ್ಯಮ ಒಳಗೊಂಡಿರು ಪ್ಲೇಟ್ ನ ಮೇಲೆ ಇಟ್ಟು, $37^0$ ಡಿಗ್ರಿ ಉಷ್ಣಾಂಶದಲ್ಲಿ 24 ಗಂಟೆಗಳ ಕಾಲ ಉಷ್ಣಪೆಟ್ಟಿಗೆಯಲ್ಲಿ ಇಡಲಾಯಿತು. ಅಗಾರ್ ಗುಂಡಿ ವಿಧಾನದಲ್ಲಿ 24 ಗಂಟೆಗಳ ತಾಜಾ ಬ್ಯಾಕ್ಟೀರಿಯಾವನ್ನು 0.1 ಮಿಲಿ ಯಷ್ಟನ್ನು ಅಗಾರ್ ಮಾಧ್ಯಮ ಒಳಗೊಂಡಿರು ಪ್ಲೇಟ್ ನ ಮೇಲೆ ವಿಸ್ತಾರಕ ಉಪಕರಣ (Spreader) ದ ಸಹಾಯದಿಂದ ಪಸರಿಸಿ 15 ನಿಮಿಷಗಳ ಕಾಲ ಲ್ಯಾಮಿನಾರ್ ಏರ್ ಫ್ಲೋ ನಲ್ಲಿ ಬಿಡಲಾಯಿತು, ನಂತರ ಕಾರ್ಕ್ ಬೋರರ್‌ನ ಸಹಾಯದಿಂದ ಮಧ್ಯಬಾಗದಲ್ಲಿ ಗುಂಡಿಯನ್ನು ತಯಾರಿಸಿ 25 ಮೈಕ್ರೋಲೀಟರ್ ನಷ್ಟು ಕಲ್ಲು ಹೂಗಳ ದ್ರಾವಕ ಸಾರಗಳನ್ನು ಗುಂಡಿಯಲ್ಲಿ ಹಾಕಿ $37^0$ ಡಿಗ್ರಿ ಉಷ್ಣಾಂಶದಲ್ಲಿ 24 ಗಂಟೆಗಳ ಕಾಲ ಉಷ್ಣಪೆಟ್ಟಿಗೆಯಲ್ಲಿ ಇಡಲಾಯಿತು. 24 ಗಂಟೆಗಳ ನಂತರ ಗುಂಡಿಯ ಸುತ್ತಲೂ ಏರ್ಪಟ್ಟಿರುವ ಪ್ರತಿಬಂಧ ವಲಯವನ್ನು ಅಳೆಯಲಾಯಿತು.

**ಕಲ್ಲು ಹೂಗಳ ಎರಡನೇ ಚಯಾಪಚಯಗಳ ಅಧ್ಯಯನ**: ಕಲ್ಲು ಹೂವಿನ ಅಸಿಟೋನ್ ಸಾರವನ್ನು ತೆಳು ಪದರ ವರ್ಣರೇಖನ (Thin Layer Chromatography) ದ ಮೂಲಕ ಬೇರ್ಪಟ್ಟ ನಂತರ ಆರ್ ಎಫ್ ಬೆಲೆಯನ್ನು ಬಳಸಿ ಎರಡನೇ ಚಯಾಪಚಯಗಳನ್ನು ಗುರುತಿಸಲಾಯಿತು. ಅಲುಕೋಸೆಫ್ ಸಿಲಿಕಾಜೆಲ್ 60/ಯುವಿ254 ತೆಳು ಪದರ ವರ್ಣರೇಖನದ ಪ್ಲೇಟ್ನ ಕೆಳಭಾಗದಲ್ಲಿ2 ಸೆಂ.ಮೀ ಬಿಟ್ಟು ಒಂದು ಗೆರೆಯನ್ನು ಎಳೆದು, ಗೆರೆಯ ಮೇಲೆ ಪಾರ್ಮೋಟ್ರೆಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಗಳ ಅಸಿಟೋನ್ ಸಾರವನ್ನು ಬಿಂದುಗಳಲ್ಲಿ ತುಂಬಲಾಯಿತು. ಟಾಲಿನ್:ಡೈಆಕ್ಸೇನ್: ಅಸಿಟಿಕ್‌ಆಸಿಡ್ (180:40:10) ರ ಚಲಿಸುವ ದ್ರಾವಕದಲ್ಲಿಟ್ಟು ವರ್ಣರೇಖನದ ಮೇಲ್ಬಾಗಕ್ಕೆ 2 ಸೆಂ.ಮೀ ಇರುವ ವರೆಗೂ ಚಲಿಸಲು ಬಿಡಲಾಯಿತು. ನಂತರ ವರ್ಣರೇಖನವನ್ನು ತೆಗೆದು 10% ಎಚ್‌ಸಿಎಲ್ ದ್ರಾವಣದಿಂದ ಸಿಂಪಡಿಸಲಾಯಿತು. ವರ್ಣರೇಖನದ ವಿವಿದೆಡೆ ವಿವಿಧ ವರ್ಣಗಳ ತಾಣಗಳು ಕಂಡುಬಂದವು, ಇವುಗಳ ಆರ್‌ಎಫ್ ಬೆಲೆ ಮತ್ತು ಬಣ್ಣದ ಆಧಾರದ ಮೇಲೆ ಚಯಾಪಚಯಗಳನ್ನು ಗುರುತಿಸಲಾಯಿತು.

**ಫಲಿತಾಂಶಗಳು ಮತ್ತು ಚರ್ಚೆ**: ಪಾರ್ಮೋಟ್ರೆಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಗಳ ಜೀವವಿರೋಧಿ ಅಧ್ಯಯನದಲ್ಲಿ, ಜಲೀಯ ದ್ರಾವಕ ಸಾರವನ್ನು ಹೊರತುಪಡಿಸಿ ಉಳಿದ ಎಲ್ಲಾ ಸಾರಗಳು, ಪರೀಕ್ಷೆಗೆ ಬಳಸಿದ 7 ಮಾನವ ರೋಗಕಾರಕ ಬ್ಯಾಕ್ಟೀರಿಯಾಗಳ ಮೇಲೆ ಅತ್ಯುತ್ತಮವಾದ ಜೀವವಿರೋಧಿ ಚಟುವಟಿಕೆಯನ್ನು ತೋರ್ಪಡಿಸಿದವು. ಪೇಪರ್ ಡಿಸ್ಕ್ ಮತ್ತು ಅಗಾರ್ ಗುಂಡಿ ವಿಧಾನಗಳೆರಡರಲ್ಲೂ ಕಲ್ಲು ಹೂವಿನ ಸಾರಗಳು ಪ್ರತಿಬಂಧಕ ವಲಯ (Zone of Inhibition) ವನ್ನು ತೋರ್ಪಡಿ ಸಿದವು. ಪ್ರತಿಬಂಧಕ ವಲಯದ ವ್ಯಾಸವು ಯಾವಾಗಲೂ ಕಲ್ಲು ಹೂವಿನಲ್ಲಿನ ಎರಡನೇ ಚಯಾಪಚಯಗಳ ಪ್ರಮಾಣ ಮತ್ತು ಸಾಮರ್ಥ್ಯಕ್ಕನುಗುಣವಾಗಿರುತ್ತದೆ. ಅಧಿಕ ಪ್ರತಿಬಂಧಕವಲಯವನ್ನು ನಿರ್ಮಿಸುವ ಸಾರಗಳ ಸಾಮರ್ಥ್ಯ ಅಧಿಕವಾಗಿದ್ದು ಇವುಗಳನ್ನು ಔಷಧೀಯ ಉದ್ದೇಶಗಳಿಗೂ ಬಳಸಬಹುದಾಗಿದೆ. ಪಾರ್ಮೋಟ್ರೆಮಾ ಟಿಂಕ್ಟೋರಮ್ ನ ಎಥನಾಲ್ ಸಾರವು ಎಲ್ಲಾ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ಪ್ರತಿಬಂಧಿಸಿದ್ದು, ಸಾಲ್ಮೋನೆಲ್ಲಾದ ಬೆಳವಣಿಗೆಯನ್ನು ಅತೀ ಹೆಚ್ಚು ನಿರ್ಬಂಧಿಸಿ, ಈ ಸೂಕ್ಷ್ಮಾಣುಜೀವಿಗೆ ಅತೀ ಮಾರಕವಾಗಿರುವುದು ಈ ಅಧ್ಯಯನದಿಂದ ತಿಳಿದುಬಂದಿದೆ. ಪಾರ್ಮೋಟ್ರೆಮಾ ಟಿಂಕ್ಟೋರಮ್ ನ ಅಸಿಟೋನ್ ಸಾರವು ಕ್ಲೆಬ್ಸಿಯೆಲ್ಲಾ ನ್ಯುಮೋನಿಯಾ ಸೂಕ್ಷ್ಮಾಣುಜೀವಿಯ ವಿರುದ್ದ ಅತೀಹೆಚ್ಚು ಮತ್ತು ಕಡಿಮೆ ಪ್ರತಿಬಂಧ ವಲಯ ಇ ಕೋಲಿ ವಿರುದ್ಧ ದಾಖಲಾಯಿತು. ಸುಡೊಮನಾಸ್ ಏರೋಜಿನೋಸಾ ವಿರುದ್ಧ ಹೆಚ್ಚು ಪ್ರತಿಬಂಧಕ ವಲಯ ಹಾಗೂ ಇ ಕೋಲಿ ವಿರುದ್ಧ ಕಡಿಮೆ ಪ್ರತಿಬಂಧಕ ವಲಯವನ್ನು ಪಾರ್ಮೋಟ್ರೆಮಾ ಟಿಂಕ್ಟೋರಮ್ ನ ಮೆಥನಾಲ್ ಸಾರವು ತೋರಿಸಿತು. ಪಾರ್ಮೋಟ್ರೆಮಾ ಟಿಂಕ್ಟೋರಮ್ ನ ಕ್ಲೋರೋಫಾರ್ಮ್ ಸಾರವು ಸುಡೊಮನಾಸ್ ಏರೋಜಿನೋಸಾ ವಿರುದ್ಧ ಹೆಚ್ಚು ಪ್ರತಿಬಂಧಕ ವಲಯ ಹಾಗೂ ಸ್ಟಫೈಲೋಕಾಕಸ್ ಆರಿಸ್ ವಿರುದ್ಧ ಕಡಿಮೆ ಪ್ರತಿಬಂಧಕ ವಲಯವನ್ನು ದಾಖಲಿಸಿತು. ಪಿಕ್ಸಿನ್ ಸೊರೆಡಿಯಾಟದ ಅಸಿಟೋನ್ ಸಾರವು ಕ್ಲೆಬ್ಸಿಯೆಲ್ಲಾ ನ್ಯುಮೋನಿಯಾ ವಿರುದ್ದ ಅತೀ ಹೆಚ್ಚು ಮತ್ತು ಸುಡೊಮನಾಸ್ ಏರೋಜಿನೋಸಾ ವಿರುದ್ಧ ಕಡಿಮೆ ಪ್ರತಿಬಂಧಕ ವಲಯವನ್ನು ದಾಖಲಿಸಿತು. ಪಿಕ್ಸಿನ್ ಸೊರೆಡಿಯಾಟದ ಕ್ಲೋರೋಫಾರ್ಮ್ ಸಾರವು ಎಲ್ಲಾ ಏಳು ಮಾನವ ರೋಗಕಾರಕಗಳ ವಿರುದ್ಧ ಒಂದೇ ಶ್ರೇಣಿಯ ಪ್ರತಿಬಂಧಕ ವಲಯವನ್ನು ತೋರಿಸಿತು. ಪಿಕ್ಸಿನ್ ಸೊರೆಡಿಯಾಟದ ಮೆಥನಾಲ್ ಸಾರವು ಸಾಲ್ಮೋನೆಲ್ಲಾ ಟೈಫಿ ಹೊರತುಪಡಿಸಿ ಉಳಿದೆಲ್ಲಾ ಸೂಕ್ಷ್ಮಾಣುಜೀವಿಗಳ ವಿರುದ್ಧ ಹೆಚ್ಚು ಪ್ರತಿಬಂಧಕ ವಲಯವನ್ನು ದಾಖಲಿಸಿತು. ಪಿಕ್ಸಿನ್ ಸೊರೆಡಿಯಾಟದ ಎಥನಾಲ್ ಸಾರವು ಎಲ್ಲಾ ಏಳು ಮಾನವ ರೋಗಕಾರಕಗಳ ವಿರುದ್ಧ ಹೆಚ್ಚು ಪ್ರತಿಬಂಧಕ ವಲಯವನ್ನು ತೋರಿಸಿತು. ಪಾರ್ಮೋಟ್ರೆಮಾ ಟಿಂಕ್ಟೋರಮ್ ಮತ್ತು ಪಿಕ್ಸಿನ್ ಸೊರೆಡಿಯಾಟ ಗಳ ಜೀವವಿರೋಧಿ ಅಧ್ಯಯನದ ಫಲಿತಾಂಶವನ್ನು ಕಳಗಿನ ಪಟ್ಟಿಗಳಲ್ಲಿ ನೀಡಲಾಗಿದೆ.

ಪಟ್ಟಿ 1: ಪಾರ್ಮೋಟ್ರಿಮಾ ಟಿಂಕ್ಟೋರಮ್ ನ ಅಗಾರ್ ಗುಂಡಿ ವಿಧಾನದ ಫಲಿತಾಂಶ

| ಸೂಕ್ಷ್ಮಾಣುಜೀವಿ | ಅಸಿಟೋನ್ | ಕ್ಲೋರೋಪಾರ್ಮ್ | ಮೆಥನಾಲ್ | ಎಥನಾಲ್ | ಟೆಟ್ರಾಸೈಕ್ಲಿನ್ |
|---|---|---|---|---|---|
| ಕೆ. ನ್ಯುಮೋನಿಯಾ | 11±1 | 8.5±0.5 | 6.5±0.5 | 10.5±1.5 | 13.5±0.5 |
| ಸ್ಟಫೈಲೋಕಾಕಸ್ | 7±1 | 4±1 | 7.5±0.5 | 8±1 | 12.5±0.5 |
| ಪ್ರೋಟಿಯಸ್ | 4±0 | 2.5±0.5 | 3±0 | 9.5±0.5 | 14.5±0.5 |
| ಸುಡೋಮನಾಸ್ | 3.5±0.5 | 13±0 | 10±1 | 8±1 | 13.5±0.5 |
| ಸಾಲ್ಮೋನೆಲ್ಲಾ | 11±0 | 6±0 | 5±0 | 14.5±0.5 | 15±0 |
| ಇ ಕೋಲಿ | 2.5±0.5 | 10±0 | 3.5±0.5 | 8.5 ±0.5 | 14.5±0.5 |
| ಶಿಗೆಲ್ಲಾ ಬಾಯ್ಡಿ | 6.5±1.5 | 5.5±0.5 | 5±1 | 8.5±0.5 | 13.5±0.5 |

ಪಟ್ಟಿ 2: ಪಾರ್ಮೋಟ್ರಿಮಾ ಟಿಂಕ್ಟೋರಮ್ ನ ಡಿಸ್ಕ್ ಪ್ರಸರಣ ವಿಧಾನದ ಫಲಿತಾಂಶ

| ಸೂಕ್ಷ್ಮಾಣುಜೀವಿ | ಅಸಿಟೋನ್ | ಕ್ಲೋರೋಪಾರ್ಮ್ | ಮೆಥನಾಲ್ | ಎಥನಾಲ್ | ಟೆಟ್ರಾಸೈಕ್ಲಿನ್ |
|---|---|---|---|---|---|
| ಕೆ. ನ್ಯುಮೋನಿಯಾ | 4.5±0.5 | 3.5±0.5 | 4±1 | 5.5±0.5 | 9.5±0.5 |
| ಸ್ಟಫೈಲೋಕಾಕಸ್ | 2.5±0.5 | 2.5±0.5 | 3.5±1.5 | 4.5±0.5 | 9±0 |
| ಪ್ರೋಟಿಯಸ್ | 2.5±0.5 | 2.5±0.5 | 2±1 | 4.5±0.5 | 8±0 |
| ಸುಡೋಮನಾಸ್ | 2±0 | 4.5±0.5 | 5.5±0.5 | 2.5±0.5 | 8.5±0.5 |
| ಸಾಲ್ಮೋನೆಲ್ಲಾ | 4.5±0.5 | 2.5±0.5 | 4.5±C0.5 | 5.5±0.5 | 10±0 |
| ಇ ಕೋಲಿ | 1.5±0.5 | 5±1 | 2.5±0.5 | 4.5±0.5 | 9.5±0.5 |
| ಶಿಗೆಲ್ಲಾ ಬಾಯ್ಡಿ | 2.5±0.5 | 3±1 | 3.5±0.5 | 4.5±1.5 | 9±0 |

ಪಟ್ಟಿ 3: ಪಿಕ್ಸಿನ್ ಸೊರೆಡಿಯಾಟ ದ ಅಗಾರ್ ಗುಂಡಿ ವಿಧಾನದ ಫಲಿತಾಂಶ

| ಸೂಕ್ಷ್ಮಾಣುಜೀವಿ | ಅಸಿಟೋನ್ | ಕ್ಲೋರೋಪಾರ್ಮ್ | ಮೆಥನಾಲ್ | ಎಥನಾಲ್ | ಟೆಟ್ರಾಸೈಕ್ಲಿನ್ |
|---|---|---|---|---|---|
| ಕೆ. ನ್ಯುಮೋನಿಯಾ | 15.5±0.5 | 10±3 | 11.5±0.5 | 11.5±0.5 | 13.5±0.5 |
| ಸ್ಟಫೈಲೋಕಾಕಸ್ | 8.5±0.5 | 7.5±0.5 | 11.5±0.5 | 9.5±0.5 | 14±1 |
| ಪ್ರೋಟಿಯಸ್ | 11±3 | 8.5±2.5 | 11±3 | 11±2 | 13.5±0.5 |
| ಸುಡೋಮನಾಸ್ | 7.5±2.5 | 10±0 | 11±1 | 12.5±1.5 | 14.5±0.5 |
| ಸಾಲ್ಮೋನೆಲ್ಲಾ | 10±0 | 8.5±0.5 | 5±0 | 13±0 | 15.5±0.5 |
| ಇ ಕೋಲಿ | 9.5±0.5 | 9±1 | 9±1 | 8.5±0.5 | 15.5±0.5 |
| ಶಿಗೆಲ್ಲಾ ಬಾಯ್ಡಿ | 10.5±0.5 | 8.5±0.5 | 7±1 | 10±1 | 15.5±0.5 |

ಪಟ್ಟಿ 4: ಪಿಕ್ಸಿನ್ ಸೊರೆಡಿಯಾಟ ದ ಡಿಸ್ಕ್ ಪ್ರಸರಣ ವಿಧಾನದ ಫಲಿತಾಂಶ

| ಸೂಕ್ಷ್ಮಾಣುಜೀವಿ | ಅಸಿಟೋನ್ | ಕ್ಲೋರೋಪಾರ್ಮ್ | ಮೆಥನಾಲ್ | ಎಥನಾಲ್ | ಟೆಟ್ರಾಸೈಕ್ಲಿನ್ |
|---|---|---|---|---|---|
| ಕೆ. ನ್ಯುಮೋನಿಯಾ | 5.5±0.5 | 4.5±0.5 | 4.5±1.5 | 6±0 | 10.5±0.5 |
| ಸ್ಟಫೈಲೋಕಾಕಸ್ | 4±0 | 2.5±0.5 | 4.5±0.5 | 5.5±0.5 | 11±0 |
| ಪ್ರೋಟಿಯಸ್ | 4.5±0.5 | 3±0 | 2.5±1.5 | 4.5±0.5 | 11±0 |
| ಸುಡೋಮನಾಸ್ | 4.5±0.5 | 4.5±0.5 | 3.5±1.5 | 6.5±0.5 | 11±1 |
| ಸಾಲ್ಮೋನೆಲ್ಲಾ | 3.5±0.5 | 3.5±0.5 | 4±1 | 7±0 | 8.5±0.5 |
| ಇ ಕೋಲಿ | 3.5±0.5 | 3.5±1.5 | 4.5±1.5 | 4±1 | 7.5±0.5 |
| ಶಿಗೆಲ್ಲಾ ಬಾಯ್ಡಿ | 3.5±0.5 | 4±1 | 4±2 | 5±0 | 7.5±0.5 |

**ಎರಡನೇ ಚಯಾಪಚಯಗಳು**: ತೆಳುಪದರ ವರ್ಣರೇಖನದ ಮೇಲೆ ಕಂಡುಬಂದತ ವರ್ಣ ಪ್ರದೇಶಗಳನ್ನು ಗುರುತಿಸಿ, ಅವುಗಳ ಧಾರಣ C¥ÀªÀvÀð£À (j mÉ£À±À£ï ¥ÁåPÀÖgï Rf value) ವನ್ನು ಲೆಕ್ಕ ಹಾಕಲಾಯಿತು. ಪಾರ್ಮೋಟ್ರಿಮಾ ಟಿಂಕ್ಟೋರಮ್ ನಲ್ಲಿ 7.76, 6.5 ಮತ್ತು 5.0 ರ ದೊರಕಿದರೆ, ಪಿಕ್ಸಿನ್ ಸೊರೆಡಿಯಾಟದಲ್ಲಿ 7.76, 7.0, 6.0 ಮತ್ತು 5.2 ದಾಖಲಾಯಿತು. 7.76 ಅಟ್ರನಾರಿನ್ ಆದರೆ, 6.5 ಲೆಕನೋರಿಕ್ ಆಸಿಡ್ ಮತ್ತು 4.6 ನಾರಸ್ಟಿಕ್ಟಿಕ್ ಆಸಿಡ್ ಆಗಿದೆ.

**ಚರ್ಚೆ**: ಕಲ್ಲು ಹೂಗಳ ಜೀವವಿರೋಧಿ ಅಧ್ಯಯನವನ್ನು ವಿಶ್ವದ ವಿವಿಧ ಭಾಗದ ವಿಜ್ಞಾನಿಗಳು ಮೊದಲಿನಿಂದಲೂ ಅಭ್ಯಸಿಸಿ ಪ್ರಕಟಿಸಿದ್ದಾರೆ. ಕಲ್ಲು ಹೂಗಳ ಜೀವವಿರೋಧಿ, ಕ್ಯಾನ್ಸರ್ ವಿರೋಧಿ ಹಾಗೂ ಮತ್ತಿತರ ಮಾನವನಿಗೆ ಉಪಯುಕ್ತವಾದಂತಹ ಗುಣಗಳು ಕಲ್ಲು ಹೂವಿನಲ್ಲಿನ ಎರಡನೇ ಚಯಾಪಚಯಗಳಿಂದಲೇ ಬಂದಿದೆ. ಕಲ್ಲು ಹೂವಿನ ಜಲೀಯ ಸಾರವು ಯಾವುದೇ ರೀತಿಯ ಚಟುವಟಿಕೆ ತೋರುವುದಿಲ್ಲ, ಬಹುಶಃ ಎರಡನೇ ಚಯಾಪಚಯಗಳು ಸುಲಭವಾಗಿ ನೀರಿನಲ್ಲಿ ಕರಗುವುದಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಈ ಕಾರಣದಿಂದಾಗಿ ವಿವಿಧ ದ್ರಾವಕಗಳಲ್ಲಿ ಕಲ್ಲು ಹೂವಿನ ಪುಡಿಯನ್ನು ಬೆರಸಿ, ಶೋಧಿಸಿ ತದನಂತರ ಆ ಸಾರದ ಚಟುವಟಿಕೆಯನ್ನು ಅಭ್ಯಸಿಸಲಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಜಲೀಯ ಸಾರವು 7 ಮಾನವ ರೋಗಕಾರಕ ಬ್ಯಾಕ್ಟೀರಿಯಾಗಳ ಮೇಲೆ ಪರಿಣಾಮ ಬೀರದಿರುವುದು ಮತ್ತು ತೆಳು ಪದರ ವರ್ಣರೇಖನದಲ್ಲಿ ಯಾವುದೇ ತರಹದ ವರ್ಣ ತಾಣಗಳನ್ನು ಪ್ರಕಟಗೊಳಿಸದೇ ಇರುವುದು, ಜಲೀಯ ದ್ರಾವಣದಲ್ಲಿ ಕಲ್ಲು ಹೂಗಳ ಚಯಾಪಚಯಗಳು ಕರಗುವುದಿಲ್ಲ ಎಂಬ ಅಂಶ ಸ್ಪಷ್ಟಪಡಿಸಿತು. 2003 ನೇ ಇಸವಿಯಲ್ಲಿ ಗೋಮ್ಸ್ ಮತ್ತು ತಂಡ ಪಾರ್ಮೋಟ್ರಿಮಾ ಟಿಂಕ್ಟೋರಮ್ ನ್ನು ಬಳಸಿ ಬ್ಯಾಕ್ಟೀರಿಯಾಗಳ ಜೀವವಿರೋಧಿ, ಶಿಲೀಂಧ್ರ ವಿರೋಧಿ, ಕಳೆನಾಶಕ ಸಾಮರ್ಥ್ಯವನ್ನು ಅಭ್ಯಸಿಸಿತು. ಪ್ರಸ್ತುತ ಅಧ್ಯಯನದ ಜೀವವಿರೋಧಿ ಗುಣವು ಗೋಮ್ಸ್ ತಂಡದ ಪ್ರಕಟಿತ ಅಂಶಗಳಿಗೆ ಬಹುವಾಗಿ ಹೋಲುತ್ತದೆ, ಅಲ್ಲದೇ ಎರಡನೇ ಚಯಾಪಚಯಗಳ ದಾಖಲೆಯು ಸಹ ಸಾಮ್ಯತೆಯಿಂದ ಕೂಡಿದೆ. ಸತಿ ಮತ್ತು ಜೋಶಿ (2011) ಪಾರ್ಮೋಟ್ರಿಮಾ ನೀಲಗಿರೆನ್ಸಿಸ್ ಎಂಬ ಕಲ್ಲು ಹೂವನ್ನು ಬಳಸಿ ವಿವಿಧ ಬ್ಯಾಕ್ಟೀರಿಯಾಗಳ ಮೇಲೆ ಜೀವವಿರೋಧಿ ಅಧ್ಯಯನ ನಡೆಸಿದ್ದರು, ಅವರ ಅಧ್ಯಯನದಲ್ಲಿ ಈ ಕಲ್ಲು ಹೂವಿನ ಜಲೀಯ ಸಾರವು ಯಾವುದೇ ಚಟುವಟಿಕೆಗಳನ್ನು ತೋರಿಲ್ಲ ಮತ್ತು ವಿವಿಧ ದ್ರಾವಕ ಸಾರಗಳು ಬ್ಯಾಕ್ಟೀರಿಯಾಗಳ ವಿರುದ್ಧ ಜೀವವಿರೋಧಿ ಗುಣವನ್ನು ತೋರಿದೆ ಎಂದು ತಿಳಿಸಿದ್ದಾರೆ. ಪ್ರಸ್ತುತ ಅಧ್ಯಯನದಲ್ಲೂ ಸಹ ಎರಡೂ ಕಲ್ಲು ಹೂಗಳ ಜಲೀಯ ಸಾರವು ಯಾವುದೇ ಜೀವವಿರೋಧಿ ಚಟುವಟಿಕೆ ತೋರಿರುವುದಿಲ್ಲ, ಹಾಗೂ ವಿವಿಧ ದ್ರಾವಕ ಸಾರಗಳು ಜೀವವಿರೋಧಿ ಗುಣವನ್ನು ಯಶಸ್ವಿಯಾಗಿ ಎಲ್ಲಾ ಅಧ್ಯಯನಕ್ಕೊಳಪಟ್ಟ ಬ್ಯಾಕ್ಟೀರಿಯಾಗಳ ಮೇಲೆ ತೋರಿದವು. ಪಿಕ್ಸಿನ್ ಸೊರೆಡಿಯಾಟ ಕಲ್ಲು ಹೂವಿನ ಬ್ಯಾಕ್ಟೀರಿಯಾಗಳ ಜೀವವಿರೋಧಿ ಅಧ್ಯಯನದ ಲೇಖನಗಳು ಪ್ರಕಟಗೊಂಡಿರುವುದಿಲ್ಲ, ಆದರೆ ಅವಸ್ತಿ (2007) ರವರು ತಮ್ಮ ಕಂಪೆಂಡಿಯಮ್ ಆಫ್ ಲೈಕೆನ್ಸ್ ಪುಸ್ತಕದಲ್ಲಿ ಈ ಕಲ್ಲು ಹೂವಿನ ಎರಡನೇ ಚಯಾಪಚಯಗಳನ್ನು ಹೆಸರಿಸಿದ್ದು, ಪ್ರಸ್ತುತ ಅಧ್ಯಯನದಲ್ಲೂ ಸಹ ಇವೇ ಚಯಾಪಚಯಗಳು ಧೃಡಪಟ್ಟಿವೆ. ಪಿಕ್ಸಿನ್ ಸೊರೆಡಿಯಾಟವು ಅತ್ಯಂತ ಚಟುವಟಿಕೆಯಿಂದ ಕೂಡಿರುವಂತಹ ಮತ್ತು ಅನನ್ಯವಾದ ಎರಡನೇ ಚಯಾಪಚಯಗಳ ಆಗರವಾಗಿದ್ದು, ಎಲ್ಲಾ ಅಧ್ಯಯನಕ್ಕೊಳಪಟ್ಟ ಬ್ಯಾಕ್ಟೀರಿಯಾಗಳ ಮೇಲೆ ಅತ್ಯಂತ ಹೆಚ್ಚು ಪರಿಣಾಮಕಾರಿಯಾಗಿ ಜೀವವಿರೋಧಿ ಗುಣವನ್ನು ತೋರ್ಪಡಿಸಿತು.

**ಕೃತಜ್ಞತೆಗಳು**:
ಪ್ರಸ್ತುತ ಸಂಶೋಧನಾ ಕಾರ್ಯಕ್ಕೆ ಆರ್ಥಿಕ ಸಹಾಯ ನೀಡಿರುವ ಡಿ.ಎ.ಇ ಬಿ.ಆರ್.ಎನ್.ಎಸ್ (No.2012/34/57/BRNS/2317 Dated 27/12/2012) ರವರಿಗೆ, ಸಂಜೀವನಾಯಕ, ಹಿರಿಯ ವಿಜ್ಞಾನಿಗಳು ರಾಷ್ಟ್ರೀಯ ಸಸ್ಯಶಾಸ್ತ್ರೀಯ ಸಂಶೋಧನಾ ಸಂಸ್ಥೆ, ಲಖನೌ ಮತ್ತು ಡಾ. ದೇವರಾಜ ಟಿ. ಎನ್, ವಿಜ್ಞಾನಿಗಳು ಮತ್ತು ಕಾರ್ಯಕ್ರಮ ಸಂಯೋಜನಾಧಿಕಾರಿಗಳು ತರಳಬಾಳು ಕೃಷಿವಿಜ್ಞಾನ ಕೇಂದ್ರ ದಾವಣಗೆರೆ ಇವರಿಗೆ ಧನ್ಯವಾದಗಳು.

**ಆಧಾರ ಗ್ರಂಥಗಳು**:

1) ಅಸಹಿನಾ ವೈ ಮತ್ತು ಶಿಬಾಟ ಎಸ್ (1971) ಕ್ಲಾಸಿಫಿಕೇಶನ್ ಆಫ್ ಲೈಕೆನ್ ಸಬ್ಸ್ಟಾನ್ಸಸ್, ಕೆಮಿಸ್ಟ್ರಿ ಆಫ್ ಲೈಕೆನ್ ಸಬ್ಸ್ಟಾನ್ಸಸ್. ಪು:5–6. ವಾಲ್ಸ್–ಆಮ್ಸ್ಟರ್ಡಾಮ್, ಆಶರ್ ಮತ್ತು ಕಂ. ಲಿ.

2) ಅವಸ್ತಿ ಡಿ.ಡಿ (2007) ಎ ಕಂಪೆಂಡಿಯಮ್ ಆಫ್ ದಿ ಮ್ಯಾಕ್ರೋಲೈಕೆನ್ಸ್ ಫ್ರಮ್ ಇಂಡಿಯಾ, ನೇಪಾಳ ಮತ್ತು ಶ್ರೀಲಂಕಾ. ಡೆಹರಾಡೂನ್, ಬಿಶನ್ ಸಿಂಗ್ ಮತ್ತು ಮಹೇಂದ್ರ ಪಾಲ್ ಸಿಂಗ್ ಪ್ರೆಸ್.

3) ಬೇಟ್ಸ್ ಎಸ್.ಟಿ, ಕೋಪ್ಸಿ ಜಿ.ಡಬ್ಲ್ಯು.ಜಿ, ಕಾಪರಾಸೋ ಜೆ.ಜಿ, ನೈಟ್ ಆರ್ ಮತ್ತು ಫೀರರ್ ಎನ್ (2011), ಬ್ಯಾಕ್ಟೀರಿಯಲ್ ಕಮ್ಯುನಿಟೀಸ್ ಅಸೋಸಿಯೇಟೆಡ್ ವಿತ್ ಲೈಕೆನ್ ಸಿಂಬಯಾಸಿಸ್, ಅಪ್ಲಯಡ್ ಅಂಡ್ ಎನ್ವಿರಾನ್ಮೆಂಟಲ್ ಮೈಕ್ರೋಬಯಾಲಜಿ 77, 1309–1314.

4) ಗೋಮ್ಸ್ ಎ.ಟಿ, ಸೀಡೆಲ್ ಸಿ, ಸ್ಮಾನಿಯ ಇ.ಎಫ್.ಎ, ಹೊಂಡ ಎನ್.ಕೆ, ರೋಯ್ಸ್ ಎಫ್. ಎಂ ಮತ್ತು ಮುಜ್ಜಿ ಆರ್.ಎಂ (2003), ಆಚಿಟಬ್ಯಾಕ್ಟೀರಿಯಲ್ ಆಕ್ಟಿವಿಟಿ ಆಫ್ ಆರ್ಸನೆಲ್ಲೇಟ್ಸ್, ಬ್ರಜೀಲಿಯನ್ ಜರ್ನಲ್ ಆಫ್ ಮೈಕ್ರೋಬಯಾಲಜಿ 34, 194–196.

5) ಸತಿ ಎಸ್.ಸಿ ಮತ್ತು ಜೋಶಿ ಎಸ್ (2011), ಆಂಟಿಬ್ಯಾಕ್ಟೀರಿಯಲ್ ಆಕ್ಟಿವಿಟಿ ಆಫ್ ದಿ ಹಿಮಾಲಯನ್ ಲೈಕೆನ್ ಪಾರ್ಮೋಟ್ರಿಮಾ ನೀಲಗಿರಿಯೆನ್ಸ್ ಎಕ್ಸ್ಟ್ರಾಕ್ಟ್ಸ್, ಬ್ರಿಟಿಷ್ ಮೈಕ್ರೋಬಿಯಲ್ ರಿಸರ್ಚ ಜರ್ನಲ್, 1, 26–32.

# ವಿಷಯ:–09

# ಭಾಸ್ಕರೀಯಮ್

# ಭೌತಿಕಶಾಸ್ತ್ರ, ಗಣಿತಶಾಸ್ತ್ರ ಮತ್ತು ಖಭೌತಶಾಸ್ತ್ರ ವಿಜ್ಞಾನಗಳು

## THEME:-09

## BHASKAREEYAM

## PHYSICAL, MATHEMATICAL AND ASTRO-PHYSCIAL SCIENCES

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಎಂ.ಎಸ್ಸಿ., ಪದ್ಧತಿಯಿಂದ ಗಿಡಮೂಲಿಕೆಗಳಲ್ಲಿನ ಸೂಕ್ಷ್ಮವಿರಳ ಧಾತುಗಳ ಪತ್ತೆ ಹಚ್ಚುವಿಕೆ | ರಾಜೇಶ್ವರಿ ಬಿ.ಮೊರಬದ., | 260 – 262 |

ISSN 2249 - 5754 VIJNANA KANNADA (PRINT)
**ವಿಜ್ಞಾನ ಕನ್ನಡ - 11** **ಸ್ವದೇಶಿ ವಿಜ್ಞಾನ ಆಂದೋಲನ-ಕರ್ನಾಟಕ, ಬೆಂಗಳೂರು**

# ಎಂ.ಎಸ್ಸಿ., ಪದ್ಧತಿಯಿಂದ ಗಿಡಮೂಲಿಕೆಗಳಲ್ಲಿನ ಸೂಕ್ಷ್ಮವಿರಳ ಧಾತುಗಳ ಪತ್ತೆ ಹಚ್ಚುವಿಕೆ

ರಾಜೇಶ್ವರಿ ಬಿ.ಮೊರಬದ.,
ಭೌತಶಾಸ್ತ್ರ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ–583 105
rmorabad@rediffmail.com

ಸಾವಿರಾರು ವರ್ಷಗಳಿಂದ ಔಷಧೀಯ ಸಸ್ಯಗಳ ಉಪಯೋಗವನ್ನು ಅನೇಕ ಸಂಕೀರ್ಣ ವ್ಯಾಧಿಗಳಲ್ಲಿ ಉಪಯೋಗ ಮಾಡುತ್ತಾ ಬರಲಾಗಿದೆ. ವಿಶ್ವಸಂಸ್ಥೆಯ ಉಲ್ಲೇಖದಂತೆ ಇತ್ತೀಚಿನ ದಿನಗಳಲ್ಲಿ ಔಷಧಿ ಸಸ್ಯಗಳ ಬಳಕೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲದೇ ಕೈಗಾರಿಕಾ ಕ್ರಾಂತಿಯ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲೂ ವ್ಯಾಪಕವಾಗುತ್ತಿದೆ. ಈ ರೀತಿಯಾಗಿ ಬಳಕೆಯಾಗಲ್ಪಡುವ ಔಷಧಿ ಸಸ್ಯಗಳ ಪೈಕಿ ಪ್ರಮುಖವಾದ ಎಂಟು ಔಷಧೀಯ ಸಸ್ಯಗಳಿಂದ ಅಂದರೆ ಶುಂಠಿ, ಗೇರುಬೀಜದ ಎಲೆ, ತುಳಸಿ, ಕಾಸಿಕಣಗಿಲು, ಬೇವಿನ ಎಲೆ, ಬಿಲ್ವಪತ್ರಿ, ಹಾಗಲಕಾಯಿ ಬೀಜ ಮತ್ತು ಮೆಂತ್ಯೆ ಬೀಜ, ಭೌತಿಕ ಗುಣ ಪರೀಕ್ಷೆಗೊಳಪಡಿಸಿ, ಅವುಗಳಲ್ಲಿನ ಸೂಕ್ಷ್ಮ ವಿರಳ ಧಾತುಗಳ ಇರುವಿಕೆಯನ್ನು ಪತ್ತೆಹಚ್ಚಲು ಪ್ರಯತ್ನಿಸಲಾಗಿದೆ. ಇದಕ್ಕಾಗಿ ಸೋಡಿಯಂ ಡಿಟೆಕ್ಟರ್ NaI (TI) ಹಾಗೂ 8 ರಿಂದ 32ರ ವರೆಗಿನ ಸಾಮರ್ಥ್ಯ ಕ್ಷ-ಕಿರಣಗಳ ನೆರವು ಪಡೆಯಲಾಗಿದೆ.

**ಪ್ರಸ್ತಾವನೆ**:ಇತ್ತೀಚಿನ ದಿನಗಳಲ್ಲಿ ಸಸ್ಯ ಮೂಲಗಳಿಂದ ಔಷಧಿ ತಯಾರಿಕೆ ಮತ್ತು ಚಿಕಿತ್ಸೆ ನೀಡುವತ್ತ ಗಣನೀಯವಾಗಿ ಒಲವು ಹೆಚ್ಚುತ್ತಿದೆ. ಇದು ಕಚ್ಚಾ ಸಾಮಾಗ್ರಿಗಳಿಗೆ ಹೆಚ್ಚಿನ ಬೇಡಿಕೆಗಳನ್ನು ತಂದಿದೆ. ಕೈಗಾರೀಕರಣ ಮತ್ತು ಅಭಿವೃದ್ಧಿಯ ನೆಪದಲ್ಲಿ ಅಗಾಧ ಪ್ರಮಾಣದಲ್ಲಿ ಕಾಡಿನ ಅತ್ಯಮೂಲ್ಯ ಗಿಡ ಮೂಲಿಕೆಗಳ ಸಂಪತ್ತಿನ ಅವಲಂಬನೆ ಒಂದು ಪ್ರಮುಖ ಉದ್ಯಮವಾಗಿ ಉಳಿದುಕೊಂಡಿದೆ. ನೀರು, ಗಾಳಿ, ಭೂಮಿಯಲ್ಲಿ ಅನೇಕ ಲೋಹ–ಧಾತುಗಳು ಗಿಡಮೂಲಿಕೆಗಳಲ್ಲಿ ವಿಲೀನವಾಗುತ್ತವೆಯಾದರೂ ಅವುಗಳ ಅಂಗಾಂಶ ಪ್ರಮಾಣ ಸಸ್ಯದಿಂದ ಸಸ್ಯಕ್ಕೆ ಬೇರೆಯಾಗುತ್ತದೆ. ವಾಸ್ತವದಲ್ಲಿ ಸಸ್ಯಗಳಲ್ಲಿ ವಿರಳ ಧಾತುಗಳ ಪ್ರಮಾಣವು ಅವುಗಳ ಅವಶ್ಯಕತೆ, ಮಣ್ಣಿನಲ್ಲಿ ಅದರ ಉಪಲಬ್ಧತೆಯ ಪ್ರಮಾಣದ ಮೇಲೆ ಅವಲಂಬಿತವಾಗಿದೆ.

ಸಸ್ಯಗಳಲ್ಲಿ ಧಾತು ಲೋಹಗಳ ಅಸ್ತಿತ್ವ ಮತ್ತು ಪ್ರಮಾಣ ಅಧ್ಯಯನದ ಒಂದು ವಿಷಯವಾಗಿದೆ. (ಗೋಲ್ಡ್‌ಮನ್ 2001: ಗೋಮೆರಭ ಕರುಟ್ಟಿ, ಸಿಲ್ವ ಮತ್ತು ಮಾರ್ಟೀನ್ 2004) ಇದಕ್ಕೆ ಒಂದು ಬಹುಮುಖ್ಯ ಕಾರಣವೆಂದರೆ, ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಂ ಬೀರಬಹುದಾದ ಅಂಶಗಳ ಪ್ರಮಾಣ ಸಸ್ಯಗಳಲ್ಲಿ ನಿಯಂತ್ರಿಸುವುದಾಗಿದೆ. ಉದಾ: ಪಾರದ, ಸೀಸ, ವಂಗ ಇತ್ಯಾದಿ. (ಮಾಮನಿ, ಅತಿಕೈ, ಡಿಅಬ್ರೂ ಮತ್ತು ರಥಾ 2005) ಮತ್ತು ಕಬ್ಬಿಣ, ಮ್ಯಾಗ್ನೇಷಿಯಂ, ಕ್ಯಾಲ್ಸಿಯಂ, ರಂಜಕಗಳ ಪ್ರಮಾಣ ಸಸ್ಯಗಳಲ್ಲಿ ಅವಲೋಕಿಸಲಾಗಿದೆ.

ಸಸ್ಯಗಳು ಆಹಾರ ಮತ್ತು ಔಷಧೀಯ ಮೂಲ ಆಕರಗಳಾಗಿರುವುದರಿಂದ ಇಂತಹ ವೈಜ್ಞಾನಿಕ ಅವಲೋಕನ ಇಂದಿನ ದಿನಗಳಲ್ಲಿ ತುರ್ತು ಅಗತ್ಯವಾಗಿದೆ. ಶರೀರಕ್ಕೆ ತೀರ ಅಗತ್ಯವಿರುವ ಸ್ಥೂಲ ಮತ್ತು ಸೂಕ್ಷ್ಮ ಅಂಶಗಳು ಸಸ್ಯಗಳಲ್ಲಿರುವುದರಿಂದ ಕೆಲ ಔಷಧಿ ಸಸ್ಯಗಳು ಆಹಾರದ ಒಂದು ಭಾಗವಾಗಿ ರೂಪಗೊಂಡಿವೆ. (ತಿಲೋರಕೊವಿಕ್ಸ, ರಬಿನ್ನರ್ ಮತ್ತು ಇತರರು:2002)

ಕಬ್ಬಿಣಾಂಶ, ಮ್ಯಾಂಗನೀಸ್, ಝಿಂಕ್‌ನಂತಹ ಲೋಹಧಾತುಗಳು ಶರೀರದಲ್ಲಿ ಜರುಗುವ ಚಯಾಪಚಯ ಕ್ರಿಯೆಗೆ ಅಗತ್ಯವಿರುವ ವೇಗವರ್ಧಕಗಳನ್ನು (Enzyme) ರೂಪಗೊಳಿಸುತ್ತವೆ ಮತ್ತು ಪ್ರಚೋದಿಸುತ್ತವೆ. (ಕಝುಯಾ, ಓಂಝುಯಾ, ಇತರರು:2005) ಕೆಲವು ಸಂದರ್ಭದಲ್ಲಿ ಈ ಧಾತುಗಳು ತತ್‌ಕ್ಷಣದಲ್ಲಿ ಸಸ್ಯದಲ್ಲಿರಬಹುದಾದ ಇತರ ಸಾವಯವ ಘಟಕಗಳೊಂದಿಗೆ (ಉದಾ: ಫ್ಲೆವನೈಡ್) ಪ್ರತಿಕ್ರಿಯೆ ನೀಡಲಾರಂಭಿಸುತ್ತವೆ. ಇಂತಹ ಶರೀರದ ಒಟ್ಟಾರೆ ವಿವರ ಸಸ್ಯವ್ಯಕ್ತಿ ಸೇವಿಸಿದಾಗ ಕ್ರಿಯೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿರುತ್ತದೆ. (ಪಿಬರ್–1988). ಅಂತೆಯೇ ಸಸ್ಯಗಳಲ್ಲಿ ಕೇವಲ ಧಾತುಗಳ ಒಟ್ಟು ಪ್ರಮಾಣದ ಅಧ್ಯಯನ ಮಾತ್ರವಲ್ಲದೆ ಆ ಧಾತುಗಳ ಸಸ್ಯಗಳ ಇತರ ಘಟಕಗಳೊಂದಿಗೆ ನಡೆಸಬಹುದಾದ ರಸಾಯನಿಕ ಕ್ರಿಯೆಗಳ ಅಧ್ಯಯನವು ಅತ್ಯಂತ ಅಗತ್ಯವಾಗಿದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ, ಜೈವಿಕ ಕ್ರಿಯೆಯ ದೃಷ್ಟಿಯಿಂದ ಅಗತ್ಯವಿರುವ ಸಸ್ಯಗಳಲ್ಲಿನ ಲೋಹ–ಧಾತುಗಳ ಪ್ರಮಾಣದ ಅವಲೋಕನದ ಸಂಶೋಧನೆ ಕೈಗೆತ್ತಿಕೊಳ್ಳಲಾಗಿದೆ. ಇದರ ಉದ್ದೇಶ.

**1.** XRF ಪದ್ಧತಿಯನ್ನು ಬೇರೆ ಭಾಗಗಳಿಂದ ಸಸ್ಯಗಳನ್ನು ಆಯ್ಕೆ ಮಾಡಲಾಯಿತು.
**2.** MCA ತಂತ್ರಜ್ಞಾನದ ನೆರವಿನಿಂದ ಸಸ್ಯಗಳಲ್ಲಿರುವ ಧಾತುಗಳ ಪರಮಾಣು ಸಂಖ್ಯೆಯನ್ನು ನಿಖರವಾಗಿ ತಿಳಿದುಕೊಳ್ಳುವುದು.
3. ಈ ಧಾತುಗಳ ಜೈವಿಕ ಕ್ರಿಯೆಯ ಮೇಲೆ ಮಾಡಬಹುದಾದ ಪರಿಣಾಮಗಳ ಅಧ್ಯಯನ

ಈ ಅಧ್ಯಯನವು ಸಸ್ಯಗಳ ಬಗೆಗಿನ ಲಿಖಿತ ಮಾಹಿತಿಗಳು ಮತ್ತು ಪ್ರಾಯೋಗಿಕ (ಎಂ.ಸಿ.ಎ) ಸ್ವರೂಪಗಳೆರಡರಲ್ಲೂ ನಡೆಯುವುದು.

ಲಿಖಿತ ದಾಖಲೆಗಳ ಉಪಲಬ್ಧತೆಯನುಸಾರ ತುಳಸಿ, ಕಾಸಿಕಣಗಿಲು, ಶುಂಠಿ, ಮೆಂತ್ಯೆ ಮತ್ತು ನೆಲ್ಲಿಕಾಯಿಗಳ ಮೇಲೆ ಎಂ.ಸಿ.ಎ ಅಧ್ಯಯನವು ವ್ಯಾಪಕವಾಗಿಲ್ಲ. ಕೃಷ್ಣ, ತುಳಸಿ, ಕಣಗಿಲು, ಶುಂಠಿ, ನೆಲ್ಲಿಯನ್ನು ವಿಶೇಷವಾಗಿ ಜ್ವರ, ಕ್ಯಾನ್ಸರ್, ಮಧುಮೇಹ, ಕೆಮ್ಮು, ಕಾಮಾಲೆ, ಆಮ್ಲಪಿತ್ತ, ಹೊಟ್ಟೆ ನೋವುಗಳಲ್ಲಿ ಬಳಸಲಾಗುತ್ತದೆ. ಅಂತೆಯೇ ಈ ಸಸ್ಯಗಳ ಮೇಲೆ ಒಂದು ಕ್ರಮಬದ್ಧವಾದ ಅಧ್ಯಯನವನ್ನು XRF ಹಿನ್ನೆಲೆಯಲ್ಲಿ ಮಾಡಿದಾಗ ಫಲದಾಯಕ ಪರಿಣಾಮ ಪಡೆಯಬಹುದೆಂದು ಭಾವಿಸಲಾಗಿದೆ.

**ಪ್ರಯೋಗ ಪದ್ಧತಿ ಮತ್ತು ಪರಿಕರಗಳು:** ಸಸ್ಯಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಲಾಗಿದೆ. ಈ ಸಸ್ಯಗಳ ಎಲೆ ಮತ್ತು ಬೀಜಗಳನ್ನು ಪರಿಷ್ಕೃತ ಜಲದಿಂದ ತೊಳೆದು ಒಂದು ಮಾಸದ

ಅವಧಿಗೆ ನೆರಳಿನಲ್ಲಿ ಒಣಗಿಸಲಾಯಿತು. ನಂತರ ಬಿಲ್ವ ಯಂತ್ರದಲ್ಲಿ ಸೂಕ್ಷ್ಮ ಚೂರ್ಣ ತಯಾರಿಸಲಾಯಿತು ಹಾಗೂ ಇದು 260 ಮೈಕ್ರೊ ಮೀಟರ್ ಅಳತೆಯ ಜರಡಿಯಲ್ಲಿ ಸೋಸಿಕೊಳ್ಳಲಾಯಿತು. ನಂತರ ತೂಕ ಮಾಡಿದ ಚೂರ್ಣದಿಂದ ವಿಭಿನ್ನ ಅಳತೆಯ ಮತ್ತು ದಪ್ಪನೆಯ ಸ್ತಂಭಾಕೃತಿಯ (10 ಮೀ.ಮೀ ವ್ಯಾಸ) ಚಕ್ರಿಕಾಳನ್ನು ತಯಾರಿಸಲಾಗುತ್ತದೆ. ವಾತಾವರಣದಲ್ಲಿನ ಇವುಗಳ ತೂಕವನ್ನು ವಿದ್ಯುನ್ಮಾನ ತೂಕದ ಯಂತ್ರದಿಂದ ಹಾಗೂ ಸೂಕ್ಷ್ಮದರ್ಶಕದ ಸಹಾಯದಿಂದ ನಿಖರವಾಗಿ ದಾಖಲಿಸಿಕೊಳ್ಳಲಾಗುತ್ತದೆ. ಈ ಪ್ರಯೋಗ ಪದ್ಧತಿಯಲ್ಲಿ ಚಿತ್ರ 1 ಮತ್ತು ಚಿತ್ರ 2 ನ್ನು ತೋರಿಸಲಾಗಿದೆ.




ಚಿತ್ರ 1



ಚಿತ್ರ 2

ಇಲ್ಲಿ ಬಳಸುವ ಉನ್ನತ ಮಟ್ಟದ ರೇಖಾಗಣಿತ ಪ್ರಾಯೋಗಿಕ ಪದ್ಧತಿ ಮತ್ತು ಎಂ.ಎಸಿ ಪದ್ಧತಿಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ವಿವಿಧ ಆಯಾಮ ಶಕ್ತಿಯ ಕ್ಷ–ಕಿರಣದ ಸ್ವರೂಪದಲ್ಲಿ ಪರಿವರ್ತಿಸಿ ನಂತರ ಮೇಲೆ ಹೇಳಿದಂತೆ ತಯಾರಿಸಲ್ಪಟ್ಟ ಚಕ್ರಿಕಾದ ಮೇಲೆ ಬೀಳುವಂತೆ ಮಾಡಲಾಗುವುದು. ಇದರಿಂದ ವಿಸರ್ಜಿಸಲ್ಪಟ್ಟ ಕಿರಣ ಮತ್ತೊಂದು G ¥ÀzÀÆgÀÀÄôPÀÀ ªÀÄÆ®PÀ ºÁAiÀÄÄÝ Nal (TI) ಕ್ಷ–ಕಿರಣದ ಅವಲೋಕನದ ಮೇಲೆ ಮೂಡುವುದು. ಇದನ್ನು ಪಿ.ಸಿ ಆಧಾರಿತ ಬಹು ಆಯಾಮಿತ ಅವಲೋಕನದಿಂದ ದಾಖಲಿಸಿಕೊಳ್ಳಲಾಗುವುದು. ಕ್ಷ–ಕಿರಣದ ಅವಲೋಕನಕ್ಕಾಗಿ 25 mm x 4mm ದಪ್ಪನೆಯ NAL (TI) ಲೇಪಿತ PMT ಟ್ಯೂಬ್ ಬಳಸಲಾಗುತ್ತದೆ. ಆಕ್ಸಫರ್ಡ ಮಾದರಿ 13 ಸಿ.ಎ.ಪಿ ಮತ್ತು ಪಿ.ಸಿ.ಆಯ್‌ನ್ನು ಪಿ.ಎಂ.ಟಿ.ಯ ವಿದ್ಯುತ್ ಶಕ್ತಿಯ ಸಂಪನ್ಮೂಲದಿಂದ ಬಳಸಲ್ಪಡುವುದು. ಧ್ವನಿವರ್ಧಕ, ಆಯ್.ಕೆ.ಎಡಿಸಿ ಮತ್ತು ಎಂ.ಸಿ.ಎ.ನ್ನು Oxwin MCA ತಂತ್ರಾಂಶದಿಂದ ನಿಯಂತ್ರಿಸಲ್ಪಡುತ್ತದೆ.

**ವಿವರಣೆ ಮತ್ತು ನಿರ್ಣಯ**: ಅನೇಕ ಸಾವಯವ ಸಂಯುಕ್ತಗಳ ಜೊತೆಗೆ ಕೆಲ ನಿರವಯವ ಅಂಶಗಳು ಕೂಡಾ ವ್ಯಕ್ತಿಯ ಆರೋಗ್ಯ ಕಾಪಾಡುವಲ್ಲಿ ಮತ್ತು ರೋಗ ನಿವಾರಣೆಯಲ್ಲಿ ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತವೆ. (ಅಂಡರ್ ವುಡ್ 1977ರ ಪ್ರಕಾರ 93) ರೋಗ ಪ್ರಶಮನಕ್ಕಾಗಿ ಧಾತುಗಳ ಪ್ರಯೋಗದ ಉಲ್ಲೇಖ ದೊರಕುವುದು ಆಯುರ್ವೇದದಲ್ಲಿ ಧಾತುಗಳನ್ನು ಒಂದು ಘಟಕವಾಗಿ ಹೊಂದಿದ ಅನೇಕ ಔಷಧಿ ಸಂಯುಕ್ತಗಳ ಮತ್ತು ಅವುಗಳ ಜೊತೆಯಲ್ಲಿ ಭಾಪ್ಪಭವನ ಹೊಂದುವ ಸತ್ಯಗಳು ಅವುಗಳ ಘಟಕಗಳ ಕುರಿತಾದ ಸಾಹಿತ್ಯದ ಉಲ್ಲೇಖ, ಪಟ್ಟಿ–1ರಲ್ಲಿ ನೀಡಲಾಗಿದೆ.ಈ ಪ್ರಯೋಗದಲ್ಲಿ ಗ್ರಾಫ್ ತೋರಿಸಲಾಗಿದೆ.




ಗ್ರಾಫ್ ಚಿತ್ರ 3

ದಾಖಲೆ–2ರಲ್ಲಿ ಎಂ.ಎ.ಸಿ ಪರಿಣಾಮ ಮತ್ತು ತಪ್ಪುಗಳನ್ನು ಉಲ್ಲೇಖಿಸಿದೆ. ಪ್ರಾಯೋಗಿಕ ನಿರ್ಣಯಗಳಲ್ಲಿ ಈ ತಪ್ಪಿನ ಪ್ರಮಾಣ ಪ್ರತಿಶತ 1%ರಷ್ಟು ಇದ್ದರೆ, ಸಸ್ಯಗಳ ಮಾದರಿಯಲ್ಲಿನ ಪ್ರಮಾಣ ಶೇ.2ರಷ್ಟಿದೆ. ಲಿಖಿತ ದಾಖಲೆಗಳು ಮತ್ತು ಪ್ರಾಯೋಗಿಕ ಸತ್ಯಾಂಶಗಳ ನಡುವಿನ ತಪ್ಪಿನ ವ್ಯತ್ಯಾಸ ಕೂಡ ಪ್ರತಿಶತ 2%. ಸಸ್ಯಮಾದರಿಗಳು KeV n=2.638, n=2.7629, n=2.608 & n=3.26 (μ/þ)ಗ್ರಾಫ್‌ನೊಂದಿಗೆ ಈ ಎಲ್ಲಾ ಅಂಶಗಳು ಯಾವುದೇ ಸಸ್ಯ ಮಾದರಿಗೆ ಎಂ.ಎ.ಸಿ ಪತ್ತೆ ಹಚ್ಚಲು ನಾವು ಅನುಸರಿಸಿದ ಪ್ರಯೋಗಿಕ ಪದ್ಧತಿ ಅತ್ಯಂತ ಸೂಕ್ತ ಎಂಬುದನ್ನು ದೃಢೀಕರಿಸುತ್ತದೆ. (ಜೈವಿಕ/ವೈದ್ಯಕೀಯ/ಬಹುಘಟಕ/ಸಮ್ಮಿಶ್ರಣ). ತುಳಸಿ, ಕಣನಿಲು, ಶುಂಠಿ, ನೆಲ್ಲಿಗಳ ಎಂ.ಎ.ಸಿ.ಯು ನಾವು ಮಾಡಿದ ಸಂಯುಕ್ತವು ಸರಿಯಾಗಿದೆ ಎಂಬುದನ್ನು ಸೂಚಿಸುತ್ತದೆ. ಇದು ಸಸ್ಯಗಳಿಗೆ ಮಾತ್ರ ಅನ್ವಯಿಸುತ್ತದೆ. ಪೊಟೋನ್ ಪ್ರತಿಕ್ರಿಯೆ ಸಂಯುಕ್ತದಲ್ಲಿನ ಪ್ರತಿಯೊಂದು ಪ್ರತ್ಯೇಕ ಘಟಕಗಳೊಂದಿಗೆ ಇರುತ್ತದೆಯಾದರೂ ಎಂ.ಎ.ಸಿ.ಯು ಒಂದು ಮಾದರಿಯ ಸಮಗ್ರ ವಿವರಣೆ ನೀಡುವಲ್ಲಿ ಶಕ್ತವಾಗುತ್ತದೆ ಎಂಬುದು ಈ ಪ್ರಯೋಗದ ವಿಶೇಷ.

ಪಟ್ಟಿ–1ರಲ್ಲಿ: ಔಷಧೀಯ ಸಸ್ಯಗಳ ಹೆಸರು, ರಸಾಯನಿಕ ಗುಣಧರ್ಮಗಳ ಉಪಯೋಗ ಮತ್ತು ಔಷಧೀಯ ಉಪಯೋಗ

| ಸಂಖ್ಯೆ | ಔಷಧೀಯ ಸಸ್ಯಗಳ ಹೆಸರು | ರಸಾಯನಿಕ ಹೆಸರು | ಔಷಧಿ ಉಪಯೋಗ |
|---|---|---|---|
| 1 | ಶುಂಠಿ | ಯಶದ | ಹೊಟ್ಟೆ ನೋವು, ಜ್ವರ, ಕೆಮ್ಮು |
| 2 | ತುಳಸಿ | ಯಶದ | ಜ್ವರ, ಕೆಮ್ಮು, ಕಾಮಾಲೆ |
| 3 | ಕಾಸಿಕಣಗಿಲು ತುಳಸಿ | ತಾಮ್ರ | ಕ್ಯಾನ್ಸರ್, ಮಧುಮೇಹ |
| 4 | ಬೇವಿನ ಎಲೆ | ನಾಗ | ಮಧುಮೇಹ |
| 5 | ಬಿಲ್ವಪತ್ರಿ ಎಲೆ | ಮ್ಯಾಂಗನೀಸ್ | ಮಧುಮೇಹ |
| 6 | ಮೆಂತ್ಯೆ ಬೀಜ | ಕಬ್ಬಿಣ | ಮಧುಮೇಹ |
| 7 | ಬೆಟ್ಟದ ನೆಲ್ಲಿಕಾಯಿ | ಕಬ್ಬಿಣ | ಹೊಟ್ಟೆನೋವು |
| 8 | ಗೇರು ಬೀಜದ ಎಲೆ | ಸುಣ್ಣ | ಮಧುಮೇಹ |
| 9 | ಹಾಗಲಕಾಯಿ ಬೀಜ | ಯಶದ | ಮಧುಮೇಹ |
| 10 | ನೀರಲಹಣ್ಣು ಬೀಜ | ತಾಮ್ರ, ಸುಣ್ಣ | ಮಧುಮೇಹ |

**ರೆಫರೆನ್ಸ್:**

1. ಅವಲೆಬಿಲಿಟಿ ಆಫ್ ಅವಿಸ್‌ನಶಲ್ ಟ್ರೇಸ್ ಎಲಿಮೆಂಟ್ ಇನ್ ಆಯುರ್ವೇದ ಮೆಡಿಸಿನಲ್ ಹರ್ಬ್ಸ್ ಯೂಸಿಂಗ್ ಇನ್‌ಸ್ಟ್ರುಮೆಂಟಲ್ ನ್ಯೂಟ್ರಾನ್ ಆಕ್ಟಿವೇಶನ್ ಎನಾಲೆಸಿಸ್, ವಿ.ಸಿಂಗ್ ಆ್ಯಂಡ್ ಎ.ಎನ್.ಗಾರ್ಗ, ಅಪೀಲ್.ರೇಡಿಯಟ್. ಐಸೋಟೋಪ್.48,97 (1997).

2. ಮೈನರ್ ಆ್ಯಂಡ್ ಟ್ರೇಸ್ ಎಲಮೆಂಟಲ್ ಡಿಟೆರ್‌ಮಿನೇಷನ್ ಇನ್ ದಿ ಇಂಡಿಯನ್ ಹರ್ಬಲ್ ಆ್ಯಂಡ್ ಅದರ್ ಮೆಡಿಷಿನಲ್ ಪ್ರಿಪರೇಷನ್, ಡಿ.ಎಲ್.ಸಮುದ್ರಾವರ್ ಆ್ಯಂಡ್ ಎ.ಎನ್.ಗಾರ್ಗ್, ಬಾಯೋಲ್. ಟ್ರೇಸ್ ಎಲಿಮೆಂಟ್. ಆರ್‌ಇಎಸ್, 54,113 (1996).

ಅವಲೆಬಿಲಿಟಿ ಆಫ್ ಎಸೆನ್ಸಿಯಲ್ ಟ್ರೇಸ್ ಎಲಿಮೆಂಟ್ಸ್ ಇನ್ ಮೆಡಿಷನಲ್ ಹರ್ಬ್ಸ್ ಯೂಸ್ಡ್ ಇನ್ ಡಯಾಬಿಟೀಸ್ ಮೆಲ್ಲಿಟಸ್ ಆ್ಯಂಡ್ ದೇರ್ ಪಾಸಿಬಲಿ ಕೋರಿಲೇಷನ್ಸ್ ಬೈ ಆರ್.ಪಾಲ್ ಚೌದರಿ, ಆರ್.ಆಚಾರ್ಯ, ಆ.ಜಿ.ಸಿ.ನಾಯರ್, ಎ.ವಿ.ಆರ್.ರೆಡ್ಡಿ ಆ್ಯಂಡ್ ಎ.ಎನ್.ಗಾರ್ಗ್, ಜೆ.ರೇಡಿಯೇಷನಲ್, ನ್ಯೂಕ್ಲಿಯರ್, ಕೆಮಿಸ್ಟ್ರಿ, ಇನ್ ಪ್ರೆಸ್ (2007).

## ವಿಷಯ:–11

# ಜೆ. ಸಿ. ಭೋಸೀಯಮ್

# ವಿದ್ಯುತ್ ಕಣಶಾಸ್ತ್ರ, ವಿದ್ಯುತ್‌ಚಕ್ತಿಶಾಸ್ತ್ರ, ಶಕ್ತಿ ಮತ್ತು ವಿ–ಸಂವಹನ ವಿಜ್ಞಾನಗಳು

## THEME:-11

# J. C. BOSEEYAM

## ELECTRONICS, ELECTRICAL, ENERGY AND COMMUNICATION SCIENCES

| ಕ್ರ. ಸಂ | ಪ್ರಬಂಧ ಶೀರ್ಷಿಕೆ | ಲೇಖಕರು | ಪುಟಸಂಖ್ಯೆ |
|---|---|---|---|
| 1. | ವೇರಿಯೇಬಲ್ ಡ್ಯೂಟಿ ಸೈಕಲ್ ಪೀಡಬ್ಲ್ಯೂಮ್ ಉದ್ಪಾದಿಸಲು ಸೀಮೂಲಿಂಕ್ ಮಾದರಿಯ ವಿನ್ಯಾಸ | ಸುನಿತಾ<br>ಆರ್. ಶ್ರೀನಿವಾಸ್<br>ರಾಮ್ ಸಾಗರ್ | 265 – 267 |

## ವೇರಿಯೇಬಲ್ ಡ್ಯೂಟಿ ಸೈಕಲ್ ಪೀಡಬ್ಲ್ಯೂಮ್ ಉದ್ಪಾದಿಸಲು ಸೀಮೂಲಿಂಕ್ ಮಾದರಿಯ ವಿನ್ಯಾಸ

ಸುನಿತಾ, ಆರ್. ಶ್ರೀನಿವಾಸ್, ರಾಮ್ ಸಾಗರ್
ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ ಇಲಾಖೆ, ವೇಮನ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು, ಭಾರತ
¸ÄÃvÀÁªÉÃj @gmail.com/sunitahaveri@gmail.com

ಪಲ್ಸ್ ಅಗಲ ಸಮನ್ವಯತೆ ಅನ್ವಯಗಳ ಹೆಚ್ಚಿನ ಪರ್ಯಾಯಕ ಔಟ್ಪುಟ್ ವೋಲ್ಟೇಜ್ ನಿಯಂತ್ರಿಸುವಲ್ಲಿ ಉಪಯೋಗಿಸಿದ ವೋಲ್ಟೇಜ್ ನಿಯಂತ್ರಕ ಅನ್ವಯಗಳ ದೊಡ್ಡ ಸಂಖ್ಯೆಯಲಿ ಕಂಡಬರುವ. ನಾಡಿ ಅಗಲ ಸಮನ್ವಯತೆ ಸ್ಥಿರ ಆವರ್ತನ ಮತ್ತು ವೇರಿಯಬಲ್ ವೋಲ್ಟೇಜ್ ಹೊಂದಿದೆ. 10 ವೋಲ್ಟ್ ಈ ವಿಧಾನದ ಅನುಕೂಲಕ್ಕೆ ೦ ವೋಲ್ಟ್ ವೋಲ್ಟೇಜ್ ಮೌಲ್ಯವನ್ನು ಬದಲಾಣೆಗಳನ್ನು ಇದು ಹೈ-ಫ್ರೀಕ್ವೆನ್ಸಿ ವೇರಿಯಬಲ್ ಕಾರ್ಯ ಆವರ್ತನೆಯ ನಾಡಿ ಅಗಲ ಸಮನ್ವಯತೆ ಔಟ್ಪುಟ್ ಉತ್ಪಾದನೆಗೆ ಉಪಯೋಗಿಸಲಾಗುತ್ತದೆ ಎಂದು. ಈ ಲೇಖನದಲ್ಲಿ, ವೇರಿಯಬಲ್ ಕಾರ್ಯ ಆವರ್ತನೆಯ ನಾಡಿ ಅಗಲ ಸಮನ್ವಯತೆ ಪೀಳಗೆಯ ಮ್ಯಾಟ್‌ಲ್ಯಾಬ ಸೀಮೂಲಿಂಕ್ ಬಳಸಿಕೊಂಡು ಜಾರಿಗೊಳಿಸುತ್ತದೆ.

**ಪರಿಚಯ** : ಪಲ್ಸ್ ಅಗಲ ಸಮನ್ವಯತೆ (ಪೀಡಬ್ಲ್ಯೂಮ್) ಎಲ್ಲಾ ಅಂತರ್ಗತ ವ್ಯವಸ್ಥೆಗಳಲ್ಲಿ ಅವಿಭಾಜ್ಯ ಭಾಗವಾಗಿದೆ. ಇದು ವ್ಯಾಪಕವಾಗಿ ವಿದ್ಯುತ್ ವಿದ್ಯುನ್ಮಾನ ಅನ್ವಯಗಳನ್ನು ಅತ್ಯಂತ ನಿಯಂತ್ರಣ ತಂತ್ರವಾಗಿ ಬಳಸಲಾಗುತ್ತದೆ (1) ಇತ್ಯಾದಿ ಡಿಸಿ / ಡಿಸಿ, ಡಿಸಿ / ಎಸಿ. ಪೀಡಬ್ಲಯೂ ಇನ್ವರ್ಟರ್ ಮುಂತಾದ ವಿಶೇಷ ವಾಗಿ ಅದರ ಕಾರ್ಯಾಚರಣೆಗೆ ಪೀಡಬ್ಲ್ಯೂಮ್ ಪರಿಕಲ್ಪನೆಯನ್ನು ಬಳಸುವಲ್ಲಿ ಈ ವಿದ್ಯುತ್ ಪರಿವರ್ತಕಗಳು ಒಂದು. ಇತ್ತೀಚೆಗೆ ಪೀಡಬ್ಲ್ಯೂಮ್ ಪರ್ಯಾಕ ಉನ್ನತ ಪ್ರದರ್ಶನಗಳ ಉದ್ಯಮದ ಅನ್ವಯಿಸುವಿಕೆಗಳಲ್ಲಿ ಪ್ರಸಿದ್ಧವಾಗಿದೆ. ಅನುಲಾಗ್ ಮತ್ತು ಡಿಜಿಟಲ್ ಟೆಕ್ನಿಕ್ಸ್-ಎರಡು ಪೀಡಬ್ಲ್ಯೂಮ್ ತಂತ್ರಗಳನ್ನು ವಿಧಿಗಳಿವೆ. ಈ ಅನಲಾಗ್ ವಿಧಾನಗಳು ಅನಾನುಕೂಲಗಳನ್ನು (2) ಮತ್ತು (3) ಅವರು ಸುಲಭವಾಗಿ ತಿಳಿಸಿದ್ದಾರೆ. ಅದು ಏನೆಂದರೆ ಅವು ಶಬ್ದ ಪರಿಣಾಮ, ವೋಲ್ಟೇಜ್ ಮತ್ತು ತಾಪಮಾನ ಬದಲಾದಂತೆ ಬದಲಾಗುತ್ತದೆ. ಖಜಿಟಲ್ ವಿಧಾನ ವೇರಿಯಬಲ್ ಪೀಡಬ್ಲ್ಯೂಮ್ ಸಂಕೇತಗಳನ್ನು ವಿನ್ಯಾಸಗೊಳಿಸಲು ಒಳ್ಳೆಯದು. ಅವುಗಳು ಅತ್ಯಂತ ಸುಲಭವಾದ ಮತ್ತು ವಾತಾವರಣದಲ್ಲಿನ ಸದ್ದುಗಳ ವಿಷಯದಲ್ಲಿ (2) ಕಡಿಮೆ ಸೂಕ್ಷ್ಮತೆಯನ್ನು ಹೊಂದಿರುತ್ತವೆ. ನಿರ್ಮಿಸಲು ಸುಲಭವಾಗಿರುತ್ತದೆ ಮತ್ತು ಅತ್ಯಂತ ವೇಗವಾಗಿ ಕಾರ್ಯ ನಿರ್ವಹಿಸುತ್ತವೆ.

ಯಾವುದೇ ಸೀಮೂಲಿಂಕ್ ಆಧಾರಿತ ವಿನ್ಯಾಸವನ್ನು ಸೂಕ್ತ ಮ್ಯಾಟ್‌ಲ್ಯಾಬ ಬಳಸಿ ಅಭಿವೃದ್ಧಿ ಮಾಡಲಾಗುತ್ತದೆ. ಇದು ವಿನ್ಯಾಸ ಅನುಷ್ಠಾನಕ್ಕೆ ಬಾರಿ ಕಡಿಮೆ ಸಮಯ ತೆಗೆದುಕೊಳ್ಳುತ್ತದೆ. ಸೀಮೂಲಿಂಕ್ ಆಧಾರಿತ ವಿನ್ಯಾಸಗಳನ್ನು ಕಡಿಮೆ ಬೆಲೆಯಲ್ಲಿ ಸಾಧಿಸಲಾಗುತ್ತದೆ ಹೀಗಾಗಿ ಆರ್ಥಿಕವಾಗಿ ಸಣ್ಣ ವಿನ್ಯಾಸಗಳಿಗೆ ಸೂಕ್ತವಾಗಿದೆ. ಪೀಡಬ್ಲ್ಯೂಮ್ ಸಿಗ್ನಲ್ ಸ್ಥಿರವಲ್ಲ, ಮುಖ್ಯ ನಿಯತಾಂಕ ಪೀಡಬ್ಲ್ಯೂಮ್ ಅವಧಿಯ ಒಂದು ಭಾಗವಾಗಿರುವ ಒಂದು ಕಾರ್ಯ ಆವರ್ತನೆಯ ಡಿ ಆಗಿದೆ, ಸಮೀಕರಣ (1) ಕೆಳಗಿನ ಡ್ಯೂಟಿ ಸೈಕಲ್ಗಳನ್ನು ವಿವರಿಸುತ್ತದೆ:

ಡ್ಯೂಟಿ ಸೈಕಲ್ ಲ=(ಎನ್‌ಬಿಟ್ ಪದದ ಪೂರ್ಣಾಂಕ ಮೌಲ್)/2 ^ಎನ್ (1)



ಚಿತ್ರ. 1.50% ಕರ್ತವ್ಯ ಸೈಕಲ್ ಪೀಡಬ್ಲ್ಯೂಮ್

**ಪ್ರಸ್ತಾಪಿಸಿದ ಪೀಡಬ್ಲ್ಯೂಮ್ ವಾಸ್ತುಶಿಲ್ಪ**: ಅವರ ಔಟ್ಪುಟ್ ಕಂಪರೇಟರ್ ಸಹಾಯದಿಂದ ನೊಂದಣಿ ಔಟ್ಪುಟ್ ಮತ್ತು ಅಂಗಡಿಗಳು ಬಯಸಿದ ಇನ್ಪುಟ್ ಕಾರ್ಯ ಆವರ್ತನೆಯ ಹೋಲಿಸಿದರೆ ಉನ್ನತ ವೇಗದಲ್ಲಿ ಎನ್-ಬಿಟ್ ಮುಕ್ತ ಓಟ ಕೌಂಟರ್ ಬಳಸಿ ಪೀಡಬ್ಲ್ಯೂಮ್ ಸೃಷ್ಟಿಸಲು ಸಹಾಯವಾಗುತ್ತದೆ. ಎರಡೂ ಈ ಮೌಲ್ಯಗಳು ಸಮನಾಗಿದ್ದರೆ ಕಂಪರೇಟರ್ ಔಟ್ಪುಟ್ 1ನೇ ಸಮಾನವಾಗಿರುತ್ತದೆ. ಈ ಕಂಪರಟರ್ ಔಟ್ಪುಟ್ ಆರ್ ಸ ಲ್ಯಾಚ್ ಹೊಂದಿಸಲು ಬಳಸಲಾಗುತ್ತದೆ. ಅಂಗಡಿಯಲ್ಲಿ ಸ್ಥಳಾಂತರವನ್ನು ಸಿಗ್ನಲ್ ಆರ್ ಸ ಲ್ಯಾಚ್ ಹೊಂದಿಸಲು ಬಾಳಸಲಾಗುತ್ತದೆ. ಆರ್ ಸ ಲ್ಯಾಚ್ ಬಯಸಿದ ಪೀಡಬ್ಲ್ಯೂಮ್ ಔಟ್ಪುಟ್ ನೀಡುತ್ತದೆ. ಈ ಸ್ಥಳಾಂತರವನ್ನು ಸಿಗ್ನಲ್ ಸಹ ರಿಜಿಸ್ಟರ್ ಹೊಸ ಎನ್-ಬಿಟ್ ಕಾರ್ಯ ಆವರ್ತನೆಯ ಲೋಡ್ ಬಳಸಲಾತ್ತದೆ. ಪೀಡಬ್ಲ್ಯೂಮ್ ಸ್ಥಿರ ಆವರ್ತನ ಮತ್ತು ವೇರಿಯಬಲ್ ವೋಲ್ಟೇಜ್ ಹೊಂದಿದೆ. ಮೂಲ ಪೀಡಬ್ಲ್ಯೂಮ್ ಪೀಡಬ್ಲ್ಯೂಮ್ ಸಂಕೇತಗಳನ್ನು ಉತ್ಪಾದಿಸುತ್ತದ 10 ವೋಲ್ಟ್ ಇಂದ ೦ ವೋಲ್ಟ್ ಈ ವೋಲ್ಟೇಜ್ ಮೌಲ್ಯವನ್ನು ಬದಲಾವಣೆಗಳನ್ನು ಎರಡು ಮೌಲ್ಯಗಳು ನಡುವೆ ಹೋಲಿಸಲುವ ಒಂದು ಕಂಪರೇಟರ್ ಅಗತ್ಯವಿದೆ. ಮೊದಲ ಮೌಲ್ಯ N ಬಿಟ್ ಕೌಂಟರ್ ಮತ್ತು ಎರಡನೇ ಮೌಲ್ಯವನ್ನು ರಚಿತವಾದ ಚದರ ಸಿಗ್ನಲ್ ಕಾರ್ಯ ಆವರ್ತನೆಯ ಮಾಹಿತಿಯನ್ನು ಹೊಂದಿದೆ. ಒಂದು ಉಕ್ಕಿ ಬಂದ ಕೌಂಟರ್ ಲೋಡ್ ಸಿಗ್ನಲ್ ಉತ್ಪಾದಿಸುತ್ತದೆ. ಲೋಡ್ ಸಿಗ್ನಲ್ ಸಕ್ರಿಯ ಆಗುತ್ತದೆ ಒಮ್ಮೆ ರಿಜಿಸ್ಟರ್ ಹೊಸ ಕಾರ್ಯ ಆವರ್ತನೆಯ ಮೌಲ್ಯವನ್ನು ಲೋಡ್ ಮಾಡುತ್ತದೆ. ಲೋಡ್ ಸಿಗ್ನಲ್ ಸಹ ಲ್ಯಾಚ್ ಮರುಹೊಂದಿಸಲು ಬಳಸಲಾಗು ತ್ತದೆ. ಲ್ಯಾಚ್ ಔಟ್ಪುಟ್ ಪೀಡಬ್ಲ್ಯೂಮ್ ಸಂಕೇತ. ಈ ಕಾರ್ಯ ಆವರ್ತನೆಯ ಮೌಲ್ಯದಲ್ಲಿ ಆಗುವ ಬದಲಾವಣೆಯನ್ನು ತೋರಿಸಿಕೊಡುತ್ತದೆ.




**ಚಿತ್ರ. 2 ವೇರಿಯಬಲ್ ಕರ್ತವ್ಯ ಜೀವನಚಕ್ರ ಪೀಡಬ್ಲ್ಯೂಮ್ ಆಫ್ ಬ್ಲಾಕ್ ರೇಖಾಚಿತ್ರ**

ಪ್ರಸ್ತಾವಿತ ವಾಸ್ತುಶಿಲ್ಪದ ಚಿತ್ರವನ್ನು ಮೇಲೆ ಕಾಣಿಸಿದ ಚಿತ್ರದಲ್ಲಿ ತೋರಿಸಲಾಗಿದೆ. ಚಿತ್ರ 2. ವ್ಯವಸ್ಥೆಯನ್ನು ಇನ್ಪುಟ್ ಸುಲಭವಾಗಿ ಮ್ಯಾಟ್‌ಲ್ಯಾಬ ಸೀಮೂಲಿಂಕ್ ವಿನ್ಯಾಸದ ಮುಲಕ ಸಾಧಿಸಬಹುದು ಇದು ಪೀಡಬ್ಲ್ಯೂಮ್ ಕಾರ್ಯ ಆವರ್ತನೆಯ ಮೌಲ್ಯವನ್ನು ಆಧರಿಸಿ ಮತ್ತು N ಬಿಟ್ ಮೌಲ್ಯವನ್ನು ಆಧರಿಸಿದೆ. ಎನ್–ಬಿಟ್ ಮೌಲ್ಯವನ್ನು ಇನ್ಪುಟ್ ಆಗಿ ಹೊಂದಿರುವ ಎನ್–ಬಿಟ್ ರಿಜಿಸ್ಟರ್ ಔಟ್ಪುಟ್, ಒಂದು ಕಂಪರೇಟರ್ ದೃಷ್ಟಿಯಿಂದ ಎನ್–ಬಿಟ್ ಮುಕ್ತ ಚಾಲನೆಯಲ್ಲಿರುವ ಸಮಕಾಲಿಕ ಕೌಂಟರ್ ಫಲಿತ ಮೌಲ್ಯ, ಹೋಲಿಸಲಾಗುತ್ತದೆ. ಈ ಎರಡು ಮೌಲ್ಯಗಳು ಸಮಾನ ಆಗಿ, ಕಂಪರೇಟರ್ ಔಟ್ಪುಟ್ ಪೀಡಬ್ಲ್ಯೂಮ್ ತರಂಗ ಉತ್ಪಾದಿಸುವ ಆರ್ / ಎಸ್ ಲ್ಯಾಚ್ ಔಟ್ಪುಟ್, ಮರುಹೊಂದಿಸಲು ಬಳಸಲಾಗುತ್ತದೆ. ಕೌಂಟರ್ ಪೀಡಬ್ಲ್ಯೂಮ್ ಅವಧಿಯ ಅಂತ್ಯದಲ್ಲಿ ಒಂದು ಉನ್ನತ ಸ್ಥಿತಿಯನ್ನು ತಲುಪಿದಾಗ ಆರ್/ಎಸ್ ಲ್ಯಾಚ್ ಔಟ್ಪುಟ್ ಹೊಂದಿಸಲಾಗಿದೆ. ಕೌಂಟರ್ "ಹೆಚ್ಚುವರಿ" ಸಿಗ್ನಲ್ ಪೀಡಬ್ಲ್ಯೂಮ್ ಜನರೇಟರ್ ಇನ್ಪುಟ್ ರಿಜಿಸ್ಟರ್ ಹೊಸ ಕಾರ್ಯ ಆವರ್ತನೆಯ ಮೌಲ್ಯವನ್ನು ಲೋಡ್ ಬಳಸಲಾಗುತ್ತದೆ.

**ಸೀಮೂಲಿಂಕ್ ನಿಯಂತಾಂಕಗಳು**: ಡಿಸೈನ್ ಮ್ಯಾಟ್‌ಲ್ಯಾಬ ಸೀಮೂಲಿಂಕ್ ಆವೃತ್ತಿ R 2014$_a$ ಬಿಟ್ ರಲ್ಲಿ ವ್ಯವಸ್ಥೆಯ ಉಪಕರಣ ಬಳಸಿ ನಡೆಸಲಾಗುತ್ತದೆ. ಕೆಳಗಿನ ಬ್ಲಾಕ್ಗಳನ್ನು ಕಾರ್ಯ ಸಾಧಿಸಲು ಬಳಸಲಾಗುತ್ತದೆ.

**ಎನ್ ಬಿಟ್ ಕೌಂಟರ್**




**ಚಿತ್ರ. 3 ಕೌಂಟರ್ ಚಿತ್ರ**

ಚಿತ್ರ 3. ಕೌಂಟರ್ ಬ್ಲಾಕ್ ಸಂಖ್ಯೆಗಳು ಒಂದು ನಿರ್ದಿಷ್ಟಪಡಿಸಿದ ಶ್ರೇಣಿ (ಎನ್) ಮೂಲಕ ಲೆಕ್ಕ. ಕೌಂಟರ್ ಬ್ಲಾಕ್ ಒಂದೇ ಇನ್ಪುಟ್ ಸ್ವೀಕರಿಸುತ್ತದೆ. ರೀಸೆಟ್ಟು ಕೌಂಟರ್ ನಿಯಂತ್ರಿಸಲು ಬಳಸಲಾಗುತ್ತದೆ. ರೀಸೆಟ್ '1' ಇದೆ ಆಗ ಕೌಂಟರ್ ಕೆಲಸ ಮಾಡುವುದಿಲ್ಲ. ಯಾವಾಗ ರೀಸೆಟ್ '0' ಇದೆ ಆಗ ಕೌಂಟರ್ ನಿರಂತರ ರೀತಿಯಲ್ಲಿ ಎಣಿಕೆ ಮಾಡುತ್ತದೆ. ಪ್ರಸ್ತಾವಿತ ವಾಸ್ತುಶೈಲಿಯ ಪ್ರಕಾರವಾಗಿ ಎರಡು ಕೌಂಟರ್ ಅಗತ್ಯವಿದೆ. ಒಂದು ಹೆಚ್ಚಿನ ವೇಗದ ಎನ್–ಬಿಟ್ ಮುಕ್ತ ಓಟ ಕೌಂಟರ್ ಮತ್ತು ಇನ್ನೊಂದನ್ನು ವಿವಿಧ ಕಾರ್ಯ ಆವರ್ತನೆಯ ಉತ್ಪಾದಕತೆಗೆ.

**ಎನ್‌ಬಿಟ್ ರೆಜಿಸ್ಟರ್**




**ಚಿತ್ರ.4 ಡಿಸ್ಕ್ರೀಟ್ ಶಫ್ಟ್ ರಿಜಿಸ್ಟರ್**

ಚಿತ್ರ. ರ ಮುಕ್ತ ಓಟ ಕೌಂಟರ್ ಅದರ ಹೆಚ್ಚಿನ ಸ್ಥಿತಿಗೆ ತಲುಪಿದಾಗ ಅದರ ಕಾರ್ಯ ಆವರ್ತನೆಯ ಮೌಲ್ಯವನ್ನು ಹಿಡಿಯಲು ಬಳಸಲಾಗುತ್ತದೆ. ಉಕ್ಕಿ ಸಿಗ್ನಲ್ ಮುಕ್ತ ಓಟ ಅಂಗಡಿಯಲ್ಲಿ ಶಕ್ತಗೊಳಿಸುತ್ತದೆ. ಒಮ್ಮೆ ನಂತರ ಕಾರ್ಯ ಆವರ್ತನೆಯ ಜನರೇಟರ್ ಕೌಂಟರ್ ಒಂದು ಅಸ್ತಿತ್ವದಲ್ಲಿರುವ ಮೌಲ್ಯ.

**ಎನ್‌ಬಿಟ್ ಕಂಪರೇಟರ್**




**ಚಿತ್ರ. 5 ಕಂಪರೇಟರ್**

ಚಿತ್ರ. ತ ಕಾರ್ಯ ಆವತ್ನೆಯ (ಎನ್–ಬಿಟ್ ಮೌಲ್ಯವನ್ನು) ಬಯಸಿದ ಅಂಗಡಿಗಳಲ್ಲಿ ಈ ಮೌಲ್ಯಗಳನ್ನು ಎರಡೂ ಸಮ ಮಾಡುವಾಗ ಕಂಪರೇಟರ್ ಔಟ್ಪುಟ್ 1 ಸಮಾನವಾಗಿರುತ್ತದೆ ಹೊಂದಿಸಿದ ರಿಜಿಸ್ಟರ್ ಔಟ್ಪುಟ್ ಮುಕ್ತ ಕೌಂಟರ್ ಔಟ್ಪುಟ್ ಹೋಲಿಸಿ ಬಳಸಲಾಗುತ್ತದೆ.

**ಬಿಸ್ಟೆಬಲ್**




**ಚಿತ್ರ. 6 ಬಿಸ್ಟೆಬಲ್**

ಕೆಂಪರೇಟರ್ ಔಟ್ಪುಟ್ ಆರ್ ಎಸ್ ಲ್ಯಾಚ್ ಮರುಹೊಂದಿಸಲು ಬಳಸಲಾಗುತ್ತದೆ ಕೌಂಟರ್ ಚಳಗಾಲದಿಂದ ಸ್ಥಳಾಂತರವನ್ನು ಸಿಗ್ನಲ್ ಲ್ಯಾಚ್ ಹೊಂದಿಸಲು ಬಳಸಲಾಗುತ್ತದೆ. ಆರ್ ಎಸ್ ಲ್ಯಾಚ್ ಔಟ್ಪುಟ್ ಬಯಸಿ ಪೀಡಬ್ಲ್ಯೂಮ್ ಔಟ್ಪುಟ್ ನೀಡುತ್ತದೆ.

**ಸೀಮೂಲಿಂಕ್ ವಿನ್ಯಾಸ**: ವೇರಿಯಬಲ್ ಕಾರ್ಯ ಆವರ್ತನೆಯ ಪೀಡಬ್ಲ್ಯೂಮ್ ಫಾರ್ ಸೀಮೂಲಿಂಕ್ ಮಾದರಿಯಾಗಿ ಚಿತ್ರದಲ್ಲಿ ತೋರಿಸಲಾಗಿದೆ. ಚಿತ್ರ ಉ. ಡಿಸೈನ್ ಸೀಮೂಲಿಂಕ್ ಬ್ಲಾಕ್ ಸೆಟ್ ಒಳಗೊಂಡಿದೆ.



**ಚಿತ್ರ. 7 ವೇರಿಯಬಲ್ ಕಾರ್ಯ ಆವರ್ತನೆಯ ಪೀಡಬ್ಲ್ಯೂಮ್‌ನ ಸೀಮೂಲಿಂಕ್ ವಿನ್ಯಾಸ**

ವ್ಯವಸ್ಥೆಯ ಇನ್ಪುಟ್ ಸುಲಭವಾಗಿ ಮ್ಯಾಟ್‌ಲ್ಯಾಬ ಸೀಮೂಲಿಂಕ್ ವಿನ್ಯಾಸದ ಮೂಲಕ ಸಾಧಿಸಬಹುದು ಇದು ಅಗತ್ಯವಾದ ಪೀಡಬ್ಲ್ಯೂಮ್ ಕಾರ್ಯ ಆವರ್ತನೆಯ ಮೌಲ್ಯವನ್ನು ಆಧರಿಸಿ, ನಾಡಿ ಜನರೇಟರ್ ಎನ್–ಬಿಟ್ ದತ್ತಾಂಶವನ್ನು ಉತ್ಪಾದಿಸುತ್ತದೆ. ಎನ್–ಬಿಟ್ ಕಾರ್ಯ ಆವರ್ತನಯ ದತ್ತಾಂಶ ಪ್ರಧಾನ ಹೊಂದಿರುವ ಎನ್–ಬಿಟ್ ಶಿಫ್ಟ್ ರೆಜಿಸ್ಟರ್ ಔಟ್ಪುಟ್, ಒಂದು ಕಂಪರೇಟರ್ ದೃಷ್ಟಿಯಿಂದಲೂ ಎನ್–ಬಿಟ್ ಮುಕ್ತ ಚಾಲನೆಯಲ್ಲಿರುವ ಸಮಕಾಲಿಕ ಕೌಂಟರ್ ಫಲಿತ ಮೌಲ್ಯ, ಹೋಲಿಸಲಾಗುತ್ತದೆ.

ಕಂಪರೇಟರ್ ಸಹಾಯದಿಂದ ನಿರ್ಮಿಸಿದ ಮತ್ತು ಶೂನ್ಯ ಬ್ಲಾಕ್ ಸೆಟ್‌ನಿಂದ ತಯಾರಿಸಿದ ವ್ಯವಸ್ಥೆಯನ್ನು ಹೋಲಿಸಿ ನೊಡಬಹುದಾಗಿದೆ. ಮುಕ್ತ ಓಟ, ಪ್ರತಿ ಮೌಲ್ಯವನ್ನು ಕಾರ್ಯ ಆವರ್ತನೆಯ ಮೌಲಲ್ಯವನ್ನು ಹೋಲಿಕೆ ಮಾಡಿದಾಗ, ಕಂಪರೇಟರ್ ಔಟ್ಪುಟ್ ಸೆಟ್ ಆಗುತ್ತದೆ. ಕಂಪರೇಟರ್ ಔಟ್ಪುಟ್ ಪೀಡಬ್ಲ್ಯೂಮ್ ತರಂಗ ಉತ್ಪಾದಿಸುವ ಆರ್/ಎಸ್ ಲ್ಯಾಚ್, ಮರುಹೊಂದಿಸಲು ಬಳಸಲಾಗುತ್ತದೆ. ಮುಕ್ತ ಓಟ ಕೌಂಟರ್ ಪೀಡಬ್ಲ್ಯೂಮ್ ಅವಧಿಯ ಅಂತ್ಯದಲ್ಲಿ ಒಂದು ಉಕ್ಕಿ ಸ್ಥಿತಯನ್ನು ತಲುಪಿದಾಗ ಆರ್/ಎಸ್ ಲ್ಯಾಚ್ ಹೊಂದಿಸಲಾಗಿದೆ. ಅದೇ ಕೌಂಟರ್ "ಹೆಚ್ಚುವರಿ" ಸಿಗ್ನಲ್ ಹೊಸ ಕಾರ್ಯ ಆವರ್ತನೆಯ ಮೌಲ್ಯವನ್ನು ಲೋಡ್ ಬಳಸಲಾಗುತ್ತದೆ.

**ಸೀಮೂಲಿಂಕ್ ಮಾದರಿ ಫಲಿತಾಂಶಗಳು** : ಸಾಫ್ಟ್ವೇರ್ ಪರಾಮರ್ಶನ ಮಾದರಿಯ ಫಲಿತಾಂಶಗಳು ಕೆಳಗೆ ತೋರಿಸಲಾಗಿದೆ.



**ತೀರ್ಮಾನ**: ಇಲ್ಲಿ ನಾವು ಮ್ಯಾಟ್‌ಲ್ಯಾಬ ಸೀಮೂಲಿಂಕ್ ಬಳಸಿಕೊಂಡು ಕಾರ್ಯ ಆವರ್ತನೆಯ ವ್ಯತ್ಯಾಸದೊಂದಿಗೆ ಪೀಡಬ್ಲ್ಯೂಮ್ ಸಂಕೇತಗಳ ಪೀಳಿಗೆಯ ಬಗ್ಗೆ ಚರ್ಚಿಸಲಾಗಿದೆ. ಇಲ್ಲಿ ಮ್ಯಾಟ್‌ಲ್ಯಾಬ R2014a ಆವೃತ್ತಿಯನ್ನು ಮಾತ್ರ ಬಳಸಲಾಗಿದೆ. ಕಂಪರೇಟರ್ ಸೂಕ್ತ ಪೀಡಬ್ಲ್ಯೂಮ್ ಸಂಜ್ಞೆಗಳನ್ನು ನೊಂದಣಿ ಮತ್ತು ಕೌಂಟರ್ ಸಹಾಯದಿಂದ ಡೇಟಾ ಹೋಲಿಸಿ ನೋಡಲು ಅನುಕೂಲವಾಗಿದೆ. ರಚಿತವಾದ ಪೀಡಬ್ಲ್ಯೂಮ್ ಸಹಾಯತಗಳು ಚದರ ತರಂಗ ಆವರ್ತನವನ್ನು ಅವಲಂಬಿಸುತ್ತದೆ ಸ್ಥಿರ ಆವರ್ತನವು, ಮತ್ತು 0% ನಿಂದ 100% ವರೆಗೆ ಬದಲಾಗುತ್ತದೆ. ಇದು ಒಂದು ವೇರಿಯಬಲ್ ಕರ್ತವ್ಯ ಚಕ್ರವನ್ನು ಹೊಂದಿರುತ್ತವೆ. ಈ ಸಂಕೇತಗಳನ್ನು ಒಂದು BLDC ಮೋಟಾರ್ ಓಡಿಸಲು ಬಳಸಬಹುದು.

**ಉಲ್ಲೇಖಗಳು** :

1) Koutroulis E, Dollas J ªÀÄvÀÄÛ Kalaitzakis ಕೆ, "FPGA ಮತ್ತು CPLD ಮಾತ್ರಕ್ಕೆ ಬಳಸಿಕೊಂಡು ಹೈ–ಫ್ರೀಕ್ವೆನ್ಸಿ ನಾಡಿ ಅಗಲ ಸಮನ್ವಯತೆ ಅನುಷ್ಠಾನ", ವ್ಯವಸ್ಥೆಗಳ ಯಮತ್ರಶಿಲ್ಪ, Vol.52 (2006) ಜರ್ನಲ್: ಪುಟಗಳು. 332–344.

2) ರಹೀಮ್ ಎನ್‌ಎ ಮತ್ತು ಇಸ್ಲಾಂ ಧರ್‌ಮ ಝುಡ್, "ಸಿಂಗಲ್ ಫೇಸ್ ಸಕ್ರಿಯ ಪವರ ಫಿಲ್ಟರ್ ಫೀಲ್ಡ್ ಪ್ರೋಗ್ರಾಮೆಬಲ್ ಗೇಟ್ ಅರ್ರೇಗಳು ಆಧಾರಿತ ಪಲ್ಸ್ ಅಗಲ ಸಮನ್ವಯತೆ" ಅನ್ವಯಿಕ ವಿಜ್ಞಾನಿಗಳ ಅಮೇರಿಕನ್ ಜರ್ನಲ್, Vol. 6 (2009): pp. 1742-1747.

3) Retif ಜೆಎಂ, Allard ಬಿ, Jorda ಎಕ್ಸ್ ಮತ್ತು ಪೆರೆಜ್ ಎ, "ವಿದ್ಯುತ್ ಪರಿವರ್ತಕ ಪೀಡಬ್ಲ್ಯೂಮ್ ತಂತ್ರಗಳನ್ನು ASIC ಗಳನ್ನು ಬಳಸಿ", ಕೈಗಾರಿಕಾ ಎಲೆಕ್ಟ್ರಾನಿಕ್ಸ್, ಕಂಟ್ರೋಲ್ ಮತ್ತು ಇನ್ಸ್ಟ್ರುಮೆಂಟೇಶನ್, ಇ ಎಕ್ಸ್ಪ್ಲೋರ್ ಪ್ರೆಸ್, ಮಾಯಿ ಮೇಲೆ ಅಂತರರಾಷ್ಟ್ರೀಯ ಸಮ್ಮೇಳನ ಕಾರ್ಯಕಲಾಪಗಳು ಎಚ್, ಯುಎಸ್‌ಎ, (1993) ಉಟಗಳು. 683–688.

# ಲೇಖಕರ ಪಟ್ಟಿ

ಭಾನು ಕೆ.ಎನ್. – 66, 72
ಲೊಕೇಶ್.ಜಿ.ವೈ – 161
ಲೊಕೇಶ್.ಜಿ.ವೈ – 6
ಸುನಿತಾ – 265
ಸಂತೋಷ, ವಿ. ಪಿ – 196
ಸಂತೋಷ್ ಕುಮಾರ್, ಸಿ.ಎಸ್ – 227
ಸ್ವಾಮಿ ಸಿ.ಟಿ. – 253
ದಿನೇಶರಾವ್.ಎಸ್ – 38
ದೀಪಿಕಾ, ಸಿ – 183
ದಿವ್ಯಶಂಕರ್ – 104
ದಿವಾಕರ ಟಿ.ಎಸ್ – 85
ನವೀನ್‌ಕುಮಾರ್ ವಿ. ಎಂ –179
ನಳಿನ, ಸಿ. ಎನ್ – 200
ನಾಗಭೂಷಣ ಹೆಚ್. ಎಸ್ – 186
ನಾಗರಾಜು ಬಿ.ಆರ್ – 41
ನೀಲಕಂಠ ಸ್ವಾಮಿ – 12
ಪ್ರದೀಪ್ ಕ್ವಿ – 196
ಪ್ರಫುಲ್ಲ ಆಚಾರ್ಯ – 139
ಪುಟ್ಟಲಕ್ಷಮ್ಮಮ್ಮ, ಜಿ.ಸಿ – 227
ಪ್ರೋ. ಪಿ.ಕೆ ಖಂಡೋಬಾ – 12
ಶ್ರೇಯಸ್‌ಆರ್ – 244
ವಿಶ್ವನಾಥ ಬೀರಾದಾರ – 166
ಮಿಸ್.ರಮ್ಯಶ್ರೀ – 123
ವಿಜಾಯ್ ವಿ. – 144
ಬಸವರಾಜ, ಪಿ. ಕೆ – 196
ಬಸವರಾಜ, ಪಿ. ಕೆ. – 200
ಬಸವರಾಜು – 207, 208
ಬಸವೇ ಗೌಡ – 6
ಬಸವೇಗೌಡ – 161
ಬಿ. ಪುಟ್ಟಪ್ಪನವರ – 173, 176
ಬಿ.ಎಮ್.ನಾಗಭೂಷಣ – 150
ಸಿದ್ದರಾಜು.ಈ. – 46
ಶ್ರೀಪ್ರಿಯ ಎಮ್ – 144
ಶ್ರೀಮತಿ ಎಚ್. ಜ್ಯೋತಿ – 112
ಶ್ರೀಮತಿ. ಶೋಭಾ ಹೂಲಿಕಟ್ಟಿ – 48
ಚೆನ್ನಸ್ವಾಮಿ.ಎನ್ – 55
ವರ್ಷ, ಕೆ.ಜೆ – 210
ಮನು, ಟಿ.ಎನ್ – 207, 208, 210, 212, 213
ಮಲ್ಲಪ್ಪ ಬಂಡಿ – 107
ಮಮತಾ, ಜಿ.ಎಸ್ – 227
ಮಂಜುನಾಥ ಸುಣಗಾರ – 31
ಮಂಜುನಾಥ್ ಎಸ್. ಪಿ – 238, 240
ಮಂಜುನಾಥ್, ಎಸ್.ಪಿ – 212
ಮಧುಕೇಶ್ವರ – 173, 176
ಮೋಹನ್ ಗೌಡ ಸಿ.ಎಮ್ – 144
ಮೊಹಮ್ಮದ್ ಸಾಖೀಬ್‌ಉಲ್ಲಾ, ಹೆಚ್ – 196, 200
ಯು. ಕೆ. ಶಾನವಾಡ – 166, 188
ಯೊಗೇಂದ್ರ, ಎನ್.ಡಿ – 200
ಅನಂತ ಆಚಾರ್ಯ ಎಸ್ – 153
ಅಶ್ವತ್, ಎಮ್.ಎನ್ – 207, 208, 212, 213
ಅಶ್ವಿನಿ, ಎಂ.ಎಸ್ – 227
ಆಶೀಫ ಹಾದಿಮನಿ – 159
ಆರ್. ಶ್ರೀನಿವಾಸ್ – 265
ಜಡೇಗೌಡ, ಎಮ್ – 208, 212
ಡಾ|| ಎಂ. ಎ. ಶೃತಿಕೀರ್ತಿ – 26, 77
ಜಿ. ಚಂದ್ರಶೇಖರ್ – 221, 225
ರಶ್ಮಿ ದೇಸಾಯಿ – 210
ರಾಮ್ ಸಾಗರ್ – 265
ರಾಮ್ ಕುಮಾರ್ ಕೆ – 144
ರಾಜಶ್ರೀ. ಕೆ. ನಾಯ್ಕ – 97
ರಾಜೇಶ್ವರಿ ಬಿ.ಮೊರಬದ – 260
ರಾಕೇಶ ಸಿ ಮಠದ – 6
ರಾಕೇಶ್.ಸಿ.ಮಠದ – 161
ರಘು.ಬಿ.ಎನ್ – 6
ಎ. ಹೆಬ್ಬಾರ್. – 221, 225
ಎಸ್, ಕುಶಾಲಪ್ಪ, ಸಿ.ಜಿ – 207, 208
ಎಸ್. ಬಿ. ರಂಗನಾಥ್ – 250
ಎಸ್.ಬಿ. ಗೌಡರ – 225
ಎನ್. ಎಲ್. ರಾಜೇಶ್ – 188
ಎಮ್.ಎಸ್.ಉಮ –179
ಎಮ್.ಟಿ. ಮಹಂತೇಶ್ – 221, 225
ಎ್. ವಿ. ಕೃಷ್ಣಮೂರ್ತಿ – 244
ಐ. ಶಂಕರಗೌಡ – 166
ಟಿ ಎನ್ ಶಿವಕುಮಾರ – 57
ಹೆಚ್.ಸಿ.ಮಧುಸೂಧನ – 150
ಕಾಶೀನಾಥ ಶಾಸ್ತ್ರಿ ಹೆಚ್.ವಿ. – 52, 137
ಕು. ದೀಪಾ ಕಿತ್ತೂರ – 63
ಕು.ರಾಜೇಶ್ವರಿ ಆಚಾರ್ಯ – 152
ಕೃಷ್ಣ ಕುಲಕರ್ಣಿ – 244
ಕ್ಲಾರಾ ಮಾನಸ – 210
ಕೆ. ಅಶೋಕರೆಡ್ಡಿ – 188
ಕೆಂಪರಾಜಿ ಅರಸ್. ಪಿ. ಎಸ್ – 18
ಕೊಟೇಶಿ ಲಮಾಣ – 173, 176
ಕೆಂಚರಡ್ಡಿ, ಆರ್.ಎನ್ – 213
ಡಾ. ಪ್ರಸನ್ನ ಎಸ್. ಬಿ – 230, 233
ಡಾ.ಶರ್ಮಿಳಾ. ಓ – 250
ಡಾ. ವಿ. ಕೆ. ದೇಶಪಾಂಡೆ – 173, 176
ಡಾ. ವಿದ್ಯಾಶಂಕರ್ ಎಂ.ಹೆಚ್ – 104
ಡಾ. ಸಿ.ಆರ್. ಗೋಪಿನಾಥ್ – 216, 218. 230, 233
ಡಾ. ಸಿ.ಕೆ ಪುಟ್ಟಸ್ವಾಮಿ – 12

ಡಾ. ಮಹದೇವಪ್ಪ. ಡಿ. ಗೌರಿ – 216, 218, 230, 233
ಡಾ. ಆರ್. ಪೂರ್ಣಿಮ – 21
ಡಾ. ಎನ್. ಕೆ. ಬಿರಾದಾರಪಾಟೀಲ – 173
ಡಾ. ಎಚ್.ಎನ್.ನರಸಿಂಹಮೂರ್ತಿ – 216, 218, 230, 233
ಡಾ. ಡಿ. ಎಸ್. ಉಪ್ಪಾರ – 176
ಡಾ.ಪದ್ಮಿನಿ ಎಸ್.ವಿ – 117
ಡಾ.ಬಿ.ಎಚ್.ಗುಜಲಾರ್ – 91
**ಡಾ.ಸಿ.ಕೆ.ಪುಟ್ಟಸ್ವಾಮಿ - 133**
ಡಾ.ಶೀಲಾಕುಮಾರಿ ದಾಸ – 109
**ಡಾ.ಶೀಲಾದಾಸ – 16, 29**
ಡಾ.ಈಶ್ವರ ಪಿ – 123
ಡಾ.ರಾಜಕುಮಾರ್ ನಾಗರಹಳ್ಳಿ – 216, 218
ಡಾ.ಎಂ.ಪಿ.ರಮೇಶ್ – 94
ಡಾ। ಶ್ರೀಪತಿ ಆಚಾರ್ಯ ಜಿ – 139, 141, 152, 153
ಡಾ॥ ಕೆ. ವ್ಹಿ. ಜುಕ್ತಿಮಠ – 88
ಡಿ. ಕೆ. ಪ್ರಭುರಾಜ – 188
ಶಿವಣ್ಣ – 81
ಗುರು, ಪಿ. ಎನ್ – 159
ಚನ್ನಕೇಶವ, ಬಿ.ಸಿ. – 183
ಚಂದ್ರಮೌಳಿ ಎಂ.ಎಸ್ – 66, 72
ಚಂದ್ರೇಗೌಡ ಸಿ.ಟಿ – 238
ಚರಣ ಕುಮಾರ್ – 207, 208, 210, 212, 213
ದೇವರಾಜ ಗಾಯತ್ರಿ – 253
ದೇವರಾಜು ಎಸ್.ಎಸ್ – 126, 129
ಚೇತನಕುಮಾರ ಎಂ. ವಿ – 244
ಚೈತ್ರ ಸಿ.ಎಸ್ – 144
ಧರ್ಮಣ್ಣ – 109

# ವರದಿ ಮತ್ತು ವಂದನಾರ್ಪಣೆ

ಭಾರತ ರತ್ನ ಡಾ. ಸರ್. ಎಂ. ವಿಶ್ವೇಶ್ವರಯ್ಯ ನವರ ಜನ್ಮಾಚರಣೆಯ ಸುಸಂಧರ್ಭದಲ್ಲಿ ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕವು ತಾರನಾಥ ಶಿಕ್ಷಣ ಸಂಸ್ಥೆಯ – ಲಕ್ಷ್ಮೀ ವೆಂಕಟೇಶ ದೇಸಾಯಿ ಕಾಲೇಜು, ರಾಯಚೂರು ಆವರಣದಲ್ಲಿ 11ನೇ ಕನ್ನಡ ವಿಜ್ಞಾನ ಸಮ್ಮೇಳನವನ್ನು ಸೆಪ್ಟೆಂಬರ್ 13–15, 2015 ರಲ್ಲಿ ನಡೆಸಲಾಗುತ್ತಿದೆ. ಸದರಿ ಸಮ್ಮೇಳನದಲ್ಲಿ ಸುಮಾರು 250 ವಿಜ್ಞಾನಿ / ಕನ್ನಡ ಭಾಷಾಭಿಮಾನಿಗಳು ಭಾಗವಹಿಸಿ 200 ಸಂಶೋಧನಾ ಲೇಖನಗಳನ್ನು ಕನ್ನಡ ಭಾಷೆಯಲ್ಲ ಮಂಡಿತವಾದವು. ಈ ಸಮ್ಮೇಳನದ ಮಹದೋದ್ದೇಶವು ವಿಜ್ಞಾನವನ್ನು ಕನ್ನಡ ಭಾಷೆಯಲ್ಲಿ ಜನಸಾಮಾನ್ಯರಿಗೆ ತಲುಪಿಸುವುದು ಮತ್ತು ಕನ್ನಡ ಭಾಷೆಯ ಮೇಲೆ ಪ್ರೇಮ, ಹಿರಿಮೆ ಮತ್ತು ವಿಶ್ವಾಸವನ್ನು ಬೆಳೆಸುವ ಹಾಗೂ ಕನ್ನಡ ಭಾಷೆಯ ಮೇಲೆ ಹೆಚ್ಚಿನ ಒಲವನ್ನು ಮೂಡಿಸುವಂತೆ ಮಾಡುವುದೇ ಆಗಿದೆ ಸದರಿ ಸಮ್ಮೇಳನದಲ್ಲಿ ಸುಮಾರು 32 ಪರ್ಯಾಯ ಗೋಷ್ಠಿಗಳು ನಡೆದವು.

ಈ ಸಮ್ಮೇಳನದಲ್ಲಿ ಎಲ್ಲಾ ಕ್ಷೇತ್ರದ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಸಾಂಸ್ಕೃತಿಕ– ಸಾಮಾಜಿಕ ಮತ್ತು ಆಧುನಿಕ ವಿಜ್ಞಾನಗಳ ವಿಚಾರವಾಗಿ ಲೇಖನಗಳನ್ನು ಮಂಡಿಸಲಾಗುತ್ತಿದೆ. ಇದರ ಜೊತೆಯಲ್ಲಿ ಸಮ್ಮೇಳನದ ಕೇಂದ್ರ ವಿಷಯಗಳಾದ ರಾಷ್ಟ್ರೀಯ ಅಭ್ಯುದಯಕ್ಕೆ ಪಶು ವಿಜ್ಞಾನ ಮತ್ತು ಭಾರತ ರತ್ನ ಡಾ|| ಎಂ. ವಿಶ್ವೇಶ್ವರಯ್ಯ ನವರ ಮಹತ್ವ ಪೂರ್ಣ ಕೊಡುಗೆಗಳು ಎಂಬ ವಿಚಾರಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ.

ಕನ್ನಡ ವಿಜ್ಞಾನ ಸಮ್ಮೇಳನದ ಈ ಸುಸಂಧರ್ಭದಲ್ಲಿ ಸಾಂಪ್ರದಾಯಿಕ ಮತ್ತು ಆಧುನಿಕ ವಿಜ್ಞಾನ ವಿಷಯಗಳಲ್ಲಿ ಪ್ರಭುತ್ವಗಳಿಸಿ ಅವುಗಳ ಹಿರಿಮೆಯನ್ನು ಕನ್ನಡದ ಪ್ರಬುದ್ಧತೆಯೊಡನೆ ಮೇಳವಿಸಿ ತಿಳಿಸುವ ಸಾಮರ್ಥ್ಯ ಹೊಂದಿದಂತಹ ಕರ್ನಾಟಕದ ಹೆಮ್ಮೆಯ ಪ್ರತಿಭಾನ್ವಿತ ವಿಜ್ಞಾನಿಗಳನ್ನು **"ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ"** ನೀಡಿ ಗೌರವಿಸುವುದು ಸಂಪ್ರದಾಯ ಪ್ರಸಕ್ತ **2015 ನೇ ಸಾಲಿನಲ್ಲಿ ಈ ಗೌರವಕ್ಕೆ ಪಾತ್ರರಾಗುವಂತಹ ಮಹನೀಯರುಗಳು** (1) ಡಾ|| ಎ. ಎಸ್. ಕಿರಣ್ ಕುಮಾರ್, ಚೇರ್‌ಮನ್, ಇಸ್ರೋ, ಬೆಂಗಳೂರು; (2) ಡಾ|| ಎಂ. ಮೋಹನ್ ಆಳ್ವಾ, ಚೇರ್‌ಮನ್, ಆಳ್ವಾಸ್ ಫೌಂಡೇಷನ್, ಮೂಡಬಿದ್ರೆ ಮತ್ತು (3) ಡಾ|| ಸರ್ವಮಂಗಳ ಶಂಕರ್, ಕುಲಪತಿಗಳು, ಕರ್ನಾಟಕ ರಾಜ್ಯ ಡಾ|| ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನಕಲೆ ವಿಶ್ವವಿದ್ಯಾನಿಲಯ ಮೈಸೂರು ಇವರಿಗೆ ನೀಡಲಾಯಿತು.

2015ನೇ ಸಾಲಿನ ಪಂಡಿತ್ ಭೀಮ್‌ಸೇನ್ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರವನ್ನು ಪದ್ಮಶ್ರೀ ಡಾ|| ಎಸ್. ಎಲ್. ಭೈರಪ್ಪ, ಖ್ಯಾತ ಸಾಹಿತಿಗಳು, ಮೈಸೂರು ರವರಿಗೆ ನೀಡಲಾಯಿತು.

ಸದರಿ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ಡಾ|| ಶಂಕರ್ ಬಿ. ದಂಡಿನ್, ನಿವೃತ್ತ ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಬಾಗಲಕೋಟೆ ಹಾಗೂ ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ಸಂಸ್ಥೆಯ ಸಲಹಾ ಸಮಿತಿಯ ಅಧ್ಯಕ್ಷರು ನೇರವೇರಿಸಿದರು. ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಡಾ|| ಪಾಂಡುರಂಗ ಆಶ್ರಿತ್, ಚೇರ್‌ಮನ್, ಭೌತಶಾಸ್ತ್ರ ವಿಭಾಗ, ಮೊಂಕ್ಟನ್ ವಿಶ್ವವಿದ್ಯಾಲಯ, ಮೊಂಕ್ಟನ್, ಕೆನಡಾ ರವರು ಬಿಡುಗಡೆಮಾಡಿದರು. ಸದರಿ ಸಮಾರಂಭದ ಸ್ವಾಗತ ಭಾಷಣವನ್ನು ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ಸಂಸ್ಥೆಯ ಅಧ್ಯಕ್ಷರು, ನಿವೃತ್ತ ನಿರ್ದೇಶಕರು, ರಾ.ವೈ.ಪ್ರ ಹಾಗೂ ಪ್ರಸ್ತುತ ಗೌರವಾನ್ವಿತ ಸಂಪನ್ಮೂಲ ವ್ಯಕ್ತಿ ಡಾ|| ರಾಜ ರಾಮಣ್ಣ ಚೇರ್, ಡಿ.ಆರ್.ಡಿ.ಓದ ಸದಸ್ಯರಾಗಿರುವಂತಹ ಡಾ|| ಎ. ಆರ್. ಉಪಾದ್ಯ ರವರು ನೀಡಿದರು. ಪ್ರೊ|| ಕೆ. ಐ. ವಾಸು, ಸ್ಥಾಪಕ, ಪೋಷಕ, ಮಾರ್ಗದರ್ಶಿಕ ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ರವರು ಪ್ರಾಸ್ತಾವಿಕ ಭಾಷಣ ನೀಡಿದರು, ಸಮ್ಮೇಳನದ ಪರಿಚಯವನ್ನು ಶ್ರೀ ಹೆಚ್. ರಮೇಶ, ಪ್ರಧಾನ ಕಾರ್ಯದರ್ಶಿ, ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ರವರು ನೀಡಿದರು ಅಂತಿಮವಾಗಿ ಸಮಾರಂಭದ ವಂದನಾರ್ಪಣೆಯನ್ನು ಡಾ|| ಟಿ. ನಿರಂಜನಪ್ರಭು, ಉಪಾಧ್ಯಕ್ಷರು, ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ರವರು ನೀಡಿದರು.

ಸದರಿ ಸಮ್ಮೇಳನವು 3 ದಿನಗಳ ಕಾಲ 4 ಸಭಾಂಗಣದಲ್ಲಿ 32 ವಿಜ್ಞಾನದ ವಿವಿಧ ಗೋಷ್ಠಿಗಳು ಸಮನಾಂತರವಾಗಿ ಕನ್ನಡ ಭಾಷೆಯಲ್ಲಿ ಪ್ರಬಂಧಗಳು ಮಂಡಿತವಾದವು. ಸಮ್ಮೇಳನದ ಪ್ರತಿಯೊಂದು ಗೋಷ್ಠಿಗಳಲ್ಲಿ ಆಹ್ವಾನಿತ ಉಪನ್ಯಾಸಗಳು ನೀಡಲಾದವು. ಈ ಗೋಷ್ಠಿಗಳಲ್ಲಿ ಕರ್ನಾಟಕದ ವಿಶ್ವವಿದ್ಯಾಲಯಗಳಾದ : ಕುವೆಂಪು ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಕರ್ನಾಟಕ ಪಶುವೈದ್ಯಕೀಯ, ಪಶು, ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ತುಮಕೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ದ ಜೊತೆಗೆ ಸಂಶೋಧನಾ ಸಂಸ್ಥೆಗಳಾದ, ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆ, ಅಂತರಿಕ್ಷ ಪ್ರಯೋಗಶಾಲೆ, ಭಾರತೀಯ ವಿಜ್ಞಾನ ಸಂಸ್ಥೆ ಗಳಂದ ಪ್ರಾಧ್ಯಪಕರು, ವಿಜ್ಞಾನಿಗಳು, ವಿಧ್ಯಾರ್ಥಿಗಳು ಭಾಗವಹಿಸಿದರು.

11ನೇ ಕನ್ನಡ ವಿಜ್ಞಾನ ಸಮ್ಮೇಳನದ ಮುಕ್ತಾಯ ಸಮಾರಂಭವು ದಿನಾಂಕ 15ನೇ ಸಪ್ಟೆಂಬರ್, 2015 ರ ಬೆಳಗ್ಗೆ 10:30 ಗಂಟೆಗೆ ಆಯೋಜಿಸಲಾಗಿತ್ತು. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಎಂ. ಎಲ್. ಸಿ, ಮುಖ್ಯ ಸಚೇತಕರು, ವಿರೋಧ ಪಕ್ಷ, ವಿಧಾನ ಪರಿಷತ್, ಕರ್ನಾಟಕ ಸರ್ಕಾರ ಹಾಗೂ ಕಾರ್ಯಕಾರಿ ಅಧ್ಯಕ್ಷರು, ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ, ಶ್ರೀ. ಸಸಿಕಾಂತ ಸೆಂಥಿಲ್, ಮಾನ್ಯ ಜಿಲಾಧಿಕಾರಿಗಳು, ರಾಯಚೂರು, ಡಾ|| ಎಸ್. ಎಂ. ಶಿವಪ್ರಕಾಶ್, ನಿರ್ದೇಶಕರು, ವಿಸ್ತರಣ ವಿಭಾಗ, ಕ.ಪ.ಪ.ಮೀ.ವಿ. ವಿ, ಬೀದರ್, ಶ್ರೀ ಪಾರಸಮಲ್ ಸುಖಾಣಿ, ಶ್ರೀ ನಾಗರಾಜ ಮಸ್ಕಿ, ಡಾ|| ಎಸ್. ಎಂ. ಖೇಣದ್ ಮತ್ತು

ಇತರ ಗಣ್ಯರು ಭಾಗವಹಿಸಿದರು, ಪ್ರೊ॥ ಕೆ. ಐ. ವಾಸು, ಪೋಷಕರು, ಸ್ಥಾಪಕ, ಮಾರ್ಗದರ್ಶಕ, ಸ್ವದೇಶಿ ವಿಜ್ಞಾನ ಅಂದೋಳನ–ಕರ್ನಾಟಕ, ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ಇತರೆ ಪದಾಧಿಕಾರಿಗಳು ಮತ್ತು ಎಲ್. ವಿ. ಡಿ. ಕಾಲೇಜಿನ ಎಲ್ಲಾ ಸಿಬ್ಬಂದಿ ರವರು ಭಾಗವಹಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಡಾ॥ ಎ. ಅರ್. ಉಪಾಧ್ಯ, ಅಧ್ಯಕ್ಷರು, ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ರವರು ವಹಿಸಿದ್ದರು. ಈ ಸಮಾರಂಭದಲ್ಲಿ "ವಿಜ್ಞಾನ ಕನ್ನಡ–10" ನಡಾವಳಿ 10ನೇ ಕನ್ನಡ ವಿಜ್ಞಾನ ಸಮ್ಮೇಳನ ಬಿಡುಗಡೆ ಮಾಡಲಾಯಿತು. ಹಾಗೂ ಡಾ॥ ಎಂ. ಮೋಹನ್ ಆಳ್ವ ಮತ್ತು ಡಾ॥ ಸರ್ವಮಂಗಳ ಶಂಕರ್ ರವರಿಗೆ 2015ನೇ ಸಾಲಿನ ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ ನೀಡಿ ಗೌರವಿಸಲಾಯಿತು, ಹಾಗೂ 11ನೇ ಕನ್ನಡ ವಿಜ್ಞಾನ ಸಮ್ಮೆಳನದಲ್ಲಿ ಪ್ರಬಂಧ ಮಂಡಿಸಿದ ಪ್ರತಿನಿಧಿಗಳಿಗೆ ಅತ್ಯುತ್ತಮ ಪ್ರಬಂಧ ಮಂಡನೆ ಪ್ರಶಸ್ತಿ, ಯುವ ವಿಜ್ಞಾನಿ ಪ್ರಶಸ್ತಿ (45 ವರ್ಷದೊಳಗಿನವರು) ಮತ್ತು ಮಹಿಳಾ ವಿಜ್ಞಾನಿ ಪ್ರಶಸ್ತಿಯನ್ನು ನೀಡಲಾಯಿತು. ಕೊನೆಯದಾಗಿ ಸಮ್ಮೇಳನವು ಶ್ರೀ. ಹೆಚ್. ರಮೇಶ, ಪ್ರಧಾನ ಕಾರ್ಯದರ್ಶಿ, ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ರವರ ವಂದನಾರ್ಪಣೆಯೊಂದಿಗೆ ಮುಕ್ತಾಯ ವಾಯಿತು.

ಈ ಸಂಧರ್ಭದಲ್ಲಿ ಈ ಸಮ್ಮೇಳನನ್ನಕ್ಕೆ ಪ್ರಾಯೋಜಕತ್ವ ನೀಡಿದಂತಹ ಮಹನಿರುಗಳಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ನವದೆಹಲಿ, ಭಾರತೀಯ ಅಂತರಿಕ್ಷ ಸಂಶೊಧನಾ ಸಂಸ್ಥೆ, ಬೆಂಗಳೂರು, ಬಿ. ಎಲ್. ಡಿ. ಇ. ವಿಶ್ವವಿದ್ಯಾಲಯ, ವಿಜಾಪೂರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ, ಕೊಟೆಕ್ ಊರ್ಜಾ, ಬೆಂಗಳೂರು, ಫಿನ್‌ಫೇ ಮೆಟಲರ್ಜಿಕಲ್ಸ್, ಬೆಂಗಳೂರು, ಬಾಷ್, ಬೆಂಗಳೂರು, ಜೈ ಆಟೋ ಕೇಬಲ್ಸ್ ಪ್ರ. ಲಿ, ಬೆಂಗಳೂರು ರವರಿಗೆ ಧನ್ಯವಾದಗಳನ್ನು ಸಲ್ಲಿಸಲಾಯಿತು.

ಈ ಸಮ್ಮೇಳನದ ಯಶಸ್ವಿಗೆ ಸಹಕಾರ ನೀಡಿದಂತಹ ಎಲ್ಲಾ ಮಹನೀಯರುಗಳಿಗೆ, ಪ್ರತಿನಿಧಿ, ಮಾಧ್ಯಮ ಪ್ರತಿನಿಧಿಗಳು, ಮುದ್ರಕರು, ತಾರನಾಥ ಶಿಕ್ಷಣ ಸಂಸ್ಥೆಯ, ಲಕ್ಷ್ಮಿ ವೆಂಕಟೇಶ ದೇಸಾಯಿ ಕಾಲೇಜಿನ ಎಲ್ಲಾ ಭೋಧಕ ಮತ್ತು ಭೋದಕೇತರ ಸಿಬ್ಬಂದಿಗೆ ಹಾಗೂ ಸಮ್ಮೇಳನದ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಮತ್ತು ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕದ ಎಲ್ಲಾ ಸದಸ್ಯರುಗಳಿಗೆ ವಿಶೇಷವಾಗಿ ಸ್ವದೇಶಿ ವಿಜ್ಞಾನ ಆಂದೋಳನ–ರಾಯಚೂರು ಜಿಲ್ಲಾ ಘಟಕದ ಎಲ್ಲಾ ಪಧಾಧಿಕಾರಿಗಳಿಗೆನನ್ನ ಅನಂತ ಅನಂತ ವಂದನೆಗಳು

**ವಿಶೇಷ ಸೂಚನೆ**:– ಈ ನಡಾವಳಿಯಲ್ಲಿ ಮುದ್ರಿತವಾಗಿರುವ ಎಲ್ಲಾ ಲೇಖನಗಳು ಲೇಖಕರು ಕಳುಹಿಸಿದ ಮಾದರಿಯಲ್ಲೇ ಮುದ್ರಿತವಾಗಿವೆ. ಈ ಲೇಖನಗಳಿಗೆ ಸಂಬಂಧಿಸಿದ ಯಾವುದೇ ವಿವರ ಅಥವಾ ಮಾಹಿತಿ ಬೇಕಾಗಿದಲ್ಲಿ ಲೇಖಕರುಗಳನ್ನೆ ನೇರವಾಗಿ ಸಂಪರ್ಕಿಸಬೇಕೆಂದು ಮನವಿ.

**ಹೆಚ್. ರಮೇಶ**

ಪ್ರಧಾನ ಕಾರ್ಯದರ್ಶಿ, ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ
ಪ್ರಧಾನ ಕಾರ್ಯದರ್ಶಿ, 11ನೇ ಕನ್ನಡ ವಿಜ್ಞಾನ ಸಮ್ಮೇಳನ